ಆದಿಲಶಾಹಿ ಸಾಹಿತ್ಯ ಸಂಪುಟ : ೮

ಮುಲ್ಲಾ ನುಸ್ರತಿ ವಿರಚಿತ

ಅಲಿನಾಮಾ • ತಾರೀಖೇ ಸಿಕಂದರಿ

ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಕೇಂದ್ರ
ಬಿ.ಎಲ್.ಡಿ.ಇ. ಸಂಸ್ಥೆ, ವಿಜಯಪುರ

ಆದಿಲಶಾಹಿ ಸಾಹಿತ್ಯ ಸಂಪುಟ : ೮

ಮುಲ್ಲಾ ನುಸ್ರತಿ

ವಿರಚಿತ

ಅಲಿನಾಮಾ

ಮತ್ತು

ತಾರೀಖೇ ಸಿಕಂದರಿ

ಆದಿಲಶಾಹಿ ಸಾಹಿತ್ಯ ಸಂಪುಟ : ೮

ಮುಲ್ಲಾ ನುಸ್ರತಿ

ವಿರಚಿತ

ಅಲಿನಾಮಾ

ಅನು: ಡಾ. ಮುಹಮ್ಮದ್ ಸಿಬ್ಘತ್‌ಉಲ್ಲಾಹ್

ತಾರೀಖೇ ಸಿಕಂದರಿ

ಅನು: ಡಾ. ವಿಠ್ಠಲರಾವ್ ಟಿ. ಗಾಯಕ್ವಾಡ್

ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ

ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

Ali Nama ■ Taarike Sikandari : Dakani works.

Kannada translation by Dr. Muhammad Sibghat Ullah, Dr. Vittalrao T. Gaikawad

Published by : **Dr. P.G.Halakatti Research Centre,**
B.L.D.E. Association, Bijapur, Karnataka

Edition : **2015**

Pages : **xxii + 442 = 464**

Copies : **1000**

Price : **Rs. 200.00**

Typeset : **Dr. P. G. Halakatti Research Centre,** Bijapur

Printed : **Print Point,** Bengaluru. Mob : 9739067359

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಪುಸ್ತಕ ಪ್ರಕಟವಾಗಿದೆ.

ಅಲಿ ನಾಮಾ ■ ತಾರೀಖೇ ಸಿಕಂದರಿ : ದಖನಿ ಕೃತಿಗಳು.

ಅನುವಾದಕರು : ಡಾ. ಮುಹಮ್ಮದ್ ಸಿಬ್ಘತ್‌ಉಲ್ಲಾಹ್, ಡಾ. ವಿಠ್ಠಲರಾವ್ ಟಿ. ಗಾಯಕ್ವಾಡ್

ಪ್ರಕಾಶಕರು : **ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,**
ಬಿ.ಎಲ್.ಡಿ.ಇ. ಸಂಸ್ಥೆ, ಬಿಜಾಪುರ

ಹಕ್ಕುಗಳು : **ಪ್ರಕಾಶಕರು**

ಆವೃತ್ತಿ : **ಪ್ರಥಮ ೨೦೧೫**

ಪುಟಗಳು : **xxii + ೪೪೨ = ೪೬೪**

ಪ್ರತಿಗಳು : **೧೦೦೦**

ಬೆಲೆ : **ರೂ. ೨೦೦.೦೦**

ಡಿ.ಟಿ.ಪಿ. : **ವಚನಪಿತಾಮಹ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರ,** ಬಿಜಾಪುರ

ಮುದ್ರಣ : **ಪ್ರಿಂಟ್ ಪಾಯಿಂಟ್,** ಬೆಂಗಳೂರು.
ಮೊ. ೯೭೩೯೦೬೭೩೫೯

*

ಆದಿಲ್‌ಶಾಹಿ ಸಾಹಿತ್ಯ ಅನುವಾದ ಸಮಿತಿ

ಅಧ್ಯಕ್ಷರು

ಡಾ. ಎಂ.ಎಂ. ಕಲಬುರ್ಗಿ

ನಿರ್ದೇಶಕರು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಸದಸ್ಯರು

ಡಾ. ಬಿ.ಜಿ. ಮೂಲಿಮನಿ

ಡಾ. ರಹಮತ್ ತರೀಕೆರೆ

ಶ್ರೀ ರಂಜಾನ್ ದರ್ಗಾ

ಡಾ. ಎಚ್. ಜಿ. ದಡ್ಡಿ

ವಿಶೇಷ ಆಮಂತ್ರಿತ ಸದಸ್ಯರು

ಶ್ರೀ ಶಿವಯೋಗಿ ಎಸ್. ತಂಬಾಕೆ

ಡಾ. ಎಂ. ಎಸ್. ಮದಭಾವಿ

ಮೌಲಾನಾ ಮಹಬೂಬುರ್ ರಹಮಾನ ಮದನಿ

ಪದನಿಮಿತ್ತ ಸದಸ್ಯರು

ಜಿಲ್ಲಾಧಿಕಾರಿಗಳು, ಬಿಜಾಪುರ

ಸಹಾಯಕ ನಿರ್ದೇಶಕರು,

ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬಿಜಾಪುರ

*

ಅಧ್ಯಕ್ಷರ ಮಾತು

ಎಂ. ಎಂ. ಕಲಬುರ್ಗಿ

ವಿಜಾಪುರದ ಬಿ.ಎಲ್.ಡಿ. ಶಿಕ್ಷಣಸಂಸ್ಥೆ ಇತ್ತೀಚಿನ ದಿನಗಳಲ್ಲಿ ಸಾಂಸ್ಕೃತಿಕ ಸಂಸ್ಥೆಯಾಗಿಯೂ ಬೆಳೆಯುತ್ತಲಿದೆ. ಈ ಸಂಸ್ಥೆಯ ಭಾಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಇಂದಿನ ಕಾರ್ಯ ಮತ್ತು ಕಾರ್ಯಕ್ರಮಗಳು ಇದಕ್ಕೆ ಉದಾಹರಣೆಯೆನಿಸಿವೆ.

ಡಾ॥ ಫ.ಗು. ಹಳಕಟ್ಟಿಯವರದು ಕೇವಲ ವ್ಯಕ್ತಿಕಲ್ಯಾಣಕೇಂದ್ರಿತ ವ್ಯಕ್ತಿತ್ವವಲ್ಲ, ಸಮಾಜಕಲ್ಯಾಣ ಕೇಂದ್ರಿತ ವ್ಯಕ್ತಿತ್ವ. ಇದಕ್ಕೆ ತಕ್ಕಂತೆ ಅವರ ಹೆಸರಿನ ಈ ಸಂಸ್ಥೆ ಎಲ್ಲ ಸಮಾಜಗಳನ್ನು-ಸಾಮಾಜಿಕರನ್ನು 'ಇವ ನಮ್ಮವ, ಇವ ನಮ್ಮವ, ಇವ ನಮ್ಮವ' ಎಂಬ ಆದರ್ಶದಲ್ಲಿ ಬೆಳೆಯುತ್ತಲಿದೆ. ಇದಕ್ಕೆ ಸಾಕ್ಷಿಯಾಗಿದೆ, ಈ ಸಂಸ್ಥೆ ಕೈಗೆತ್ತಿಕೊಂಡಿರುವ 'ಆದಿಲ್‌ಶಾಹಿ ಸಾಹಿತ್ಯ ಅನುವಾದ ಯೋಜನೆ'.

ಮಧ್ಯಕಾಲೀನ ಭಾರತೀಯ ಇತಿಹಾಸದಲ್ಲಿ ವಿಜಾಪುರದ ಆದಿಲ್‌ಶಾಹಿಗಳ ಹೆಸರು ಪ್ರಸಿದ್ಧವಾದುದು, ಸುಪ್ರಸಿದ್ಧವಾದುದು. ಏಕಕಾಲಕ್ಕೆ ಉತ್ತರದ ಮೊಗಲರೊಂದಿಗೆ, ದಕ್ಷಿಣದ ವಿಜಯನಗರದವರೊಂದಿಗೆ ಸಂಘರ್ಷ-ಸಮನ್ವಯದಿಂದ ೧೪೮೯-೧೬೮೬ರ ವರೆಗೆ ರಾಜ್ಯಭಾರಮಾಡಿದ ರಾಜಮನೆತನವಿದು. 'ದಿನೇ ಇಲಾಹಿ' ಖ್ಯಾತಿಯ ಮೊಗಲ್ ಮನೆತನದ ಅಕಬರನಂತೆ 'ದಾದೇ ಇಲಾಹಿ' ಖ್ಯಾತಿಯ ಆದಿಲ್‌ಶಾಹಿ ಮನೆತನದ ಜಗದ್ಗುರು ೨ನೆಯ ಇಬ್ರಾಹಿಮ್ ಬಾದಶಹನು ಸಮನ್ವಯಸಮಾಜ ಸ್ಥಾಪಿಸಲು ನಿರತನಾದುದು ಗಮನಾರ್ಹವೆನಿಸಿದೆ.

ಈ ಮನೆತನದ ಎಂಟು ಜನ ಅರಸರು ಸಾಹಿತಿಗಳು-ಸಾಹಿತ್ಯಪ್ರೇಮಿಗಳು. ಈ ಸಾಹಿತ್ಯ ಲೌಕಿಕ-ಧಾರ್ಮಿಕ ಎರಡೂ ಆಯಾಮಗಳಲ್ಲಿ ಬಿಚ್ಚಿ ಬೆಳೆದಿದೆ. ಹಿಂದೂಗಳದು ಪುರಾಣಪ್ರಜ್ಞೆಯಾದರೆ, ಮುಸಲ್ಮಾನರದು ಇತಿಹಾಸಪ್ರಜ್ಞೆ. ಈ ಪ್ರಜ್ಞೆಗೆ ಅನುಗುಣವಾಗಿ ಇವರ ಆಸ್ಥಾನದಲ್ಲಿ-ಇವರ ರಾಜ್ಯದಲ್ಲಿ ಸುಮಾರು ೨೦ ಕೃತಿಗಳು ಹುಟ್ಟಿಕೊಂಡಿವೆ.

ಸಮಕಾಲೀನ ರಾಜಕೀಯದೊಂದಿಗೆ ಜೀವನದ ಇತರ ಕ್ಷೇತ್ರಗಳನ್ನೂ ಚಿತ್ರಿಸಿದ ಈ ಸಾಹಿತ್ಯದ ಬಹುಭಾಗ ಪ್ರಕಟವಾಗದೆ, ಕನ್ನಡಕ್ಕೆ ಅನುವಾದವಾಗದೆ ಉಳಿದಿದ್ದಿತು. ಈ ದೊಡ್ಡ ಆಕರವನ್ನು ಕೈಬಿಟ್ಟು ಈವರೆಗೆ ಇತಿಹಾಸ ಬರೆದುದು ವಿಷಾದದ ಸಂಗತಿಯಾಗಿದೆ. ಇದಕ್ಕೆ ಕಾರಣ, ಈ ಸಾಹಿತ್ಯ ಪರ್ಶಿಯನ್, ದಖನಿ–ಉರ್ದು ಭಾಷೆಯಲ್ಲಿರುವುದು ಮತ್ತು ಈ ಅರಸರು ಅನ್ಯರೆಂದು ಭಾವಿಸಿರುವುದು. 'ವಚನಪಿತಾಮಹ ಡಾ॥ ಫ. ಗು. ಹಳಕಟ್ಟಿ ಸಂಶೋಧನ ಸಂಸ್ಥೆ' ಈ ಯಾವುದೇ ಭಿನ್ನತೆ ಪರಿಗಣಿಸದೆ ಪ್ರಸ್ತುತ ಯೋಜನೆಯನ್ನು ಕೈಗೆತ್ತಿಕೊಂಡಿದೆ.

ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆರ್ಥಿಕ ಅನುದಾನದ ನೆರವಿನಿಂದ ಈ ಯೋಜನೆ ಅಸ್ತಿತ್ವಕ್ಕೆ ಬಂದಿದೆ. ಇದನ್ನು ಒದಗಿಸುವಲ್ಲಿ ತೀವ್ರ ಆಸಕ್ತಿ ವಹಿಸಿದವರು ಈ ಹಿಂದೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರಾಗಿದ್ದ ಶ್ರೀ ಗೋವಿಂದ ಕಾರಜೋಳ ಅವರು. ಈ ಆಸಕ್ತಿಯನ್ನು ಮುಂದುವರಿಸುತ್ತಲಿರುವವರು ಇಂದು ಸಚಿವರಾಗಿರುವ ಶ್ರೀಮತಿ ಉಮಾಶ್ರೀ ಅವರು. ಸಹಕರಿಸಿದವರು ಈ ಇಲಾಖೆಯ ಅಧಿಕಾರಿಗಳು. ಇವರಿಗೆ ನಾವು ಕೃತಜ್ಞರಾಗಿದ್ದೇವೆ.

ಬಿ.ಎಲ್.ಡಿ ಶಿಕ್ಷಣ ಸಂಸ್ಥೆ ನಮಗೆಲ್ಲ ಹೆಮ್ಮೆಯ ಮಾದರಿ. ಈ ರೀತಿಯಲ್ಲಿ ಇದನ್ನು ಬೆಳೆಸುತ್ತಲಿರುವವರು ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲರು. ಈ ಸಂಸ್ಥೆಯ ಅಂಗವಾಗಿರುವ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಗಾಗಿ ತ್ರಿಕರಣಪೂರ್ವಕ ದುಡಿಯುತ್ತಲಿರುವವರು ಇದರ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆಯವರು. ಇವರಿಬ್ಬರ ಪ್ರೋತ್ಸಾಹ–ನೆರವುಗಳಿಗೆ, ಈ ಯೋಜನೆಯ ಸಲಹಾಮಂಡಳಿಯ ಸದಸ್ಯರ ಮಾರ್ಗದರ್ಶನಕ್ಕೆ, ಅನುವಾದ ಕಾರ್ಯದಲ್ಲಿ ವಿದ್ವಾಂಸರು ನೀಡಿದ ಸಹಕಾರಕ್ಕೆ ಅಭಿನಂದನೆಗಳು.

ಸರಕಾರ ರೂಪಿಸಿದ ಸಲಹಾಮಂಡಳಿಯ ನಿರ್ದೇಶನದಂತೆ ಈ ಯೋಜನೆಗಾಗಿ ಡಾ॥ ಫ.ಗು. ಹಳಕಟ್ಟಿ ಭವನದಲ್ಲಿ ಒಂದು ಸ್ವತಂತ್ರ ಕಾರ್ಯಾಲಯವನ್ನು, ಅಗತ್ಯ ಸಿಬ್ಬಂದಿವರ್ಗವನ್ನು ಅಸ್ತಿತ್ವಕ್ಕೆ ತರಲಾಯಿತು. ಈ ಮಣಿಹಕ್ಕೆ ಡಾ॥ ಕೃಷ್ಣ ಕೊಲ್ಹಾರಕುಲಕರ್ಣಿ ಅವರು ನಿರ್ದೇಶಕರಾಗಿ ಲಭಿಸಿರುವುದು ಒಂದು ಸುಯೋಗವೆಂದೇ ಭಾವಿಸುತ್ತೇವೆ. ಮೊದಲಿನಿಂದಲೂ ಆದಿಲ್‌ಶಾಹಿ ಸಾಹಿತ್ಯ–ಸಂಸ್ಕೃತಿಗಳ ಅಧ್ಯಯನದಲ್ಲಿ ನಿಮಗ್ನರಾದ ಇವರು ಈ ಯೋಜನೆಗಾಗಿ ದುಡಿದ ರೀತಿ ಅನನ್ಯವಾದುದು. ಹಸ್ತಪ್ರತಿ–ಮುದ್ರಿತಪ್ರತಿಗಳ ಸಂಗ್ರಹ, ಸೂಕ್ತ ಅನುವಾದಕರ ಆಯ್ಕೆ, ಅವರಿಂದ ಕೆಲಸಮಾಡಿಸಿಕೊಳ್ಳುವ ರೀತಿ, ಅನುವಾದಗಳ ಪರಿಷ್ಕರಣ–ಪ್ರಕಟಣೆ ಇತ್ಯಾದಿಗಳಿಗಾಗಿ ಇವರು ತ್ರಿವಿಕ್ರಮಪ್ರಜ್ಞೆಯಿಂದ ಶ್ರಮಿಸಿದ್ದಾರೆ. ಇವರೊಂದಿಗೆ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆಯ ಕಾರ್ಯದರ್ಶಿಗಳಾದ ಡಾ॥ ಎಂ.ಎಸ್. ಮದಭಾವಿ ಅವರು ನಿರಪೇಕ್ಷ ಭಾವದಿಂದ ಹಗಲಿರುಳು ದುಡಿದಿದ್ದಾರೆ. ಇವರೊಂದಿಗೆ ಮಿಕ್ಕ ಸಿಬ್ಬಂದಿವರ್ಗದವರು ಸಹಕರಿಸಿದ ರೀತಿಯೂ ಸ್ಮರಣೀಯವಾಗಿದೆ. ಇವರೆಲ್ಲರಿಗೂ ಕೃತಜ್ಞತೆಗಳು.

■

*

ಪ್ರಸ್ತಾವನೆ

ಸಮಿತಿ ಸದಸ್ಯರು

ಮಧ್ಯಯುಗೀನ ಭಾರತದ ಚರಿತ್ರೆಯಲ್ಲಿ ವಿಜಯಪುರದ ಆದಿಲಶಾಹಿಗಳ ಪಾತ್ರ ಬಹು ಮುಖ್ಯವಾಗಿದೆ. ದಕ್ಷಿಣ ಭಾರತದ ಬಹುಪಾಲು ಪ್ರದೇಶವನ್ನು ಅವರು ವಿಜಯಪುರ ಕೇಂದ್ರದಿಂದ ಆಳಿದರು. ಇಂದಿನ ಅಖಂಡ ಕರ್ನಾಟಕವನ್ನು ಅವರು ಸುಮಾರು ಒಂದು ಶತಮಾನದಷ್ಟು ಕಾಲ ತಮ್ಮ ಅಂಕಿತದಲ್ಲಿ ಇಟ್ಟುಕೊಂಡಿದ್ದರು. ಹೀಗಾಗಿ ಆದಿಲಶಾಹಿಗಳ ಚರಿತ್ರೆಯನ್ನು ಅಭ್ಯಸಿಸದೆ ಕರ್ನಾಟಕದ ಚರಿತ್ರೆ ಪೂರ್ಣಗೊಳ್ಳುವುದಿಲ್ಲ.

ಈ ಆದಿಲಶಾಹಿಗಳ ರಾಜ್ಯವು ಕ್ರಿ.ಶ. ೧೪೮೯ರಿಂದ ೧೬೮೬ರ ವರೆಗೆ ಅಸ್ತಿತ್ವದಲ್ಲಿದ್ದಿತು. ೮ ಜನ ಬಾದಶಹರು ಆಳಿದರು. ಈ ಬಾದಶಹರುಗಳ ವ್ಯಕ್ತಿತ್ವ ವರ್ಣಮಯವಾಗಿದ್ದಿತು. ಸಾಹಿತ್ಯ, ಸಂಗೀತ, ಕಲೆ, ವಾಸ್ತುಶಿಲ್ಪ, ಧರ್ಮ ಜೊತೆಗೆ ರಾಜಕಾರಣ ಇವುಗಳಲ್ಲೆಲ್ಲ ಇವರು ತಮ್ಮದೇ ಆದ ಮುದ್ರೆಯನ್ನು ಒತ್ತಿ ಹೋಗಿದ್ದಾರೆ.

ಇಂದು ಜಗತ್ತಿನಲ್ಲೆಲ್ಲ ಓದುತ್ತಿರುವ ಭಾರತೀಯ ಮುಸಲ್ಮಾನರ ಚರಿತ್ರೆಯಾಗಿರುವ 'ತಾರೀಖೆ ಫರಿಶ್ತಾ' [ಪರ್ಶಿಯನ್] ಕೃತಿಯ ಕರ್ತೃ ಮುಹಮ್ಮದ್ ಕಾಸಿಮ ಫರಿಶ್ತಾ, ಎರಡನೆಯ ಇಬ್ರಾಹಿಮ ಆದಿಲಶಾಹ (ಕ್ರಿ.ಶ.೧೫೮೦–೧೬೨೬)ನ ಅಸ್ಥಾನದಲ್ಲಿದ್ದುಕೊಂಡು ಈ ಗ್ರಂಥವನ್ನು ಬರೆದನು. ಅದರಂತೆ ಇನ್ನೂ ಹಲವಾರು ಜನ ಇತಿಹಾಸಕಾರರು, ಕವಿಗಳು ಆದಿಲಶಾಹಿ ಆಸ್ಥಾನದಲ್ಲಿ ಇದ್ದುಕೊಂಡು ಕೃತಿಗಳನ್ನು ರಚಿಸಿದ್ದಾರೆ. ಅವುಗಳೆಲ್ಲ ಅಂದು ಪ್ರಚಲಿತದಲ್ಲಿದ್ದ ಪರ್ಶಿಯನ್ ಇಲ್ಲವೆ ದಖನಿ–ಉರ್ದು ಭಾಷೆಗಳಲ್ಲಿ ರಚಿತವಾಗಿವೆ.

ನಾಡಿನ ವಿಶ್ವವಿದ್ಯಾಲಯಗಳು, ಭಾರತೀಯ ಇತಿಹಾಸ ಅನುಸಂಧಾನ ಇತ್ಯಾದಿ ಸಂಸ್ಥೆಗಳು ಇತಿಹಾಸದ ಕೆಲಸ ಮಾಡುತ್ತಿದ್ದರೂ ಆದಿಲಶಾಹಿಗಳ ವಿಷಯದಲ್ಲಿ ಆಗಬೇಕಾದಷ್ಟು ಆಗಲಿಲ್ಲ. ಅದಕ್ಕೆ ಕಾರಣ, ಬಹುಶಃ ಅಧ್ಯಯನಕ್ಕೆ ಬೇಕಾಗುವ ಮೂಲ ಆಕರಗಳು ವಿಶ್ವದಾದ್ಯಂತ ಚದರಿ ಹೋಗಿರುವುದು ಮತ್ತು ಅವು ಪರ್ಶಿಯನ್, ದಖನಿ–ಉರ್ದು

ಭಾಷೆಗಳಲ್ಲಿರುವುದು. ಈ ಕೊರತೆಯನ್ನು ಗಮನಿಸಿ ವಿಜಯಪುರ ಆದಿಲಶಾಹಿ ಕಾಲದ ಸಾಹಿತ್ಯವನ್ನು ಕನ್ನಡದಲ್ಲಿ ಪ್ರಕಟಿಸುವ ಪ್ರಯತ್ನವಾಗಿದೆ 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'.

ಹಂಪಿಯ ಕನ್ನಡ ವಿಶ್ವವಿದ್ಯಾಲಯಕ್ಕೆ ಸಂಲಗ್ನವಾಗಿರುವ ವಿಜಯಪುರ ಬಿ.ಎಲ್.ಡಿ.ಇ. ಸಂಸ್ಥೆಯ ವಚನಪಿತಾಮಹ ಡಾ.ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರವು ಕಳೆದ ದಶಕದಿಂದ ಸಂಶೋಧನಕ್ಷೇತ್ರದಲ್ಲಿ ಅಪರೂಪದ ಕೆಲಸವನ್ನು ಮಾಡುತ್ತಿದೆ. ಡಾ. ಫ.ಗು. ಹಳಕಟ್ಟಿ ಅವರ ಸಮಗ್ರಸಾಹಿತ್ಯವನ್ನು ೧೫ ಸಂಪುಟಗಳಲ್ಲಿ ಸಂಪಾದಿಸಿ ಪ್ರಕಟಿಸಿದೆ. ೮ ವಿದ್ಯಾರ್ಥಿಗಳು ವಿವಿಧ ವಿಷಯಗಳಲ್ಲಿ ಪಿಎಚ್.ಡಿ ಪದವಿಗಳನ್ನು ಪಡೆದಿದ್ದಾರೆ. ಇನ್ನೂ ಹಲವರು ಪದವಿ ಪಡೆಯುವ ದಾರಿಯಲ್ಲಿದ್ದಾರೆ. ಇದಕ್ಕೆಲ್ಲ ಬಿ.ಎಲ್.ಡಿ.ಇ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ.ಪಾಟೀಲ ಅವರ ನಿರಂತರ ಬೆಂಬಲವೇ ಕಾರಣವಾಗಿದೆ. ಅವರ ಆಸಕ್ತಿಯಂತೆ ಸಂಶೋಧನ ಕೇಂದ್ರವು 'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಯನ್ನು ಕರ್ನಾಟಕ ಸರಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಕಳಿಸಿತು. ಯೋಜನೆಯ ಮಹತ್ವವನ್ನು ಗುರುತಿಸಿ ಕರ್ನಾಟಕ ಸರಕಾರವು, ಡಾ. ಎಂ.ಎಂ. ಕಲಬುರ್ಗಿ ಅವರ ಅಧ್ಯಕ್ಷತೆಯಲ್ಲಿ ಡಾ. ಬಿ.ಜಿ.ಮೂಲಿಮನಿ, ಡಾ. ರಹಮತ್ ತರೀಕೆರೆ. ಶ್ರೀ ರಂಜಾನ್ ದರ್ಗಾ. ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಮತ್ತು ಡಾ. ಎಚ್.ಜಿ.ದಡ್ಡಿ- ಸದಸ್ಯರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಿ ಇದಕ್ಕೆ ಅನುಮತಿ ನೀಡಿತು.

ದಿನಾಂಕ ೧೭-೩-೨೦೧೩ರಂದು ನಡೆದ ಸಮಿತಿಯ ಪ್ರಥಮ ಸಭೆಯಲ್ಲಿ ಡಾ. ಕೃಷ್ಣ ಕೊಲ್ಹಾರಕುಲಕರ್ಣಿ ಅವರು ಈ ಯೋಜನೆಯ ನಿರ್ದೇಶಕರಾಗಿರಬೇಕೆಂದು, ಸಂಶೋಧನಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಮತ್ತು ಕಾಯದರ್ಶಿ ಡಾ. ಎಂ.ಎಸ್.ಮದಭಾವಿ ಅವರು ಸಮಿತಿಯ ಪದನಿಮಿತ್ತ ಸದಸ್ಯರಾಗಬೇಕೆಂದು ನಿರ್ಣಯಿಸಲಾಯಿತು.

ದಿನಾಂಕ ೧೫-೬-೨೦೧೩ರಂದು ನಡೆದ ಸಮಿತಿಯ ಎರಡನೆಯ ಸಭೆಯಲ್ಲಿ ಪರ್ಶಿಯನ್, ಅರೇಬಿಕ್, ದಖನಿ-ಉರ್ದು ಭಾಷೆಗಳಲ್ಲಿ ವಿದ್ವಾಂಸರಾದ ಮೌಲಾನಾ ಮಹಬೂಬುರ್ ರಹಮಾನ ಮದನಿ ಅವರನ್ನು ವಿಶೇಷ ಆಮಂತ್ರಿತ ಸದಸ್ಯರೆಂದು ತೀರ್ಮಾನಿಸಲಾಯಿತು.

ಇದು ಭಾರತದಲ್ಲಿಯೇ ಒಂದು ಅಪರೂಪದ ಯೋಜನೆ. ಮಧ್ಯಯುಗೀನ ಆದಿಲಶಾಹಿಗಳ ಕಾಲದಲ್ಲಿ ರಚಿತಗೊಂಡ ಎಲ್ಲ ಸಾಹಿತ್ಯವನ್ನು ಕನ್ನಡಕ್ಕೆ ತರುವುದು ಯೋಜನೆಯ ಮುಖ್ಯ ಉದ್ದೇಶ.

ಪ್ರಾರಂಭದಲ್ಲಿ ಆದಿಲಶಾಹಿ ಚರಿತ್ರೆಗೆ ಸಂಭಂಧಪಟ್ಟ ಈ ಕೆಳಗಿನ ಸಮಕಾಲೀನ

ಕೆಲವು ಚರಿತ್ರ ಗ್ರಂಥಗಳ ಪಟ್ಟಿಯನ್ನು ಮಾಡಲಾಯಿತು. ಅವು ದೊರೆಯುವ ಸಂಭಾವ್ಯ ಸ್ಥಳಗಳನ್ನೂ ಹೀಗೆ ಗುರುತಿಸಲಾಯಿತು.

೧. **ಮುಹಮ್ಮದ ಕಾಸೀಮ ಫರಿಶ್ತಾ** : ತಾರೀಖೆ ಫರಿಶ್ತಾ [ಪರ್ಶಿಯನ್].
ಇಂಗ್ಲಿಷ್‌ಗೆ ಅನುವಾದ ಕ್ಯಾಪ್ಟನ್ ಬ್ರಿಗ್ಸ [ಕ್ರಿ.ಶ. ೧೮೯೯], ಮೂಲ ಪರ್ಶಿಯನ್ ಹಸ್ತಪ್ರತಿ ಮುಂಬಯಿ ಅರ್ಕೀವ್ಸ, ಸಾಲಾರ ಜಂಗ ವಸ್ತುಸಂಗ್ರಹಾಲಯ ಹೈದರಾಬಾದ ಇತ್ಯಾದಿಗಳಲ್ಲಿ ಲಭ್ಯ.

೨. **ಅಬ್ದುಲ್ಲಾ ದೆಹಲವಿ** : ಇಬ್ರಾಹಿಮನಾಮಾ [ದಖನಿ].
ಪ್ರಕಟವಾಗಿದೆ. ಮೂಲ ದಖನಿ ಹಸ್ತಪ್ರತಿ ಮುಂಬಯಿ ಅರ್ಕೀವ್ಸ ಮತ್ತು ಸಾತಾರಾದ ಔಂಧ ಅರ್ಕೀವ್ಸದಲ್ಲಿವೆ.

೩. **ಅಸದಬೇಗ** : ವಾಕಿಯಾತೆ ಅಸದಬೇಗ [ಪರ್ಶಿಯನ್].
ಚಾಪ್‌ಮನ್‌ನಿಂದ ಅನುವಾದವಾಗಿದೆ [೧೮ನೆ ಶತ]. ನಂತರ ಪಿ.ಎಂ.ಜೋಶಿ ಅವರಿಂದಲೂ, ಜೊತೆಗೆ ಇಲಿಯಟ್ ಮತ್ತು ಡೌಸನ್ ಸಂಪುಟ ೬ರಲ್ಲಿಯೂ ಭಾಗಶಃ ಅನುವಾದ. ಇದರ ಹಸ್ತಪ್ರತಿಯು ಆಂಧ್ರಪ್ರದೇಶ ಪ್ರಾಚೀನ ಹಸ್ತಪ್ರತಿಗಳ ಸಂಗ್ರಹ ಹೈದರಾಬಾದಿನಲ್ಲಿ ಲಭ್ಯ.

೪. **ಕಾಜಿ ನೂರುಲ್ಲಾ** : ತಾರೀಖೆ ಅಲಿ ಆದಿಲಶಹ [ಪರ್ಶಿಯನ್].
ಮೂಲ ಹಸ್ತಪ್ರತಿಗಳು ಮುಂಬಯಿ ಅರ್ಕೀವ್ಸ, ಇಂಡಿಯಾ ಆಫೀಸ ಲಾಯಬ್ರರಿ ಲಂಡನ್ ಮತ್ತು ಬ್ರಿಟಿಶ್ ಮ್ಯುಜಿಯಮ್ ಲಾಯಬ್ರರಿ ಲಂಡನ್, ಸಾಲಾರಜಂಗ ವಸ್ತುಸಂಗ್ರಹಾಲಯ(ಹೈದರಾಬಾದ್)ಗಳಲ್ಲಿ ಲಭ್ಯ.

೫. **ಜುಹೂರ್ ಬಿನ್ ಜುಹೂರಿ** : ಮುಹಮ್ಮದನಾಮಾ [ಪರ್ಶಿಯನ್].
ಹಸ್ತಪ್ರತಿಯು ಪ್ರಾಚ್ಯ ವಸ್ತುಸಂಗ್ರಹಾಲಯ ವಿಜಯಪುರದಲ್ಲಿ ಲಭ್ಯ ಭಾಗಶಃ ಬಿ.ಡಿ. ವರ್ಮಾರಿಂದ ಇಂಗ್ಲಿಷನಲ್ಲಿ ಅನುವಾದ.

೬. **ನುಸ್ರತಿ** : ಅಲಿನಾಮಾ [ದಖನಿ].
ಪ್ರಕಟವಾಗಿದೆ. ಪ್ರತಿ ದುರ್ಲಭ.

೭. **ಮೌಲ್ವಿ ಬಶೀರುದ್ದೀನ ಅಹ್ಮದ** : ವಾಕಿಯಾತೆ ಮಮಲಿಕತ್ ವಿಜಯಪುರ [ಉರ್ದು].
ಕರ್ನಾಟಕ ಉರ್ದು ಅಕಡೆಮಿಯಿಂದ ಪ್ರಕಟ. ಮೂಲಪ್ರತಿ ಸಾಲಾರಜಂಗ ಮ್ಯುಜಿಯಮ್ ಹೈದರಾಬಾದದಲ್ಲಿ ಲಭ್ಯ.

೮. **ಮುಹಮ್ಮದ ಹಾಶೀಮ ಘುಜೂನಿ**: ಘುತುಹತೆ ಆದಿಲಶಾಹಿ [ಪರ್ಶಿಯನ್].
ಮುಂಬಯಿ ಅರ್ಕೀವ್ಸ ಬ್ರಿಟಿಶ್ ಇಂಡಿಯಾ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿಗಳಿವೆ.

೯. **ಮೀರ್ ರಫೀಯುದ್ದೀನ ಶಿರಾಜಿ** : ತಜ್ಕಿದತುಲ್ ಮುಲೂಕ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೦. **ಶೇಖ್ ಜೈನುದ್ದೀನ ಅಲ್ ಮಾಬಾರಿ** : ತುಹಫತುಲ್ ಮುಜಾಹಿದೀನ [ಅರೇಬಿಕ್].
ಇಂಗ್ಲಿಷ್ ಅನುವಾದ ಪ್ರಕಟವಾಗಿದೆ.

೧೧. **ಸೈಯದ ಅಲಿ ಬಿಲಗ್ರಾಮಿ** : ತಾರೀಖೆ ದಖಿನ್ ೪ ಸಂಪುಟಗಳು [ಉರ್ದು].

೧೨. ಸಯ್ಯದ ಮೊಹಿಯುದ್ದೀನ ಪೀರಜಾದಾ: ಅಹವಾಲೆ ಸಲಾತೀನ ವಿಜಯಪುರ[ಪರ್ಶಿಯನ್].
ಬ್ರಿಟಿಶ್ ವಸ್ತುಸಂಗ್ರಹಾಲಯ ಲಂಡನ್, ಹಸ್ತಪ್ರತಿ ಸಂಖ್ಯೆ ೨೬೨೮೦.

೧೩. **ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ** : ತಾರೀಖೆ ಹಫ್ತಕುರ್ಸೀ [ಪರ್ಶಿಯನ್].
ಸಾಲಾರಜಂಗ ವಸ್ತು ಸಂಗ್ರಹಾಲಯ, ಹೈದರಾಬಾದ. ಇಂಡಿಯಾ ಆಫೀಸ ಲಾಯಬ್ರರಿ ಲಂಡನ್‌ಗಳಲ್ಲಿ ಹಸ್ತಪ್ರತಿ ಲಭ್ಯ.

೧೪. **೨ನೆಯ ಇಬ್ರಾಹಿಮ ಆದಿಲಶಹ** : ಕಿತಾಬೆ ನವರಸ [ದಖಿನಿ].
ಪ್ರಕಟವಾಗಿದೆ.

೧೫. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ರೌಜತುಲ್ ಔಲಿಯಾ ಎ ವಿಜಯಪುರ [ಪರ್ಶಿಯನ್].
ಆಂಧ್ರಪ್ರದೇಶ ಪ್ರಾಚ್ಯ ಹಸ್ತಪ್ರತಿ ಸಂಗ್ರಹ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೪೮೧೩.

೧೬. **ಮುಹಮ್ಮದ್ ಇಬ್ರಾಹಿಮ್ ಜುಬೇರಿ** : ಬಸಾತೀನೆ ಸಲಾತೀನ [ಪರ್ಶಿಯನ್].
ಮರಾಠೀ ಅನುವಾದದಿಂದ ಕನ್ನಡಕ್ಕೆ ಅನುವಾದ ಆಗಿದೆ. ಪರ್ಶಿಯನ್ ಹಸ್ತಪ್ರತಿ ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಲಭ್ಯ.

೧೭. **ಮೀರ ಅಹಮದ ಅಲಿಖಾನ** : ಗುಲದಸ್ತಾ ಎ ವಿಜಯಪುರ [ದಖಿನಿ].
ಆಂಧ್ರಪ್ರದೇಶ ಆರ್ಕೀವ್ಸದಲ್ಲಿ ಹಸ್ತಪ್ರತಿ ಲಭ್ಯ. ಸಂಖ್ಯೆ ೧೯೩.

೧೮. **ಅಬುಲ ಹಸನ ಕಾದಿರಿ** : ಶಾಹಿಪತ್ ಇ ಹುದಾ [ಪರ್ಶಿಯನ್].
ಸಾಲಾರಜಂಗ ವಸ್ತುಸಂಗ್ರಹಾಲಯ ಹೈದರಾಬಾದದಲ್ಲಿ ಹಸ್ತಪ್ರತಿ ಲಭ್ಯ.

೧೯. **ಆದಿಲಶಾಹಿಕಾಲದ ಫರ್ಮಾನುಗಳು ಮತ್ತು ಸನದುಗಳು** : ಭಾರತ ಇತಿಹಾಸ ಸಂಶೋಧಕ ಮಂಡಳ ಪುಣೆ, ವಿಜಯಪುರ ವಸ್ತುಸಂಗ್ರಹಾಲಯ ಮತ್ತು ಇತರ ಸ್ಥಳಗಳಲ್ಲಿ ಲಭ್ಯ.

ಹೀಗೆ ಪಟ್ಟಿಮಾಡಿ, ಹಸ್ತಪ್ರತಿಗಳ ಶೋಧಕ್ಕೆ ತೊಡಗಲಾಯಿತು. ಸಾಲಾರಜಂಗ

ವಸ್ತುಸಂಗ್ರಹಾಲಯ, ಆಂಧ್ರಪ್ರದೇಶ ಆರ್ಕೀವ್ಸ ಹೈದರಾಬಾದ, ಭಾರತೀಯ ಪುರಾತತ್ವ ಇಲಾಖೆ ವಸ್ತುಸಂಗ್ರಹಾಲಯ, ಗೋಳಗುಮ್ಮಟ ವಿಜಯಪುರ– ಈ ಕೇಂದ್ರಗಳಿಂದ ಕೆಳಗಿನ ಹಸ್ತಪ್ರತಿಗಳು ದೊರೆತವು.

೧. ಕಾಜಿ ನೂರುಲ್ಲಾ : ತಾರೀಖೆ ಅಲಿ ಆದಿಲಶಹ [ಪರ್ಶಿಯನ್]

೨. ಮೀರ್ ರಫೀಯುದ್ದೀನ ಶಿರಾಜಿ : ತಜ್ಕಿದತುಲ್ ಮುಲೂಕ [ಪರ್ಶಿಯನ್]

೩. ಫಿತೂರಖಾನ ವಲ್ಲದ ಅಸದಖಾನ ಲ್ಯಾರಿ : ತಾರೀಖೆ ಹಪ್ತಕುರ್ಸೀ [ಪರ್ಶಿಯನ್]

೪. ಮೀರ ಅಹಮದ ಅಲಿಖಾನ : ಗುಲದಸ್ತಾ ಎ ವಿಜಯಪುರ [ದಖನಿ]

೫. ಜುಹೂರ್ ಬಿನ್ ಜುಹೂರಿ : ಮುಹಮ್ಮದನಾಮಾ [ಪರ್ಶಿಯನ್]

ಹಸ್ತಪ್ರತಿಗಳನ್ನು ಒದಗಿಸಿದ ಮೇಲೆ ಕಾಣಿಸಿದ ಎಲ್ಲ ಸಂಸ್ಥೆಗಳ ಮುಖ್ಯಸ್ಥರಿಗೆ ನಮ್ಮ ಕೃತಜ್ಞತೆಗಳು. ಇದಲ್ಲದೆ, ಫರಿಶ್ತಾನ ತಾರೀಖೆ ಫರಿಶ್ತಾದ ಇಂಗ್ಲಿಷ್ ಮತ್ತು ಉರ್ದು ಅನುವಾದಗಳು, ಅಬ್ದುಲ್ಲಾ ದೇಹಲವಿಯ ಇಬ್ರಾಹೀಮನಾಮಾದ ಹಿಂದಿ ಮತ್ತು ಉರ್ದು ಅನುವಾದಗಳು, ಕವಿ ನುಸ್ರತಿಯ ಅಲಿನಾಮಾ, ಈಶ್ವರದಾಸ ನಗರ್‌ನ ಫುತೂಹತ್ ಅಲಂಗೀರ ಕೃತಿಯ ಇಂಗ್ಲಿಷ್ ಅನುವಾದ ಮತ್ತು ನೂರಾರು ಪರ್ಶಿಯನ್ ಮೂಲ ಮತ್ತು ಮರಾಠಿ ಅನುವಾದದ ಆದಿಲಶಾಹಿ ಫರ್ಮಾನುಗಳು ದೊರೆತವು. ಉಳಿದ ಹಸ್ತಪ್ರತಿಗಳನ್ನು ದೊರಕಿಸಬೇಕಾಗಿದೆ.

ಹೀಗೆ ಸಾಮಗ್ರಿಯನ್ನು ಸಂಗ್ರಹಿಸಿ ಅನುವಾದ ಕೆಲಸ ಪ್ರಾರಂಭ ಮಾಡಲಾಯಿತು. ಪರ್ಶಿಯನ್, ದಖನಿ ಮತ್ತು ಉರ್ದು ಭಾಷೆಗಳ ಈ ವಿದ್ವಾಂಸರನ್ನು ಕನ್ನಡ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಳ್ಳಲಾಯಿತು.

೧. ಮೌಲಾನಾ ಮಹಬೂಬುರ್ ರಹಮಾನ ಮದನಿ, ವಿಜಯಪುರ.

೨. ಶ್ರೀ ಬಿ. ಜಯಾಚಾರ್ಯ, ಯಾದಗಿರಿ.

೩. ಶ್ರೀಮತಿ ಬಾನು ಮುಷ್ತಾಕ್, ಹಾಸನ.

೪. ಡಾ. ಅಬ್ದುಲ್ ಹಮೀದ, ತಿಪಟೂರು.

೫. ಶ್ರೀ ಎಂ.ಎನ್ ನದಾಫ, ವಿಜಯಪುರ

೬. ಪ್ರೊ. ವಸಂತ ಕುಷ್ಟಗಿ, ಗುಲಬರ್ಗಾ.

೭. ಶ್ರೀಮತಿ ರತ್ನಾ ಮಣ್ಣೂರ, ಗುಲಬರ್ಗಾ.

೮. ಡಾ. ಅಮೀರುದ್ದೀನ್ ಖಾಜಿ, ವಿಜಯಪುರ.

೯. ಶ್ರೀ ಹಸನ ನಯೀಮ ಸುರಕೋಡ, ರಾಮದುರ್ಗ.

೧೦. ಡಾ. ಬಿ ರಘೋತ್ತಮರಾವ ದೇಸಾಯಿ, ಬೆಂಗಳೂರು.

೧೧. ಶ್ರೀಮತಿ ವಿದ್ಯಾ ಗುಮಾಸ್ತೆ, ವಿಜಯಪುರ

೧೨. ಡಾ. ಆರ್.ಕೆ. ಕುಲಕರ್ಣಿ, ವಿಜಯಪುರ

೧೩. ಡಾ. ಮುಹಮ್ಮದ್ ಸಿಬ್ಗತ್‌ಉಲ್ಲಾಹ್

ಇವರ ಸಹಕಾರದಿಂದ ಮೊದಲ ಹಂತದ ೬ ಸಂಪುಟಗಳು,

೧. ತಾರೀಖೆ ಫರಿಶ್ತಾ: ೪ ಸಂಪುಟಗಳು.

೨. ಬಸಾತೀನೆ ಸಲಾತೀನ: ೫ನೆಯ ಸಂಪುಟ.

೩. ಇಬ್ರಾಹೀಮ ನಾಮಾ [ದಖನಿ], ಗುಲದಸ್ತಾಯೆ ವಿಜಯಪುರ [ದಖನಿ], ತಾರೀಖೆ ಹಫ್ತಕುರ್ಸಿ [ಪರ್ಶಿಯನ್], ಫುತುಹತೆ ಅಲಂಗೀರ (ಭಾಗಶಃ) [ಪರ್ಶಿಯನ್]– ಇವೆಲ್ಲ ಸೇರಿ ೬ನೆಯ ಸಂಪುಟ.

ಹೀಗೆ ೬ ಸಂಪುಟಗಳಲ್ಲಿ ಸುಮಾರು ನಾಲ್ಕು ಸಾವಿರ ಪುಟಗಳ ಸಾಹಿತ್ಯ ಕಳೆದ ವರುಷ (೨೦೧೪) ಪ್ರಕಟವಾಗಿವೆ. ಇದೀಗ ಏಳನೆಯ ಸಂಪುಟವಾಗಿ ಮಹಾಕವಿ ಜಹೂರ್ ಬಿನ್ ಜುಹೂರಿ ವಿರಚಿತ ಮುಹಮ್ಮದ ನಾಮಾ ಕಾವ್ಯ ಪ್ರಕಟವಾಗುತ್ತಿದೆ. ಈ ಕಾವ್ಯವನ್ನು ಡಾ. ಮಹನೂರ್ ಜಮಾನಿ ಬೇಗಂ, ಡಾ. ಎ.ಎಚ್. ಮಾಸಾಪತಿ, ಫಕೀರ್ ಮುಹಮ್ಮದ ಕಟ್ಪಾಡಿ, ಮೌಲಾನಾ ಸಯ್ಯದ್ ರಶೀದ್ ಎ.ಅಲ್ ಖಾಸಿಮಿ ಅನುವಾದಿಸಿದ್ದಾರೆ. ಎಂಟನೆಯ ಸಂಪುಟವಾಗಿ ಮುಲ್ಲಾ ನುಸ್ರತಿ ವಿರಚಿತ ಅಲಿನಾಮಾ ಮತ್ತು ತಾರೀಖೇ ಸಿಕಂದರಿ ಎರಡು ಕಾವ್ಯಗಳು ಪ್ರಕಟವಾಗುತ್ತಿವೆ. ಇವುಗಳನ್ನು ಕ್ರಮವಾಗಿ ಡಾ. ಮುಹಮ್ಮದ್ ಸಿಬ್ಗತ್‌ಉಲ್ಲಾಹ್ ಮತ್ತು ಡಾ. ವಿಠ್ಠಲರಾವ ಟಿ. ಗಾಯಕ್ವಾಡ್ ಅವರುಗಳು ಅನುವಾದಿಸಿದ್ದಾರೆ. ಈ ಸಂಪುಟಗಳನ್ನು ಅನುವಾದಿಸಿದ ಅನುವಾದಕರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

'ಆದಿಲಶಾಹಿ ಸಾಹಿತ್ಯ ಅನುವಾದ ಯೋಜನೆ'ಗೆ ಅನುದಾನ ನೀಡಿದ ಕರ್ನಾಟಕ ಸರಕಾರಕ್ಕೆ, ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸುವಲ್ಲಿ ಸಹಕರಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಅಧಿಕಾರಿಗಳಿಗೆ ಮತ್ತು ಈ ದಿಶೆಯಲ್ಲಿ ನಿರಂತರ ಸಹಾಯಹಸ್ತ ನೀಡುತ್ತಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಅಧ್ಯಕ್ಷರಾದ ಶ್ರೀ ಎಂ.ಬಿ. ಪಾಟೀಲ, ಸಂಶೋಧನ ಕೇಂದ್ರದ ಅಧ್ಯಕ್ಷರಾದ ಶ್ರೀ ಶಿವಯೋಗಿ ತಂಬಾಕೆ ಅವರಿಗೆ ಕೃತಜ್ಞತೆಗಳು.

ಸಂಪುಟಗಳು ಪ್ರಕಟವಾಗುವ ಪ್ರತಿ ಹಂತದಲ್ಲಿ ಸಹಕಾರ ನೀಡಿದ, ವಿಜಯಪುರ ಜಿಲ್ಲೆಯ ಅಂದಿನ ಜಿಲ್ಲಾಧಿಕಾರಿಗಳಾಗಿದ್ದ ಶ್ರೀ ಶಿವಯೋಗಿ ಕಳಸದ, ಶ್ರೀ ರಿತ್ವಿಕ್ ರಂಜನ್ ಪಾಂಡೆ ಮತ್ತು ಇಂದಿನ ಜಿಲ್ಲಾಧಿಕಾರಿಗಳಾದ ಶ್ರೀ ಡಿ. ರಣದೀಪ ಅವರನ್ನು, ಈ ಯೋಜನೆಯ ಸಲಹಾ ಸಮಿತಿ ಸದಸ್ಯರ ಮಾರ್ಗದರ್ಶನವನ್ನು, ಕನ್ನಡ ಮತ್ತು

ಸಂಸ್ಕೃತಿಇಲಾಖೆಯ ಸಹಾಯಕ ನಿರ್ದೇಶಕರಾದ ಡಾ. ಸೋಮಶೇಖರ ವಾಲಿ, ಬಿ.ಎಲ್.ಡಿ.ಇ. ಸಂಸ್ಥೆಯ ಡಾ. ಫ.ಗು.ಹಳಕಟ್ಟಿ ಸಂಶೋಧನ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಎಂ.ಎಸ್. ಮದಭಾವಿ ಅವರ ಶ್ರಮವನ್ನು ಪ್ರೀತಿಯಿಂದ ಸ್ಮರಿಸುತ್ತೇವೆ.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

*

ನಿರ್ದೇಶಕರ ಮಾತು

ಡಾ. ಕೃಷ್ಣ ಕೊಲ್ಹಾರಕುಲಕರ್ಣಿ

ಎರಡನೆಯ ಅಲಿ ಆದಿಲಶಹನ [ಕ್ರಿ.ಶ. ೧೬೫೬-೧೬೭೨] ಆಸ್ಥಾನದಲ್ಲಿದ್ದ ಮುಲ್ಲಾ ನುಸ್ರತಿ ದಖಣಿ ಉರ್ದು ಸಾಹಿತ್ಯದಲ್ಲಿ ಒಬ್ಬ ಮಹಾಕವಿಯೆಂದು ಹೆಸರು ಪಡೆದಿದ್ದಾನೆ. ಆತನು 'ಗುಲ್ಶನೆ ಇಷ್ಕ' 'ಅಲಿನಾಮಾ' ಹಾಗೂ 'ತಾರೀಖೇ ಸಿಕಂದರಿ' ಎಂಬ ಮೂರು ಕಾವ್ಯಗಳನ್ನು, ಕೆಲವು ಸ್ಫುಟ ಕವಿತೆಗಳನ್ನು ಬರೆದಿದ್ದಾನೆ. ಆತನ ಮೂರೂ ಕಾವ್ಯಗಳು ಪ್ರಕಟವಾಗಿವೆ. ಗುಲಶನೆ ಇಷ್ಕ ಒಂದು ಪ್ರೇಮಾಖ್ಯಾನವಾಗಿದ್ದರೆ ಅಲಿನಾಮಾ ಮತ್ತು ತಾರೀಖೇ ಸಿಕಂದರಿ ಅಥವಾ ಸಿಕಂದರನಾಮಾ ಎಂಬ ಕಾವ್ಯಗಳು ಚಾರಿತ್ರಿಕ ಕಾವ್ಯಗಳಾಗಿವೆ.

ಅಲಿನಾಮಾದಲ್ಲಿ ಎರಡನೆಯ ಅಲಿ ಆದಿಲಶಹನ ಚರಿತ್ರೆಯ ಅಂಶಗಳು ಕಾಣಿಸಿಕೊಂಡಿದ್ದರೆ ತಾರೀಖೆ ಇಸ್ಕಂದರಿಯಲ್ಲಿ ಎರಡನೆಯ ಅಲಿಯ ಮಗ, ಆದಿಲಶಾಹಿಗಳ ಕೊನೆಯ ಬಾದಶಹ ಸಿಕಂದರ ಆದಿಲಶಹನ ಕುರಿತಾಗಿ ಇದೆ ಎಂದು ಹೇಳಬಹುದಾದರೂ ವಿಶೇಷವಾಗಿ ಉಮರಾಣಿ ಯುದ್ಧದ ವರ್ಣನೆ ತುಂಬಿಕೊಂಡಿದೆ.

ಮುಲ್ಲಾ ನುಸ್ರತಿ ಎಂದೇ ಖ್ಯಾತನಾಗಿರುವ ಕವಿಯ ಪೂರ್ಣ ಹೆಸರು, ಮಹಮ್ಮದ ನುಸ್ರತ ಎಂದೂ ಆತನ ತಂದೆಯ ಹೆಸರು ಶೇಖ ಮಹಮ್ಮದ ನುಸ್ರತ ಎಂದು ಹೇಳಲಾಗಿದೆ. ಆತನಿಗೆ ಇಬ್ಬರು ಸಹೋದರರಿದ್ದರು. ತಂದೆ ಆದಿಲಶಾಹಿಗಳಲ್ಲಿ ಕೆಲಸಕ್ಕಿದ್ದನು. ಕವಿಯು ಗುಲ್ಶನೆ ಇಷ್ಕದಲ್ಲಿ ಹೇಳಿಕೊಂಡಂತೆ, ಆತನ ತಂದೆಯು ಶೂರನಾಗಿದ್ದನು. ಪ್ರಾರಂಭದಿಂದಲೂ ಬಾದಶಹನ ಸೈನ್ಯದಲ್ಲಿ ಒಬ್ಬ ಸೈನ್ಯಾಧಿಕಾರಿಯಾಗಿದ್ದನು.

ದಖಣಿ ಕಾವ್ಯಗಳಲ್ಲಿ ಸಾಮಾನ್ಯವಾಗಿ ಹೇಳಿಕೊಳ್ಳುವಂತೆ, ಆಶ್ರಯದಾತನನ್ನೆ

ಗುರು ಎಂಬುದಾಗಿ ಹೇಳಿಕೊಳ್ಳುತ್ತಾರೆ. ನುಸ್ರತಿಯೂ ಎರಡನೆಯ ಅಲಿ ಆದಿಲಶಹನನ್ನೆ ಗುರು ಎಂದು ಹೇಳಿಕೊಂಡಿದ್ದಾನೆ. ಆದರೆ ವಾಸ್ತವದಲ್ಲಿ ಕವಿತ್ವ ಆತನಿಗೆ ಜನ್ಮಜಾತವಾಗಿ ಬಂದದ್ದೆಂದೂ, ತನ್ನ ಮನೆತನದಲ್ಲಿ ಸಾಹಿತ್ಯಿಕ ವಾತಾವರಣ ಇಲ್ಲದ್ದರಿಂದ ತನಗೆ ಬಂದ ಕವಿತ್ವ ಪರಮಾತ್ಮನ ದೇಣಿಗೆ ಎಂದೂ ಹೇಳಿಕೊಂಡಿದ್ದಾನೆ. ಅವನಿಗೆ 'ಮಲಿಕುಶ್ಶರಾ' ಎಂಬ ಬಿರುದು ಇತ್ತು. ಅದರ ಅರ್ಥ ಕವಿರಾಜ. ವಿಜಾಪುರವು ಮೊಗಲರಿಗೆ ವಶವಾಗುವ ಸುಮಾರು ಆರು ವರುಷಗಳ ಮೊದಲು ಅಂದರೆ ಸುಮಾರು ಕ್ರಿ. ಶ. ೧೬೮೦ರಲ್ಲಿ ನುಸ್ರತಿ ನಿಧನ ಹೊಂದಿದನು. ಅವನ ಸಮಾಧಿಯು ವಿಜಾಪುರದಲ್ಲಿ ಇಂದಿನ ಸರಕಾರಿ ಪ್ರೌಢಶಾಲೆಯ ಆವರಣದಲ್ಲಿ ಇದೆ.

ದಕ್ಷಿಣದ ಹಿಂದಿ ಕವಿಗಳಲ್ಲಿ ಹಾಗೂ ಸಾಹಿತಿಗಳಲ್ಲಿ ಮುಲ್ಲಾ ನುಸ್ರತಿ ಒಬ್ಬ ಸರ್ವಶ್ರೇಷ್ಠ ಕವಿಯೆಂದು ನುಸ್ರತಿಯ ಕುರಿತು ದೀರ್ಘ ಅಭ್ಯಾಸ ಮಾಡಿದ ಡಾ. ಅಬ್ದುಲ್ ಹಕ್ ಅವರು ಹೇಳುತ್ತಾರೆ. ಅವರು ಹೇಳುವಂತೆ, 'ರಜ್ಮಿಯಾ [ವೀರರಸ ಪ್ರಧಾನ], ವಾಕಿಯಾತ [ಘಟನೆಗಳು] ವಿಷಯಗಳಲ್ಲಿ ನುಸ್ರತಿಗೆ ವಿಶೇಷ ಪ್ರಾವಿಣ್ಯತೆ ಇತ್ತು. ಅವನು ಸೈನ್ಯದ ಆಕ್ರಮಣ ಯುದ್ಧದ ಘನ ಗಂಭೀರತೆ ಹಾಗೂ ಅಲ್ಲಿಯ ಹೊಡೆದಾಟಗಳ ದೃಶ್ಯಗಳನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸುತ್ತಾನೆ'.

ಅಲಿನಾಮಾ ಹಾಗೂ ತಾರೀಖೆ ಇಸ್ಕಂದರಿ ಕಾವ್ಯಗಳು ಚಾರಿತ್ರಿಕ ಅಂಶಗಳಿಂದ ಕೂಡಿವೆ ಎಂದು ಹೆಳಿತಷ್ಟೆ. ಅಲಿನಾಮ ಒಂದು ಬೃಹತ್ ಕಾವ್ಯ. ಅದರಲ್ಲಿ ಎರಡನೆಯ ಅಲಿ ಆದಿಲಶಹನ ಕಾಲದ ಯುದ್ಧಗಳ ವರ್ಣನೆ ಇದೆ. ಕವಿ ತನ್ನ ಇತಿಹಾಸ ಪ್ರಜ್ಞೆಯನ್ನು ಮೆರೆದಿದ್ದಾನೆ. ಆಶ್ರಯದಾತ ಎರಡನೆಯ ಅಲಿ ಆದಿಲಶಹನ ಚರಿತ್ರೆಯನ್ನು ಹೇಳುವಾಗ ಆತನ ಪರಮ ಶತ್ರು ಶಿವಾಜಿಯ ಉಲ್ಲೇಖ ಬರಲೇ ಬೇಕಾಗುತ್ತದೆ. ಆತನೊಂದಿಗೆ ಎರಡು ಸಲ ಯುದ್ಧವಾಡಿದ್ದಾನೆ. ಶತ್ರುವಾದದ್ದರಿಂದ ಆತನ ಪ್ರತಿಯೊಂದು ಕ್ರಿಯೆಯನ್ನು ನಿಷೇಧಾತ್ಮಕವಾಗಿ ನೋಡುವುದು ಸಹಜ. ಶಿವಾಜಿ ಒಬ್ಬ ಕಳ್ಳ, ದಂಗೆಖೋರ, ಕಪಟ ಎಂದೆಲ್ಲ ವರ್ಣಿಸಿದರೂ ಆತನ ಸಾಹಸ, ರಾಜಕೀಯ ನೀತಿ, ಮರಾಠರ ಶೌರ್ಯ, ಧೈರ್ಯಗಳನ್ನು ಚಿತ್ರಿಸುವಾಗ ಆತನ ವಾಸ್ತವ ಚಿತ್ರಣವನ್ನು ಕೊಡುತ್ತಾನೆ. ತನ್ನ ದೃಷ್ಟಿಕೋನದಿಂದ ಅಳೆದು ಬರೆದದ್ದು ಆತನ ಇತಿಹಾಸ ಪ್ರಜ್ಞೆಗೆ ಸಾಕ್ಷಿಯಾಗಿದೆ.

ಆತನ ಕುರಿತು ಅಭ್ಯಾಸ ಮಾಡಿದ ವಿದ್ವಾಂಸರು, ಈತನು ಮುಸಲ್ಮಾನ ಧರ್ಮದ ಅಭಿಮಾನಿಯೂ, ಇತರ ಧರ್ಮಗಳ ದ್ವೇಷಿಯೂ ಆಗಿದ್ದನು. ಆತನು ವಿಜಾಪುರದಲ್ಲೆ ಹುಟ್ಟಿ ಬೆಳೆದದ್ದರಿಂದ ಅವನಿಗೆ ಸ್ಥಳೀಯ ಭಾಷೆಗಳು ಚೆನ್ನಾಗಿ ಕರಗತವಾಗಿದ್ದುವು. ಆತನ ಕಾವ್ಯದಲ್ಲಿ ಬರುವ ಅಲಂಕಾರ ವರ್ಣನೆ ಇತ್ಯಾದಿಗಳಿಂದ ನುಸ್ರತಿಯು ಹಿಂದು ಸಂಸ್ಕೃತಿಯನ್ನು ಚೆನ್ನಾಗಿ ಅಭ್ಯಸಿಸಿದ್ದನು. ಸರ್ ಚಾರ್ಲಸ್

ಲಾಯಲ್ ಅಭಿಪ್ರಾಯದಲ್ಲಿ ನುಸ್ರತಿ ಮನೆತನ ಮೊದಲು ಹಿಂದು ಬ್ರಾಹ್ಮಣರದ್ದಾಗಿತ್ತು, ಅದರಿಂದಾಗಿ ನುಸ್ರತಿಗೆ ಹಿಂದು ತತ್ವಜ್ಞಾನದಲ್ಲಿ ಆಳವಾದ ಅಭ್ಯಾಸವಿತ್ತು ಎಂಬೆಲ್ಲ ಅಭಿಪ್ರಾಯಗಳನ್ನು ವಿದ್ವಾಂಸರು ವ್ಯಕ್ತಪಡಿಸಿದ್ದಾರೆ.

ಅಲಿನಾಮಾ ಕಾವ್ಯವನ್ನು ಅವಲೋಕಿಸಿದಾಗ ಕವಿಗೆ ಹಿಂದುಗಳ ಪವಿತ್ರ ಗ್ರಂಥಗಳಾದ ರಾಮಾಯಣ, ಮಹಾಭಾರತ, ಭಾಗವತಗಳ ಪರಿಚಯವಿದ್ದಿತೆಂದು ಖಚಿತ ಪಡುತ್ತದೆ. ಅಲ್ಲಿ ಬರುವ ಇಂದ್ರ, ಲಕ್ಷ್ಮೀ, ಅರ್ಜುನ, ಲಕ್ಷ್ಮಣರ ಪಾತ್ರಗಳು, ಸೂರ್ಯ, ಚಂದ್ರ, ಗುರು ಶನಿ ಮೊದಲಾದ ಎಲ್ಲ ಗ್ರಹಗಳು, ಮೇಷಾದಿ ರಾಶಿಗಳು ಸಂದರ್ಭಾನುಸಾರ ಹೋಲಿಕೆ ಮಾಡಿದ್ದಾನೆ. ಯುದ್ಧಗಳ ವರ್ಣನೆಯಲ್ಲಿ ಅವನು ಕುಮಾರವ್ಯಾಸನ ಭಾರತವನ್ನು ಓದಿರಬೇಕು. ಕುಮಾರವ್ಯಾಸ ಹೇಳಿದ ಹಾಗೆ 'ಅರಸುಗಳಿಗಿದು ವೀರ, ದ್ವಿಜರಿಗೆ ಪರಮ ವೇದದ ಸಾರ ಮಂತ್ರಿ ಜನಕೆ ಬುದ್ಧಿ ಗುಣ ವಿರಹಿಗಳ ಶೃಂಗಾರ' ಎಂಬ ಷಟ್ಪದಿಯನ್ನು, ನುಸ್ರುತಿಯು ತನ್ನ ಕಾವ್ಯದ ಕೊನೆಗೆ "ಇದು ಅರಸರ ದರ್ಬಾರಿನ ಸಂಗೀತ ಮಂತ್ರಿಗಳಿಗೆ ಅತ್ಯುನ್ನತ ಕಾರಣ, ಸೌಂದರ್ಯದಲ್ಲಿ ಇದು ಯಾವ ಮಾತಿಗಿಂತ ಕಡಿಮೆಯಿಲ್ಲ ಇದು ನಿತ್ಯ ಮೆಚ್ಚುಗೆ ಪಡೆಯುತ್ತದೆ. ದೇವ ಭಕ್ತರು ಈ ಪಂಕ್ತಿಗಳನ್ನು ಕೇಳಿದರೆ ಅವಿರೋಧವಾಗಿ ಇದರಿಂದ ಆಸಕ್ತಿ ಪಡೆಯುವರು" ಎಂಬುದನ್ನು ಹೋಲಿಸಬಹುದು. ಉಭಯ ಭಾಷೆಗಳನ್ನು ಚೆನ್ನಾಗಿ ಬಲ್ಲವರು ಕುಮಾರವ್ಯಾಸ ಮತ್ತು ನುಸ್ರತಿಯ ಕಾವ್ಯಗಳ ತೌಲನಿಕ ಅಭ್ಯಾಸವನ್ನು ಮಾಡುವ ಅಗತ್ಯ ಇದೆ.

'ಅಲಿನಾಮಾ' ಕಾವ್ಯವನ್ನು ಕನ್ನಡಕ್ಕೆ ಅನುವಾದ ಮಾಡಿ ಕೊಟ್ಟವರು ಬೆಂಗಳೂರಿನ ಡಾ. ಮುಹಮ್ಮದ ಸಿಬ್ಗತುಲ್ಲಾಃ ಅವರು. ಅದನ್ನು ಪರಿಷ್ಕರಿಸಿ, ಕರಡಚ್ಚು ತಿದ್ದಿದವರು ಡಾ. ಎಂ.ಎಸ್.ಮದಭಾವಿ ಅವರು. 'ತಾರೀಖೇ ಸಿಕಂದರಿ' ಕಾವ್ಯವನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟವರು ಡಾ. ವಿಠ್ಠಲರಾವ ಟಿ.ಗಾಯಕವಾಡ ಅವರು. ಇವರೆಲ್ಲರಿಗೆ ಕೃತಜ್ಞತೆಗಳು.

ಈ ಯೋಜನೆಯನ್ನು ರೂಪಿಸುವಲ್ಲಿ, ಮುನ್ನಡೆಸುವಲ್ಲಿ ಉದ್ದಕ್ಕೂ ಮಾರ್ಗದರ್ಶನ ನೀಡಿದ ಸಮಿತಿಯ ಅಧ್ಯಕ್ಷರಾದ ಡಾ. ಎಂ.ಎಂ. ಕಲಬುರ್ಗಿ ಮತ್ತು ಸಹಕಾರವಿತ್ತ ಸಮಿತಿಯ ಸದಸ್ಯರಿಗೆ ಕೃತಜ್ಞತೆಗಳು.

ಮುಖಪುಟ ವಿನ್ಯಾಸಗೊಳಿಸಿದ ಶ್ರೀ ಕೆ.ಕೆ.ಮಕಾಳಿ ಹಾಗೂ ಅಂದವಾಗಿ ಮುದ್ರಿಸಿದ ಬೆಂಗಳೂರಿನ ಪ್ರಿಂಟ್ ಪಾಯಿಂಟ್‌ನ ಶ್ರೀ ಬಿ.ಸಿ.ಪಾಟೀಲ (ಹೆಬ್ಬಾಳ) ಮತ್ತು ಅವರ ಸಿಬ್ಬಂದಿಯನ್ನು ನೆನೆಯುತ್ತೇವೆ.

■

ಮುಲ್ಲಾ ನುಸ್ರತಿ

ವಿರಚಿತ

ಅಲಿನಾಮಾ

ಅನುವಾದ

ಡಾ. ಮುಹಮ್ಮದ್ ಸಿಬ್ಘತ್‌ಉಲ್ಲಾಹ್

*

ಮೊದಲ ಮಾತು

ದಿವಂಗತ ನವಾಬ್ ಮೀರ್ ಯುಸುಫ್ ಅಲಿ ಖಾನ್ ಸಾಲಾರ್ ಜಂಗ್‌ರವರ ಪೂರ್ವ ಪುಸ್ತಕ ಭಂಢಾರ ತನ್ನ ವಿಚಿತ್ರ ವಸ್ತುಗಳಿಂದ ಪ್ರಪಂಚದ ಬೆಲೆ ಬಾಳುವಂತಹ ಪುಸ್ತಕ ಭಂಡಾರದಲ್ಲಿ ಪರಿಗಣಿಸಲಾಗುತ್ತದೆ. ಇದರಲ್ಲಿ ದಕನಿ ಭಾಷೆಯ ಅನೇಕ ಹಸ್ತಪ್ರತಿಗಳು ಪ್ರಪಂಚದ ಯಾವದೇ ಪುಸ್ತಕ ಭಂಡಾರದಲ್ಲಿ ಇಲ್ಲದಂತಹ ಕೃತಿಗಳು ಸುರಕ್ಷಿತವಾಗಿದೆ. ಇದರ ಪ್ರಕಟಣೆಯಿಂದ ಹನ್ನೆರಡನೇಯ ಶತಮಾನದಿಂದ ಹದಿನಾರನೇ ಶತಮಾನದವರೆಗೆ ಭಾರತದ ಭಾಷಾ ಚಳುವಳಿಗಳು ಹಾಗೂ ಸಂಸ್ಕೃತಿಯ ಅಡಕುಗಳ ಬಗ್ಗೆ ಬೆಳಕು ಚಲ್ಲುಬಹುದಾಗಿದೆ.

೧೯೩೫ರಲ್ಲಿ ವಲಿ ದಖ್ನಿಯವರ ಇನ್ನೂರನೆಯ ಶತಮಾನ ಮಹೋತ್ಸವ ಆಚರಿಸಿದಾಗ ದಿವಂಗತ ನವಾಬ್ ಸಾಲಾರ್ ಜಂಗ್‌ರವರು ಈ ದಖನಿ ಉರ್ದುವಿನ ವಿಚಿತ್ರ ವಸ್ತುಗಳನ್ನು ಪ್ರಕಟಿಸಬೇಕೆಂದು ಇಂದ್ರಿಯಾನುಭವಿಸಿ ಈ ಉದ್ದೇಶಕ್ಕಾಗಿ ತನ್ನ ಪೋಷಣೆಯಲ್ಲಿ 'ಮಜ್ಲಿಸೆ ಇಷಾಅತೆ ದಖ್ನಿ ಮಖ್ತೂತಾತ್' (ದಖನಿ ಹಸ್ತಪ್ರತಿಗಳ ಪ್ರಕಟಣೆಯ ಸಮಿತಿ) ರಚಿಸಿದರು.ಈ ಮುಖ್ಯ ಕಾರ್ಯಕ್ಕೆ ಲಭಿಸುವ ಎಲ್ಲ ಖರ್ಚುವ್ಯಚ್ಚದ ಜವಾಬ್ದಾರಿಯೂ ಸಹ ಒಪ್ಪಿಕೊಂಡರು. ಈ ಸಮಿತಿಯು ನವಾಬರ ನಧನದವರೆಗೆ ಈ ಕೆಳಕಂಡ ಕೃತಿಗಳನ್ನು ಪ್ರಕಟಿಸಿತು.

೧) ಕುಲ್ಲಿಯಾತೆ ಮುಹಮ್ಮದ್ ಖುತುಬ್ ಶಾಃ ೨) ಕುಲ್ಲಿಯಾತೆ ಶಾಃ ಸಿರಾಜ್ ಔರಂಗಾಬಾದಿ. ೩) ಮಸ್ನವಿ ಸೈಫುಲ್ ಮುಲೂಕ್ ವೊ ಬದೀಉಲ್ ಜಮಾಲ್ (ಮುಲ್ಲಾ ಘವ್ವಾಸಿ) ೪) ತೂತಿ ನಾಮಾ (ಮುಲ್ಲಾ ಘವ್ವಾಸಿ) ೫) ಕಲಾಮುಲ್ ಮುಲೂಕ್ (ಬಹ್ಮನಿ, ಖುತುಬ್ ಶಾಹಿ, ಆದಿಲ್ ಶಾಹಿ ಶಾಹಗಳ ಕವನ ಸಂಕಲನ) ೬) ಫೂಲ್ ಬನ್ (ಇಬ್ನೆ ನಷಾತಿ) ೭) ಖಿಸ್ಸಯೆ ಬೆನಝೀರ್ (ಸನ್‌ಅತಿ ಬಿಜಾಪುರಿ).

ಈ ಪುಸ್ತಗಳ ಪ್ರಕಟಣೆಗಳಿಂದ ಉರ್ದು ಅಧ್ಯಾಪಕರು, ಶಿಕ್ಷಕರು, ಗುರುಗಳು ಹಾಗೂ ಜ್ಞಾನಿಗಳಿಗೆ ಹೊಸ ಆಧಾರ ಪ್ರಮಾಣ ಲಭಿಸಿತು. ಇದನ್ನು ಪ್ರಶಂಸಿಲಾಯಿತು. ಅನೇಕ ಕೃತಿಗಳು ಭಾರತೀಯ ವಿಶ್ವವಿದ್ಯಾಲಯಗಳ ಪಾಠಪಠ್ಯದಲ್ಲು ಸೇರಿಸಿಕೊಳ್ಳಲಾಯಿತು.

ನವಾಬರ ನಿಧನನಿಂದ ಈ ಸಮಿತಿಯ ಕೆಲಸ ಸ್ಥಗಿತವಾಯಿತು. ಪ್ರಕಟಣೆಯ ಹಂತದಲ್ಲಿದ್ದ ಪುಸ್ತಕಗಳೂ ಸಹ ಪೂರ್ಣವಾಗಲಿಲ್ಲ. ಹೀಗೆ ಚರ್ಚೆಯಲ್ಲಿರುವ ಈ ಪುಸ್ತಕದ ಸಂಬಂಧವೂ ಇದರಲ್ಲಿ ಇದೆ, ಈಗ ಇದನ್ನು ಪೂರ್ಣಗೊಳಿಸಲಾಗಿದೆ.

೧೯೫೪ರಲ್ಲಿ ಸಾಲಾರ್ ಜಂಗ್ ಸ್ಟೇಟ್ ಕಮಿಟಿ ಇಂದ್ರಿಯನುಭಿಸುದ್ದೇನೆಂದರೆ ದಖ್ನಿ ಹಸ್ತಪ್ರತಿಗಳ ಪ್ರಕಟಣೆಯ ಕೆಲಸ ಜಾರಿಯಲ್ಲಿರಬೇಕು ಏಕೆಂದರೆ ಯಾವ ಕೆಲಸಗಳು ಅಪೂರ್ಣವಾಗಿದೆಯೋ ಅದು ಪೂರ್ಣವಾಗಬೇಕು ಹಾಗೂ ಜನಸಾಮಾನ್ಯರ ಲಾಭಕ್ಕಾಗಿ ಇವುಗಳನ್ನು ಇನ್ನಷ್ಟು ಕೃತಿಗಳು ಪ್ರಕಟಿಸಿ, ಇದಲ್ಲದೇ ಜನಸಾಮಾನ್ಯರು ಈ ಕೃತಿಗಳಿಂದ ಲಾಭ ಪಡೆಯುವ ಉದ್ದೇಶಕ್ಕಾಗಿ ಸಮಿತಿ ಇವುಗಳನ್ನು ದೇವನಾಗಿರಿ ಲಿಪಿಯಲ್ಲೂ ಪ್ರಕಟಿಸಬೇಕೆಂದು ತೀರ್ಮಾನಿಸಿ ಭಾರತ ಸರ್ಕಾರದಿಂದ ಈ ಕೆಲಸ ಪೂರ್ಣಗೊಳಿಸಲು ಸಾಧ್ಯವಾದಷ್ಟು ಧನಸಹಾಯ ಪಡೆಯಲು ಕೋರಬೇಕೆಂದು ಭಾರತ ಸರ್ಕಾರಕ್ಕೆ ಒಂದು ಮನವಿ ಸಲ್ಲಿಸಲಾಯಿತು. ಈ ಮಧ್ಯೆ ಡಾ.ಬಿ.ರಾಮಕೃಷ್ಣರಾವೊ ಮಾಜಿ ಮುಖ್ಯ ಮಂತ್ರಿ ಹೈದ್ರಾಬಾದ್ ರವರು ಇಚ್ಛಿಸಿದೇನೆಂದರೆ ಈ ಕಾರ್ಯದಲ್ಲಿ ದಖ್ನಿ ಪ್ರಕಾಷನ್ ಸಮಿತಿಯ ಸಹಾಯದಿಂದ ಒಂದು ಜಾಯಿಂಟ್ ಬೋರ್ಡ್ ಸ್ಥಾಪಿಸಿ ಈ ಕೃತಿಗಳನ್ನು ಎರಡು ಲಿಪಿಗಳಲ್ಲಿ ಪ್ರಕಟಿಸಿ ಇದರ ಉಸ್ತವಾರಿಯೂ ಸಹ ಸರಿಯಾದ ರೀತಿಯಲ್ಲಾಗಬೇಕು.

ಇದರಿಂದಾಗಿ ನನ್ನ ಅಧ್ಯಕ್ಷತೆಯಲ್ಲಿ ಒಂದು ಜಾಯಿಂಟ್ ಬೋರ್ಡ್ ಸ್ಥಾಪಿಸಲಾಯಿತು. ಇದರಲ್ಲಿ ನವಾಬ್ ಆಝಂ ಜಂಗ್ ಬಹಾದ್ದುರ್ ಮತ್ತು ದಿವಂಗತ ಪ್ರೊ.ಹುಸೈನ್ ಅಲಿ ಖಾ಼ನ್‌ರವರೂ ಸೇರಿದ್ದರು.ಡಾ.ಮಿಸಜ಼ ವಿಮಲ ಮದನ್ ಕಾರ್ಯದರ್ಶಿಯಾಗಿದ್ದರು. ನಂತರ ಈ ಬೋರ್ಡಿಗೆ ಸಾಲಾರ್ ಜಂಗ್ ದಖ್ನಿ ಪಬ್ಲಿಷಿಂಗ್ ಕಮಿಟಿ ಎಂದು ಹೆಸರಿಸಲಾಯಿತು. ಈ ಕೆಳಕಂಡವರು ಇದರ ಸದಸ್ಯರು.

೧. ಮಿಸ್ಟರ್ ಎಲ್.ಎನ್. ಗುಪ್ತ ಉಪಾಧ್ಯಕ್ಷರು ೨. ಡಾ.ಸೈಯ್ಯದ್ ಮುಹಿಯುದ್ದೀನ್ ಖಾ಼ದ್ರಿ ಜೋ಼ರ್ ಉಪಾಧ್ಯಕ್ಷರು. ೩. ಪ್ರೊ. ಅಬ್ದುಲ್ ಖಾ಼ದರ್ ಸರ್ವರಿ. ೪. ಪ್ರೊ. ಅಬ್ದುಲ್ ಮಜೀದ್ ಸಿದ್ದೀಖಿ಼. ೫. ಪಂಡಿತ್ ವಂಶಿಧರ್ ವಿದ್ಯಾಲಂಕಾರ ೬. ಪ್ರೊ. ಸೈಯ್ಯದ್ ಮುಹಮ್ಮದ್ ೭. ಪ್ರೊ. ಹಾರೂನ್ ಖಾ಼ನ್ ಶೇರ್ವಾನಿ ೮. ಡಾ.ರಾಜ್ ಕಿಶೋರ್ ಪಾಂಡೆ ೯. ಮಿಸ್ಟರ್ ಖ್ವಾಜ ಹಮೀದುದ್ದೀನ್ ಶಾಹಿದ್ ೧೦. ಮಿಸ್ಟರ್ ಮುಹಮ್ಮದ್ ಅಬ್ದುಲ್ ವಹ್ಹಾಬ್ ಕಾರ್ಯದರ್ಶಿ ಹಾಗೂ ಗೌರವಖಜಾಂಚಿ ೧೧. ಮಿಸ್ಟರ್ ಶ್ರೀನವಾಸ ಲಾಹೂಟಿ ಜಂಟಿ ಕಾರ್ಯದರ್ಶಿ.

ಭಾರತ ಸರ್ಕಾರ ಐದು ಸಾವಿರ ರೂಪಾಯಿಯ ಧನಸಹಾಯ ಮಂಜೂರು ಮಾಡಿತು. ಹೈದ್ರಾಬಾದ್ ಸರ್ಕಾರವತಿಯಿಂದ ಎರಡು ಸಾವಿರದ ಐನೂರು ರೂಪಾಯಿ ದಕ್ನಿ ಪ್ರಕಾಶನ ಸಮಿತಿರವರ ಮುಖಾಂತರ ಹಾಗೂ ಎಂಟು ಸಾವಿರ ರೂಪಾಯಿ ಸಾಲಾರ್ ಜಂಗ್ ಸ್ಟೇಟ್ ಕಮಿಟಿರವರು ಕಂತುಗಳಲ್ಲಿ ಮಂಜೂರು ಮಾಡಿದರು. ಈ ರೀತಿಯಾಗಿ ಈ ಬಂಡವಾಳದಿಂದ ಪ್ರಕಟಣೆಯ ಕಾರ್ಯ ಆರಂಭವಾಯಿತು. ಚರ್ಚೆಯಲ್ಲಿರುವ ಈ ಕೃತಿಯೂ ಸಹ ಈ ಬಂಡವಾಳದಿಂದ ನಂತರ ಪ್ರಕಟವಾಯಿತು. ಸದಸ್ಯರ ಸಹಯೋಗದಿಂದ ಈ ಮಹತ್ವದ ಕಾರ್ಯ ಪೂರ್ಣಗೊಳ್ಳುವ ಭರವಸೆ ಇದೆ. ಮುಂದೆ ಇನ್ನು ಹೆಚ್ಚು ಹಣದ ಮಂಜೂರಾತಿಯ ನಂತರ ಇನ್ನು ಹೆಚ್ಚು ಹೆಚ್ಚಾಗಿ ಪುಸ್ತಕಗಳು ಪ್ರಕಟಗೊಳ್ಳುವವು.

ಇಂತಿ

ಮೆಹದಿ ನವಾಝ ಜಂಗ್

■

*

ಮುನ್ನುಡಿ

ಅಲಿ ನಾಮಾದ ಕವಿ ಮುಲ್ಲಾ ನುಸ್ರತಿ ದಕ್ಷಿಣ ಭಾರತದ ದೊಡ್ಡ ಕವಿಗಳಲ್ಲಿ ಒಬ್ಬ. ಇವನ ಕಾವ್ಯಸ್ವರೂಪ ದಖನಿ ಸಾಹಿತ್ಯದ ಅಲಂಕಾರ. ಬಿಜಾಪುರ ಹಾಗೂ ಅದಿಲ್ ಶಾಹಿ ಕುಟುಂಬದವರ ಹೆಸರು ಎಲ್ಲಿ ಬರುತ್ತದೆಯೋ ಅಲ್ಲಿ ಮುಲ್ಲಾ ನುಸ್ರತಿಯ ಹೆಸರೂ ಸಹ ನೆನಪಿಗೆ ಬರುತ್ತದೆ. ಅವನು ಆಸ್ಥಾನ ಕವಿಗಳ ಸರ್ದಾರನಾಗಿದ್ದನು. ಬಿಜಾಪುರದ ಕೊನೇ ಕಾಲದಲ್ಲಿ ಇಮ್ಮಡಿ ಮುಹಮ್ಮದ್ ಆದಿಲ್ ಶಾಃ ಮತ್ತು ಸಿಕಂದರ್ ಆದಿಲ್ ಶಾಃ ಸಿಂಹಾಸನವನ್ನು ಅಲಂಕರಿಸಿದಾಗ ನುಸ್ರತಿಯವರ ಹಾಡುಗಳು ಬಿಜಾಪುರದ ಪರಿಸರದಲ್ಲಿ ಪ್ರತಿಧ್ವನಿಸುತ್ತಿದ್ದವು. ಅವನ ಮನಮೋಹಕ ಹಾಡುಗಳಿಂದ ಬಿಜಾಪುರದ ಸಾಹಿತ್ಯ ಸಭೆಗಳು ಆನಂದದಲ್ಲಿ ಮುಳುಗುತ್ತಿದ್ದವು. ನುಸ್ರತಿಯ ಕೌಟುಂಬಿಕ ವಿಷಯಗಳು ಅತಿ ವಿರಳವಾಗಿ ಸಿಗುತ್ತವೆ. ನುಸ್ರತಿಯೂ ಸಹ ಅಲಿನಾಮಾ ಹಾಗೂ ಗುಲ್ಷನೆ ಇಷ್ಟನಲ್ಲಿ ಕೆಲವು ಸಂಕೇತಗಳು ಮಾತ್ರ ಬರೆದಿರುವುದು ಬಿಟ್ಟರೆ ಮತ್ತೇನು ಬರೆದಿಲ್ಲ. ಕೆಲವು ಕವಿಗಳ ಜೀವನ ಚರಿತ್ರೆಗಳಿಂದ ಇವನ ಹೆಸರು ಮುಹಮ್ಮದ್ ನುಸ್ರತ್ ಹಾಗೂ ಇವನ ಇನ್ನಬ್ಬರು ಸೋದರರು ಶೇಖ಼ ಮನ್ಸೂರ್ ಮತ್ತು ಶೇಖ಼ ಅಬ್ದುರ್ರಹ್ಮಾನ್ ಎಂದು ತಿಳಿಯುತ್ತದೆ. ಮೌಲ್ವಿ ಅಬ್ದುಲ್ ಹಖ಼ ಸಾಹೇಬರು ಅವನ ಬಗ್ಗೆ ಸಂಶೋಧಿಸಿ ಮತ್ತಷ್ಟು ವಿಚಾರಗಳನ್ನು ಹುಡುಕಿದರು. ನುಸ್ರತಿ ಒಂದು ಸಜ್ಜನ ಕುಟುಂಬದ ಸುಪುತ್ರನಾಗಿದ್ದ. ಇವರ ಪೂರ್ವಜರೆಲ್ಲರೂ ಸಿಪಾಯಿಗಳಾಗಿದ್ದವರು ಹಾಗೂ ಬಿಜಾಪುರದ ಜಹಗೀರ್ದಾರಾಗಿದ್ದವರು. ಇವರ ಮಕ್ಕಳು ಇಲ್ಲಿಯವರಿಗೂ ತಮ್ಮ ಪಿತ್ರಾರ್ಜಿತ ಜಹಗೀರಿಂದ ಲಾಭ ಪಡೆಯುತ್ತಿದ್ದಾರೆ. ಬಾಘೆ ನಗೀನ ಅವರ ಜಹಗೀರು. ಇದೇ ಉದ್ಯಾನವನದಲ್ಲಿ ನುಸ್ರತಿಯ ಗೋರಿಯು ಇದೆ. ನುಸ್ರತಿಗೆ ಗಂಡು ಮಕ್ಕಳಿರಲಿಲ್ಲ, ಕೇವಲ ಒಂದು ಹೆಣ್ಣು ಮಗು ಮಾತ್ರವಿತ್ತು. ಅವರ ಮಕ್ಕಳೇ ಬಿಜಾಪುರದಲ್ಲಿ ಶ್ರೀಮಂತಿಕೆಯ ಜೀವನ ಸಾಗಿಸುತ್ತಿದ್ದಾರೆ. ನುಸ್ರತಿ ಸ್ವತಃ ಹೇಳಿಕೆಯಿಂದ

ತಿಳಿಯುವುದೇನೆಂದರೆ ಅವನು ಬಿಜಾಪುರದಲ್ಲಿ ಹೊಸತಾಗಿ ಬಂದವನಲ್ಲ, ಅವನ ಪೂರ್ವಜರು ಆದಿಲ್ ಶಾಹಿ ಸರ್ಕಾರದ ಹಳೇ ಸೇವಕರಾಗಿದ್ದವರು. ಬಿಜಾಪುರದಲ್ಲಿ ಅವರ ಅನೇಕ ಪೀಳಿಗೆಗಳೇ ಕಳೆದಿವೆ.

ಬಹಂದಲ್ಲಾಃ ಕುರ್ಸಿ ಬ ಕುರ್ಸಿ ಮೆರಿ
ಚಲಿ ಆಯಿ ಹೈ ಬಂದಗಿ ಮೆ ತೆರಿ

(ಅಲ್ಲಾಹನ ಕೃಪೆಯಿಂದ ನನ್ನ ವಂಶದವರು ಒಂದಾದ ಮೇಲೆ ಒಂದು ನಿನ್ನ ಸೇವೆಯನ್ನೇ ಮಾಡುತ್ತ ಬಂದಿರುವರು.)

ಅವರ ವೃತ್ತಿ ಸಿಪಾಯಿಗಿರಿಯಾಗಿತ್ತು. ಈ ಜನ ಸೈನ್ಯದಲ್ಲಿ ಸಲಹ್ದಾರಾಗಿದ್ದವರು. ಹೀಗೆ ನುಸ್ರತಿ ತನ್ನ ತಂದೆಯ ಬಗ್ಗೆ ಹೇಳುತ್ತಾನೆ

ಕೆ ಥಾ ಪಿದರ್ ಸೂರ್ ಶುಜಾಅತ್ ಮಆಬ್
ಖ಼ದೀಂ ಎಕ್ ಸಲಹ್ದಾರ್ ಜಮ ರಿಕಾಬ್

(ನನ್ನ ತಂದೆರವರು ಬಲು ಸಾಹಸಿ ಶೌರ್ಯಹೊಂದಿದವರು ಅವರೊಬ್ಬ ಹಳೇ ಸಲಹ್ದಾರ, ಸದ್ಯವ ರಾಜ ಮಹಾರಾಜರು ಸವಾರಿ ಮಾಡುವಾಗ, ಕುದುರೆ ಸವಾರಿ ಮಾಡುತ್ತಿದ್ದವರು.)

ಆದರೆ ಶಾಹಿ ದರ್ಬಾರಿನಲ್ಲಿ ಈ ಕುಟುಂಬ ಇಮ್ಮಡಿ ಆದಿಲ್ ಶಾಹನ ಕಾಲದಲ್ಲಿ ಬಂದು ಸೇರಿದವರಾಗಿದ್ದವರು. ನುಸ್ರತಿ ತನ್ನ ಕುಟುಂಬದಲ್ಲಿ ಮೊದಲನೆಯ ವ್ಯಕ್ತಿ, ಅವನು ತನ್ನ ಕವನ ರಚನೆಯ ಬಲದಿಂದ ದರ್ಬಾರನ್ನು ಸೇರಿದವನು. ಎರಡನೆಯ ಅಲಿ ಆದಿಲ್ ಶಾಃ ೧೦೬೭ನೇ ಹಿಜರಿ/ಕ್ರಿ.ಶ.೧೬೫೬ರಲ್ಲಿ ಸಿಂಹಾಸನವನ್ನು ಅಲಂಕರಿಸಿದಾಗ ನುಸ್ರತಿಯನ್ನು ದರ್ಬಾದಲ್ಲಿ ಕರೆದು ಮರ್ಯಾದಿಸಿದ. ಇದೇ ದರ್ಬಾರದಿಂದ ಅವನ ನಕ್ಷತ್ರ ಮಿನುಗಿತು ಹಾಗೂ ಜನರಿಗೆ ಅವನ ಪರಿಚಯವಾಯಿತು.

ಬುಲಾ ಭೇಜ್ ಬಂದೆ ಕು ಇಸ್ ಹಾಲ್ ಮೆ
ನಜ಼ರ್ ಕರ್ ಮೆರೆ ಬೆ ಬಹಾ ಮಾಲ್ ಮೆ
ಪರಖ್ತಾ ಚಲಿಯಾ ಯೂ ರತನ್ ಸರ್ ಬಸರ್
ತೆಹಕೆ ದೇಖ ಪಾರಖ ಯು ಅಹ್ಲೆ ನಜ಼ರ್
ವಹೀ ಜಗ್ ಮೆ ಬಂದ ರಹನೆ ಬೆ ನಿಯಾಜ಼
ರಖಿಯಾ ಅಪ್ನಿ ಖ಼ಿದ್ಮತ್ ಮೆ ಕರ್ ಸರ್‌ಫ಼ಾಜ಼

ನುಸ್ರತಿಯ ಎಲ್ಲ ಪ್ರತಿಷ್ಠೆ ಗೌರವ ಬಿಜಾಪುರದ ವಿದ್ಯಾಕೃಪೆಯ ಪರಿಸರದಲ್ಲಿ ಆಗಿತ್ತು. ಅವನ ಕಾಲದಲ್ಲಿ ಬಿಜಾಪುರ ಹಾಳಾಗಿತ್ತು ಹಾಗೂ ಅದರ ವಿದ್ಯೆ ಮತ್ತು

ನೈತಿಕ ಸಭೆಗಳೆಲ್ಲ ಮುಳುಗಿದ್ದವು ಆದರೂ ಸಹ ಇಂದಿಗೂ ಕೂಡ ಅದರ ಒಡೆದ ಬಾಗಿಲು ಗೋಡೆಗಳಿಂದ ಅದರ ಹಳೇ ವೈಭವ ತೊಟ್ಟಿಕ್ಕುತ್ತಿದೆ. ಒಂದಾನೊಂದು ಕಾಲದಲ್ಲಿ ಇದರ ಓಣಿ, ಮೊಹಲ್ಲಗಳೂ ಸಹ "ಚಿತ್ರಕಾರನ ಹಾಳೆಗಳಾಗಿದ್ದವು". ಇಲ್ಲಿ ರಾಜಕೀಯ ಅಭಿವ್ಯಕ್ತವಾಗಿತ್ತು, ನೀತಿ ಸದ್ಗುಣಗಳಿದ್ದವು. ವಿದ್ಯೆ ಹಾಗೂ ಕುಶಲತೆಗಳಿಗೆ ನೀರುಣಿಸಲಾಗಿತ್ತು.

ಬಿಜಾಪುರ್ ಜೊ ಎಕ್ ಶರ್ಹ್ರಾ ಮೆ ಶಾಃ
ಕೆ ಹೈ ಹಫ್ತ ಆಖ್ಲೀಂ ಕಾ ತಖ್ತ್‌ಗಾಃ

ಒಬ್ಬ ಪರ್ಷಿಯನ್ ಕವಿ ಹೇಳಿದ ಹಾಗೆ

ಸಂತೋಷ ಹಾಗೂ ಶೌರ್ಯವನ್ನು ಅಲಂಕರಿಸುವ ಪರುಷವೆಂದರೆ ಅದು ಬಿಜಾಪುರದ ಪುಣ್ಯ ಭೂಮಿ.

ಬಿಜಾಪುರ ದಖನಿ ಭಾಷೆಯು ಎಲ್ಲಿಂದ ಎಲ್ಲಿಯವರಿಗೆ ತಲುಪಿಸಿತು ಎಂಬುದು ಎಲ್ಲರಿಗೂ ತಿಳಿದಿದೆ. ದಖನಿ ಭಾಷೆಯ ಎಲ್ಲ ಪ್ರತಿಷ್ಠೆ, ಖುತುಬ್ ಶಾಹಿ ಮತ್ತು ಆದಿಲ್ ಶಾಹಿ ದರ್ಬಾರಗಳಿಂದ ಆಗಿದ್ದನ್ನು ಎಲ್ಲರೂ ಜ್ಞಾಪಕವಿಟ್ಟುಕೊಳ್ಳುವಂತಹ ಮಾತು. ಇಲ್ಲದಿದ್ದರೆ ದಖನಿ ಭಾಷೆ ಏನಿತ್ತು? ಕೇವಲ ಮಾತು ಕಥೆಯ ಭಾಷೆಯಾಗಿತ್ತು. ಈ ಭಾಷೆಯಲ್ಲಿ ನಾಗರಿಕರು ಹಾಗೂ ಹಳ್ಳಿ ಜನರು ತಮ್ಮ ಮುರಿದ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರು. ಜನ ಇದನ್ನು ಭಾಷೆಯೆಂದು ಹೇಳಲು ನಾಚಿಕೆ ಪಡೆಯುವಾಗ ಅದರಲ್ಲಿ ಸಾಹಿತ್ಯ ಎಲ್ಲಿ ತುಂಬಲು ಸಾಧ್ಯ? ಆದರೆ ಹಿಜರಿ ಹನ್ನೊಂದನೇ ಶತಮಾನದಲ್ಲಿ ಈ ಭಾಷೆಯ ಅದೃಷ್ಟ ಖುಲಾಯಿಸಿತು. ಗೋಲ್ಕುಂಡ ಹಾಗೂ ಬಿಜಾಪುರದ ಕಿರೀಟಧಾರಿಗಳು ದಖನಿ ಭಾಷೆಗೆ ತಮ್ಮ ದರ್ಬಾರದಲ್ಲಿ ಜಾಗ ಕೊಟ್ಟರು. ತಾವೂ ಕವಿತ ವಾಚನ ಮಾಡಿದ್ದಲ್ಲದೇ ಕವನ ಹೇಳುವವರಿಗೂ ತಬ್ಬಿಕೊಂಡರು. ಗೊಲ್ಕೊಂಡದಲ್ಲಿ ವಜ್ಹಿ ಹಾಗೂ ಘವಾಸಿ ಮಿನುಗಿದರೆ ಬಿಜಾಪುರದಲ್ಲಿ ಮೀರಾಂಜಿ, ಮುಲ್ಲಾ ನುಸ್ರತಿ ಹಾಗೂ ಹಾಷ್ಮಿ ಗೌರವ ಪಡೆದರು. ದಖನಿ ಭಾಷೆಯಲ್ಲಿ ತಮ್ಮ ಕವನ/ಕಾವ್ಯ ಮತ್ತು ಭಾವನೆ ಚಿಂತನೆಗಳಿಂದ ಧನಿಕರನ್ನಾಗಿ ಮಾಡಿದರು. ಬಿಜಾಪುರದ ಬಾದಶಾಹರಲ್ಲಿ ಇಮ್ಮಡಿ ಅಲಿ ಆದಿಲ್ ಶಾಹನು ಅತಿ ಉನ್ನತ ಸ್ಥಾನದವನು. ಈ ಬಾದಶಾಹ ಎಷ್ಟು ಶೂರನೋ ಅಷ್ಟೇ ಕಾವ್ಯದ ಪ್ರಮತ್ತನು ಆಗಿದ್ದವನು. ಅಲಿಗೆ ಪರ್ಷಿಯನ್ ಭಾಷೆಗಿಂತ ದಖನಿ ಭಾಷೆಯಲ್ಲಿ ತುಂಬ ಅತಿರೇಕದ ಪ್ರೇಮವಿತ್ತು. 'ಅಲಿ ಆದಿಲ್ ಶಾಹನಗೆ ತನ್ನ ಸ್ವಂತಶಬ್ದಕೋಶ ಅಂದರೆ ದಖನಿ ಭಾಷೆಯೊಂದಿಗೆ ಎಷ್ಟೊಂದು ಬಾಂಧವ್ಯವಿತ್ತೆಂದರೆ ಹೇಳಲು ಸಾಧ್ಯವಿಲ್ಲ. ಅವನು ಸ್ವತಃ ಈ ಭಾಷೆಯಲ್ಲಿ ಕವನಗಳನ್ನು ರಚಿಸುತ್ತಿದ್ದ ಎಂದು ಬಿಜಾಪುರದ ಇತಿಹಾಸಕಾರ ಜುಬೇರಿ ಬರೆಯುತ್ತಾನೆ.' ಹೀಗೆ ಆಗಿನ ಕಾಲದ ಅವನ ದಖನಿ ಕವನಗಳು ಪ್ರಾಪ್ತವಾಗಿವೆ. ಈ ಬಾದಶಾಹನ ಅಭಿರುಚಿಯಿಂದ

ಈ ಭಾಷೆಗೆ ಉನ್ನತಿ ಸಿಕ್ಕಿತು. ಅವನ ಅಭಿರುಚಿಯನ್ನು ನೋಡಿ ಜನ ದಖನಿಯಲ್ಲಿ ಕವನಗಳನ್ನು ಹೇಳಲಾರಂಭಿಸಿದರು ಹಾಗೂ ಅನೇಕರು ಕವಿಗಳಾದರು. ಹೀಗೆ ದಖನಿ ಭಾಷೆ ಎಷ್ಟೊಂದು ಧನಿಕರನ್ನಾಗಿಮಾಡಿತೆಂದರೆ ಇದರ ಉದಾಹರಣೆ ಸಿಗುವುದಿಲ್ಲ. ಸ್ವತಃ ನುಸ್ರತಿಯು ಈ ಬಾದಶಾಹನ ಕಲಾಪೋಷಣೆಯನ್ನು ತುಂಬ ಹೊಗಳಿದ್ದಾನೆ.

ತೆರೆ ಶೆರ್ ತೆ ಶಾಇರ್ರಾ ಕೂ ಹೈ ನೂರ್
ಮಜ್ಞಾಮೀಂ ಮಆನಿಯಾಂ ಕೆ ಗರ್ದೂಂ ಕಾ ನೂರ್

ಇಂತಹ ಮಧುರ ಮಂಜುಳ ಪರಿಸರದಲ್ಲಿ ನುಸ್ರತಿಯ ಸ್ವಭಾವ ಮಿನುಗಿತು ಹಾಗೂ ನುಸ್ರತಿಯು ಹೀಗೆ ತನ್ನ ಪಾರಂಪರಿಕ ಖಡ್ಗವನ್ನು ಒರೆ ಇಟ್ಟು ಕಾವ್ಯದ ಮೈದಾನದಲ್ಲಿ ತನ್ನ ಚಾತುರ್ಯವನ್ನು ತೋರಿಸಲಾರಂಭಿಸಿದ. ಅವನ ಕಾವ್ಯದ ಸಾಮರ್ಥ್ಯ ಹಾಗೂ ಸ್ವಭಾವದ ಹರಿವಿನಿಂದ ತಿಳಿಯುವುದೇನೆಂದರೆ ಅವನಗೆ ಕಾವ್ಯದಲ್ಲಿ ಸಹಜ ಆಸಕ್ತಿಯಿತ್ತು. ಹೀಗೆ ನುಸ್ರತಿ ಒಂದು ಕಡೆ ಬಾದಶಾಹನ ಶಿಷ್ಯನೆಂದು ಹೇಳುವುದಲ್ಲದೇ ಅವನ ಕಾವ್ಯದ ಪರಿಪೂರ್ಣತೆಗೆ ಒಂದು ಸ್ವಾಭಾವಿಕ ಹಾಗೂ ದೇವಪ್ರೇರಿತ, ಇದು ತೋಳಬಲದಿಂದ ಪಡಯದೆ ಇರುವ ವಸ್ತು ಎಂದು ಹೇಳುತ್ತಾನೆ.

ನ ಕುಛ್ ಶೆರ್ ಕಸಬ್ ಕಾ ನಾಮ್ ಹೈ
ಕೆ ಯು ಹಖ ಕಿ ಬಖ್ಷಿಷ್ ತೆ ಇಲ್ಹಾಂ ಹೈ

ಈಗ ಅವನು ಬಾದಶಾಹನ ಶಿಷ್ಯನೆಂದು ಹೇಳುವುದೆಂದರೆ ಅದು ಬಾದಶಾಹನ ಶ್ರದ್ದೆ ಹಾಗೂ ಸಂತೃಪ್ತಿಯಿಂದ ಅಧಿಕ ಅಲ್ಲ ಇದನ್ನು ಶಾಹಿದರ್ಬಾರಿನ ಮರ್ಯಾದಸ್ಥ ಸೇವೆ ಎನ್ನಬಹುದು.

ಬಹಮ್ದಿಲಿಲ್ಲಾಹ ಕ್ಯಾ ಮುಝ್ ಬಡೆ ಬಖ್ತ ಆಜ್
ನ ಉಸ್ತಾದ್ ಕೋಯಿ ಮುಝ್ ಅಲಿ ಶಹ್ ಕೆ ಬಾಜ್

ಆದರೆ ನಿಜ ಏನೆಂದರೆ ಅವನು ಯಾರ ಶಿಷ್ಯನೂ ಆಗಿರಲಿಲ್ಲ ಅವನೊಬ್ಬ ಸ್ವಾಭಾವಿಕ ಕವಿಯಾಗಿದ್ದ.

ನುಸ್ರತಿ ದೀರ್ಘ ಆಯುಷ್ಯ ಪಡೆದವನು. ಅವನು ಮುಹಮ್ಮದ್ ಆದಿಲ್ ಶಾಹನಿಂದ ಹಿಡಿದು ಸಿಕಂದರ್ ಆದಿಲ್ ಶಾಹರವರ ಕಾಲದವರೆಗೆ ಮೂರು ಯುಗಗಳನ್ನು ನೋಡಿದವನು. ಪ್ರತಿ ಯುಗದಲ್ಲಿ ಏನನ್ನಾದರು ಬರಿಯುತ್ತಲೇ ಇದ್ದವನು. ಅವನ ಜನ್ಮ ದಿನಾಂಕವನ್ನು ಪತ್ತೆ ಮಾಡುವುದು ಬಹಳ ಕಷ್ಟ. ಆದರೆ ಕೆಲವು ಬರಹಗಾರರ ಶ್ರಮ ಹಾಗೂ ಅನ್ವೇಷಣೆಯಿಂದ ಅವನು ನಿಧನ ಹೊಂದಿದ ವರ್ಷ ಪತ್ತೆಯಾಗಿದೆ. ಅದು ಸ೯ ೧೬೭೪. ಇದರಿಂದ ಅಂದಾಜು

ಮಾಡಬಹುದೇನೆಂದರೆ ಅವನು ಸಾಮ್ರಾಜ್ಯದ ಪತನದ ಮುಂಚೆಯೇ ನಿಧನ ಹೊಂದಿದ್ದ. ಇದರಿಂದಾಗಿ ಅವನ ಜೀವನ ಚರಿತ್ರಗಾರ ಫತೂತಿನ ಹೇಳಿಕೆ ಸಂದೇಹಾಸ್ಪದವಾಗುತ್ತದೆ ಅಂದರೆ ನುಸ್ರತಿ ಬಿಜಾಪುರದ ಪತನದ ನಂತರವೂ ಜೀವಂತವಾಗಿದ್ದ ಹಾಗೂ ಬಿಜಾಪುರದ ವಿಜಯಿ ಶಹನ್ಷಾಹ ಔರಂಗಜೇಬನ ದರ್ಬಾರದಿಂದಲೂ ಪರಿಚಿತನಾಗಿದ್ದ. ೧೧೯೭ನೇ ಹಿಜರಿ/ಕ್ರಿ.ಶ.೧೬೮೬ರಲ್ಲಿ ಬಿಜಾಪುರದ ವಿಜಯದ ನಂತರ ಇಲ್ಲಿಯ ಕವಿಗಳನ್ನು ಶಹನ್ಶಾಹನ ದರ್ಬಾರಕ್ಕೆ ಕರೆದಾಗ ಅವರಲ್ಲಿ ಮುಲ್ಲಾ ನುಸ್ರತಿಯು ಸಹ ಇದ್ದ. ಆ ಕವಿಗಳೆಲ್ಲ ಶಹನ್ಷಾಹನ ಮುಂದೆ ತನ್ನ ಕಾವ್ಯಗಳನ್ನು ಪಠಿಸಿದಾಗ ಎಲ್ಲರಿಗೂ ಹೊಗಳಿಕೆ ಸಿಕ್ಕಿತು. ಆದರೆ ಮುಲ್ಲಾ ನುಸ್ರತಿಯ ಕವನಕ್ಕೆ ಅತಿ ಪ್ರಶಂಸೆ ಸಿಕ್ಕಿತು. ಇದನ್ನು ಶಹನ್ಷಾಹರು ತುಂಬ ಮೆಚ್ಚಿದರು ಹಾಗೂ ಅವನಿಗೆ 'ಮಲಿಕುಶ್ಶೊರಾ' ಎಂಬ ಬಿರುದು ಕೊಟ್ಟು ಅವನನ್ನು ಸನ್ಮಾನಿಸಲಾಯಿತು. ಇದು ತುಂಬ ದೊಡ್ಡ ಮಾತು ಏಕೆಂದರೆ ಈಗ ನುಸ್ರತಿ ಇಡೀ ಹಿಂದುಸ್ತಾನದ ಮಲಿಕುಶ್ಶೊರಾ ಆಗಿದ್ದ.

ನುಸ್ರತಿ ತನ್ನ ಜೀವನವೆಲ್ಲ ಕವನ ಕವಿತಾವಾಚನ ಬರೆಯುವದರಲ್ಲೇ ಕಳೆದ. ಅವನು ಪ್ರತಿ ಯುಗದಲ್ಲಿಯೂ ಏನನ್ನಾದರೂ ಬರೆಯುತ್ತಲೇ ಇದ್ದ. ಮುಹಮ್ಮದ್ ಆದಿಲ್ ಶಾಹನ ಕಾಲದಲ್ಲಿ ಅವನು ಕೆಲವು ಪ್ರಶಂಸಾಗೀತೆಗಳನ್ನು ಬರೆದಿದ್ದ. ಇವುಗಳಲ್ಲಿ ಬಾದಶಾಹನ ಪ್ರಶಂಸೆಯಿದೆ. ಅಲಿ ಆದಿಲ್ ಶಾಹನ ಕಾಲದಲ್ಲಿ 'ಗುಲ್ಷನೆ ಇಷ್ಕ ಹಾಗೂ ಅಲಿನಾಮಾ' ಬರೆದ ಅವು ಮಹತ್ಸಾಧನೆಗಳು. ಸಿಕಂದರ್ ಆದಿಲ್ ಶಾಹನ ಕಾಲದಲ್ಲಿ ತಾರೀಖೆ ಸಿಕಂದರಿಯ ಹೆಸರಿನಿಂದ ಬಿಜಾಪುರದ ಕೊನೆದಿನಗಳನ್ನು ಬರೆದ. ಆಗ ಅದು ಪತನದ ಹಂತದಲ್ಲಿತ್ತು. ಪುಸ್ತಕದ ರೂಪದಲ್ಲಿ ಗುಲ್ಷನೆ ಇಷ್ಕ ಅವನ ಮೊದಲನೆಯ ಕೃತಿ. ಗುಲ್ಷನೆ ಇಷ್ಕನಿಂದಲೇ ನುಸ್ರತಿ ಬಿಜಾಪುರದ ನಿವಾಸಿಗಳಿಗೆ ಪರಿಚಯವಾದವನೆಂದು ಕಾಣಿಸುತ್ತದೆ. ಬಾದಶಾಹ ಮತ್ತು ಸಾರ್ವಜನಿಕರ ಹೃದಯಗಳಲ್ಲಿ ಸೇರಿದ. ಜನಸಾಮಾನ್ಯರು ಅವನನ್ನು ಮಿಯಾಂ ನುಸ್ರತಿ ಎಂಬ ಜನಪ್ರಿಯ ಹೆಸರಿಂದ ಕರೆಯುತ್ತಿದ್ದರು. ಇದರಿಂದಲೇ ಅಲಿ ಆದಿಲ್ ಶಾಹನ ದರ್ಬಾರದಲ್ಲಿ ತಲುಪಿದ. ಈ ದರ್ಬಾರದಿಂದಲೇ ಅವನ ಉತ್ಸಾಹ ಏರಿತು. ಅಲಿ ಬಾಲ್ಯದಿಂದಲೇ ನುಸ್ರತಿಯ ಕವತಾವಾಚನ ಬಲ್ಲವನಾಗಿದ್ದು ಅವನ ಕಾವ್ಯದ ಮೋಹಿತನಾಗಿದ್ದ. ಇದೇ ಶಾಹಿ ದರ್ಬಾರಿನಲ್ಲಿ ತಲಪುವಿಕೆ ಹಾಗೂ ಅಲಿನಾಮಾದ ಪ್ರಸ್ತಾವನೆ. ನಿಜ ಹೇಳಬೇಕೆಂದರೆ ಶಾಹಿ ದರ್ಬಾರ್‌ದಲ್ಲಿ ನುಸ್ರತಿಯ ಉತ್ಸಾಹ ಹೆಚ್ಚಿತು. ಅವನ ಹೃದಯದ ಸಂಗೀತ ಉಪಕರಣಗಳು ಬಾರಿಸ ತೊಡಗಿದುವು. ಒಂದು ಕಡೆ ಬಾದಶಾಹನ ಗೌರವ ಅವನನ್ನು ಸಂತೋಷಗೊಳಿಸುತ್ತಿತ್ತು ಮತ್ತೊಂದು ಕಡೆ ಆ ಯುಗದ ಹೊಳಪುಗಳು ಅವನನ್ನು ಬಿಸಿಯೇರಿಸುತ್ತಿತ್ತು. ಅಲಿ ಆದಿಲ್ ಶಾಹ ಸಿಂಹಾಸನ ಅಲಂಕರಿಸಿದ ತಕ್ಷಣ ಅವನ ಮುಂದಾಳುತನ ಪ್ರಾರಂಭವಾಯಿತು.

ಸುತ್ತಲೂ ಯುದ್ಧಗಳು ಪ್ರಾರಂಭವಾಯಿತು. ಒಬ್ಬ ತಜ್ಞ ಕವಿಗೆ ಇದೊಂದು ಒಳ್ಳೆಯ ಆಧಾರ-ಪ್ರಮಾಣವಾಗಿತ್ತು. ಹೀಗೆ ನುಸ್ರತಿ ಆ ಯುಗದ ಘಟನೆಗಳನ್ನು ಕವಿತೆಗಳಲ್ಲಿ ಪೋಣಿಸಲಾರಂಭಿಸಿದ.

ದಿಸ್ಯಾ ಸೊ ತಮಾಷ ನಜ಼ರ್ ಕೆ ಹುಜ಼ೂರ್
ಹುವಾ ನುಸ್ರತಿ ಪರ್ ತೊ ಲಿಖ್ನಾ ಜ಼ರೂರ್

ಆದರೆ ಅಲಿನಾಮಾ ಸಂಪಾದಿಸುವುದರಲ್ಲಿ ಸ್ವತಃ ನುಸ್ರತಿಯ ಭಾವನೆಗಳ ಜೊತೆಯಲ್ಲಿ ಬೇರೆ ಜನರ ಸಹಕಾರವೂ ಇತ್ತು. ಬಾದಶಾಹನಲ್ಲದೇ ಕೆಲವು ಆಸ್ಥಾನಿಕರು ಸಹ ನುಸ್ರತಿಗೆ ಅಲಿನಾಮಾ ಬರೆಯಲು ಪ್ರೋತ್ಸಾಹಿಸಿದರು. ಆಸ್ಥಾನಿಕರಲ್ಲಿ ನುಸ್ರತಿ; ಶಾಃನೂರುಲ್ಲಾ ಅಬುಲ್ಮಾಲಿ ಮತ್ತು ಖ಼ಾಜ಼ಿ ಕರೀಮುಲ್ಲಾ ನಂತಹ ವ್ಯಕ್ತಿಗಳ ಹೆಸರುಗಳನ್ನು ಎಣಿಸಿದ್ದಾನೆ. ಇದರಲ್ಲಿ ಖಾಜಿ ಕರೀಮುಲ್ಲಾ ಅಂತೂ ಎಲ್ಲರಲ್ಲಿ ಮುಂದಿದ್ದವನು. ಅದೇ ಖ಼ಾಜಿಯೇನೇ ಅವನಿಗೆ ಅಲಿನಾಮಾ ಬರೆಯಲು ಸಿದ್ಧ ಪಡೆಸಿದನು.

ಜಹೆ ಹಾಕಿಮೆ ಶರ್ಅ ವಾಲಾ ನಜಾದ್
ಸೊ ಖಾಜಿ ಕರೀಮುಲ್ಲಾಃ ಫರಖನಿಹಾದ್

ಅಲಿ ಆದಿಲ್ ಶಾಹನ ಯುಗ ಪ್ರಾರಂಭವಾಗುತ್ತಿರುವಾಗಲೇ ಅಲಿ ನಾಮಾದ ಬರವಣಿಗೆಯೂ ಸಹ ಪ್ರಾರಂಭವಾಗಿತ್ತು ಎಂದು ಕಾಣುತ್ತದೆ. ಏಕೆಂದರೆ ಈ ಯುಗದಲ್ಲಿ ನಡೆದ ಅನೇಕ ರಾಜಕೀಯ ಘಟನೆಗಳನ್ನು ಮುಂದೆ ಬರಲಾರಂಭಿಸಿದವು. ನುಸ್ರತಿಯು ಕೊನೆ ಅಧ್ಯಾಯದಲ್ಲಿ ಕೃತಿಯು ಮುಗಿಯುವಿಕೆಯ ವರ್ಷ ನಮೂದಿಸಿದ್ದಾನೆ ಆದರೆ ಯಾವಾಗ ಪ್ರಾರಂಭ ಮಾಡಿದನೆಂದು ಬರೆದಿಲ್ಲ ಹಾಗೂ ಕೃತಿಯ ಹೆಸರು ತನ್ನ ಬಾದಶಾಹನ ಹೆಸರಿಂದ ಅಲಿನಾಮಾ ಎಂದು ಇಟ್ಟಿದ್ದಾನೆ. ಅದು ಒಳ್ಳೆ ಹೆಸರೇ, ಕೆಲವು ಜಾಗದಲ್ಲಿ ಇದನ್ನು ಫತೆಹ್‌ನಾಮಾ ಎಂದೂ ಸಹ ಬರೆದಿರುವನು.

ಸಿಫ಼ತ್ ಶೆರ್ ಅಲಿ ನಾಮಾ ವೊ ಖು಼ಷ್ ಖ಼ತ್ಮೆ ಕಿತಾಬ್
ಮದಹ್ ಆದಿಲ್ ಕಾ ಹೈ ಜಿಸ್ ಪೆ ಅತಾಜನ್ ಯೂ ನವಲ್

ನುಸ್ರತಿಯ ಮಾನಸಿಕ ತಲಪುವಿಕೆ ಹಾಗೂ ಕಾವ್ಯ ಸಾಮರ್ಥ್ಯದ ಬಗ್ಗೆ ದಖನಿ ಸಾಹಿತ್ಯದಲ್ಲಿ ಅವನ ಕಾವ್ಯದ ಸ್ಥಾನಮಾನ ಏನು? ಎಂಬುದಕ್ಕೆ ಉರ್ದು ಸಾಹಿತಿಗಳೇ ಸಮಂಜಸವಾದ ಸಲಹೆ ನೀಡಬಲ್ಲರು. ಇದಕ್ಕಾಗಿ ಗೋಲ್ಕೊಂಡ ಮತ್ತು ಬಿಜಾಪುರದ ಎಲ್ಲ ಕವಿಗಳ ಹೋಲಿಕೆ ಮಾಡಬೇಕಾಗುತ್ತದೆ. ಹಾಗೂ ಈ ಅನುರೂಪತೆ ಅಷ್ಟೊಂದು ಸುಲಭವಲ್ಲ. ಸ್ವಲ್ಪ ಕಾವ್ಯಸ್ವರೂಪದ ಅಭಿರುಚಿ ಇರುವವ ಸಹ ಒಬ್ಬ ಸಾಮಾನ್ಯ ಮನುಷ್ಯ ವಿವರಣೆಯ ಸಂತುಷ್ಟತೆ ಹಾಗೂ ಹರಿವಿನ ಆಧಾರದ ಮೇಲೆ ನುಸ್ರತಿಯ

ದರ್ಜೆ ಎಲ್ಲ ದಖನಿ ಕವಿಗಳಲ್ಲಿ ಸ್ವಲ್ಪ ಉನ್ನತವಾಗಿದೆ ಎಂದು ಹೇಳುತ್ತಾನೆ. ದಕ್ಷಿಣದ ಅನ್ಯ ಕವಿಗಳು ಅವರು ಬಿಜಾಪುರದಲ್ಲಿ ಅಥವಾ ಗೋಲ್ಕೊಂಡದಲ್ಲೇ ಹುಟ್ಟಿರಲಿ ನುಸ್ರತಿಯಂತಹ ಕಾವ್ಯಸಾಮರ್ಥ್ಯವುಳ್ಳವನು ಯಾರೂ ಇಲ್ಲ. ನಿಜ ಹೇಳಬೇಕೆಂದರೆ ನುಸ್ರತಿ ತನ್ನ ಬುದ್ಧಿಅರ್ಹತೆಯಿಂದ ದಖನಿಯನ್ನು ಚೆನ್ನಾಗಿ ತಿಕ್ಕಿ ಅದನ್ನು ಎತ್ತರಕ್ಕೇರಿಸಿದ. ನುಸ್ರತಿ ನಿಜ ಹೇಳುತ್ತಾನೆ, ಅವನು ತನ್ನ ಕಾವ್ಯದಲ್ಲಿ ಪರ್ಷಿಯನ್ ಹಾಗೂ ಉರ್ದು ಭಾಷೆಗಳ ಸೌಂದರ್ಯತೆಗಳನ್ನು ಒಟ್ಟಿಗೂಡಿಸಿದ್ದಾನೆ. ಅವನು ತನ್ನ ಕಾವ್ಯದಲ್ಲಿ ದಖನಿಯ ಸೌಂದರ್ಯದ ಜೊತೆಗೆ ಪರ್ಷಿಯನ್ ಭಾಷೆಯ ಮೃದುತ್ವವನ್ನೂ ತುಂಬಿದ್ದಾನೆ.

ಅಗರ್ ಕೋಯಿ ಮಾನಿ ಕೊ ಕರ್ ವಾರ್ಸಿ
ಪಡೆ ರಛ್ಮಿಯ ಹಿಂದಿ ವೊ ಫ಼ಾರ್ಸಿ
ಅಗರ್ ಉ ಹೈ ಕಾಮಿಲ್ ಸಮಜ್ ಕಾ ಧನಿ
ತೊ ಉಸ್ ಎರ್ಕ್ರ್ಸ್ ಹೊವೆ ವೊ ಹುನರ್ ಕಾ ಘ಼ನಿ
ಕೆ ದೋನೋರ್ಂ ಕಿ ಖ಼ೂಬಿ ಮುರ್ಘ್ ಅಂಖಿಯಾರ್ಂ ಮೆ ಆನ್
ಖಿಲಾಸ ನಿಕಾಲಯಾ ಹೂರ್ಂ ಖ಼ುಷ್ಮಾಯ ಛಾನ್

ಮತ್ತೊಂದು ವಿಚಾರವೆಂದರೆ ನುಸ್ರತಿಯ ಕಾವ್ಯದಲ್ಲಿ ಕೇವಲ ಪದಗಳ ಅತಿಶಯವೇ ಅಲ್ಲ ಅರ್ಥಪೂರ್ಣತೆಯೂ ಇದೆ. ಇದರಲ್ಲಿ ವಾಕ್ಸಾಮರ್ಥ್ಯದ ಜೊತೆಯಲ್ಲಿ ಉನ್ನತ ಅನುಚಿಂತನೆಗಳು ಸಿಗುತ್ತವೆ. ಯಾವ ಕಾವ್ಯದಲ್ಲಿ ಕೇವಲ ಪದಗಳ ಅತಿಶಯವಿರುತ್ತದೆ ಹಾಗೂ ವಿಷಯ ಸಪ್ಪೆಯಾದರೆ ಅದು ದುರವಸ್ಥೆಯಾಗಿ ಹೋಗುತ್ತದೆ. ನುಸ್ರತಿ ಎಲ್ಲ ಜಾಗಗಳಲ್ಲಿ ವಿಷಯ ಹಾಗೂ ಅನುಚಿಂತನೆಯ ಉನ್ನತೆಯನ್ನು ವ್ಯಕ್ತ ಪಡೆಸಿದ್ದಾನೆ. ಇದರಿಂದಲೇ ದಖನಿ ಕವಿಗಳಲ್ಲಿ ನುಸ್ರತಿಯ ಕಾವ್ಯದ ಅಂತಸ್ತು ತುಂಬ ಎತ್ತರವಾಗಿದೆ.

ಫ಼ಸಾಹತ್ ಸೆ ಹೈ ಗೊ ಶೆರ್ ಕೆ ಬನ್ ಕಾ ರೂಪ್

ವಲೆ ಶೆರ್ ಕಾ ಜಿವ್ ಹೈ ಮಝ್ಮೂನ್ ಅನೂಪ್
ಕೆ ಮ್ಯೆರ್ ಫ಼ತೆಹ್ನಾಮಾ ಲಖಾ ಸೊ ಹೂರ್ಂ ಆಜ್
ನ ಅಕ್ಸರ್ ಕಿಯಾ ಬಾತ್ ಮಝ್ಮೂನ್ ಬಾಜ್

....

ಘಡೆಯಾ ಹೂರ್ಂ ಸಲಾಸತ್ ಸೂರ್ಂ ಎಕ್ ಎಕ್ ಬಚನ್
ಮಝಾ಼ಮೀನ್ ಕಿ ಮದ್ ಮೆ ಉತ್ಯ ರತನ್

ನುಸ್ರತಿಯ ಸಾಹಿತ್ಯ ಪಾಂಡಿತ್ಯ ಅವನ ಗುಲ್ಷನೆ ಇಷ್ಕ ಮತ್ತು ಅಲಿ ನಾಮಾದಿಂದ ವ್ಯಕ್ತವಾಗುತ್ತದೆ. ಈ ಎರಡು ಮಸ್ನವಿಗಳು ದಖನಿ ಭಾಷೆಯ ಮಹತ್ಸಾಧನೆ. ಭಾಷೆಯ

ಹರಹು ಹಾಗೂ ಹೇಳಿಕೆಯ ಸೌಂದರ್ಯದ ಆಧಾರಗಳಿಂದ ಇವು ಎರಡರಲ್ಲೂ ಏನೂ ಹೆಚ್ಚಿನ ವ್ಯತ್ಯಾಸವಿಲ್ಲ, ವ್ಯತ್ಯಾಸವೆಂದರೆ ಕೇವಲ ವಿಷಯಗಳದ್ದು. ಗುಲ್ಷನೆ ಇಷ್ಕನಲ್ಲಿ ಒಂದು ಒಲವಿನ ಕಥೆ ಕಾವ್ಯಸ್ವರೂಪ ತಾಳಿದೆ. ಅಲಿನಾಮಾದಲ್ಲಿ ಶಾಹಿ ದರ್ಬಾರಿನ ವೈಭವ, ರಾಜಕೀಯ ಸೆಣಸಾಟ ಹಾಗೂ ಸಮರಗಳ ನಿಜಸ್ಥಿತಿ ಬಯಲಾಗಿದೆ. ಅಲಿ ನಾಮದ ಮತ್ತು ಗುಲಷನೆ ಇಷ್ಕ ಎರಡು ಮಸ್ನವಿಗಳ ಹೇಳಿಕೆಯ ಶೈಲಿ ಒಂದೇ ರೀತಿಯಾಗಿದೆ. ಇನ್ನು ಮೂರನೆಯ ಕೃತಿ 'ತಾರೀಖೆ ಸಿಕಂದರಿ' ಅಲಿ ಆದಿಲ್ ಶಾಹನ ನಿಧನದ ನಂತರ ಅವನ ಉತ್ತರಾಧಿಕಾರಿ ಸಿಕಂದರ್ ಆದಿಲ್ ಶಾಹನ ಕಾಲದಲ್ಲಿ ಬರೆಯಲಾಗಿದ್ದು, ಬಾಬಾಯೆ ಉರ್ದುರವರ ಹೇಳಿಕೆಯಂತೆ ಅದು ಆ ಮಟ್ಟದೇನು ಅಲ್ಲ. ಇದರ ಕಾರಣ ಅಲಿಯ ನಿಧನದ ನಂತರ ೧೦೮೩ಹಿ/೧೬೭೨ಇ ಬಿಜಾಪುರದ ರಾಜಕೀಯ ಬಣ್ಣ ಬದಲಾಯಿತು, ಮಂತ್ರಿಗಳ ಹಾಗೂ ಸರ್ದಾರರ ಸ್ವಾರ್ಥತೆಗಳಿಂದ ಬಿಜಾಪುರದ ರಾಜನೀತಿಯ ಸ್ವಾರಸ್ಯ ಕೆಟ್ಟು ಹೋಯಿತು. ಈಗ ಬರಹಗಾರರಲ್ಲಿ ಹುಮ್ಮಸ್ಸು ಬರುವುದಾದರೂ ಎಲ್ಲಿಂದ ಬರಲು ಸಾಧ್ಯ. ಈ ಕಾರಣದಿಂದಲೇ ಬೇರೆ ಕೃತಿಗಳಲ್ಲಿ ಸಿಗುವಂತಹ ಆ ಚಂಚಲತೆ ಹಾಗೂ ತಳಮಳ ಚುರುಕುತನ ತಾರೀಖೆ ಸಿಕಂದರಿಯಲ್ಲಿ ಸಿಗುವುದಿಲ. ನುಸ್ರತಿ ಯಾವ ಮಾತುಗಳನ್ನು ಹೇಳುತ್ತಾನೆಯೋ ಅವನು ಆ ಮಾತನ್ನು ಸಂತುಷ್ಟ ಶೈಲಿಯಲ್ಲಿ ಹಾಗೂ ಆಕರ್ಷಕ ಉದಾರಣೆಗಳೊಡನೆ ಹೇಗೆ ಹೇಳುತ್ತಾನೆಂದರೆ ಅವು ಹೃದಯದಲ್ಲಿ ಇಳಿದುಹೋಗುತ್ತವೆ. ಯಾವ ದೃಶ್ಯ ಮುಂದಿಡುತ್ತಾನೆಯೋ ಅದು ಕಣ್ಣಿನ ಮುಂದೆ ಚಿತ್ರವಾಗಿ ಕಾಣಿಸುತ್ತದೆ. ಸಭೆಯ ವಿವರಣೆ ನೀಡಿದರೆ ಎಂತಹ ಶಬ್ದಗಳಲ್ಲೆಂದರೆ ಅದರ ಒಂದು ಅನುರೂಪವಾಗುತ್ತದೆ. ಮತ್ತೆ ಯುದ್ಧದ ವಿವರಣೆ ಎಂತಹ ಆಕರ್ಷಕ ಶೈಲಿಯಲ್ಲಿ ಎಂದರೆ ಹೃದಯಗಳಲ್ಲಿ ಕಂಪನ ಉಂಟಾಗುತ್ತವೆ. ಎಲ್ಲಿ ಶಾಹಿ ದರ್ಬಾರಿನ ಪ್ರಸ್ತಾಪ ಬರುತ್ತದೆಯೋ ಅಲ್ಲಿ ದರ್ಬಾರಿನ ಎಲ್ಲ ವೈಭವ ಸರ್ದಾರರ ಹಾಗೂ ಮಂತ್ರಿಗಳ ಸಭೆಯ ಶಿಷ್ಟಾಚಾರ ಮುಂದೆ ಬರುತ್ತದೆ. ಎಲ್ಲಿ ಯುದ್ಧದ ವಿವರಣೆ ಬರುತ್ತದೆಯೋ ಅಲ್ಲಿ ಆಕ್ರಮಣಕಾರರ ಮುನ್ನಡೆ ಮತ್ತು ಆಯುಧಗಳ ಝೇಂಕಾರ ಪೂರ್ಣವಾಗಿ ಕೇಳಿಬರುತ್ತದೆ. ನುಸ್ರತಿಯ ಕೌಶಲ್ಯತೆ ಅವನ ಪ್ರಶಂಸಗೀತೆಗಳಲ್ಲಿ ಹೆಚ್ಚಾಗಿ ವ್ಯಕ್ತವಾಗುತ್ತದೆ. ಹೀಗೆಯೇ ಅವನು ಮಸ್ನವಿ ಅಲ್ಲದೇ ಎಲ್ಲಾ ವಿಧಗಳ ಕವನಗಳಲ್ಲಿ ತೀಕ್ಷ್ಣ ಗುಣದ ಪರೀಕ್ಷೆ ಮಾಡಿದ್ದಾನೆ, ಪ್ರಶಂಸಗೀತೆಗಳು, ಘಜ಼ಲ್, ರುಬಾಯಿ ಗಳನ್ನು ರಚಿಸಿದ್ದಾನೆ ಆದರೆ ಪ್ರಶಂಸಗೀತೆಗಳಲ್ಲಿರುವ ಶ್ರೇಷ್ಠತೆ ಬೇರೆ ಕವನಗಳಲ್ಲಿ ಕಾಣುವುದಿಲ್ಲ. ಪ್ರಶಂಸಗೀತೆಗಳಲ್ಲಿ ಕವಿತೆಯ ವೃತ್ತ, ಆದಿ ಪ್ರಾಸಪದಗಳ ನೈರ್ಮಲ್ಯತಲ್ಲದೆ ಶಬ್ದಗಳ ಗಾಂಭೀರ್ಯ ಹಾಗೂ ಅನುಚಿಂತನೆಗಳಲ್ಲಿ ಲಾಲಿತ್ಯದಿಂದ ತುಂಬಿದೆ. ಇದು ಉರ್ದು ಸಾಹಿತ್ಯದ ಪ್ರಾಣ. ಅಲಿನಾಮಾದಲ್ಲಿ ಏಳು ಪ್ರಶಂಸಗೀತೆಗಳಿವೆ. ಪ್ರತಿಯೊಂದು ಗೀತೆಯೂ ತನ್ನ ಶ್ರೇಷ್ಠತೆಯಲ್ಲಿ ನುಸ್ರತಿಯ ಕಾವ್ಯಸಾಮರ್ಥ್ಯದ ಸಾಕ್ಷಿಯಾಗಿದೆ. ಈ ಪ್ರಶಂಸ

ಗೀತೆಗಳಲ್ಲಿ ಕೇವಲ ಬಾದಶಾಹನ ಹೊಗಳಿಕೆಯೇ ಅಲ್ಲ ಇದರಲ್ಲಿ ದೃಶ್ಯಅಲಂಕಾರ, ಶಾಹಿ ದರ್ಬಾರಿನ ಅಲಂಕಾರ ಹಾಗೂ ಯುದ್ಧ ಮತ್ತು ಸಂಧಿಗಳ ವೃತ್ತಾಂತಗಳು ಎಲ್ಲವೂ ಇದೆ. ನುಸ್ರತಿಯ ಮಸ್ನವಿಗಳು ಮತ್ತು ಪ್ರಶಂಸಗೀತೆಗಳಿಂದ ಉರ್ದು ಭಾಷೆಯ ನಂಬಿಕೆಸೆರಗು ಎಷ್ಟೊಂದು ಶ್ರೀಮಂತವಾಗಿದೆಯೆಂದು ಉರ್ದು ಸಾಹಿತಿಗಳು ಇದನ್ನು ಚೆನ್ನಾಗಿ ತಿಳಿದುಕೊಳ್ಳಬಹುದು. ಇಂತಹ ಉನ್ನತ ಪ್ರಶಂಸಗೀತೆಗಳು ನುಸ್ರತಿ ಮುನ್ನ ಯಾರೂ ಸಹ ಬರೆದಿರಲಿಲ್ಲ. ಕೆಲವರು ಇದನ್ನು ಪರ್ಷಿಯನ್ ಭಾಷೆಯ ಪ್ರತಿಷ್ಠಿತ ಕವಿ ಅಫ್ಜಲುದ್ದೀನ್ ಖ಼ಾಖ಼ಾನಿಯ ಸಮಬಲವುಳ್ಳವ ಎಂದಿದ್ದಾರೆ. ದೃಶ್ಯ ಅಲಂಕಾರ ಕೇವಲ ನುಸ್ರತಿಯ ಹಕ್ಕು. ಈ ಕವಿಮೇಲೆ ದಖನಿ ಭಾಷೆಯ ಸಾಮರ್ಥ್ಯ, ಪದಗಳ ಬಾಹುಳ್ಯ/ಹೆಚ್ಚಳ ಹಾಗೂ ಹರಿವು ಮುಗಿದುಹೋಗುತ್ತದೆ. ನುಸ್ರತಿ ಈ ಮೈದಾನದ ಕೊನೆಯ ಕವಿಯಾಗಿದ್ದ. ನುಸ್ರತಿ ಮತ್ತು ಹಾಶ್ಮಿಯ ನಂತರ ದಖನ ಭಾಷೆಯ ದೊಡ್ಡ ಕವಿ ಹುಟ್ಟಲಿಲ್ಲ. ನುಸ್ರತಿಯ ನಂತರ ಸಿರಾಜ್ ಔರಂಗಾಬಾದಿಯ ಹೆಸರು ಬರುವುದರಲ್ಲಿ ಏನೂ ಸಂದೇಹವಿಲ್ಲ, ಅವನು ಒಬ್ಬ ದೊಡ್ಡ ಕವಿ ಆದರೆ ಅವನ ಭಾಷೆ ದಖನಿ ಅಲ್ಲ ಉತ್ತರದ ಅಭ್ಯಾಗತ. ಸಿರಾಜ್ ದಖನಿ ಕವಿ ಏನೋ ಹೌದು ಆದರೆ ಅವನ ಭಾಷೆಗೆ ದಖನಿ ಎಂದು ಹೇಳಲು ಸಾಧ್ಯವಿಲ್ಲ.

ಇವೆಲ್ಲವೂ ಅಲಿನಾಮಾದ ಕಾವ್ಯದ ಮಹತ್ವ, ಆದರೆ ಈ ಕೃತಿಯನ್ನು ಅಧ್ಯಯನ ಮಾಡುತ್ತಾ ಇರುವಾಗಲೆಲ್ಲ ಇದರ ಅನೇಕ ನಿಜಾಂಶಗಳು ಹೊರಬರುತ್ತವೆ. ಅಲಿನಾಮಾ ಹೇಗೆ ಸಾಹಿತ್ಯದ ಮಹತ್ಸಾಧನೆ ಆಗಿದೆ, ಇದಕ್ಕಿಂತ ಹೆಚ್ಚು ಅದು ದಕ್ಷಿಣ ಭಾರತದ ಇತಿಹಾಸದ ಅಮೂಲ್ಯವಾದ ಕವನಸಂಗ್ರಹ ಪುಸ್ತಕವಾಗಿದೆ. ಅಸಲಿಗೆ ಇದು ಇಮ್ಮಡಿ ಅಲಿ ಆದಿಲ್ ಶಾಹನ ಕಾಲದ ಇತಿಹಾಸ. ಈ ಹದಿನೈದು ವರ್ಷಗಳ ಕಾಲದ ರಾಜ್ಯಭಾರ ಸರ್ ೧೦೬೭೦ಹಿ/ ಕ್ರಿ.ಶ. ೧೬೫೬ರಿಂದ ಪ್ರಾರಂಭವಾಗಿ ೧೦೮೩ಹಿ/ ಕ್ರಿ.ಶ. ೧೬೭೨ರಲ್ಲಿ ಕೊನೆಗೊಳ್ಳುತ್ತದೆ. ಇದು ಕೇವಲ ಬಿಜಾಪುರದ್ದೇ ಅಲ್ಲ ಇಡೀ ದಕ್ಷಿಣದ ಗೊಂದಲಮಯ ಕಾಲ. ಈ ಕಾಲದಲ್ಲಿ ಸುತ್ತಲಿಂದಲೂ ಭೀಕರ ಬಿರುಗಾಳಿಗಳು ಏಳುತ್ತಿದ್ದವು, ರಾಜಕೀಯ ಹಾಗೂ ಸಹಬಾಳುವಿಕೆಯ ಪಗಡೆಯಾಟದ ಹಾಸಂಗಿ ಕವಿಚ ಹೋಗುತ್ತಿದ್ದವು. ಈ ಕಾಲದಲ್ಲಿ ಅನೇಕ ಯುದ್ಧಗಳಾದವು. ಒಂದು ಕಡೆ ಶಿವಾಜಿ ನೇತೃತ್ವದಲ್ಲಿ ಮರಾಠರ ಧಾಳಿಗಳಾರಂಭಿಸಿದರೆ ಮತ್ತೊಂದು ಕಡೆ ಉತ್ತರದಿಂದ ಮುಘಲರ ಪ್ರವಾಹ ಹರಿದು ಬಂದಿತು. ಇವರೊಡನೆ ದಕ್ಷಿಣದ ಮೈದಾನಗಳಲ್ಲಿ ಎಂತಹ ಭೀಕರ ಸಮರಗಳಾದವು ಎಂದರೆ ರಕ್ತದ ನದಿಗಳನ್ನೇ ಹರಿಸಿವು, ಹಾಗೂ ದಕ್ಷಿಣದ ಭೂಮಿ ಭಯಪಟ್ಟಿತು. ಏಕೆಂದರೆ ದಕ್ಷಿಣದ ಸಾಮ್ರಾಜ್ಯಗಳು ತನ್ನ ರಕ್ಷಣೆಗಾಗಿ ಆ ಆಕ್ರಮಣಕಾರರನ್ನು ಶೌರ್ಯದಿಂದ ಎದುರಿಸಬೇಕಾಗಿತ್ತು. ಬಿಜಾಪುರದ ಅಲಿ ಆದಿಲ್ ಶಾಃ ಮತ್ತು ಗೋಲ್ಕೊಂಡದ ಅಬುಲ್ ಹಸನ್ ತಾನಾ ಶಾಃ ದಕ್ಷಿಣದ ಕೊನೆ ಪರಾಕ್ರಮಿಗಳಾಗಿದ್ದವರು. ಇವರು ಜೀವನವೆಲ್ಲ ಶತ್ರುಗಳನ್ನು ಎದಿರಿಸಿ ತನ್ನ ಸಾಮ್ರಾಜ್ಯದ

ರಕ್ಷಣೆಗಾಗಿ ತನ್ನ ಜೀವನದ ಕೊನೆ ಆಟ ಆಡಿದರು. ಅಲಿ ಇಬ್ಬರು ಶತ್ರುಗಳನ್ನು ಎದುರಿಸಬೇಕಾಗಿತ್ತು, ಒಬ್ಬ ಮರಾಠರು ಮತ್ತೊಬ್ಬ ಮೊಘಲರು. ಮುಹಮ್ಮದ್ ಆದಿಲ್ ಶಾಹನ ಕಾಲದಲ್ಲಿ (೧೬೨೬-೧೬೫೬) ಮರಾಠರ ಒಂದು ಹೊಸ ಶಕ್ತಿ ನಿಂತಿದ್ದು ಎಲ್ಲರಿಗೂ ತಿಳಿದ ವಿಷಯ, ಇದರ ಸ್ಥಾಪಕ ಶಾಹ್‌ಜಿ ಮಗ ಶಿವಾಜಿ, ಶಿವಾಜಿಯು ಎಷ್ಟು ವೇಗದಿಂದ ತನ್ನ ಹೊಸ ಶಕ್ತಿಯನ್ನು ನಿಲ್ಲಿಸಿದನೋ ಅದು ದಕ್ಷಿಣದ ಇತಿಹಾಸದ ಒಂದು ಪವಾಡವೇ ಎನ್ನಬಹುದು. ಶಿವಾಜಿ ನೇತೃತ್ವದಲ್ಲಿ ಬಹಳ ಅರ್ಹತೆ ಇತ್ತು. ವೈಯಕ್ತಿಕ ಆಕರ್ಷಣೆ ಹೇಗಿತ್ತೆಂದರೆ ನೂರಾರು ಜನ ಅವನ ಸುತ್ತ ಸೇರುತ್ತಿದ್ದರು. ಸನ್೧೦೫೭ಹಿ/ಕ್ರಿ.ಶ೧೬೪೬ರಲ್ಲಿ ಬಿಜಾಪುರದ ಪ್ರಾಂತ್ಯದಲ್ಲಿ ಆಕ್ರಮಣಗಳು ಪ್ರಾರಂಭವಾದವು. ಕೆಲವೇ ದಿನಗಳಲ್ಲಿ ನೋಡುತ್ತ ನೋಡುತ್ತಾ ತೋರಣಗಡ ಮತ್ತು ರಾಯಗಢ್ ಅಂತಹ ಕೋಟೆಗಳನ್ನು ಕಸಿದುಕೊಳ್ಳಲಾಯಿತು. ಮುಹಮ್ಮದ್ ಆದಿಲ್ ಶಾಹನ ಕಾಲದಲ್ಲಿ ಆದಿಲ್ ಶಾಹಿ ಸಾಮ್ರಾಜ್ಯ ತುಂಬ ವಿಸ್ತರಿಸಿತು. ದಕ್ಷಿಣದಲ್ಲಿ ಕೆನರಾ, ಬೆಂಗಳೂರು ಮತ್ತು ಜಿಂಜಿಯ ಮೇಲೆ ಅವನ ಧ್ವಜ ಹಾರುತ್ತಿತ್ತು. ಆದರೆ ಅವನ ಸೇನಾ ಶಕ್ತಿ ಈ ವಿಸ್ತರಿಸುತ್ತಿದ್ದ ಸಾಮ್ರಾಜ್ಯದ ಉತ್ತರವಲ್ಲ. ಈ ಕಾರಣದಿಂದಲೇ ಎದುರಾಳಿ ಶಕ್ತಿಗಳಿಗೆ ಬೆಳೆಯುವ ಅವಕಾಶ ದೊರಕಿತು. ಮುಹಮ್ಮದ್ ಆದಿಲ್ ಶಾಹನ ನಿಧನದ ನಂತರ ಇಮ್ಮಡಿ ಆದಿಲ್ ಶಾಃ ೧೦೬೭/೧೬೫೬ರಲ್ಲಿ ಸಿಂಹಾಸನ ಅಲಂಕರಿಸಿದಾಗ ಅವನು ಶಕ್ತಿಯನ್ನು ಹೆಚ್ಚಿಸಿದನು. ಮರಾಠರಂತು ಸ್ವತಃ ದಕ್ಷಿಣದ ಶಕ್ತಿಯಾಗಿದ್ದರು. ಆದರೆ ಇದಲ್ಲದೇ ಉತ್ತರದಿಂದ ಮುಘಲರ ಒಂದು ದೊಡ್ಡ ಪ್ರವಾಹವೇ ಹರಿದು ಬಂದು ಕೊನೆಗೂ ದಕ್ಷಿಣದ ಎಲ್ಲ ಸಾಮ್ರಾಜ್ಯಗಳನ್ನು ಕೊಚ್ಚಿಕೊಂಡು ಹೋಯಿತು. ಔರಂಗಝ್ಞೇಬನ ಮುನ್ನ ಇದ್ದ ಶಹನ್ಶಾಹರು ಸಹ ದಕ್ಷಿಣದ ಮೇಲೆ ಆಕ್ರಮಿಸಿದ್ದರು, ಆದರೆ ಅವರ ಮಾರ್ಗವೇ ಬೇರೆಯಾಗಿತ್ತು. ಅಂದರೆ ಅವರು ದಕ್ಷಿಣ ಸಾಮ್ರಾಜ್ಯಗಳನ್ನು ಮುಗಿಸಬೇಕೆಂದಿರಲಿಲ್ಲ, ಅವರ ಇಷ್ಟವೆಂದರೆ ಅವರ ಆಶ್ರಯದಲ್ಲಿ ಇವರನ್ನು ದಿಕ್ಕಿಲ್ಲದಂತೆ ಮಾಡಿ ಇಡಬೇಕೆಂದಿತ್ತು. ಔರಂಗಝ್ಞೇಬನು ತನ್ನ ಎಲ್ಲ ಹಿರಿಯರ ತತ್ವಗಳನ್ನೆ ಮುರಿದು ಬಿಜಾಪುರ ಮತ್ತು ಗೊಲ್ಕೊಂಡ ವಶಪಡಿಸಿಕೊಳ್ಳಲು ಸೈನ್ಯದ ಮೇಲೆ ಸೈನ್ಯ ಕಳುಹಿಸಲಾರಂಭಿಸಿದನು. ಹಾಗೆ ನೋಡಿದರೆ ದಕ್ಷಿಣ ಸಾಮ್ರಾಜ್ಯಗಳನ್ನು ಮುಗಿಸುವುದನ್ನು ಔರಂಗಝೇಬನ ತುಂಬ ಹಳೇ ಯೋಜನೆಯಾಗಿತ್ತು. ಇವನು ದಕ್ಷಿಣದ ಗವರ್ನರ್ ಇದ್ದಾಗಲೇ ಈ ಸಾಮ್ರಾಜ್ಯವನ್ನು ಮುರಿಯುವ ಯೋಜನೆ ಮಾಡಿದ್ದ ಮತ್ತು ಈ ಕಾರ್ಯಸಾಧನೆಯಲ್ಲಿ ಸ ೧೦೬೭/೧೬೫೬ರಲ್ಲಿ ಎರಡು ಸಾಮ್ರಾಜ್ಯಗಳ ಮೇಲೆ ಎಡೆಬಿಡದೆ ಆಕ್ರಮಿಸಿದ. ಆದರೆ ಆಗ ಈ ಉಪಾಯ ಸಿದ್ಧವಾಗಲಿಲ್ಲ, ಏಕೆಂದರೆ ಮೇಲೆ ಶಾಹ್ಜಹಾನ್ ಬಾದಶಾಹನಾಗಿದ್ದನು ಹಾಗೂ ಅವನಿಗೆ ಔರಂಗಜೇಬನ ಈ ತತ್ವಗಳು ಇಷ್ಟವಿರಲಿಲ್ಲ ಅವನು ಈ ಮುಂದುವರಿಕೆಯನ್ನು ತಡೆದಿದ್ದನು. ಆದರೆ

ಈಗ ಸ್ಥಿತಿಯೇ ಬೇರೆಯಾಗಿತ್ತು, ಔರಂಗಜ್ಹೇಬ ತಾನೆ ಶಹಿನ್ಷಾಹನಾಗಿದ್ದ. ಅವನು ಏನೆಬೇಕಾದರೂ ಮಾಡಬಲ್ಲ. ಆದ್ದರಿಂದ ದಕ್ಷಿಣದಲ್ಲಿ ಶಹನ್ಷಾಹನ ಇಡೀ ಶಕ್ತಿ ಉಕ್ಕಿಬಂದು ಸುತ್ತಲೂ ದೇಶವನ್ನು ಮುತ್ತಿಗೆ ಹಾಕಿದರು. ಇಂತಹ ಸ್ಥಿತಿಯಲ್ಲಿ ಕೈಗಳ ಸೆಳೆದಾಟದ ಒಂದು ಹೊಸ ಸಂದರ್ಭ ಉಂಟಾಯಿತು.

ಮುಘಲರು ಬಂದಿದ್ದರಿಂದ ದಕ್ಷಿಣ ಮೈದಾನದಲ್ಲಿ ಮೂರು ಶಕ್ತಿಗಳಾಗಿದ್ದವು, ಅಂದರೆ ದಕ್ಷಿಣದ ಸಾಮ್ರಾಜ್ಯಗಳು, ಮುಘಲರು ಹಾಗೂ ಮರಾಠರು, ಪ್ರತಿಯೊಬ್ಬರಿಗೂ ಎರಡೆರಡು ಶತ್ರುಗಳನ್ನು ಎದುರಿಸಬೇಕಾಗಿತ್ತು. ಒಂದು ಕಡೆಯ ರಾಜಕಿಯವಿದ್ದಿದ್ದರೆ ಶತ್ರುಗಳಿಂದ ಸ್ಥಳ ಖಾಲಿಯಾಗಬಹುದಾಗಿತ್ತು. ಆದರೆ ಮರಾಠರ ಜಟಿಲ ಚುರುಕುತನದಿಂದ ಎಲ್ಲಾ ಕೋಮುಗಳ ಮೇಲೆ ರಾಜಕೀಯ ಗೊಂದಲ ಬೀಳುತ್ತಿತ್ತು. ಒಮ್ಮೆ ಬಿಜಾಪುರವರಿಂದ ಮೈತ್ರಿಯಾದರೆ ಒಮ್ಮೆ ಮೊಘಲರಿಂದ ದುರಾಲೋಚನೆ ನಡೆಯುತ್ತಿತ್ತು. ಈ ಜಂಜಾಟದಿಂದ ದಕ್ಷಿಣದ ರಾಜಕೀಯ ತುಂಬ ಜಟಿಲವಾಗಿ ಬಿಜಾಪುರಕ್ಕೆ ಎರಡು ಚರಣಗಳ ಕಷ್ಟಗಳನ್ನು ಎದುರಿಸಬೇಕಾಯಿತು.

ಇಮ್ಮಡಿ ಅಲಿ ಆದಿಲ್ ಶಾಃ ತನ್ನ ತಂದೆಯ ನಿಧನದ ನಂತರ ಗದ್ದುಗೆ ಏರಿದಾಗ ಶಿವಾಜಿಯ ಆಕ್ರಮಣಗಳು ನಡೆಯುತ್ತಿದ್ದವು ಅದನ್ನು ತಡೆಯುವುದು ಅತಿ ಅವಶ್ಯವಾಗಿತ್ತು ಏಕೆಂದರೆ ಸಾಮ್ರಾಜ್ಯದ ಅನೇಕ ಕೋಟೆಗಳು ಮರಾಠರು ವಶಪಡಿಸಿಕೊಂಡಿದ್ದರಿಂದ ಸಾಮ್ರಾಜ್ಯಕ್ಕೆ ಅಪಾಯ ಉಂಟಾಗಿತ್ತು. ಅಲಿಯು ಇದನ್ನು ತಡೆಯಲು ಸಾಕಷ್ಟು ಏರ್ಪಾಡನ್ನು ಮಾಡಿದ. ಮೊದಲಿಗೆ ಸ ೧೦೭೦/೧೬೫೯ರಲ್ಲಿ ತನ್ನ ದೊಡ್ಡ ದಂಡನಾಯಕ ಅಫ್ಜಲ್ ಖಾನನನ್ನು ಎಲ್ಲ ಸಿದ್ಧತೆಯೊಡನೆ ಶಿವಾಜಿ ಜೊತೆ ಹೋರಾಡಲು ಕಳುಹಿಸಿದ. ಅಫ್ಜಲ್ ಖ಼ಾನ್ ಬಹು ಬಲುಶಾಲಿ ಸಿಪಾಯಿಯಾಗಿದ್ದವನು. ಎರಡು ಸೇನೆಗಳು ಪ್ರತಾಪಗಢದ ಬಳಿ ಎದುರು ಬದುರಾದವು. ಶಿವಾಜಿಗೆ ಈ ಸರಿಸಮಾನತೆ ಇರಲಿಲ್ಲ. ಸಮರ ಆಗಲಿಲ್ಲ ಆದರೆ ಶಿವಾಜಿಯೊಡನೆ ಏಕಾಂತದಲ್ಲಿ ಭೇಟಿ ಮಾಡಲು ಹೋದಾಗ ಅಫ್ಜಲ್ ಖ಼ಾನ್ ಅಲ್ಲೇ ಕೊಲ್ಲಲ್ಪಟ್ಟ. ಅಫ್ಜಲ್ ಖ಼ಾನನ ಹಟಾತ್ತನೆ ಕೊಲೆಯಿಂದ ಆದಿಲ್ ಶಾಹಿ ಸೇನೆಯಲ್ಲಿ ಕೋಲಾಹಲ ಉಂಟಾಗಿ ದಿಕ್ಕುಗೆಟ್ಟು ಓಡಿತು. ಇದರ ನಂತರ ಅಲಿಯು ತನ್ನ ಮತ್ತೊಬ್ಬ ದಂಡನಾಯಕ ಸಿದ್ದಿ ಜೌಹರ್ ಸಲಾಬತ್ ಖ಼ಾನನಿಗೆ ರವಾನಿಸಿದ. ಅವನು ದ್ರೋಹಬಗಿದು ಮರಾಠರೊಡನೆ ಸೇರಿದ. ಈ ಸ್ಥಿತಿಯಲ್ಲಿ ಅಲಿ ಸ್ವತಃ ಸೇನೆಯ ನಾಯಕತ್ವನ್ನು ತೆಗೆದುಕೊಂಡ. ಸ ೧೦೭೦/ ೧೬೬೦ರಲ್ಲಿ ಪನಾಲ ಕೋಟೆಯ ಮೇಲೆ ದಾಳಿ ನಡೆಸಿದ. ಬಹು ಶೀಘ್ರದಲ್ಲಿ ಕೋಟೆಯನ್ನು ಗೆದ್ದ. ಈ ವಿಜಯವನ್ನು ನುಸ್ರತಿಯು ಹೀಗೆ ವರ್ಣಿಸಿದ್ದಾನೆ 'ಅಲಿನೆ ಪಲ್ ಮೆ ಪನಾಲ ಲಿಯಾ ಸಲಾಬತ್ ಸೂರ್' ಎಂಬ ಶಬ್ದಗಳಲ್ಲಿ ಪ್ರಶಂಸಿದ್ದಾನೆ. ಪನಾಲದ ವಿಜಯದ ನಂತರ ಅಲಿ ಮತ್ತೆ ಮುನ್ನಡೆ

ಸಾಧಿಸಿದಾಗ ಮರಾಠರ ಎಲ್ಲ ದಾರಿಗಳು ಮುಚ್ಚಿಹೋದವು. ಆದ್ದರಿಂದ ಶಿವಾಜಿ ಆದಿಲ್ ಶಾಹಿ ಸಾಮ್ರಾಜ್ಯವನ್ನು ಬಿಟ್ಟು ಮುಘಲರ ಪ್ರದೇಶಗಳ ಮೇಲೆ ಧಾಳಿ ಮಾಡಲಾರಂಭಿಸಿದ. ಮುಘಲ್ ಸಾಮ್ರಾಜ್ಯ ಜಾಗ್ರತವಾಯಿತು. ಆಗ ಶಾಹ್ಜಹಾನನ ಸ್ಥಾನದಲ್ಲಿ ಔರಂಗಜೇಬ್ ಸಿಂಹಾಸನ ಅಲಂಕರಿಸಿದ್ದ. ಉತ್ತರದಿಂದ ಸೇನೆ ಸಾಲುಕಟ್ಟಿತು. ಮೊದಲಿಗೆ ಶಾಯಿಸ್ತ ಖ಼ಾನ್ ಬಂದ, ಆದರೆ ಪುಣೆ ಬಳಿ ಅವನ ಸೇನೆಯ ಕ್ಯಾಂಪಿನ ಮೇಲೆ ರಾತ್ರಿ ಸಮಯದಲ್ಲಿ ಮರಾಠರು ಎಂತಹ ಆಕ್ರಮಣ ಮಾಡಿದರೆಂದರೆ ಮುಘಲ್ ಸೇನೆ ಚದುರಿಹೋಯಿತು. ಈ ನಷ್ಟ ಭರಿಸಲು ಜಸ್ವಂತ್ ಸಿಂಗ್ ರಾಠೋರನ್ನು ಕಳುಹಿಸಲಾಯಿತು. ಆದರೆ ಅವನು ಸೋಲು ಅನುಭವಿಸಿದ. ಕೊನೆಗೆ ಔರಂಗಜೇಬ್ ತನ್ನ ಸುಪ್ರಸಿದ್ಧ ದಂಡನಾಯಕ ರಾಜಾ ಜಯಸಿಂಘ್‌ಗೆ ಸರ್ ೧೦೭೫/೧೬೬೫ರಲ್ಲಿ ಸೇನೆಯ ನೇತೃತ್ವವನ್ನು ಕೊಟ್ಟ. ಇದು ಮಹಾ ಯುದ್ಧವಾಗಿತ್ತು ಇದರ ಜೊತೆಯಲ್ಲಿ ಬಿಜಾಪುರ ಸಾಮ್ರಾಜ್ಯಕ್ಕೆ ಮರಾಠರನ್ನು ಎದುರಿಸಲು ಮುಘಲ್‌ಸೇನೆ ಸಹಾಯ ಮಾಡಲು ಹೇಳಲಾಯಿತು. ಬಿಜಾಪುರಕ್ಕೆ ಇದೊಂದು ಸದವಕಾಶವಾಗಿತ್ತು. ಇನ್ನು ಜೈಸಿಂಘ್‌ನ ಸೇನೆ ಮೈದಾನದಲ್ಲಿ ಇಳಿಯುವ ಮುನ್ನ ಬಿಜಾಪುರದ ದಂಡನಾಯಕ ಖ಼ವಾಸ್ ಖ಼ಾನ್ ಮರಾಠರೊಡನೆ ಸಮರವಾಡಲು ಮೈದಾನದಲ್ಲಿ ಇಳಿದು ತನ್ನ ಪದೆ ಪದೆ ದಾಳಿಗಳಿಂದ ಮರಾಠರಿಗೆ ಎಷ್ಟೊಂದು ದಣಿಸಿದನೆಂದರೆ ಮುಘಲರಿಗೆ ಶತ್ರುಗಳಿಂದ ಸ್ಥಳ ಖಾಲಿಯಾಯಿತು. ಮುಘಲ್ ದಂಡನಾಯಕ ಮಿರ್ಜಾ ರಾಜಾ ಜೈಸಿಂಘ್ ಮುನ್ನಡೆ ಸಾಧಿಸಿದಾಗ ಶಿವಾಜಿ ಅವನೊಡನೆ ಸಂಧಿ ಮಾಡಿಕೊಂಡ. ಈಗ ಯುದ್ಧ ನಿಂತು ಹೋಗಿತ್ತು. ಆದರೆ ಈ ಸಂಧಿ ಬಿಜಾಪುರಕ್ಕೆ ಉಲ್ಟಾ ಸಾಬಿತಾಯಿತು. ಶಿವಾಜಿ ಬಿಜಾಪುರದಿಂದ ಸೇಡು ತೀರಿಸಿಕೊಳ್ಳಬೇಕೆಂದಿದ್ದ, ಮುಘಲರಿಂದ ಅವನು ಸ್ವತಃ ಸಂಧಿ ಏನೋ ಮಾಡಿಕೊಂಡ. ಆದರೆ ಆಕಡೆ ಜೈಸಿಂಘ್‌ಗೆ ಬಿಜಾಪುರದ ಮೇಲೆ ಆಕ್ರಮಿಸಲು ಪ್ರಚೋದಿಸಿದ. ಇದರಿಂದಾಗಿ ಎಲ್ಲ ರಾಜಕೀಯ ಚದುರಂಗ ಮೊಗಚಿತು. ಯಾವ ಮೊಘಲ್ ಸೇನೆ ಶಿವಾಜಿಯೊಡನೆ ಸಮರ ಮಾಡಲು ಬಂದಿದ್ದವೋ ಅವೆಲ್ಲ ಬಿಜಾಪುರದ ಕಡೆ ತಿರುಗಿಕೊಂಡವು. ಈಗ ಬಿಜಾಪುರಕ್ಕೆ ಒಂದು ಹೊಸ ಶತ್ರುವನ್ನು ಎದುರಿಸಬೇಕಾಯಿತು. ದೇವರೇ ಎಂದು ಈಗತಾನೇ ಮರಾಠರ ಆಪತ್ತು ತಲೆ ಮೇಲಿಂದ ಇಳಿದಿತ್ತು ಮತ್ತೊಂದು ರಾಕ್ಷಸ ತಲೆಮೇಲೆ ಬಂದು ನಿಂತ. ಬಿಜಾಪುರಕ್ಕೆ ಮುಘಲರಿಂದ ಹೀಗೆ ಹಠಾತ್ತನೇ ಸಮರವಾಗುತ್ತದೆಂದು ಒಂದು ಚೂರು ನಿರೀಕ್ಷೆ ಇರಲಿಲ್ಲ. ಏಕೆಂದರೆ ಇಲ್ಲಿಯವರೆಗೆ ಮಘಲ್ ಸಾಮ್ರಾಜ್ಯದೊಡನೆ ಬಿಜಾಪುರದ ಮೈತ್ರಿಯಿತ್ತು. ಬಿಜಾಪುರ ಮರಾಠರ ಯುದ್ಧಗಳಲ್ಲಿ ಮುಘಲ್ ಶಹನ್ಷಾಹನನ್ನು ಜೊತೆಗೂಡಿತ್ತು. ಅವನು ಬಿಜಾಪುರಕ್ಕೆ ಕೃತಜ್ಞತೆಯನ್ನು ಸಲ್ಲಿಸುವ ಬದಲು ಉಲ್ಟಾ ಆ ಸಣ್ಣ ಸಾಮ್ರಾಜ್ಯದ ಮೇಲೆ ಧಾವಿಸಿದ, ಇದು ಜೈಸಿಂಘ್‌ನ ಯಾವ ಪ್ರಾಮಾಣಿಕತೆ ಎಂದು ಹೇಳುವುದು. ಅಲಿ ಆದಿಲ್

ಶಾಹ ಬಲು ಶಕ್ತಿಶಾಲಿಯಾದವನು, ಅವನು ಮರಾಠರ ವಿರುದ್ಧ ಹೇಗೆ ಹೋರಾಡಿದ್ದನೋ ಅದೇ ರೀತಿಯಲ್ಲಿ ಮುಘಲರ ಜೊತೆಯಲ್ಲೂ ಹೋರಾಡಿದ. ಆಗ ಬಿಜಾಪುರದ ಗೋಡೆಗಳ ಮುಂದೆ ಬಿಜಾಪುರದೊಡನೆ ಸರ್ ೧೦೭೬/೧೬೬೬ ರಲ್ಲಿ ೫ ಯುದ್ಧಗಳಾದವು. ಮಹಾ ಸಮರ ನಡೆಯಿತು. ಆದರೆ ಈ ಎಲ್ಲ ಯುದ್ಧಗಳು ಜೈಸಿಂಘನ ಕೊರಳಿನ ಹಾರವಾದವು. ಬಿಜಾಪುರದ ಮುಂದೆ ಮುಘಲ್ ಸೇನೆಗಳಿಗೆ ಮಲಿಕ್ ಅಂಬರ್ ಕಾಲದಲ್ಲಿ ಆದಂತಹ ಪರಾಜಯವಾಯಿತು. ಹದಿನೇಳನೇ ಶತಮಾನದ ಪ್ರಾರಂಭದಲ್ಲಿ ಮಲಿಕ್ ಅಂಬರ್ ಮುಘಲರನ್ನು ಮುಖ ಮುರಿಯುವಂತಹ ಪರಾಜಯ ಕೊಟ್ಟಿದ್ದ, ಈಗ ಹದಿನೇಳನೇ ಶತಮಾನದ ಮಧ್ಯದಲ್ಲಿ ಅಲಿ ಆದಿಲ್ ಶಾಹನು ಮುಘಲ್ ಸೇನೆಗಳನ್ನು ನುಚ್ಚುನೂರು ಮಾಡಿದ. ಈ ಪರಾಜಯದಿಂದ ಜೈಸಿಂಗ್ ಬೇಸರಗೊಂಡ. ಅವನಿಗೆ ಶಹನ್ಷಾಹನಿಗೆ ಮುಖ ತೋರಲಿಲ್ಲ. ಸರ್ ೧೦೭೭/೧೬೬೭ರಲ್ಲಿ ಬಿಜಾಪುರದಿಂದ ನುಚ್ಚುನೂರಾಗಿ ಹಿಂದುರಿಗಿದಾಗ ದಾರಿಯಲ್ಲೇ ನಿಧನ ಹೊಂದಿದ. ಬುರ್ಹಾನ್‌ಪುರದಲ್ಲಿ ಅವನ ಶವಸಂಸ್ಕಾರ ನಡೆಯಿತು. ಮುಘಲ್ ಇತಿಹಾಸಗಾರರು ಈ ಘಟನೆಗಳನ್ನು ಇದರ ಯಾವುದೇ ಮಹತ್ವನೇ ಇಲ್ಲದ ಹಾಗೆ ಬಹಳ ಸಂಕ್ಷಿಪ್ತವಾಗಿ ನಿರೂಪಿಸುತ್ತಾ ಮುಂದುವರೆಯುತ್ತಾರೆ, ಏಕೆಂದರೆ ಇದರಲ್ಲಿ ಮುಘಲ್ ಸಾಮ್ರಾಜ್ಯಕ್ಕೆ ಈ ಸಮರದಲ್ಲಿ ತುಂಬ ಅವಮರ್ಯಾದೆಯಾಗಿತ್ತು.

ಈ ಘಟನೆಗಳೊಡನೆ ಮಲ್ನಾಡ್ ಮತ್ತು ತೊರ್ಗಲ್ ಯುದ್ಧಗಳನ್ನು ಜೋಡಿಸಿದರೆ ಇದು ಅಲಿನಾಮಾದ ಸಂಕ್ಷಿಪ್ತ ರೂಪರೇಷೆಯಾಗುತ್ತದೆ. ಅಸಲಿಗೆ ಇದು ಕಾಳಗದ ಕವನ ಸಂಗ್ರಹ ಪುಸ್ತಕ. ವಿವರಣೆ ಶೈಲಿ ಎಷ್ಟೊಂದು ಆಕರ್ಷಕವೆಂದರೆ ಪ್ರತಿಯೊಂದು ಯುದ್ಧದ ಚಿತ್ರವೇ ಮೂಡಿಬರುತ್ತದೆ. ಇದು ಸಮರಗಳ ವೃತ್ತಾಂತ ಆದ್ದರಿಂದ ಅಲಿನಾಮಾಗೆ ರಜ್ಮನಾಮ ಎಂದು ಹೇಳಬೇಕಾಗುತ್ತದೆ. ಆದರೆ ನೆನಪಿನಲ್ಲಿಡ ಬೇಕಾದ ಮಾತೆಂದರೆ ಕಾಳಗದ ಜೊತೆಯಲ್ಲಿ ಅಲಿನಾಮಾದಲ್ಲಿ ಬಿಜಾಪುರದ ರಾಜಕೀಯವೂ ಸಹ ತುಂಬಿದೆ. ಇದರಲ್ಲಿ ಶಾಹಿ ದರ್ಬಾರಿನ ಅಲಂಕಾರ, ಬಾದಶಾಹನ ರೀವಿ, ಸರ್ದಾರ ಹಾಗೂ ಮಂತ್ರಿಗಳ ಶಿಷ್ಟಾಚಾರಗಳು, ಬಾದಶಾಹನ ಜನಪ್ರಿಯತೆ ಮತ್ತು ಪ್ರಜೆಗಳ ಪ್ರೀತಿವಾತ್ಸಲ್ಯ ಎಲ್ಲವನ್ನೂ ನೋಡಬಹುದು. ಒಮ್ಮೆ ಏನಾದರೂ ಯುದ್ಧದ ಸಮಯ ಬಂದಾಗ, ಶತ್ರು ತಲೆ ಮೇಲೆ ಬಂದಾಗ ಬಾದಶಾಹ ದರ್ಬಾರ ನಡೆಸಿ ತನ್ನ ಮಂತ್ರಿಗಳು ಹಾಗೂ ದಂಡನಾಯಕರನ್ನು ಕರೆದು ಅವರ ಸಲಹೆ ಸೂಚನೆ ಪಡೆಯುತ್ತಿದ್ದ. ಆಕ್ರಮಣಕಾರರನ್ನು ಹೇಗೆ ಎದುರಿಸಬೇಕೆಂಬ ಉಪಾಯಗಳನ್ನು ಯೋಚಿಸಲಾಗುತಿತ್ತು. ಯುದ್ಧಕ್ಕೆ ಬಲಶಾಲಿ ದಂಡನಾಯಕರನ್ನು ಆರಿಸಲಾಗುತ್ತಿತ್ತು. ಯಾವ ಸರ್ದಾರರನ್ನು ಯುದ್ಧಕ್ಕೆ ಆರಿಸಲಾಗುತ್ತಿತ್ತೊ ಅವರೆಲ್ಲರೂ ದರ್ಬಾರದಲ್ಲಿ ಹೊಣೆಹೊತ್ತು ಸಮರದ ಎಲ್ಲ ಜವಾಬ್ದಾರಿಯನ್ನು ತನ್ನದೆಂದು ಕೊಳ್ಳುತ್ತಿದ್ದರು. ಇದಲ್ಲದೆ ಕವಿ ಬಾದಶಾಹನ ಜೊತೆಯಲ್ಲಿ ಸಾಮ್ರಾಜ್ಯದ ಸ್ಥಂಬಗಳಂತೆ ನಿಂತು

ಸಾಮ್ರಾಜ್ಯಕ್ಕೆ ಸಹಾಯ ನೀಡುತ್ತಿದ್ದ ಆ ಸರ್ದಾರರ ಮತ್ತು ಮಂತ್ರಿಗಳ ಉಪಾಯಗಳು ಮತ್ತು ಅವರ ಪ್ರಮಾಣಿಕತೆಯನ್ನು ಸಹ ಎಣಿಸುತ್ತಾ ಹೋಗುತ್ತಾನೆ. ಇಲ್ಲಿ ಮಂತ್ರಿ ಅಬ್ದುಲ್ ಹಂದ್ ರಾಜಕೀಯ ಒಳಸಂಚು ಮಾಡುತಿದ್ದರೆ ಖ಼ವಾಸ್ ಖ಼ಾನ್ ಮತ್ತು ಸೈಯದ್ ಇಲಿಯಾಸ್ ಶರ್ಜ಼ ಖ಼ಾನ್ ತನ್ನ ಧೈರ್ಯದ ಚಾತುರ್ಯವನ್ನು ತೋರಿಸುತ್ತಿದ್ದರು. ಎಲ್ಲಿ ಆಕ್ರಮಣಕಾರರ ಪ್ರಸ್ತಾಪ ಬರುತ್ತದೆಯೋ ಅಲ್ಲಿ ಅವರ ಪಾತ್ರ ಮತ್ತು ಅವರ ಆಸಕ್ತಿ ಧೈರ್ಯದ ಗುಣಗಳನ್ನು ವಿವರವಾಗಿ ಪ್ರಸ್ತಾಪಿಸಲಾಗುತ್ತದೆ. ದೇಶದಲ್ಲಿ ಈ ಆಕ್ರಮಣಕಾರರ ಬಗ್ಗೆ ಏನು ಭಾವನೆಗಳಿದ್ದವು, ಹಾಗೂ ಬಿಜಾಪುರ ನಿವಾಸಿಗಳಲ್ಲಿ ಶತ್ರುಗಳ ವಿರುದ್ಧ ಎಂತಹ ಭಾವನೆಗಳು ಪ್ರಕಟವಾಗುತಿತ್ತು ಎಂಬುವುದು ತಿಳಿಯುತ್ತದೆ. ರಣಭೂಮಿಯ ಬಗ್ಗೆ ಏನು ಹೇಳುವುದು ಅದರ ಪೂರ್ತಿ ಚಿತ್ರವನ್ನೇ ಕಣ್ಮುಂದೆ ಎಳೆದ ಹಾಗಾಗುತ್ತದೆ. ದಂಡನಾಯಕರ ತೀಕ್ಷ್ಣಬುದ್ಧಿ, ಆಯುಧಗಳ ಝೇಂಕಾರ, ಸಿಪಾಯಿಗಳ ಹೋರಾಟ ಅವರ ರಕ್ತಸೋರುವಿಕೆ ಎಲ್ಲವೂ ಮುಂದೆ ಬರುತ್ತವೆ. ಹೀಗಾಗಿ ಅಲಿನಾಮಾ ಕೇವಲ ಯುದ್ಧಗಳ ವೃತ್ತಾಂತವೇ ಅಲ್ಲ ಅದು ದಖನಿ ಸಂಸ್ಕೃತಿಯ ಸಜೀವ ಚಿತ್ರವಾಗಿದೆ. ಬಿಜಾಪುರದ ಕೊನೆಯುಗದ ಚಿತ್ರ ಕಣ್ಮುಂದೆ ಎಳೆದಂತಾಗುತ್ತದೆ. ಬಿಜಾಪುರ ಮತ್ತು ಆದಿಲ್ ಶಾಹಿ ಕುಟುಂಬಕ್ಕೆ ಭಾರತದ ಇತಿಹಾಸದಲ್ಲಿ ಏನು ಸ್ಥಾನಮಾನವಿದೆ ಹಾಗೂ ಈ ಸಾಮ್ರಾಜ್ಯದ ಇತಿಹಾಸ ಮತ್ತು ಸಂಸ್ಕೃತಿಯು ಏನು ಸೇವೆ ಮಾಡಿದೆ ಎಂದು ಇದನ್ನು ಓದಿದಾಗ ತಿಳಿಯಬಹುದು.

ಅಲಿನಾಮಾ ಬಿಜಾಪುರದ ಹದಿನೈದು ವರ್ಷಗಳ ಇತಿಹಾಸ, ಇದರ ಐತಿಹಾಸಿಕ ಶೈಲಿಯನ್ನು ನೋಡಿದರೆ ಇದರಲ್ಲಿ ಸಂಭವಗಳ ಪೂರ್ಣಸ್ವಾಸ್ಥ ಮತ್ತು ಸಾತತ್ಯ ಇವೆ. ಕವಿತೆಯಲ್ಲಿ ಎಲ್ಲೂ ಸಹ ಸಂಭವಗಳ ಸಂಬಂಧ ಕಳೆದುಹೋಗುವುದಿಲ್ಲ. ಕವಿ ಐತಿಹಾಸಿಕ ಸಂಭವಗಳನ್ನು ರಚಿಸುವಾಗ ಅದರಲ್ಲಿ ಬಹಳಷ್ಟು ಅತಿಶಯೋಕ್ತಿ ಮಾಡುತ್ತಾರೆಂದು ನಾವು ಬಲ್ಲೆವು ಇದಕ್ಕಾಗಿ ಅನೇಕ ಕಡೆ ಸಂಭವಗಳನ್ನು ಸಂಯೋಜಿಸಿ ಪ್ರಸ್ತುತ ಪಡಿಸಬೇಕಾಗುತ್ತದೆ ಹೀಗೆ ಮಾಡುವುದರಿಂದ ಅದು ಇತಿಹಾಸವೇ ಅಲ್ಲ ಒಂದು ಕಥೆಯಾಗಿ ಹೋಗುತ್ತದೆ. ಈ ರೀತಿಯಲ್ಲಿ ರಚಿತವಾದ ಇತಿಹಾಸವನ್ನು ಯಾರು ನಂಬುವರು? ಆದರೆ ನುಸ್ರತಿ ತನ್ನ ಕವಿತಾವಾಚನದಲ್ಲಿ ಐತಿಹಾಸಿಕ ಸ್ವಾಸ್ಥವನ್ನು ಕೈಬಿಡುವುದಿಲ್ಲ. ಇದೇ ಅವನ ಕವಿತಾವಾಚನದ ಪರಿಪೂರ್ಣತೆ. ಇದರಿಂದಾಗಿ ಅಲಿನಾಮೆಗೆ ಒಂದು ಜೀವಂತ ಇತಿಹಾಸ ಎನ್ನಬೇಕಾಗುತ್ತದೆ. ಇದರಲ್ಲಿ ಎಲ್ಲ ರೀತಿಯ ಸಣ್ಣಪುಟ್ಟ ಸಂಭವನೆಗಳನ್ನು ಎಷ್ಟೊಂದು ವಿವರದಿಂದ ಪ್ರಸ್ತಾಪಿಸಲಾಗಿದೆ ಎಂದರೆ ಆ ವಿವರಣೆಗಳು ಬೇರೆ ಇತಿಹಾಸಗಳಲ್ಲಿ ಸಿಗುವುದಿಲ್ಲ, ಏಕೆಂದರೆ ಇತಿಹಾಸದ ಪುಟಗಳಲ್ಲಿ ಪ್ರತಿಯೊಂದು ಸಣ್ಣಪುಟ್ಟ ಘಟನೆಗಳನ್ನು ವಿವರವಾಗಿ ಪ್ರಸ್ತಾಪಿಸುವ ಅವಕಾಶ ಇರುವುದಿಲ್ಲ. ಅಲಿನಾಮೆಯ ಆಧಾರ ಪ್ರಮಾಣ ಇತಿಹಾಸದ ದೊಡ್ಡ

ಮೂಲ. ಇದರಿಂದಾಗಿ ಬಿಜಾಪುರದ ಇತಿಹಾಸಗಾರರು ತಮ್ಮ ಇತಿಹಾಸಗಳಲ್ಲಿ ಅಲಿನಾಮೆಯ ಪ್ರಸ್ತಾಪನೆಗಳಿಂದ ಲಾಭಗಳಿಸಿದ್ದಾರೆ. ಇಬ್ರಾಹೀಂ ಝುಬೇರಿ ಬುಸಾತೀನುಸ್ಸಲಾತೀನ್ ಎಂಬ ಹೆಸರಿಂದ ದೊಡ್ಡ ಇತಿಹಾಸ ಬರೆದಿರುವನು ಅವನು ಅಲಿನಾಮೆಯಿಂದ ಲಾಭಪಡೆದಿರುವನು 'ಅವನು ಭಾಷಣ ಕಲೆಯ ಭೂಖಂಡದ ಬಾದಶಾಹ ಹಾಗೂ ಮಲಿಕುಶ್ಶೊರಾ ಆಗಿದ್ದವನು ಅದು ಅವನಗೆ ಯೋಗ್ಯವಾದದ್ದೆ' ಎಂದು ನುಸ್ರತಿಯನ್ನು ಬಹಳಷ್ಟು ಹೊಗಳಿರುವನು. ಶಾಃ ನೂರುಲ್ಲಾಃ ಬಿಜಾಪುರದ ಮತ್ತೊಬ್ಬ ಇತಿಹಾಸಗಾರ ಇವನು 'ತಾರೀಖೆ ಅಲಿ ಆದಿಲ್ ಶಾಹಿ' ಎಂಬ ಹೆಸರಿನಿಂದ ಆ ಯುಗದ ಇತಿಹಾಸ ಬರೆದವನು. ನುಸ್ರತಿ ಸ್ವತಃ ಅವನನ್ನು ಬಹಳಷ್ಟು ಹೊಗಳಿರುವನು.

ಜ಼ಹೆ ಶಾಃ ನೂರುಲ್ಲಾ ಫರ್ಖುಂದ ನಾಮ್
ಮುನವ್ವರ್ ಹೈ ಜಿಸ್ ಫಜ಼ಲ್ ತೆ ಜಗ್ ತಮಾಮ್.

ನೂರುಲ್ಲಾಃನು ತನ್ನ ಇತಿಹಾಸದಲ್ಲಿ ಎಲ್ಲೂ ಸಹ ನುಸ್ರತಿಯ ಹೆಸರನ್ನು ಪ್ರಸ್ತಾಪಿಸಿಲ್ಲ ಆದರೆ ತಾರೀಖೆ ಆಲಿ ಆದಿಲ್‌ಶಾಹಿ ಹಾಗೂ ಅಲಿನಾಮೆಯ ಪ್ರಸ್ತಾಪನೆಗಳಲ್ಲಿ ಬಹಳಷ್ಟು ಹೊಂದಾಣಿಕೆ ಸಿಗುತ್ತದೆ. ಇದು ಆಗಲೇ ಬೇಕು ಏಕೆಂದರೆ ಇಬ್ಬರೂ ಸಮಕಾಲೀನರು ಹಾಗೂ ಭೇಟಿಯಾಗಿದ್ದವರು, ಅವರ ಮಧ್ಯೆ ಅವಶ್ಯಕವಾಗಿ ಮಾತು ಕತೆ ನಡೆಯುತ್ತಿತ್ತು.

ಇನ್ನೊಂದು ಮಾತು ಎಂದರೆ ನುಸ್ರತಿಯ ಇತಿಹಾಸ ಅಪ್ರಯೋಜಕವಲ್ಲ ಅಂದರೆ ಇದರಲ್ಲಿ ಸಾಸ್ಥ್ಯದಿಂದ ಕೂಡಿದ ಮೃದುತ್ವದ ಜೊತೆಯಲ್ಲಿ ಕೋಮಲತೆಯೂ ಇದೆ, ಏಕೆಂದರೆ ಅವನು ಕಣ್ಣಾರೆ ನೋಡಿದ್ದನ್ನು ಬರೆಯುತ್ತಾನೆ. ಅವನು ಕೆಲವು ಯುದ್ಧಗಳಲ್ಲಿ ಬಾದಶಾಹನ ಜೊತೆಯಲ್ಲಿದ್ದು ಸಂಭವಗಳನ್ನು ತನ್ನ ಕಣ್ಣಾರೆ ನೋಡಿ ಬರೆಯುತ್ತಾ ಹೋಗುತಿದ್ದಾನೆಂದು ತಿಳಿಯುತ್ತದೆ. ಇವನ ಇತಿಹಾಸದ ಮೇಲೆ ಶಂಕೆಪಡುವಂತಹ ಮಾತೇ ಇಲ್ಲ ಇವನ ಪ್ರಸ್ತಾಪನೆಗಳಿಂದ ಬೇರೆ ಇತಿಹಾಸಗಳನ್ನು ಶೋಧಿಸಬಹುದು. ಏಕೆಂದರೆ ಇಂದಿನ ಇತಿಹಾಸಗಳಲ್ಲಿ ಮನಬಂದಂತೆ ಮಾತುಗಳನ್ನು ಬರೆಯಲಾಗುತ್ತಿವೆ ಹಾಗೂ ಜಲ-ಬಣ್ಣ ಕೊಡಲಾಗುತ್ತಿದೆ. ಇದರ ವಿರುದ್ಧವಾಗಿ ನುಸ್ರತಿಯ ಪ್ರಸ್ತಾಪನೆಗಳಲ್ಲಿ ಬಹಳಷ್ಟು ನಿಜಾಂಶಗಳಿವೆ.

ಪಕಡ್ ಅಸಲ್ ತಾರೀಖ಼ ಲಿಖ಼್ತಿಯಾ಼ ಕಿ ಚಾಲ್
ಲಿಖಾ ಖ಼ಿಸ್ಸ ದರ್ ಖ಼ಿಸ್ಸ ಮೈ ಹಸ್ಬೆ ಹಾಲ್

ಇದಲ್ಲದೇ ಅಲಿನಾನೆಮೆಯ ಎಲ್ಲ ಮಸ್ನವಿಗಳು ಹಾಗೂ ಪ್ರಶಂಸಗೀತೆಗಳು ಆವೇಶಗಳ ಸಮುದ್ರದಂತಿವೆ. ಪ್ರತಿಯೊಂದು ಉಕ್ತಿಯೂ ಸಹ ಭಾವನೆಗಳ ಒಂದು ಅಲೆಯಂತಿದೆ. ಮಾತೆಂದರೆ ನುಸ್ರತಿ ದೇಶಪ್ರೇಮದ ಆವೇಶದಿಂದ ಎಷ್ಟೊಂದು

ತುಂಬಿ ತುಳುಕಾಡುತಿದ್ದನೋ ಅವನು ಬರೆಯಲಾರಂಭಿಸಿದರೆ ಅವನ ಮನದಲ್ಲಿ ವಿಧವಿಧವಾದ ಭಾವೋದ್ರೇಕಗಳು ಎದ್ದೇಳುತಿದ್ದವು. ಹೀಗಾಗಿ ಅಲಿನಾಮೆಗೆ ಕೇವಲ ಕವಿತಾವಾಚನವಲ್ಲ ಇದಕ್ಕೆ ಒಂದು ಜೀವಂತ ಇತಿಹಾಸ ಹಾಗೂ ಶಾಹ್ನಾಮ ದಖಿನ್ ಎಂದು ಹೇಳಬೇಕು. ಇದು ಉರ್ದುಸಾಹಿತ್ಯದ ಒಂದು ಹೊಸ ಮೂಲಧನ. ನುಸ್ರತಿ ಶಾಹ್ನಾಮ ದಖಿನ್ ಬರೆದು ಉರ್ದುಸಾಹಿತ್ಯದಲ್ಲಿ ಒಂದು ಹೊಸ ಬಾಗಿಲನ್ನು ತೆರೆದವನು ಎನ್ನುವ ಮಾತು ಮರೆಯುವಹಾಗಿಲ್ಲ. ಏಕೆಂದರೆ ಉರ್ದು ಭಾಷೆಯಲ್ಲಿ ಇದೊಂದು ಮೊಟ್ಟ ಮೊದಲನೆಯ ಮಸ್ನವಿ. ಇದು ಮಹಾಕಾವ್ಯದ ಗೌರವದಿಂದ ಪ್ರಸ್ತಾಪಿಸಲ್ಪಡುತ್ತದೆ. ನಿಜವಾದ ಮಾತೆಂದರೆ ದಖಿನಿ ಭಾಷೆಯನ್ನು ಹೊರತು ಪಡೆಸಿ, ಸ್ವತಃ ಉರ್ದುವಿನಲ್ಲಿ ನುಸ್ರತಿಯ ಕಾಲದವರಿಗೆ ಯಾರೂ ಸಹ ಮಹಾಕಾವ್ಯ ಬರೆದಿರಲಿಲ್ಲ. ಅದರಲ್ಲಿ ಒಂದು ದೇಶದ ಸಾಂಸ್ಕೃತಿಕ ಬಂಡವಾಳ ಹಾಗೂ ಕಾಳಗದ ಸಂಭವಗಳನ್ನು ರಚಿಸಿದವರಲ್ಲ. ಆ ಕಾಲದವರಿಗೂ ಉರ್ದುವಿನ ಎಷ್ಟು ಬಂಡವಾಳ ಉತ್ಪಾದನೆಯಾಗಿತ್ತೋ ಅದರಲ್ಲಿ ಕಥೆಗಳು ಹಾಗೂ ಅನುರಾಗದ ಸಂಭವನೆಗಳನ್ನು ಬಿಟ್ಟರೇ ಮತ್ತೇನಿತ್ತು? ನಿಜಾಂಶವೆಂದರೆ ನುಸ್ರತಿಯ ಕಾಲದವರಿಗೆ ಯಾವ ಕವಿಯೂ ಸಹ ಅವನು ದಕ್ಷಿಣದವನೇಯಾಗಿರಲಿ ಅಥವಾ ಉತ್ತರದವನಾಗಿರಲಿ ಮಹಾಕಾವ್ಯ ಬರೆಯುವ ಸಾಹಸವೇ ಮಾಡಿರಲಿಲ್ಲ. ಸಮರ ಹಾಗೂ ಸಭೆಯ ಭಾಷೆ ಹಾಗೂ ಪ್ರಸ್ತಾಪನೆಯ ಶೈಲಿಯಲ್ಲಿ ಬಹಳ ಅಂತರವಿದೆ. ಯಾವ ಶೈಲಿಯಲ್ಲಿ ಕಾಳಗದ ಸಂಭವನೆಗಳನ್ನು ಪ್ರಸ್ತಾಪಿಸಲಾಗುತ್ತದೆಯೋ ಅದು ಕಥೆಗಳಿಂದ ಬೇರೆಯೇ ಯಾಗಿರುತ್ತದೆ ಎಂದು ದಖಿನಿ ಹಾಗೂ ಉರ್ದು ಕವಿಗಳಿಗೆ ತಿಳಿದಿರಲಿಲ್ಲ. ನಿಜವೆಂದರೆ ಅಲಿನಾಮಾ ಬರೆದು ನುಸ್ರತಿಯು ಉರ್ದುಸಾಹಿತ್ಯದಲ್ಲಿ ಒಂದು ಹೊಸ ಮೂಲಧನವನ್ನು ಉತ್ಪಾದಿಸಿದ ಹಾಗೂ ರಣರಂಗಕಾವ್ಯ ಬರೆಯುವ ಹೊಸ ಅಚ್ಚನ್ನು ಮಾಡಿದ. ಅವುಗಳಿಂದ ಮುಂಬರುವ ಪೀಳಿಗೆ ಬಹಳಷ್ಟು ಲಾಭಗಳಿಸಿತು. ಮತ್ತು ಶಾಹ್ನಾಮ ಎಂದರೇನು ಎನ್ನುವುದನ್ನು ಸ್ವತಃ ನುಸ್ರತಿಯ ಪದಗಳಲ್ಲಿ ಅದು ದಕ್ಷಿಣದ ಜೀವ,ಏಕೆಂದರೆ ಇದರಲ್ಲಿ ಕಾಳಗದ ವೃತ್ತಾಂತವೇ ಅಲ್ಲ ಅದರಲ್ಲಿ ದಖಿನಿ ಸಂಸ್ಕೃತಿಯ ಅನೇಕ ಆಧಾರಗಳನ್ನು ವ್ಯಕ್ತಪಡಿಸಲಾಗಿದೆ. ಇದರಲ್ಲಿ ದಖಿನಿ ಜೀವನ ಹಾಗೂ ಸಮಾಜದ ವರ್ಣನೆಗಳನ್ನು ಕಾಣಬಹುದಲ್ಲದೇ ಮನೋಭಾವನೆಗಳ ಸೊಬಗು ಹಾಗೂ ಭಾಷೆ ಮತ್ತು ಸಾಹಿತ್ಯದ ನಯಗಳ ಮೇಲೂ ಸಾಕಷ್ಟು ಬೆಳಕು ಚಲ್ಲುತ್ತದೆ. ಇದಲ್ಲದೆ ಅಲಿನಾಮಾ ಬಿಜಾಪುರದ ಎಲ್ಲ ಗಣ್ಯವ್ಯಕ್ತಿಗಳ ಜೀವನಚರಿತ್ರಯೂ ಹೌದು. ಕವಿ ತನ್ನ ಬಾದಶಾಹ ಇಮ್ಮಡಿ ಅಲಿ ಆದಿಲ್ ಶಾಹನ ಅನೇಕ ಗುಣಗಳವನ್ನು ತೋರಿಸಿದ್ದಾನೆ, ಅಲ್ಲದೆ ಸಾಮ್ರಾಜ್ಯದ ಸರ್ದಾರರು ಹಾಗೂ ಮಂತ್ರಿಗಳ ಬಗ್ಗೆಯೂ ಸಹ ಬಹಳಷ್ಟು ಬರೆದಿದ್ದಾನೆ. ಮಿರ್ಯಾ ಅಬ್ದುಲ್ ಹಂದ್, ಖವಾಸ್ ಖಾನ್, ಸೈಯ್ಯದ್ ಇಲಿಯಾಸ್ ಶರ್ಜಾ ಖಾನ್, ಅಬುಲ್ ಮುಆಲಿ, ನೂರುಲ್ಲ, ಕರೀಮುಲ್ಲಾಃ ಅಂತಹ ಗಣ್ಯರ

ವ್ಯಕ್ತಿತ್ವ ಹಾಗೂ ಚಾರಿತ್ರ್ಯವನ್ನು ಎಷ್ಟು ಅಭಿವ್ಯಕ್ತ ಪಡೆಸಿದ್ದಾನೆಂದರೆ ಅವರು ಅಮರರಾಗಿದ್ದಾರೆ, ಈಗ ಅವರನ್ನು ಯಾರೂ ಮರಿಯುವಂತಿಲ್ಲ. ಈ ನಿಜಾಂಶಗಳನ್ನು ಸ್ವತಃ ನುಸ್ರತಿಯ ನಾಲಿಗೆಯಿಂದ ಕೇಳಬೇಕು.

ಕತಾ ಹರ್ೂ ಸುಖ಼ನ್ ಮುಖ಼್ತಸರ್ ಬೆಗುಮಾನ್
ಕೆ ಯು ಶಾಃನಾಮಾ ದಖಿನ್ ಕಾ ಹೈ ಜಾನ್
ಅಜಬ್ ಕಿಯಾ ಕೆ ಫಿರ್ದೌಸಿಯೆ ಪಾಕ್ ಜ಼ಾದ್
ಅಪಸ್ ಘ಼ಂ ಬಿಸರ್ ಅಪ್ ಕರೆರೂಹ್ ಶಾದ್

ಅಲಿ ನಾಮಾ ಸರ್ ೧೦೭೬ರಲ್ಲಿ ಮುಗಿದುಹೋಗುತ್ತದೆ. ಇದೇ ಈ ಕೃತಿಯ ಕೊನೆಯ ದಿನಾಂಕ. ನುಸ್ರತಿ ತನ್ನ ದ್ವಿಪದಿಯಲ್ಲಿ ಇದನ್ನು ಸಹ ವ್ಯಕ್ತ ಪಡೆಸಿದ್ದಾನೆ

ಲಿಖ್ಯಾ ಶಃಕಾ ಮೈ ಜಿಸ್ ಜೊ ಯು ಕರ್ ಉಮಸ್
ಹಜ಼ಾರ್ ಏಕ್ ಸೌ ಸತ್ತರ್ ಪೆ ಥೆ ಛೆ ಬರಸ್

ಇದೇ ವರ್ಷದಲ್ಲಿ ಜೈಸಿಂಘನೊಡನೆ ಕೊನೆ ಯುದ್ಧವಾಗಿತ್ತು. ಜೈಸಿಂಘ್ ಮನಮುರಿದು ಬಿಜಾಪುರದಿಂದ ಹಿಂದಕ್ಕೆ ಹೋಗಿದ್ದ. ಅಲಿನಾಮೆಗೆ ಈ ಯುದ್ಧದವರೆಗೆ ತಂದು ಏಕೆ ಪೂರಾಯಿಸಿದ ಎಂಬುವ ಮಾತು ವ್ಯಾಕುಲತೆಯನ್ನು ಉಂಟು ಮಾಡುತ್ತದೆ. ಅಲಿನಾಮಾ ಇಮ್ಮಡಿ ಅಲಿ ಆದಿಲ್ ಶಾಹನ ಜೀವನದ ಸಂಗತಿಯೇ ಆಗಿದಿದ್ದರೆ ಇದು ಇನ್ನು ಮುಂದುವರೆಯಬೇಕಿತ್ತು, ಅಲಿಯ ಜೀವನದ ಕೊನೆಯೂ ಇದರಲ್ಲಿ ಬರಬೇಕಿತ್ತು. ಏಕೆಂದರೆ ಅಲಿ ಸರ್ ೧೦೮೩/೧೬೭೨ರವರೆಗೆ ಇನ್ನೂ ಏಳು ವರ್ಷಗಳ ಕಾಲ ಜೀವಂತನಾಗಿದ್ದ, ನುಸ್ರತಿಯೂ ಸಹ ಜೀವಂತವಾಗಿದ್ದ. ಆದರೆ ಅಲಿಯ ಕೊನೆ ಯುಗ ಶಾಂತವಾಗಿತ್ತೆಂದು ಕಾಣುತ್ತದೆ. ಈ ಮಧ್ಯೆ ಪ್ರಸ್ತಾಪಿಸುವಂತಹ ಯಾವುದೇ ದೊಡ್ಡ ಘಟನೆ ನಡೆದಿಲ್ಲ. ಅಲಿ ನಾಮಾ ಅಸಲಿಗೆ ಶಾಹ್ನಾಮ, ಅದು ಕೇವಲ ಕಾಳಗ ವಿಜಯಗಳು ಹಾಗೂ ರಾಜಕೀಯ ಸಾಂಸ್ಕೃತಿಕ ಏರುಇಳುವಿಕೆ ಅಂತಹ ಮುಖ್ಯವಾದ ಸಂಗತಿಗಳ ಚಿತ್ರವಾಗಿರುತ್ತದೆ. ನುಸ್ರತಿ ತನ್ನ ಶಾಹ್ನಾಮೆಯಲ್ಲಿ ತನ್ನ ಬಾದಶಾಹನ ಮುಖ್ಯ ಸಾಧನೆಗಳ ಕವನ ಸಂಗ್ರಹದ ಪುಸ್ತಕ ಮಾಡಬೇಕೆಂದಿದ್ದ, ಮತ್ತೆ ಅಲಿಯ ಕೊನೆ ಯುಗ ತುಂಬ ಮೌನವಾಗಿ ಕಳೆದಿದ್ದು ಏಕೆಂದರೆ ಬಿಜಾಪುರದ ಶತ್ರು ಮುಘಲ್ ಮತ್ತು ಮರಾಠರು ಬಿಜಾಪುರದ ಪರಾಕ್ರಮವನ್ನು ಹೋಗಲಾಡಿಸಿದ್ದರಿಂದ ಎಷ್ಟು ಖಿನ್ನನಾಗಿದ್ದನೆಂದರೆ ಆಗಮಿಸುವ ಅನೇಕ ವರ್ಷಗಳ ಕಾಲದವರಿಗೆ ಅವರ ಮೇಲೆ ದಾಳಿ ಮಾಡಲು ಸಾಹಸವಿರಲಿಲ್ಲ. ಈಗ ನುಸ್ರತಿ ಮುಂದೆ ಹೋಗಿದ್ದರೆ ಏನು ಬರೆಯಲು ಸಾಧ್ಯ.

ಯಾವ ಹಸ್ತಪ್ರತಿಗಳ ಸಹಾಯದಿಂದ ಅಲಿನಾಮಾದ ಸಂಪಾದನೆ ಮಾಡಲು ಸಾಧ್ಯವಾಯಿತೋ ಅವುಗಳ ಬಗ್ಗೆ ಪ್ರಸ್ತಾಪ ಅವಶ್ಯಕವಾಗಿದೆ. ಹೈದ್ರಾಬಾದಿನಲ್ಲಿ ಅಲಿನಾಮೆಯ ೩ ಹಸ್ತಪ್ರತಿಗಳಿವೆ. ೨ ನವಾಬ್ ಸಾಲಾರ್ ಜಂಗ್‌ರವರ ಗ್ರಂಥಾಲಯದಲ್ಲಿವೆ ಮತ್ತೊಂದು ದಫ್ತರೆ ದೀವಾನಿಯಲ್ಲಿದೆ. ಸಾಲಾರ್ ಜಂಗ್ ಕೃತಿಗಳಲ್ಲಿ ಒಂದು ಹಸ್ತಪ್ರತಿಯಿದೆ ಮತ್ತೊಂದು ಬ್ರಿಟಿಷ್ ಮ್ಯುಜ಼ಿಯಮಿನ ಕೃತಿಯ ಫೋಟೋ ಕಾಪಿ. ಇದು ದಿವಂಗತ ನವಾಬ್ ಸಾಲಾರ್ ಜಂಗ್‌ರವರು ತರಿಸಿದ್ದರು. ಈ ಎರಡು ಕೃತಿಗಳು ಬಹಳ ಹಳೇಯವು. ಅದರ ಬರವಣಿಗೆಯಿಂದ ತಿಳಿಯುವುದೇನೆಂದರೆ ಈ ಕೃತಿಗಳು ಕವಿಯ ಬಹಳ ಹತ್ತಿರವಾದ ಯುಗದಲ್ಲಿ ಬರೆಯಲಾಗಿದೆ. ಹೀಗಿದ್ದರೂ ಈ ಎರಡು ಕೃತಿಗಳು ದೋಷಪೂರ್ಣವಾಗಿವೆ. ಹಸ್ತಪ್ರತಿ ಅಂತೂ ಕೊನೆಯಲ್ಲಿ ಅಪೂರ್ಣವಾಗಿದೆ. ಆದರೆ ಫೋಟೋಕಾಪಿಯ ಕೃತಿಯಲ್ಲಿ ಮಧ್ಯದ ಕೆಲವು ಪುಟಗಳು ಮಾಯವಾಗಿವೆ. ಆದರೂ ಒಂದು ಕೃತಿಯ ಕೊರತೆ ಮತ್ತೊಂದರಿಂದ ಪೂರ್ಣವಾಗುತ್ತದೆ. ಈ ಮುದ್ರಿತ ಅಲಿನಾಮಾ ಆ ಕೃತಿಗಳ ಸಹಾಯದಿಂದ ಸಂಪಾದಿಸಲಾಗಿದೆ. ದಫ್ತರೆ ದೀವಾನಿಯ ಕೃತಿ ಅಂತೂ ತುಂಬ ದೋಷಪೂರ್ಣವಾಗಿದೆ. ಇದರ ಮೊದಲನೆಯ ಹಾಗೂ ಕೊನೆಯ ಅನೇಕ ಪುಟಗಳು ಮಾಯವಾಗಿವೆ. ಅದರ ಮೇಲೆ ಕಿರೀಟವೆಂದರೆ ಇದರಲ್ಲಿ ಬರೆಯುವವನು ಸಹ ಬಹಳಷ್ಟು ವಂಚನೆ ಮಾಡಿರುವನು. ಅವನ ಬರವಣಿಗೆಯಲ್ಲಿ ಕೃತಿಯ ಅನೇಕ ಭಾಗಗಳು ಅಸ್ತವ್ಯಸ್ತವಾಗಿದೆ. ಯಾವ ಮೂಲವಸ್ತು ಮೊದಲಿಗೆ ಬರಬೇಕಾಗಿತ್ತು ಅದು ಹಿಂದೆ ಮಾಡಲಾಗಿದೆ ಹಾಗೂ ಹಿಂದಿನ ಮೂಲವಸ್ತು ಮುಂದೆ. ಆದ್ದರಿಂದ ಅದರ ಮೇಲೆ ಯಾವ ಭರವಸೆಯು ಮಾಡಲು ಸಾಧ್ಯವಿಲ್ಲ, ಆದರೂ ಕೆಲವು ಯುಕ್ತಿಗಳು ಹಾಗೂ ಶಿರೋನಾಮೆ/ಮೇಲ್ಬರೆಹಗಳು ಸಾಲಾರ್ ಜಂಗ್ ಕೃತಿಗಳಲ್ಲಿ ಸಿಗುವುದಿಲ್ಲವೋ ಅವು ಈ ಕೃತಿಯಲ್ಲಿ ಸಿಗುತ್ತದೆ. ಹೀಗೆ ಈ ಸಂಪೂರ್ಣ ಅಲಿನಾಮಾ ನಿರೀಕ್ಷಕರಿಗೆ ಸಲ್ಲಿಸಲಾಗುತ್ತಿದೆ.

ಕೊನೆಯಲ್ಲಿ ನಾನು ಮಜ್ಲಿಸ ಮಖ್ತೂತಾತೆ ದಕನ್ ಮತ್ತು ದಿವಂಗತ ನವಾಬ್ ಸಾಲಾರ್ ಜಂಗ್‌ರವರಿಗೆ ಚಿರಋಣಿಯಾಗಿದ್ದೇನೆ. ಅವರು ನನಗೆ ಈ ಸಮಿತಿಯ ಸದಸ್ಯನಾಗಿ ಮಾಡಿದರು ಹಾಗೂ ಅಲಿನಾಮಾದ ಸಂಪಾದನೆ ನನಗೆ ವಹಿಸಿಕೊಟ್ಟರು. ಏಕೆಂದರೆ ಇದು ಇತಿಹಾಸದ ಪುಸ್ತಕ ಹಾಗೂ ಒಬ್ಬ ಇತಿಹಾಸಗಾರನೇ ಈ ಕೆಲಸ ಒಳ್ಳೆರೀತಿಯಲ್ಲಿ ಮಾಡಬಲ್ಲ. ಆದರೆ ಈ ಕಾರ್ಯ ನಾನು ಸಮಯಕ್ಕೆ ಸರಿಯಾಗಿ ಮಾಡದೇ ಇರುವುದು ದುಃಖಕರ ಸಂಗತಿ. ಇದರಲ್ಲಿ ತುಂಬ ವಿಳಂಬವಾಯಿತು. ಅರ್ಧ ಪುಸ್ತಕ ದಿವಂಗತ ನವಾಬರ ಜೀವನದಲ್ಲಿ ಮುದ್ರಿಸಲ್ಪಟ್ಟಿತ್ತು ಹೀಗೆ ಈ ಕಾರ್ಯ ಮುಂದುವರೆದಿದ್ದರೆ ಉಳಿದ ಪುಸ್ತಕವೂ ಸಹ ದಿವಂಗತರ ಜೀವನದಲ್ಲೇ ಮುದ್ರಣವಾಗುತ್ತಿತ್ತು. ಆದರೆ ನನ್ನ ಕೆಲವು ಕೊರತೆಗಳಿಂದ ಈ ಕಾರ್ಯ

ಅಪೂರ್ಣವಾಯಿತು. ಹೀಗೆ ಸುಮಾರು ಹದಿನೈದು ವರ್ಷಗಳ ನಂತರ ಈ ಕೃತಿ ಬಹಿರಂಗ ಪಡೆಯುತ್ತಿದೆ. ನಾನು ಸಮಿತಿಯಿಂದ ಈ ಅಡಚನೆಗಾಗಿ ಕ್ಷಮೆಯಾಚಿಸುತ್ತೇನೆ. ಮತ್ತೊಂದು ವಿಷಯವೆಂದರೆ ನಾನು ಈ ಮೈದಾನದಲ್ಲಿ ಅಂದರೆ ದಖನಿ ಭಾಷೆಯ ನಡು ಹರೆಯದಲ್ಲಿ ಒಬ್ಬ ಆರಂಭಶೂರನಾಗಿ ಬಂದಿದ್ದೇನೆ. ನನಗೆ ಈ ಕೆಲಸಕ್ಕಾಗಿ ಬಹಳ ಕಷ್ಟ ಪಡಬೇಕಾಯಿತು ಹಾಗೂ ದಖನಿ ಓದಲು ಹಾಗೂ ತಿಳಿಯಲು ಬಹಳ ತಲೆ ಕೆಡಸಿಕೊಳ್ಳಬೇಕಾಯಿತು. ಈ ಭಾಷೆಯ ಅನೇಕ ಪದಗಳು ಹಾಗೂ ಬಂಧಗಳು ಈಗ ತ್ಯಜಸಿಲ್ಪಟ್ಟಿವೆ ಹಾಗೂ ಯಾವುದೇ ನಿಘಂಟಿನಿಂದ ಈ ಕಷ್ಟ ನಿವಾರಿಸಲು ಸಾಧ್ಯವಿಲ್ಲ. ಇದರ ಮೇಲೆ ಕಿರೀಟ ಎಂದರೆ ಮುಲ್ಲಾ ನುಸ್ರತಿ ಒಬ್ಬ ಬಹಳಷ್ಟು ಹೇಳುವ ಸಾಹಿತಿ. ಅವನ ಬಳಿ ದಖನಿ ಪದಗಳ ಹಾಗೂ ನುಡಿಗಟ್ಟುಗಳು ಎಷ್ಟೊಂದಿವೆ ಎಂದರೆ ಇಂದು ಅವುಗಳನ್ನು ತಿಳಿಯಲು ಅಸಾಧ್ಯ ಇದನ್ನು ಬಲ್ಲವರು ಈಗ ದಕ್ಷಿಣದಲ್ಲಿ ಇಲ್ಲ. ಈ ಅಸಾಹಯಕತೆ ಇಂದೇ ಅಲ್ಲ ಗೊಲ್ಕುಂಡ ಮತ್ತು ಬಿಜಾಪುರದ ಪತನದ ನಂತರವೇ ಇಂದ್ರಿಯಾನುಭವಿಸಲಾಗಿತ್ತು. ಏಕೆಂದರೆ ಮುಘಲರ ಅಂದಿನಿಂದ ಜೀವನದ ರೂಪಬಣ್ಣವೆಲ್ಲ ಬದಲಾಯಿಸಿದಾಗ ಭಾಷೆಯೂ ಸಹ ಬದಲಾಯಿಸಿ. ಉತ್ತರದ ಪ್ರಭಾವ ಎಷ್ಟೊಂದು ಆವರಿಸಿತೆಂದರೇ ಜನ ತಮ್ಮ ಹಳೇ ದಖನಿ ಭಾಷೆಯನ್ನೇ ಮರೆತು ಉತ್ತರದ ಖಡಿ ಬೋಲಿ ಮಾತಾಡಲಾರಂಭಿಸಿದರು. ಇಬ್ರಾಹೀಂ ಝುಬೇರಿ ಬಿಜಾಪುರದ ಪತನದ ನಂತರ ಇತಿಹಾಸ ಬರೆದವನು ಹೇಳುತ್ತಾನೆ 'ಈ ಕಾಲದಲ್ಲಿ ಜನ ದಖನಿ ಭಾಷೆ ಮತ್ತು ಅದರ ಬಂಧಗಳ ಗೇಲಿ ಮಾಡುತ್ತಿದ್ದಾರೆ'. ಹೀಗೆ ಹದಿನೇಳನೇ ಶತಮಾನದಲ್ಲೇ ಈ ಗತಿಯಾಗಿದ್ದರೆ ಇಂದು ಎರಡು ಶತಮಾನ ಕಳೆದ ನಂತರ ಈ ಭಾಷೆ ಯಾರಿಗೆ ತಿಳಿಯುತ್ತದೆ. ಈ ಕೃತಿಯಲ್ಲಿ ಅನೇಕ ಪದಗಳು ಮತ್ತು ಬಂಧಗಳು ಬಿಟ್ಟಿಹೋಗಿರುವುದನ್ನು ನಾನು ಒಪ್ಪುತ್ತೇನೆ ಅವುಗಳನ್ನು ನಾನು ತಿಳಿಯಲು ಸಾಧ್ಯವಾಗಲಿಲ್ಲ.

ಈ ಸಮಯದಲ್ಲಿ ದಿವಂಗತ ನವಾಬ್ ಸಾಲಾರ್ ಜಂಗ್ ರವರ ನೆನಪು ಕಾಡುತ್ತಿದೆ. ದಖನಿ ಸಾಹಿತ್ಯದ ಎಲ್ಲ ಬೆಲೆಬಾಳುವಂತಹ ಮೂಲಧನ ಇಂದು ಬಹಿರಂಗವಾಗುತ್ತಿರುವುದು ನವಾಬರ ಜ್ಞಾನ ಸಂಬಂಧ ನೆನಪು. ದಿವಂಗತ ನವಾಬರಿಗೆ ದಕ್ಷಿಣದ ಇತಿಹಾಸ, ಸಂಸ್ಕೃತಿ ಹಾಗೂ ಸಾಹಿತ್ಯದ ಎಷ್ಟೊಂದು ಅಭಿರುಚಿ ಇತ್ತು ಎಂಬುವುದನ್ನು ಎಲ್ಲರೂ ಬಲ್ಲರು. ಅವರು ಇದಕ್ಕೆ ಚಾಲನಶಕ್ತಿ ಆಗಿದ್ದವರು. ಹಗಲೂ ರಾತ್ರಿ ಒಂದೇ ಶ್ರುತಿ, ದಖನಿ ಸಂಸ್ಕೃತಿ ಹಾಗೂ ಸಾಹಿತ್ಯದ ಹುಗಿದಿಟ್ಟ ಖಜಾನೆ ಮುಂದೆ ಬರಬೇಕು. ದಿವಂಗತರು ಆ ಎಲ್ಲ ಹುಗಿದಿಟ್ಟ ಖಜಾನೆಗಳನ್ನು ಹೊರ ತಂದರು. ಕೆಲಸ ಮಾಡುವವರನ್ನು ಸೇರಿಸಿದರು, ಅವರಿಗೆ ಸಾಹಸ ಕೊಟ್ಟರು. ಕೆಲಸ ಮಾಡುವರ ಜೊತೆಯಲ್ಲಿ ಕುಳಿತು ಕೆಲಸದಲ್ಲಿ ಆಸಕ್ತಿತುಂಬುವ ಹಾಗೆ ಮಾಡುತ್ತಿದ್ದರು. ಅನೇಕ ಪುಸ್ತಕಗಳು ಅವರು ಜೀವಂತ ಇರುವಾಗಲೇ ಮುದ್ರಿಸಲ್ಪಟ್ಟಿದ್ದವು,

ಉಳಿದುಕೊಂಡಿರುವುದನ್ನು ಈಗ ಮುದ್ರಿಸಲಾಗುತ್ತಿದೆ ಮುಂದೆಯೂ ಮುದ್ರಿಸಲ್ಪಡುತ್ತವೆ. ಇವೆಲ್ಲವೂ ದಿವಂಗತ ನವಾಬರ ಹೃತ್ಪೂರ್ವಕ ಆಸೆಯ ಫಲ. ಭಗವಂತ ಅವರ ಮೇಲೆ ತನ್ನ ಕೃಪೆಗಳನ್ನು ಇಳಿಸಲಿ.

ಸಿದ್ದೀಖಿ

ಸಿದ್ದೀಖಿ ವಿಲಾ ಹಿಮಾಯತ್ ನಗರ್ ಮೇ ೧೯೫೫

■

*

ಅಧ್ಯಾಯ – ೧

ಬಿಸ್ಮಿಲ್ಲಾಹಿರ್ರಹಮಾನಿರ್ರಹೀಂ
ಪರಮದಯಾಳುವೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ
ದೇವಸ್ತುತಿ
ಮೊದಲಿಗೆ ಭಗವಂತನ ದೇವಸ್ತುತಿಯಿಂದ, ಅವನು ಮೊದಲನೆಯದಿನವೇ
ಶೌರ್ಯಕ್ಕೆ ದೇವಾನುಗ್ರಹದಿಂದ ಶಕ್ತಿಯನ್ನು ಕೊಟ್ಟ
ಈ ವಿಜಯದ ಕೃತಿಯನ್ನು ಅಲಿನಾಮವೆಂದು ನಾಮಕರಣ ಮಾಡಿದೆ
ಅದರ ಪ್ರತಿಯೊಂದು ರಣರಂಗವು ರುಸ್ತುಮಿನ ಕತ್ತಿನ ಕಂಠಕಡಗವಾಯಿತು

* * *

ಆ ಮಹಿಮಾವಂತನಿಗೆ ಎಷ್ಟೊಂದು ಪ್ರಶಂಸಿದರೂ ಪೂರ್ಣವಾಗದು, ಅವನೇ ಆ ನಿರಾಧಾರರಿಗೆ ಆಧಾರವಾಗಿರುವನು. ಅವನೇ ರುಸ್ತುಮಿನ ಹಸ್ತದಲ್ಲಿ ಶಕ್ತಿಯನ್ನು ನೀಡಿದವನು ಅದರಿಂದಾಗಿ, ನದಿಯ ಹೃದಯದಲ್ಲಿ ಹೆದರಿಕೆಯಿಂದ ಗದ್ದಲ ಉಂಟಾಯಿತು. ಅವಿಧೇಯರನ್ನು ಪರಾಜಿಸುವ ಹಾಗೆ ಮಾಡುವವ, ಕಾಂಕ್ಷಕನ ಇಚ್ಛೆಯನ್ನು ಅಪೇಕ್ಷಿತನೇಕೊಡುವನು. ಹಿರಿತನವನ್ನು ನೋಡಿ ತಗ್ಗನ್ನು ಕೊಟ್ಟ, ವಿಜಯದಲ್ಲಿ ಅವನಿಗೆ ಮುನ್ನಡೆ ಕೊಟ್ಟ. ನೀನು ಯಾರಿಗೆ ಖಡ್ಗದ ಬಲ ಕೊಟ್ಟಿದಿಯೋ, ಅವನು ಹುಲಿಸಮಾನವಿದ್ದರೂ ಸಹ ಜಯಿಸಲು ಸಾಧ್ಯವಿಲ್ಲ. ನೀನೇ ದೊಡ್ಡ ಗಿಡುಗನಿಗೆ ಕಾಲುಬೆರಳುಗಳನ್ನು ಕೊಟ್ಟೆ, ವೇಗದಿಂದ ಹಾರಾಡುವ ಪಕ್ಷಿಯ ಅತಿದೊಡ್ಡ ಗರಿಗೆ ಖಡ್ಗ ಕೊಟ್ಟೆ. ಹೇ ನನ್ನೊಡೆಯಾ ನೀನು ಬಲಶಾಲಿ, ನಿನ್ನ ಶಕ್ತಿ ಮುಗಿಯುವುದಿಲ್ಲ, ನೀನು ಕೊಡದೇನೇ ಇದ್ದಿದ್ದರೇ ಯಾರಿಗೂ ಸಹ ಸ್ವಲ್ಪವೂ ಇಚ್ಛೆಯಾಗುತಿತ್ತೇ. ಚಿಕ್ಕವರು ಮತ್ತು ದೊಡ್ಡವರಲ್ಲಿ ನೀನೇಬದಿ ಹಾಕಿದೆ, ಇಬ್ಬರಲ್ಲೂ ನೀನು ಖಡ್ಗದ ಕಟ್ಟೆಯನ್ನು ಕಟ್ಟಿದೆ. ಯಾರೂ ಸಹ ಯಾರ ಮಿತಿಯನ್ನು ದಾಟಿ ಬರಲಾರೆವು, ಬಂದರೂ ಸಹ ಮತ್ತೆ ಮರಳಿ ಹೋಗಲಾರೆವು. ಸತ್ಯತಿಳಿದವನಿಗೆ ನೀನೆ ಬಲ

ಕೊಡುವೆ, ಅಮಲೇರಿದವನಿಗೆ ಗರ್ವಿಷ್ಟದ ದುಷ್ಟಟ ಕೊಡುವೆ. ದುಷ್ಟ ಎಂದಾದರು ಶಕ್ತಿ ಪಡೆದರೆ, ಇರುವೆಗೆ ರೆಕ್ಕೆ ಬರುವ ಹಾಗೆ ಅವನಿಗೆ ವಿಪತ್ತನ್ನು ಕೊಡುವೆ. ನಡೆದಾಗಲೆಲ್ಲ ಪ್ರತಿಯೊಂದು ಹೆಜ್ಜೆಯೂ ಸಹ ಚೇತರಿಸುತ್ತ ಇಟ್ಟ, ಆದರೆ ಮೇಲೆ ನೋಡುತ್ತಿದ್ದ ಹಾಗೆಯೇ ಬೇಗಬೇಗನೆ ನಿತ್ಯವೂ ಓಡಿದ. ನಿನ್ನ ನ್ಯಾಯ ಆಕಾಶದೊಂದಿಗೆ ತಿರುಗಿತ್ತಿರುತ್ತಿದೆ, ಇರುಳಾಗಿದ್ದರೆ ಬೆಳಕು ತುಂಬಿದ ಹಗಲನ್ನು ಮಾಡುವೆ. ನೀನು ಸಾವಿಗೆ ಸಂಪೂರ್ಣ ಹತೋಟಿ ನೀಡಿದಾಗ, ಖಡ್ಗವನ್ನು ನ್ಯಾಯದ ಒಡೆಯನನ್ನಾಗಿ ಮಾಡಿದೆ. ದುಷ್ಟರಿಗೆ ನೀನೆ ಕಾರಾಗೃಹದಲ್ಲಿ ಇಡುವೆ, ನೀನೇ ಎಲ್ಲರಮೇಲೆ ಕ್ರೋಧ ಹಾಗೂ ದಯೆ ತೋರುವೆ. ನಿನ್ನ ಯಾವ ಕಾರ್ಯವೂ ಚಾತುರ್ಯದಿಂದ ಖಾಲಿ ಇಲ್ಲ, ನಿನ್ನ ಕ್ರೋಧದಲ್ಲೂ ಸಹ ದಯೆ ತುಂಬಿರುತ್ತದೆ. ತೂರಿನ ಬೆಟ್ಟವನ್ನು ಸುಟ್ಟು ಅಂಜನ ಮಾಡಿದರು ಸಹ, ಅದನ್ನು ಲೋಕದಲ್ಲಿ ಜ್ಯೋತಿಯನ್ನು ಹರಡಿಸುವ ಸ್ಥಳವನ್ನು ನೀಡಿದೆ. ನಿನ್ನ ಕೆಲಸ ನಿನಗೇನೆ ಯೋಗ್ಯವಾಗುತ್ತದೆ, ಯಾರು ಇಲ್ಲಿ ಪ್ರೌಢತೆಯನ್ನು ತೋರುವರೋ ಅದೆಲ್ಲ ನಿಷ್ಪ್ರಯೋಜಕ. ಖಡ್ಗಕ್ಕೆ ನೀನೇ ದೊಡ್ಡತನ ನೀಡಿದೆ, ಇದನ್ನು ತಿಳಿಯಲು ಲೋಕಕ್ಕೆ ಎಲ್ಲವನ್ನು ನೀಡಿದೆ. ಖಡ್ಗದ ಹರಿತದಲ್ಲಿ ನೀನು ಅಗ್ನಿ ಇಟ್ಟಿರುವೆ, ಖಡ್ಗದ ಮುಂದೆ ನೀನು ಲೋಕವನ್ನು ಬಾಗಿಸಿದೆ. ಇದನ್ನು ಯಾರು ತೆಗೆದುಕೊಳ್ಳುತ್ತಾನೋ ಅವನು ಮುಂದೆ ಎಲ್ಲು ನಿಲ್ಲುವನಲ್ಲ, ಅಗ್ನಿಯು ಜಲದ ಸಾವನ್ನು ಸ್ವಿಕರಿಸುತ್ತದೆ. ಖಡ್ಗವಿದ್ದರೆ ಅದರ ಮುಂದೆ ಐಶ್ವರ್ಯವೂ ವ್ಯರ್ಥ. ಒಂದು ಖಡ್ಗದಿಂದ ನೀನು ಲಕ್ಷಾಂತರ ಮುತ್ತುಗಳನ್ನು ನೀಡಬಲ್ಲೆ. ಖಡ್ಗದ ಹರಿತಕ್ಕೆ ನೀನು ದೊಡ್ಡ ಶಕ್ತಿಯನ್ನು ನೀಡಿದೆ, ಇದೊಂದು ಖಜಾನೆಯಿಂದ ಲಕ್ಷಾಂತರ ವಸಂತದ ಖಜಾನೆಗಳನ್ನು ಪಡೆಯಬಹುದು. ಖಡ್ಗಕ್ಕೆ ನೀನು ಪೂರ್ಣ ಸಂಧಿಯ ಕೃತಿ ಮಾಡಿದೆ, ಎಲ್ಲೋ ಧ್ವಜವನ್ನು ಕೊಟ್ಟು ಗುಲ್ಲನ್ನೆಬ್ಬಿಸಿದೆ. ಖಡ್ಗಕ್ಕೆ ನೀನು ಪ್ರಯಾಣದ ಸಂಗಾತಿ ಮಾಡಿದೆ, ಖಡ್ಗವಿಲ್ಲದಿದ್ದರೆ ಐಶ್ವರ್ಯಕ್ಕೆ ಎಲ್ಲ ರೀತಿಯ ಶತ್ರುಗಳು ಹುಟ್ಟುತ್ತದೆ. ಖಡ್ಗಕ್ಕಿಂತ ಬೇರೆ ಯಾರೂ ಆತ್ಮೀಯ ಸ್ನೇಹಿತನಾಗಲು ಸಾಧ್ಯವಿಲ್ಲ, ಖಡ್ಗದಿಂದಲೇ ಆತ್ಮೀಯ ಸ್ನೇಹಿತನಿಗೆ ಶಕ್ತಿ ಬರುತ್ತದೆ. ಖಡ್ಗದಿಂದಲೇ ಎಲ್ಲರಿಂದ ದೊಡ್ಡ ಮನುಷ್ಯನಾಗುವನು. ಖಡ್ಗದಿಂದಲೇ ಅಹಂಕಾರವನ್ನು ಕಡಿಮೆ ಮಾಡಬಹುದು, ಇದರ ಮುಂದೆ ಅಮಲೇರಿದ ಆನೆ ಹಾಗು ಗಂಡುಹುಲಿಯು ದೀನಾವಸ್ಥೆಯಲ್ಲಿ ಇರುವವು. ಶಕ್ತಿಶಾಲಿಯ ಮುಂದೆ ಶೈತಾನನೂ ಸಹ ಕೆಳಗಾಗುತ್ತಾನೆ, ನೀನು ಯಾವ ವಸ್ತುವನ್ನು ದೊಡ್ಡಸ್ತಿಕೆ ಕಾರ್ಯಕ್ಕೆ ಸೃಷ್ಟಿಸಿದ್ದಿಯೊ, ಅವನಿಗೆ ಆಯುಧವಿಲ್ಲದೇ ದೊಡ್ಡವನಾಗಿ ಮಾಡಿಲ್ಲ. ಆಕಾಶವನ್ನು ನೀನು ನಕ್ಷತ್ರಗಳಿಂದ ಅಲಂಕರಿಸಿದೆ, ಬೆಳದಿಂಗಳ ಬಾಹ್ಯಾಡಂಬರದಿಂದ ಅದನ್ನು ಪ್ರಕಾಶಮಾಸಿದೆ. ಈ ಖಡ್ಗಕ್ಕೆ ಸೂರ್ಯನಂತಹ ತೇಜಸ್ಸು ನೀಡಿದೆ. ಸೂರ್ಯನಿಗೆ ಹೊಳಪುಳ್ಳ ಕಠಾರಿಗಳನ್ನು ನೀಡಿದೆ, ಸಮುದ್ರದಲ್ಲಿ ಅಲೆಗಳು ಆಯುಧಗಳ ಸೈನ್ಯದ ಹಾಗೆ ಕಾಣುತ್ತದೆ. ನೀರಿನ ಅಲೆ ರತ್ನಗಳ ಆಯುಧಗಳಂತೆ ಕಾಣುತ್ತದೆ, ಅಗ್ನಿಯ ಕೈಗೆ ನೀನು ಸಹಸ್ರಾರು ಕಠಾರಿಗಳನ್ನು ನೀಡಿದೆ, (ಆ ಕಠಾರಿಗಳನ್ನು)

ಪದೆ ಪದೆ ವಾಯು ಮೇಲೆ ಹರಿತಿಸುತ್ತಿರುತ್ತದೆ. ಮೋಡಗಳು ಧಾರಾಕಾರವಾಗಿ ಸುರಿದು ಲೋಕವನ್ನೇ ಮುಳುಗಿಸದಿರಲೆಂದು, ಮಿಂಚಿನ ಗುಡುಗು ಕೈಗೆ ಸಿಡಿಲಿನ ಖಡ್ಗವನ್ನು ಕೊಟ್ಟೆ. ನೀನೇ ಪ್ರತಿದಿನ ಸೂರ್ಯನ ಮುಸುಕನ್ನು ಮಸೆಕಲ್ಲಿನ ಮೇಲೆ ಮಸೆದು, ಸನ್ಮಾನ್ಯ ಜ್ಯೋತಿಯ ಕಠಾರಿಗೆ ಖಡ್ಗದ ಹರಿತವನ್ನು ನೀಡುವೆ. ನೀನು ಗುರಾಣಿಯ ರೂಪವನ್ನು ಹೂವಲ್ಲಿ ಕೊಟ್ಟೆ, ಭಾಲೆಯ ಗುರುತು ಮೊಗ್ಗಿಗೆ ನೀಡಿ ಮೆಚ್ಚುವಹಾಗೆ ಮಾಡಿದೆ. ನೀನು ಹುಲಿಗಳ ಕಾಲಿಗೆ ಕಠಾರಿಯಂತಹ ಉಗುರು ಕೊಟ್ಟೆ, ನಿಸ್ಸಂದೇಹವಾಗಿ ಗದೆಯ ಹಾಗೆ ಕಾಣುವ ಆನೆಗೆ ಕಿವಿ ಕೊಟ್ಟೆ. ಹಾವಿಗೆ ವಿಷದ ಕಠಾರಿ ಕೊಟ್ಟೆ, ನೀನು ಚೇಳಿನ ಕೈಗೆ ಕ್ರೋಧದ ಭಾಲೆಯನ್ನು ಕೊಟ್ಟೆ. ಪ್ರಿಯಕರ ದೃಷ್ಟಿಯಲ್ಲಿ ನೀನು ಹರಿತ ಕೊಟ್ಟೆ, ಸೌಂದರ್ಯದ ಖಡ್ಗದಲ್ಲಿ ಅತ್ಯಾಚಾರವನ್ನು ಕೊಟ್ಟೆ. ಚೆಲುವಿನಲ್ಲಿ ನೀನು ಸೌಂದರ್ಯದ ನೀರನ್ನು ಕೊಟ್ಟು, ಲೋಕದ ಮೇಲೆ ಸೊಬಗಿನ ಖಡ್ಗದ ದರ್ಪ ಇಟ್ಟೆ. ಜೀವದ ದೇಶವನ್ನು ಗೆಲ್ಲಲು ಸುಂದರಿಯರ ನೇತ್ರ, ಅವರಿಗೆ ಬಿಲ್ಲು ಬಾಣದ ಕಣ್ಣುಗಳನ್ನು ನೀನು ಕೊಟ್ಟಿರುವೆ, ಹುಬ್ಬುಗಳನ್ನು ಏರಿಸಿ ಅವರು ಕಣ್ಣು ಹೊಡೆದರೆ, ಒಯ್ಯಾರದ ಬಿಲ್ಲು ಹೃದಯದಲ್ಲಿ ಬಳೆ ಹಾಗೆ ಇಳಿಯುತ್ತದೆ. ನೀನೆ ವ್ಯಾಮೋಹಕ್ಕೆ ತುಂಬ ಶೌರ್ಯ ನೀಡಿದೆ, ನೀನು ಅನುರಾಗಿಯ ಅಂತಸ್ತನ್ನು ಸದೈವ ಉನ್ನತ ಮಾಡಿದೆ. ಸತ್ಯದ ಜೀವ ಖಡ್ಗ, ಅದನ್ನು ಶೂರ ಎಳೆದರೆ, ಲಕ್ಷ ಶಕ್ತಿಯಿದ್ದರೂ ಸಹ ಅಲ್ಲಿ ಬುದ್ಧಿ ಕೀಳವನ್ನೇ ಕಾಣುತ್ತದೆ. ಐಚ್ಛಕದ ಸದ್ಬುದ್ಧಿ ನೀನೆ ನೀಡುವೆ, ನಿಸ್ಸಂದೇಹವಾಗಿ ನವಗಳ(ಹೊಸ) ಗೆಳೆಯ ನೀನೊಬ್ಬನೇ. ಬಲಶಾಲಿಯರ ಶಕ್ತಿಯಿಂದ ನಿನ್ನ ಬಲ ಭಿನ್ನವಾಗಿ ಕಾಣುತ್ತದೆ, ನಿನ್ನ ಕೈ ನಮ್ಮ ಕೈ ಮೇಲೆ ಉನ್ನತವಾಗಿ ಕಾಣುತ್ತದೆ. ನಾವು ನಿಸ್ಸಹಾಯಕರು ಯಾವ ಕೆಲಸ ಮಾಡ ಬಲ್ಲೆವು, ಎಲ್ಲವೂ ನಿನ್ನ ಕೆಲಸ, ಇದೆಲ್ಲ ನಿನ್ನ ಕಲೆ. ಬದ್ಧಿಶಕ್ತಿಯ ಗ್ರಹಣಶಕ್ತಿ ಇಲ್ಲಿ ಬಂದು ದಣಿದಿದೆ, ಒಂದೇ ಒಂದು ಗುಳ್ಳೆಯಲ್ಲಿ ಲೋಕವನ್ನೇ ನೆಲೆಸಿದೆ. ಗಗನ ಒಂದು ನೀರ್ಗುಳ್ಳೆ, ಅದರಲ್ಲಿ ಪ್ರಪಂಚ ಒಂದು ಸುರಂಗ, ನಾಶವಾಗುವ ನಿವಾಸಿ ಅದರ ಜೊತೆಯಲ್ಲಿದ್ದಾರೆ. ಯಾರೂ ಸಹ ನಿನ್ನ ಚಾತುರ್ಯ ಕಲಿಯಲು ಸಾಧ್ಯವಿಲ್ಲ, ನಿನ್ನ ಕಲೆಯಲ್ಲಿ ಯಾರೂ ಭಾಗಿಯಾಗಲು ಸಾಧ್ಯವಿಲ್ಲ. ಯಾರು ನಿನ್ನ ಆಳ ಹುಡುಕವನೋ ಅವನು ವಿಫಲವಾಗುವನು, ನಿನ್ನ ಕಾರ್ಯ ನಿನಗೇನೆ ಯೋಗ್ಯವಾಗುತ್ತದೆ. ಯಾರು ಆ ಪರಿಪೂರ್ಣತೆಯನ್ನು ತಿಳಿಯಲು ಬಯಸುತ್ತಾನೆಯೋ, ಅವನನ್ನು ಹಾನಿಯ ಕಡೆ ತೆಗೆದುಕೊಂಡು ಹೋಗುತ್ತದೆ. ನೀನು ಮೊದಲಿಂದ ಕೊನೆಯವರಿಗೂ ನಿತ್ಯ ಕೌಶಲ್ಯ, ನಿನ್ನ ಅಸ್ತಿತ್ವಕ್ಕೆ ನಷ್ಟವೂ ಇಲ್ಲ ಅಥವಾ ಪತನವೂ ಇಲ್ಲ. ಎಷ್ಟೊಂದು ಜೀವಿಗಳಿವೆಯೋ ಎಲ್ಲ ನಿನ್ನ ಅಸ್ತಿತ್ವದ ಅವಲಂಬಿತರು, ಮರಗಿಡಗಳನ್ನಾಗಲಿ ಅಥವಾ ಜಡವಸ್ತುಗಳದೇಯಾಗಿರಲಿ. ಪ್ರತಿಯೊಂದು ಚಿತ್ರ ನೀನು ಲೇಖಣಿಯಿಲ್ಲದೇ ಬರಿಯುವವನು, ಬಿಳಿ ಬಣ್ಣದಿಂದ ಅನೇಕ ಬಣ್ಣಗಳು ಸದೈವವಾಗಿ ಅಗುವುವು. ನೀನು ದೇಹದಲ್ಲಿ ಸಹಸ್ರಾರ ಸಂಯೋಗಗೊಂಡ

ಅಂಗಾಂಗಳನ್ನಿಟ್ಟು, ಎಲ್ಲವನ್ನೂ ಒಂದು ಜಾಗದಲ್ಲಿಟ್ಟು ಕ್ರೋಢಿಕರಿಸಿದೆ. ಆ ಎಲ್ಲ ಸಂಯೋಗಗಳ ಕಾರ್ಯಾಚರಣ ಶಕ್ತಿಗೆ, ಆತ್ಮದ ಕೈಗೆ ನೀನು ಒಂದು ಸವಾರನನ್ನು ಕೊಟ್ಟೆ, ನಿನ್ನ ಚಾತುರ್ಯಗಳನ್ನು ನೋಡಿ ಚಿಂತನೆ ಉಂಟಾಗುತ್ತದೆ, ಸಂಯೋಗಗಳೆಲ್ಲ ಚಲಿಸುತ್ತವೆ ಆದರೆ ಸವಾರ ಕಾಣುವುದಿಲ್ಲ. ಒಳ್ಳೆ ಚಾತುರ್ಯದಿಂದ ಮಣ್ಣಿನ ದೇಹವನ್ನು ಮಾಡಿದೆ, ಮತ್ತು ಅದರ ಪ್ರತಿಯೊಂದು ಕೂದಲಿನಲ್ಲಿ ಎಂತಹ ಗಾಳಿ ಊದಿದೆ, ಅವನು ಯಾರೆಂದು ನೋಡುವುದಿಲ್ಲ ಹಾಗೂ ಗುರುತಿಸುವುದಿಲ್ಲ, ಆದರೂ ನಿಸ್ಸಂದೇಹವಾಗಿ ಅವನಿಗೆ ಪ್ರೀತಿಸುವರು. ಬಹಿರಂಗವಾಗಿ ಗರುತಿಸಲು ದೇಹ ಮಾಡಿದೆ, ಯಾರು ಅಪರಿಚತನೋ ಅವನಿಂದ ಪ್ರೀತಿವಾತ್ಸಲ್ಯ ಕೊಟ್ಟೆ. ಪರಿಚಿತನಿಗೆ ಒಬ್ಬ ಅಪರಿಚಿತ ತಿರಸ್ಕರಿಸಿದರೆ, ಮತ್ತೆ ಆ ಪರಿಚಿತನಿಗೆ ಯಾರೂ ದಿಟ್ಟಿಸಿ ನೋಡುವುದಿಲ್ಲ. ನಮ್ಮ ಬುದ್ಧಿಯು ನಿನ್ನ ಸಂಯೊಗಗಳ ಮುಂದೆ, ಅಗಣಿತ ಪರ್ವತದ ಮೇಲೆ ಇರುವ ಹಾಗೆ. ನಿನ್ನ ಏಕದೇವವಾದ ಮೇಲೆ ಎಲ್ಲರ ಸಮ್ಮತಿ ಇದೆ, ಏಕದೇವ ವಿಶ್ವಾಸಿ ಹಾಗೂ ನಾಸ್ತಿಕರಲ್ಲಿ ಇಲ್ಲಿ ಕಾಪಟ್ಯವಿಲ್ಲ. ಮಸೀತಿ ಮಂದಿರದ ದೇವ ನೀನೆ, ವೈರತ್ವ ಹಾಗೂ ಸಂಧಾನದ ಕಾರಣವೇ ಇಲ್ಲ. ನಿನ್ನ ಆಳವನ್ನು ಪಡೆಯುವುದರಲ್ಲಿ ಇಡೀ ಲೋಕವೇ ಮುಳುಗಿದೆ, ನಿನ್ನನ್ನು ಗುರುತಿಸಲು ವ್ಯತ್ಯಾಸ ಮಾಡಿಕೊಳ್ಳುವರಿಗೆ ವ್ಯತ್ಯಾಸವಾಗುತ್ತಿದೆ. ಯಾರೂ ಸಹ ನಿನ್ನ ಅಸ್ತಿತ್ವವನ್ನು ಪಡೆದಿಲ್ಲ ಕೇವಲ ನಿನ್ನ ಗುಣವಿಶೇಷತೆಗಳನ್ನು ಪಡೆದರು, ಪ್ರತಿಯೊಂದು ಗುಟ್ಟಲ್ಲಿ ಗಟ್ಟಿಯಾಗಬೇಕು ಏಕೆಂದರೆ ಮಾತಿನಿಂದ ಎಲ್ಲ ರೀತಿ ಮಾತು ಬರುತ್ತದೆ. ನಾನು ಚಿಂತಿಸಿ ಯಾವುದನ್ನು ನೋಡುತ್ತೇನೋ, ಲೋಕದ ಎಲ್ಲ ಮನೆಯಲ್ಲಿ ದೇವರೇ ನೀನೇ ಕಾಣುವೆ. ಹಾಗೆ ನೋಡಿದರೆ ನಾವು ನಿಜವಾದ ಜೀವನ ಪದ್ದತಿಗೆ ಅರ್ಹವಾಗದೇ ಇದ್ದರೂ ಸಹ, ಆದರೂ ನಿನ್ನ ಏಕತೆಯನ್ನು ಒಪ್ಪಿಕೊಳ್ಳುವವನಾಗಿರಲಿ. ನಿನ್ನ ಜಿವರಾಶಿಯ ಉತ್ಕೃಷ್ಟಗುರುತನ್ನು ನೋಡಿ, ಎಲ್ಲರೂ ನಿಸ್ಸಂದೇಹವಾಗಿ ನಿನ್ನನ್ನು ಸೃಷ್ಟಿಕರ್ತ ಎನ್ನುತ್ತಾರೆ. ಲೋಕದಲ್ಲಿ ಎಷ್ಟೊಂದು ಭೂತ ಪ್ರೇತ, ಮಾನವ, ಮೃಗ ಹಾಗೂ ಪಕ್ಷಿಗಳಿವೆಯೋ ಎಲ್ಲರ ಹೃದಯಗಳು ನಿತ್ಯವೂ ನಿನ್ನ ಧ್ಯಾನದಿಂದ ತುಂಬಿರುತ್ತವೆ. ಯಾವ ಸ್ಥಳವೂ ಸಹ ನಿನ್ನ ಅಸ್ತಿತ್ವದಿಂದ ಖಾಲಿ ಇಲ್ಲ. ಯಾವ ಹೂವೂ ಸಹ ನಿನ್ನ ಬಣ್ಣದಿಂದ ಕೂಡದೇ ಇರುವುದಿಲ್ಲ. ನಿನ್ನ ಅಗಣಿತ ದೇವ ಪ್ರಶಂಸೆ ಹೇಳಲು ಯಾರಿಂದಲೂ ಸಾಧ್ಯವಿಲ್ಲ, ಅಂದರೆ ಯಾರಾದರು ಸಮುದ್ರ ಈಜಿ ದಡ ಸೇರಿದ್ದಾನೆಯೋ? ನೀನು ಲಕ್ಷಾಂತರ ಗುಣಗಳಿಂದ ಕೂಡಿರುವನು ಅವುಗಳನ್ನು ಎಣಿಸಲು ಒಂದು ಚೂರು ಸಾಧ್ಯವಿಲ್ಲ, ಆದ್ದರಿಂದ ಓ ನುಸ್ರತಿ ಈಗ ನೀನು ಪ್ರಾರ್ಥನೆ ಮಾಡು.(೧–೭೫)

ಪ್ರಾರ್ಥನಾ ಗೀತೆ

ಇದು ಪ್ರಾರ್ಥನಾ ಗೀತೆ ಸಮರ್ಪಕವಾದ ಅವಶ್ಯಕತೆಗಳನ್ನು ಪೂರೈಸುವವ (ಅಲ್ಲಾಹ್)ನಿಗಾಗಿ ಅವನ ಕೃಪೆಗಳಿಂದ ಇಡೀ ಜಗತ್ತೇ ದಾಹ ನಿವಾರಿಸುತ್ತಿದೆ

ಹೇ ನನ್ನ ದೇವಾ ಇಡೀ ಲೋಕಕ್ಕೆಯೆ ಕೃಪೆ ಮಾಡುವವನು, ನಿತ್ಯವೂ ನೀನು ಕಣಗಳನ್ನು ಅದೃಷ್ಟಶಾಲಿ ಮಾಡುವನು. ನೀನು ಚತುರ ದೃಷ್ಟಿ ಉಳ್ಳವ ಪ್ರಾಚೀನ ಹಾಗೂ ಯುಕ್ತಿಜ್ಞ, ನೀನು ತೀಕ್ಷ್ಣ ಬುದ್ಧಿಯ ಪರಿಪೂರ್ಣನು, ನಿನ್ನ ವಿವೇಕ ಮಹಾನ್. ನೀನು ಹಸ್ತದಹಾಗೆ ಒಟ್ಟು ಐದು ದಿನ ನೀಡಿದೆ, ಸುಳ್ಳು ಮತ್ತು ನಿಜದಲ್ಲಿ ಗುರುತಿಸುವವನೇನು ಇಲ್ಲ. ಝುಲೂಮನ್ ಜಹೂಲಾ ಎಂದು ಕುರಾನಿನಲ್ಲಿ ನೀನು ಏನನ್ನು ನಮ್ಮ ಗೌರವದಲ್ಲಿ ಹೇಳಿರುವೆ ಅವೆಲ್ಲ ನಿಜ. ನಾವು ಏನು ಮತ್ತು ನಮ್ಮ ಬುದ್ಧಿಯೂ ಏನು, ಮತ್ತು ಇವು ಎರಡುವೇ ವಿನಾಕಾರಣ ಕೆಲಸಕ್ಕೆ ಬರುವುದಲ್ಲ. ಅಜ್ಞಾನದ ಲೋಕದಿಂದ ಹೊರಬರಲು ಸಾಧ್ಯವಿಲ್ಲ, ಏಕೆಂದರೆ ನಾವು ಸ್ವಾರ್ಥಿ ಹಾಗೂ ಅತ್ಯಾಚಾರಿಗಳು. ನಾವು ಜ್ಯೋತಿಯನ್ನು ಬೀಸುಹಾಕಿ ಕತ್ತಲಲ್ಲಿ ಮುಖ ಮುಚ್ಚಿಕೊಂಡಿದ್ದೇವೆ. ಗೋರಿಯ ಇರುಳನ್ನು ಚಂದ್ರ ಏನು ಲಾಭ ಕೊಡಬಲ್ಲ? ಅಯ್ಯೋ! ಒಳ್ಳೆ ದೃಷ್ಟಿಯಿಂದ ವಿವಶವಾದೆವು, ಅಯ್ಯೋ! ರಾಜಮಾರ್ಗವನ್ನು ಮರೆತು ಬಲು ದೂರ ಬಂದೆವು. ನೀನು ಆ ಮಾರ್ಗ ತೋರಿಸು ನನಗೆ ದಯೆ ತೋರಿಸು, ಕೊನೆರಾತ್ರಿಯಲ್ಲಿ ನನ್ನ ಹೆಜ್ಜೆ ಹೋಗತಕ್ಕ ಸ್ಥಳಕ್ಕೆ ಸೇರಲಿ. ಧನಿಕ ನೀನು ನಿನ್ನ ಬಳಿ ಏನಾದರು ಅಲ್ಪ ಖಜಾನೆಗಳಿವಿಯೆ? ನಮ್ಮ ಅನಾರಾಧನೆಯಿಂದ ನಿನಗೇನಾದರು ಕೊರತೆಉಂಟಾಗುತ್ತದೆಯೆ. ಅಲ್ಲಿ ಶತ್ರುಗಳಲ್ಲಿ ಅಭಿನಂದಿಸಲು ಈ ಸಂಪ್ರದಾಯ, ಇಲ್ಲಿ ನೀನು ನಮಗೆ ಇಂದು ಆರಾಧನೆ ತಂದಿರುವೆ. ಇಷ್ಟೆಲ್ಲವಿದ್ದರೂ ನಮ್ಮಲ್ಲಿ ಆ ಅಜ್ಞಾನ ಸಂಯೋಗಗೊಂಡಿದೆ, ಅದು ಒಂದು ಕ್ಷಣಕ್ಕೂ ಸಹ ಒಳ್ಳೆಯದಕ್ಕೆ ಉಪಯೋಗಕ್ಕೆ ಬರುವುದಿಲ್ಲ. ಕೊನೆಗೆ ನಿನ್ನ ಸತ್ಯವಾದಿಗಳು ಆರಾಧನೆಗಳ ಉಡುಗೊರೆಗಳನ್ನು ತಟ್ಟೆಗಳಲ್ಲಿ ತುಂಬಿ ತುಂಬಿ ತರುವರು. ಆರಾಧನೆಯ ಬದಲಾಗಿ ನಾನು ಕೇವಲ ಪಾಪಗಳನ್ನೇ ಮಾಡಿರುವೆ, ವಿಷಾದ ನಾನು ಈ ಕ್ಷಣದಲ್ಲಿ ಏನನ್ನು ತೆಗೆದುಕೊಂಡು ಹೋಗಲಿ. ನನ್ನ ಪಾಪಗಳ ಮೇಲೆ ದೀನತೆ ಮುಚ್ಚಿ ತಂದೆ, ಇದರಲ್ಲಿ ಇಣುಕಿ ನೋಡುವುದರಲ್ಲಿ ಏನು ಪ್ರಯೋಜನ ಇಲ್ಲ. ಅಗೋಚರ ತಿಳಿದವನೇ ಇದರ ಮೇಲಿಂದ ಮುಚ್ಚಳ ತೆರೆಯ ಬೇಡ. ಶತ್ರಗಳಲ್ಲಿ ನೀನು ದೋಷಗಳನ್ನು ಅಡಗಿಸುವವನಾಗಿದಿಯ. ಒಂದು ಮುಷ್ಠಿ ಮಣ್ಣಿನಿಂದ ಜನ್ಮತಾಳಿದ ದೀನ ನಾನು, ನೀನು ಒಡೆಯ, ನಿನ್ನ ನಿರ್ಮಲ ಆತ್ಮವನ್ನು ಇಟ್ಟೆ. ದೀನನ ಕೈಯಲ್ಲಿ ಯಾವ ಮಂತ್ರಾಲೋಚನೆ ಇದೆ, ನೀನು ಸರ್ವಾಧಿಕಾರಿ, ನನ್ನ ಮೇಲೆ ತಪ್ಪೇನಿದೆ. ನನಗೆ ಒಳ್ಳೆಯ ಕೆಲಸ ಮಾಡುವ ಶಕ್ತಿ ಕೊಡು, ಪಾರಮಾರ್ಥ ಮೇಲೆ ಖಾಯಂ ಇರಲು ಸತ್ಯಾನ್ವೇಷಣೆಯನ್ನು ಕೊಡು. ನನ್ನ ಅತ್ಯಾಸೆಯಿಂದ ನನಗೆ ಕೆಟ್ಟವನನ್ನಾಗಿ ಮಾಡಬೇಡ,

ಜೀವನ ಪದ್ಧತಿ ಹಾಗೂ ಪ್ರಪಂಚದಲ್ಲಿ ನನ್ನ ಮರ್ಯಾದೆ ಕಾಪಾಡು. ಪ್ರಪಂಚದಲ್ಲಿ ನನಗೆ ಸಂತೃಪ್ತಿಯ ಭಂಡಾರ ಕೊಡು. ನನ್ನ ಹೃದಯವನ್ನು ತಾಳ್ಮೆಯ ಇಷ್ಟವಾದಂತ ಮನೆ ಮಾಡು. ಪರಿಶ್ರಮದ ಈ ಪ್ರಪಂಚದ ಎಲ್ಲ ಧೂಳನ್ನು ಕೊಡಹು, ನನ್ನ ಹೃದಯದ ಸೆರಗನ್ನು ನಿರ್ಮಲ ಹೂವಾಗಿ ಮಾಡು. ನನಗೆ ಆಸೆಯ ದಾಹ ಕೊಡ ಬೇಡ, ನನ್ನ ಮಾನ ಮರ್ಯಾದೆಯನ್ನು ಕುಗ್ಗಿಸ(ಕಳೆಯ)ಬೇಡ. ಧಿಕ್ಕಾರದಿಂದ ನನಗೆ ಕಸಕಡ್ಡಿಯಂತೆ ಓಡಾಡಿಸ ಬೇಡ, ನೀನು ಇಷ್ಟಾರ್ಥ ಸಿದ್ದಿಯಾಗು ಇದೇ ನನಗೆ ಸಾಕು. ಹೇ ನನ್ನ ದೇವಾ! ನನ್ನನ್ನು ನಿನ್ನ ಧರ್ಮ ನಿರ್ವಹಣೆ ಮಾಡು, ಎರಡು ಲೋಕಗಳಲ್ಲಿ ನೀನು ಕೊಟ್ಟಿದ್ದನ್ನು ಕೆಲಸಕ್ಕೆ ಬರಲಿ. ನೀನು ನೀಡದಿದ್ದರೆ ಈ ಪ್ರಪಂಚದಲ್ಲಿ ಏನಾಗುತ್ತದೆ, ಈ ಭೂಮಿ ಆಕಾಶ ನಿನ್ನ ದಯೆಯಿಂದಲೇ ಸುಖವಾಗಿವೆ. ನನ್ನ ಹೃದಯವನ್ನು ಈ ಪ್ರಪಂಚದಿಂದ ಸ್ವಚ್ಛಂದ ಮಾಡು, ನಿನ್ನ ಕೃಪೆಯಿಂದ ಭಾಗ್ಯಶಾಲಿ ಮಾಡು, ಈ ಅಧಮ ಪ್ರಪಂಚದ ವ್ಯಾಮೋಹ ಒಮ್ಮೆಲೇ ಕಲ್ಮಶದಲ್ಲಿ ಸಿಕ್ಕಿಸಿ ಕೊಂಡಿದೆ, ಕೊನೆಗೆ ಇದರಲ್ಲಿ ನನ್ನನ್ನು ನಾಶಮಾಡಬೇಡ. ಏಕೆಂದರೆ ಆತ್ಮ ಶುದ್ಧವಾದದ್ದು, ಇದನ್ನು ಕೊಳೆಯಿಂದ ದೂರವಿಡು. ನನ್ನ ನೇತ್ರಗಳಿಗೆ ಸಾಕಷ್ಟು ಜ್ಯೋತಿ ಕೊಡು, ಅದರಿಂದ ನಿನ್ನ ದಿವ್ಯಪ್ರಕಾಶ ನೋಡುವ ಹಾಗೆ ಮಾಡು. ನನ್ನ ಹೃತ್ಪೂರ್ವಕ ಭಾವನೆಗಳನ್ನು ಕೇಳುವಂತಹ ವೀಕ್ಷಕರನ್ನು ಕೊಡು. ಅವರ ಮೈಮೇಲಿರುವ ಪ್ರತಿಯೊಂದು ರೋಮವು ಜಾಗೃತಿಯುಂಟಾಗಲಿ. ನಿತ್ಯವೂ ನಿನ್ನ ಧ್ಯಾನದ ಜೇನುಹನಿ ಸೇರುವಂತಿರಲಿ, ನಿನ್ನ ಪ್ರೀತಿಯಲ್ಲಿ ನನ್ನ ಹೃದಯವನ್ನು ಮೇಣದಂತೆ ಮಾಡು. ನನ್ನ ಪ್ರಕೃತಿ ಸ್ವಭಾವದ ಹೂವಲ್ಲಿ ನಿನ್ನ ಬಣ್ಣ ಮತ್ತು ರಸ ತುಂಬಿರಲಿ, ಬಹಿರಂಗ ಮತ್ತು ಅಂತರಂಗಕ್ಕೆ ನಿತ್ಯ ನೀನೇ ಸಾಕು. ಪ್ರತಿಯೊಂದು ವಸ್ತುವಿನಲ್ಲಿ ನೀನೆ ಪ್ರಿಯ ಕಾಣುವ ಹಾಗೆ ನನ್ನ ಕಣ್ಣುಗಳಲ್ಲಿ ದಿವ್ಯಜ್ಞಾನದ ಅಂಜನ ಹಚ್ಚು. ನಾನು ಪರವಶನಾಗಿ ಎರಡು ಲೋಕಗಳ ಲೆಕ್ಕ ಮರೆಯುವಂತಾಗುವ ನಿನ್ನ ಮೋಹದ ಮದ್ಯ ಕುಡಿಸು. ನನ್ನ ತುಟಿಗಳಿಂದ ಪರಿಣಾಮಕಾರಿ ನುಡಿಯನ್ನು ಹೊರಡಿಸು, ಅದು ಪ್ರತಿಯೊಂದು ಮಾತು ಸಹ ಮದ್ಯಕುಡಿಯುವವರಿಗೆ ಮಧುಪಾತ್ರೆಯಾಗಲಿ. ಪ್ರಭಾವ ಬೀರುವಂತಹ ಪ್ರಸಕ್ತಕ್ಕೆ ವಾದವನ್ನು ಕೊಡು. ಹೃದಯಗಳಿಗೆ ನಿತ್ಯ ಈ ವಾದದಿಂದ ಪ್ರಸಕ್ತವನ್ನು ಕೊಡು. ನನ್ನ ಜೀವದಲ್ಲಿ ಸದಾ ಮಾಟ ತುಂಬು, ನನ್ನ ಈ ಸ್ವರವನ್ನು ಕೇಳಿ ಲೋಕ ಆಜ್ಞಾಪಾಲಕವಾಗಲಿ, ನನ್ನ ಯುಕ್ತದಿಂದ ಪ್ರತಿಯೊಂದು ವಿವೇಚನೆಯನ್ನು ಜೀವಿಸು, ನನ್ನ ಮಾತುಗಳ ಅರ್ಥಗಳಿಂದ ಇಡೀ ಲೋಕವನ್ನು ತುಂಬಿಸು. ನನ್ನ ಮಾತಿನ ಮುಂದೆ ಎಲ್ಲರ ವಾದವಿವಾದ ರದ್ದುಗೊಳಿಸು, ನನ್ನ ಮಾತು ತೀಕ್ಷ್ಣಬುದ್ದಿ ಉಳ್ಳವರಲ್ಲಿ ಸನ್ನದಾಗಿ ಮಾಡು. ನನ್ನ ಶಾಯಿಯನ್ನು ಅಂಧಕಾರದಹಾಗೆ ಮಾಡು, ನನ್ನ ಲೇಖಣಿಯಲ್ಲಿ ಖಿಜ಼ರ್‌ರವರ ಗುಣಗಳನ್ನು ಕೊಡು. ಆ ಅಂಧಕಾರದಲ್ಲಿ ಈ ಖಿಜ಼ರ್ ಹೋದರೆ ಅಮೃತ ಮೋಡಗಳನ್ನಾಗಿ ಸುರಿಯಲಿ. ತೋಟದ ಪ್ರತಿಯೊಂದು ಸಭೆಯಲ್ಲಿ ಮರ್ಯಾದೆ ಉಳಿಸು. ನನ್ನ ಈ ಆನಂದಿತ ಹಡಗಿನ(ಪುಸ್ತಕದ) ಎಲ್ಲ ವಸ್ತುಗಳನ್ನು

ಮೆಚ್ಚಿಸು. ಸೂಕ್ಷ್ಮಮತಿಯ ದೃಷ್ಟಿ ಏನಾದರು ಇಲ್ಲೇನಾದರು ನಿಂತರೆ, ಆಗ ಪ್ರತಿಯೊಂದು ಪದ್ಯದಲ್ಲಿ ಸುಗುಣತೆಯಲ್ಲಿ ತೃಪ್ತಿ ಪಡೆಯುವನು. ನನ್ನ ಚಿಂತನೆಯ ಪರದೆ ಮೇಲೆ ಪ್ರತಿಯೊಂದು ಹೊಸ ವಿಷಯ ನವೀನವಿರಲಿ, ನನ್ನ ಕಲೆಯ ಉದ್ಯಾನಕ್ಕೆ ಎಂತಹ ನೀರು ಕೊಡಬೇಕೆಂದರೆ ಪ್ರತಿಯೊಂದು ಹೂವು ಸಹ ಪನ್ನೀರಿಂದ ತುಂಬಿದ ಚಿಲುಮೆಯಾಗಬೇಕು. ಪ್ರತಿಯೊಂದು ಹೂವಿಗೆ ನೀನು ಎಂತಹ ಬಣ್ಣ ನೀಡಬೇಕೆಂದರೆ, ಮುಂಜಾನೆ ಸೂರ್ಯ ಅದನ್ನು ನೋಡಿ ದಿಗ್ಭ್ರಮಿಸಬೇಕು. ಪದಗಳಲ್ಲಿ ಅರ್ಥಗಳ ರಸವನ್ನು ಹೇಗೆ ತುಂಬ ಬೇಕೆಂದರೆ, ಚಂದ್ರನಿಗೂ ಸಹ ಆ ಅಮೃತವನ್ನು ಕುಡಿಯಬೇಕೆಂಬ ಆಸೆಯಾಗಬೇಕು, ನನ್ನ ಪದ್ಯಗಳು ನನ್ನ ಪ್ರಪಂಚದಲ್ಲಿ ಶಾಶ್ವತವಾಗಿ ಮುದ್ರಿತವಾಗಿ, ಸೂರ್ಯನ ಅಮೂಲ್ಯ ಕಲ್ಲಿನ ಮೇಲೆ ಗಾಂಭೀರ್ಯ ನೆಲೆಗೊಳಿಸಲಿ. ನನ್ನ ತಾಮ್ರವನ್ನು ನಿನ್ನ ಕೃಪೆಯಿಂದ ಬಂಗಾರ ಮಾಡು, ಪ್ರತಿಯೊಂದು ಕಲ್ಲಿಗೂ ಸಹ ಸೂರ್ಯನ ಹಾಗೆ ಹೊಳಪನ್ನು ಕೊಡು. ನನ್ನ ಅತ್ಮಚಿಂತನೆಗಳಿಗೆ ಗಾಳಿಯ ಎತ್ತರ ನೀಡು. ಅಂತಃಕರಣಗಳಿಗೆ ನದಿಯ ನಿತ್ಯ ಅಲೆ ಮಾಡು, ನನ್ನ ನಾಲಿಗೆಯನ್ನು ಹೊಳಪುಳ್ಳ ಖಡ್ಗ ಮಾಡು. ನೀನು ನಿನ್ನ ಕೃಪೆಯಿಂದ ಅದನ್ನು ಹರಿತವಾಗೇ ಇಡು. ಆ ನಾಲಿಗೆ ಸ್ವಲ್ಪವು ಯಾವ ಕಡೆ ಹರಿಯುತ್ತದೆಯೋ, ಅಲ್ಲಿ ಮುಗುಳು ನಗೆಗಳಿಗೆ ದಾರಿಯಾಗಲಿ. ನಿನ್ನ ಕಲೆಯ ಶಕ್ತಿಯಿಂದ ನನಗೆ ಅಮಲೇರಿದಂತೆ ಮಾಡು, ಎಲ್ಲರಲ್ಲಿ ನನ್ನ ಕಲೆ ಪ್ರಬಲವನ್ನಾಗಿ ಮಾಡು. ಎಲ್ಲಿ ಯುದ್ಧವಾಗುತ್ತದೆ ಅಲ್ಲಿ ನನ್ನ ಕೈಯಲ್ಲಿ ಲೇಖಣಿ ಕೊಡು, ಅಲ್ಲಿ ನನ್ನ ಹೆಸರಿನ ಜಯದ ಧ್ವಜ ಹಾರಿಸು. ನನ್ನ ಕಲೆಯಲ್ಲಿ ಪವಾಡಗಳನ್ನು ಹೇಗೆ ಅಡಗಿಸು ಎಂದರೆ ನನ್ನ ಪದ್ಯವನ್ನು ಕೇಳಿದ ಹಾಗೆ ಅಲ್ಲೊಂದು ತಮಾಶೆಯಾಗಬೇಕು. ನನ್ನ ಪದ್ಯ ಲೋಕಕ್ಕೆ ಬಾಯಿಪಾಠ ಮಾಡು, ಈ ಪ್ರತಿಯೊಂದು ಪದ್ಯ ವೀರ ಶೂರರಿಗೆ ಜಪವಾಗಲಿ. ಅರ್ಥಗಳಿಂದ ಪುರುಷರನ್ನು ಮಾಡು, ಯುದ್ಧಾಸಕ್ತಿ ಆಕಾಶಕ್ಕೆ ಕೊಡು. ಧರ್ಮಯುದ್ದ ಮಾಡುವ ಹೊಸ ಹೊಸ ಸತ್ಯನಿಷೇದಿಗಳೊಡನೆ ಯುದ್ದ ಮಾಡುತ್ತಿರುವರು, ಮುಹಮ್ಮದರ(ಸೊ) ಧರ್ಮ ಸದಾ ಕಾಲ ಬಲವಾಗಿರಲಿ. ಈಗ ನಾನು ಆ ಸುಪ್ರಸಿದ್ಧ ಬಾದಶಾಹರ ಪ್ರಶಂಸೆ ಹೇಳುವೆ. ಆ ಖಡ್ಗಕ್ಕೆ ಜಯದಿಂದ ಗೌರವಿಸಲಾಯಿತು. (೭೬–೧೩೫)

■

*

ಅಧ್ಯಾಯ – ೨

ಆ ಉಭಯ ಲೋಕಗಳ ಸರದಾರ ಮಾನವರು ಮತ್ತು ಯಕ್ಷಕರಿಗಾಗಿ ದಿವ್ಯಗ್ರಂಥ ಸಹಿತ ಬಂದ ಪ್ರವಾದಿ, ಇವರ ಜನ್ಮ ತಾಳಿದಾಗ ಹೆದರಿಕೆಯಿಂದ ನಾಸ್ತಿಕತೆಯ ಮೂರ್ತಿಗಳೆಲ್ಲ ಉರುಳಿದವು.

* * *

ನೀನೇ ಈ ಪ್ರಪಂಚ ಹಾಗೂ ಧರ್ಮದ ಚಕ್ರವರ್ತಿ, ಸಾಹಸದ ಪಂಕ್ತಿಯಲ್ಲಿ ಪೀಠ ಅಲಂಕರಿಸಿರುವರೇ, ಶೌರ್ಯಕ್ಕೆ ಸನ್ಮಾನ್ಯತೆ ಕೊಡುವ ಪಕ್ಷ ಸರದಾರ. ಅವರ ಕೈಗೆ ಖಡ್ಗ ಕೊಟ್ಟಾಗ ಅದರ ಗೌರವ ಹೆಚ್ಚಾಯಿತು. ಯಾವ ಪುಣ್ಯ ಕಾರ್ಯಕ್ಕಾಗಿ ದೇವ ನಿಮ್ಮನ್ನು ಸೃಷ್ಟಿಸಿದನೋ ಅಗ ಧರ್ಮಯುದ್ಧದ ಸನ್ಮಾನ್ಯತೆ ಪ್ರಕಟ ಮಾಡಿದ. ನಿನ್ನ ದರ್ಪ ಕೇಳಿ ಒಳ್ಳೆ ಧಾತುಗಳಿಂದ ನಿರ್ಮಿಸಿದ ಲಾತ್‌ನ ಹೆಜ್ಜೆಯು ಸಹ ಭೂಮಿ ಮೇಲೆ ನಿಲ್ಲಲಿಲ್ಲ. ಲಾತ್ ಉಜ್ಞಾಗಳ ಮರ್ಯಾದೆ ಮಣ್ಣಿನ ಪಾಲಾಯಿತು. ಇದೇ ರೀತಿಯಾಗಿ ಸೋಮನಾಥದ ಮೂರ್ತಿಗಳೂ ಸಹಾ ನಾಶವಾದವು. ನೀವು ನಿಮ್ಮ ಹೆಸರನ್ನು ಪ್ರಸಿದ್ಧ ಮಾಡಿದಾಗ ಹೆದರಿಕೆಗಳ ಸಹಸ್ರಾರ ಕಾಲುಗಳು ಕಿತ್ತಿಹೋದವು. ನೀನೊಬ್ಬ ವ್ಯಕ್ತಿ ಎದುರಿಗೆ ಸಾವಿರಾರು ಸಂಖ್ಯೆಯಲ್ಲಿ ಖುರೈಶಿಯರು, ಆದರೆ ಅವರ ಲಕ್ಷಾಂತರ ಸಂಖ್ಯೆಯಲ್ಲಿದ್ದ ಸೈನ್ಯದ ಮೇಲೆ ನೀವು ಭಾರವಾದವರು. ಖುರೈಶಿಯರಲ್ಲಿ ತಾವು ಮಹಾನರೆಂದು ಕರೆಯಲ್ಪಟ್ಟವರು. ಬದರಿನ ಯುದ್ಧದಲ್ಲಿ ನೀವೇ ಜಯ ಸಾಧಿಸಿದವರು. ಅತಿ ಹೆಚ್ಚಾದ ಅಜ್ಞಾನದಿಂದ ಯಾರ ಎದೆ ಶುದ್ಧವಿರಲಿಲ್ಲವೋ ಅವನು ತನ್ನ ರಕ್ತದಿಂದ ಮುಂಡಾಸನ್ನು ಸ್ನಾನಮಾಡಿಸಿದ. ಇಸ್ಲಾಮ್ ನಿಮ್ಮಿಂದ ಶಾಂತಿಯನ್ನು ಒಪ್ಪಿದ, ವ್ಯಾಕುಲಗೊಂಡವರು ನಿಮ್ಮ ಹೆಸರನ್ನು ಸ್ಮರಿಸುವರು. ಖುರೈಷಿಯರಿಗೆ ನಿಮ್ಮಿಂದ ಎಂದೂ ನೆಮ್ಮದಿ ಇರಲಿಲ್ಲ, ಅದ್ದರಿಂದ ಆಗಾಗ ಸೈನ್ಯದೊಡನೆ ನಿಮ್ಮ ಮೇಲೆ ಆಕ್ರಮಣ ನಡೆಸುತ್ತಿದ್ದರು. ಯಾರು ನಿಮ್ಮನ್ನು ಪ್ರವಾದಿಯಾಗಿ ಒಪ್ಪಿದರೊ

ಅವರಿಗೆ ಹೊಸ ಐಶ್ವರ್ಯ ಸಿಕ್ಕಿತು, ನಿಮ್ಮನ್ನು ಅನುಸರಿಸಿದಾಗ ಸನ್ಮಾರ್ಗದರ್ಶನ ಪಡೆದರು. ನಿಮ್ಮ ಪವಾಡಗಳನ್ನು ನೋಡಿ ಸೋತರು, ಮತ್ತೆ ಎಂದಿಗೂ ಅಜ್ಞಾನದ ಅಧೀನರಾಗಲಿಲ್ಲ. ಇಷ್ಟಾದರೂ ಯಾರ ಮನದಿಂದ ಕೊಳೆ ನಿವಾರಿಸಲಿಲ್ಲವೋ ಅವರನ್ನು ಖಡ್ಗದಿಂದ ಹರಿಯುವ ಜಲ ಪ್ರವಾಹದಲ್ಲಿ ಮುಳುಗಿಸಿದೆ. ಯಾವ ಪಂಕ್ತಿಯಲ್ಲಿ ಬೆರಳಿಗೆ ಶಾಶ್ವತ ಇರಲಿಲ್ಲ, ಅಲ್ಲಿ ಕುಳಿತು ನೀನು ವಿದ್ಯೆಯನ್ನು ಸ್ಥಾಪಿಸಿದೆ. ಒಂಭತ್ತು ಖಂಡಗಳ ಚಕ್ರವರ್ತಿ ಎನ್ನಿಸಿಕೊಳ್ಳಲು, ನೀವು ಏಳು ಕೋಟೆಗಳನ್ನು ಗೆದ್ದಿರಿ. ನಿಮ್ಮ ಅರಸೊತ್ತಿಗೆ ಸಪ್ತ ಭೂಖಂಡಗಳ(ಇಡೀ ಪೃಥ್ವಿ)ಲ್ಲಿದೆ, ನಿಮ್ಮನ್ನು ಗೌರವಿಸಲು ಆಕಾಶವೂ ಬಾಗಿದೆ. ನಿನ್ನ ಜ್ಯೋತಿಯಿಂದ ಆತ್ಮವೂ ಅಸ್ತಿತ್ವ ಪಡೆಯಿತು, ಹಾಗೂ ತಮ್ಮ ಕಾರಣದಿಂದಲೇ ಶರೀರದ ಅಸ್ತಿತ್ವ ಪ್ರಕಟವಾಯಿತು. ನಿಮ್ಮ ಸೌಂದರ್ಯ ಅಪ್ರತಿಮ ಮುತ್ತಿನ ಹೊಳಪು, ನಿಮ್ಮ ಆತ್ಮ ನಿಸ್ಸಂದೇಹವಾಗಿ ಗುಲಾಬಿಯ ಹೂವು. ನಿಮ್ಮ ನಿರ್ಮಲ ಉದ್ಯಾನವನದ ವೈಭವ, ಲೌಲಾಕದ ಹೂವನ್ನು ಈ ಪ್ರಪಂಚದಲ್ಲಿ ತಾಜಾ ಮಾಡಿರುವಿರಿ. ಅನಾದಿಯ ಚಿತ್ರಕಾರನೂ ಹರಿದ್ರಲೇಪನವನ್ನು ತೆಗೆದುಕೊಂಡು, ಆತ್ಮಗಳ ಲಾಲಸೆಯ ಚಿತ್ರಗಳನ್ನು ತಾಜಾ ಮಾಡಿದನು. ನಿನ್ನ ಪ್ರೀತಿಯಲ್ಲಿರುವ ಶಕ್ತಿಯನ್ನು ದೇವಚರರು ಗುಟ್ಟನ್ನಾಗಿಡಲಿಲ್ಲ, ಕುಂಚ ಒಂದು ರೀತಿಯಲ್ಲಿ ಏನೂ ಬರೆಯಲು ಸಾಧ್ಯವಾಗಲಿಲ್ಲ. ದೇವಚರರೆಲ್ಲರೂ ನಿನ್ನ ಜ್ಯೋತಿಗೆ ಸಾಷ್ಟಾಂಗವೆರಗಿದರು, ಇಲ್ಲದಿದ್ದರೇ ಆ ಮಣ್ಣಿನ ಅಸ್ತಿತ್ವದಲ್ಲೇನಿತ್ತು. ನಿನ್ನ ಪಾದರಕ್ಷೆಯಿಂದ ಎದ್ದ ಆ ಭೂಮಿಯ ಧೂಳು, ವಿಶ್ವ ಸಿಂಹಾಸನದ ನಯನಗಳಿಗೆ ಕಾಡಿಗೆಯಾಯಿತು. ನಿನ್ನ ಪಾದದಿಂದ ಭೂಮಿಗೆ ಸದಾ ಮರ್ಯಾದೆ, ಈ ಮಾನವರಿಗೆ ನಿನ್ನಿಂದಲೇ ಮರ್ಯಾದೆ ಸಿಕ್ಕಿತು. ನಿನ್ನ ಅನುಯಾಯಿ ವೃಂದದವರ ಮೇಲೆ ದೇವರ ಕೃಪೆ, ಪಾಪಿಷ್ಟ ಸೇವಕರಿಗೆ ಎಂದಿಗೂ ದುಃಖವಿಲ್ಲ. ಒಮ್ಮೆಲೇ ಅವರು ಸಂಪೂರ್ಣ ಕೃಪೆಗಳನ್ನು ಪಡೆಯುವರು, ನಿನ್ನ ಮುಖಾಂತರ ದೇವದರ್ಶನ ಪಡೆಯಬಹುದಾಗಿದೆ. ಸ್ವರ್ಗದ ಪವಿತ್ರ ಔತಣಗಳಲೆಲ್ಲ ಭಾರಿ ರುಚಿಕರ ಊಟಗಳೆಲ್ಲವೂ, ನೀನು ಅನುಮತಿ ಕೊಡದೇ ಇದ್ದರೇ ಯಾರೂ ಸಹ ಅದರ ವಾಸನೆ ಪಡೆಯಲಾರರು. ಖಂಡಿತವಾಗಿಯೂ ಪ್ರವಾದಿಗಳೆಲ್ಲರು ನಿನ್ನ ಪರಪುಷ್ಟರು, ಪ್ರತಿಯೊಂದು ಅನುಯಾಯಿಗಳೆಲ್ಲರೂ ನಿನ್ನ ಹರಿವಾಣದಿಂದ ತುಂಡುಗಳನ್ನು ಹೆಕ್ಕುವರು. ಪ್ರವಾದಿಗಳು ನಿನ್ನ ಅನುಯಾಯಿಗಳ ತಾಜಾಮುಖ ನೋಡಿ ನಿನ್ನ ಧರ್ಮವನ್ನು ಇಚ್ಛೆ ಪಡೆಯುವರು. ಯಾರು ನಿನ್ನ ಅನುಯಾಯಿಯಾಗಿ ಉತ್ಪತ್ತಿಯಾಗಿದ್ದಾನೆಯೋ ಅವನಿಗೆ ನೀನು ಶಿಫಾರಿಸಿ ಬಿಡಿಸಲೇಬೇಕು ಇಲ್ಲದಿದ್ದರೆ ಇದು ಲಜ್ಜೆಯ ಮಾತು. ನಿನ್ನ ಹೆಸರಿಂದ ಇಡೀ ಜಗತ್ತು ಬಿಡುಗಡೆಯನ್ನು ಹೊಂದಲಿದೆ, ಈ ಅಶಕ್ತರಿಗೆ ಶಕ್ತಿ ಎಂದರೆ ಅದು ನಿನ್ನ ಶಿಫಾರಸ್ಸಿನ ಬಲ. ಬೇರೆಯವರೆಲ್ಲ ನಿನ್ನ ಉಮೆದುವಾರರಾಗಿದ್ದಾರೆ ಅಲ್ಲಿ ನೀನು ನಿನ್ನವರನ್ನು ನಿರಾಧಾರವಾಗಿ ಬಿಡಲು ಹೇಗೆ ಸಾಧ್ಯ. ನೀನೇ ಇಂದು ಸರ್ವ ಸಂಪೂರ್ಣದ ಆಜ್ಞಾಧಿಕಾರಿ, ನೀನು ಪ್ರವಾದಿತ್ವದ

ಮುದ್ರೆಯಿಂದ ಪ್ರವಾದಿಗಳ ಬಾದಶಾಹನಾಗಿದ್ದಿಯ. ಇಂದು ಇಡೀ ಬ್ರಹ್ಮಾಂಡದಲ್ಲಿ ಅಲ್ಲಾಹನು ಏನೇನು ಕುಶಲತೆಯಿಂದ ಸೃಷ್ಟಿಸಿದ್ದಾನೆಯೋ ಅವೆಲ್ಲ ನಿನ್ನದೇ ಸೊತ್ತಾಗಿದೆ. ನೀನು ಎರಡು ಮನೆಗಳನ್ನು ಸೇರಿಸಿ ಖರೀದಿಸಿದ್ದಿಯಾ, ಆಕಾಶ ಸೂರ್ಯದಿಂದ ಹಾಗೂ ಸೂರ್ಯ ನಿನ್ನಿಂದ ನಾಚಿಗೆ ಪಡೆಯುತ್ತಿದೆ. ಅನಾದಿ ನಿನ್ನ ಒಬ್ಬ ಹೀನ ಸೇವಕ, ಅನಂತ ನಿನ್ನ ಒಬ್ಬ ಅತ್ಯಂತ ಕೆಳಮಟ್ಟದ ದಾಸ. ನಿನ್ನ ವಿಧೇಯತೆಯಲ್ಲಿ ದೇವಚರರಿರುತ್ತಾರೆ, ನೀನು ತಂದಿರುವ ಆಜ್ಞೆಗಳನ್ನು ಯಕ್ಷ ಹಾಗೂ ಮಾನವರು ಪಾಲಿಸುತ್ತಾರೆ. ಮಾನವನ ಮೇಲೆ ನಿನ್ನ ಮಾತು ಸದಾ ಮಾನ್ಯತೆ ಪಡೆಯುತ್ತದೆ, ಏಕೆಂದರೆ ನಿನ್ನ ಮಾತಲ್ಲಿ ಅವನು ಅಲ್ಲಾಹನ ಮಾತು ಪಡೆಯುತ್ತಾನೆ. ನಿನ್ನ ಪ್ರೇಮದಿಂದ ಲೋಕ ವಿಸ್ತಾರಗೊಂಡಿದೆ, ಎರಡು ಲೋಕಗಳಲ್ಲಿ ಎಂದಿಗೂ ಗಿರಾಕಿಗಳ ಹೆಚ್ಚಳವಿದೆ. ನಿನ್ನ ಗುಟ್ಟು ನಿತ್ತಯವೂ ಜಿಬ್ರೀಲ್ ತಗೆದುಕೊಂಡು ಹೋಗುತ್ತಿದ್ದರು, ಹೀಗೆ ಅವರು ಅಲ್ಲಾಹನ ಸಾಮಿಪ್ಯದಿಂದ ಭಾಗ್ಯಶಾಲಿಯಾದರು. ನಿನ್ನ ಮನಸಲ್ಲಿ ಏನಾದರು ವಿಚಾರ ಬಂದರೆ, ದೇವ ಅದನ್ನು ಕ್ಷಣದಲ್ಲಿ ನಿನ್ನನ್ನು ಒದಗಿಸುತ್ತಿದ್ದ. ನೀನು ನಿನ್ನ ಸಾಹಸವನ್ನು ಎತ್ತರ ಪಡೆಸಿದಾಗ ಈ ಏಳು ಆಕಾಶಗಳ ಕೋಟೆಯನ್ನು ಗೆದ್ದೆ. ಅಲ್ಲಾಹನು ತಾನೇ ನಿಮ್ಮನ್ನು ಜಯಶಾಲಿ ಮಾಡಬೇಕೆಂಬಾಗ ಹಟಾತ್ತನೆ ಅದರ ಚಾವಿಗಳು ನಿಮಗೆ ಕಳುಹಿಸಿಕೊಟ್ಟನು. ಕುದುರೆ ಏರಿ ಏಳು ಕೋಟೆಗಳನ್ನು ಕ್ಷಣದಲ್ಲಿ ಗೆಲ್ಲಬೇಕೆಂದಾಗ, ಎರಡು ಲೋಕಗಳನ್ನು ಜೊತೆಗೂಡಿಸಿ ಎಲ್ಲವನ್ನು ಪಡೆದುಕೊಂಡಿರಿ. ಆ ರಾಜ್ಯಭಾರದ ಮಾತನ್ನು ಬಿಚ್ಚಿ ಹೇಳುವೆ, ಮೇರಾಜಿನ ಆ ರಾತ್ರಿ ತುಂಬ ವಿಸ್ಮಯಕರವಾದದ್ದು. (೧೩೬-೧೮೦)

ಯುಗದ ಚಕ್ರವರ್ತಿ ಲೋಕಪಾಲಕ/ಜಗದ್ವಿಖ್ಯಾತ ಮೇರಾಜಿನ ಪ್ರಸ್ತಾಪ, ಶೂನ್ಯಲೋಕದವರೆಗೆ ಅವರು ಹೋಗಿ ಆ ದೇಶವನ್ನು ಕ್ಷಣದಲ್ಲಿ ಕಾಲಿಂದ ತುಳಿದರು.

ರತ್ನಖಚಿತ ಬಟ್ಟೆಯಿಂದ ಅಲಂಕರಿಸಿದ ಒಂದು ರಾತ್ರಿ, ಚಂದ್ರನ ಮಧ್ಯೆ ಕೈಗನ್ನಡಿ ಇಟ್ಟಹಾಗೆ. ಆ ಉಡುಪಿನ ಹೊಳಪನ್ನು ನೋಡಲಾರದೆ, ಸೂರ್ಯನು ತನ್ನ ಕಣ್ಣು ಮುಚ್ಚಿದ್ದರಿಂದ ಕತ್ತಲಾಯಿತು. ಆ ಸುಂದರವಾದ ಮುಖದ ಮೇಲೆ ತಲೆಯ ಗುಂಗುರು ಕೂದಲು ವ್ಯಾಕುಲಗೊಂಡು, ಪ್ರತಿಯೊಂದು ಕೂದಲು ಹಾರಾಡಿ ಕರಿ ಮೋಡಗಳನ್ನು ಅಳುವ ಹಾಗೆ ಮಾಡುತ್ತಿವೆ. ಯಾರ ಕಣ್ಣುಗಳಲ್ಲಿಯೂ ಪ್ರಕಾಶವಿರಲಿಲ್ಲ, ಮೂರ್ಛೆ ಬಂದದ್ದರಿಂದ ಪ್ರತಿಯೊಬ್ಬನೂ ಸಹ ಕನಸಲ್ಲಿದ್ದ. ಆ ಕ್ಷಣದಲ್ಲಿ ಹಿರಿಯ ಪಾಲಕ(ಅಲ್ಲಾಹ)ನ ಆಜ್ಞೆಯಾಯಿತು, ಓ ನನ್ನ ಆಪ್ತಮಿತ್ರ ಜಿಬ್ರಯೀಲೆ ಅಮೀನ್, ಪ್ರವಾದಿಗಳ ಚಕ್ರವರ್ತಿ ಮಹಾಅದೃಷ್ಟಶಾಲಿ(ಅಜೇಯ) ಈ ಎರಡು ಲೋಕ ಅವರ ಸ್ವತ್ತು, ಎರಡು ಲೋಕಗಳನ್ನು ಗೆದ್ದವರು ಅನಾದಿಯಿಂದ ಈ ಲೋಕದಲ್ಲಿ ಮಹನೀಯ ಎಂದು ಹೇಳಿಸಿಕೊಳ್ಳುವರಿಗೆ ಕರೆದುಕೊಂಡು ಬರಲು ಇಲ್ಲಿಂದ ಚದುರ ಕುದುರೆಯನ್ನು ತೆಗೆದುಕೊಂಡು ಹೋಗಿ ಕರೆದು ತಾ, ವಿಳಂಬವಿಲ್ಲದೆ

ಏಳು ಕೋಟೆಗಳನ್ನು ಗೆಲ್ಲಲಿ. ವಿಶ್ವಸಿಂಹಾಸನ ಹಾಗೂ ಮಹಾಸಿಂಹಾನದ ಸ್ಥಾನದಿಂದ ಹೊರಟು ಬಹಳ ವಿಜೃಂಭಣೆಯಿಂದ ಶೂನ್ಯಲೋಕದಲ್ಲಿ ಕೆಲವು ಕ್ಷಣಗಳು ತಂಗಲಿ. ಆಗಲೇ ಜಿಬ್ರೀಲ್‌ರವರು ಸಡಗರದಿಂದ ಸಹಸ್ರಾರು ದೇವಚರರೊಡನೆ ಒಂದು ಬುರಾಖ಼ ತೆಗೆದು ಕೊಂಡು ಹೊರಟರು. ಅತಿ ವೇಗದಿಂದ ಒಂದು ಕ್ಷಣದಲ್ಲಿ ಅನೇಕ ವರ್ಷಗಳ ಪ್ರಯಾಣಬೆಳೆಸಿ ಎಲ್ಲಿ ಸಂದೇಶವಾಹಕತ್ವದ ಆಶ್ರಯವಿತ್ತೋ ಅಲ್ಲಿಗೆ ಬಂದರು. ಅಲ್ಲಿಯವರಿಗೆ ದೇವ ಪ್ರಿಯರು ತನ್ನ ದೇಹವನ್ನು ಅಲ್ಪಸಮಯಕ್ಕೆ ವಿರಾಮದ ಅರಮನೆಯಲ್ಲಿ ಸುಖಿಸಲು ಬಿಟ್ಟಿದ್ದರು, ಅಂದರೆ ತಾವು ವಿಶ್ರಾಂತಿ ಮಾಡುತ್ತಿದ್ದರು. ಈ ಕಡೆ ಬಹಿರಂಗದಲ್ಲಿ ತುಟಿಗಳು ಮೌನ ತಾಳಿದರೂ ಸಹ ಆಕಡೆ ಅಂತರಂಗದಲ್ಲಿ ಆತ್ಮ ತೀಕ್ಷ್ಣ ಜಾಗೃತವಾಗಿತ್ತು. ಹೀಗಿರುವಾಗ ಜಿಬ್ರಯೀಲೆ ಅಮೀನ್ ಅಲ್ಲಿ ತಲುಪಿ ಬಹಳ ಶಿಷ್ಟಾಚಾರದಿಂದ ಸುವಾರ್ತೆ ತಿಳಿಸಿದರು, ಹೇ ಧರ್ಮ ಹಾಗೂ ಪ್ರಪಂಚದ ದೊರೆ, ಅಲ್ಲಾಹನು ಅತಿಕರುಣೆತೋರಿ ಶೂನ್ಯಲೋಕದವರಿಗೆ ನಿಮ್ಮನ್ನು ಸಮೃದ್ಧಿಯಿಂದ ಕೂಡಿದ ಎರಡು ಲೋಕಗಳನ್ನು ನೀಡಿರುವನು ಅಭಿನಂದನೆ. ಅವುಗಳನ್ನು ಗೆಲ್ಲಲು ಒಂದು ನವಚೈತನ್ಯ ಬುರಾಖ಼ ಬಹಳ ವಿಜೃಂಭಣೆಯಿಂದ ಈ ಶುಭ ಕಾರ್ಯಕ್ಕೆ ಕಳುಹಿಸಿರುವರು. ಹೊರಡಿ ಜಯಗಳಿಸಿ ಇದರಲ್ಲೇನು ಕಷ್ಟವಿಲ್ಲ ಏಕೆಂದರೆ ನಸ್ರುಂ ಮಿನಲ್ಲಾಹ್ ನಿಮ್ಮ ಸ್ನೇಹಿತ, ಜೊತೆಯಲ್ಲಿದೆ. ಈ ವಾರ್ತೆಯನ್ನು ಕೇಳಿ ಪ್ರವಾದಿಯರು ನವಚೈತನ್ಯರಾದ್ದು ವಜ಼ೂ಼ಇಮಾಡಿ ಸಿದ್ಧರಾದರು. ವಿಶ್ವ ಸುತ್ತುವ ಆ ವೇಗವಾಗಿ ಓಡುವ ಕುದುರೆ ಮೇಲೆ ಹತ್ತುತಿದ್ದ ಹಾಗೆ ಗೊರಸಿನ ಧೂಳು ಚಂದ್ರನ ಕೆನ್ನೆ ಮೇಲೆ ಹಾರಿತು. ತಾವು ಮೊದಲನೆಯ ಆಕಾಶದ ದೇಶ ವಶೀಕರಿಸಿ, ಅಲ್ಲಿರುವ ವಿಧೇಯ ದೇವಚರರನ್ನು ಭೇಟಿ ಮಾಡಿದರು. ಅದೇ ಜಾಗದಲ್ಲಿ ಚಂದ್ರನಿಗೆ ತನ್ನ ಸಹಾಯಕನ್ನಾಗಿ ನೇಮಿಸಿ, ಬಲು ವೇಗದಿಂದ ಎರಡನೆ ಆಕಾಶವನ್ನು ಗೆದ್ದರು. ಆಗ ಅದ್ವಿತೀಯ ಬುಧಗ್ರಹ ವಿಧೇಯತೆಯಲ್ಲಿ ಬಂದು ಅವರನ್ನು ಸ್ವಾಗತ ಬಯಸುತ್ತಾ ತನ್ನ ಜಾಗದಲ್ಲಿ ನಿಂತ. ಅಲ್ಲಿಂದ ಬಲು ವೇಗದಿಂದ ಮುಂದೆ ಸಾಗಿ ಮೂರನೆ ಕೋಟೆ ಶುಕ್ರಗ್ರಹದವರೆಗೆ ಗೆದ್ದರು. ಆಗ ಶುಕ್ರ ಬಲು ಹರುಷದಿಂದ ಅವರ ಅಧೀನನಾಗಿ ತನ್ನ ದೇಹ ದಾನ ಮಾಡಿ ಸಂಗೀತ ನೃತ್ಯ ಆರಂಭಿಸಿದ. ನಂತರ ಆ ಚದುರ ಕುದುರೆ ವೇಗದಿಂದ ಮುಂದೆ ಸಾಗಿದಾಗ ನಾಲ್ಕನೆಯ ಕೋಟೆಯನ್ನು ಗೆದ್ದರು. ಮಾನ್ಯರ ಮುಖದ ಮೇಲೆ ತೇಜಸ್ಸನ್ನು ನೋಡಿ ಸೂರ್ಯನ ಚೆಲುಮೆ ಕೋಪಿಸಿಗೊಂಡಿತು. ಪ್ರವಾದಿ ಈಸಾರವರ ಮನೆತನದ ದೀಪವೆಂದು ಗುರುತಿಸಿದ ನಂತರ ಅದರ ಮೇಲೆ ನೌಕಾಪಟವನ್ನಿಟ್ಟ. ಅಲ್ಲಿಂದ ಐದನೆ ಕೋಟೆಯನ್ನು ಬಾಗಿಸಿದರಿಂದ ಮಂಗಳ ದೇಶದ ಸಂಶಯ ಹೆಚ್ಚಾಯಿತು, ವೇದನೆ ಕೊಡುವುದರಲ್ಲೇ ನಾನು ಜನ್ಮತಾಳಿದ್ದೇನೆ ಆದ್ದರಿಂದ ದಯಪಾಲಿಸಿ ನನ್ನ ಗೌರವ ಕಾಪಾಡಿ ಎಂದು ಮಂಗಳ ಸೇವಕ ಕೇಳಿಕೊಂಡ. ಅಲ್ಲಿಂದ ಆರನೆ ಕೋಟೆಯ ಕಡೆ ದಿಕ್ಕು ಬದಲಾಯಿಸಿ ಗುರುಗೃಹವನ್ನು

ಗೆದ್ದು ಗೌರವಿಸಿದರು ಶ್ರೇಷ್ಠತೆಯಲ್ಲಿ ಅವನ ನಿಪುಣತೆಯನ್ನು ಕಂಡು, ಆರಾಧನೆಯಲ್ಲಿ ಸುಜ್ಞಾನಿ ಎಂದು ಕಂಡಾಗ ಅವನಿಗೆ ಅದೇ ಲೋಕದಲ್ಲಿ ತನ್ನ ಮೆಚ್ಚುಗೆಯಿಂದ ಪೀಠ ಕೊಟ್ಟು ಶರೀಅತಿನ ಖಜ಼ಾ ಕೊಟ್ಟರು. ನಂತರ ಅಲ್ಲಿಂದಲೂ ಕುದುರೆಯ ವೇಗವನ್ನು ಹೆಚ್ಚಿಸಿ ಒಂದು ಕ್ಷಣದಲ್ಲಿ ಏಳನೇಯ ಕೋಟೆಯನ್ನು ಗೆದ್ದರು. ಶನಿಗ್ರಹನು ತಮ್ಮಲ್ಲಿ ನಾಲ್ಕು ಶಾಹರ ಉಪಜೀವನ/ಉಚ್ಚಸ್ವರವನ್ನು ನೋಡಿ ಭಯಪಟ್ಟು ತನ್ನ ಹೊಳಪನ್ನು ಕಳೆದುಕೊಂಡು ಹೇಳಿ ಓ ಧರ್ಮಗುರುವೇ ಈ ಸೇವಕನ ತಲೆ ಮೇಲೆ ಸುಟ್ಟ ಕಲೆ ನೋಡಿ ಇದು ಅಬಿಸಿನಿಯಾ ದೇಶದಿಂದಲೂ ಬಿಡುವನ್ನು ಹೊಂದಿದೆ. ಏಳನೇ ಆಕಾಶದಲ್ಲಿ ಎತ್ತರವಾದ ಅರಮನೆಯಿತ್ತು, ಅಲ್ಲಿ ಎಲ್ಲ ರೀತಿಯ ಭೋಗ ವಿಸ್ತಾರದಲ್ಲಿತ್ತು. ದೇವಪ್ರಿಯಮಿತ್ರ ಅವರೆಲ್ಲರನ್ನು ನೋಡಿ ಅಲ್ಲಿಂದ ಎಲ್ಲಿ ಹೋಗಬೇಕಾಗಿತ್ತೋ ಅಲ್ಲಿಗೆ ಮುಂದೆ ಹೊದರು. ಜೊತೆಯಲ್ಲಿದ್ದವರು ಹೆಜ್ಜೆ ಮುಂದಿಡಲು ಸಾಧ್ಯವಾಗಲಿಲ್ಲ ಇಲ್ಲಿಂದ ಮುಂದೆ ಹಾರಲು ನನಗೆ ರೆಕ್ಕೆ ಇಲ್ಲ. ಆಗ ದೇವಾನುಗ್ರಹದ ಸಂಗಾತದಲ್ಲಿ ತನ್ನ ನಿಶ್ಚಿತ ಗುರಿ ಕಡೆ ಹೊರಟರು. ಅನೇಕ ಸ್ಥಳಗಳಿಂದ ಹೋಗುತ್ತ ತನ್ನ ಅಸ್ತಿತ್ವದ ಜೊತೆಯಲ್ಲಿ ಮುಂದೆ ಹೋಗುತ್ತಾ ವಿಶ್ವ ಸಿಂಹಾಸನದ ಬಳಿ ಹೋದಾಗ ಶಿಷ್ಟಾಚಾರವಾಗಿ ಪಾದರಕ್ಷೆಗಳನ್ನು ತೆಗೆಯಲು ಹೋದಾಗ, ಹೇ ದೇವಪ್ರಿಯ ಮಿತ್ರರೇ! ತಮ್ಮ ಸಮೃದ್ಧಿ ಸಹಿತ ಹೆಜ್ಜೆಯಿಂದ ನನ್ನ ತಲೆ ಮೇಲೆ ಧೂಳು ತುಂಬಿದ ಪಾದರಕ್ಷೆಯನ್ನಿಟ್ಟು ಚಿತ್ರ ಬಿಡಿಸಿ, ಅದೇ ನನ್ನ ಕಿರೀಟ, ಇದು ನನ್ನ ಆಸೆ, ವಿಶ್ವ ಸಿಂಹಾಸನ ತಮ್ಮಲ್ಲಿ ಮನವಿ ಮಾಡಿಕೊಂಡಿತು. ಮಾನ್ಯರು ಈ ಮನವಿಯನ್ನು ಕೇಳಿ ವಿಶ್ವ ಸಿಂಹಾಸನದ ಮೇಲೆ ತಮ್ಮ ಪಾದರಕ್ಷೆಗಳನ್ನು ಇಟ್ಟು ಅದಕ್ಕೆ ಪ್ರತಿಷ್ಠತೆ ನೀಡಿದರು. ವಿಶ್ವ ಸಿಂಹಾಸನ ಅವರ ಹೆಜ್ಜೆಗಳಿಗೆ ನೆಲವಾದಾಗ ತಾವು ಅದರ ಮೇಲೆ ನಡೆದು ಕೊಂಡು ಹೋಗಿ ಅದನ್ನು ಗೌರವಿಸಿ, ಕುರ್ಚಿಮೇಲೆ ಕುಳಿತರು. ನಿರ್ಮಲ ಜ್ಯೋತಿಯ ಬೆಳಕು ಮುಂಜಾನೆಯ ತಂಗಾಳಿಯಂತೆ ಶೂನ್ಯಲೋಕದ ಉದ್ಯಾನವನ್ನು ಬೆಳಗಿಸಿತು. ಅನುಚಿಂತನೆ ಎಲ್ಲಿ ಹೋಗಲಾರದೇ ಅಲ್ಲಿಯವರಿಗೆ ಮಾನ್ಯರು ಹೋದರು, ಬೇರೆಯವರು ನೋಡಲು ಸಾಧ್ಯವಾಗದಂತಹ ಎಲ್ಲವನ್ನು ನೋಡಿದರು. ಪ್ರತಿಯೊಂದು ದಿಶೆಯಲ್ಲಿ ವಿಸ್ಮಯಕರ ದಿಶೆಕಾಣಿಸಿತು, ಆ ಶೂನ್ಯಲೋಕದಲ್ಲಿ ಒಂದು ಮನೋರಂಜನ ಮನೆ ಸಿಕ್ಕಿತು. ಅಸಲಗೆ ದರ್ಶನದ ಆ ಗೌರವವನ್ನು ಪಡೆದು, ಮಿಲನದ ಪ್ರತಿಯೊಂದು ರುಚಿಯನ್ನು ಸುಖಿಸಿದರು. ಮತ್ತೆ ಮರೆಯಲ್ಲಿರುವ ಆ ಜ್ಯೋತಿಯ ಒಂದು ಕಣವೂ ಸೂರ್ಯನ ಹಾಗಿರುವ ಆ ರೂಪ ಈಗ ಮರೆಯಿಲ್ಲದಂತಾಯಿತು. ಮನಸನ್ನು ಸಮಾಧಾನ ಮಾಡಿಕೊಂಡು ಈ ಮಾತನ್ನು ತಿಳಿಯಲು ಪ್ರಯತ್ನಿಸಿ ಕಂದೀಲದಲ್ಲಿ ಮೇಣದಬತ್ತಿ ಅಡಕಿರಲು ಸಾಧ್ಯವೇ? ನಿರ್ಮಲತೆಯಿಂದ ಆ ತೆರೆ ಕನ್ನಡಿಯಾದಾಗ ಅವನು ತನ್ನ ತಾನೆ ಅಲ್ಲೇ ಪ್ರಕಟವಾದ. ಮುಂದೆ ಅತಿಹತ್ತಿರ ಸ್ಥಾನ ಪಡೆದಾಗ ಅದ್ವಿತೀಯ ಮಾತುಗಳಿಂದ

ಸಂಭಾಷಣೆ ನಡೆಸಿದ. ಅವರು ಎಂತಹ ಜಾಗದಲ್ಲಿ ತಲಪಿದ್ದರೆಂದರೆ ಅಲ್ಲಿ ಯಾರಿಂದಲೂ ತಲುಪಲು ಸಾಧ್ಯವಿಲ್ಲ, ತನ್ನ ಕಿವಿಗಳಿಂದ ಎಂತಹ ಮಾತುಗಳು ಕೇಳಿದರೆಂದರೇ ಬೇರೆ ಯಾರೂ ಸಹ ಕೇಳಲು ಸಾಧ್ಯವಿಲ್ಲ. ಆ ಜಾಗದಲ್ಲಿ ಅನ್ಯರಿಗೆ ಬರಲು ಅನುಮತಿ ಇರಲಿಲ್ಲ ಹಾಗು ಅಲ್ಲಿ ಜ್ಯೋತಿಯಲ್ಲಿ ಜ್ಯೋತಿ ಬೆರೆತು ಒಂದಾದವು. ಮೇಣದ ಬತ್ತಿಯಿಂದ ಪತಂಗ ಹೇಗೆ ಸೇರಿ ಬಿದಿರಿನ ಕಮಾನಿನ ಹಾಗೆ ಆಗುತ್ತದೆ, ಬೆಳಕನ್ನು ಬೇರ್ಪಡಿಸಿ ನೋಡಲು ಸಾಧ್ಯವೇ. ಆನಂದವನ್ನುಂಟು ಮಾಡುವ ನಿರ್ಮಲ ಮದ್ಯದಂತ ದರ್ಶನ ನೀಡಿ ನುಡಿಯ ಖಡ್ಗವನ್ನು ಇನ್ನೂ ಹರಿತ ಪಡೆಸಲಾಯಿತು. ನಯನಗಳು ಕುಡಿಸುವವನ್ನಾಗಿ ಕೆಲಸ ನಡೆಸುತ್ತಿದ್ದವು, ಹಾಗೂ ಧಾರ್ಮಿಕ ಉಪನ್ಯಾಸದ ಮದ್ಯ ಕುಡಿಸಿ ಆತ್ಮಸಂತೋಷ ಕೊಡುತ್ತಿತ್ತು. ಹೃದಯದ ಮದ್ಯ ಬಟ್ಟಲಲ್ಲಿ ಸ್ವಾಭಾವಿಕ ಒಲವಿನಿಂದ ತುಂಬಿತು. ಪ್ರಭಾವ ಆಸಕ್ತಿಯ ಹುರಿತುಂಬುತ್ತಾ ಹೋಯಿತು. ಆ ಸಾಹಸಿ ಸಲಾಮುಗಳನ್ನು ನುಡಿದ, ಅಲ್ಲಾಹನ ಪ್ರಸಂಶೆ ಹಾಗೂ ಗುಣಗಳ ರತ್ನಗಳನ್ನು ಬಾಯಿಯಿಂದ ನುಡಿದ ಆ ಶೂರ. ಅಲ್ಲಾಹನು ಅವರ ಉಡುಗೊರೆಯನ್ನು ಸ್ವೀಕರಿಸಿ ಅವರನ್ನು ಸಲಾಮಿನ ಉಡುಗೊರೆ ನೀಡಿದ, ಮತ್ತು ಅದೇ ಸಲಾಮಿನ ಉಡುಗೊರೆ ಅವರ ಅನುಯಾಯಿಗಳ ಮೇಲೆ ನಿತ್ಯ ಜಾರಿಯಲ್ಲಿದೆ. ಪ್ರೀತಿಯ ಕಾರ್ಮೋಡ ವೇಗದ ಮೇಘಗಳನ್ನಾಗಿ ಕವಿಸಿದಾಗ ನಿರ್ಮಲ ಸ್ಪಷ್ಟ ಗುಟ್ಟುಗಳ ಹನಿಗಳು ಸುರಿಯಲಾರಂಭಿಸಿದವು ಶರೀರದ ನಿಧಿಯಲ್ಲಿ ಹೃದಯ ಮುತ್ತಿನ ಚಿಪ್ಪಾಗಿ ಆ ಪ್ರತಿಯೊಂದು ಹನಿಗಳನ್ನು ತೆಗೆದು ಕೊಂಡು ಅವುಗಳನ್ನು ಬಾದಶಹರಿಗೆ ಅರ್ಹವಾದಂಥ ಮುತ್ತನ್ನು ಮಾಡಿತು. ಈ ಗುಟ್ಟು ಹೂವಿನ ಸುಗಂಧದ ಹಾಗೆ ಇಡೀ ಪ್ರಪಂಚವನ್ನು ನೆಲಸುತ್ತಾ ಬಂದಿತು, ದಿವ್ಯಜ್ಞಾನದ ಪರಿಮಳಕ್ಕೆ ಅದು ಭೃಂಗ(ದುಂಬಿ)ವಾಯಿತು. ತನ್ನ ಅನುಯಾಯಿಗಳ ಮೇಲೆ ಕೃಪೆಯ ಮಳೆ ನಿತ್ಯವೂ ಸುರಿಸಲು ಆ ಕೃಪೆಯ ಮೋಡ ಮಹಾಪೂರದ ನದಿಯಾಯಿತು. ಅಮೂಲ್ಯವಾದ ರತ್ನಗಳಿಂದ ತುಂಬಿದ್ದರತ್ನದ ಗಣಿಯ ಬಾಗಿಲುಗಳನ್ನು ಲೋಕಕ್ಕೆ ತೆರೆಯಲಾಯಿತು. ಪ್ರವಾದಿಗಳ ಶಾಹರು ಕೃಪೆಗಾಗಿ ಒಳ್ಳೆ ಚಿನ್ಹೆಗಳನ್ನು ತೆಗೆದುಕೊಂಡು ಬಂದರು, ಹೀಗೆ ಆಗಿದ್ದರಿಂದ ಲೋಕದಲ್ಲಿ ಮತ್ತೆ ಮುತ್ತುರತ್ನಗಳ ಸುರಿಮಳೆಯ ಒಂದು ಕಿರಣ ಮೂಡಿತು. ಅವುಗಳನ್ನು ತಂದು ಎರಡು ಲೋಕಗಳಿಗೆ ಸೌಭಾಗ್ಯ ತಂದರು, ಎರಡು ಕೆಲಸಗಳು ಒಂದು ಕ್ಷಣದಲ್ಲಿ ಪ್ರಕಟವಾದವು. ಆ ಗೊರಸಿನ ಧೂಳು ಇನ್ನು ತನ್ನ ಜಾಗ ಸಹ ಬಿಟ್ಟಿರಲಿಲ್ಲ, ಅಷ್ಟರಲ್ಲಿ ಅದೇ ಧೂಳನ್ನು ಮತ್ತೆ ಕೆಳಗೆ ಅದಮುತ್ತ ಹಿಂದಿರುಗಿ ಕೆಳಗೆ ಬಂದ. ಎಷ್ಟು ವೇಗದಿಂದ ಹಾರಿ ಬಂತೆಂದರೆ ಬಹುಶಃ ಮೋಡಗಳಿಂದ ಹನಿಯೂ ಸಹ ಆ ವೇಗದಿಂದ ಇಳಿಯಲಾರದು. ಕುದುರೆಯ ಮಿಂಚುನೋಟ ಇರಬೇಕೊ, ಅಥವ ಅದರ ನೆರಳು ಅದು ಅಷ್ಟು ವೇಗದಿಂದ ಬಂದು ಅದರ ಮೇಲೆ ಹೆಜ್ಜೆ ಇಟ್ಟಿತು. ಎರಡು ಲೋಕಗಳ ಮಹಾ ಅದೃಷ್ಟಶಾಲಿ ಹಿಂದಿರುಗಿ ಬಂದು

ತನ್ನ ಆತ್ಮೀಯ ಸ್ನೇಹಿತರಿಗೆ ಈ ಸುವಾರ್ತೆಯನ್ನು ತಿಳಿಸಿದರು. ಸ್ನೇಹಿತರು ಅದನ್ನು ಕೇಳಿ ಅಭಿನಂದಿಸಿದರು ಹಾಗೂ ಅಲ್ಲಾಹನಿಗೆ ಮತ್ತಷ್ಟು ಕೃತಜ್ಞತೆಯನ್ನು ಸಲ್ಲಿಸಿದರು. ಅಬುಬಕರ್ ಸಿದ್ದೀಖ಼ ಇವರು ಸತ್ಯವನ್ನು ಗುರುತಿಸುವರು ಅವರು ಬಂದು ಅಭಿನಂದಿಸುತ್ತಾ 'ತಮಗೆ ಈ ಗೌರವ ಸಿಕ್ಕಿದೆ ಇದಕ್ಕಾಗಿ ನನ್ನ ಅಭಿನಂದನೆಯನ್ನು ಸ್ವಿಕರಿಸಿ' ಎಂದರು. ಉಮರ್ ಬಿನ್ ಖ಼ತ್ತಾಬ್ ಉನ್ನತ ಬಿರುದನ್ನು ಹೊಂದಿದವರು ಅವರು ಇದನ್ನು ಕೇಳಿ ಅತ್ಯಂತ ಸಹೃದಯದಿಂದ ಸಂತೋಷ ಪಟ್ಟರು. ಉಸ್ಮಾನ್ ಬಿನ್ ಅಫ಼್ಘಾನ್‌ರವರು ನಿಜಮಾತನ್ನು ಕೇಳಿ ಅತಿ ಸಂತಸ ವ್ಯಕ್ತಪಡಿಸುತ್ತಾ ತನ್ನ ಮನ ಸಂತೋಷದಿಂದ ಅಭಿನಂದನೆ ವ್ಯಕ್ತ ಪಡಿಸಿದರು. ವಿಶೇಷವಾಗಿ ವೀರ ಶಾಹೆ ಮರ್ದಾನ್ ಅಲಿರವರು, ಒಬ್ಬ ಗಂಡು ಹುಲಿಯ ಮೇಲೆ ಜಯಗಳಿಸಿದವನು ಎಷ್ಟೊಂದು ಖುಷಿ ಪಡೆಯುತ್ತಾನೆಯೋ ಅವನ ಹಾಗೆ ಅಷ್ಟೊಂದು ಸಂತೋಷ ಪಟ್ಟರು. ಪ್ರವಾದಿಯರಿಗೆ ಸಂರಕ್ಷಕನೆಯೇ ಗುಟ್ಟುಗಳ ಬೊಕ್ಕಸವಾಗಿರುತ್ತದೆ, ಅದರ ಮೇಲೆ ಧರ್ಮದ ಖಡ್ಗದಿಂದ ಗೌರವಿಸಲಾಯಿತು. ಇಲ್ಲಿಗೆ ಸಾಕು, ಫತೆಹ್ ನಾಮಾ ಹೇಳುವ ಶಕ್ತಿಪಡೆಯಲು ಇಲ್ಲಿಂದ ಮನ್ಸಬತ್ ಹೇಳಬೇಕಾಗಿದೆ. (೧೮೧-೨೬೦)

ಹಜ್ರತ್ ಅಲಿರವರ ಪ್ರಶಂಸೆ

ದೇವಸಾಮೀಪ್ಯದ ಶಾಹರ ಪ್ರಶಂಸೆ, ಅವರು ಸತ್ಯನಿಷೇಧಿಗಳೊಡನೆ ಯುದ್ಧ ಮಾಡುವವರಿಗೆ ತಾವು ಮೊದಲನೆಯ ಮಾರ್ಗದರ್ಶಕರಾಗಿ ವಿಜಯದ ದಾರಿ ತೋರುವರು.

ನಿಸ್ಸಂದೇಹವಾಗಿ ಅವನು ಶೂನ್ಯಲೋಕದ ವೀರ, ದೇವಪ್ರಿಯ ಅಲಿ, ಅವನು ದೇವರ ಹುಲಿ. ಅಲ್ಲಾಹನು ಅವರ ಕೈಗಳಲ್ಲಿ ಎಷ್ಟೊಂದು ಶಕ್ತಿ ನೀಡಿದ್ದನೆಂದರೆ ಅವನ ಖಡ್ಗ ಎರಡು ನಾಲಿಗೆಗಳಿಂದ ಅವನ ಗುಣಗಾನ ಮಾಡುತ್ತಿತ್ತು. ಅವರು ನಾಲ್ಕು ತಿಂಗಳಿನ ಶುಭ ಯುಗದಲ್ಲಿಯೇ ಚಿರಂತನ(ಅನಶ್ವರ)ವನ್ನು ಸೀಳಿ ತೊಟ್ಟಿಲಲ್ಲೇ ಹೈದರ್ ಆದ. ಅವರ ಖಡ್ಗಕ್ಕೆ ಹರಿತ ಕೊಡಲು ಆಕಾಶದಲ್ಲಿ ಸೂರ್ಯನ ಚಿಲುಮೆ ಉಕ್ಕಿತು. ಯಾರು ಅವರ ಪೋಷಣೆ ಮಾಡಿ ಅವರ ಹೃದಯದಲ್ಲಿ ಸ್ಥಳ ಕೊಟ್ಟರೋ ಅವರು ಶೌರ್ಯದಿಂದ ಪ್ರಪಂಚದಲ್ಲಿ ಹೆಸರು ಗಳಿಸಿದ. ಯಾರಿಗೆ ಅಲ್ಲಾಹನು ಝ಼ುಲ್ಫಿಖ಼ಾರ್ ನೀಡಿದ ಅವನೇ ದುಲ್ದುಲ್ ಎಂಬ ಹೊಸ ಸವಾರಿಯೂ ನೀಡಿದ. ಮಹನೀಯತೆಯಲ್ಲಿ ಅವರಿಗೆ ಏನೂ ಕೊರತೆ ಇಲ್ಲ, ಅವರ ವಂಶದ ನೆಂಟಸ್ತಿಗೆ ಮಾತು ಬನಿ ಹಾಶ್ಮಿ ಯಾಗಿದೆ. ಮುಸ್ತಫ಼ಾರವರೇ ಸ್ವತಃ ತನ್ನನ್ನು ವಿದ್ಯಾನಗರ ಎಂದು ಹೇಳಿ, ಆ ನಗರದ ದ್ವಾರ ಹೇ ಮುರ್ತುಝ಼ಾ ನಿಮ್ಮನ್ನು ಹೇಳಿರುವರು. ಯಾರಾದರು ಪ್ರವಾದಿಯರ ಭೇದಜ್ಞವೆಂದರೆ ಕೇವಲ ನೀವೇ, ಏಕೆಂದರೆ ಒಂದೇ ಜ್ಯೋತಿ, ಒಂದೇ ಮಾಂಸ ಹಾಗೂ ರಕ್ತವೂ ಒಂದೇ. ನೀನು ಈ ಪ್ರಪಂಚದಲ್ಲಿ

ಎಲ್ಲಿವರೆಗೂ ಬಂದಿರಲಿಲ್ಲವೋ ಆ ಪ್ರಪಂಚದಲ್ಲೂ ಸಹ ನೀನು ಮಹಾತ್ಮನೇ ಆಗಿದ್ದೆ. ಜಿಬ್ರಯೀಲೆ ಅಮೀನ್ ರವರು ನಿಮ್ಮನ್ನು ಇಲ್ಲಿ ಗುರುತಿಸಿ, ಪ್ರವಾದಿಯರಿಗೆ ಒಂದು ಚಿನ್ಹೆಯನ್ನು ಕೊಟ್ಟು ಒಂದು ಕಥೆ ಹೇಳಿದರು. ಪ್ರವಾದಿಯರನ್ನೇ ನೀನು ಉತ್ಸಾಹ/ಆದರ ಹಾಗೂ ತೃಪ್ತಿಯಿಂದ ಪ್ರೀತಿಸು ಹಾಗೆ ಮಾಡಿದರೆ ಮಾತ್ರ ಈ ಪ್ರಪಂಚಕ್ಕೆ ಬರುವ ಅಧಿಕಾರ ಹೊಂದಿರುತ್ತಿಯ. ಜನ್ಮತಾಳಿದಾಗ ಯಾರಿಂದಲೂ ಸಹ ಮಾತನಾಡಲಿಲ್ಲ, ಕಣ್ಣು ತೆರೆದ ತಕ್ಷಣ ನೀನು ಪ್ರವಾದಿಯರ ಮುಖವನ್ನು ನೋಡಿದೆ. ಕೊನೆಗೂ ನೀನು ಪ್ರವಾದಿಯ ಸೇವೆಯನ್ನು ಸ್ವೀಕರಿಸಿದೆ, ಆದ್ದರಿಂದ ಪ್ರಪಂಚದಲ್ಲಿ ನೀನು ವಸೀಯೆ ರಸೂಲಿನ ಬಿರುದನ್ನು ಪಟ್ಟೆ. ನಿನ್ನ ಸಂಭಾಷಣೆಯಲ್ಲಿ ಪ್ರವಾದಿಯರ ನುಡಿಗಳು, ಹಾಗೂ ನಿನ್ನ ಎಲ್ಲ ರೀತಿನೀತಿ ನಡವಳಿಕೆಗಳೆಲ್ಲ ಮಾನ್ಯರ ಹಾಗಿದೆ. ನಿನ್ನ ಅಹಂಕಾರ ಬಡತನ ಸ್ವೀಕಾರ ಮಾಡುವುದರಲ್ಲಿದೆ ಹಾಗೂ ದಾನ ಧರ್ಮ, ಉಪವಾಸದ ಮೇಲೆ ಭಾರವಾಗಿದೆ. ಪ್ರವಾದಿತ್ವದ ಮೇಣದ ಬತ್ತಿಯಿಂದ ಬರುವ ಸಂತುಷ್ಟ ಜ್ಯೋತಿ ನೀನೇ, ಆ ಜ್ಯೋತಿಯನ್ನು ಪ್ರಸಿದ್ಧ ಮಾಡಿದ್ದೂ ನೀನೇ. ಸಾದಾತ್‌ವಂಶದ ದೀಪ ನಿನ್ನಿಂದ ಬೆಳಗುತ್ತಿದೆ, ಸೃಷ್ಟಿ ನಿನ್ನ ಸಂತತಿಯಿಂದ ಸಂತೋಷದಿಂದ ಮೈಮರೆತಿದೆ. ನೀನು ದೇವಸಾಮಿಪ್ಯದ ಆ ಎಂತಹ ನೆರಳು ಕೊಡುವ ಮರವೆಂದರೆ ಅದರ ಪ್ರತಿಯೊಂದು ರೆಂಬೆಯಲ್ಲಿ ಪ್ರವಾದಿತ್ವದ ಹಣ್ಣು ಕಚ್ಚಿಕೊಂಡಿವೆ. ನಿನ್ನ ಅನೇಕ ರೂಪಗಳನ್ನು ನೋಡಲು ಸಿಗುತ್ತವೆ, ಎಲ್ಲೋ ಒಂದು ಕಡೆ ಪೀರ್ ಆಗಿದ್ದರೆ, ಮತ್ತೊಂದು ಕಡೆ ಪೀರಾನೆ ಪೀರ್, ಇನ್ನೊಂದು ಕಡೆ ಪ್ರವಾದಿಯರ ಚಿಕ್ಕಪ್ಪನ ಮಗನಾದರೆ ಮತ್ತೊಂದು ಕಡೆ ಪ್ರವಾದಿಯರ ಅಳಿಯನಾಗಿದ್ದೀರಿ. ಪ್ರವಾದಿಯರು ಹೇಗೆ ಕೊನೆ ಪ್ರವಾದಿತ್ವದ ಅಧ್ಯಕ್ಷತೆ ಪಡೆದಿದ್ದರೋ ಹಾಗೆಯೇ ದೇವಸಾಮಿಪ್ಯದ ಕುರ್ಚಿ ನಿನ್ನಿಂದ ಮಹತ್ವ ಪಡೆದಿದೆ. ವಿಧಿಫಲಕಗಳಲ್ಲಿ ಬರೆದಿರುವಂತಹ ಎಲ್ಲವನ್ನು ಕಂಠಪಾಠ ಮಾಡಿ ಅದೃಷ್ಯಜ್ಞಾನಿಗೆ ನೀನೆ ಸಂತುಷ್ಟ ಪಡಿಸಿದೆ. ಈ ವಿದ್ಯೆಯ ಬೋಧನೆ ಮಾಡಲು ಪ್ರಾರಂಭಿಸಿದರೆ ಖಿಝುರ್ ಅಂತಹ ಪ್ರವಾದಿಯೂ ನಿನ್ನ ಮುಂದೆ ವಿದ್ಯಾರ್ಥಿ ಹಾಗೆ ಕಾಣುವರು. ಪ್ರವಾದಿಯರು ಗುಟ್ಟುಗಳ ಬೊಕ್ಕಸವನ್ನು ಪಡೆದುಕೊಂಡು ಬಂದಿದ್ದು ಅದು ಬೇರೆ ಏನೂ ಅಲ್ಲ ಅದು ನೀನೇಯಾಗಿದ್ದೆ. ಪರಮಾರ್ಥಗಳ ಮುತ್ತು ರತ್ನಗಳ ವ್ಯಾಪಾರಿ ನೀನೇಯಾಗಿದ್ದಿಯ. ನಿರಾಶ್ರಿತರಿಗೆ ನೀನೇ ಸಹಾಯಕ, ಶಿಷ್ಯರ ಸಹಾಯಕ ಹಾಗೂ ಧರ್ಮಗುರುಗಳ ಮಹಾಗುರು ನೀನೆ. ನಿನ್ನ ಪ್ರತಿಯೊಂದು ಕಾರ್ಯ ಪವಾಡಗಳಾಗಿರತ್ತದೆ, ನಿನ್ನ ದೇವಸಾಮಿಪ್ಯದಲ್ಲಿ ಪವಾಡ ಕೇವಲ ಒಂದು ಸಂದರ್ಭವಾಗುತ್ತದೆ. ಎಂದು ನೀನು ಅವನ ಜೊತೆ ಮಾತ್ನಾಡಿದೆಯೋ ಅಂದೇ ಸೂರ್ಯನಿಗೆ ನೀನು ಜಗತ್ತನ್ನು ಬೆಳಗುವವನನ್ನಾಗಿ ಮಾಡಿದೆ. ನೀನು ಹಗಲಿನ ಕೊನೆಜಾವದ ನಮಾಝ್ ಮಾಡಿರಲಿಲ್ಲ ಸೂರ್ಯ ಮುಳುಗಿದವನು ಮತ್ತೆ ಹೊರಬಂದು ನಿನ್ನನ್ನು ಪ್ರತಿಷ್ಠಿತ ಮಾಡಿದ.

ಗುರುಗೃಹ ನಿನ್ನ ಕಡೆ ಗಮನ ಹರಿಸುತ್ತದೆ, ನಿನ್ನ ಕೋಣೆ ಶುಕ್ರಗೃಹಕ್ಕೆ ಸನ್ಮಾನ್ಯತೆಯ ಗೃಹ. ನಿನ್ನ ಧೈರ್ಯ ಮತ್ತು ಶಕ್ತಿಯಿಂದ ಧರ್ಮ ಬಲಿಷ್ಠವಾಯಿತು, ವಿಜಯಕ್ಕೆ ನಿತ್ಯ ನೀನು ಹೊಸ ಬಟ್ಟೆಯ ಉಡುಗೊರೆ ಕೊಟ್ಟೆ. ಓ ಉತ್ತಮ ಜಾತಿ ಒಂದು ದೊಡ್ಡ ಕಷ್ಟಕರ ಕೆಲಸ ಬಂದಾಗ ನೀನೆ ಪ್ರವಾದಿಯವರ ಬಲಗೈಯಾಗಿದ್ದೆ. ಆ ಪ್ರಾಣಕ್ಕೆ ಕಷ್ಟ ಬಂದಾಗ ಓ ವೀರನೇ ನೀನು ಇರಲಿಲ್ಲ ಆಗ ಪ್ರವಾದಿಯರಿಗೆ ನಾದೆ ಅಲಿಯ ಆಜ್ಞೆಯಾಯಿತು. ನೀನು ಲಾ ಫತಾ ಆ ಗುಣ ನಿನ್ನನ್ನು ಬಿಟ್ಟು ಹೋಗಲು ಸಾಧ್ಯವೇ? ನೀನೆ ಖೈಬರಿನ ಬಾಗಿಲನ್ನು ಮುರಿದವನು. ಉಹದ್ ಸಮರದಲ್ಲಿ ಕೆಡಕುಂಟಾದಾಗ ನೀನು ನಿನ್ನ ಕುದುರೆಯನ್ನು ತೇಲಿಸಿ ರಕ್ತದ ನದಿಯನ್ನೇ ಹರಿಸಿದೆ. ಯಕ್ಷಗಳನ್ನು ನೀನು ಒಂದೇ ಏಟಿನಲ್ಲಿ ಕೊಂದಾಗ ರಕ್ತ ಉಕ್ಕಿ ಧ್ವಜ ಅದರಿಂದ ಕೆಂಪಾಯಿತು. ನಿನ್ನ ಕೆಲಸಗಳಿಂದ ಜನರೆಲ್ಲರೂ ಆಶ್ಚರ್ಯ ಪಟ್ಟರು, ಅದರಿಂದಲೇ ನೀನು ಪ್ರಸಿದ್ಧನಾದೆ ಹಾಗೂ ನೀನು ವೀರಶೂರ ಗಂಡರ ಅರಸನೆಂದು ಅನ್ನಿಸಿಕೊಂಡೆ. ಈ ಮೃತ ಪ್ರಪಂಚವನ್ನು ನೀನು ಗೌರವಿಸಿದೆ, ಹಾಗೆಯೇ ಪರಲೋಕವನ್ನು ಸಹ ನೀನು ಪ್ರಿತಿಸುವೆ. ನಿನ್ನನ್ನು ಪ್ರೀತಿಸುವವರನ್ನು ನೀನೆ ಪ್ರಳಯ ದಿನದ ಮಾರ್ಗದರ್ಶಿ ಆಗುವೆ, ಬಡವರಿಗೆ ನೀನೆ ಕೌಸರಿನ ನೀರನ್ನು ಕುಡಿಸುವವನಾಗುವೆ. ನಿನ್ನನ್ನು ನಾನು ಬಹಳ ದಯಾಳು ಹಾಗೂ ಬುದ್ಧಿವಂತ ಎಂದು ತಿಳಿದಿದ್ದೇನೆ, ಪ್ರಳಯ ದಿನ ನೀನು ನನ್ನ ಸಿಪಾರಸ್ಸು ಮಾಡು. ನೀನು ಪವಾಡಗಳ ಸೂರ್ಯ ಹಾಗೂ ನೀನು ಯಾರನ್ನು ದೃಷ್ಟಿಸಿದರೆ ಸಾಕು ಅವನು ಸಾಮಾನ್ಯ ಕಣವಾಗಿದ್ದರೂ ಸಹ ಸೂರ್ಯನ ಗೌರವ ಪಡೆಯುವನು. ನಿತ್ಯವೂ ವಿರುದ್ಧದಲ್ಲಿದ್ದೆ ಈಗ ನೀನೇ ನನ್ನನ್ನು ಸುಶಿಕ್ಷಿತನಾಗಿಸು ಏಕೆಂದರೆ ನಾನು ನಿನ್ನ ಉತ್ತರಾಧಿಕಾರನ ಹೀನ ಅನುಯಾಯಿ. ಪ್ರಪಂಚದಲ್ಲಿ ಅವರ ಹೆಸರು ಬಂದಾನವಾಝ್, ಅವರು ಮುಹಮ್ಮದ್ ಹುಸೈನಿ ಗೇಸುದರಾಝುರವರು. ಪ್ರೀತಿಯಿಂದ ನೀನು ನಿನ್ನ ಪುತ್ರನನ್ನು ಸಮಾಧಾನ/ಸಂತೃಪ್ತಿಪಡೆಸುವೆ. ಆ ದಿನದ ದಾಹದಿಂದ ರಕ್ಷಿಸಲು ಹೊಳಪು ನೀಡು, ಪ್ರೀತಿಯಂತಹಾ ಒಂದು ಲೋಟವನ್ನು ಕುಡಿಸು. ಅದನ್ನು ಸೇವಿಸಿದ ತಕ್ಷಣ ಅಲ್ಲಾಹನ ಅನುರಾಗ ಇಡೀ ಮೈ ಎಲ್ಲ ಹರಡಿ ಪ್ರಳಯದ ಆ ಆತಂಕದಿಂದ ನಾನು ಪ್ರಜ್ಞಾಹೀನವಾಗಿರಲಿ. ನಿನ್ನ ಸ್ನೇಹಿತರ ಹೃದಯದಲ್ಲಿ ನಿನ್ನ ನಿಸ್ಸಂದೇಹ ನಿಶ್ಚಯವಾದರೆ ಈ ಜನಮ ಸಹ್ಯವಾಗುತ್ತದೆ. ಹುಸೈನ್‌ರವರ ಶ್ರದ್ದೆಯಿಂದ ಸಫಲವಾಗುವುದು. ನೀನೊಂದು ಕೋಟೆ ಅದರ ಎಲ್ಲ ಗುಮ್ಮಟಗಳು ಆ ಹನ್ನೆರಡು ಇಮಾಮ್ ಅಲೈಹಿಸ್ಸಲಾಮರು. ನಿನ್ನಿಂದ ಯಾವಾಗ ಕೋಟೆ ದೃಢವಾಯಿತೋ ಆಗ ಪೃಥ್ವಿ ತನ್ನ ದೃಢತೆಯಿಂದ ಸ್ಥಿರವಾಯಿತು. ಓ ನನ್ನ ದೇವ ಈ ಕೋಟೆ ಮೇಲೆ ಕಣ್ಣಿಡು ಏಕೆಂದರೆ ಅದು ಧರ್ಮದ ಮನೆ ಅದನ್ನು ನಿತ್ಯ ನಿತ್ಯವು ನಿನ್ನ ಆಶ್ರಯದಲ್ಲಿಡು. ಭಗವಂತನು ಎಲ್ಲೆಲ್ಲಿ ಸ್ಥಳ ನೀಡಿದನೋ ಅಲ್ಲೆಲ್ಲ ನಿತ್ಯವೂ ನಿನ್ನ ಹೆಸರೇ ಸ್ಮರಿಸಲಾಗುತ್ತದೆ. ವಿಶೇಷವಾಗಿ ಪುಣ್ಯವಂತ ಅಲಿ ಆದಿಲ್‌ಶಾಹ್

ಅವನು ನಿನ್ನ ಖಾಸಾ ಅನುಯಾಯಿ ನಿನ್ನ ವಿಧೇಯ. ಖಡ್ಗದಿಂದ ಅವನ ಶತ್ರುಗಳನ್ನು ನಾಶ ಪಡೆಸು ನಿನ್ನ ಲಕ್ಷಾಂತರ ಸಹಾಯ ಅವನ ಮೇಲೆ ಸದೈವವಾಗಿರಲಿ. ನಾನೊಬ್ಬ ಕ್ಷುಲ್ಲಕ ಮಾನವ. ನಿನ್ನ ಪ್ರಶಂಸೆಯ ನೆರಳು ಪಡೆದು ನಿನ್ನ ಹೆಸರಿನ ಗುಣಗಾಣ ಮಾಡುತ್ತಿರುವವನು. ಓ ನುಸ್ರತಿ ಈಗ ನೀನು ಸಂತೋಷದಿಂದ ನನ್ನ ಲೇಖಣಿಯ ಕುದುರೆಯನ್ನು ಓಡಿಸಿ ಇಡೀ ಮೈದಾನ ಗೆದ್ದುಕೋ.(೨೬೧-೩೨೦)

■

*

ಅಧ್ಯಾಯ - ೩

ಯುಗದ ಸುಲ್ತಾನ ಅಂದರೆ ಅಲಿ ಆದಿಲ್ ಶಾಹನು ತನ್ನ ಖಡ್ಗದ ಬಲದಿಂದ ಸಾಕಷ್ಟು ಪ್ರಶಂಸೆ ಪಡೆದವನು.

ಯುಗದ ಶಾಹನ ಪ್ರಶಂಸೆಯನ್ನು ಈಗ ನೀನು ಹರಡಿಸು. ಅವನು ಇಮ್ಮಡಿ ಅಲಿ ಹಾಗೂ ಮಹಾ ಅದೃಷ್ಟಶಾಲಿ ಅಜೇಯ. ನನ್ನ ಲೇಖಣಿ ಇಂದು ದಿಗ್ವಿಜಯಿಯಾಗಿ ಶಾಹನ ಗುಣಗಳನ್ನು ಬರೆಯುವ ವೈಶಿಷ್ಟ್ಯ ಹೊಂದಿದೆ. ಭಳಿರೇ ಶಾಹ್ ಆದಿಲ್ ನೀನು ಒಂದೇ ಹೆಸರಿನ ಸಂರಕ್ಷಕ ನೀನಂತೂ ಮುಹಮ್ಮದ್ ನಂತಹಾ ಶೂರನ ಮಗನಲ್ಲವೇ. ನಾನು ನಿನ್ನ ಅತಿಮಹತ್ತಾದ ನಾಮ ಜಪಿಸಲಾರಂಭಿಸಿದಾಗ ನನ್ನ ಕಾವ್ಯದಿಂದ ಇಡೀ ಜಗತ್ತನ್ನೇ ವಶೀಕರಿಸಿದೆ. ದಕ್ಷಿಣ ಎಂದೂ ಈ ಗೌರವದಿಂದಾಗಿ ಸಂತೋಷದಿಂದ ಮೈ ಮರೆಯಿತು, ಏಕೆಂದರೆ ಇಂತಹ ಮನೆಯಲ್ಲಿ ನಿನ್ನಂತಹ ಮಾಣಿಕ್ಯದಂಥ ಕಲ್ಲು ಮುತ್ತಿನಂತೆ ಹೊಳಿಯುತ್ತಿದೆ. ಪ್ರತಿಯೊಂದು ದೀಪವೂ ಅವಶ್ಯಕವಾಗಿ ನಿನ್ನ ದೀಪದ ಬಳಿ ಬರಲೇಬೇಕು, ಏಕೆಂದರೆ ಎಲ್ಲ ದೇಶಗಳಲ್ಲಿ ಕತ್ತಲು ಆವರಿಸಿದೆ ಆದರೆ ದಕ್ಷಿಣ ಮಾತ್ರ ಜ್ಯೋತಿಭರಿತವಿದೆ. ನಿನ್ನ ಛತ್ರಿ ಸೂರ್ಯನ ಚಪ್ಪರವಾಗಿದೆ ನಿನ್ನ ವಿದ್ಯೆಯಿಂದ ಆಕಾಶವೂ ಸಹ ಸಹಾಯ ಕೇಳುತ್ತದೆ. ನಿನ್ನ ಅಸ್ತಿತ್ವದಿಂದ ಶೌರ್ಯದ ಹೆಸರಿದೆ, ಅದನ್ನು ಪಡೆಯಲು ನೀನು ಖಡ್ಗದ ನೆರಳಲಲ್ಲಿ ಸಮಯ ಕಳೆದಿರುವೆ. ಖಡ್ಗ ನಿನ್ನ ಗುಣವನ್ನು ಮೊದಲ ಪಂಕ್ತಿಯಲ್ಲಿ ವಿವರಿಸುತ್ತದೆ, ಹೀಗೆ ಮಾಡುವಾಗ ಇರುವೆ ಬಾಯಿಯಲ್ಲಿ ನಾಲಿಗೆ ಅಡ್ಡ ಬರುತ್ತದೆ. ನಿನ್ನ ಮಣ್ಣಿನ ಬಣ್ಣದ ಕುದುರೆ ಸಮೃದ್ಧಿಗೆ ಆಶ್ರಯವಾಗಿದೆ. ಇಂದು ರಿಕಾಬು ನಿನ್ನ ಜಯದ ಶಕ್ತಿಯಾಗಿದೆ. ಸಮುದ್ರದಿಂದ ಹೇಗೆ ಕಾರ್ಮೋಡ ಲಾಭ ಪಡೆಯುತ್ತದೆಯೋ ಹಾಗೆಯೇ, ಖಡ್ಗ ನಿನ್ನ ಕೈಗಳಲಿಂದ ನಿತ್ಯವೂ ಮಾನ ಪಡೆದಿದೆ. ನಿನ್ನ ಖಡ್ಗ ಎಲ್ಲ ಸಾಲುಗಳಲ್ಲಿ ನಿತ್ಯವೂ ವಿಜಯ ತರುವುದು, ಪೃಥ್ವಿ ನಿತ್ಯವೂ ಅವಳ ರೋಮ ರೋಮಕ್ಕೆ ಮದುವೆ

ಮಾಡುತ್ತಿರುತ್ತದೆ. ನಗ್ನ ಖಡ್ಗ ನಿನ್ನ ನೀರನ್ನು ಚಿಮ್ಮಿಸಿ ತನ್ನ ಜೀವದ ಹುರಿಯುತ್ತಿರುವ ಬೆಂಕಿಯನ್ನು ತಣ್ಣಗೊಳಿಸುತ್ತದೆ. ಸೂರ್ಯ ನಿತ್ಯವೂ ನಿನ್ನ ಭೀತಿಯಿಂದ ಕಂಪಿಸುತ್ತಾನೆ, ಆಕಾಶ ನಿನ್ನ ಗೌರವದಲ್ಲಿ ತಲೆ ಬಾಗಿಸಿಕೊಂಡಿರುತ್ತದೆ. ನಿನ್ನ ಮುಂದೆ ಬೆಂಕಿಯೂ ಸಹ ಕುಸಿದು ಹೋಗಿ ಅದರ ನಾಲಿಗೆ ಮೌನವಾಗಿ ಹೋಗುತ್ತದೆ, ಅದರ ಜೀವಕ್ಕೆ ಹೇಗೆ ಆಗುತ್ತದೆಂದರೆ ಅದರ ಆತ್ಮ ಹೊಗೆಯಾಗಿ ಗಾಳಿ ಮೇಲೆ ತೇಲಿ ಹೊದಂತಾಗುತ್ತದೆ. ನಿನ್ನ ಖಡ್ಗದ ಅಗಣಿತ ಕಿಡಿಗಳು ಹೃದಯದ ಮೋಡದಲ್ಲಿ ಸಹಸ್ರಾರು ಮಿಂಚುಗಳನ್ನು ಸೃಷ್ಟಿಸುತ್ತದೆ. ನೀನು ಸಿಟ್ಟಾದರೆ ಭಯಂಕರ ಚಂಡಮಾರುತ ಬರುತ್ತದೆ, ಅದರಿಂದ ಇಡೀ ಲೋಕವೆಲ್ಲ ಮುಳುಗಿ ಹೋಗುತ್ತದೆ ಹಾಗೂ ಆಕಾಶ ಒಂದು ಗುಳ್ಳೆಹಾಗೆ ಕಾಣಿಸುತ್ತದೆ. ನಿನ್ನ ಕ್ರೋಧದ ಸಮುದ್ರದ ಅಲೆಯ ಖಡ್ಗ ನಿನ್ನ ಮಣ್ಣಿನ ಬಣ್ಣದ ಕುದುರೆಯ ಗೊರಸದ ಕೆಳಗಿಂದ ಏಳುವ ಧೂಳಲ್ಲಿ ಶತ್ರುವಿನ ಸೇನೆ. ಗಾಳಿಯಿಂದ ವೇಗ ನಿನ್ನ ಕುದುರೆ ಅದರ ಮುಂದೆ ಚಂದ್ರನೂ ಸಹ ಒಂದು ಹಳೆಯ ಕುಂಟನ ಹಾಗೆ ಕಾಣುತ್ತದೆ. ಚಂದ್ರ ಅದರ ಗೊರಸಿನ ಲಾಳವಾಗುವುದನ್ನು ಬಯಸುತ್ತದೆ ಅದು ಒಂದು ಹೆಜ್ಜೆ ಮುಂದಿಟ್ಟರೇ ಹೆದರಿಕೆ ಬೆದರಿಕೆ ತನ್ನತಾನೆ ಹೊರಟು ಹೋಗುತ್ತದೆ. ಯಾವ ಕಡೆ ನಿನ್ನ ವಿಜಯದ ಚಿನ್ಹೆ ಕಂಡು ಬರುತ್ತದೆಯೋ ಆಗ ಭೂಮಿ ಆಕಾಶ ಎರಡುವೇ ಅಭಯಾಶ್ರಯ ಬೇಡುತ್ತದೆ. ಶತ್ರು ನಿನ್ನ ಮುಖ ನೋಡಿದ ತಕ್ಷಣ ಕಣ್ಣು ಮುಚ್ಚಿಕೊಳ್ಳುತ್ತಾನೆ ಏಕೆಂದರೆ ನೀನು ಮೊದಲು ಹೊಡೆಯುವೆ ನಂತರ ಕೇಳುವೆ. ನಿನ್ನ ಮುಂದೆ ಎಷ್ಟೊಂದು ಕವಚಧಾರಿಗಳಿದ್ದಾರೆಯೋ ಅವರೆಲ್ಲ ರೋಮರೋಮವಾಗಿ ಬಂದು ದಾಸರಾಗುವರು. ಮುಂದಿನ ಸಾಲಿನಿಂದ ಹೊರ ಬಂದು ನೀನು ನಿನ್ನ ಖಡ್ಗವನ್ನು ತುಂಬಿಹರಿಸಿದರೆ ಆಕಾಶ ಮೇಘದ ಚೂರು ಹಾಗೆ ಕಾಣಿಸುತ್ತದೆ. ನಿನ್ನ ಖಡ್ಗದ ಸಿಟ್ಟು ಉರಿಗಾಳಿ ಹಾಗೆ ಅದು ಎಲ್ಲಿ ಹರಿಯುತ್ತದೆಯೋ ಅಲ್ಲಿ ನೆಲ ಶವಗಳಿಂದ ತುಂಬಿಹೋಗುತ್ತದೆ. ಸಮರದಲ್ಲಿ ಏನಾದರೂ ಮಾಲಿಯ ಆಟ ಆಡಿದರೆ ಅವರ ಹುಟ್ಟಲ್ಲಿ ಭಾಲೆಯ ಬಳ್ಳಿಯ ತೇಪೆ ಹಾಕಲಾಗುತ್ತದೆ. ನಿತ್ಯವೂ ಶತ್ರುವಿನ ನೋವಿನ ಮೇಲೆ ನಿನ್ನ ದರ್ಪವಿರುತ್ತದೆ, ನಿನ್ನ ಒಂದು ಸದ್ದಿನ ಮೇಲೆ ಮೃತ್ಯು ಜೀವ ತೆಗೆಯಲು ಸಿದ್ಧವಾಗಿರುತ್ತದೆ. ಯಾವಾಗಲಿಂದ ನೀನು ಲೋಕದಲ್ಲಿ ಶತ್ರುವಿನ ಮೇಲೆ ಹಲ್ಲೆ ನಡೆಸಿದೆಯೋ ಆವಾಗಲಿಂದ ಪ್ರತಿಯೊಂದು ಜೀವ ತನ್ನ ಮೈಯನ್ನು ಅನುಸರಣಿಸುತ್ತಿದೆ. ನಾಶದ ಕಡೆ ಬೇಗನೇ ಹೆಜ್ಜೆ ಇಟ್ಟಲ್ಲಿ ಮತ್ತೆ ಜೀವನದ ಹೆಜ್ಜೆ ಇಡಲು ಸಾಧ್ಯವಿಲ್ಲ. ನಿನ್ನ ಎದುರಾಳಿಯನ್ನು ನುಚ್ಚುನೂರು ಮಾಡುವುದಕ್ಕೆ ಈ ಲೋಕ ಇಕ್ಕಟ್ಟವಾಗುತ್ತದೆ ಯಾವುದನ್ನು ನಾವು ವಿಶಾಲವೆಂದು ಬರೆಯುತ್ತಿದ್ದೇವೆ ಅವನಿಗೆ ಗೋರಿಯ ಕೋಣೆಯು ಸಹ ಸಂಕುಚಿತ ವಾಗುತ್ತದೆ. ಮೆಲ್ಲ ಮೆಲ್ಲನೇ ನಿನ್ನ ವಿರೋಧಿಗಳು ಕಡಿಮೆಯಾಗುತ್ತಿರುವರು, ಹೀಗೆ ಮುಂದೆಯೂ ಸಹ ಅವರು ಈ ಲೋಕದಿಂದ ಅಳಿಸಲ್ಪಡುತ್ತವೇ. ನಿನ್ನ ಎಲ್ಲ ಗೆಳೆಯರಲ್ಲಿ ಯಾರಾದರೂ ಕೇಳಿದರೇ ಅವರಿಗೆ ಶತ್ರುವಿನ ಹೆಸರು ಜ್ಞಾಪಕ ಬರುವುದಿಲ್ಲ. ಸಿಕಂದರನಿಗೆ ಅಜಯವೆಂದು

ಹೇಳುತ್ತಾರೆ ಅವನ ಬಳಿ ಅರಿಸ್ಟಾಟಲಿನ ಸಲಹೆ ಮತ್ತು ದೊಡ್ಡ ಸೈನ್ಯವಿತ್ತು. ನಿನ್ನ ಸೈನ್ಯ ಸಿಕಂದರನಿಂದ ಕಡಿಮೆ ಏನೂ ಅಲ್ಲ, ಆದರೆ ಅರಿಸ್ಟಾಟಲ್ ನಿತ್ಯವೂ ನಿನ್ನ ಶಿಷ್ಯನಾಗಿರುವನು. ನೀನಾದರು ಕೆಡಕಿನ ಉಪಾಯ ಮಾಡಬೇಕೆಂದು ಬಯಸಿದರೆ ಅರಿಸ್ಟಾಟಲ್ ಸಹ ಅವನ ಧರ್ಮಗುರುವಾಗಿ ಬರಲು ಸಾಧ್ಯವಿಲ್ಲ. ಸ್ವತಃ ಬುದ್ಧಿಯೂ ಲಕ್ಷ ದಂಡಿನೊಡನೆ ಆಕ್ರಮಿಸಿದರೆ ನಿನ್ನ ಸೈನ್ಯ ತನ್ನಲ್ಲೇ ಆಕಾಶದಿಂದ ಬಂದು ಜಯವಾಗುತ್ತದೆ. ನಾವು ಬೇರೆ ಬಾದಶಾಹರ ಸೇನೆಯನ್ನು ನೋಡಿದಾಗ ಆ ಬಾದಶಾಹನ ಇಡೀ ಸೇನೆ ನಿನ್ನ ಒಬ್ಬ ಮಂತ್ರಿ ಅವನ ಮೇಲೆ ಪ್ರಬಲವಾಗಿರುವನು. ನಿನ್ನ ಸೇನೆಯ ಸೈನಿಕರು ಕೋಪಗೊಂಡು ತಲೆ ಮೇಲೆ ಮುಷ್ಟಿ ಹೊಡೆದರೆ ಕೇವಲ ಮಿದುಳನ್ನು ಹೊರಗೆ ತೆಗೆದು ಹಾಕುವುದನ್ನು ಬಿಟ್ಟರೆ ಬೇರೆ ಏನೂ ಕೆಲಸ ಮಾಡುವುದಿಲ್ಲ. ನಿನ್ನ ಸೈನ್ಯದ ಪ್ರತಿಯೊಬ್ಬ ಸಿಪಾಯಿಯೂ ಜ್ವಾಲೆ ಇದ್ದ ಹಾಗೆ. ಅದು ಸುಡದಿದ್ದರೂ ಸಹ ಉದ್ರೇಕಗೊಳ್ಳುತ್ತದೆ. ನಿನ್ನ ಶತ್ರು ನಿನ್ನ ನಿರ್ಮಲ ಹೃದಯದ ಮೇಲೆ ಕಣ್ಣು ಹಾಕಲು ಪ್ರಯತ್ನಿಸಿದರೆ ಅವನ ಕಣ್ಣಲ್ಲಿ ಇತ್ತಿಂದತ್ತ ಮಣ್ಣು ಬೀಳುತ್ತದೆ. ಜಯದ ಸೂರ್ಯ ನಿತ್ಯವೂ ನಿನ್ನದೇ ಜಪ ಮಾಡುತ್ತಿರುತ್ತದೆ, ಹಾಗೂ ಸಂತೋಷದ ಮುಚ್ಚಿರುವ ಕೋಟೆಯನ್ನು ನಿನ್ನ ಸುತ್ತ ತೆಗೆದು ಬಿಡುತ್ತದೆ. ನಿನಗೆ ದೇವರಲ್ಲಿ ಸಂಪೂರ್ಣ ನಂಬಿಕೆ, ಎರಡು ಲೋಕಗಳಲ್ಲಿ ಅಲ್ಲಾಹನೇ ನಿನಗೆ ಸಾಕು. ನಿನಗೆ ಮುಸ್ತಫಾರವರ ಬಹಳ ಬಲವಿದೆ, ಪ್ರತಿಕ್ಷಣ ಶಾಹೆ ಮರ್ದಾನ್ (ಅಲಿ)ರವರ ಸಹಾಯ ಸಿಗುತ್ತಿರುತ್ತದೆ. ನೀನು ಶಾಹರಿಂದ ಅವರ ಶಾಹಿ(ಅರಸತನ) ಕಸಿದುಕೊಳ್ಳಬಹುದು, ಹಾಗೂ ರಾಜರಿಗೆ ಅವರ ರಾಜ್ಯ ಮತ್ತೆ ಕೊಡಬಹುದು. ನೀನು ವಿಚಾರಗಳಿಗೆ ಹೊಸ ದಿಕ್ಕನ್ನು ತೋರುವೆ, ಹಾಗೂ ಎಲ್ಲ ಸಿಪಾಯಿಗಳು ಅದನ್ನು ಅನುಸರಿಸುತ್ತಾರೆ. ದೊಡ್ಡ ಕೌಶಲ್ಯಗಳ ನೀನೇ ಗುರು, ನೀನೇ ಕೌಶಲ್ಯಗಳನ್ನು ಕಲಿಸಿ ನೀನೇ ಅದನ್ನು ಪ್ರಶಂಸುತ್ತಿಯಾ. ನೀನು ಗುರುವೆಂದು ಲೋಕಕ್ಕೆ ಸಾಬೀತು ಪಡೆಸಿದೆ, ಇದರ ಸಾಕ್ಷಿ ಎಂದರೆ ಇಂದು ನಿನ್ನ ಕಲಾಪೋಷಣೆ. ನಿನ್ನ ಪುಣ್ಯದ ನೀರಿನಿಂದ ಇಡೀ ದಕ್ಷಿಣದಲ್ಲಿ ಈ ನಗರ ಹೂಗಳಿಂದ ತುಂಬಿ ಹೂಬನವಾಗಿದೆ. ಎಂದಿನಿಂದ ನೀನು ಸಭೆಯನ್ನು ಹೂ ರಾಶಿ ಮಾಡಿದೆಯೋ ಅಂದಿನಿಂದ ಇಡೀ ಪ್ರಪಂಚ ಸುಗಂಧದಿಂದ ತುಂಬಿ ತುಳುಕಾಡುತ್ತಿದೆ. ನೀನು ಎಲ್ಲ ರೀತಿಯ ಮನೋವೃತ್ತಿಗೆ ಬಣ್ಣ ನೀಡಿದೆ, ಯಾರು ಚಿತ್ರಕಾರರೆಂದು ಇರುವರೋ ಅವರೂ ಸಹ ನಿನ್ನ ಜೊತೆಯಲ್ಲಿದ್ದು ತನ್ನ ಬುದ್ಧಿವಂತಿಕೆಯ ಸಾಕ್ಷಿ ನೀಡಲಾರವು. ನೀನು ನಿನ್ನ ಗೆಳತಿಯರೊಡನೆ ಇದ್ದರೆ, ಉತ್ಸವ ಆಗಿ ಹೋಗುತ್ತದೆ ಹಾಗೂ ನಿನ್ನ ಪೋಷಣೆಯಲ್ಲಿ ಹೊಸ ಚಿತ್ರಗಳಾಗಿ ಹೋಗುತ್ತವೆ. ನಿನ್ನ ದೃಷ್ಟಿ ಸಖಿಯರಿಗೆ ಆಸಕ್ತಿಯನ್ನುಂಟು ಮಾಡುತ್ತದೆ ನಿನ್ನ ಕಣ್ಣುಸನ್ನೆಯಲ್ಲಿ ನಿಸ್ಸಂದೇಹವಾಗಿ ಮಾಟವಿದೆ. ಪ್ರತಿಯೊಂದು ಸುಂದರ ಹೂವು ನಿನ್ನ ಜೊತೆಯಲ್ಲಿದ್ದು ಅದರಲ್ಲಿ ಒಳ್ಳೆ ಪರಿಮಳ ಹಾಗೂ ಒಳ್ಳೆಯ ಬಣ್ಣ ಹುಟ್ಟಿರುತ್ತದೆ. ಪವಾಡಗಳಿಂದ ಮನರಂಜಿಸುವವರೂ ಸಹ ಅನೇಕ ವಸ್ತುಗಳು ನಿನ್ನಿಂದ ಪಡೆದುಕೊಂಡು ಹೋಗುವರು, ಆದರೇ ಓ ಬಾದಶಾಹ

ನಿನ್ನಂತಹ ಜನಗುರಿತಿಸವನು ಯಾರೂ ಇಲ್ಲ. ಅವರು ಏಳು ತೆರೆಗಳ ಹಿಂದಿಲಿಂದಲೂ ಇಣಿಕಿ ನೋಡುತ್ತಿದ್ದರು ಸಹ ನಿನ್ನ ಚಂಚಲ ಕಣ್ಣುಗೊಂಬೆಗಳು ಹಾರಿ ಅವುಗಳನ್ನು ನೋಡಬಲ್ಲವು. ನೀನು ಮಾತನಾಡಿದರೆ ನಿನ್ನ ಮಾತುಗಳಿಂದ ಕಲ್ಲುಸಕ್ಕರೆಯ ಸಿಹಿ ತೊಟ್ಟಿಕ್ಕುತ್ತದೆ, ನಿನ್ನ ಕಣ್ಣುಗಳಿಂದ ಮದ್ಯದ ಅಮಲೇರಿದಂತೆ ಕಾಣುತ್ತದೆ. ನಿನ್ನ ಮನಸು ನಿರ್ಮಲ ನಿನ್ನ ಸಹಜಗುಣ ಶುದ್ಧ, ಹೀಗೇ ನಿನ್ನ ವಾಗ್ಮಿತೆ ಸೂಕ್ಷ್ಮಮತಿಯೂ ಹೌದು ಹಾಗೂ ದೋಷಾನ್ವೇಷಣೆ. ನಿನ್ನ ಹೃದಯದ ಸಮುದ್ರ ಅಲೆ ಒಂದು ಪದ್ಯ, ನಿನ್ನ ಅನುಚಿಂತನೆಯ ಸೈನ್ಯದ ಮುಂದೆ ಗಗನವೂ ಕೂಡ ತಗ್ಗುತ್ತದೆ. ನಿನ್ನ ಪ್ರತಿಯೊಂದು ಕವನ ಹತಭಾಗಿಗೆ ಒಂದು ಹೊಸ ಜನ್ಮ ನೀಡುತ್ತದೆ, ಅದು ಪ್ರವಾದಿ ಯೇಸುರವರ ಹಾಗೆ ಒಂದು ಹೊಸ ಆತ್ಮವನ್ನು ಊದಿ ಅವನಿಗೆ ಪ್ರವಾದಿ ಖಿಝುರ್ ಹಾಗೆ ಮಾಡುತ್ತದೆ. ನಿನ್ನ ಒಂದೊಂದು ಪದವೂ ಕತ್ತಲೆಯ ಸಾಗರದಲ್ಲಿ ಅಮೃತ, ಸೂರ್ಯಕ್ಕೆ ಕಿರಣವೋ ಅಥವಾ ಪೃಥ್ವಿಗೆ ರಾತ್ರಿ, ಗಗನದ ಮೇಲೆ ಪ್ರಶಂಸೆ ಗೀತೆಯ ಹೊದಿಕೆಯಾಯಿತು ಅದರ ಒಂದೊಂದು ಪೂರ್ವ ಪದ್ಯದ ಜ್ಯೋತಿ ನಿನಗೆ ಒಂದು ನಿರ್ಮಲ ಕವನ. ಕವಿಗಳು ನಿನ್ನ ಕವನದಿಂದ ವಿವೇಚನೆ ಕಲಿತರು, ಛಂದೋಬದ್ಧವಾದ ಕವನ ರಚಿಸಿದ್ದರಿಂದ ನಿನ್ನ ಕವನ ಕಾಂತಿ ಪಡೆಯಿತು. ಹೊಸ ಮಾದರಿ ಒಳ್ಳೆ ನೆಯ್ದು ಹಾಗೂ ಮನಮೆಚ್ಚುವಂತಹದು, ಅವು ಅಭಿರುಚಿಯನ್ನು ಕೆರಳಿಸುವ ವಿಷಯಗಳು ಹಾಗೂ ಅರ್ಥಶ್ರೇಷ್ಠ ಹೊಂದಿರುತ್ತದೆ. ನೀನು ಅರ್ಥ ಹಾಗೂ ಸ್ವರೂಪದ ಶ್ರೀಮಂತ, ಹಾಗೂ ಈ ಯುಗದಲ್ಲಿ ನಿನ್ನಂತಹ ಸುಂದರವಾಗಿ ಬರೆಯುವವ ಒಬ್ಬನಾದರೂ ಕಾಣುವುದಿಲ್ಲ. ನಿನ್ನ ಕೈಯಲ್ಲಿ ಲೇಖನಿ ಕಬ್ಬಾಗುತ್ತದೆ, ಹಾಗೂ ದವತಿ ಇಂದು ಅಮೃತ ತುಂಬಿದ ಚಿಲುಮೆಯಾಗಿದೆ. ನಿನ್ನ ಎರಡು ಪದ್ಯಗಳ ಕವನ ಹೃದಯಚೂರನ್ನು ಅಲಂಕರಿಸುತ್ತದೆ, ನಿನ್ನ ಬರವಣಿಗೆಯಿಂದ ಕಣ್ಣು ಮೋಸ ಹೋಗುತ್ತದೆ. ನಿನ್ನ ಬರವಣಿಗೆ ಸೂರ್ಯನ ಶಿರೋನಾಮವಾಗುತ್ತೆ ಹಾಗೂ ನಿನ್ನ ಪ್ರತಿಯೊಂದು ಎರಡು ಪದ್ಯಗಳ ಕವನ ಸ್ವರ್ಗದ ಒಂದೊಂದು ಭಾಗದಂತೆ. ನಿನ್ನ ಬರವಣಿಗೆಯಲ್ಲಿ ಒಂದು ಆನಂದಿತ ಆತ್ಮ ಅಡಗಿರುವ ಹಾಗೆ ಕಾಣಿಸುತ್ತದೆ. ಪ್ರತಿಯೊಂದು ಅಕ್ಷರವೂ ಸಹ ನಿನ್ನ ಪ್ರಿಯೆ ಮುಖದಂತೆ ಕಾಣುತ್ತದೆ. ನಿನ್ನ ಬರವಣಿಗೆಯಲ್ಲಿ ಪವಾಡದ ಒಳ್ಳೆ ಕೌಶಲ್ಯ/ಆಚಾರವಿದೆ ಅದು ಕಣ್ಣಲ್ಲೇ ಮೊದಲು ಮಾತನಾಡುತ್ತದೆ. ಕರಕೌಶಲ್ಯ ಇಲ್ಲಿಯವರಿಗೆ ಏನು ಪ್ರಕಟವಾಗಿದೆಯೋ ಅವುಗಳ ಒಡೆಯನಾಗಿ ನೀನು ಹುಟ್ಟಿದ್ದಿಯ. ನಿನ್ನ ಮುಂದೆ ಕೌಶಲ್ಯದಲ್ಲಿ ಎಲ್ಲಿ ಏನೂ ಇಲ್ಲ, ನೀನೇ ಕೌಶಲ್ಯ ಹಾಗೂ ಕರಕುಶಲಕರ್ಮಿಗೆ ಗೌರವ ಕೊಟ್ಟೆ. ನಿನ್ನ ದಯೆಯಿಂದ ತರಬೇತಿಯ ದೃಷ್ಟಿಯಾಗುತ್ತದೆ, ನಿನ್ನ ಬಳಿ ತರಬೇತಿ ಪಡೆದವನು ಯುಗದಲ್ಲಿ ಮುತ್ತು ರತ್ನಗಳ ಗಣಿಯಾಗುತ್ತಾನೆ. ನೀನು ಕುಶಲವನ್ನು ಒಳ್ಳೆಮಾರ್ಗದಿಂದ ಹೇಗೆ ಕೊಂಡುಕೊಡಿರುವೆ ಎಂದರೆ ಎರಡು ಲೋಕಗಳು ತನ್ನ ಅಸ್ತಿತ್ವದ ದಿನದಿಂದಲೇ ಅದರ ಲಾಭ ಪಡೆಯುತ್ತಿವೆ. ನಿನ್ನ ಕರ್ಮಗಳು ಗೌರವಾನ್ವಿತ, ಅಲ್ಲಾಹರೂ ಸಹ ಒಪ್ಪುವಂತಹವೂ, ಏಕೆಂದರೆ ನಿನ್ನ

ಮಾತು ಮಾರ್ಗದರ್ಶಕ ಪ್ರವಾದಿಯರ ಇಸ್ಲಾಮಿ ಕಾನೂನಿ ಪ್ರಕಾರವಿರುತ್ತದೆ. ನಿನ್ನ ಜೀವದ ಶ್ರೇಷ್ಠ ಶಕ್ತಿ ಎಂದರೆ ನಿತ್ಯವೂ ಅಲ್ಲಾಹನ ಸ್ಮರಣೆ, ನಿನ್ನ ಕರ್ಮಗಳು ಡಂಭಾಚಾರದಿಂದ ಖಾಲಿ ಕಾಣಿಸುತ್ತದೆ, ಪವಾಡಗಳು ನಿನ್ನ ಹಾಲಿ ಕರ್ಮಕಾಣಿಸುತ್ತದೆ. ಪ್ರವಾದಿಗಳಲ್ಲಿ ಮೊದಲಿಗೆ ಸುಲ್ತಾನ ಆದವನು, ದೇವರಲ್ಲಿ ಆಧಿಪತ್ಯ ಬೇಡದವರು ಸುಲೈಮಾನರು. ಆದರೇ ಓ ಬಲಿಷ್ಠನೇ ನೋಡು ದೇವರ ಕೃಪೆ ಎಂದರೆ ಅವನು ನಿನ್ನನ್ನು ಬಾದಶಾಹನನ್ನಾಗಿ ಮಾಡಿದ ಹಾಗೂ ದೇವಭಕ್ತನನ್ನೂ ಮಾಡಿದ. ನಿನ್ನ ಮಾತಿನಲ್ಲಿ ಪವಾಡ ಪ್ರಕಟವಾಗುತ್ತದೆ, ನಿನ್ನ ಕೈಯಲ್ಲಿ ನಿತ್ಯ ಕಲ್ಪನೆ ಪ್ರಕಟವಾಗುತ್ತದೆ. ನಿನ್ನ ದರ್ಪದ ಒಂದು ದೃಷ್ಟಿಬಿದ್ದರೇ ಅದು ಆಕಾಶಗನ್ನೇ ಸುಟ್ಟು ಕಾಡಿಗೆ ಮಾಡುತ್ತದೆ. ನೀನು ಅಲ್ಪ ಸ್ವಲ್ಪ ದಯಾಳು ಪೂರ್ವಕ ಕೆಲಸ ಮಾಡಿದರೆ ಬೆಂಕಿಯೂ ಕರಗಿ ನಿರ್ಮಲ ನೀರಾಗುತ್ತದೆ. ನೀನು ಗುಣಕ್ಕೆ ಆದ್ಯತೆ ನೀಡಿದರೆ ಜನ ನಿನ್ನನ್ನು ಗುರುತಿಸುತ್ತಾರೆ ಆಗ ಅಲ್ಲಿ ನಿನ್ನ ನಾಲಿಗೆಯಿಂದ ಅಮೃತ ಚಿಲುಮೆಯನ್ನು ಏರಿಸು. ನಿನ್ನ ಸ್ವಭಾವ ಒಂದು ನಿರ್ಜೀವಿಗೆ ಅಮೃತ, ನಿನ್ನ ಪ್ರೀತಿಯಿಂದ ತುಂಬಿದ ಮಾತುಗಳು ಅನಂತ ಜೀವನ ನೀಡುತ್ತದೆ. ಬುದ್ಧಿಜೀವಿ ಸಹ ನಿನ್ನಿಂದ ಮಾತು ಕಲಿಯುತ್ತಾನೆ, ಕವಿಯೂ ಸಹ ನಿನ್ನಿಂದ ಕವಿತೆ ಕಲಿಯುತ್ತಾನೆ. ನಿನ್ನ ಜೊತೆಯಿಂದ ಸಹಜ ಗುಣ ಸಾರಸರ್ವಸ್ವವಾಗುತ್ತದೆ ಹಾಗೂ ಕರಕುಶಲ ನಿನ್ನ ಮೆಚ್ಚುಕೆಯಿಂದ ಕೊನೆಗೊಳ್ಳುತ್ತದೆ. ಲೋಕದಲ್ಲಿ ಆದಿಕಾಲದಿಂದಲೂ ನಡೆದ ಬಂದ ಪದ್ದತಿ ಎಂದರೆ ಬಾದಶಾಹನ ಬಳಿ ಬುದ್ದಿಯುಳ್ಳವರ ಸಾಮಿಪ್ಯ ಇರುತ್ತದೆ. ಎಡ–ಬಲವಿದ್ದು ಒಳ್ಳೆ ಮಾತನಾಡುತ್ತ ಬಾದಶಾಹನ ಸಹಜ ಪ್ರವೃತ್ತಿಯನ್ನು ಅಲಂಕರಿಸುತ್ತಾರೆ. ಆದರೆ ಇಂದು ದೇವ ನಿನ್ನಲ್ಲಿ ಶಕ್ತಿಯನ್ನು ನೀಡಿದ್ದಾನೆ ಎಂದರೆ ನೀನು ಅವರೆಲ್ಲರಿಗೂ ತರಬೇತಿ ನೀಡುತ್ತಿದ್ದಿಯಾ. ನಿನ್ನ ಚಾತುರ್ಯದ ಮುಂದೆ ಆಕಾಶಗಳು ಕುತ್ಸಿತವಾಗಿವೆ, ನಿನ್ನ ಆಜ್ಞೆಯಿಂದ ಬೆಟ್ಟದ ಹೃದಯವೂ ಸಹ ಸೀಳಿ ಹೋಗುತ್ತದೆ. ಇಂದಿನ ಯುಗದಲ್ಲಿ ನಿನ್ನ ಧ್ರುವಗಳು ಸ್ಥಿರವಾಗಿದೆ, ನೀನೇ ಯುಗದ ಶಿಶುವಿನ ಉಯ್ಯಾಲೆಯ ಆಕಾಶ. ನಿನ್ನ ಯುಗದಲ್ಲಿ ಜೀವನ ಪದ್ಧತಿ ಹಾಗೂ ಅತ್ಯಾಸೆಯ ಜೋರಿದೆ, ನಿನ್ನ ನ್ಯಾಯದಿಂದ ಹಾವು ಮತ್ತು ಇರುವೆ ಸೇರಿ ಜೀವನ ಸಾಗಿಸುತ್ತಿದ್ದಾರೆ. ನಿನ್ನ ದರ್ಪದಿಂದ ಬೆಂಕಿ ಹೋಗಿ ಕಲ್ಲಲ್ಲಿ ಅಡಗಿಕೊಂಡಿದೆ, ಅದರ ರಕ್ಷಣೆಗಾಗಿ ನೀನು ನೀರಲ್ಲಿ ಸಂತೋಷ ಇಟ್ಟಿರುವೆ. ನಿನ್ನಂತಹ ಹುಲಿ ಮಧ್ಯದಲ್ಲಿದ್ದಿರುವುದರಿಂದ ಜೀವಕ್ಕೆ ಯಾವುದೇ ಹೆದರಿಕೆ ಇಲ್ಲ, ನೀನು ನೀರು ಮತ್ತು ಬೆಂಕಿಯನ್ನು ಖಡ್ಗದ ಮಧ್ಯದಲ್ಲಿಟ್ಟಿದ್ದಿಯಾ. ವಿಜಯ ನಿನ್ನ ಕುದುರೆಯ ಮುಂದೆ ವೇಗವಾಗಿವೆ. ಕ್ರೋಧ ನಿನ್ನ ಖಡ್ಗದ ಮುಂದೆ ಎರಡು ಭಾಗವಾಗುತ್ತದೆ. ಮೇಘ ನಿನ್ನ ಸೇನೆಯ ನಗಾರಿಹಾಗೆ ಕಾಣುತ್ತದೆ, ಮುಂಜಾನೆಯ ಸ್ತಂಬ ನಿನ್ನ ಆನೆಯ ಮೇಲಿರುವ ಇಳಿಜಾರು/ಗುರಾಣಿ ಹಾಗೆ. ಸೂರ್ಯ ನಿನ್ನ ಪ್ರಪಂಚಕ್ಕೆ ಗುರಾಣಿಯ ಸ್ತಂಬದ ಹಾಗೆ ಆಗಿದೆ, ಪ್ರಪಂಚ ಅಂಕುಶದ ಹಾಗಿದೆ, ಅದು ನಿನಗೆ ಹೊಸ ಚಂದ್ರದ ಹಾಗೆ ಕಾಣಿಸುತ್ತಿದೆ. ನಿನ್ನ ಶೌರ್ಯದನಡಿಗೆ ಲೋಕಕ್ಕೆ

ತಂಪು ಮಾಡಿತು, ಓ ಶಾಹನೆ ನಿನ್ನ ಮುಖದಲ್ಲಿ ಈ ಗುಣ ಸದೈವ ಕಾಣಿಸುತ್ತದೆ. ನಿಸ್ಸಹಾಯಕರಿಗೆ ನೀನೇ ಸಹಾಯಕ, ಅವರಿಗೆ ದೇವ ಆಶ್ರಯ ನೀಡುವನೇ ನೀನು. ಎಷ್ಟೊಂದು ಜನರಿದ್ದಾರೆ ಅವರು ಬಾದಶಾಹರಾಗಲಿ ಗುಲಾಮರಾಗಲಿ ಅವರೆಲ್ಲರೂ ನಿನಗೆ ಕೃತಜ್ಞತರು, ಆದರೆ ನಿನ್ನಲ್ಲಿ ಸಮುದಾಯದ ದರ್ಪವೇ ಇಲ್ಲ. ನೀನೊಬ್ಬ ಮುಸಲ್ಮಾನ, ನಿನ್ನ ಹೃದಯ ನಿರ್ಮಲವಾಗಿದೆ, ನಿನ್ನನ್ನು ವಿರೋಧಿಸುವವನು ಡಾಂಭಿಕ. ಯಾರು ನಿನ್ನ ಕೆಟ್ಟದನ್ನು ಬಯಸುವನೋ ಅವನ ಮುಂದೆ ಅವನ ಕೆಡಕು ಬರುತ್ತದೆ. ಯೋಚನೆ ನಿನ್ನ ಕಡೆ ತಿರುಗಿದೆ ಆದರೆ ಅದೇ ವ್ಯಾಕುಲಗೊಂಡು ತನ್ನ ಕೆಡಕಿನ ಮೇಲೆ ತಾನೆ ಲಜ್ಜಿತ:. ನೀನು ಎಲ್ಲ ಶಾಹರ ಸಿಂಹಾಸನದ ಒಡೆಯನಾಗಿದ್ದಿಯ, ಇಂದು ದಕ್ಷಿಣದ ಎಂತಹ ಅಹೋಭಾಗ್ಯ ಎಷ್ಟೊಂದು ಮಹನೀಯರೆಲ್ಲರೂ ಇಲ್ಲಿ ಬಂದರು, ಬಾದಶಾಹರಾದರೂ ಸಹ ನೀನು ಅವರನ್ನು ಅನುಸರಿಸಿದೆ. ಇಂದು ಏನು ಶೌರ್ಯವನ್ನು ತೋರುತ್ತಿರುವೆ ಆ ರೀತಿಯ ಶೌರ್ಯ ಅಥವಾ ವೀರತನ ರುಸ್ತುಂ ಆಗಲಿ ಅಥವಾ ಬೇರೆ ಯಾರೂ ತೋರಲಿಲ್ಲ ಇದು ನಿನ್ನ ಭಾಗದಲ್ಲಿ ಬಂದಿದೆ. ವಿಜಯ ಖಂಡಿತವಾಗಿಯೂ ಅಲಿ ಆದಿಲ್ ಶಾಹನ ಹಕ್ಕು, ಅದನ್ನು ಬರೆಯುವ ಅರ್ಹತೆ ನುಸ್ರತಿಗೆ ಇದೆ. ನಾನು ಈ ನಾವೆ ಮೇಲೆ ಬಹಳ ಉತ್ತಮ ಶೈಲಿಯಲ್ಲಿ ಲೇಖಣಿ ನಡೆಸಿದ್ದೇನೆ ನೋಡಿ "ಅಲಿ ನಾಮಾ"ದಲ್ಲಿ ನಾನು ಏನು ಬರೆದಿರುವೆನು. ಈ ಕೆಲಸದಲ್ಲಿ ಶಾಹೆ ನಜಫ಼್ (ಹಝ್ರತ್ ಅಲಿ)ರವರೂ ಸಹ ಸಹಾಯ ಮಾಡಿರುವರು ಅವರು ಈ ಭಾಷೆಯಲ್ಲಿ ಅಧಿಕ ಸನ್ಮಾನ್ಯತೆಯನ್ನು ನೀಡಿರುವರು. ನಾನು ಯಾವ ಕಡೆ ಗಮನ ಹರೆಸಿದೆನೋ ಅದರಲ್ಲಿ ನಾನು ನನ್ನ ಕೌಶಲ್ಯತೆಯ ಪರಿಪೂರ್ಣತೆಯನ್ನು ತೋರಿರುವೆ. ಒಂದೊಂದು ರಣಸಂಬಂಧಿತ ಗೀತೆಯನ್ನು ನಾನು ಹೇಳಿದರೇ ವೀರರಿಗೆ ನನ್ನ ಶಕ್ತಿಯ ಅಂದಾಜು ಆಗುತ್ತದೆ. ನಾನು ಈ ಉತ್ತಮ ನಾಮಾವನ್ನು (ಅಲಿ ನಾಮಾ)ಕವಿತೆಯ ರೂಪದಲ್ಲಿ ಬರೆಯುವ ಕಾರಣಗಳೇನೆಂದು ಮೊದಲು ಕೇಳಿ. (೩೨೧–೪೩೫)

ಈ ಕೃತಿಯನ್ನು ನಾನು ಕಾವ್ಯದಲ್ಲಿ ಬರೆದೆ, ಇದರ ಕಾರಣವೆಂದರೆ ನನ್ನ ನಿರ್ಮಲ ನದಿಯಂತಹ ಪ್ರವೃತ್ತಿಯಲ್ಲಿ ಹೇಗೆ ಅಲೆಗಳು ಏದ್ದವು.

ಒಂದು ರಾತ್ರಿ ಆಕಾಶದಲ್ಲಿ ನಕ್ಷತ್ರಗಳ ಸಭೆ ಸೇರಿತ್ತು, ಅದರ ಮಧ್ಯೆ ಹುಣ್ಣಿಮೆಯ ಸಂಪೂರ್ಣ ಚಂದ್ರನ ಮೇಣದ ಬತ್ತಿ ಉರಿಯುತ್ತಿತ್ತು. ಅದರ ಬೆಳಕಿನಿಂದ ಇಡೀ ಗಗನ ಮಿನುಗುತ್ತಿತ್ತು ಆ ಗವಾಕ್ಷಿ ಹರುಷದಿಂದ ಜ್ಯೋತಿಯಿಂದ ತುಂಬಿ ತುಳುಕಾಡುತ್ತಿತ್ತು. ಗಾಳಿ ಖಂಡಿತವಾಗಿಯೂ ಸಾಲು(ಒಂದು ಬಟ್ಟೆಯ ಹೆಸರು)ವಿನ ಬಟ್ಟೆ ಹೊದಿಕೊಂಡಿತ್ತು, ಇಡೀ ಭೂಮಿ ತಗಟು (ಬಟ್ಟೆಯ ಹೆಸರು, ಬಟ್ಟೆಯ ಮೇಲೆ ಜರಿ ಛಾಪೆ) ಹೊದ್ದುಕೊಂಡು ಕುಳಿತಿತ್ತು. ಕರಿಬಣ್ಣಗಳಿಗೆ ಚಂದ್ರ ರತ್ನದ ಹೊಳಪನ್ನು ಕೊಟ್ಟಿದ್ದ (ಬೆಳದಿಂಗಳಿನಿಂದ ಕಪ್ಪುವಸ್ತುಗಳೆಲ್ಲ ರತ್ನಗಳಂತೆ ಹೊಳೆಯುತ್ತಿತ್ತು), ಹರಳು

ಕಲ್ಲುಗಳಿಗೆ ಸ್ವಚ್ಛ ಸ್ಪಟಿಕ ಮಾಡಿದ್ದ. (ಹರಳು ಕಲ್ಲುಗಳೆಲ್ಲ ಬೆಳದಿಂಗಳಿಂದ ಶುಭ್ರ ಸ್ಪಟಿಕದಂತೆ ಮಿನುಗುತ್ತಿದ್ದವು) ನೀರನ್ನು ನಾನು ಕಣ್ಣು ತೆರೆದು ನೋಡಲು ಸಾಧ್ಯವಾಗಲಿಲ್ಲ ಏಕೆಂದರೆ ಅದು ಪಾದರಸದಂತೆ ನಿರ್ಮಲ ಹಾಗೂ ಶುದ್ಧವಾಗಿತ್ತು ಅದನ್ನು ನೋಡಿ ನಾನು ಪಾದರಸ ಸಹ ಮರೆತೆ. ದೃಷ್ಟಿಯಲ್ಲಿ ಉದ್ಯಾನದ ದೃಶ್ಯಗಳನ್ನು ಹಿಡಿದಾಗ ನಿರ್ಮಲತೆಯ ಕಾರಣದಿಂದ ಹೃದಯಗಳು ಬೆಳಗಿದವು. ಬಾದಶಾಹ ಅಲಿ ಆದಿಲ್ ಶಾಹರು ಸಹ ಈ ಬೆಳದಿಂಗಳನ್ನು ಬಹಳ ಮೆಚ್ಚಿದರು, ಅಂದು ಎಷ್ಟೊಂದು ಹೆಸರಾಂತ ಸೇವಕರು ಸೇವೆಯಲ್ಲಿದ್ದರೋ ಅವರೂ ಸಹ ಆ ಬೆಳದಿಂಗಳಿಗೆ ಬಹಳ ಮೆಚ್ಚುಗೆ ವ್ಯಕ್ತ ಪಡಿಸಿದರು. ಆ ಸಭೆಯಲ್ಲಿ ಎಷ್ಟೊಂದು ಪ್ರತಿಷ್ಠರೆಲ್ಲ ಜೊತೆಗೂಡಿ ಒಂದು ಕಡೆ ಕುಳಿತಿದ್ದು ವಿದ್ವತ್ತಿನ ಸಭೆಯನ್ನು ಪೂರ್ಣಗೊಳಿಸಿದ್ದರು. ಆ ಸಭೆಯಲ್ಲಿ ಪ್ರತಿಯೊಬ್ಬನೂ ಕಾಲದ ಮಹಾಪಂಡಿತನಾಗಿದ್ದ, ಉತ್ಕೃಷ್ಟತೆಯಲ್ಲಿ ಪ್ರತಿಯೊಂದು ನಗರದ ಗುರುವಾಗಿದ್ದರು. ಪ್ರತಿಯೊಬ್ಬನು ತನ್ನ ಬರಹ/ಲೇಖನದ ಕುಶಲಕಲೆಯಲ್ಲಿ ಅಪ್ರತಿಮ, ಇವರೆಲ್ಲರಿಗೆ ನೋಡಿದರೇ ಈ ಪ್ರಪಂಚ ಗಗನದ ಕಾರ್ಯದರ್ಶಿಯ ಪಾಠಶಾಲೆಯ ಶಿಶು ಹಾಗೆ ಕಾಣಿಸುತ್ತದೆ. ಪ್ರತಿಯೊಬ್ಬ ಕವಿಯೂ ಯಾವರೀತಿಯ ಕೃತಿವಂತ ಎಂದರೆ ಅವರ ಕುಶಲಕಲೆಯ ಕಷ್ಟಪಾಡಿನ ಮೇಲೆ ಎಷ್ಟೊಂದು ಹೆಮ್ಮೆ ಪಟ್ಟರೂ ಸಾಲದು.ಆದರೇ ಈ ಸಭೆಯ ಉಜ್ವಲ ದೀಪ/ಮೇಣದ ಬತ್ತಿ ಎಂಬುವರು, ಮತ್ತೆ ಎಲ್ಲ ಕುಶಲಕಲೆಯಲ್ಲಿ ವ್ಯಾಪಕ ಗುರು ಎಂದರೆ, ಅವು ಉತ್ತಮ ರತ್ನಗಳ ಖರೀದಿಸುವ ಶಾಹನೇ ಆಗಿರುತ್ತಾನೆ, ನೀನು ಪ್ರತಿಯೊಂದು ಕುಶಲಕಲೆಯ ಹೊಸ ರತ್ನವ್ಯಾಪಾರಿಯಾಗುತ್ತಿಯ. ಆ ಮಹನೀಯರನ್ನು ರತ್ನ ಪರೀಕ್ಷಕನ ಹಾಗೆ ಗುರುತಿಸಿ ಪರೀಕ್ಷಿಸಲು ಮೊದಲಿಗೆ ಅವರ ಬಳಿ ತರುವರು. ಅವರು ಯಾವ ರತ್ನವನ್ನು ಚೆನ್ನಾಗಿ ಗುರುತಿಸಿದ ನಂತರ ತನ್ನ ಸಂಬಂಧಿಕವೆಂದು ತಿಳಿದು ತನ್ನ ಬಾದಶಾಹನ ಬಳಿ ಕರೆದುಕೊಂಡು ಹೋಗಿ ಭೇಟಿ ಮಾಡಿಸುತ್ತಾರೆ. ಅಂದೇ ಬಾದಶಾಹನು ತನ್ನ ಶೌರ್ಯದ ಕೈಯಿಂದ ಶತ್ರುವಿನ ಹಸ್ತಕ್ಕೆ ಪರಾಜಯಿಸಿದ. ಆದ್ದರಿಂದ ಕುಶಲಕಲೆಯಪಾಲಕರ ಮೇಲೆ ಪ್ರಶಂಸೆ ಕಡ್ಡಾಯವಾಯಿತು. ಅವರೆಲ್ಲರೂ ತಮ್ಮ ಕರ್ತವ್ಯವೆಂದು ತಿಳಿದರು. ಕರ್ತವ್ಯ ಒಂದು ಸಾಲದ ಹಾಗೆ, ಅದನ್ನು ತೀರಿಸದೇ ನೆಮ್ಮದಿ ಇರುವುದಿಲ್ಲ. ನಾಣ್ಯದ ಗಿರವಿಯಾಗಲಿ ಅಥವಾ ಕಾಲದ ಅಂಗಡಿಯಾಗಲಿ ಕುಶಲಕಲೆ ಪಾಲಕರೆಲ್ಲ ತನ್ನ ಕಲೆ ತೋರಲಾರಂಭಿಸಿದರು. ಆದರೆ ನನ್ನ ಕೈಗಳಿಂದ ಜಾರಿಹೋಗಿತ್ತು, ಕಾಲದ ಮನೋವೃತ್ತಿಯ ಮೋಸದಿಂದ ಕೈ ಜಾರಿತ್ತು. ನನ್ನ ಧರ್ಮ ಹಾಗೂ ಪ್ರಪಂಚದಲ್ಲಿ ಬಲ ಪ್ರರ್ಶಿಸಿಸುವ ಎರಡು ಕೈಗಳು ಮುರಿದು ಹೋಗಿದ್ದವು ಹಾಗೂ ನನ್ನ ಜೀವ ಕೇವಲ ಗುಲ್ಲು ಗಲಾಟೆಯಲ್ಲಿ ಸಿಕ್ಕಿಹಾಕಿಕೊಂಡಿತ್ತು. ನನಗೆ ಜನ್ಮದಿಂದಲೇ ಹರ್ಷ ಉಲ್ಲಾಸದಿಂದಲೇ ಮೈಮರೆಯುವ ಹಾಗೆ ಕಾಣುತ್ತಿತ್ತು. ಆಕಾಶ ನನಗೆ ದುಃಖದ ಮೇಲೇ ದುಃಖದ ಕಲೆಗಳನ್ನು ನೀಡಿತ್ತು. ಆದರೆ ನಿಜಾಂಶವೆಂದರೆ ನಾನು ನನ್ನನ್ನೇ ಮರೆತಿದ್ದೆ, ನನಗೆ ನನ್ನದೇ ಏನೂ ಗಮನ

ಇರಲಿಲ್ಲ. ಮಹನೀಯರ ಸಭೆಯಿಂದ ಒಬ್ಬ ಮಹನೀಯರು ಸಹಜ ಗುಣದಲ್ಲಿ, ವೈಶಿಷ್ಟತೆಯಲ್ಲಿ ಎಲ್ಲರಿಂದ ಉತ್ತಮ, ಪ್ರವೃತ್ತಿಯಿಂದ ನಿರ್ಮಲ ಸಭೆಯ ದೀಪ, ನಿಷ್ಕಪಟದಿಂದ ಸುಗುಣದ ತಾಜಾ ಮಿದುಳಾಗಿದ್ದ. ವಂಶದಲ್ಲಿ ನಿಸ್ಸಂದೇಹವಾಗಿ ಪ್ರವಾದಿಯರ ಸುಪುತ್ರ, ಸೌಜನ್ಯತೆಯಲ್ಲಿ ಇಸ್ಲಾಮಿ ಕಾನೂನಿನ ಪಾಲಕನಾಗಿ ಅದರ ಪೀಠ ಅಲಂಕರಿಸಿದವನು. ಸಾದಾತ್ ವಂಶದಿಂದ ಔಲಿಯಾರವರ ಬಾದಶಾಹ ಹಾಗೂ ಶ್ರೇಷ್ಠತೆಯಿಂದ ಪ್ರವಾದಿಗಳ ವಾರಸ್ದಾರನಾಗಿದ್ದ, ಭಾಪುರೇ! ಇಸ್ಲಾಮಿ ಕಾನೂನಿನ ಆಡಳಿತಗಾರ ಹಾಗೂ ಮೂಲ ಅವರು ಬೇರೆ ಯಾರೂ ಅಲ್ಲ ಅವರು ಖಾಝಿಖಕರೀಮುಲ್ಲಾಃರವರು ಪುಣ್ಯ ಸಹಜ ಪ್ರಕೃತಿಯವರು. ನನ್ನನ್ನು ಬಹಳ ನಿಷ್ಠೆಯಿಂದ ನನ್ನ ಮುಖ ನೋಡಿ, ಉತ್ತಮ ಮಾತುಗಳ ಮನೆಯಲ್ಲಿ ಇಳಿಸಿದರು. ಯಾವಾಗಲಿಂದ ಈ ಪ್ರಪಂಚದಲ್ಲಿ ಖಡ್ಗ ತಲಪಿದೆಯೋ, ಮುಘಲರ ಸೈನ್ಯದ ಬಳಿ ಇದ್ದು ಇಂದಿನವರಿಗೆ, ಅಲಿ ಆದಿಲ್ ಶಾಹ ನೃಪನಲ್ಲದೇ ಇಂದಿನವರೆಗೂ ಖಡ್ಗವನ್ನು ಈ ರೀತಿಯಾಗಿ ನೀರಿನಲ್ಲಿ ಮುಳಿಗಿಸಿರಲಿಲ್ಲ. ಹುಝೂರ್‌ರವರು ಏನೇನು ತಮಾಶೆ ನಡೆದಿದೆಯೋ ನಾನು ನನ್ನ ಕಣ್ಣುಗಳಿಂದ ನೋಡಿದ್ದೇನೆಯೋ ಈಗ ಅದನ್ನು ನುಸ್ರತಿಯು ಬರೆಯುವುದು ಕಡ್ಡಾಯವಾಯಿತು, ನಾನು ಮೌನವಾಗಿ ಅವರ ಬಾಯಿಯಿಂದ ಹೊರಡುವ ಮಾತುಗಳನ್ನು ಕೇಳಿ ಬಹಳ ಚಿಂತನೆ ನಡೆಸಿ ಇದನ್ನು ನಿರ್ಧರಿಸಿ ಈ ಕಥೆಯನ್ನು ಬರೆಯಲಾರಂಭಿಸಿದಾಗ ನನ್ನ ಮನಸ್ಸಿನ ಭಾರ ಇಳಿದು ಹೋಯಿತು, ಆಗ ನನ್ನ ಮನಸ್ಸಿನಲ್ಲಿ ನಾನು ಅಂದುಕೊಂಡೆ ಇದನ್ನು ಏನನ್ನು ಬರೆಯುತಿದ್ದೇನೆಯೋ ಅವೆಲ್ಲವೂ ಗುರುಗಳ ಇತಿಹಾಸ ಅಲ್ಲವೇ. ಅದಂತೂ ಆಕಾಶದಿಂದ ಸುರಿಯುವ ದಯೆಯ ಮೋಡ, ತಾಳ್ಮೆಯ ಬೆಟ್ಟ, ಅವನ ವಿದ್ಯೆ ಮತ್ತು ಕಲೆಗಣಿ ಮತ್ತು ನದಿಯಿಂದ ಅಧಿಕ, ಅವನ ಜ್ಞಾಪಕ ಶಕ್ತಿಯ ಮುಂದೆ ಉನ್ನತ ಆಕಾಶವೂ ಬಾಗುತ್ತದೆ, ಅವನು ಪ್ರಕಾಶಮಯ ಸೂರ್ಯನಂತಹ ಪ್ರಜ್ವಲ ಮನೋವೃತ್ತಿಯನ್ನು ಹೊಂದಿರುವನು. ಪರಾಕ್ರಮಿ, ಉತ್ತಮ ನಡತೆ, ಒಳ್ಳೆ ಅಭ್ಯಾಸ, ಪುಣ್ಯಫಲದ ಉದ್ಯಾನ ಹಾಗೂ ದಯೆ/ಕೃಪೆಯ ವಸಂತ. ರೀತಿನೀತಿಯಲ್ಲಿ ಅವನು ಮುಸ್ತಫಾ(ಪ್ರವಾದಿ ಮುಹಮ್ಮದ್ ಸೊ)ರವರ ನಿಜವಾದ ಉತ್ತರಾಧಿಕಾರಿ, ಕುಲೀನರಲ್ಲಿ ಶಾಹೆ ನಜಫ್(ಹಝ್ರತ್ ಅಲಿ)ರವರ ಪುತ್ರ. ಸದೈವ ಧರ್ಮ ಮತ್ತು ಪ್ರಪಂಚದ ಜೀವನಾಧಾರಗಳ ಮೇಲೆ ಕಾಲ ಜನ್ಮ ಪಡೆದು, ಯಾವ ಮನೆತನದಲ್ಲಿ ಫಲ, ಅವನ ಸಂಭಾಷಣೆಯೆಂದರೆ-ಮುತ್ತುಗಳು ಉದುರುವ ಹಾಗೆ, ಮಾತನಾಡಿದರೆ ಮುತ್ತುಗಳನ್ನು ಒಂದು ಲಡಿಯಲ್ಲಿ ಪೋಣಿಸಿದ ಹಾಗೆ. ಅವನು ಒಳ್ಳೆಯ ಸಲಹೆಗಾರ, ಅಭಿಪ್ರಾಯ ಕೊಡುವುದರಲ್ಲಿ ಅನುಪಮ, ಹಾಗೂ ಮುಂದಾಲೋಚಕ, ನಿಸ್ಸಂದೇಹವಾಗಿ ಅವನು ಸಾಮ್ರಾಜ್ಯದ ಸದಸ್ಯರಲ್ಲಿ ಬಲಿಷ್ಠಶಾಲಿ, ಶಹನ್ಷಾಹರ ದರಬಾರಿನ ಮಹಾ ಆಸ್ಥಾನಿಕ ತುಂಬ ವಿಶ್ವಾಸಿಕ, ಶಾಹನ ಕಾರ್ಯದರ್ಶಿ. ಭಳಿರೆ! ಅವನ ಶುಭಹೆಸರು ಶಾಃ ನೂರುಲ್ಲಾಃ ಅವರ ಕೌಶಲ್ಯದಿಂದ ಇಡೀ ಜಗತ್ತೇ ಪ್ರಜ್ವಲವಾಗಿದೆ. ಅದೃಷ್ಟವಂತ

ಅಲಿ ಆದಿಲ್ ಶಾಹನು ಹೇಗೆ ಅಸದೃಶ ಕೆಲಸ ಮಾಡಿ ಹೆಸರವಾಸಿಯಾದ. ಆಕಾಶ ಬಹಳ ಕಠೋರ, ದಿನ ಕಳೆದು ಹಿಂದಿನ ಕಥೆಯಂತೆ ನಮ್ಮ ಘಟನೆಗಳೆಲ್ಲ ಮರೆಯಬಾರದೆಂದು ಅವೆಲ್ಲವನ್ನು ಇತಿಹಾಸದಲ್ಲಿ ಚೆನ್ನಾಗಿ ಬರದು ಅವುಗಳನ್ನು ಸದ್ಯೆವವಾಗಿ ಕಾಲಕ್ಕೆ ಅರ್ಪಿಸಿದೆ. ಇತಿಹಾಸ ಬರೆಯಲಾರಂಭಿಸಿದಾಗ ನಾನು ದೇವರ ಸನ್ನಿಧಿಯಲ್ಲಿ ಹಾಜರಾಗಿ ನನ್ನನ್ನು ದಯೆ ಮಾಡಲು ಪ್ರಾರ್ಥಿಸಿದೆ. ಇತಿಹಾಸದ ನೌಕೆಯನ್ನು ತೆಗೆದುಕೊಂಡು ಓದಿದರೆ ಊಹಿಸುವವರಿಗೆ ಇದನ್ನು ತನ್ನ ಕಲ್ಪನೆಯಲ್ಲಿ ನೋಡಿದರೆ, ನಾನು ಎಂತೆಂತಹ ವಿಷಯಗಳ ಸಾಲಿನ ಅಲೆಗಳಿಂದ ಬರವಣಿಗೆಯ ನದಿಯಿಂದ ನಾನು ಎತ್ತರವನ್ನು ತಲುಪಲು ಪ್ರಯತ್ನಿಸಿದ್ದೇನೆಂದು ತಿಳಿಯುತ್ತದೆ. ಇದರ ಸರಳತೆಯಲ್ಲಿ ನೀರಿನ ನಿರ್ಮಲತೆ ಇದೆ, ಇದರ ವಾಕ್ಸಾಮರ್ಥ್ಯ ಅಂತೂ ಅಮೃತದ ಸಿಹಿ ಹೊಂದಿರುತ್ತದೆ. ಇದರ ಒಂದೊಂದು ಅಕ್ಷರವೂ ಮುತ್ತುಗಳಲ್ಲಿ ತೂಗಲಾರವು, ಅರ್ಥದಲ್ಲಿ ಅವು ಅಮೂಲ್ಯ, ಅರಸರಿಗೆ ಯೋಗ್ಯವಾದ ಮುತ್ತು. ನೋಡಲು ಅದು ಹುಲ್ಲಿನ ಮೈದಾನ ಕಾಣಿಸಿದರೂ, ನಿಜಾಂಶದಲ್ಲಿ ಅದು ಉದ್ಯಾನವನದ ಅಂಗಳ ಕಾಣಿಸುತ್ತದೆ. ಭಾಪುರೇ! ಗದ್ಯ ಕವನಕ್ಕಿಂತ ಮಧುರ ಸ್ವರೂಪ ಹೊಂದಿದೆ, ಇದರ ಪ್ರತಿಯೊಂದು ಜೊತೆಗೂಡಿದ ನುಡಿ ಮುಖ್ಯ ದ್ವಿಪದಿಯಿಂದ ಅದ್ವತೀಯ. ತಾವು ಈ ಲೇಖನದ ಉತ್ತಮ ತಾಜಾ ಕುಶಲತೆ ನೋಡಿದರೆ ಯಾರೋ ಪುರಾತನ ಪಂಚಾಂಗ ಪ್ರಾಚೀನ ಗದ್ಯದಲ್ಲಿ ಬರೆದಿದ್ದಾನೆ ಎಂದು ಕೊಳ್ಳವಿರಿ. ನಿರ್ಮಲತೆ ಮಾತಿನ ಉಡುಪನ್ನು ಧರಿಸಿ, ಇದು ಕಥೆಯ ದಾರಿಹಿಡಿದು ಕವನ ಹೊರಡಿಸಿದೆ. ಪ್ರತಿಯೊಂದು ಮಾತಿಗೆ ಅಭ್ಯಾಸದಿಂದ ಶಕ್ತಿ ಕೊಟ್ಟು, ಒಂದು ಹೊಸ ಉದ್ಯಾನವನವನ್ನು ನಿರ್ಮಿಸಿದ್ದೇನೆ. ಇದರ ಪ್ರತಿಯೊಂದು ಸಭಾಂಗಣ ಮನಮೆಟ್ಟುವ ನಿವಾಸವಾದರೇ ಇದರ ಪ್ರತಿಯೊಂದು ರಣರಂಗ ನಿಸ್ಸಂದೇಹವಾಗಿ ದೊಡ್ಡ ಸುರಂಗ. ಶೋಭೆಯನ್ನು ಪಡೆಯಲು ಕಲೆಯ ಛಜ್ಜೆ, ಪ್ರವಾದಿಯರ ವಚನ ಅಪ್ರತಿಮಗಳು, ಶ್ರೇಷ್ಠತೆಯಲ್ಲಿ ಬಲು ಅಪರೂಪ. ಪ್ರಪಂಚವನ್ನು ಬೆಳಗಿಸಬೇಕಾದರೇ, ಪ್ರಪಂಚದಲ್ಲಿ ದೊಡ್ಡ ವೈಭವ ವಸ್ತುವೆಂದರೇ ಕುರ್‌ಆನನ ಸೂಕ್ತಗಳು ಬೆಳಗುವ ದೀಪಗಳು. ಬಲೆಬಲೆಯಾದ/ ಜಿಲೇಬಿ ಬಹಳ ಮೃದುತ್ವದಿಂದ ಮಾಡಿ ಅದರಲ್ಲಿ ವಿವಿಧ ಬಣ್ಣಗಳ ಸೂಕ್ಷ್ಮ ವಿಷಯಗಳ ಮಧುಪಾತ್ರೆಗಳನ್ನು ತುಂಬಿದೆ. ಈ ವಸ್ತುಗಳು ಹೇಗಿವೆಯೆಂದರೆ ಇದನ್ನು ಎದುರಿಸಲು ಯಾವ ವಸ್ತು ಸಹ ಬರಲು ಸಾಧ್ಯವಿಲ್ಲ, ಪಾತ್ರಗಳಲ್ಲಿ ಒಂದೇ ರೀತಿಯದು ಅನೇಕವಿದೆ. ಎಲ್ಲಿಯವರಿಗೆ ತಾತ್ಪರ್ಯಗಳ ಭವ್ಯ ಅರಮನೆಗಳ ಸಂಬಂಧಗಳಿವೆಯೋ ಅಲ್ಲಂತೂ ವಿವಿಧ ರೂಪದ ಅದ್ವಿತೀಯ ಐಶ್ವರ್ಯವಿದೆ. ಪದವಿನ್ಯಾಸದ ಜರಿ ಬಟ್ಟೆಗಳನ್ನು ಇಡಲಾಗಿದೆ, ಇವುಗಳನ್ನು ಪ್ರಾಸಬದ್ಧವಾಗಿ ಹಿಂದುರಿಗಿಸಲು ಸುಂದರ ರೂಪದಲ್ಲಿ ಇಡಲಾಗಿದೆ. ಹೊಸ ಋತುವಿನ ಪ್ರತಿಯೊಂದು ಧ್ವನಿಯು ಹೊಸ ವಿಷಯ, ಲಕ್ಷಾಂತರ ವಿಶೇಷತೆಗಳನ್ನು ಬಲು ಸೂಕ್ಷ್ಮತೆಯಿಂದ ಇವೆ. ಯವ್ವನ ಸಂಬಂಧಿತ ವಿಷಯಗಳು ಅವರ ಮನಸ್ಸನ್ನು ತೃಪ್ತಿ ಪಡೆಸುತ್ತದೆ. ಅವರ ಒಯ್ಯಾರ ದುಷ್ಟರಿಗೆ ಪ್ರಮತ್ತ ಮಾಡುತ್ತದೆ.

ಆದರೇ ದೇವಭಕ್ತರ ದೃಷ್ಟಿಯಲ್ಲಿ ಅದು ಪರಿಪೂರ್ಣತೆ, ಪ್ರತಿಯೊಬ್ಬರಿಗೆ ಆ ಸಖಿಯ ಸೌಂದರ್ಯ ತೋರಿಸುವ ವಸ್ತು ಅಲ್ಲ. ವಿಶೇಷವಾಗಿ ಈ ಯುಗದ ಶಹನ್ಶಾಹನ ಮುಂದೆ, ಎಷ್ಟೊಂದು ದೇವಭಕ್ತರಿದ್ದಾರೆಯೋ ಅವರುಗಳ ಸುಲ್ತಾನರ ಮುಂದೆ ಬರಹದ ಆ ಮನಮೆಚ್ಚು ಮುತ್ತುಗಳನ್ನು ಈ ಜ್ಞಾನ ನಾಲಿಗೆಯಿಂದ ಚದುರಿಸುತ್ತದೆ. ನಿರ್ಮಲ ಮುಂಜಾನೆಗಿಂತ ಅವನ ಭಾಷಣ ಸ್ವಚ್ಛ ಉದ್ಯಾನ ಅವನ ಮಾತಿಗೆ ಎದುರು ಮಾತೇ ಆಡುವುದಿಲ್ಲ. ಶ್ರೇಷ್ಠತೆಯಿಂದ ಪ್ರತಿಯೊಂದು ಕಲೆಯಲ್ಲಿ ಅತಿವಿದ್ವಾಂಸ, ವಿಶೇಷತೆಯನ್ನು ತಿಳಿಯುವದರಲ್ಲಿ ಅತಿ ಹೆಚ್ಚು ನಿಪುಣ. ಎಲ್ಲಿಯವರಿಗೆ ಅನುಚಿಂತನೆಯ ಸಂಬಂಧ ಇದೆ ಅದಂತೂ ಆಕರ್ಷಕ. ಅದು ಗದ್ಯ ಮತ್ತು ಪದ್ಯ ಎರಡಕ್ಕೂ ಶೋಭಿಸುತ್ತದೆ. ಅದನ್ನು ಶಿಕಸ್ತ (ಒಡೆದ/ಬಿದ್ದ) ಬರವಣಿಗೆಯಲ್ಲಿ ಉತ್ತಮರೀತಿಯಲ್ಲಿ ಬರೆದರೆ ಅದು ಸಖಿಯ ಗುಂಗುರು ತಲೆಕೂದಲು ಕಳವಳ ಪಡೆಯುವ ಹಾಗೆ ಕಾಣಿಸುತ್ತದೆ. ಸೌಜನ್ಯದ ನೆರಳು ಕೊಡುವ ಒಳ್ಳೆಯ ತೋಟದಿಂದ ಮಾನವೀಯತೆ ಜನ್ಮತಾಳಿದರೆ ಆ ನೆರಳು ಕೊಡುವ ಮರ ಫಲ ನೀಡುವಂತಾಗುತ್ತದೆ. ಅವನು ಪ್ರಪಂಚದಲ್ಲಿ ತನ್ನ ಅಸ್ತಿತ್ವದಿಂದ ಸನ್ಮಾನ್ಯ. ತನ್ನ ಸಿದ್ಧಿಗಳಿಂದ ಶಾಹನ ಆಪ್ತಮಿತ್ರನಾಗಿದ್ದಾನೆ. ಯಾವ ಕಾರಣದಿಂದ ಗುಣ ಹಾಗೂ ಘನತೆ ಅವನಗೆ ಗೌರವ ನೀಡಿದೆ, ಏಕೆಂದರೆ ಅವನು ಮುಸ್ತಫಾ ಹಾಗೂ ಮುರ್ತುಝಾರವರ ಸುಪುತ್ರರೆಂದು. ವಂಶದ ಮುಖಂಡತ್ವದಿಂದ ಅತಿ ಶ್ರೇಷ್ಠ, ಅಂದರೆ ಅವರ ಹೆಸರು ಶಾಹೆ ಅಬುಲ್ ಮುಆಲಿ. ಶಾಹನ ಸಭಿಕರಲ್ಲಿ ಯಾರಿಗಾದರು ತೆಗೆದು ಕೊಳ್ಳಿ ಅವರೆಲ್ಲರೂ ತಮ್ಮ ಉತ್ಕೃಷ್ಠತೆಯಿಂದ ಪರಿಪೂರ್ಣರಾಗಿ ಯುಗದ ಹೆಮ್ಮೆಯಾಗಿದ್ದಾರೆ. ಇವರೆಲ್ಲರಿಗೂ ಬಾದಶಾಹನ ಮಹಾದಾನಿಯ ಅಭ್ಯಾಸದ ಸೂರ್ಯ ಸಂಪೂರ್ಣವಾಗಿ ಅಗಣಿತ ಫಲನೀಡಿದೆ. ಸೂರ್ಯನಿಲ್ಲದೇ ಮುತ್ತು ಬಣ್ಣ ಹಿಡಿಯಲು ಸಾಧ್ಯವಿಲ್ಲ. ಚಂದ್ರನಿಲ್ಲದೇ ಹೂಬನದಲ್ಲಿ ಸುಗಂಧ ಬರಲು ಸಾಧ್ಯವಿಲ್ಲ, ಗುರು ಇಲ್ಲದೇ ಯಾರೂ ತರಬೇತಿ ಪಡೆಯಲು ಸಾಧ್ಯವಿಲ್ಲ ಹಾಗೂ ಗೌರವಾನ್ವಿತ ಆಗಲೂ ಸಾಧ್ಯವಿಲ್ಲ. ದೇವರ ಕೃಪೆಯಿಂದ ನಾನು ಇಂದು ಬಹು ಅದೃಷ್ಟವಂತ ನನಗೆ ಬಾದಶಾಹ ಅಲಿ ಅಂತಹ ಗುರು ಬಿಟ್ಟರೆ ಇನ್ಯಾರು ಇಲ್ಲ. ಬಾದಶಾಹನು ನನ್ನ ಪ್ರವೃತ್ತಿಯ ಕುದುರೆಯನ್ನು ಸಾಕಿ ಅಂದಿನಿಂದ ಬಲು ದೂರದ ನಡಿಗೆಯನ್ನು ಕಲಿಸಿದ. (ಅಂದರೆ ನನ್ನ ಚಾತುರ್ಯವನ್ನು ಊಹಿಸಿ ದೂರದೃಷ್ಟಿಯ ದಾರಿ ಹಿಡಿಯಲು ಕಲಿಸಿದ) ಯಾವಾಗ ನನಗೆ ಬಯಸುತಿತ್ತೋ ಆಗ ಆ ಕುದುರೆಯನ್ನು ಬಿಟ್ಟೆ ಅದು ಎಲ್ಲಿಯೂ ಸಹ ತಡೆಯಲಿಲ್ಲ, ಯಾವ ಕಡೆ ಅದನ್ನು ತಿರುಗಿಸಿದೆನೋ ಅದು ಒಂಟಿಯಾಗಿ ಮುಂದೆ ಹೋಗುತ್ತಿತ್ತು. ಆದರೆ ಈ ಕಠಿಣಕರ ಬೆಟ್ಟದ ಮುಂದೆ ಬಂದು ತಡೆದು ಬಿಟ್ಟೆ ಮುಂದೆ ಹೋಗಲು ಮನಸ್ಸು ಬರಲಿಲ್ಲ. ಈಗ ನನಗೆ ಬಲು ಚಿಂತೆಯಾಯಿತು. ಮನಸ್ಸಿನ ಆ ಕಷ್ಟಕರ ಗಳಿಗೆ ನನ್ನ ಮುಂದೆ ಬಂದು ನಿಂತಿತು. ನಾನು ಇದೇ ಯೋಚನೆಯಲ್ಲಿ ಮುಳುಗಿ ಅಲ್ಲಾಹನನ್ನು ನನ್ನ ಕಷ್ಟ ನಿವಾರಿಸಲು ಪ್ರಾರ್ಥಿಸಿದೆ.

ರಾತ್ರಿಕಳೆದು ಬೆಳಗಾದಾಗ ನಾನು ಅಲ್ಲಿಯವರಿಗೆ ಶಾಹನ ದರ್ಬಾರಿನಲ್ಲಿದ್ದೆ. ನನ್ನ ಮುಖವನ್ನು ಬಾದಶಾಹರವರು ನೋಡಿದರು ನನ್ನ ಸೇವೆಯನ್ನು ಪಡೆದು ನನ್ನನ್ನು ಪ್ರತಿಷ್ಠಿತನನ್ನಾಗಿ ಮಾಡಿದರು. ರಹಸ್ಯ ಮಾತಿನ ಸಂಕೇತ ಕೊಟ್ಟರು, ಆದರೆ ಹೃದಯದಿಂದ ಹೃದಯದವರೆಗೆ ಸುವಾರ್ತೆ ಕೊಟ್ಟರು. ಎಲ್ಲಿಯವರೆಗೆ ಗುರುವಿನ ಸಹಾಯವಿಲ್ಲದೇ ಈ ಸೇವಕ ಎಲ್ಲಿ ಸಾಧಿಸಲೂ ಸಾಧ್ಯ? ಅಷ್ಟೊಂದು ಶಕ್ತಿಯಲ್ಲಿದೆ ಎಂದು ನಾನು ಹೇಳಿದೆ. ಆಗ ನನ್ನ ಹೃದಯದಕಡೆ ಗಮನ ಹರಿಸಿ ನೋಡಿದಾಗ ನನ್ನ ಮನಸ್ಸಲ್ಲಿ ಅತ್ಯುತ್ಸಾಹ ತುಂಬಿತು. ಸಮುದ್ರದಿಂದ ಪುಣ್ಯದ ಮಳೆ ಸುರಿಯಲಾರಂಭಿಸಿತು, ನಾನು ಅದರಿಂದ ಲಾಭಪಡೆದು, ಬಹಳ ಶೌರ್ಯದಿಂದ ನನ್ನ ಕೌಶಲ್ಯದ ಮಳೆ ಸುರಿಸಲಾರಂಭಿಸಿದೆ. ಪುಸ್ತಕದ ಹಾಳೆಗಳ ಸುಂದರ ಉದ್ಯಾನ ಹೂಬನವಾಗಲು ಸಾಧ್ಯವಾಯಿತು. ನನ್ನ ಮನಸ್ಸು ಎಲ್ಲೆಲ್ಲಿ ತೋಟಗಾರಿಕೆ ಮಾಡಿತೋ ಆ ಭೂಮಿಯಲ್ಲಿ ಹೊಸತಾಗಿ ಮರ ನೆಟ್ಟು ಅದನ್ನು ಪೋಷಿಸಿದೆ. ಒಂದೇ ರೀತಿಯ ಎಲ್ಲ ಹೂವಿನ ಮರಗಳನ್ನು ನೆಟ್ಟು ಇಡೀ ತೋಟವನ್ನು ಬಣ್ಣ ಬಣ್ಣದ ಒಯ್ಯಾರದಿಂದ ತುಂಬಿದೆ. ಪವನದಂತೆ ಬಲು ಕೋಮಲತೆಯಿಂದ ಬಣ್ಣ ಮತ್ತು ಸುವಾಸನೆಯನ್ನು ತೆಗೆದು ಕೊಂಡು ಕಲ್ಪನಾತೀತ ಹೊಸ ವಿಷಯಗಳ ಹೂಗಳನ್ನು ಕಟ್ಟಿದೆ. ಯಾವುದೇ ಹೂವನ್ನು ನಾನು ನಿಶ್ಯಕ್ತಿಯಾಗಿ ಮಾಡಿಲ್ಲ ಹುಟ್ಟಿದ್ದಾಗಲಿಂದ ಶಕ್ತಿ ಕೊಟ್ಟು ಸಾಕಿದ್ದೇನೆ. ಈ ರೀತಿಯಾಗಿ ಕವನದ ಬಳ್ಳಿಯನ್ನು ಬೆಳೆಸಿದೆ, ಬೆಳೆದ ತಕ್ಷಣ ಅದು ಆಕಾಶದ ಛಪ್ಪರ ಏರಿತು. ನನ್ನ ವಿಷಯಗಳು ಮತ್ತು ಅದರ ಅರ್ಥಗಳ ಹೂ ಮತ್ತು ಹಣ್ಣುಗಳನ್ನು ನೋಡಿ ಚಂದ್ರ ಮತ್ತು ನಕ್ಷತ್ರಗಳು ದಿಗ್ಭ್ರಮಿತರಾದವು. ಯಾವ ಯಾವ ರೀತಿಯ ಕಥೆಗಳನ್ನು ಇದರಲ್ಲಿ ಬರೆದಿದ್ದೇನೆಯೋ ಅವು ಓದುಗರ ಕಣ್ಮುಂದೆ ದೃಶ್ಯಗಳ ಹಾಗೆ ಬರಲಾರಂಭವಾಗುವುದು. ಅವುಗಳನ್ನು ಹಾತಿಮಿನ ವಿವೇಕದಿಂದ ಹಾಗೂ ಪ್ರತಿಯೊಂದು ರಣರಂಗದ ಸಭಾಂಗಣವನ್ನು ರುಸ್ತುಮಿನ ಹಾಗೆ ಅಲಂಕರಿಸಿದ್ದೇನೆ, ಈ ಗಂಡುಬೀರಿ ಮಾತುಗಳ ಒಳ್ಳೆ ಸ್ವರೂಪವನ್ನು ಕೇಳಿ ವೀರರ ಉತ್ಸಾಹ ಉಕ್ಕುತ್ತದೆ. ಕವನದಲ್ಲಿ ಈ ಪವಾಡ ಎಲ್ಲಿಯವರೆಗೆ ಇರುವುದಿಲ್ಲವೋ ಅಲ್ಲಿಯವರಿಗೆ ಅವನಿಗೆ ಕವಿ ಎಂದು ಹೇಳಲು ಸಾಧ್ಯವಿಲ್ಲ. ನನ್ನ ಮಾತುಗಳಲ್ಲಿ ಯಾವುದೇ ರೀತಿಯ ಆತ್ಮಸ್ತುತಿಯಿಲ್ಲ. ಅಂದರೆ ತಿಳಿಗೇಡಿನ ಕೌಶಲ್ಯ ಕಣ್ಣಿಗೆ ಸ್ಪಷ್ಟವಾಗಿ ಕಾಣಿಸುತ್ತದೆ. ಈ ಪದ್ಯಗಳು ಇಂದು ಈ ರೀತಿಯಾಗಿ ಯಾರೂ ಸಹ ತುಂಬ ವೈಭವದಿಂದ ಹೇಳಿರುವುದಿಲ್ಲ. ಅಲ್ಲಿಯವರಿಗೂ ಯಾರ ಕೈ ತಲುಪಲು ಸಾಧ್ಯವಿಲ್ಲ ಏಕೆಂದರೆ ನಾನು ಅದನ್ನು ಸರಿಯಾಗಿ ಗಗನದ ಗುಮ್ಮಟದ ಮೇಲೆ ಅಲಂಕರಿಸಿಟ್ಟಿದ್ದೇನೆ, ಇದು ಯಾರಿಂದಲೂ ಸಾಧ್ಯವಾಗದೇ ಇರುವ ಕೆಲಸ. ಯಾರು ಸೊಕ್ಕಿದ್ದವ ಈ ಪುಸ್ತಕದ ಮೇಲೆ ಕೈ ಇಟ್ಟು ಇದನ್ನು ಸರಿ ಮಾಡಲಿ ನೋಡೋಣ. ಇದಲ್ಲದೆ ನಾನು ಆತ್ಮಸ್ತುತಿ ಬಿಟ್ಟೆ ಆದರೆ ನ್ಯಾಯವಾದಿಯರಿಂದ ಹೊಗಳಿಕೆಯನ್ನು ಬಯಸುತ್ತೇನೆ. ಏಕೆಂದರೆ ಇಂದು ಒಂದು ಹೊಸ ಮಾರ್ಗವನ್ನು ಹಿಡಿದಿದ್ದೇನೆ, ಅಶಕ್ತ ಮಾತುಗಳನ್ನು ಶಕ್ತಿಶಾಲಿ ಮಾಡಿದ್ದೇನೆ.

ಒಂದು ಪಕ್ಷ ಯಾರಾದರೂ ದಖನಿಯರ ಮುಂದೆ ಏನಾದರು ಕೆಟ್ಟದ್ದನ್ನೆಂದರೆ, ಸನ್ನದನ್ನು ತಂದು ಈ ಪದ್ಯವನ್ನು ರದ್ದುಗೊಳಿಸಬಹುದು. ಯಾರಾದರು ಗುರು ಕೈ ಕನ್ನಡಿಯ ಅರ್ಥ ನೋಡಬೇಕೆಂದರೆ ಅವರು ಹಿಂದಿ ಅಥವಾ ಫಾರ್ಸಿ ಭಾಷೆಯ ರಣರಂಗವನ್ನು ಓದಲಿ. ಅವನೇನಾದರೂ ಸಂಪೂರ್ಣ ವಿವೇಕವುಳ್ಳ ಒಡೆಯನಾಗಿದ್ದರೇ ಆಗ ಒಬ್ಬರಿಂದ ಇಬ್ಬರು ಕೌಶಲ್ಯದಿಂದ ಧನಿಕರಾಗುತ್ತಾರೆ. ಮತ್ತೆ ಅವರಿಬ್ಬರ ಅರ್ಹತೆಯನ್ನು ಚೆನ್ನಾಗಿ ಪರೀಕ್ಷಿಸಿ ಅದರಿಂದ ಈ ತಾತ್ಪರ್ಯಕ್ಕೆ ಒಂದೆ ದೃಷ್ಟಿ ಉಳ್ಳವರು ಒಂದೇ ದೃಷ್ಟಿಯಲ್ಲಿ ರತ್ನವನ್ನು ಗುರುತಿಸಿಕೊಳ್ಳುತ್ತಾರೆ, ಅದನ್ನು ಅಂಧನ ಮುಂದಿಟ್ಟರೇ ಅವನು ರತ್ನ ಹಾಗೂ ಕಲ್ಲನ್ನು ಹೇಗೆ ಭೇದಿಸಬಹುದು. ಇಂದಿನವರಿಗೆ ಸಹಸ್ರಾರು ಕವಿಗಳಾಗಿದ್ದರು, ಅವರು ವಿಷಯಗಳನ್ನು ಹೇಳಲೇ ಇಲ್ಲವೆಂದು ಹೇಳ ಬೇಡಿ. ದೇವರ ದಯೆಯಿಂದ ಬಲು ದೊಡ್ಡ ಅಗಣಿತ ಬೊಕ್ಕಸವಿದೆ. ತುಂಬ ಪ್ರಯತ್ನಿಸಿದರೂ ಸಹ ಎಷ್ಟೊಂದು ಪಡೆಯಬೇಕಾಗಿತ್ತೋ ಪಡೆಯಲು ಸಾಧ್ಯವಾಗಲಿಲ್ಲ. ಎಲ್ಲ ಮಾನವರ ಆಕಾರ ಒಂದೇ ಆದರೇ ಅವರೆಲ್ಲ ರೂಪ ಸ್ವರೂಪ ಭಿನ್ನ ಭಿನ್ನರಾಗಿರುತ್ತಾರೆ. ಇಡೀ ಪ್ರಪಂಚದಲ್ಲಿ ಹುಡುಕಾಡಿದರೂ ಸಹ ಒಬ್ಬನ ಏಕರೂಪದವನು ಸಿಗುವುದು ಕಷ್ಟ ಈ ಹೊಸ ತಮಾಷೆಗಳನ್ನು ನೋಡಿ ಆನಂದವಾಯಿತು, ನಿಜವಾಗಿಯೂ ದೇವರನ್ನು ಮನಸಲ್ಲೇ ಸ್ಮರಿಸಬೇಕು. ಎಲ್ಲೋ ಒಂದು ಕಡೆ ಭಾರತೀಯರು ತನ್ನ ಕೌಶಲ್ಯದಲ್ಲಿ ಉನ್ನತವಾಗಿದ್ದಾರೆ, ಅನೇಕರು ತನ್ನ ಬಿಗಿ ಉಡುಪಲ್ಲಿ ಸೊಕ್ಕಿ ಅನೇಕರಿಗೆ ಪ್ರೀತಿಯಿಂದಲೇ ಮುಗಿಸಿದ್ದಾರೆಂದು ಸಾಕ್ಷಿ ಇವೆ. ಕವನ ಸದೈವವಾಗಿ ಬೆಲೆಬಾಳುವಂತಹದ್ದೇ ಆಗಿದ್ದರೇ ಹೊಗಳಲ್ಪಟ್ಟವರು ಅದರ ಬೆಲೆಯನ್ನು ಹೆಚ್ಚಿಸಿ ತೆಗೆದುಕೊಳ್ಳುತ್ತಾರೆ. ಎಲ್ಲಯವರಿಗೂ ಆ ಕವನ ಪ್ರಪಂಚದಲ್ಲಿ ಸದೈವವಾಗಿ ಇರುತ್ತದೆಯೋ ಅಲ್ಲಿಯವರೆಗೂ ಅದರ ಹೊಗಳಲ್ಪಟ್ಟವನೂ ಸಹ ಇಡೀ ಪ್ರಪಂಚದಲ್ಲಿ ಸುಪ್ರಸಿದ್ಧನಾಗಿರುತ್ತಾನೆ. ಏಕೆಂದರೇ ಬೆಲೆ ಹೆಚ್ಚಿಸುವುದರಲ್ಲಿ ಪ್ರಸಿದ್ದಿ ಇದೆ, ಅದಿಲ್ಲದಿದ್ದರೇ ಕೌಶಲ್ಯದಲ್ಲಿ ಪರಿಣತಿ ಇಲ್ಲವೆಂದು ವ್ಯಕ್ತವಾಗುತ್ತದೆ. ಹಿಂದಿಯಲ್ಲಿ ಅನೇಕ ಸಲ ಮಹನೀಯತೆಯನ್ನು ಕಲಿಸಲಾಗುತ್ತದೆ, ಹಾಗೆ ಮಾಡದಿದ್ದರೇ ವಿಷಯದಲ್ಲಿ ಘನತೆ ಎಲ್ಲಿರುತ್ತದೆ. ಕವನದಲ್ಲಿ ವಾಕ್ಸಾಮರ್ಥ್ಯವಿಲ್ಲದಿದ್ದರೇ ಕವನ ತನ್ನ ರೂಪ ಪಡೆಯಲು ಎಲ್ಲಿ ಸಾಧ್ಯ, ಆದರೆ ಕವನದ ಜೀವ ಅದರ ವಿಷಯವಾಗಿರುತ್ತದೆ. ದೇಹದ ಮರ್ಯಾದೆ ಏಕೆಂದರೆ ಅದರಲ್ಲಿ ಜೀವ ಇದೆ. ನಿರ್ಜೀವ ಮುಖವನ್ನು ಯಾರು ತೊಳದು ಕುಡಿಯುವರೋ. ಒಳ್ಳೆ ಮರವನ್ನು ಸೀಳಿ ಒಳ್ಳೆ ಬಣ್ಣದ ಪುತ್ತಲಿ ತಯಾರಿಸಿದರೂ ಸಹ ಅದು ಮಾನವಕ್ಕೆ ಪಕ್ಷವಾತ ರೋಗಿ, ಅದು ಏನೂ ಕೆಲಸಕ್ಕೆ ಬರುವುದಿಲ್ಲ. ಇಂದು ನಾನು "ಫ಼ತೆಹ್ ನಾಮ" ಬರೆದಿದ್ದೇನೆ, ನಾನು ವಿಷಯರಹಿತ ಬೇರೆ ಏನು ಮಾತನಾಡಲಿಲ್ಲ. ದೇವ ನನ್ನ ಕೈಗೆ ಕೌಶಲ್ಯತೆಯನ್ನು ನೀಡಿರುವನು. ಅವನು ನನ್ನ ಸಹಜ ಪ್ರವೃತ್ತಿಗೆ ಯಾವ ಮಾತಿನಲ್ಲಿ ಕಡಿಮೆ ಮಾಡಲಿಲ್ಲ. ನನ್ನ ದೃಷ್ಟಿಯಲ್ಲಿ ಎಲ್ಲಾದರು ಕೆಲಸ ಕಂಡರೆ, ಕವನವನ್ನು ಚೆನ್ನಾಗಿ ಪರಿಶೋಧನೆ ಮಾಡಿ, (ಎಂದಾದರೂ

ನಾನು ಏನಾದರು ಕೆಲಸ ಮಾಡಬೇಕೆಂದು ಯೋಚಿಸಿದಾಗ ಕವನದ ಪ್ರತಿಯೊಂದು ಯುಕ್ತಿಯನ್ನು ಚೆನ್ನಾಗಿ ಪರಿಶೋಧನೆ ಮಾಡುತ್ತೇನೆ) ಪ್ರತಿಯೊಂದು ರತ್ನವನ್ನು ಸರಳತೆಯಿಂದ ಕೆತ್ತಿದ್ದೇನೆ, ವಿಷಯಗಳ ಮನೆಗಳಲ್ಲಿ ರತ್ನಗಳನ್ನು ಇಳಿಸಿದ್ದೇನೆ. ನನ್ನ ಮನಸ್ಸಿನಿಂದ ಅನೇಕ ಹೊಸ ವಸ್ತುಗಳನ್ನು ತಯಾರಿಸಿ ಸೂರ್ಯನ ದಯೆಯಿಂದ ಒಳ್ಳೆಯ ಜ್ಯೋತಿಯನ್ನು ನೀಡಿದ್ದೇನೆ. ಹಿಂದಿನ ಜನ ಯುವಕರಾಗಲಿ ವೃದ್ಧರಾಗಲಿ ದಖನಿ ಕವನಕ್ಕೆ ಕೀಳಾಗಿ ನೋಡುತಿದ್ದರು. ನಿಜವಾಗಿಯೂ ಆಗ ಕವನ ಸಂಪೂರ್ಣವಾಗಿ ದರಿದ್ರವಾಗಿತ್ತು. ಯಾವಾಗಲಿಂದ ಅಲಿ ಲೋಕದ ಗುರುವಾದನೋ ಅವನು ಕವನಕ್ಕೆ ಶಕ್ತಿ ನೀಡಿ ಮಹಾಬಲಿ ಮಾಡಿರುವನು. ಆದ್ದರಿಂದ ಈ ಕವನ ಇಂದು ಪ್ರಶಂಸಿಸಲು ಯೋಗ್ಯವಾಗಿದೆ. ಮತ್ಸರಿಯರನ್ನು ಬಿಟ್ಟರೆ ಬೇರೆಯವರು ಯಾರೂ ಮಾತನಾಡುವ ಹಾಗಿಲ್ಲ. ಕವನವನ್ನು ಮೆಚ್ಚುಗೆ ದೃಷ್ಟಿಯಿಂದ ನೋಡುವವನು ಬುದ್ಧಿವಂತ, ಅಸೂಯೆ ಪಡೆಯುವವ ಹಾಗೂ ತಿಳಿಗೇಡಿಗಳನ್ನು ಅವರ ಜಾಗದಲ್ಲಿ ಬಿಟ್ಟು ಬಿಡಿ. ಈ ಉನ್ನತ ಪರಿಭಾವನೆ ಇಟ್ಟು ನಾನು “ಫತೆಹ್ ನಾಮಾ” ಬರೆದಿದ್ದೇನೆ. ಈಗ ಇದನ್ನು ಗಮನವಿಟ್ಟು ಕೇಳಿ. (೪೩೬–೫೭೫)

*

ಅಧ್ಯಾಯ – ೪

ಪಟ್ಟಾಭಿಷೇಕೋತ್ಸವದ ಗುಣ ಅಂದರೆ ಯುವಕಹೊಸ ಶಾಹನು ಸಿಂಹಾಸನದಲ್ಲಿ ಅಸೀನನಾದಾಗ ಇಡೀ ದೇಶ ಹಾಗೂ ಸಮುದಾಯಗಳು ಏಕೆ ನವವಧುವಾಗಿ ಕಾಣಿಸುತ್ತವೆ?

ನಾನು ಈ ಹೊಸ "ಶಾಹ್ನಾಮಾ" ಬರೆಯಲಾರಂಭಿಸಿದಾಗ ನಾನು ನನ್ನ ಮಾತನ್ನು ಹೀಗೆ ಪ್ರಾರಂಭಿಸಿದೆ. ಬಿಜಾಪುರ ಇದೊಂದು ಬಾದಶಾಹನ ನಗರ, ಅದಂತೂ ಸಪ್ತ ಭೂಖಂಡಗಳ ರಾಜಧಾನಿ. ಈ ನಗರದ ಸಿಂಹಾಸನದ ಮೇಲೆ ಯುವಕ ಅಜೇಯ/ಮಹಾ ಅದೃಷ್ಟಶಾಲಿ ಶಾಹನು ಸಿಂಹಾಸನವನ್ನು ಅಲಂಕರಿಸಿದಾಗ ಇಡೀ ನಗರದಲ್ಲಿ ಒಂದು ಹೊಸ ಸಂತೋಷ ಉಂಟಾಗಿ ಯುಗ ಮತ್ತೆ ಯುವಕನಾದ. ಸಮುದ್ರ ತನ್ನ ಸೆರಗಲ್ಲಿದ್ದಷ್ಟು ಮುತ್ತುಗಳನ್ನು ನಿವಾಳಿಸಿ ಕೇವಲ ಒಂದು ಹಿಡಿ ಮುತ್ತುಗಳನ್ನು ತನ್ನ ಬಳಿ ಉಳಿಸಿಕೊಂಡ. ಸೂರ್ಯನು ತನ್ನ ಹಗಲಿನ ಜರಿ ಪೆಟ್ಟಿಗೆಯನ್ನು ಬಿಚ್ಚಿ ಶಾಹನಿಗೆ ಬಹಳ ವಿಜ್ರಂಬಣೆಯಿಂದ ಸ್ವಾಗತಿಸಿದ. ಚಂದ್ರ ಪ್ರತಿರಾತ್ರಿ ಶಾಹನ ಅಂಗಳದಲ್ಲಿ ಅಡಗಿಕೊಂಡರೆ, ಬೆಳದಿಂಗಳು ಅಲ್ಲಿ ಮೇಯುತ್ತಿತ್ತು. ಯುಗ ತನ್ನ ತಟ್ಟೆಯಲ್ಲಿ ಹೂಗಳನ್ನು ತುಂಬಿಕೊಂಡು ಬಂದು ಅದನ್ನು ಅಲಂಕರಿಸಿ ಹೊಸ ವಸಂತದ ಕಾಣಿಕೆಯನ್ನು ಅರ್ಪಿಸಲು ಅಪ್ಪಣೆ ಕೇಳಿತು. ಅನೇಕ ಹೂ ಕುಂಡಗಳನ್ನು ತುಂಬಿ ಅದನ್ನು ಕೇದಿಗೆಯ ಅರ್ಕದಿಂದ ಶೃಂಗರಿಸಿತು. ಹೂಗಳನ್ನು ಕಟ್ಟಿ ಹೊಸ ಬೇಲಿಗಳಿಂದ ಹಾರಗಳನ್ನು ಮಾಡಿ, ಚೆಂಡುಮಲ್ಲಿಗೆಯಿಂದ ಮಕ್ಮಲಿನಂತಹ ತುರಾಯಿಗಳನ್ನು ತಯಾರಿಸಿತು. ಕಮಲದ ಮೊಗ್ಗಿನಂತೆ ಗಾಜಿನ ಬಾಟಲಿಗಳಲ್ಲಿ ಪನ್ನೀರನ್ನು ತುಂಬಿದ, ಸೂರ್ಯಕಾಂತಿಯ ತಟ್ಟೆಯಲ್ಲಿ ಕೇಸರವನ್ನು ತುಂಬಿದ, ಕುಸುಂಬೆ ಹೂಗಳನ್ನು ತಂದು ಲೋಟ ತುಂಬಿದ. ನೀಲಮಣಿಯ ತೋಟದಲ್ಲಿ ತಟ್ಟೆ ಇಡಲಾಯಿತು. ಬಿಳಿಹೂವಿನಲ್ಲಿ ಚಂದನವನ್ನು ತಿಕ್ಕಿ, ಗೋರಂಟಿ ಹೂವಿನಲ್ಲಿ ಮೆಹಂದಿಯನ್ನು ಜೋಡಿಸಿ ಪ್ರಕಟಿಸಿದ. ಜಾಜಿಹೂವಲ್ಲಿ ಮೂಗಿನ ಆಭರಣ ಮಾಡಿ,

ಸಂಪಿಗೆ ಹೂವಿಗೆ ಶುದ್ಧ ಕಸ್ತೂರಿಯ ಅತಿ ಸುವಾಸನೆ ಕೊಟ್ಟ. ಪನ್ನಂಬರ ಬತ್ತಿಗಳನ್ನು ಕಸ್ತೂರಿ ಬೆತ್ತವನ್ನಾಗಿ ಮಾಡಿ ಇಟ್ಟ. ಸಿಹಿ ತುಳಸಿ/ಕಾಮ ಕಸ್ತೂರಿ, ಒಣಗಿದ ಪನ್ನಂಬರ ಸುವಾಸನೆ. ಸಂಪೂರ್ಣ ಚಂದ್ರನ ಡಬ್ಬಿಯಿಂದ ಅಬೀರಿನ(ಸುಗಂಧ ಚೂರ್ಣ) ಎಲ್ಲರ ಮೇಲೆ ಅದ್ವಿತೀಯ ಸುಗಂಧವನ್ನು ಚಿಮುಕಿಸಿ, ಕಿರಣ ಗುಲಾಬಿ ಹೂವಿನ ಮೇಲೆ ತನ್ನ ಬೆಳಕನ್ನು ಚಲ್ಲಿತು. ಅದರ ಮೇಲೆ ಇಬ್ಬನಿ ತನ್ನ ಸಣ್ಣ ಸಣ್ಣ ಹನಿಗಳಿಂದ ಅದನ್ನು ತಾಜಾ ಮಾಡಿತು. ಹುರಿಯುವ ಸಾಂಬ್ರಾಣಿಯ ಬತ್ತಿ ಒಳ್ಳೆ ಬಣ್ಣದ ಕಮಲವಾದಾಗ ಬೆಳಗಿನ ಗಾಳಿ ಲಂಬರೇಖೆ ಹಿಡಿದು ಉನ್ನತ ಬೀಸಣಿಗೆ, ಪವನದ ಬೀಸಣಿಗೆ ತೆಗೆದುಕೊಂಡು ಬೆಳಿಗ್ಗೆಯನ್ನು ತೂಗಿಸಿತು, ಹೊಗೆ ಸುರುಳು ಸುತ್ತುತ್ತ ಹುಲ್ಲಿನ ಮೈದಾನದ ಹಾಗೆ ಕಾಣಿಸುತ್ತಿತ್ತು. ಹಸಿರು, ಕೆಂಪು, ಹಳದಿ ಈ ರೀತಿಯ ವಿವಿಧ ಹೊಸ ಬಣ್ಣಗಳಾಗಿ ವಿಶೇಷವಾದ ಪಕ್ಷಿಗಳ ತಲೆ ಜುಟ್ಟಿನ ಹಾಗೆ ಮುಚ್ಚಳವಾಯಿತು. ಸರ್ವೆಯ ಲಘು ಒಳ್ಳೆಯ ಬಣ್ಣಗಳಿಂದ ಆನಂದ ತುಂಬಿತು ಅಲಂಕಾರದ ಆನಂದಗಳಿಂದ ಅವು ಇನ್ನಷ್ಟು ಸುಂದರವಾದವು. ಆಗ ಇವುಗಳ ಮೇಲೆ ಜರಿಯ ಮಂಡಪ ಹಾಕಲಾಯಿತು, ಆಗ ಸೂರ್ಯ ಹುಟ್ಟಿದನು. ಹಕ್ಕಿಗಳು ಮನಮೋಹಕ ಉಡುಪು ಧರಿಸಿ ನರ್ತಕರು ನಡೆಯುತ್ತ ಮುಂದೆ ಬಂದರು, ಈ ಅಲಂಕೃತ ನರ್ತಕಿಯರು ಅಪ್ಸರೆಯರ ಹಾಗೆ ಕಾಣುತ್ತಿದ್ದರು ಹೆಸರಾಂತ ಹಾಡುಗಾರ್ತಿಯರು ಖುಮ್ರಿ(ಪಾರಿವಾಳದ ಜಾತಿಗೆ ಸೇರಿದ ಕೊರಳಲ್ಲಿ ಪಟ್ಟಿ ಇರುವ ಪಕ್ಷಿ) ಗಳ ಹಾಗೆ ಕಾಣುತ್ತಿದ್ದವು. ಹಾಗೂ ಈ ಗಿಳಿಗಳು ಒಯ್ಯಾರದಿಂದ ಕೋಗಿಲು ಹಾಡುವ ಹಾಗೆ ಹಾಡಲಾರಂಭಿಸಿದವು. ಇದನ್ನು ಕೇಳಿ ಬುಲ್ಬುಲಿನ ಜೀವ ಹುರಿಸುವ ನೋವನ್ನು ಮರೆತು ಹೋಗಬೇಕು. ಇದೇ ರೀತಿ ಪೀಲಕ್ (ಹಳದಿ ಬಣ್ಣದ ಹಕ್ಕಿ) ತನ್ನ ಮಧುರ ಧ್ವನಿಯಿಂದ ಮನಸ್ಸನ್ನು ಆನಂದಗೊಳಿಸಿ ತೃಪ್ತಿ ತಂದಿತು. ಹೀಗೆ ಬಣ್ಣ ಬಣ್ಣಗಳ ಹಕ್ಕಿಗಳು ಕೆಂಪನೆ ಗೆಜ್ಜೆಯಿಂದ ನಾಜೂಕಾದ ಕಂಠದಿಂದ ತಾಳಕ್ಕೆ ತಕ್ಕಂತೆ ಸ್ವರ ರಚಿಸಿ ಚಪ್ಪಾಳೆ ತಟ್ಟುತ್ತ ಸಹಸ್ರಾರು ಅನೇಕ ರೀತಿಯ ಹಾಡುಗಳನ್ನು ಹಾಡಿದರು. ಅವರ ಮುಂದೆ ನರ್ತಕಿಯರು ರಾಜ ಹಂಸದಂತೆ ತಮ್ಮ ರೆಕ್ಕೆಗಳನ್ನು ಹರಡಿಸುತ್ತ ಕುಣಿದರು, ಕೆಲವರು ನವಿಲಿನ ಹಾಗೆ ಕುಣಿತ ಕುಣಿದು ತನ್ನ ಕೌಶಲ್ಯ ಪ್ರದರ್ಶಿಸಿದರು. ನಗಾರಿಗಳು ಸಂತೋಷದಿಂದ ಮೋಡಗಳ ಹಾಗೆ ಗುಡುಗಿದವು, ಮಿಂಚಿನ ಮುಂದೆ ತಡೆಯುವ ಹಾಗೆ ಘರ್ಜಿಸುತ್ತಿದ್ದವು, ಇಷ್ಟೊಂದು ರಾಗ ರಂಗು ಹಾಗೂ ಸಡಗರ ಸಂಭ್ರಮದಿಂದ ಹಾಗೂ ಅಲ್ಲಲ್ಲಿ ಅನೇಕ ರೀತಿಯ ಒಯ್ಯಾರದಿಂದ ಎಷ್ಟೊಂದು ಸೈನ್ಯವಿತ್ತೋ ಅದನ್ನು ಆಸಕ್ತಿಯಿಂದ ಶೇಖರಿಸಿ ತಂದ, ಇದೊಂದು ಕೀರ್ತಿ ತರುವಂತಹ ಸಂಪ್ರದಾಯ. ಇದರಿಂದಾಗಿ ಹೊಸ ಬಾದಶಾಹನ ಎಲ್ಲ ಕಾರ್ಯಗಳು ನಡೆಯುವುದು, ಶಹನ್ಶಾಹನು ಆ ಕಾಣಿಕೆಯನ್ನು ಸಂತೋಷದಿಂದ ಸ್ವೀಕರಿಸಿದ. ತನ್ನ ಮನಸ್ಸು ಹಾಗೂ ಕಣ್ಣುಗಳ ಸಂತೋಷಕ್ಕೆ ಅಲ್ಲಿ ಅನೇಕ ರೀತಿಯ ವಸ್ತುಗಳಿದ್ದವು, ಆದರೆ ತನ್ನ ಕೆಲಸಕ್ಕೆ ಬರುವಂತಹ ಎಲ್ಲ ಅವಶ್ಯಕ ವಸ್ತುಗಳನ್ನು ಮನಸ್ಸಾರೆ ಮೆಚ್ಚಿ ಅಲ್ಲೇ ತನ್ನ

ಸನ್ನಿಧಿಯಲ್ಲಿಟ್ಟಿಕೊಂಡ. ತನ್ನ ಸಭೆಯನ್ನು ನೋಡಿ ತೋಟವು ಸಹ ಹೊಟ್ಟೆಕಿಚ್ಚುಪಡುವಂತೆ ಮಾಡಿದ, ತನ್ನ ಬಳಿ ಇದ್ದಿದ್ದೆಲ್ಲವನ್ನು ಇಡೀ ಪ್ರಪಂಚಕ್ಕೆ ಹಂಚಿದ. ನಂತರ ಅವನು ಯುಗದ ಕಡೆ ಗಮನಹರಿಸಿ ಅವನು ವೃದ್ಧನಿಂದ ಯುವಕನಾಗಲೆಂದು ಅವನಿಗೆ ಪ್ರಸನ್ನತೆ ಉಡುಪನ್ನು ನೀಡಿದ. ಅದನ್ನು ಧರಿಸಿ ಅವನು ಎಲ್ಲಿಯವರೆಗೆ ಜೀವಂತವಾಗಿರುತ್ತಾನೆಯೋ ಅಲ್ಲಿಯವರೆಗೆ ಸಂತೋಷದಿಂದ ಬಾಳಲೆಂದು ಬಯಸಿದ. ಯುಗದ ಜೊತೆಯಲ್ಲಿ ಗಗನವೂ ಜೊತೆಯಲ್ಲಿದ್ದ, ಅವನು ಸಹ ಶಾಹನ ಕೃಪೆಯ ಹಕ್ಕುಳ್ಳವನಾಗಿದ್ದ. ಬಾದಶಾಹನು ಅವನಿಗೂ ಸಹ ನ್ಯಾಯದ ಬಟ್ಟೆ ಉಡುಪನ್ನು ಕೊಟ್ಟು ಭಾಗ್ಯಶಾಲಿ ಮಾಡಿದ. ಬಾದಶಾಹ ಸ್ವತಃ ಬುದ್ಧಿಯ ಮೇಘನಾಗಿ ಎಲ್ಲರ ಮೇಲೆ ಕೃಪೆಯ ಮಳೆ ಸುರಿಸಿದ. ನೋಡು ನೋಡುತ್ತಲೇ ದಾನದ ಮಳೆ ಸುರಿಯಲಾರಂಭಿಸಿತು. ದುರಾಸೆ ಈ ಪ್ರವಾಹದಲ್ಲಿ ಮುನ್ನಡೆ ಸಾಧಿಸಿತು, ಆಸೆ ಕೊಡುಗೆಗಳಲ್ಲಿ ಮುಳುಗೇಹೊಯಿತು. ಓ ದೇವ ಈ ಪ್ರಪಂಚದ ಶಾಹ ನಿತ್ಯವೂ ಹೀಗೇ ಇರಲಿ, ಹಾಗೂ ಇಡೀ ಲೋಕ ಇವನಿಂದ ಹೀಗೆ ಸುರಕ್ಷಿತವಾಗಿರಲಿ. (೫೭೬–೬೧೮)

ಬಾದಶಾಹನು ಸಿಂಹಾಸನ ಅಲಂಕರಿಸಿದ ನಂತರ ದೇಶ ಗೆಲ್ಲುವ ಮಾತುಗಳು ಇದನ್ನು ಹೇಗೆ ಕಾರ್ಯಾಚರಣೆ ಮಾಡಬೇಕು ಎಂಬುವುದು ಇಲ್ಲಿಂದ ಪ್ರಾರಂಭವಾಗುತ್ತದೆ.

ದಕ್ಷಿಣದ ಬಾದಶಾಹನು ಮಾಡಿರುವ ಕೆಲಸದ ಬಗ್ಗೆ ನಾನು ಇಲ್ಲೊಂದು ಮುಖ್ಯವಾದ ಮಾತನ್ನು ಹೇಳುತ್ತಿದ್ದೇನೆ. ದಕ್ಷಿಣದಲ್ಲಿ ಹೊಸ ಬಾದಶಾಹನು ಬಂದ ನಂತರ ಎಲ್ಲ ಕೆಲಸಗಳನ್ನು ಹೊಸ ರೀತಿಯಿಂದ ಮಾಡಿದ. ಹೊಸ ಬೀಜವನ್ನು ಬಿತ್ತಿದ್ದನ್ನು ಕಂಡು ಗೆಳೆಯರಿಗೆ ಹಾಗೂ ಶತ್ರುಗಳಿಗೆ ತುಂಬ ಪುರ್ಸತ್ತು ಸಿಕ್ಕಿತು. ಗೆಳೆಯರೆಲ್ಲರೂ ಸಂತೋಷ ಪಟ್ಟರು, ಶತ್ರುಗಳು ಕೆಡಕನ್ನುಂಟು ಮಾಡುವುದರಲ್ಲಿ ತೊಡಗಿದರು. ಬಾದಶಾಹನ ಮುಂದೆ ಚಾತುರ್ಯ ಇದೆ, ಒಂದು ದೊಡ್ಡ ಚದುರಂಗ ಸ್ಪರ್ಧೆ ಇದೆ. ಯಾರ್‍ಯಾರು ಇಲ್ಲಿರುವರೋ ಅವರೆಲ್ಲರು ಕುಶಲತೆ ಹಾಗೂ ಪರಿಪೂರ್ಣತೆ ಹೊಂದಿರುವ ಆಟಗಾರರು. ಪ್ರತಿಯೊಬ್ಬ ಗುರುವಿನ ಒಂದು ರೀತಿ ನೀತಿಯ ಒಂದು ನಡಿಗೆ ಇದೆ. ಯಾರು ಒಂದು ಆಟ ಅಪೂರ್ಣ ಬಿಟ್ಟಿರುತ್ತಾನೋ, ಮತ್ತೊಬ್ಬ ಅದೇ ಆಟ ಇನ್ನೊಂದು ತಿರುವಿನಂದ ಪ್ರಾರಂಭಿಸುತ್ತಾನೆ. ಮುಂದಿರುವ ಎದುರಾಳಿ ಆಟವನ್ನು ಅರಿಯಲು ಪ್ರಯತ್ನಿಸುತ್ತಿದ್ದಾನೆ, ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಿದ್ದಾನೆ, ಅವನು ಆಟ ಪ್ರಾರಂಭಿಸಬೇಕೆಂಬುವಾಗಲೇ ಆಟ ಮುಗಿದುಹೋಗಿ ಮತ್ತೊಂದು ಹೊಸ ಆಟ ಪ್ರಾರಂಭವಾಗುತ್ತದೆ. ದೃಷ್ಟಿಯಿಟ್ಟು ಕೈಯಲ್ಲಿ ಪಗಡೆಯ ದಾಳ/ಕವಡೆ ತೆಗೆದುಕೊಂಡು ಅದೇ ಜ್ಞಾನದಲ್ಲಿ ತನ್ನನ್ನು ಮರೆತು ಬಲು ವೇಗದಿಂದ ಆಟವನ್ನು ಕೆಳಗಿಟ್ಟು ಬರುವ ಕಷ್ಟಗಳ ಮೇಲೆ ಗಮನ ಹರಿಸುತ್ತಾನೆ. ಎದುರಾಳಿ ಎಲ್ಲಾದರು ಹೋಗಬೇಕೆಂದಾಗ, ಒಂದೆರಡು ಕವಡೆಗಳು ಕಳೆದರೂ ಸಹ, ಆಟದಲ್ಲಿ ಯಾವುದೇ ರೀತಿಯ ನ್ಯೂನ್ಯತೆ

ಇರಕೂಡದೆಂದು ತುಂಬ ಕಾಳಜಿ ವಹಿಸುತ್ತಾನೆ. ಯಾವ ಜಾಗದಲ್ಲಿ ಶಕ್ತಿ ಕಡಿಮೆ ಇದೆಯೋ ಅಲ್ಲಿ ಬುದ್ಧಿ ಓಡಿಸಿ ಮತ್ತಷ್ಟು ಜೋಡಿಸಿ/ಸೇರಿಸಿ ಒಂದೊಂದು ಪಗಡೆಯ ಮಂತ್ರಿಯ ಕಟ್ಟೆ ಕಟ್ಟಲಾಗುತ್ತಿದೆ. ತನ್ನ ಕುದುರೆಯ ಬಲ ಹೆಚ್ಚಿಸುತ್ತಿದ್ದಾನೆ ಸಾಲು ಕಟ್ಟಿರುವ ಪೇದೆಗಳನ್ನು ನಡೆಸುತ್ತಿದ್ದಾನೆ. ಎಲ್ಲಿಯೂ ತನ್ನ ಮತ್ತು ಹಟ ಇರಬಾರದು. ಪ್ರತಿಯೊಂದು ಪಗಡೆಯು ತನ್ನ ಕೆಲಸದಲ್ಲಿ ತೊಡಗಿರಬೇಕು, ಮೋಸದಿಂದ ಎಲ್ಲಿ ಆಟ ಗೆಲ್ಲುವೆನೋ ಎಂದು ಎದುರಾಳಿಯ ಪ್ರತಿಯೊಂದು ನಡೆಯ ಕಡೆ ಕಣ್ಣಿಡಲಾಗಿದೆ. ಯಾವ ಆಟಗಾರ ತನ್ನ ಕೈಯಲ್ಲಿ ಆಟ ತೆಗೆದುಕೊಂಡಿರುವನೋ ಅವನೇ ಆಟದಲ್ಲಿ ಪೇದೆಯನ್ನು ಸೋಲಿಸುವನು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ ಶತ್ರುಗಳನ್ನು ಸರಿಪಡಿಸುವವರೆಗೆ ಬಾದಶಾಹರ ಕೆಲಸಗಳು ಹೀಗಿರುತ್ತವೆ. ಚಿಕ್ಕವರು ದೊಡ್ಡವರೆಲ್ಲರೂ ಕೆಟ್ಟ ಮನಸ್ಸಿನಿಂದ ಎಲ್ಲ ಕಡೆಯೂ ದಂಗೆ ಎಬ್ಬಿಸಿದ್ದರು. ಎದುರಾಳಿ ಗುಂಪಲ್ಲಿ ಅನೇಕರು ಡಾಂಭಿಕರಾದರು, ಹಾಗೂ ಸ್ನೇಹಿತರೆಲ್ಲೂ ಸಹ ಅಯೋಗ್ಯರಾದರು. ಬಾದಶಾಹನು ಬಹಳ ಚಿಕ್ಕ ವಯಸ್ಸಿನಲ್ಲಿ ಬಲು ದೊಡ್ಡ ಜವಾಬ್ದಾರಿ ಹೊಂದಿದನು. ಹೊಸ ಅರಸುತನ, ಹೊಸ ದಿನಗಳು ಇಂತಹ ಸಮಯದಲ್ಲಿ ಕಠಿಣ ಆಟ ಎದುರಿಸಬೇಕಾಗಿತ್ತು, ದಿನೇ ದಿನೇ ಯುದ್ಧಗಳು ಉಗ್ರವಾದವು. ಆದರೆ ಈ ದಾರಿಯಲ್ಲಿ ಅವನು ಮನಸ್ಸನ್ನು ಗಟ್ಟಿಮಾಡಿಕೊಂಡ, ಹೊಸ ಕೆಲಸಗಳಲ್ಲಿ ಹೊಸ ಅನುಕಂಪ/ಹಿಂಜರಿಯುವಿಕೆ, ಪ್ರತಿಯೊಂದು ಕೆಲಸದಲ್ಲಿ ಚಿಂತನೆ ನಡೆಸಿ ಆ ಕೆಲಸದ ಅಂತರಾಳದವರೆಗೆ ಅನುಕಂಪದಿಂದ ಕೆಲಸ ತಗೆದುಕೊಂಡ. ಎಲ್ಲಿ ಸಂಧಿಯಾಗ ಬೇಕಾಗಿತ್ತೋ ಅಲ್ಲಿ ಸಂಧಿ ಮಾಡಿಕೊಂಡ, ಎಲ್ಲಿ ಯುದ್ಧ ಮಾಡಬೇಕಾಗಿತ್ತೋ ಅಲ್ಲಿ ಯುದ್ಧ ಮಾಡಿದ. ಆದರೆ ಎಂದಿಗೂ ಖಡ್ಗ ಮಾತ್ರ ಕೈಯಿಂದ ಬಿಡುತ್ತಿರಲಿಲ್ಲ. ತನ್ನ ಎದುರಾಳಿಯನ್ನು ದುರಗುಟ್ಟಿಕೊಂಡು ನೋಡಲಿಲ್ಲ. ಅವಶ್ಯಕತೆ ಬಿದ್ದಾಗ ತನ್ನ ಮಾತು ಅವಶ್ಯಕವಾಗಿ ಕಠೋರದಿಂದ ಹೇಳಿದ. ಅದು ಅಲಿಯ ಹೃದಯವೇ, ಅದು ಅನೇಕ ದಿನಗಳವರೆಗೆ ನಿರ್ಭಯವಾಗಿ ಅಪಾಯಗಳನ್ನು ಎದುರಿಸಿತ್ತಿದ್ದ. ಎಲ್ಲಾದರೂ ಯುದ್ಧ ನಡೆದರೆ ಒಮ್ಮೆ ಅದರಿಂದ ಲಾಭವಾಗುತ್ತಿತ್ತು. ಒಮ್ಮೆ ನಷ್ಟ. ದೇವ ಶಾಹನ ಸಂಕಲ್ಪದ ಪ್ರತಿಫಲ ನೀಡಿದ ಹಾನಿಗಾರರಿಗೆ ಅಗೋಚರದಿಂದ ಶಿಕ್ಷೆಯಾಯಿತು. ಆದರೆ ಶತ್ರುಗಳಿಗೆ ಹಾಗು ಬಂಡಾಯಗಾರರಿಗೆ ನಿತ್ಯವೂ ಶಿಕ್ಷಿಸುತ್ತಿದ್ದ. ಅವನ ಸುತ್ತಲೂ ವಿದ್ರೋಹದ ಬೆಂಕಿ ಉರಿಯುತ್ತಿತ್ತು, ನಿತ್ಯವೂ ಅವನ ಖಡ್ಗ ಓರೆಯಿಂದ ಹೊರಗೆ ಇತ್ತು. ಒಂದು ಕಡೆಯ ಉರಿಯುತ್ತಿರುವ ಬೆಂಕಿಯನ್ನು ಆರಿಸಿದರೆ ಮತ್ತೊಂದು ಕಡೆಗೆ ಉರಿಯಲಾರಂಭಿಸುತ್ತಿತ್ತು. ಯಾರಿಗೆ ದೇವದತ್ತ ಮಹನೀಯತೆ ಸಿಕ್ಕಿರುತ್ತದೆಯೋ ಅಸಲಿಗೆ ಅವನ ಹೃದಯ ಉಕ್ಕಿನದಾಗಿರುತ್ತದೆ. ಒಬ್ಬ ಸಜ್ಜನನ ಮೇಲೆ ಕಷ್ಟ ಬಂದರೆ ಅದರಲ್ಲೇ ಸಿಕ್ಕಿಹಾಕಿಕೊಳ್ಳದೇ ಅವನು ಬುದ್ಧಿವಂತಿಗೆಯಿಂದ ಅದನ್ನು ನಿವಾರಿಸಿಕೊಳ್ಳುತ್ತಾನೆ. (೭೯-೭೭೧)

ಪಿತೂರಿಕೋರ ಅಂದರೆ ನೀಚಪಿಶಾಚಿ ಸಿವಾ ಅವನು ದಕ್ಷಿಣ ದೇಶದ ಬುನಾದಿಯಲ್ಲೇ ಬಿರುಕನ್ನುಂಟು ಮಾಡಿದವನು.

ಯಾರು ಕೆಟ್ಟವನೋ, ಅವನು ತನ್ನ ಕೆಟ್ಟತನದಿಂದ ಪಾಪಿಯಾಗುತ್ತಾನೆ, ಹಾಗೂ ಅವನ ಹೆಸರು ಅಂತ್ಯದವರಿಗೂ ಹತಭಾಗಿಯರಲ್ಲಿ ಪರಿಗಣಿಸಲ್ಪಡುತ್ತದೆ. ದೇವನ ಬಳಿ ಅವನಿಗೆ ಯಾವುದೇ ಸುಖವಿಲ್ಲ ಹಾಗೂ ಸೃಷ್ಟಿಯ ದೃಷ್ಟಿಯಲ್ಲಿ ಅವನು ಧಿಕ್ಕರಿಸಲ್ಪಟ್ಟವ. ಯಾವಾಗ ಆ ದುಷ್ಟನ ಹೆಸರು ಬರುತ್ತದೋ ಅವನ ಹೆಸರಿಂದಲೇ ಗೊಂದಲ ಪ್ರಾರಂಭವಾಗುತ್ತದೆ. ಶಿವಾಜಿ ಈ ಕಾಲದ ದೊಡ್ಡ ಪಿತೂರಿ ಎನ್ನಲಾದವನು ಮಹಾಕಳ್ಳ, ದುಷ್ಟ ಹಾಗೂ ರಕ್ತ ಹರಿಸುವನು. ದಕ್ಷಿಣ ಭೂಮಿಯಲ್ಲಿ ಮೊಟ್ಟಮೊದಲಿಗೆ ಕೇಡಿನ ಬೀಜ ಬಿತ್ತಿದವನೇ ಈ ಕೆಟ್ಟ ಹುಟ್ಟು. ಇವನಿಂದ ಪ್ರಜೆಗಳು ಎಷ್ಟು ನೀಚ/ಅವಮಾನಿತರಾದರು. ಈ ಗೂಬೆಯಿಂದ ಇಡೀ ದೇಶ ನಿರ್ಜನ ಸ್ಥಾನವಾಯಿತು. ಯಾರೇ ದೊಡ್ಡವನೇಯಾಗಲಿ ಚಿಕ್ಕವನೇಯಾಗಲಿ ಅವರ ಹುಟ್ಟುವಿಕೆನೇ ಕೆಟ್ಟದ್ದಿದ್ದು ಅವರೆಲ್ಲರೂ ಬಂಡಾಯ ಕಲಿತರು. ಅವನಂತೂ ಎಲ್ಲಿಯೂ ಒಂದು ಕಡೆ ನಿಂತು ಯುದ್ಧ ಮಾಡಿದವನಲ್ಲ. ಆದರೇ ಅವನಿಂದಾಗಿ ಪ್ರಪಂಚದ ಅನೇಕ ಮನೆಗಳು ಹಾಳಾದವು. ಅವನ ದಾರಿದ್ರ್ಯದಿಂದ ಗಲಭೆ ಇನ್ನು ಹೆಚ್ಚಾಗಿ ರಕ್ತದ ನದಿಗಳೇ ಹರಿಯುತ್ತಿದ್ದವು. ದೊಡ್ಡ ಬಾದಶಾಹರ ಮಧ್ಯೆ ಜಗಳ ತಂದಿಡುತ್ತಿದ್ದ, ಇದೇ ರೀತಿಯಾಗಿ ಅವನು ಮುಘಲರು ಹಾಗೂ ದಕ್ಷಿಣದ ಅರಸರ ಮಧ್ಯೆ ಜಗಳ ತಂದಿಟ್ಟು ತಾನು ಒಂದು ಬೆಟ್ಟದಲ್ಲಿ ಅಡಗಿಕೊಂಡ. ಅವನ ಅಸ್ತಿತ್ವ ಕುತಂತ್ರ ಹಾಗೂ ಮೋಸದಿಂದ ತುಂಬಿ ತುಳುಕಾಡುತ್ತಿತ್ತು. ಬಹಿರಂಗದಲ್ಲಿ ಅವನು ಮಾನವ ರೂಪ ಧರಿಸಿದ್ದ ಆದರೇ ವಂಶದಲ್ಲಿ ದೆವ್ವ. ಅವನೇನಾದರೂ ಕೊಂಚ ತನ್ನ ವಂಚನೆ/ಮೋಸ ತೋರಿಸಿದರೆ ಸೈತಾನನೂ ಸಹ ತಿರಸ್ಕಾರ ಸೂಚನೆಯ ಜಪ ಮಾಡಲಾರಂಭಿಸುವನು. ಸತ್ಯನಿಷೇಧತೆಯಲ್ಲಿ ಅವನು ಆಂಗ್ಲರಿಂದ ಹೆಚ್ಚು, ಇಸ್ಲಾಂ ಧರ್ಮದ ಬಗ್ಗೆ ಅಂತೂ ಅವನಿಗೆ ಕಟ್ಟಾವಿರೋಧತನವಿತ್ತು. ಅವನ ವಧೆ ಹಜ್ ಅಂತಹ ಆರಾಧನೆಗಿಂತ ಚಿಕ್ಕದೇನು ಅಲ್ಲ. ಅವನೇನಾದರೂ ಪವಿತ್ರ ಕಾಬಾದಲ್ಲಿ ಸಿಕ್ಕಿಹಾಕಿಕೊಂಡಿದ್ದರೂ ಕೊಲ್ಲಲು ಅರ್ಹನಾಗುತ್ತಿದ್ದ. ಯಾವಾಗಲೂ ಒಡೆಯರನ್ನು ಮೋಸಮಾಡುತ್ತಿದ್ದ ನಿತ್ಯವೂ ಉಪ್ಪಿನ ದ್ರೋಬಿಖಾರದ ಕೆಲಸವನ್ನೇ ಮಾಡುತ್ತಿದ್ದ. ಹಂದಿ ಹೇಗೆ ಗುಹೆನಲ್ಲಿರುತ್ತದೆಯೋ ಹಾಗೆಯೇ ನಿತ್ಯವೂ ದೊಡ್ಡ ಬೆಟ್ಟಗಳಲ್ಲಿರುತ್ತಿದ್ದ. ನಿಸ್ಸಂದೇಹವಾಗಿ ಆ ಹಂದಿಯ ಬಲೆಯಲ್ಲಿ ಬಿದ್ದು ಶೂರರೂ ಮೋಸ ಹೋಗುತ್ತಿದ್ದರು. ಹುಲಿ ಮತ್ತು ಹಂದಿಯ ಮಧ್ಯೆ ಒಂದು ಜೀವಕೊಡುವ ಚಿಲುಮೆ ಸುಪ್ರಸಿದ್ಧವಾಗಿದೆ, ಹಂದಿ ಹುಲಿಯ ಮುಂದೆ ಬಲು ಸಾಹಸದಿಂದ ಬಂದು ಆ ಚಿಲುಮೆಯ ನೀರನ್ನು ಕುಡಿಯುವದು ಆದರೆ ಹುಲಿ ಆ ಚಿಲುಮೆಯ ನೀರನ್ನು ಕುಡಿಯಲು ಸಾಧ್ಯವಿಲ್ಲ. ಯಾವಾಗ ಬಿಡುವು ಸಿಕ್ಕುತ್ತಿತ್ತೋ ಆಗ ಆ ಅವನು ಕಳ್ಳತನ ಮಾಡಲು

ಹಿಂಜರಿಯುತ್ತಿರಲಿಲ್ಲ. ಆ ಅವಿನೀತ ಒಂದು ಕಳ್ಳ ರಾಯಭಾರಿಯನ್ನು ಮಾಡಿಕೊಂಡು ನಿನ್ನ ಪಂಚಪ್ರಾಣದ ಮೇಲೆ ಹಠಾತ್ತನೆ ಆಕ್ರಮಣಿಸಿದ. ಆ ಪರ್ವತವನ್ನು ಅಗೆಯುವವನು ಗುರಾಣಿಯಿಂದ ಮೋಸ ಹೋದ. ಅವನ ಕೊಳಕು ಕಾಲಿನಿಂದ ನದಿಯ ನೀರೆಲ್ಲ ಕೊಳೆಯಾಯಿತು. ತೋರಿಕೆಗಾದರೂ ಎಂದಿಗೂ ಯಾರಿಗೂ ಸಹ ಸುಖದಿಂದ ಇರಲೆಂದು ಐಶ್ವರ್ಯ ಕೊಡುತ್ತಿರಲಿಲ್ಲ. ಅಶಕ್ತರ ಮೇಲೆ ಗಂಡಾಂತರವನ್ನುಂಟು ಮಾಡುತ್ತಿದ್ದ. ಅವನ ಈ ನೀಚ ಕೆಲಸಗಳಿಂದ ರೋಸಿಹೋಗಿ ಧರ್ಮನಿಷ್ಠ ಘಾಝಿ ಸಿಂಹಾಸನ ಅಲಂಕರಿಸಿದ ಶಹನ್ಶಾಹನು ಆ ಹಂದಿಯನ್ನು ಹೊಡೆದು ಪರಾಜಯಗೊಳಿಸಲು ಅವನ ಮೇಲೆ ಒಂದು ಗಂಡು ಹುಲಿ ಅಫಝುಲ್‌ಗೆ ಬಿಟ್ಟ. ಆ ಹುಲಿ ಆಕ್ರಮಣಿಸಿದಾಗ ಆ ಗುಳ್ಳೆನರಿ ತನ್ನ ಕೌಶಲ್ಯದಿಂದ ಆಟ ಗೆದ್ದ. ಒಂದು ಸಲ ಮೋಸದ ಅಪ್ಸರೆಯನ್ನು ತೆಗೆದು ಕೊಂಡು ಉಡಾಳತನದಿಂದ ಅವನ ಜೀವಕ್ಕೆ ಸ್ವತಂತ್ರಗೊಳಿಸಿದ. ಹಂದಿಯಂತೆ ಬಂದು ಆಕ್ರಮಣ ಮಾಡಿ ಅಲ್ಲಿಂದ ಅವನ ಸುತ್ತಲಿನ ಊರುಗಳೆಲ್ಲ ಧ್ವಂಸಗೊಳಿಸಿದ. ಮೋಸದಿಂದ ಕೆಲಸ ತೆಗೆದುಕೊಂಡು ಒಂದು ಗುಪ್ತದ್ವಾರದಿಂದ ಹೋಗಿ ಪನಾಲೆಯ ಕೋಟೆಯನ್ನು ವಶಪಡಿಸಿಕೊಂಡಾಗ, ಪಿತೂರಿಯು ಕುರ್ಚಿಯ ಮೇಲೆ ಕುಳಿತುಕೊಂಡಿದೆ(ಸಿಂಹಾಸನವನ್ನು ಗೆದ್ದುಕೊಂಡಿದೆ) ಎಂದು ಅವನು ಆಗ ತಿಳಿದುಕೊಂಡ, ಈ ಮಾತು ಖಾತ್ರಿಯಾಯಿತು. ಆಗ ಇಡೀ ದೇಶದಲ್ಲಿ ಕೋಲಾಹಲ ಉಂಟಾಯಿತು ಪ್ರಜೆಗಳು ಗಾಬರಿಂರಾಗಿ ಕಂಪಿಸಲಾರಂಭಿಸಿದರು. ಮರ್ಯಾದಸ್ತ ಬೇಗಂರಿಗೆಲ್ಲ ಶನಿ ತಾಗಿದಂತಾಯಿತು, ಇಡೀ ಜಗತ್ತಿನ ಮೇಲೆಲ್ಲ ಇನ್ನೊಂದು ನಕ್ಷತ್ರ ಬಂದು ಸೇರಿದಂತೆ ಕಾಣಿಸಿತು. ಶಹನ್ಶಾಹನು ಈ ಮಾತನ್ನು ಕೇಳಿ ಕ್ರೋಧಗೊಂಡು, ಅವನನ್ನು ಶಿಕ್ಷಸಿಲೇಬೇಕೆಂದು ತೀರ್ಮಾನಿಸಿದ. ಈ ರೀತಿಯಲ್ಲಿ ಶಾಹರವರು ಕ್ರೋಧವಾಗಿದ್ದನ್ನು ನೋಡಿ ಉಕ್ಕು ಸಹ ಅವರ ಸನ್ನಿಧಿಯಲ್ಲಿ ನೀರಾಯಿತು. (೬೬೨-೬೯೬)

ಜೌಹರಿನ ಕಥೆ ಶಾಹರವರು ಅವನಿಗೆ "ಸಲಾಬತ್ ಖಾನ್" ಎಂಬ ಬಿರುದನ್ನು ಕೊಟ್ಟು ಯುದ್ಧದ ಸಂಪೂರ್ಣ ಜವಾಬ್ದಾರಿಯನ್ನು ನೀಡಿ ಕಳುಹಿಸಿದರು.

ಕೆಟ್ಟಹುಟ್ಟಿನ ಶತ್ರು ಒಳ್ಳೆ ಸಮಯ ಸಾಧಿಸಿ ತನ್ನ ಹಗೆತನವನ್ನು ಕಳೆಯುತ್ತಾನೆ. ತಲೆ ಎತ್ತಿ ಶಿವಾಜಿ ಈ ಕೆಲಸ ಮಾಡಿದಾಗ ಶಾಹೆ ಘಾಝಿ (ಅಲಿ ಆದಿಲ್ ಶಾಹ)ಯ ಇಡೀ ಸೈನ್ಯ ಒಬ್ಬ ದಂಡನಾಯಕನ ನೇತೃತ್ವದಲ್ಲಿ ಹೊರಟಿತು. ಅವನು ಚಂಚಾವರವನ್ನು ಗೆದ್ದಿದ್ದ (ಚಂಚಾವರ ಒಂದು ಗ್ರಾಮದ ಹೆಸರು ಅದು ಪುಣೆಯಿಂದ ಉತ್ತರ ಪಶ್ಚಿಮ ದಿಕ್ಕಲ್ಲಿ ಹತ್ತು ಮೈಲಿ ದೂರದಲ್ಲಿದೆ) ಚಂಚಾವರಿನ ದೂರ ಎರಡು ತಿಂಗಳದ್ದು. ಈ ರೀತಿಯ ಕೆಲಸ ಬಿದ್ದಿದೆ ಎಂದು ಶಾಹನಿಗೆ ಬರೆದಾಗ ಶಾಹನು ಸೈನ್ಯ ಕರೆಸಿದ, ಇಲ್ಲಿ ಫಲ ಬರುತ್ತಿದೆ ಆದರೆ ಅಲ್ಲಿಯ ಕೆಲಸ ಇನ್ನು ಅಪೂರ್ವ. ಪ್ರಪಂಚ ಕಿವಿ ಹಿಂಡುತ್ತದೆ(ಶಿಕ್ಷಿಸುತ್ತದೆ) ಅದಕ್ಕೆ ಈ ಕೆಲಸ ಸುಲಭ. ನಾನು ಒಬ್ಬ ಸೇವಕನ

ಕೈಯಿಂದ(ಶಿಕ್ಷೆ) ಕೊಡಿಸುವೆ. ಒಂದು ದೊಡ್ಡ ಪಟ್ಟಣದಲ್ಲಿ ದೊಡ್ಡ ಸಾಮ್ರಾಜ್ಯವಿತ್ತು, ಅಲ್ಲಿ ಶಾಹನ ಹಳೇ ಪ್ರಾಮಾಣಿಕರಿದ್ದರು. ಎಲ್ಲಿಯವರಿಗೆ ಪ್ರಸಿದ್ಧತೆಯ ಜೀವನ ಕಳೆದರೋ ಶಾಹನ ಸೇವಕರಾಗಿದ್ದರು. ಅವರಲ್ಲಿ ಒಬ್ಬ ಬುದ್ಧಿಶಾಲಿ ಪ್ರಾಮಾಣಿಕನಿದ್ದ, ಅವನಿಗೆ ಆ ಪಟ್ಟಣದ ವಾರಸ್ದಾರನನ್ನಾಗಿ ಮಾಡಲಾಯಿತು, ಅವನಗೆ ಅಧಿಕಾರಿ ಮಾಡಲಾಯಿತು, ಪ್ರತಿಯೊಬ್ಬನು ಅವನನ್ನು ಪ್ರಶಂಸಿಸುತ್ತಿದ್ದ, ಅವನ ಸಾಮರ್ಥ್ಯದ ಗುಣಗಾನ ಮಾಡುತ್ತಿದ್ದರು. ಅವನು ಹೃದಯ ಮತ್ತು ಕೈಗೆ ಪ್ರಸಿದ್ಧನಾಗಿದ್ದ, ಅಂದರೆ ಒಳ್ಳೆ ಮನಸುಳ್ಳವ ಹಾಗೂ ಶೂರನೂ ಕೂಡ. ಪ್ರಜೆಗಳ ಶುದ್ದಮನಸ್ಸಿನ ಪ್ರಾಮಾಣಿಕ/ ನೈಜ ಮಿತ್ರ, ಸೈನಿಕರ ಗೆಳೆಯ. ಅವನ ಸಾಹಸ ಹಾಗೂ ಶೌರ್ಯದ ಚರ್ಚೆ ದೂರದೂರದವರೆಗಿತ್ತು. ಜನ ಅವನನ್ನು ಭೇಟಿ ಮಾಡಲು ಬರುತ್ತಿದ್ದರು. ಪ್ರಪಂಚದಲ್ಲಿ ಅದೊಂದು ವಿಚಿತ್ರವಾದ ಜಾಗವಾಗಿತ್ತು. ಆ ಜಾಗದ ಒಂದು ವಿಶೇಷತೆ ಹೇಗಿತ್ತೆಂದರೆ ದುಖಿ ಮನಸುಳ್ಳವರು ಅಲ್ಲಿಗೆ ಬಂದರೆ ಅವರಿಗೆ ಅದು ಅವರಿಗೆ ಚಿಕಿತ್ಸಾಲಯ ಆಗಿತ್ತು. ಶಾಹನು ಮೊದಲಿಂದಲೇ ರತ್ನ ಪರೀಕ್ಷಕನು, ತುಂಬ ಊಹಿಸಿ ಅದರ ಮೇಲೆ ಕಣ್ಣಿಟ್ಟಿದ್ದನು. ಇದ್ದಿಕ್ಕಿದ್ದ ಹಾಗೆ ಈ ಕೆಲಸ ಬಂದಾಗ, ತುಂಬ ಆಲೋಚಿಸಿ ಅವನಿಗೆ ಸನ್ನೆ ಮಾಡಿದರು ಹಾಗೂ ಭಾಗ್ಯಶಾಲಿ ಆಗುವ ಸುವಾರ್ತೆ ಕೊಟ್ಟರು. ಅಜಯ ಬಾದಶಾಹನು ಆಜ್ಞೆಮಾಡಿದಾಗ ಅವನು ಅಲ್ಲಿಂದ ಹೊರಟು ಬಾದಶಾಹನ ಬಳಿ ಬಂದ. ಬಾದಶಾಹರ ಕೃಪಾದೃಷ್ಟಿ ಅವನ ಮೇಲಿದೆ ಎಂದು ತಿಳಿದ ತಕ್ಷಣ ಅವನು ಕುದುರೆಗೂ ಕಾಯದೇ ನಡೆದುಕೊಂಡೇ ಬಂದ. ಅವನು ರಾಜಧಾನಿಯ ಬಳಿ ಬಂದಾಗ ಅವನಿಗೆ ಅನೇಕ ಶಾಹಿ ಇನಾಮು ಬಕ್ಷೀಷುಗಳಿಂದ ಪ್ರತಿಷ್ಠಿತನಾಗಿ ಮಾಡಲಾಯಿತು. ಅವನಿಗೆ ಸೈನ್ಯದ ಸರ್ದಾರ ಮಾಡಿ ಅತ್ಯುತ್ತಮ ಸಿಪಾಯಿಗಳ ಸರ್ದಾರನನ್ನಾಗಿ ಮಾಡಲಾಯಿತು. ಕೆಲವೇ ಕ್ಷಣಗಳಲ್ಲಿ ಅವನು ಅಗಣಿತ ಭಾಗ್ಯಶಾಲಿಯಾದ. ಅವನಿಗೆ "ಸಲಾಬತ್ ಖಾನ್" ಎಂಬ ಬಿರುದನ್ನು ಕೊಡಲಾಯಿತು. ಒಡೆಯನಾಗಿ ಅವನಿಗೆ ಮಹನೀಯತೆ ಕೊಟ್ಟನು. ಒಂದೇ ಕ್ಷಣದಲ್ಲಿ ಒಂದು ಸಾಮಾನ್ಯ ಕಣವನ್ನು ಬೆಟ್ಟ ಮಾಡಿದ. ಮದ್ಯ ಕುಡಿಸುವನ ದಯೆಯಿಂದ, ಹಾಗೂ ಶಾಹನ ಪ್ರತಿಷ್ಠತೆಯ ಎಡಬಿಡದೆ ಮದ್ಯಲೋಟಗಳನ್ನು ತುಂಬಿ ತುಂಬಿ ಕೊಟ್ಟ, ಅವನು ತನ್ನ ಅದೃಷ್ಟದ ಮೇಲೆ ಜಂಬ ಕೊಚ್ಚಿಕೊಂಡು, ಅಧಿಕ ಜಂಬದಲ್ಲಿ ತನ್ನನ್ನೇ ಮರೆತ. ಈ ಜೌಹರ್‌ನಾಗಿದ್ದವನು ವೀರನು ತನ್ನ ಕಾಠಿಣ್ಯಕ್ಕೆ ಬಂದು ಮಂತ್ರಿಗಳ ಜೊತೆ ಸೇರಿ ದಂಡನ್ನು ಶೇಖರಿಸಿ ತನ್ನ ಕೈಯಲ್ಲಿ ತೆಗೆದುಕೊಂಡ. ಅವನು ತನ್ನ ಸಾಮಾನೆಲ್ಲ ತೆಗೆದು ಕೊಂಡು ಸಜ್ಜಾಗಿ ಬರುವವರಿಗೆ ಮೈದಾನ ಖಾಲಿ ಇದ್ದದ್ದನ್ನು ನೋಡಿ, ಶಿವಾಜಿ ಅನೇಕ ಅವಶ್ಯಕ ವಸ್ತುಗಳನ್ನು ಶೇಖರಿಸಿಕೊಂಡು ಕೋಟೆಯೊಳಗೆ ಸೇರಿ ಬಾಗಿಲನ್ನು ಮುಚ್ಚಿದ. ಕೋಟೆಯಿಂದ ಇಳಿದು ಸುತ್ತಮುತ್ತಲಿನ ಊರುಗಳನ್ನೆಲ್ಲ ಧ್ವಂಸ ಮಾಡಲಾರಂಭಿಸಿದ. ನಿಷ್ಠಾವಂತನಾಗಿ ತನ್ನ ನಾಯಕತ್ವ ತೋರಲಿಲ್ಲ. ಒಂದು ಕಳ್ಳ ಜಾಗದಲ್ಲಿ ಅಡಗಿಕೊಂಡು ಕುಳಿತುಕೊಂಡ. ಅಲಿಯ ಸೈನ್ಯ ಸಲಾಬತಖಾನನ

ನೇತೃತ್ವದಲ್ಲಿ ಮುನ್ನಡೆ ಸಾಧಿಸಿ ಎಲ್ಲರಿಗೂ ಕೊಚ್ಚಿ ಹಾಕಲಾರಂಭಿಸಿತು. ಈ ಕಠಿಣ ಆಕ್ರಮಣವನ್ನು ತಡೆಯಲಾರದೆ ಮೊದಲಿಗೆ ಮುಖ ಕೆಳಗೆ ಮಾಡಿ ಬಿದ್ದ ಮತ್ತೆ ಓಡಿ ಹೋದ. ಸೈನ್ಯ ಅವನನ್ನು ಹಿಂಬಾಲಿಸಿತು. ನಂತರ ಘೋರ ಯುದ್ಧ ನಡೆಯಿತು ಆಕಾಶ ಭೂಮಿ ಒಂದಾಯಿತು. ನೀರು ತೊಟ್ಟಿಕ್ಕಿ ಹಡಗಿನಲ್ಲಿ ನುಗ್ಗಲಾರಂಭಿಸಿತು ಗಾಳಿಯ ವೇಗವೂ ಹೆಚ್ಚಾಯಿತು. ದೊಡ್ಡ ಸೈನ್ಯದ ಮುಂದೆ ಈ ಸೈನ್ಯಕ್ಕೆ ನಿಲ್ಲಲೂ ಸಾಧ್ಯವಾಗಲಿಲ್ಲ, ಕಡ್ಡಿ ಕಸ ಹರಿದಂತೆ ಹರಿದ್ಹೋಯಿತು. ದಂಡ ನಾಯಕ ಕೋಟೆಯಲ್ಲಿ ಬಿಡಾರ ಹೂಡಿ ಇಡೀ ಸೈನ್ಯವನ್ನು ಸುತ್ತಲೂ ಹರಡಿಸಿದ. ಮೊದಲನೆಯ ಹಲ್ಲೆಯಲ್ಲೇ ಅನೇಕ ಜೀವಗಳು ನಷ್ಟವಾದವು ಅನೇಕರು ಗಾಯಗೊಂಡರು, ಎಲ್ಲಿಂದ ಸಹಾಯ ಕೇಳಲಾಗಿತ್ತೋ ಅದು ಬಂದು ತಲುಪಿತು ಹಾಗೂ ಅವರ ಹತ್ಯಾಕಾಂಡ ಪ್ರಾರಂಭವಾಯಿತು. ಭೂಮಿ ರಕ್ತದಿಂದ ತುಂಬಿತು. ನದಿಯಲ್ಲಿ ನೀರಿನ ಬದಲಿಗೆ ರಕ್ತ ಹರಿಯಲಾರಂಭಿಸಿತು. ಹೊಲಗಳಲ್ಲಿ ರಕ್ತಭರಿತ ನೀರು ಸೇರಿದಾಗ ಕಂಕರಗಳಿಂದ ಹವಳ ಹೊರಬಂದವು. ಖಡ್ಗದ ಹರಿವು ಯಾರನ್ನು ತಾಗುತ್ತಿತ್ತೋ ಅದು ನೀರಲ್ಲಿ ಬೆಂಕಿಯನ್ನು ಹಚ್ಚಿ ಕೋಲಾಹಲ ಉಂಟು ಮಾಡುತ್ತಿತ್ತು. ಯಾರ ಮೇಲೆ ಖಡ್ಗದ ಹರಿತ ಸುರಿಯುತ್ತಿತ್ತೋ ಅವನು ಗೋತ ಹೊಡೆದು, ಅವನ ಪ್ರಾಣ ಶೂನ್ಯ ನೋಡುತ್ತಿತ್ತು. ಸಮರದ ಮೈದಾನದಿಂದ ಓಡಿದವರನ್ನು ಬೆನ್ನಟ್ಟಿ ಕಾಡನ್ನು ತುಂಬಿದ. ಎಲ್ಲವನ್ನೂ ಬಿಟ್ಟು ಈ ಲೋಕದಿಂದಲೇ ಹೊರಟು ಹೋದರೆಂದು ಕಾಣಿಸುತಿತ್ತು. ಈ ರೀತಿಯಾಗಿ ಎಲ್ಲವನ್ನು ನಾಶಪಡಿಸಿದ ನಂತರ ಅದು ಜನವಸತಿ ಅಲ್ಲ ನಿರ್ಜನಪ್ರದೇಶದ ಹಾಗೆ ಕಾಣಿಸಿತು. ಪ್ರತಿಯೊಬ್ಬನೂ ತನ್ನ ಪ್ರಾಣ ಉಳಿಸಿಕೊಂಡು ಓಡಿಹೋದರು. ಈ ರೀತಿಯಾಗಿ ವ್ಯಾಕುಲತೆಯನ್ನು ಹರಡಿಸಿದಾಗ ಆ ಕೋಟೆ ಶಿವಾಜಿಗೆ ಕಾರಾಗೃಹವಾಯಿತು. ಆಗ ನಾನಂತೂ ಬಹಳ ಕೆಟ್ಟದಾಗಿ ಸಿಕ್ಕಿಹಾಕಿಕೊಂಡೆ, ನಾನೇ ಹತ್ತಿ ಗಲ್ಲಿನ ಮೇಲೆ ಕುಳಿತಿದ್ದೇನೆ. ಅಯ್ಯೋ ನಾನು ನನ್ನ ಸೈನ್ಯವನ್ನು ಬಿಟ್ಟು ಬರಬಾರದಾಗಿತ್ತು ನಾನೇ ಕೆಡಕು ಮಾಡಿಕೊಂಡೆ, ದೇವ ನನಗೆ ಎಂತಹ ಕೆಟ್ಟ ದಿನಗಳನ್ನು ತೋರಿಸಿದಾ, ಎಂದು ತನ್ನನ್ನೇ ಅಂದುಕೊಂಡ. ಅಲಿಯ ಸೈನ್ಯಗಳು ಶತ್ರುವಿನ ಸೈನ್ಯವನ್ನು ಮುಗಿಸಿದ ನಂತರ ಆ ಕಲ್ಲಿನ ಕೋಟೆ ಕಡೆ ಗಮನ ಹರಿಸಿದರು. ಆ ಕೋಟೆ ಉಕ್ಕಿನಕೋಟೆ ಹಾಗೆ ಭದ್ರವಾಗಿತ್ತು. ಬಹುಶಃ ಈಗ ಮದ್ದಿನಿಂದ ಕೆಲಸ ತಗೆದುಕೊಂಡು ಕಲ್ಲುಗಳೆಲ್ಲವನ್ನೂ ಸುಣ್ಣದ ರಾಶಿ ಮಾಡುವರೋ, ನನ್ನ ಸೈನ್ಯವನ್ನು ಕಸಕಡ್ಡಿಯಂತೆ ಬಿರುಗಾಳಿ ಹೇಗೆ ಮೋಡಗಳ ತುಂಡುಗಳನ್ನು ಹಾರಿಸಿಕೊಂಡು ಹೋಗುತ್ತದೆಯೋ ಹಾಗೆ ಹಾರಿಸುವರೋ. ಮೊದಲೇ ಅದು ಉಪ್ಪಿನ ಡೋಬಿಖಾರ ತಂದಿದ್ದಾರೆ, ಜಾಗವನ್ನೇ ಮರೆತಿರುವಾಗ ಅವರು ಮರಳಿ ಹೇಗೆ ಬರುವರು, ಈ ರೀತಿಯಾಗಿ ನನ್ನ ಸೈನ್ಯ ಹಾಳಾಗಿದೆ ಈಗ ಸಹಾಯವಿಲ್ಲದೇ ಯುದ್ಧ ಮಾಡಲು ಹೇಗೆ ಸಾಧ್ಯ ಈಗ ನನ್ನ ಗತಿ ಏನು, ನಾನು ಕೋಟೆಯಿಂದ ಹೊರಗೆ ಹೇಗೆ ಹೋಗಲಿ, ಕೆಟ್ಟಿರುವ ವ್ಯವಹಾರ ಹೇಗೆ ಸಾಧಿಸಲಿ. ನಾನು ಈ ಕೋಟೆಯನ್ನು ಇಡೀ

ಪ್ರಪಂಚದಲ್ಲಿ ಪ್ರಸಿದ್ಧ ಮಾಡಬೇಕೆಂದಿದ್ದೇನೆ, ಯುದ್ಧವಾದರೇ ಅದನ್ನು ಪ್ರಳಯದವರೆಗೆ ಜಾರಿಯಲ್ಲಿರಿಸುವೆ. ಹೀಗೆ ಇದರ ನಂತರವೂ ಜನ ಕೋಟೆಯೊಳಗೆ ಜಗಳವಾಡುತ್ತಿರುವಾಗ ಅವನು ಕಳ್ಳದಾರಿಯಿಂದ ಸದ್ದಿಲ್ಲದೇ ಓಡಿಹೋದ. ಈ ಬಂಧನದಿಂದ ಶೈತಾನನು ಬಿಡುಗಡೆ ಹೊಂದಿದ ನಂತರ ಎಲ್ಲ ಕಡೆಯು ಗುಲ್ಲು ಗಲಾಟೆ ಎದ್ದಿತು. ಆರಿಸಿದ ಬೆಂಕಿ ಮತ್ತೆ ಉರಿಯಲಾರಂಭಿಸಿತು. ಯಾವ ಪಿತೂರಿ ಹುಗಿದಿತ್ತೋ ಅದು ಮತ್ತೆ ಎಚ್ಚರವಾಯಿತು. ದುರಾಚಾರಿಯರ ಅದೃಷ್ಟ ಖುಲಾಯಿಸಿತು. ಯಾವ ಕೋಟೆ ಮೇಣವಾಗಿತ್ತೋ ಈಗ ಗಟ್ಟಿ ಕಲ್ಲಾಯಿತು. ದಾಳಿ ಮಾಡಿದವರು ಈ ದೇಶ ಗೆಲ್ಲುವ ಆಸೆ ಬಿಟ್ಟು ನಿರಾಶರಾದರು. ಇಡೀ ಪ್ರಜೆ ಬೆತ್ತದಂತೆ ಕಂಪಿಸಲಾರಂಭಿಸಿತು. ಜಲಮಂಟಪ ತನ್ನ ಕೌಶಲ್ಯ ತೋರಿಸಲಾರಂಭಿಸಿತು, ಕಳ್ಳ ಗೊಂಬೆ ಆಡಲಾರಂಬಿಸಿದ. ಯಾರಿಂದಲೂ ಈ ಕಾರ್ಯ ಸಾಧ್ಯವಾಗದೇ ಕಾರಣ ಶಾಹನು ಹೇಳಿದ ಈ ಕಾರ್ಯ ಈಗ ನಾನು ಮಾಡಬೇಕಾಗಿದೆ. ಇಡಿ ಪ್ರಪಂಚ ವ್ಯಾಕುಲಗೊಂಡಿರುವಾಗ ಅಲಿಯವರನ್ನು ಬಿಟ್ಟರೆ ಅದು ಸರಳವಾಗಲು ಸಾಧ್ಯವೇ? (೯೭೭-೭೫೪)

ಸ್ವತಃ ಅಲಿ ಶಾಹನು ಪನಾಲ ಕೋಟೆಯನ್ನು ಜಯಸಿದ ಮಾತು, ಸಿವಾ (ಶಿವಾಜಿ) ಸಲಾಬತ್ ಜೊತೆಯಲ್ಲಿ ಪುಲೆ(ಪುಣೆ)ಗೆ ಓಡಿದ

ಸೂರ್ಯನು ತನ್ನ ಕೈಯಲ್ಲಿ ಬೆಂಕಿ ಉದುರಿಸುವ ಖಡ್ಗವನ್ನು ತೆಗೆದುಕೊಂಡು ತನ್ನ ದ್ವಿವರ್ಣಉಳ್ಳ ಸವಾರಿಯ ಮೇಲೆ ಆಕಾಶ ಸುತ್ತಲೂ ಹೊರಟಾಗ ಅವನ ಜೊತೆಯಲ್ಲಿ ಮೋಡಗಳು ಸಹ ಓಡಲಾರಂಭಿಸಿದವು, ಅದರ ಜೊತೆಯಲ್ಲಿ ಎಲ್ಲ ಮೂಲಗಳಾದ ಪೃಥ್ವಿ, ಜಲ, ವಾಯು, ತೇಜ ನಡೆಯಲಾರಂಭಿಸಿದವು. ಆರು ತಾಸು ಇತ್ತ ಅದು ನಿಂತಿತು. ಒಂದೇ ಮಾತಿನಲ್ಲಿ ಸಪ್ತ ಭೂಖಂಡಗಳನ್ನು ತೆಗೆದುಕೊಂಡ. ಅಂದು ಶಹನ್ಶಾಹರು ಕೋಟೆಯನ್ನು ವಶಪಡಿಸುವ ಉಪಾಯದ ಮಾತು ಹೀಗೆ ಹೇಳಿದರು. 'ಇಂದು ಈ ಕೋಟೆಯು ವಶಪಡದೇ ಇದ್ದರೇ ಮುಂದೆ ಇದು ಪಿತೂರಿಯ (ಮನೆ) ಕೇಂದ್ರವಾಗುತ್ತದೆ, ಇದು ಪ್ರವಾದಿ ಸುಲೈಮಾನರ ಸಿಂಹಾಸನ, ಇದನ್ನು ಹೇಗೋ ದೆವ್ವ ಪಿಶಾಚಿ ವಶಪಡಿಸಿಕೊಂಡಿದೆ, ಕಷ್ಟಕರ ಜಾಗದಲ್ಲಿ ಅವಿಧೇಯನು/ವಿರೋಧಿ ಮದ್ದನ್ನು ತಂದಿಟ್ಟು, ಈಗ ಅದನ್ನು ತೋಪಲ್ಲಿ ತುಂಬಿ ಬೆಂಕಿಹಚ್ಚಲು ತಯಾರಾಗಿದ್ದಾನೆ. ಅವನಿಗೆ ಊಟಕ್ಕೂ ಗತಿ ಇಲ್ಲದೆ ಅಶಕ್ತನಾಗಿದ್ದ, ಅವನು ವಿವಶನಾಗಿ ಒಂದು ಮೂಲೆಯಲ್ಲಿ ಬಿದ್ದಿದ್ದ. ಈಗ ಅವನ ಇಚ್ಛೆ ಕೆಟ್ಟಹಾಗೆ ಕಾಣುತ್ತದೆ, ಅವನಗೆ ಮುಳ್ಳು ಮತ್ತು ಕಸದಿಂದ ಸಹಾಯ ಮಾಡಬೇಕು, ಸುತ್ತಲಿಂದಲೂ ಈ ಬೆಂಕಿ ಎದ್ದು ಜ್ವಾಲೆಯಾದರೆ ಆಕಾಶಗಳಿಗೂ ಸುತ್ತಿಕೊಳ್ಳುತ್ತದೆ. ಬೆಂಕಿಹತ್ತಿ ಹರಡುವ ಮುನ್ನ ಇವನನ್ನು ಹಿಂಬಾಲಿಸಿ ಕಾಡಲ್ಲಿ ಓಡಿಸಿದರೆ ಕ್ಷೇಮ. ಸಸಿ ಇರುವಾಗಲೇ ಮುಳ್ಳನ್ನು ಕಿತ್ತು ಹಾಕದೆ ಬೆಳೆಯಲು ಬಿಟ್ಟರೆ ಅದು ಬಲಿತು ಕಠಾರಿಹಾಗೆ ಕಾಣಿಸುತ್ತದೆ.

ನಾನು ಸಿಕಂದರ್, ನನ್ನ ಸೇನೆ ಸಿಕಂದರಿನ ಸೇನೆ ಇದ್ದ ಹಾಗೆ. ನನಗೆ ಶಕ್ತಿ ಹೈದರ್‌ರವರ ಹಸ್ತ ನೀಡಿದೆ. ನನ್ನ ಖಡ್ಗಕ್ಕೆ ಶಾಹೆ ಮರ್ದಾ೦ರವರು ಶಕ್ತಿ ಕೊಟ್ಟಿದ್ದಾರೆ, ಇಂದು ಈ ಖಡ್ಗದ ಬಲ ಎಷ್ಟಿದೆ ಎಂದು ಪರೀಕ್ಷಿಸಬೇಕಾಗಿದೆ, ನನ್ನ ಪ್ರಾಬಲ್ಯದ ಕೆಲಸಕ್ಕೆ ಏನು ವಿಚಾರ ಮಾಡಬೇಕಾಗಿಲ್ಲ, ಮೊದಲು ಯಾರಿಗೆ ಶಿಕಾರಿ ಮಾಡಬೇಕೆಂದು ಇದೇ ಖಡ್ಗ ನಿರ್ಧರಿಸುತ್ತದೆ.' ಹೀಗೆ ಯೋಚಿಸಿ ಶಾಹರವರು ತನ್ನ ಕುದುರೆಯನ್ನು ತರಿಸಿದರು. ಸ್ವತಃ ಕುದುರೆ ಹತ್ತಿ ಕೋಟೆ ವಶಪಡಿಸಿಕೊಳ್ಳಲು ಹೊರಟರು.

ಸಮರ ದೃಶ್ಯ

ಬಾದಶಾಹನು ಏನು ಮಾಡಿದರೂ ಅದರ ಮೇಲೆ ಅವನಿಗೆ ಪೂರ್ಣ ಅಧಿಕಾರವಿತ್ತು, ಅವನೊಬ್ಬನೆ ಶತ್ರುಗಳ ಮೇಲೆ ಪ್ರಬಲವಾಗಿ ಕಾಣುತಿದ್ದ. ಮಂತ್ರಿಗಳ ಸೇನೆಗಳು ಸಹ ಅವನಿಗೆ ಸರಿಸಮಾನವಿರಲಿಲ್ಲ, ಅವನೊಬ್ಬನೇ ಸಹಸ್ರಾರರ ಮೇಲೆ ಪ್ರಬಲ ಕಾಣಿಸುತ್ತಿದ್ದ. ಈ ಶಾಹ ನೃಪತಿ ಲೋಕದ ಗುರುವಾಗಿದ್ದ. ಇಡೀ ಕೋಟೆ ಉಕ್ಕಿನದಾಗಿತ್ತು ಅದನ್ನು ಅವನು ಸೆರೆಹಿಡಿದ. ಅವನತ್ತ ಕಣ್ಣೆತ್ತಿ ನೋಡುವ ಸಾಹಸ ಯಾರಿಗಿತ್ತು? ಅವನ ಸೈನ್ಯವಂತು ಅಚಲ ಅವನು ಅದರ ಸರ್ದಾರ. ಬಾದಶಾಹನು ಕ್ರಮೇಣ ಮಹಾಬಲಿಯಾಗಿ ಚಲಿಸಿದ, ಅವನು ಮುನ್ನಡೆ ಸಾಧಿಸಿದಾಗ ವಿದ್ರೋಹಿಗಳ ಸಾಹಸ ಮುರಿಯುತ್ತ ಹೋಯಿತು. ಬಾದಶಾಹನ ಶೌರ್ಯದ ಮಿಂಚುನೋಟವನ್ನು ತಡೆಯಲಾರದೆ ಹುಲಿಯ ಕಣ್ಣಿನ ಚಿಲುಮೆಯ ನೀರು ಬಸಿದು ಹೋಯಿತು. ಅವನು ಕ್ರೋಧದಿಂದ ದಿಟ್ಟಿಸಿ ನೋಡಿದಾಗ ಸೂರ್ಯನು ಸಹ ಅವನ ಭಯದಿಂದ ಕಂಪಿಸಲಾರಂಭಿಸಿದ. ಸಮರ ಇನ್ನು ಉಗ್ರವಾದಾಗ ಅವನ ಹೆದರಿಕೆಯಿಂದ ಜನ ದಾರಿ ಹುಡುಕಲಾರಂಭಿಸಿದರು. ಶತ್ರುವಿಗೆ ಬೇರೊಂದು ಲೋಕದ ಬಣ್ಣ ಕಾಣತೊಡಗಿತು. ಈ ಲೋಕ ಅವರ ಜೀವ ಅಡಗಿಸಲು ಬಹಳ ಇಕ್ಕಟ್ಟಿನ ಹಾಗೆ ಕಾಣಿಸಿತು. ಅವನು ಅಲಿ ಮುರ್ತುಝಾರವರ ಹಾಗೆ ಕೂಗಿದಾಗ ಪನಾಲ ಒಂದು ಬಾಣದ ದೂರದಲ್ಲಿತ್ತು. ಸಿವಾ (ಶಿವಾಜಿ)ಸಿಟ್ಟಿನಿಂದ ಹಲ್ಲು ಕಡಿಯುತ್ತ ಚಡಪಡಿಸಿದ. ಪನಾಲದ ಎಲ್ಲ ಶಕ್ತಿ ಕುಸಿದು ಹೋಯಿತು. ಹೊರಗಡೆಯಿಂದ ಕುಮ್ಮಕ್ಕು ಬರುತ್ತದೆ ಎಂದು ನಿರೀಕ್ಷಿಸುತಿದ್ದರು, ಕೋಟೆಯೊಳಗಿನವರು ಯುದ್ಧ ಮಾಡುತ್ತ ಮಾಡುತ್ತ ದಣಿದರು. ಆದರೆ ತಂಗುವ ಸ್ಥಳ ಅಲ್ಲಿಂದ ಮುಂದಿತ್ತು. ಒಳ್ಳೆ ದಾರಿಯಲ್ಲಿ ಒಂದು ನದಿ ಅಡ್ಡವಿತ್ತು ಪ್ರತಿಯೊಬ್ಬರೂ ಆ ನದಿಯನ್ನು ದಾಟಲು ಚಿಂತನೆ ನಡೆಸಿದರು, ಶೂರರು ಆ ನದಿ ದಾಟುವ ಚಿಂತನೆ ಮಾಡುತ್ತಿದ್ದರು. ಎಲ್ಲಿಯವರಿಗೆ ಶಾಹರು ನದಿಯಲ್ಲಿ ಇಳಿದು ಕನ್ನಹಾಕಲಿಲ್ಲವೋ ಮತ್ತು ಸಲಾಬತ್ ಚೌಗಾನ(ಪೋಲೋ ಆಟ)ನಿಂದ ಕೋಟೆಯ ಚೆಂಡನ್ನು ತೆಗೆದುಕೊಳ್ಳುವರೆಗೆ ನೆಮ್ಮದಿ ಇರಲಿಲ್ಲ. ಆಗ ನಾನು ಪರಿಸ್ಥಿತಿಗನುಸಾರ ತಾರೀಖು ಹೇಳಿದೆ ಹಾಗೂ ನಾನು ಒಂದು ಅದ್ವಿತೀಯ ಚೌಪದಿಯನ್ನು ಹೇಳಿದೆ (೭೨೬–೭೫೭)

ಪನಾಲ ಜಯದ ಐತಿಹಾಸಿಕ ಚೌಪದಿ.

ಶಿವಾಜಿ ಮೋಸದ ಎಷ್ಟೊಂದು ಅಸ್ತ್ರಗಳಿದ್ದವೋ ಎಲ್ಲವನ್ನು ಉಪಯೋಗಿಸಿ ಪನಾಲ ಕೋಟೆಯ ಮೇಲೆ ಆಕ್ರಮಿಸಿ ಅದನ್ನು ಜಯಗಳಿಸಿದ. ಅವನ ಜೊತೆ ಹೋರಾಡಿ ಕೋಟೆಯನ್ನು ಬಿಡಿಸಲು ಸಲಾಬತ್ ಖಾನನು ಶಾಹರ ಅತಿ ಕೃಪೆಯಿಂದ ಹೊರಟ. ಎಷ್ಟೊಂದು ಹೋರಾಡಿದರೂ ಕೋಟೆ ಗೆಲ್ಲುವ ಸೂಚನೆ ಕಂಡುಬರಲಿಲ್ಲ ಆಗ ಸ್ವತಃ ಬಾದಶಾಹನೇ ಶೌರ್ಯದಿಂದ ಅವನ ಕುಮ್ಮಕ್ಕಿಗಾಗಿ ಹೊರಟರು. ದೇವರ ದಯೆಯಿಂದ ಅವರು ಅಲ್ಲಿ ತಲಪುವವರೆಗೂ ಕೋಟೆ ಗೆಲ್ಲಲಿಲ್ಲ. ಶಾಹನ ಅತಿ ಕ್ರೋಧದ ಆ ಮುಂಗಡ ಕೈ ಗೆಲುವನ್ನು ಸಾಧಿಸಿತು. ಆಗಲೇ ನುಸ್ರತಿ ಜಯದ ತಾರೀಖನ್ನು ಹೀಗೆ ಹೇಳಿದ 'ಅಲಿ ನೆ ಎಕ್ ಪಲ್ ಮೆ ಪನಾಲ ಲಿಯೆ ಸಲಾಬತ್ ಸೂ ೧೦೭೦.' ಅಲಿರವರು ಒಂದೇ ಕ್ಷಣದಲ್ಲಿ ಪನಾಲವನ್ನು ಸಲಾಬತ್‌ನಿಂದ ತೆಗೆದುಕೊಂಡರು. (೭೫೮–೭೬೨)

ಮಸ್ನವಿ

ಶಹಬಾಷ್! ಶಾಹೆ ಘಾಝಿ ನೀನು ಬಲು ಅದೃಷ್ಟಶಾಲಿ, ಬುದ್ಧಿವಂತಿಕೆಯಿಂದ ನೀನು ಖಡ್ಗದ ಮಂತ್ರಾಲೋಚನೆಯನ್ನು ಉನ್ನತ ಮಾಡಿ ತೋರಿಸಿದೆ. ವರ್ಷಗಳ ಕೆಲಸ ಕ್ಷಣದಲ್ಲಿ ಮುಗಿಸಿ ಗೊಂದಲದ ಬುನಾದಿ ಆಗಿದ್ದು ಅದನ್ನು ಬೇರು ಸಮೇತ ಕಿತ್ತುಹಾಕಿದೆ. ಬಲು ಶೌರ್ಯದಿಂದ ಈ ಗಂಡು ಹುಲಿ ಶತ್ರುಗಳಿಗೆ ತುಳಿದು ಅವರನ್ನು ಧೂಳು ಮಾಡಿ ಹಾರಿಸಿ ಬಿಟ್ಟೆ. ಕೋಟೆಯಲ್ಲಿದ್ದವರೆಲ್ಲ ಅತಿ ವಿನಯಪೂರ್ವಕವಾಗಿ ಆಶ್ರಯ ಕೇಳಿದಾಗ ಅವರಿಗೆ ಜೀವದಾನ ಕೊಟ್ಟೆ. ಶಿವಾಜಿ ಮತ್ತು ಅವನ ಇಡೀ ಕೆಟ್ಟ ಸೈನ್ಯ ಗಾಳಿಯ ಹಾಗೆ ವ್ಯಾಕುಲಗೊಂಡಿತು. ಬಾದಶಾಹನ ಕ್ರೋಧ ಕೋಟೆ ಮೇಲೆ ಆವರಿಸಿದಾಗ ಅದನ್ನು ಹಿಂಬಾಲಿಸುವುದು ಸರಿಯಲ್ಲ ಎಂದು ಕೊಂಡ. ನರಿ ಬೆಟ್ಟದ ಕಡೆ ಓಡಿದರೆ ಜೀವ ಕಾಪಾಡಲು ಸಹಸ್ರಾರು ಗುಹೆಗಳಿರುತ್ತವೆ. ಭೀಕರ ಹುಲಿ ಮೊಲದ ಜೊತೆಯಲ್ಲಿ ಮಾತನಾಡುವುದಿಲ್ಲ. ಅದನ್ನು ಹೊಡೆದರೆ ಅಮಲೇರಿದ ಆನೆಯನ್ನು ಕೆಣಕುವ ಹಾಗಾಗುತ್ತದೆ. ಬಾದಶಾಹನು ಹೇಳಿದ, 'ನಮ್ಮ ಮುಂದೆ ಇನ್ನು ದೊಡ್ಡ ದೊಡ್ಡ ಕೆಲಸಗಳಿವೆ, ಅನೇಕ ಅಪೂರ್ವ ಕೆಲಸಗಳನ್ನು ಪೂರ್ಣಗೊಳಿಸಬೇಕಾಗಿದೆ. ಹಗಲೆಲ್ಲ ಅವನ ಹಿಂದೆ ಬಿದ್ದಿರುವುದು ನಿರುಪಯುಕ್ತ ಕೆಲಸ, ಹೇಗೆಂದರೆ ಬೆಟ್ಟವನ್ನು ಹುಗಿದಾಗ ಇಲಿ ಹೊರ ಬಂದ ಹಾಗೆ. ಈವಾಗಲೇ ಅವನ ಕಿವಿಹಿಂಡಿ ಚೆನ್ನಾಗಿ ಪಾಠ ಕಲಿಸಿದ್ದೇನೆ, ಅದರ ಚರ್ಮ ಸರಿಯಾಗುವವರೆಗೆ ಅವನು ನಮಗೆ ಮರ್ಯಾದೆ ಕೊಡುತ್ತಾನೆ. ಮತ್ತೇನಾದರು ಪಾಠ ಮರೆತರೆ, ಮುಂದೆ ದೇವರಿದ್ದಾನೆ. ಈಗ ಸ್ವಲ್ಪ ಕಾಲ ಅವಕಾಶ ಕೊಟ್ಟಿರುತ್ತೇನೆ.' ಹೀಗೆ ಹೇಳಿ ಬಾದಶಾಹರವರು ಅಲ್ಲಿಂದ ಹೊರಟರು. ಈ ವಿಜಯದ ಘಟನೆಯ

ಸಮಯದಲ್ಲಿ ನಾನು ಈ ಪ್ರಶಂಸಾಗೀತೆ ಬರೆದೆ, ಈ ಕವನ ಮತ್ತೊಮ್ಮೆ ಪರಿಶೀಲಿಸಿದೆ, ವಿಶೇಷವಾಗಿ ಅದೃಷ್ಟಶಾಲಿ ಶಹನ್ಶಾಹರು ನನ್ನ ಕೌಶಲ್ಯವನ್ನು ನೋಡಿ ಇದನ್ನು ಮೆಚ್ಚಿದರೆ, ಬಾದಶಹರಷ್ಟೇ ಪ್ರಪಂಚದ ವಿಚಾರ ತಿಳಿಯಲು ನುಸ್ರತಿಯು ಸಹ ಈ ಪ್ರಶಂಸಾ ಗೀತೆ ಬರೆದನು.(೭೬೩–೭೭೮)

ಪನಾಲ ಗಡ್

ಸೂರ್ಯ ನಿನ್ನ ಖಡ್ಗದ ಮಿಂಚುನೋಟವನ್ನು ಅಧಿಕವಾಗಿ ನೋಡಿದಾಗಲಿಂದಲೂ ನಡುಗಿ ಕಂಪಿಸುತ್ತ ಬೆವರಲ್ಲಿ ಮುಳುಗಿದ್ದಾನೆ. ಆ ನದಿಯಲ್ಲಿ ಹಿಮವಿದ್ದರೂ ಸಹ ನಿನ್ನ ಖಡ್ಗದ ಒಂದು ಹನಿ ನೀರು ಆ ಹಿಮಗಡ್ಡೆಯನ್ನು ಕರಗಿಸಿ ನೀರು ನೀರಾಗಿ ಮಾಡುತ್ತದೆ, ಅಂದರೆ ಅದರಲ್ಲಿ ಅಷ್ಟೊಂದು ತಾಪ ಏರುತ್ತದೆ. ಬಲದಲ್ಲಿ ಉದಯಿಸುವ ಶಕ್ತಿಯಿಂದ ಸದಾ ಇನ್ನೂ ಹೆಚ್ಚಾಗಿ ಮಿನುಗುತ್ತ ಕಂಡೆ, ಏಕೆಂದರೆ ನೀನು ಪ್ರಪಂಚದಲ್ಲಿ ಶಕ್ತಿಯ ಲೋಕಪಾಲಕನಾಗಿ ಸಿಕಂದರ್ ಹಾಗೆ ಬಂದಿರುವೆ, ಎಂದು ನಿನ್ನ ಖಡ್ಗದ ಮೇಲೆ ಆಕಾಶ ರತ್ನದ ಬದಲು ಶಕ್ತಿ ಬರೆದ. ಆಕಾಶ ನಿನ್ನ ಖಡ್ಗದ ಶಕ್ತಿಯ ಹಾಗೂ ಅದರ ಗುಣದ ಲೇಖನಿಯನ್ನು ಚಲಿಸಿದನೋ ಆಗಲಿಂದ ವಿಜಯ ನಿನ್ನ ಮುಂದೆ ಸೇವಕನ ಹಾಗೆ ಮಂಡಿಗಳನ್ನೂರಿ ನಿಂತಿದೆ. ನಿನ್ನ ವಿಜಯದ ದಾರಿ ಇನ್ನ ಫತ್ಹದ ಅಲಿಫ್ ಆಗಿದೆ ಹಾಗೂ ನಸ್ರುಂ ಮುನಲ್ಲಾಹ್ ಅಂತೂ ನಿನಗೆ ಮದ್ಯಸೇವನೆ ಮಾಡುವ ಪ್ರೇಮಿಯಾಗಿರುವನು. ನೀನೇನಾದರೂ ಅಂಗೈ ಮತ್ತು ಅಂಗಾಲುಗಳ ಬೆವರಿನ ಮೇಲೆ ಕಟ್ಟೆಕಟ್ಟಿ ಲಂಕೆ ಮೇಲೆ ಆಕ್ರಮಿಸಿದರೇ ಸಮುದ್ರದ ತುಟಿಗಳು ಒಣಗಿ ಅಲ್ಲಿ ಮೊದಲಿಗೆ ಜಾಗ್ರತೆ! ಹುಷಾರ್! ಎಂಬ ಗದ್ದಲ ಉಂಟಾಗುತ್ತದೆ. ಯಾವದೇ ಪಗಡೆಯ ದಾಳ ನನ್ನ ಮುಂದೆ ತಲೆ ಎತ್ತಿ ಶೌರ್ಯದ ಉದಾಹರಣೆ ಕೊಡಲಾರದು, ಯುದ್ಧದ ಹಲಗೆ ಮೇಲೆ ನೀನು ದಿಗ್ಭ್ರಮಿಸುವಂತೆ ಉದ್ಯಾನ ಕಟ್ಟಿದೆ. (ಭಾರಿ ಸೇನೆಯ ಸೇತುವೆ ಕಟ್ಟಿರುವೆ?) ನಾನೇನಾದರೂ ಶಾಹನ ಪ್ರತಿಯೊಂದು ಗುಣದ ವಿವರ ಬರೆದಿದ್ದರೇ ಅದಕ್ಕೆ ಅನೇಕ ಹಾಳೆಗಳು ಬೇಕಾಗಿತ್ತು, ಆದ್ದರಿಂದ ನಾನು ಕೇವಲ ಒಂದು ದೊಡ್ಡ ವಿಜಯದ ದೊಡ್ಡ ಗೆರೆಯುಳ್ಳ ಶೀರ್ಷಿಕೆ ಓದುತ್ತಿದ್ದೇನೆ. ಈಗ ಬೇಗನೇ ಈ ವಿಷಯದ ಹೊಸ ಮೊದಲನೆಯ ಸಾಲನ್ನು ಬರೆಯುವ ಪ್ರತಿಯೊಂದು ಪದದ ಅರ್ಥಗಳಿಂದ ಸೂರ್ಯನ ಬೆಳಕಿನ ಮುನ್ನೋಟವನ್ನು ನೋಡಲು ಸಿಗುತ್ತದೆ.

ಮತ್ಲಯೆ ಸಾನಿ (ಕಸೀದದ ಮೊದಲನೆಯ ಪಂಕ್ತಿ)

ಓ ಶಾಹೆ ಆದಿಲ್ ನೀನು ಇಡೀ ಜಗತ್ತಿನ ಅಲಿ ಸಾಹೇಬ. ನಿನ್ನಂತಹ ಪರಾಕ್ರಮಿಯ ಮುಂದೆ ನಾಸ್ತಿಕತೆಯ ಮುಳ್ಳು ಎಲ್ಲಿಂದ ಏಳ್ಗೆಯಾಗಲು ಸಾಧ್ಯ. ಒಂದು ವರ್ಷದವರೆಗೆ ಆ ವಿದ್ರೋಹಿ ಶಿವಾಜಿ ಪ್ರಪಂಚದಲ್ಲಿ ಅತ್ಯಾಚಾರ ಉತ್ಪತ್ತಿ

ಮಾಡುತ್ತಿದ್ದ. ಅವನಂತೂ ಕುಯುಕ್ತಿ ಮತ್ತು ವಂಚನೆಯಲ್ಲಿ ಎಷ್ಟೊಂದು ಪ್ರವೀಣ ಎಂದರೆ ಶೈತಾನನೂ ಸಹ ಅವನ ಮುಂದೆ ಅನನುಭವಿ. ಕುಶಲವೃತ್ತಿಯ ಬೇಟೆ ತಾನು ಆಡಿ, ಶೈತಾನ ಬಾಯಿ ಮುಚ್ಚುವನು, ಇಬ್ಲೀಸಿಗೂ ಸಹ ಆನೆಯ ಹಾಗೆ ಅತ್ಯಾಚಾರ ಮಾಡುವಂತೆ ಆಜ್ಞೆ ಮಾಡುವನು. ಯಾವುದೇ ಆಟ ಅ ವಕ್ರ ಆಟಗಾರನು ವಕ್ರತೆ ಇಲ್ಲದೆ ಆಡಲಿಲ್ಲ, ಅಂದರೆ ಆಕಾಶ ಭಿಕ್ಷಾ ಜೋಳಿಗೆ ಹಾಕಿಕೊಂಡು ಅದೇ ಠಕ್ಕನ ಜಪ ಮಾಡುತ್ತಿದೆ. ಅವನ ಕುತಂತ್ರದಿಂದ ನರಿಯೇ ಅಲ್ಲ, ಗಂಡ್ಥುಲಿಯು ಸಹ ಮೋಸ ಹೋಗುತ್ತದೆ, ಹೃದಯ ನರಿಗಿಂತ ಮೆದುವಾದುದು, ಆದರೆ ಅವನು ನಾಸ್ತಿಕರ ವಂಶದಲ್ಲಿ ಹುಟ್ಟಿರುವವನು. ಅವನು ಸಾಯುವುದನ್ನು ಕಂಡು ಬಹುಶಃ ಪ್ರವಾದಿ ಖಿಝುರ್‌ರವರು ಅಮೃತ ಕುಡಿಸಿ ಅವನನ್ನು ಕಾಪಾಡಿಕೊಂಡರು, ಆದರೆ ಅದೇ ಲೋಟವನ್ನು ವಿಷ ತುಂಬಿ ಅವರ ಉಪಕಾರದ ಋಣ ತೀರಿಸುವನು. ಖಡ್ಗದ ವೈರಿ ತುಂಬ ವೃದ್ಧನಾಗಿರುವುದರಿಂದ ಅವನು ಖಡ್ಗದ ಹರಿವು ತಡೆಯಲು ಸಾಧ್ಯವಿಲ್ಲ, ಆದರೆ ಅದರ ಕೆಲಸವಂತೂ ಹೊರಗಡೆಯ ಯಾವ ರುಸ್ತುಂ ಸಹ ಮಾಡಲಾರ. ಪ್ರಪಂಚದಲ್ಲಿ ಆ ಪನಾಲದ ಕೋಟೆ ತುಂಬ ಎತ್ತರವಾದದ್ದು, ಅದನ್ನು ತಡೆಯಲು ಭೂಮಿ ಲಂಗರ್ ಆಗಿದೆ ಹಾಗೂ ನಿಲ್ಲಲೂ ಆಕಾಶವನ್ನು ಕಂಬ ಆಧಾರ ಮಾಡಿಕೊಂಡಿದೆ. ಕೋಟೆಯ ಸುತ್ತಳತೆ ಎಷ್ಟೊಂದು ಅಗಲವಾಗಿದೆ ಅಂದರೆ ಅದರ ಪ್ರದಕ್ಷಣೆ ಹಾಕುತ್ತ ಮಂಗಳ ಹಾಗೂ ಶನಿ ಗ್ರಹಗಳ ಕಾಲು ಕುಂಟವಾಗುವುದು. ಚಂದ್ರನಂತೆ ವೇಗವಾಗಿ ಹೋಗುವನೂ ಸಹ ತನ್ನ ಕುದುರೆಯ ಲಾಳ ಅಲ್ಲಿ ಎಸೆಯುತ್ತಾನೆ. ಮಹನೀಯತೆ ಮನೆಯಂತೆ ನಿತ್ಯವೂ ಸೂರ್ಯನ ನೆರೆಹೊರೆ ಇದೆ, ಮಂಗಳಗ್ರಹದಂತಹ ಧನವುಳ್ಳವನೂ ಸಹ ಅದರ ವಾರಸುದಾರ ಎಂದು ದಾವೆ ಮಾಡುತ್ತಾನೆ. ಕೆಳಮಟ್ಟದ ಶನಿಗ್ರಹನೂ ಸಹ ಅದರಿಂದ ಬೆಳಕು ಕೇಳುತ್ತಾನೆ. ಚಂದ್ರ ಬಿದಿಗೆ ಚಂದ್ರನಂತೆ ಪ್ರತಿರಾತ್ರಿ ಅವನ ಆಸ್ಥಾನದಲ್ಲಿ ಹಾಜರಿರುತ್ತಾನೆ. ಅವನ ದಾಸ ಮುಂಜಾನೆ ಏಳುವನು ಬಹಳಷ್ಟು ಬುಧ ಗ್ರಹನ ನೆಂಟನಾಗಿರುವನು, ಅದರ ಗಡಿ ನಿತ್ಯವೂ ಶುಕ್ರಗ್ರಹದಿಂದ ಸ್ನೇಹಪೂರ್ವಕ ಸಂಬಂಧ ಇಟ್ಟಿದೆ. ಗಾಳಿ ಏನಾದರೂ ಅದರ ಪ್ರದಕ್ಷಣೆಯಲ್ಲಿ ಹೋಗಿ ಯೌವ್ವನಕ್ಕೆ ತಲುಪಿದರೆ, ಒಂದು ಸಲ ಅದರ ಮೇಲೆ ಊಹೆ ಬಂದರೆ, ಅದು ಮತ್ತೊಂದು ಆಯುಷ್ಯದವರಿಗೆ ತಲುಪಲಾರದು. ಯಾರಾದರೂ ಆ ಅಸಮತಲ ದಾರಿಯ ಹೆಸರು ಹೇಳಬೇಕೆಂದರೆ ಅಥವಾ ಅದರ ಬಗ್ಗೆ ಮಾತನಾಡಬೇಕೆಂದರೆ ನಾಲಿಗೆ ಅನೇಕ ಸಲ ಜಾರುತ್ತದೆ. ತನ್ನ ಮಡಿಲಲ್ಲಿ ಎಂತಹ ಎಲೆ ಭರಿತ ಮರಗಳನ್ನು ಸಾಕಲ್ಪಟ್ಟಿವೆಯೆಂದರೆ, ಸಮುದ್ರ ದಾಟಿ ಬಂದು ಸೀಮುರ್ಘ ಪಕ್ಷಿಯು ಅಲ್ಲಿ ಮೊಟ್ಟೆ ಇಟ್ಟು ಮರಿಮಾಡುವದು. ಅದರಲ್ಲಿ ಅಲ್ಲಲ್ಲಿ ಗುಹೆಗಳಿವೆ, ಯಾರಾದರೂ ಅಸ್ಹಾಬೆ ಕಹಫ್ ಬಂದು ಅಲ್ಲಿ ಮಲಗಿದರೆ, ಅನೇಕ ಬಹ್ರಾಮ್ ಗೋರ್‌ಗಳು ಬಂದು ಅದರ ಆಳ ಅಳಿಯಲಾರರು. ಕೋಟೆ ಮೇಲೆ ನಿಂತಿರುವ ನೀರು ಅದಕ್ಕಿಂತ ಅಧಿಕವಾಗಿದೆ. ಮನೆಗಳು ನದಿಯಾಚೆ ಇವೆ. ಪ್ರತಿಯೊಂದು

ಅಂಗಳಗಳು ತೋಟಗಳಿಂದ ತುಂಬಿ ತುಳುಕಾಡುತ್ತಿವೆ, ಇದನ್ನು ನೋಡುವನು ಕಾಶ್ಮೀರನ್ನು ಮರೆಯುವನು. ನಾವು ನೈಲ್‌ನದಿಯ ಬಗ್ಗೆ ಕೇಳಿದ್ದೇವೆ ಅದು ಆಕಾಶದಂತಿದೆಯಂತೆ, ಅದು ಸಹ ಕಡಿಮೆನೇ. ಏಕೆಂದರೆ ಭೂಮಿ ಮೇಲೆ ಈ ಕೋಟೆ ನೀರಿಂದ ನಿತ್ಯ ಸಮುದ್ರ ಆಚೆಯ ಮೋಡದಂತಿರುತ್ತದೆ. ಪ್ರಪಂಚದಲ್ಲಿ ಇಲ್ಲಿಯವರೆಗೆ ಯಾವ ರಾಜನೂ ಯುದ್ಧ ಮಾಡಿ ಈ ಕೋಟೆಯನ್ನು ಗೆಲ್ಲಲಿಲ್ಲ. ಒಂದೇ ಸಲ ಮೂರು ಲೋಕಗಳ ಹೃದಯ, ಎರಡು ಜನುಮ ತಾಳಿದರು ಸಾಧ್ಯವಿಲ್ಲ. ಇಂತಹ ಕೋಟೆ ರಹಸ್ಯವಾಗಿ ಆ ಕುತಂತ್ರಿಯ ಕೈ ಸೇರಬೇಕಾದರೆ ಒಬ್ಬ ಪಾಪಿಯು ಮಧ್ಯವರ್ತಿಯಾಗಿ ಮೋಸದ ಕಾರ್ಯಮಾಡಿದ. ಕೋಟೆ ಮೇಲೆ ಹತ್ತುವುದನ್ನು ನೋಡಿ, ನನ್ನ ಜೀವ ತೆಗೆಯಲು ಯಮ ಬರುತ್ತಿದ್ದಾನೆಂದುಕೊಂಡರೆ, ಎಲ್ಲಿಯವರೆಗೆ ಈ ಜಾಗದ ಧಣಿ ಆಗುವುದಿಲ್ಲ ಅಲ್ಲಿಯವರಿಗೆ ನನ್ನ ಕಡೆಗೆ ನೋಡಲು ಬಿಡುವುದಿಲ್ಲ. ಎಲ್ಲ ರೀತಿಯ ಸಾಮಾನಿನ ಸಂಗ್ರಹಗಳಿಂದ ಈ ಕೋಟೆ ತುಂಬಿದೆ, ಅದು ಹೋಗಿ ಇಷ್ಟೊಂದು ಭಾರಿ ಭಾರವಾದ ಕೋಟೆ ಆದರೆ ಇದು ಮರೆಯಲಿಲ್ಲವಲ್ಲ ಇದು ಬಹಳ ಆಶ್ಚರ್ಯಕರ ಮಾತು. ಕಲ್ಲೇರಿಸಿಕೊಂಡು ಹತ್ತುವ ಎತ್ತಿನ ಗಾಡಿಗಳು ಹೇಗೆಂದರೆ ಬೀಜ ಆಯಿದುಕೊಂಡು ತಿನ್ನುವ ಹಾಗೆ, ಈ ಸರಕು ತಿನ್ನಲು ಈ ಹೇಸರಕತ್ತೆ ಮತ್ತು ಹಾರಾಟದಲ್ಲಿ ಬಲಹೊಂದಿದ ಪಾರಿವಾಳದ ಸೈನ್ಯ ಸೇರಿದೆ. ಯಕ್ಷಗಳ ಸೈನ್ಯಕ್ಕಿಂತ ಅಧಿಕವಾಗಿ ಎತ್ತಿನ ಗಾಡಿಗಳ ಸೈನ್ಯ ಆ ಇಬ್ಲೀಸ್ ಕರಿಸಿಕೊಂಡು ಎರಡು ನಾಲ್ಕು ದಿನಗಳ ಕಾಲಾವಕಾಶ ಪಡೆದುಕೊಂಡು ಕೇಡು ಮಾಡಲಾರಂಭಿಸಿದ. ಮಿತಿಮೀರಿ ಕೆಡುಕನ್ನುಂಟು ಮಾಡಿದ ತನ್ನ ಮಿತಿಮೀರಿದಾಗ ಬಾದಶಾಹರವರು ಅವನ ಹಟಮಾರಿತನ ಮುರಿಯಬೇಕೆಂದರು. ಬಾದಶಾಹನ ಸೇವಕರಲ್ಲಿ ಒಬ್ಬ ಅಚಲ ಸೇವಕನಿದ್ದ ಈ ಸುದ್ದಿ ಕೇಳಿ ಅರಸನ ಆಜ್ಞೆ ಪಡೆದು ತಯಾರಾಗಿ ಬಂದ. ಬಾದಶಾಹರು ಅವನಲ್ಲಿ ಮಿತಿಮೀರಿದ ಸತ್ಯ ವಿಶ್ವಾಸದ ಪೆಟ್ಟಿಗೆಯನ್ನು ಕಂಡು, ಅವನ ಗುಣಗಳನ್ನು ಪರೀಕ್ಷಿಸಿ "ಸಲಾಬತ್ ಖಾನ್" ಎಂಬ ಬಿರುದು ಆ ಹೆಸರಾಂತ ಸೇನೆಯ ಪಂಕ್ತಿಗಳನ್ನು ಸೀಳಿ ಹಾಕುವವನಿಗೆ (ಹಕ್ಕುಳ್ಳವನಿಗೆ) ನೀಡಿದರು. ಅವನ ಮೇಲೆ ತುಂಬ ಭರವಸೆ ಮಾಡಿ ಅವನಿಗೆ ದಂಡನಾಯಕತ್ವವನ್ನು ನೀಡಿದರು, ಹೆಸರಾಂತ ಶೂರ ಮಂತ್ರಿಗಳೆಲ್ಲ ಬಂದು ಅವನಿಗೆ ಭೇಟಿಯಾಗಿ, ಶುಭ ಹಾರೈಸಿದರು. ದುಷ್ಟ ತನ್ನ ಅಹಂಭಾವದಲ್ಲಿದ್ದು ಮುಂದೆ ಬಂದು ಯುದ್ಧ ಮಾಡಲು ಸಿದ್ಧನಾಗಿದ್ದವನು ತನ್ನ ಐಶ್ವರ್ಯದ ಅಮಲೇರಿ ಶಸ್ತ್ರದ ದಾರಿಹಿಡಿದ. ಆ ದಂಡನಾಯಕ ಆಕ್ರಮಿಸಲು ಅಲಿಯವರ ಸೈನ್ಯ ತೆಗೆದುಕೊಂಡು ಹೊರಟಾಗ ಅಲ್ಲಿ ಆ ಸಲಾಬತ್ ಕಾಲಿಡುತ್ತಿದ್ದ ಹಾಗೆ ಆ ಅಧಮನ ಹೆಜ್ಜೆ ಕುಸಿದು ಹೋಯಿತು. ಪುರುಷರ ಮೈದಾನದಲ್ಲಿ ಆ ಬಂಡಾಯಗಾರ ಇರಲು ಸಾಧ್ಯವಾಗಲಿಲ್ಲ, ತನ್ನ ಸೈನ್ಯವನ್ನು ಬಿಟ್ಟು ತನ್ನಂತವರ ಜೊತೆಯಲ್ಲಿ ಏರಿದ. ಎಲ್ಲಿಯವರೆಗೆ ಮೈದಾನ ಖಾಲಿ ಕಾಣಿಸುತಿತ್ತೋ ಅಲ್ಲಿಯವರೆಗೂ ಆಕ್ರಮಣ ಮಾಡಿದರು. ಎಲ್ಲ ಮಂತ್ರಿಗಳು ಹಾಗೂ ದಂಡನಾಯಕನ ಎಷ್ಟು ಸೈನ್ಯವಿತ್ತೋ ಎಲ್ಲರೂ ರಗಡೆ ಮಾಡುತ್ತ ಜಗಳದ

ಮಧ್ಯೆ ಆಗ ಸುತ್ತಲಿಂದಲೂ ಕೋಟೆ ಆವರಿಸಿತು ಸೈನ್ಯ ಯುದ್ಧ ಮಾಡುತ್ತ ಕೋಟೆಯನ್ನು ಮುತ್ತಿಗೆ ಹಾಕಿತು. ಯಾರು ಆ ವರ್ತುಲದಲ್ಲಿ ಸಿಕ್ಕಿಹಾಕಿಕೊಂಡರೋ ಅವರೆಲ್ಲರೂ ಮೃತ್ಯುವಿನ ಕಷ್ಟ ಅನುಭವಿಸಿದರು. ಪ್ರತಿ ಸಲವೂ ಅನೇಕ ಬಂದೂಕುಗಳಿಂದ ಗುಂಡುಗಳು ದುಂಬಿಗಳ ಹಾಗೆ ಹಾರಿದವು ಭಾರಿ ಮಿಡಿತೆಯ ಭಾರದಿಂದ ಬಾಣಗಳ ತೂಕ ಕಡಿಮೆ ಇತ್ತು. ಆಕಾಶದ ಶತ್ರು ತೋಪುಗಳಿಂದ ಗುಂಡು ಹಾರಿಸಿ ಕೋಟೆಯನ್ನು ಹೊಡೆಯಲಾರಂಭಿಸಿದಾಗ ಈ ಘೋರ ಆಕ್ರಮಣದಿಂದ ಭೂಮಿ ಪಾತಾಳದವರಿಗೆ ಕಂಪಿಸಿತು. ಭೂಮಿ ಕಾದು ಪಾತಾಳದಿಂದ ಬಿಸಿನೀರು ಉಕ್ಕಿತು. ಮದ್ದಿನ ಅತಿ ಹೆಚ್ಚಿನ ಹೊಡೆತದಿಂದ ಆಕಾಶದಿಂದ ಬೆಂಕಿಯ ಮಳೆ ಸುರಿಯುವ ಹಾಗೆ ಕಾಣುತ್ತಿತ್ತು ಮಂತ್ರಿಗಳೆಲ್ಲ ಸುತ್ತಲಿಂದಲು ಹಾರಿ ಕೋಟೆಯಲ್ಲಿ ಅವನಿಗೆ ಸೆರೆ ಹಿಡಿದಾಗ ಕೆಳಗಿಂದ ಸೈನ್ಯ ತುರ್ತಾಗಿ ಆಕ್ರಮಣಿಸಿತು. ಸುತ್ತಲಿಂದ ಆಕ್ರಮಿಸಿ ಎಲ್ಲ ಕಡೆಯೂ ಹರಡಿ ದಂಗೆ ಮಾಡುತ್ತಿದ್ದ ದುಷ್ಟರೆಲ್ಲರನ್ನು ಒಂದು ಕಡೆ ಕೂಡಿಸಿದರು. ಹೀಗೆ ಆ ನಾಸ್ತಿಕರನ್ನು ಲೂಟಿಹೊಡೆದು ಹಿಂದಿರುಗಿದರು ಆ ಎಲ್ಲರ ಕಣ್ಣುಗಳ ಪ್ರೇಮಿಗಳು. ಕೃಷ್ಣ ಅಲ್ಲಿಂದ ಎದ್ದು ಪನಾಲ ಹಾಗೂ ದ್ವಾರಕ ಬಿಟ್ಟು ಓಡಿದ. ಆಗ ಅವನ ಅಂತಃಪುರದ ಸ್ತ್ರೀಯರು ತಮ್ಮ ಮಾನ ಕಾಪಾಡಲು ನಿಸ್ಸಹಾಕರಾಗಿ ಯುದ್ಧ ಮಾಡಿ ಸಾಯಲು ತಯಾರಾಗಿ ಬಂದರು. ಈ ಆಕಾಶದ ವಿಜಯದ ನಾನು ದೊಡ್ಡ ರಣರಂಗ ಬರೆಯುತ್ತಿದ್ದೇನೆ, ಇವರು ಅಲ್ಪಸಂಖ್ಯೆಯಲ್ಲಿದ್ದು ಸಹ ವೀರರು ಅನೇಕ ನಾಸ್ತಿಕರ ಮುಖ ಮುರಿದಿದ್ದಾರೆ, ಆಗ ಎಡ–ಬಲ ಅಲಂಕರಿಸಿ ಹೊರಗೆ ಹೋಗಿ ಆ ವೀರರು ಸೇನೆ ಮಧ್ಯದಲ್ಲಿ ಎದುರಿಸಿ ಯುದ್ಧ ಮಾಡಲು ಅಲ್ಲೇ ನಿಂತರು. ಆಕಡೆ ಒಬ್ಬ ಸುಪ್ರಸಿದ್ಧ ಹಾಗೂ ಅಚಲ ಸರ್ದಾರ ಮಸೂದ್‌ಖಾನ, ಇವನು ಸಹ ಶಾಹನ ಸರ್ಕಾರದ ಪಂಕ್ತಿಯ ಸಂಗಾತಿ ಅವನೊಬ್ಬ ಸರ್ದಾರ. ಒಂದು ಕೇಂದ್ರಬಿಂದುಗೆ ಕಂಪಾಸ ಹೇಗೆ ವರ್ತುಲದಿಂದ ಮುತ್ತಿಕೊಳ್ಳುವ ಹಾಗೆ ಶೂರರಿಗೆ ಇಷ್ಟು ಅಲ್ಪ ಸಂಖ್ಯೆಯಲ್ಲಿ ನೋಡಿ ನಾಸ್ತಿಕರು ಅವರನ್ನು ಮುತ್ತಿಗೆ ಹಾಕಿದರು. ಎರಡು ಕಡೆಯಿಂದ ಶೂರರು ಹೊರಬಂದು ಚೆನ್ನಾಗಿ ಗಲಾಟೆ ಮಾಡಿಕೊಂಡು ಮುಂದೆ ಬಂದಾಗ ಶೂರರಿಗೆ ಅಧಿಕ ಬಲ ಬಂದಂತಾಗಿ ಅವರನ್ನು ಸೋಲಿಸುವ ಬಹಳ ಸಾಮರ್ಥ್ಯ ಕಾಣಿಸಿತು. ಯಾ ಅಲಿ ಘೋಷಣೆಯಿಂದ ಹೃದಯದ ಕುದುರೆ ಜೋರಾಗಿ ಹಾರಿದಂತಾಗಿ, ಪ್ರತಿಯೊಬ್ಬ ದುಷ್ಟ ನಾಸ್ತಿಕನ ಪ್ರತಿಯೊಂದು ಮಂದಿರ ಬಿದ್ದುಹೋಯಿತು. ಖಡ್ಗಗಳ ಖನಾಖನ್ ಸದ್ದು ಶೂರರ ಸಂಗೀತ ಹೀಗೆ ಹಾಡು ಪ್ರಾರಂಭಿಸಿದಾಗ, ಝೇಂಕಾರ ಶಬ್ದ ಕೇಳಿ ಶುಕ್ರಗ್ರಹದ ಪ್ರಕಾಶಮಯ ಆರಿಹೋಯಿತು. ಖಡ್ಗಕ್ಕೆ ಖಡ್ಗ ಅಧಿಕವಾಗಿ ತಾಗಿ ಸುತ್ತಲೂ ಕಿಡಿಗಳು ಹೇಗೆ ಹಾರಿತೆಂದರೆ, ಅಗ್ನಿಯ ಮಿಂಚಿನಂತೆ ಬೆಂಕಿಯ ಮಳೆ ಸುರಿಯಿತು. ಖಡ್ಗಗಳ ತುದಿಗಳು ಪರಕಿಯರೆಲ್ಲರ ಮುಖಗಳು ಕುದುರೆಗೆ ಮಾಲಿಶ್ ಮಾಡಲು ಉಪಯೋಗಿಸುವ ಕಬ್ಬಿಣದ ಬ್ರಷ್ ಹಾಗಾಯಿತು, ನಮ್ಮನ್ನು ವಕ್ರ ವಕ್ರವಾಗಿ ಕುಯ್ಯಲು ಗರಗಸ ಚೂಪಾಗಿ ಮಾಡಿದ್ದರು. ಮೈತ್ರಿಯ

ಮಾತನ್ನು ರದ್ದುಗೊಳಿಸಿ ಯಾವ ಸವಾರರು ಎದುರಿಗೆ ಬಂದಿದ್ದರೋ ಆ ಸವಾರ ಹಾಗೂ ಕುದುರೆಗಳನ್ನು ಒಂದೊಂದೇ ಏಟಿನಲ್ಲಿ ಮುಗಿಸಲಾಯಿತು. ಕವಣೆ(ಕಲ್ಲೆಸೆಯುವ ಸಾಧನ)ಯ ಕಲ್ಲು ತಾಗುತ್ತಿದ್ದಹಾಗೆ ಬೆಂಕಿಯ ಹುಕ್ಕಾ(ಹೊಗೆಸೊಪ್ಪು ಸೇವನೆಯ ನಲಿಕೆ)ದ ನಳಿಕೆ ಸಿಡಿದು ಹೋಗುತ್ತದೆ. ಕೊಡಲಿ ಏಟು ತಗಲಿದ್ದು ಮೃತ್ಯುವಿನ ಕೈನಲ್ಲಿದ್ದ ಕೊಡಲಿ ಏಟು ತಗಲಿದ್ದು, ಗದೆಯ ಏಟಿನ ತಿವಿತ ಯಮನ ಮುಷ್ಟಿಯಿಂದ ಏನು ಕಡಿಮೆ ಇರಲಿಲ್ಲ. ಯಾರಿಗೆ ಕಲ್ಲೆಸೆದು ಕೊಲ್ಲುವ ಶಿಕ್ಷೆಗೆ ಅರ್ಹನಾಗಿದ್ದನೋ ಅವನಿಗೆ ಬಾಣಗಳನ್ನೆಸೆದರು. ಯಾರ್‍ಯಾರು ಆ ಹೋರಾಟದಲ್ಲಿ ತೊಡಗಿದರೋ ಅಂತಹವರಿಗೆ ಬರ್ಚಿಗಳನ್ನು ತಿವಿದರು. ಬಾಣಗಳ ಹೊಸ ಪ್ರಯೋಗ ಮಾಡುತ್ತಿದ್ದ ಹಾಗೆಯೇ ಅದರ ಏಟು ಸಹ ಬಿಗಿಯಾಗುತ್ತ ಹೋಯಿತು. ಅವನೆಷ್ಟು ಶೂರನಿದ್ದರೂ ಸಹ ಆ ರಕ್ತಪಾತವನ್ನು ನೋಡಿ ಅವನ ಹೃದಯದಲ್ಲಿ ಹೆದರಿಕೆ ಉಂಟಾಯಿತು. ಪ್ರತಿಯೊಂದು ವೃಕ್ಷದ ಹೂವಿನಂದ ರಕ್ತದ ಧಾರೆ ಕಾರಂಜಿ ಹಾಗೆ ಪುಟಿಯುತ್ತಿತ್ತು. ಸತ್ತವರ ರಕ್ತದ ಸಮುದ್ರದಿಂದ ಯಾವಾಗ ಇಡೀ ಭೂಮಿ ತುಂಬಿಹೋಯಿತೋ, ಜೀವಂತ ಇರುವರ ಮೇಲೆ ಆ ರಕ್ತದ ಅಲೆಗಳು ಬೆಟ್ಟದ ಮೇಲೆ ಬೆಟ್ಟ ಬೀಳುವ ಹಾಗೆ ಬೀಳಲಾರಂಭಿಸಿದವು. ನಂತರ ಈ ಚಂಡಮಾರುತದಲ್ಲಿ ಪ್ರವಾದಿ ನೂಹ್‌ರವರ ನೌಕೆ ಅಲೆಗಳ ಮೇಲೆ ಏರಲಾರಂಭಿಸಿತು, ಹಣೆ ಮೇಲೆ ಬೆವರು ತುಂಬಿದ ಆಕಾಶ ಪ್ರತಿ ಕ್ಷಣ ಆಯುಧಗಳ ಬೀಸಣಿಕೆ ಆಡಿಸುತ್ತಿದ್ದ. ಎಲ್ಲ ಆಳವಾದ ಕೆರೆಗಳಲ್ಲಿ ಅಲೆಗಳ ಮೀನುಗಳ ಮೇಲೆ ಕವಚಗಳು ಬಲೆಗಳ ಹಾಗೆ ಕಾಣಿಸುತಿದ್ದವು. ಎಲ್ಲ ಕಡೆಯು ಹೂ ಕಟ್ಟುವ ದಾರದ ಹಾಗೆ ಎಲ್ಲ ಜನಿವಾರ ಕಾಣಿಸುತ್ತಿತ್ತು. ತಲೆಗಳ ಹೋಳುಗಳೆಲ್ಲ ನೀರಿನ ಮೇಲೆ ಕಮಲದ ಹೂಗಳು ತೇಲುವಹಾಗೆ ಕಾಣಿಸುತ್ತಿದ್ದವು. ಹಸ್ತ ಬಿದ್ದ ತೋಳು ಆ ಬೆಳೆಯ ದಂಟಿನ ಹಾಗೆ ಕಾಣಿಸುತ್ತಿತ್ತು. ಕಣ್ಣುಗಳು ಹೇಗೆ ಹರಡಿದವೆಂದರೆ ವನದಲ್ಲಿ ಪ್ರವಾದಿ ಸುಲೈಮಾನರ ಉಂಗುರವನ್ನು ಇಟ್ಟಿರುವ ಹಾಗೆ ಕಾಣಿಸುತ್ತಿತ್ತು. ಹೃದಯಗಳೆಲ್ಲ ಕರಿ ಶಿಲೆಗಳಾಗಿ ಪರ್ವತದ ಕೆಳಪ್ರದೇಶದಲ್ಲಿ ಹರಡಿದ್ದವು. ಆಕಾಶದ ಒಲೆಯ ಛಾಯೆ ಬಿದ್ದು ಎಲ್ಲವೂ ಕುಸುಬೆ ಹೂವಿನ ಹಾಗೆ ಕೆಂಪಾದಾಗ ಪೃಥ್ವಿಯ ಎಲ್ಲ ಸಾಮಾನುಗಳು ಕೆಂಪು ಮಕ್ಮಲ ಹೊದಿಕೊಂಡಿರುವ ಹಾಗೆ ಕಾಣಿಸಿತು. ಭೂಮಿಯ ಪ್ರತಿಯೊಂದು ಕಣವೂ ರಕ್ತದ ಬಣ್ಣ ಹಚ್ಚಿಕೊಂಡು ಮಾಣಿಕ್ಯ ಚೂರುಗಳ ಹಾಗೆ ಕಾಣುತ್ತಿದ್ದವು. ಗಾರೆ ಚೂರು ಅಲಂಕೃತವಾಗಿ ಸಾಕು ಕೋಳಿಯ ಹಾಗೆ ಕಾಣತೊಡಗಿತು. ರಕ್ತದ ಕಲೆಗಳಿದ್ದವು ಆದರೆ ಶಾಹನ ವಿಜಯದ ಕಥೆ ಬರೆಯಬೇಕಾಗಿತ್ತು. ಆಕಾಶದ ಬನದ ಎಲೆಗಳ ಮೇಲೆ ಚುಮಕಿಸಿ ಸಿಂಪಡಿಸಿತು. ರುಂಡ ಮುಂಡಗಳೆಲ್ಲ ತುಳಕಾಟದಲ್ಲಿ ನಾಶವಾಗಿ ಅದರ ರೂಪವೇ ಕೆಟ್ಟುಹೋಯಿತು, ಜೀವಂತವಿರುವವರು ಮುಖಭಾವವಿಲ್ಲದೆ ತನ್ನ ಮುಖ ಸ್ವರೂಪವನ್ನೇ ಮರೆತರು. ಉಳಿದುಕೊಂಡ ಸ್ವಲ್ಪಜನ ಒಡಕುಂಟಾದ ಕಾರಣದಿಂದಾಗಿ ಹಿಂದಿರುಗಿ ಓಡಲಾರಂಭಿಸಿದರು, ಆದರೆ ಅವರ ಇಡೀ ಜಗತ್ತಿನ ಮೈದಾನ ಚಿಕ್ಕದಾಯಿತು. ಆ

ಸೈನ್ಯಕ್ಕೆ ಯಾರೂ ಸರದಾರ ಇರಲಿಲ್ಲ ಹಾಗೂ ಕೋಟೆಗೆ ಸಹಾಯವೂ ಆಗಲಿಲ್ಲ, ಆದ್ದರಿಂದ ಆ ನೀಚನ ಸೇವಕರೆಲ್ಲರೂ ಗಾಬರಿಯಾಗಿ ಎಲ್ಲಕಡೆಯೂ ಸುತ್ತಾಡಲಾರಂಭಿಸಿದರು. ಹೀಗೆ ಇಡಿ ಸೈನ್ಯ ಹರಡಿಹೋಗಿ, ಕೋಟೆಗೂ ಯಾವ ಕುಮ್ಮಕು ಬರದೇ ಇರುವ ಕಾರಣ ಮನಸ್ಸಲ್ಲೇ ಅಸಹಾಯಕನಾಗಿ ಹೀಗೆ ಕೋಟೆ ಮೇಲಿಂದ ಕೆಳಗಿಳಿದು ಎಲ್ಲ ಹರಡಿರುವ ಸೈನ್ಯದ ಸಹಾಯ ಮಾಡಿ ನನ್ನ ಜವಾಬ್ದಾರಿ ನಿಭಾಯಿಸಬೇಕೆಂದುಕೊಂಡ. ಮನಸ್ಸಿನಲ್ಲಿ ತೀರ್ಮಾನಿಸಿದಂತೆ ಮೊಟ್ಟಮೊದಲನೆಯದಾಗಿ ಮಾಡುವ ಕೆಲಸ ಅಂದರೆ ರಾತ್ರಿಯ ಕತ್ತಲೆಯ ಆಶ್ರಯ ಪಡೆದು ಮೋಸ ಮಾಡಿ ಕಳ್ಳತನದಿಂದ ಓಡಿ ಹೋದ. ಆ ಶೈತಾನ ಪರಾರಿಯಾದ ತಕ್ಷಣ ದಂಗೆ ಪಿತೂರಿಯ ಬಾಗಿಲು ತೆರೆಯಿತು. ಇಡೀ ಪ್ರಪಂಚದ ಹೃದಯದಲ್ಲಿ ಎಲ್ಲೂ ಸಹ ಅಹಂಕಾರಕ್ಕೆ ಜಾಗ ಇರಲಿಲ್ಲ. ಬಾದಶಾಹನಿಗೆ ಈಗ ಆಟ ಕೆಟ್ಟ ಹಾಗೆ ಕಾಣಿಸಿತು ನಾನು ಇವನನ್ನು ಹಿಂಬಾಲಿಸಿ ಶತ್ರುವಿನ ಆಟ ಕೆಡಿಸುವೆ ಎಂದು ಹೇಳಿದರು. ಅನೇಕ ಸಲ ಬೇಟೆ ಹುಲಿಯ ಮುಂದೆ ಬಂದು ತನ್ನನ್ನು ವ್ಯಕ್ತಪಡಿಸುತ್ತದೆ. ಆದರೆ ಯಾವುದಾದರು ಹಂದಿ ನೋವು ಕೊಟ್ಟು ಗುಹೆಯಲ್ಲಿ ಅಡಗಿಕೊಂಡರೆ ಏನು ಮಾಡುವುದು. ಆಗ ಹಟಮಾರಿ ಶಾಹನು ಹಟ ಹಿಡಿದು ಕುದುರೆ ಹತ್ತಿದ. ತನ್ನ ಕೈಯಲ್ಲಿಯ ನವಚೈತನ್ಯ ಕುದುರೆ ಮೇಲೆ ಹತ್ತಿ ಅವನ ಮೇಲೆ ಉತ್ತುಂಗತೆ ಪಡೆಯಲು ಹೊರಟ. ಭಾರದಿಂದ ಭಾರವಾದ ಭೂಮಿಯ ಅನೇಕ ಭಾರಿ ಮಣಿಗಳು ಕುಯಿದು ಹೋಯಿತು. ಅಪರಿಚಿತ ಜಾಗ ಅವನ ದರ್ಪದಿಂದ ಅತಿಯಾಗಿ ಬೆವತುಹೋಗಿ ಅದರಲ್ಲೇ ಮುಳುಗಿತು. ಸೂರ್ಯನ ಕಣ್ಣಲ್ಲಿ ನೀರು ತುಂಬಿ ರೆಪ್ಪೆಗಳಿಂದ ಧಾರೆಗಳು ಇಳಿಯಿತು, ಯಾವಾಗ ಅವನ ಧೂಳು ಆಕಾಶದ ಮುಖದ ಮೇಲೆ ಹಾರಿ ಬಿತ್ತೋ ಎಲ್ಲ ಕಡೆ ಕತ್ತಲೆ ಆವರಿಸಿತು. ಶಾಹನ ಮಂತ್ರಿಗಳ ಸೇನೆ ಯಮನ ಸೈನ್ಯದಿಂದ ಕಡಿಮೆ ಏನು ಇರಲಿಲ್ಲ. ಆಸಿಫ್ಗನ ಪಂಕ್ತಿಗಿಂತ ಪ್ರತಿಯೊಬ್ಬ ಸರ್ದಾರನ ಆಕ್ರಮಣ ಅಧಿಕವಾಗಿತ್ತು. ಶಾಹನ ಸೇನೆಯ ಮುಂದೆ ಸಾಗುವ ಸೇನಾ ತುಕಡಿಯಲ್ಲಿ ದೇವಚರ ಮುಂದಿದ್ದರೆ ದೇವನ ಬಲವಾದ ಬೆಂಬಲ ನಿತ್ಯವೂ ಅಧಿಕವಾಗಿದೆ. ಈ ಭಾಗ್ಯಶಾಲಿ ಸೇನೆಯನ್ನು ಆಕಾಶದಿಂದ ದೇವಚರರು ನೋಡಿ ನಿಸ್ಸಂದೇಹವಾಗಿ ಈ ಸೈನ್ಯ ಲೋಕಪಾಲಕವಾಗುವುದು ಎಂದರು. ಶಾಹನು ಯಾವ ದಿಕ್ಕಲ್ಲಿ ಹೋದನೋ ಅಲ್ಲೆಲ್ಲ ಕೂಡಲೇ ಜಯವಾಯಿತು, ಎಲ್ಲಿ ಹೋದರೂ ಸ್ವತಃ ಮುಂದೆ ಬಂದು ಅಪಾರ ದೇಶಗಳ ಕಾಣಿಕೆ ತೆಗೆದುಕೊಂಡು ಬಂದ. ಬುದ್ಧಿಯ ಓಟಕ್ಕಿಂತ ಹೆಚ್ಚು ಅಧಿಕವಾಗಿ ಬಾದಶಾಹನ ಆಕ್ರಮಣವಾಯಿತು, ಎಲ್ಲಿ ತಲಪಲು ಸಾಧ್ಯವಿರಲಿಲ್ಲವೋ ಅಲ್ಲಿಯೂ ಶಾಹ ಆಕ್ರಮಿಸಿದ. ಅಲಿ ಆದಿಲ್‌ಶಾಹ ಮುರ್ತುಝಾಆಬಾದ್ ತಲುಪಿದಾಗ ಅವನ ಝೇಂಕಾರ ಲೋಕವನ್ನೇ ಅಸ್ತವ್ಯಸ್ತ ಮಾಡಿಬಿಟ್ಟಿತು. ಈ ಆಕ್ರಮಣದಿಂದಾಗಿ ಆತನ ಮರ್ಯಾದೆ ಅಧಿಕವಾಗಿ ಹರ್ಷೋಲ್ಲಾಸ ಇನ್ನು ಹೆಚ್ಚಾಯಿತು ಈ ಕಡೆ ಗಮನಹರಿಸಿ ಎಲ್ಲರೂ ತಣ್ಣಗಾಗಿ ತನ್ನ ಮನೆಕೆಲಸಗಳನ್ನು ಬಿಟ್ಟರು. ಪಾಪಿಷ್ಟರ

ಪಂಕ್ತಿ ಮೇಲೆ ಆಗ ಪ್ರಳಯ ಖಾಯಂ ಆಯಿತು, ಅವರೆಲ್ಲ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡಾಗ ಒಬ್ಬ ಮತ್ತೊಬ್ಬರನ್ನು ಸಹಾಯ ಮಾಡುವುದನ್ನು ಮರೆತರು. ಯಾರ್ಯಾರು ಎಲ್ಲೆಲ್ಲಿದ್ದರೋ ಅಲ್ಲಲ್ಲೇ ದಿಗ್ಭ್ರಮರಾಗಿ ನಿಂತರು ಅವರೆಲ್ಲರನ್ನು ನೋಡಿದರೆ ಗೋಡೆ ಮೇಲೆ ಬರೆದ ಚಿತ್ರಗಳ ಹಾಗೆ ಕಾಣುಸುತ್ತಿದ್ದರು. ಬಾದಶಾಹನ ಕೋಪದ ಬೆಂಕಿ ಅವರನ್ನು ಆವರಿಸಿದಾಗ ಅವರೆಲ್ಲರೂ ಮನಸಲ್ಲೇ ಗಾಬರಿಯಾಗಿ ಈಗ ಆಕಾಶ ನಮ್ಮ ಮೇಲೆ ಬೀಳಲಿದೆ ಅದನ್ನು ತಡೆಯಲು ಯಾವುದೇ ಸುಭದ್ರವಾದ ಆಸರೆಯೂ ಸಹ ಕೆಲಸಕ್ಕೆ ಬರುವುದಿಲ್ಲ ಎಂದು ತಿಳಿದು ಅಡ್ಡಬಿದ್ದರು, ಎಲ್ಲ ಕಡೆಯಿಂದ ದಯೆ, ಶಾಂತಿ ಎಂಬ ಸದ್ದು ಕೋಟೆಯ ಸುತ್ತ ಕೇಳಿ ಬರಲಾರಂಭಿಸಿತು. ಅವರೆಲ್ಲರೂ ನಿಸ್ಸಹಾಯಕರಾಗಿ ಮುಖ ಮರೆಸಿಕೊಂಡು ಎದೆಸೀಳುವಂತಹ ರೋಧನ ಮಾಡಿದರು. ಶೂರನ ವಿಶೇಷತೆಯನ್ನು ನೋಡಿ ಬಹಳಷ್ಟು ವಿನಂತಿಸಿಕೊಂಡರು, ಆದರೂ ಓಡಿ ಹೋದರು. ಅದಾಗ್ಯೂ ಆ ಕಳ್ಳ ನಾನು ಎಲ್ಲಿ ಕೊಲ್ಲಲ್ಪಡುತ್ತೇನೆ ಎಂದು ಹೆದರಿ ಅಂತಃಪುರದಲ್ಲಿ ಅಡಗಿಕೊಂಡಿದ್ದ. ಆಗ ಬಾದಶಾಹನಿಗೆ ಅನಿಸಿತು ಜೀವದಾನ ಕೊಡುವುದು ಸುಲಭ, ಯಾರು ಏನನ್ನು ಕೇಳುವರೋ ಅದನ್ನು ಅವರಿಗೆ ಕೊಡಬೇಕು, ಇದೇ ಕೊಡುವವನ ವಿಶೇಷತೆ. ಆಗ ಬಾದಶಾಹನು ಕುದುರೆ ಮೇಲೆ ಸವಾರಾಗಿ ಕೋಟೆಯನ್ನು ಹೀಗೆ ಗೆದ್ದನು. ಆಗ ಅವರ ಬಾಯಿಯಿಂದ ನಿತ್ಯ ಈ ಮಾತುಗಳ ಜಪ ಹೊರಡುತ್ತಿತ್ತು. ಆ ತಾಯಿಗೆ ಧನ್ಯವಾದಗಳನ್ನು ಹೇಳಬೇಕು, ಅವಳು ಇಂತಹ ಶಾಹನಳನ್ನು ನೀಡಿದರು. ಅವರು ದೊಡ್ಡ ಸಾಹೇಬರು ನಿತ್ಯವೂ ಕರ್ತಾರನ ಕರುಣೆ ಪಡೆದವರು. ಯಾವ ಮನೆಯ ಜೀವನಾಧಾರಗಳಿಂದ ಇಡೀ ಭೂಮಿ ಜನ್ಮ ತಾಳಿದೆ, ಆದರೂ ಸಹ ಸಮುದ್ರದ ನೀರಿನಲ್ಲಿ ಉಪ್ಪಿನ ಸವಿ ಇದ್ದೇ ಇದೆ. ಯಾವ ಹೃದಯಕ್ಕೆ ದೇಶಪ್ರೇಮ ಮಾಡಿ ಲೋಕದಲ್ಲಿ ಸತ್ಯ ಓಡಾಡುತ್ತದೆ, ಮತ್ತೆ ಆ ಮನೆ, ಆ ನಾಲಿಗೆಯಿಂದ ಪ್ರೇಮದ ಜನ್ಮ ಒಂದು ಪವಾಡವೇ ಆಗಿದೆ. ಅವರ ಕರುಣೆಯ ನೆರಳಲ್ಲಿ ಆರಾಮ ಪಡೆಯುತ್ತದೆ ಪ್ರಪಂಚದ ಎಲ್ಲ ಸುಖ ಅನುಕೂಲ ನಿತ್ಯವೂ ಅವರ ಕರುಣೆಯ ನೆರಳು ಪಡೆದಿರುತ್ತದೆ. ಅವರ ಕರುಣೆ ಅಂತೂ ಪ್ರಪಂಚದ ನಿಸ್ಸಹಾಯಕರ ಸಹಾಯವಾಗಿದೆ. ಅವರೇನಾದರೂ ಮನಸಲ್ಲಿ ದಾನದ ಹೊಳೆ ಹರಿಸಬೇಕು ಅಂದುಕೊಂಡರೆ ಸದೈವ ದೀನಾರುಗಳಿಂದ ತುಂಬಿರುವ ಚೀಲಗಳ ಬಾಯಿ ತೆಗೆದಿರುತ್ತದೆ. ಅವರ ಗಟ್ಟಿ ಮಾತನ್ನು ನಂಬಿ ಖಾಫ್ ಬೆಟ್ಟದಿಂದ ಸೀಮುರ್ಘ್ ಪಕ್ಷಿ ಬಂದರೂ ಸಹ ಅವರ ಆಸ್ಥಾನದ ಹುಲಿಯೂ ಸಹ ನಾಯಿಯ ಹಾಗೆ ಕಾವಲಗಾರನಾಗುವನು. ಪ್ರಪಂಚ ತನ್ನ ಸೆಣಸಾಟ ಮಾಡಿ ಹೆಚ್ಚು ತಿರುಗುವ ಆಕಾಶ ಹರಿದರೆ. ಮರೆವೆಯಿಂದಲೂ ಅವರ ಮಾತಲ್ಲಿ ಎಲ್ಲೋ ಸುಳ್ಳು ವ್ಯಕ್ತವಾದರೆ ಅವರ ಹೃದಯದಲ್ಲಿ ತಕ್ಷಣವೆ ನಿಜಮಾತಿನ ನೆನಪು ಬರುತ್ತದೆ. ತನ್ನ ರಾಜ್ಯ ಭಾರದಿಂದ ತನ್ನ ದೇಶದ ಮರ್ಯಾದೆ ಉಳಿಸಲು ನಿತ್ಯವೂ ಅನೇಕ ಸೈನ್ಯಗಳನ್ನು ಇಟ್ಟಿರುತ್ತಾರೆ ಅಧಿಕವಾಗಿ ನಕಾರಿಸುವ ಸಾಹಸ ಮಾಡಲು ಸಾಧ್ಯವಿಲ್ಲ. ಅವರೇನಾದರೂ ಶೌರ್ಯದ ಆಕಾಶವಾಗಿದ್ದರೇ ಅವರ ಸುಪುತ್ರ ಈ ಸೂರ್ಯ ಆ

ಪ್ರಕಾಶಮಾನ ಖಡ್ಗದಿಂದ ನಾಸ್ತಿಕತೆಯ ಕತ್ತಲೆಯ ಬಲ ಅಡಗಿಹೋಯಿತು. ಅಲಿರವರು ಸ್ವತಃ ತನ್ನ ಕೈಯಿಂದ ಖೈಬರ್ ಜಯಗಳಿಸಿದರು ಎಂದು ಸುದ್ದಿ ಬಂದಾಗ ರಾಜಧಾನಿಯ ಕಡೆ ಹೇಗೆ ದುರಾಸೆ ಪಡೆಯಲು ಸಾಧ್ಯ ಶಾಹ್ ರವರು ತನ್ನತಾನೆ ರವಾನೆಯಾಗಲು ದೃಢನಿರ್ಧಾರ ತೆಗೆದುಕೊಂಡು ಹೊರಟರು, ಎಲ್ಲೆಲ್ಲಿ ಮೊದಲನೆಯ ಸಲ ಹೆಜ್ಜೆ ಇಟ್ಟು ಮುಂದೆ ಸಾಗುತ್ತಾ ಹೋಗುತಿದ್ದ ಹಾಗೆ ಯಾವ ದಿನ ಶಾಹನ ಪ್ರಯಾಣ ಮುಗಿದು ತನ್ನ ತಂಗುವ ಸ್ಥಳಕೆ ಬಂದಾಗ ಯಾವ ಊರಿಗೆ ಸರಹದ್ದು ಲಗತ್ತಿಸಿತ್ತೋ ಅದು ಪಟ್ಟಣದ ಸೇವಾರ. ತುಕ್ಕುಹಿಡಿದ ತಟ್ಟೆ ಚಿನ್ನದ ನೀರಿನಿಂದ ಖಾಲಿ ಇರುವುದನ್ನು ಕಂಡು ರಾತ್ರಿಯ ಚಿತ್ರಕಾರ ಬಿಳಿ ಮಾಣಿಕ್ಯಗಳನ್ನು ತುಂಬಿದ. ರಾತ್ರಿಯಾಯಿತು, ಬಾದಶಾಹನು ಉಪಸ್ಥಿತನಾದ ಪಟ್ಟಣದ ಗಸ್ತಿಹೊಡಿಬೇಕೆಂದು ಅತಿ ಆಸೆ ಆಯಿತು, ಮನಸಲ್ಲಿ ಈ ಆಸೆಯನ್ನಿಟ್ಟುಕೊಂಡು ಜರಿ ಬಟ್ಟೆ ಧರಿಸಿದ. ರಾತ್ರಿಂಯ ಮೊದಲನೆಂಯ ಭಾಗ ಕತ್ತಲೆಂಯ ರಾತ್ರಿ ಕಸ್ತೂರಿಂಯ ಹಾಗೆ ಆವರಿಸಲಾರಂಭಿಸಿತು, ಆಕಾಶವೂ ಕರ್ಪೂರ ಹೊದಿಸಿ ಮಿಕ್ಕಿದ ಮೂರು ಭಾಗಗಳ ಅಧಿಕಾರಿಯಾದ. ರಾತ್ರಿಯಲ್ಲಿ ವಿಸ್ಮಯ ಸೂರ್ಯನಂತೆ ಶಾಹನು ಜ್ಯೋತಿ ಮಿನುಗಿಸುತ್ತಾ ಹೊರಟ. ಮೇಲಿನ ಚಂದ್ರನೂ ಎಷ್ಟೊಂದು ಅಂಧಕಾರದ ಕಲಂಕವಿತ್ತೋ ಅದೆಲ್ಲ ಗಬಗಬನೆ ತಿಂದ. ಆ ಸೂರ್ಯಕಿರಣಗಳ ಮತ್ತು ಅದರ ಮಿಂಚುನೋಟವನ್ನು ನೋಡಿ ಚಂದ್ರನ ಬೆಳದಿಂಗಳು ಸಹ ಲಜ್ಜೆಯಿಂದ ಬಿಳುಪೇರಿತು. ಸುತ್ತಲೂ ಪಣಜಿಗಳು ಬೆಳಗಿಸಿ ಎಲ್ಲ ಜಾಗದಲ್ಲಿ ದಾಳಿಂಬೆ ಹೂವು ಮತ್ತು ಉದ್ಯಾನದಿಂದ ಜ್ಯೋತಿ ಹೊರಗೆ ನಡೆದುಕೊಂಡು ಬರುವ ಹಾಗೆತುಂಬಿದರು. ನಾಲ್ಕಾರು ದಿಕ್ಕುಗಳಿಂದ ರಸಭರಿತ ಪ್ರತಿಯೊಂದು ಬಗೆಯ ವಾದ್ಯಗಳು ಹೇಗೆ ಬಾರಿಸ ತೊಡಗಿತೆಂದರೆ ಆಕಾಶದ ಖ಼ಾಝಿ ಆವೇಶದಲ್ಲಿ ಬಂದು ತನ್ನ ಪಗಡಿಯನ್ನು ಬೀಸಾಡಿದ. ಹೂಗಳ ಛತ್ರಿಯಂತೆ ಗಗನ ನಕ್ಷತ್ರಗಳಿಂದ ತುಂಬಿದ ಶಾಹನ ತಲೆ ಇತ್ತು. ಹೂ ಬೀಸಣಿಗೆಯಾಗಿ ಸ್ವರೂಪ ದರ್ಶನದ ಚಪ್ಪರವಾಯಿತು. ಬಾದಶಾಹನ ಪಾದ ಹೇಗೆ ಬೆಳೆಯಿತೋ ಭೂಮಿ ಅವನ ಪಾದದ ಕೆಳಗೆ ಸ್ವತಃ ಮಿನುಗುವ ಬಿಳಿ ತಗಟು ಹಾಸುತ್ತ ಹೋಯಿತು. ಚಂದ್ರನಿಗೆ ಬೆಳದಿಂಗಳು ಅಲ್ಲಿ ಜ್ಯೋತಿಯ ಗೌರವ ವಸ್ತ್ರ ಕೊಡುತ್ತಿತ್ತು. ಆ ವೀರ ಸುಂದರನನ್ನು ನೋಡಿ ಅವನ ಕಡೆ ಹೃದಯ ಸೆಳೆಯುತ್ತಿತ್ತು. ಆ ಒಳ್ಳೆಯ ಮೃದುವಾದ ಬೆಳದಿಂಗಳು ಕಣ್ಣಿಗೆ ಸುಖ ನೀಡುತ್ತಿತ್ತು. ಆ ನಿಷ್ಠಾವಂತನ ಚಂದ್ರನಂತಹ ಎಷ್ಟು ಮೃದುವಾದ ಜ್ಯೋತಿರ್ಮಯ ಸುಂದರ ಕೆನ್ನೆ. ಬೆಳದಿಂಗಳು ನಿಂತಿರುವ ನೀರಿನ ಮೇಲೆ ಗಾಳಿ ಬೀಸಿದರೆ ಪಗಡೆ ದಾಳ ತಿರುಗಿದಾಗ ಅಲಂಕೃತ ಮಿಂಚು ತೋರುವ ಕಾಗದ ಹಾಗೆ ಅದು ಮಿನುಗತ್ತದೆ. ಬಾದಶಾಹನ ಮೇಲೆ ತಣ್ಣನೆ ಗಾಳಿ ನಯ ವಿನಯದಿಂದ ಬೀಸಣೆಗೆ ಬೀಸುತ್ತಿದೆ. ರಾತ್ರಿಯಲ್ಲಿ ಹೂ ಮತ್ತು ನೀರು ಮಂಜಿನ ಸಣ್ಣನೆ ತುಂತುರು ಮಳೆ ಹಾಗೆ ಚಿಮುಕಿಸುತ್ತಿದೆ. ಬಾದಶಾಹನ ಪುರಹಗ್ಗಗಳು ಅತ್ತರ್‌ದಿಂದ ಈ ಪ್ರಪಂಚ ಸುಗಂಧಿತವಾಗುತ್ತಿದೆ. ಇಡೀ ಪ್ರಪಂಚದ ಎತ್ತರದ

ಮೇಲೆ, ಆದರೇ ಸುಗಂಧ ದ್ರವ್ಯಗಳ ವ್ಯಾಪಾರಿಯ ತಬಲವಾಯಿತು. ಬರ್ಮಕಿಯ ಹೊಗೆ ಎದ್ದು ಗೆಳತಿಯ ಶಕ್ತಿಯನ್ನು ರದ್ದುಗೊಳಿಸಿತು, ಕುದುರೆ ಯಾ ಕತ್ತೆಯ ಬೆನ್ನಿನ ಚರ್ಮಆಕಾಶದಲ್ಲಿ ಇದ್ದು ಎಲ್ಲ ಕಡೆ ದರ್ವಾಸನೆಯನ್ನು ತೆಗೆದು ಸುಂಗಧ ಹರಡಿಸಿತು. ಓ ಶಾಹ ತಕೋ ಕನ್ಯಾರಾಶಿ ಮತ್ತು ತೇಜೋರಾಶಿ ರಾತ್ರಿಗೆ ನಿನ್ನನ್ನು ಭೇಟಿ ಮಾಡಿಸಲು ಕರೆದು ಕೊಂಡು ಬಂದಿರುವರು. ಪೃಥ್ವಿ ಗಗನದ ಎಲೆಗಳಲ್ಲಿ ಟೋಪಿ, ತುರಾಯಿ ಹಾಗೂ ಹಾರಗಳನ್ನಾಗಿ ಮಾಡಿತು. ಖಡ್ಗ ಎತ್ತಲೂ ಕುಜ ಗ್ರಹ ನಿತ್ಯ ನಿರೀಕ್ಷಸುತ್ತ ಇರುತ್ತದೆ. ಆಕಾಶಬುಟ್ಟಿ/ನಕ್ಷತ್ರ ರಾಶಿ ನಿತ್ಯವೂ ಸೊಂಟ ಕಟ್ಟಿ ಬಿಲ್ಲು ಎತ್ತುವವನ ಹುದ್ದೆ ಕೇಳುತ್ತದೆ. ಬೆಳಿಗ್ಗೆಯ ಸ್ತಂಭ ನಿತ್ಯವೂ ನಿನ್ನ ಪ್ರಪಂಚದ ಗುರಾಣಿಯ ಸೇವೆ ಮಾಡುತ್ತದೆ. ನಿತ್ಯವೂ ಬೆಳಗುವ ಸೂರ್ಯ ನಿನ್ನಂತಹ ಬುದ್ಧಿವಂತನ ಶರಣದಲ್ಲಿ ಬರುತ್ತದೆ. ಬಹುಶಃ ಚಂದ್ರ ನಿನ್ನ ತುರುಕರ ಭೇಟಿ ಮಾಡಿ ಸೇವೆ ಮಾಡಲು ಬಂದಿರಬಹುದು, ಅಂದಿನಿಂದ ತುರುಕರ ಝುಂಜಬಾರ್ ಸೈನ್ಯದ ಸಾಹೇಬನಾದ. ನಿನ್ನ ಕುದುರೆಯ ನಿರ್ಮಲತೆ ಎಂದು ಬೆಳಗ್ಗಿನ ಕಣ್ಣಲ್ಲಿ ಚುಚ್ಚಿತೋ ಅಂದಿನಿಂದ ಚಂಚಲ ಚತುರತೆ ಅದಕ್ಕೆ ಹಿಡಿಸಲಿಲ್ಲ. ಅದರ ಳಾಳದ ಧೂಳು ತೆಗೆದುಕೊಂಡು ನವಚಂದ್ರ ತನ್ನ ಕಣ್ಣಲ್ಲಿ ಕಾಡಿಗೆ ಹಾಗೆ ಹಚ್ಚಿದರೇ, ಅದು ತನ್ನ ಕಣ್ಣಿನಿಂದ ಎಂದೂ ಕತ್ತಲೆಯ ಮುಖ ನೋಡುವುದಿಲ್ಲ. ತ್ವಚೆಯನ್ನು ನೋಡಿ ಕುದುರೆಯ ದೃಷ್ಟಿ ಇನ್ನು ಹೆಚ್ಚಾಗುವುದು. ತೂಕ ತನ್ನ ಗಾಂಭೀರ್ಯದಿಂದ ಬುದ್ಧಿಯ ವೇಗವನ್ನು ತಡೆದು ನಿಧಾನವಾಗಿ ಹೆಜ್ಜೆ ಇಡುವ ಹಾಗೆ ಮಾಡುತ್ತದೆ. ಭ್ರಾಂತಿ ನೇರವಾಗಿ ಏಳುವುದಿಲ್ಲ ಅದರಿಂದ ಮಕರವೃತ್ತ/ಕೋಷ್ಠಕದ ಗೆರೆ ಹುಟ್ಟುತ್ತದೆ, ಕುದುರೆಯನ್ನು ವೃತ್ತಾಕಾರದ ಸುತ್ತ ಓಡಿಸುವುದರಿಂದ ವರ್ತುಲ ಕೈವಾರ ವ್ಯಕ್ತ ಪಡಿಸುತ್ತದೆ. ಅದರ ತಲೆಮೇಲೆ ಮೃದುವಾಗಿರುವ ಬುಲ್ಬುಲಿನ ದೊಡ್ಡ ಗರಿ ತೂಗಾಡುತ್ತಿದೆ, ಅದು ಚನೂರಿನ ಮೇಲೆ ಇರುವ ಜಿಗಿಯುತ್ತಿರುವ ಸಂತುಷ್ಟ ತುರಾಯಿ ಇಡೀ ಜಗತ್ತನ್ನೇ ಹಾರಿಸಿಬಿಡುತ್ತದೆ. ಬಾದಶಾಹನ ಕುದುರೆಯನ್ನು ನೋಡಲು ಗಾಳಿ ತೋಟದಿಂದ ಹೊರಟಿತು, ಪ್ರತಿ ಕ್ಷಣ ಸುವಾಸನೆಯ ಉಡುಗೊರೆ ಮುಂದು ಮುಂದೆ ಕಳುಹಿಸಿತು. ಆ ಶಾಹನ ಸವಾರಿ ಮೇಲೆ ಆಗ ಪ್ರಕಾಶಮಯ ನಕ್ಷತ್ರಗಳು ಬೀಳುತ್ತಿರಲಿಲ್ಲ ಆದಕ್ಕಾಗಿ ನಿನ್ನ ಮೇಲೆ ಹೆಜ್ಜೆ ಹೆಜ್ಜೆಗೂ ಮುತ್ತುಗಳನ್ನು ನಿವಾಳಿಸಿ ಎಸೆಯುತ್ತಿತ್ತು. ಶಾಹನು ನಗರದ ಬಳಿ ಬಂದಾಗ ಅಮೃತದ ಬಿಂದಿಗೆಗಳ ಉಡುಗೊರೆ ತೆಗೆದುಕೊಂಡು ಸಮೃದ್ಧಿ ಸರ್ಕಾರಿ ಸೇವಕನಾದವನು ಸ್ವತಃ ಮುಂದೆ ಬಂದನು. ಈ ಪಟ್ಟಣಕ್ಕೆ ಸುಣ್ಣ ಅಲ್ಲ ಚಂದ್ರ ತನ್ನ ಉಡುಪನ್ನು ಕೊಟ್ಟಿದ್ದ, ಆ ಶೃಂಗಾರದ ದೃಶ್ಯದಿಂದ ಮನಸ್ಸು ಸಂತೋಷಗೊಂಡಿತು. ಹೇಗೆ ಮೇಣದ ಬತ್ತಿಯ ಗುಣ ಕಂದೀಲಿನಂದ ದರ್ಶವಾಗುತ್ತದೋ ಅದೇ ರೀತಿಯಾಗಿ ಬಾದಶಾಹನ ದರ್ಶನದಿಂದ ಇಡೀ ಪಟ್ಟಣವು ಬೆಳಗಿತು. ನಿಜ ಹೇಳಬೇಕೆಂದರೆ ಲೋಕದ ಪಾಲನೆಗೆ ಯಾವ ಸಮೃದ್ಧಿ ಬಂದಿದೆಯೋ, ಈ ಉಪಕಾರದ ಧನ್ಯವಾದ ಲೋಕ ಎಂದಿಗೂ ಮರೆಯುವುದಿಲ್ಲ. ನಿನ್ನ ಬಲಿಷ್ಠ

ಭಾಗ್ಯದ ಲೋಕದಲ್ಲಿ ಈಗ ಪ್ರಯಾಣ ಮಾಡಲಾಗುವುದು. ನಿಜವಾಗಿಯೂ ಪ್ರತಿಕ್ಷಣ ನಿನಗೆ ಹೈದರೆ ಕರ್‍ರಾರಿನ ಸಹಾಯವಿದೆ. ನಿನ್ನ ಆಜ್ಞೆ ಪಾಲಿಸುವನು ಎರಡು ಲೋಕಗಳಲ್ಲಿ ಮೆಚ್ಚುವವನಾದ, ಯಾರು ನಿನ್ನ ಆಜ್ಞೆಯನ್ನು ಉಲ್ಲಂಘಿಸಿದರೋ ಅವನು ತಿರಸ್ಕರಿತನಾದ. ಓ ಶಾಹನೆ ದೇವರು ನಿನಗೆ ಅವಲೋಕನ ವಿವೇಕ, ಶೌರ್ಯ, ಹೃದಯ ಬುದ್ಧಿಶಕ್ತಿ ಬಕ್ಷೀಸು ಮಾಡಿದ, ಅದೃಷ್ಟ ಹಾಗೂ ಯೌವ್ವನ ಮೊದಲು ಕೊಟ್ಟು ಅದರ ಜೊತೆಯಲ್ಲಿ ಪ್ರೀತಿಯ ಬಲ ಸಹ ನೀಡಿದ. ಆಕಾಶದ ಅಡುಗೆಯ ದೊಡ್ಡ ಪಾತ್ರೆಯಲ್ಲಿ ಏನೇನು ಬೇಯಿದಿತ್ತೋ ಆ ಎಲ್ಲ ರುಚಿಕರ ಊಟದ ರುಚಿ ನೋಡಿದ, ಅನೇಕ ಪ್ರಕಾರದ ಇಷ್ಟೊಂದು ರುಚಿಗಳು ಒಂದೇ ಸಲ ಪಟ್ಟಿರುವೆ. ಚಿನ್ನದ ಉತ್ತಮ ಆಭರಣಗಳನ್ನು/ ಸಾಮಾನುಗಳನ್ನು ಅಕ್ಕಸಾಲಿಗ ಹೇಗೆ ಸೊಗಸಾಗಿ ಮಾಡುವನೋ ಹಾಗೆ ನಾನು ಅದೇ ರೀತಿ ನಿನ್ನ ಗುಣಗಳನ್ನು ಪ್ರಸ್ತಾಪಿಸಿದ್ದೇನೆ ಇದರ ಉದಾಹರಣೆ ಸಿಗುವುದು ಕಷ್ಟ. ಕೌಶಲ್ಯದ ಬೆಲೆ ಬಾಳುವ ಮುತ್ತು ನಿನ್ನ ಯುಗದಲ್ಲೇ ಬೆಲೆ ಪಡೆಯಬಹುದು, ನಿನ್ನ ಐಶ್ವರ್ಯದಿಂದ ಈ ವ್ಯಾಪಾರ ನಡೆಯಿಲಿ, ಎಲ್ಲಿಯವರೆಗೆ ಸಾಧ್ಯವೋ ಆದಾನ ಪ್ರದಾನ ನಡೆಯುತ್ತಿರಲಿ. ನಾನು ಬಡವನಾಗಿದ್ದೆ ಆದರೆ ಈ ರತ್ನ ಪಡೆದನಂತರ ನಾನು ವರ್ತಕನಾದೆ ನೀನು ಶಾಹ ತೀಕ್ಷ್ಣ ಬುದ್ಧಿಯುಳ್ಳವನು ಪ್ರತಿಯೊಂದು ಅರಸರಿಗೆ ಯೋಗ್ಯವಾದಂತಹ ದೊಡ್ಡ ಮುತ್ತು ಖರೀದಿಸುವನು. ನಿನ್ನ ದೃಷ್ಟಿಯಿಂದ ಒಂದು ರತ್ನವು ಏನಾದರು ಬೆಲೆ ಬಾಳಿದರೆ ಗಗನ ನಕ್ಷತ್ರಗಳ ಪ್ರಸಾದ ತೆಗೆದುಕೊಂಡು ನನ್ನ ಸಂತೆಯ ಸಾಹುಕಾರನಾದ. ನನಗೆ ಮೊದಲೇ ಈ ರೀತಿಯ ವಿಸ್ತಾರವಾದ ಕವನ ಹೇಳಬೇಕೆಂದು ಗೊತ್ತಿದ್ದರೆ ಉತ್ಸಾಹದಲ್ಲಿ ಈ ರೀತಿಯಾದ ಐದ್ಹತ್ತು ಪಂಕ್ತಿಗಳು ಹೇಳುತ್ತಿರಲಿಲ್ಲ ಅದರಿಂದ ಏನು ಪ್ರಯೋಜನ ಇಲ್ಲ. ಕೊನೆಗೂ ಕೌಶಲ್ಯದ ಕಲೆಯಿಂದ ಪ್ರಶಂಸಾ ಗೀತೆ ಹೇಳುವಾಗ ದ್ವಿಪದಿಗಳಲ್ಲಿ ಸಂಧಿ ಎಲ್ಲೆಲ್ಲಿ ಮಾಡಬೇಕೆಂದು ವ್ಯಕ್ತವಾಯಿತು. ಯಾರು ಈ ಜಗತ್ತಿನ ಗುರುವಾಗಿದ್ದನೋ ನಾನು ಅವನ ಅತ್ಯಂತ ಕೆಳಮಟ್ಟದ ಶಿಷ್ಯ, ಹಾಗೋ ಹೀಗೋ ಬಹಳ ಪ್ರಯತ್ನ ಪಟ್ಟು ಇಷ್ಟು ಪ್ರಮಾಣ ಮಾಡಿದ್ದೇನೆ. ಇದಕ್ಕಿಂತ ಜಾಸ್ತಿ ಕೇಶಾಗ್ರಖಂಡನ ನನ್ನ ಕೈಯಲ್ಲಿ ಏನೋ ಇದೆ, ಆದರೇ ಇಷ್ಟೇ ಸಾಕು. ಹೇಗಾದರೂ ಆಗಲಿ ನಯವಾದ ಎಳೆ ಅತಿಯಾಗಿ ಹತ್ತಿ ತುರಾಯಿಯಾಯಿತು. ಬಾದಶಾಹರು ನಿನಗೆ ಒಂದು ಮಾತು ಹೇಳಿದರೆ ಅದರ ಅನೇಕ ಅರ್ಥಗಳಿರುತ್ತವೆ ಇದನ್ನು ತಿಳಿದುಕೋ. ಓ ತೀಕ್ಷ್ಣಬುದ್ಧಿಯುಳ್ಳವ ಶಾಹೆ ನೀನು ಎಲ್ಲ ರಹಸ್ಯವನ್ನು ಪಡೆದುಕೊ. ಓ ನುಸ್ರತಿ ಈಗ ಶಾಹರಿಗಾಗಿ ಪ್ರಾರ್ಥನೆಯಲ್ಲಿ ತೊಡಗಿಸಿಕೊ. ಆ ಚಿನ್ಹೆಗಳು/ಲಕ್ಷಣಗಳ ಅಲ್ಪ ಕೃಪೆ ನಿನಗೆ ಲೋಕ ಹಾಗು ಪರಲೋಕಕ್ಕೆ ಸಾಕು. ಓ ದೇವ ಎಲ್ಲಿಯವರೆಗೆ ಭೂಮಿ ಮೇಲೆ ಆಕಾಶದ ಛಪ್ಪರವಿದೆಯೋ ಅಲ್ಲಿಯವರಿಗೆ ಈ ಲೋಕಪಾಲಕನ ನೆರಳು ಶಾಶ್ವತವಾಗಿ ಇರಲಿ. (೭೭೯–೯೩೪)

ಸದರಿ ಮಸ್ನವಿಯ ಪುಸ್ತಕ

ದೊಡ್ಡ ಜಯಸಾಧಿಸಿ ಬಾದಶಾಹರು ಹಿಂದುರಿಗಿದಾಗ ಅವರ ಬೆನ್ನಿನ ಮೇಲೆ ಬತ್ತಳಿಕೆ ಕಟ್ಟಿತ್ತು ಅದನ್ನು ಇಡೀ ಜಗತ್ತು ನೋಡುತ್ತಿತ್ತು ತನ್ನ ಸಂಕಲ್ಪದ ಬಿಲ್ಲನ್ನು ಏರಿಸಿಟ್ಟಿ ತನ್ನ ಗುರಿ ಮಲೆನಾಡಿನ ಕಡೆ ಇಟ್ಟನು, ಏಕೆಂದರೆ ಅವನು ಸಹ ಮಿತಿಮೀರಿ ಅಸಭ್ಯತೆಯ ಕೆಲಸ ಮಾಡಿದ್ದ. ಯಾವ ಸಮಯದಲ್ಲಿ ಕೆಲಸ ಮಾಡುವುದನ್ನು ತಡೆದರೆ, ಲಕ್ಷ ಉಪಾಯ ಮಾಡಿದರೂ ಸಹ ಆ ಕೆಲಸ ಮುಗಿಸಲು ಸಾಧ್ಯವಾಗುವುದಿಲ್ಲ. (೯೩೫-೯೩೮)

■

*

ಅಧ್ಯಾಯ – ೫

ಒಬ್ಬ ವಿದ್ರೋಹಿಯ ವಿದ್ರೋಹದಿಂದ ಉಂಟಾದ ಅಡಚಣೆಗಳನ್ನು ನಿವಾರಿಸಲು ಶಾಹರು ಮಲೆನಾಡಿನ ಕಡೆ ಹೊರಟ ಕಥೆ ಇದು,

ಇಷ್ಟು ಮೊದಲಿನ ಕಥೆ ಮೊದಲು ಹೇಳುವೆ, ವಿವರವಾದ ಮಾತನ್ನು ಸಂಕ್ಷಿಪ್ತವಾಗಿ ಹೇಳುವೆ. ಮೊದಲಿನಿಂದ ಮಾತು ಹೇಳದೇ ಇದ್ದರೆ ಕಥೆಯ ಅಪೇಕ್ಷೆ ಕೈಗೆ ಬರುವುದಿಲ್ಲ. ನಾನು ಮುಘಲರ ಜೊತೆಯಲ್ಲಿ ನಡೆದಿದ್ದ ಯುದ್ಧಗಳ ಬಗ್ಗೆ ಏನೂ ಬರೆದಿಲ್ಲ ಈ ಕಥೆ ಹೇಳುವುದರಲ್ಲಿ ನನ್ನ ಘನತೆ ಸಾಬೀತಾಗುತ್ತದೆ. ಏಕೆಂದರೆ ಸೂಕ್ಷ್ಮದರ್ಶಿ ಎಂದೂ ಸೂಕ್ಷ್ಮ ವಿಷಯದ ಮಾತು ನೋಡಿ ಬರೆಯುವವನ ವಿವೇಕದ ಅಂದಾಜು ಮಾಡಬಲ್ಲನು. ಈ ಘಟನೆಗಳು ಪ್ರತಿಯಬ್ಬರೂ ಜ್ಞಾಪಕವಿಟ್ಟುಕೊಂಡು ಶಾಹರನ್ನು ನಂಬಲಿ ಎಂಬುವುದು ನನ್ನ ಉದ್ದೇಶ. ಇನ್ನು ಮೊಘಲರಿಂದ ಶಾಹನಗೆ ಯಾವುದೇ ರೀತಿಯ ಕೆಲಸ ಬೀಳಲಿಲ್ಲ, ಆದ್ದರಿಂದ ಅವನು ಅನೇಕ ಒಳ್ಳೆ ಕೆಲಸಗಳನ್ನು ಏರ್ಪಾಡು ಮಾಡಿದನು. ಯಾವಾಗ ಪನಾಲ ಕೋಟೆಯನ್ನು ಗೆದ್ದ ನಂತರ ಬೇರೆ ಶತ್ರುಗಳ ಮೇಲೆಯೂ ಕಣ್ಣಿಟ್ಟನು ಅದರಲ್ಲಿ ಮೊದಲಿಗೆ ಮಲೆನಾಡಿನ ಕೆಲಸಕ್ಕೆ ಆದ್ಯತೆ ಕಂಡಿತು. ಏಕೆಂದರೆ ಅಲ್ಲಿರುವ ಒಡಯ ಅವಿಧೇಯತೆಯಲ್ಲಿ ತೊಡಗಿ, ಎಲ್ಲಿ ಅವಕಾಶ ದೊರಕುತ್ತದೆಯೋ ಅವನು ಅಷ್ಟೇ ಪ್ರಬಲನಾಗಲು ಪ್ರಯತ್ನಿಸಿದ, ಶತ್ರುಗಳ ಹಗೆತನ ನೋಡಿ ಅವರಿಗೆ ದಂಡವಿಧಿಸಿ ಬುದ್ಧಿವಂತಿಗೆಯಿಂದ ಕೆಲಸ ತೆಗೆದುಕೊಂಡು ಅವರ ದೇಶ ಗೆಲ್ಲಬೇಕು. ತನ್ನಲ್ಲಿ ಇದನ್ನು ನಿರ್ಧರಿಸಿ ಕೊಂಡು ಆ ಸುಪ್ರಸಿದ್ಧ ನೃಪ ಹೊರಟ. ಅಲಿ ಆದಿಲ್ ಶಾಹನ ಸೈನ್ಯಗಳು ಹೊರಟಾಗ ಇಡೀ ಕಾಡಲ್ಲಿ ಎಲ್ಲಕಡೆ ಇಡೀ ಸಾಮ್ರಾಜ್ಯದ ಸುಪ್ರಸಿದ್ಧ ಸರ್ದಾರರೆಲ್ಲ ಅವನ ಜೊತೆಯಲ್ಲಿ ಹೊರಟರು. ನದಿಗಳ ಆಳದಲ್ಲಿಯೂ ಸಹ ಶಾಹನ ಸೈನ್ಯ ಮುಂದೆ ಸಾಗಿತು, ನದಿಯ ನೀರಿನಲ್ಲಿ ಆನೆಗಳು ಹೋಗುತ್ತಿದ್ದರೇ ಅವು ಆನೆಗಳ ಅಲೆಗಳ ಹಾಗೆ ಕಾಣುತಿದ್ದವು. ಬಾದಶಾಹನ ಜೊತೆಯಲ್ಲಿ ಯಾರೂ ಸಹ ಭಿನ್ನಾಭಿಪ್ರಾಯ ಪಡುವರು ಇರಲಿಲ್ಲ, ಎಲ್ಲರೂ

ಪರಸ್ಪರ ಹೊಂದಾಣಿಕೆಯಿಂದ ಇದ್ದರು. ವಿಶೇಷವಾಗಿ ಜೌಹರ್ ಸಲಾಬತ್ ಖಾನ್ ಇವನು ಶಾಹಿ ಸೈನ್ಯದ ನೇತೃತ್ವ ವಹಿಸಿದ್ದಾಗ ಈ ಅದೃಷ್ಟಶಾಲಿ ಜನಗಳಲ್ಲಿ ಒಂದು ಹೊಸ ಹರ್ಷೋಲ್ಲಾಸ ಹುಟ್ಟಿತು. ಮೆಲ್ಲ ಮೆಲ್ಲನೇ ಅದು ದುರ್ಮಾರ್ಗ ಹಿಡಿಯಲಾರಂಭಿಸಿತು. ಶಾಹ್ ಆದಿಲ್ ಎಲ್ಲಿವರಿಗೆ ಕೃಷ್ಣದಲ್ಲಿ ಈ ವೈಭವದಿಂದ ಇಳಿಯಲಿಲ್ಲವೋ. ಸಲಾಬತಿನ ಮೇಲೆ ಮೊದಲಿಗೆ ಭೀತಿ/ಕ್ರೋಧ ಉಂಟಾಯಿತು ವಿಧೇಯತೆಯಿಂದ ಆಜ್ಞಾಪಾಲನೆ ಕಡ್ಡಾಯವಾಯಿತು. ಶಾಹನು ನದಿ ಮೇಲೆ ಇಳಿಯುತ್ತಿದ್ದ ಹಾಗೆ ನಿಸ್ಸಂದೇಹವಾಗಿ ಸಹಸ್ರಾರರ ಮೇಲೆ ಬುದ್ಧೀಯವರ ಭೀತಿಉಂಟಾಯಿತು, ಶಹನ್ಷಾಹರವರು ಎಲ್ಲಿಯವರೆಗೆ ನೀಡುವುದಿಲ್ಲವೋ, ತಪ್ಪು ಆಗುವವರೆಗೂ ಅದನ್ನು ತಪ್ಪು ಎಂದು ಭಾವಿಸುವುದಿಲ್ಲವೋ. ಬಾದಶಾಹರ ಹೃದಯ ನಿರ್ಮಲವಾಗಿತ್ತು. ಅವರು ಯಾರ ವಿರುದ್ಧವೂ ತಪ್ಪುದಾರಿ ಹಿಡಿಯುತ್ತಿರಲಿಲ್ಲ. ಅದಾಗ್ಯೂ ಅವನ ತಪ್ಪನ್ನು ಕ್ಷಮಿಸಿ ಮತ್ತೆ ಗೌರವಿಸಿದರು. ಇಲ್ಲಿಂದ ಮಲೆನಾಡಿನ ಮೇಲೆ ಅತಿವೇಗವಾಗಿ ಆಕ್ರಮಿಸಿ ಅವನ ಮೇಲೆ ಈ ರೀತಿಯಗಂಟು/ಸಂದು(ಕಷ್ಟ) ನಿಲ್ಲಿಸಿದರು, ನಂತರ ಅವರು ಹೇಳಿದರು ಅವನ ಸೈನ್ಯದ ಏನಾದರು ಸುಳಿ ಸಿಕ್ಕಿದಿಯಾ? ಇಲ್ಲಿಂದ ಬಾದಶಾಹರು ಮುಂದೆ ಸಾಗಿದರೆ ಎಲ್ಲಿ ದಾರಿ ಸಿಗುತ್ತದೆ ಶೀಘ್ರವಾಗಿ ಹೊರಡಿ ಈಗ ನದಿಗೂ ಸಹ ಲಜ್ಜೆ ಬರಲಿದೆ. ಸೈನ್ಯದ ಪಶುಗಳಿಗೆ ಹುಲ್ಲು ಸಿಗುವವರೆಗೆ ಕಾಡಿನ ಎಲ್ಲ ಮರಗಳು ನಷ್ಟವಾಗುವುದು. ಆದ್ದರಿಂದ ಸೈನ್ಯವನ್ನು ಎರಡು ಭಾಗ ಮಾಡಿದರೆ ಉತ್ತಮ. ಎರಡು ನದಿಗಳು ಕಾಣಿಸಿ ಎರಡು ಅಲೆಗಳು ಇರುವುದು. ಬಾದಶಾಹರು ಹೀಗೆ ವಿಚಾರ ವಿನಮಯ ನಡೆಸಿ ಸಲಾಬತ್‌ಗೆ ಮತ್ತೆ ಸೂಬೆದಾರನನ್ನಾಗಿ ಮಾಡಿದರು. ಒಂದು ಕಡೆ ಬಾದಶಾಹರು ಈ ದಾರಿ ಹುಡುಕಿದರು, ಮತ್ತೊಂದು ಕಡೆಯಿಂದ ತನ್ನ ಜೊತೆಯಲ್ಲಿ ಒಂದು ಪ್ರಬಲ ಸೈನ್ಯ ತೆಗೆದುಕೊಂಡು ಹೊರಟರು. ಈ ವ್ಯವಸ್ಥೆಯಿಂದ ಸೀತಬಂದ್‌ವರಿಗೂ ಕೋಲಾಹಲ ಉಂಟಾಯಿತು ಸಮುದ್ರದಲ್ಲಿ ಎಷ್ಟೊಂದು ಗದ್ದಲ ಉಂಟಾಯಿತೆಂದರೆ ಇಡೀ ಲಂಕಾ ಕಂಪಿಸಿತು. ಸೈನ್ಯ ಬರುತ್ತಿದೆ ಎಂದು ತಿಳಿದರೆ ಎಲ್ಲ ಕೆಲಸವೂ ಅಪೂರ್ಣವಾಗವುದು ನದಿಗಳ ನೀರು ಸಹ ಸಾಕಾಗುವುದಿಲ್ಲ. ನೀರಿನ ಬದಲಾಗಿ ರಾಜಮಾರ್ಗದ ಮೇಲೆ ಹೋಗೋಣ ಎಲ್ಲಿ ನೀರು ಅಧಿಕವಾಗಿದೆಯೋ ಅಲ್ಲಿ ಗುದ್ದುವುದು. ಬಾದಶಾಹರು ತನ್ನ ಸೈನ್ಯದೊಡನೆ ಇಳಿದಾಗಲೂ ದೇವರ ದಯೆಯೂ ಸಹ ಅವರ ಸಹಾಯ ಮಾಡಿತು. ಅಲ್ಲಿಂದ ಮುಂದೆ ಹೊರಡಲು ಸಂಕಲ್ಪ ಮಾಡಿದಾಗ ಮಾರ್ಗದರ್ಶಿಗಳು ದಾರಿ ಗುರುತಿಸಿಕೊಂಡರು. ಈ ದಾರಿ ತೋರಗಳ್ ಮಾರ್ಗವಾಗಿ ಹೋಗುತ್ತದೆ ಎಂದರು. ಈ ಕಾಡು ದಾಟಬೇಕು, ನೀರು ಹಾಗೂ ನದಿಯು ಸಹ ಬಿಡಲು ಸಾಧ್ಯವಿಲ್ಲ ಏಕೆಂದರೆ ಈ ನದಿಗೆನೇ ಹೆದ್ದಾರಿಯನ್ನಾಗಿ ಮಾಡಿಕೊಳ್ಳಬೇಕು. ಶಹನ್ಷಾಹರು ಈ ಮಾತನ್ನು ಕೇಳಿ ಆ ಕೋಟೆಯನ್ನು ಸಹ ತೆಗೆದುಕೊಂಡು ಹೋಗಬೇಕು. ಆದರೆ ಕಷ್ಟವೆಂದರೆ ತೋರಗಲ್ ನದಿ ಬದಿಯಲ್ಲಿತ್ತು ಅದು ಸಹ ಶಾಹರ ಕೋಟೆಗಳಲ್ಲಿ

ಪ್ರಸಿದ್ಧವಾದ ಕೋಟೆಯಾಗಿತ್ತು. ಕೋಟೆಯ ಬೆಟ್ಟಗಳಲ್ಲಿ ಜಮೀನು ಎಷ್ಟು ಎತ್ತರವಾಗಿತ್ತೆಂದರೆ ಅದು ಆಕಾಶದೊಡನೆ ಮಾತನಾಡುತ್ತಿತ್ತು. ಒಂದು ಕಡೆ ಸುಭದ್ರ ಕೋಟೆ ಮತ್ತು ದೃಢ ಗೋಪುರಗಳಿದ್ದರೆ ಮತ್ತೊಂದು ಕಡೆ ನದಿ ಕಂದಕದಂತೆ ಅದರ ರಕ್ಷಣೆ ಮಾಡುತ್ತಿತ್ತು. ಪಂಕ್ತಿಗಳು ಮಾಡಿಕೊಂಡು ಹೋಗಲು ಮುಂದೆ ಮೈದಾನ ಇರಲಿಲ್ಲ, ಅಲ್ಲಿ ಸುರಂಗ ಹಾಗೂ ಬೆಟ್ಟಗಳಿದ್ದವು. ಹೆಜ್ಜೆ ಹೆಜ್ಜೆಗೂ ಕಷ್ಟಗಳು ನಿಂತಿದ್ದವು, ಏನಾದರು ಹೆಜ್ಜೆ ಜಾರಿ ಬಿದ್ದರೇ ಬೀಳುವನಿಗೆ ಆಕಾಶವೂ ಕಾಣುತ್ತಿರಲಿಲ್ಲ. ಪ್ರತಿಯೊಂದು ಬಳ್ಳಿ ಗಲ್ಲು ಮಾಡಿಟ್ಟುಕೊಂಡಿದೆ, ಹಾಗೂ ಪ್ರತಿಯೊಂದು ವೃಕ್ಷ ದರೋಡೆಕೋರನನ್ನಾಗಿ ಇಕ್ಕಟ್ಟಲ್ಲಿ ಸಿಕ್ಕಿಸಬಹುದು. ಆ ಸ್ಥಳದಲ್ಲಿ ದೇವಚರರಂತೂ ಹೋಗಲು ಸಾಧ್ಯವಿಲ್ಲ, ಅದು ಸೈತಾನಗಳನ್ನು ಅಡಗಿಸಿಕೊಂಡು ಇರುವಂತಹ ಜಾಗ. ನಿತ್ಯವೂ ಆ ಜಾಗದಲ್ಲಿ ಒಬ್ಬ ನೀಚ ಗುಲಾಮ ಇರುತ್ತಿದ್ದ. ಮೂರ್ಖ, ಹೇಡಿ, ಅಧಮ ಮೊದಲಿಂದಲೂ ದ್ರೋಹಿ ಪಾಪಿ ಸದಾ ಸತ್ತ ಪ್ರಾಣಿ ತಿನ್ನುವ ಕಾಗೆ ಹಾಗೆ ಜೀವ ಸಾಗಿಸುತ್ತಿದ್ದ. ಅವನಲ್ಲಿ ಮನುಷತ್ವ ಎಂಬುವುದೇ ಇರಲಿಲ್ಲ. ಸದಾ ಮೋಸ ಮಾಡುವುದೇ ಅವನ ಕೆಲಸವಾಗಿತ್ತು. ಅದೇ ಜಾಗದಲ್ಲಿ ಎಂದೋ ಅವನು ಒಂದು ಅಸಭ್ಯವಾದ ಕೆಲಸ ಮಾಡಿದ್ದ. ಧಣಿಗಳು ಬರುತಿದ್ದಾರೆಂದು ತಿಳಿದಾಗ ಅವನು ಮಾಡಿದ ಪಾಪ ಅದು ದೊಡ್ಡದೇ ಇರಲಿ ಅಥವ ಚಿಕ್ಕದೇ ಇರಲಿ ಅದು ಇದ್ದಿಕ್ಕಿದ್ದ ಹಾಗೆ ಪ್ರಕಟವಾಗುತ್ತದೆ, ನನ್ನ ವಿಷಯ ಏನು ತಿಳಿಯುವುದು ಬೇಡ. ಮೊದಲಿಗೆ ಅವರನ್ನು ಇಲ್ಲಿಗೆ ಬರಲು ಬಿಡಬಾರದು, ಮತ್ತೆ ಆ ದಾರಿಯಲ್ಲೇ ಸೈನ್ಯವನ್ನು ತೆಗೆದು ಕೊಂಡು ಹೋಗದೇ ರೀತಿಯಲ್ಲಿ ಮಾಡಬೇಕು. ಹೀಗೆ ಕೆಟ್ಟದ್ದನ್ನು ಯೋಚಿಸಿ ಸೈನ್ಯ ಜೋಡಿಸಲಾರಂಭಿಸಿದ. ಫಾಖಿರವರಿಗೆ ಈ ಮಾತು ತಿಳಿದ ತಕ್ಷಣ ಅವರು ಕ್ರೋಧದಲ್ಲಿ ಬಂದು ಅವನ ಮೇಲೆ ಇಡೀ ಸೈನ್ಯದ ಬೇಲಿ ಹಾಕಿ ಎಂದರು. ಆದರೇ ಮಾತು ಮುಂದಾಗವರೆದು ಅವನ ತಲೆ ಮೇಲೆ ಮತ್ತೊಂದು ಕಷ್ಟ ಬಂದಿತು. ಕುಮ್ಮಕ್ಕಿಗಾಗಿ ಅವನು ತಯಾರಾದಾಗ ಅವನು ತನ್ನ ಹೆಸರು ತನ್ನ ಮರ್ಯಾದೆ ಮನೆ ಎಲ್ಲವನ್ನು ಮುಳುಗಿಸಿದ. ಮೆಲ್ಲನೇ ಬರುವವರೆಗೂ ಈ ಕೆಲಸಗಳನ್ನು ಬಿಟ್ಟು ಕೆಲಸದ ಸಹಾಯದಿಂದ ಹತ್ಯಾಕಾಂಡ ಪ್ರಾರಂಭವಾಯಿತು. (೯೩೯–೯೮೨)

ಈ ಕಥೆ ಅಂದರೆ ಜೌಹರ್, ಶಾಹನ ವಿದ್ರೋಹಿಸಿದ. ಈ ದೇಶ ಗೆಲ್ಲುವ ಸಲಹೆಯನ್ನು ಶಾಹನಿಗೆ ಅವನೇ ನೀಡಿದ್ದ.

ನೌಕರನಾಗಿರುವನು ಸಮಯ ಸಾಧಿಸಿ ತನ್ನ ಒಡೆಯನಿಗೆ ಮೋಸ ಮಾಡಿದ. ಆದರೆ ಶೀಘ್ರವೇ ಅವನಿಗೆ ಎಂತಹ ಶಿಕ್ಷೆಯಾಯಿತೆಂದರೆ ಅವನು ಮಣ್ಣು ಮುಕ್ಕಿದ. ಅವನ ಕತ್ತಿನಿಂದ ವಿಧೇಯತನದ ಸಂದು ಬಿಡದೇ ಇರುವವ ಎಲ್ಲಾದರು ಸ್ವಲ್ಪ ತಪ್ಪಾದರೂ ಸಾಹೇಬರಿಗೆ ಉಪದೇಶಿಸುತ್ತಿದ್ದವನು ಅವನಿಂದಲೇ ದೊಡ್ಡ ಅಪರಾಧ ಏನಾಯಿತೆಂದರೆ ಅವನೊಬ್ಬ ಗುಲಾಮನಾಗಿದ್ದವ ಆದರೇ ತನ್ನನ್ನೇ ಭಗವಂತ

ಎಂದು ತಿಳಿದ. ಇದು ತುಂಬ ಸೂಕ್ಷ್ಮದ ಮಾತು. ಹೇಗೆಂದರೆ ಕೂದಲಿಂದಲೂ ಸೂಕ್ಷ್ಮವಾದ ಮತ್ತು ಕತ್ತಿಯ ಅಲುಗಿಗಿಂತಲೂ ತೀಕ್ಷ್ಣವಾದ ಸೇತುವೆ ಮೇಲೆ ಜೋಪಾನವಾಗಿ ನಡೆಯಬೇಕಾಗುತ್ತದೆ, ನಡೆಯಲ್ಲಿ ಏನಾದರೂ ಸ್ವಲ್ಪ ತಪ್ಪಾಗಿ ಒಂದು ಹೆಜ್ಜೆಯೂ ತತ್ತರಿಸಿದರೆ ಸದ್ಯೆವವಾಗಿ ನರಕದಲ್ಲಿ ಶಪಿತನಾಗಿ ಬಿದ್ದು ಹೋಗುವನು. ಬಾದಶಾಹರು ಕೋಟೆಮೇಲೆ ಆಕ್ರಮಿಸಲು ಇವನೇ ಪ್ರೇರಸಿದ್ದ ಹಾಗೂ ತೊರ್ಗಲ್ ಮೇಲೆ ಆಕ್ರಮಣ ಇವನ ಕಾರಣದಿಂದಲೇ ಆಗಿದ್ದು ಎಂದು ಹೇಳಲಾಗುತ್ತದೆ. ಬೆಟ್ಟಗಳ ಮೇಲೆ ಕುದುರೆಗಳ ನಡಿಗೆಯ ದೃಶ್ಯ ಹೇಗೆ ಕಾಣತೊಡಗಿತೆಂದರೆ ಹುತ್ತದಿಂದ ಡಿಕೋರಿಹುಳುಗಳು ಉಕ್ಕುವ ಹಾಗೆ ಕಾಣುತ್ತಿದ್ದವು. ಧ್ವಜಗಳು ಸುರಂಗದಿಂದ ಎಲೆಗಳ ಹಾಗೆ ಹೊರಬಂದವು ವಿವಿಧ ರೀತಿಯ ಛತ್ರಿಗಳು ಹೂಗಳ ಹಾಗೆ ಅರಳಿದವು. ಅಧಿಕ ಪರ್ವತಗಳಿಂದ ಭೂಮಿ ಕಂಪಿಸಿತು, ಸಣ್ಣ ಸಣ್ಣ ಬೆಟ್ಟಗಳು ಲಂಗರುಗಳ ಹಾಗೆ ಬೀಳಲಾರಂಭಿಸಿದವು. ನಗಾರಿಗಳಿಂದ ಮೋಡಗಳಂತೆ ಸದ್ದು ಬರಲಾರಂಭಿಸಿತು. ಇದರ ಉತ್ತರವಾಗಿ ಆಕಾಶ ಸದ್ದು ಮಾಡುತ್ತ ಕೆಳಗೆ ಬಂದಿತು. ಕೋಟೆಯ ಸುತ್ತಲಿನಿಂದ ಆಕ್ರಮಣ ನಡೆದಾಗ ಅದರ ವೈಭವ ಭ್ರಮೆಯಲ್ಲಿ ಮುಳುಗುಹೋಯಿತು. ಬದಿಗಳಲ್ಲಿ ಎಲ್ಲೆಲ್ಲೆಯೂ ರಕ್ತದ ಹೊಂಡಗಳು ನಿಂತವು. ಭೂಮಿಮೇಲಿನ ಎಲ್ಲ ಪರ್ವತಗಳೆಲ್ಲ ಕೆಂಪುರತ್ನ ಹಾಗೂ ಮಾಣಿಕ್ಯವಾದವು. ಎಲ್ಲಿಯವರೆಗೆ ದೃಷ್ಟಿಹೋಗಲೂ ಸಾಧ್ಯವಿಲ್ಲವೋ ಅಲ್ಲಿಯವರಿಗೂ ಆಕ್ರಮಣ ನಡೆಸಲಾಯಿತು ಅವರು ಜಿಗಿದರೆ ಧೂಳು ಎದ್ದೇಳುತ್ತಿತ್ತು. ತಿರುಗುವ ಮರಗಳ ತುಂಡುಗಳನ್ನು ಬಂದ್ ಮಾಡಿ ಅನೇಕ ಎತ್ತರವಾದ ಕೋಟೆ/ಬತೇರಿಗಳನ್ನು ನಿರ್ಮಿಸಿ ಇವುಗಳನ್ನು ಪಿರಂಗಿಗಳಿಂದ ಅಲಂಕರಿಸಿದರು, ಈ ಫಿರಂಗಿಗಳು ಮೋಡದ ನೀರನ್ನು ಹಾರಿಸಿತು. ಗಗನ ಈ ಕೋಟೆಗಳಿಂದ ವೈಭವರಹಿತ ಕಾಣತೊಡಗಿತು. ಅದರ ಮಡಿಲಲ್ಲಿ ಪರ್ವತಗಳು ಎಳೆ ಕೂಸು ಹಾಗೆ ಕಾಣಿಸುತ್ತಿತ್ತು. ಇಡೀ ಭೂಮಿ ಸುರಂಗಗಳ ನಿರ್ಮಾಣದಿಂದ ಟೊಳ್ಳಾಯಿತು. ಕಲ್ಲಿಗೂ ಸಹ ಹುಳತಿಂದುದರಿಂದ ಟೊಳ್ಳಾಗಿದ್ದವು. ಕೋಟೆ ಮೇಲೆ ಬೆಂಕಿಯ ಮೋಡಗಳು ಆವರಿಸಿದ್ದವು ಜಡಿಮಳೆಯಿಂದಾಗಿ ಮಳೆಗಾಲದ ಹಾಗೆ ಕಾಣತೊಡಗಿತು. ಗಾಳಿಯಲ್ಲಿ ಬೆಂಕಿ ತುಂಬಿಕೊಂಡಿದ್ದರಿಂದ ಅಗ್ನಿಆರಾಧಕ ಆರಾಧನಾಲಯವಾಗಿತ್ತು ಸಮುದ್ರಕ್ಕೆ ಒಂದು ಹೊಸ ಮನೆ ನಿರ್ಮಾಣವಾಯಿತು. ಒಮ್ಮೆ ಗಾಳಿ ಇಣಿಕಿ ನೋಡಿದರೆ ಜನರೆಲ್ಲ ಯುದ್ಧದಲ್ಲಿ ತೊಡಗಿದ್ದಾರೆ ಅನೇಕ ಪೇದೆಗಳಿಗೆ ಶಿಖರಗಳೇ ಅವರ ಪಾಲಿಗೆ ಗೋರಿಗಳಾಗಿವೆ. ಕಲ್ಲೆಸೆಯುವ ಸಾಧನೆಯ ಏಟುಗಳಿಂದ ಬುರ್ಜಿಗಳು ಕೋಟೆ ಎಲ್ಲವೂ ನುಚ್ಚುನೂರಾಗಿ ಅಸ್ತಿಪಂಜರಗಳಾಗಿವೆ. ಕೋಟೆಯ ಶಿಖರಗಳೆಲ್ಲ ಖಂದಕಗಳಲ್ಲಿ ಬಿದ್ದು ತುಂಬಿದವು ಹೊರಗಡೆ ಕಲ್ಲೆಲ್ಲವೂ ನೆಲಸಮವಾದವು. ಯಾರಾದರೂ ಯುದ್ಧ ಮಾಡುತ್ತ ಅತ್ತಕಡೆ ಹೋದರೆ ಅವನು ತಟ್ಟನೆ ಹಾರುವನು ಹೀಗೆ ಅನೇಕ ಬುರ್ಜಿಗಳು ಮುರಿದು ಹೋಗಿ ಮಣ್ಣಿನ ರಾಶಿಗಳಾದವು. ಕೋಟೆಯೊಳಗಿನವರು ಹೀಗೆ ನಿಸ್ಸಹಾಯಕರಾದರು, ಸೈತಾನರೆಲ್ಲರೂ ಸದ್ಯೆವವಾಗಿ ನರಕದಲ್ಲಿ ಬಿದ್ದಿರುವವರ ಹಾಗೆ

ಕಾಣತೊಡಗಿದರು. ಅವರ ನಿಯತ್ತಿನ ಪ್ರಕಾರ ಅವರ ದಾರಿದ್ರವು ಹಿಂಬಾಲಿಸಿತು. ಅನೇಕ ದಿನಗಳಿಂದ ಉಪವಾಸ, ಹೊಟ್ಟೆಗಿಲ್ಲದಿರುವದರಿಂದ ಅವರು ನಿಸ್ಸಹಾಯಕರಾಗಿ ಡಬಗಳ್ಳಿ ತಿಂದರು. ಕೋಟೆಯೊಳಗಿನವರಿಗೆ ಈ ಗತಿಯಾಗಿದೆಯೆಂದು ಆ ದುರಾತ್ಮ ಜೌಹರಿನಿಗೆ ಸುದ್ದಿ ಮುಟ್ಟಿದಾಗ ಅವನು ಮಾನವತೆಯನ್ನು ಮರೆತು ತನ್ನ ಜೊತೆಯಲ್ಲಿದ್ದವರಿಂದ ಸಲಹೆ ಸೂಚನೆ ಕೇಳಲಾರಂಭಿಸಿದ. ನಿಜಾಂಶವೆಂದರೆ ನಾನು ಬಾದಶಾಹನ ವಿದ್ರೋಹಿ ಅವರ ಆಜ್ಞೆಗಳನ್ನು ಉಲ್ಲಂಘಿಸಿದ್ದೇನೆ. ಯಾವ ಮಾತುಗಳಿಂದ ನಿಷೇಧಿಸಲಾಗಿತ್ತೋ ಅಲ್ಲಿಂದಲೇ ಪ್ರಾರಂಭಿಸಿದೆ, ಮನಸಲ್ಲೇ ಅವರಿಗೆ ತುಂಬ ಕೇಡನ್ನು ಮಾಡ ಬೇಕೆಂಬ ಯೋಜನೆಗಳನ್ನು ನಿರ್ಮಿಸುತ್ತಿದ್ದೆ. ನನ್ನಮನಸಲ್ಲಿ ದುರುದ್ದೇಶಗಳುಂಟಾಗಿ ಕೆಟ್ಟದನ್ನು ಬಯಸಿ ಕೊನೆದಿನದವರಿಗೂ ಶಪಿತ ಅನ್ನಿಸಿಕೊಂಡೆ. ಬಾಯಿಯಲ್ಲಿದ್ದ ಸಕ್ಕರೆಯನ್ನು ತೆಗೆದಿಟ್ಟೆ, ನಾನು ಯಾರು ಮತ್ತು ಶಾಹರು ಯಾರು ಅನ್ನೋದನ್ನು ಸಹ ಮರೆತೆ, ಅವನಿಗೆ ಇಂತಹ ದೊಡ್ಡ ಹುದ್ದೆಯನ್ನು ಯಾರು ಕೊಟ್ಟಿರುವನು, ಯಾರು ಕೊಟ್ಟಿರುವನೋ ಅವನೇ ಅದನ್ನು ಕಿತ್ತುಕೊಳ್ಳುತ್ತಾನೆಂಬ ಮಾತನ್ನು ಅವನು ಗಮನಸಲಿಲ್ಲ. ಒಂದು ಸಲ ಅವನು ಇಡೀ ಸಾಮ್ರಾಜ್ಯದಲ್ಲಿ ಹಟಾತ್ತನೆ ಆಜ್ಞೆಯನ್ನು ಹೊರಡಿಸಿದ, ಇಡೀ ಸುಭೆಗೆ ಅವನು ಮೋಸಮಾಡಿದ. ತನ್ನಂತಹ ಒಂದೇ ಮನಸುಳ್ಳವ ವಜೀರಗಳೆಲ್ಲರನ್ನು ಜೊತೆಮಾಡಿಕೊಂಡು ಕೋಟೆಯನ್ನು ಬಿಟ್ಟು ಹೊರಬಂದರು. ಎಷ್ಟೊಂದು ವಿದ್ರೋಹಿಗಳಿದ್ದರೋ ಅವರೆಲ್ಲ ಒಟ್ಟಗೂಡಿ ಇಡೀ ದೇಶದಲ್ಲಿ ಗಲಭೆ ಎಳಿಸಿದರು. ಪ್ರಳಯದ ಚಿನ್ಹೆಗಳು ಕಾಣತೊಡಗಿದವು ದಜ್ಜಾಲು ಹುಟ್ಟಿದ್ದಾನೆಂದು ತಿಳಿಯುತ್ತಿತ್ತು, ಎಲ್ಲ ಜನರ ವಿಶ್ವಾಸ ಕೆಡಲಾರಂಭಿಸಿತು ಅವರೆಲ್ಲರೂ ಉಡಾಳತನ ಮಾಡಲಾರಂಭಿಸಿದರು. ಕೆಲವರು ಮಾತ್ರ ತನ್ನ ಶ್ರದ್ಧೆಯನ್ನು ಕಾಪಾಡಿಕೊಂಡಿದ್ದರು ಅವರೇ ವಿಧೇಯತನದಿಂದ ಶಾಹರ ಜೊತೆಯಲ್ಲಿದ್ದರು. ಈ ರೀತಿಯಾಗಿ ಆ ಶತ್ರು ಯೋಜನೆ ಮಾಡಿ ಶಾಹರ ಮೇಲೆ ಆಕ್ರಮಿಸಲು ಹೊರಟ. ಶಹನ್ಷಾಹರಿಗೆ ಈ ಸುದ್ದಿ ತಿಳಿದಾಗ ಅವರು ಬಲು ವೀರಾವೇಶದಿಂದ ತನ್ನ ಆಸ್ಥಾನಿಕರ ಸಭೆ ಕರೆದರು, ಯಾರು ಹಿತೈಷಿಗಳಾಗಿದ್ದರೋ ಯಾರು ನಂಬಿಕಸ್ತರಿದ್ದರು ಎಲ್ಲರೂ ಒಟ್ಟಿಗೂಡಿ ವಿಚಾರ ವಿನಮಯ ನಡೆಸಿದರು. ಆಗ ಶಾಹರು ನಾನು ಮುಂದಾಳಿಕೆ ವಹಿಸುತ್ತೇನೆ ಆ ನೀಚ ಗುಲಾಮನಿಗೆ ಇಲ್ಲಿಯವರೆಗೆ ಬರಲು ಅವಕಾಶ ನೀಡುವುದಿಲ್ಲ ಹಟಾತ್ತನೇ ಇಡೀ ಸೈನ್ಯವನ್ನು ತೆಗೆದುಕೊಂಡು ಹೊರಡುತ್ತೇನೆ ಅವನು ನಮ್ಮನ್ನು ಎದಿರಿಸಲು ಮೈದಾನದಲ್ಲಿ ಬಂದರೇ ಈ ಪ್ರಪಂಚದಲ್ಲಿ ಪ್ರಳಯದ ಸದ್ದೆಬ್ಬಿಸಿ ಸೈನ್ಯದ ವರ್ತುಲ ಮಾಡಿ ಅದರಲ್ಲೇ ಅವನ ಗೋರಿ ಮಾಡುವೆ ಎಂದರು, ಶಾಹ್ ಘಾಝಿಯವರು ಏನು ಹೇಳಿದ್ದರೋ ಅದನ್ನೇ ಮಾಡಿ ತೋರಿಸಿದರು. ಎಲ್ಲಿಯವರೆಗೆ ಕೊಡಬೇಕಾಗಿತ್ತೋ ಕೊಟ್ಟರು ಮತ್ತೆ ಅದನ್ನು ಹಿಂತೆಗೆದುಕೊಂಡರು. ಆಗ ನಾನು ಆ ಕೂಡಲೇ ಈ ಖಸೀದ ಬರೆದು ಈ ಪಂಕ್ತಿಗಳನ್ನು ರಚಿಸಿದೆ. (೯೯೩-೧೧೧೦)

ಬಾದಶಾಹ್ ಘಾಝಿರವರ ಜಯ ಹಾಗೂ ಜೌಹರ್ ಸಲಾಬತ್ ಖಾನನ ಪರಾಜಯ

ಅಲಿ ಆದಿಲ್ ಶಾಹ್ ಘಾಝಿ, ಶಹಿನ್ಷಾಹ್ ಅಬುಲ್ ಮುಝಫ್ಫರ್‌ರವರಿಗೆ ಭಗವಂತನು ಸಿಕಂದರ್‌ಗೆ ಕೊಟ್ಟಿರುವಂತಹ ಬಲ ನೀಡಿದ್ದ. ಯಾವ ಆಡಳಿತಗಾರನು ತಲೆ ಮೇಲಿರುವ ಮೊಹರನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ, ಸಾಲುಗಳನ್ನು ಹಲಗೆಗಳಂತೆ ಜೋಡಿಸಿ ಅದರ ಮೇಲೆ ತನ್ನ ದರ್ಬಾರನ್ನು ರಚಿಸಿ ಎಲ್ಲರಿಗೂ ಆಶ್ಚರ್ಯದಲ್ಲಿ ಮುಳುಗಿಸಿದ. ಶಹಬಾಷ್ ಬುಲ್ಭತ್ತ ಘಾಝಿ ನಿನಗೆ ಅಭಿನಂದನೆಗಳು ಏಕೆಂದರೆ ನಿನ್ನ ಕುದುರೆಗಳು ಜಯಿಸಲು ಹೊರಟರೆ ದೇವಚರರೂ ಸಹ ತನ್ನ ದೊಡ್ಡರೆಕ್ಕೆಗಳನ್ನು ಜೋಡಿಸಿ ಹುಮಾ (ಶುಭಸೂಚಕ ಪಕ್ಷಿ) ಮಾಡುವರು. ಯಾರು ಶಾಹನ ಸೇವೆಯಲ್ಲಿ ತೊಡುಗುವನು ಅವನು ಎರಡು ಲೋಕಗಳಲ್ಲಿ ಸ್ವತಂತ್ರನು, ಆ ಒಡೆಯನನ್ನು ಬಿಟ್ಟವನು, ಜನ್ಮ ಜನ್ಮಕ್ಕೂ ಕೈದಿಯಾಗಿರುವನು. ಒಬ್ಬ ಕುಲಗೇಡಿ ಗುಣಹೀನ ಜೌಹರ್ ಆಗ ಒಂದು ಮೂಲೆಯಲ್ಲಿ ಬಿದ್ದಿದ್ದ, ಸಾಮ್ರಾಜ್ಯದ ಅನೇಕ ದೊಡ್ಡ ದೊಡ್ಡ ಅಧಿಕಾರಿಗಳನ್ನೆಲ್ಲ ತಾನು ಬಲು ನಮ್ರತೆಯಿಂದ ತನ್ನಕಡೆ ಸೇರಿಸಿಕೊಂಡ, ವಿಚಿತ್ರವೆಂದರೆ ಅವನಂತೂ ಸಾಮರ್ಥ್ಯವಿಲ್ಲದವನು ಆದರೂ ಮದೋನ್ಮತ್ತ ವ್ಯಕ್ತ ಪಡಿಸಿದ, ಗಗನ ಆ ಅಭಾಗಿಗಳ ತುಟಿಗಳಿಂದ ಮದ್ಯದ ಲೋಟಗಳನ್ನು ಕಸಿದುಕೊಂಡ. ಆ ಭಿಕ್ಷುಕನಿಗೆ ಯಾವಾಗ ಐಶ್ವರ್ಯದ ದುರಾಸೆ ಹುಟ್ಟಿತೋ, ಇರುವೆಗೆ ರೆಕ್ಕೆ ಹೊಡಿದರೆ ಅದು ಹೇಗೆ ಕೆಟ್ಟಕಾಲ ನೋಡುವ ಹಾಗಾಯಿತೊ ಹಾಗೆ ಅವನು ಸ್ವಲ್ಪ ಶಕ್ತಿಶಾಲಿಯಾದ, ಕೊನೆಗೂ ಅವನು ಪಿತೂರಿಯ ಬುನಾದಿ ಇಟ್ಟ ಪ್ರತಿಯಬ್ಬನೂ ಯಾವುದೇ ವಿಧಿವಿಧಾನವಿಲ್ಲದೇ ಕಾರ್ಯಚರಣೆ ಮಾಡಲಾರಂಭಿಸಿದ. ಶಾಹರು ಈ ವಿದ್ರೋಹವನ್ನು ಕೊನೆಗೊಳಿಸಬೇಕೆಂದಾಗ ಗುಪ್ತವಾಗಿ ಆ ಗದ್ದಲವನ್ನು ಇನ್ನಷ್ಟು ಜೋರಾಗಿ ಹರಡಿಸಲು ಪ್ರಯತ್ನಿಸಿದ. ಹೀಗೆ ಕೆಟ್ಟವರೆಲ್ಲರೂ ಅಡಿಯಿಂದ ಮುಡಿಯವರೆಗೆ ವಿದ್ರೋಹಿಯಾಗಿ ಮುಂದು ಬಂದಾಗ ಶಾಹರು ಸ್ವತಃ ಈ ದುಷ್ಟನಿಗೆ ತುಳಿದು ಹಾಕಬೇಕೆಂಬ ಮನಸ್ಸಿನಿಂದ ಹೊರಟರು. ಆ ಬಂಡುಕೋರನ ಮೇಲೆ ಅವರು ಎಂತಹ ಭಯಂಕರ ಕೈ ಹೊಡೆದರೆಂದರೆ ವಿವೇಕಕ್ಕೆ ಯಾವುದೇ ಸ್ಥಳವೇ ಇಲ್ಲದಂತಾಗಿ ಯಾವುದೇ ಊರಲ್ಲೂ ಅಡಗಲೂ ದಾರಿ ಇಲ್ಲದಂತಾಯಿತು. ಗಗನ ಮಂಗಳಗ್ರಹದಿಂದ ತನ್ನ ಖಡ್ಗವನ್ನು ಎಳೆದು ಆ ಶಪಿತ ನಾಸ್ತಿಕನಿಗೆ ಅಲ್ಲೇ ತನ್ನ ಸನ್ಮುಖದಲ್ಲಿ ನಾಶ ಮಾಡಬೇಕೆಂದಾಗ ವೀರ ಶೂರ ಶಹಿನ್ಷಾಹರು ತನ್ನ ಮಿನುಗುತ್ತಿರುವ ಅಸ್ತ್ರಶಸ್ತ್ರಗಳನ್ನು ಅಲಂಕರಿಸಿ ತನ್ನ ಸೈನ್ಯದ ಸರ್ದಾರರಾಗಿ ಸೈನ್ಯದೊಂದಿಗೆ ಜಯಗಳಿಸಲು ಮುನ್ನಡೆ ಸಾಧಿಸಿದರು. ಇದನ್ನು ನೋಡಿ ಸುಲೈಮಾನರು ಸಿಂಹಾಸನವನ್ನು ಏರಿ ಎಲ್ಲಿ ಹೊರಟಿರುವರೆಂದು ಗಗನ ಹೇಳಿತು, ಇಡೀ ಸೈನ್ಯದಲ್ಲಿ ಎತ್ತರವಾಗಿ ಅಂಬಾರಿಯಲ್ಲಿ ಕುಳಿತಿರುವ ಆ ಠೀವಿವುಳ್ಳವನನ್ನು ನೋಡುತಿದ್ದರು. ನಸುಕು ಹೊಸ ಚಂದ್ರನ

ವರ್ತುಲದಲ್ಲಿ ನಕ್ಷತ್ರಗಳ ಹರಳುಗಳನ್ನು ತುಂಬಿ ಬಿಲ್ಲುಗಾರರಿಗೆ ಆನೆಯ ಕಾಲಿಗೆ ಪಾತೇಲಿ (ಕಾಲಿನ ಆಭರ್ಣ) ಆಗಲೆಂದು ಕಳುಹಿಸಿದರು. ಶಾಹರ ಲಜ್ಜೆಗೆ ಇದು ಯೋಗ್ಯವಾದದ್ದು ಏಕೆಂದರೆ ಅವರಲ್ಲಿ ಹುಲಿ ಮತ್ತು ಚಿರತೆಯ ಭೀಕರ ಗುಣಗಳ ಸಮಾನತೆ ಇದೆ. ಏಕೆಂದರೆ ಅವರು ರಾಹು ಮತ್ತು ಕೇತು ಅಂತಹ ಅಜಗರನ್ನು ಹೊಡೆದು ಇಟ್ಟಿಗೆಗಳಲ್ಲಿ ವಿತರಿಸಿರುವರು. ಮಾರ್ಗದ ನಂದಿಯ ಬಾಲದ ಕಿರಣದಿಂದ ಅದರ ಧ್ವಜವಾಯಿತು. ಅದರ ದಂತಗಳನ್ನು ಮತ್ತಷ್ಟು ಚೂಪಾಗಿ ಮಾಡಲು ಮಂಗಳಗೃಹಕ್ಕೆ ಕಠಾರಿ ನೀಡಿದ ಚಿಂತೆ/ದುಃಖ/ಶೋಕವನ್ನು ಕೈಯಲ್ಲಿ ತೆಗೆದು ಕೊಳ್ಳಲು ಗಗನದಿಂದ ಆಕಾಶಗಂಗೆ ಇಳಿಯಿತು ಆಗ ಯುದ್ಧದಲ್ಲಿ ಧರಿಸುವ ಕವಚಕ್ಕೆ ಸ್ಥಿರವಾದ ನಕ್ಷತ್ರಗಳ ಪ್ರತಿಯೊಂದು ಮೊಳೆಯೂ ಅಂಟಿಕೊಂಡಿತು. ಅದೃಷ್ಟಶಾಲಿ ಚತುರ ಶಾಹನ ದೇಶವನ್ನು ನೋಡಿ ದೇವಚರರು ಅದನ್ನು ಹತ್ತನೆಯ ಆಕಾಶ ಎನ್ನುವರು. ಇದೊಂದು ಬೇರೆ ಸೂರ್ಯ. ಈ ಸೂರ್ಯನ ಮುಖಾಕೃತಿಗೆ ರಾಜ ಕೊಡೆಯು ಇದೆ. ಅದು ಪ್ರವಾದಿ ಮೂಸರವರ ಕೋಲು ಅಜಗರವೆಂದು ಅವರಿಗೆ ತಿಳಿದಿಲ್ಲ ಅದೇನಾದರು ಭೂಮಿ ಮೇಲೆ ಬಿದ್ದಿತು ಎಂದರೆ ಹೆಬ್ಬಾವು ಆಗಿ ತನ್ನ ನಾಲಿಗೆಯಿಂದ ಅನೇಕರನ್ನು ನುಂಗಿ ಭಸ್ಮ ಮಾಡುತ್ತದೆ. ಶಾಹರು ಈ ಗೌರವ ತನ್ನ ಶೌರ್ಯದಿಂದ ಪಡೆದಿರುವರು. ಅವರು ದೊಡ್ಡ ಮೀನಾಗಿ ೧೨ನೇ ಆಕಾಶಕಾಯ(ಬುರುಜು) ಮೀನ ರಾಶಿಯನ್ನು ನೋಡಿದರು. ಹೀಗೆ ಮೇಘ ದಂಬರು ಸಹ ಸೇರಿಸಿ ೯ ಆಕಾಶಗಳನ್ನು ಸಂಪಾದಿಸಿದರು. ಶಾಹನಿಗೆ ಬಲಿಷ್ಟ ಸೈನ್ಯದ ನೇತೃತ್ವ ಶೋಭಿಸುತ್ತದೆ ಅವನ ಸಹಾಯಕ್ಕೆ ಎಡ ಬಲ ತೋಳಗಳಂತೆ ಎರಡು ದಂಡುಗಳಿವೆ. ಇದಲ್ಲದೇ ದೇವರ ಕೃಪೆಯ ನೆರಳು ಶಾಹನ ತಲೆಮೇಲಿರುವ ಛತ್ರಿಯನ್ನು ಆವರಿಸಿದೆ, ಬಾದಶಾನ ನೆರಳನ್ನು ಪ್ರಪಂಚ ಎಲ್ಲ ಕೇಡನ್ನು ಸದ್ಯೆವವಾಗಿ ನಿವಾರಿಸಲು ಕಳುಹಿಸಿರುವನು. ಎದುರಾಳಿ ಬಳಿ ಅಗಣಿತ ಕುದುರೆ ಮತ್ತು ಪೇದೆ ಸೈನ್ಯವಿತ್ತು ಆ ಎಲ್ಲ ಸೈನ್ಯದಿಂದ ಏನೂ ಹೆದರಿಕೆ ಇಲ್ಲದೆ ಚಕ್ರವುಳ್ಳ ತೋಪುಗಳು ಬಾಯಿ ತೆರೆದು ನಿಂತಿದ್ದವು. ಒಂದು ಮೈದಾನದಲ್ಲಿ ಎರಡು ಭಾರೀ ಸೈನ್ಯಗಳ ಸಾಲುಗಳು ಕಾಣತೊಡಗಿತು. ಎರಡು ನದಿಗಳು ರಕ್ತದ ಸರೋವರವನ್ನು ತುಂಬಿಸಲು ಬೆಂಕಿಯನ್ನು ಉಕ್ಕಿಸಿದವು. ಖಡ್ಗದ ಹರಿತ ಹೇಗಿದೆಯೆಂದರೆ ಅದರ ಪ್ರಕಾಶ ಯಾರಿಂದಲೂ ತಡೆಯಲು ಸಾಧ್ಯವಿಲ್ಲ. ಉರಿಯುತ್ತಿರುವ ಬೆಂಕಿಯಲ್ಲಿ ಅವರ ಶರೀರ ಹೋಗಿ ಎಲ್ಲಿ ತಗುಲತ್ತೋ ಎಂದು ಅವರು ಹೆದರುತ್ತಿದ್ದರು. ಅವನು ಬಾದಶಾಹನ ವಿರುದ್ಧ ಯುದ್ಧ ಮಾಡುತ್ತ ಮಾಡುತ್ತ ಯುದ್ಧದಲ್ಲೇ ಹೂತುಹೋಗಲಾರಂಭಿಸಿದ. ಆದರೆ ಮೆರವಣಿಗೆಯಲ್ಲಿ ಹೋಗುತ್ತಿದ್ದ ವರನು ಬಲು ಸಂತೋಷದಿಂದ ವಧುವಿನ ಮನೆಗೆ ಹೊರಟ. ಪತಿಯ ಮೇಲೆ ರತ್ನಗಳನ್ನು ನಿವ್ವಾಳಿಸುವ ಹಾಗೆ ಪ್ರತಿ ಒಂದು ಗುಂಡನ್ನು ತಿಳಿದಿದ್ದ ಆ ಶೂರನಗೆ ಪ್ರತಿಯೊಂದು ಬಾಣವು ಸಿಡಿಮದ್ದುಹಾಗೆ ತಿಳಿಯುತ್ತಿತ್ತು. ಶಹಬಾಷ! ಇವರು ಜಗತ್ತಿನ ಗುರುಗಳಾಗಿದ್ದವರು. ಈ ಕಲೆಯಲ್ಲಿ ಪಾಂಡಿತ್ಯ ಹೊಂದಿದವರು

ಪ್ರತಿಯೊಬ್ಬ ನಾಯಕರಿಗೆ ಶಿಕ್ಷಣ ಕೊಡುತ್ತಿದ್ದವರು. ಯಾರಾದರೂ ಕಾಡಿನಲ್ಲಿ ಹುಲಿಯನ್ನು ಗರ್ಜಿಸುತ್ತ ನೋಡದೇ ಇದ್ದಲ್ಲಿ ಒಂದು ಕ್ಷಣ ಅವರನ್ನು ಸಪ್ಪರನಿಗೆ ಹಾಗೇ ಗರ್ಜಿಸುತ್ತ ನೋಡ ಬಹುದು. ಆನೆಗಳ ಆ ಗುಂಪಿನ ಮೇಲೆ ಈ ಕೋಪಗೊಂಡ ಹುಲಿಗಳ ಸೈನ್ಯ ಆಕ್ರಮಿಸಿದಾಗ ಅವರಲ್ಲಿ ತುಂಬ ಭಯವುಂಟಾಗಿ ಯಾರ ತಲೆ ಬುರುಡೆಯಲ್ಲೂ ಮಿದುಳು ಇಲ್ಲದಂತಾಯಿತು. ದಂಡಿನ ಮೇಲೆ ದಂಡು ಬಿದ್ದು ಸಂಘರ್ಷಿಸುವಾಗ ಖಡ್ಗಗಳಲ್ಲಿದ್ದ ಬೆಂಕಿ ಹೇಗೆ ಉದ್ರೇಕಿಸಿತೆಂದರೆ ಸಾವಿಗೆ ತನ್ನ ದೊಡ್ಡರೆಕ್ಕೆಗಳನ್ನು ಉಳಿಸುಕೊಳ್ಳುವುದು ಸಹ ಕಷ್ಟವಾಯಿತು. ಖಡ್ಗದ ಮೇಣದ ಬತ್ತಿ ಕೊಬ್ಬಿನ ಎಣ್ಣೆಯಿಂದ ಹೇಗೆ ಉರಿಯಿತೆಂದರೆ ಕಾಡಿಗೆಯ ಬೆಟ್ಟದಂತ ಹೊಗೆ ಸೂರ್ಯನಿಗೆ ಹೋಗಿ ಮುಟ್ಟಿ ಅದರ ಪ್ರಜ್ವಲವನ್ನು ಕ್ಷೀಣ ಮಾಡಿತು. ವೀರರ ಖಡ್ಗಗಳನ್ನು ನೋಡಿ ಎಲ್ಲರೂ ದಿಗಿಲುಗೊಂಡರು, ಕುಸುಂಬದ ಬಣ್ಣದಂತೆ ಬರ್ಚಿಗಳ ತುದಿಗೆ ರಕ್ತ ಅಂಟಿತು. ಪ್ರತಿಯೊಂದು ಭಲ್ಲೆಯ ತುದಿಯ ಮೇಲೆ ಬಂಡಾಯಗಾರರ ತಲೆ ಇತ್ತು. ಪ್ರತಿಯೊಂದು ಎದೆ ಮೇಲೆ ಕಠಾರಿಚಲಿಸಿ ಗುಹೆಯಂತೆ ಚರ್ಮತೊಡಿಸಿತು. ಆನೆಗಳ ತಲೆಗಳೆಲ್ಲ ಕೈ ತೊಳೆಯುವ ಪಾತ್ರೆಗಳ ಹಾಗೆ ರಕ್ತದ ಕಪ್ಪೆಚಿಪ್ಪುಗಳಾದವು. ದಂಡಿನ ಮೇಲೆ ಬಣ್ಣ ಎರೆಚಿಸಲು ವಿಚಿತ್ರ ಅಡಿಗಲ್ಲು ಆದವು. ಒಂದೇ ಕ್ಷಣದಲ್ಲಿ ರಕ್ತದ ಕಲೆಗಳಿಂದ ಗಾಳಿ ಧೀಟಿನಂತಾಯಿತು. ಸೂರ್ಯನಿಗೆ ಚಿತ್ರಿಸಲ್ಪಟ್ಟ ಬಟ್ಟೆ ನೀಡಿ ಉದರ ಕೊಟ್ಟು ಅದರ ಮೇಲೆ ಹೂ ಬಳ್ಳಿಗಳನ್ನು ಮಾಡಲು ಹೇಳಿದ. ಆಕಾಶ ಕಮಲ ಹೂವಾಗಿದ್ದು ಅದು ಚರಣದ ಹೂ ಆಯಿತು, ಕೊನೆಗೂ ಆ ರಾತ್ರಿಯ ಉದ್ಯಾನ ನಕ್ಷತ್ರಕ್ಕೆ ತೋಟವನ್ನು ತೋರಿಸಿದರು. ರಕ್ತದಿಂದ ತುಂಬಿದ ಸರೋವರವನ್ನು ನೀರಿನ ಗುಳ್ಳೆಯಂತೆ ಗಗನ ಅಲುಗಾಡಿಸಿದಾಗ ಅದರ ಸೋರಿಕೆ ಪಾತಾಳದ ಪದರಕ್ಕೆ ಹೋಗಿ ಸೇರಿತು. ಎಲ್ಲಕಡೆಯೂ ಜಗಳ ನಡೆಯುತ್ತಿದ್ದರಿಂದ ರಣಭೂಮಿಯಲ್ಲಿ ಒಂಟಿಗನಾದ. ಅಂದರೆ ಯುದ್ಧ ಜೋರಾಗಿ ನಡೆಯುತ್ತಿರುವಾಗ ರಕ್ತ ಕೆಂಪು ಮರದಂತೆ ಪ್ರತಿಯೊಬ್ಬನ ಹೃದಯ ಹರಿಯಲಾರಂಭಿಸಿತು. ಯಾವ ರೀತಿಯಲ್ಲಿ ಶಾಹರು ಸ್ವಸಹಾಯ ಮಾಡಿಕೊಂಡಿದ್ದರಿಂದ ಆ ಬಂಡಾಯ ದಂಡಿಗೆ ಪರಾಜಯ ಹಿಡಿದುಕೊಂಡಿತು. ರಕ್ತದ ಅಲೆಗಳು ಗಾಳಿಯ ಹೊಡೆತದಿಂದ ದಂಡಿನ ಮೇಲೆ ಹಾರತೊಡಗಿದವು, ಪ್ರಳಯದ ದಿನ ಅದರ ಒಂದೊಂದು ಕಣ ಸಿಗುವುದು ಕಷ್ಟ. ಪ್ರಜ್ಞೆ ತಪ್ಪಿದವರ ಮೇಲೆ ಕವಚ ಗಾಳಿಯಲ್ಲಿ ಬಲೆ ಕಟ್ಟಿದಂತೆ ತೋರುತ್ತಿತ್ತು. ಕವಚವನ್ನು ಧರಿಸುವಾಗ ಹೇಗೆ ಹತ್ತಿತೋ ಅದೇರೀತಿಯಾಗಿ ಅದು ಕಳಚಿಕೊಂಡು ಬಿದ್ದಿತು. ಯುದ್ಧದಲ್ಲಿ ಸೋತವರನ್ನು ಸೆರೆಹಿಡಿದು ಪಂಜರಗಳಲ್ಲಿ ಹಾಕಲಾಯಿತು. ಅವರೆಲ್ಲರೂ ಪಂಜರಗಳಲ್ಲಿ ಕಬ್ಬಿಣದ ಮೇಲೆ ಕತ್ತಲೆಯಂತಿರುವ ಹಾಸಿಗೆ ಕಬ್ಬಿಣದ ಟೊಪ್ಪಿಗೆ ಎಂಬತೆ ಇದ್ದರು. ಖಡ್ಗ ಇತ್ಯಾದಿ ಇಡುವ ಓರೆಯಲ್ಲಿ ಇಟ್ಟಿರುವ ಹಾಗೆ ಕಾಣಿಸುತ್ತಿದ್ದರು. ಅವರೆಲ್ಲರೂ ಪ್ರಿಯೆಯರ ಮೈ ಹಾಗೆ ಕವಚಗಳನ್ನು ಬಿಚ್ಚಿದಂತೆ ಕಾಣುತಿದ್ದರು, ಎಲ್ಲವನ್ನು ಕಳೆದುಕೊಂಡ ನಂತರ ಬುದ್ಧಿ ಭ್ರಷ್ಟರಾಗಿ ಅವರೆಲ್ಲರೂ ದಿಗಂಬರನ್ನು

ಭೇಟಿಯಾಗಲು ಹೊರಟರು. ಘೋರ ಕತ್ತಲೆಯ ರಾತ್ರಿಯಲಿ ಘೋರ ಯುದ್ಧ ತಾಪ ಏರಿದಾಗ ಬೆಟ್ಟಗಳೆಲ್ಲ ಕಂಪಿಸಿದವು. ಮೊಗ್ಗುಗಳ ಮರದ ತುಂಡು ತಿರುಗುವ ಶಬ್ದಕೇಳಿ ಸುಗಂಧವನ್ನೇ ಮರೆತು ಬಂದಿದ್ದವು, ನರಗಳಹುರಿ, ಗಾಳಿ ತಗಲಿದಾಗ ತಾಯಿತಿಯ ಎಳೆಗಳನ್ನು ಮರೆಸಿತು. ಎಷ್ಟೊಂದು ದುಃಖಗಳು, ಗಾಯಗಳ ಎಷ್ಟೊಂದು ಕಂತೆಗಳು ಅವರ ಮನಸ್ಸಿನಲ್ಲಿ ಸೋರಲಾರಂಭಿಸಿದವು, ಎಷ್ಟೊಂದು ಜನ ಆ ಗಾಯಗಳ ಸೋರಿಕೆಯಿಂದ ಹಾಸಿಗೆ ಹಿಡಿದು ಸಾವಿನ ಬಾಗಿಲನ್ನು ಸೇರಿದ್ದರು. ಭಿಕ್ಷುಕರು ಹೇಗೆ ದಾನಿಯ ಲಂಗರಿಗೆ ಬಂದು ಭಿಕ್ಷೆ ತೆಗೆದುಕೊಂಡು ಹೊಗುವರೋ ಹಾಗೆಯೇ ಮನೆತುಂಬ ತಲೆಬುರುಡೆಗಳ ಮೇಲೆ ಹೀಗೆ ನಡೆದುಕೊಂಡು ಹೋಗಿ ಮಣೆಗಳನ್ನು ಕಳುಹಿಸಿದರು. ಚೆಂಡುಮಲ್ಲಿಗೆಯು ಹೂಗಳನ್ನು ಕಟ್ಟಿ ಕತ್ತಲ್ಲಿ ರಣವಾಲೆ ಹಾಕಿಕೊಂಡಿದ್ದೆಲ್ಲವೂ ಪ್ರತಿಯೊಬ್ಬ ಶೂರನ ಹಸ್ತವನ್ನು ಬಿಚ್ಚಿದಾಗ ತನ್ನ ತಲೆಯನ್ನೇ ತುರಾಯಿ ಎಂಬಂತೆ ತಂದರು. ರಣದಲ್ಲಿದ್ದು ಶವಗಳ ಪಂಜರಗಳನ್ನೇ ಗೂಡಾಗಿ ಮಾಡಿಕೊಂಡಾಗ ಚೆಂಡುಮಲ್ಲಿಗೆಯ ಕಣ್ಣಿಂದ ರಕ್ತ ನೀರಿನ ಹಾಗೆ ನಿತ್ಯವೂ ಹರಿಯುತ್ತಿತ್ತು. ನರಿ ಹಾಗೂ ತೋಳ ಪರಸ್ಪರ ಧನಿಕರಾಗಿ ಸ್ನೇಹ ಮಾಡಿಕೊಂಡು, ಕೊರಳಲ್ಲಿ ಕರುಳುಗಳ ಹಾರ ಹಾಕಿ ಕೊಬ್ಬಿನ ಹೊದಿಕೆಯನ್ನು ಹೊದ್ದುಕೊಂಡರು. ವಿಸ್ಮಯವಾಗಿ ಸೈನ್ಯ ಹೊರಟು ಶಾಹರು ಇಂತಹ ಅಪ್ರತಿಮ ಜಯ ಸಾಧಿಸಿದರು. ಇದರ ಉದಾಹರಣೆ ಲಕ್ಷಾಂತರ ದಾಖಲಾತಿಪುಸ್ತಕಗಳಲ್ಲಿ ಹುಡುಕಿದರೂ ಸಿಗಲಾರದು. ಯಾವ ಮನೆ ಮನೆಗಳಿಂದ ಗೊಂದಲದ ಬೆಂಕಿಹೊರಟಿತ್ತೋ ಅವೆಲ್ಲವೂ ಆರಿ ಹೋಯಿತು. ಶಾಹರು ಆ ಯಾತನೆಯ ಕೆಂಡಕ್ಕೆ ಖಡ್ಗದ ನೀರನ್ನು ಎರಚಿ ಆರಿಸಿದರು. ಆಗ ನುಸ್ರತಿ ಅಗೋಚರದಿಂದ ತಾರೀಖು ಹೇಳಲು ಕೇಳಿದಾಗ ಅವನು ಹೃದಯದಿಂದ ಹೇಳಿದ ತುಳಿದು ಹೊಡೆದರು ಅಲಿ ಒಂದೇ ಕ್ಷಣದಲ್ಲಿ ಜೌಹರನ್ನು. ದೇವ! ಈ ಶೂರವೀರ ಪ್ರಪಂಚದಲ್ಲಿ ಲೋಕಪಾಲಕನಾಗಿರುವರೆಗೂ ನಿತ್ಯವೂ ಜಯ ವಿಜಯದ ಧ್ವಜಗಳನ್ನು ಈ ಶಾಹ ಬುಲ್ ಮುಝಫರಿನಿಗೆ ನೀಡು. (೧೧೧೧-೧೧೬೫)

ಸದರಿ ಮಸ್ನವಿ ಪುಸ್ತಕ

ಶಹಿನ್ಷಾಹರು ತನ್ನ ದಂಡಿನ ಜೊತೆಯಲ್ಲಿ ಯುದ್ಧ ಮಾಡಿ ಯುದ್ಧದಲ್ಲಿ ಜಯ ಸಾಧಿಸಿದರು ಆ ಯುದ್ಧದಲ್ಲಿ ಸಂಪೂರ್ಣವಾಗಿ ತುಳಿದು ತಿರುಗಾಡುತ್ತ ರಾತ್ರೋ ರಾತ್ರಿ ಬಂದು ಇಳಿದರು ರಣಧೀರರು. ಇನ್ನೂ ಸರಿಯಾಗಿ ಸೊಂಟವೂ ಬಿಚ್ಚಿರಲಿಲ್ಲ, ಇನ್ನೂ ಅವರು ಕುದುರೆಗಳ ಜೀನುಗಳನ್ನು ಬಿಚ್ಚಿರಲಿಲ್ಲ, ಆಗ ಒಬ್ಬ ವಿದ್ರೋಹಿ ಕುದುರೆ ಮೇಲೆ ಓಡಿಬಂದು ಒಬ್ಬ ಸಿಪಾಯಿಯ ಕುದುರೆಯನ್ನು ಆಕ್ರಮಿಸಿದ. ಅವನನ್ನು ಮೋಸದಿಂದ ಹೊಡೆಯಲು ಬಂದ ಅವನನ್ನು ತಡೆದು ಹಾಗೂ ಮುಗಿಸಲು ಪ್ರಯತ್ನಿಸಿದ. ಶಾಹರು ಬೆಳಗಾಗಲೆಂದು ಕಾಯುತ್ತಿದ್ದರು. ಬೆಳಗಿನಜಾವ ಆದ ಕೂಡಲೇ ಕುದುರೆಯನ್ನು ತರಲು ಹೇಳಿದರು. ಸೊಂಟ ಕಟ್ಟಿ ಕುದುರೆಯ ಬೆನ್ನಿನಮೇಲೆ ಏರಿ

ಆವಿದ್ರೋಹಿಯ ಬೆನ್ನುಹತ್ತಿದರು. ಅವರ ಹಿಂದೆಯೇ ಸುಮಾರು ಎಲ್ಲ ದಂಡೂ ಹೊರಟಿತು. ಎಲ್ಲರೂ ಬಹಳ ಕಳವಳದಿಂದ ಅವರ ಹಿಂದೆ ಹೊರಟರು. ಅವರ ಛತ್ರಿ ನೆರಳಲ್ಲಿ ಸೇರಿ ಎಲ್ಲರು ಸಜ್ಜುಗೊಂಡರು. ಕುದುರೆಗಳು ಕ್ಷಣ ಕ್ಷಣದಲ್ಲಿ ಭೂಮಿಯನ್ನು ಮಡಿಚಿಹಾಕಿದವು. ಆದರೆ ಆ ದುರಾಚಾರಿ ಜೌಹರ್ ಮೋಸ ಮಾಡಿದ. ಅವನ ಸೈನ್ಯವು ವಿನಾಶಗೊಂಡಿದ್ದರಿಂದ ಕಾಡಲ್ಲಿ ಓಡಿಹೋದ. ಸೈನ್ಯದವರೆಲ್ಲರೂ ನಿಸ್ಸಹಾಯಕರಾಗಿ ಒಬ್ಬೊಬ್ಬರನ್ನು ಹಿಂದೆ ಮುಂದೆ ನೋಡಬೇಕಾಗಿ ಬಂತು, ಆದರೆ ಅವನಿಗೆ ಓಡಲು ಭೂಮಿ ಸಾಕಾಗಲಿಲ್ಲ. ಶಾಹರು ಒಂದು ಅಂದಾಜಿನ ಮೇಲೆ ಆಕ್ರಮಿಸಿದರು. ದಾರಿಯಲ್ಲಿ ಒಂದು ದೊಡ್ಡ ಕೋಟೆ ಸಿಕ್ಕಿತು. ಶಹಬಾಷ್! ಆ ಕೋಟೆಯ ಹೆಸರು ರಾಯಚೂರು, ಅದರ ಮಹನೀಯರು ಸೂರ್ಯನಿಗೆ ಪೂಜಿಸುತ್ತಿದ್ದರು. ಇದರ ಕೋಟೆ ಖಾಫ಼ ಬೆಟ್ಟದಿಂದಲೂ ಎತ್ತರವಾಗಿ ಕಾಣಿಸುತ್ತಿತ್ತು. ಪ್ರತಿಯೊಂದು ಎತ್ತರವಾದ ಬುರ್ಜ್ ಒಂದೊಂದು ಕೋಟೆಯ ಹಾಗೆ ಕಾಣಿಸುತ್ತಿತ್ತು. ಒಮ್ಮೆ ಭೂಮಿ ತನ್ನ ಸೆರಗಲ್ಲಿ ಇದನ್ನು ಗಮನಿಸಿ ನೋಡಿದರೆ ಗಗನದ ಎದುರಿಗೆ ಅದು ನಿತ್ಯವೂ ಒಂದು ವೃಕ್ಷದ ಹಾಗೆ ನಾಚುತ್ತಿತ್ತು. ಬಹುತೇಕ ಸಾಮಾನೇನೋ ಇತ್ತು ಆದರೆ ಸ್ವಲ್ಪ ನೌಕರ ಚಾಕರರಿದ್ದರು. ಜಗಳ ಮಾಡುವ ನಾಯಕನೂ ಸಹ ತುಂಬ ಬಲವಂತನಾಗಿದ್ದ. ಅದನ್ನು ಜಯಗಳಿಸುವ ಯಾವ ದಾರಿಯೂ ಕಾಣಿಸುತ್ತಿರಲಿಲ್ಲ. ಆದರೆ ಆ ಶಾಃ ಘಾಝಿಯವರ ಗುರತನ್ನು ನೋಡಿದಾಗ ಯುದ್ಧ ಮಾಡುತ್ತಿದ್ದ ಜನಗಳಿಗೆ ಹೆದರಿಕೆಯಿಂದ ಜ್ವರ ಬಂದು ಆ ಕೋಟೆ ತನ್ನ ತಾನೆ ಜಯಗಳಿಸಿತು. ಮುಂದೆ ತುಂಬಿ ಹರಿಯುತ್ತಿದ್ದ ನದಿ ತನ್ನ ಮಹನಯತೆಯಲ್ಲಿ ತುಂಬ ಪ್ರಸಿದ್ಧವಾಗಿತ್ತು. ಶಾಹರು ಕೋಟೆಯಲ್ಲೇ ತಂಗುವ ಸಂಕಲ್ಪ ಮಾಡಿದರು. ನದಿಯಲ್ಲಿ ಇಳಿಯುವ ಎಲ್ಲ ಏರ್ಪಾಡು ಮಾಡಿದರು. ವೇಗದಿಂದ ಹೊರಟು ನದಿ ದಂಡೆಗೆ ಹೋಗಿ ಅಲ್ಲಿಂದ ನದಿ ದಾಟಲು ಅಂಬಾರಿಗಳ ಹಾಗೆ ಬುಟ್ಟಿಗಳನ್ನು ಅಲಂಕರಿಸಿ ಅಲೆಗಳ ಮೇಲೆ ಬಿಟ್ಟು ಮತ್ತೊಂದು ತೀರಕ್ಕೆ ತಲಪಿದರು. ಮೊದಲಿಗೆ ಹೆಸರಾಂತ ಮಂತ್ರಿಗಳು ತಲಪಿದರು. ನಂತರ ಬೇರೆ ಜನಗಳು ಅದೇ ಉದಾಹರಣೆ ಮುಂದಿಟ್ಟುಕೊಂಡು ಇಳಿದರು. ಅವರ ಮೊದಲ ಆಯ್ಕೆ ಎಂದರೆ ಆ ವಿದ್ರೋಹಿಯನ್ನು ಹುಡುಕಬೇಕು. ಅವನು ಭೂಮಿಯಲ್ಲಿ ಅಡಗಿದ್ದರೂ ಸಹ ಅವನನ್ನು ಅಗಿದು ಹೊಡೆಯ ಬೇಕು. ಆದರೆ ಆ ಬಾದಶಾಹನ ಖಡ್ಗದ ಹರಿತನ್ನು ತಡೆಯಲಾರದಾಗಿತ್ತು. ಅದು ನುಲಿದರೆ ಭಯ ಹಾಗೂ ನಿಶ್ಶಕ್ತಿಯಿಂದ ಬೆವರುವರು. ಅಡಗಿ ಇರುವುದರಿಂದ ಅವನಿಗೆ ಪ್ರಪಂಚ ತುಂಬ ಇಕ್ಕಟ್ಟಾಗಿ ಕಾಣಿಸಿತು, ಒಳಗಿನ ಕಳವಳದಿಂದ ಅವನನ್ನು ಬಹಳ ವ್ಯಾಕುಲಗೊಡಿಸಿತು. ಅವನು ಒಂದು ಮೂಲೆಯಲ್ಲಿ ತನ್ನ ಶರೀರವನ್ನು ಅಡಗಿಸಲು ಪ್ರಯತ್ನಿಸಿದ. ಆದರೆ ಅದೇ ಶರೀರ ಬಿಟ್ಟು ಆತ್ಮ ಹಾರಿಹೋಯಿತು. ಆಗ ನಾನು ಒಂದು ಹೊಸ ಇತಿಹಾಸವನ್ನು ಬರೆದೆ. ಹೊಸ ಚೇತನ ಪಟ್ಟು ಈ ಖಿತಅ

(ಚೌಪದಿ) ಬರೆದೆ. (೧೧೬೬-೧೧೯೩) **ಖಿತಯೆ ತಾರೀಖ ಮರ್ಗ್ ಬದ್‌ಜೌಹರ್: ಪಾಪಿಜೌಹರಿನ ಮರಣದ ದಿನಾಂಕ ಸೂಚಿಸುವ ಚೌಪದಿ**

ಆದಿಲ್‌ಶಾಹ್ ಅಲಿರವರು ದೇವನ ನೆರಳು ಆ ಒಡೆಯ, ಕಷ್ಟದಲ್ಲಿ ಕಾಪಾಡುವವನಿಗೆ ಆದಿ ಸಂರಕ್ಷಕ ಸರ್ವಸಮ್ಮತಿ ಇರುತ್ತದೆ. ಅವನು ಇಂತಹ ಸಜ್ಜನ ಜೊತೆಯಲ್ಲಿ ಹೀಗೆ ಕೆಟ್ಟದಾಗಿ ವರ್ತಿಸಿದ, ಆದ್ದರಿಂದ ಅವನಿಗೆ ಕೂಡಲೆ ಶಿಕ್ಷೆಯೂ ಆಯಿತು. ಆ ಜೌಹರ್ ಅವನ ಕಾಠಿಣ್ಯ ಪ್ರಪಂಚವನ್ನು ಹಿಡಿತದಲ್ಲಿಟ್ಟಿಕೊಂಡಿದ್ದ ನ್ಯಾಯದ ಮಾರ್ಗದಲ್ಲಿ ನಡೆಯುತ್ತಿದ್ದ ಅವನಗೆ ಸುಪ್ರಸಿದ್ಧತೆ ಸಿಕ್ಕಿತು. ಶಾಹನಿಂದ ಐಶ್ವರ್ಯ ಪಡೆದ ನಂತರ ಅವನಿಗೆ ಉನ್ನತ ಸ್ಥಾನಮಾನ ದೊರಕಿತು. ಆದರೆ ಅವನು ತನ್ನ ಹೊಸ ಭಾಗ್ಯಹೀನತೆಯನ್ನು ತೋರಲಾರಂಭಿಸಿದ. ಆ ಪ್ರಸಿದ್ಧ ಗಾದೆಯಂತೆ 'ಕೆಟ್ಟವನು ಮುಳುಗಿ ಸಾಯುವನು'. ಅವನು ಒಳ್ಳೆತನದ ಬದಲಾಗಿ ಕೆಡುಕಿನ ಗುಂಡಿತೋಡಿದ್ದ. ಕೊನೆಗೂ ತಿರುಗಿ ಯುದ್ಧ ಮಾಡಲು ನಿಂತ. ಯಾವಾಗ ತಲೆಯಲ್ಲಿ ಅಹಂಕಾರ ಅಹಂಭಾವ ತುಂಬಿಹೋಗಿತ್ತೋ ಆಗ ಬುದ್ಧಿ ಭ್ರಷ್ಟವಾಗುತ್ತದೆ. ಅಲಿಯ ಖಡ್ಗದ ಬೆಂಕಿ ಯಾವಾಗ ಆ ಕೆಟ್ಟ ಜೌಹರ್ ಮೇಲೆ ಬಿದ್ದಿತೋ ಆಗ ಅವನಿಗೆ ಪರಾಜಯವಾಯಿತು ಮತ್ತು ಅವನು ಆ ಸೈನ್ಯದ ಹುದ್ದೆ ಮರ್ಯಾದೆ ಎಲ್ಲವನ್ನು ಕಳೆದುಕೊಂಡ. ತನ್ನ ಪ್ರಾಣ ಉಳಿಸಲು ಕೋಟೆಯಲ್ಲಿ ಹೋಗಿ ಅಡಗಿಕೊಂಡ. ತನ್ನ ಮಾನ-ಮರ್ಯಾದೆ-ಕೀರ್ತಿ ಎಲ್ಲವನ್ನು ನದಿಯಲ್ಲಿ ಬೀಸುಹಾಕಿದ. ತನ್ನ ಮನದಲ್ಲಿ ಅವನಿಗೆ ತಿಕ್ಷ್ಣತೆಯ ಕಳವಳ ಹೇಗೆ ಬಿದ್ದಿತ್ತೆಂದರೆ ಶುಕ್ರಗ್ರಹ ಕಹಿನೀರು ತುಂಬಿದ್ದರಿಂದ ಅವನ ಹೃದಯ ಆರಿಹೋಯಿತು. ದೊಡ್ಡಗಿಡುಗನ ಜಗಳದ ಹೊಸ ಹೆದರಿಕೆ ಉಂಟಾಗಿ ಅದರ ಪರಿಣಾಮವಾಗಿ, ಶರೀರದ ಗುಡಿಸಲನ್ನು ಬೀಸುಹಾಕಿ, ಆತ್ಮ ಕಾಗೆಹಾಗೆ ಹಾರಿಹೋಯಿತು. ಯಾವ ಶಾಹನಿಂದ ಮತ್ತೆ ದುಃಖಿತನಾಗಿ ಒಂದು ಮೂಲೆಯಲ್ಲಿ ಹೋಗಿ ಬಿದ್ದನೋ ಅವನ ಮೇಲೆ ಮೃತ್ಯುವನ್ನು ಬಿಟ್ಟರೆ ಬೇರೆ ಯಾವ ಔಷಧಿಯೂ ಕಾರ್ಯಗತ ಆಗುವುದಿಲ್ಲ. ಇಂತಹ ಮರಣದ ಬಗ್ಗೆ ಯಾರಾದರೂ ಕೇಳಿದರೇ ಓ ನುಸ್ರತಿ ವಿದ್ರೋಹಿಯಾಗಿ ಸತ್ತ (ಸ್ ೧೦೭೨ ಹಿಜರಿ)ಎಂದು ಹೇಳು. (೧೧೯೪-೧೨೦೫)

ಶಾಹ್‌ಜಹಾರ್‌ರವರ ಕ್ಷಮೆಯ ಗುಣ ಜೌಹರ್ ನಂತರ ಅವನ ಮನೆಯನ್ನು ಹೊಸ ಕೃಪೆಯಿಂದ ನೋಡಿದರು

ಯಾರು ಪಾಪಿಯಾಗಿದ್ದನೋ ಅವನು ಶಾಹನ ಕೈಯಿಂದ ಎಲ್ಲವನ್ನು ಕಳೆದುಕೊಂಡು ಜೀವ ಉಳಿಸಿಕೊಂಡು ಓಡಿದ. ಆದರೆ ನಿಜ ಹೇಳಬೇಕೆಂದರೆ ಅವನು ಸಾವಿನ ಮಡಿಲಲ್ಲಿ ಹೋಗುವವರೆಗೂ ತನ್ನ ಆ ನೀಚತನವನ್ನು ಬಿಡಲಿಲ್ಲ. ನಾನೊಂದು ಹೆಸರಾಂತ ಕಥೆಯನ್ನು ಹೇಳಲು ಹೊರಟಿರುವೆನು, ಯಾವ ಮಾತು

ನಾನು ಹೇಳಲು ಹೊರಟಿರುವೆನು ಅದು ಪ್ರಪಂಚದ ಮೇಲೆ ಪ್ರಕಟವಾಗುವುದು, ಬಾದಶಾಹರು ಆಗ ಅವನನ್ನು ಹಿಂಬಾಲಿಸುವುದನ್ನು ಬಿಟ್ಟು ಅವನ ಮನೆಯ ಮೇಲೆ ಆಕ್ರಮಿಸಿದರು. ಶಾಹನ ಹೆದರಿಕೆಯಿಂದ ಅವನು ಜನ್ಮವನ್ನೇ ಬೀಸಾಡಿ ಜೌಹರ್ ನಾಸ್ತಿತ್ವ ಸಾಮ್ರಾಜ್ಯಕ್ಕೆ ತನ್ನ ವಾಸಿಸುವ ಸ್ಥಳ ಮಾಡಿಕೊಂಡ. ಶಾಹರು ಮುಂದೆ ಸೈನ್ಯ ಕಳುಹಿಸಿದರಿಂದ ಅದರ ಭಯದಿಂದ ಅಲ್ಲಿ ಕಳವಳ ಉಂಟಾಯಿತು. ಜೌಹರಿನ ಮನೆಯಲ್ಲಿ ವಿಹ್ವಲ ಉಂಟಾಯಿತು, ಈ ಮಾನಸಿಕ ತೊಂದರೆಯಿಂದ ಬೇರೆ ಎಲ್ಲ ಮಾತು ಸಾಗಿಹೋಯಿತು. ಎಲ್ಲ ಕೆಲಸಗಳಿಂದ ನಿಷ್ಪ್ರಯೋಜಕರಾಗಿ ಕೇವಲ ಮಾತುಕತೆಯಿಂದ ಮಾತ್ರ ಪ್ರಾಣ ಉಳಿಯಲು ಸಾಧ್ಯವೆಂದುಕೊಂಡರು. ಶಾಹರು ದಯಾಳು ಮನಸ್ಸುಳ್ಳವರೆಂದು ಅವರು ಚೆನ್ನಾಗಿ ತಿಳಿದಿದ್ದರು. ಆದ್ದರಿಂದ ಅವನ ಮಗ ಮುಂದೆ ಬಂದು ಕ್ಷಮೆಯಾಚಿಸಿ ಜೀವದಾನ ಕೇಳಿದ. ಶಹಿನ್ಷಾಹ ಕೃಪಾಳು ಮನಸುಳ್ಳವರಾಗಿ ವಿಶೇಷವಾಗಿ ಅನಾಥರನ್ನು ಸಾಕುವರು, ಅವರು ಯಾವಾಗ ಕೃಪೆಯ ನಿಶಾನೆ ಮೇಲೆ ಬಂದರೋ ಆಗ ತನ್ನ ಕೋಪವೆಲ್ಲ ಮರೆತು ಮೊದಲು ಹೇಗೆ ದಯೆ ಕೃಪೆಯಿಂದ ವರ್ತಿಸುತ್ತಿದ್ದರೋ ಹಾಗೆಯೆ ತಂದೆಯಂತೆ ಮಗನನ್ನು ನೋಡಿದರು. ದಕ್ಷಿಣದ ಬಾದಶಾಹನು ಒಂದು ಉನ್ನತ ಸ್ಥಾನದಲ್ಲಿ ದರ್ಬಾರನ್ನು ಮಾಡಿ ಅವನಿಗೆ ಕರೆಸಿದರು. ಒಂದೇ ಕ್ಷಣದಲ್ಲಿ ಸಹಸ್ರಾರು ಕೃಪೆ ನೀಡಿ ಎಲ್ಲ ದೇಶ ಹಾಗೂ ಐಶ್ವರ್ಯ ಎಲ್ಲವನ್ನು ಅವನಿಗೆ ಹಿಂದುರಿಗಿಸಿದರು. ಅವನಿಗೆ ಕೋಟೆಯ ಹುದ್ದೆಯನ್ನು ಕೊಟ್ಟು ತಮ್ಮ ಹೆಸರನ್ನು ಸಜ್ಜನರಲ್ಲಿ ಇರಿಸಿಕೊಂಡರು. ಈ ರೀತಿಯಾಗಿ ಕುತಂತ್ರದ ಬೇರನ್ನು ಕಿತ್ತು ಹಾಕಿದರು. ತನ್ನ ಪ್ರಾತಿನಿಧ್ಯದ ಮನೆಯನ್ನು ತುಂಬಿಸಿಕೊಂಡರು. ಕೆಟ್ಟದನ್ನು ನಾನು ಈ ಕಣ್ಣಿನಿಂದ ನೋಡಿದೆ. ಆಗ ನನ್ನ ಕಲೆಯನ್ನು ಬಳಸಿ ಈ ಪ್ರಶಂಸ ಕವನ ಬರೆದೆ. ಅದೇ ಗಳಿಗೆಯಲ್ಲಿ ಸೇರಿಸಲಾರಂಭಿಸಿದೆ, ರತ್ನದ ಹರಳ ಮೇಲೆ ಚಿನ್ನದಂತೆ ಇಡಲಾರಂಭಿಸಿದೆ. (೧೨೦೬-೧೨೨೪)

ಘಾರಿಖ ಬಾದಶಾಹರವರು ಬಿಜಾಪುರಕ್ಕೆ ಹಿಂದಿರುಗಿ ಬಂದರು

ಓ ಶಾಹನೇ ನೀನು ಅಲಿಯವರ ಹೆಸರಿನವನು, ಇತರೆ ಶಾಹಗಳ ಮೇಲೆ ನೀನು ಸರ್ದಾರ ಆಗಿರುವವನು. ಗಗನದ ಕುದುರೆಯ ಆಳ್ವಿಕೆ ನಿನ್ನದು ಆದ್ದರಿಂದ ಯುಗ ನಿನ್ನ ಸೇವೆಮಾಡುತ್ತಿದೆ. ಇಡೀ ಭೂಮಿಯ ಹಲಗೆಯ ಮೇಲೆ ನೀನು ಇಡೀ ವಿಶ್ವವನ್ನೇ ಕಟ್ಟಿಹಾಕಿದೆ ಆಗ ಶತ್ರು ಅಮಾನತುಗೊಳಿಸಿ ಒಂದೊಂದು ಪಗಡೆಯ ದಾಳ ಚಕಿತಗೊಂಡಿತು. ಯಾವಾಗ ನೀನು ಪ್ರಪಂಚದಲ್ಲಿ ತನ್ನ ವೀರತನದಿಂದ ನಿನ್ನ ಸಿಕಂದರ್‌ನಿಗೆ ಸಂಬಂಧಿಸಿದಂತೆ ಪ್ರಕಟಿಸಿದಾಗ ದಾರಾ ಅಂತಹ ಹಟಮಾರಿ ಅಚಲರೆಲ್ಲರೂ ನಿನ್ನ ಒತ್ತಡ, ಕೆಳಗೆ ಹುಗಿಯಲ್ಪಟ್ಟರು. ನಿನ್ನಂತಹ ಗಂಡುಹುಲಿಯಿಂದ ಭೂಮಿ ಆಕಾಶ ಮೇಲೆ ಕೆಳಗಾದವು. ಆ ಹೆದರಿಕೆಯಿಂದ ಗರ್ಭಪಾತ ಮತ್ತು ಹಸುಗಳು ಮೇಲೆಕೆಳಗಾಗಿ ಕ್ಷೀಣವಾದವು, ಹಟಮಾರಿ ಗಗನವೂ ಸಹ ನಿನ್ನ ಯುಗದಲ್ಲಿ

ಹೆದರಿದ, ಸೂರ್ಯನೂ ಸಹ ಕಂಪಿಸಿ ಮದ್ಯಬಟ್ಟಲಿನ ಹಾಗೆ ಗಡಗಡ ನಡುಗುತ್ತಿದ್ದಾನೆ. ನೀನು ಯಾರನ್ನು ಕಾಡಲ್ಲಿ ತಿರುಗಿಸಿದೆ ಅವನ ಮೈ ಮೇಲೆ ನಿತ್ಯವೂ ಪ್ರತಿಯೊಂದು ಗಟ್ಟಿಹುಲ್ಲು ಬರ್ಚಿಯಾಯಿತು. ಪ್ರತಿಯೊಂದು ಮುಳ್ಳು ಕಠಾರಿಯಾಯಿತು. ಎಲ್ಲಿ ನೀನು ನಿನ್ನ ಸೈನ್ಯ ತೆಗೆದುಕೊಂಡು ಹೋಗಿ ಯುದ್ಧ ಮಾಡಿದೆಯೋ ಅಲ್ಲಿ ಖಡ್ಗಕ್ಕೆ ಖಡ್ಗ ತಗುಲಿ ಅವು ಮೊಂಡಾದವು. ನಿನ್ನಂತಹ ಯುವಕ ಶಾಹನ ಮುಂದೆ ರುಸ್ತುಂನಂತೂ ಒಬ್ಬ ಮಗು ಇದ್ದ ಹಾಗೆ, ಅವನ ತೂಕದ ಗದೆ ಝುನ್ಝುನೆಗಿಂತಲೂ ಕಡಿಮೆ ಇರುವುದು. ರಜಪೂತರು ಬರ್ಚಿಗಳನ್ನು ತಮ್ಮ ದಂತಗಳಲ್ಲಿ ಕಡ್ಡಿಯಂತೆ ಉಪಯೋಗಿಸುವರು, ಆದರೆ ನೀನು ಹೈದರಿ ಘೋಷಣೆ ಕೂಗಿ ಎದುರಾಳಿಯ ಸಾಲಿನ ಮೇಲೆ ಹಲ್ಲೆ ಮಾಡುವೆ. ನಿನ್ನ ವಿದ್ರೋಹಿ ಜೀವ ಮೃತ್ಯುವಿನ ನೀರಿಲ್ಲದೇ ತಣ್ಣಗಾಗಲು ಸಾಧ್ಯವಿಲ್ಲ. ಗೋರಿಯ ಮನೆ ಇಲ್ಲದೇ ಅವನಿಗೆ ಸುಖವಾಗಿ ನಿದ್ರೆ ಮಾಡಲು ಸಾಧ್ಯವೇ ಇಲ್ಲ. ಓ ಶಾಹನೇ ಯಾವ ಜೌಹರನಿಗೆ ನೀನು ಪ್ರತಿಷ್ಠತೆಯ ದೃಷ್ಟಿಯಿಂದ ಸಲಾಬತ್ ಖಾನ್ ಎಂದು ಬಿರದು ಕೊಟ್ಟು ಸೈನ್ಯದ ಸರ್ದಾರನನ್ನಾಗಿ ಮಾಡಿದೆ. ತನ್ನ ಅದೃಷ್ಟಶಾಲಿಯ ಮದ್ದಿನ ಪ್ರಬಾವ ಆ ಮೂರ್ಖನಿಗೆ ಏರಿದಾಗ ಅವನು ಅಹಂಕಾರಿಯಾಗಿ ಅಮಲೇರಿ ಅಧಮ ರತ್ನಗಳನ್ನು ತೋರಿಸಲಾರಂಭಿಸಿದ. ಈ ರೀತಿಯಾಗಿ ಆ ಮೂರ್ಖನ ಕೈಗೆ ಅರಸುತನದ ಪುಸ್ತಕ ಬಂದಾಗ ಈಗ ಒಂದೊಂದು ಹಾಳೆಯೂ ದುರ್ಗತಿಯಾಗಲಿದೆ. ಶಾಹನು ಅಂದಾಜಿಸಿದ. ಅವನಿಗೆ ಶಿಷ್ಟಾಚಾರ ಕಲಿಸಲು ಶಾಹನು ಸ್ವತಃ ಅವನ ಮೇಲೆ ಆಕ್ರಮಿಸಿದಾಗ ಆ ಮೂರ್ಖನಂತಹ ದೊಡ್ಡ ಧಣಿ ಯಾರೂ ಇಲ್ಲವೆಂದು ತಿಳಿದು, ಅದೇ ಅಹಂಕಾರ ಮಿದುಳಲ್ಲಿ ತುಂಬಿಕೊಂಡು, ತನ್ನ ದಂಡನ್ನು ತೆಗೆದುಕೊಂಡು ಒಬ್ಬ ವೀರನಹಾಗೆ ಸಮರವಾಡಲು ಹೊರಬಂದು, ತನ್ನ ಗ್ರಹವನ್ನು ತೋರಲಾರಂಭಿಸಿದಾಗ, ಖಡ್ಗದ ಮೋಡದಿಂದ ಈ ರೀತಿಯಾಗಿ ಕ್ರೋಧದ ನೀರು ಅವನ ಮೇಲೆ ಸುರಿದಾಗ ಇಡೀ ಖುಷ್ಕಿ ಭೂಮಿ ಮೇಲೆ ಇಡೀ ಸಮುದ್ರ ಉಕ್ಕಿ ಸುತ್ತಲೂ ರಕ್ತದ ತರಿ ಹರಡಿತು. ಸಮುದ್ರ ರಕ್ತದ ಆವೇಶ ಪಡೆದು ಲಂಕೆಯನ್ನು ಮುಳಿಗಿಸಿದರೆ ಅಲೆಗಳ ನೀರಿನಿಂದ ಸೇತುವೆ ಮುರಿದು ರಾಮೇಶ್ವರಿಯೂ ಸಹ ಮುಳುಗಿತು. ಪೂರ್ವದ ಸೂರ್ಯನನ್ನು ನೋಡಿ ಹೇಗೆ ರಾತ್ರಿಯ ನಕ್ಷತ್ರಗಳು ಮುಳುಗಿಹೋಗುತ್ತವೆಯೋ ಹಾಗೆಯೇ ಸೈನ್ಯದಿಂದ ಪರಾಜಯವಾಗಿ ಹೂವಿನಂತಹ ಮುಖವುಳ್ಳವನು ಕುಗ್ಗಿಹೋದ. ತನ್ನ ದೇಶದಲ್ಲೇ ಓಡಿಹೋಗಿ ಈ ಪ್ರಪಂಚದಿಂದಲೇ ಬೇರೆಯಾದ, ಈ ಶರೀರದಿಂದ ಜೀವವನ್ನು ಬೀಸಾಡದಿದ್ದರೆ ಕ್ಷೇಮವೆಂದುಕೊಂಡ. ಯಾವಾಗ ಶಾಹರು ಆ ಗಲಭೆಯ ಬೆಂಕಿಯನ್ನು ತನ್ನ ಖಡ್ಗದಿಂದ ಆರಿಸಿದರೋ ಆಗ ಅವರು ರಾಜಧಾನಿ ಕಡೆ ಹಿಂದಿರುಗುವ ನಿರ್ಧಾರ ತೆಗೆದುಕೊಂಡರು. ಹೊರಡುವ ನಗಾರಿ ಬಾರಿಸಿದೊಡನೆ ಜಗವೆಲ್ಲ ಸಂತೋಷದಿಂದ ಕೂಗಿದ್ದು ಆಕಾಶದ ಕಿವಿಗೆ ಇಂಪಾಯಿತು. ಕಲ್ಲುಗಳು ಸಹ ಹಿಮದಂತೆ ಮೆಲ್ಲನೇ ಕರಗಲಾರಂಭಿಸಿದವು, ಮಳೆಯಿಂದಾಗಿ ಭೂಮಿಯೆಲ್ಲ

ಗೊರೆತುಂಬಿಕೊಡಿತ್ತು. ಆದರೆ ಬಸಾಸೊವಿನ ಮುದುಕ ಸಮೃದ್ಧಿಯಿಂದ ಬಲಪಟ್ಟು ಯುವಕರನ್ನು ಸಹ ಹಿಂದೆ ಬಿಟ್ಟು ಮುಂದೆ ತನ್ನ ದೇಶದ ಮಾರ್ಗ ತೋರುತ್ತ ಹೋಗಲಾರಂಭಿಸಿದ. ಆ ಶಾಹನ ಸೈನ್ಯ ಆ ನೆಲ ಜಲದ ಮೇಲೆ ಅಲೆಗಳ ಹಾಗೆ ಹೋದಾಗ ಅದರ ಭಯದಿಂದ ಸೂರ್ಯನ ಶರೀರದಲ್ಲಿ ಕಂಪನ ಉಂಟಾಯಿತು. ಅದರ ಮೇಲೆ ಶಬಾಬ ಮತ್ತೆ ಮತ್ತೆ ಬಂದು ಮೈ ಮೇಲೆ ಕುಳಿತಾಗ ಅರಿಯ ಕೊಂಬಿನಂತೆ ಮೈ ಕೂದಲೆಲ್ಲ ಕಂಪಿಸಲಾರಂಭಿಸಿತು. ಹೀಗೆ ಬೆಂಕಿಯಿಂದ ಪ್ರೀತಿ ಮಾಡಿ ಪ್ರಪಂಚವನ್ನು ಕೆಟ್ಟದ್ದರಿಂದ ಉಳಿಸಿದ, ಸೂರ್ಯ ಇಲ್ಲದೇ ಎಲ್ಲಾದರು ಒಂದು ಬೆಂಕಿ ಅನೇಕ ಸಲ ನೋಡಲು ಸಾಧ್ಯವಿಲ್ಲ. ಆ ಛಳಿಯ ಪ್ರಶಂಸೆಯಲ್ಲಿ ನಾನೊಂದು ಪ್ರಶಂಸೆ ಗೀತೆಯನ್ನು ಬರೆದೆ. ಈ ಕವನವನ್ನು ತಡೆದು ಹೇಗೆ ಓದಬೇಕೆಂದರೆ, ಹೀಗೋ ಹಾಗೋ ಸ್ಥೂಲವಾಗಿ ಓದುತ್ತಾರೋ ಹಾಗೆ ಓದಿರಿ. (೧೨೨೫-೧೨೫೧)

ಚಳಿಯ ಪ್ರಶಂಸೆಯಲ್ಲಿ ಬರೆಯುತ್ತಾನೆ

ಚಳಿಗಾಲ ಇಂದು ಕತ್ತಲೆಯ ಉಡುಪು ಎತ್ತಿ ಕೊಟ್ಟಿದೆ, ಚಳಿಗಾಲದ ಗಾಳಿ ಇಂದು ಸರ್ದಾರನಾಗಿ ಚಳಿಯ ವಸಂತ ಮಾಡಿದೆ. ಗಾಳಿಯ ಹೊಡೆತ ಸೈನ್ಯದ ಹಾಗೆ ಮಂಜಿನ ಗುಂಡುಗಳು ರುಂಡಕತ್ತರಿಸುತ್ತಿವೆ. ಹೆದರಿಕೆಯಿಂದ ಅಗ್ನಿ ಮುಖ ಮುಚ್ಚಿಕೊಂಡು ಇಂದು ಅಲ್ಲಲ್ಲಿ ಹೆದರುತ್ತಿದೆ. ಆ ಅಗ್ನಿ ಯಾರಾದರು ಮಾತನಾಡಿದರೆ ಸಾಕು ಶರೀರವೆಲ್ಲ ನಾಲಿಗೆಯಾಗಿ ಎದ್ದೇಳುತ್ತಿತ್ತು. ಅಂತಹ ಅಹಂಕಾರಿಯೂ ತಲೆ ಬಾಗಿಸಿಕೊಂಡು ಬುದ್ಧಿಹೀನನಾಗಿ ಹಳದಿಯಾಗಿ ಇಂದು ಕಾಣುತ್ತಿದೆ. ಅನುರಾಗಿಗಳು ತನ್ನ ಹೃದಯದಲ್ಲಿ ಅದನ್ನು ಇಂದು ಜಾಗ ಕೊಡದೇ ಇದ್ದರೇ ನಿಸ್ಸಂದೇಹವಾಗಿ ದೇಶದಿಂದ ದೂರ ಈ ಜಗತ್ತಿನಿಂದ ಅಗ್ನಿ ಎಸೆಯಲ್ಪಟ್ಟು ಅದರ ಗುರುತಿಲ್ಲದಂತಾಗುತ್ತಿತ್ತು. ಜನರೆಲ್ಲ ಅದರ ಏಟಿನಿಂದ ಹೊದಿಕೆಗಳಲ್ಲಿ ಸೇರಿಕೊಂಡಿರುವರು ಮಧ್ಯ ರಾತ್ರಿಯಲಿ ಹೀಗೆ ಖಡ್ಗ ಎಳೆದು ಕೊಂಡು ಇಂದು ಓಡುತ್ತಿದೆ. ಗಾಳಿಯ ತೊಟ್ಟಿಯೂ ಪೂರ್ವದಿಂದ ಪಶ್ಚಿಮದವರಿಗೆ ತುಂಬಿರುವ ಹಾಗೆ ಕಾಣುತ್ತಿದೆ, ಆಕಾಶವೇ ನೀರಿನ ಗುಳ್ಳೆಯ ಹಾಗೆ ಕಂಪಿಸುತ್ತಿದ್ದರೆ ಇಂದು ಅಲೆ ಎಲ್ಲಿ ಕುಳಿತುಕೊಳ್ಳುವುದು. ಇಬ್ಬನಿ ಬಿಳಿಮಜ್ಜಿಗೆಯಂತೆ ಬಂದು ಹಾಲಿನಂತಹ ಪ್ರಪಂಚದಲ್ಲಿ ಬಿದ್ದಾಗ ಎಲ್ಲ ಬಾವಿಗಳಲ್ಲಿ ನೀರು ಹೆಪ್ಪುಕಟ್ಟಿ ಒಂದೇಸಲ ಮಡಿಕೆಯಾಗಿದೆ ಇಂದು. ಅಲ್ಲಲ್ಲಿ ಜಲ ಗಾಬರಿಗೊಂಡು ಸ್ಪಟಿಕದ ಕನ್ನಡಿಯಂತೆ ಕಾಣುತ್ತದೆ, ಓ ಚಂದ್ರನೇ ಬೇಗನೇ ಇಂದು ಇದರಲ್ಲಿ ನಿನ್ನ ಮುಖ ನೋಡಿಕೋ. ಎಲ್ಲ ಎಲೆಗಳಿಗೆ ಗಾಳಿ ತಗುಲದ ಕಾರಣ ಎಲೆಗಳೆಲ್ಲ ಹಳದಿಯಾಗಿವೆ, ಪ್ರತಿಯೊಂದು ನಗರ ಪ್ರಪಂಚದ ತೋಟ ಅದು ಚಳಿಯಿಂದ ರೋಗಪೀಡಿತವಾಗಿದೆ. ಚಳಿಯ ಐಶ್ವರ್ಯದಿಂದ ಅದೃಷ್ಟಶಾಲಿ ಆಗಲು ಸಾಧ್ಯವಿಲ್ಲ, ಮತ್ತೆ ಬಳ್ಳಿ ತನ್ನ ಮಡಿಲಿನಿಂದ ಕೈ ಹೊರಗೆ

ಚಾಚಲು ಸಾಧ್ಯವಿಲ್ಲ. ಉದ್ಯಾನದ ದರ್ಪಣದ ಮೇಲೆ ಚಳಿಯಿಂದಾಗಿ ತುಕ್ಕು ಜಾಸ್ತಿಯಾಯಿತು, ಕಸಕಡ್ಡಿ ಎಲ್ಲ ಮಂಜಿನಿಂದ ಇಂದು ರತ್ನವಾಗಿವೆ ಚಳಿ ಏಟಿನಿಂದ ಮೊಗ್ಗು ಗರ್ಭಾಶಯದಲ್ಲಿ ಹೆಪ್ಪುಗಟ್ಟಿ ಹೂವಿನ ಕೊಂಬೆಯನ್ನು ಬಿಡುತ್ತಿಲ್ಲ. ಯಾವುದಾದರು ಕಷಾಯ ಕುಡಿಯದೇ ತೋಟ ಹೂ ಹಣ್ಣು ಬಿಡಲು ಸಾಧ್ಯವಿಲ್ಲ. ಚಳಿಯಿಂದಾಗಿ ಯಾವ ಮೊಗ್ಗಿಗೂ ನಗು ಮುಖ ನೋಡಲು ಸಾಧ್ಯವಿಲ್ಲ. ಬುಲ್ಬುಲ್ ಹಕ್ಕಿಗಳು ತನ್ನ ಸಂಗೀತವನ್ನು ಮರೆತು ಕೆಲಸವಿಲ್ಲದೇ ಕುಳಿತಿರುವವು. ತೋಳು ತೋಳುಗಳಿಗೆ ತೇವ ತಗುಲಿ ಮಂಜಿನ ಕೆಂಪುರಕ್ತದಿಂದ ಎರಡು ಬದಿಗಳ ಶಾಲಿನ ಮೇಲೆ ಬಣ್ಣ ಎರಚಿ ಮತ್ತೆ ಬಟ್ಟೆಗಳಿಗೆ ನೀಲಿಯಲ್ಲಿ ಅದ್ದಿ ಶೃಂಗರಿಸಿವೆ. ಸೂರ್ಯನ ಚಿಲುಮೆಯು ಹರಿಯುತ್ತಿರುವ ಬೆಂಕಿಯ ನೀರು ಹೀಗೆ ಹೆಪ್ಪುಕಟ್ಟಿದೆ. ಇಷ್ಟೊಂದು ಜನಗಳಿಗೆ ಚಳಿಕಾಯಲು ಒಂದೇ ಒಂದು ಕೆಂಡ ಸಾಕಾಗುತ್ತದೆಯೇ? ನಾನಂತೂ ನಿರ್ಗತಿಕ ಏನೂ ಇಲ್ಲದವನು, ಶತ್ರು ತುಂಬ ಭಾರವಾಗಿರುವನು ಹಾಗೂ ಅಚಲ, ಈ ಯುದ್ಧದಲ್ಲಿ ಅಸ್ತ್ರ ಶಸ್ತ್ರಗಳನ್ನು ಪಡೆಯಲು ಇಂದು ಶಾಹನ ದರ್ಬಾರಿಗೆ ಹೋಗುವೆ. ಸುಲ್ತಾನರು ಜಗದ ದಾನಿ ಅವರು ಶಹಿನ್ಶಾಹ ಆದಿಲ್‌ಅಲಿ ಅವರು ಅಧಿಕ ಲೋಕಪಾಲಕರು ನಿರಾಧಾರರಿಗೆ ಇಂದು ಅವರೇ ಆಧಾರ. ಅವರ ಕೃಪೆಯಿಂದಲೇ ಈ ಯುಗದಲ್ಲಿ ನಿತ್ಯವೂ ಹೊಸ ವಸಂತವಿದೆ. ಅವರ ದಯೆಯಿಂದ ಅಧಿಕ ಪ್ರಪಂಚ ಇಂದು ಉದ್ಯಾನವಾಗಿ ಕಾಣುತ್ತಿದೆ. ಶಾಹರವರು ಇಲ್ಲದೇ ಮಂಜು ಸಹ ನೂರಾರು ರತ್ನ ಖಚಿತ ಭೂಮಿ ಎಂಬಂತೆ ಕಾಣುತ್ತಿರಲಿಲ್ಲ. ಗಗನ ತನ್ನ ಕೈಯಲ್ಲಿ ಜರಡಿ ಹಿಡಿದು ಇಂದು ರಾತ್ರಿ ಮುತ್ತುಗಳನ್ನು ಉದುರಿಸುತ್ತಿದೆ. ಈ ಜರಿಹರಡುವಿಕೆ ಕೈಯಿಂದ ನಿತ್ಯವೂ ದೃಷ್ಟಿಯ ಮಡಿಲುಗಳು ತುಂಬಿ ತುಳುಕಾಡುತ್ತಿವೆ. ಹಳದಿ ಎಲೆಗಳಿಂದ ತೋಟದ ಸೆರಗು ಇಂದು ಶ್ರೀಮಂತವಾಗಿದೆ. ಸೂರ್ಯನಂತೂ ಜನ್ಮದಿಂದಲೂ ಬೆತ್ತಲ ಶರೀರ ಉಳ್ಳವನು, ಅವನೇನಾದರೂ ಶಾಹರ ಕೈಯಿಂದ ಗೌರವ ವಸ್ತ್ರ ಪಡೆದರೆ ಅದರ ಮೈಮೇಲೆ ಮುಳ್ಳು ಬರುವುದಿಲ್ಲ ಹಾಗೂ ಅದು ಎಂದೂ ನಡುಗುವುದಿಲ್ಲ. ನಾನು ಈ ಪ್ರಶಂಸೆ ಕವನದಲ್ಲಿ ಗಾಳಿಯ ಇನ್ನೂ ಅನೇಕ ಗುಣಗಳನ್ನು ಹೇಳುತ್ತಿದ್ದೆ ಆದರೆ ಈ ಚಳಿಯಿಂದಾಗಿ ನನ್ನ ಬಾಯಿಯಿಂದ ಮಾತೇ ಹೊರಡುತ್ತಿಲ್ಲ. ಓ ನುಸ್ರತಿ ನಿನ್ನ ಹೃದಯದಲ್ಲಿ ಮೊದಲೇ ಹೆಚ್ಚು ಉಷ್ಣವಿರುವುದರಿಂದ ಒಂದು ಪ್ರಶಂಸೆ ಕವಿತೆಯ ನವೀನ ಪಂಕ್ತಿಯಿಂದ ಮತ್ತೆ ಕವನದ ಸಕ್ಕರೆಯನ್ನು ಹರಡುತ್ತಾ ಹೋಗು. (೧೨೫೩-೧೨೭೪)

■

*

ಅಧ್ಯಾಯ – ೬

ಬಾದಶಾಹರು ಬಿಜಾಪುರಕ್ಕೆ ಬಂದು ಉತ್ಸವ ಮಾಡಿದ್ದು.

ಓ ಭೋಗಿ ಸೊಬಗುಳ್ಳ ನೃಪನೇ ಈ ಪ್ರಪಂಚ ಸ್ತ್ರೀ ಇದ್ದ ಹಾಗೆ ಇದನ್ನು ಭೋಗಿಸು. ಇದು ನಿನ್ನ ಮುಂದೆ ಅಲಂಕರಿಸಿಕೊಂಡು ಬಂದು ನಿನ್ನನ್ನು ಪ್ರತಿ ಕ್ಷಣವೂ ಮೋಹಿಸಲಿದೆ. ಗೌರವ ಗೃಹ ಬಳಿ ಓ ಶೂರವೀರನೇ ನೀನು ಬರುತ್ತಿದ್ದರೆ ಈ ಆಕಾಶ ಭೂಮಿ ಎಲ್ಲವೂ ಕಳೆ ಕಾಂತಿಯಿಂದ ಇದ್ದಿಕ್ಕಿದ್ದ ಹಾಗೆ ಉದ್ಯಾನದಂತಾಗಿವೆ. ಚಂದ್ರನಂತೂ ಮಿನುಗುವಂತಹ ಹಾಳೆ ಅದು ಎಲ್ಲ ದಿಕ್ಕುಗಳನ್ನು ಹೊದಿಸಿದೆ. ನಕ್ಷತ್ರಗಳಿಂದ ಹೊಸ ದೃಶ್ಯವನ್ನು ರಾತ್ರಿಯು ಕನ್ನಡಿಯಲ್ಲಿ ಕಟ್ಟಿಹಾಕಿಕೊಂಡಿದೆ. ಮೊದಲಿಗೆ ಸೂರ್ಯನ ಬೆಂಕಿಯ ಮೇಲೆ ಪನ್ನಂಬರ ಎಂಬ ಸುಗಂಧ ದ್ರವ್ಯ ಹಾಕಿದಾಗ ಕತ್ತಲೆಗೆ ಬೆಳ್ಳನೆ ಮಾಡಿತು. ಗಗನ ಲೋಬಾನ ಸುಡುವ ಗೂಡನ್ನು ಬೀಸಾಡಿದ್ದರಿಂದ ಕರ್ಪೂರದ ಡಬ್ಬಿಯಾತು. ಬೆಳದಿಂಗಳದಿಂದ ಭೂಮಿಯೆಲ್ಲ ನಿರ್ಮಲವಾಗಿ ನಕ್ಷತ್ರಗಳ ಛಾಯೆ ಕಾಣತೊಡಗಿತು. ಸುಣ್ಣದಲ್ಲಿ ಕಾಗೆ ಬಂಗಾರ ಕಲೆಸಿಕೊಂಡು ಇಡೀ ಭೂಮಿಯನ್ನೇ ಸಾರಿಸಿರುವ ಹಾಗೆ ಕಾಣಿಸುತ್ತಿದೆ. ಈಗ ಗಾಳಿ ಬೀಸಿ ನೀರಿನ ಅಲೆಗಳನ್ನು ಸ್ವಚ್ಛ ಮಾಡಿತು. ಈಗ ಗಾಳಿ ಮಧ್ಯಮವಾಗಿ ಮೋಹಿಸಿ ಅಂತ್ಯ ತೋರಿಸಲಿದೆ. ರಾತ್ರಿಯ ಒಳ್ಳೆಯ ಗಾಳಿಯನ್ನು ನೋಡಿ ಶಾಹನು ಪಟ್ಟಣದ ಗಸ್ತಿಗೆ ಬರುವ ದಿನ ಅಂದು ರಾತ್ರಿ ಚಂದ್ರನು ಸೂರ್ಯನ ಹಾಗೆ ಮಿನುಗುತ್ತಾ ಬೆಳದಿಂಗಳು ಹರಿಸತೊಡಗಿಸಿದ. ಓ ಬಾದಶಾಹನೇ ನಿನ್ನನ್ನು ಆಕರ್ಷಿಸಲು ಚಂದ್ರ ತನ್ನ ಭಾಗ್ಯವನ್ನು ದಂಡು ಮಾಡಿಕೊಂಡು ಬಂದು ಗಗನದ ಎತ್ತರದಲ್ಲಿ ತಲುಪಿ ಚಮತ್ಕಾರ ತೋರಿಸಲಾರಂಭಿಸಿದ. ಸೂರ್ಯ ಬೊಂಬೆ ಆಟ ಆಡಿಸುವನು. ಎಲ್ಲ ನಕ್ಷತ್ರಗಳ ಗೊಂಬೆಗಳನ್ನು ಕುಣಿಸಿ ಪರದೆ ಮಧ್ಯೆದಿಂದ ಹೊರಬಂದು ಬಹಳಷ್ಟು ಹೊನ್ನನ್ನು ಇನಾಮು ಪಡೆದ. ಅದೇ ಶುಭಗಳಿಗೆಯಲ್ಲಿ ಶಾಹನು ವರನ ಉಡುಪನ್ನು

ಧರಿಸಿದ, ಕುದುರೆ ತರಿಸಿ ಏರಿದ. ಆ ಕುದುರೆಯು ಸಹ ಅನೇಕ ವಸ್ತ್ರಗಳಿಂದ ಹಾಗೂ ಆಭರಣಗಳಿಂದ ಅಲಂಕರಿಸಿತ್ತು. ದೀರ್ಘಕಾಲದಿಂದ ಎಂದೆಂದು ಗಗನ ಮನೆಮನೆಯಿಂದ ಸೂರ್ಯೋದಯ ಆಗುವಾಗೆಲ್ಲ ನಿತ್ಯವೂ ಚಿನ್ನದ ಮನೆಯಿಂದ ಹೊರಬಂದು ನಕ್ಷತ್ರಗಳ ರತ್ನಗಳನ್ನು ಜೋಡಿಸಿದರೂ ಸಹ ಅಂತಹ ಕುಶಲತೆಯಾಗಲು ಸಾಧ್ಯವಿಲ್ಲ. ಬಾದಶಾಹನ ಈ ಕುದುರೆ ಬಹು ವೇಗವಾಗಿ ಹೋಗುತ್ತದೆ. ಎಷ್ಟು ಸುಂದರವಾಗಿ ಮೃದುತ್ವತೆಯಿಂದ ವೇಗವನ್ನು ಹಿಡಿಯುತ್ತಿದೆ, ಅದರ ಬಳಿ ಚತುರತೆ ಶಕ್ತಿ ಇದೆ. ಅದು ಕಲ್ಪಿತ ರೆಕ್ಕೆಯುಳ್ಳ ಅಪ್ಸರೆ ಎಂಬಂತೆ ಹಗಲು ರಾತ್ರಿ ಹಾರಾಡುವುದರಲ್ಲಿ ತೊಡಗಿರುತ್ತದೆ. ತೋಟದ ಮೇಲೆ ಅದು ಬಿರುಗಾಳಿ ಎಂದು ಹೋದರೆ ಒಳ್ಳೆ ಬಣ್ಣದ ಹೂವು ಸಹ ವ್ಯತ್ಯಾಸ ಮಾಡಲು ಸಾಧ್ಯವಿಲ್ಲ. ಅದೇ ಗಾಳಿಯ ಚುರುಕತನದಿಂದ ಅದು ಆಕಾಶದ ಮೇಲೆ ಕಾಲಿಟ್ಟ ಹುಮ (ಒಂದು ಶುಭಸೂಚಕ ಪಕ್ಷಿ)ಗೆ ಸೆರೆಹಿಡಿದು ತಂದಾಗ ಆಕಾಶವೂ ಭೂಮಿ ಎಂಬಂತೆ ಆಯಿತು. ಬಿಲ್ಲುಗಾರರ ಬಿಲ್ಲು ಹಾಗೂ ಶಸ್ತ್ರಗಳು ಅದರ ಮೇಲೆ ನಿತ್ಯವೂ ಶೋಭಿಸುತ್ತದೆ, ಬಲಿಷ್ಟ ಆನೆ, ಹುಲಿ ಹಾಗೂ ಹುಮ ಎಲ್ಲವೂ ಅದರ ಕವಚದ ಸೌಂದರ್ಯ ನೋಡಿ ಗಂಟಿರುವ ಬಲೆಯಲ್ಲಿ ಸಿಕ್ಕಿಹಾಕಿಕೊಳ್ಳುತ್ತವೆ. ಯುದ್ಧದಲ್ಲಿ ಮೊದಲಿಗೆ ಆನೆಗಳ ಸೇನೆಯ ಪಂಕ್ತಿ ಮೇಲೆ ಶಾಹನು ಆಕ್ರಮಣಿಸಿ ಅವುಗಳನ್ನು ಸೀಳು ಹಾಕಿದರೆ ಬೆಟ್ಟದಂತಹ ಒರಟಾದ ಬಳೆಯಂತಹ ಆನೆಗಳು ಅದರ ಅಲೆಯಲ್ಲಿ ತೊಳೆದು ಹೋಗುತ್ತವೆ. ಆ ಪಟ್ಟಣದ ಆಡಳಿತಗಾರನಿಗೆ ಶಾಹನು ಮೆರವಣಿಗೆಯಲ್ಲಿ ಬರುತ್ತಿದ್ದಾನೆಂದು ತಿಳಿದಾಗ ಪಟ್ಟಣವನ್ನು ಮದ್ಯದಂಗಡಿಯಂತೆ ಸುಂದರವಾಗಿ ಕಾಣಿಸುವಂತೆ ಅಲಂಕರಿಸಿದ ಆ ಹೆಸರಾಂತ ಗಂಡು ಅಧಿಕ ಆಧ್ಯಾದೇಶದ ಹವಾಲ್ದಾರನಾಗಿದ್ದ. ಅವನ ಹೆಸರು ಮಂಜಲೆ ಶಾಹ ಎಂದು. ಅವನು ಅಲಿರವರ ಕುಟುಂಬಕ್ಕೆ ಸೇರಿದವನು. ಅವನು ದರ್ಗಾದ ಕಾರ್ಯದರ್ಶಿ, ಶಾಹನ ಪ್ರೀತಿಯ ಭೇದಜ್ಞ, ಆಲಿ ಶಾಹ್‌ರವರು ಸುಸಂಸ್ಕೃತ, ಅವನಿಗೆ ನಾಯಕತ್ವ ಶೋಭಿಸುತ್ತಿತ್ತು. ದುಷ್ಟರಿಗೆ ಅವನ ಎಂತಹ ಭಯವಿತ್ತೆಂದರೆ ಎಚ್ಚರವಿದ್ದಾಗಲೂ ಅವನ ಕನಸನ್ನೇ ನೋಡುತ್ತಿದ್ದರು. ಇಡೀ ನಗರದಲ್ಲಿ ಯಾವ ಮನೆಯೂ ಹಗಲಿರುಳು ಬಾಗಿಲು ಹಾಕುತ್ತಿರಲಿಲ್ಲ. ಗೋಡೆಯ ಬದಿಯ ಪ್ರತಿಯೊಂದು ಹೊಸ್ತಿಲು ಎತ್ತರವಾದ ಆಕಾಶವನ್ನು ಏರುತ್ತಿದ್ದ ಹಾಗೆ ಕಾಣಿಸುತ್ತಿದೆ. ಕಾಮನ ಬಿಲ್ಲಿನ ಹಾಗೆ ಪ್ರತಿಯೊಂದು ಕಮಾನು ಕೆಂಪು ಹಸಿರು ಬಣ್ಣಗಳಲ್ಲಿ ಸುಂದರವಾಗಿ ಕಾಣಿಸುತ್ತಿದೆ. ಮೆಹಂದಿಯ ಅಪರೂಪದ ಹೂಬಳ್ಳಿಗಳ ಚಿತ್ರಗಳಿಂದ ಅಲಂಕರಿಸಿ ಚೀನಾದೇಶದ ಚಿತ್ರಗೃಹ ಮಾಡಿರುವನು. ಓರ್ವ ಪ್ರಸಿದ್ಧ ರೋಮನ್ ಚಿತ್ರಕಾರನ ಚಿತ್ರಗಳ ಪುಸ್ತಕದ ಪ್ರತಿಯೊಂದು ಹಾಳೆಯ ಮೇಲೆ ನೀಲಿ ಕಣ್ಣುಗಳುಳ್ಳ ಚಿತ್ರ ಆಭರಣದಂತೆ ಕಾಣುತ್ತದೆ. ಜ್ಯೋತಿಭರಿತ ಆಕಾಶಗಂಗೆಯಂತೆ ಬಜಾರಿನ ನಿರ್ಮಲ ದಾರಿ ಶೋಭಿಸುತ್ತದೆ. ಈ ರೀತಿಯಾಗಿ ಅಮೃತಶಿಲೆಯ ನೆಲ ಕಾಣಿಸುತ್ತದೆ. ಬಂದರುಗಳಿಂದ ವರ್ತಕರು ತಮ್ಮ ಬಂಡವಾಳ ಇಳಿಸಿ ತಮ್ಮ ತಮ್ಮ ಅಂಗಡಿಗಳನ್ನು

ಬಣ್ಣ ಬಣ್ಣಗಳ ವಸ್ತುಗಳಿಂದ ಅಲಂಕರಿಸಿಕೊಂಡು ಕುಳಿತಿರುವರು. ಸುಗಂಧಗಳ ಪರಿಮಳ ಎಷ್ಟೊಂದು ಹೆಚ್ಚಿತ್ತೆಂದರೆ ಅದು ಏಳನೇ ಆಕಾಶದವರಿಗೂ ತಲಪಿತು. ಶನಿಗ್ರಹದ ಸಾಕುವಿಕೆಯಿಂದ ಪನ್ನಂಬರದ ಸುಗಂಧ ದ್ರವ್ಯ ಹಿಡಿಯಿತು. ಬಾದಶಾಹನ ಜೊತೆಯಲ್ಲಿ ಒಂದು ಹೊಸ ಪ್ರಪಂಚವಿತ್ತು. ಬಾದಶಾಹ ವರನ ಹಾಗಿದ್ದ, ಇದು ಬಾದಶಾಹನಿಗೆ ಶೋಭಿಸುತ್ತಿತ್ತು. ಸೂರ್ಯನು ಅಂದಾಜಿನಿಂದ ಶಾಹನ ಪಾದಗಳ ಕೆಳಗೆ ಬಂಧಿತನಾಗಿ ಭೂಮಿಯ ಮೇಲೆ ಜಾಲದಂತೆ ಜರಿಬಟ್ಟೆಯನ್ನು ಹರಡುತ್ತ ತೋರಿಸುತ್ತ ಹೋದ. ಶಾಹನ ಚಿತ್ರದ ಪ್ರತಿಬಿಂಬಿನಿಂದ ಜರಿಬಟ್ಟೆ ಎಂಬಂತೆ ಆಕಾಶ ಕಾಣಿಸುತ್ತಿತ್ತು. ರಾಜನ ಛತ್ರಿಯ ನೆರಳಿಂದ ಸೂರ್ಯನು ಜ್ಯೋತಿಯನ್ನು ಪಡೆದ. ಸೂರ್ಯನಿಗೆ ನೋಡಿ ನೀಲೋಫರಿನ ಕೋಮಲ ಮೊಗ್ಗು ಹೇಗೆ ಅರಳುತ್ತದೆಯೋ ಹಾಗೆಯೇ ಶಾಹನ ದರ್ಶನ ಆಗುತ್ತಿದ್ದಂತೆಯೇ ಪ್ರಿಯರ ಮುಖಗಳೆಲ್ಲ ಅರಳಿದವು. ಪ್ರತಿಯೊಂದು ಮಹಡಿಯ ಕಿಟಕಿಯು ಸೂರ್ಯನ ಉದಯಸ್ಥಾನಂತೆ ಇತ್ತು. ಮಿನುಗುವಂತಹ ಪ್ರತಿಯೊಂದು ಮನೆಯ ಮಾಡು/ಛಾವಣಿ ಗಗನದಲ್ಲಿ ನಕ್ಷತ್ರದಂತ್ತಿತ್ತು. ಎಲ್ಲಿ ನೋಡಿದರೂ ಒಂದು ಹೊಸ ರೀತಿಯ ಉತ್ತಮ ದೃಶ್ಯ ಕಾಣುತ್ತಿದ್ದವು, ಯಾರೋ ಸೂರ್ಯ, ಮತ್ತೊಬ್ಬ ಚಂದ್ರ ಮತ್ತೊಬ್ಬ ಶುಕ್ರಗ್ರಹ/ಬಣ್ಣದ ಬಿಳುಪು ಮತ್ಯಾರೋ ಬ್ರಹಸ್ಪತಿ/ಗುರುಗ್ರಹದಂತೆ ಕಾಣುವರು. ಇಂತಹದರಲ್ಲಿ ಚಂಚಲ ನರ್ತಕಿಯರ ತಂಡ ಆಗಮಿಸಿತು. ಅವರ ಗೀತೆಗಳ ಪ್ರತಿಯೊಂದು ಪದವೂ ಚೈತನ್ಯ ನೀಡುವಂತಹದು. ಅವರ ನಯವಾದ ತುಟಿಗಳಿಂದ ಹೊರಡುವ ಮಧುರ ಗೀತೆಯೂ ಅಮೃತದಲ್ಲಿ ಸಕ್ಕರೆ ಕರಗಿಸಿದಂತೆ ಆಗುತ್ತಿತ್ತು. ಈ ಸೌಂದರ್ಯದ ದೊಡ್ಡ ಸಭೆಯಲ್ಲಿ ಪ್ರತಿಯೊಂದು ಸುಂದರಿಯು ಮೇಣದ ಬತ್ತಿಯಂತೆ, ಅರದ ಜ್ಯೋತಿಯ ಮುಂದೆ ಪತಂಗಗಳಂತೆ ದೊಡ್ಡಗರಿಯುಳ್ಳ ಅಪ್ಸರೆಯರು ಬೀಳುತ್ತಿದ್ದವು. ಅವರ ಹಗುರ ನಡೆಯಿಂದ ಗಾಳಿಯ ಕಾಲಲ್ಲಿಯೂ ಸಹ ಸುರುಳಿ ಬೀಳುವುದು. ಝಲ ಝನನ ಹಾರುವಿಕೆಯನ್ನು ತಿಂದು ಜಲ್ತರಂಗ್ ಬಾರಿಸಿತೊಡಗಿಸಿದರೆ ಜಲದಲ್ಲಿರುವ ಜಲ್ಪರಿಗಳು ಸಹ ಕುಣಿಯಲಾರಂಭಿಸಿದವು. ಈ ಉತ್ತಮ ಸಂಗೀತನೃತ್ಯ ಇಡೀ ದಕ್ಷಿಣದ ಆಕಾಶದ ಮೇಲೆ ಏರಿದಾಗ ಶುಕ್ರಗ್ರಹವೂ ಮಗ್ನವಾಗಿ ಮರೆಯಿಂದ ಇಣುಕಲಾರಂಭಿಸಿತು. ಇಂತಹದರಲ್ಲಿ ಶಾಹರು ಒಂದೊಂದು ಹೆಜ್ಜೆ ಮುಂದಿಡುತ್ತ ತಿರುಗಾಡುತ್ತ ದರ್ಬಾರಿಗೆ ಆಗಮಿಸಿದಾಗ ಭೂಮಿಗೆ ನೆಮ್ಮದಿ ಸಿಕ್ಕು ಇಡೀ ಪ್ರಪಂಚಕ್ಕೆ ಹೊಸ ಜೀವ ಬಂತು. ಶಾಹರು ಬಂದಾಗ ಅರಮನೆಯ ಅಲಂಕಾರವನ್ನು ನೋಡಿ ಆನಂದ ಪಟ್ಟರು. ಅವರ ಛಾಯೆಯಿಂದ ಗಗನ ಛಾವಣಿ ದೃಶ್ಯ ಎಲ್ಲವೂ ಶೃಂಗರಿಸಿಕೊಂಡವು. ಸುಲ್ತಾನ್ ಮುಹಮ್ಮದ್‌ರವರ ದೀಪ, ತೇಜಸ್ವಿ ಶಾಹ್ ಅಲಿಆದಿಲ್ ಯಾವಾಗ ನೀನು ಅರಮನೆಯಲ್ಲಿ ಬಂದೆಯೋ ನಿನ್ನ ಬೆಳಕಿನಿಂದ ಜ್ಯೋತಿ ಇನ್ನಷ್ಟು ಹೆಚ್ಚಿತು. ಈ ಬೆಳಕು ತುಂಬಿದ ಸಂತೋಷದಲ್ಲಿ ಈ ಸಭೆಯನ್ನು ಏರ್ಪಡಿಸಲಾಗಿದೆ. ಬಾದಶಾಹನಿಗೆ ಅತಿಥ್ಯ ಮಾಡಿದ್ದರಿಂದ ಸಭೆಯ ಶೋಭೆ ತನ್ನಿಂದತಾನೆ ಇನ್ನಷ್ಟು ಹೆಚ್ಚಿತು. ಇಡೀ

ನಗರದಲ್ಲಿ ಒಂದೇ ಕ್ಷಣದಲ್ಲಿ ಎಷ್ಟೋ ಲಕ್ಷ ದೀಪಗಳು ಉರಿದವು. ಅವುಗಳ ಬೆಳಕಿನಿಂದ ಇಡೀ ನಗರ ಝಗಝಗಿಸಲಾರಂಭಿಸಿತು. ಇವುಗಳ ಹೊಳಪಿನಿಂದ ರತ್ನ ವ್ಯಾಪಾರಿಗಳು ತಮ್ಮ ಡಬ್ಬಿಗಳನ್ನು ತೆರೆದು ಕುಳಿತಿರುವ ಹಾಗೆ ಕಾಣುತ್ತಿತ್ತು. ಸಪ್ತ ನಕ್ಷತ್ರಗಳ ಸಮೂಹ ಮುತ್ತುಗಳ ಸರದಂತೆ ಕಂದೀಲುಗಳ ಗೊಂಚಲು ಕಾಣುತ್ತಿವೆ ಮತ್ತು ಅಧಿಕವಾಗಿ ಪಲ್ಲಕಿ/ದೋಲಿಯ ಪ್ರತಿಯೊಂದು ಲಡಿ ಉಜ್ವಲವಾಗಿತ್ತು. ಜ್ಯೋತಿ ಭರಿತ ನಕ್ಷತ್ರಗಳಿಂದ ಅಧಿಕವಾಗಿ ಭೂಮಿ ಮೇಲೆ ದೀಪಾಲಂಕಾರ ಹೇಗೆ ಕಾಣಿಸುತ್ತಿತ್ತೆಂದರೆ ಆಕಾಶ ತನ್ನ ಸೊಂಟ ಬಿಗಿದುಕೊಂಡು ಭೂಮಿಯ ಸೇವೆ ಮಾಡಲು ಬಂದಿರುವಂತೆ. ಹೊಸ್ತಿಲು ಮತ್ತು ಅದರ ಮೇಲಿನ ಮರದ ಛಜ್ಜೆಯ ಬೆಳಕು ಲಂಕೆಯನ್ನು ಲಜ್ಜಿಸುತ್ತಿತ್ತು. ಬೆಳಕಿನ ನೀರು ಉಕ್ಕಿ ಜ್ಯೋತಿಯ ಒಂದು ಹೊಳೆ ಹರಿಯುತ್ತಿತ್ತು. ಬೆಳಕಿನ ಬಾಹ್ಯಾಡಂಬರ ಪಡೆದು ಬಂಗಾರದಂತೆ ಹೊಳೆಯಲಾರಂಭಿಸಿದವು. ಗಗನದ ಗುರಾಣಿ ಮೇಲೆ ಬೆಳ್ಳಿಯ ಹೂಗಳು ನಕ್ಷತ್ರಗಳಂತೆ ಕಾಣುತ್ತಿದ್ದವು. ಪ್ರತಿಯೊಂದು ವೃತ್ತಿಯವರು ಬಂದು ಬಂದು ಶಾಹನಿಗೆ ಸುಂದರ ಕಾಣಿಕೆಗಳನ್ನು ಅರ್ಪಿಸಲಾರಂಭಿಸಿದರು. ಉತ್ಕೃಷ್ಟ ದೃಷ್ಟಿ ಕೃಪೆಯಿಂದ ಸೌಭಾಗ್ಯದ ಉನ್ನತಿ ಪಡೆದರು. ಇಂತಹದರಲ್ಲಿ ನಾನು ಶಾಹನಗೆ ಕಾಣಿಕೆ ಕೊಡಲು ಹುಡುಕಾಡಿದೆ. ಆಗ ನನಗೆ ರತ್ನಗಳು ಸಿಕ್ಕಿದವು. ನಾನು ಅದರ ಮೇಲೆ ಮುಚ್ಚಳ ಹೊದಿಸಿ ಪ್ರಾರ್ಥಿಸುತ್ತೇನೆ ಇದೇ ನನ್ನ ಕಾಣಿಕೆ. ಓ ಅನುರಾಗಿಗಳ ಶಾಹನೇ ನಿನಗೆ ದೇವರಾಣೆ ನೀನು ಎಂದೆಂದಿಗೂ ಸುಪ್ರಸಿದ್ಧನು. ಈ ರತ್ನಗಳ ಮೌಲ್ಯವನ್ನು ಕಟ್ಟಲು ನಿನ್ನ ಕಛೇರಿ ನಿಸ್ಸಹಾಯಕವಾಗುತ್ತದೆ. ನಿನ್ನ ಕಾಲದಲ್ಲಿ ಕೈಗಾರಿಕೆಯು ಬಹು ಪ್ರಶಂಸೆ ಯಾಕೆ ಆಗುವುದಿಲ್ಲ. ಏಕೆಂದರೆ ನೀನು ವಿವೇಕದ ಸೈನ್ಯದಿಂದ ಕುಶಲತೆಯ ದೇಶವನ್ನು ಗೆಲ್ಲುವನು. ಕುಶಲತೆಯ ಅಮೂಲ್ಯವಾದ ರತ್ನಗಳು ಈ ಪ್ರಪಂಚದಲ್ಲಿ ಉಳಿದುಕೊಂಡಿವೆ, ಅವುಗಳನೆಲ್ಲ ನಾನು ಆಯಿದುಕೊಂಡು ಪೂರ್ಣ ಕುಶಲತೆಯ ರತ್ನವ್ಯಾಪಾರಿ ನಿನಗಾಗಿ ತರುವನು. ಕೈಗಾರಿಕೆ ಮಾರುವವರು ಇಂದು ಎಲ್ಲ ಶಿಫಾರಸ್ಸನ್ನು ಗಮನಿಸುವರು. ಎಲ್ಲ ಕೊಳ್ಳುವವನೇ ತಾನು ಬಲ್ಲವನಾದಾಗ ಅಲ್ಲಿ ದಳ್ಳಾಳಿಗಳಿಗೆ ಏನೂ ಕೆಲಸವಿರುವುದಿಲ್ಲ. ಓ ಬಾದಶಾಹ ನನ್ನ ಹೃದಯ ರತ್ನಗಳ ಗಣಿಯಾಗಿದೆ ಇದು ನಿನ್ನ ಕೃಪೆ. ದೇವರಾಣೆಗೂ ಈ ಕವಿತಾವಾಚನದ ಕಲೆ ನಾನು ವಂಶಪಾರಂಪೆಯಲ್ಲಿ ಪಡೆದಿಲ್ಲ. ನಿನ್ನ ಕೃಪೆಗಳನ್ನು ಆರಿಸಿ ನಾನು ಪ್ರಶಂಸ ಕವಿತೆಯ ಆದಿಪ್ರಾಸಪದದಲ್ಲಿ ಎಣಿಸಿರುವೆ. ತೀಕ್ಷ್ಣ ಗುಣಪರೀಕ್ಷೆ ಇಲ್ಲದೇ ಈ ಫಲ ಹೀಗೆ ಬಂದಿಲ್ಲ. ದೇವರಾಣೆಗೂ ಈ ಮಾತುಗಳಲ್ಲಿ ನಾನು ಜಾದು ಪ್ರಕಟಿಸಿದ್ದೇನೆ. ನನ್ನ ಲೇಖನಿಯ ಮಾಟ ಮಾಟವನ್ನು ಮರೆಸುವುದು. ಆದರೆ ಬಾದಶಾಹ ನಾನೇನು ಮಾಡಲಿ? ನಾನು ಅನೇಕ ಮಾತುಗಳಿಂದ ಏನೂ ಇಲ್ಲದವನು. ಮೊದಲಿಗೆ ನನಗೆ ಇರಲು ಒಂದು ಮನೆ ಸಹ ಇಲ್ಲ. ಅಲ್ಲಿ ನನಗೆ ಸುಖವಂತೂ ಸಿಗುವುದಿಲ್ಲ. ನನ್ನೊಂದು ಚಿಕ್ಕ ಮನೆ ಇದೆ ಆದರೆ ಅದಕೆ ರೋಗವೆಂದರೆ ನೆರಹೊರೆ ಬಲು ಕೆಟ್ಟದಾಗಿದೆ. ಅದು ಬಲು ಕೆಟ್ಟ ಜಾಗದಲ್ಲಿದೆ. ಅಲ್ಲಿರುವ ಹುಡುಗರು ಬಲು ಕೆಟ್ಟವರು.

ಆ ಮನೆಯ ಸುತ್ತಮುತ್ತ ನೀಚ ಜನ ವಾಸಿಸಿದ್ದಾರೆ. ಅಲ್ಲಿ ಧೂಳು ಅಂದರೇ ಧೂಳು. ನಿಜ ಮಾತೆಂದರೆ ಅಲ್ಲಿರುವ ಜನ ಮನಸ್ಸನ್ನು ನೋವು ಉಂಟುಮಾಡುವ ಬೈಗಳನ್ನು ಸಹ ಗೇಲಿ ಮತ್ತು ಹಾಸ್ಯ ಎಂದು ತಿಳಿಯುತ್ತಾರೆ. ಅವರ ನಾಲಿಗೆಯಿಂದ ಶೈತಾನನೂ ಸಹ ಬಯ್ದಾಟ ಕಲಿಯಲು ಬರುವನು. ಹೇಗೆಂದರೆ ನಿಜವಾಗಿಯೂ ಅವರು ಯುದ್ಧದ ತರಬೇತಿ ಪಡೆಯುವ ಹಾಗೆ ಅಕ್ಕಸಾಲಿಗತನ ಮಾಡುವರು. ಆ ಮನೆಯಲ್ಲಿ ನಾನು ಮಲಗಬೇಕೆಂದರೆ ನನ್ನ ಮೈಯಲ್ಲಿ ೫ ತೊಲೆ ರಕ್ತವೂ ಉಳಿಯುವುದಿಲ್ಲ. ಏಕೆಂದರೇ ತಿಗಣೆಗಳು ಜಿಗಣೆಗಳು ಹಾಗೆ ಕಚ್ಚಕೊಳ್ಳುತ್ತವೆ. ಸೊಳ್ಳೆಗಳು ರಕ್ತನಾಳ ಮಾಡುತ್ತಿರುತ್ತವೆ. ಅದರಲ್ಲಿ ಮಳೆ ಏನಾದರೂ ಆದರೆ ಮತ್ತೊಂದು ಗೊಂದಲ ಏಳುತ್ತದೆ. ನೀರಿನ ಧಾರೆಗಳು ಮನೆಯ್ಯಲ್ಲಿ ಇಳಿಯಲಾರಂಭಿಸುತ್ತದೆ. ಇಡೀ ಮನೆ ನೀರ ತೊಟ್ಟಿಯಾಗುತ್ತದೆ. ಅದರ ತೇವಾಂಶ ಬೇಸಿಗೆಕಾಲದವರಿಗೂ ಇರುತ್ತದೆ. ಈ ವರ್ಷವಂತು ನೀರು ಎಷ್ಟೊಂದು ತುಂಬಿತೆಂದರೆ ಮನೆಯ ಎಲ್ಲ ಸಾಮಾನಗಳ್ಳು ಹಾಳಾದವು. ಕೇವಲ ಒಂದು ಹಾಸಿಗೆ ಮತ್ತು ಹೊದಿಕೆ ಉಳಿದಿದೆ. ಅಂದರೆ ಕೇವಲ ಭೂಮಿ ಮತ್ತು ಆಕಾಶ ಉಳಿದುಕೊಂಡಿವೆ. ಕೊನೆಗೆ ಈ ಸೇವಕ ಹೇಳಿ ಬಯಸುವುದೇನೆಂದರೆ, ಓ ಪ್ರಪಂಚದ ಚಪ್ಪರವೇ ನನಗೆ ಯಾವುದಾದರು ಒಂದು ದೊಡ್ಡ ಮನೆ ಕಟ್ಟಿಸಿಕೊಡು ಅಥವಾ ನಿನ್ನ ಕೃಪೆಯಿಂದ ನನಗೆ ಸಹಾಯ ಮಾಡು. ಉನ್ನತ ಬಕ್ಷೀಸಿನಿಂದ ಒಂದು ಆಜ್ಞೆಯನ್ನು ಹೊರಡಿಸಿ ನನಗೆ ಒಂದು ಮನೆ ಕೊಡಿಸು, ಅದು ನನ್ನ ಸಹಜಗುಣಕ್ಕೆ ಅನುಗುಣವಾಗಿರಬೇಕು. ಅಲ್ಲಿ ಉನ್ನತ ಮಟ್ಟದ ಸ್ವಚ್ಛತೆ ಇರಲಿ. ಓ ನುಸ್ರತಿ ಈಗ ನೀನು ಶಾಹನನ ಪ್ರಾರ್ಥನೆಯ ಜಪದಲ್ಲಿ ತೊಡಗು, ಇದನ್ನು ಕೇಳಿ ಬೇಗನೇ ಆಕಾಶದ ದೇವಚರರೂ ಸಹ ಆಮೀನ್ ಹೇಳಲಿ. ಓ ಸರ್ವಲೋಕಗಳ ಪಾಲಕನೇ ಶಾಹನ ಕೊಡೆಯ ನೆರಳು ಪ್ರಪಂಚದ ಮೇಲೆ ನಿತ್ಯವೂ ಖಾಯಂಗೊಳಿಸು, ಸೂರ್ಯನ ಛಾಯೆಯಿಂದ ನಿತ್ಯ ಎಂದೂ ಅಣುಗಳ ಪೋಷಣೆ ಇದ್ದೇ ಇರುತ್ತದೆ. (೧೨೭೫-೧೩೪೪)

ಸದರಿ ಮಸ್ನವಿ ಪುಸ್ತಕ

ಶಹಿನ್ಷಾಹರು ಯುದ್ಧಗಳನ್ನು ಮುಗಿಸಿ ಹಿಂದಿರುಗಿದಾಗ ಮೊದಲಿಗೆ ಅವರಿಗೆ ಆದರದ ಆತಿಥ್ಯವನ್ನು ನೀಡಲಾಯಿತು. ಅನೇಕ ದಿನಗಳವರೆಗೆ ಮನೆಯಲ್ಲಿ ಆರಾಮವಾಗಿದ್ದರು. ಪಟ್ಟಣದಲ್ಲಿದ್ದು ತಮ್ಮ ಮೆಚ್ಚುಗೆಯ ಕೆಲಸಗಳಲ್ಲಿ ತೊಡಗಿದ್ದರು. ನಿತ್ಯವೂ ಯೌವನದ ಪರಮಾನಂದಪಟ್ಟರು. ದೊಡ್ಡ ಹೆಸರಿನ ಸೌಭಾಗ್ಯದ ಸಂತೋಷ ಪಟ್ಟರು. ಯಾರ್‍ಯಾರಿಗೆ ಹರಕೆ ಮಾಡಬೇಕೆಂದು ಯೋಚಿಸಿ ಹರಕೆಗಳನ್ನು ಪ್ರಾರಂಭಿಸಿದರು, ಮಹನೀಯರಿಗೆಲ್ಲ ಹಗಲು ರಾತ್ರಿ ಸಂತೈಸಿದರು. ಪ್ರವಾದಿಯರ ಜೊತೆಗಾರರ ಮೇಲೆಯೂ ಶ್ರದ್ಧೆ ಇಟ್ಟು ಅವರಿಗೂ ಸಹ ಸಂತೈಸಿ ಅಲ್ಲಾಹನಿಗೆ ಸಂತೋಷಗೊಳಿಸಿದರು. ಇಷ್ಟರಲ್ಲಿ ಮುಹರ್‍ರಂ ತಿಂಗಳು ಬರಲಿದ್ದು ಶಾಹರು ಆ ತಿಂಗಳನ್ನು ಬಹಳ ಆರಾಮದಿಂದ

ಕಳೆದರು. ಏಕೆಂದರೆ ಬಾದಶಾಹರು ನಿತ್ಯವೂ ದೇವಭಕ್ತರ ಅನುಯಾಯಿಯಾಗಿದ್ದವರು, ಆದಿ ದಿನದಿಂದಲೂ ಅಲಿರವರ ಸಂಪೂರ್ಣ ಸ್ನೇಹಿತರು. ಇಮಾಮುಗಳ ಉರ್ಸನು ಮಾಡಬೇಕೆಂದು ಸಂಕಲ್ಪ ಮಾಡಿ ಅದಕ್ಕಾಗಿ ಆದಷ್ಟು ಜಾಸ್ತಿ ಮಜಾಲಿಸ್‌ಗಳನ್ನು ಅಲಂಕರಿಸಿದರು. ಏನೆಲ್ಲ ನಡೆಯುತ್ತಿತ್ತು ಅದರ ಗುಣವನ್ನು ಇಲ್ಲಿ ವ್ಯಕ್ತ ಪಡಿಸಿದ್ದೇನೆ. ಬೇರೆ ಮಾತಲ್ಲಿ ಹೇಳಬೇಕೆಂದರೆ ಇಲ್ಲಿ ನಾನು ಅದರ ಪ್ರಸಂಸೆ ಕವಿತೆಯನ್ನು ಹೇಳುತಿದ್ದೇನೆ. (೧೩೪೯-೧೩೫೭)

ಆಶೂರದ ವಿವರಣೆ

ಈ ಪ್ರಶಂಸೆ ಕವಿತೆಯನ್ನು ಮೊದಲಿಗೆ ಈ ಪ್ರಪಂಚದ ಸೃಷ್ಟಿಕರ್ತನ ದೇವಸ್ತುತಿಯಿಂದ ಪ್ರಾರಂಭಿಸುತ್ತೇನೆ. ಅವನು ಆಕಾಶದ ಎತ್ತರವಾದ ವಿಕಸಿತ ಅರಮನೆಯನ್ನು ನಿರ್ಮಿಸಿರುವನು. ಮದ್ಯದ ಎಂತಹ ಲೋಟಗಳನ್ನು ಹೇಗೆ ತಂದು ಜೋಡಿಸುರುವನು. ನಕ್ಷತ್ರಗಳಿಂದ ಎಂತಹ ಗವಾಕ್ಷವನ್ನು ತಯಾರಿಸಿರುವನು. ಪೂರ್ಣ ಚಂದ್ರನನ್ನು ಹಾಗೂ ನಕ್ಷತ್ರಗಳನ್ನು ಜ್ಯೋತಿಯಿಂದ ಅಲಂಕರಿಸಿರುವನು. ಒಂದೇ ಭೂಮಿ ಹಾಗೂ ಏಳು ಆಕಾಶಗಳಲ್ಲಿ ಮುಖ್ಯವಾದ ಒಂದೇ ಜ್ಯೋತಿಯ ಬಣ್ಣ ಏಳು ಆಕಾಶಗಳನ್ನು ಶಾಹಿ ಮೇಣದ ಬತ್ತಿ ತಂದು ಒಂದೇ ಸಲ ಬೆಳಗಿಸಿದೆ. ನಿತ್ಯವೂ ನೀನು ಬೆಳಕು ಕೊಡುವ ದೀಪಗಳನ್ನು ಒಂದು ಉತ್ತಮ ಪ್ರವೃತ್ತಿಯಿಂದ ಅಲಂಕರಿಸಿದೆ. ಸಪ್ತ ನಕ್ಷತ್ರಗಳ ಸಮೂಹದಂತೆ ಕಂದೀಲುಗಳ ಗೊಂಚಲನ್ನು ಕಟ್ಟಿರುವೆ. ರಾತ್ರಿಯಂತೂ ಎಷ್ಟೋ ಲಕ್ಷ ರೂಪಗಳು ಚೀನದ ಚಿತ್ರ ಗೃಹದಂತೆ ಕಾಣಿಸುತ್ತವೆ, ಹಗಲಿನಲ್ಲಿ ಕಿಲುಬು ಹಿಡಿದ ಹಲಗೆಯಂತೆ ಸಾಧಾರಣವಾಗಿ ಕಾಣುತ್ತದೆ. ಕಣ್ಣಿನ ದೊಂಬಿಯ ಹಾರಾಟದಲ್ಲಿ ಹಾಗೂ ಇನ್ನೂ ಹೆಚ್ಚು ರೆಪ್ಪೆಯ ಗುರಿಯಲ್ಲಿಟ್ಟು ಅದರ ಸೌಂದರ್ಯದ ಉದ್ಯಾನವನ್ನು ವಿನೋದ ಮಾಡಬೇಕೆಂದಿದ್ದರೆ ಇದೋ ನೋಡಿ ಇದಕ್ಕೆ ಅಹ್ಮದೆ ಮುಖ್ತಾರ್ (ಪ್ರವಾದಿಗಳು) ರವರು ಮೊಟ್ಟಮೊದಲಿಗೆ ಜ್ಯೋತಿಯ ನೀರನ್ನು ಕೊಡದೇ ಇದ್ದಿದ್ದರೆ ಈ ತಾಜಾ ಉದ್ಯಾನ ಈ ರೀತಿಯಾಗಿ ಎಂದಿಗೂ ದರ್ಶನವಾಗುತ್ತಿರಲ್ಲ. ಈ ಧಣಿಗಳು ಎರಡು ಲೋಕಗಳನ್ನು ಏಕೆ ತೆಗೆದುಕೊಳ್ಳಬಾರದು, ದೇವನು ಇವೆಲ್ಲವನ್ನು ಅವನ ಸ್ನೇಹದಲ್ಲಿ ಪ್ರಪಂಚವನ್ನು ರಚಿಸುರುವನು. ಅವನ ಮರ್ಯಾದೆಯಲ್ಲಿ ಅವನ ಕುರ್ಚಿಯ ಕೆಳಗೆ ಏಳು ಆಕಾಶಗಳು ಒಂದು ಏಣಿ, ಅವನ ಪಾದದ ಕೆಳಗೆ ಒಂದು ವೇಗದ ನೆಲವಾಗಿದೆ. ಅವನು ಶೂನ್ಯಲೋಕದ ದೇಶದಲ್ಲಿ ಒಂದು ಕ್ಷಣದಲ್ಲಿ ಹೋಗಿ ಅಲ್ಲಿ ಏರಿದ ನಂತರ ಈ ಯುದ್ಧದ ಬಗ್ಗೆ ಯೋಚಿಸಿದ್ದು, ಈ ಒಂದು ಆಕ್ರಮಣದಲ್ಲಿ ಲಕ್ಷಾಂತರ ಖಜಾನೆಗಳನ್ನು ಪಡೆದ. ಅಲ್ಲಿ ಹೋದ ನಂತರ ಪ್ರತಿ ಕ್ಷಣವೂ ಅವನು ಅನೇಕ ರಹಸ್ಯಗಳಿಂದ ಮಾನ್ಯ ಪಡೆಯುತ್ತಿದ್ದ, ಮತ್ತೆ ಇನ್ನೂ ಹತ್ತಿರ ಹೋದಾಗ ಅವನಿಗೆ ದರ್ಶನದ ಐಶ್ವರ್ಯವು ಸಿಕ್ಕಿತು. ಹೇಗೆ ಒಂದು ಕ್ಷಣದಲ್ಲಿ ಮೇಲೆ ಹೋಗಿದ್ದರೋ ಹಾಗೆಯೇ ಒಂದು

ಕ್ಷಣದಲ್ಲಿ ಕೆಳಗೆ ಆಗಮಿಸಿದರು. ಹೋಗಿ ಹಿಂದುರುಗಿ ಬರುವವರೆಗೂ ತನ್ನ ಭಾರವನ್ನು ಇಂದ್ರಯಾನುಭವಿಸಲಿಲ್ಲ. ಅಲ್ಲಿಂದ ಎಷ್ಟೊಂದು ರತ್ನಗಳು ತಂದಿದ್ದರೋ ಅವೆಲ್ಲವನ್ನು ತನ್ನ ಅನುಯಾಯಿ ವೃಂದದವರಿಗೆ ಬಕ್ಷೀಶ ಕೊಟ್ಟರು. ಭೂಲೋಕವನ್ನು ಅಡಗಿಸಿಟ್ಟಾಗ ಪ್ರೀತಿಯ ಖಜಾಂಚಿ ಆದ. ಅಂದರೆ ಅಲಿ ಮುರ್ತುಝಾ ಅವರು ಪ್ರೀತಿಯ ಮುಸ್ತಫ಼ಾರವರ ಭೇದಜ್ಞ ಆಗಿದ್ದವರು, ಅವರಿಗೆ ದೇವ ದೇವಸಾಮಿಪ್ಯ ನೀಡಿದ್ದು, ಅವರಂತೂ ರಹಸ್ಯಗಳ ಬೊಕ್ಕಸವಾಗಿದ್ದವರು. ಒಂದು ಜ್ಯೋತಿಯ ಸೃಷ್ಟಿ ಇವು, ಆದರೆ ಇವರಿಬ್ಬರ ಮಾಂಸ ಮತ್ತು ರಕ್ತ ಒಂದೇ. ಕೊನೆಗೂ ರಹಸ್ಯ ಮಾತಿನ ಕಾರ್ಯನಿರ್ವಾಹಕನೂ ನೀನೇ. ಇವನು ಕೌಸರಿನ ನೀರು ಕುಡಿಸುವನು, ಸ್ವರ್ಗದ ಮಾರ್ಗದರ್ಶಿ, ಪ್ರವಾದಿಯರ ಅಳಿಯ ಹಾಗೂ ವೀರ ವರ ಸ್ತ್ರೀಯವನು ಅವರ ಹೆಸರು ಖೈರುನ್ನಿಸಾ ಸ್ವರ್ಗದ ಮಹಿಳೆಯರ ಸರ್ದಾರರು ಫಾತಿಮ ಅವರ ಸೇವೆಗಾಗಿ ಸ್ವರ್ಗದ ಪ್ರತಿಯೊಂದು ಅಪ್ಸರೆಯೂ ಸೇವಕಿಯರ ವೇಷ ಧರಿಸಿರುವರು. ಒಂದೇ ಗುಮ್ಮಟದಿಂದ ಸೂರ್ಯ ಚಂದ್ರನಂತಹ ಇಬ್ಬರು ಮಕ್ಕಳು ಜನಿಸಿರುವರು. ಧರ್ಮದ ಪ್ರಪಂಚದಲ್ಲಿ ಹಗಲಿರುಳಲ್ಲಿ ಕತ್ತಲೆಯ ಹೆಸರು ಇರಲು ಸಾಧ್ಯವಿಲ್ಲ. ಪ್ರವಾದಿಯರ ಈ ಪ್ರೀತಿಯ ಮೊಮಕ್ಕಳು ಧರ್ಮದ ಮಾರ್ಗದರ್ಶಿಗಳು. ಇವರ ಪಾದದ ಧೂಳು ಊಲುಲ್ ಅಬ್ಸಾರಿನ (ದೃಷ್ಟಿಉಳ್ಳವರ ಕಣ್ಣಿನ) ಅಂಜನ. ಈ ಜ್ಯೋತಿಯಿಂದ ಇನ್ನೂ ಅನೇಕ ಜ್ಯೋತಿಯ ದೀಪಗಳು ಬೆಳಗಿದವು. ಇವರ ಪ್ರೀತಿ ಗೋರಿಯ ಕತ್ತಲೆಯಲ್ಲಿ ದೀಪವಾಗುವುದು. ಪ್ರವಾದಿಯರ ಹೇಳಿಕೆಯಂತೆ ಪ್ರವಾದಿಯ ಪ್ರಿಯ ಯಾರೆಂದರೆ ಇವರನ್ನು ಯಾರು ಹೆಚ್ಚು ಪ್ರೀತಿಸುವನೋ ಅವನೇ ಪ್ರವಾದಿಯರ ಪ್ರಿಯ, ನನಗೆ ಯಾರು ಪ್ರಿಯನೋ ಅವನು ಅಲ್ಲಾಹನ ಪ್ರಿಯನೂ ಹೌದು. ಅಯ್ಯೋ ಓ ಅತ್ಯಾಚಾರಿ ನೀನು ಇಂತಹ ಮುದ್ದಿನ ಪ್ರಿಯಪುತ್ರರರಿಗೆ ಏರು ಯೌವನದಲ್ಲಿ ಇಂತಹ ಭೀಷಣ ಕ್ರೋಧವನ್ನು ವ್ಯಕ್ತಪಡಿಸಿದೆ. ಹಜ್ರತ್ ಹುಸೈನ್‌ರವರು ಜನ್ಮತಾಳಿದಾಗ ಅವರ ತಾಜಾ ಅರಳಿದ ಮುಖವನ್ನು ನೋಡಿ ಪೃಥ್ವಿ ಮತ್ತು ಅದರ ಮನೆತನದವರೆಲ್ಲರ ಹೃದಯ ಸಂತೋಷದಿಂದ ಹಿಗ್ಗಿತ್ತು ಎಂದು ಹೇಳಲಾಗುತ್ತದೆ. ಅಂತಹ ಸಮಯದಲ್ಲಿ ಹಜ್ರತ್ ಜಿಬ್ರಯೀಲ್ ಅಮೀನ್‌ರವರು ಹುತಾತ್ಮರ ಸುದ್ದಿ ತಂದಾಗ ಹಜ್ರತ್‌ರವರ(ಪ್ರವಾದಿಯರು) ಹೃದಯ ಅತಿಶೋಕದಲ್ಲಿ ಮುಳುಗಿತು. ಈ ಸ್ಥಿತಿಯನ್ನು ನೋಡಿ ಫಾತಿಮರವರು ಪ್ರವಾದಿಯರನ್ನು ಪ್ರಶ್ನಿಸಿದರು, ಅಪ್ಪಾಜಿಯವರೇ ಅಲ್ಲಾಹನ ಕೃಪೆ ಹಾಗೂ ದಯೆಯಿಂದ ದಯವಿಟ್ಟು ತಿಳಿಸಿ ಈ ನವವಸಂತದಿಂದ ನಿಮ್ಮ ಹೃದಯದ ಹೂವಿಗೆ ಯಾವ ನೋವು ಹಿಡಿದಿತು. ಅಥವ ಮುಳ್ಳು ಚುಚ್ಚಿತು. ಆಗ ಪ್ರವಾದಿಯರು ಉತ್ತರಿಸಿದರು, ಓ ಮಗಳೇ ಒಂದು ಕಾಲ ಬರಲಿದೆ, ಆಗ ನಾನೂ ಇರುವುದಿಲ್ಲ ನೀನೂ ಇಧುವುದಿಲ್ಲ ಹಾಗೂ ಅಲಿ ಮುರ್ತುಜಾರವರೂ ಸಹ ಇರುವುದಿಲ್ಲ. ಆಗ ಒಬ್ಬ ರಕ್ತದಾಹಿಕಟುಕ ಅವರ ಮೇಲೆ ಹಲ್ಲೆ ನಡೆಸಿ, ಇಡೀ ಕುಟುಂಬದವರ ಹತ್ಯೆ ಮಾಡುವನು. ತೋಟದಲ್ಲಿ ಇಡೀ

ಕುಟುಂಬದ ರುಂಡ ಮುಂಡವನ್ನು ಕೊಚ್ಚಿ ಇಡುವನು. ರಕ್ತದ ನದಿಗಳನ್ನು ಹರಿಸುವನು ಹಾಗೂ ಅತ್ಯಾಚಾರದ ಚಂಡಮಾರುತ ಎದ್ದೇಳುವುದು. ಆಗ ಫಾತಿಮರವರು ಶೋಕಿಸುತ್ತ ಹೇಳಿದರು. ಅಯ್ಯೋ ಆಗ ಈ ಅಡಿಯಿಂದ ಮುಡಿತನಕ ಒಳ್ಳೆ ನಡೆತೆಯವನ ಶೋಕವನ್ನು ಯಾರು ಆಚರಿಸುವರು. ಅಷ್ಟರಲ್ಲಿ ಜಿಬ್ರೀಲೆ ಅಮೀನ್‌ರವರು ಪ್ರವಾದಿಯರ ಬಳಿ ಬಂದು ಆ ಕೆಟ್ಟಗಳಿಗೆ ಬಗ್ಗೆ ವ್ಯಥೆ ಪಡಿಸುವುದು ಬೇಡ. ಆ ಪೀಡಿತರ ಶೋಕವನ್ನು ಪ್ರತಿವರ್ಷ ಆಚರಿಸಲಾಗುವುದು. ಹೀಗೆ ಈ ಶೋಕ ಮತ್ತೆ ತಾಜಾಆಗುವುದು. ಹೀಗೆ ಈ ಸರಣಿ ಕೊನೆದಿನದವರೆಗೂ ಜಾರಿಯಲ್ಲಿರುವುದು. ಇದರಿಂದಾಗಿ ಸಜ್ಜನರ ಹೃದಯ ಸುಟ್ಟುಹೋಗುತ್ತದೆ. ದೇವರಾಣೆಗೂ ಪ್ರತಿವರ್ಷ ತುಂಬು ವಿಜೃಂಬಣೆಯಿಂದ ಉರ್ಸ್ ಆಚರಿಸಿರಿ. ಇಂದು ಆ ಧರ್ಮನಿಷ್ಠ ರಾಜನ ಮನಸ್ಸು ಸದ್ಬುದ್ಧಿಯನ್ನು ಪಡೆದಿದೆ. ಆದ್ದರಿಂದ ಆ ಸುವಾಯಿ ನೃಪತಿ ಅಜೇಯ ಆದಿಲ್‌ಶಾಹನ ನಿರ್ಮಲ ಹೃದಯ ಹೈದರೆ ಕರ್‍ರಾರ್‌ರವರ ಪ್ರೀತಿಯಿಂದ ತುಂಬಿದೆ. ಈ ಬಾದಶಾಹನ ಸದ್ಗುಣದಲ್ಲಿ ನಾನು ಒಂದು ಹೊಸ ಕಾವ್ಯವನ್ನು ಹೀಗೆ ರಚಿಸಿದ್ದೇನೆಂದರೆ ಆ ರಾಶಿಯ ಪ್ರತಿಯೊಂದು ಸೂಕ್ಷ್ಮ ವಿಷಯವೂ ಸಹ ಸೂರ್ಯದಿಂದ ಆತಿಹೆಚ್ಚು ಪ್ರಕಾಶಮಾನವಾಗಿ ಕಾಣಿಸುವುದು. (೧೩೨೮–೧೩೩೦)

ಎರಡನೆಯ ಅಂತ್ಯ ಪ್ರಾಸುಳ್ಳ ಕಸೀದದ ಮೊದಲನೆಯ ಪಂಕ್ತಿ

ಮರುದಿನ ಮುಂಜಾವು ಆ ಅಪಾರ ಸುಖಪಡೆಯುವವನ ಮುಖವನ್ನು ನೋಡಿದಾಗ ಅವನ ನಗುವಿನಿಂದ ಹೂಗಳು ಉದುರಿದವು. ಅಂದರೆ ಸೂರ್ಯೋದಯವಾಯಿತು. ಬಾದಶಾಹನ ಮನೋವೃತ್ತಿಯ ಅರಳುವಿಕೆಯ ನೆರಳು ಯಾವಾಗ ತೋಟದ ಮೇಲೆ ಬೀಳುತ್ತದೆಯೋ ಆಗ ಪ್ರತಿಯೊಂದು ಮೊಗ್ಗು ತನ್ನ ತನ್ನ ಜಾಗದಲ್ಲಿ ಈ ಮಧ್ಯೆ ಅರಳಿ ಸುಗಂಧವನ್ನು ಹರಡಲಾರಂಭಿಸಿತು. ಅವನ ಕೃಪೆದೃಷ್ಟಿ ಅಜೀವರಿಗೆ ಅಮೃತ ಇದ್ದ ಹಾಗೆ ಮತ್ತು ಅವನ ಸಂತಾಪ ಸೂಚಿಯ ಕುಕ್ಕೆ ಮುರಿದಿರುವ ಹೃದಯಗಳಿಗೆ ಮುಲಾಮು ಇದ್ದಹಾಗೆ. ಯುಗದ ಪೀಡಿತರು ಶಾಹನ ದೇಶದಲ್ಲಿ ಬಂದು ವಿಶ್ರಾಂತಿ ಪಡೆಯುವರು. ಆದರೆ ಕರಾರೇನೆಂದರೆ ಆ ಕಾಲದ ಕೈವಾರ(ಕಂಪಾಸ್)ದ ಕೇಂದ್ರಬಿಂದು ಖಾಯಂ ಆಗಿರಬೇಕು. ಬಾದಶಾಹನ ಸಾಕ್ಷಿ ಭಾಗ್ಯದ ಜನುಮ ಬಂದು ಪಾದವಂದನೆಗಳನ್ನು ಮಾಡುತ್ತದೆ. ಯಾರು ಅವಿಧೇಯತೆ ಮಾಡುವರೋ ಅವರ ಮೇಲೆ ಸದೈವವಾಗಿ ಆಪತ್ತಿನ ನಷ್ಟ ಸಂಭಿಸುತ್ತದೆ. ಅಂದರೆ ಬಾದಶಾಹನಿಗೆ ಯಾರು ವಿಧೇಯತನ ತೋರುವರೋ ಅವರಿಗೆ ಬಾದಶಾಹನು ಗೌರವಿಸನು. ಅವರಿಗೆ ಸಮೃದ್ಧಿ ಪಡೆಸುವನು ಮತ್ತು ಯಾರು ಬಂಡಾಯ ಅಥವಾ ವಿದ್ರೋಹ ಮಾಡುತ್ತಾರೋ ಅವರ ತಲೆಯನ್ನು ಚೆಚ್ಚಲಾಗುತ್ತದೆ. ಏಕೆಂದರೆ ಬಾದಶಾಹನು ಸದ್ಬುದ್ಧಿ ಉಳ್ಳವನು ಬುದ್ಧಿವಂತ ಹಾಗು ಒಳ್ಳೆ ಉಪಾಯ ಮಾಡುವನು. ಒಳ್ಳೆ ಸಲಹೆ

ಕೊಡುವನು. ಅವನು ಇದರಲ್ಲಿ ಅಪ್ರತಿಮ. ಇದೇ ರೀತಿ ಒಂದೇ ನಾಲಿಗೆ, ಒಂದೇ ಮಾತು, ಒಂದೇ ರೀತಿ ಹಾಗೂ ಒಂದೇ ಕರಾರು ಮಾಡುವನು. ಅವನ ಮಾತು ಹಾಗು ಕಾರ್ಯಚರಣೆಯಲ್ಲಿ ಯಾವುದೇ ವ್ಯತ್ಯಾಸವಿಲ್ಲ. ಪ್ರತಿಯೊಂದು ಕ್ಷಣದ ಸುದ್ದಿಯನ್ನು ತಿಳಿದ ನಂತರ ಅದರ ಬಗ್ಗೆ ಫರಮಾನು ಹೊರಡಿಸಲಾಗುತ್ತದೆ. ಅವನು ಪ್ರವಾದಿಯರ ಕುಟುಂಬದವರ ಮೇಲೆ ನಿಷ್ಠೆ ಇಡುವವನು, ಇದು ಅವನಿಗೆ ವಂಶ ಪರಂಪರೆಯಿಂದ ಸಿಕ್ಕಿದೆ. ಅದು ಆ ಪುಣ್ಯವಂತೆ ತಾಯಿಂದ ಸಿಕ್ಕಿದೆ. ಅದರ ಕೀರ್ತಿ ಸುಪ್ರಸಿದ್ಧವಾಗಿದೆ. ಬಡೆ ಸಾಹೆಬ್ ಅಂತೂ ಹರ್ಮೈನಿನ(ಪವಿತ್ರ ಕಾಅಬಾ ಕ್ಷೇತ್ರ)ಹಾಜಿ, ಅಲ್ಲಾಹನ ಕೃಪೆಯಿಂದ ಅವರಿಗೆ ಉತ್ತಮ ವರ್ತನೆ ನೀಡಿತು. ಯಾರ ಹೊಸ್ತಿಲಿನ ಮೇಲೆ ಆಕಾಶ ಗುಲಾಮನಾಗಿ ತನ್ನ ತಲೆ ಇಡಲು ಇಚ್ಛಿಸುವನು, ರವಿಗಿಂತ ಹೆಚ್ಚಾಗಿ ಗೌರವ ಅವರ ಮನೆಯ ಪರದೆ ಕಾರ್ಯ ಯಾರು ಮಾಡಲು ಸಾಧ್ಯ. ಶಾಹಿ ಮನ್ಸಬ್ (ಹುದ್ದೆ) ಪಡೆದ ನಂತರ ನೀನು ದೇವರ ಮನೆಗೆ ಹೋದಾಗ ಅಲ್ಲಿಯೂ ಸಹ ಗಫ್ಫಾರನು (ಅಲ್ಲಾಹನ ನಾಮ) ಹಜ್ಜೆ ಅಕ್ಬರಿನ ಗೌರವ ವಸ್ತ್ರ ನೀಡಿದನು. ಧರ್ಮದ ಮನೆಯನ್ನು ಅಲಂಕರಿಸಲು ನೀನು ಪ್ರಪಂಚವನ್ನು ದಾಸನನ್ನಾಗಿ ಮಾಡಿಕೊಂಡೆ. ಆ ಮನೆಯಲ್ಲಿ ಪ್ರವೇಶಿಸಿದಾಗ ಒಂದೇ ಸಲ ಅನೇಕರನ್ನು ಸ್ವತಂತ್ರಗೊಳಿಸಿದೆ. ನನ್ನ ಸಹಜಗುಣಕ್ಕೆ ಅವರ ಗುಣಗಾನ ಮಾಡಲು ಸಾಧ್ಯವಿಲ್ಲ ಹಾಗೂ ಈ ಸ್ಥಳ ಬಹಳ ದೂರವಿದೆ ಆದರೆ ಈ ರಾಶಿ ಕಾಗದಗಳ ಕಟ್ಟಿನ ಮೈದಾನವೂ ಸಹ ನನಗೆ ಇಕ್ಕಟ್ಟಾಗಿದೆ. ನಾನು ಏನು ಮಾಡಲಿ. ಸೂಫಿಗಿಂತ ಹೆಚ್ಚು ಅಲಂಕರಿಸಿ ಈ ಸ್ವರ್ಗದ ಅಲಂಕಾರ ಮುತ್ತುರತ್ನಗಳನ್ನಿಡಲು ದೊಡ್ಡ ಮುತ್ತಿನ ಸಣ್ಣ ಪೆಟ್ಟಿಗೆಯನ್ನು ಮಾಡಿಕೊಂಡಿರುವ ಹಾಗಿದೆ. ಬಡೆಸಾಹೆಬರು ಎಂತಹ ಹುಸ್ಸೈನಿ ಮಹಲ್ ನಿರ್ಮಿಸಿದ್ದಾರೆಂದರೆ ಸ್ವರ್ಗ ಲೋಕದಲ್ಲಿರುವ ಎಲ್ಲ ಅರಮನೆಗಳ ಮೇಲೆ ಆ ವಾಸ್ತುಶಿಲ್ಪಿಯ ಹೆಸರು ಬರೆಯಲಾಗಿದೆ. ಪ್ರತಿಯೊಂದು ಸ್ತಂಬ ಎಷ್ಟೊಂದು ನೇರವಾಗಿದೆ ಎಂದರೆ ಮುಂಜಾನೆಯ ಲಂಬರೇಖೆಯಾಗಿವೆ. ಅದರಲ್ಲಿರುವ ಗೋರಿಗಳು ಸೂರ್ಯನ ಬೆಳಕಿನ ಹಾಗೆ ಜ್ಯೋತಿಭರಿತವಾಗಿವೆ. ಅದರ ಚಪ್ಪರವನ್ನು ನೋಡಿ ಗಗನವೂ ನಾಚಿಗೆ ಪಟ್ಟು ತಾನೆ ಚಪ್ಪರವಾಯಿತು. ತನ್ನ ತಿಳಿಗೇಡಿತನದಿಂದ ನಾಲ್ಕನೇ ಆಕಾಶ ತನ್ನ ಜ್ಯೋತಿಯಲ್ಲಿ ನಿತ್ಯವೂ ಸುಟ್ಟು ಹೋಗುತ್ತಿರುತ್ತದೆ. ಅದರ ಛಜ್ಜೆ ಆಕಾಶಗಳ ದೃಶ್ಯಕ್ಕೆ ಪಾತಾಳ ಗೃಹವಾಯಿತು. ಅದರ ಸುರಂಗ ಪಾತಾಳದ ಛಜ್ಜೆಯ ಜಾಗ. ಅದರ ಕಿಟಕಿಗಳು ದೇವಭಕ್ತನ ಜ್ಯೋತಿರ್ಮಯ ಗುಣಗಳಿಂದಲೂ ನಿರ್ಮಲವಾಗಿವೆ. ಅನುರಾಗಿಯ ಹೃದಯಂತೆ ನುಚ್ಚುನೂರು, ಭೂಮಿಯ ಪ್ರತಿಯೊಂದು ಛಜ್ಜೆ ಕುಶಲವಸ್ತು. ಪ್ರತಿಯೊಂದು ಮಿನಾರ ಸಿಕಂದರಿನ ಕೋಟೆಯಂತೆ ಕಾಣಿಸುತ್ತದೆ ಮತ್ತೆ ಯಾಜೂಜ್ ಮಾಜೂಜಿನ ಗೋಡೆ(ಸಿಕಂದರ್ ಚಕ್ರವರ್ತಿ ನಿರ್ಮಿಸಿದ ಭದ್ರವಾದ ಗೋಡೆ)ಯಿಂದಲೂ ಆ ಗೋಡೆಯ ಬುನಾದಿ ಇದೆ. ಅದರ ಪ್ರತಿಯೊಂದು ಮದ್ಯಲೋಟಗಳು ಜ್ಯೋತಿಭರಿತ, ಅದರ ಮುಂದೆ ಜಂಷೀದಿನ ಮದ್ಯಲೋಟವು

ಜ್ಯೋತಿರಹಿತವಾಗಿದೆ. ಇದನ್ನು ನೋಡಿ ಸಿಕಂದರಿನ ಕನ್ನಡಿಯೂ ಸಹ ಲಜ್ಜಿಸುತ್ತದೆ. ಅದರ ಪ್ರತಿಯೊಂದು ಕಮಾನುಗಳನ್ನು ನೋಡಿ ಕಾಮನಬಿಲ್ಲು ಹಸಿರು ನೀಲಿಯಾಗುತ್ತದೆ. ಅದರ ಪ್ರತಿಯೊಂದು ಕಮಾನಿನ ಮುಂದೆ ಕಿಸ್ರಾದ ಕಮಾನು ನೂರಾರು ಸಲ ಬಾಗಿಹೋಗುತ್ತದೆ. ಅದರ ಶುಭ್ರನೆಲ ಎಷ್ಟೊಂದು ನಿರ್ಮಲವಾಗಿದೆ ಎಂದರೆ ಅದು ಚಂದ್ರನಿಗೆ ಕನ್ನಡಿಯಾಗಿದ್ದರೆ ಸೂರ್ಯ ಮೋರಿಯ ಕೆಸರಿನ ಮುಂದೆ ಕನ್ನಡಿ ಇಟ್ಟಿದ್ದಾನೆ. ಅಂಗಳದಲ್ಲಿ ನಕ್ಷತ್ರಗಳ ನೆರಳು ಬಿದ್ದು, ರೇಷ್ಮೆ ಬಟ್ಟೆ ತೊಡಿಸಿದಂತೆ ಇಡೀ ಅಂಗಳ ಕಾಣಿಸುತ್ತದೆ. ಸೂರ್ಯನ ಛಾಯೆಯಿಂದ ಉನ್ನತ ಸ್ಥಾನವು ಚಿನ್ನದ ಸರಿಗೆಗಳಿಂದ ನೇಯ್ದ ಬಟ್ಟೆಯಂತೆ ಕಾಣುತ್ತಿದೆ. ಇದರ ಸುತ್ತಲಿರುವ ತೋಟ, ಬಣ್ಣ ಹಾಗೂ ರಸತುಂಬಿ ಹರಡಿದೆ. ಅದನ್ನು ನೋಡಿದರೆ ದೃಷ್ಟಿಯೂ ಸಹ ವರ್ಣರಂಜಿತವಾಗುತ್ತದೆ. ಆ ಉದ್ಯಾನವನದ ದೃಶ್ಯ ಹೀಗಿರುತ್ತದೆ. ಆ ತೋಟದ ಯಾವುದೇ ಹೂವಿನಮೇಲೆ ಸೂರ್ಯನ ದೃಷ್ಟಿಬೀಳಲು ಸಾಧ್ಯವೇ ಇಲ್ಲ ಏಕೆಂದರೆ ಇಡೀ ತೋಟ ನೆರಳುಭರಿತ ಮರಗಳಿಂದ ತುಂಬಿವೆ. ಅಲ್ಲಿಕೊಡೆ ಇಟ್ಟಿರುವ ಹಾಗೆ ಕಾಣುತ್ತದೆ. ಇಡೀ ತೋಟದಲ್ಲಿ ನೀರಿನ ಕಾಲುವೆಗಳು ಹರಿಯುತ್ತಿರುವುದು ಬಹಳ ಮನಮೆಚ್ಚುತ್ತದೆ. ಅದು ತೃಪ್ತಿಕರ ಪದ್ಮಿನಿಯ ಮುಖದ ಮೇಲೆ ಕೂದಲು ಹರಡಿದಂತೆ ಕಾಣುತ್ತದೆ. ಶಾಹನು ಯಾವ ವರ್ಷದಲ್ಲಿ ವಿರೋಧಿಗಳ ಮುಖಭಂಗವನ್ನು ಮಾಡಲು ಸಿದ್ಧವಾಗಿದ್ದಾಗ ಈ ತೋಟದಲ್ಲಿ ಸಾಕಿದ್ದ ಹೂಗಳ ಪರಿಮಳವನ್ನು ಪಟ್ಟು ವಿದ್ರೋಹಿಗಳನ್ನು ರಕ್ತದಲ್ಲಿ ಮುಳುಗಿಸಿದ್ದರು, ಅಂದರೆ ಆ ವರ್ಷ ವಿದ್ರೋಹಿಗಳ ಜೊತೆ ಸಮರವಾಡಿ ಅವರ ರಕ್ತವನ್ನು ಹರಿಸಿದ್ದರು. ಅವನ ಖಡ್ಗದ ಮೋಡದಿಂದ ಉಚ್ಛಾರದ ಚಂಡಮಾರುತವು ಎದ್ದೇಳಿತು. ಆಗ ಅವರು ತನ್ನ ಕ್ರೋಧದ ಅಗ್ನಿಯನ್ನು ಪ್ರಪಂಚಕ್ಕೆ ಹೇಗೆ ಬಿಸಿ ತಾಗಿಸಿದರೆಂದರೆ ಅದ್ದನ್ನು ನೋಡಿ ಸುತ್ತಮುತ್ತಲಿನ ಬಾದಶಾಹರೆಲ್ಲರೂ ಹೀಗೆ ಮಾಡಬೇಡಿ ಎಂದು ಅವರಿಗೆ ಮನವಿ ಮಾಡಿಕೊಂಡು ಅರ್ಜಿ ಸಲ್ಲಿಸಿದರು. ಹೀಗೆ ಸೇನಾನಿ ಪಟ್ಟಣವನ್ನು ಪ್ರಸಿದ್ಧಪಡಿಸಿದರು. ಬಹುಶಃ ಹೈದರೆ ಕರ್‍ರಾರಿನ ಗುಣ ಅವರ ಹೃದಯದಲ್ಲಿ ಜೀವಂತವಿದ್ದಿರಬಹುದೇನೊ ಅಷ್ಟರಲ್ಲಿ ಆಶೂರ (ಮುಹರ್‍ರಂ ತಿಂಗಳಿನ ಮೊದಲು ಹತ್ತು ದಿನ)ಬಂದಿರುವ ಕಾರಣ ಆ ಪ್ರಸಿದ್ಧನು ಅರಮನೆಗೆ ಬಂದನು. ಹಲವಾರು ಧ್ವಜಗಳನ್ನು ನಿಲ್ಲಿಸಿ, ಇನ್ನೂ ಅನೇಕ ರೀತಿಯ ಕಳೆ ಹೆಚ್ಚಿಸಿದ್ದನ್ನು ಕಾಣ ತೊಡಗಿದವು. ದೊಡ್ಡ ಶಾಮಿಯಾನ ಹಾಕಲಾಯಿತು. ಅದನ್ನು ನೋಡಿ ಆಕಾಶವೂ ಸಹ ಲಜ್ಜೆಯಿಂದ ನೀರು ನೀರಾಯಿತು. ಅದಂತೂ ದ್ರಾಕ್ಷಿಯ ಚಪ್ಪರವಾಗಿತ್ತು. ಅದರಲ್ಲಿ ಉಜ್ವಲ ಗೊಂಚಲು ನೇತಾಡುತ್ತಿದ್ದವು, ಅದರ ಗೋಡೆಗಳಿಗೆ ಚಂದ್ರನು ಪ್ರತಿರಾತ್ರಿ ಬೆಳ್ಳಿಯ ಗಿಲಾವ ಮಾಡುತ್ತಿದ್ದನು. ಹಾಗೂ ಸೂರ್ಯನೂ ನಿತ್ಯದಂತೆ ಮುಂಜಾನೆ ಎದ್ದು ಭೂಮಿ ಮೇಲೆ ಚಿನ್ನವನ್ನು ಚಿಮುಕಿಸುತ್ತಿದ್ದನ್ನು ಆರಿ ಬಟ್ಟೆ, ಹೊಳಪುಳ್ಳ ರೇಶ್ಮೆ ಬಟ್ಟೆ, ಮಕ್ಮಲ್, ನೀಲಕ್ ರೇಶ್ಮೆ ಬಟ್ಟೆ, ಚಿತ್ರವನಕೆ ಬಟ್ಟೆಗಳನ್ನು ಗೋಡೆಗಳಿಗೆ ತೊಡಿಸಿ ಅದರ ಖರ್ಚು ಅದೆಷ್ಟೋ

ಕತ್ತೆಯ ಭಾರವಗಿತ್ತು. ಹೊಸ ವಸಂತ ಬಂದಾಗ ಭೂಮಿ ಹೂಗಳ ಬಣ್ಣದಿಂದ ಅಲಂಕೃತವಾಗುತ್ತದೆಯೋ ಹಾಗೆ ಉನ್ನತ ಸ್ಥಾನಗಳಿಂದ ಅಂಗಳದ ಒಳಗೆ ಹೊರಗೆ ಇವು ಒಂದೇ ಬಣ್ಣವಾಗಿ ಕಾಣತೊಡಗಿದವು. ಬೆಳ್ಳನೆ ನಕ್ಷತ್ರಗಳಿಂದ ಹಸಿರು ಆಕಾಶ ಹೇಗೆ ಅಲಂಕರಿಸುತ್ತದೆಯೋ ಹಾಗೆ ಸೂಕ್ಷ್ಮ ಎಳೆಗಳಿಂದ ಹೆಣೆದು ಹಸಿರು ಕಿಲುಬುಗಳ ಶಿಖರಗಳನ್ನು ಬಿಡಲಾಗಿದೆ. ಮುಸ್ಸಂಜೆ ಪಶ್ಚಿಮದಲ್ಲಿ ಇಟ್ಟಿರುವ ದೀಪ ರಾತ್ರಿಯ ಹೊಗೆಯ ಚಿತ್ರದಂತೆ ಕಾಣಿಸುತ್ತದೆ. ಅದರ ಸುತ್ತಲೂ ಕಂದೀಲು ಅಳವಡಿಸಿ ಸುತ್ತಲೂ ಬೆಳಕು ಚಲ್ಲುತ್ತಿದೆ. ಅದರ ಬಾಗಿಲು ಹಾಗೂ ಗೋಡೆಗಳಿಗೆ ರಾತ್ರಿಯ ಚಂದ್ರಬಂದು ಬೆಳ್ಳಿಯ ಗಿಲಾವೆ ಮಾಡಿದರೆ, ನಿತ್ಯದಂತೆ ಸೂರ್ಯ ಬೆಳಗ್ಗೆನೆದ್ದು ಸುವರ್ಣ ನೀರನ್ನು ಚಿಮುಕಿಸಿ ಅದನ್ನು ವರೆಸುವುದು. ಪ್ರತಿಯೊಂದು ನೀರಿನ ತೊಟ್ಟಿ ನೀರಿಂದ ತುಂಬಿರುವುದನ್ನು ಭೂಮಿಯ ಮೋಡಗಳಂತೆ ಕಾಣಿಸುತ್ತದೆ. ಆಕಾಶದ ಅಂಗಳದಲ್ಲಿ ನೀರನ್ನು ಚೆಲ್ಲಿಸಿದ್ದರಿಂದ ಪ್ರಪಂಚದ ನೀರು ಆರಿಹೋಯಿತು. ಯಾವಾಗ ಇಡೀ ಆಕಾಶ ಜೋರಾಗಿ ನೀರನ್ನು ಸುರಿಸಿತ್ತಿರುತ್ತದೆಯೋ ಆಗ ನಕ್ಷತ್ರಗಳು ಚಂದ್ರದಂತೆ ನೀರಿನ ಚಿಲುಮೆಗಳನ್ನಾಗಿ ಮಹಾಪೂರದಂತೆ ಕಾಣಿಸುತ್ತದೆ. ಅಂಗಾತ ನೀರಿನಿಂದ ತುಂಬಿ ತುಳುಕುತ್ತಿರುವ ಚೌಕ ಛಜ್ಜೆ ಬೆಳಕಿಂದ ತುಂಬಿ ಕೋಟೆಯ ಆಹಾರದಂತೆ ಚಿಪ್ಪು ಜಾಸ್ತಿಯಾದಂತೆ ಕಾಣುತ್ತದೆ. ಯಾವಾಗ ಬೆಳಗ್ಗಿನ ಗಾಳಿ ಲೇಖನಿಯನ್ನು ತೆಗೆದುಕೊಂಡು ಸರ್ಪಣಿಯಗೆರೆ ಬರೆದರೆ ಅದರ ಪ್ರತಿಯೊಂದು ಅಲೆಗಳ ಗುರುತೆಲ್ಲವೂ ಒಳ್ಳೆ ಜಟಿಲ ಸಾಲಗಳಾಗುತ್ತದೆ. ಈ ಅರಮನೆ ತನ್ನ ಅಲಂಕಾರದಿಂದ ಸ್ವರ್ಗ ಕನ್ನಡಿಯಾದಂತಾಯಿತು. ಆಗ ಶಾಹರು ಈ ದೃಶ್ಯಗಳನ್ನು ನೋಡಿ ಆನಂದ ಪಡೆಯುವಂತೆ ಸಾರ್ವಜನಿಕರಿಗೆ ಘೋಷಣೆ ಮಾಡಿದರು. ಈ ಅಲಂಕಾರವನ್ನು ನೋಡಲು ಪ್ರತಿಯೊಂದು ಚೌಕಗಳಿಂದ ಜನರ ಪ್ರವಾಹ, ಪ್ರವಾದಿ ಯೂಸುಫ್‌ರವರ ಕಾರಣ ಆ ಕಾಲದಲ್ಲಿ ಮಿಸರ್(ಈಜಿಪ್ಟಿನ) ಸಂತೆಯಾದಂತೆ, ಹರಿದು ಬರಲಾರಂಭಿಸಿತು. ಪ್ರತಿಯೊಬ್ಬರ ಮೈ ಮೇಲೆ ಎಂತಹ ಹೊಳಪುಳ್ಳ ಉಡುಪು ಇತ್ತೆಂದರೆ ಸೂರ್ಯನಿಗೆ ಅವರ ಮುಂದೆ ಮಿನುಗುವ ಧೈರ್ಯವಿರಲಿಲ್ಲ. ಸ್ಥಿರ ನಕ್ಷತ್ರಗಳು ಮುಖದ ಮೇಲೆ ಹೂವು ಅಥವಾ ಮುತ್ತಿನ ಲಡಿಗಳನ್ನು ಹಾಕಿಕೊಂಡಿರುವುದು ಮನಮೆಚ್ಚುವಂತೆ ಹಾಗೂ ಆಕಾಶಗಂಗೆಯು ನೌಸರಿ(ಒಂಭತ್ತು ಲಡಿಯುಳ್ಳ ಹಾರ) ಸಪ್ತತಾರಾಮಂಡಲಕ್ಕಿಂತಲೂ ಅಧಿಕವಾಗಿತ್ತು, ಪ್ರತಿಯೊಂದು ಹಾರದ ಸಂಬಂಧ. ಎರಡು ಬದಿಯಲ್ಲಿ ದಯೆಯ ದೇವಚರಿಗಳು ತನ್ನ ರೆಕ್ಕೆಗಳನ್ನು ಅರಳಿಸಿಕೊಂಡು ಸುತ್ತಿದ್ದವು. ಹೂರುಗಳ ಕಣ್ಣುಗಳ ಕೈಗಳಲ್ಲಿ ಚನ್ನೂರಿನ ಚತುರ ತುರಾಯಿಗಳಿದ್ದವು. ಲೋಬಾನ ಸುಡುವ ಗೂಡಿನ ಸುಗಂಧದಿಂದ ದಿನದ ಕೊರಳುಪಟ್ಟಿ ಕಸ್ತೂರಿ ವಾಸನೆ, ರಾತ್ರಿಯ ಮಡಿಲು ಇತ್ರ್‌ನಿಂದ ತಾತಾರಿನ ಗೂಡಾಯಿತು. ಎಲ್ಲಿಯವರಿಗೆ ಅನುಮಾನ ಓಡಬಹುದಾಗಿತ್ತೋ ಅಲ್ಲಿಯವರಿಗೂ ಸೌಂದರ್ಯ ಓಡಾಡಿ ತುಳುದುಹಾಕಿತು. ದೃಷ್ಟ ಲಕ್ಷ ಪ್ರಯತ್ನ ಪಟ್ಟರೂ ಸಹ ಕುಳಿತುಕೊಳ್ಳಲು

ಸಾಧ್ಯವಾಗುತ್ತಿರಲಿಲ್ಲ. ಬಹಳಷ್ಟು ಸಲ ಹಗಲಿನಲ್ಲಿ ನಕ್ಷತ್ರಗಳು ಕಾಣಿಸಿಕೊಳ್ಳುವುದೇ ಕಡಿಮೆ, ಆದರೆ ಭೂಮಿ ಮೇಲೆ ಹಗಲಿನಲ್ಲಿ ನಕ್ಷತ್ರಗಳನ್ನು ವಿಶ್ವ ನೋಡಿತು. ಎಲ್ಲೋ ಒಳ್ಳೆ ಪುತ್ಥಳಿಗಳಂತೆ ಗೋರಂಟಿಯನ್ನು ಹಾಕಿಸಿಕೊಂಡು ಅಪ್ಸರೆಯರ ಪಟ್ಟಣದಂತೆ ಕಾಣುತ್ತಿತ್ತು. ಮತ್ತೊಂದು ಕಡೆ ವಿಕಾರವಾದ ಪ್ರಪಂಚದಿಂದ ಎಲ್ಲೋ ಬೆಟ್ಟದ ಕೆಳಪ್ರದೇಶದಂತೆ ಕಾಣುತ್ತಿತ್ತು. ಹಿಂದುಗಳ ಚಿತ್ರದ ಮೇಲೆ ವಾನರ ಸೀತೆಯಂತೆ ಕಾಣಿಸುತ್ತದೆ. ರಾಮನ ಅವತಾರ ಹನುಮಂತ ಲಂಕೆಯಲ್ಲಿ ಹೋಗಿ ಹೇಳುತ್ತಿದ್ದಾನೆ ಎಲ್ಲೋ ಹದ್ದಿನ ಮರಿಗಳಿವೆ, ಮತ್ತೊಂದು ಕಡೆ ಸೀಮುರ್ಘ್ (ಒಂದು ಕಾಲ್ಪನಿಕ ಪಕ್ಷಿಯ ಹೆಸರು)ದ ಮೊಟ್ಟೆಗಳು ಬಿದ್ದಿವೆ, ಖಾಫ್ ಬೆಟ್ಟದ ಮೇಲೆ ಒಂದು ಕಡೆ ಹುಲಿಯ ಹಾಗೂ ಹೆಬ್ಬಾವಿನ ಗುಹೆಗಳಿವೆ. ಎಲ್ಲೋ ಚೀನ ದೇಶದ ಹೊಸ ಪೀಠಗಳು ಹೊಸ ಬೃಂದಾವನ ತೋರಿಸುತ್ತದೆ. ಎಲ್ಲೋ ಸುಂದರವಾದ ಲೋಟಗಳನ್ನು ಇಟ್ಟಿದ್ದಾರೆಂದರೆ ಅವಗಳನ್ನು ನೋಡಿ ದ್ವಾರಕದ ಸ್ಮರಣೆ ಮರೆತು ಹೋಗುತ್ತದೆ. ಪ್ರತಿಯೊಂದು ಪ್ರಿಯನ ರೂಪ ರವಿಯ ಹಾಗೆ ಕಾಣತೊಡಗಿದಾಗ ಜನಿವಾರ ತೊಟ್ಟಿದ್ದ ಪ್ರತಿಯೊಬ್ಬ ಬ್ರಾಹ್ಮಣ ಅಲ್ಲೇ ನಮಸ್ಕರಿಸಲಾರಂಭಿಸಿದ. ಇಲ್ಲಿಯ ಪ್ರತಿಯೊಂದು ತಮಾಶೆ ಹಕ್ಕಿಗಳ ಕಣ್ಣಿಗೆ ಮೋಸದಂತೆ ಇತ್ತು. ಅದರಲ್ಲಿ ಸಿಕ್ಕಿಕೊಂಡರೆ ವೇಗವಾಗಿ ಹಾರುವ ಹಕ್ಕಿಯೂ ಸಹ ನಡೆಯಲು ಸಾಧ್ಯವಿಲ್ಲ. ಈ ನೃಪತಿ ಶಾಹೆ ಆದಿಲ್ ಇವನ ಹೆಸರು ಅಲ್ಲಾಹನ ಹುಲಿ, ಇದರ ಝೇಂಕಾರ ಕೇಳಿ ರುಸ್ತುಂನ ಹೃದಯವೂ ಸಹ ನೀರಾಗುವುದು. ಸೂರ್ಯನ ಕೂದಲೆಲ್ಲ ಪ್ರತಿಯೊಂದು ಕಿರಣ ನಾಲಿಗೆಯಾಗಿದ್ದರೂ ಸಹ ಅವನ ಖಡ್ಗದ ಹರಿತದ ಗುಣಗಳನ್ನು ವ್ಯಾಖ್ಯಾನ ಮಾಡಲು ಸಾಧ್ಯವಿಲ್ಲ. ಯಾರು ಶಾಹನನ್ನು ವಿದ್ರೋಹಿಸಿ ವಿದ್ರೋಹಿಯಾಗಿ ಅವನು ಇಡೀ ಲೋಕವೇ ಓಡಿದರೂ ಸಹ ಅವನು ಸಾಯಲೇ ಬೇಕು ಹೇಗೆಂದರೆ ಕೆಟ್ಟದ್ದು ಭಕ್ ಎಂದು ಮುರಿದು ಹೋಗುತ್ತದೆ, ನಾಶವಾಗುತ್ತದೆ. ಇಡೀ ಪ್ರಪಂಚದ ಬಾದಶಾಹರೆಲ್ಲರೂ ತನ್ನ ಇಚ್ಛಾನುಸಾರ ಸೋತುಹೋದರು. ಹೀಗೆ ಅವನು ಅತಿಪರಿಶ್ರಮದಿಂದ ನಿಸ್ಸಂದೇಹವಾಗಿ ಚದುರಂಗ ಆಡಿರುವನು. ಶಾಹನು ಅರಿಯ ಮುಖನೋಡಿದ ತಕ್ಷಣ ಪಗಡೆಯ ಮಂತ್ರಿಯ ತಡೆಯನ್ನು ಮುರಿದು ಹಾಕಿದ. ಪ್ರತಿಯೊಂದು ಸರಿಸುವ ಪಗಡೆಯದಾಳ ನುಚ್ಚುನೂರಾದವು ಹಾಗೂ ಲೋಕದ ಹಟ ಮುರಿದುಹೋಯಿತು. ಓ ವೀರ ನಿನ್ನ ಕಹಿ ದೃಷ್ಟಿ ಶತ್ರುವಿನ ಮೇಲೆ ಹೀಗೆ ಬಿದ್ದರೆ ಖಡ್ಗದಿಂದ ಅದರ ತುದಿಯವರಿಗೆ ಹರಿತದ ನೀರು ಬಸಿದುಹೋಗುವುದು. ನಿನ್ನ ಕಾರಣ ಪ್ರತಿಯೊಂದು ಮೈದಾನದಲ್ಲಿ ಶೌರ್ಯ ವಿಜಯ ಗಳಿಸುತ್ತದೆ. ನಿತ್ಯವೂ ನಿನ್ನ ಕೈಗಳಿಂದ ಖಡ್ಗಕ್ಕೆ ಸನ್ಮಾನವಾಗುತ್ತದೆ. ರಣರಂಗ ನಿನ್ನಿಂದ ಜನ್ಮತಾಳಿ ಬೆಳೆಯುತ್ತದೆ ಹಾಗೂ ಅಲಂಕರಿಸಲಾಗುತ್ತದೆ. ನಿನ್ನ ಕೈಗಳಿಂದಲೇ ಸಭೆಯೂ ಸಹ ಶೃಂಗಾರದ ಕಲೆ ಕಲೆತಿದೆ. ಶಾಹರು ಸ್ವತಃ ಸಭೆಯನ್ನು ವಿನ್ಯಾಸ ಮಾಡಿದರೆ ಖಾಸಾ ಹಾಗೂ ಜನಸಾಮಾನ್ಯರಾಗಲಿ ಪ್ರತಿಯೊಬ್ಬರಿಗೂ ಒಂದೇ ರೀತಿಯ ಅತಿಹೆಚ್ಚು ಸ್ವಾರ್ಥತ್ಯಾಗದ

ಪ್ರಯೋಜನವಾಗುತ್ತದೆ. ಸಕ್ಕರೆ ಹಾಗೂ ಹುರಿಗಡಲೆಯ ತಟ್ಟೆ ಅಕಾಶದಲ್ಲಿ ನಕ್ಷತ್ರಗಳಿಂದ ತುಂಬಿದಂತೆ ಕಾಣಿಸುತ್ತದೆ. ಚಂದ್ರನಂತಹ ಲೋಟಗಳಲ್ಲಿ ಅನೇಕ ರೀತಿಯ ಪಾನಿಯಗಳು ಎಷ್ಟೊಂದು ಮನಮೆಚ್ಚಿಸುತ್ತಿದೆ.ಈ ಶೋಕಗೀತೆ ಹಾಡುವರು ಪ್ರಲಾಪ ಮಾಡಿದರೆ ಪ್ರತಿಯೊಂದು ಹೃದಯವನ್ನು ಕಿತ್ತೆಸಿವರು, ಈ ದೃಶ್ಯ ನೋಡಿ ಅಗ್ನಿಯು ಸಹ ಚಕಿತವಾಗಿದೆ.ಗೆಳೆಯನ ದುಃಖದ ಬೀಜ ಹೃದಯದಲ್ಲಿ ಸದ್ಯೆವಾಗಿ ಬಿತ್ತಿದ್ದು ಅಶ್ರುವನ ಗೊಂಚಲು ಬಂದು ಅವು ಅರಗಿನ ರಾಶಿಯಾಯಿತು. ಅನುರಾಗಿಗಳ ಹೃದಯಗಳ ಮೇಲೆ ಶೋಕದ ಅಗ್ನಿಕುಂಡ ಏರಿತ್ತು. ವಿರಹದ ಉದ್ಗಾರ ಹೊರಹೊಮ್ಮಿದರೆ ಅದು ಬೆಂಕಿಯ ಕಿಡಿಯ ಹಾಗಿರುತ್ತದೆ. ಅವರ ಶೋಕ ಆಚರಿಸುತ್ತ ಯಾರು ಹುರಿಯಲ್ಲಿ ಮುಳಿಗಿರುವರೋ ಅವರು ಪ್ರತಿಕ್ಷಣ ಅಗ್ನಿಕುಂಡದ ಪ್ರದಕ್ಷಿಣೆ ಮಾಡುತ್ತಿದ್ದಾರೆ, ಉರಿಯುವ ಬೆಂಕಿಯ ಮೇಲೆ ನಡೆಯುತ್ತಿದ್ದಾರೆ. ಆ ಉರಿಯುವ ಬೆಂಕಿ ತುಳಿದರೂ ಅವರಿಗೆ ಅದು ಕೆಂಬಣ್ಣಿನಿಗಿಂತಲೂ ಕಡಿಮೆ ಎಂದು ಕಾಣಿಸುತ್ತಿದೆ. ಆ ನಾಲ್ಕು ಗೋಡೆಗಳ ಪ್ರತಿಯೊಂದು ಸ್ತಂಭಗಳ ಮೇಲೆ ಎಲ್ಲೆಡೆಯೂ ದೀಪಗಳನ್ನು ತುಂಬಲಾಗಿದೆ. ಪ್ರತಿಯೊಂದು ಗೋಡೆಯನ್ನು ನೋಡಿ ನಕ್ಷತ್ರಭರಿತ ಆಕಾಶ ಲಜ್ಜಿಸುತ್ತಿದೆ. ಕರ್ಪೂರದ ದೀಪ ತಂದು ಆಗ ಅಲ್ಲಿ ಹಚ್ಚಿದರೆ ಗಗನದ ಸ್ತಂಭದ ಕೆಳಗೆ ಕೆಂಬಣ್ಣ ಆಕ್ರಮಣದ ಒಂದು ಉದಯಸ್ಥಾನವಾಗುತ್ತದೆ. ಮುಂಜಾನೆ ಕೈಯಿಂದ ಗಗನದ ಸುಗಂಧವ್ಯಾಪಾರಿಯ ಪೆಟ್ಟಿಗೆಯು ಬಿಚ್ಚಿದಾಗ ಸುಗಂಧದಿಂದ ಇಡೀ ಪ್ರಪಂಚದಲ್ಲಿ ಸುವಾಸನೆ ತುಂಬಿಕೊಂಡಿತು. ಪ್ರತಿಯೊಂದು ರಾತ್ರಿಯೂ ಮಳೆಗಾಲದ ರಾತ್ರಿಯಾಗಿತ್ತು. ಗಗನದಲ್ಲಿ ನಕ್ಷತ್ರಗಳ ಸುಳಿವೂ ಇರಲಿಲ್ಲ. ಇಬ್ಬನಿ ಇಲ್ಲದ ಕಾರಣ ಮುಂಜಾನೆ ಹೂವಿನ ನೀರಿಗಿಂತ ಅಧಿಕ ಸುಗಂಧವಿರುವ ನೀರನ್ನು ಚಿಮುಕಿಸಿತು. ಹೀಗೆ ಒಂಬತ್ತು ದಿನ ಹಾಗೂ ಒಂಬತ್ತು ರಾತ್ರಿಗಳು ಸಡಗರ ಸಂಭ್ರಮದಿಂದ ಕಳೆಯಿತು. ಆದರೆ ಹತ್ತನೇ ದಿನದಲ್ಲಿ ಆ ಹತ್ಯೆಯ ಸಮಯ ಬಂದಾಗ, ಈಗ ನಗರದಲ್ಲಿ ಮೊಹರ್ರಮಿನ ಧ್ವಜಗಳ ಮೆರವಣಿಗೆ ಹೊರಡುವುದು, ಬೆಳಕಿನಿಂದ ಕತ್ತಲೆಯ ಕೆನ್ನೆಗಳನ್ನು ತೊಳೆದುಕೊಳ್ಳಿ ಎಂದು ಬಾದಶಾಹರು ಹೇಳಿದರು. ಬಾದಶಾಹಿ ಅಲಂ(ಧ್ವಜ) ಹೊರಟ ತಕ್ಷಣ ಇಡೀ ನಗರದಲ್ಲಿ ದಿಗಲುಂಟಾಯಿತು. ಪ್ರತಿಯೊಂದು ಅಂಗಳದಲ್ಲಿ ಲೋಕದಲ್ಲಿರುವ ಒಳಗೆ ಹಾಗೂ ಹೊರಗಿನವರೆಲ್ಲರೂ ಸೇರಿದರು. ಶುದ್ಧಚಿನ್ನದಲ್ಲಿ ಖಚಿತವಾದ ರತ್ನಗಳ ದೇವತೆಗಳನ್ನು ತೆಗೆದುಕೊಂಡು ಹೊರಟಾಗ ಸಫಾ ಬಾಜಾರಿನ ಇಡಿ ರಸ್ತೆ ಬೆಳಕಿನಿಂದ ಮಿಂಚಲಾರಂಭಿಸಿತು. ಈ ಬೆಳಕಿನ ಅಲೆ ಏರಿದಾಗ, ಆ ಇಡೀ ತೋಟ ಬೆಳಕಿನಿಂದ ತುಂಬಿ ತುಳುಕಾಡಿತು ಹಾಗೂ ಅದರಲ್ಲಿ ಹೂವು ಅರಳಿದವು ಹಾಗೂ ಆ ತೋಟದ ಪ್ರತಿಯೊಂದು ವೃಕ್ಷದಿಂದ ಬಂಗಾರದ ಹೂವು ಮತ್ತು ಹಣ್ಣು ಸೂರ್ಯನಂತೆ ಹೊರ ಬಂದಿದ್ದವು. ಈ ರೀತಿಯಾಗಿ ಶಾಹರ ಅಲಂ ಹೊರಟ ಕಾರಣ ಎಲ್ಲ ಕಡೆಯೂ ಸಡಗರ ಸಂಭ್ರಮವಿದ್ದಾಗ ಸುತ್ತಲೂ ಒಂದು ಹೃದಕಂಪಿಸುವಂತಹ ಗುಲ್ಲೆದ್ದಿತು. ಹೊಸ್ತಿಲಿನ ಮೇಲಿನ ಕಟ್ಟಿಗೆಯ ಛಜ್ಜೆಗಳ ಮೇಲಿನ ಸ್ತೋಮಿನ ಮೇಲೆ

ಪಲ್ಲಕ್ಕಿಯ ಬಳ್ಳಿಗಳು ಹಬ್ಬಿದ್ದವು. ಮಧ್ಯದಲ್ಲಿ ನವಚಂದ್ರಗಳ ಕೆಂಪುಬಣ್ಣದ ಹೂವು ಹಾಗೂ ದಾಳಿಂಬದ ಹೂವಿನ ತೋಟವಿತ್ತು. ಸ್ವರ್ಗದ ತೋಟದ ಹಸ್ತಗಳಿದ್ದವು ಮತ್ತು ಬಂಗಾರದ ಧ್ವಜ ರಿಜ್ವಾನನು (ಸ್ವರ್ಗದ ದೇವಚರ) ಅವರ ಪೋಷಣೆ ಅತ್ಯಂತ ಜ್ಯೋತಿಯ ನೀರಿನಿಂದ ಮಾಡಿದ್ದ. ಧ್ವಜಗಳ <u>ಹೊಟ್ಟೆಗಳಿಂದ</u> ಕೊಡೆಗಳನ್ನು ಬಿಚ್ಚಿದಾಗ ಒಂದು ಹೊಸ ಹೂಬನ ಅರಳಿತು.ಅವುಗಳ ಬಣ್ಣಬಣ್ಣದ ಕಲಶಗಳಿಂದ ವಸಂತದ ಬಣ್ಣ ಮತ್ತಷ್ಟು ಶೃಂಗರಿಸಿತು. ಫುಲ್ಜಡಿ(ಪಟಾಕಿಯ ಒಂದು ಬಗೆ)ಯಿಂದ ಉದುರು ಹೂಗಳು ಎಷ್ಟೊಂದು ಹೆಚ್ಚಾಗಿತ್ತೆಂದರೆ ಅವುಗಳು ತನ್ನತಾನೆ ಹೂವಿನ ಹಾಸಿಗೆಯಾಯಿತು. ಕಗತ್ತಲೆಯ ರಾತ್ರಿಯನ್ನು ಅದು ಹಸಿರು ಮಾಡಿತು. ಪ್ರತಿಯೊಂದು ಹರ್ಮುಲಾವು (ಅನಾರ್=ಒಂದು ಬಗೆಯ ಪಟಾಕಿ) ಜ್ವಾಲಾಮುಖಿ ಮಾಡುತ್ತಿತ್ತು. ಅದರ ಬುಸುಗುಟ್ಟುವಿಕೆಯ ಕಾರಣದಿಂದಾಗಿ ಬೆಂಕಿ ಹಾರುವಂತೆ ಕಾಣುತ್ತಿತ್ತು. ಪ್ರತಿಯೊಂದು ಮರಕ್ಕೆ ಅಗರಬತ್ತಿ ತೋರಿಸಿದಾಗ ಹವಾಯಿ (ಒಂದು ಬಗೆಯ ಹಾರುವ ಪಟಾಕಿ)ಗಳು ಹೇಗಾದವೆಂದರೆ ಶೇಶನಾಗ ಒಳಗೆ ಹೋಯಿತು ಹಾಗೂ ಅನೇಕ ಸರ್ಪಗಳು ಹೊರ ಬಂದವು. ಬಹಳಷ್ಟು ಸಿಡಿಮದ್ದಿನ ಕಾರಣದಿಂದಾಗಿ ಭೂಮಿ ಅದರ ಮೇಲೆ ಸಿಡಿಲೇನೋ ಬಿದ್ದಿದ ಹಾಗೆ ಬೆದರಿತು. ಈ ಬೆಂಕಿಯಾಟದ ಬುಸುಗುಟ್ಟುವಿಕೆಯಿಂದ ಆಕಾಶದ ಮೋಡಗಳು ಬಿದ್ದವು. ಚಕ್ರಬಾಣಗಳ ಕೈಯಲ್ಲಿ ಆಕಾಶನೀಲಿಯ ಬಣ್ಣದ ಹೂಗಳ ಖಡ್ಗ ಮನಮೆಚ್ಚಿಸುತ್ತಿತ್ತು. ಗುಲ್ರೇಝಿನ ಮುಚ್ಚಿಗೆ ಮೊಗ್ಗಾಗಿದ್ದರೆ ಚಂಪಾ ಕೊರಳಿನ ಹಾರವಾಗಿತ್ತು. ಮಹ್ತಾಬಿನ ತಾಪ <u>ಮುಂದೆಯಾಗಿ</u> ಕಲೆ ಮಾಡಿತು, ಇದನ್ನು ಕೇಳಿ ಸೂರ್ಯನ ಮುಖ ಹಳದಿ ಬಣ್ಣಕ್ಕೆ ತಿರುಗಿ ಆರಾಮಿಲ್ಲವೆಂದು ನೆಪ ಮಾಡಿತು ಹಾಗೂ ಚಂದ್ರದಂತೆ ಬೆಳಕು ಬೀರುವುದರಿಂದ ಇಡೀ ಭೂಮಿ ವಜ್ರಗಳ ಗಣಿಯಾಗಿತ್ತು, ನಿರ್ಮಲ ತಾರೆಗಳ ಆಕಾಶ, ಬೆಣಚು ಕಲ್ಲಿನ ಕಾಡಾಗಿ ಕಾಣತೊಡಗಿತು. ಸೂರ್ಯನ ಸುತ್ತಲೂ ಅದರ ಕಿರಣಗಳು ಹೇಗೆ ಉಕ್ಕುತ್ತಿದೆಯೆಂದರೆ ರಸಿಕ ಮಧುಲೋಟ, ಪ್ರಕಾಶಮಾನ ಮದದಿಂದ ಮದ ಏರಿದಂತೆ ಕಾಣುತ್ತದೆ. ಈರೀತಿಯಾಗಿ ಎಲ್ಲ ಕಡೆಯು ವಿಧವಿಧವಾದ ಶಸ್ತ್ರಗಳನ್ನಿಡಲಾಗಿತ್ತು. ಆ ನಗ್ನ ಶಸ್ತ್ರಗಳ ಮಿಂಚು ಪ್ರಕಾಶವಾಗಿ ಅನೇಕ ರೀತಿಯಲ್ಲಿ ಹೊರಚಿಮ್ಮಿ ಕಣ್ಣಗಳನ್ನು ಮಂಕುಗೊಳಿಸುತ್ತಿತ್ತು. ಅಲೆಗಳು ಮಿನುಗುವ ಹಾಗೆ ಕಾಣುತ್ತಿದ್ದವು. ಅನೇಕ ರೀತಿಯ ವೇಷಗಳನ್ನು ಧರಿಸಿ ಈ ಮೆರವಣಿಗೆಯಲ್ಲಿ ಶಾಮಿಲಾಗಿದ್ದರು. ಎಲ್ಲೋ ಒಂದು ಕಡೆ ಹೆದರಿಕೆಯಿಂದ ಗುಲ್ಲೆಬ್ಬುತ್ತಿತ್ತು. ಮತ್ತೊಂದು ಕಡೆ ಲಂಗೂರಿ(ಕಪ್ಪು ಮುಖದ ಉದ್ದ ಬಾಲದ ಕೋತಿ)ಗೆ ಜೋರಾಗಿ ಎಳೆಯಲಾಗುತ್ತಿತ್ತು. ಮತ್ತೊಂದು ಕಡೆ ಲೇಝುಂನ ಅತಿ ಝೇಂಕಾರ ಕೇಳಿಸುತ್ತಿತ್ತು. ಸಹಾನುಭೂತಿಯಿಂದ ಶೋಕದ ಹೂವಿನ ಹಾಗೆ ವಿಶ್ವದ ಬಟ್ಟೆ ಹರಿದುಹೋಗಿದ್ದವು. ಬುಲ್ಬುಲ್ಪಕ್ಕಿಯ ಪ್ರಲಾಪದಿಂದಲೂ ಗೋಳಾಟದ ರೋದನೆಯ ಗದ್ದಲ ಕೇಳಿಸುತ್ತಿತ್ತು. ಅಕಟವನ್ನು ಕುಟ್ಟಿ ಅಲಂಕಾರ ಮಾಡಲಾಗಿತ್ತು. ಒಂದು ಚಂದ್ರವನನ್ನು ಮಾಡಿ ಈ ಕೆಲಸ ಮಾಡಲಾಗಿದ್ದರಿಂದ ದರ್ಬಾರದಿಂದ

ಮಸೀದಿಯವರಿಗಿನ ದಾರಿ ಆಕಾಶಗಂಗೆಯಾಗಿತ್ತು. ಅತ್ಯುತ್ತಮ ಗಳಿಗೆ ಎಲ್ಲಿಯವರಿಗೆ ಏರತೊಡಿಗಿತು ಎಂದರೆ ಎಲ್ಲಿಯವರಿಗೆ ಅಲಂ ಏರಿತು. ನಂತರ ಉನ್ನತ ಸ್ಥಾನದವರೆಲ್ಲರೂ ತನ್ನ ಉನ್ನತಸ್ಥಾನವನ್ನು ಸ್ವೀಕರಿಸಿದರು. ಆಗಲೇ ಅಲ್ಲಾಹನ ಕೃಪೆ ಹೆಚ್ಚಾಗಿ ಇಳಿಯಿತು. ಅಂದರೆ ಆಗ ಧಾರಕಾರಮಳೆ ಸುರಿಯಿತು. ಓ ಬಾದಶಾಹರೇ ನಿಮ್ಮ ಕಾಲದಲ್ಲಿ ಹೊಸ ಅನ್ವೇಷಣೆಗಳನ್ನು ಮಾಡಿಸಿದ್ದೀರಿ. ಆ ಅನ್ವೇಷಣ ಹೇಗಿತ್ತೆಂದರೆ ಇಡೀ ಪ್ರಪಂಚದ ಮೇಲೆ ಅದರ ದರ್ಪ ಕುಳಿತುಕೊಂಡಿತು. ಈ ಅಲಂಕೃತ ಸಭೆಗಳು ಏನಾದರೂ ತನ್ನ ಪ್ರಕೃತಿಯ ಹಾಗಿದ್ದರೆ ಒಂದು ದಿನ ಹೊಸ ಶೈಲಿಯ ವಾಕ್ಚಾತುರ್ಯದ ಹೂಬನವಾಗುವುದು. ನಾನು ಆ ಹೂಗಳಿಂದ ಸುಗಂಧವನ್ನು ತೆಗೆದುಕೊಂಡು ನೆಲಿಸಿ ಈ ಕವಿತವಾಚನ ಮಾಡುತ್ತಿದ್ದೆ. ಇಡೀ ಜಗತ್ತಲ್ಲಿ ಇದು ಅರಳಿದಾಗ ಈ ಪಂಕ್ತಿಗಳ ರಾಶಿಯಾಗುತ್ತದೆ. ಕಸ್ತೂರಿಯಂತಹ ಈ ಪದಗಳಿಂದ ಅರ್ಥದ ಪರಿಮಳ ಹೊರಹೊಮ್ಮಿ ನಿಸ್ಸಂದೇಹವಾಗಿ ನಿನ್ನಂತಹ ಪಾಂಡಿತ್ಯ ಹೊಂದಿರುವ ಶೂರವೀರನ ಮಿದುಳೆಲ್ಲ ಸುಗಂಧಭರಿತವಾಗುವುದು. ಚಿನ್ನದ ಮಳೆ ಸುರಿಯಿಲಿ ಅದರ ಪ್ರತಿಯೊಂದು ಹನಿ ದೊಡ್ಡಾಕಾರದ ಮುತ್ತುಗಳಾಗಿರಲಿ. ನಿನ್ನ ದಾನದ ದೀನಾರುಗಳಲ್ಲಿ ಕೊಂಚ ದಯೆಯುಳ್ಳ ಮೋಡ ಕವಿಯಲಿ. ನಿನ್ನ ಹೊನ್ನ ನೀಡುವ ಕೈಗಳಿಗೆ ಸೂರ್ಯನ ನೆರಳು ಬೀಳದಿರಲಿ. ಏಕೆಂದರೆ ಪ್ರತಿಯೊಂದು ನಕ್ಷತ್ರ, ನೀನು ದಾನ ನೀಡುವ ದೀನಾರಿನ ನೆರಳಾಗಿದೆ. ಯಾರು ನಿನ್ನ ಕೈಗಳಿಂದ ದೀನಾರಿನ ದಾನ ಪಡೆದುಕೊಂಡು ಹೋಗಿ ಉಪಕಾರಗೇಡಿತನ ಮಾಡಿದರೆ, ಅಂತಹ ದ್ರೋಹಬಗೆಯವರ ಹಣೆಬರಹದಲ್ಲಿ ಉಪ್ಪಿನ ಖಾರ ಮೈಯಿಂದ ಒಡೆದು ಒಡೆದು ಬೀಳುತ್ತದೆ. ನಾನು ನಿನ್ನ ಗುಣಗಳನ್ನು ಶೇಖರಿಸಿದ್ದರಿಂದ ನನ್ನ ಮಾತಿನಲ್ಲಿ ತೂಕ ಬಂತು ಮತ್ತು ಅದರ ಬೆಲೆ ಏರಿತು. ಚಿನ್ನ ಮಾಡಬೇಕಾದರೆ ಬೇರೆ ಲೋಹಗಳು ಸೇರಿಸಲಾಗುತ್ತದೆ. ಆಗ ಅದು ಸಹ ಚಿನ್ನದ ಬೆಲೆಯನ್ನೇ ಪಡೆಯುತ್ತದೆ. ಬಹಳ ಕಷ್ಟಪಟ್ಟದ ನಂತರ ಪಂಕ್ತಿಯಲ್ಲಿ ಸೂಕ್ಷ್ಮತೆ ಬರುತ್ತದೆ. ಇದು ಕೇಶಾಗ್ರಖಂಡನ, ಕೆಲಸಕ್ಕೆ ಬಾರದಂತಹ ಕಾರ್ಯವಲ್ಲ, ಖಂಡಿತವಾಗಿ ನಂಬಿ. ಈ ಆಟದಲ್ಲಿ ಯಾರ ಸಹಾಯವೂ ಇಲ್ಲ, ಇದು ಚಲಸೆಯ ಕಲೆ ಇದರ ಒಂದು ಬಳ್ಳಿ ಮಾಡಬೇಕಾದರೆ ಪ್ರತಿಯೊಂದು ಕೆಲಸವೂ ಸರಿಯಾದ ರೀತಿಯಲ್ಲಾಗಬೇಕು. ನೋಡಲು ಹಿತ್ತಾಳೆ ಮತ್ತು ಚಿನ್ನ ಎರಡೂ ಒಂದೇ ಬಣ್ಣವಿರುತ್ತದೆ. ಅವುಗಳನ್ನು ಕುಟ್ಟಿ ತಿರುಗಿಸಿದಾಗ ಅವು ಎರಡು ಲೋಹಗಳ ಪರೀಕ್ಷಣ ಒಂದೇ ಆಗಿರತ್ತಾ? ಓ ಬಾದಶಾಹ ನೀನು ಕಾವ್ಯ ಬಲ್ಲವನು, ನನ್ನಿಂದಲೇ ಕಲೆ ಶೃಂಗರಿಸಲ್ಪಟ್ಟಿದೆ ಹೇಗೆಂದರೆ ಸೂರ್ಯನಿಂದಲೇ ಪ್ರತಿಯೊಂದು ಕಣ ಲೆಕ್ಕವಿಲ್ಲದಷ್ಟು ಬೆಳಗುತ್ತದೆ. ದೇವರಾಣೆ ನಾನು ಅಸಲಿಗೆ ನೀನು ಸಾಕಲ್ಪಟ್ಟಿರುವ ಮರ, ನಿನ್ನ ಪೋಷಣೆಯಿಂದ ಇಂದು ಸುಶಿಕ್ಷಿತನಾಗಿದ್ದೇನೆ. ಯೋಗ್ಯರ ಸಂರಕ್ಷಣೆ ಮಾಡುವುದು ನಿನ್ನ ವಿಶೇಷ ಕಾರ್ಯ. ದೇವರಾಣೆಗೂ ಈ ಉಪಕಾರ ವಂದಿಸಲು ನನ್ನ ಬಳಿ ನಾಲಿಗೆ ಇಲ್ಲ. ಈ ಕಾವ್ಯದ ಕಾಣಿಕೆಯಲ್ಲಿ ಒಳ್ಳೆಯದು ಹಾಗೂ ಕೆಟ್ಟದ್ದನ್ನು ಅಡಗಿಸಿ ತಂದಿದ್ದೇನೆ. ನನ್ನ

ಮರ್ಯಾದೆ ಉಳಿಸು ಇದರ ಹೊದಿಕೆಯನ್ನು ತೆಗೆದು ದೋಷಗಳನ್ನು ವ್ಯಕ್ತಪಡಿಸಬೇಡ. ನಿನ್ನ ಮುಂದೆ ಯಾರು ಯಾವ ಬಾಯಿ ತೆಗೆಯಲು ಸಾಧ್ಯ, ಮುತ್ತಿನ ಮುಂದೆ ಕವಡೆಯ ಬೆಲೆ ಇಲ್ಲ ಹಾಗೂ ತಿರಸ್ಕರಿಸುವ ಸಾಹಸ ಯಾರಲ್ಲೂ ಇಲ್ಲ. ಯಾವ ಮಾತಲ್ಲೂ ಸಹ ಶಾಹನ ಗುಣವನ್ನು ವ್ಯಕ್ತಪಡಿಸುವ ಗುಣವಿಲ್ಲ. ಓ ನುಸ್ರತಿ ಈಗ ಪದೆ ಪದೆ ಪ್ರಾರ್ಥನೆಗಳ ಜಪ ಮಾಡು. ಸೀಸೆಯ ಆನಂದ ವಿಳಾಸದ ಮೇಲೆ ಸೂರ್ಯ ಎಲ್ಲಿಯವರಿಗೆ ಕಂಚನ್ನು ಕರಗಿಸುತ್ತಿರುತ್ತದೆಯೋ ಅಲ್ಲಿಯವರಿಗೂ ಓ ದೇವರೇ ಇವರಿಗೆ ಸುಖ ನೀಡು. (೧೩೯೧–೧೪೦೪)

■

*

ಅಧ್ಯಾಯ – ೭

ಮಲೆನಾಡಿನ ಮೇಲೆ ಶಾಹನು ಆಕ್ರಮಣ ಮಾಡಿ, ಅಲ್ಲಿಯ ರಾಜನಿಗೆ ಪರಾಜಿಸಿ, ಅವನ ದೇಶವನ್ನು ಗೆದ್ದು, ನಂತರ ಅವನಿಗೆ ತನ್ನ ಅಧೀನ ಮಾಡಿಕೊಂಡಿದ್ದ ಈ ದೀರ್ಘಕತೆ.

ಶಾಹನು ಜಯ ಸಾಧಿಸಿದ್ಧರಿಂದ ಇಮಾಮುಗಳ ಉರ್ಸ್ ಮಾಡಿದರು. ಹೃದಯದಲ್ಲಿ ಸಾಮ್ರಾಜ್ಯ ಪ್ರಾಪ್ತಿಯ ಉತ್ಸಾಹ ತುಂಬಿದೆ. ತನ್ನ ತಾನೆ ಶೌರ್ಯದ ನೆನಪು ಬಂದಾಗ ಮಲೆನಾಡಿನ ಯುದ್ಧ ನೆನಪಾಯಿತು ಅಂದರೆ ಮಲೆನಾಡಿನ ರಾಜ ಬುದ್ಧಿಹೀನ. ತನ್ನ ಗಿಡ ಮರಗಳ <u>ಬೇಲಿಯ</u> ಆಧಾರದ ಮೇಲೆ ಅಮಲೇರಿದ ಆನೆಯಾಗಿದ್ದ. ಅವನ ಅಮಲು ಇಳಿಸಲು ಮೊದಲಿಗೆ ಒಂದು ಪ್ರಸಿದ್ಧ ಹುಲಿಯನ್ನು ಕಳುಹಿಸಲಾಯಿತು. ಅವನು ಆ ಹುಲಿಯ ಅಧಿಕಾರವನ್ನು ಮರೆತು ಅಹಂಕಾರದಿಂದ ತನ್ನ ಮಾನಮರ್ಯಾದೆಯನ್ನು ಬಿಡಲಿಲ್ಲ. ಅಂದರೆ ಅಸಹಾಯಕವಾಗಲಿಲ್ಲ. ಆ ಹುಲಿ ಅಲ್ಲಿ ತಲುಪಿ ತನ್ನ ಕ್ರೋಧದಿಂದ ಕಾಡಿಗೆ ಬೆಂಕಿ ಹಚ್ಚಿದ. ಅನೇಕ ದಿನಗಳ ನಂತರ ತನ್ನ ಮಹನೀಯರ ವಾಡಿಕೆಯಂತೆ ಮುಂದೆ ಹೊರಟು ಎಲ್ಲಿಯವರೆಗೆ ತಲಪಿದರೆಂದರೆ ಅಲ್ಲಿಯವರಿಗೂ ಅನುಚಿಂತನೆಯೂ ತಲುಪಲು ಸಾಧ್ಯವಿಲ್ಲ. ಅವರು ಆ ಅಸಾಧಾರಣ ಕೆಲಸವನ್ನು ಪೂರ್ಣಗೊಳಿಸಿದರು. ಸಿಕಂದರ್‌ನ ಹಾಗೆ ಅಜೇಯ ಸಾಧಿಸಿದರು. ಸಿಕಂದರಿನ ಹಾಗೆ ಕೊನೆಗೂ ಅವರು ಉತ್ತೀರ್ಣ ಫಲಿತಾಂಶ ಪಡೆದರು. ಅವನ ಇಡೀ ದೇಶ ಗೆದ್ದರು. ಆದರೆ ನಂತರ ಆ ದೇಶದ ಆಡಳಿತ ಮತ್ತೆ ಅವನಿಗೆ ನೀಡಿ ಅವನಿಗೆ ಗುಲಾಮನನ್ನಾಗಿ ಮಾಡಿಕೊಂಡರು. ಈ ವಿಜಯ ಸಾಧಿಸಿದ ನಂತರ ನಾನು ಶಾಹರ ಆಜ್ಞೆಯ ಮೇರಿಗೆ ಈ ಪ್ರಶಂಸೆ ಕವಿತೆಯನ್ನು ಬರೆದೆ. ನನ್ನ ಪ್ರಶಂಸಾಕವಿತೆಯ ಕಲೆಯನ್ನು ತೋರಲು ನಾನು ನನ್ನ ಮನಸಾರೆ ಈ ಪ್ರಶಂಸಾ ಕವನ ಬರೆದೆ. ಈ ಕಲೆ ಮೇಲೆ ನಾನು ನೈಪುಣ್ಯ ಪಡೆದಿದ್ದೇನೆ. ಅದು ಮಹಾಜಾಣನೇ ಜಾಣತನವನ್ನು ಗುರಿತಿಸಬಲ್ಲ. (೧೫೦೫–೧೫೧೭)

ಬಾದಶಾಹರು ಮಲ್ನಾಡನ್ನು ಗೆದ್ದರು

ಓ ಬಾದಶಾಹರೇ ಈ ಪ್ರಪಂಚದಲ್ಲಿ ನಿನ್ನಂತಹ ಶಕ್ತಿಶಾಲಿ ಯಾವ ಬಾದಶಾಹ ಆಗಿರುವನು, ನೀನಂತೂ ಶಾಹೆ ಮುರ್ಸಲ್‌ರವರ ವಸಿ ಅಂದರೆ ಹಝ್ರತ್ ಅಲಿಯವರ ನಿಜವಾದ ಹೆಸರಿನವನು. ಎಲ್ಲಿ ನಿನ್ನ ಸಂಚಲ ಖಡ್ಗದ ನೆರಳು ಯಾವ ರಣದ ಮೇಲೆ ಬಿತ್ತೋ ಅಲ್ಲಿ ಜಯ ತಾನು ಶೃಂಗರಿಸಿಗೊಂಡು ತನ್ನ ಮುಖವನ್ನು ನೋಡಲು ಈಗ ತಾನೆ ಆಗಮಿಸಿದೆ. ನಿನ್ನನ್ನು ಅಸೂಯೆ ಪಡೆಯುವವರ ಹೃದಯದಲ್ಲಿ ಮತ್ಸರದ ಮುಳ್ಳು ಹೇಗೆ ಚುಚ್ಚುತ್ತದೆ, ಆ ನೋವಿನ ಚಪ್ಪಡಿಯ ಬುನಾದಿ ಮತ್ತೆ ಮತ್ತೆ ಬಾಣವಾಗಿ ಹೊರಬರುತ್ತಿದೆ. ದೇವರು ನಿನ್ನನ್ನು ಧರ್ಮಪೋಷಕ ಮಾಡಿ, ಎಲ್ಲ ಒಳ್ಳೆ ಗುಣಗಳನ್ನು ನೀಡಿದ. ನಿನ್ನ ಶ್ರದ್ಧೆ ಶುದ್ಧವಾಗಿದೆ. ಅವನು ನಿನ್ನನ್ನು ಸನ್ಮಾರ್ಗದರ್ಶನ ನೀಡುತ್ತಿದ್ದಾನೆ. ನಿನ್ನ ಎಲ್ಲ ಆಕಾಂಕ್ಷವೆಲ್ಲ ಈಡೇರುತ್ತಿದೆ. ಯಾವ ಕೆಲಸ ಲೋಕಕ್ಕೆ ಕಷ್ಟಕರವಾಗಿದೆಯೋ ಅದು ನಿನಗೆ ಸುಲಭವಾಗಿದೆ. ನೀನು ಯಾರನ್ನು ಭರವಸೆ ಮಾಡಿರುವೆ ಅವನೇ ನಿನಗೆ ಸಾಕು. ನಿನ್ನಲ್ಲಿ ಅನೇಕ ಗುಣಗಳಿವೆ, ಆದರೆ ನಾನು ಕೇವಲ ಒಂದೇ ಗುಣ ಶೌರ್ಯದ ಮಾತನ್ನು ಹೇಳುವೆ. ಗುಣಗಳ ಕೃತಿಯ ಸಂಕ್ಷಿಪ್ತ ಉತ್ತಮ ಶೀರ್ಷಿಕೆ ಶೌರ್ಯ. ಅಲ್ಲಾಹನು ಮಾನವಂತ ಮತ್ತು ಘನವಂತ. ಎಲ್ಲಕ್ಕಿಂತ ದೊಡ್ಡವ ಹಾಗೂ ಎಲ್ಲರಿಗೂ ಪ್ರಿಯನು. ಓ ಅಲಿ ಆದಿಲ್ ಶಾಹೆ ಘಾಝಿ ನೀನು ಧರ್ಮಪೋಷಕ ಸುಲ್ತಾನ, ನೀನು ಉಪೇಕ್ಷಿತ ನಾಸ್ತಿಕತೆಯ ಬುನಾದಿಯನ್ನು ಬಲವಂತದಿಂದ ಮುರಿದೆ. ಶತ್ರುಗಳ ಎದೆಗಳನ್ನು ಬರ್ಚಿ ಇಡುವ ಪೆಟ್ಟಿಗೆ ಮಾಡಿಕೊಂಡೆ. ಶತ್ರುವಿನ ಹೆಪ್ಪುಕಟ್ಟಿದ ರಕ್ತದಿಂದ ನಿನ್ನ ಖಡ್ಗದ ಮಕ್ಮಲಿನ ಒರೆ ಮಾಡಿಕೊಂಡೆ. ಅಲಿಯವರ ಯುದ್ಧದ ದೀರ್ಘಕತೆಯನ್ನು ಬರೆಯಲು ಲೇಖನಿ ಎರಡು ನಾಲಿಗೆಯ ಖಡ್ಗವಾಯಿತು. ಹೆಸರಾಂತ ವಧಾಸ್ಥಾನದಲ್ಲಿರುವ ಪ್ರತಿಯೊಂದು ಅಕ್ಷರವೂ ರಸಸಿಂಧೂರವಾಗಿ ಕಾಣುತ್ತಿದೆ. ಓ ಗೆಳೆಯರೇ ಶಾಹನ ವಿಜಯದ ದೀರ್ಘಕತೆಯು ಒಂದು ಉತ್ತರಿಸಲಾಗದಿರುವ ಪ್ರಶಂಸಗೀತೆ ಕೇಳಿ, ಇದರ ವಿಷಯ ಸಂಕ್ಷಿಪ್ತವಾಗಿದೆ ಆದರೆ ಇದರ ಅರ್ಥ ಬಹಳ ಆಳವಾದದ್ದು. ಬಾದಶಾಹನ ನೆರೆದೇಶ ಮಲ್ನಾಡಿನಲ್ಲಿ ಒಬ್ಬ ಅಹಂಕಾರಿ ಇದ್ದ. ಅವನು ತನ್ನ ಶಕ್ತಿಯ ಆಧಾರದ ಮೇಲೆ ಮಿತವಿಲ್ಲದೆ ಜಟಿಲ ಆಜ್ಞೋಲ್ಲಂಘನೆ ಮಾಡಿದ. ಆದಿಯ ಕೈಗಳಿಂದ ಮಾಡಿದ ಇಂತಹ ರಾಕ್ಷಸನ ಪಂಜರವೆನ್ನಬಹುದು, ಅದರಲ್ಲಿ ಸೈತಾನನನ್ನು ಕೂಡಿ ಹಾಕಿದರೆ ಯಾವುದೇ ಸಂರಕ್ಷಕದ ಅವಶ್ಯಕತೆ ಇರಲಿಲ್ಲ. ಅದು ತುಂಬ ಕೆಳಮಟ್ಟದಲ್ಲಿದ್ದರಿಂದ ಯಾರೂ ಇಸ್ಲಾಮಿನ ದೀಪ ತಂದಿರಲಿಲ್ಲ. ಅಲ್ಲಿಂದಲೇ ಇಸ್ಲಾಂ ಧರ್ಮದ ಮನೆಯಲ್ಲಿ ನಾಸ್ತಿಕತೆಯ ಅತ್ಯಂತ ನೀಚ ಸುರಂಗ ನಿರ್ಮಾಣವಾಗಿತ್ತು. ಬಾದಶಾಹರು ಅವನಿಗೆ ಬಹಳಷ್ಟು ಇನಾಮು ಕೊಟ್ಟು ಗೌರವಿಸಿದ್ದರು. ಆದರೂ ಸಹ ಅವನು ಬಾದಶಾಹನ ವಿರೋಧಿಯಾದ. ಸದೈವ ವಿದ್ರೋಹ ಮಾಡಿ ದಂಗೆ ಮಾಡಿ ನಾಶಪಡಿಸುತ್ತಿದ್ದ.

ಅದರಲ್ಲಿ ಅವನು ಪರಿಣತ. ಏಕೆಂದರೆ ಅವನು ಹಟಮಾರಿ, ಬಂಡುಕೋರನಾಗಿದ್ದ. ಅವನು ಅಧರ್ಮದ ಕಡೆ ಸಾಗುತ್ತಿದ್ದ. ಶಾಹಿನ್ಷಾಹರು ಅದರ ಕಡೆ ಗಮನ ಹರಿಸಿ ಆಹಾರಕ್ಕೆ ನೌಕರಿ ಕೊಟ್ಟು, ನಾಸ್ತಿಕತೆಯ ರಿವಾಜು ಕಡಿಮೆ ಮಾಡಲು ಅತಿತಿಳಿಗೇಡಿತನದ ಕವಡೆಯನ್ನು ಹಿಡಿದರು. ಆದರೆ ಬಾದಶಾಹರು ಊಟ ಮಾಡುವವರಿಗೆ ತನ್ನ ಒಬ್ಬ ದಂಡನಾಯಕನನ್ನು ಮುಂದೆ ಕಳುಹಿಸಿದರು. ಅವನು ಗಡಿದಾಟಿ ಹಾನಗಲ್ ಪ್ರದೇಶದಲ್ಲಿ ನೆಲಯೂರಿದ. ಅಲ್ಲಿ ತಲುಪಿ ಆ ಹುಲಿ ಪ್ರತಿ ಜಗಳಗಂಟನಿಗೆ ಕಾಲಿಂದ ತುಳಿದು ಹಾಕಿದ, ಆದ್ದರಿಂದ ಅವನು ತನ್ನ ಹೆಸರು ದೇಶ ಎಲ್ಲವನ್ನು ಬಿಟ್ಟು ಕಾಡಿನ ಕಡೆಗೆ ಓಡಿಹೋದ. ಅಲ್ಲಿಯವರಿಗೆ ಶಾಹನು ಸಹ ತನ್ನ ದರ್ಪದೊಡನೆ ಹೊರಟಿದ್ದರು, ಇದರಿಂದಾಗಿ ಎಲ್ಲವೂ ತಳಮಳವಾಯಿತು, ಅಂದರೆ ಎಲ್ಲಡೆಯೂ ನಾಶ ಉಂಟಾಯಿತು. ಅವರು ಬಂಕಾಪುರ ತಲುಪಿ, ಅಲ್ಲಿ ಶತ್ರುವಿನ ಸೈನ್ಯವನ್ನು ನುಚ್ಚುನೂರು ಮಾಡಿ, ಮಲೆನಾಡಿನ ಅರಸನ ತಲೆಹೊಡೆದು ಎಸೆಯಲು ಸೈನ್ಯವನ್ನು ನಿಗದಿಪಡಿಸಿದರು. ಹೀಗೆ ಅಲಿ ಸೈನ್ಯ ಅವನ ಪ್ರದೇಶವನ್ನು ತುಳಿಯುತ್ತ ಮುಂದೆ ಹೊರಟಿತು. ಆಗ ಮಳೆ ಅಡ್ಡಬರಲು ಮೋಡದ ನಗಾರಿ ಬಾರಿಸಿತು. ಗಗನದವರೆಗೂ ಮೋಡವೇ ಮೋಡಕವಿದು ಕೊಂಡು ನದಿಗಳ ಮೇಲೆ ಅಣೆಕಟ್ಟು ಕಟ್ಟಲಾರಂಭಿಸಿತು. ಇದರಿಂದಾಗಿ ಇಡೀ ಭೂಮಿಮೇಲೆ ಒಂದು ಕಷ್ಟಕರ ಕೆಟ್ಟುಹೋದ ಸಮುದ್ರವನ್ನು ನಾಶ ಮಾಡಲು ನಿರ್ಮಾಣವಾಯಿತು. ಆಗ ಅಲಿ ಸೈನ್ಯದ ಹತೋಟಿ ತನ್ನ ಕೈಗೆ ತೆಗೆದುಕೊಂಡ, ಯಾವಾಗ ಎಲ್ಲ ಕಡೆ ಕಳವಳ ಉಂಟಾದಾಗ, ಯಾರು ಎಲ್ಲೆಲ್ಲಿದ್ದರೋ ಅಲ್ಲಲ್ಲೇ ಕುಳಿತುಬಿಟ್ಟರು. ಮಳೆಕಾರಣದಿಂದ ಬಹಳ ಕಷ್ಟಉಂಟಾದಾಗ ಬಾದಶಾಹನು ಅನೇಕ ದಿನಗಳವರೆಗೆ ತನ್ನ ದಂಡಿನೊಂದಿಗೆ ಅಲ್ಲೇ ನೆಲಸಿದರು. ಏಕೆಂದರೆ ಈ ಮಳೆಯಿಂದಾಗಿ ಯುದ್ಧವನ್ನು ಗೆಲ್ಲಲು ಕಷ್ಟ ಅನುಭವಿಸಬೇಕಾಗಿತ್ತು. ಕೊರತೆಯ ಕಾರಣ ಶಹನ್ಷಾಹರು ಎಲ್ಲೆಲ್ಲಿ ಹೋದರು? ಕಷ್ಟ ಅನುಭವಿಸಿದ್ದನ್ನು ನಾನು ವಿವರಾಗಿ ಹೇಳಲಿಲ್ಲ. ಕಥೆಯನ್ನು ಸಂಕ್ಷಿಪ್ತ ಪಡೆಸಿದ್ದೇನೆ. ಸಭೆಯ ಜಾಗವನ್ನು ವರ್ಣಮಯ ಮಾಡಲು ಮನಸನ್ನು ಹರುಷುಲ್ಲಾಸ ಮಾಡಲು ಈ ಕಥೆಯನ್ನು ಅನೇಕಸಲ ಕೇಳಲು, ಪ್ರಶಂಸಗೀತೆಯ ಎರಡನೆಯ ಅಂತ್ಯಪ್ರಾಸು(ಮತ್ಲಸಾನಿ) ಹೇಳಲು ನನ್ನ ಸಹಜಗುಣ ಚಿಂತಿಸಿತು. (೧೫೧೮–೧೫೪೩)

ಪ್ರಶಂಸಗೀತೆಯ ಎರಡನೆಯ ಅಂತ್ಯಪ್ರಾಸು ಇದೇ ವಿವರಣೆಯಲ್ಲಿ

ಈ ಲೋಕದಲ್ಲಿ ಸ್ವರ್ಗದ ಮೊದಲನೆಯ ವ್ಯಕ್ತಿಯ ವಿಚಿತ್ರವಾದ ತಮಾಷೆ. ಇವನು ಎಲ್ಲ ಒಳ್ಳೆಯತನಗಳಿಂದ ತುಂಬಿರುವನು. ಅಂದರೆ ತಾಜಾ ಹೂವು ಇದ್ದಹಾಗೆ. ದೃಷ್ಟಿಯ ಓಟ ಎಲ್ಲಿಯವರಿಗೆ ಇದೆಯೋ ಅಲ್ಲಿಯವರೆಗೂ ಮನಮುಟ್ಟುವ ಉದ್ಯಾನ, ಮನಸ್ಸು ಎಷ್ಟು ನಡೆಯಬಹುದು ಅಂದರೆ ಮನಸ್ಸಿನಲ್ಲಿ ಏನನ್ನು ಯೋಚನೆ ಮಾಡಲಾಗುವುದು ಅದರ ಮುಂದೆ ಮೋಸವಿದೆ. ನೀರಿನ ತೊಟ್ಟಿ ಎಷ್ಟೊಂದು

ಆಳವಿದ್ದರೂ ಸಹ ಆಕಾಶ ಅದರಲ್ಲಿ ಈಜಲು ಸಾಧ್ಯವಿಲ್ಲ. ಆದ್ದರಿಂದ ದುಂಡಗಿರುವ ಚಂದ್ರನು ತನ್ನ ಹೆಗಲಿನ ಮೇಲೆ ಒಂದು ಚಿಕ್ಕ ಕಟ್ಟಿಗೆಯ ದೋಣಿ ಎತ್ತಿಕೊಂಡು ಬಂದ. ನೀರು ಎಷ್ಟು ಚೆನ್ನಾಗಿ ಹಾಗೂ ನಿರ್ಮಲವಾಗಿತ್ತೆಂದರೆ ಅದರಲ್ಲಿ ಅಕ್ಕಿಯ ಒಂದು ಕಾಳು ಬಿದ್ದರೂ ಸಹ ಅದು ತಳದಲ್ಲಿ ಕಾಣಿಸುತ್ತದೆ. ಇಂತಹ ನಿರ್ಮಲ ನೀರಿನ ಮೇಲೆ ತಂಗಾಳಿ ಬೀಸಿದಾಗ ಅಲೆಗಳು ಪ್ರಿಯಕರನ ಮುಖದ ಮೇಲೆ ಕೇಶಗಳು ನಿರಂತರ ಉರುಳುವ ಹಾಗೆ ಕಾಣಿಸುತ್ತದೆ. ಗಗನ ಜಗತ್ತನ್ನು ನೀರು ಕುಡಿಸಲು ಸೂರ್ಯನ ಲೋಟದಿಂದ ಅಲ್ಲಿ ಸದೈವ ಮೋಡಗಳ ನೀರು ತುಂಬುವ ಚರ್ಮದ ಚೀಲ ತುಂಬುವನು. ಈ ತೋಟದ ಮುಂದೆ, ನೀರಿನ ತೊಟ್ಟಿಯ ಸ್ವಚ್ಛತೆ ಹೇಗೆ ಕಾಣುತ್ತದೆ ಎಂದರೆ ಯಾರೋ ಮಹಿಳೆ ಹೊಳೆಯುವ ಕನ್ನಡಿ ಇಟ್ಟುಕೊಂಡು ಶೃಂಗರಿಸುತ್ತಿದ್ದಾಳೆ. ಮೇಲೆ ಪಾತಾಳದವರೆಗೆ ಭೂಮಿ ನೀರಿನ ಖಜಾನೆಯಿಂದ ತುಂಬಿದೆ. ಅದರ ಕೆಳಗೆ ಹರಳುಗಳನ್ನು ಜೋಡಿಸಿದ ಯಂತ್ರದ ಕಾರಂಜಿಯಂತೆ ಪ್ರತಿಯೊಂದು ಮರ ಬೆಳದಿದೆ. ಸಿಹಿ ನೀರನ್ನು ಅದರಲ್ಲಿ ಇಂಗಿಸಿ ಭೂಮಿಗೆ ಹೀಗೆ ರಸ ಭರಿತ ಮಾಡಲಾಗಿದೆ. ಮಣ್ಣಿನ ಕುಡಿಕೆ ಹೊಡೆದು ಹೋದರೆ ಕಲ್ಲು ಸಕ್ಕರೆಯಾಗುತ್ತದೆ. ರೂಪ ದೆವ್ವವಿದ್ದರೂ ಸಹ ಅದು ಬೆಳೆದ ನಂತರ ಕಲ್ಲುಸಕ್ಕರೆ ಆಗುವುದು. ಗೆರೆಯುಳ್ಳ ಸಾಧನೆಯ ಮೇಲೆ ಸಾಲುಗಳ ಗೆರೆಯ ಸರಿಯಾಗಿ ಪ್ರತಿಯೊಂದು ಕಾಲುವೆಗಳಿವೆ, ಇಬ್ಬನಿ ಚಮಕಿಗಳಂತೆ ಹರಡಿರುವದರಿಂದ ಸೂರ್ಯನ ಕಿರಣಗಳು ಅದರ ಮೇಲೆ ಬಿದ್ದು ಅದು ಕುಂದನ ಹಾಳಾದಂತೆ ಎಲ್ಲ ಕಡೆ ಕಾಣುತ್ತದೆ. ದಾಳಂಬರೆಯ ಮನಮೆಚ್ಚುವ ಪೊದೆ ಸುಂದರ ಚುನಾರಿನ ಮರಗಳನ್ನು ಮರೆಸುವೆವು. ಹಾಗೆಯೇ ಅಡಕತ್ತರಿಯಲ್ಲಿಡುವ ಅಡಿಕೆಯ ಉನ್ನತ ಸುಂದರವಾದ ಗಿಡಗಳು ಕಾಣಿಸುತ್ತವೆ. ಕಲ್ಲಂಗಡಿ ಹಣ್ಣು ಸಿಹಿ ನೀರಿನಿಂದ ಬಡಾಯಿ ಮಾಡಿಕೊಂಡು ಸ್ಥಾನ ಗಿಟ್ಟಿಸಿಕೊಂಡಿತು ಹಾಗೂ ಮುಂಜಲಿನ ಹಸಿ ತರುಳುನಕ್ಷತ್ರಗಳಂತೆ ಸ್ಥಾನ ಮಾಡಿಕೊಂಡಿತು. ಪ್ರತಿಯೊಂದು ಹಣ್ಣು ತನ್ನ ಕೊಂಬೆಗಳಲ್ಲಿ ಹೂಗಳ ಕಾರಣದಿಂದ ತಾರುಣ್ಯದ ಶೈಲಿಯ ಸೌಂದರ್ಯ ಎನ್ನಲು ಸಾಧ್ಯ. ಎಷ್ಟು ಶುಷ್ಕಫಲ ರೆಂಬೆಗಳ ಮೇಲೆ ಹೇರಿವೆ ಅದರ ದಾವೆ ಏನೆಂದರೆ ಅದು ಸದಾಕಾಲ ಹಣ್ಣುಕೊಡುವ ಮರ. ಹಸಿರು ಹುಲ್ಲಿನ ಇಳಿಜಾರು, ಕೆಳಗೆ ಪನ್ನಂಬರ ಬಣ್ಣದ ಎತ್ತರವಾದ ಬನ, ಎಲ್ಲಾದರು ಒಣಮರವಿದೆ ಎಂದರೆ ಅದು ಚಂದನದ ಮರ. ಎಲ್ಲಕ್ಕಿಂತ ಅಲ್ಪಸಂಖ್ಯೆಯಲ್ಲಿ ಇರುವುದು ಬೇಲ್ಸರ್ ಹಾಗೂ ವೀಳ್ಯದೆಲೆ ಪಾತಿ, ಮರಗಳಲ್ಲಿ ಲವಂಗ ಮತ್ತು ಜಾಫಲ್ ಮರಗಳು. ಪ್ರತಿಯೊಂದು ಮರ ಹೂಗಳ ಕವಚ ತೊಟ್ಟು ಪ್ರಿಯನ ಹಾಗೆ ಮುಳುಗಿದೆ, ಮೊಗ್ಗಿನ ಬಳ್ಳಗಳಲ್ಲಿ ಪ್ರತಿಯೊಂದು ಹೂವಲ್ಲಿ ಕಂಠಕಡದ ಹಾರದಂತೆ ಕಾಣುತ್ತದೆ. ಬೇಲಿಗಳ ಮೇಲೆ ಹೂಬಳ್ಳಿಗಳು ಸುರಂಗ ಬೇಲಿ ಮಾಡಿಕೊಂಡು ಖಲಂ ಕಾರಿ(ದಕ್ಷಿಣದ ಪ್ರಸಿದ್ಧ ಬಟ್ಟೆ, ಅದರ ಮೇಲೆ ಹೂ ಬಳ್ಳಿಗಳನ್ನು ಮಾಡಲಾಗುತ್ತದೆ) ಮಾಡುವಂತೆ ಕಾಣುತ್ತದೆ. ಪ್ರತಿಯೊಂದು ಹೂವಿನ ಚಪ್ಪರ ಮಕ್ಮಲಿನ ಉದ್ಯಾನವಾಗಿದೆ.

ಈ ಚಪ್ಪರಗಳ ಮೇಲೆ ಮುಂಜಾನೆಯ ಬಿಸಿಲು ಹುಲ್ಲಿನ ಮೇಲೆ ಹೇಗೆ ಬೀಳುತ್ತಿತ್ತೆಂದರೆ ಹಸಿರು ರೇಷ್ಮೆಬಟ್ಟೆಯ ಮೇಲೆ ಚಿನ್ನಬೆರಸಿ ಚಿತ್ರಬಿಡಿಸಿಲಾಗಿದೆ ಎನ್ನುವ ಹಾಗೆ ಕಾಣುತ್ತದೆ. ಮುಂಜಾನೆಯ ಸಣ್ಣ ಹಲಗೆಗಳ ಪುಟಗಳ ಮೇಲೆ ಹೂಗಳಿಂದ ಫಲಕದ ಶಿರ ಬರೆದಿದೆ. ಪ್ರತಿಯೊಂದು ಕಾಲುವೆಯ ಅಂಚು ತನ್ನ ಜಾಗದಲ್ಲಿ ಸರಿಯಾದ ಪಟ್ಟಿಯಾಗಿದೆ. ಒಂದೊಂದು ಹೂವಿನಮಡಿ ರತ್ನದ ಎಂತಹ ತಟ್ಟೆ ಎಂದು ಹೇಳಲಿ, ಪ್ರತಿಬಣ್ಣದ ಹೂವು ದೃಷ್ಟಿಗೆ ಜ್ಯೋತಿ ನೀಡುತ್ತದೆ.ಇಲ್ಲಿರುವ ಮಲ್ಲಿಗೆ(ಸುಮನ್)ವಜ್ರವೆಂಬಂತೆ ಮತ್ತು ಕೆಂಪುಬಣ್ಣದ ಹೂವು(ಲಾಲ), ಮಾಣಿಕ್ಯ, ಕೆಂಪುರತ್ನ(ಲಅಲ)ದಂತೆ, ನೀಲಮಣಿ(ನೀಲಂ)ಸಹ ಕಡುಕೆಂಪಾಗಿದೆ. ಹಸಿರುಬನದ ಸುಂದರ ನೋಟ, ಪಚ್ಚೆಯ ನಿರ್ಮಲ ಸೌಂದರ್ಯದಂತಿದೆ. ಕೆಂಪು ಬಣ್ಣದ ಹೂಗಳ ಬಣ್ಣ ನವವಧುಗಳ ಅಂಗೈಗಳ ಮೇಲೆ ಮುದ್ರಿಸಿದೆ. ಪ್ರಿಯರ ಪಂಜಗಳಿಗೆ ಚಂಚಲ ರೂಪ ಕೊಟ್ಟಿದೆ. ಪ್ರತಿ ಮರವೂ ಕಾಮಕಸ್ತೂರಿ/ಸಿಹಿ ತುಳಸಿ ಎಂಬಂತೆ ಅದರ ಸುಗಂದ ಪನ್ನಂಬರದ ಅಗರಬತ್ತಿಯಂತೆ. ಮಕ್ಮಲಂತಹ ಚೆಂಡ್ಹೂವಿನ ಮರ ಗಗನದ ದೀಪ ಹುರಿದಂತೆ ಕಾಣಿಸುತ್ತದೆ. ನೀರಿನ ಚಿಲುಮೆಗಳಲ್ಲಿ ಈ ಕಮಲದ ಬಾಗಿದ ಟೊಂಗೆಗಳು ಬೆಳ್ಳಿ ಆರತಿಯ ಮೇಲೆ ಸೆರಗಿನ ಮರೆಯಿಂದ ಮಿಂಚುವ ಹಾಗೆ ಕಾಣುತ್ತದೆ. ರಾಯೆ ಚಂಪ(ಸಂಪಿಗೆ)ಯ ಹೂ ಮತ್ತು ಮೊಗ್ಗುಗಳು ಮದನದ ಬಾಣದಂತಿದೆ. ಬರ್ಚಿಯ ಮೊನೆ ಎಂಬಂತೆ ಕೆದಿಗಿಯ ಹೂವು, ಯಾರೋ ಒಬ್ಬನ ಹಾಸಿಗೆಯ ಯುದ್ಧಕ್ಕಾಗಿದೆ. ಪ್ರತಿಯೊಂದು ಅಮಲೇರಿದ ನರ್ಗಿಸಿನ ಚಿತ್ರ ಕಣ್ಣುಗಳಲ್ಲಿ ಕಾಣಿಸಲು ನಿರ್ಮಲ ಕಣ್ಣುಗಳ ಹಾಳೆಯ ಮೇಲೆ ಕಾಡಿಗೆಯ ಶೈಲಿ ಹಾಕಿದೆ. ಯಾವುದೇ ಟೊಂಗೆಯ ಮೇಲೆ ಯಾವ ಹೂವೂ ಕೂಡ ನಿದ್ರಾಭಂಗವಾಗುವುದನ್ನು ಅನೇಕ ಸಲ ಕಂಡುಬಂದಿಲ್ಲ, ದೃಶ್ಯಗಳು ಹೇಗಿದೆಂದರೆ ದೃಷ್ಟಿಯ ಸ್ಥಿತಿಗಳು ಓರೆಯಾಗಿವೆ. ದೃಷ್ಟಿಗೆ ಬಣ್ಣ ನೀಡಲು ಪ್ರತಿಯೊಂದು ಹೂಬಣ್ಣದ ತಟ್ಟೆ, ಮನಸ್ಸನ್ನು ಸುಗಂಧಮಯ ಮಾಡಲು ಮೊಗ್ಗಿನ ಪ್ರತಿಯೊಂದು ನಳಿಕೆ ಸುವಾಸನೆಯಿಂದ ತುಂಬಿದೆ. ಬೇಸಿಗೆ ಕಾಲದಲ್ಲಿ ಸೂರ್ಯ ಏರಿ ತೋಟದ ತಲೆ ಮೇಲೆ ಬಂದಾಗ ಗಾಳಿಬೀಸಿದರೆ ಚಂದನದ ಲೇಪನೆ ಹಚ್ಚಿದ ಹಾಗೆ ಒಂದು ಕ್ಷಣದಲ್ಲಿ ತಣ್ಣವಾಗುವುದು. ಈ ವಿಶ್ರಾಂತಿ ಸ್ಥಳದಲ್ಲಿ ಬಾದಶಾಹರು ನಿತ್ಯ ಅಡ್ಡಾಡುತ್ತಾರೆ. ಈ ಪ್ರಪಂಚ ಸುತ್ತುತ್ತಿರುವುದನ್ನು ನೋಡಿ ಬುಲ್ಬುಲ್ ಹಕ್ಕಿಯ ಗಮನವು ಈ ಕಡೆ ಹರಿಯಿತು. ಸಂಗೀತ ನೃತ್ಯದ ಸಭೆ ಶೃಂಗರಿಸಿ ಅವತಾರ ಮಂಡಲದ ಸುಂದರ ಧ್ವನಿ ಬರಲಾರಂಭಿಸಿದಾಗ ಮರಗಳಿಗೆ ಆವೇಶ ಬಂದು ತೋಟದ ಅಂಗಳದಲ್ಲಿ ತೂಗಿದವು. ಇದು ಶಾಹನ ಕೃಪೆ ಇದರಿಂದ ಪ್ರಪಂಚ ನಿತ್ಯ ಲಾಭ ಪಡೆಯುತ್ತದೆ. ಆಕಾಶದ ಕೃಪೆಯಿಂದ ಈ ನೀರು ಮಣ್ಣಿನ ಲೋಕದಲ್ಲಿ ಜೀವಿಸುತ್ತಿದೆ. ಗೇಲಿ ಮಾತೆಗಳೆಲ್ಲ ಬಿಟ್ಟು ಈಗ ನಾನು ಕೆಲಸದ ಆ ಕಥೆ ಹೇಳಲು ಹೊರಟಿದ್ದೇನೆ, ಅದು ಹೃದಯಗಳನ್ನು ಮತ್ತಷ್ಟು ಹತ್ತಿರ ಪಡೆಸುವಷ್ಟು ಶ್ರೇಷ್ಠವಾಗಿದೆ. ಮಳೆಗಾಲ ಮುಗಿಯುವವರೆಗೆ ಮಂತ್ರಿಗಳ ಬಲದಳ ಬಂದು ಸೇರಿದಾಗ

ಬಾದಶಾಹರು ಕೆಲಸ ಮಾಡುವ ನಿರ್ಣಯ ತೆಗೆದುಕೊಂಡರು. ಅದಾಗ್ಯೂ ಬಹಿರಂಗದಲ್ಲಿ ರೋಷವಿತ್ತು, ಆದರೆ ಅಂತರಂಗದಲ್ಲಿ ಕನಿಕರವಿತ್ತು. ಮೊದಲು ಯಾವಾಗಲೋ ತನ್ನ ಮನೆಯಿಂದ ಅವನಿಗೆ ಗೌರವಿಸದ್ದ. ಅಪರಾಧಿ ತನ್ನ ತಪ್ಪನ್ನು ಒಪ್ಪಿಕೊಂಡಿದ್ದರೆ ಉತ್ಕೃಷ್ಠ ದೃಷ್ಟಿಯುಳ್ಳವನಾಗಿದ್ದರಿಂದ ಆ ತಿಳಿಗೇಡಿನ ಪಾಪವನ್ನು ಸುಲಭ ಮಾಡುತ್ತಿದ್ದ, ಮನಸ್ಸಲ್ಲಿ ಈ ಮಾತು ಅಡಗಿಸಿಕೊಂಡು ಅವನಿಗೆ ಬಿಡುವು ಸಹ ನೀಡಲಾಯಿತು, ಆದರೆ ಹಣೆಬರಹದ ಕಾರಣ ಬದಲಾಯಿಸಲು ಎಲ್ಲಿ ಸಾಧ್ಯವಾಗುತ್ತದೆ. ಶಾಹನ ಕ್ರೋಧ ಹಾಗೂ ಕೃಪೆಯಲ್ಲಿ ಏನು ವ್ಯತ್ಯಾಸವಿದೆ ಎಂದು ತಿಳಿಯಲಿಲ್ಲ. ಕಟುಸೇಬಿನ ತರಿಳು ತಿಂದಿರುವವನಿಗೆ ಸಕ್ಕರೆಯ ಮಹತ್ವ ಏನು ತಿಳಿಯುತ್ತದೆ. ಅವನಿಗೆ ಅಹಂಕಾರದ ಮದ ಎಷ್ಟು ಏರಿತ್ತು ಎಂದರೆ ಅವನು ಸನ್ಮಾರ್ಗ ಹಿಡಿಯಲು ಇಚ್ಛಿಸಲಿಲ್ಲ. ಏಕೆಂದರೆ ಅವನೊಬ್ಬ ದುರ್ಮಾರ್ಗಿ ಮೋಡ. ಆಗ ಶಾಹರು ನಾಯಕರ ಸಭೆ ಕರೆಸಿ ಎಲ್ಲರೂ ಸೇರಿ ಪರಸ್ಪರ ಪರಿಪೂರ್ಣ ಪ್ರಯತ್ನ ನಡೆಸಬೇಕೆಂದರು. ಶಹಬಾಸ್! ಅಬದುಲ್ ಹಂದ್ ಇವನು ಖಡ್ಗ ಹಾಗೂ ಲೇಖನಿಯ ಧಣಿ, ಅವನು ಮಾರ್ಗದರ್ಶಕನಾಗಿ ಬುದ್ಧಿವಂತಿಕೆಯ ಒಳ್ಳೆ ಸಲಹೆ ನೀಡುವನು. ಅವನ ಬುದ್ಧಿವಂತಿಕೆಯ ಛಾಯೆ ರವಿಯ ಮೇಲೆ ಬಿದ್ದರೆ, ಹಗಲಿರುಳು ಬೆಳಕೇ ಇರುತ್ತದೆ. ದೀಪಗಳ ಅವಶ್ಯಕತೆಯೇ ಇರುವುದಿಲ್ಲ. ಖಡ್ಗದ ಹೊಳಪಿನಿಂದ ಧರ್ಮದ ಸಭೆಯನ್ನು ತಾಜಾ ಮಾಡಿದ, ಧರ್ಮಯುದ್ಧದ ಬೆಂಕಿಯಿಂದ ತುಚ್ಚ ಸತ್ಯನಿಷೇಧ ಕಾಡನ್ನು ಸುಟ್ಟುಹಾಕಿದ. ಶಾಹನ ಸಲಹೆಗಾರರಂತೆ ಲೋಕದಲ್ಲಿ ಯಾರಿಗೂ ಸಿಕ್ಕುವುದಿಲ್ಲ. ಹಝ್ರತೆ ಯಝ್‌ದಾನ್‌ರವರ ಹೇಳಿಕೆಯ ಪ್ರಕಾರ ಅವನು ಪ್ರವಾದಿಗೆ ಪ್ರಿಯನಾದವನು. ಶೌರ್ಯಹೊಂದಿದ ಸರ್ದಾರರೂ ಇದ್ದರು ಹಾಗೂ ಎಂತಹ ಸಲಹಗಾರರೆಂದರೆ ರುಸ್ತುಮಿನ ಹಾಗೆ ತನ್ನ ಶಕ್ತಿಯಿಂದ ಕೆಡಕಿನೊಂದಿಗೆ ಸಮರ ಮಾಡುವರು. ಅಲಿಯ ಪಂಕ್ತಿಯಲ್ಲಿ ಇರುವ ಈ ಎಲ್ಲ ಶೂರರು ಘರ್ಜಿಸುವ ಹುಲಿಗಳು, ಅವರಲ್ಲೇ ಶರ್ಝ ಎಂಬ ಹೆಸರಿನ ಒಬ್ಬ ಬಲಾಢ್ಯ ಪರಾಕ್ರಮಿ ಇದ್ದ. ಶಾಹ್ ಆದಿಲ್‌ನ ಗೌರಾನ್ವಿತ, ಅವನ ಹೆಸರು ಶರ್ಝ, ಅವನ ಹೆದರಿಕೆಯಿಂದ ಮಂಗಳಗ್ರಹದ ಮಿದಳು ಕರಗಿ ನೀರಾಗುತ್ತದೆ. ಅವನು ಎಂತಹ ಶೂರನೆಂದರೆ ಯಾವುದೇ ಸಮರದಲ್ಲಿ ಎಲ್ಲಾದರೂ ಅವನು ಮುಂದಿಟ್ಟ ಹೆಜ್ಜೆ ಹಿಂದೆ ಬರುತ್ತಿರಲಿಲ್ಲ. ಅವನ ಸದ್ವಿಚಾರದ ನಡತೆ ದಾರಿತಪ್ಪಿದವರಿಗೂ ಸಹ ಮಾರ್ಗದರ್ಶನ ಮಾಡುತ್ತದೆ. ಅವನ ನಂಬಿಕೆ ನಿರ್ಮಲ ಪ್ರತಿಯೊಬ್ಬ ವ್ಯಕ್ತಿಗೂ ಸಹ ತರಬೇತಿ ಕೊಡುವವನನ್ನಾಗಿ ಮಾಡುವುದು. ಶುದ್ಧಮನಸ್ಸಿನಿಂದ ಅವನು ಶಾಹನ ಒಪ್ಪಿಗೆಗೆ ಹೃದಯದಲ್ಲಿ ಜನ್ಮಕೊಟ್ಟಿರುವನು. ತನ್ನ ಕಷ್ಟಗಳ ನಿವಾರಣೆ ಅಲಿಯವರ ನಾಮದ ಸಹಾಯದಿಂದ ಮಾಡಿಕೊಳ್ಳುತ್ತಾನೆ. ಆ ಗಂಡು ಹುಲಿ ಯಾವಕಡೆ ಅಲಿ ಹೆಸರು ಹೇಳಿ ಧಾವಿಸುತ್ತಾನೋ ನೋಡುನೋಡುತ್ತಲೆ ಶತ್ರು ತನ್ನ ಬುದ್ಧಿ ಮತ್ತು ವಿವೇಕ ಹಾಗೂ ತನ್ನ ಕಲೆ ಎಲ್ಲವನ್ನೂ ಮರೆಯುವನು ಹಾಗೂ ಅವರ ಸಾಲುಗಳೆಲ್ಲ ಅಸ್ತವ್ಯಸ್ತವಾಗುತ್ತವೆ.

ಭಂಕಲನಿವಾಸಿಯರಿಗೆ ಭೂಮಿಯಿಂದ ತೆಗೆದುಹಾಕುವ ಉದ್ದೇಶವಿದೆ ಎಂದು ಶಾಹರು ನೋಡಿ ನಿಜಾರ್ಥ ತಿಳಿದರು. ತಾವು ಅಪ್ಪಣೆ ಕೊಟ್ಟರೆ ಒಂದೇ ಒಂದು ಆಕ್ರಮಣದಲ್ಲಿ ಹಸ್ತ ಎಸೆದು ತಲೆಬರುಡೆಯಿಂದ ಮಿದಳು ತೆಗೆದು ಹಾಕುವೆ ಎಂದು ಹೇಳಿದ. ಬಾದಶಾಹರ ಸಲಹೆಗಾರರು ಈ ಮಾತನ್ನು ಹೇಳುವರು. ವಿಶೇಷವಾಗಿ ಶಾಃ ಘಾಝಿರವರು ಹೇಳಿದರು. ಈ ಸಮರದ ದಂಡನಾಯಕ ನಾನು, ನಾನು ನನ್ನ ಸೈನ್ಯವನ್ನು ಶತ್ರುವಿನ ರಕ್ತದ ಹೊಳೆಯಲ್ಲಿ ಹಾಕಿ, ಅಲೆಯ ಮೇಲೆ ನಾವೆತೇಲಿಸಿ ಅದರ ಮೇಲೆ ಆನೆ ಭಾರ ಹಾಕಿದೆ. ಶಾಹನ ಖಡ್ಗದ ನೀರಿನ ಒಂದು ತೊಟ್ಟು ಹಾರಿ ಬಿದ್ದರೆ ಆಕಾಶ ತನ್ನ ಪಿತೂರಿಯ ತಾಮ್ರದ ಕೊಪ್ಪರಿಕೆಗೆ ಜನ್ಮದಲ್ಲಿ ತಾಪ ಕೊಡಲು ಸಾಧ್ಯವಿಲ್ಲ. ಸೂರ್ಯನಿಗೆ ಒಂದು ಕಡೆ ನಗಾರಿ ಮಾಡಿದರೆ ಮತ್ತೊಂದು ಕಡೆ ಚಂದ್ರನಿಗೆ ಇಡೀ ರಾತ್ರಿ ನೀಡಿದ. ಕುದುರೆ ಸೈನ್ಯ ತಂದು ಗಾಬರಿಗೊಳಿಸಿ ಚಿತ್ರಿಸಿದ. ಮುಂಜಾನೆಯ ಬೆಳಕು ನೀಲಿಯಾದ್ದರಿಂದ ಸೂರ್ಯನು ಖಡ್ಗ ತೆಗೆದುಕೊಂಡು ಹೊರಟಾಗ ದೊಡ್ಡಕಾಲಿನ ಸವಾರ ಚಂದ್ರ ಅವನಿಗೆ ಎದುರಿಸಲಾರದೇ ಓಡಿ ಹೋದ. ಆಗ ಬಾದಶಾಹನೂ ಸಹ ತಯಾರಾಗಿ, ಅಲಿ ಬಂದ್ ಕಟ್ಟಿಕೊಂಡು ಕೈಯಲ್ಲಿ ಖಡ್ಗ ತೆಗೆದುಕೊಂಡು ವಾಯುಗಿಂತ ವೇಗವಾಗಿ ಕುದುರೆಯ ಮೇಲೆ ಸವಾರಾದನು. ಅಪ್ಸರೆಗೆ ಮಗನಿ ಹೊಸ ಕವಚ ಸಿಕ್ಕಿದಾಗ ಹೊಸ ರೆಕ್ಕೆ ಬಂದಂತಾಗಿ ಆ ವೇಗ ಚಂಚಲನು ಗಾಳಿಯಲ್ಲಿ ಹಾರಲು ಇಚ್ಛಿಸಿದ. ಅವನ ಆಟದ ದುರುಗುಟ್ಟುವಿಕೆಯಲ್ಲಿ ಅನೇಕ ಮಂದಿ ಪ್ರಿಯರಿಗೆ ಕಾಣಿಸುತ್ತದೆ, ಪ್ರಿಯೆಯ ಗುಂಗರು ತಲೆಕೂದಲಲ್ಲಿ ಕ್ಷೇತ್ರ ಶೋಧನೆಯ ವರ್ತುಲ ಕಾಣಿಸುತ್ತದೆ. ಮುಂಜಾನೆಯನ್ನು ನದಿಯ ಮೇಲೆ ಮೂಡಣಗಾಳಿಯ ಹಾಗೆ ದೋಷರಹಿತದ ಮೇಲೆ ತಳ್ಳಿದರೆ ಆ ನೀರಿನಿಂದಲೂ ಬಣ್ಣ ತೆಗೆದು ಹೋಗುತ್ತದೆ, ನದಿಯ ತಳಕ್ಕೂ ಹೋಗಿ ಗಾಳಿ ತಾಗುತ್ತದೆ. ಎಡಬಲ ಸೈನ್ಯ ಸಿದ್ಧವಾಗಿ ಮುಂದೆ ಸಾಗುತ್ತಿದೆ. ಅಮೀರರ ಸೈನ್ಯವೂ ಕೂಡ ಚೆನ್ನಾಗಿ ಅಸ್ತ್ರಶತ್ರುಗಳಿಂದ ಸಜ್ಜಾಗಿ ಸಾಗುತ್ತಿತ್ತು. ಎಷ್ಟೊಂದು ಶಸ್ತ್ರಾಸ್ತ್ರಗಳು ಶೂರರು ತಮ್ಮ ಸೊಂಟದ ಪಟ್ಟಿಯಲ್ಲಿ ಶೃಂಗರಿಸಿ ಕೊಂಡಿದ್ದರು, ಅಂದರೆ ಸಿದ್ಧವಾಗಿದ್ದರು. ಗುಲ್ಮೇಖ=(ತಲೆಮೇಲೆ ಯಾ ಹಣೆಮೇಲೆ ಹೊಡೆಯುವ ಒಂದು ಯುದ್ಧೋಪಕರಣ), ಕವಚ ತೊಟ್ಟುಕೊಂಡು ತೋಪ್ ಮತ್ತು ಚುಂಗಲನ್ನು ತಗೆದು ಕೊಂಡು ಮುಂದೆ ಸಾಗುತ್ತಿದ್ದರು. ಪ್ರತಿಯೊಂದು ಕುದುರೆ ವೇಗದಲ್ಲಿ ಕವಚಧಾರಿ ಕುದುರೆ ಎಂಬಂತೆ ಇತ್ತು, ಅಂಕುಶ ತಾಗುತ್ತಿದ್ದಂತೆ ಭೀಕರಹುಲಿಯ ಜರಿಬಣ್ಣವೂ ತಿಳಿಯಾತು. ಬಾಣದ ತುದಿ, ಬರ್ಚಿ ಕವಚದ ನೊಸಲಾಭರಣಗಿಂತ ಹೆಚ್ಚು ಅಮಲೇರಿದ ಆನೆ ಸಂಕಷ್ಟದಲ್ಲಿ ಸಿಕ್ಕಿಹಾಕಿದಾಗ ಕುಕ್ಕೆಯಂತಹ ತಲೆಯಲ್ಲಿ ಗೂಟದಂತಹ ಹಲ್ಲು ಕಿತ್ತು ಹೋಯಿತು, ಆಕಾಶ ಅಲ್ಲಾಡಿದಾಗ ಮಂಗಳದ ಮಿದುಳು ಅಲುಗಾಡಿತು. ಕೋತ್ವಾಲ್ ಲಕ್ಷ್ಮೀ ಶ್ರೀ ನಾಯಕ್ ಅನೇಕ ಹೆಸರಾಂತ ನೌಕರ್ ಚಾಕರರೊಡನೆ, ಕೆದಗೆ ಹೂವಿನ ಮೊನೆಯುಳ್ಳ ಬರ್ಚಿ, ತಲೆಬುರುಡೆ, ಕನ್ಕೇರಿ ಹಾಗೂ ಕೊಯೆಲ್ ಅಂತಹ ಶಸ್ತ್ರಾಸ್ತ್ರಗಳನ್ನು ತೆಗೆದು

ಕೊಂಡು ಹೊರಟರು. ಬಣ್ಣ ಬಣ್ಣದ ಗುರಾಣಿಗಳು ಗಾಳಿಯ ಮೇಲೆ ಬಣ್ಣದ ಮೋಡಗಳು ತೇಲಾಡುವಂತೆ ಕಾಣುತ್ತಿದ್ದವು, ಪ್ರತಿಯೊಂದು ಮೊನೆಗಳ ಹೊಳಪು ಮಿಂಚಿನ ಹಾಗೆ ಹೊಳೆಯುತ್ತಿತ್ತು. ಬಾದಶಾಹನ ಸೈನ್ಯ ಬರುತ್ತಿದೆ ಎಂಬ ಸುದ್ದಿ ಕೇಳಿ ಅವರು ತಮ್ಮ ಗಡಿಗೆ ಬಂದರು. ಪ್ರಪಂಚದಲ್ಲಿ ಆ ಜಾಗದ ಕಳವಳ ಒಂದು ಕೂಗಾಗಿತ್ತು. ಸುತ್ತಲೂ ಅಮಲು ಶೃಂಗರಿಸಿದ ಜಾಗವೆಂದರೆ ಮಲೆನಾಡು, ಮುಂದೆ ಹೇಗಿದೆಯೆಂದರೆ ಅದರ ಮುಖದ ಮೇಲೆ ಕೋಟೆ ಅರಳಿಮರದ ಇಂದ್ರಜಾಲದಂತೆ ಕಾಣಿಸುತ್ತದೆ. ಎಲ್ಲ ಜಾಗವು ಕುಕ್ಕೆಯಂತೆ ಒಳ್ಳೆ ಬಣ್ಣವಂತೂ ಬೆಂಕಿಯ ಜ್ವಾಲೆಯಂತೆ ಕಾಣುತ್ತಿತ್ತು, ಆದರೆ ಎಲ್ಲ ರಸವನ್ನು ಮಿಶ್ರಗೊಂಡು ತಾಮ್ರಕ್ಕಿಂತ ಭದ್ರವಾದ ಸೈನ್ಯವಾಗಿದೆ. ಪ್ರತಿಯೊಂದು ಯುದ್ಧದ ಚಿಕ್ಕ ತೋಪಿನ ಶಿಖೆ ಕರಿನಾಗರಹಾವಿನ ಬಿಲವಾಗಿದೆ. ಪ್ರತಿಯೊಂದು ಬುರುಜು ಸೂರ್ಯನ ಕಿರಣ ಹೆಬ್ಬಾವಿನ ಹುತ್ತದ ಬಿಲದಹಾಗೆ ಕಾಣುತ್ತಿದೆ. ಮಧ್ಯದಲ್ಲಿ ಮಹಾಬಲದ ಕೋಟೆ ಖಜಾನೆಯಂತೆ ಅಡಗಿದೆ. ತುಂಬಿದ ಖಂದಕ ನಾಗರಹಾವಿನ ಕುಂಡಲದಂತಿದೆ. ಮುಂದಿನ ಅಂಗಳದಲ್ಲಿ ಎಷ್ಟೊಂದು ನೀರು ತುಂಬಿದೆಯೆಂದರೆ ಭೂಮಿಯ ತಳ ಕಾಣುವುದಿಲ್ಲ. ಈ ರೀತಿಯಾಗಿ ಆ ಮೈದಾನದಲ್ಲಿ ನೆಲಜಲದ ಒಂದು ಜ್ವಾಲೆಯಾಗಿದೆ. ಸುತ್ತಲೂ ಕಣ್ಣಿನರೆಪ್ಪೆಯಂತಹ ಚಿಕ್ಕದಾರಿಯ ಪ್ರತಿಯೊಂದು ಹೆಜ್ಜೆಯೂ ಸಹ ತಡವರಿಸುತ್ತದೆ. ಸ್ವಲ್ಪವೂ ಏನಾದರು ಕಣ್ಣು ತಪ್ಪಿದರೆ ಭೂಮಿಯ ಕೆಸರಿನ ದೃಶ್ಯ ಕಂಡುಬರುತ್ತದೆ. ಒಂದು ಕಡೆಯಿಂದ ಬಂದು ಬಿದ್ದಿರುವ ದಟ್ಟ ವೃಕ್ಷಗಳಾದರೆ, ಮತ್ತೊಂದು ಕಡೆ ಪರ್ವತದ ಕಣಿವೆಯ ಸಂದಣಿ ಇದೆ. ಮುಂದೆ ಹೋದರೆ ಅದರ ಹಿಂದೆ ಗೋಡೆ ಅದರ ಮೇಲೆ ತೋಪು ಇಡಬಹುದು. ಅರಿಸ್ಟಾಟಲ್ ಇದನ್ನು ಭದ್ರವಾದ ಗೋಡೆ ಎನ್ನುತ್ತಾನೆ. ಇದು ಅದರ ಸಾಕ್ಷಿ. ಇದರ ಮೇಲೆ ನೀರು ಬಂದು ಹೇಗೆ ಜಾರಿದೆಯೆಂದರೆ ಮುಳ್ಳು ತಾನೇ ಬಂದು ದಾರಿಮೇಲೆ ನಿಂತಿದೆ. ರೂಪ ಮತ್ತು ಅರ್ಥದಲ್ಲಿ ಬಹಿರಂಗವಾಗಿ ಪಾಷಾಣ ಮತ್ತು ನೀರಿನ ಗುಣವಿದೆ. ಭೂಮಿ ಪ್ರತಿಯೊಂದು ಚಿಕ್ಕ ಹಾಗೂ ದೊಡ್ಡ ಮರಗಳ ತುದಿಗಳನ್ನು ಅಡಗಿಸಿಕೊಂಡಿದೆ. ಆಕಾಶವನ್ನು ತಡೆಯಲು ಟೊಳ್ಳುಬಿದುರಿನ ತಿರುಳೇ ಮಿಕ್ಕಿರುವುದು. ಪ್ರತಿಯೊಂದು ಜೇಡರ ಬಲೆಯ ಜಾಲ ಮೃತ್ಯುವಿನ ವರ್ತುಲವನ್ನಾಗಿ ಸೀಳುತ್ತಿದೆ. ಮುಳ್ಳಿನಿಂದ ನಿರ್ಮಿಸಿಲ್ಪಟ್ಟ ಬಳ್ಳಿಗಳು ಹೇಗೆ ಹೊರಟಿವೆ ಎಂದರೆ ಕಂಕುಳದಲ್ಲಿ ತೂಗಿಸಿರುವ ದಾರೆಯಂತಿದೆ. ಹಾವುಗಳ ಕಾಡಲ್ಲಿ ವೃಕ್ಷಗಳ ಕಾರಣ ಕತ್ತಲೆ ಹೇಗೆ ಕಾಣುತ್ತದೆಂದರೆ ಇರುಳಿನ ಕಣ್ಣುಗಳಲ್ಲಿ ಕಪ್ಪು ಕಾಡಿಗೆ ಹಚ್ಚಿದಂತಿದೆ. ಎಲ್ಲಿ ನೀರಿದೆ ಎಲ್ಲಿ ಭೂಮಿ ಇದೆ ಎಂದು ತಿಳಿಯಲು ಸಾಧ್ಯವಿಲ್ಲ. ಎಲೆಗಳ ಮೇಲೆಲ್ಲ ಒಂದೇ ರೀತಿಯ ಹಸಿರು ಅಂತರಜಲ ಕಾಣಿಸುತ್ತಿತ್ತು. ಈ ರೀತಿಯ ಇಂದ್ರಜಾಲ ಆಟ ಬಹುಶಃ ಅರಿಸ್ಟಾಟಲ್ ಕೂಡ ಆಡಿರಲಿಲ್ಲವೇನೋ. ಶಹಬಾಷ್ ಸಿಕಂದರನೂ ಸಹ ತನ್ನ ಶಕ್ತಿಯ ಮೇಲೆ ಕತ್ತಲೆ ಮೇಲೆ ಜಯಸಾಧಿಸಿ ಅದರಲ್ಲಿ ಪ್ರವೇಶ ಪಡೆಯಲಿಲ್ಲ. ಶಹಿನ್ಷಾಹೆ ರಾಯಭಾರರು ಕೋಟೆಯ ಕಡೆ ಹೊರಟು ಅದರ ಅಳಿವೆಯ ಬಳಿ

ತಲುಪಿದಾಗ ಅದರ ಹಿಂದೆ ಮತ್ತೊಂದು ಸೈನ್ಯ ಗುಲ್ಲೆಬ್ಬಿಸಿ ಕೊಂಡು ಕುಳಿತುಕೊಂಡಿದೆ. ಆದಾಗ್ಯೂ ಆ ಕಡ್ಡಿಗಳ ಹಿಂಬದಿಯಲ್ಲಿದ್ದ ಕೋಟೆ ಬೆಚ್ಚಿಬಿತ್ತು. ತನ್ನ ಸಮ್ಮುಖದಲ್ಲಿ ಬರುವವರೆಲ್ಲರನ್ನು ತುಳಿಯುತ್ತ ಸೈನ್ಯದ ಕುದುರೆಗಳು ಮುಂದೆ ಸಾಗಿದವು. ಧೂಳು ಬನದಲ್ಲಿ ಕುಳಿತುಕೊಳ್ಳಲು ಸಾಧ್ಯವಾಗದೇ ಹಟಾತ್ತನೇ ಆ ಧೂಳು ಗಾಳಿ ಎದ್ದಾಗ ಅದನ್ನು ಕೊಡವಿ ಹೊರಟಾಗ ಇಡೀ ಬನ ಹಗುರಾಯಿತು. ಆ ಸೈನ್ಯ ಆ ಸಣ್ಣ ದಾರಿಯಲ್ಲಿ ನುಗ್ಗುತ್ತ ಹೋದಾಗ ಒಬ್ಬೊಬ್ಬರನ್ನು ಎಸೆಯುತ್ತ ಮುಂದೆ ಸಾಗುತ್ತ ಹೋಗುತ್ತಿದ್ದಾಗ ನಡೆ ನಡೆ ಎಂಬ ಗುಲ್ಲು ಎದ್ದೇಳುತ್ತಿತ್ತು. ಶತ್ರುಗಳು ನೋಡಲು ಭಯಂಕರ ಹುಲಿಯಂತೆ ಸಾಲು ಸಾಲಾಗಿದ್ದವು. ಆಗ ಜಲ್‌ತರಂಗ್ ಅಂತಹಾ ಏಟು ಬಿದ್ದಾಗ ಭೂಮಿ ನಗಾರಿಯಂತೆ ಬಾರಿಸಲಾರಂಭಿಸಿತು. ಎಷ್ಟೊಂದು ಗುಂಡುಗಳು ಹಾರಿದವೆಂದರೆ ಭೂಮಿ ಬರಡಾಯಿತು ಹಾಗೂ ಮಾತುಗಳ ಜ್ವಾಲೆ ಗಗನಕ್ಕೆ ಪಂಜಿಯ ರೂಪ ಕೊಟ್ಟಿತು. ಹೀಗಿದ್ದಾಗ ಖಾಸ ಮಂತ್ರಿಗಳೆಲ್ಲ ಒಗಟ್ಟಾಗಿ ಸೇರಿ ಶತ್ರುವಿನ ಮೇಲೆ ಮತ್ತಷ್ಟು ಜೋರಾಗಿ ಆಕ್ರಮಿಸಲು ನಿಶ್ಚಯಿಸಿದರು. ಅವರಲ್ಲಿ ಒಬ್ಬ ಅಬದುಲ್ ಹವ್ಡ್ ಖಾನ್ ಹುಲಿಯಂತಿದ್ದ, ಅವನ ಖಡ್ಗದ ಮಿಂಚಿನಿಂದ ಮುಂಜಾನೆಯ ಸೂರ್ಯನೂ ಕಳಂಕಿತವಾಗುತ್ತಿದ್ದನು. ಒಬ್ಬ ತರುಣ ಹಾಗೂ ಯುವಕ ಮುಝುಫ್ಫರ್ ಖ಼ಾನ್ ಎಂತಹ ಅಚಲ ಸಾಲು ಕಟ್ಟುತ್ತಿದ್ದನೆಂದರೆ ವಿಜಯದ ತಂಗುವ ಸ್ಥಳದಲ್ಲಿ ಅವನೊಬ್ಬ ಬಲಶಾಲಿ ಸಹಾಯಕನಾಗಿದ್ದ. ಅವನೊಡನೆ ಸೈಯ್ಯದ್ ಮುಹಮ್ಮದ್ ಮತ್ತು ಅಲಿ ಅವರ ಹೆಸರು, ಅವರ ಮನೆಯಲ್ಲಿ ಶೌರ್ಯ ನೆಲಸಿತ್ತು. ಏಕೆಂದರೆ ಅವರು ಬಲು ಬುದ್ಧಿವಂತರಾಗಿದ್ದರು. ಯುಗದ ಬುದ್ಧಿವಂತರಲ್ಲಿ ಮೌಲ್ವಿ ಅಹ್ಮದ್ ಎಂಬ ಹೆಸರಿನವನೂ ಒಬ್ಬ, ಅವನ ಸೈನ್ಯದ ಸಹಾಯದಿಂದ ಈ ಸೈನ್ಯ ಕಾರ್ಯ ಜರುಗಿಸಿತ್ತು. ಇವನ ಸೇನೆ ಅವರಿಗೆ ಮಾರ್ಗದಶನ ಮಾಡಿತ್ತು. ಆ ಖ಼ಾನ್ ತನ್ನ ಶೌರ್ಯದಲ್ಲಿ ಪ್ರಸಿದ್ಧನಾಗಿದ್ದ, ಮಂತ್ರಿಗಳು ಸಹ ಅವನ ಪ್ರಶಂಸೆ ಮಾಡುತಿದ್ದರು. ಬಣ್ಣ ಬಣ್ಣದ ಗುರಾಣಿಗಳಿಂದ ಮಂಡಲದ ಅಂಗಳ ಉದ್ಯಾನವಾಗಿತ್ತು. ಅವರ ಆಕ್ರಮಣಗಳಿಂದ ಅಂದರೆ ಧೈರ್ಯದಿಂದ ಆ ಸೈನ್ಯದ ಮೇಲೆ ತನ್ನ ಮೊನೆಯುಳ್ಳ ಬರ್ಚಿಗಳಿಂದ ಆಕ್ರಮಿಸಿದಾಗ, ವರ್ತುಲದ ಮೇಲೆ ಎಲ್ಲಿಯವರಿಗೆ ಭತ್ತದ ಪೈರಿನ ಹಾಗೆ ಯಾರು ನಿಂತಿರುವರೋ ಅವರು ಧೈರ್ಯದಿಂದ ಆಕ್ರಮಿಸುವ ಸಮಯವಾಗಿತ್ತು. ಹೊಗೆ ಮತ್ತು ಧೂಳು ಸೇರಿ ಮಿನುಗುವ ರೇಷ್ಮೆ ಬಟ್ಟೆಯ ಮಂಟಪ ತಾಮ್ರವಾಯಿತು. ರಕ್ತ ಬೀಳುತ್ತ ಹೋಯಿತು ಹಾಗೂ ಭೂಮಿ ಮೇಲೆ ಕೆಂಪು ಮಕ್ಮಲು ಹಾಸುತ್ತ ಹೋಯಿತು.ದಂಡನ್ನು ಎಸೆದಾಗ ಶತ್ರುಗಳ ಮುಖಗಳ ಮೇಲೆ ಅಂಧಕಾರದ ಮೋಡಗಳು ಕವಿದವು. ಹಾಗೂ ಶತ್ರುಗಳನ್ನು ಹುಡುಕಿ ಹುಡುಕಿ ಕತ್ತಿಗಳಿಂದ ಆಕ್ರಮಣ ಮಾಡಲಾಯಿತು. ಇಂತಹದರಲ್ಲಿ ಕತ್ತಿಗಳ ಒಂದು ಜನಸಮೂಹ ಸಾವಿನ ಬಾಗಿಲಲ್ಲಿ ನಿಂತಿತು. ಸಾವಿಗೂ ಸಹ ಅದರಲ್ಲಿ ಪ್ರವೇಶಿಸುವ ಶಕ್ತಿ ಇರಲಿಲ್ಲ. ಈ ಕತ್ತಿಗಳು ಅತ್ಯಧಿಕವಾಗಿ ತೊಟ್ಟಿರುವ ಹಾರಗಳನ್ನು ಇಳಿಸಿದವು. (ಅಂದರೆ ತೋಳುಗಳನ್ನು

ಕತ್ತರಿಸಲಾಯಿತು.) ರುಂಡದ ತುರಾಯಿಯಿಂದ ಮುಂಡದ ಮಕ್ಮಲಿನಂತಹ ಚೆಂಡುಗಳನ್ನು ಹಾರಿಸಲಾಯಿತು. ಅನೇಕರು ರಕ್ತದ ಪಾನೀಯ ಮುಕ್ಕಳಿಸಿ ನೆಲದ ಮೇಲೆ ಉಗಿದರು. ಇನ್ನು ಅನೇಕರು ಬಾಯಿತುಂಬ ಹಲ್ಲಿನ ಅಕ್ಕಿಯ ತುತ್ತು ತಿಂದಿದ್ದರು. ವಿಪರೀತ ಗಾಳಿಯಿಂದ ಸುತ್ತಲೂ ಕವಿದಿರುವ ಮೋಡಗಳು ಹೇಗೆ ಹೊಡೆದು ಹೋಗುತ್ತದೆಯೋ ಹಾಗೆಯೇ ಕತ್ತಿಗಳ ವಿಪರೀತ ಉದ್ರೇಕದಿಂದ ಹೃದಯ ಬಾಗಿಲು ಮುರಿಯಿತು. ಆ ದಿಕ್ಕಿನಿಂದ ಸಿಡಿಮದ್ದಿನ ಉಗ್ರಾಣದ ಬಾಗಿಲಿತ್ತು. ಅದರ ದೊಡ್ಡ ಬಾಗಿಲು ಮುರಿಯಲು ಆನೆಗಳನ್ನು ತಂದು ಅವುಗಳನ್ನು ಮುರಿಯಲಾಯಿತು. ಒಳಗೆ ಏನು ಅಪಾಯ ಕಾದಿದೆಯೋ ಏನೋ ಎಂದು ಅಂದಾಜು ಮಾಡುತ್ತ ಕೋಟೆವರೆಗೂ ತಲಪಿದರು. ಮೇಲೆ ಕಣ್ಣಿನ ದೃಷ್ಟಿ ಕೆಳಗೆ ತುಕ್ಕು ಆದರೂ ಒಂದುಗಳಿಗೆಗೂ ಹೆಜ್ಜೆ ಕಂಪಿಸಲಿಲ್ಲ. ಕಂದಕದ ನೀರಿನ ಅಲೆಗಳು ಬಟ್ಟೆಯ ಅಡ್ಡಗೋಡೆಗಳನ್ನೂ ಸಹ ಅಡಗಿಸಿತು. ರಕ್ತ ಹೇಗೆ ಹರಿದು ತುಂಬಲಾರಂಭಿಸಿತೋ ಹಾಗೆಯೇ ವರಂಗಳಿನ ಸೈನ್ಯದ ಠಾಣೆಯವರ ಹಾಸಿಗೆಯೂ ಅಗಲವಾಯಿತು. ಭೂಮಿಯ ತಲೆಯ ಬೈತಲೆಯ ದಾರಿಯಲ್ಲಿ ರಕ್ತದ ಸಿಂಧೂರ ತುಂಬಿತು. ತಾಜಾ ಕೊಚ್ಚಿಹೋಗಿದ್ದ ತಲೆಬುರುಡೆ ರಕ್ತದಲ್ಲಿ ಸಂಪೂರ್ಣ ಒದ್ದೆಯಾಗಿ ಹೇಗೆ ಕಾಣಿಸುತ್ತಿಂದರೆ ಯಾರೋ ಅವರ ಕೂದಲಲ್ಲಿ ಮಾಣಿಕ್ಯ ಜಡೆದು ಕೂದಲಿನ ಆಭರಣ ತೊಡ್ಡಿಸಿದ್ದಾರೆ ಅನ್ನುವಂತೆ, ಹೆಣಗಳ ರಾಶಿ ಹೇಗಿತ್ತೆಂದರೆ ಹೆಣಗಳಿಂದ ರಕ್ತದ ತೊಟ್ಟಿಯನ್ನು ತುಂಬಿರುವರೋ ಹಾಗಿದ್ದರೂ ಸಹ ಅದರಲ್ಲಿ ಇನ್ನು ಅಧಿಕವಾಗಿ ಖಲ್ ಖಲ್ ಎಂದು ಶಬ್ದ ಮಾಡುತ್ತ ರಕ್ತ ತುಂಬುತ್ತಲೇ ಇದೆ. ಆ ರಕ್ತ ತುಂಬಿದ ಕಂದಕದಲ್ಲಿ ಕೋಟೆಯ ನೆರಳು ಹೇಗೆ ಕಾಣಿತ್ತಿತ್ತೆಂದರೆ ಉಲ್ಟಾ ಹೊಡೆದ ಹಾಗೆ ಕಾಣುತ್ತದೆ. ಕೋಟೆ ಮೇಲಿಂದ ಹಿಂದುರಿಗಿ ಹೊಡೆಯುತ್ತಿದ್ದಾರೆಂದು ಕಾಣುತ್ತದೆ. ಇಂತಹದರಲ್ಲಿ ಶಾಹನ ಸೇನೆಯನ್ನು ಎದುರಿಸಲು ಬಂದಾಗ ಧೂಳು ಎಷ್ಟೊಂದು ಎತ್ತರವಾಗಿ ಎದ್ದೇಳಿತೆಂದರೆ ಅದು ಸೂರ್ಯನನ್ನು ಮುಟ್ಟುತ್ತಿತ್ತು. ಅವರ ತಲೆ ಮೇಲೆ ಮೃತ್ಯುವಿನ ಬಲೆ ಮುರಿದು ಬಿದ್ದಂತಾಯಿತು. ನೆಲದ ಮೇಲೆ ಯಾರಿಗೂ ಮರೆಯಾಗಿ ಅಡಗಿಕೊಳ್ಳಲೂ ಜಾಗವಿಲ್ಲದಂತಾಯಿತು. ಹಗಲಿನಲ್ಲಿ ಹೇಗೋ ತಮ್ಮ ಪ್ರಾಣ ಉಳಿಸಿಕೊಂಡಿದ್ದವರು ರಾತ್ರಿಯಾದಾಗ ಕಾಡಿನ ಡೊಂಕು ಡೊಂಕಾದ ದಾರಿಗಳಿಂದ ಓಡಿ ಹೋದರು. ಯಾರು ಮುಳ್ಳಲ್ಲಿ ಸಿಕ್ಕಿಹಾಕಿಕೊಂಡರೊ ಅವರಿಗಂತೂ ಅಗೋಚರದಿಂದ ಅವಮಾನವಾಯಿತು. ಯಾರು ಬಳ್ಳಿಗಳಲ್ಲಿ ಸಿಕ್ಕಿಹಾಕಿ ಕೊಂಡರೊ ಅವು ಕತ್ತಿನವರಿಗೆ ತಲುಪಿದವು ಅವು ಅವನ ಪಾಲಿಗೆ ಗಲ್ಲಿನ ಜಾಲವಾಯಿತು. ಅಲಿಯ ವಿಜಯದಿಂದ ಸುತ್ತಲೂ ದೀನ್ ದೀನಿನ ಘೋಷಣೆ ಕೇಳಿಬಂದವು. ಆ ಘೋಷಣೆಗಳಿಂದ ಇಡೀ ಪೃಥ್ವಿ ನಡುಗಿತು ಹಾಗೂ ತಿರುಮಲದ ವಿಗ್ರಹ ಹಾರಿಬಿದ್ದು ನುಚ್ಚುನೂರಾಯಿತು. ಮುಂಜಾನೆ ಬಾದಶಾಹರು ಆಗಮಿಸಿದರು. ಆ ಕೋಟೆಯನ್ನು ನೋಡಿ 'ಇಂದು ನಾವು ಇನ್ನೂ ಹೆಚ್ಚು ಕೆಲಸ ಮಾಡುವೆವು. ಅದರಿಂದಾಗಿ ನಿನ್ನೆ ನಮಗೆ ವಿಜಯ ಪ್ರಾಪ್ತವಾಯಿತು' ಎಂದು

ಹೇಳಿದರು. ಈ ಸನ್ನೆ ಸಿಕ್ಕಿದ ತಕ್ಷಣ ಬಿದನೂರಿನ ಕಡೆಗೆ ಸೈನ್ಯಗಳು ಹೊರಟವು. ಈ ಬಿದನೂರಿನ ದೌರ್ಭಾಗ್ಯ ಇದು ಅತ್ಯಂತ ನೀಚನ ರಾಜಧಾನಿಯಾಗಿತ್ತು, ಯುದ್ಧ ಮಾಡುವುದು ಮಾಡಿಸುವುದು ಎರಡೂ ಸಹ ಶಾಹನಿಗೆ ಸಿಕ್ಕವು. ಅವರು ಅಗೋಚರದಿಂದ ಸನ್ಮಾರ್ಗದರ್ಶನ ಪಡೆದು ದೇವರಲ್ಲಿ ವಿಶ್ವಾಸವಿಟ್ಟು ಎಲ್ಲಿ ಭ್ರಮೆಯೂ ತಲುಪಲು ಸಾಧ್ಯವಿಲ್ಲವೋ ಅಲ್ಲಿ ತಲಪುವರು. ತನ್ನ ಸೈನ್ಯವನ್ನು ಸಮರಾಡಿಸಲು ಅವರು ದೂರ ಪೊದೆಗಳಲ್ಲಿ ಹೋದರು. ಅವರು ದೂರ ಹೋಗಲು ತೆಗೆದುಕೊಂಡ ನಿರ್ಧಾರ ನೆನಪಿಸಿಕೊಂಡರೆ ಹೃದಯವೂ ಅದನ್ನು ನೆನೆದು ದಣಿದು ಹೋಗುತ್ತದೆ. ಅವರು ಬಿದನೂರಿಗೆ ಹೋಗುವಾಗ ಮಧ್ಯದಲ್ಲಿ ಕೋಟೆ ಕಾಣಿಸಿಕೊಂಡಿತು. ಮುಂದೆ ಸಾಗುತ್ತಿದ್ದ ಸೈನ್ಯವನ್ನು ಆ ಜಾಗದಲ್ಲಿ ತಡೆಹಿಡಿದರು. ಶಹಿನ್ಷಾಹರು ಆ ಕೋಟೆ ಗೆದ್ದರು. ನಂತರ ತನ್ನ ಸೈನ್ಯವನ್ನು ಬಿದನೂರಿನ ಕಡೆ ರವಾನಿಸಿದರು. ಬಿದನೂರಿನ ಬಾವಿಯ ವಿಚಿತ್ರ ಕಾಲ್ಪನಿಕ ಮಾತು, ಅದೊಂದು ಒಗಟು, ಅದನ್ನು ಬುದ್ಧಿಯೂ ಸಹ ನಿವಾರಿಸಲು ಸಾಧ್ಯವಾಗಲಿಲ್ಲ. ಸಹಸ್ರಾರು ಸುರುಳಿಸುತ್ತ ಪೊದೆಗಳು ಕನ್ಯೆಯರ ಗುಂಗುರು ಕೂದಲಿನಂತೆ ಅದರಲ್ಲಿ ಬೈತಲೆಗಿಂತಲೂ ಸಣ್ಣ ತಂಗುಘಟ್ಟದ ಚಿತ್ರ ಕಾಣಿಸುತ್ತದೆ. ಇಲ್ಲಿಯ ಕಾಡುಗಳಲ್ಲಿ ದಾಲಚೀನಿ (ಚಕ್ಕೆ)ಯಮರಗಳಿವೆ. ಅದರ ಸಿಪ್ಪೆಯಲ್ಲಿ ರುಚಿ ತುಂಬಿರುತ್ತದೆ, ತನ್ನ ತಿರುಳಲ್ಲಿ ಸುಗಂಧವನ್ನಿಟ್ಟಿರುವ ಚಂದನದ ಕಾಡು ಮತ್ತೊಂದು ಕಡೆ ಇದೆ. ಈ ಕಾಡಲ್ಲಿ ಸೀಬೆ ಕಾಯಿ, ನೇರಳೆ ಹಣ್ಣು, ಹಲಸಿನ ಹಣ್ಣು, ಉಪ್ಪುನೇರಳೆ, ತೇಂದು(ಬಹುಷಃ ಸೀತಾಫಲ)ಭಿಲಾಂವೆ ಗಿಡಗಿಳದ್ದರೆ ಮತ್ತೊಂದು ಕಡೆ ಹರ್ಡ(ಬಹುಷಃ ಹಲ್ದೆ)ಮಾಫಲ್ ಹಾಗೂ ಮುಂದಲ್ ಮರಗಳಿವೆ. ಬಣ್ಣದ ಸುಗಂಧಿತ ಹೂವುಗಳು ತನ್ನ ಸುಗಂಧದಿಂದ ಲೋಕವನ್ನೇ ಸುಗಂಧಮಯ ಮಾಡುತ್ತಿವೆ. ಅಲ್ಲೇ ಸಂಪಿಗೆ ಹೂವು ಕಾಣಿಸುತ್ತದೆ. ಅಲ್ಲೇ ಕೀಳುಜಾತಿಯ ಮೋಡದ ಹೂವು ಸಹವಿದೆ. ಪ್ರತಿಯೊಂದು ಬದಿಯಲ್ಲೂ ಗುಹೆಗಳ ಸಾಲು ಅಲ್ಲಿ ಹುಲಿಗಳಿವೆ. ಪ್ರತಿಯೊಂದು ಬೆಟ್ಟದ ಕೆಳಪ್ರದೇಶದಲ್ಲಿ ಹೊಟ್ಟೆಯಲ್ಲಿ ಆಳವಾದ ಹಳ್ಳಗಳಿವೆ. ಚಿಲುಮೆಗಳ ನಿರ್ಮಲವಾದ ನೀರಲ್ಲಿ ಇವುಗಳ ನೆರಳು ನೋಡಲು ಆನಂದಮಯ. ಕಣ್ಣಿಗೆ ಕಾಡಿಗೆ ಹಚ್ಚಿದಾಗ ಯಾವ ರೀತಿಯ ಸೊಬಗವಾಗುತ್ತದೆಯೋ ಹಾಗೆ. ಇದು ಎಷ್ಟೊಂದು ದಟ್ಟ ಕಾಡೆಂದರೆ ಈ ಜಾಗದಲ್ಲಿ ಹಗಲು ಇರುಳು ಎರಡೂ ಸೇರಿ ಕುಳಿತಿರುವ ಹಾಗೆ ಕಾಣುತ್ತದೆ. ದುಂಬಿಯ ಹಾಗೆ ಮನ ಗೆದ್ದಲು, ಇಲ್ಲಿ ಮನರಂಜನೆಯ ಅನೇಕ ಸಾಧನೆಗಳಿವೆ. ಮತ್ತೆ ಕೂದಲನ್ನು ಕಪ್ಪು ಮಾಡಲು ಆ ಡಬ್ಬಿಯಲ್ಲಿ (ಖಿಝಾಬ್=ಕೂದಲನ್ನು ಕಪ್ಪಾಗಿಸುವ ವಸ್ತು)ತೆಗೆದು ಕೊಂಡು ಬಾ, ಯಾವ ತಲೆ ಚಂದ್ರಬೆಳಕಂತೆ ಬೆಳ್ಳಗಾಗಿದೆಯೋ ಅದನ್ನು ರಾತ್ರಿಯ ಹಾಗೆ ಎಣ್ಣೆಗಪ್ಪು ಮಾಡೋಣ. ಸೂರ್ಯ ನಾಲ್ಕು ತೆರೆಗಳಿಂದ ಭೂಮಿಯ ನಿರ್ಮಲ ಚೆಹರೆಯನ್ನು ನೋಡಬೇಕೆಂದರೂ ಸಹ ಈ ದಟ್ಟ ಕಾಡಿನ ಕಾರಣ ಒಂದು ಎಲೆಯೂ ಸಹ ಓರೆಯಾದರೇ ಯಾವ ತಮಾಷೆ ಕಾಣಲು ಸಾಧ್ಯವಿಲ್ಲ. ಬಿದರಿನ ದಟ್ಟ ಪೊದೆಗಳ

ಜಾಲ ಪೇಟದಂತೆ ಗಾಳಿಯ ತಲೆಯಿಂದ ಮುಂಜಾನೆಯ ಸೆರಗನ್ನು ಸೀಳಿ ಎಸೆಯುತ್ತದೆ. ಪ್ರತಿಯೊಂದು ಬಿದುರಿನ ಮುಳ್ಳು ಪ್ರತಿಯೊಂದು ಎಲೆ ಧರ್ಮವಾಗಿದೆ ಹಾಗೂ ಪ್ರತಿಯೊಂದು ಹೂವು ಶಸ್ತ್ರಚಿಕಿತ್ಸೆಯ ದೊಡ್ಡತಟ್ಟೆಯಾಗಿದೆ. ಪ್ರತಿಯೊಂದು ಮುಳ್ಳು ರಕ್ತ ತೆಗೆದು ಕೊಳ್ಳಲು ರಕ್ತನಾಳದ ಶಸ್ತ್ರಸಲಾಕೆಯಾಗಿದೆ. ಈ ಕಂಟಕವನದ ಕಾಡಲ್ಲಿ ಸೂರ್ಯನ ನೆರಳು ಬಿದ್ದರೆ ಕಿರಣಗಳ ಕೇಶಗಳೆಲ್ಲ ಸಿಕ್ಕಿಕೊಂಡು ಚಿವುಟಿ ಹೋದ ಹಾಗೆ ಹೂವಿನ ಗತಿಯಾಗುತ್ತದೆ. ಈ ರೀತಿಯ ಕಷ್ಟಕರ ಬಾವಿ ಮತ್ತೆ ಬಲಪ್ರದರ್ಶಿಸಲು ಸಾಹಸ ಮಾಡಿತು. ಶಾಹ್ ಅವರನ್ನು ತುಳಿಯುತ್ತ ಬರುತಿದ್ದಾನೆಂದು ಗುಲ್ಲೆಬ್ಬಿತು. ಕಷ್ಟಕ್ಕೀಡಾದಾಗ ಅವರ ಕಾಲು ನಡುಗದೇ ದೃಢ ನಿಲುವು ಇರಬೇಕೆಂದು ಯೋಚಿಸಿ ಶಾಹರು ತನ್ನ ಕಾಲ್ನಡಿಗೆ ಸೈನ್ಯದಿಂದ ಒಳ್ಳೆ ಬಿಲ್ಲುಗಾರರನ್ನು ಆರಿಸಿದರು. ರಾಜ್ಬಂದಿ ಹಾಗೂ ಅವರಲ್ಲೂ ಮದ್ದಿನವರು, ಬಂದೂಕುಧಾರಿಯರು ಯಾರೋ ಸಹೋದರನಾಗಿದ್ದರೆ ಮತ್ಯಾರೋ ಅಳಿಯನಾಗಿದ್ದ. ನೀರಿನ ಹರಿವು, ಸೆಟೆದೆದ್ದ ಧ್ವಜ ಹಾಗೂ ಶಿವನ ಅತಿಶೌರ್ಯ, ಅವನ ಮೈಮೇಲಿರುವ ಅಸ್ತ್ರಗಳೆಂದರೆ ನಿತ್ಯವೂ ಚಂದನ ಹಾಗೂ ಕಸ್ತೂರಿಯ ಸೈನ್ಯ ಯಾರೋ ಕಠಾರಿ, ಬರ್ಚಿ, ಚಾಕು ಹಾಗೂ ಭಾಲೆ ಲಾಠಿ ಹಿಡಿದವರು, ಮತ್ಯಾರೋ ಕೈಯಲ್ಲಿ ಹುಲಿ ಉಗುರಿರುವ ಹಸ್ತ ಇವುಗಳನ್ನು ನೋಡಿ ಹೃದಯ ಚುಚ್ಚುವ ಹಾಗಾಗುತ್ತದೆ. ಮತ್ಯಾರೋ ಕೈಯಿಂದ ನೋವು ಕೊಡುವನು. ಉತ್ತಮವಾಗಿದ್ದ ಬೆಂಕಿಯ ಮೋಡ ಕವಿದು ಕಲ್ಲಿನ ಮಳೆ ಸುರಿಯಲಾರಂಭಿಸಿತು. ಇಡೀ ಸೈನ್ಯದ ವತಿಯಿಂದ ಇಂತಹ ಕಣ್ಣುಗಳನ್ನು ತೆಗೆದುಕೊಂಡು ಆಕಾಶದ ಹನ್ನೊಂದನೆ ಬುರುಜಿನ ಹಾಗೆ ಹೊರಟರು. ಗಗನ ಇದನ್ನು ನೋಡಿ ಲೆಕ್ಕವಿಲ್ಲದಷ್ಟು ಕೇಕೇ ಹಾಕಿ ನಕ್ಕುನಗುತ್ತಾ ನೃತ್ಯ ಮಾಡಲಾರಂಭಿಸಿತು. ಇದನ್ನು ನೋಡಿ ಅವರೆಲ್ಲ ಹೆದರಿ ಮುಖ ಪೆಚ್ಚು ಮಾಡಿಕೊಂಡು ಬಾವಿ ಬಳಿ ಬಂದಾಗ ಬೆಟ್ಟ ಹಾಗೂ ಅದರ ಕೆಳಗಿನ ಪ್ರದೇಶ ತುಂಬಿ ಹೋಯಿತು. ಇಡೀ ಜಾಗ ಮುಚ್ಚಿತು. ಇಂತಹದರಲ್ಲಿ ಹಠಾತ್ತನೆ ಬಾದಶಾಹನ ಸೈನ್ಯ ಬಾವಿಯ ಮುಂದೆ ಬಂದಾಗ ಎರಡೂ ಸೈನ್ಯಗಳ ಮಧ್ಯೆ ಭೀಕರ ಕಾಳಗ ಪ್ರಾರಂಭವಾಗಿ ಪೂರ್ಣ ಗಲಿಬಿಲಿ ತುಂಬಿತು. ಅಲ್ಲಿ ಒಬ್ಬ ಶೂರ ಅಬ್ದುಲ್ ಮುಹಮ್ಮದ್ ಇದ್ದ. ಆದಿಯಿಂದಲೇ ಭಗವಂತ ಬುದ್ಧಿಯ ಸಿರಿಯಿಂದ ಗೌರವಿಸಿದ್ದ. ಸಾವು ಅವರ ಮೇಲೆ ಹಲ್ಲೆ ಮಾಡಬೇಕೆಂದು ಆಕಡೆ ಹೊರಟಾಗ ಆಕಾಶದಿಂದ ವಿಜಯದ ಸೈನ್ಯ ಅಲ್ಲಿ ತಂಗಬೇಕೆಂದು ಸಂಕಲ್ಪ ಮಾಡಿತು. ನಾಲ್ಕು ದಿಕ್ಕುಗಳಿಂದ ಬಾಣಗಳ ಸುರಿಮಳೆ ಪ್ರಾರಂಭವಾಗಿ ಅಗ್ನಿಯ ಬಲೆಯಾಯಿತು. ನೆಲದ ಮೇಲೆ ಬಿದಿರಿನಿಂದ ಮಾಡಿದ ಬುಟ್ಟಿ ಹಾಕಿದ್ದ ಕಾರಣದಿಂದಾಗಿ ಇಡೀ ಪ್ರಪಂಚಕ್ಕೆ ಅದು ಗಾಬರಿಯ ಕಾರಣವಾಯಿತು. ಅನೇಕರು ಆವೇಶದಿಂದ ಕೋಟೆಯ ಹೆಬ್ಬಾಗಿಲಿನ ಮೇಲೆ ಆಕ್ರಮಣಿಸಿದರು. ಅಲ್ಲಿ ಹುಲಿಗಳ ಶಕ್ತಿಯನ್ನು ಎದಿರುಸುವವರು ಯಾರೂ ಇರಲಿಲ್ಲ. ಇವರೆಲ್ಲರೂ ಎಂತಹ ಎತ್ತರವಾದ ಬೆಟ್ಟದ ಮೇಲೆ ಆಕ್ರಮಣಿಸಿದರೆಂದರೇ ಐದನೇ ಆಕಾಶದಲ್ಲಿ ಮಂಗಳನ

ಮನಸ್ಸು ನಡುಗಿತು. ಮೈ ಮೇಲೆ ಆಕ್ರಮಿಸುವುದೇ ತಡ ಪ್ರಜ್ಞೆ ತುಂಡು ತುಂಡಾಗಿ ರುಂಡದ ಮೇಲೆ ಬೆತ್ತಲೆ ಗೋಣಿ ಚೀಲದ ಝುಲಝುಲ ನೆರಳು ಬೀಳಲಾರಂಭಿಸಿತು. ನಗಾರಿಗಳ ಘರ್ಜನೆಯಿಂದ ಭೂಮಿಯ ಹೃದಯ ಡವ ಡವ ಎಂದು ಕಂಪಿಸುತ್ತಿತ್ತು. ಖರ್ನೆಗಳನ್ನು ಊದಿದಾಗ ಬೆಟ್ಟ ಮತ್ತು ಅದರ ಕೆಳಗಿನ ಪ್ರದೇಶದ ಹೃದಯದ ಅಂತರಂಗ ಹರಿದು ಹೋಯಿತು. ಎರಡೂ ಕಡೆಯ ಸಶಸ್ತ್ರಧಾರಿಗಳು ಗಗನದ ಬೆನ್ನಿನ ಉದಯದ ಬುಟ್ಟಿ ಅತಿ ಹೆಚ್ಚಾಗಿ ಅಗಲಾಗಿ ಬಿಚ್ಚಿಹೋದಂತೆ ಕಾಣಿಸುತ್ತಿದ್ದವು. ಸಮ್ಮುಖದಲ್ಲಿದ್ದವರನ್ನು ನೇರವಾಗಿ ತುಳಿದುಕೊಂಡು ಹೋದರು. ಅಡಗಿಕೊಂಡಿರುವವರನ್ನು ಸದ್ದಿಲ್ಲದೇ ಹೋಗಿ ವಶಪಡಿಸಿಕೊಂಡರು. ಭಾಲೆ, ಬಿಲ್ಲು ಬಾಣ, ಅನೆಟಿ, ಚೂಪಾದ ಕಠಾರಿ, ಬರ್ಚಿ, ಲಾಠಿ, ಉದ್ದ ನಾಳಿನ ಬಂದೂಕು ಹಾಗೂ ಖಡ್ಗಗಳಿಂದ ಆಕ್ರಮಣ ನಡೆಯಿತು. ಯಾವ ಎದೆಗಳು ಮುಸುಕಿನಿಂದ ತುಕ್ಕು ಹಿಡಿದಿದ್ದವೋ ಅವುಗಳಿಗೆಲ್ಲ ಭಾಲೆಗಳ ತುದಿಗಳಿಂದ ಕಲಾತ್ಮಕವಾಗಿ ಮಿನುಗಿಸಲಾಯಿತು. ಸವಾರುಗಳು ಹಾಗೂ ಕಚೆಕಚ್ವಾರು ಧ್ವಜಗಳನ್ನು ದುಂಬಿಯ ಹಾಗೆ, ಅನೇಕ ಪೇದೆಗಳು ಗುಬ್ಬಚ್ಚಿಗಳು ಹಾರುವ ಶಬ್ದ ಮಾಡುತ್ತ ಧಾವಿಸುತ್ತಿದ್ದರು. ಅನೇಕರ ತಲೆ ಬುರುಡೆ ಒಡೆದು ಹೋಗಿ ಅವರ ಮಿದುಳುಗಳು ತಾಮ್ರದ ದೊಡ್ಡ ಪಾತ್ರೆಯ ತಳ ಒಡೆದು ಹೋಗಿ ಅನ್ನ ಹೇಗೆ ಬಿದ್ದು ಹೋಗುತ್ತದೆಯೋ ಹಾಗೆ ಹರಡಿಕೊಂಡಿದ್ದವು. ಅನೇಕರ ಗಾಯಗಳು ಗಾಳಿತುಂಬಿದ ಕಾರಣದಿಂದಾಗಿ ಅದರ ಬಾಯಿ ಬಿಚ್ಚಿ ಹೋಗಿ ಅವರು ವ್ಯಾಕುಲಗೊಂಡಿದ್ದರು. ಅವರ ನರಗಳಿಂದ ರಕ್ತ ಚಿಮ್ಮುವುದರಿಂದ ಒಂದು ಕಾಲುವೆ ಹರಿಯುತ್ತಿತ್ತು, ಅನೇಕರು ಅಂಗವಿಕಲರಾಗಿ ದೊಡ್ಡ ದೊಡ್ಡ ಮಡಕೆಗಳ ಹಾಗೆ ಬಿದ್ದು ಒದ್ದಾಡುತ್ತಿದ್ದರು. ಅನೇಕರು ವಿಸ್ಮಯವಾಗಿ ತಲೆಕೆಳಗೆ ಮಾಡಿಕೊಂಡು ಕಷ್ಕೋಲ್ ಅಥವ ಕಮಂಡಲದ ಹಾಗೆ ನಿಂತುಕೊಂಡಿದ್ದರು. ಮತ್ತೊಂದು ಕಡೆ ಕವಚದ ಚೂರುಗಳು ಬಿದ್ದಿದ್ದರೆ ಇನ್ನೊಂದು ಕಡೆ ತೋಪಿನ ಹಸ್ತತ್ರಾಣ ಬಿದ್ದಿವೆ. ಅವುಗಳನ್ನು ತಿನ್ನಲು ಇರುವೆಗಳು ಹೇರಳವಾಗಿ ಬಂದು ಯಾವ ಚೂರು ಸಿಗುತ್ತದೊ ಅವುಗಳನ್ನು ತೆಗೆದುಕೊಂಡು ಹೋಗುತ್ತವೆ. ಸೂರ್ಯನು ರುಂಡಮುಂಡ ಹೆಣಗಳನ್ನು ನೋಡಿದಾಗ ಅತಿ ಗಾಬರಿಗೊಂಡು ಹೆದರಿಕೆಯಿಂದ ಅವನ ಮುಖ ಬಿಳಿಚಿಹೋಯಿತು. ಈ ವಧಾಸ್ಥಾನದಲ್ಲಿ ಹರಡಿದ ರಕ್ತವನ್ನು ನೋಡಿ ಗಗನದ ತಲೆಯೂ ಸುತ್ತಲಾರಂಭಿಸಿತು. ಭೂಮಿ ಮೇಲೆ ನದಿ ನಾಲೆಗಳ ಹಾಗೆ ಒಂದು ಗುಲ್ಲೆದ್ದು ಎಲ್ಲೆಡೆಯೂ ರಕ್ತ ಹರಿಯುವ ಖಲ್ ಖಲ್ ಶಬ್ದ ಕೇಳಿಸುತ್ತಿತ್ತು. ಗಗನ ದಿಗಂತದ ಅಧರಗಳಿಂದ ಆ ನಾಸ್ತಿಕರ ರಕ್ತ ಕುಡಿದು ಭೂಮಿ ಮೇಲೆ ಮುಕ್ಕಳಿಸಿ ಅದನ್ನು ಅಲಂಕರಿಸಿ ಅದಕ್ಕೆ ನೀರಿನ ಚಿಲುಮೆಯ ಆಕಾರ ನೀಡಿತು. ಮೃತ್ಯು ಪ್ರತಿಯೊಂದು ಖಡ್ಗದ ನೀರಿನಿಂದ ಅನೇಕಸಲ ಸ್ನಾನ ಮಾಡಿತು. ಸಹಸ್ರಾರು ಹೊಲಸು ನಾಸ್ತಿಕರ ಪ್ರಾಣಗಳನ್ನು ಬಹಳ ಹಿಂಸೆ ಕೊಟ್ಟು ತೆಗೆದುಕೊಂಡಿತು. ಈ ಸಮರದಲ್ಲಿ ಅನೇಕರು ಸತ್ತು ಹೋದರು, ಮಿಕ್ಕಿರುವರು ಈ ರೀತಿಯ ಪರಾಜಯ

ಹೊಂದಿದರು. ರುಂಡಗಳು ಅಲ್ಲೇ ಬಿದ್ದಿದ್ದವು ಆತ್ಮಗಳನ್ನು ಕಿತ್ತು ಬಗೆದವು. ಈ ಸಮಯ ಬಹಳ ಕಷ್ಟಕರವಾಗಿತ್ತು, ಯಾರು ಸನ್ಮುಖದಲ್ಲಿ ಬಂದು ಯುದ್ಧ ಮಾಡಿದರೋ ಅವರೆಲ್ಲರೂ ಮುಖಮರೆಸಿಕೊಂಡು ಮುಖವಿಲ್ಲದವರಂತಾದರು. ಓಡಿ ಹೋದವರ ಬೆನ್ನಿನ ಮೇಲೆ ಚಾಟಿಯ ದಪ್ಪ ಗುರುತಿದ್ದವು. ತುಂಬಿದ ಬಿದನೂರಿನಲ್ಲಿ ಆಕಸ್ಮಿಕವಾಗಿ ಸುತ್ತಲೂ ಕೋಲಾಹಲ ಉಂಟಾದಾಗ ಅವರನ್ನು ಹಿಂಬಾಲಿಸುತ್ತ ಜನವಸ್ತಿಗಳ ಬಳಿ ತಲುಪಿದಾಗ, ಆ ಗದ್ದಲದಲ್ಲೇ ಅಲ್ಲಿಯ ರಾಜ ತನ್ನ ರಾಜಧಾನಿ ಹಾಗೂ ತುಂಬಿದ ಮನೆ ಬಿಟ್ಟು ಪ್ರಾಣ ಉಳಿಸಿಕೊಳ್ಳಲು ಘಟ್ಟದಕೆಳಗಿನ ಪ್ರದೇಶಕ್ಕೆ ಓಡಿಹೋದನು. ಅವನು ಹೋದ ನಂತರ ಲೋಕ ಇಡೀ ಪಟ್ಟಣ ಹಾಗೂ ಕೋಟೆ ಲೂಟಿಯಾಯಿತು. ಲೂಟಿಯಾದಂತಹ ವಸ್ತುಗಳು ಸೇನೆಯ ಸಿಪಾಯಿಗಳ ಬಳಿ ಲೆಕ್ಕವಿಲ್ಲದಷ್ಟು ಇತ್ತೆಂದರೆ ಒಬ್ಬ ಒಬ್ಬ ಸಿಪಾಯಿಯೂ ಸಹ ವರ್ತಕನಾಗಿದ್ದ. ಆ ಲೂಟಿಯ ಸಾಮಾನು ನೆಲದ ಮೇಲೆ ಅಥವಾ ಬೆಟ್ಟದ ಮೇಲೆ ಇಡಲು ಎಳ್ಳಷ್ಟು ಜಾಗವಿರಲಿಲ್ಲ. ಮನೆಗಳಲ್ಲಿ ಒಂದು ಸಾಸುವೆ ಕಾಳು ಸಹ ಮಿಗಲಿಲ್ಲ. ಆಗ ಶಹಿನ್ಷಾಹರು ಬಂದು ಅದೃಷ್ಟವನ್ನು ತಂದರು. ಆ ಮನೆಗೆ ತನ್ನ ಕಾಲ್ಗುಣದಿಂದ ಗೌರವದ ಮನೆ ಮಾಡಿದರು. ಅದೇ ಜಾಗದಲ್ಲಿ ಮಸೀದಿ ನಿರ್ಮಿಸಿ ಇಸ್ಲಾಂಧರ್ಮದ ಪ್ರವಚನ ಓದಿಸಿದರು. ಆಗ ಅರ್ಚಕ ತನ್ನ ಮೂರ್ತಿ ಎಸೆದು ಓಡಿಹೋದ. ಮಂದಿರದ ಬುನಾದಿ ಉರುಳಿಹೋಯಿತು. ಅಸೂಯೆ ಪಡೆಯುವವರು ಕಠೋರಮನಸಲ್ಲಿ ನೋವು ಕಾಪಾಡಿದ್ದರೋ ಈ ವಿಜ್ರಂಭಣೆಯ ವಿಜಯದಿಂದ ಇನ್ನಷ್ಟು ಶೋಕತಪ್ತರಾಗಿ ಇನ್ನಷ್ಟು ಸಂಕಟದಲ್ಲಿ ಸಿಕ್ಕಿಹಾಕಿಕೊಂಡು ನೋವಿನ ಮೇಲೆ ನೋವನ್ನು ಅನುಭವಿಸಿದರು. ದೇವರಾಣೆಯಾಗಿಯೂ ವೃಕ್ಷಕ್ಕೆ ಹುಳುಬಿದ್ದರೆ ಅದು ಬೆಳೆಯಲು ಹೇಗೆ ಸಾಧ್ಯವಿಲ್ಲವೋ ಅದೆ ರೀತಿಯಾಗಿ ಮತ್ಸರಿಗೆ ತನ್ನ ಜನ್ಮದಲ್ಲಿ ಅವನ ನೋವು ಬಾಳಲು ಬಿಡುವುದಿಲ್ಲ. ಶಹಿನ್ಷಾಹರು ಅಲ್ಲಿಂದಲೂ ತನ್ನ ಸೈನ್ಯವನ್ನು ಹಿಂಬಾಲಿಸಲು ರವಾನಿಸಿದರು. ಅದು ಆ ದುರಾದೃಷ್ಟ ನೀಚನ ಏಕಾಂತವಾಸಿ ಕೋಟೆಯಾಗಿತ್ತು. ಅದೊಂದು ಕಷ್ಟಕರ ಕೋಟೆಯಾಗಿತ್ತು. ಆದರೂ ಸಹ ಶೂರರು ಸಹ ತಲಪಿ ಅವನಿಗೆ ಮುತ್ತು ಹಾಕಿದರು. ದೇಶ ಅವನಿಗೆ ವಿಶ್ರಾಂತಿಗೃಹವಾಗಿತ್ತು. ಆದರೆ ಈಗ ಅದಂತೂ ಸಂರಕ್ಷಕನ ಕಾರಾಗೃಹವಾಯಿತು. ಶಹಿನ್ಷಾಹನ ಶಕ್ತಿ ಏನಿದೆ ಎಂದು ಅವನು ಮಣ್ಣಿನ ಪಾಲಾದಾಗ ತಿಳಿದ, ಅವನ ಕತ್ತಲ್ಲಿ ಗಲ್ಲಿನ ಜಾಲ ಬಿದ್ದಮೇಲೆ ಆ ಗಲ್ಲಿನ ರುಚಿಯನ್ನು ತಿಳಿದ. ಅವನು ಬುದ್ಧಿ ಕಳೆದುಕೊಂಡನಂತರ ಶಹಿನ್ಷಾಹರ ಬಳಿ ತನ್ನ ದ್ವಾರಪಾಲಕರನ್ನು ರವಾನಿಸಿದ. ಅವರು ಶಹಿನ್ಷಾಹರ ದರ್ಬಾರಿನಲ್ಲಿ ಬಂದು ಸಾಷ್ಟಾಂಗವೆರೆಗಿ ರುಂಡವನ್ನು ಹಾರದಂತೆ ಮಾಡಿ ಓ ಲೋಕಪಾಲಕನೇ ನಮ್ಮ ಮೇಲೆ ಕರುಣೆ ತೋರಿಸಿ ಜೀವದಾನ ನೀಡು, ನಮ್ಮಿಂದ ತಪ್ಪಾಯಿತು. ಅದರ ಶಿಕ್ಷೆಯೂ ಸಹ ಪಡೆದುಕೊಂಡೆವು. ಕೆಟ್ಟ ಕರ್ಮಗಳ ಫಲ ಅನುಭವಿಸಿದ್ದೇವೆ ಎಂದು ಕೇಳಿಕೊಂಡರು. ಶಹಿನ್ಷಾಹರು ಕರುಣೆ ತೋರಿ ಜೀವದಾನ ನೀಡಿದರು, ನಂತರ ಅವನ ರಾಜ್ಯ ಅವನಿಗೆ ಹಿಂದುರಿಗಿಸಿದರು.

ಅವನ ಬಕ್ಷೀಶಿನ ಮೋಡಗಳಿಂದಲೇ ಪ್ರಪಂಚ ಬೇಡಿಕೊಂಡು ಸದೈವ ಜೀವಂತವಾಗಿದೆ. ಸಜ್ಜನರಿಗೆ ಕೇವಲ ಒಳ್ಳೆ ಕೆಲಸ ಮಾಡಬೇಕೆನ್ನಿಸುತ್ತದೆ. ಪ್ರಪಂಚದಲ್ಲಿ ಸಜ್ಜನರ ಹೆಸರು ಉಳಿದುಕೊಳ್ಳುತ್ತದೆ ಅವರಿಗೆ ಎಂದಿಗೂ ಎಲ್ಲೂ ಬದಲಾಗುವ ಹೆದರಿಕೆ ಇರುವುದಿಲ್ಲ. ಸಿಕಂದರ್ ಶಾಹ ಝುಲ್‌ಖರ್‌ನೈನ್ ಇದರಿಂದಾಗಿ ಅಜೇಯರಾದರು, ಅದಾಗಿಯೂ ಪ್ರಪಂಚದ ಪ್ರತಿಫಲ ಅವರ ಹೆಸರೇ ಆಯಿತು. ಎಲ್ಲಿ ಯಾರ ದೃಷ್ಟಿಯೂ ಬೀಳುವುದಿಲ್ಲವೋ ಅಲ್ಲಿ ಶೌರ್ಯದಿಂದ ಕಾರ್ಯಗತವಾಗಿ ಎರಡು ದಿನಗಳ ಕಾಲದಲ್ಲಿ ನೀನು ಬುದ್ಧಿ ಹಾಗೂ ಶಕ್ತಿಯ ಆಟವನ್ನು ತೋರಿಸಿದೆ. ನಿನ್ನ ಎಲ್ಲ ಪೂರ್ಣ ವಿಜಯಗಳ ಪ್ರಶಂಸೆಗಳನ್ನು ನುಸ್ರತಿಯೆ ಬರೆಯಬೇಕೆಂದು ಅಲ್ಲಾಹನು ಮೊದಲೇ ನಿನ್ನನ್ನು ಸನ್ಮಾರ್ಗ ನೀಡಿದ್ದ. ಪ್ರಪಂಚದಲ್ಲಿ ಅವನ ವಿಜಯವನ್ನು ಗಗನದಂತಹ ಉದ್ದನೇ ಬರವಣಿಗೆಯೊಂದಿಗೆ ಬರೆಯುವೆ. ಸೂರ್ಯನ ಹೊರಗಿರುವ ಆಕಾಶ ಮುಟ್ಟುವಂತಹ ದೊಡ್ಡ ಕಟ್ಟಡ ಅವನ ಬಳಿ ನಿಲ್ಲಿಸುವೆ, ಮನುಜನ ಹೊರಗೆ ಬಲುಶಕ್ತಿಯಿಂದ ನಾನು ಎತ್ತರವಾಗಿ ಹಾರಿದ್ದೇನೆ, ದೇವರಾಣೆಗೂ ನಿನ್ನ ಹೆಸರು ಕಲಾವಿದರಲ್ಲಿ ತೆಗೆದುಕೊಳ್ಳಲಾಗುತ್ತದೆ. ನಾನು ನನ್ನ ಅಪರೂಪದ ಮಾತುಗಳಲ್ಲಿ ಕಲೆಯು ಓರೆಯಲ್ಲಿ ಅರ್ಥ ಅಡಗಿಸಿದ್ದೇನೆ, ಯಾರ ಮುಖ ಸೆರಗಿನ ಓರೆಯಲ್ಲಿರುತ್ತದೆಯೋ ಅದನ್ನು ನೋಡಲು ಮನಸ್ಸು ವ್ಯಾಕುಲಗೊಳ್ಳುತ್ತದೆ. ಚಿಂತನೆಯ ವೇಗದ ಹರುವಿಕೆಯನ್ನು ನೀನು ತಿಳಿಯಲು ಹೇಗೆ ಸಾಧ್ಯ, ನಿನ್ನ ನಿರ್ಮಲ ಸಹಜ ಪ್ರವೃತ್ತಿಯ ಈ ಕುದುರೆ ನಿನ್ನ ಕೈಯಿಂದಲೇ ಪಳಗಿದೆ, ಯಾರ ತಿಳುವಳಿಕೆಯಲ್ಲಿ ವೇಗವಿದೆಯೋ ಅವನು ಮೈದಾನದಲ್ಲಿ ಬರಲಿ ಹಾಗೂ ಭಾರ ಎತ್ತಿಕೊಂಡಿರುವ ದುರ್ದೈವಿ ಎತ್ತು ಕುದುರೆ ಕೆಲಸ ಮಾಡಲು ಸಾಧ್ಯವೇ. ಪ್ರತಿ ಅವಿವೇಕಿಗೆ ಪಂಕ್ತಿಯ ನಯ ಅಸಂತುಷ್ಟ ಪಡೆಸುತ್ತದೆ. ಯಾವ ಎತ್ತಿಗೆ ಹಿಂಡಿ ತಿನ್ನುವುದರಲ್ಲಿ ರುಚಿ ಸಿಗುತ್ತದೆಯೋ ಅದಕ್ಕೆ ಮಿಠಾಯಿ ಇಷ್ಟವಾಗುವುದಿಲ್ಲ. ನಿನ್ನಲ್ಲಿ ಗ್ರಹಣಶಕ್ತಿ ಹೂವಲ್ಲಿ ಸುಗಂಧ ತುಂಬಿದ ಹಾಗೆ ತುಂಬಿದೆ. ಎಲ್ಲಿ ಸೂರ್ಯನ ಬೆಳಕಿರುತ್ತದೆಯೋ ಅಲ್ಲಿ ಕತ್ತಲಿರಲು ಸಾಧ್ಯವಿಲ್ಲ. ಸೂರ್ಯ ಶಾಹನ ಮನಸ್ಸಿನ ಮುಂದೆ ದೀಪದ ಬತ್ತಿಯ ಉರಿಯುವ ತುದಿ ಉದುರಿದ ಹಾಗೆ ಉದುರಿತು. ನೀನಂತೂ ಒಂದು ಉದ್ಯಾನವನ, ಅವನೊಬ್ಬ ದುರ್ದೈವಿ ಮೋಡದ ಹೂವು, ನಿನ್ನ ದೃಷ್ಟಿಯೇ ನರ್ಗಿಸ್ ಹೂವಿನ ಕಣ್ಣಿಗೆ ದೃಷ್ಟಿ ಕೊಡಬಲ್ಲದು, ಆಕಾಶ ನೀಲಿ ಬಣ್ಣದ ಹೂವಿನ ನಾಲಿಗೆಗಳಿಗೆ ಮೂಸುವ ಶಕ್ತಿ ಇಟ್ಟು, ತಿರುಮಲದಂತಾದವು. ಯಾರಿಗೆ ಇಂದು ಏನೇನು ಇರಲಿಲ್ಲವೋ ಯಾರಿಗೂ ಕಾಣದಂತಹವನಾಗಿದ್ದವೋ, ಯಾರಿಗೆ ನಿನ್ನೆವರಿಗೆ ಯಾವ ಬಲವೂ ಇರಲಿಲ್ಲವೋ ನಿನ್ನ ಉನ್ನತ ದೃಷ್ಟಿಯಿಂದ ಅವನ ಅದೃಷ್ಟ ಖುಲಾಯಿಸುತ್ತದೆ. ನನ್ನ ಅದೃಷ್ಟ ಪರೀಕ್ಷಿಸಿಲು ಓ ಶಾಹರೇ ನಾನು ಈ ಪಂಕ್ತಿಗಳನ್ನು ಬರೆದೆ ನಿನ್ನ ದೃಷ್ಟಿ ಹಾಗೂ ನನ್ನ ಅದೃಷ್ಟ, ಇಷ್ಟು ಉದ್ದಗಲ ಬರೆಯಲು ಏನು ಬೇಕಿತ್ತು, ನಿನ್ನ ಹೆಸರನ್ನು ಸ್ಮರಿಸಿ ನಾನು ಪ್ರಾರ್ಥಿಸಿದೆ ಪ್ರತಿಯೊಂದು ಹೃದಯಗಳನ್ನು ನಿರ್ಮಲತೆಯನ್ನು

ಕೊಟ್ಟರೆ ನನ್ನ ಸಹಜ ಪ್ರವೃತ್ತಿಯ ಮೇಲೆ ನಿತ್ಯ ದರ್ಪಣ ಎಂಬ ದಾವೆ ಯೋಗ್ಯವಾಗುತ್ತದೆ. ಓ ಅಲ್ಲಾಹನೇ ಎಲ್ಲಿಯವರಿಗೂ ಸೂರ್ಯ ಸಪ್ತ ಭೂಖಂಡಗಳ ಮೇಲೆ ಸುತ್ತುತ್ತಿರುತ್ತೋ ಅಲ್ಲಿಯವರಿಗೂ ಈ ಶಾಹ ಯುದ್ಧದ ಸೂರ್ಯನಾಗಿ, ಅಜೇಯನಾಗಿರಲಿ. (೧೫೪೪–೧೭೩೬)

ಸದರಿ ಮಸ್ನವಿ ಪುಸ್ತಕ

ಶಹಿನ್ಷಾಹ ಈ ರೀತಿಯಾಗಿ ಯುದ್ಧ ಮಾಡಿದರು ಹಾಗೂ ತನ್ನ ಮಂತ್ರಿಗಳಿಗೆ ಲೆಕ್ಕವಿಲ್ಲದಷ್ಟು ಬಾವಲಾ ಖಲ್‌ಅತ್ ನೀಡಿ ಗೌರವಿಸಿದರು. ತನ್ನ ಸೈನ್ಯದ ಮನಸ್ಸು ತಿಳಿದು ಪ್ರತಿಯೊಂದು ಯುದ್ಧದಲ್ಲಿ ಹಲವಾರು ಖಡ್ಗಗಳೆಲ್ಲ ಸೇರಿ ಕೆಲಸ ಮಾಡಿದವು. ತನ್ನ ಮನಸಲ್ಲಿ ಒಂದು ದೊಡ್ಡ ಕೆಲಸದ ಸಂಕಲ್ಪ ಮಾಡಿದರು. ಎಂತಹ ದೊಡ್ಡ ಕೆಲಸವೆಂದರೆ ಅದರಿಂದ ಹೆಸರು ದೊಡ್ಡದಾಗ ಬೇಕು, ಎಂದರೆ ಒಂದಿಷ್ಟು ದೊಡ್ಡ ತಲೆಬುರುಡೆಯ ಹಲ್ಲು ಮುರಿಯಬೇಕೆಂದು ತನ್ನ ಮನದಲ್ಲಿ ಒಂದು ದೊಡ್ಡ ಕಾರ್ಯದ ಯೋಜನೆ ತಯಾರಿಸಿದರು. ಅಂದರೆ ಮತ್ತೊಮ್ಮೆ ಶತ್ರುವಿನ ಮೇಲೆ ಆಕ್ರಮಿಸಿ ತಪರಾಕಿಗಳ ಭಯಂಕರ ಶಕ್ತಿ ತೋರಿಸಬೇಕು ಎಂದು ಯೋಚಿಸುತ್ತಿದ್ದಾಗಲೇ ಆಕಸ್ಮಿಕವಾಗಿ ಅಂತಹುದೇ ಒಂದು ಕಾರಣ ಸಿಕ್ಕಿತು. ಅದರ ಬಗ್ಗೆ ಯಾವುದೇ ರೀತಿಯ ಭ್ರಮೆಯೂ ಇರಲಿಲ್ಲ. ಅದು ವಿಸ್ಮಯವಾಗಿ ಬಂದು ನಿಂತಿತು. ಅದೇನೆಂದರೆ ಆ ವಿದ್ರೋಹಿ ಒಂದು ಬಹಳ ಅಪಕ್ವ ಕೆಲಸ ಮಾಡಿದ, ಅದರಿಂದ ಎಲ್ಲೋ ಆಗ ಬೇಕಾದ ಕೆಲಸ ಎಲ್ಲೋ ಬಂದಿತು. ಮನೆಯಲ್ಲಿ ಒಬ್ಬ ತಿಳಿಗೇಡಿಯು ತಂದು ಸೇರಿಸಿಕೊಂಡ ನಾಯಿ ಬಯಲಲ್ಲಿ ಬೊಗಳುವ ಹಾಗೆ ಕಾಣಿಸಿತು. ತನ್ನ ಮಿತಿಯನ್ನು ಅವನು ನಿಭಾಯಿಸಲು ಸಾಧ್ಯವಾಗಲಿಲ್ಲ. ಎಲ್ಲಿಯವರಿಗೆ ಜೀವವಿದೆಯೋ ಅಲ್ಲಿಯವರಿಗೂ ತನ್ನ ಮನಸ್ಸನ್ನು ಗಟ್ಟಿ ಮಾಡಲಿಲ್ಲ. ಚಿಕ್ಕ ಕಳ್ಳ ಕಳ್ಳತನ ಮಾಡಿದಾಗ ಹುಲಿಯಂತೆ ಕಾಣಿಸುತ್ತಾನೆ ಆದರೆ ಒಂದು ನಾಯಿ ಅವನನ್ನು ಮುತ್ತು ಹಾಕಿದರೆ ಅವನು ನರಿಗಿಂತಲೂ ಕೀಳಾಗುತ್ತಾನೆ. ಅದಾಗ್ಯೂ ಈ ಯುದ್ಧ ಏಕೆ ಪ್ರಾರಂಭವಾಯಿತೆಂದರೆ ಶಿವಾಜಿ ಕಡೆಯಿಂದ ಮುಘಲರ ಜೊತೆ ಕೆಡಕುಂಟಾಗಿ ಈ ಮಾತಿನಿಂದಾಗಿ ದುಃಖಿತನಾಗಿ ಯುದ್ಧದ ಸಂಕೇತ ಕೊಡಲಾರಂಭಿಸಿದ. ಶಿವಾಜಿ ಮುಘಲರನ್ನು ಕೆಣಕಿದ ತನ್ನ ಮನೆ ಕಳೆದುಕೊಂಡು ತನ್ನ ಪ್ರಾಣ ಉಳಿಸಿಕೊಳ್ಳಲು ಓಡಿ ಹೋದ. ಆದರೆ ಜೀವ ಉಳಿಸಿಕೊಳ್ಳುವಾಗ ಅವನು ಕುತಂತ್ರ ಮಾಡಿ ಶಾಹನ ಜೊತೆ ಜಗಳ ತಂದಿಟ್ಟ, ಅವರ ಮರ್ಯಾದೆ ತೆಗೆದ, ಹೀಗೆ ಈ ಪಿತೂರಿ ಹೇಗೆ ನಡೆಯಿತು, ಅವನು ಆ ಗೂಂಡಾ ಮುಘಲರಿಗೆ ಏಕೆ ಉತ್ತೇಜಿಸಿದ ಎಂದು ಕೇಳಿ. (೧೭೩೭–೧೭೫೧)

■

*

ಅಧ್ಯಾಯ – ೮

ಕಥೆಯ ಸಾರಾಂಶವೆಂದರೆ ದೆಹಲಿಯ ಸರ್ದಾರನಿಗೆ ತೋರಿಸಿ ರಾಜ್ಯದಲ್ಲಿ ಶಿವಾಜಿಯ ಪಿತೂರಿ ಹಾಗೂ ಗೊಂದಲದಿಂದ ಗುಲ್ಲೆಬ್ಬಿಸಿದ

ಗೊಂದಲದ ಗುಟ್ಟಿನ ಪ್ರೇಕ್ಷಕ ಪ್ರತಿಯೊಂದು ಕಾರ್ಯಕರ್ತ ಈ ಗಗನ ಈ ಆಟ ಬರೆದಿಟ್ಟದ್ದ. ಅಲಿ ಆದಿಲ್ ಶಾಹರು ಬಂಕಾಪುರಕ್ಕೆ ರಾಜಧಾನಿ ಮಾಡಿಕೊಂಡು ಇರುವಾಗ ಈ ಘಾಝಿ ಯುದ್ಧ ಮಾಡಿ ನಾಸ್ತಿಕರನ್ನು ಪಾಠ ಕಲಿಸಬೇಕೆಂದು ತನ್ನ ಮಂತ್ರಿಗಳ ಎಲ್ಲ ಸೈನ್ಯಗಳನ್ನು ಶೇಖರಿಸಿ ಅಲೆಯ ಹಾಗೆ ತೆಗೆದುಕೊಂಡು ಹೊರಟಿದ್ದ. ಬಿಜಾಪುರದಲ್ಲಿ ಗಣಿಸಲ್ಪಟ್ಟ ಸೈನ್ಯವಿತ್ತು. ಮೈದಾನ ಖಾಲಿ ನೋಡಿ ಶಿವಾಜಿ ಚಿಂತನೆ ನಡೆಸಿ ಬೆಟ್ಟಗುಡ್ಡದಿಂದ ಹೊರಬಂದ. ತನ್ನ ಮನದಲ್ಲಿ ವ್ಯಾಕುಲಗೊಂಡು ಶೈತಾನಿನ ಪಿತೂರಿ ಮಾಡಲಾರಂಭಿಸಿದ. ಎಲ್ಲಿ ತನ್ನ ಮೋಸ ನಡೆಯುತ್ತಿತ್ತೋ ಅಲ್ಲಿ ಅವನು ಹೊಸ ಪಿತೂರಿ ನಡೆಸಿ ಅಶಾಂತ ಹಬ್ಬಿಸಿದ. ಅಲಿ ಆದಿಲ್ ಶಾಹನಿಗೆ ಯಾರು ಸೋಲಿಸಿ ಜಯ ಗಳಿಸುವನು? ಶೈತಾನ ಒಂದು ಪಕ್ಷ ಹಾರಿದರೂ ಆಕಾಶದಲ್ಲಿ ತಲುಪಲು ಸಾಧ್ಯವಿಲ್ಲ. ಸಿಪಾಯಿಯ ಮನೆಯಲ್ಲಿ ಕಳ್ಳತನ ಮಾಡುವುದು ಹೇಗೆಂದರೆ ಸುರಂಗವನ್ನು ಹುಡುಕಿ ಅದನ್ನು ಮುರಿಯುವ ಹಾಗೆ. ಅಲ್ಲಿಂದ ಯಾರೂ ಸಹ ತನ್ನ ಜೀವ ಉಳಿಸಿಕೊಂಡು ಬರಲು ಸಾಧ್ಯವಿಲ್ಲ ಆದರೆ ಆ ಮನೆಯಿಂದ ಶ್ರಮವಿಲ್ಲದೇ ಖಜಾನೆ ಕೈ ಸೇರುತ್ತದೆ. ಅಂದರೆ ಆಗ ಮುಘಲರ ಒಬ್ಬ ದೊಡ್ಡ ಸೂಬೆದಾರಿನ ಮೇಲೆ ಶಿವಾಜಿ ತನ್ನ ಸೈನ್ಯವನ್ನು ಓಡಿಸಿದ, ಆಕ್ರಮಿಸಿದ. ಅವನಿಗೆ ಮುಘಲ್ ದೊಡ್ಡವನೆಂದು ಭಾವಿಸಿದ್ದ ಸಾಮ್ರಾಜ್ಯದ ಶಕ್ತಿಶಾಲಿ ಕೈ ಎಂದು ತಿಳಿದಿದ್ದ, ಒಳ್ಳೆ ಅಭಿಪ್ರಾಯ ಇಡುವವನು ಬಲು ಮುನ್ನಾಲೋಚನೆ ಮಾಡುವ ವ್ಯಕ್ತಿ. ಅವನ ಮುಂದೆ ಒಂದು ದೊಡ್ಡ ಕಾರ್ಯವಿತ್ತು ಅವನ ವೈಭವ ಎತ್ತರವಾಗಿತ್ತು, ದೆಹಲಿ ಮೇಲೆ ಅವನ ದರ್ಪವಿತ್ತು. ಅವನ ಬಿರುದು ಶಾಯಿಸ್ತ ಖಾನ್. ಯುದ್ಧ ಗೊಂದಲಮಯವಾಗಬಾರದೆಂದು ಅವನು ತನ್ನ ಪೂರ್ತಿಬುದ್ಧಿಯನ್ನು ಖರ್ಚು ಮಾಡಿದ. ಶಿವಾಜಿ ಅವನ ಜೊತೆಯಲ್ಲಿ ಆಟ ಆಡಲು ಪ್ರಾರಂಭಿಸಿದ, ಆ ಬುದ್ಧಿವಂತನ

ಕಲೆಯಿಂದ ಆಟ ಆಡಬೇಕೆಂದ. ಕಳ್ಳರ ಹಾಗೂ ರಕ್ತದಾಹಿಯರೊಡನೆ ಸಂದು ಮಾಡಿಕೊಂಡ. ತನ್ನಂತೆ ಕುತಂತ್ರಿ ಉಂಡಾಡಿ ಪುಂಡರನ್ನು ಜೊತೆ ಮಾಡಿಕೊಂಡು ಮುನ್ನೆಡೆ ಸಾಧಿಸಿದ ದರೋಡೆಕಾರರು, ಕಳ್ಳರು ಹಾಗೂ ಪುಂಡರು ಆಕ್ರಮಣಿಸಿದರು, ತಾನೇ ಅವರ ಸರ್ದಾರನಾಗಿ ಒಂದು ಸೈನ್ಯ ಕಟ್ಟಿದ. ಸೂರ್ಯನ ಮುಂದೆ ದುರ್ಬಲರಾಗಿ ಕಳ್ಳರನ್ನು ಅಡಗಿಸಿ ತನ್ನ ಬಾಯಿ ಬಾರಿಸುತ್ತಿದ್ದರು. ಅವನು ಸಿಂಹಾಸನವನ್ನು ಇಳಿದು ಮನೆಗೆ ಹೋಗಬೇಕೆಂದಾಗ ಅವನ ಜಾಗದಲ್ಲಿ ಚಂದ್ರನನ್ನು ಅರಸನಾಗಿ ಕೂಡ್ರಿಸಿ ಗೆಳತಿಯರ ಜೊತೆಯಲ್ಲಿ ಸುಖ ಭೋಗಿಸಿಲಾರಂಭಿಸಿದಾಗ ಕಳ್ಳರ ಆಟ ಪ್ರಾರಂಭವಾಯಿತು. ಮೊಘಲರ ದಂಡನಾಯಕನಿಗೆ ಇದರ ಸುಳಿವೂ ಇರಲಿಲ್ಲ, ಅವನ ಸರಹದ್ದಿನ ಬಳಿ ಇಳಿದ. ಒಳ್ಳೆ ರಾತ್ರಿಯಾದಾಗ ಶಿವಾಜಿಯು ಅವನನ್ನು ಆಕ್ರಮಣಿಸಲು ಯೋಚಿಸಿದ. ಅವನ ಗುಂಪು ಎರಡು ಭಾಗಗಳಲ್ಲಿತ್ತು. ಎರಡನೆಯ ಗುಂಪು ಕಳ್ಳರದು ಅಲ್ಲಿತ್ತು. ಆ ಗುಂಪಿನಲ್ಲಿ ಕಳ್ಳರು ಧಾವಿಸಿದ್ದಾರೆಂದು ಗುಲ್ಲೆಬ್ಬಿತು, ಆಗ ಶಾಯಿಸ್ತ ಖಾನ್ ಗೆಳತಿಯರೊಡನೆ ವಿನೋದಾವಳಿಯಲ್ಲಿ ತೊಡಗಿದ್ದ, ಅದು ಎಂತಹ ಜಾಗವೆಂದರೆ ಅದನ್ನು ಕಾವಲುಗಾರರಿಂದ ಸುತ್ತಿಕೊಂಡಿತ್ತು. ಪ್ರತಿಯೊಂದು ಜಾಗದ ಮುಂದೆ ಕಾವಲುಗಾರರಿದ್ದರು. ಅಲ್ಲಿ ಇಬ್ಲೀಸ್(ಶೈತಾನ)ಗೂ ಸಹ ತಲುಪುವ ಶಕ್ತಿ ಇರಲಿಲ್ಲ. ಅಂತಹದರಲ್ಲಿ ಅಲ್ಲಿಯವರೆಗೂ ರಕ್ತದ ಒಕ್ಕಣೆ ಮಧ್ಯದಲ್ಲಿ ತಲುಪಿತು, ಯಾರು ಮಲಗಿದ್ದನೋ ಅವನ ನಿದ್ರೆ ಕೆಟ್ಟು ಹೋಯಿತು, ಖಡ್ಗ ಎತ್ತಿಕೊಂಡು ಅವನ ಮುಖದ ಮೇಲೆ ಹೊಡೆದ. ಅವನಿಗೆ ಎದುರು ಬರಲು ಕೊಡಲಿಲ್ಲ, ಶಸ್ತ್ರಗಳ ಮೇಲೆ ಕೈ ಹಾಕಲೂ ಬಿಡಲಿಲ್ಲ. ಬೇಗ ಬೇಗನೇ ಖಪಾ ಖಪ್ ಆಕ್ರಮಣ ನಡೆದು ಮೈಗಳ ಮೇಲೆ ಗಾಯದ ಮೇಲೆ ಗಾಯಗಳಾದವು ಕೆಂಬಣ್ಣದ ಹಾಸಿಗೆ ರಕ್ತದ ಬಣ್ಣಕ್ಕೆ ತಿರುಗಿತು. ಎಲ್ಲ ಗೆಳತಿಯರಿಗೆ ರಕ್ತದ ಅಲಂಕಾರವಾಯಿತು. ಅವನು ಗೆಳತಿಯರೊಡನೆ ಮೈ ಜೋಡಿಸಿದ್ದಾಗ ತನ್ನ ಪ್ರಿಯನನ್ನು ಕಾಪಾಡಲು, ಆ ಸ್ತ್ರೀಯರು ತನ್ನ ಧಣಿಯರ ಮೇಲೆ ಇಷ್ಟೊಂದು ಬೆಂಕಿ ಉರಿಯುತ್ತಿದೆ ಎಂದು ನೋಡಿ ಅವನನ್ನು ಕಾಪಾಡಲು ತನ್ನ ಜೀವವನ್ನೇ ಮುಡುಪಿಟ್ಟು, ತನ್ನ ದೇಹಗಳನ್ನು ಗುರಾಣಿ ಮಾಡಿದರು. ಪ್ರತಿಯೊಂದು ಸುಂದರ ಹಾಗೂ ಎತ್ತರಾಳು ಹೂವಿನಂತ ಕೆನ್ನೆಯಳ್ಳವರೆಲ್ಲರ ಕೊಚ್ಚಿದರಿಂದ ರಕ್ತದ ಹೊಳೆ ಅಲೆಗಳಿಂದ ತುಂಬಿ ಹರಿಯಿತು. ಅದಾಗ್ಯೂ ಬಹಳ ಗಾಯುಗೊಂಡ, ಆದರೂ ಪ್ರಾಣ ಉಳಿದುಕೊಂಡಿತು. ಎಲ್ಲಿಯುವರೆಗೂ ಜೀವಂತವಾಗಿದ್ದನೋ ತನ್ನ ಜೀವಕ್ಕೆ ಗಾಯಗೊಳಿಸಿದ ಏಕೆಂದರೆ ಅವನ ಕಣ್ಣಿನ ಮುಂದೆ ಅವನ ಪ್ರಿಯತಮೆಯರ ಹತ್ಯೆಯಾಯಿತು, ಇದನ್ನು ನೋಡಿ ತನ್ನ ಇಡೀ ನಾಚಿಕೆಯನ್ನು ಸುತ್ತಿಕೊಂಡು ತನ್ನ ದಾರಿಹಿಡಿದ, ಈ ರೀತಿಯಾಗಿ ಅವನು ನಾಚಿಕೆಯ ಕಳಂಕ ತೊಟ್ಟ, ಜೀವಂತವಿದ್ದರೂ ಸಹ ಅವನು ಶವವಾಗಿದ್ದ, ಜೀವನ ಅವನಿಗೆ ಸಾವಾಯಿತು. ಒಂದು ಕ್ಷಣದಲ್ಲಿ ಹೆಸರು ಕೆಡಿಸಿಕೊಳ್ಳಲು ಎಷ್ಟು ಸಾಧ್ಯವೋ ಅವೆಲ್ಲವನ್ನು ಮಾಡಿದ. ಪೂರ್ವದಿಂದ ಪಶ್ಚಿಮದವರೆಗೆ ಒಂದು ಕ್ಷಣದಲ್ಲಿ ಈ ಮಾತು ಇಡೀ

ಪ್ರಪಂಚದಲ್ಲಿ ಪ್ರಸಿದ್ಧವಾಯಿತು. ದೆಹಲಿಯ ಶಾಹನು ಈ ಸುದ್ದಿ ಕೇಳಿದ ಹಾಗೆ ಅವನ ತುಟಿಯೆಲ್ಲ ಒಣಗಿ ಜೀವನದ ನೀರೇ ಬಸಿಯಿತು, ಏಕೆಂದರೆ ಗೌರವದ ಕೆಲಸ ಮಾಡಲಿಲ್ಲ. ತೈಮೂರಿನ ಕುಟುಂಬದ ಸುಲ್ತಾನರಲ್ಲಿ ಇಂತಹ ಹೀನ ಕೆಲಸ ಯಾರೂ ಮಾಡಿರಲಿಲ್ಲ. ಇದರ ಸೇಡನ್ನು ತೀರಿಸಿಕೊಳ್ಳುವರಿಗೆ ಬಾದಶಾಹರ ಬಳಕೆಗಳನ್ನು ನಿಷೇಧಿಸಿಕೊಂಡ. ಈ ಯುದ್ಧಕ್ಕೆ ಎಲ್ಲರ ಸಲಹೆ ಪಡೆದು, ಚಿಂತನೆ ನಡೆಸಿ ತನ್ನ ಜಾಗದಲ್ಲಿ ಅವನ ಹತ್ಯೆ ಮಾಡುವುದನ್ನು ನಿರ್ಧರಿಸಲಾಯಿತು. ಯಾವುದೇ ನೆಪವಿಲ್ಲದೇ ತಮ್ಮ ಖಡ್ಗದ ಬಲ ಪ್ರಯೋಗಿಸಲು ಸಿದ್ಧರಾಗಿ, ಕಾಲದ ಪುಟಗಳಿಂದ ಅವನ ಹೆಸರು ಹಾಗೂ ಗುರುತನ್ನು ಅಳಿಸಲಾಗುವುದು. ಅವರಲ್ಲಿ ಒಬ್ಬ ಜಸ್ವಂತ್ ಸಿಂಗ್ ಎಂಬ ಹೆಸರಿನ ರಾಜಪೂತ ಇದ್ದ. ಎಷ್ಟು ರಾಜಕುಮಾರಗಳಿದ್ದರೋ ಅವರಲ್ಲಿ ಅವನು ಬಲು ಶೂರ. ಅವನ ಬರ್ಚಿಗಳ ಹೃದಯದ ಮೊಗ್ಗನ್ನು ನೋಡಿ ಸೂರ್ಯನ ಕಿರಣವೂ ಸಹ ಅವನ ಮೈ ಮೇಲೆ ಸಡಿಲಾಗಿ ಕಾಣುತ್ತಿತ್ತು. ಶಿವಾಜಿಯನ್ನು ಸೋಲಿಸಲು ಬಲು ದೊಡ್ಡ ಸೈನ್ಯ ಅವನ ಜೊತೆಯಲ್ಲಿ ಕಳುಹಿಸಲಾಯಿತು. ಈ ದಂಡನಾಯಕ ಅವನ ಕಡೆ ಮುಖ ಮಾಡಿಕೊಂಡು ಸಂದು ಜೋಡಿಸುತ್ತಾ ಆ ಬೆಟ್ಟದವರಿಗೆ ಬರುವವರಿಗೆ ಈ ಜಗಳವೆಬ್ಬಿಸುವನು. ಕೇಡಿನ ಬೆಂಕಿ ಹಚ್ಚಿಸಿದ, ಬೆಂಕಿಗೆ ಬೆಂಕಿಯ ಭಾಷೆಯೇ ತಿಳಿಯುತ್ತದೆ ಹೀಗಾಗಿ ಎಲ್ಲೆಡೆಯೂ ಬೆಂಕಿ ಉರಿಯಲಾರಂಭಿಸಿತು. ಬರುವ ಸಿಪಾಯಿಗಳು ಅವುಗಳಲ್ಲಿ ಸಿಕ್ಕಿ ಅವರ ಪ್ರಾಣ ಬಿಡಲೆಂದು ಎಲ್ಲೆಡೆಯೂ ಮೋಸದ ಜಾಲ ತಯಾರಿಸಿಟ್ಟ. ದಂಡು ಅವನು ತಯಾರಿಸಿದ ಮರೀಚಿ ನೋಡಿ, ಮೋಸದಿಂದ ನೀರಿನ ಗುಂಡಿಯಲ್ಲಿ ಮುಳುಗುಹೋಗಲೆಂದು ಉಪಾಯ ಮಾಡಿದ. ತನ್ನನ್ನು ಕಳೆದು ಕೊಂಡು ಅದೃಶ್ಯ ಸೃಷ್ಟಿಯಾಯಿತು, ಆದರೆ ಮುಘಲರಿಗಾಗಿ ಅದು ಅಕ್ಷವಾಯಿತು. ದಂಡನಾಯಕ ಬರುವವರೆಗೂ ಈ ರೀತಿ ವಿಚಾರಮಾಡಿದ, ಎಂತಹ ಕಷ್ಟಕರ ಕೆಲಸಮಾಡಿದ ಅಂದರೆ ಅದನ್ನು ಕೇಳಿ ಪ್ರಪಂಚ ಗಾಬರಿಯಾಗಿ ಆಕಾಶ ನೋಡಲಾರಂಭಿಸಿತು. (೧೭೫೨–೧೮೭೯)

ಮಾತೇನೆಂದರೆ ಮುಘಲ್ ದಂಡನಾಯಕ ಬರುವವರೆಗೆ ಆ ಕಳ್ಳನು ಸೂರತಿನ ಬಂದರನ್ನ ಲೂಟಿಹೊಡೆದಿದ್ದ.

ಎಲ್ಲಿಯವರೆಗೆ ನೀಚನಿಗೆ ಅದೃಷ್ಟ ಬಲ ಇರುತ್ತದೆಯೋ ಅಲ್ಲಿಯವರಿಗೆ ಅವನ ಕೈ ಶಕ್ತಿಶಲಿಯಾಗಿರುತ್ತದೆ. ಸೂರತ್ ಎಂಬ ಹೆಸರಿನ ಒಂದು ದೇಶ ಗುಜರಾತಿನಲ್ಲಿತ್ತು. ಅದು ಎಲ್ಲದರಲ್ಲಿಯೂ ಉತ್ತಮವೆಂದು ಪರಿಗಣಿಸಲಾಗುತ್ತಿತ್ತು. ಅಲ್ಲಿ ಸಮುದ್ರ ಹಾಗೂ ನೆಲಭಾಗದ ವರ್ತಕರಿದ್ದರು. ವಿಶ್ವದ ಎಲ್ಲ ವಸ್ತುಗಳು ಅಲ್ಲಿ ದೊರೆಯುತ್ತಿದ್ದವು. ಆ ಪಟ್ಟಣದ ಪ್ರತಿಯೊಂದು ಬೀದಿಯೂ ಒಂದು ತುಂಬಿದ ಪಟ್ಟಣದಂತ್ತಿತ್ತು. ಪ್ರತಿಯೊಂದು ಮನೆ ತುಂಬಿದ ಖಜಾನೆಯಂತೆ ಇದ್ದವು. ಮೋಡಕ್ಕೆ ನದಿ ನೀರಿನಿಂದ ಹೇಗೆ ಶಕ್ತಿ ಸಿಗುತ್ತದೆಯೋ ಹಾಗೆಯೇ ಹಿಂದುಸ್ತಾನವು ಅದರಿಂದ ಹೊಸ ಹೊಸ

ಪ್ರಯೋಜನೆ ಪಡೆಯುತ್ತಿತ್ತು. ಎಂದಿನಿಂದ ಈ ಉದ್ಯಾನ ಪ್ರಪಂಚದಲ್ಲಿ ಉದ್ಭವವಾಗಿದಿಯೋ ಅದು ಎಂದೂ ಸಹ ಶಿಶಿರ ಋತುವನ್ನು ನೋಡಲಿಲ್ಲ. ಇಲ್ಲಿಂದ ಅಲ್ಲಿಯವರಿಗೂ ಬಹಳ ಅಂತರವಿತ್ತು, ಅದನ್ನು ಪೂರ್ವಪಶ್ಚಿಮಗಳ ದೂರವೆನ್ನಬಹುದು. ಅದರ ಮೇಲೆ ಆ ದುರಭ್ಯಾಸಿಯ ಕಣ್ಣುಬಿದ್ದಾಗ ಅವನ ಮನಸಲ್ಲಿ ಇದನ್ನು ಗೆಲ್ಲುವ ವಿಚಾರ ಬಂತು. ಮುಘಲರಿಗೆ ಅಲ್ಲಿ ಇಲ್ಲಿ ಆಟದಲ್ಲಿ ತೊಡಗಿಸಿ ಅವನು ಬಂದರಿನ ಮೇಲೆ ಆಕ್ರಮಿಸಿದ. ಬೊಕ್ಕಸದ ಮೇಲೆ ಹಾವು ಕುಳಿತಂತೆ ಒಂದು ಕ್ಷಣದಲ್ಲಿ ಅವನು ಅದನ್ನು ವಶಪಡಿಸಿಕೊಂಡ. ಅವರ ಮೇಲೆ ಕಷ್ಟದ ದುಃಖವಿರಲಿಲ್ಲ ಏನೆಲ್ಲವಿತ್ತೋ ಅವೆಲ್ಲವನ್ನು ಸದ್ಯೆವಾಗಿ ಹಾರಿಸಿಕೊಂಡು ಹೋದ, ಒಂದು ಕ್ಷಣದಲ್ಲಿ ಬೆಂಕಿ ಹತ್ತಿಕೊಂಡಾಗ ಬೂದಿ ಬಿಟ್ಟರೆ ಮತ್ತೇನು ಸಿಗುವುದಿಲ್ಲವೋ ಹಾಗೆ ಎಲ್ಲವನ್ನು ಲೂಟಿ ಹೊಡೆದು ಸ್ವಚ್ಛಮಾಡಿದ. ಯಾರು ಸುಂದರವಾಗಿದ್ದರೋ ಅವರ ಮುಖಗಳೆಲ್ಲ ಕೆಟ್ಟು ಹೋದವು, ಆಕಸ್ಮಿಕವಾಗಿ ಯೌವ್ವನದಿಂದ ವೃದ್ಧಾಪ್ಯಗೆ ಬಂದರು. ಅಮೀರರು ಮಂತ್ರಿಗಳು ಪ್ರಬುದ್ಧರಾಗುವವರಿಗೆ ಲೂಟಿಹೊಡೆದ ಎಲ್ಲ ಸಂಪತ್ತನ್ನು ಎತ್ತಿಕೊಂಡು ತನ್ನ ಜಾಗಕ್ಕೆ ಹಿಂದುರಿಗಿದ. ಬಡಪಾಯಿ ಸುಬೆದಾರ ತಲಪುವರಿಗೆ ಅನೇಕ ಬಾರಿ ಆಕ್ರಮಣಿಸಿ ದಂಡನ್ನು ಹೊಡೆದ ಕಾರಣ ಬಹಳ ಕಷ್ಟದಲ್ಲಿ ಸಿಕ್ಕಿಕೊಂಡ, ಹಗಲು ರಾತ್ರಿಯಲ್ಲಿ ಅತಿ ಪರಿಶ್ರಮದಲ್ಲಿ ತೊಡಗಿಕೊಂಡು ಆಕ್ರಮಿಸುತ್ತ ಕೋಟೆ ಹೊಡೆದುರುಳಿಸಿ, ಶತ್ರುಗಳ ನಾಲಿಗೆಗೆ ಲಗಾಮು ಹಾಕಿದ. ಆದರೆ ಆ ದುರ್ಗ ಅಷ್ಟು ಬೇಗನೇ ಗೆಲ್ಲಲು ಸಾಧ್ಯವಿರಲಿಲ್ಲ. ಎಲ್ಲಿ ಮೂರು ಲೋಕಗಳಿರುತ್ತವೋ ಅಲ್ಲಿ ತಲೆ ಒಡೆದು ಹೋಗುತ್ತದೆ. ಆದರೆ ಆ ಕಿಲ್ಲೆಯನ್ನು ಮೊದಲನೆಯ ಅಲಿ ಆದಿಲ್ ಶಾಹನು ಗೆಲ್ಲಬೇಕೆಂದಿದ್ದು, ಅದನ್ನು ಗೆದ್ದು ವಶಪಡೆಸಿಕೊಂಡಿದ್ದ. ಅದಾಗ್ಯೂ ಅವನು ಆ ಗಡವನ್ನು ಪಡೆಯುವ ಹೊಣೆಹೊತ್ತು ಕುಳಿತಿದ್ದ, ಅದರ ಹಾಗೆಯೇ ಅದನ್ನು ಆಕ್ರಮಿಸಿ ತನ್ನ ಕರಾರನ್ನು ಉಳಿಸಿಕೊಂಡ. ಆ ಗಡದಲ್ಲಿ ಸಂಗ್ರಹ ಕಡಿಮೆಯಾಗಲಾರಂಭಿಸಿತು. ಪದೇ ಪದೇ ಅವರ ಮೇಲೆ ಬರಗಾಲ ಆವರಿಸಿತು, ಪ್ರತಿ ದಿನ ಒಂದು ಹೊಸ ಪ್ರಳಯ ಕಾಣತೊಡಗಿತು, ಆದರೆ ಕೆಲಸ ಮುಗಿದ ಹಾಗೆ ಕಾಣುತ್ತಿರಲಿಲ್ಲ, ಇದಲ್ಲದೆ ಸಹಸ್ರಾರು ಮೋಸಗಳು ಬೇರೆ. ಸೂರತಿನ ಈ ಮಾತು ಔರಂಗ್ಜೇಬನು ಕೇಳಿದಾಗ ಆಶ್ಚರ್ಯದಿಂದ ಎರಡು ತುಟಿಗಳು ಹಲ್ಲಲ್ಲಿ ಹಿಡಿದುಕೊಂಡು ಅತಿ ಕ್ರೋಧದಿಂದ ಹಲ್ಲು ಕಡಿದುಕೊಂಡು 'ಇದಂತೂ ಆಕಾಶದ ಆಪದಂತೆ ಕಾಣುತ್ತದೆ. ನಾವು ಏನು ಉಪಾಯ ಮಾಡಿದರೂ ವ್ಯರ್ಥವಾಗುತ್ತಿದೆ, ನಮ್ಮಿಂದ ಇದರ ಚಿಕಿತ್ಸೆ ಆಗುವುದಿಲ್ಲವೆಂದು ಕಾಣುತ್ತದೆ. ಎಲ್ಲಿಯವರಿಗೆ ಅಲಿಯ ಸಹಾಯ ಪಡೆಯುವುದಿಲ್ಲವೋ, ಅಲಿಯ ಖಡ್ಗದ ನೀರು ಸುರಿಯುವುದಿಲ್ಲವೋ ಈ ಉರಿಯುತ್ತಿರುವ ಬೆಂಕಿ ದೆಹಲಿಯವರೆಗೂ ಬರಲು ಸಾಧ್ಯ, ಆದ್ದರಿಂದ ಈ ಕೆಲಸದಲ್ಲಿ ವಿಚಾರ ಮಾಡಿ ಆದಿಲ್‌ಶಾಹನ ಜೊತೆ ಕರಾರು ಮಾಡಿಕೊಳ್ಳಬೇಕು, ಅಂದರೆ ನಾವು ಈ ಕಡೆಯಿಂದ ಸೈನ್ಯಗಳನ್ನು ಕೂಡಿಸುವೆವು, ನೀವು ಆ ಕಡೆಯಿಂದ

ಅಚಲ ಸೈನ್ಯವನ್ನು ಕಳುಹಿಸಿ, ಎರಡು ಕಡೆಯಿಂದ ಲಕ್ಷಾಂತರ ಉಪಾಯ ಹಾಗೂ ಚಿಂತನೆ ನಡೆಸಿ ಆ ಕಳ್ಳನಿಂದ ಈ ಭೂಮಿ ಸ್ವಚ್ಛ ಮಾಡಬೇಕಾಗಿದೆ. ನಿಮ್ಮ ಖಡ್ಗದಿಂದಲೇ ಈ ಕೋಲಾಹಲ ಮುಗಿಯುತ್ತದೆ ಹಾಗೂ ಕೊನೆಯ ದಿನದವರೆಗೂ ನಾವು ಕರಾರನ್ನು ನಿಭಾಯಿಸುವೆವು. ಈ ಮಾತಿಗೆ ತಪ್ಪಿದರೆ ನಾನು ಜಾತಿಯಿಂದ ಹೊರಗಾದೆ ಎಂದು ತಿಳಿ, ನಾನು ನನ್ನ ಅಪ್ಪನ ಮಗ ಎಂದು ಹೇಳಿಕೊಳ್ಳಲು ಸಾಧ್ಯವಿಲ್ಲ, ನಿಮ್ಮ ಹೆಸರನ್ನು ನಾನು ಚಲಾವಣೆ ಮಾಡುವುದಿಲ್ಲ' ಎಂದುಹೇಳಿದ. ಯಾರು ಅಲಿಗೆ ಕಷ್ಟದಲ್ಲಿ ನೆನೆಯುವರೋ ಖಂಡಿತವಾಗಿಯೂ ಅವರಿಗೆ ಸುಲಭವಾಗಿ ತಮ್ಮ ಇಷ್ಟಾರ್ಥ ಸಿದ್ಧಿಯಾಗುತ್ತದೆ. ದೆಹಲಿ ದಾರಿಯ ವಕೀಲ ಈ ಮಾತನ್ನು ನಿವೇದಿಸಲು ಅಪ್ಪಣೆ ಪಡೆದು ಬಂದ ಎಂದು ಹೇಳಲಾಗುತ್ತದೆ. ಫಾಝಿಯರೊಡನೆ ಈ ಮಾತು ಬಿಚ್ಚಿ ಹೇಳಿದಾಗ ಆ ನೃಪತಿ ತನ್ನ ಖಡ್ಗ ಕೈಯಲ್ಲಿ ತಗೆದು ಕೊಂಡು 'ನಾನು ಪ್ರವಾದಿಯರ ಮಗ ನನ್ನ ಹೆಸರು ಶಾಹೆ ನಜಫ್‌ರ ಅವರ ಸಹಹೆಸರು ನಿಸ್ಸಂದೇಹವಾಗಿ ನನ್ನ ಬಿರುದು ಕುಫ್ರ ಭಂಜನ(ನಾಸ್ತಿಕತೆಯನ್ನು ಮುರಿಯುವವ,ಯಾ ನಾಶಗೊಳಿಸುವವ)ಹಾಗೂ ನನ್ನ ಗುಣ ದುರ್ಬಲರ ಸಹಾಯ ಮಾಡುವುದು. ನನ್ನ ಕೆಲಸದ ಮೇಲೆ ನಾನು ನಿತ್ಯವೂ ಹಾಜರಿರುವೆ ನೀವು ನಿಮ್ಮ ಕಡೆಯಿಂದ ಪ್ರಾರಂಭ ಮಾಡಿ, ಅಂದರೆ ಮೊದಲಿಗೆ ನೀವು ಕಾರ್ಯನಿರ್ವಹಿಸಿದರೆ ನನ್ನ ಸಹಾಯ ನಿಮಗೆ ದೊರಕುತ್ತದೆ. ಆ ದುಷ್ಟನ ಮೇಲೆ ಬೇಗನೇ ಆಕ್ರಮಿಸಿ, ನೀವು ಯುದ್ಧ ಮಾಡುವುದು ಬೇಕಿಲ್ಲ, ಕೇವಲ ಯುದ್ಧದ ತಮಾಶೆ ನೋಡುತ್ತಾ ಇರಿ, ನೋಡಿ ಶತ್ರುಗಳೊಡನೆ ನನ್ನ ಸೈನ್ಯ ಹೇಗೆ ಕಾಳಗ ನಡೆಸುತ್ತದೆ ಹಾಗೂ ಸತಿ ಹೇಗೆ ಬೆಂಕಿಯ ಮೇಲೆ ಬೀಳುತ್ತಾಳೆ, ಅವನು ಏಕೆ ಅಡಕಿಗಿಕೊಂಡು ಅನಾಮಿಕನಾಗಿ ನೋವು ಕೊಡುತ್ತಿದ್ದಾನೆ, ಅವನಲ್ಲಿ ಧೈರ್ಯವಿದ್ದರೆ ಮುಂದೆ ಬಂದು ಯುದ್ಧ ಮಾಡಬೇಕು. ನೀವು ನಿಮ್ಮ ವಾಗ್ದಾನ ನಿಭಾಯಿಸಿ, ಏಕೆಂದರೆ ಗಂಡಸು ಸದೈವ ಮಾತಿಗೆ ತಪ್ಪುವುದಿಲ್ಲ'. ರಾಯಭಾರಿ ಅಲಿಯ ಈ ಉತ್ತರ ಕೇಳಿದಾಗ ಮುಘಲರು ಸಂತುಷ್ಟರಾಗಿ ಈಗ ಗಗನ ನಮಗೆ ಮಾರ್ಗದರ್ಶಕನಾದ, ಹಾಗೂ ಆ ನೃಪತಿ ಕುಮ್ಮಕು ಕೊಡಲು ಒಪ್ಪಿಕೊಂಡ, ಎಲ್ಲಿಯವರೆಗೆ ಈ ಒಳ್ಳೆ ಶರಾಬಿನಿಂದ ಮನಸ್ಸು ಪ್ರಮತ್ತವಾಗಿದೆ ಅಲ್ಲೇ ಯುದ್ಧದ ಕೆಲಸ ಒಂದು ಸಭೆಯಲ್ಲಿ ಜರುಗಿತು. (೧೮೧೦-೧೮೫೫)

ಮಾತೇನೆಂದರೆ ಔರಂಗ್ಜೇಬ್‌ನು ಶಾಹನ ಸಹಾಯ ಕೇಳಿದ, ಜೈಸಿಂಘ್‌ಗೆ ಕಳುಹಿಸಿದ ಅದು ಮೋಸ ಹಾಗೂ ನೆಪಗಳಿಂದ ತುಂಬಿತ್ತು.

ಮುಂಜಾನೆ ಲೋಕವನ್ನು ಬೆಳಕುಬೀರಿದಾಗ ಇರುಳಿನ ಕತ್ತಲೆಯನ್ನು ಹಗಲಿನ ಬೆಳಕು ಅಡಗಿಸಿತು. ಔರಂಗ್ಜೇಬನು ವಂಚಕರ ಕಲೆಯಿಂದ ವಂಚಿಸಲು ತನ್ನ ಸಭೆಯನ್ನು ಅಲಂಕರಿಸಿದ. ಎರಡು ನದಿಗಳನ್ನು ಹೊಡೆಯುವುದರಲ್ಲಿ ಹಿಂದು ಮುಂದು ನೋಡಲಿಲ್ಲ. ಶಿವಾಜಿಯ ಬೆಟ್ಟವನ್ನು ಮುಳುಗಿಸಲು ಯಾವ ರಾಜರನ್ನು

ಆಹ್ವಾನಿಸಿದ್ದನೋ ಅವರಲ್ಲಿ ಜಾಣತನವಿತ್ತು, ಅವರಲ್ಲಿ ದೊಡ್ಡ ಪ್ರಸಿದ್ಧ ವ್ಯಕ್ತಿತ್ವ ರಾಯೆ ಜೈಸಿಂಘ್‌ನದಾಗಿತ್ತು. ಇಡೀ ಹಿಂದುಸ್ತಾನದಲ್ಲಿ ಅವನು ದೊಡ್ಡ ಅಂತಸ್ತಿತನವನು. ಪ್ರಭುತ್ವಕ್ಕೆ ಶೋಭಿಸುವವನಾಗಿದ್ದವನು.ಅವನ ದೊಡ್ಡಸ್ತಿಗೆ ಎಲ್ಲರಿಂದ ಬೇರೇಯೇ ಆಗಿತ್ತು, ದಾನಿ ದಯಾಳು ದಾನಧರ್ಮ ಮಾಡುವುದರಲ್ಲಿ ಅವನು ಮದುಮಗನಾಗಿದ್ದ. ತನ್ನ ಕೈಯಿಂದ ತಾನು ತಿಲಕ ತರುವವರೆಗೂ ಹೊಸ ಬಾದಶಾಹನಿಗೆ ದೆಹಲಿಯ ಸಿಂಹಾಸನವನ್ನು ಕೊಡಲು ಸಾಧ್ಯವಾಗುತ್ತಿರಲಿಲ್ಲ. ಮೊಘಲರ ಸಂಬಂಧಿಕರೆಂದು ಹೇಳಿಸಿಕೊಳ್ಳಲು ಎಲ್ಲರ ಮುನ್ನ ತನ್ನ ಮಗಳನ್ನು ಕೊಟ್ಟವನು. ತುಂಬ ಭರವಸೆಗೆ ಯೋಗ್ಯ ಹಾಗೂ ತನ್ನ ವಾಗ್ದಾನದ ಮೇಲೆ ಸ್ಥಿರವಾಗಿರವವನು, ಮಾತಿಗೆ ತಪ್ಪದವ, ಪ್ರಭುತ್ವದ ಮನೆಯ ಒಂದು ಗಟ್ಟಿ ಸದಸ್ಯನೆಂದು ಕಾಣುತ್ತಿದ್ದ. ಒಂದೊಂದು ಕಲೆಯಿಂದ ಅಹಂಕಾರಿ, ತನ್ನ ಬುದ್ಧಿಯಿಂದ, ಚಿಂತನೆಯಿಂದ ಯೋಚನೆಯಿಂದ ಅವನೊಬ್ಬ ದಾರ್ಶನಿಕನೆಂದು ಕಾಣುತ್ತಿದ್ದ. ಅವನ ಮುಂದೆ ಅಯೋಗ್ಯನೂ ಮೋಸ ವಂಚನೆಯ ಉಡುಪು ಧರಿಸಿಬಂದರೂ ಸಹ ಅವನು ಕಾಂತಿಹೀನವಾಗುತ್ತಿದ್ದ. ಅಲ್ಲಿ ಶೈತಾನನ ಯಾವ ಕೆಲಸವೂ ಕಾರ್ಯಗತವಾಗುತ್ತಿರಲಿಲ್ಲ. ತನ್ನ ನಾಲಿಗೆಗೆ ಸುಳ್ಳಿನ ಅರಮನೆ ಎಂದು ನೋಡಿ ತನ್ನ ಖಡ್ಗದಿಂದ ಮೋಸದ ಭೂತದ ಓರೆಪಡೆದು ಶೂನ್ಯ ಹಾಗೂ ಬಹಿರಂಗದಲ್ಲಿ ಪುಣ್ಯ ಮತ್ತು ಪಾಪವನ್ನು ಕಲಿತ. ಇವನಿಗೆ ನೆಪ ಮಾಡಿಕೊಂಡು ಅವನನ್ನೇ ನೇಮಿಸಿಕೊಂಡ, ಹಝಾರಿಗಳಿಂದ ಶ್ರೀಮಂತರನ್ನು, ಒಂದು ಮುತ್ಸದ್ದಿಗಳಿಂದ ಪ್ರಾರಂಭದಿಂದ ಕೊನೆಯವರೆಲ್ಲರನ್ನು ಹಿಡಿದು ಎಲ್ಲರನ್ನು ಒಂದು ಲಕ್ಷದವರಿಗೂ ಸೇರಿಸಿ ಅವರ ಮೇಲೆ ಇವನನ್ನು ಸರದಾರನ್ನಾಗಿ ನೇಮಿಸಿದ. ಏನನ್ನು ಒಂದು ಸರ್ಕಾರ ನಡೆಸಲು ಬೇಕಿತ್ತೋ ಅವೆಲ್ಲವನ್ನು ಅವನ ಅಧೀನಕ್ಕೆ ಕೊಟ್ಟು, ಆದಷ್ಟು ಬೇಗನೇ ಇಲ್ಲಿಂದ ಹೊರಡು, ನಿನ್ನ ಕಷ್ಟಗಳನ್ನು ನಿವಾರಿಸಲು ಅಲಿ ಅಂತಹ ದಂಡು ಜೊತೆಯಲ್ಲಿದೆ. ಆಗ ಆ ರಜಪೂತ ಈ ಮಹತ್ಕಾರ್ಯ ಸಾಧಿಸಲು ಹೊರಡುವ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡ ಹಾಗೂ ತನ್ನ ಸೈನ್ಯವನ್ನು ಕರೆದ, ತನ್ನ ಜೊತೆಯಲ್ಲಿ ಎಷ್ಟೊಂದು ಮುಘಲ್, ಪಠಾನ್, ಖುರಾಸಾನಿ (ಮಧ್ಯ ಏಶಿಯಾದವರು), ಉಝ್ಬುಕರು ಹಾಗೂ ತುರ್ಕಿಯವರೆಲ್ಲರನ್ನು ಸೇರಿಸಿಕೊಂಡ. ಸಿಡಿಮದ್ದಿನ ಉಗ್ರಾಣದ ವರ್ತುಲವನ್ನು ದಂಡಿನ ಜೊತೆ ಸೇರಿಸಿಕೊಂಡ. ಶಕ್ತಿಶಾಲಿ ಒಂಟೆಗಳೂ ಸಹ ಜೊತೆಗಿಟ್ಟುಕೊಂಡ. ತನ್ನ ಸಿಡಿಮದ್ದಿನ ಉಗ್ರಾಣಕ್ಕೆ ಅಗ್ನಿ ಮೋಡಮಾಡಿ ಭಯಂಕರ ಘರ್ಜನೆಯಿಂದ ಆವೇಶದ ಸುರಿಮಳೆ ಸುರಿಸಲು ಸಿದ್ದಪಡಿಸಿದ, ಅಗಣಿತ ಬಾಣ ಹಾಗೂ ಬಿಲ್ಲುಗಾರರನ್ನು ಕರೆದುಕೊಂಡ. ಇಷ್ಟೆಲ್ಲವನ್ನು ಸೇರಿಸಿಕೊಂಡು ಆ ಕಡೆ ಮುಂದೆ ಸಾಗುತ್ತ ರವಾನೆಯಾದರೂ ಸಹ ಅವನಿಗೆ ಶಾಯಿಸ್ತ ಖಾನಿನ ಜೊತೆ ಹೀಗೆ ವರ್ತಿಸಿದ, ಜೊತೆಯಲ್ಲಿ ಜಸ್ವಂತ್‌ನಿಗೂ ನೋವು ಕೊಟ್ಟ, ಶತ್ರು ಮೋಸ ಮಾಡುವುದರಲ್ಲಿ ಪ್ರಸಿದ್ಧನಾಗಿದ್ದಾನೆ ಇಂತಹದರಲ್ಲಿ ನಾನು ಈ ಮಹತ್ಕಾರ್ಯ ಸಾಧಿಸಬಲ್ಲೇ? ಎಂಬ ಚಿಂತನೆ ಅವನಿಗೆ ಕಾಡುತ್ತಿತ್ತು. ಬುದ್ಧಿಯ ಚಮತ್ಕಾರದಿಂದ ಅವನು

ಆರಂಭಿಸುವವನಾದ, ಮುಂದೆ ಪುಣ್ಯ ಅಥವಾ ಪಾಪ ಬರಲಿದೆಯೋ ಎಂದು ಸಹ ತಿಳಿಯಲಿಲ್ಲ. ಅಲ್ಲಿಯವರಿಗೆ ಶಾಹ ಘಾಝಿ ಈ ಜ್ಞಾನಿ ಸಹಾಯಕರನ್ನಾಗಿ ನಿಂತು ಒಳ್ಳೆ ಉದಾಹರಣೆ ಕಲ್ಪಿಸಿ, ಲೋಕದಲ್ಲಿ ತನ್ನ ಹೆಸರನ್ನು ಅಭಿವೃದ್ಧಿಸಲು, ಗಂಗಾನದಿ ಹರಿಯುವ ದೇಶದವರನ್ನು ಅಲ್ಲಿಯ ನಿವಾಸಿಗಳನ್ನು ಸಂತೋಷ ಪಡಿಸಲು ಈ ಸಭೆಯನ್ನು ಅಲಂಕರಿಸಿದರು. (೧೮೫೬–೧೮೮೩)

ಮಾತೇನೆಂದರೆ ಮುಘಲರು ಶಾಹನ ಸಹಾಯ ಕೇಳಲು ಒಬ್ಬ ಸರ್ದಾರನನ್ನು ಕಳುಹಿಸಿದರು. ಅವನಿಗ ತನ್ನ ಮುಂದೆ ಕರೆತರಸಿದರು.

ಶಹಬಾಶ್ ಅವನ ಪಚ್ಚೆ ಸಿಂಹಾಸನ ಆ ಪೂರ್ಣಚಂದ್ರ ಹತ್ತಿ ಇಡೀ ಖಚಿತವಾದ ಉನ್ನತ ಸ್ಥಾನವನ್ನು ಧರಿಸಿ ರಾಜದರ್ಶನ ನೀಡಿದ. ಒಂದು ಹೊಸ ತೇಜಸ್ಸನ್ನು ತೋರಲು ತನ್ನನ್ನು ಶೃಂಗರಿಸಿಕೊಂಡ. ಚಂದ್ರನ ಒಲೆಯಲ್ಲಿ ಸುಗಂಧಿತ ಎಣ್ಣೆಯನ್ನು ತುಂಬಿದ ದಿಗಂತದ ಬೆಂಕಿಯ ಮೇಲೆ ರಾತ್ರಿಯ ಪನ್ನಂಬರದ ಚೂರನ್ನು ಬೀಸಾಡಿದ. ಸೆರಗನ್ನು ಬಿಚ್ಚಿ ಕಸ್ತೂರಿ ಹೊಗೆ ಕೊಟ್ಟ, ಗಾಳಿ ಹೂಗಳ ಡೋಲುಗಳಿಂದ ಸುಗಂಧ ತೆಗೆದು ತನ್ನ ಸುತ್ತಮುತ್ತ ಸುಗಂಧಮಯ ಮಾಡಿತು, ರಾತ್ರಿ ಅಚಲ ನಕ್ಷತ್ರಗಳ ಅಮೂಲ್ಯ ಮುತ್ತುಗಳನ್ನು ತೆಗೆದುಕೊಂಡು ತಕ್ಕಡಿಯಲ್ಲಿ ತೂಗಿ ಮುತ್ತುಗಳನ್ನು ನಿವಾಳಿಸಿತು. ಮಿಥುನ ರಾಶಿ ಸೊಂಟ ಕಟ್ಟಿ ಶಿಷ್ಟಾಚಾರದಿಂದ ಕನ್ಯಾರಾಶಿಯ ತುರಾಯಿ ಕೈಯಲ್ಲಿ ತೆಗೆದುಕೊಂಡು ನಿಂತಿತು. ಸೂರ್ಯ ಪಶ್ಚಿಮ ದೇಶದಿಂದ ಉಡುಗೊರೆ ಗುರುತಿಸಿ ಕಮಾನಿನ ವರ್ತುಲವನ್ನು ಸೇರಿಸಲು ಕಳುಹಿಸಿದ, ಆಕಾಶದ ನ್ಯಾಯಧೀಶ ನ್ಯಾಯ ಕೈಗೆ ತೆಗೆದುಕೊಂಡ ಬುಧಗ್ರಹ ಜೊತೆಸೇರಿ ಕೆಲಸ ಸಾಗಿಸಿದ. ದಂಡನಾಯಕ ಮಂಗಳ ಗ್ರಹ ವೇಗದಿಂದ ಆಕ್ರಮಿಸಿ ನಕ್ಷತ್ರಗಳ ದಂಡನ್ನು ಚದರಿಸಿದ. ವೃಶ್ಚಿಕ ರಾಶಿ ಲೋಕದ ಕಾಲದ ದರೋಡೆಕೋರ ಭೂಮಿಯ ಭಾಗವಾಗಿ ಕ್ಷಣದಲ್ಲಿ ನಾಶಮಾಡಿದ. ಆಕಾಶ ಹೊಳಪುಳ್ಳ ರೇಷ್ಮೆ ಬಟ್ಟೆಯಂತೆ ವಿಶೇಷ ಮಂಟಪವಾಯಿತು. ಉತ್ಸವದ ಚಪ್ಪರ ಮನಮುಟ್ಟುಂತಾಯಿತು. ಹಾಡುಗಾರ ಶುಕ್ರಗ್ರಹನು ಕೈಯಲ್ಲಿ ಪದ್ಯಗಳ ದೊಡ್ಡ ಕಾವ್ಯಕೃತಿ ಹಿಡಿದು ಹೃದಯದ ಗಾಜುಗಳಲ್ಲಿ ರಾಗಗಳ ಬಣ್ಣ ತುಂಬಲಾರಂಭಿಸಿದ. ಒಳ್ಳೆ ಸ್ವರವನ್ನು ಕೇಳಿ ನಿರ್ಮಲ ಅಪ್ಸರೆಗಳು ಸಹ ಸ್ವರ್ಗದಿಂದ ಬಂದು ಜ್ಯೋತಿ ಸುರಿಯಲಾರಂಭಿಸಿದರು. ನಂತರ ಆಕಾಶಗಂಗೆಯ ನದಿ ಹೇಗೆ ಉಕ್ಕಿತೆಂದರೆ ಮಕರ ರಾಶಿ ಕರ್ಕಾಟಕ ರಾಶಿ ಹಾಗು ಮೀನ ರಾಶಿ ಅದರ ಕೆಳಗೆ ಬಂದವು. ಶನಿ ಗ್ರಹ ಬಲು ಹುಮ್ಮಸ್ಸಿನಿಂದ ಕೈಗಳಲ್ಲಿ ನೀರು ತುಂಬಿ ತುಂಬಿ ಎಲ್ಲ ಅಂಗಳಗಳಲ್ಲಿ ಪ್ರಕಾಶಮಯ ನಕ್ಷತ್ರಗಳನ್ನು ಚಿಮ್ಮಿಸಿದ. ಈ ಮನರಂಜನೆಯನ್ನು ನೋಡಿ ಆಕಾಶದವರೆಲ್ಲರೂ ಆನಂದ ಪಟ್ಟರು, ಮಣ್ಣಿನ ಮೇಲಿರುವರು ಸಂತೋಷಗೊಂಡರು. ಈ ಮನರಂಜನೆಯನ್ನು ಇನ್ನೂ ಆಕರ್ಷಕ ಮಾಡಲು ಶೂರರು ಮೇಷರಾಶಿ ಹಾಗೂ ವೃಷಭರಾಶಿಗಳ ಮೇಲೆ ಸಿಂಹರಾಶಿಯನ್ನು

ಸ್ವತಂತ್ರಗೊಳಿಸಿ ಬಿಟ್ಟರು. ಆಟಗಾರರಾಗಿ ಪ್ರಕಾಶಮಯ ನಕ್ಷತ್ರಗಳು ಓಡಲಾರಂಭಿಸಿದರು, ಎಲ್ಲಿಯವರೆಗೆಂದರೆ ಭೂಮಿ ಮೇಲೆ ಇಳಿದು ಬೇಗನೇ ತನ್ನ ಆಟ ಸೋತರು. ಚಂದ್ರನ ನಿರ್ಮಲತೆಯು ಮುಂದೆ ಸೂರ್ಯ ನಾಚಿಕೊಂಡು ಪ್ರಿಯರ ಮುಖಗಳಿಂದಲೂ ಅದರ ಜ್ಯೋತಿ ಮೃದುವಾಗಿ ಕಾಣಿಸುತ್ತದೆ. ಲೋಕದ ವೃದಪ್ಯದ್ದಾ ಹಾಳೆ ಯಾರೋ ಬೆಳ್ಳಿ ಕರಿಗಿಸಿ ನೀರಲ್ಲಿ ಮಿಶ್ರಿಸಿದಂತೆ ನಿಚ್ಚಳವಾಗಿತ್ತು. ಜ್ಯೋತಿಯ ಚಿಲುಮೆಯ ಎಲ್ಲ ಕಣ್ಣುಗಳನ್ನು ತೆರೆದಿದ್ದರಿಂದ ಪ್ರತಿಯೊಂದು ಹೃದಯದ ಮೊಗ್ಗು ಪಾದರಸದ ಬಾವಿಯಂತೆ ಕಾಣತೊಡಗಿತು. ಈ ರೀತಿಯಾಗಿ ಪ್ರಪಂಚಕ್ಕೆ ವಿರಾಮ ಸಿಕ್ಕಿತು, ರಾತ್ರಿ ಶುಭದಂತೆ ಕಾಣತೊಡಗಿತು. ಅಂದು ರಾತ್ರಿ ಶಾಹ ಆಕಾಶದ ಸಿಂಹಾಸನದ ಮೇಲೆ ಅದ್ವಿತೀಯ ಹೊಸ ಅಂಗಳದಲ್ಲಿ ಕುಳಿತರು. ಆ ಠಾಣ್ಯದ ಮೇಲೆ ಪ್ರಕಾಶ ಬೀರಿದ್ದನ್ನು ನೋಡಿ ಚಂದ್ರನು ನಾಚಿಗೆಯಿಂದ ಬೆಂದು ನೀರು ನೀರಾಯಿತು. ಚಂದ್ರನಿಗೂ ಮೀರಿಸುವಂಥ ಸೌಂದರ್ಯದ ಜ್ಯೋತಿಭರಿತ ಅಂಗಳದಲ್ಲಿ ಬಂದು ಲೋಕಪಾಲಕ ಶಾಹರವರು ಸಿಂಹಾಸನದ ಮೇಲೆ ಕುಳಿತರು. ಶಾಹನ ದರ್ಶನದಿಂದ ಸಿಂಹಾಸನ ಬೆಳಗಿತು. ಸಿಂಹಾಸನದ ಮೇಲಿರುವ ಪ್ರತಿಯೊಂದು ಕಾಲು ಸೂರ್ಯವಾದವು. ಆಗ ಶಾಹನ ಸೇವೆಯಲ್ಲಿ ಸಾರ್ವಜನಿಕರೆಲ್ಲರೂ ಆಗಮಿಸಿದರು. ಹೆಸರಾಂತ ಎಲ್ಲಾ ನಾಯಕರು ಸರ್ದಾರರೂ ಬಂದು ಭೇಟಿಯಾದರು. ಹೆಸರುಳ್ಳ ಅಲಿ ಮಾತಿಗೆ ತಪ್ಪದವ, ಸಿಂಹಾಸನದ ಶಿಖರದ ಯೋಗ್ಯ ನಕ್ಷತ್ರ ಶಾಹರು, ಅಜೇಯ ದೊರೆ ಮಹಾ ಅದೃಷ್ಟಶಾಲಿ ನೃಪತಿ ಎಲ್ಲಿಯವರೆಗೂ ದೃಷ್ಟಿ ಹೊಗಬಲ್ಲದೋ ಅಲ್ಲಿಯವರಿಗೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ. ಈಗ ಸ್ವತಃ ಆ ದುಷ್ಟನ ಮುಖಮುರಿಯಲು, ಆ ಪ್ರಚಂಡನ ಹಸ್ತ ಮುರಿಯಲು ಹುಝೂರ್‌ರವರು ತಟ್ಟೆಯಲ್ಲಿ ತಾಂಬೂಲ ತೋರಿಸಿ, 'ಶಿವಾಜಿಗೆ ಶೌರ್ಯದಿಂದ ಸೋಲಿಸಿ, ತನ್ನ ಖಡ್ಗದಬಲ ದೆಹಲಿ ಮೇಲೆ ಪ್ರಯೋಗ ಮಾಡುವವನು ಮಂತ್ರಿಗಳಲ್ಲಿ ಯಾರಾದರೂ ವೀರರಿದ್ದೀರಾ? ಅಂತಹ ವೀರಯಾರಾದರು ಇದ್ದರೇ ಬನ್ನಿ ಈ ವೀಳ್ಯದೆಲೆ ತೆಗೆದುಕೊಳ್ಳಿ, ಇದು ಮಹತ್ಕಾರ್ಯ ಇದನ್ನು ಸಾಧಿಸಿದರೇ ನೀವು ಹೆಸರುವಾಸಿ ಆಗುವಿರಿ,ಸದೈವ ಕಠಿಣಕರ ಕೆಲಸ ಮಾಡಿದರೆ ಉತ್ತಮವಾದ ಕೆಲಸವಾಗುತ್ತದೆ,' ಎಂದು ಶಾಹ ಫಾಝ್ಝಿರವರು ಈ ಮಾತು ಹೇಳಿದಾಗ ದಕ್ಷಿಣದ ಮಂತ್ರಿಗಳಲ್ಲಿ ಹೆಸರಾಂತ ಮಂತ್ರಿ, ನಂಬುವಂಥವನು, ಸರ್ದಾರರಲ್ಲಿ ಕಾಮಾಸಕ್ತ, ಶೌರ್ಯದಲ್ಲಿ ರುಸ್ತುಮನ ಸರಿಸಮಾನ, ದೂರ ದೃಷ್ಟಿಯಲ್ಲಿ ಅರಿಸ್ಟಾಟಲ್, ಶಹಿನ್ಶಾಹನ ಭೇದಜ್ಞ, ಸಜ್ಜನರಲ್ಲಿ ಉತ್ತಮ, ಅವನ ಪ್ರಸಿದ್ಧ ಹೆಸರು ಖವಾಸ್ ಖಾನ್. ಶಾಹರು ತನ್ನ ವಿಶೇಷ ಕೃಪೆಯಿಂದ ಬೆಳೆಸಿದವ, ನಿಷ್ಠೆಯ ಕಾಮ ಕಸ್ತೂರಿಯ ತಾತ್ಪರ್ಯ,ಅವನ ಹರಟೆಯೂ ಸಹ ರತ್ನಗಳ ಖನಿಜ, ಅವನ ಮಾತು ನವರತ್ನ ಬಣ್ಣವುಳ್ಳವುವು, ಗದ್ಯದ ಕಲೆಗೆ ಅಲಂಕರಿಸಿದರೆ, ಅವನ ಪದ್ಯ ಸುಂದರ ಕವಿತೆಯಾಯಿತು, ಅವನ ಭಾಷಣ ಎಷ್ಟೊಂದು ಉನ್ನತ ಹಾಗೂ ನಿರ್ಮಲವಾದದ್ದು, ಚತುರತೆಯ ಬಾದಶಾಹನ ಒಗಟನ್ನು ಒಡೆಯುವವನು,

ಸಿಪಾಯಿಯ ಪದ್ಧತಿಯಲ್ಲಿ ಏಕ, ಸಿಪಾಯಿ ಪೋಷಣೆಯಲ್ಲಿ ಏಕ, ಒಬ್ಬ ಸವಾರ ಸಹಸ್ರಾರರ ಮೇಲೆ ಭಾರಿ, ಒಬ್ಬೊಬ್ಬ ಹೆಸರಾಂತ ನೂರಾರುಗಳ ಮೇಲೆ ಭಾರಿ. ಮನಸ್ಸು ಗಟ್ಟಿ ಮಾಡಿ ಜಗಳಕ್ಕೆ ಬಂದರೇ ಯುದ್ಧ ಮಾಡುತಿದ್ದಾನೆಂದು ತಿಳಿ, ಮತ್ತೊಂದು ಕ್ಷಣದಲ್ಲಿ ಸಮರ ಮೈದಾನವನ್ನು ಉದ್ಯಾನವನವನ್ನಾಗಿ ಮಾರ್ಪಾಡು ಮಾಡುವವನು. ಆ ವೀರ ಪಂಕ್ತಿಯಿಂದ ಎದ್ದು ತಾಂಬೂಲ ಎತ್ತಿಕೊಂಡಾಗ ಶಾಹ ಫಾಝ್ಲಿರವರು ಅವನನ್ನು ಸನ್ಮಾನಿಸಿದರು, ಅವನಿಗೆ ಗೌರವ ವಸ್ತ್ರಗಳಿಂದ ಪ್ರತಿಷ್ಠಿಸಿದರು, ತನ್ನ ಖಾಸಾ ಖಡ್ಗ ನೀಡಿ ವಿಜಯದ ಶುಭ ಸಮಾಚಾರ ಕೊಟ್ಟು ಬಹು ಬೇಗನೇ ಯುದ್ಧ ಪ್ರಾರಂಭ ಮಾಡುವ ಸಂಕೇತ ನೀಡಿದರು, ಮಹಾಬಲಿಯಿಂದ ಈ ಸುವಾರ್ತೆ ಪಡೆದ ತಕ್ಷಣ ಅವನು ಯಾ ಅಲಿ ಮದದ್ ಎಂದು ಕೂಗುತ್ತ ಖಡ್ಗ ಎತ್ತಿಕೊಂಡ. ಸೂಬೆದಾರಿನ ವೈಭವವನ್ನು ಬದಿಗಿಟ್ಟು ಮಂತ್ರಿ ಅಥವಾ ಸಿಪಾಯಿಗಳನ್ನು ಕಾಯದೇ ಒಬ್ಬಂಟಿಗನೇ ಕಣ್ಣೀರು ಸುರಿಸುತ್ತಾ ಬಾದಶಾಹರ ಮುಂದೆ ಬಂದು ನಾನು ಅಲಿರವರ ಉಪ್ಪು ತಿಂದು ಬೆಳೆದಿರುವನು, ಮುಘಲರು ಬರುವವರೆಗೂ ಇಲ್ಲಿ ನನಗೆ ಏನು ಕೆಲಸವಿದೆ, ಬಳ್ಳಿಯ ಓರೆಯಲ್ಲಿ ಬೇಡ ಕೆಲಸ ಮಾಡುತ್ತಾನೆ, ಆದರೆ ಸಿಂಹ ತನ್ನ ಬೇಟೆ ತಾನೆ ಮಾಡುತ್ತಾನೆ. ಕೊಕ್ಕರೆಯ ಸರಿಸಮಾನ ತಿರ್ಮತಿ(ಒಂದು ಹಕ್ಕಿ) ಆಗಲೂ ಸಾಧ್ಯವಿಲ್ಲ. ಗಿಡುಗನಿಗೆ ಕೊಕ್ಕರೆ ಸಾರಸ ಮೇಲೆ ಬಿಡು, ನಾನೊಬ್ಬನೇ ಹೋಗಿ ಧಂಗಾನ(ಬಾಗಿಲು ತೆರೆಯುವಾಗ ವಧುವರರೊಡನೆ ಮಾಡುವ ಜಗಳ)ಮಾಡುವೆ, ಮೊದಲ ಏಟಲ್ಲೇ ಎಲ್ಲವನ್ನು ಧ್ವಂಸ ಮಾಡುವೆ, ಅಂದರೆ ಬಂಡಾಯಗಾರನ ಸಭೆ ಹಾಗೂ ಕುಡಿಸುವವನೂ ಇರಕೂಡದು, ಮುಘಲರು ಬರುವವರೆಗೂ ಗತಿ ಇರಕೂಡದು. ಹೊರಡುತ್ತ ಶಹಿನ್ಷಾಹರೊಡನೆ ಮಾತಾಡುತ್ತ ಹಗಲು ರಾತ್ರಿ ಪ್ರಯಾಣ ಬೆಳಿಸಿದ. ಬೆಟ್ಟದ ಸರಹದ್ದಿನ ಬಳಿ ತಲುಪಿದಾಗ ಆ ನೀಚ ಬಂಡಾಯಗಾರನಿಗೆ ಸುದ್ಧಿ ತಿಳಿಯಿತು. ಅವರನ್ನು ತಡೆಯಲು ಅವನು ಓಡಿದ. ಆದೇ ಜಾಗದಲ್ಲಿ ಸಮರವಾಡಬೇಕೆಂದು ತೀರ್ಮಾನಿಸಿದ. ಕಠಿಣ ಬೆಟ್ಟದ ಅಳಿವೆ ಮೇಲೆ ಘಟ್ಟವಿತ್ತು. ಅದರ ದಾರಿಗಳು ಕಾಲ್ಪನಿಕ ಹಾಗೂ ಒಗಟಾಗಿದ್ದವು. ಆ ಕಠಿಣಕರ ದಾರಿಯ ಹೆಸರು ಹೇಳಲು ನಿತ್ಯ ಬಾಯಿಯಲ್ಲಿ ನಾಲಿಗೆಯ ಕಾಲು ಜಾರುತ್ತದೆ. ಆ ಘಟ್ಟದ ಕೆಳಗೆ ಕೋನ್ಕಣ ಇದೆ. ಅಲ್ಲಿ ಹಗಲಲ್ಲೂ ಇರುಳಿನ ಹಾಗಿರುತ್ತೆ. ಕತ್ತಲೆ ಮತ್ತು ಬೆಳಕು ಸೇರಿ ಹಗಲು ಸ್ವರ್ಗ ಸಂಜೆ ಗಾಢಾಂಧಕಾರ ರಾತ್ರಿಯಂತೆ ಕಾಣುತ್ತಿತ್ತು. ಕತ್ತಲೆ ಇರುವುದರಿಂದ ಹಗಲೆಲ್ಲ ನಕ್ಷತ್ರಗಳು ಕಾಣಿಸುತ್ತದೆ. ಅಲ್ಲಿ ನಿತ್ಯವೂ ನಿರೀಕ್ಷಣೆ ಮಾಡುತ್ತ ಕುಳಿತಿರುತ್ತಾರೆ. ಅದಾಗ್ಯೂ ಅದು ಭೂಮಿಯ ಮೇಲೆ ಪ್ರಿಯವಾದ ಸ್ಥಳ. ಆದರೂ ಸಹ ಸೂರ್ಯನ ದೃಷ್ಟಿಯಲ್ಲಿ ಅದು ಸಹ ಲಜ್ಜಿತವಾಗಿದೆ. ಭೂಮಿ ಒಂದು ಚೆಲುವ ಸ್ತ್ರೀ, ಈ ಪ್ರದೇಶವನ್ನು ತನ್ನ ಮುಖದ ಮೇಲೆ ಕಪ್ಪು ಮಚ್ಚೆ ಮಾಡಿಕೊಂಡಿದೆ. ಇಡೀ ಪ್ರಪಂಚದ ಕತ್ತಲು ಅಲ್ಲೇ ಸೇರಿದೆ, ಆದರೆ ಆ ಕತ್ತಲಲ್ಲಿ ಅನೇಕ ಲಕ್ಷ ದೀಪಗಳು ಕಾಣಿಸುತ್ತವೆ. ಸಹಸ್ರಾರು ತಕಲಿಗಳಿವೆ.

ಒಂದು ರಾತ್ರಿಯ ಮೇಲೆ ಸೂರ್ಯ ಅಂದರೆ ಉದ್ಯಾನದ ಕಾಂತಿ ಆವರಿಸಿಕೊಂಡಿದೆ. ವ್ಯವಸ್ಥಾಪಕ ನಿತ್ಯ ಹೊಸ ವಸಂತ ಹರಡುತ್ತಾನೆ. ಬಣ್ಣ ಬಣ್ಣದ ಹೂಗಳಿಂದ ಸಹಸ್ರಾರು ಅಂಗಳ ನಿರ್ಮಾಣವಾಗುತ್ತವೆ. ಎಲ್ಲ ರೀತಿಯ ಪಕ್ಷಿಗಳು ಆಕರ್ಷಕವಾಗಿ ನಿತ್ಯವೂ ಹಾಡುಗಳೊಡನೆ ನೃತ್ಯವೂ ತೋರುತ್ತವೆ. ಗಿಡಗಳೆಲ್ಲ ಸೇರಿ ಆಕಾಶ ಆವರಿಸಿಕೊಂಡಿವೆ, ನಕ್ಷತ್ರಗಳು ಮಿಂಚುಹುಳದ ನೋಟದಂತೆ ಕಾಣುತ್ತವೆ. ಪ್ರತಿಯೊಂದು ಬಿದುರು ಕಿತ್ತೊಗೆಯುವ ಚಿಂತನೆಯಲ್ಲಿದೆ, ಎತ್ತರವಾದ ಆಕಾಶದ ಭಾವಣಿಯ ಮೇಲೆ ಜೇಡರಬಲೆಯ ಜಾಲ. ಆಕಾಶದಿಂದ ನೋಡಿದರೆ ಅನೇಕ ಬಿದಿರುಗಳು ತುಂಬಿವೆ. ಹೇಗೆಂದರೆ ಮನ್ನೂರೊಬ್ಬ ಸಹಸ್ರಾರು ಗಲ್ಲು/ಶಿಲುಬೆಗಳಿವೆ. ಗುಹೆಗಳು ಭೂಮಿಯ ಛಜ್ಜೆ ಹುಲಿಗಳ ವಾಸಸ್ಥಳ ಅದರ ಬಾಯಿಗಳ ಮೇಲೆ ಬಿದುರಿನ ತೆಳ್ಳನೆ ಜಾಲಿಗಳು, ಸಣ್ಣ ರಂಧ್ರಗಳಿಂದ ಮಾಡಲ್ಪಟ್ಟಿವೆ. ಒಂದೊಂದು ಹಳೇ ದೊಡ್ಡ ಮರ ಆನೆಯ ಹಾಗೆ ಕಾಣುತ್ತದೆ. ಅದರ ಕಟ್ಟಿಗೆ ಸಮುದ್ರ ಪಕ್ಷಿಯ ಮನೆಯಂತೆ ಕಾಣುತ್ತದೆ. ಅಲ್ಲೆಲ್ಲಿ ನೀಚ ರಕ್ತದಾಹಿ ಮುಳ್ಳುಗಳು ಕಾಣಿಸುತ್ತವೆ. ಪ್ರತಿಯೊಂದು ಹೆಜ್ಜೆಗೂ ಸಹ ಸಹಸ್ರಾರು ದೊಡ್ಡ ತಟ್ಟೆ ಹಾಗೂ ಶಸ್ತ್ರಸಲಾಕಿಗಳು ಹರಡಿವೆ. ಯಾವ ಮುಳ್ಳು ಸಹ ಪ್ರತಿಯೊಬ್ಬರಿಗೂ ತೊಂದರೆ ಕೊಡದೇ ಬಿಡಲಿಲ್ಲ. ಪ್ರತಿಯೊಂದು ಬಳ್ಳಿಯೂ ಕಾಲಿನ ಅಂಗಳದಂತೆ ಕಾಣುತ್ತವೆ. ಪ್ರತಿಯೊಂದು ಮರವೂ ಶತ್ರುವಿನ ಹಾಗೆ ನಿಂತಿವೆ. ಅಲ್ಲಿಂದ ಹೋದರೆ ಬಟ್ಟೆ ಕಿತ್ತುಕೊಳ್ಳುತ್ತವೆ, ಬಟ್ಟೆ ಇಲ್ಲದಿದ್ದರೇ ಧರ್ಮ ಸುಲಿದುಕೊಳ್ಳುತ್ತದೆ. ಈ ಘಟ್ಟವನ್ನು ಪಾರು ಮಾಡುವ ತನಕ ಒಬ್ಬ ದುಷ್ಟ ಶತ್ರುವಿನ ಮೇಲೇರಿ ಜಯಗಳಿಸಿದಂತಾಯಿತು. ಮೊದಲ ಹಂತ ಮುಗಿಸಿ ಖಾನನು ಒಂದು ದೊಡ್ಡ ಜಯ ಸಾಧಿಸಿದ, ಮುನ್ನಡೆ ಸಾಧಿಸುತ್ತ ಆ ಘಟ್ಟದ ಮೇಲೆರಿ ಶೀಘ್ರವಾಗಿ ಇಳಿದು ಅದಕ್ಕಿಂತ ಕಠಿಣವಾದ ದಾರಿಯನ್ನು ಪಾರು ಮಾಡಿದ. ಆ ಪ್ರಜ್ಞಾಹೀನ ಶಿವಾಜಿ ಖಾನ ಘಾಟು ಸಹ ಇಳಿದು ಬಂದನೆಂಬ ಸುದ್ದಿ ಕೇಳಿ, ಈ ಶತ್ರು ಮುಘಲರಿಂದಲೂ ತುಂಬ ಗಟ್ಟಿ ಇರುವನು. ಅವನು ನನಗೂ ಸಹ ವ್ಯಾಕುಲಸಿದೆ ಬಿಡುವುದಿಲ್ಲ, ನನ್ನ ತಲೆ ಮೇಲೆ ಸ್ವಲ್ಪ ಬೆಂಕಿ ಬಿದ್ದಿಲ್ಲ, ಈ ಬೆಂಕಿಯಂತೂ ಮನೆ ಭಸ್ಮ ಮಾಡುತ್ತದೆ, ಮುಘಲರು ನನ್ನ ಬಳಿ ಬರುವವರೆಗೆ ಇದೊಂದು ದೊಡ್ಡ ಭಾರ, ಅಲ್ಲಿಯವರೆಗೂ ಇವರು ಸ್ವಲ್ಪವೇ ಇರುವರು. ಇವರನ್ನು ನಾನು ಹೊಡೆಯುವೆ. ಮುಘಲ್ ಸೈನ್ಯದೊಡನೆ ಸಮರ ಮಾಡಲು ಯಾವ ಸವಾರ ಸೈನ್ಯ ಶೇಖರಿಸಿದ್ದನೋ ಅದೇ ಸಿದ್ಧವಾಗಿರುವ ಸೈನ್ಯವೂ ಸಹ ಈಗ ಕೆಲಸಕ್ಕೆ ಬರುತ್ತದೆ ಎಂದು ಯೋಚಿಸಿ ಬಲು ದುರಹಂಕಾರದಿಂದ ಅವರನ್ನು ಆಕ್ರಮಿಸಲು ಸಿದ್ಧತೆ ನಡೆಸಿದ. ಶತ್ರು ಬರುವವರಿಗಿನ ಸಮಯಕ್ಕೆ ಬೆಲೆಯಿರುವ ಒಂದು ಜಾಗದಿಂದ ನಿಸ್ಸಂದೇಹವಾಗಿ ಘಟ್ಟದ ಕೆಳಗಿಳಿದ, ಆದರೆ ಇಂದು ಅವನು ಆ ಬಂಡಾಯಗಾರ ಎಲ್ಲಿದ್ದಾನೆಂಬ ಸುದ್ದಿ ತಿಳಿದಿರಲಿಲ್ಲ. ಅವನನ್ನು ಪಡೆಯುವ ಉಪಾಯಗಳ ಮೇಲೆ ಸಿಪಾಯಿಗಳ ಭಾಷಣಗಳು ಜಗಳದ ರೂಪ ತಾಳಿದವು. ಆದರೆ ಸಿಪಾಯಿಗಳಿಗೆ ಶಸ್ತ್ರಗಳನ್ನು ಹಂಚಿ

ಘಟ್ಟದ ಮೇಲೆ ಯುದ್ಧಕ್ಕೆ ತಯಾರು ಮಾಡಿದರು. ಅಲ್ಲಿಯವರೆಗೆ ಸೂರ್ಯ ಮುಳುಗಿತು. ಪಶ್ಚಿಮದಲ್ಲಿ ಹೋಗಿ ಸಂತುಷ್ಟನಾಗಿ ಕಾಲಕ್ಕೆ ಒಂದು ಹೊಸ ಉದ್ಯಾನ ಕಳುಹಿಸಿಕೊಟ್ಟ. ಈ ಕಷ್ಟಪಡುವ ಸಮಯ ಸಾಗಿ ವಿಶ್ರಾಂತಿ ಪಡೆಯುವ ಸಂದರ್ಭ ಬಂತು ಎಂದು ಸಂತೋಷದ ತಿಳಿವು ಮೂಡಿತು. ಹಗಲೆಲ್ಲ ಕಷ್ಟಪಟ್ಟು ದಣಿದವರಿಗೆ ಇರುಳಲ್ಲಿ ವಿಶ್ರಾಂತಿ ಸಿಗುತ್ತದೆ. ಕರಾಳ ರಾತ್ರಿ ನೋಡಿ ಕೆಟ್ಟ ಜನ ಒಂದು ಸ್ಥಳ ಹಿಡಿದರು ಸುರಂಗ ಮಾರ್ಗವಾಗಿ ಹೊರ ಬಂದು ಹತ್ಯಾಕಾಂಡ ಆರಂಭಿಸಿದರು. ನಿಶಾಕ್ರಮಣದಿಂದಾಗಿ ಸಾಧಿಸಿದವರ ಆಟ ಕೆಟ್ಟು ಹೋಯಿತು. ಮೈದಾನ ಖಾಲಿಯಾಗಿ ಕಳ್ಳರ ಆಟ ಪ್ರಾರಂಭವಾಯಿತು. ನೋಡಿ ಆ ಕಳ್ಳ ಶಿವಾಜಿ ನೀಚ ಆಟ ಆಡಲು ಎಂತಹ ಸಮಯ ಆರಿಸಿರುವನು, ಆದರೆ ಯಾರು ತನ್ನ ಒಡೆಯನ ವಿಶ್ವಾಸಿಯಾಗಿರುವನೋ ಅವರನ್ನು ದೇವರು ಸಹಾಯ ಮಾಡುತ್ತಾನೆ ಅವರನ್ನು ಕಾಪಾಡುತ್ತಾನೆ. (೧೮೮೪-೧೯೮೫)

ಜಯವೆಂದರೆ ಅದು ಆ ಪ್ರದೇಶದಲ್ಲಿ ತಲುಪಿ ಖವಾಸ್ ಖಾನನು ಅವರ ಉಸಿರನ್ನು ಶೀತಲಗೊಳಿಸಿ ಸೇಡನ್ನು ತೀರಿಸಿಕೊಂಡ ಅವರನ್ನು ಚೆನ್ನಾಗಿ ತುಳಿದ.

ಚಂದ್ರನು ಆಕಾಶದ ಬೆಟ್ಟದಿಂದ ನೌಕರರೊಡನೆ ವಿಜೃಂಭಣೆಯಿಂದ ಹೊರಟಾಗ ಸೂರ್ಯ ಪಶ್ಚಿಮದ ಬೆಟ್ಟದಲ್ಲಿ ಹೊರಟುಹೋದನೆಂದು ತಿಳಿದು ಶೀಘ್ರದಿಂದ ಓಡುತ್ತಿರುವವ ಬಾಣಗಳನ್ನು ಹೊಡೆಯಲಾರಂಭಿಸಿದನು, ಇದರಿಂದಾಗಿ ಹೊಗೆ ಬೆಳಕಿನ ಮುಂದೆ ಹೂತು ವಿಚಿತ್ರವಾಯಿತು. ಕತ್ತಲೆಯ ಮೇಲೆ ಬೆಳಕು ಆವರಿಸಿತು. ಈ ಬೆಳಕು ಚಂದ್ರನ ಮೇಲೆ ಬಿದ್ದಾಗ ಇಡೀ ಪೃಥ್ವಿ ಅವಿರೋಧವಾಗಿ ಕೈಗನ್ನಡಿಯಾಯಿತು. ಭೂಮಿಯ ತಟ್ಟೆ ಜಗಜಗಿಸಿತು. ವೃದ್ಧಾಪ್ಯ ಮುಖದ ಹಾಳೆಯಂತೆ ಅಖಂಡವಾಗಿ ತಿರುಗಿದೆ. ಸೂರ್ಯ ಪಶ್ಚಿಮದಲ್ಲಿ ಚಂದ್ರನ ನೆರಳನ್ನು ನೋಡಿ ಹಿಂದುರಿಗಿ ಬಂದ. ಇರುಳಿನ ಸಹಾಯ ಪಟ್ಟು ಆ ಕಳ್ಳ ಖಾನನ ಸೈನ್ಯದ ಮೇಲೆ ಆಕ್ರಮಿಸಿದ. ಮರಾಠರು ಚಂಚಲ ಹೆಣ್ಣುಕುದುರೆಗಳ ಮೇಲೆ ಹೇಗೆ ಸವಾರಾರಗಿದ್ದರೆಂದರೆ ಅಪ್ಸರೆಯರು ಯಕ್ಷಗಳ ತೊಡೆಗಳ ಕೆಳಗೆ ಸಿಕ್ಕಿರುವ ಹಾಗೆ ಸವಾರಾರಗಿದ್ದರು. ಆ ದನಕಾಯುವವರು ಹಟಾತ್ತನೆ ಆಕ್ರಮಿಸಿದರು. ಹಿಂದೆ ಭಾಲೆಯಂತಹ ಆಯುಧ, ಸೊಟ್ಟದಾರಿ ಸ್ವಲ್ಪವೂ ಹೆಜ್ಜೆ ತಪ್ಪಿದರೆ ಹೆದರಿಕೆಯ ಎಳೆಯಲ್ಲಿ ಬರುವರು. ಪ್ರಿಯೆಯ ಕೈಹಿಡಿದುಕೊಂಡು ಮನದಲ್ಲಿ ಸಂತೋಷ ತುಂಬಿಕೊಂಡು ಕೈಕೊಟ್ಟು ಸ್ತ್ರಿಯನ್ನು ಇಳಿಸಿಕೊಳ್ಳುವ ಹಾಗೆ ಹೃದಯ ಗಟ್ಟಿ ಮಾಡಿಕೊಂಡು ಒಬ್ಬರ ಕೈ ಮತ್ತೊಬ್ಬ ಹಿಡಿದು ಆ ಅಪಾಯಕಾರಿ ದಾರಿ ದಾಟಿದರು. ಕೈಯಲ್ಲಿ ಭಾಲೆ, ಬರ್ಚಿ, ಲಾಠಿಗಳನ್ನು ತೆಗೆದುಕೊಂಡು ಕಾಲ್ನಡಿಗೆಯಲ್ಲಿ ಹೊರಟರು, ಗುಂಡು ಹಾರಿದರೂ ಸಹ ಎದೆ ಉಬ್ಬಿಸಿ ನಡೆದರು, ಬಿಲ್ಲುಗಾರರು ತಮ್ಮ ಬಿಲ್ಲುಗಳನ್ನು ಜಾಗ್ರತವಾಗಿ ತೆಗೆದು ಕೊಂಡು ನಡೆದರು. ಪಿರಂಗಿಯ ಸಿಡಿಮದ್ದಿನ ಗುಂಡು ಎತ್ತಲಾರದೇ ಎತ್ತಿಕೊಂಡು ನಡೆದರು,

ಸಿಡಿಮದ್ದಿನ ಉಗ್ರಾಣ ಕೋಟೆ ಮುಂದೆ ಇಟ್ಟು ನೌಕರರು ಹಾಗೂ ಶೂರರು ಅದರ ಓರೆಗೆ ಹೋದರು. ಹಗಲು ರಾತ್ರಿ ಆಕ್ರಮಣ ನಡೆಯುತ್ತಲೇ ಇತ್ತು, ಕಷ್ಟಕರ ಸಮಯ, ಕಷ್ಟಕರ ಜಾಗದಲ್ಲಿ ಈ ಸಮರ ನಡೆಯುತ್ತಿದೆ, ಶಿವಾಜಿ ತನ್ನ ಗುಪ್ತಚರರಿಗೆ ಕರೆಸಿ, ಆ ಹೆಸರಾಂತ ಶೂರನಿಗೆ ಹೇಳಿ, ಹಿಂಬಾಲಿಸಿಕೊಂಡು ಬಂದಿರುವ ಜಾಗ ಎಂತಹದೆಂದರೆ, ಅದು ಗುಹೆ, ಅಲ್ಲಿ ಸಾವು ತನ್ನ ಠಿಕಾಣೆ ಹೂಡಿ ಅದನ್ನು ತನ್ನ ದೇಶ ಮಾಡಿಕೊಂಡಿದೆ. ಅದು ಆಳವಾದ ಸಮುದ್ರವಾಗಿದ್ದರೆ ಇದು ಭೂಮಿಯ ಅಗಾಧ. ಇದರಲ್ಲೇನಾದರು ಬಿದ್ದರೇ ಖಂಡಿತವಾಗಿಯೂ ಹೊರಬರಲು ಸಾಧ್ಯವಿಲ್ಲ. ಆದಾಗ್ಯೂ ಯುಗದಲ್ಲಿ ಎಲ್ಲಕ್ಕಿಂತ ಕೆಟ್ಟ, ವಕ್ರ ಜಾಗ ಇದು. ಆದರೆ ಏನು ಮಾಡಲು ಸಾಧ್ಯ? ನನ್ನ ಜೀವನದ ಆಸೆ, ಮನೆಯ ಆಸರೆ ಇದು,ನನ್ನ ಸೈನ್ಯ ಈ ಕಾಡು,ಬೆಟ್ಟ ಹಾಗು ಮರಭೂಮಿ, ಎಲ್ಲಿಯವರೆಗೂ ನೆಲವಿದೆಯೋ ಅಲ್ಲಿಯವರಿಗೂ ನನಗೆ ಇದು ಕೋಟೆಯ ಕೆಲಸ ಮಾಡುತ್ತದೆ, ಈ ನದಿ ನಾಲೆ ಕಂದಕದ ಓರೆಯಾಗಿ, ಅದು ಕೋಟೆಯ ಸುತ್ತಲೂ ಜಾಲಿಗಳಂತೆ ನರಗಳಿಂದ ಕಟ್ಟಿವೆ, ನೌಕರರ ಸುರುಳಿ ಎಂದರೆ ಪ್ರತಿಯೊಂದು ಮುಳ್ಳಿನ ಪೊದೆಗಳು ಅವು ನಿತ್ಯವೂ ಸಹಸ್ರಾರು ಕಠಾರಿಗಳನ್ನು ಎಳೆದುಕೊಂಡಿರುತ್ತವೆ, ಇಲ್ಲಿರುವ ಪ್ರತಿಯೊಂದು ವೃಕ್ಷ ಅಚಲ ಸಿಪಾಯಿ, ಬರುವವರನ್ನು ಸೆರೆಹಿಡಿದು ಬಹಳ ಗಾಬರಿಗೊಳಿಸುತ್ತದೆ, ಪ್ರತಿಯೊಂದು ಶಂಖ ಅಲ್ಬರ್ಶಿನ ಬೆಟ್ಟ, ಅವು ರುಸ್ತುಮಿನ ಗದೆ ಎಂದು ಸಹ ತಿಳಿಯಬಹುದು. ಬಳ್ಳಿಯ ವೃಕ್ಷಹಗ್ಗ ಬೀಸಿದರೆ ಆ ಕುದುರೆ ಸವಾರನಿಗೂ ಸೆರೆಹಿಡಿಯುತ್ತದೆ. ಬೆಟ್ಟದ ಮೇಲೆ ಕುದುರೆ ಸಣ್ಣದಾಗಿ ಕಾಣಿಸುತ್ತದೆ, ಜಗವನ್ನು ಅಡಗಿಸಲು ಅದು ಚಿಕ್ಕದಾಗಿ ಕಾಣಿಸುತ್ತದೆ. ಇದು ಪ್ರಿಯೆಯ ಮನಮೋಹಕ ದೇಶವಲ್ಲ. ಇದು ಅನುರಾಗಿಗೂ ಸಹ ಬಿಡದೇ ರಕ್ತ ಸುರಿಸುತ್ತದೆ. ಇದರ ಉದಾಹರಣೆ ಬಹಳ ಕಡಿಮೆ ಸಿಗುವುದು. ಅದಾಗ್ಯೂ ಈ ಕತ್ತಲಲ್ಲಿ ಸಹಸ್ರಾರು ಅಮೃತಗಳಿವೆ, ಸಿಕಂದರ್ ಸಹ ಅಲ್ಲಿ ಹೋಗಿ ಕುಳಿತರೆ ಹೊರಬರಲು ಸಾಧ್ಯವಿಲ್ಲ. ನೀವು ಖಾನೆ ಖಾನಾನರ ಪುತ್ರರು. ಅಚಲ ಶೂರ ದಂಡನಾಯಕರು ಹಾಗೂ ಪ್ರಸಿದ್ಧ ಯುವಕರು, ನಿಮ್ಮ ಖಡ್ಗ ವಿಷಮಯ ಭಾರ ತಾಗಿದರೇ ರಕ್ತದಿಂದ ಬಣ್ಣ ತುಂಬಿದ ಶವಗಳಿಂದ ಚೀರಾಟ ಕೂಗು ಕೇಳಿಬರುವುದು. ನಿಮ್ಮ ಮಹನೀಯತೆಯ ಗೋಲದ ಬೆಂಕಿಯ ಜ್ವಾಲೆ ಸರಿಯಾಗಿ ನಿಮ್ಮ ತಲೆ ಮೇಲೆ ಬಂದು ಸೂರ್ಯನಿಗೂ ಸಹ ದುರವಸ್ಥೆ ಮಾಡುವುದು. ನೀವೇನಾದರೂ ಸಮುದ್ರದ ಕಡೆಯಿಂದ ಸೈನ್ಯ ತಂದರೆ ಅನೇಕ ಪಂಕ್ತಿಗಳಿಗೆ ಅಲೆ ಮುಳಿಗಿಸಿದೆ. ಆದರೆ ಇವೆಲ್ಲ ಎಲ್ಲಿ ಸಾಧ್ಯವೆಂದರೆ ಎಲ್ಲಿ ಶೂರನ ಅಧಿಕಾರ ನಡೆಯುತ್ತದೆ ಅಲ್ಲಿ ಮಾಡಲು ಸಾಧ್ಯ. ಎಲ್ಲಿಯವರಿಗೆ ಕೋನ್ಕಣಿನ ನೆಲವಿದೆಯೋ ಅದು ಜಾದುವಿನಿಂದ ಕೋಟೆ ಕಟ್ಟುತ್ತದೆ ಎಂದು ನನಗೆ ಭರವಸೆ ಇದೆ. ನನ್ನ ಸೈನ್ಯ ಯಕ್ಷಗಳಿಂತ ಕಡಿಮೆ ಏನು ಅಲ್ಲ, ನೀವು ನೂರಾರುಗಳನ್ನು ಕೊಂದರೂ ನನಗೆ ಖೇದವಿಲ್ಲ. ನಾನು ಅಣುವಿನಲ್ಲಿ ಮೊಲದ ದೃಷ್ಟಿ ಇಟ್ಟುಕೊಂಡು ಅಡಗಿದ್ದೇನೆ, ನಾನು ಬಹಳಷ್ಟು ಠಕ್ಕರನ್ನು ಮೋಸಗೊಳಿಸಿದ್ದೇನೆ,

ಸುರಕ್ಷೆಯ ಕಲೆ ಶೈತಾನನಿಗೆ ತಿಳಿದಿಲ್ಲ. ಅವರು ಏನು ಮಾಡಬಲ್ಲರೆಂದು ಗುರುತಿಸಿಲ್ಲ. ಪ್ರತಿಯೊಂದು? ಸಿಕಂದರಿನ ಭದ್ರವಾದ ಗೋಡೆ ಇರುವುದು. ಸಿಪಾಯಿಗಳು ಬಂದರೂ ಸಹ ಏನು ಮಾಡ ಬಲ್ಲರು ಸಪ್ತ ಭೂಖಂಡದ ಬಾದಶಾಹರು ಬಂದರೂ ಸಹ ನಮ್ಮನ್ನು ಹಿಡಿಯಲು ಸಾಧ್ಯವಿಲ್ಲ, ಅಯ್ಯೋ ಪಾಪ ನೀವು ಎಲ್ಲಿ ಬಂದಿರಿ, ನೀವು ಶೂರರೇನೋ ಹೌದು ಆದರೇ ಮೋಸ ಹೋದಿರಿ, ನಮ್ಮ ಬಳಿ ಒಂದು ಯಕ್ಷ ಈ ಜಾಗದಲ್ಲಿ ಬಂದರೆ ಮತ್ತೆ ಹಿಂದುರುಗಿ ಹೋಗಲು ಸಾಧ್ಯವಿಲ್ಲ.ಈ ರೀತಿಯಾಗಿ ನಾನು ಯಾರಿಗೂ ನಿಷ್ಠೆಯಿಂದ ಮಾತಾಡಲಿಲ್ಲ ಆದರೆ ನಿಮ್ಮಿಂದ ರಿಯಾಯತಿಯ ಮಾತನಾಡುತಿದ್ದೇನೆ ಏಕೆಂದರೆ ನೀವು ದಕ್ಷಿಣ ದೇಶದ ದೊಡ್ಡವರು, ನಿಮ್ಮ ದೊಡ್ಡಸ್ತಿಗೆ ಹಾಗೂ ಮಹನೀಯತೆಯನ್ನು ಮರ್ಯಾದಿಸಲೇಬೇಕು, ನಿಮ್ಮ ಸರಿಸಮಾನ ಯಾವ ದಂಡನಾಯಕನೂ ಇಲ್ಲ, ನೀವು ದಯಾಳು, ಸಿಪಾಯಿಯರನ್ನು ಪೋಷಿಸುವವರು ಹಾಗೂ ವೀರರೂ ಹೌದು, ನಿಮ್ಮ ಸಹಜ ಪ್ರವೃತ್ತಿ ಬಾದಶಾಹರಿಗೆ ಮೆಚ್ಚುಗೆ ಪಡಿಸುತ್ತದೆ. ನಾನು ಕೇಳಿರುವ ಹಾಗೆ ನೀವು ಅಪ್ಪಟ ವಿಶ್ವಾಸಿಯರೂ ಹೌದು, ಆದ್ದರಿಂದ ಒಳ್ಳೆಯದೆಂದರೆ ನೀವು ನನ್ನ ಮೇಲೂ ಉತ್ತಮ ನಿಷ್ಠೆ ಇಡಿ. ತಾತ್ಪರ್ಯವೇನೆಂದರೆ ಸಾರ್ವಜನಿಕ ಕನಿಕರ ವಿಶೇಷವಾಗಿರಲಿ, ಇಲ್ಲಿಂದ ಸುರಕ್ಷಿತವಾಗಿ ಹೊರಟು ಹೋಗಿ, ಸುರಕ್ಷತೆಯ ಕೈಗಳಿಂದ ಅನಾಮತ್ತಾಗಿ ಹಿಂದಿರುಗಿ, ಬೇರೆ ವಸ್ತುಗಳನ್ನು ನೋಡಬೇಡಿ, ಮನಸ್ಸು ಹಗುರ ಮಾಡಿಕೊಳ್ಳಿ, ಒಂದೇ ಕ್ಷಣದಲ್ಲಿ ನಾನು ಗೊಂದಲ ಎಬ್ಬಿಸಬಲ್ಲೆ. ಈ ಅಶಾಂತ ಮಾತುಗಳೆಲ್ಲ ಗೂಢಾಚಾರಿ ಖಾನನಿಗೆ ತಿಳಿಸಿದ, ಖಾನನು ಈ ಮಾತುಗಳೆಲ್ಲ ಕೇಳಿ ಕೋಪಗೊಂಡು ಗಾಳಿಯಿಂದ ಬೆಂಕಿ ಹೇಗೆ ಬಿಸಿ ಏರುತ್ತದೆಯೋ ಹಾಗೆ ಬಿಸಿಯಾಗಿ ಹೇಳಿದ. ನೀನು ಚತುರನಾಗಿದ್ದರೆ ನಿನ್ನ ಮೇಲೆ ಕಳ್ಳ ಆವರಿಸುವಂತಾಗುವನು, ದೇವರು ಕೆಲವರಿಗೆ ಮಾತ್ರ ಜಯ ಕೊಡುತ್ತಾನೆ. ಸಹಸ್ರಾರು ನಕ್ಷತ್ರಗಳಿಗೆ ಒಂದೇ ಸೂರ್ಯ ಸಾಕು. ಆಕಾಶದಲ್ಲಿ ಸಹಸ್ರಾರು ಮೋಡಗಳಿದ್ದರೆ ಏನಾಯಿತು. ಮಿಂಚಿನ ಗುಡುಗು ಒಬ್ಬನೇ ಅವೆಲ್ಲವನ್ನು ಎಲ್ಲಿ ಬೇಕು ಅಲ್ಲಿ ತಿರುಗಿಸುತ್ತಾನೆ. ಒಬ್ಬ ನ್ಯಾಯವಂತ ಬಾದಶಾಹನ ಮಂತ್ರಿಯಾಗಿರುವೆ, ಶಾಹನಿಲ್ಲದೇ ನಾನು ಯಾವ ದಾವೆ ಮಾಡುವುದಿಲ್ಲ, ನಾನೊಬ್ಬನಿದ್ದೇನೆ ಆದರೆ ಶತ್ರು ಸಂಖ್ಯೆ ಐದು ಲಕ್ಷವಿದೆ. ಶತ್ರು ಹುಲಿಯ ಮುಂದೆ ಬಂದು ಹೇಗೆ ನೋಡಲು ಸಾಧ್ಯ. ಅನೇಕರಿಂದ ಸಮರಾಡಿ ಹೆಸರು ಗಳಿಸಿರಬೇಕು, ಆದರೆ ನನ್ನಂತಹವನಿಂದ ಪಂದ್ಯ ಬಿದ್ದಿಲ್ಲ. ನನ್ನ ಖಡ್ಗದ ನಾಲಿಗೆಯನ್ನು ನೋಡಿದರೆ ಹುಲಿಯ ದೃಷ್ಟಿ ಸ್ಥಿರವಾಗಿರಲು ಸಾಧ್ಯವಿಲ್ಲ. ಸಮರದ ಮೈದಾನದಲ್ಲಿ ಸೈನ್ಯಗಳ ಪಂಕ್ತಿಯ ತಮಾಶೆ ನನಗೆ ಪೋಲೋ ಆಟದ ಚೆಂಡು ಇದ್ದಹಾಗೆ, ಅದಾಗ್ಯೂ ಆ ಕೋಟೆ ಹಾಗೂ ಗಡ ಎಷ್ಟೇ ಬಲಿಷ್ಟವಾಗಿದ್ದರೂ ಸಹ ಅದು ನನ್ನ ನಡಿಗೆಯ ಮುಂದೆ ಚೆಂಡಿದ್ದ ಹಾಗೆ, ಕಠಿಣಕರ ಸ್ಥಳಗಳೇ ನನ್ನ ಬೇಟೆಯಾಡುವ ಸ್ಥಳ ನನ್ನನ್ನು ಸೆರೆಹಿಡಿದು ನೇರ ದಾರಿಯಿಂದ ತೆಗೆದುಕೊಂಡು ಹೋಗುವೆ, ಖಂಡಿತವಾಗಿ ತಿಳಿದುಕೋ ನನಗಂತೂ ಬಹಳ ದೊಡ್ಡ ಮೈದಾನವಿದೆ. ಈಗ ಓಡಲು ನೀನು ಉದ್ದನೆಯ

ಭೂಮಿ ಹುಡುಕಿಕೊ. ನನ್ನ ಸರಿಸಮನಾದ ಸರ್ದಾರನಿಲ್ಲ ನನ್ನ ಮನಸ್ಸೇ ಲಕ್ಷಾಂತರ ಸೈನ್ಯದ ಮೇಲೆ ಭಾರವಾಗಿದೆ. ಈ ಬನ್ನಿಮರವನ್ನು ಘೋರ ರಕ್ತದಿಂದ ತುಂಬುವೆ, ಅದನ್ನು ಕತ್ತರಿಸಿ ಕಾವಿ ಬಣ್ಣ ತುಂಬುವೆ. ಜಗಳ ಮಾಡದೇ ಇದ್ದರೆ ನಿಜವಾಗಲೂ ಮಜೂರಿಯಲ್ಲಿ ಚರ್ಮ ತೆಗೆದುಕೊಳ್ಳುವೆ, ದೂರದಿಂದ ನೋಡಿದರೆ ಭಿಕ್ಷೆ ಪಾತ್ರೆ ಹಿಡಿಸುವೆ ನನ್ನ ಮನಸ್ಸು ಸೈನ್ಯದ ಮೇಲೆ ಹೇಗೆ ನಡೆಯುತ್ತದೆ ಈ ನನ್ನ ಕೈ ಹೇಗೆ ದಿಗಿಲೆಬ್ಬಿಸುತ್ತದೆ. ನೀನು ಈ ದೇಶದ ಶೂರವೀರ ದಂಡನಾಯಕನಿಗೆ ನೋಡಿದ್ದಿಯಾ ಅವನ ವೀರಶರೀರದಲ್ಲಿ ಎಷ್ಟೊಂದು ಶಕ್ತಿ ಇದೆ ಎಂದು ತಿಳಿದುಕೊ. ಖಂಡಿತವಾಗಿ ನನ್ನ ಮುಂದೆ ಬಡಾಯಿ ಕೊಚ್ಚುವುದನ್ನು ಮರೆಯುವೆ ಹೀಗೆ ಬಡಾಯಿಕೊಚ್ಚುತ್ತಿದ್ದರೇ ಅದಕ್ಕೆ ಮಿತಿಯೇ ಇರುವುದಿಲ್ಲ ನಾನು ಹೇಳುವುದು ಇಷ್ಟೇ ನಾನು ಸಮರಕ್ಕೆ ಆಹ್ವಾನಿಸುತ್ತಿದ್ದೇನೆ ಎಲ್ಲೂ ನಿಲ್ಲದೇ ಬೇಗನೇ ಬಾ ನನ್ನ ಕೈ ಖಡ್ಗದಲ್ಲಿ ತುಂಬುತ್ತಿಲ್ಲ, ನಾನು ಮಾತುಗಳಲ್ಲಿ ಕುದಿಯುವುವನಲ್ಲ ಮಾತಿನ ಕುದುರೆ ಓಡಿಸುವುದಿಲ್ಲ'. ಖಾನನು ಗೂಢಚಾರಿಗೆ ಈ ಉತ್ತರ ಕೊಟ್ಟು ಬೇಗನೇ ಹೋಗಿ ಬೇಗನೇ ಹಿಂದಕ್ಕೆ ಓಡಿಬಾ ಎಂದು ಹೇಳಿದ. ಗೂಢಚಾರಿ ಬಂದು ನೀರಿನ ತೊಟ್ಟಿ ಮುರಿದು ನೀರು ಕೆಳಗೆ ಬಂದ ಹಾಗಿದೆ ಎಂದು ಹೇಳಿದ. ಅದೇ ರಾತ್ರಿ ಆಕ್ರಮಿಸಿದ, ತನ್ನ ಇಡೀ ಸೈನ್ಯದೊಂದಿಗೆ ಘಟ್ಟದ ಕಡೆ ಓಡಿದ, ನೋಡು ನೋಡುತ್ತಲೇ ಸೈನ್ಯವನ್ನು ಲೂಟಿ ಹೊಡೆಯಲಾರಂಭಿಸಿದ, ಸೈನ್ಯದ ಸುತ್ತ ಕಷ್ಟದ ಕೋಟೆ ನಿರ್ಮಾಣವಾಗಿ ಚಂದ್ರನ ಸುತ್ತ ಮುತ್ತ ಕರಿ ಗ್ರಹಣ ಹಿಡಿದ ಹಾಗೆ ಕಾಣತೊಡಗಿತು. ನೌಕರರೆಲ್ಲರೂ ಹೃದಯದಲ್ಲಿ ಹೋಗಿ ಹೇಗೆ ಸೇರಿದರೆಂದರೆ ಮಿನುಗು ಹುಳುಗಳು ಕರಾಳ ರಾತ್ರಿಯಲ್ಲಿ ಮಿನುಗುವ ಹಾಗೆ ಸೇರಿದವು, ದಂಡಿನ ಶಸ್ತ್ರಧಾರಿಗಳು ಭಾಲೆಗಳಿಂದ ಕಬ್ಬಿನ ತೋಟದಂತೆ ಕತ್ತರಿಸಿ ಹೋದರು. ಬೀಜದ ಮೈಯಲ್ಲಿ ಕಷ್ಟಪಟ್ಟು ಉದ್ಯಾನ ಇದ್ದಹಾಗಾಯಿತು. ಶತ್ರುವಿನ ಬಲ ಪ್ರಭಾವ ಹೆಚ್ಚಿದನ್ನು ನೋಡಿ ಖಾನನು ದೇವರಲ್ಲಿ ಮಹಾ ವಿಜಯ ಸಾಧಿಸುವಂತೆ ಬೇಡಿಕೊಂಡನು. ತನ್ನ ದಂಡಿನ ರಣಧೀರರನ್ನು ಕರೆದ, ಇವರೆಲ್ಲ ಶೌರ್ಯದಲ್ಲಿ ಹುಲಿಗಳಂತೆ, ಒಬ್ಬ ವೀರ ಸಹಸ್ರಾರರ ಮೇಲೆ ಭಾರವಾಗಿದ್ದವ ಇವರೆಲ್ಲರೂ ಬಂದು ನಿಂತರೆ ಸೂರ್ಯನ ಮುಂದೆ ನಕ್ಷತ್ರಗಳು ಪ್ರದಕ್ಷಿಣೆ ಹಾಕುವಂತೆ ಕಾಣುತ್ತಿದ್ದರು. ಅವರನ್ನುದ್ದೇಶಿಸಿ 'ನೋಡಿ ಶತ್ರು ನಿರ್ಭಯನಾಗಿ ನಮ್ಮನ್ನು ಹಿಡಿದಿರುವನು, ನಮ್ಮ ವೃಕ್ಷವನ್ನು ಮುತ್ತಿಗೆ ಹಾಕಿರುವನು, ಒಂದು ಹೆಜ್ಜೆ ಮುಂದೆ ಹೋಗಿ ಮೈದಾನದಲ್ಲಿ ಸಮರವಾಡಲು ಜಾಗವಿಲ್ಲ. ಆದ್ದರಿಂದ ನನಗೆ ತಿಳಿದ ಮಟ್ಟಿಗೆ ಬುಟ್ಟಿ ಇಳಿಸಿ ಈಗ ಯುದ್ಧ ಮಾಡದೇ ಇರಲು ಸಾಧ್ಯವಿಲ್ಲ, ಶಸ್ತ್ರಧಾರಿಯರೆಲ್ಲರನ್ನು ತೆಗೆದುಕೊಂಡು ನಾನು ದಂಡಿನ ಮಧ್ಯದಲ್ಲಿ ಮೊಕ್ಕಾಂ ಹೂಡಿದ್ದೇನೆ. ಅಲ್ಲಿಂದಲೇ ನಾನು ಶತ್ರುವಿನ ಮೇಲೆ ಆಕ್ರಮಿಸುವೆ ಎಂದು ಹೇಳಿ ಎದ್ದನು. ಮತ್ತೊಂದು ಮಾತೆಂದರೆ ಮೋಸದ ಕಲೆಯಲ್ಲಿ ಅವನು ನಿಪುಣ, ಅದೇ ಮಾತಿನ ಮೇಲೆ ಅವನಿಗೆ ಗರ್ವ ಇದೆ, ಮೋಸದ ಶಸ್ತ್ರದಿಂದ ಆಟ ಗೆದ್ದುಕೊಂಡು ಬಂದಿದ್ದಾನೆ ಅವನಿಗೆ ಯಾರು ಶತ್ರು

ಸಿಕ್ಕಿಲ್ಲ ನಾನು ಎರಡನೆ ಶಾಯಿಸ್ತ ಖಾನ್ ಅಲ್ಲ, ನನ್ನ ಮುಂದೆ ಅವನು ಈ ಮೋಸದ ಆಟ ಆಡಲು ಸಾಧ್ಯವಿಲ್ಲ, ಗುಳ್ಳೆ ನರಿಯ ಮೋಸದಲ್ಲಿ ಸಿಕ್ಕಿಬಿಡಬಹುದು ಆದರೇ ಹುಲಿಯ ಹಸ್ತದ ಮುಂದೆ ಬಂದು ನಡೆಯಲು ಸಾಧ್ಯವಿಲ್ಲ. ಇಡೀ ಜನ್ಮದಲ್ಲಿ ಅವನೇನು ಮಾಡಿರುವನೋ ಅದರ ಸೇಡನ್ನು ತೀರಿಸಿಕೊಳ್ಳುತ್ತೇನೆ. ನೀವು ನಿಮ್ಮ ನಿಮ್ಮ ಜಾಗದಲ್ಲಿ ಜಾಗೃತರಾಗಿರಿ. ಸಾಧ್ಯವಾದರೆ ಅವಕಾಶ ಸಿಕ್ಕಿದಾಗ ಶಕ್ತಿ ಪ್ರಯೋಗ ಮಾಡಿ ಸ್ವಾಧೀನ ಪಡೆಸಿಕೊಳ್ಳಿ. ಶತ್ರುವಿನ ಸಂಖ್ಯೆಯನ್ನು ನೋಡಲು ಹೋಗ ಬೇಡಿ. ಸಾವಿರಾರಂತೂ ಇದ್ದಾರೆ ನೀವು ಒಬ್ಬನನ್ನು ನೋಡಿ, ಆದಾಗ್ಯೂ ಈ ಒಂದು ದೇಹಕ್ಕೆ ವಶಪಡಿಸಿಕೊಳ್ಳಿ, ಪ್ರಪಂಚದ ಆಸೆ ಪ್ರಾಣ ಇರುವವರಿಗೂ ಇದ್ದೇ ಇರುತ್ತದೆ. ಈ ಮಾತನ್ನು ಕೇಳಿ ಖಾನ್‌ರವರೇ ನೋಡಿ ನಾವು ಹೇಗೆ ಕೈ ಆಡಿಸುವೆವು ಎಂದು ಹೇಳಿ ಅನೇಕರು ಅವನ ಕೈ ಚುಂಬಿಸಿದರು. ಮಗನ ಹುಮ್ಮಸ್ಸು ತಂದೆಯಲ್ಲಿ ಬಂದು ತುಂಬಿತು. ಎಲ್ಲ ದಂಡನಾಯಕರು ತಮ್ಮ ದಂಡುಗಳನ್ನು ತೆಗೆದು ಕೊಂಡು ಹಿಂದೆ ಮುಂದೆ ಎಡ ಬಲ ಎಲ್ಲ ಕಡೆ ಹೊರಟರು, ಯಾರ ಸನ್ಮುಖದಲ್ಲಿ ಶತ್ರು ಬರುವನೋ ಅವನು ಅಲ್ಲೇ ಅವನನ್ನು ಕೊಂದು ಹಾಕಿ ಎಂದರು. ನಾನು ನಿಮ್ಮೆಲ್ಲರ ಕುಮ್ಮಕ್ಕು ಮಾಡುವೆ, ಎಲ್ಲಿ ಕೆಟ್ಟ ಪರಿಸ್ಥಿತಿ ಉಂಟಾಗುತ್ತದೆಯೋ ಅಲ್ಲಿ ನಾನು ಆಕ್ರಮಿಸುವೆ. ಶತ್ರವಿನ ದಂಡಿನವರಿಗೆ ಮೋಡಗಳಿಂದ ವೇಗವಾಗಿ ಗುಂಡುಗಳನ್ನು ಸುರಿಯಲಾರಂಭಿಸಿದವು. ನೆಲದಿಂದ ಬಿರುಗಾಳಿಯಂತೆ ಧೂಳು ಎದ್ದಿದ್ದರಿಂದ ಪ್ರತಿಯೊಬ್ಬ ವೀರ ಸೈನ್ಯವನ್ನು ತಿರುಗಿಸಿದ, ಪ್ರತಿಯೊಬ್ಬ ಶೂರನೂ ತೋಳದ ಆಟ ಆಡಿದ. ಶೈತಾನುಗಳ ದಂಡಿನ ಮೇಲೆ ಒಬ್ಬೊಬ್ಬ ವೀರನೂ ಬೆಂಕಿಯ ದೊಡ್ಡ ಜ್ವಾಲೆಯಾಗಿ ಬಿದ್ದ. ಜಿಂಕೆಗಳ ಮಧ್ಯೆ ನಾಯಿ ನುಗ್ಗಿ ಹೇಗೆ ಅಕ್ರಮವೆಸಗುತ್ತದೆಯೋ ಹಾಗೆ ನುಸುಳಿ ಒಳಗೆ ಕೂತು ಹಠಾತ್ತನೆ ಧಾಳಿ ಮಾಡಿದರು. ಬಿರುಗಾಳಿಯಂತೆ ಇನ್ನೂ ಅಧಿಕವಾಗಿ ಅತ್ಯುತ್ಸಾಹದಿಂದ ಗುಲ್ಲೆಬ್ಬಿಸಿ ಕಠೋರ ದಂಗೆಯ ಪ್ರಾಬಲ್ಯವನ್ನು ತುಳಿದು ಹಾಕಿದರು. ದೊಡ್ಡ ಪಾತ್ರೆಗಳಲ್ಲಿ ಎಣ್ಣೆ ಕುದಿಸಿ ಶತ್ರುಗಳ ಮೇಲೆ ನಿಸ್ಸಂಕೋಚವಾಗಿ ಎಸೆದಾಗ ಅದರ ಘರ್ಜನೆ ಮೋಡಗಳಿಂದ ಮಿಂಚುಗುಡುಗು ಸಿಡಿಲುಹೊಡೆದಂತಿರುತ್ತದೆ. ದಂಡಿನ ಮುಂದೆ ಇಣಿಕಿ ನೋಡಿ ವೀರರು ಹೊರಬಂದು ಮಿಂಚುಗಳಂತೆ ನಿರ್ಮಲವಾಗಿ ಹೊಳೆದರು. ತೆರೆದ ಯುದ್ಧಕ್ಕಾಗಿ ಸಾಲುಗಳಿಂದ ಹೊರಗೆ ಬಂದು ಆಕ್ರಮಿಸಿ ಅನೇಕರನ್ನು ಕೊಂದು ಗಾಳಿಯಲ್ಲಿ ಬೀಸಾಡಿದರು. ರಗನ್ ಬದಲು ಮನದಿಂದ ಬಾಣ ಕೊಳವೆ (ಇದರಲ್ಲಿ ಸಿಡಿಮದ್ದನ್ನು ಸಿಡಿಸಿ ಬಾಣ ಯಾ ಕಲ್ಲುಗಳನ್ನು ಎಸೆಯುತ್ತಾರೆ)ಗಳಿಂದ ಮಳೆಯಂತೆ ಕಲ್ಲುಗಳೊಡನೆ ಸುರಿಯಲಾರಂಭಿಸಿತು. ಸ್ವಯಂ ಸ್ಥಿರದಿಂದ ಎದ್ದು ನಿರ್ಜನ ಪ್ರದೇಶಗಳಿಂದ ಸೈನ್ಯ ಜೋಡಿಸಿ ಅವರನ್ನು ಸೋಲಿಸಿದರು ಅನೇಕರು ಓಡಿ ಹೋಗುವವರಿಗೆ ನೋಡಿ ತಡೆದು ಸೈನ್ಯ ತೆಗೆದುಕೊಂಡು ಹೋಗಿ ಅವರನ್ನು ಮತ್ತೆ ಆಕ್ರಮಿಸಿದರು. ಎರಡು ಕಡೆಯಿಂದ ಘೋರ ಯುದ್ಧ ನಡೆಯಿತು. ಖಡ್ಗದ ಬೆಂಕಿಯು ಸಹ ಚೆನ್ನಾಗಿ

ಉರಿಯಿತು, ಒಂದರಿಂದ ಒಂದು ನಾಲಿಗೆಗಳು ಕಚ್ಚಾಡಿದವು. ರಕ್ತ ಹೆಪ್ಪುಕಟ್ಟಿ ಕಿಣಿಗಳು ಬೀಳಲಾರಂಭಿಸಿದವು. ರಣದಲ್ಲಿ ಒಳ್ಳೆ ಬಣ್ಣದ ರಕ್ತ ಹರಿಯಲಾರಂಭಿಸಿ ನೆಲದ ಮೇಲೆ ಬೆಂಕಿ ಉರಿಯುವ ಬಣ್ಣ ಬೀಳಲಾರಂಭಿಸಿತು, ರಕ್ತದ ಪ್ರತಿಯೊಂದು ಅಲೆ ತುಂಬಿ ತುಳುಕಾಡುತ ಭೂಮಿಯ ಬೈತಲೆಯಲ್ಲಿ ಸಿಂಧೂರನ್ನು ತುಂಬಲು ಹೋದಂತೆ ಹೊರಟಿತು. ಭೂಮಿಯ ಮುಖ ಕೆಂಬಣ್ಣಕ್ಕೆ ತಿರುಗಿತು. ಎಷ್ಟೊಂದು ದವಸ ಧಾನ್ಯಗಳಿದ್ದವೋ ಎಲ್ಲವೂ ಕೆಂಪಾಯಿತು. ಬೆಟ್ಟ ಪರ್ವತಗಳೆಲ್ಲವೂ ಒಳ್ಳೆ ಬಣ್ಣಕ್ಕೆ ತಿರುಗಿದವು. ಅವು ಆನೆಗಳ ಮೇಲೆ ಮಕ್ಮಲಿನ ಜೋಲಿ ಹಾಕಿದಂತೆ ಕಾಣುತ್ತಿದ್ದವು. ಮಂತ್ರಿ ಶಹಿನ್ಷಾಹ ಎತ್ತರ ಕತ್ತುಳ್ಳವ, ಅವನು ದೀರ್ಘಕಾಲದ ಪಗಡೆ ಆಟಗಾರ. ಅವನು ತನ್ನ ಆಟದ ನಿರ್ಮಾಣದ ಮೇಲೆ ಕಣ್ಣಿಟ್ಟು ಹೊಸ ಚಿಂತನೆ ನಡೆಸುತ್ತಿದ್ದ. ಪ್ರತಿಯೊಂದು ಗುಂಪಿನೊಂದಿಗೆ ಮಂತ್ರಿ ಜೋಡಿಸಿದ, ಆನೆ ಮೇಲೆ ಒಂಟೆ ಕೇಶನಿಂದ ಪೀಠ ಕಟ್ಟಿ, ಅಲ್ಲಲ್ಲಿ ನಡಿಗೆಯರನ್ನು ಕಟ್ಟಿಟ್ಟು ಅದಕ್ಕೆ ಸಾಕಷ್ಟು ಬಲ ಪಡಿಸಿದ. ಈಗ ಆಟ ಆಗುವಂತೆ ಕಾಣತೊಡಗಿತು. ಆದ್ದರಿಂದ ಆನೆಗಳ ಬಲ ಪ್ರಯೋಗಿಸಿದ. ಈಗ ಆಟವನ್ನು ಹೇಗೆ ಕಟ್ಟಿಟ್ಟನೆಂದರೆ ಯಾರು ನೋಡಿದರೂ ಹೇಳುತಿದ್ದರು, ಈಗ ಶಾಹನು ಸೋಲುವನು, ಶತ್ರು ತನ್ನ ಆಟದ ಈ ಗತಿ ನೋಡಿ ಆನೆಗೂ ಇರುವೆಯಷ್ಟು ನಡಿಗೆಗೂ ಜಾಗವಿಲ್ಲದಂತಾಗಿದೆ. ಪ್ರತಿಯೊಂದು ಪಗಡೆಯ ದಾಳ ಖಾಲಿ ಕಂಡಂತಿದೆ. ಕುದುರೆ ಒಂಟೆಗಿಂತ ನೀಚವಾಗಿ ಕಾಣಿಸಿತು, ಆಕಸ್ಮಿಕವಾಗಿ ಒಂದು ಪೇದೆಗೆ ಜೋಡಿಸಿ ದೊಡ್ಡ ಮೋಸದಿಂದ ಸಿಂಹಾಸನ ದಾಟಿಬಂದ. ನೋಡುತ್ತಲೇ ಆಟ ಇಳಿಯುವಂತೆ ಕಾಣುತ್ತಿತ್ತು. ಅವರಲ್ಲಿ ಹೆಸರಾಂತ ಪಗಡೆಯದಾಳಗಳ ಮೇಲೆ ವಿಪತ್ತು ಬಂತು. ಒಂದು ಗಳಿಗೆ ಇರುವ ಹಾಗೆ ಸುಮ್ಮನೆ ಮೌನ ತಾಳಿ, ಪೇದೆ ಮಂತ್ರಿಯಾದಂತೆ ಕಾಣತೊಡಗಿತು. ವಿಶೇಷವಾಗಿ ಒಬ್ಬ ಸೈಯ್ಯದ್ ಎಂಬ ಹೆಸರಿನವನಿದ್ದ. ಅವನು ತನ್ನ ಸೈನ್ಯದೊಂದಿಗೆ ಒಂದು ಕಡೆ ಇದ್ದ. ಅವನ ಪೂರ್ಣ ಹೆಸರು ಶಾಹ್ ಹಝ್ರುತ್ ಅವರ ಹೆಜ್ಜೆ ಹಾಗೂ ಹೃದಯ ಒಂದೇ ಸ್ಥಾನದಲ್ಲಿತ್ತು. ಅವರು ಸೋಲುವ ಆಟವನ್ನು ಆಸರೆ ಕೊಟ್ಟು ಹೇಗೆ ತಡೆದಿದ್ದರೆಂದರೆ ಆಟದ ಬಂದಿಯಲ್ಲಿ ಮಂತ್ರಿಯನ್ನು ಸೆರೆ ಹಿಡಿಯಲಾಗುತ್ತದೆ. ಕುದುರೆಯ ಸೆರೆಯನ್ನು ಎದುರಿನಿಂದ ಬಿಚ್ಚಿದಾಗ ಕುದುರೆ ಹಾಗೂ ಮಂತ್ರಿಗೆ ಶಕ್ತಿ ಬಂತು. ಖಾನನು ಇದನ್ನು ನೋಡಿ ಮತ್ತೊಂದು ಯೋಜನೆ ತಯಾರಿಸಿದ. ಪಶ್ಚಿಮದ ಶತ್ರುವಿನಿಂದ ದೊಡ್ಡ ಜಿದ್ದು ಬಿದ್ದಿದೆ. ಆಕ್ರಮಣ ಕಠಿಣವಾಗಿದೆ. ಮೊದಲು ಈ ತಡೆಯನ್ನು ಮುರಿಯಬೇಕು, ದೊಡ್ಡ ಸವಾರ ಕರೆಸಿ ಒಂದೆರಡು ಸುತ್ತು ಕೊಡಬೇಕು. ಅವರಲ್ಲಿ ಒಬ್ಬ ಪರಾಕ್ರಮಿ ಅಬಿಸಿನಿಯ ನಿವಾಸಿ ಅವನ ಹೆಸರು ಸರ್ವರ್, ಪ್ರೀತಿ ವಿಶ್ವಾಸದಲ್ಲಿ ಸುಪ್ರಸಿದ್ಧನಾಗಿದ್ದ. ಅವನು ಕೈ ಮತ್ತು ಹೃದಯದಿಂದ ಆ ಕಾಲದಲ್ಲಿ ಅದ್ವಿತೀಯನಾಗಿದ್ದ. ಅವನ ಸಿಪಾಯಿತ್ವ ಅನೇಕ ಬಾದಶಾಹರು ಮೆಚ್ಚುತ್ತಿದ್ದರು. ಬಾದಶಾಹರ ಸಿಪಾಯಿಗಳಲ್ಲಿ ಅದ್ವತೀಯ ಸಿಪಾಯಿಯಾಗಿದ್ದ. ಅವನ ಗುಂಪು ಜಯಶೀಲವಾಗುತ್ತಿತ್ತು. ಅವನ ಅಧಿಕಾರದಲ್ಲಿ ಅನೇಕ ಜೀವಗಳ ಭಾರಗಳಿದ್ದವು.

ತನ್ನ ಸೈನ್ಯದ ತುಕಡಿಯಲ್ಲಿ ಅವನು ಎಲ್ಲರಿಂದ ಮುಂದಿರುವವನು ಅವನ ಶಸ್ತ್ರಸೇನೆ ಅಮಲೇರಿದ ಆನೆ. ಸಮರ ಸಭೆ ಬೆಳಗಿರುವುದನ್ನು ನೋಡಿ ಖಡ್ಗಗಳ ಬೆಳಕಿನ ಮೇಲೆ ಹಾತೆಯಂತೆ ಇದ್ದವು. ಎದುರಾಳಿಯ ಬಾಯಿಯ ಮುಂದೆ ನಾಲ್ಕು ಸೇನೆಗಳಿದ್ದವು. ಈ ಹೆಸರಾಂತನಿಗೆ ಆ ನಾಲರಿಗೆ ಸಹಾಯ ಮಾಡಬೇಕಾಗಿತ್ತು. ಶತ್ರು ಬಹಳ ಉಗ್ರತೆಯಿಂದ ಅವರ ಜೀವಗಳನ್ನು ಬೀಸಬೇಕೆಂದಿದ್ದ. ಅವರನ್ನು ಹೊಡೆದಟ್ಟಿ ಹಿಂದೆ ಜರುಗಿಸಿ ಅವರನ್ನು ಚೆನ್ನಾಗಿ ಬಾಗಿಸಿದ. ಪ್ರತಿಯೊಂದು ಸೇನೆಯ ಎಡಬಲಗಳು ಶಕ್ತಿಶಾಲಿಯಾಗಿದ್ದವು ಆದರೂ ಸಹ ಶತ್ರುವಿನ ಮೇಲೆ ಒಂದು ಹೊಸ ಕಷ್ಟ ಏರಿಸುತ್ತಿದ್ದರು. ನೋಡಲು ಅನೇಕ ಗೆಳೆಯರೆಲ್ಲ ಸೇರಿ ಒಬ್ಬನೇ ಕಾಣುವರು. ಪಂಕ್ತಿಗಳಲ್ಲಿ ಒಂದೊಂದು ದೇಹವೂ ನಿಸ್ಸಂದೇಹವಾಗಿ ಬೇರೆಯಾಗಿ ಕಾಣುವುದು. ಈ ಸೇನೆ ಯಾರ ಮೇಲೆ ಆಕ್ರಮಿಸುತ್ತ ಕೋಪಕಾರುತ್ತಿದ್ದಿತ್ತೋ ಪ್ರತಿಯೊಂದು ಕಣ್ಣಿನಿಂದ ಸಹಸ್ರಾರು ನಕ್ಷತ್ರಗಳು ಬೀಳುತ್ತಿದ್ದವು. ಸಿಪಾಯಿಗಳ ಮುಖಾಮುಖಿ ಸಮರದಲ್ಲಿ ಪ್ರತಿಯೊಂದು ರೋಮವೂ ಗಾಯಗೊಂಡಿತು. ಶಸ್ತ್ರಪಡೆಗಳ ಕಾರ್ಮೋಡ ರಕ್ತದ ಕೆಂಪುಮಳೆ ಸುರಿಸಲು ಆರಂಭಿಸಿತು, ಆಶಂಕೆಯಿಂದ ಹೆಚ್ಚಾಗಿ, ಸಹಿಸಲಾರದಷ್ಟು ಕೆಲಸ ಬಂದು ತನ್ನನ್ನೆ ಪರಿಶೋಧನೆ ಮಾಡುವಂತಹ ಕೆಲಸ ಕೊಟ್ಟಿತು. ಈ ಕಷ್ಟಕರ ಆಟ ತಳತಳಕವಾಗುತ್ತಿದೆ ಎಂದು ನೋಡಿದಾಗ ಇದೇ ಸಮಯದಲ್ಲಿ ಏಳಬೇಕಾಗಿದೆ. ಆಟಗಾರರು ಆಟ ಜೀವಂತ ಇಡಬೇಕೆಂದು ಅಲ್ಲೇ ತಪ್ಪಿಸಿಕೊಂಡು ಪೇದೆ ಪಡೆಗಳ ತಡೆಗಳಲ್ಲಿ ಕುದುರೆ ನೀರನ್ನು ನುಗ್ಗಿಸಿದರು. ಅದರ ಒಡನಾಡಿ ಶೂರ ಬಲು ಪಂಚಪ್ರಾಣ ಗೆಳೆಯ ಹಾಗೂ ಹಿತಚಿಂತಕ, ಪ್ರಪಂಚ ಅವರನ್ನು ಶೇಖ಼ ಮೀರಾನ್ ಎನ್ನುತ್ತಿತ್ತು. ಹೆಸರಾಂತ ಸಿರಿವಂತ ಎಂದು ತಿಳಿದಿದ್ದರು, ಪರಾಕ್ರಮದಲ್ಲಿ ಗಾಳಿಗಿಂತ ವೇಗವಾಗಿದ್ದವ ಸೈನ್ಯದ ಬದಲು ಒಬ್ಬನೇ ತಡೆಯಾಗಿದ್ದ, ಒಂದೇ ಮಾತಲ್ಲಿ ಕೆಲಸ ಮಾಡುವವನು, ಜೀವವನ್ನು ನಾಚಿಕೆ ಕೈಯಲ್ಲಿ ಇಡುವವನು, ಯುದ್ಧ ಮಾಡುತ್ತ ಅವನಿಗೆ ನಾನು ತಡ ಮಾಡುತಿದ್ದೇನೆಂದು ತಿಳಿದು ನಡಿ ಆನೆ ಜೊತೆಯಲಿ ಯುದ್ಧ ಮಾಡೋಣವೆಂದು ತನ್ನ ಕುದುರೆಯನ್ನು ತೆಗೆದುಕೊಂಡು, 'ಪ್ರಪಂಚ ಜೀವಂತ ಇರುವವರ ಜೊತೆಯಲ್ಲಿರುತ್ತದೆ ಸಾಯುವವರ ಜೊತೆಗೂಡಿ ಸಾಯುವುದೇ ನನ್ನ ಕೆಲಸ' ಎಂದು ಹೇಳಿ ಧಾವಿಸಿದ. ಅವನ ಸುತ್ತಲಿದ್ದ ಪೇದೆಗಳೆಲ್ಲ ಸೇರಿಕೊಂಡರು. ತನ್ನ ಖಡ್ಗದ ಮೇಲೆ ದೀಪ ಹಚ್ಚಿದ, ಬಿರುಗಾಳಿ ಕಾಡನ್ನೇ ಅಲುಗಾಡಿಸಿದ ಹಾಗೆ ಒಬ್ಬ ಗಂಡು ಇಡೀ ಸೈನ್ಯವನ್ನೇ ತಳತಳಕ ಮಾಡಿದ. ಅವನ ಕುದುರೆ ಹಾಗೂ ಬಂದೂಕು ತುಂಬ ಪ್ರಬಲವಾದವುಗಳು ಅನೇಕ ಯುದ್ಧವಾಡಿದ ನಂತರ ಇಡೀ ಸೈನ್ಯದಲ್ಲಿ ಬಣ್ಣ ಬಂತು. ಖಡ್ಗದಿಂದ ಚೆಹರೆ ಮೇಲೆ ವಿಧವಾದ ರೀತಿಯಲ್ಲಿ ಧಾವಿಸಿದ, ಮೊದಲಂತೂ ಹರಿತವಿಲ್ಲದಂತಾಯಿತು. ನಂತರ ಚೂಪಾದ ದಂತಗಳು ಬಂದವು. ಖಡ್ಗದಿಂದ ರಕ್ತದ ಮಳೆ ಸುರಿಯಲಾರಂಭಿಸಿತು. ಕುದುರೆ ಹೊಸ ಬಣ್ಣಕ್ಕೆ ತಿರುಗಿತು. ಅವನು ತನ್ನ ಪೂರ್ಣಶಕ್ತಿ ಪ್ರಯೋಗಿಸಿ ಕೈಯಾಡಿಸಿದಾಗ ಸುತ್ತಮುತ್ತದ ಹೊಲವಲ್ಲ

ವಕ್ಕಣವಾಯಿತು. ಅಲ್ಲಿ ಸೇರಿದ್ದ ವೀರರೆಲ್ಲ ತಮ್ಮ ಪ್ರಾಣವನ್ನೂ ಲೆಕ್ಕಿಸದೆ ಧಾವಿಸಿದಾಗ ಅವರಲ್ಲಿ ಅನೇಕರು ಗಾಯಗೊಂಡರು. ಖಾನನು ಈ ದೃಶ್ಯ ನೋಡಿ ಆಟ ತಿರುಗಿಸಲು ತನ್ನ ಆಟ ತೋರಿಸಲು ಅತಿಪರಿಶ್ರಮ ಪಟ್ಟು ಹೇಳಿದ 'ಶತ್ರು ನಮ್ಮ ಕಪಾಳಕ್ಕೆ ಹೊಡೆದು ಆಟ ಗೆಲ್ಲುವರು. ಅಮಲೇರಿದ ಆನೆ ಅದರ ಮೇಲೆ ಕವಚಧಾರಿ ಹೇಗೆ ಆಕ್ರಮಿಸಿದರೆಂದರೆ ಆಕಾಶ ತನ್ನ ನಕ್ಷತ್ರಗಳೊಡನೆ ಬಿದ್ದಿದ ಹಾಗೆ ಕಾಣಿಸಿತು. ಸೈನ್ಯದ ಆಕ್ರಮಣದಿಂದ ದಟ್ಟನೇ ಧೂಳೆಬ್ಬಿತು. ನಿರ್ಮಲ ಚಂದ್ರಬೆಳಕಿನಂತಹ ನೀರು ಸಹ ಕೊಳಕಾಯಿತು. ಚಂದ್ರನ ಶುಭ್ರವಾದ ಮೈ ಮೇಲೆ ಧೂಳು ಹೋಗಿ ತನ್ನ ಮುಖದ ಮೇಲೆ ಬೂದಿ ಹಚ್ಚಿಕೊಂಡಂತೆ ಕಾಣುತ್ತಿತ್ತು. ಒಂದು ಗುಡುಗಿನಿಂದ ಇಡೀ ಪ್ರಪಂಚ ತಳತಳಕವಾಯಿತು, ಆಕಾಶ ಬಿರುಕುಬಿಟ್ಟಂತೆ ಕಾಣುತ್ತಿತ್ತು. ಅದನ್ನು ನೋಡಿದರೆ ಮಿಂಚು ಹುಳುಗಳು ಕೆಳಗಿಂದ ಎಲ್ಲೋ ದೂರದಲ್ಲಿ ಹಾರುತ್ತವೆ ಎಂದು ತಿಳಿಯುತ್ತಿದೆ. ಸ್ವರ್ಗದಲ್ಲಿ ನಕ್ಷತ್ರಗಳು ನುಚ್ಚುನೂರಾಗಿ ಬಿದ್ದ ಹಾಗೆ ಕಾಣುತ್ತಿದ್ದವು. ಶತ್ರುವಿನ ಮೇಲೆ ಗಂಡಾಂತರ ಉಂಟಾಗುವಂತೆ ಕಾಣಿಸಿತು. ಪೂರ್ಣ ಪ್ರಳಯವುಂಟಾಗುವ ಸಂಕೇತ ಕಾಣಸಿತು. ಆನೆ ಹಿಂಡು ಎಂಬ ಗೊದ್ದಲದ ಸರಣಿ ಸೈನ್ಯದಲ್ಲಿ ಒಂದು ಭೂಕಂಪ ಉಂಟುಮಾಡಿತು. ಆನೆ ಕಟ್ಟುವ ಸರ್ಪಣಿಯಿಂದ ಸೈನ್ಯವನ್ನು ನಾಶ ಮಾಡುತ್ತ ಹೋದ. ಬರ್ಚಿಗಳಿಂದ ಸಾಲಿನ ಮೇಲೆ ಸಾಲುಗಳನ್ನು ಆಕ್ರಮಿಸಲಾಯಿತು. ನೌಕರರ ರಾಶಿ ಆನೆಯ ಕಾಲಿನ ಕೆಳಗೆ ಬಿದ್ದಿತ್ತು. ಎಲ್ಲ ದಿಕ್ಕಿನಿಂದ ಬಂದು ಅಲ್ಲಿ ಸಿಕ್ಕಿಕೊಳ್ಳುತ್ತಿದ್ದರು. ನಾಲ್ಕು ದಿಕ್ಕಿಂದಲೂ ಧಾವಿಸಿ ಪ್ರತಿಯೊಂದು ಹೆಜ್ಜೆಗೂ ಎಳ್ಳಿನ ಕಾಳಿನಿಂದ ಎಣ್ಣೆ ತೆಗೆಯುವಂತೆ ರಕ್ತ ಸುರಿಸಿದರು. ಸಹಸ್ರಾರು ಸಿಪಾಯಿಗಳಿಗೆ ಒಂದು ಆನೆ ಇಕ್ಕಟ್ಟಿನಲ್ಲಿ ಸಿಕ್ಕಿಸಿಕೊಂಡು ನೋವು ಕೊಟ್ಟಿತು. ಅದರ ಮೇಲೆ ಅವರ ಸವಾರರ ಕೈಗಳಿದ್ದವು. ಕುದುರೆ ಸವಾರರಿಗೂ ಹಿಂದಕ್ಕೆ ನೂಕಿ ನುಗ್ಗಿಕೊಂಡು ಹೋಯಿತು. ಆ ಕುದುರೆ ಸವಾರರ ಆಟದಿಂದ ಪೇದೆ ಸಿಪಾಯಿಗಳು ದಣಿದವು. ಕುದುರೆಗಳ ಮೇಲಿದ್ದವರು ಪ್ರತಿಯೊಬ್ಬ ಸಿಪಾಯಿಯು ಬಂದೂಕು ಧರಿಸಿದ್ದರು. ಅದು ಚಂಡಮಾರುತ ಮೋಡ ಮತ್ತು ಎರಡನೆಯದು ಆಕಾಶ ಇವುಗಳಿಂದ ಭೂಮಿಯ ಮೇಲೆ ಬಿಳಿ ಹಾಗು ಕರಿ ಮೋಡಗಳು ಬಿದ್ದವು. ಅದೆಷ್ಟೋ ರಕ್ತ ಸುರಿದಿದ್ದರಿಂದ ಪಾತಾಳ ಕೆಂಪಗಾಯಿತು. ಆ ಕುದುರೆ ಸವಾರ ಸೈನಿಕರನ್ನು ವೀರರು ಇಳಿಸಲಾರಂಭಿಸಿದರು. ಒಂದೊಂದು ಪಗಡೆದಾಳಗಳನ್ನು ಆರಿಸಿ ಆರಿಸಿ ಹೊಡೆಯಲಾರಂಭಿಸಿದರು. ಅಧಿಕ ಬಲ ಉಪಯೋಗ ಮಾಡಿ ಬರ್ಚಿಗಳನ್ನು ಎದೆಪಾರು ಮಾಡಿದರು. ಹೃದಯಗಳ ಮೇಲೆ ಖಡ್ಗ ಭ್ರಮೆಗಿಂತಲೂ ವೇಗವಾಗಿ ಚಲಿಸಿತು. ಚಿಂತನೆಯ ದಾರಿಯಲ್ಲಿ ನಡೆದಾಗ ಮಿದುಳಿನಲ್ಲಿ ಹೀಗೆ ಚಿಂತನೆ ನಡೆಯುತ್ತಿತ್ತು. ಅಂದರೆ ಇಲ್ಲಿ ಪ್ರತಿಕ್ಷಣದ ದಣಿದವರಿರುವರು. ಇಲ್ಲಿ ಕಾಳಚಗಳ ಮೇಲೆ ಬರ್ಚಿಗಳನ್ನು ಹೂಣಿಸುತ್ತಿದ್ದಾರೆ. ಪಟ್ಟೆಯ ತೀವ್ರತೆಯಿಂದ ಪ್ರಾಣದ ಮೇಲೆ ತಣ್ಣನೇ ಗಾಳಿ ಬೀಸಿತು. ಶಸ್ತ್ರಗಳನ್ನು ತಾಗಿದ್ದರಿಂದ ಆತಂಕದ ಗಾಯ

ಉಂಟಾಯಿತು. ಕೊಡಲಿಯ ಶಕ್ತಿಶಾಲಿ ಏಟಿನಿಂದ ತಲೆಯಲ್ಲಿ ಸಣ್ಣ ವರ್ತುಲ ಕೊಟ್ಟಿತು. ಗದೆಯ ನೋವು ಶರೀರದಲ್ಲಿ ಶಕ್ತಿ ಬಿಡಲಿಲ್ಲ. ಈ ದುಃಖಗಳಿಗೆ ವೈದ್ಯನಾಗಿ ಸಾವು ನಿಂತಿತು. ಏನು ಸಿಕ್ಕಿತ್ತೋ ಅದನ್ನು ತೆಗೆದು ಕೊಂಡು ಹೋಯಿತು. ಯಾರು ತಲೆಯ ಮೇಲೆ ಏಟನ್ನು ತೆಗೆದುಕೊಂಡಿದ್ದನೋ ಅವನು ಸ್ವಲ್ಪ ಕಾಲು ತೆಗೆದಾಗ ಅವನಿಗೆ ಭೂಮಿ ಮೇಲೆ ಅವನಿಗೆ ಜೀವದ ಉದ್ದದಷ್ಟು ನೆರಳು ಕಾಣಿಸಿತು. ರಾತ್ರಿ ಕತ್ತಲೆಯನ್ನು ಇನ್ನಷ್ಟು ಬೆಳಗಿಸಿತು. ಎಷ್ಟೊಂದು ಮುಳ್ಳು ಹಾಗೂ ಕಸವಿತ್ತೋ ಅವೆಲ್ಲ ತೋಟವಾಯಿತು. ಎದುರಾಳಿಯ ಮೇಲೆ ಜಯ ಸಾಧಿಸುವುದು ಮೊದಲನೆ ಆದ್ಯತೆ ಎಂದು ತಿಳಿದು ಮನಸ್ಸಿನಲ್ಲಿ ಅದರ ಕಡೆ ಗಮನ ಕೊಟ್ಟ ಆದರೆ ಅದರ ಜೊತೆ ಸಂಬಂಧ ಕಡಿಮೆ ಇಟ್ಟ.ಭ್ರಮೆ ಅವನನ್ನು ಅವಮಾನಿತ ಮಾಡಲು ತಂದ. ಅಹಂಕಾರದ ಆಪತ್ತಿನಲ್ಲಿ ತಂದು ಅವನನ್ನು ಎಸೆದ. ಸವಾರರ ಮೇಲೆ ನುಗ್ಗಿ ನುಗ್ಗಿ ಸಾಹಸದಿಂದ ಜೀವದ ಆಟ ಕಲೆ ತೋರುತ್ತ ಆಡಿದರು. ಭಾಲೆ, ಬರ್ಚಿ, ಲಾಠಿ, ಕಟಾರಿಗಳ ಏಟುಗಳಿಂದ ಸವಾರರ ಮೈಗಳ ಮೇಲೆ ಸಾವಿರಾರು ಕಿರಣಗಳನ್ನು ಮೂಡಿಸದವು. ರುಂಡಗಳಲ್ಲಿ ತುರುಕರ ಭಾಲೆಗಳ ಕೆಳಗೆ ಮೀನು ಸಮರಗೊಂಡು ಮುಳ್ಳು ಹರಿತಗೊಳಿಸಿದ. ಮೊದಲನೆ ದೊಣ್ಣೆ ಹತ್ತಿಯ ಧಾರೆಯಂತೆ ಕುದುರೆಯನ್ನು ರಣಧೀರನ ರುಂಡದ ಜೊತೆಯಲ್ಲಿ ಸೇರಿಸಿ ಹೊಲಿದ. ಭಾಲೆ ಬರ್ಚಿಗಳಿಂದ ಅನೇಕ ಶರೀರಗಳು ತೂತು ಬಿದ್ದು ರಕ್ತ ತುಂಬಿದ ಗುರಾಣಿ ವಿಶ/ಉರಿಯಾಗಿ ತಾಗಿತು. ಹೀಗೆ ನೃತ್ಯ ಮನವರಿಸುವ ಹಾಗೆ ಯುದ್ಧ ಬಲಪಡಿಸಿದಾಗ ಶತ್ರುಗಳಿಗೂ ಹೋರಾಟ ಮಾಡಬೇಕಾಗಿ ಬಂತು. ಯಾವಾಗ ಆಕ್ರಮಣಕಾರರ ಮೇಲೆ ವಿಪತ್ತು ಬಂದಾಗ ಅವರ ಪರ ಅವನಾದ. ಯಾರ ಮೇಲೆ ಖಾನಿನ ಖಡ್ಗದ ನೆರಳು ಬಿತ್ತೋ ಅವನ ಪ್ರಜ್ಞೆಯ ಅಸ್ತಿತ್ವ ಸುಟ್ಟು ಭಸ್ಮಮಾಯಿತು. ತನ್ನತಾನೆ ಖಡ್ಗ ಮಿಂಚಿನ ಕೈಗೆ ಗುಡುಗು ಆದಾಗ ಖಡ್ಗಪ್ರಯೋಗದ ಸುರಿಮಳೆಯಾಯಿತು. ಯಾರು ತನ್ನ ತಲೆ ಮೇಲೆ ಏಟು ತೆಗೆದುಕೊಳ್ಳಲು ನಿಂತನೋ ಆಗ ಅಕ್ರಮಣ ಮಾಡುವ ಖಡ್ಗ ತಾಗಿ ದೊಡ್ಡ ತೂತು ಬಿತ್ತು. ನರಗಳ ಝುರಿಗಳಿಂದ ತೂತುಗಳಿಂದ ರಭಸದಿಂದ ರಕ್ತದ ಲಡಿಗಳು ಗದ್ದಲದಿಂದ ಹರಿದವು. ಇಡೀ ತೋಟ ನಾನಾವಿಧದಿಂದ ಕೆಂಪೇರಿತು. ಸಾವು ದುಂಬಿಯಂತೆ ಜೀವ ರಸ ಹೀರಿತು. ಖಡ್ಗಗಳ ಖನಾಖನ್ ಶಬ್ಧದಿಂದ ಬೆಟ್ಟಗಳಲ್ಲಿ ಕಂಪನ ಉಂಟಾದಂತೆ ಗುಲ್ಲುಂಟಾಯಿತು. ನಿದ್ದೆ ಮಾಡುತ್ತಿದ್ದವರಿಗೆ ಆಪತ್ತು ಎದುರಾಗಿ ಎಚ್ಚರವಾಯಿತು. ಸಾವು ಘೋರ ನಿದ್ದೆಯಿಂದ ಎದ್ದಿತು. ಖಡ್ಗಗಳ ಹರಿತದಿಂದ ನೀರು ತುಂಬಿತು. ಯಾರ ಖಡ್ಗಗಳು ಮುರಿದು ಹೋಗಿದ್ದವೋ ಅವು ಅದರಲ್ಲಿ ತೇಲಲಾರಂಭಿಸಿದವು. ಶಸ್ತ್ರಗಳಲ್ಲಿ ಖಡ್ಗಗಳು ಹೇಗೆ ಹೂತಿತೆಂದರೆ ಬೆಂಕಿ ಮತ್ತು ರಕ್ತ ಎರಡು ಸೇರಿ ಸುರಿಯಲಾರಂಭಿಸಿದವು. ಇಲ್ಲಿ ರಕ್ತದ ಹನಿಗಳು ಗಾಳಿಯ ಮೇಲೆ ಬಣ್ಣ ಚಿಮ್ಮಿಸಿತು. ಖಡ್ಗ ತನ್ನ ನಾಲಿಗೆಗಳಿಂದ ಸಹಸ್ರಾರು ಜ್ವಾಲೆಗಳನ್ನು ಎಸೆಯುತ್ತಿತ್ತು.

ಆದ್ದರಿಂದ ರಾತ್ರಿಯ ಕರಿಬಣ್ಣ ಖಡ್ಗಗಳ ಮಿಂಚಿನಿಂದ ಹೊಳಪಿಗೆ ತಿರುಗಿತು. ಮೃದವಾದ ಚಂದ್ರ ಬೆಳಕು ಸಹ ಬಿಸಿಲಂತೆ ಬಿಸಿಯಾಯಿತು. ಗಾಳಿ ಬಿಸಿಯಾಗಿ ಬೆಂಕಿಯಂತೆ ಕೆಂಪಾಯಿತು. ನೀರು ಬಿಸಿಯಾಗಿ ಮೋಡವಾಯಿತು. ಗಾಳಿಯ ಮೇಲೆ ಕಿಡಿಗಳ ಆಟ ನಡೆಯುತ್ತಿತ್ತು. ಅದರ ಮೇಲೆ ರಕ್ತ ಚಿಮ್ಮಿದ ಕಾರಣ ಅದು ಬೆಂಕಿ ಮೇಲೆ ಎಣ್ಣೆಕೆಲಸ ಮಾಡುತ್ತಿತ್ತು. ತುಪಾಕಿಗಳ ಮೇಲೆ ರಕ್ತದ ವಲಯಗಳು ಕಾಣುತ್ತಿತ್ತು. ಚೂಪಾದ ಶಸ್ತ್ರಗಳ ಮೇಲಿಂದ ಹರಿಯುವ ರಕ್ತ ಚಿಕ್ಕ ಕಾಲುವೆಯ ಹಾಗೆ ಕಾಣುತ್ತಿತ್ತು. ಹಿಡಿ ಪ್ರತಿಯೊಂದು ರಕ್ತದಿಂದ ತುಂಬಿ ಗೂಡಂತೆ ಕಾಣಿಸುತ್ತಿತ್ತು. ತುಪಾಕಿ ಗರ್ವದಿಂದ ಎತ್ತರದ ವೃಕ್ಷದಂತೆ ಕಾಣುತ್ತಿತ್ತು. ಭಲ್ಲೆಯ ಸಿಪಾಯಿಗಳ ಎಲ್ಲ ಭಲ್ಲೆಗಳು ತೋಲೆಗಳ ಸೈನ್ಯದ ತುಕಡಿಯಂತೆ ಕಾಣುತ್ತಿತ್ತು. ಪ್ರತಿಯೊಂದು ಗುರಾಣಿ ಕೆಂಪು ರತ್ನದ ತುರಾಯಿಯ ಎಲೆಯಂತೆ ಕಾಣುತ್ತಿತ್ತು. ಕೊಡಲಿ ಕೆಂಪು ಹಸ್ತದಂತೆ ಕಾಣುತ್ತಿತ್ತು. ಪ್ರತಿಯೊಂದು ಹಗ್ಗದ ಏಣಿ ಪುಷ್ಪವಾಟಿಕೆಯ ಬಳ್ಳಿಯ ಮೇಲೆ ರಕ್ತ ಹೆಬ್ಬುಕಟ್ಟಿ ಅದು ಮೊಗ್ಗಿನಂತೆ ಮಿನುಗುತ್ತಿತ್ತು. ಗದೆ ಕೇಶದ ಹೂವಿನ ಮೊಗ್ಗಿನಂತೆ ಮನಮೋಹಕವಾಗಿತ್ತು. ಬರ್ಚಿ ಭಾವೆಯ ಕಾಯಿಯಂತೆ ಕಾಣುತ್ತಿತ್ತು. ಅಧಿಕ ಯುದ್ಧದ ಕಾರಣದಿಂದ ರಕ್ತದ ಕೆಸರು ಹೆಚ್ಚಿತು. ಒಂದು ಜನಸಮೂಹ ಬೀಳುತ್ತಿರುವಾಗ ಲಕ್ಷಾಂತರ ಹನಿಗಳು ಸಿಂಪಡಿಸುತ್ತಿವೆ. ಇದರಿಂದಾಗಿ ಗಾಳಿಯ ಬಣ್ಣವೂ ಮನಮೆಚ್ಚುವಂತಾಗಿ ದಿಗಂತದಲ್ಲಿ ಮೋಡಗಳು ಮೂಡಿಬಂದಿವೆ, ನೀಲಿ ಆಕಾಶ ಹಾರು ಪೀಠವಾಗಿದೆ. ಧೂಳಿನ ಹೊಳೆಯುವ ರೇಷ್ಮೆಬಟ್ಟೆಯ ಮೇಲೆ ಚಿತ್ರಕಾರನ ಹನಿಗಳು ಬಿದ್ದಿವೆ. ಚಂದ್ರ ಆಕಾಶದಲ್ಲಿ ಬಿಳಿದರಲ್ಲಿ ಕಪ್ಪುಬಣ್ಣದಲ್ಲಿ ರಸಸಿಂಧೂರಿನಂತೆ ಕಾಣುತ್ತದೆ. ಶತ್ರು ಯಾವ ಆಟ ಆಡುತ್ತಿದ್ದನೋ ಪಗಡೆ ಆಟದ ಹಾಸಂಗಿಯಲ್ಲಿ ಜೀವ ಹಿಡಿದಿದ್ದ. ಈ ರೀತಿಯಾಗಿ ಅನೇಕ ಪಗಡಯ ದಾಳುಗಳನ್ನು ಹೊಡೆದು ಸ್ವಚ್ಛ ಮಾಡಿದ್ದರಿಂದ ಪಗಡೆ ಆಟಕ್ಕೆ ಛಳಿ ಹಿಡಿದಂತಾಯಿತು. ಆಟ ಸೋಲುವುದನ್ನು ನೋಡಿ ಶಿವಾಜಿಗೆ ಅಲ್ಲಿಂದ ಓಡಿಹೋಗುವುದು ಬಿಟ್ಟರೆ ಬೇರೆ ಮಾರ್ಗ ಕಾಣಿಸಲಿಲ್ಲ. ಗೆದ್ದವರು ಆನಂದತುಂದಿಲರಾಗಿ ಸುಖಾಡಂಬರದಿಂದ ನಡೆದರು. ಸೋಲುವವರ ಮುಖ ಚಿತ್ರಕಾರ ಎಂದೂ ಬರೆಯುವವನಲ್ಲ.ಇರುವೆಗಳ ದಾರಿಗೆ ಧಕ್ಕೆ ಉಂಟಾದರೆ ಹೇಗೆ ಚಿದ್ರವಾಗುತ್ತದೆಯೋ ಹಾಗೆ ನೌಕರರಿಗೆ ಪರಾಜಯವಾಯಿತು.ಕಾಡಲ್ಲಿ ವಾನರರು ಹೇಗೆ ಲಾಗ ಹೊಡೆಯುತ್ತವೆಯೊ ಹಾಗೆ ಕುದುರೆಗಳಿಗೆ ಲಂಗುಲಗಾಮಿಲ್ಲದೆ ಹಾರಿಸಿದರು. ತಪ್ಪಿಸಿ ಓಡಿ ಹೋದವರಿಗೆ ಪ್ರತಿಯೊಂದು ವೃಕ್ಷವೂ ಹಾವಾಗಿ ತಲೆ ಮೇಲೆ ಯಾರೋ ಇರುವೆ ಕೂದಲಿನ ಪೇಠ ಕಟ್ಟಿದಂತಾಯಿತು. ಯಾರ ಮೈ ಮೇಲೆ ಮುಳ್ಳು ಕಣ್ಣು ಹಾಕಿತೋ ಅವನ ಬಟ್ಟೆಗಳನ್ನು ದವಡೆ ಸಮೇತಾಗಿ ಕಸಿದಿಕೊಂಡಿತು. ಪ್ರತಿಯೊಂದು ಮರ ಆ ಕ್ಷಣದಲ್ಲಿ ಬಣ್ಣ ಬಣ್ಣದ ಬಟ್ಟೆ ಚಿಂದಿಗಳಿಂದ ಹೊಲಿಸಿ ತಯಾರಿಸಿದ ಅತ್ಯುತ್ತಮ ದುಬಟೆ ಧರಿಸಿದಂತೆ ಕಾಣತೊಡಗಿತು. ಈ ರೀತಿಯಾಗಿ ಬೆತ್ತಲಾಗಿ ಅವರು ರಣರಂಗದ ಕಾಡಲ್ಲಿ ಕುದುರೆ ಕರಡಿ ಆನೆ ಹಾಗೂ ಕಾಡುಹಂದಿಗಳಂತೆ

ಓಡಾಡುತ್ತಿದ್ದರು. ಮೊಸಳೆ, ಹಾವು, ಆಮೆಗಳು ಆವರಿಸಿದ, ಬಿದ್ದುಹೋದ ನಕ್ಷತ್ರಗಳಂತೆ ಬಿದ್ದಿದ್ದವು. ಪ್ರಿಯೆಯ ಜಗಳದಲ್ಲಿ ಅಧಿಕ ವಿನಾಶವಾಗಿ ಹೋದವರಂತೆ ಬಿದ್ದಿದ್ದವು. ಅಲ್ಲಲ್ಲಿ ಸಣ್ಣ ಫಿರಂಗಿಗಳೆಲ್ಲ ಬಿಟ್ಟು ಓಡಿಹೋದರು. ಅವು ಬಿಸಿಲು ಕಾಯಲು ಬಿದ್ದಿರುವ ಘೋಡ್ಪೋಡ್ (ಹಲ್ಲಿ ಜಾತಿಯ ದೊಡ್ಡಪ್ರಾಣಿ)ಗಳಂತೆ ಕಾಣುತ್ತಿದ್ದವು. ಅವರ ಮರ್ಯಾದೆ ಅವರ ಹೆಸರನ್ನು ಸದ್ಯವಾಗಿ ಮಣ್ಣಿನಪಾಲು ಮಾಡಿಲಾಗಿತ್ತು. ಇವೆಲ್ಲವನ್ನು ಕಳೆದುಕೊಂಡು ಕೊನೆಗೂ ಅವರು ತಮ್ಮ ಪ್ರತಿಷ್ಠೆಯನ್ನು ಕಳೆದುಕೊಂಡರು. ಸಮರವೇ ಮುಗಿದ ಮೇಲೆ ಅವರು ಯಾರೊಡನೆ ಹೋರಾಡುವರು? ತನ್ನ ಕಲೆಯನ್ನು ತೋರಿಸುವ ಶಕ್ತಿಯೂ ಇಲ್ಲದಂತಾಯಿತು. ಮನಸ್ಸಿನಲ್ಲಿ ಹುಲಿಯ ಭಯ ಜಾಗ ಮಾಡಿತು. ದೃಷ್ಟಿಯಲ್ಲಿ ನಿತ್ಯವೂ ಖಡ್ಗದ ಏಟುಗಳೇ ಕಾಣತೊಡಗಿತು. ವೀರ ಶೂರರ ಘೋಷಣೆಗಳು ಜ್ಞಾಪಿಸಿಕೊಂಡರೆ ಎದೆ ಆತಂಕದಿಂದ ಒಡೆದು ಹೋಗುತ್ತಿದ್ದವು. ಶಿವಾಜಿಯ ಕಲಿಜ/ಯಕ್ರತಿಯನ್ನು ಖಾನನು ಹೊಡೆದುಹಾಕಿದ್ದ. ಅವನ ಶಕ್ತಿಯುತ ತೋಳುಗಳನ್ನು ಖಾನನು ಮುರಿದು ಎಸೆದಿದ್ದ. ಯಾವ ಅಬಜಿ(ಅಬ್ಜಯೂನಿ=ಬ್ರಹ್ಮ=ಬ್ರಹ್ಮಕಮಲದಿಂದ ಸೃಷ್ಟಿಸಲ್ಪಟ್ಟಿದ್ದರು) ಸೃಷ್ಟಿಯಾದಾಗಿನಿಂದಲೂ ಇಷ್ಟವಿಲ್ಲದಂತಾದವನೋ ಅವನಿಗೆ ಒಂದೇ ಏಟಿನಿಂದ ಬುದ್ಧಿಕಲಿಸಿದ್ದರು. ಇಡೀ ಜೀವನದಲ್ಲಿ ಅವನು ಎಷ್ಟೊಂದು ಪೂಜಿಸಿದ್ದನೋ ಅವನ ಅಷ್ಟೊಂದು ಗರ್ವವನ್ನು ಇಳಿಸಿ ಕಿತ್ತುಹಾಕಿದರು. ಅವನು ಕಳ್ಳಾಟದ ಎಷ್ಟೊಂದು ಆಟ ಕಲಿತಿದ್ದನೋ ಅವೆಲ್ಲವನ್ನು ಬಿಡಿಸಿದರು ರಾಜಕೀಯ ಮಾಡಿ ಅವನ ಮನಸ್ಸಿನಿಂದ ಗರ್ವ ಇಳಿಸಿದರು. ಅದಾಗ್ಯೂ ಘಾಝಿಯಾಗಿ ಅವನು ಇಸ್ಲಾಂ ಧರ್ಮದ ಶತ್ರುಗಳ ವಿರುದ್ಧ ಸಮರವಾಡಿ ತನ್ನ ಕೆಲಸ ಮಾಡಿದ. ಆದರೂ ಮುಘಲರಿಗೆ ಅವರು ಮಾಡಿದ ತಪ್ಪಿಗೂ ಸಹ ಶಿಕ್ಷಿಸಿದ. ಈ ವಿಜಯದ ಸುದ್ದಿ ಇಡೀ ಪ್ರಪಂಚದಲ್ಲಿ ಹರಡಿತು. ವಿಶೇಷವಾಗಿ ಮುಘಲರು ಈ ಗುಲ್ಲನ್ನು ಕೇಳಿದಾಗ ಖಾನನ ಈ ಸಾಧನೆಯನ್ನು ಕೇಳಿ ಶೋಕಿತರಾದರು. ಬಹಳ ಹೊತ್ತಿನ ತನಕ ಬೆರಳು ಹಲ್ಲಲ್ಲಿ ಹಿಡಿದುಕೊಂಡರು. ಖಾನನ ಶೌರ್ಯದ ಮೊಹರು ಎಲ್ಲರೂ ನೋಡಿದರು. ಶೂರರ ಶೌರ್ಯವನ್ನು ಅವನು ಗೇಲಿ ಮಾಡಿದನು. ಇದೆಲ್ಲ ಶಿವಾಜಿಯ ಮಾಯೆ, ಶಿವಾಜಿಯ ಸರ್ಕಾರ ಎಲ್ಲವೂ ನಾಶವಾಯಿತೆಂದು ತಿಳಿದು ಜೈಸಿಂಘ್ ತುಂಬ ನಕ್ಕಿದ್ದ. ವೀರನಾಗಿದ್ದರೆ ಶೌರ್ಯದ ಕೆಲಸ ಮಾಡು ಇಲ್ಲದಿದ್ದರೆ ನಾನು ಗಂಡಸನಲ್ಲ, ಗಂಡಸಿನ ಹೆಸರು ಬಿಟ್ಟುಹಾಕು ಎಂದು ಬರೆದ. ನೋಡು, ಹುಲಿ ಹೋಗಿ ಬೇಟೆಯನ್ನು ಹೊಡೆದು ಹರಿದುಹಾಕಿದೆ. ಅವನಿಗೆ ಸುಲಿದು ತಿನ್ನಲು ನಿನ್ನಲ್ಲಿ ಶಕ್ತಿ ಇದೆಯೋ, ಅದಾಗ್ಯೂ ಅವನೊಬ್ಬ ದಂಡನಾಯಕನಾಗಿದ್ದ ಈಗ ಏನೂ ಇಲ್ಲದಂತಾಯಿತು, ಆದರೆ ಇವೆಲ್ಲವನ್ನು ನೋಡಿ ನಾಚಿಕೆ ಪಟ್ಟು ಅಲ್ಲಿಂದ ಎದ್ದು ಓಡಿಹೋದ. ಇಲ್ಲಿ ಗತಿಕೆಡಸಿಕೊಂಡವರಿಗೆ ಅಲ್ಲಿಂದ ಅವನು ತಲುಪವವರಿಗೆ, ಒಂದು ಕಡೆ ಶಾಹನ

ದಂಡಿನ ಪ್ರಾಬಲ್ಯವಿತ್ತು. ಮತ್ತೊಂದು ಕಡೆ ಮುಘಲರು ಗೊಂದಲ ಎಬ್ಬಸಿದ್ದರು. ಎರಡೂ ಕಡೆಯಿಂದ ನೋವು ಅನುಭವಿಸಿ ಅವನು ಸಡಿಲನಾಗಿ ಏನೂ ಕೆಲಸ ಮಾಡಲು ಸಾಧ್ಯವಾಲಿಲ್ಲ. ಏನೂ ಆಟ ಆಡಲು ಸಾಧ್ಯವಾಗಲಿಲ್ಲ.ಈಗ ಅವನು ಸಾಹೇಬರ ಬಂಡಾಯಗಾರನಾದ. ಅವನ ಅದೃಷ್ಟ ಕೊನೆ ಹಂತಕ್ಕೆ ತಲುಪಿತು. (೧೯೮೬-೨೨೨೫)

■

*

ಅಧ್ಯಾಯ – ೯

ಮಾತೇನೆಂದರೇ ಯಾವಾಗ ಮುಘಲರು ಶಿವಾಜಿಯ ಈ ಗತಿಕೆಟ್ಟದ್ದನ್ನು ನೋಡಿದರೋ ಒಂದು ಕೋಟೆ ಮೋಸದಿಂದ ಪಡೆದು ಎಲ್ಲರಿಗೂ ದಂಗಬಡಿಸಿದರು.

ಆಕಾಶದ್ದೂ ಅನೇಕ ವಿಚಿತ್ರವಾದ ಪುಣ್ಯ ಹಾಗೂ ಪಾಪದ ಕಾರ್ಯಗಳಿವೆ. ಅದರ ಸ್ನೇಹ ಹಾಗೂ ಶತ್ರುತ್ವಕ್ಕೂ ಮಿತಿ ಇಲ್ಲ. ಒಂದು ಕ್ಷಣಕ್ಕೆ ಎಂದೋ ಭಾಗ್ಯಶಾಲಿ ಮಾಡುತ್ತಾನೆ. ಮತ್ತೊಬ್ಬರನ್ನು ಒಯ್ಯಾರಿಸಿ ಅವಮಾನಿತ ಮಾಡುತ್ತಾನೆ. ಶಿವಾಜಿಯ ಒಂದು ಕೋಟೆ ಎತ್ತರದಲ್ಲಿ ಆಕಾಶಕ್ಕೆ ಮುಟ್ಟತ್ತಿತ್ತು. ಅದರ ವಿಸ್ತೀರ್ಣಕ್ಕೆ ದೂರದರ್ಶಕದಿಂದ ನೋಡಿದರೇ ಪೃಥ್ವಿ ಆಕಾಶವನ್ನು ತಲೆ ಮೇಲೆ ಎತ್ತಿಕೊಂಡು ನಿಂತಿರುವ ಹಾಗೆ ಕಾಣುತ್ತಿತ್ತು. ಬಸಂತ್‌ಗಢ್ ಸುತ್ತಿಲಿಂದಲೂ ಅಗಾಧ, ನೋಡಲು ಅಲ್ಲೊಂದು ಪ್ರಪಂಚವೇ ವಾಸವಾಗಿದೆಯೋ ಏನೋ ಎಂದು ಕಾಣುವಂತಹದು. ಪ್ರತಿಯೊಂದು ಓಣಿಯಲ್ಲೂ ಅನೇಕ ಮನೋಹರ ಚಿಲುಮೆಗಳಿವೆ. ಪ್ರತಿಯೊಂದು ಜಾಗ ಒಂದು ಈಜಿಪ್ಟ್ ದೇಶದವರಿಗೆ ನೈಲ್ ನದಿ ಹರಿಯುವಂತೆ. ಒಂದು ಪಕ್ಷ ಸ್ವರ್ಗದಿಂದ ಇಂದ್ರ ರಾಜ ಇಳಿದು ಈಕಡೆ ಏನಾದರೂ ಬಂದರೆ ಇದೇ ಗಡದಲ್ಲಿದ್ದು ತನ್ನ ಸಮಯ ಕಳೆಯುವನು. ಈ ಗಡದಲ್ಲಿ ಅವನು ಶರಣುಪಡೆದು ಇಡೀ ಜಗತ್ತನ್ನೇ ಪೀಡಿಸಿದ್ದ. ಶಿವಾಜಿಗೂ ಸಹ ಆ ಗಡ ಎದೆ ಮೇಲೆ ಬಂಡೆಯಂತಿತ್ತು. ಆ ಕೋಟೆಯಲ್ಲಿ ಅವನಿಗೆ ಯಾವ ಅಭಿರುಚಿ ಇರಲಿಲ್ಲ. ಜನುಮದಿಂದಲೂ ಲಜ್ಜಾಭರಿತನಾಗಿದ್ದ. ಹಗಲೂ ರಾತ್ರಿ ಮಾನಸಿಕ ತೊಂದರೆಯಲ್ಲಿರುತ್ತಿದ್ದ. ಅವಕಾಶ ಸಿಕ್ಕಿದಾಗ ಅಡಗಿ ಮೋಸ ಮಾಡುವುದು ಕಠಿಣವಾಗಿತ್ತು. ಕೊನೆಗೂ ಅವನು ಮೋಸದಿಂದ ಡಿಕೋರಿ(ವಿಶಭರಿತ ಹುಳ)ಯ ಹುತ್ತದಲ್ಲಿ ಕೈ ಹಾಕಿ ಗಾಯಗೊಂಡ. ಅದೇ ಗಡದಿಂದ ಅವನು ಹೆಸರುವಾಸಿಯಾದ. ಒಂದು ಕಡ್ಡಿಗೂ ಬೆಲೆ ಬಾಳದೇ ಇರುವ ಕೋಟೆ ಬೆಟ್ಟವಾಯಿತು. ಅದನ್ನೇ ತಮ್ಮ ಅದೃಷ್ಟದ ಸಿಂಹಾಸನವೆಂದು

ಭಾವಿಸಿ ಅದಕ್ಕೆ ಭರವಸೆಯ ಜಾಗವೆಂದು ತಿಳಿದರು. ಮುಘಲರು ಬಂದು ಅದನ್ನು ಗೆದ್ದು ಸ್ವಾಧೀನ ಪಡೆದು ಕೊಳ್ಳಲೇಬೇಕೆಂದು ಸಂಘರ್ಷಿಸಿದರು. ಎಲ್ಲಿಂದಲೂ ಕುಮ್ಮಕ್ಕು ಬರಲು ಸಾಧ್ಯವಿಲ್ಲವೆಂದು ಭಾವಿಸಿ ಅತ್ತೆಯ ಮನೆ ಎಂದು ತಿಳಿದು ಸಮಾಧಾನವಾಗಿ ಕುಳಿತರು. ಇಲ್ಲಿ ನಾವು ಬಿಟ್ಟರೆ ಇನ್ಯಾರೂ ಇಲ್ಲ ಎಂದು ತಿಳಿದು ದುಃಖಗಳೆಲ್ಲ ಮರೆತು ಸುರಕ್ಷತೆಯ ಕೋಣೆಗಳೆಂದರೇ ಕಂದಕಗಳನ್ನು ಮುಚ್ಚಿ ಸುತ್ತಲೂ ಹಗ್ಗದ ಏಣಿಗಳನ್ನು ಕಟ್ಟಿ ಹತ್ತಿ, ಬಂದೂಕು ಇಟ್ಟು ಹಾರಿಸುವ ಜಾಗವನ್ನು ಹಿಡಿದರು. ಎಲ್ಲಿ ಗಾಳಿಗೂ ಸುಳಿಯದಂತಹ ಜಾಗವಿತ್ತೋ ಅಲ್ಲಿ ಅಗ್ನಿ ಮಳೆ ಸುರಿಯಲಾರಂಭಿಸಿತು. ಕೋಟೆಯ ಕಟ್ಟಡ ಸುಟ್ಟು ಭಸ್ಮವಾಯಿತು. ಅಗ್ನಿಯಿಂದ ಸುಡದೇ ಮಿಕ್ಕಿದ ಬಾಗವೂ ಕೆರೆಯ ಹಾಗೆ ಕಾಣತೊಡಗಿತು. ಪ್ರತಿಯೊಂದು ಮನೆಗಳ ಮೇಲೆ ವಿಪರೀತ ಗುಂಡುಗಳು ಬಿದ್ದವು ಶೈತಾನನಿಂದ ಕಲ್ಲೆಸೆದು ಕೊಲ್ಲುವ ಶಿಕ್ಷೆ ಪಡೆಯುವ ಹಾಗೆ, ಗಡದ ಒಂದೊಂದು ಬರುಜು ಗುಂಡುಗಳ ಕೆಳಗೆ ಬಾಗಿದವು.ಇಡೀ ಕೋಟೆ ಮುರಿದು ಜಾಲಿಯಾಯಿತು. ಗಾಳಿ ಪ್ರತಿಕ್ಷಣ ಧೂಳು ಸೋಸಿತು. ತೋಪುಗಳ ಏಟುಗಳಿಂದ ಕೋಟೆಯ ಬದಿ ಜಲ್ಲಡಿಯಾಯಿತು. ಕೋಟೆಯ ಹೆಬ್ಬಾಗಿಲಿನ ಒಂದು ಭಾಗ ಅಲ್ಲಲ್ಲಿ ತೂತಾಗಿ ಜರಡಿಯಾಯಿತು. ಆ ತೂತುಗಳಿಂದ ಹುಟ್ಟಿದ ಛಜ್ಜೆಗಳು ನಾಲಿಗೆಗಳಂತೆ ಕಾಣಿಸುತ್ತಿದ್ದವು. ಕೋಟೆಯೊಳಗಿರುವವರ ಗತಿ ಹದಗೆಟ್ಟಿತು. ಅವರ ಸಾಹಸ ಮುರಿದು ಹೋಗಿ ಹೋರಾಡುವ ಶಕ್ತಿ ಕಳೆದುಕೊಂಡರು. ಬಾಣಗಳ ಶಬ್ದ ಕಿವಿಗಳನ್ನು ದಂಗೆಬ್ಬಿಸಿತು. ಬಂದೂಕಿನ ಗುಂಡುಗಳಿಂದ ತಲೆಯೊಳಗಿನ ಮಿದುಳುಗಳು ಒಡೆದುಹೋದವು. ಒಂದು ತೋಪನ್ನು ಸಿಡಿಮದ್ದಿನಿಂದ ತುಂಬಿದರೆ ಅದು ಬಾಯಿ ಬಳಿ ಬಂದು ಸಹಸ್ರಾರು ಗುಂಡುಗಳಾದವು. ಎರಗಿ ಕೋಟೆಯ ಮೇಲೆ ಓಡಾಡಲು ಸಾಧ್ಯವಾಗುತ್ತಿರಲಿಲ್ಲ. ಸ್ವಲ್ಪ ತಲೆ ಎತ್ತಿದರೆ ಸಾಕು ಮಾತೇ ಮುಗಿದು ಹೋಗುತ್ತಿತ್ತು. ಅದಾಗ್ಯೂ ಶಿವಾಜಿ ಕೋಟೆಯಿಂದ ಹೊರಗಿದ್ದ, ಆದರೆ ಅವನಿಗೆ ಕುಮ್ಮಕ್ಕು ಕೊಡಲು ಸಾಧ್ಯವಾಗುತ್ತಿರಲಿಲ್ಲ. ಉನ್ನತ ಜಯಶಾಲಿ ಶಾಹರು ಮೊದಲೇ ಆ ಹಕ್ಕಿಯ ಎಲ್ಲ ರೆಕ್ಕೆಗಳನ್ನು ಕಿತ್ತು ಹಾಕಿದ್ದರು. ಅವನನ್ನು ಕಿತ್ತೊಗೆದು ಒಂದು ಮೂಲೆಗೆ ಸೇರಿಸಿದರು. ಅವನ ಗೂಡನ್ನು ಸರ್ವನಾಶ ಮಾಡಿದರು. ಸಮುದ್ರದ ಮೇಲೆ ಅಥವಾ ಭೂಮಿಮೇಲೆ ಯಾರು ಹೊಡೆದಾಡುತಿದ್ದರೋ ಅವರೆಲ್ಲ ಒಂದು ಮೂಲೆಯಲ್ಲಿ ಅಡಗಿಕೊಂಡು ವ್ಯಾಕುಲಗೊಂಡಿದ್ದರು. ಹೀಗೆ ಮುಘಲರು ಒಬ್ಬ ಅಂಧ ಬಟೇರ್ ಹಕ್ಕಿ ಹಿಡಿದ ಹಾಗೆ ಬಹಳ ಪುರಸತ್ತಿನಿಂದ ಕೋಟೆ ವಶಪಡಿಸಿಕೊಂಡರು. ಶಿವಾಜಿ ಈ ದೃಶ್ಯವನ್ನು ನೋಡಿ ಕಳವಳ ಪಡುತ್ತಾ ವಿನಾಶಗೊಳ್ಳುತ್ತಿದ್ದ. ತನ್ನ ಮನೆಗೆ ಎರಡು ಕಡೆಯಿಂದಲೂ ಬೆಂಕಿ ಹತ್ತಿರುವುದನ್ನು ನೋಡಿ ನನ್ನ ಖಡ್ಗದಲ್ಲಿ ಈ ನೀರು ಬಸಿದು ಹೋಗಿದೆ ಎಂದು ವ್ಯಥೆ ಪಟ್ಟು ಹೇಳಿದ. ತನ್ನನ್ನು ಕಾಪಾಡಿಕೊಳ್ಳುವ ಸಮಯ ಕಳೆದು ಹೋಯಿತು. ಈಗಲೂ ಮೌನ ತಾಳಿದರೆ ಇಡೀ ಮನೆ ಕೈ ಬಿಟ್ಟು ಹೋಗುತ್ತದೆ. ಮನೆಯಿಂದ ಕೈ ತೊಳೆದು ಆಪತ್ತನ್ನು ಹೊರಗಟ್ಟುವುದೇ ಅಥವಾ ಸುಮ್ಮನಿರದೆ

ಮನೆಗಾಗಿ ತನ್ನನ್ನು ಸುಟ್ಟುಕೊಳ್ಳವುದೆ, ರುಂಡದ ಜಾಗದಲ್ಲಿ ಮುಂಡವನ್ನು ಕಳೆದುಕೊಳ್ಳುವುದು ಉತ್ತಮವಾದ ಕೆಲಸ, ರುಂಡವು ಉಳಿದುಕೊಂಡರೆ ಇಂತಹ ಸಹಸ್ರಾರು ಮುಂಡಗಳು ಸಿಗುತ್ತವೆ. ಮುಘಲರಿಂದ ನಾನು ಕಠಿಣವಾದ ಸೇಡನ್ನು ತೀರಿಸಿಕೊಳ್ಳುವೆ. ಕೋಟೆಯನ್ನು ಗೆದ್ದ ಮೇಲೆ ಅವರು ನನ್ನನ್ನು ಸುಮ್ಮನೆ ಬಿಡುವವರಲ್ಲ, ಪ್ರಾಣ ಉಳಿಸಿಕೊಳ್ಳಲು ಅವರಿಗೆ ಎಂತಹ ದುರಾಸೆ ತೋರಿಸುವೆ ಎಂದರೆ ಅವರು ತಮ್ಮ ಮಾನ ಮರ್ಯಾದೆ ಎಲ್ಲವನ್ನು ಬಿಟ್ಟು ನನ್ನ ಕಾಲಿಗೆ ಬೀಳುವರು. ಶಿಖಂಡಿಯ ಹೃದಯದ ಮೇಲೆ ಬೆಂಕಿ ಬರುವುದಿಲ್ಲ ಲಕ್ಷಮಾನ ಕಳೆದು ಕೊಂಡು ಒಂದು ಜೀವ ಉಳಿಸಿಕೊಳ್ಳಬೇಕು. ಆ ಕಳ್ಳನ ಬಳಿ ಸಿರಿಸಂಪತ್ತಿನ ಯಾವುದೇ ಮೌಲ್ಯವಿರಲಿಲ್ಲ. ಪುಕ್ಕಟ್ಟಲ್ಲಿ ಎಲ್ಲವನ್ನು ಕಳೆದುಬಿಡುವನು; ಹಾಗೇ ಪಡೆದುಕೊಳ್ಳುವನು. ಅವನು ಮೊದಲೇ ಕಳ್ಳ ತನ್ನ ಸೀಮೆಯನ್ನು ಕಾಪಾಡಲು ಸಾಧ್ಯವಿರಲಿಲ್ಲ. ತನ್ನ ಹುಟ್ಟುಗುಣದ ಮೇಲೆ ಇಳಿದು ಬಂದ, ಆದರೆ ಮನೆ ಉಳಿಸಿಕೊಳ್ಳಲಿಲ್ಲ. ಆಗ ನುಣುಚಿಕೊಳ್ಳಲು ಸಂಧಿಯ ಅಲಂಕಾರ ಕೊಟ್ಟ. ತನ್ನ ಜೀವ ಉಳಿಸಿಕೊಳ್ಳಲು ಈ ಮೋಸ ಮಾಡಿದ. ಈ ರೀತಿಯಾಗಿ ಸಾಮರ್ಥ್ಯವಿಲ್ಲದೇ ಈ ತಿಕ್ಕಾಟ ಹೇಗೆ ನಡೆಯಬೇಕೆಂದು ಯೋಚಿಸಿ ಜೈಸಿಂಘ್‌ನ ಮೇಲೆ ತನ್ನ ಕಲೆಯಿಂದ ಮಾಟದ ಮಂತ್ರ ಓದಿ ಊದಿದ. ಅಂದರೆ ಇಂದು ನೀವು ನನಗೆ ಸಹಾಯ ಮಾಡಿದರೆ ನಾನು ಅಸಾಧ್ಯವಾದ ಎಂತಹ ಕೆಲಸ ಮಾಡುವೆ ಎಂದರೆ ಆ ಕೆಲಸ ಇಲ್ಲಿಯವರಿಗೂ ಯಾರೂ ಮಾಡಿಲ್ಲ, ನಿಮ್ಮಿಂದಲೇ ಈ ಲೋಕದಲ್ಲಿ ಕೊನೆಯ ದಿನದವರಿಗೆ ಹಸರಾಗಿರುವುದು. ದೆಹಲಿಯ ಸೇನೆ ಯಾವ ವೈಭವದಿಂದ ಹೊರಟಿತ್ತು, ಈ ರೀತಿಯಾಗಿ ಸಿದ್ಧತೆಯಿಂದ ಹೊರಡಿರಲಿಲ್ಲ. ನನ್ನ ಬೆನ್ನಟ್ಟಿದರೆ ಯಾವ ಮಹಾಕಾರ್ಯ ಸಾಧಿಸಿದಂತಾಯಿತು. ನನಗೆ ಸಹಾಯ ಮಾಡಿದರೆ ಒಂದು ಮಹತ್ಕಾರ್ಯ ಏನಾಗುವುದೆಂದರೆ ಇಡೀ ದಕ್ಷಿಣ ದೇಶವನ್ನೇ ಗೆದ್ದು ಕೊಡುವೆ. ಹುಲಿಯನ್ನು ಹಿಡಿಯುವ ಸಹಸ್ರಾರು ಸಾಮಾನುಗಳಿದ್ದು ಗುಳ್ಳೆ ನರಿ ಹಿಡಿಯುವುದು ವ್ಯರ್ಥ. ಅಂಗೈಯಲ್ಲಿ ಎಂತಹ ಸ್ವರ್ಗ ತೋರಿಸಿದ ಎಂದರೆ ಅವನ ಸಲಹೆ ಬಹಳ ಮನಮೋಹಕವಾಗಿ ಕಂಡು ಬಂತು. ಶಿವಾಜಿಯಿಂದ ಜೈಸಿಂಘ್ ಈ ಬಡಾಯಿ ಮಾತನ್ನು ಕೇಳಿದಾಗ ಶಾಹರೊಡನೆ ಮಾಡಿರುವ ವಾಗ್ದಾನಗಳನ್ನು ಉಲ್ಲಂಘಿಸಿ, ಆದಿಲ್ ಶಾಹರೊಡನೆ ಮಾಡಿದ ಭದ್ರವಾದ ಸಂಬಂಧದ ಸಂಧಿಯನ್ನು ಮುರಿದ. ಅವನ ಮಾತುಗಳಲ್ಲಿ ನಿಷ್ಠೆ ಸೇರಿಸಿಕೊಂಡಿತು, ಈ ಸ್ವರ್ಗದೊಡನೆ ಸೇರಿಕೊಳ್ಳಬೇಕು, ನಾನು ಇದಕ್ಕೆ ಅರ್ಹನಾಗಿದ್ದೇನೆ ಎಂದು ತಿಳಿದು ಅವನಿಗೆ ಬೆಂಬಲಿಸಿದ. ಸುಲ್ತಾನ್ ಆದಿಲ್ ಶಾಹನು ಲಕ್ಷಾಂತರ ಉಪಕಾರ ಮಾಡಿದ್ದರು. ಆದರೆ ಆಶೆಯು ಮಧ್ಯೆ ಬಂದು ಎಲ್ಲ ಉಪಕಾರಗಳನ್ನು ಮಣ್ಣಿನ ಪಾಲುಮಾಡಿತು. ಸ್ನೇಹದ ಮೇಲೆ ಅತ್ಯಾಸೆ ಆವರಿಸಿತು. ಅವನ ನಾವೆ ಮುಳುಗಿಸಬೇಕೆಂದುಕೊಂಡ. ನಿಜವಾದ ಗಂಡಿನ ಹಾಗೆ ನಿಜವನ್ನು ಬಿಟ್ಟು ಅವನು ಆಟ ಆಡಬೇಕೆಂದ. ಅಂದರೆ ಚಿಕ್ಕ ದೇಶಗಳು ಪಂದ್ಯವಾಡಬಹುದು. ಅಂದರೆ ಚಿಕ್ಕ ದೇಶದವರೆಲ್ಲ ತಿಳಿಗೇಡಿಗಳು

ಇವರ ಜೊತೆ ಹೇಗಾದರೂ ಆಟ ಆಡಬಹುದು. ಅತ್ಯಾಸೆ ಮರ್ಯಾದಸ್ತನಿಗೆ ಅವಮಾನಿತ ಮಾಡುತ್ತದೆ. ಲೋಕದವರು ಸುಳ್ಳನನ್ನು ನಂಬುವುದಿಲ್ಲ. ಅತ್ಯಾಸೆಯಿಂದ ಹೆಸರು ಹಾಗೂ ಮರ್ಯಾದೆಯ ಬರಗಾಲವಾಗುತ್ತದೆ. ಅತ್ಯಾಸೆ ಜೀವನದ ಸುಖದಲ್ಲಿ ಭೂಕಂಪ ತರುತ್ತದೆ. ಅತ್ಯಾಸೆ ಒಬ್ಬ ಸ್ವತಂತ್ರ ಗಂಡಸಿಗೂ ಗುಲಾಮ ಮಾಡುತ್ತದೆ. ಅತ್ಯಾಸೆಯಿಂದಲೇ ಲೋಕ ಹಾಗೂ ಧರ್ಮ ಹೌದು ಎನ್ನಲಾಗುತ್ತದೆ. ಅತ್ಯಾಸೆ ಅದೃಷ್ಟವನ್ನು ಕಿತ್ತುಕೊಂಡು ಹತಭಾಗಿಯಾಗಿ ಮಾಡುತ್ತದೆ. ಅತ್ಯಾಸೆ ಸಾಧುವಿಗೂ ಸಹ ನಿತ್ಯ ಅವಮಾನಿತ ಮಾಡುತ್ತದೆ. ಅತ್ಯಾಸೆ ಸ್ನೇಹಿತನ ಜೊತೆ ಪ್ರತಿಕೂಲವಾಗಿರುತ್ತದೆ. ಮುಸಲ್ಮಾನನಿಗೂ ಕಪಟ ವಿಶ್ವಾಸ ತೋರುತ್ತದೆ. ಶಿವಾಜಿ ಮುಘಲರಿಗೆ ಅನೇಕ ಸರಿಯಾದ ಕೆಲಸ ಕೊಟ್ಟಿದ್ದ. ಹೆಸರು ಹಾಗೂ ಮರ್ಯಾದೆ ತೆಗೆದು ನೋವು ಕೊಟ್ಟಿದ್ದ. ಈ ಕಡೆ ಅದೇ ನೋವಿನ ಕಲೆ ಆ ಶಾಹನ ಮಡಲಿನಿಂದ ಇಂದು ಕೇವಲ ರಕ್ತವಿಲ್ಲದೇ ಸ್ವಚ್ಛವಾಗುಂತಿರಲಿಲ್ಲ.ಅವನಂದ ಹತ್ಯೆ ದರೋಡೆಯ ದಾರಿ ಹಿಡಿದು ಡಾಂಭಿಕನು ಅತ್ಯಾಸೆ ಮೇಲೆ ಕಣ್ಣಿಟ್ಟು ಧಣಿಗಳಿಗೆ ಕೊಟ್ಟಿದ್ದ ಮಾತನ್ನು ಮುರಿದು ಶಾಹರ ಶತ್ರು ಆದ. ಇಬ್ಬರೂ ಸೇರಿ ಮಾತನ್ನು ಗುಟ್ಟಾಗಿರುವವರೆಗೂ ಯುದ್ಧ ಮಾಡಬಾರದೆಂದು ಮಾತುಕತೆ ನಡೆಯಿತು. ಇಬ್ಬರೂ ಮೋಸಗಾರರು, ಇಬ್ಬರೂ ದುಷ್ಟರೂ ನೀಚರು, ಒಬ್ಬರಿಂದ ಒಬ್ಬರು ಗುರುಶಿಷ್ಯರಾದರು. ಅದಾಗ್ಯೂ ಶಹಿನ್ಶಾಹರು ತೆರೆಯ ಮರೆಯಲ್ಲಿ ನಿತ್ಯವೂ ನಿಷ್ಠೆಯನ್ನು ಆಡಳಿತದಲ್ಲಿ ತೊಡಗಿಸಿದ್ದರು. ಅವರು ಸಂಧಿಯನ್ನು ಮುರಿಯಲಿಲ್ಲ ಅಥವಾ ಜಗಳದ ಮಾತು ಸಹ ಆಡಲಿಲ್ಲ.(೨೨೨೬-೨೨೯ಳ)

ಮಾತೇನೆಂದರೆ ಶಿವಾಜಿ ಮತ್ತು ಜೈಸಿಂಘ್ ಅಂತರಂಗದಲ್ಲಿ ಸೇರಿಕೊಂಡಿದ್ದರು ಆದರೆ ಆದಿಲ್‌ಶಾಹರು ಮತ್ತೇನೋ ತಿಳಿದು ಬೇರೆ ಸಾಧನೆಗಳನ್ನು ಮಾಡಿದರು.

ಯಾರಿಗೆ ದೊಡ್ಡ ಸತ್ಯ(ಅಲ್ಲಾಹನು)ದೊಡ್ಡ ದಂಡನಾಯಕ ಮಾಡಿದನೋ ಅದರಂತೆ ಅವನ ವಿವೇಕವನ್ನು ಹೆಚ್ಚಿಸುತ್ತಾನೆ. ಸಭೆಯ ದೊಡ್ಡ ಶಾಹನೆಂದು ತಿಳಿದು ಬಲು ಪ್ರೀತಿ ವಿಶ್ವಾಸದಿಂದ ಹೃದಯಗಳನ್ನು ಸಮರ್ಪಿಸಿದರು. ಶಿವಾಜಿ ಮತ್ತು ಜೈಸಿಂಘ್ ಇಬ್ಬರೂ ಒಂದಾಗಿ ನಿಸ್ಸಂದೇಹ ಒಬ್ಬರ ಗುರು ಮತ್ತೊಬ್ಬನಾಗಿ ಮಾಡಬಾರದ ಕೆಲಸಗಳನ್ನು ಮಾಡಲಾರಂಭಿಸಿದರು. ಹೀಗೆ ವಚನಭ್ರಷ್ಟತೆ ಮಾಡಿ ದ್ರೋಹಬಗೆದರು. ಆಗಲೇ ಶಾಹ ಘಾಝಿರವರು ತನ್ನ ಮನಸ್ಸಿನಲ್ಲಿ ಇದರ ಬಗ್ಗೆ ತಿಳಿದು. ಇಬ್ಬರು ಬಡಪಾಯಿಗಳು ಸೇರಿಕೊಂಡಿದ್ದಾರೆಂದು ತಿಳಿದಿದ್ದರು. ಆದರೆ ಇವರಿಬ್ಬರೂ ಐಶ-ಆರಾಮದಲ್ಲಿ ಬಂದು ಗುಮಾನಿ ಹಾಗೂ ಕಳವಳ ಕೊಟ್ಟರು. ಕೆಟ್ಟ ಕನಸನ್ನು ನೋಡಿ ಹೇಗೆ ನಿದ್ರೆ ಮಾಯವಾಗುತ್ತದೆಯೋ ಹಾಗೆ ಅವರ ಕೃಪೆಯನ್ನು ಕ್ರೋಧ ಆವರಿಸಿತು ಹಾಗೂ ಶಾಹರ ಮನಸ್ಸು ಸಮರವಾಡಬೇಕೆಂದಿತು. ಅಂದರೆ ಈ ಶಾಹನಿಗೆ ಸಿಕಂದರ್ ಎಂದು ಹೇಳಬಹುದು ಇವನು ಈಗಿನ ಕಾಲದ ಅರಿಸ್ಟಾಟಲ್,

ಮಾರ್ಗದರ್ಶಕ ನಿಸ್ಸಂದೇಹವಾಗಿ ಅವನಿಗೆ ಖಾಸಗಿ ಏಕಾಂತದಲ್ಲಿ ಕರೆದು ಬಲು ನಿಷ್ಠೆಯಿಂದ ಈ ಶತ್ರು ನೆಪಹೂಡುವವನಾಗಿ ಕಾಣುತ್ತಾನೆ (ನೆಪ ಮಾಡುತ್ತಿದ್ದಾನೆ)ಯಾವುದೇ ಮೋಸದಿಂದಾಗಲಿ ಅತಿದೊಡ್ಡ ಆಟ ಗೆಲ್ಲಬೇಕೆಂದಿದ್ದಾನೆ, ಪ್ರಜ್ಞಾವಂತನ ದೃಷ್ಟಿ ಎಲ್ಲಿ ಮೋಸಹೋಯಿತು. ಎಚ್ಚರತಪ್ಪಿದ ಕತ್ತಲೆ ಮುಂದೆ ಬಂದಿತು, ಇಂದಿನವರೆಗೂ ನಾನು ಎಲ್ಲರನ್ನೂ ಪರೀಕ್ಷಿಸುತ್ತಿದ್ದೆ, ಹೇಳುವುದು ಒಂದು ಮಾಡುವುದು ಒಂದು. ಮೋಸಗಾರನನ್ನು ನಾವು ನಂಬಿದೆವು ನಮ್ಮ ಜಾಗದಲ್ಲಿ ಸರಿಯಾಗಿ ತಯಾರಾಗಿರ ಬೇಕು. ಸಂತೋಷದಿಂದ ಸ್ವಲ್ಪ ಮೈದಾನದಲ್ಲಿ ಬರಲಿ ಅವನ ಮುಂಡ ನನ್ನ ಖಡ್ಗಕ್ಕೆ ಚೌಗಾನಿ (ಪೋಲೋ ಆಟ) ಚೆಂಡಂತೆ ಆಡುವೆ. ಶತ್ರುಗಳಿಂದ ಯಾವ ಕಲೆ ಕಲಿತು ಕುತಂತ್ರ ಮಾಡುತ್ತಿರುವನೋ ಬಂದು ಆಟವಾಡಲಿ, ಜೀವ ಸೋತು ಹೋಗಲಿ. ಸಾಮಿರಿ ಏನಾದರೂ ಮಹಾ ಜಾದೂಗಾರನಾಗಿದ್ದರೆ ಮೂಸ ಕಲೀಮುಲ್ಲಾಃ ಎಲ್ಲಿ ಇರುವರೋ ಅಲ್ಲಿ ಆಟ ಕಾಣ ತೊಡಗುತ್ತದೆ. ಇಂದು ಈ ಮಾತನ್ನು ತಿಳಿದು ನಾವು ಸುಮ್ಮನೆ ಕುಳಿತುಕೊಳ್ಳ ಬಾರದು, ಕೆಲಸ ಬಿದ್ದಾಗ ಅದರ ಚಿಕಿತ್ಸೆ ಮಾಡಲೇ ಬೇಕಾಗುತ್ತದೆ. ಹೊರಗಿರುವ ಎಲ್ಲಾ ಸೂಬೆದಾರರಿಗೆ ಆಜ್ಞೆ ಕೊಟ್ಟು ಹಿಂದಿಕ್ಕೆ ಕರಿಸಿಕೊಳ್ಳಿ. ಜಮೀನದಾರರು ಹಾಗೂ ಪಾಳೇಗಾರರಿಗೆ ಒಂದು ಕೋಟೆಯನ್ನು ಘೆರಾವು ಮಾಡಲು ಬೇಕಾಗಿರುವ ಸೈನ್ಯ ಹಾಗೂ ಮತ್ತಿತರ ಸಾಮಾನುಗಳನ್ನು ಒದಿಗಸುವಂತೆ ಹೇಳಿ, ಮತ್ತೆ ಬೇರೆ ತಂಡ ಯುದ್ಧಕ್ಕೆ ತಯಾರಾಗಿರಲಿ. ಎಲ್ಲೆಲ್ಲಿ ಏನೇನು ನಡೆಯುತ್ತಿದೆಂದು ಇಡೀ ಕೋಟೆ ಮೇಲೆ ಕಣ್ಣಿಟ್ಟಿರಿ. ನಮಗೆ ದೇವರು ಬೇಟೆಯನ್ನು ಕಳುಹಿಸಿಕೊಡುವನು, ಅದನ್ನು ಕೈಯಿಂದ ಕಳೆದುಕೊಳ್ಳಲು ಸರಿಯಲ್ಲ. ಅದು ಒಳ್ಳೆ ಕಾರ್ಯನೂ ಅಲ್ಲ. ಅದು ಒಳ್ಳೆಯದು ಆಗಲ್ಲ. ಅವರ ಮೋಸದ ಹುಟ್ಟನ್ನು ಇಲ್ಲದಂತೆ ಮಾಡಿ, ಕಾಗೆಗಳನ್ನು ಕಟ್ಟಿ ಮರಭೂಮಿ ಕಡೆ ತೆಗೆದುಕೊಂಡು ಬನ್ನಿ. ಅವಿವೇಕಿತನದ ಗಂಟು ನಮಗೆ ಗಮಾರರೆಂದು ತಿಳಿದಿರುವರು. ಒಂದು ಗುಂಡಿನ ಲಾಡು ಕೋಟೆಮೇಲೆ ಬಿದ್ದರೆ ಎಲ್ಲ ಕೋಟೆವಾಸಿಯರು ಬೆಚ್ಚಿ ಬೀಳುವರು. ಬಿಜಾಪುರದ ಹೆಸರು ಕೇಳಿದ ತಕ್ಷಣ ಸಮುದ್ರದಲ್ಲಿ ಲಂಕೆಯ ಕಾಲು ಇಲ್ಲದಂತಾಗುತ್ತದೆ. ಕೋಟೆಯ ಎಲ್ಲ ಗುಣಗಳನ್ನು ವಿವರಿಸಲು ಸಾಧ್ಯವಿಲ್ಲ, ಎಷ್ಟು ಸಾಧ್ಯವಾಗುತ್ತದೆಯೋ ಸಂಕ್ಷಿಪ್ತವಾಗಿ ಹೇಳುವೆ. (೨೯೫೫-೩೦೭೦)

ನಗರದ ಗುಣ ನೋಡಿ ಕೋಟೆ ಮೇಲೆ ಧಾವಿಸಿದಾಗ ಮುಂದಿರುವರು ಅದರ ಆಶ್ರಯ ಪಡೆದು ಮೈದಾನದಿಂದ ಓಡಿಹೋದರು

ಸಾವಿರಾರು ಕಣ್ಣುಳ್ಳ ಆಕಾಶ ಇಂತಹ ವಿಶಾಲವಾದ ಕೋಟೆ ನೋಡಿರಲಾರೆ, ಶಹಬಾಷ್! ಬಿಜಾಪುರದ ಭವ್ಯವಾದ ಕೋಟೆ ಅದರ ಪ್ರತಿಯೊಂದು ಬುರುಜು ಸೂರ್ಯನ ಮಹನೀಯತೆ ಮನೆ, ಎತ್ತರದಲ್ಲಿ ಅದು ಶನಿಗ್ರಹವನ್ನು ಮುಟ್ಟಿತ್ತು. ಏಳನೇ ಆಕಾಶಕ್ಕೆ ತಗುಲಿತ್ತಿತ್ತು (ಹಿಂದಿನ ಕಾಲದಲ್ಲಿ ಶನಿಗ್ರಹ ಅತಿ ಎತ್ತರವಾದ ಗ್ರಹ

ಎಂದು ಭಾವಿಸಲಾಗುತ್ತಿತ್ತು) ಅದರ ಶಿಖರದ ಕಮಾನುಗಳು ಏಳನೇ ಆಕಾಶದ ಕೈ ಮುಟ್ಟುತ್ತಿದ್ದವು. ಬಿಸಿಲು ತಾಗಿ ಆಕಾಶ ವ್ಯಾಕುಲಗೊಂಡಾಗ ಅದರ ಶಿಖೆಗಳು ಅದಕ್ಕೆ ಅರಸರ ಕೊಡೆ ಆಗುತ್ತದೆ. ಗಾಳಿ ಎಂದೂ ಸಹ ಆ ಎತ್ತರವಾದ ಗೋಡೆ ಹತ್ತಲಾರವು. ಹೊಗೆ ಹಗ್ಗದ ಶಿಖೆಗಳ ಮೇಲೆ ಏಣಿ ಎಸೆದು ಆ ಎತ್ತರವಾದ ಕೋಟೆ ಬದಿ ಹತ್ತಲಾರದು. ಚಂದ್ರ ಬದಿಯ ಆಶ್ರಯ ಪಡೆದು ಮೂಡಿದರೂ ಸಹ ಬೆಳಗಾಗುವವರೆಗೂ ಆ ಕೋಟೆಯ ಗೋಡೆಯನ್ನು ಹತ್ತಲಾರದು. ಅದರ ಎತ್ತರವಾದ ಬುರುಜುಗಳು ಖಾಫ್ ಬೆಟ್ಟಕ್ಕೂ ಸುಳಿ ಇಲ್ಲದಂತೆ ಮಾಡುವವು. ಪ್ರತಿಯೊಂದು ತೋಪು ಹೆಬ್ಬಾವು ಜ್ವಾಲಮುಖಿ, ಮೋಡದ ತುಂಡು ಶಿಖೆಯಂತೆ ಕಾಣುವುದು. ಗುಡುಗುವ ಮಿಂಚು, ಸಣ್ಣ ತೋಪುಗಳು ಯಾವುದೇ ಶಿಖೆ ಬೆಟ್ಟದಿಂದ ಕಡಿಮೆ ಇಲ್ಲ. ಸಣ್ಣ ತೋಮ ವಿಷಭರಿತ ಹಾವುಗಳು. ಶನಿಗ್ರಹ ತೋಪಿನ ಚಕ್ರವನ್ನು ನೋಡಿ, ಹಳೆ ಕುಂಟ ನಡಿಯುವುದರಿಂದ ದಣಿದು ಸಾಕಾಗಿರುವ ಹಾಗೆ ಕಾಣುತ್ತಾನೆ. ಮಹನೀಯತೆಯಲ್ಲಿ ಆಕಾಶದ ಚಕ್ರ ವರ್ತುಲದ ಕೇಂದ್ರ ಬಿಂದುವಿನ ಹಾಗೆ ಕಾಣುವುದು. ಕಂದಕ ನೀರು ಹಾಗೂ ಭೂಮಿಯ ಗೋಪುರಗಳಂತೆ ಕಾಣುವವು. ಸಿಕಂದರಿನ ತೆಳ್ಳನೆಯ ಬಾವುಟಗಳಂತೆ ಕಾಣುವುದು. ದುರಾದೃಷ್ಟ ಎದುರಾಳಿಗಳು ಹತ್ಯಾಕಾಂಡದಲ್ಲಿ ಸಿಕ್ಕು ಏನಾದರೂ ಈ ಕಡೆ ಬಂದರೇ ಅನಾಹುತವಾದೀತು. ಪ್ರತಿಯೊಂದು ಧ್ವಜ ಝೂಡಿಸುವ ಕೈ ಹಾಗೆ ಕಾಣುತ್ತದೆ. ಅದು ಸನ್ನೆ ಮಾಡಿ ನೀವು ಅಲ್ಲೇ ಇದ್ದರೆ ವಾಸಿ, ಏನಾದರೂ ಈ ಕಡೆ ಬಂದರೆ ಜೀವಕ್ಕೆ ಅಪಾಯ ಎಂದು ಹೇಳುತ್ತಿದೆ. ಯಾವ ಪರ್ಯಾಲೋಚನೆಯಿಂದ ಮೋಸವನ್ನು ನೋಡುತ್ತಿದ್ದೀರಿ ಅದಂತೂ ಯಾಜೂಜಿನ ಗೋಡೆ, ಶತ್ರುಗಳು ಲಕ್ಷ ಪ್ರಯತ್ನಿಸಿ, ಪ್ರಳಯದವರೆಗೂ ನೆಕ್ಕುತ್ತಿದ್ದರೂ ನೆಕ್ಕುತ್ತಾ ಬಿದ್ದಿರಬೇಕು ಅಷ್ಟೇ. ಶತ್ರು ಇದರ ಬಾಗಿಲುಗಳನ್ನು ನೋಡಿ ಆಶ್ಚರ್ಯ ಪಡುವನು. ಅವುಗಳು ಅವನಿಗೆ ಮೃತ್ಯು ಮೊಸಳೆಯಂತೆ ಕಾಣುತ್ತದೆ. ಮೃತ್ಯು ಎದುರಾಳಿಯನ್ನು ಮುಂದೆ ತಂದರೆ ಅವು ಸಂತೋಷದಿಂದ ಗುಲ್ಲೆಬ್ಬಿಸಿ ಚಪ್ಪಾಳೆ ತಟ್ಟುತ್ತದೆ. ಒಂದೊಂದು ಬಾಗಿಲಿನ ಮುಂದೆ ಒಂದೊಂದು ಪಟ್ಟಣ, ತೋಟ ಹಾಗೂ ಗಸ್ತು ಇರುವುದು. ಆದರೆ ಅಷ್ಟ ಸ್ವರ್ಗಗಳಲ್ಲೂ ಧೂಳು ಹಬ್ಬುತ್ತದೆ. ಅಲ್ಲಲ್ಲಿ ಎಲ್ಲ ಜಾಗದಲ್ಲೂ ಬಣ್ಣದ ರಸಭರಿತ ತೋಟಗಳು ಹಾಗೂ ಹಸಿರು ಉದ್ಯಾನಗಳು ಹಾಸಿವೆ. ಪೃಥ್ವಿ ನಿತ್ಯ ಹೊಸ ವಸಂತದ ಉಡುಪನ್ನು ಧರಿಸುತ್ತದೆ. ಪ್ರತಿಯೊಂದು ನೀರಿನ ಹೌದು ಹೊಳಯುವ ಕನ್ನಡಿಯಾಗಿದೆ. ಪ್ರತಿಯೊಂದು ಕೊಳ ದೊಡ್ಡದಾಗಿದೆ ಹಾಗೂ ನೀರಿಂದ ತುಂಬಿ ತುಳುಕಾಡುತ್ತಿದೆ, ನದಿಯ ನೀರಿನ ಖಜಾಂಚಿಯಾಗಿ ನಿಂತಿದೆ. ಆಕಾಶ ಏನಾದರೂ ಬಾಯಾರಿಕೆಯಿಂದ ಒಣಗಿದರೆ ಈ ನೀರಿನಲ್ಲಿ ಮಂಡಿಯೂರಿ ಮುಖವನ್ನು ಮುಳುಗಿಸುವನು. ಪ್ರತಿಯೊಂದು ಬನದಲ್ಲಿರುವ ಉದ್ಯಾನವೂ ಅಪ್ಸರೆಯರ ಪ್ರವಾಸಿ ಮಂದಿರವಾಗಿದೆ.ಇಲ್ಲಿ ವಾಯುವಿಹಾರ ಮಾಡಲು ಪ್ರಿಯ, ಅತ್ಯಂತ ಸೌಂದರ್ಯಉಳ್ಳ ಘಿಲ್ಮಾನರು (ಸ್ವರ್ಗನಿವಾಸಿಗಳ ಸೇವೆಗೆ ನಿಯುಕ್ತರಾಗಿರುವ ಎಳೆವಯಸ್ಸಿನ ಬಾಲಕರು)

ಹಾಗೂ ಅಪ್ಸರೆಯರು ಬರುವರು. ಒಂದುಪಕ್ಷ ರಿಝ್ವಾನ್(ಸ್ವರ್ಗದ ದೇವಚರ) ಈ ಪ್ರಪಂಚ ನೋಡಲು ಬಂದರೆ ಇದೇ ಉದ್ಯಾನಗಳಲ್ಲಿ ತಂಗುವನು. ಕಟ್ಟಡದ ವಿಶೇಷತೆ ಅಂತೂ ಹೇಳಲು ಸಾಧ್ಯವಿಲ್ಲ. ಇದನ್ನು ಪ್ರಪಂಚದ ಯಾವುದೇ ವಸ್ತುವಿನಿಂದ ಹೋಲಿಸಲು ಸಾಧ್ಯವಿಲ್ಲ. ಮುಘಲ್ ಈ ದೇಶವನ್ನು ನಾಶಮಾಡಿ ನಿರ್ಜನ ಪ್ರದೇಶ ಮಾಡಿದ. ತನ್ನ ದೇಶವನ್ನು ಬಿಟ್ಟು ಪರದೇಶದಲ್ಲಿ ನೆಲೆಸಿದ. ಅದು ಅನೇಕ ದೇಶಗಳನ್ನು ಮುರಿದು ಇದೊಂದು ಪೂರ್ಣದೇಶವಾಯಿತು. ಅವರೆಲ್ಲರಿಗೆ ಆಶ್ರಯ ಪಡೆಯಲು ಇದು ಸಾಕಾಯಿತು. ಪ್ರತಿಯೊಂದು ಪುರದ ಎಂತಹ ವಸಂತವಿತ್ತೆಂದರೆ ಚಿಂತನೆಯೂ ಸಹ ಅದರ ಜೊತೆಯಲ್ಲಿ ಹಾರಿ ನಡೆಯುತ್ತಿತ್ತು. ನಗರ ಒಂದು ಅಮೂಲ್ಯವಾದ ಪದಕ, ಇಡೀ ಕೋಟೆಯಗೋಡೆಯ ಕೊರಳಲಲ್ಲಿ ರತ್ನಗಳು ತೊಡಿಸದಂತಾಗಿದೆ. ಈ ಮಧ್ಯದಲ್ಲಿ ಈ ನಗರ ಪದಕದಂತೆ ಕಾಣುತ್ತದೆ. ಈ ಯುಗದ ಶಹಿನ್ಷಾಹರ ರಾಜಧಾನಿ ಇದು, ಇದು ಇಡೀ ಪ್ರಪಂಚದ ಬಡವರ ಆಶ್ರಯ. ನೋವು ಅನುಭವಿಸಿದವನು ಈ ನಗರವನ್ನು ದಿಟ್ಟಿಸಿ ನೋಡಿ ಬರುವನೋ ಅವನು ಈ ಬಾದಶಾಹ ಹಾಗೂ ಈ ನಗರದಿಂದ ಸುಖ ಅನುಭವಿಸುವನು. ಮಹನೀಯರು ಈ ಭೂಮಿಯನ್ನು ಸಮೃದ್ಧಿಯಿಂದ ತುಂಬಿದಂತೆ ತಿಳಿದು ಹಸನ್ ಹುಸೈನ್ (ಪ್ರವಾದಿಯರ ಮೊಮ್ಮಕಳು)ರವರ ಕಾನೂನನ್ನು ಪಾಲಿಸುತ್ತಿದ್ದಾರೆ. ಕುರ್‌ಆನಿನ ಸೂಕ್ತಗಳು ಹಾಗೂ ಅಧ್ಯಾಯಗಳ ಗಣನೆಯ ಪ್ರಕಾರ ಇದರ ಶಿಖೆ ಹಾಗೂ ಬುರ್ಜಿಗಳ ಮಿತವನ್ನು ನಿಶ್ಚಯಿಸಲಾಗಿದೆ. ಈ ಅಂಕಿಗಳ ಸುದೈವದಿಂದ ಸದೈವ, ದೇವರ ನುಡಿಯಿಂದ ಆಪತ್ತುಗಳಿಂದ ಸುರಕ್ಷಿತವಾಗಿದೆ. ಆಕಾಶ, ಶಾಹನ ವಿಜಯದ ಜಪ ಮಾಡಲು ಈ ಕೋಟೆಯ ಸುತ್ತಲೂ ತನ್ನ ಕ್ಷೇತ್ರಮಾಡಿಕೊಂಡಿದೆ. ಆದಿಯಿಂದ ಅನಂತದವರೆಗೂ ಲಕ್ಷಾಂತರ ಮಾಟ ಮಂತ್ರ ಮಾಡಿದರೂ ಸಹ ಯಾವುದೇ ಭೂತಪುತ್ರ ಇದರಲ್ಲಿ ಬಾಧೆಯುಂಟು ಮಾಡಲು ಸಾಧ್ಯವಿಲ್ಲ. ಈ ಕೋಟೆಯನ್ನು ನೋಡಿ ಹೆಸರಾಂತ ಬಾದಶಾಹನು ಹೇಳಿದಂತೆ ಆನೆ ಮೇಲೆ ಸವಾರಿ ಮಾಡಲು ಯಾವುದೇ ನಾಯಿಯಿಂದ ಹೆದರಬೇಕಾದದ್ದಿಲ್ಲ. ಈ ಕೋಟೆಯನ್ನು ಲಡಿಗಳಿಂದ ಕಟ್ಟಿ ಚಂದ್ರನ ಮೇಲೆ ಸುಣ್ಣ ಹೊಡೆಯಬಹುದು.ಯಾರಾದರೂ ಧೈರ್ಯದಿಂದ ಕೋಟೆಯನ್ನು ಹತ್ತಿ ತನ್ನೊಡನೆ ಮಿದುಳನ್ನು ತೆಗೆದುಕೊಂಡು ಬಂದರೆ ಅವನ ಮಿದುಳಿನ ಹನಿ/ಕಲೆ ಸಿಂಪಡಿಸಿ ಹೋಗುವನು. ಆದರೆ ಬಾದಶಾಹರು ತುಂಬ ಚಿಂತನೆ ಮಾಡಿ ತನ್ನ ಅಭಿಪ್ರಾಯ ಹೀಗೆ ವ್ಯಕ್ತಪಡಿಸಿದರು ಅಂದರೆ ಈ ಪಟ್ಟಣವನ್ನು ತುಂಬಿ ತುಳುಕುವ ಸ್ಥಿತಿಯಲ್ಲಿ ಬಿಡುವುದು ಬೇಡ ಇದನ್ನು ಬಹು ಬೇಗನೆ ಖಾಲಿ ಮಾಡಿ ನಿರ್ಜನ ಸ್ಥಾನ ಮಾಡಬೇಕು, ಏಕೆಂದರೆ ಪಾಪಿಗಳಿಗೆ ಇದು ಸ್ವರ್ಗವಾಗಬಾರದು. ಆಗ ಅವರು ಒಬ್ಬ ಸುಪ್ರಸಿದ್ಧ ವ್ಯಕ್ತಿಯನ್ನು ಬರಮಾಡಿಕೊಂಡರು. ಅವನು ಅನೇಕ ದೊಡ್ಡ ಅತ್ಯುತ್ತಮ ಕೆಲಸಗಳನ್ನು ಸಾಧಿಸಿದ್ದ. ಆ ಹೆಸರಾಂತ ವ್ಯಕ್ತಿ ಎಂದರೆ ಮಿರ್ಝಾ ಯೂಸುಫ್ ಶಹಿನ್ಷಾಹನ ಗೌರಾನ್ವಿತ ಹಾಗೂ ಆಶ್ರಯದಲ್ಲೇ ಬೆಳದವ. ಶಾಹನ

ಹಿತಚಿಂತನೆಯಲ್ಲಿ ಸದಾ ತೊಡಗಿದವನು, ಬಾದಶಾಹನ ವಿಶ್ವಾಸಿ. ಕೈಯಲ್ಲಿ ಅಧಿಕಾರದ ಬೆತ್ತ ತೆಗೆದುಕೊಂಡು ನಿಂತರೆ ರುಸ್ತುಂ ತನ್ನ ಕೈಯಲ್ಲಿ ಭಲ್ಲೆಯನ್ನು ತೆಗೆದುಕೊಂಡು ನಿಂತಿರುವವನ ಹಾಗೆ ಕಾಣುವನು. ಯೋಗ್ಯತೆಯಲ್ಲಿ ಪ್ರಪಂಚದ ಮಹನೀಯರ ಅಸ್ತಿತ್ವ ತುಂಬಿರುವನು, ಬುದ್ಧಿವಂತಿಕೆಯಲ್ಲಿ ಆ ಯುಗದ ಪರಿಪೂರ್ಣ ಯುಕ್ತಿಜ್ಞ, ಬಾದಶಾಹರ ಸೂಕ್ಷ್ಮ ಮನೋಭಾವನೆ ತಿಳಿದು ನಡೆಯುವನು. ಸೇವೆಯ ಕಲೆಯನ್ನು ರೂಢಿಗೆ ತರುವವ ಸ್ವಥಃ ಕಾರವಾನ ಹಾಗೂ ಮುಂದಾಳಿಕೆ ವಹಿಸಿಕೊಳ್ಳವವನು. ಶಹಿನ್ಷಾಹರು ಅವನನ್ನು ಮೀರ್ಝೂಯಿ ಎಂದು ಕರೆಯುವರು. ಶಾಹರು ಅವನಿಗೆ ಕರೆದು 'ಚೆನ್ನಾಗಿರುವ ಎಲ್ಲ ವಸ್ತುಗಳನ್ನು ಮುರಿದು ಶೌರ್ಯ ತೋರು, ನೀರನ್ನು ಹರಿಸಿ ಎಲ್ಲ ತೋಟಗಳನ್ನು ಮೈದಾನ ಮಾಡು, ನಮ್ಮ ನಾಡು ಹಸಿದ ಗೂಬೆಗೆ ಕೆಟ್ಟದ್ದಾಗಿರಬೇಕು. ಬಿಸಿಲುಗುದುರೆ ಬಿಟ್ಟರೆ ನೀರಿನ ಮೇಲೆ ಬರೆದಚಿತ್ರವೂ ಇರಕೂಡದು ಅವರು ಇಲ್ಲಿ ಬಂದು ತಂಗಬಾರದು. ಅವರು ನಿಜವಾಗಲೂ ಗಂಡಸರಾಗಿದ್ದರೆ ಶೀಘ್ರವಾಗಿ ಬಂದು ಎದುರಿಸಲಿ. ಶ್ರೇಷ್ಠ ಅಲ್ಲಾಹರು ನಮಗೆ ಅರಸುತನ ಮಾಡಲು ಪ್ರಪಂಚವನ್ನು ಸ್ನೇಹಿತನ ಹರಿವಾಣ ಮಾಡಿರುವನು. ಯಾರು ಇದನ್ನು ದಿಟ್ಟಿಸಿ, ಇಲ್ಲಿ ಅತಿಥಿಯಾಗಿ ಬರುವನೋ ಅವನಿಗೆ ನಾವು ನಿಮ್ಮ ಆತಿಥ್ಯವನ್ನು ಸ್ವೀಕರಿಸುವ ಯೋಗ್ಯತೆ ಪಡೆದಿಲ್ಲ ಎಂದು ಹೇಳುವೆವು. ಆದರೂ ಸಹ ಅಗಣಿತ ಪಾತ್ರೆಗಳನ್ನು(ಫಿರಂಗಿಗಳನ್ನು ತಯಾರಿಡಿ) ತುಂಬಿಡಿ, ಎಷ್ಟೊಂದು ಅಂದರೆ ಪ್ರತಿಯೊಬ್ಬನ ಬಾಯಿಗೆ ಸಹಸ್ರಾರು ತುತ್ತುಗಳು ಲಭಿಸಬೇಕು.' ಎಂದು ಶಾಹರು ಹೇಳಿದಾಗ ಮೀರ್ಝೂಯಿ ಶಾಹರ ಆಜ್ಞೆಯನ್ನು ಪಾಲಿಸಲು ಸಿದ್ಧನಾದ, ಅಗಣಿತ ವ್ಯಕ್ತಿಗಳನ್ನು ಜೊತೆ ಮಾಡಿಕೊಂಡು ಪ್ರತಿಯೊಂದು ಕೆರೆಕಟ್ಟೆಗಳನ್ನು ಹೊಡೆದುಹಾಕಿ ನಿರ್ಮಲ ಮೈದಾನ ಮಾಡಿದ. ಅನೇಕ ಹೊಂಡಗಳನ್ನು ಹೊಡೆದು ನೀರು ಖಾಲಿ ಮಾಡಿದ. ಈ ನೀರು ನದಿಗಳ ಹಾಗೆ ಹರಿದು ಹೋಗಿ ಸಮುದ್ರಗಳನ್ನು ದಾಟಿ ಆಕಾಶದವರೆಗೂ ತುಂಬಿಕೊಂಡಿತು. ಈ ಹರಿಯುತ್ತಿದ್ದ ನೀರಿನ ಆಪತ್ತಿನಂದ ಪೃಥ್ವಿ ನೀರಿನ ಕೊಳವಾಗಿ, ಆಕಾಶ ನೀರಿನ ಪಾಚಿ ಆಯಿತು. ಪ್ರತಿಯೊಂದು ಬಾವಿಯಲ್ಲಿ ಬಾಧೆ ಉಂಟುಮಾಡುವಂತಹ ವಿಷಬೆರಿಸಿ ವಿಷದ ಲೋಟ ತುಂಬಿಟ್ಟ. ಭೂಮಿ ಮೇಲಿದ್ದ ಅನೇಕ ನೆರಳು ಕೊಡುವಂತಹ ಮರಗಳನ್ನು ಕಿತ್ತು ಎಸೆದ. ಅನೇಕ ಹಚ್ಚು ಹಸಿರು ತಾಜಾ ತೋಟಗಳೆಲ್ಲ ನಾಶವಾದವು. ಅದರ ಹೂಗಳು ಆಕಾಶದ ಕಳಂಕ ಆದವು. ಹಕ್ಕಿಗಳಿಗೆ ಯಾವುದೇ ಬನ ತೋಟ ಉಳಿಯಲಿಲ್ಲ. ದೇಶದಲ್ಲಿ ಭೂಚರರಿಗೆ ಎಲ್ಲೂ ಗೋಮಾಳಗಳು ಉಳಿಯಲಿಲ್ಲ. ಎಲ್ಲಿ ಸೂರ್ಯ ನಿಲ್ಲುವನೋ ಅಲ್ಲಿ ಬಿಸಿಲೇ ಬಿಸಲಾಯಿತು, ನೀರಿನ ಬದಲು ಮರೀಚಿ ಹರಿಯಲಾರಂಭಿಸಿತು. ಈ ರೀತಿಯಾಗಿ ಪ್ರಳಯದ ಕಹಳೆ ಊದಿದ ಹಾಗೆ ನಿರ್ದೋಷಿ ನಾಶವಾದವು. ಕೋಟೆ ಮೇಲೆ ನಿಂತು ಕಣ್ಣುಹಾಯಿಸಿದರೆ ಇಡೀ ಭೂಮಿ ಅಂಗೈ ಆದಂತೆ ತಿಳಿಯುತ್ತಿತ್ತು. ಒಂದು ಅಂಡಾಕಾರದ ಗುಂಡನ್ನು ಒಂದು ಕಡೆ ಇಟ್ಟು ಸ್ವಲ್ಪ ಉರುಳಿಸಿದರೆ ಅದು ಆಕಾಶದ

ಕೊನೆ ತಲಪುವರಿಗೆ ಎಲ್ಲೂ ನಿಲ್ಲದೇ ಉರುಳಿ ಹೋಗುತ್ತದೆ. ಎಲ್ಲ ಕಡೆ ಖುಷ್ಕಿ ಮರಳುಗಾಡಂತೆ ಎಲ್ಲಿಯೂ ಒಂದು ಮರವೂ ಇಲ್ಲ. ನಗರದ ಹೊರಗಿನ ಭೂಮಿ ಹೀಗಾಯಿತು. ಅದಾಗ್ಯೂ ಕೋಟೆ ಹೊರಗೆ ನರಕವಾದರೂ ಕೋಟೆಯೊಳಗೆ ನಿತ್ಯವೂ ಸ್ವರ್ಗ, ಇಲ್ಲಿಯ ನೆಲ ಅತ್ಯುತ್ತಮ ದರ್ಶನದಿಂದ ಉಜ್ವಲ ತೋಟದಂತೆ ಕಾಣುತ್ತದೆ. ಇಲ್ಲಿಯ ಭವನ/ಮಹಲು/ಅರಮನೆಗಳಲ್ಲಿ ಅನೇಕ ಮಂದಿ ಪ್ರಿಯರು ಅಪ್ಸರೆಯಂತಿದ್ದಾರೆ. ಹೌದು ಕೌಸರಿನ ಚಿಲುಮೆಯ ನೀರಿಂದ ತುಂಬಿದೆ. ಪ್ರತಿ ಹೆಜ್ಜೆಗೂ ದಜ್ಲ (ಇರಾಖಿನಲ್ಲಿ ಹರಿಯುವ ಟೈಗ್ರಿಸ್ ನದಿ) ಮತ್ತು ನೈಲ ನದಿಗಳು ಹರಿಯುತ್ತಿವೆ. ಅಗಣಿತ ಮರಗಳಿಂದ ಖಾಸ ಉದ್ಯಾನಗಳು ತುಂಬಿವೆ. ಇವುಗಳನ್ನು ಚಿತ್ರಕಾರ ಕತ್ತರಿಸಿ ಇನ್ನಷ್ಟು ಅಲಂಕರಿಸಿದಂತೆ ಕಾಣುತ್ತವೆ. ಈ ಹೂಬನವನ್ನು ದೂರದರ್ಶಕದಿಂದ ನೋಡಿದರೆ ಭೂಮಿ ನೀಲಕ (ಉತ್ಕೃಷ್ಟ ಬೆಲೆಬಾಳುವ) ಬಟ್ಟೆಯನ್ನು ಹೊದಿಸಿ ಕುಳಿತಂತೆ ಕಾಣುತ್ತದೆ. ಮುಂಜಾನೆ ಪ್ರತಿಯೊಂದು ಪಾತಿಯು ಉತ್ತಮ ಬಣ್ಣಗಳಿಂದ ತುಂಬಿದ ಬಿಂದುಗಳನ್ನು ನೋಡಿ ಮಾನಿಯ (ಸಮಕಾಲೀನ ಶ್ರೇಷ್ಠ ಚಿತ್ರ ಕಲಾವಿದ) ಚಿತ್ರಗಳ ಪುಸ್ತಕದ ಹಾಳೆಗಳು ನಾಚುತ್ತಿವೆ. ಇದರ ಶೀತಲ ಗಾಳಿ ರೋಗದ ಹೃದಯಕ್ಕೆ ಔಷಧಿ, ಈ ಗಾಳಿ ಆತ್ಮಕ್ಕೂ ತಾಜಾ ಮಾಡುತ್ತದೆ. ಇಲ್ಲಿಯ ಕಸ್ತೂರಿಯ ಸುವಾಸನೆಯುಳ್ಳ ಹುಲ್ಲನ್ನು ಖತನ್ (ಮಧ್ಯೇಶಿಯಾದ ಒಂದು ಜಾಗ) ಜಿಂಕೆಗಳು ಯಾವುದೇ ಸಂಕೋಚವಿಲ್ಲದೇ ಮೇಯಬಹುದು. ಭೂಮಿ ತನ್ನ ಮೋಹವನ್ನು ವ್ಯಕ್ತಪಡಿಸಲು ಹಸಿರು ಹುಲ್ಲಿನ ಉಡುಪನ್ನು ಧರಿಸುತ್ತದೆ. ಮುಂಜಾನೆಯ ತಂಗಾಳಿಯ ಬಾಚಣಿಕೆಯಿಂದ ಹುಲ್ಲಿನ ಪ್ರತಿಯೊಂದು ಕೂದಲನ್ನು ಬಿಡಿಸಿ ಇಬ್ಬನ್ನಿಯನ್ನು ಹೊಯ್ದು ಮುತ್ತುಗಳು ಮಾಡಿ ಪೋಣಿಸುತ್ತದೆ. ಹರಿಯುವ ಕಾಲುವೆಗಳು ಹೂ ಮಾಲೆಯಂತೆ ಕಾಣುತ್ತವೆ. ಸರ್ವೆಮರಗಳು ತನ್ನ ಪಾತಿಗಳೊಂದಿಗೆ ತುರಾಯಿಯಂತೆ ಕಾಣುತ್ತದೆ. ಮುಂಜಾನೆಯ ತಂಗಾಳಿ ಬಂದು ಸುಗಂಧ ಹಚ್ಚಿದರೆ ಅದು ಗಗನದವರೆಗೂ ಹರಡಿ ಪರಿಮಳ ಹಬ್ಬಿಸುತ್ತದೆ. ಪ್ರತಿಯೊಂದು ಮನೆ ಕಾಶ್ಮೀರ ನಗರ, ಪ್ರತಿಯೊಂದು ಬೀದಿ ಒಂದು ತೂರಾನಿನ ದೇಶ, ಪ್ರತಿಯೊಂದು ಸುಂದರ ಕಟ್ಟಡಗಳ (ಮನೆ) ಮುಂದೆ ಗಿಡ ಇದೆ. ಆ ಗಿಡಗಳ ಸಾಲು ತುದಿಯವರೆಗೂ ನೋಡಿದರೆ ಉದ್ಯಾನದ ಹಾಗೆ ಕಾಣುತ್ತದೆ. ಕಟ್ಟಡಗಳು ಮನಮೆಚ್ಚುವಂತೆ ಕಾಣಲು ಬಂದೋಬಸ್ತು ಸಹ ಮಾಡಲಾಗಿದೆ. ಇವುಗಳನ್ನು ನೋಡಿದಾಗ ಚೀನ ಮತ್ತು ಅದರ ಸುತ್ತಮುತ್ತ ದೇಶದ ಕೊರೆದ ಹೂಬಳ್ಳಿಗಳು ಸಹ ಸಪ್ಪೆ ಕಾಣುತ್ತವೆ. ಈ ದೊಡ್ಡ ನಗರದಲ್ಲಿ ಎಲ್ಲಕಡೆಯೂ ಒಳ್ಳೇ ಚೌಕಗಳಿವೆ. ಪ್ರತಿಯೊಂದು ಚೌಕದ ನಾಲ್ಕು ದಾರಿಗಳಲ್ಲಿ ಅನೇಕ ಬಜ಼ಾರುಗಳಿವೆ. ಪ್ರತಿಯೊಂದು ಅಂಗಡಿಗಳು ಖರೀದಿ ಮಾಡುವವರಿಂದ ತುಂಬಿವೆ. ಪ್ರತಿಯೊಂದು ಮಾರ್ಗಗಳು ಅನೇಕ ಒಳ್ಳೆತನಗಳಿಂದ ತುಂಬಿವೆ. ಈ ತಮಾಶೆ ನೋಡಲು ಸದೈವ ಖಿಝುರ್‌ರವರು ಆಗಮಿಸುತ್ತಿರುತ್ತಾರೆ. ಏಸು ಮಸೀಹರವರು ಸಹ ಸಂತೋಷಪಟ್ಟು ಇಲ್ಲಿಗೆ ಪ್ರಯಾಣ ಬೆಳಿಸಿದ್ದರು. ಎಷ್ಟೊಂದು

ಪಟ್ಟಣಗಳಿವೆ ಅದರ ಮೇಲೆ ಜ್ಯೋತಿ ಸುರಿಯುತ್ತಿರುತ್ತದೆ. ವಿಶೇಷವಾಗಿ ಇಲ್ಲಿಂದ ಜ್ಯೋತಿಯ ಚಿಲುಮೆ ಉಕ್ಕುತ್ತದೆ. ಭಲೆರೇ! ಜ್ಯೋತಿಯ ಉದಯ ಸ್ಥಾನ ಮಿನುಗಿತ್ತಿರಲಿ, ಮಹನಿಯತೆಯಲ್ಲಿ ಮಸೀದಿ ಹೀಗೆ ಕಲೆಹಾಕುವಾಗಿರಲಿ. ಪ್ರಳಯದ ದಿನ ಬೈತುಲ್ ಮುಖ಼ದ್ದಸ್ ಬದಲಾಗಿ ಪ್ರವಾದಿಗಳೆಲ್ಲರೂ ಇಲ್ಲಿಯೇ ಪ್ರಾರ್ಥನೆ ಸಲ್ಲಿಸುವರು. ಎಂಟನೇ ಆಕಾಶದ ದೇವಚರರು ಇಲ್ಲಿ ತಪಶ್ಚರ್ಯವನ್ನಾಚರಿಸುವವರು, ಪ್ರವಾದಿ ಈಸಾರವರ ಕೋಣೆ ನಾಲ್ಕನೇ ಆಕಾಶದಲ್ಲಿದೆ. ವೈದ್ಯರಲ್ಲಿ ಅವರು ರಸಸಿದ್ಧಿಯಾಗಿದ್ದವರು, ಜಾದು ವಿದ್ಯೆಯ ಉಪಾಯ ಯುಕ್ತಿನೋಡಿ ದಂಗುಬಡಿದಿದ್ದಾರೆ. ದೃಢವಾಗಿ ಗಮನಿಸಿ ನೋಡಿದರೆ ಈ ಆಕಾಶಕ್ಕೆ ಬುನಾದಿ ಇಲ್ಲದಂತಾಗಿದೆ. ಗಗನದ ಮೇಲೆ ಯಾವ ಭೂಮಿಯ ನೆರಳು ಬೀಳುತ್ತದೆಯೋ ಅದು ಶಾಮಿಯಾನದಲ್ಲಿ ವಿಶ್ವಸಿಂಹಾಸನದ ಮಾದರಿ ವಸ್ತುವಾಗಿದೆ. ಸೂರ್ಯನ ಕಾಂಚನವನ್ನು ಪರೀಕ್ಷಿಸಲು ಪ್ರತಿಯೊಂದು ಮೆಟ್ಟಲು ಓರೆಗಲ್ಲಾಗಿ ವಿಚಾರಿಸುತ್ತದೆ. ಅಧಿಕವಾಗಿ ಚಂದ್ರ ಸದೈವ ವಿರೋಧವಾಗೇ ಇತ್ತು. ತನ್ನ ಹಣೆಯನ್ನು ಆಮೇಲೆ ತಿಕ್ಕಿ ಶುದ್ಧಗೊಳಿಸಿಕೊಂಡ. ಆಕಾಶದಿಂದ ಇಳಿಯುವ ಪ್ರತಿಯೊಂದು ರಾತ್ರಿ ಸೂರ್ಯನಿಗೆ ಅದರ ದೇಶಪ್ರೇಮದ ಕಂದೀಲು ಆಯಿತು. ಎತ್ತರದಲ್ಲಿ ಮಿಂಬರ್(ಭಾಷಣ ಪೀಠ)ಪೀಠವನ್ನು ಅಲಂಕರಿಸಿ ಭೂಮಿಯ ಮರ್ಯಾದೆಯ ಹಂತಗಳನ್ನೇ ಮಟ್ಟಹಾಕಿತು. ಯಾವ ಖಾಝಿಯ ಮುಅಝ್ಝಿನ್ ಆಕಾಶ ಆಗಿರುವನೋ ಅದರ ಮೇಲೆ ಶನಿಗ್ರಹ ಪ್ರವಚನಕಾರನಾಗಿ ಕಾಣುವನು. ದೇವಚರರು ಇದ್ರೀಸಿನ ಕೈಯಿಂದ ಸಾಲಿನ ಸ್ಥೂಲವನ್ನು ಪಡೆದು. ಸಾಲು ಸಾಲಾಗಿ ಹಾಸುವರು. ಪಾಪಗಳ ಕೊಳೆಯನ್ನು ತೊಳೆಯಲು ಹೊಂಡವಿದೆ. ಅದು ಕೌಸರಿನ ಹೊಂಡದಂತೆ ವೈಭವ ಹೊಂದಿದೆ. ಆಕಾಶ ಹೊಂಡದ ಬಳಿ ಬಂದು ಮೆಹ್ರಾಬಿನ ಮುಂದೆ ಬಂದು ವಝೂ಼(ಅಂಗಸ್ನಾನ) ಮಾಡಿ ಸಜ್ದ(ಸಾಷ್ಟಾಂಗವೆರಗುವು)ವನ್ನು ಮಾಡಲು ಬಯಸುತ್ತದೆ. ಪ್ರವಾದಿ ಖಿಝ಼ರ್‌ರವರು ನಿತ್ಯವೂ ಶುಕ್ರವಾರ ದಿನವನ್ನು ಕಾದು, ಬೈತುಲ್ ಮುಖದ್ದಸ್ಸಿಂದ ಸ್ವಚ್ಛರಾಗಿ ಬಂದು ಇಲ್ಲಿ ನಮಾಝ್ ಮಾಡುವರು. ಶಾಹನ ಪ್ರತಿಯೊಂದು ಉದ್ದೇಶ ನ್ಯಾಯಸಮ್ಮತ ಏಕಿರಬಾರದು? ಆ ಮನೆಯಿಂದ ಶಾಹನಿಗೆ ನಿತ್ಯ ನಿತ್ಯವೂ ಪ್ರಾರ್ಥನೆ ಮಾಡಲಾಗುತ್ತದೆ. ಸಮುದ್ರ ಹಾಗೂ ಭೂಖಂಡದ ಪ್ರತಿಯೊಬ್ಬ ಹೊಸ ಪ್ರಯಾಣಿಕ ಯಾರು ಪ್ರತಿಯೊಂದು ದೇಶವನ್ನು ಯಾತ್ರೆ ಮಾಡಿ ನೋಡಿರುವನೋ ಅವನು ಈ ಸೌಭಾಗ್ಯದ ಗಣಿಗೆ ಬಂದರೇ ಇದನ್ನೇ ಅವನು ತನ್ನ ದೇಶ ಮಾಡಿಕೊಂಡು ಇಡೀ ಪ್ರಪಂಚವನ್ನೇ ಮರೆಯುವನು. ಈ ನಗರದಂತಹ ಮನಮೋಹಕ ನಗರ ಮತ್ತೆಲ್ಲೂ ಇಲ್ಲ. ಇದರಿಂದ ಒಳ್ಳೆಯ ಅಸದೃಶವಾಗಲು ಸಾಧ್ಯವಿಲ್ಲ. ಮನೋವೃತ್ತಿ ಇದೇ ಗುಣದೊಂದಿಗೆ ಹೊರಟರೆ ಒಂದು ಮಾತು ಮುಗಿಯುವವರೆಗೆ ಎರಡು ಜನ್ಮ ಕಳೆದು ಹೋಗುತ್ತದೆ. ಓ ನುಸ್ರತಿ ಈ ಮಾತನ್ನು ಬೆಳಸಲಿಕ್ಕೆ ಹೋಗಬೇಡ. ಯಾವ ಯುದ್ಧದ ಮಾತು ಹೇಳಲು ಹೊರಟಿದ್ದೆಯೋ ಅದನ್ನು ಪ್ರಾರಂಭಿಸು.(೩೦೨೧-೩೧೨೯)

ಸೈನಿಕರ ಯುದ್ಧ ಸಾಮಗ್ರಿಯಲ್ಲಿ ಬಂದ ಪ್ರತಿಯೊಂದು ಫಿರಂಗಿಗಳ ಗುಣಗಾನ ಹಾಗೂ ನಂಬಿಗಸ್ಥರಿಗೆ ನಗರದ ಆವಾರದ ಕಷ್ಟಕರ ಬದಿಹಂಚಿಕೊಡಲಾಯಿತು.

ಗಗನಗಳ ಬುರ್ಜಿಗಳಿಂದ ಯಾವಾಗ ಹೆಸರಾಂತ ಸೂರ್ಯನ ಬಂಗಾರದ ಕೊಡೆ ಕಾಣಿಸಿಕೊಂಡಾಗ ರೋಮ್ ದೇಶದ ಬಾದಶಾಹನಿಗೆ ಸಿಂಹಾಸನದ ಮೇಲೆ ಕುಳಿತುಕೊಳ್ಳಲು ಸಾಧ್ಯವಾಗಲಿಲ್ಲ. ಜ಼ನ್ಜಬಾರಿನ ಹತಭಾಗಿ ಬಾದಶಾಹನು ಪರಾಜಯ ಹೊಂದಿದ. ಅಲ್ಲೇ ಪ್ರಸಿದ್ಧ ಬಾದಶಾಹ ಅಲಿ ಆದಿಲ್ ಶಾಹರವರು ಉನ್ನತ ಬುರ್ಜಿಯ ಮೇಲೆ ಅತ್ಯುತ್ತಮ ಸ್ಥಾನದಲ್ಲಿ ಕುಳಿತರು. ಅವರ ಅಧ್ಯಕ್ಷತೆಯಲ್ಲಿ ಶಾಹಿ ಸಭೆ ಬಿಸಿ ಏರಿತು. ಭೂಮಿ ಮತ್ತು ಯುಗ ಶೃಂಗರಿಸಿದವು. ಸಿಪಾಯಿಗಳು ಶೃಂಗರಿಸಿಕೊಂಡು ಬಂದು ಮೌನವಾಗಿ ನಿಂತರು. ರಾಜಸಭೆಯ ಎಲ್ಲ ಸದಸ್ಯರು ಅಲಂಕರಿಸಿದರು. ಶಾಹರ ಕ್ರೋಧಸ್ಥಿತಿಯನ್ನು ನೋಡಿ ತಡೆಯಲಾರದೇ ಸೂರ್ಯನು ಕಂಪಿಸುತ್ತ ತನ್ನ ಬೆವರಲ್ಲೇ ಮುಳಗಲಾರಂಭಿಸಿದ. ಶಾಹರು ತನ್ನ ಬಾಯಿಯಿಂದ ಈ ಮಾತು ಹೇಳಿದರು. ಇಡಿ ಸೈನ್ಯವನ್ನು ನೋಡಿ ಆದೇಶಗಳನ್ನು ಕೊಟ್ಟರು. ದೊಡ್ಡ ಸೂಬೆದಾರ ಬರುವವರೆಗೆ ಶೀಘ್ರವಾಗಿ ಅಶ್ವಪಡೆ ತಯಾರಾಗಿರಲಿ. ಹುಝೂರ್‌ರವರ ದರ್ಬಾರಿನಲ್ಲಿ ಮಂತ್ರಿಗಳು ಒಳ್ಳೆ ದಂಡನಾಯಕರು ಹಾಗೂ ಪರಾಕ್ರಮಿಗಳೂ ಉನ್ನತ ಸ್ಥಾನದ ಮವಾಸ್(ಆಶ್ರಯ ನೀಡುವರು) ಹಾಗೂ ಮನೆಯಾರಗಳು ನೌಕರರ ಸೈನ್ಯಗಳನ್ನು ತಂದಿದ್ದರು. ಇವರೆಲ್ಲರೂ ಬಾದಶಾಹರ ಮನೆ ಸುರಕ್ಷತವಾಗಿರಲೆಂದು ಮನಸ್ಸು ಮಾಡಿ ತನ್ನ ಪ್ರಾಣಕ್ಕೂ ಚಿಂತಿಸಿದೇ ಯುದ್ಧ ಮಾಡಲು ಬಂದವರು, ಇವರೆಲ್ಲರನ್ನು ಬಾದಶಾಹರಿಗೆ ತೋರಿಸಲು ಸಾಲು ಸಾಲಾಗಿ ಕರೆತಂದರು. ಈ ರೀತಿಯಾಗಿ ಸೈನ್ಯದ ನಂತರ ಸೈನ್ಯ ಹೊರಟಿತು. ಬೇರೆ ಮಾತಲ್ಲಿ ಹೇಳುವುದಾದರೆ ಸಮುದ್ರದ ಮೇಲೆ ಅಲೆಗಳು ಹೋಗುವಂತೆ ಈ ಸೈನ್ಯಗಳು ಹೋಗುತ್ತಿದ್ದವು. ಪೇದೆ ಹಾಗೂ ಸವಾರ ಸೈನ್ಯದ ಪ್ರಾಬಲ್ಯ ನೋಡಲು ಎರಡು ಕಣ್ಣು ಸಾಲದು. ಈ ಸೈನ್ಯಗಳು ಮಿಡಿತೆ ಹಾಗೂ ನವಿಲಿನ ಹಾಗೆ ಅಂದ ಚೆಂದಾಗಿ ಕಾಣುತ್ತಿತ್ತು. ಶಾಹರು ಈ ಸೈನ್ಯ ಹಾಗೂ ತನ್ನ ನಗರವನ್ನು ನೋಡಿದರು ಅವರಿಗೆ ತುಂಬ ಸಮೀಪದಿಂದ ಹೋರಾಡ ಬೇಕೆಂದು ಇಚ್ಛೆಯಿತ್ತು. ವೈಯಕ್ತಿಕವಾಗಿ ತುಂಬ ಖಾಸಾ ಶೂರನೆಂದು ಭಾವಿಸಿದ್ದವನ ಹೆಸರೆಂದರೆ **ಖ಼ವಾಸ್ ಖ಼ಾನ್**. ಅವನನ್ನು ಕರೆದು 'ಸೈನ್ಯಕ್ಕೆ ಬೇಕಾಗಿರುವಂತಹ ಸಾಮಾನು ಯುದ್ಧ ಸಾಮಗ್ರಿಯನ್ನು ತೆಗೆದುಕೊಂಡು ಹೋಗಿ ಅಪೂರ್ಣ ಕೆಲಸವನ್ನು ಪೂರ್ಣಗೊಳಿಸು, ಈ ಕೋಟೆ ಈಗ ನಿಮ್ಮ ಶತ್ರುಗಳ ಮೇಲೆ ಆಪತ್ತಿನ ಗಂಟನ್ನು ಹೊರಿಸು, ಓಡಿದರೆ ಹೊಡೆತಕ್ಕೆ ಸಿಕ್ಕಿಸಿಕೋ ಆಕಾಶದಿಂದ ಈ ಆಪತ್ತು ಎಲ್ಲಿಂದ ಇಳಿಯಿತು ಎಂದು ಹೇಳುವ ಹಾಗೆ ಅವರನ್ನು ಹೊಡಿ', ಈ ಮಾತುಗಳೆಲ್ಲ ಚೆನ್ನಾಗಿ ಅರಿವು ಮಾಡಿಸಿದ ನಂತರ **ಸೈಯ್ಯದ್**ರವರನ್ನು ಅವರ ಸಹಾಯಕರನ್ನಾಗಿ ನೇಮಿಸಿದರು. ಅವರ ಹೆಸರು **ಶಾಹ್ ಹುಝ್ರುತ್** ಅವರನ್ನುದ್ದೇಶಿಸಿ 'ಈಗ ಈ ನಗರ ಹಾಗೂ ಈ

ಜಾಗ ನಿಮ್ಮ ಸುಪರ್ದಿಗೆ ಕೊಟ್ಟಿದ್ದೇನೆ' ಎಂದು ಹೇಳಿದರು. ಶೌರ್ಯ, ಮುಖಂಡತ್ವ ಅವರ ವಾರೀಸು ಸ್ವತ್ತು, ಮುಘಲ್ ಜಾತಿಯಲ್ಲಿ ಅಸಲು ಎಂದರೆ ಪ್ರಾಮಾಣಿಕತೆ, ಅದು ಅವನಲ್ಲಿತ್ತು. ಅಲ್ಲಾಹನು ಅವರಿಗೆ ಭಾಗ್ಯಶಾಲಿ ಮಾಡಿದ್ದ. ಹೃದಯಾಳದಿಂದ ಅವರು ಶಾಹಿನ್ಶಾಹರ ಹಿತೈಷಿಯಾಗಿದ್ದವರು. ಅವರ ಪೂರ್ವಜರು ನಿತ್ಯ ಶಾಹರ ಸೇವೆಯಲ್ಲಿ ಮೋಹಿತರಾದವರು. ಶಹಿನ್ಶಾಹರಿಂದ ಮತ್ತೆ ಮತ್ತೆ ಘನತೆ ಪಟ್ಟವರು. ವಿಶ್ವಸನೀಯ ಕಾರ್ಯಗಳಲ್ಲಿ ದೃಢನಿಲುವು ತೆಗೆದುಕೊಳ್ಳುವರು. ಬಾದಶಾಹರು ಏನೇ ಹೇಳಿದರು ಆಜ್ಞೆಯಂತೆ ಪಾಲಿಸಿ ತನ್ನ ಜೀವ ಮುಡುಪಾಗಿಟ್ಟು ಶಾಹರ ಮರ್ಯಾದೆ ಕಾಪಾಡಲು ಮಾಡುವರು. ಶಾಹರ ಆಜ್ಞೆಯನ್ನು ಆತ್ಮಸಂತೋಷದಿಂದ ಒಪ್ಪಿ ಖಾನನ ಸಲಹೆ ಸಮ್ಮತಿಸಿದರು. ಅವರ ಮುಂದೆ ಎಷ್ಟೊಂದು ಬಂದೂಕು, ಫಿರಂಗಿ, ಬಾರೂದು ಹಾಗೂ ಫಿರಂಗಿ ಗುಂಡುಗಳ ಲೆಕ್ಕಚಾರ ಮಾಡಿಕೊಂಡು, ದೊಡ್ಡ ಹಾಗೂ ಚಿಕ್ಕ ಫಿರಂಗಿಗಳನ್ನು ಸರಿಪಡಿಸಿ, ಇಲ್ಲಿಂದ ಜಾರಿ ಮಾಡುವಂತೆ ಇಟ್ಟು, ಪ್ರತಿಯೊಂದು ತೋಪ್ಗಾಡಿ ಮೇಲೆ ಲೆಕ್ಕವಿಲ್ಲದಷ್ಟು ತೋಪ್‌ಗುಂಡಗಳು ಹೆಬ್ಬಾವು ಸಹಸ್ರಾರು ಮೊಟ್ಟೆಗಳನ್ನಿಟ್ಟಿರುವ ಹಾಗೆ ಇಟ್ಟರು. ಎಷ್ಟೊಂದು ಚಿಕ್ಕ ದೊಡ್ಡ ತೋಪಗಳಿದ್ದವೋ ಎಲ್ಲವನ್ನು ಸೇರಿಸಿ ಅಖಂಡ ಉಕ್ಕಿನ ಗೋಡೆ ಮಾಡಿದರು. ತೋಪುಗಳನ್ನು ತಿರುಗಿಸಲು ಕುದುರೆಗಳನ್ನು ಕೊಟ್ಟರು ಉಸಿರು ತೆಗೆದುಕೊಳ್ಳಲು ಜೋಡಿ ಕೋವಿನ ನಳಿಗೆ ಕೊಟ್ಟರು. ಯಾವುದೇ ತೋಪು ಬಂಜೆ ಇಲ್ಲದಂತೆ ಎಲ್ಲವೂ ಭಾರಹೊತ್ತಿರುವ ಬಸರಿಯರಂತಾದವು. ದುರ್‍ರಾನಿ ಸಮೂಹದ ಪಠಾಣರ ಏಟು ದೂರ ದೂರದವರೆಗೆ ಕೆಲಸ ಮಾಡುತ್ತಿತ್ತು, ಬುದ್ಧಿ ಶಕ್ತಿಯ ಹತ್ತಿರದಲ್ಲಿರುವ ನರವನ್ನು ನುಚ್ಚುನೂರು ಮಾಡುತ್ತಿತ್ತು. ಮುಲ್ಕೆ ಮೈದಾನಿ ಬೆಂಕಿ ಉದುರುವಿಕೆ ಎಂತಹ ಗದ್ದಲದಿಂದ ಆಗುತ್ತಿತ್ತೆಂದರೆ ಅದರ ಮುಂದೆ ಪ್ರಳಯದ ಗದ್ದಲವೂ ಏನೂ ಅಲ್ಲ. ಅದರ ಒಂದು ಘರ್ಜನೆಯಿಂದ ದೇಶ ಜಪ್ತಿಯಾಗುವುದು. ಅದರ ಗುಂಡುಗಳ ಶಬ್ದ ಕೇಳಿ ಆಕಾಶದ ಸಂಪರ್ಕ ನಿಯಂತ್ರಣ ಕಳೆದುಕೊಳ್ಳುತ್ತದೆ. ಅದೇನಾದರು ತನ್ನ ಕಸಾಯಿತನ ಪಾಲಿಸಿದರೆ ತೋಳವನ್ನೂ ಸಹ ಸಿಗಿದುಹಾಕುತ್ತದೆ. ಈ ಭೂಮಿಯನ್ನು ಶೀಘ್ರವಾಗಿ ರಕ್ತದಿಂದ ತುಂಬಿದ ಕಸಾಯಿ ಅಂಗಡಿ ಮಾಡ ಬಲ್ಲದು. ಈ ತೋಪಿನಿಂದ ಗುಂಡು ಹಾರಿದರೆ ೯ ಗಜ ದೂರದಲ್ಲಿ ಹೋಗಿ ಬೀಳುವುದು. ಖಾಫ್ ಬೆಟ್ಟದ ಮೇಲೆ ಬಿದ್ದರೇ ಇಳಿಜಾರನ್ನು ಸಿಗಿದುಕೊಂಡು ನೂರು ಗಜ ಪಾರುಮಾಡುವುದು. ಇದರ ಗರ್ಜನೆ ಸಿಡಿಲಿನ ಗರ್ಜನೆಯಂತೆ, ಇದರಿಂದಾಗಿ ಭೂಮಿ ಸಿಡಿದು ಎಲ್ಲ ನೀರು ಚಿಲುಮೆಯಂತೆ ಹರಿಯವುದು. ಅದು ಶರ್ಘೆಯ ಗುಂಡನ್ನು ಎತ್ತಿದರೆ ಐರಾವತಿನ ಪ್ರಾಣ ಭೀತಿಯಿಂದ ಹಾರುವುದು. ಅದು ಆವೇಶದಲ್ಲಿ ಹನುಮಂತನ ಹಾಗೆ ಗರ್ಜಿಸಿ ಗುಡಿಗಿದರೆ ರಾತ್ರಿಯ ಹೊಟ್ಟೆಯಿಂದ ಸೂರ್ಯನ ಗರ್ಭಪಾತವಾಗುವುದು. ರಾಜಾ ಇಂದ್ರನು ಆಕಾಶದಿಂದ ಈ ತೋಪನ್ನು ಹೊಡೆಯುವುದನ್ನು ನೋಡಿದರೆ ಹೆದರಿ ಆಕಾಶವನ್ನು ಬಿಟ್ಟು ಅಡಗಲು ಪಾತಾಳಕ್ಕೆ ಹೋಗುವನು. ಇದು ದಾಟಿದರೆ ಮಾರ್ಗದ ಕೆಳಭಾಗ

ಪಾತಾಳ ಹಿಡಿಯುತ್ತದೆ. ಕಂದಕದಲ್ಲಿ ಹೋರಾಡಲು ನೇಮಿಸಿಲಾದ ಸೇನಾ ತುಕಡಿಗೆ ಸುರಂಗವನ್ನು ತಡೆಯಲು ಧೈರ್ಯ ಇರುವುದಿಲ್ಲ. ಸಣ್ಣ ತೋಪುಗಳಿಂದ ಕಲ್ಲೆಸೆದರೆ ಗಾಳಿಯಲ್ಲಿ ಹಕ್ಕಿಗಳಿಗೆ ಜಾಗ ಇಲ್ಲದಂತಾಯಿತು. ಚಕ್ರವುಳ್ಳ ಫಿರಂಗಿಗಳು ತನ್ನ ಮಹನೀಯತೆ ಹೀಗೆ ಸಾಧಿಸಿದೆಂದರೆ ಒಮ್ಮೆ ಶತ್ರು ಏನಾದರೂ ಯುದ್ಧ ಮಾಡಲು ಒಂದು ಕಡೆ ಬಂದು ತಗುಲಿದರೆ ಸಾಕು, ಗಲೀಜಿನ ಮೇಲೆ ನೊಣಗಳು ಗುಂಯಿಗುಟ್ಟುವಂತೆ ಓಡಾಡುವರು. ಬರಪೀಡಿತ ಮುಘಲರು ಹುಡಿಕಿಕೊಂಡು ಬಂದರೆ ಉಕ್ಕುತ್ತಿರುವ ಅಂಬಲಿಯ ಗಂಜಿ ಮಾಡಿ ಇಡಲಾಗಿದೆ. ಗಂಜಿಯಲ್ಲಿ ಅವರು ಬೇಯಿಸಿದ ಮಾಂಸದ ರಸದಲ್ಲಿ ತುಂಡುಗಳನ್ನು ಹುಡುಕಿದರೆ ಎಲ್ಲ ಶಿಖರಗಳ ಕಮಾನುಗಳಲ್ಲಿ ಅಚಲ ಬಂಡೆಗಳು ಸಿಗುತ್ತವೆ. ಮಕ್ಕಳು ಬೇಗನೇ ಬಂದು ಇಳಿದರೆ ಅವರಿಗೆ ದಾಳಿಂಬರಾದಂತಹ ಹುಖ್ಖ ಹಾಗೂ ಹಾಗಲಕಾಯಿ ಹಾಗಿರುವ ಉಪ್ಪುನೀರಳೆ ಇದೆ. ಪ್ರತಿಯೊಂದು ಗುಂಡು ಹತ್ತಿಬೀಜಕ್ಕಿಂತ ಕಡಿಮೆ ಇರಲಿಲ್ಲ. ಅವುಗಳನ್ನು ಕುಫ್ತ (ಕೊಚ್ಚಿದ ಮಾಂಸವನ್ನು ಬೇಯಿಸಿ ಮಾಡಿದ ಬಿಲ್ಲೆ ಅಥವಾ ಉಂಡೆಗಳು) ಎಂಬಂತೆ ಗುಂಡುಗಳನ್ನು ಶೇಖರಿಸಿಡಲಾಗಿದೆ. ಕರಿ ಕೋಟೆಯ ಮೇಲೆ ಸ್ವಚ್ಛವಾದ ಸುಣ್ಣ ಹಚ್ಚಿದರು, ಕರಿ ರಾತ್ರಿಯ ನೆರಳು ಬೆಳದಿಂಗಳು ತೋರಿದರು. ಬುರ್ಜಿಗಳ ಮೇಲೆ ದೊಡ್ಡ ದೊಡ್ಡ ಧ್ವಜಗಳು ಅಮಲೇರಿದ ಆನೆಗಳು ವಾಲಾಡಿಕೊಂಡು ನಿಂತಿರುವ ಹಾಗೆ ನಿಂತಿರುವುದು. ಮೃತ್ಯು ಶತ್ರಗಳ ಶೂರರ ಮುಖ ನೋಡಲು ಬಾಚಣಿಕೆಯಲ್ಲಿ ಹಳತಾದ ಹೊರೆಯನ್ನು ಜೋಡಿಸಿತು. ಪ್ರತಿಯೊಂದು ಬುರ್ಜಿಯಲ್ಲಿ ಸಹಸ್ರಾರು ಬಾಣಗಳನ್ನು ಹಾವಿನ ಹುತ್ತದಲ್ಲಿ ಅಗಣಿತ ಹಾವಿನಮರಿಗಳ ಹಾಗೆ ತುಂಬಲಾಯಿತು. ಶೈತಾನುಗಳ ಮೇಲೆ ಕಲ್ಲು ತೂರಿಸಲು ಶಹಾಬುಗಳನ್ನು(ಬೆಂಕಿಯ ದೊಡ್ಡ ಜ್ವಾಲೆ) ಹೊಸ ಹುಖ್ಖಗಳಂತೆ ತಯಾರಿಸಿದರು. ಶಿಖೆಗಳ ಮೇಲೆ ಮುಳ್ಳುಭರಿತ ಕರೇಲ (ಹಾಗಲಕಾಯಿ) ಬೆಟ್ಟಗಳ ಮೇಲೆ ಮಿದುಳು ತಿನ್ನುವ ಹಕ್ಕಿಗಳಂತೆ ಇಡಲಾಯಿತು. ಕರೇಲಗಳನ್ನು ಕಡ್ಡಿಕಸ ಎಂದು ತಿಳಿದರೆ ಆಕಾಶದ ಆನೆ ಅವರನ್ನು ಠುಸುಕ್ ಎಂದು ಹಾರಿಸುತ್ತದೆ. ಪಶ್ಚಿಮದವರ ಸರಿ ಸಮನಾಗಿ ಹಸ್ತ ತೂಗಿಸಿ ಫಿರಂಗಿಗಳ ಸಮತೂಕವಾದ ಮಾತನಾಡಿ, ಬಾಯಿಯಿಂದ ತೋಪುಗಳ ಮಾತು ಹೊರಡುವ ಮುನ್ನ ಕೈಗಳನ್ನು ಒದರಿ ಧೈರ್ಯದಿಂದ ಮುನ್ನುಗಿದರು. ಒಂದೊಂದು ಕ್ಷೇತ್ರದಿಂದ ಪೇದೆ ತುಕಡಿಗಳನ್ನು ಆರಿಸಿ ಒಗ್ಗೂಡಿಸಿ ಯುದ್ಧದ ತಯಾರಿ ಮಾಡಲಾಗಿತ್ತು. ಅವರಲ್ಲಿ ಹೆಸರಾಂತ ದೊಡ್ಡ ನಾಯಕರು ಅರಸುತನ ಮಾಡುವರು, ಕಲ್ಲುಹೊಡೆಯುವರು ಹಾಗೂ ಉತ್ತಮ ವಾಸ್ತುಶಿಲ್ಪಿಗಳೂ ಇದ್ದರು. ಕುದುರೆ ಸವಾರ ಸೈನ್ಯ ತುಕುಡಿ ಬಲು ಸ್ವಚ್ಛವಾಗಿದ್ದು ಮಿನುಗುತ್ತಿತ್ತು, ಕೇಳದೇ ಇದ್ದರೂ ಸಹ ಅವು ಹುಲಿಶಿಕಾರಿ ಮಾಡುವವರನ್ನಾಗಿ ಕಾಣುವರು. ಅವರ ಶಸ್ತ್ರವೆಂದರೆ ಪ್ರಜ್ಞೆಯಿಂದ ಜೀವದ ಹಂಗು ತೊರೆದು ಹೋರಾಡುವುದು. ಅವರ ಕಾಲು ಭೂಮಿ ಮೇಲಿದೆ. ಅದರೆ ಆಕಾಶದ ಮೇಲೆ ದೃಷ್ಟಿ, ಯುದ್ಧದಲ್ಲಿ ತನ್ನ ಪ್ರಿಯೆಯರನ್ನು ಜೊತೆಗೆ ಕರೆದುಕೊಂಡು ಹೋಗುವರು.

ದೃಶ್ಯಗಳ ಮೇಲೆ ದೃಷ್ಟಿ, ಆದರೇ ಶತ್ರು ಮೇಲೆ ಕೈ. ತನ್ನ ತಲೆ ಮೇಲೆ ಅಂಕುಶವಿಟ್ಟು ಮೊದಲ ಹೆಜ್ಜೆ ಇಡುವರು. ಯುದ್ಧದ ಮೈದಾನದಲ್ಲಿ ಒಬ್ಬ ಮಧ್ಯ ವಯಸ್ಸಿನ ಸೋಮಾರಿ ಓಡಾಡುವನ ಹಾಗೆ ಓಡಾಡುತ್ತಿದ್ದಾರೆ. ಹುಲಿಯಂತೆ ಉಸಿರು ಕಟ್ಟಿ ಮೆಲ್ಲನೇ ಜರುಗಿ ಹಿಡಿದುಕೊಂಡು ಶತ್ರುವಿನ ರಕ್ತ ಕುಡಿಯಬೇಕೆಂದಿದ್ದಾರೆ. ಎಷ್ಟೊಂದು ಬಂದೂಕುಧಾರಿಗಳಿದ್ದರೂ ಅವರ ಗುರಿ ತಪ್ಪುವುದಿಲ್ಲ. ಶಬ್ದಕೇಳಿ ನಿಷಾನೆ ಹಿಡಿದು ಮೊನೆ ನೋಡಿ ಹೊಡೆಯುತ್ತಾರೆ. ಅನೇಕರು ಗಟ್ಟಿ ಭಾಲೆಗಳನ್ನು ನೀರು ಮಾಡುವರು. ಅನೇಕ ಖಡ್ಗಧಾರಿಗಳು ಗರ್ಜಿಸುತ್ತಾರೆ. ಮತ್ಯಾರೋ ಕುಂಮುಖಟೆಯ ಬಿಲ್ಲುಬಾಣ ಹೊಡೆಯುವರು. ತನ್ನ ಕಲೆಯಲ್ಲಿ ತನ್ನನ್ನು ರುಸ್ತುಂ ಎಂದು ಭಾವಿಸುತ್ತಾರೆ. ಸೊಂಟ ಬಿಗಿದು ತೋಳು ಹಿಡಿದು ರಾಜ ಇಂದ್ರನ ಮೇಲೆ ಆನೆ ಇಳಿಸಲು ಬಯಸುತ್ತಾರೆ. ಮತ್ಯಾರೋ ಯಾರನ್ನೋ ಬಂಧಿಸುತಿದ್ದಾರೆ, ಮತ್ಯಾರೋ ಶಸ್ತ್ರಗಳನ್ನು ಎಳೆಯುತ್ತಾರೆ, ಅನೇಕರಿಗೆ ಹಳದಿ ಜರಿಯುಳ್ಳ ಶಸ್ತ್ರಗಳು ಸಮ್ಮತವಿಲ್ಲ. ನಿತ್ಯವೂ ಕಾವಿ ಹಾಗೂ ಕೆಂಪು ಉಡುಪುಗಳು ಮುಂಡಗಳ ಮೇಲೆ ದುಪಟ್ಟ ಹಾಗೂ ರೂಮಾಲಂತೆ ಹಾರುವುದು. ಬಾದಶಾಹರು ನಡೆಯಲು ಬೇರೆಯವರ ಕಾಲುಗಳು ಬೇಕು, ಆದ್ದರಿಂದಲೇ ಪಲ್ಲಕಿಗಳಿಗೆ ಸುಖ್ಪಾಲ್ ಎಂದು ಹೆಸರು ಕೊಟ್ಟಿರುವರು, ಅನೇಕ ಜನರ ಮುಂದೆ ಕೊಂಬು ಮತ್ತು ಸಂಬುಲ (ಒಂದು ವಾದ್ಯ) ಊದಲಾಗುತ್ತದೆ, ಶಹ್ನಾಯಿ, ಪಾವಾ (ಬಾಜಾ=ವಾದ್ಯ) ಬಾರಿಸಲಾಗುತ್ತದೆ. ನಿಶಾನ್ (ಧ್ವಜ)ಕೊಡೆಗಳು ಹಾಗೂ ಅಗಣಿತ ಬೀಸಣಿಕೆ ಇವೆಲ್ಲ ಸೇರಿ ಅನೇಕ ಭೂಭಾಗವನ್ನು ನವ ವಸಂತ ಋತು ಮಾಡಿದೆ. ಎಲ್ಲ ನೌಕರರು ಶಹಿನ್ಶಾಹರ ದೃಷ್ಟಿಯನ್ನು ತಿಳಿದರು. ಯುದ್ಧದ ಜಾಗ ಹೆಚ್ಚುಕಡಿಮೆ ತಿಳಿದುಕೊಂಡರು. ಅವರೆಲ್ಲರೂ ಸಲಹೆಯ ಮೇರೆಗೆ ಆರಿಸಿ ಬೇರೆ ಮಾಡಿ, ಅವರನ್ನು ಹಂಚಿ ಕೋಟೆಯಲ್ಲಿ ಇಡಲಾಯಿತು. ಶಿಖರಗಳಲ್ಲಿ ಪೇದೆ ಸೇನೆ ಹುತ್ತದಿಂದ ಇರುವೆಗಳು ಉಕ್ಕುವಂತೆ ತುಂಬಿ ತುಳಕಾಡುತ್ತಿತ್ತು. ಜಗಳ ಆಡಲು ಆಡಿಸಲು ಪೇದೆಗಳ ಮುಂದೆ ಮಂತ್ರಿಗಳು ಬಂದು ಸಹಾಯ ಮಾಡುತ್ತಾ ಅವರನ್ನು ಕೋಟೆ ಮೇಲೆ ದೃಢವಾಗಿ ಗಿರಿ, ಶಿಖರಗಳೊಡನೆ ನಿಮ್ಮ ತಲೆಗಳನ್ನು ಕಟ್ಟಿ, ನಿಮ್ಮ ದೃಷ್ಟಿ ಶತ್ರು ಮೇಲಿರಲಿ, ಚೆನ್ನಾಗಿ ಹೋರಾಡಿ, ನಾನು ಬಂದು ಹಿಂದಿನಿಂದ ಕುಮ್ಮಕು ಮಾಡುವೆ ಎಂದು ಹೇಳುತಿದ್ದರು. ಶತ್ರು ಇಲ್ಲಿಯವರಿಗೆ ಬಂದು ಕೈಯಿಂದ ಜೀವ ಕಳೆದುಕೊಳ್ಳುವದರಲ್ಲಿ ಏನೂ ಸಂದೇಹವಿಲ್ಲ ಎಂದು ಮಂತ್ರಿಗಳು ಬಂದು ಶಾಹರಿಗೆ ಹೇಳಿದರು. ಒಂದು ಕ್ಷಣದಲ್ಲಿ ಕೋಟೆಯಿಂದ ಎಂತಹ ಆಕ್ರಮಣ ಆಗುತ್ತದೆಂದರೆ ತೋಪುಗಳ ಬೆಂಕಿ ಉದುರುವಂತೆ ಹಾರಿಸುವೆವು. ಬಂದೂಕುಗಳೆಲ್ಲ ಒಂದೇ ಸಮ ಕಡಕಡಾಯಿಸಿದರೆ ನಕ್ಷತ್ರಗಳನ್ನು ಒಂದೊಂದಾಗಿ ಹಾರಿಸಿಬಿಡುವೆವು. ಈ ಭೂಕಂಪದಲ್ಲಿ ಯಾರು ತನ್ನ ಮೈಯಲ್ಲಿ ಪ್ರಾಣವಿಟ್ಟುಕೊಂಡು ಬರುವನು? ಇಲ್ಲಿಯವರಿಗೂ ಅವನು ದೃಢ ನಿಲುವು ತೆಗೆದುಕೊಂಡು ಬರಲು ಹೇಗೆ ಸಾಧ್ಯ? ಈ ಸ್ಥಳದಲ್ಲಿ ಹುಲಿಗಳ ಹೃದಯವೇ ಕಂಪಿಸಿ ನೀರಾಗುವಾಗ ನರಿಗಳಲ್ಲಿ ಅಷ್ಟೊಂದು ಶಕ್ತಿ ಬರಲು

ಹೇಗೆ ಸಾಧ್ಯ? ತೋಪಿನ ಗುಂಡುಗಳಿಂದ ಮಣ್ಣು ಮತ್ತು ರಕ್ತ ರುಬ್ಬಿ ಹೇಗೆ ಮಾಡುತ್ತವೆಂದರೆ ದಿಗಂತ ರಕ್ತದಲ್ಲಿ ಮುಳಿಗಿದೇನೋ ಎಂದು ಕಾಣತೊಡಗುತ್ತದೆ. ಶತ್ರು ಇಲ್ಲಿಯವರಿಗೆ ಹತ್ತಿಬಂದರೆ ಕಂದಕ ರಕ್ತದಿಂದ ತುಂಬಿ ಅದನ್ನು ರುಂಡಗಳಿಂದ ಮುಚ್ಚಿಹಾಕುವೆವು. ಓ ಶಾಹರೇ ಈ ಅದ್ವಿತೀಯ ತಮಾಶೆ ನೋಡಿ ಕೋಟೆಯ ಈ ಕರಿಗೋಡೆ ಕೆಂಪಾಗುವುದು. ಸಾಹೇಬರಿಗೆ ಈ ರಾಜ ಮಾತು ಯೋಚನೆ ಮಾಡಿ ಹೇಳಿದರು. ಇದನ್ನು ಕೇಳಿ ದಡದಲ್ಲಿ ನಮ್ಮೊಡನೆ ಡೇರೆಗಳನ್ನು ಹೂಡಿ ಎಂದರು. ವಿಶೇಷವಾಗಿ ಮಾನ್ಯ ಮಂತ್ರಿಯವರು ಶೂರರು ಇವರಿಗೆ ಮುಝುಫ್ಫರ್ ಖ಼ಾನನ ಬಿರುದು ಯೋಗ್ಯವಾದದ್ದು. ಸುಜನ ಸದ್ಗುಣ, ಸುಶೀಲ, ಪ್ರಖ್ಯಾತಿ, ಕೀರ್ತಿಶಾಲಿ, ಬುದ್ಧಿಶಾಲಿ. ಅವನ ವ್ಯಕ್ತಿತ್ವದಲ್ಲಿ ಬುದ್ಧಿವಂತಿಕೆ ತುಂಬಿದೆ. ಬಲು ಧೈರ್ಯಶಾಲಿ, ಶೌರ್ಯ ಅವನ ಕೈಯಲ್ಲಿ ಪೋಷಣೆ ಪಟ್ಟಿತು. ಖಡ್ಗಕ್ಕೆ ಮರ್ಯಾದೆ ನೀಡುವನು. ಖಡ್ಗದ ಧಣಿ, ಯುಗದ ಸಿಪಾಯಿಗಳಲ್ಲಿ ಅಪ್ರತಿಮವಾಗಿ ಕಾಣುವನು. ಯುಗದಲ್ಲಿ ಸಿಪಾಯಿಗಳಿಗೆ ಆಶ್ರಯ ಕಾಣುವುದು. ಬಲು ಉಪಕಾರ ಮಾಡುವನು ನಿಜಾಂಶದ ಮಾನವ, ಎಷ್ಟೊಂದು ಪ್ರತಿಷ್ಠಿತ ಜನ ಇದ್ದಾರೋ ಅವರೆಲ್ಲರಲ್ಲಿ ಬಹಳಷ್ಟು ಭಾಗ್ಯಶಾಲಿ, ಪ್ರಾಮಾಣಿಕತೆಯಲ್ಲಿ ಮೋಹಿಯಾಗುವನು, ಶಹಿನ್ಷಾರ ಕೆಲಸದಲ್ಲಿ ಶ್ರಮ ಹೊಂದುವನು, ತನ್ನೊಡನೆ ಆ ಶೂರರನ್ನು ಜೊತೆಮಾಡಿಕೊಂಡು ಯುದ್ಧಕ್ಕಾಗಿ ಸಾಲುಕಟ್ಟಿದ. ಯಾವ ಕಡೆ ಕಷ್ಟವಿತ್ತೋ ಅಲ್ಲಿ ಅವನು ತಂಗಿದ. ಯುವಕ ಶಹಿನ್ಷಾಹನ ಮಂತ್ರಿಗಳೂ ಯುವಕರಲ್ಲಿ ನಿಸ್ಸಂದೇಹವಾಗಿ ಒಂದು ಹೊಸ ಉತ್ಸವವಾಗಿತ್ತು. ಪ್ರತಿದಿನ ಕೋಟೆ ಮೇಲೆ ಹಬ್ಬದ ವಾತಾವರಣ ಕಲ್ಪಿಸಲಾಗಿದ್ದರೆ ರಾತ್ರಿ ಶಬ್ ಬರಾತ್ (ತೀರ್ಮಾನದ ರಾತ್ರಿ) ಆದವು. ಕೋಟೆಯ ಬದಿಯಲ್ಲಿ ಸಹಸ್ರಾರು ಸಂಖ್ಯೆಯಲ್ಲಿ ನವಚಂದ್ರಗಳನ್ನು ಕಟ್ಟಲಾಯಿತು ಅದರ ಮೇಲೆ ಚಂದ್ರ ಬೆಳಕು ಬಿದ್ದು ಬುರ್ಜಿಗಳೆಲ್ಲ ಮಿನುಗುವವು. ನಲ(ಒಂದು ಬಗೆಯ ಪಟಾಕಿ)ಪ್ರತಿ ಸಿಡಿಮದ್ದು ನಾಳದಂತೆ ತಿಳಿ, ಹವಾಯಿಗಳ ಜಾಗದಲ್ಲಿ ರಾಮಬಾಣ ಇಡಲಾಯಿತು. ಬಂದೂಕದಿಂದ ಒಂದು ಸಿಡಿಮದ್ದಿನ ಗುಂಡನ್ನು ಹಾರಿಸಿದರೆ ಕಿವಿ ಜೊತೆ ಎದೆ ಸಹ ಒಡೆದು ಹೋಗಿ ಹೃದಯದ ಬಡಿತ ಹೆಚ್ಚಾಗುವುದು. ನಗಾರಿಗಳಿಂದ ಸಂತೋಷದ ವಾದ್ಯಗಳನ್ನು ಬಾರಿಸುವರು. ಇಂಪಾದ ಧ್ವನಿಯಲ್ಲಿ ಹಾಡು ಹಾಡುವರು. ಬಣ್ಣದ ಹಣ್ಣುಗಳಿಗೆ ಜಾಗ ಮಾಡಿದರು. ಚಿನ್ನ ಬೆಳ್ಳಿಯ ಖರ್ಷನ್ನು ಹಂಚಲು, ಪ್ರತಿ ಕ್ಷಣ ಪ್ರತಿಯೊಂದು ಮನಸ್ಸಿನಲ್ಲಿ ಹೊಸ ಸಂತೋಷದ ಅಲೆ. ಎಲ್ಲ ಸನ್ಮಾನ್ಯ ಸೂಬೆದಾರರು ಬರುವವರಿಗೆ ಹೀಗೆ ಕೋಟೆಯನ್ನು ಜಾಗೃತವಾಗಿಟ್ಟಿದ್ದರು. ಶಹಿನ್ಷಾಹೆ ಫಾಝಿ ಹಾಗೂ ಅವರ ದಂಡು ಶತ್ರುಗಳನ್ನು ಪಾಠ ಕಲಿಸಲು ಮೊದಲು ಅದೃಷ್ಟಶಾಲಿಯವರೊಡನೆ ಭೇಟಿಯಾಗಿ ನಂತರ ಮಂತ್ರಿಗಳ ಸಭೆ ಸೇರಿಸಿ ಅಭಿಪ್ರಾಯಗಳು ಪಡೆಯಲಾಯಿತು. (೩೧೩೦–೩೨೩೮)

ಯುದ್ಧದ ತಯಾರಿಗೆ ಸೈನ್ಯಗಳನ್ನು ಶತ್ರುಗಳ ಮೇಲೆ ನಮ್ಮ ಕಡೆಯಿಂದ ಅಚಲವಾಗಿ ನಿಗದಿಪಡಿಸುವುದು ಹೇಗೆ? ಎಂದು ಬಾದಶಾಹರವರು ಮಂತ್ರಿಗಳೊಡನೆ ಸಮಾಲೋಚಿಸಿ ಅವರ ಸಲಹೆ ಸೂಚನೆ ಹಾಗೂ ಅಭಿಪ್ರಾಯಗಳನ್ನು ಕೇಳಿದರು

ಅದೊಂದು ಜಯಶಾಲಿ ಶುಭದಿನ ಸೌಂದರ್ಯದಲ್ಲಿ ಹೊಸವರ್ಷದ ಪ್ರಥಮ ದಿನಕ್ಕಿಂತ ಅತಿ ಸುಂದರ, ಭೂಮಿ ಮತ್ತು ಆಕಾಶ ಒಂದೊಂದು ಹೊಸ ರೂಪ ಧಾರಣೆ ಮಾಡುತ್ತಿತ್ತು. ಭೂಮಿ ಮತ್ತು ಕಾಲ ಯುವಕರಾಗಿದ್ದರು. ತೋಟದ ಮೇಲೆ ಉದಾಸೀನ ಹರಡಿರುವುದನ್ನು ನೋಡಿ ಗಾಳಿ ಮಸೀಹನಾಗಿ ಮತ್ತೆ ಒಂದು ಹೊಸ ಜೀವನ ನೀಡಿತು. ಆಕಾಶ ಮೋಡದ ನಿಲುವಂಗಿ ತೊಟ್ಟಿತು. ನೆಲಭಾಗ ಹಸಿರು ಉಡುಪನ್ನು ಧರಿಸಿತ್ತು. ಮುಂಜಾನೆ ಗಾಳಿ ಸ್ತ್ರೀಯರನ್ನು ಅಲಂಕರಿಸುವ ಸ್ತ್ರೀಯಾಗಿ ಬನದ ಪ್ರತಿಯೊಬ್ಬ ಪ್ರಿಯರನ್ನು ತುಂಬ ಚೆನ್ನಾಗಿ ಶೃಂಗರಿಸಿತು. ಬನದ ಸುತ್ತಲೂ ನಿರ್ಮಲ ನೀರಿನ ಕಾಲುವೆಗಳು ಸಖಿ ಬಣ್ಣದ ರಸಭರಿತ ಜರಿಅಂಚಿನ ಸುಂದರವಾದ ನಾಜೂಕು ಹಸಿರು ಬಟ್ಟೆ ಉಟ್ಟಿರುವಂತೆ ನೋಡಲು ಆನಂದಮಯ, ಉದ್ಯಾನವನದ ಬಾಗಿಲುಗಳನ್ನು ಲೋಕಕ್ಕೆ ತೆರೆಯಲಾಗಿದೆ, ಪ್ರತಿಯೊಂದು ಹೂ ಅಮೂಲ್ಯ ಆಭರಣಗಳನ್ನು ತೊಟ್ಟಿವೆ. ತೋಟ ಬೈತಲೆಯಲ್ಲಿ(ಸುಂಬುಲ್)ಸುಗಂಧ ಸುವಾಸನೆಯುಳ್ಳ ಹುಲ್ಲನ್ನು ಪಟ್ಟಿಗಳಲ್ಲಿ ಬಿಟ್ಟರೇ ರೇಹಾನ್(ಸಿಹಿ ತುಳಸಿ/ಕಾಮ ಕಸ್ತೂರಿ)ನಿನ ಹುಲ್ಲು ಗುಂಗರು ಕೂದಲಿನ ಗಂಟು ಕಟ್ಟಿದ. ಇಬ್ಬನಿಯನ್ನು ಎಣ್ಣೆ ಮಾಡಿಕೊಂಡು ಮುಖ ಮಂಜನದಿಂದ ತೊಳೆದು ಕಾಡಿಗೆಯ ಡಬ್ಬಿಯಿಂದ ಬನಫ್ಷ (ಶೀತ ನಿವಾರಕ ಮೂಲಿಕೆ)ದ ಅಂಜನ ಹಚ್ಚಿಕೊಂಡ. (ಲಾಲ) ಕೆಂಪು ಬಣ್ಣದ ಹೂವು ಎಲ್ಲರಿಗೂ ವೀಳ್ಯದೆಲೆಯ ಕೆಂಪು ಬಣ್ಣ ಕೊಟ್ಟ, (ಜರಡಿ)ದಂತದಲ್ಲಿರುವ ತೂತಿನ ಕಪ್ಪು ಮಚ್ಚೆಯ ಬಿಂದು ಹಾಗೆ ಕಾಣುತ್ತದೆ. ಮಾಣಿಕ್ಯದ ಸಿಂಹಾಸನದಂತೆ ಋತುವಿನ ಸೇವಂತಿಗೆ ಕೂದಲಿನ ಆಭರಣವಾಯಿತು. ಮಾಣಿಕ್ಯ ಹಾಗೂ ಪಚ್ಚೆಯ ಟೀಲಾ ಹಣೆ ಮೇಲೆ ಬಲು ಅಂದವಾಗಿ ಮನಮೆಚ್ಚುವಂತಿದೆ. ಸುರ್ನೆಯ ಹೂವು ಜುಂಕಿಯಂತೆ ಬಾಲಿಗಳ ಹಾಗೆ ಕೆಳಗೆ ವಾಲುತ್ತಿವೆ, ಕಿರಣದ ಹೂವು ಉತ್ತಮ ಖಲಂಫರಿನ ಹೂವಾಯಿತು. ಅರಳದೇ ಇರುವ ಸಂಪಿಗೆ ಕಿವಿಯ ಬಾಗಿಲಾಯಿತು. ಸೂರ್ಯಕಾಂತಿಯ ಖಚಿತ ಜಡಿಮಳೆಯಂತೆ ಕಾಣುತ್ತವೆ. ಕಮಲ ಬಲಕೆರೆಯಲ್ಲಿ ಕೆಂಪಾಯಿತು. ಜಾಜಿ ಹೂ ಬಳ್ಳಿ ತುಂಬಿದ ಯೌವ್ವನದ ಮೇಲೆ ಜಾಲಿಯಂತೆ ಕಾಣುತ್ತದೆ. ಅರ್ಕಂದ್=ಅರ್ಘವಾನ್ ಕೆಂಪುಬಣ್ಣದ ಮೊಗ್ಗಿನ ಗೊಂಚಲು ತಲೆ ಕಿರೀಟದಂತೆ ಕಾಣುತ್ತದೆ. ಇದು ಎಂತಹ ದೃಶ್ಯವೆಂದರೆ ಇದನ್ನು ಮತ್ತೆ ಮತ್ತೆ ನೋಡಬೇಕೆನ್ನಿಸುತ್ತದೆ. ಚಂದ್ರನ ಹೂವಂತೂ ಮಿನುಗುವಂತಹ ಕನ್ನಡಿಯಾಗಿತ್ತು. ಮದನನ ಬಾಣದ ಹೂವು ಅರ್ಧಾಂಗ ವಾಯು ಆಯಿತು. ಘೂಲ್ಸರಿಯ ಸೋರಿಕೆ(ಸಂಬ್ರಾಣಿಯಿಂದ ತೆಗೆಯುವ ಎಣ್ಣೆ=ಸುಗಂಧ ವಸ್ತು) ಜಾರಿಯಾಯಿತು. ಪ್ರಿಯೆಯ ಎತ್ತರವನ್ನು

ಬನದಲ್ಲಿ ನಾಜೂಕಾಗಿ ಅಮಿಕಲು ಸರ್ವೆಮರ ಜಂಬದಿಂದ ಬಡಾಯಿ ಕೊಚ್ಚಿತು. ಹೀಗೆ ನೀವು ಹೂಗಳ ದರ್ಶನ ಪಟ್ಟಿದೀರಿ, ಮತ್ತೊಂದು ಕಡೆ ಹಣ್ಣುಗಳು ಬೇರೆ ಇಡಲಾಗಿತ್ತು. ಕಾರ್ಮೋಡ ಪ್ರಕಾಶವಾಗಿ ಜೋರಾಗಿ ಸುರಿದಿದ್ದರಿಂದ ಸೇಬು ಅದರ ಸ್ವಚ್ಛ ಹನಿಗಳಿಂದ ತೊಳೆದುಹೋಯಿತು. ಜೋದಾ(ಹಣ್ಣಿನ ಹೆಸರು)ಕಿವಿಯ ಗೊಂಚಲು ಬಣ್ಣ ಬಣ್ಣದಂತೆ ಕಾಣುತ್ತದೆ. ಪ್ರಕಾಶಮಯ ಕಂದೀಲಿನ ಝೂಲೆಯಂತೆ ಕಾಣುತ್ತದೆ. ಪ್ರತಿಯೊಂದು ದಾಳಂಬರಿ ಕೆಂಪುರತ್ನದ ಹೊಗೆಸೊಪ್ಪು ಸೇವನೆಯ ನಳಿಕೆಯಾಗಿದೆ. ನೇರಳೆ ನೀಲಮಣಿಯ ಕೊರಳ ಪಟ್ಟಿಯಂತೆ ಕಾಣುತ್ತದೆ. ಪ್ರತಿಯೊಂದು ನೀರಿನ ಪಾತ್ರೆಯಲ್ಲಿ ಮಾವಿನ ಹಣ್ಣು ಇಟ್ಟು ನೀರಿನಿಂದ ತುಂಬಲಾಗಿದೆ. ಅವುಗಳಲ್ಲಿ ಅಮೃತವನ್ನು ತುಂಬಿ ಜೋಡಿಸಲಾಗಿದೆ. ಲೋಟಗಳಲ್ಲಿ ಪನ್ನೀರು ತುಂಬಿ ತುಳುಕಾಡುವಂತೆ ಕಾಣುತ್ತದೆ. ಅಂಜೂರದಿಂದ ಜೇನು ತೊಟ್ಟಿಕ್ಕುತ್ತಿದ್ದೆ. ಶರಬತ್ತಿನಂತಹ ಎಣ್ಣೆನೀರಿನ ನೀರು ಯಾವುದಕ್ಕಿಂತ ಕಡಿಮೆ ಏನು ಅಲ್ಲ, ಮೃದುವಾದ ತುಟಿಗಳ ಮೇಲೆ ಫಿರ್ನಿ ಕಟ್ಟುವಂತೆ ಎಳೆನೀರಿನ ಗಂಜಿ ಇದೆ. ಎಳೆನೀರಿನ ನಿರ್ಮಲ ಜಲದಲ್ಲಿ ತಣ್ಣನೆಯ ಗಂಜಿ ಮೊಸರಿನ ಮಡಿಕೆಯಲ್ಲಿ ಅಮೃತ ಹೆಪ್ಪುಕಟ್ಟಿದೆ. ಹಲಸಿನ ಹಣ್ಣು ಅನೇಕ ಗೂಡುಗಳಿರುವ ಪೆಟ್ಟಿಗೆಯಂತೆ ಅದರ ಪ್ರತಿಯೊಂದು ಗೂಡಲ್ಲಿ ಸಂತುಷ್ಟ ಫಲ ತುಂಬಿದೆ. ಇದೇ ಕೆನ್ನಗಳ ಮೇಲೆ ಸುಂದರವಾದ ಮೂಗಿನಂತೆ ಕನ್ನ/ತೂತು ಪ್ರತಿಯೊಂದು ಕಿತ್ತಳೆಯಂತೆ ಸುಂದರವಾದ ಚೆಂಡು ಚಿಕ್ಕ ವಯಸ್ಸಿನ ಚಂಚಲ ಹುಡುಗಿಯರ ತುಂಬುಯೌವ್ವನ ಮೇಲೆ ಕಾಮುಕತೆಯಿಂದ ನೋಡುವರು ತಡೆದು ರೌಕೆಯಲ್ಲಿ ಅಡಗಿರುವ ಅಮೃತ ಫಲಗಳನ್ನು ನೋಡುತ್ತಾರೆ. ಬಾಳೆಹಣ್ಣಿನ ಪ್ರತಿಯೊಂದು ಚಿಪ್ಪಿನ ಮೇಲೆ ಶೂರರು ತನ್ನ ಬೆರಳುಗಳನ್ನು ಜೋಡಿಸಿ ನೋಡುತ್ತಾರೆ. ಹುಳಿ ಹಾಗೂ ಸಿಹಿಯಂತೆ ಯಾವ ಸೂರಕ ಕಾಣಿಸುತ್ತದೆಯೋ ನಿಸ್ಸಂದೇಹವಾಗಿ ಅವು ಪ್ರಿಯೆಯ ಪ್ರತಿಯೊಂದು ಹುಬ್ಬದಂತೆ ಕಾಣುತ್ತವೆ. ವರವಾಗಿರುವುದನ್ನು ನೋಡಿ ತಾನು ಚೆನ್ನಾಗಿ ವರನ ಹಾಗೆ ಶೃಂಗರಿಸಿಕೊಂಡು ಶಾಹರು ಏಕಾಂತವಾಗಿ ವಾಯುವಿಹಾರ ಮಾಡಲು ಹೊರಟರು. ಶಹಬಾಷ್! ಶಾಹನ ಏಕಾಂತ ಜಾಗವು ಬಲು ಮನಮೆಚ್ಚುವ ಸ್ಥಳ, ಉನ್ನತ ಸ್ಥಳ ಉದ್ಯಾನವನದ ಹಾಗಿದೆ. ಅದರ ಕೆಳಗಿರುವ ನೆಲ ಮಕಮಲ್‌ನಂತಹದು. ಚಂದ್ರನೇ ಸ್ವತಃ ಪ್ರತಿಯೊಂದು ಬನದಲ್ಲಿ ಬೆಳದಿಂಗಳನ್ನು ಹಾಸಿದನು. ಬಣ್ಣ ಬಣ್ಣದ ನಕ್ಷತ್ರಗಳು ಹೂವನದಂತೆ ಕಾಣುತ್ತದೆ. ಶಹಿನ್ಷಾಹರು ವೇದಿಕೆ ಮೇಲೆ ಆಗಮಿಸಿದರು. ಗಗನದಿಂದಲೇ ಆ ವಿಶ್ರಾಂತಿಗೃಹಕ್ಕೆ ಮಹತ್ವ ಅವರು ಸಿಂಹಾಸನ ಅಲಂಕರಿಸಿದಂತೆ ಒಳ್ಳೆಯ ಸ್ವರದಲ್ಲಿ ಹಕ್ಕಿಗಳು ಬಧಾಯಿಗಳನ್ನು ಹಾಡಿದವು. ಹೂವು ಹಂಪಳದ ಬಾದಶಾಹನು ಹೃದಯಪೂರ್ವಕಾಗಿ ತನ್ನ ದೃಷ್ಟಿ ಹಾಗೂ ವಿವೇಕದಿಂದ ಭೋಗವಿಲಾಸಗಳನ್ನು ತೆಗೆದು ಕೊಂಡರು. ಸಮೃದ್ಧಿ ದಾಸನಾಗಿ ಶಾಹನ ಬಳಿ ನಿಂತುಕೊಂಡನು. ಲಕ್ಷ್ಮಿ ದಾಸಿಯಾಗಿ ಬಂದು ಸೇವೆ ಮಾಡಿದಳು. ಶಾಹರ ಆಜ್ಞೆಯ ಮೇರಿಗೆ ಆಕಾಶ ಓಡಲು ಸಿದ್ಧವಾಯಿತು. ಆಕಾಶಗಂಗೆಯೂ ಸಹ

ತಾನು ಸೊಂಟ ಕಟ್ಟಿ ಸಿದ್ಧವಾಯಿತು. ಹೀಗೆ ಬಾದಶಾರ ಹುರ್ಝೋರಿನಲ್ಲಿ ಬಂದು ಎಲ್ಲರೂ ಮುಜ್ರಾ ಮಾಡಿ ತೇಜೋವಲಯ ಆಕಾರದಲ್ಲಿ ತಮ್ಮ ತಮ್ಮ ಸ್ಥಳಗಳಲ್ಲಿ ನಿಂತರು. ದಾರಿಯ ಎರಡು ಬದಿಯಲ್ಲಿ ಶೂರರು ಸಾಲು ಸಾಲಾಗಿ ನಿಂತರು ಅವರಲ್ಲಿ ಅದೆಷ್ಟೋ ಅಮಲೇರಿದ ಆನೆಗಳೂ ಅದೆಷ್ಟೋ ಗಂಡು ಹುಲಿಗಳು. ಅವರಲ್ಲಿ ಯಾರು ರಾಜ ದರ್ಬಾರಿನ ವಿಶೇಷ ವ್ಯಕ್ತಿಗಳಿದ್ದರು ಅವರು ದರ್ಬಾರಿನಲ್ಲಿ ಸೇರಿಕೊಂಡರು. ವೃದ್ಧರಾಗಲಿ ಅಥವಾ ಯುವಕರಾಗಲಿ ಪ್ರತಿಯೊಬ್ಬರು ಪ್ರತಿ ಕಲೆಯಲ್ಲಿ ಎಲ್ಲ ಗಂಡಸರು ಚೆನ್ನಾಗಿ ಪಳಗಿದ್ದವರು(ಪ್ರತಿ ಕಲೆಯ ನಿಪುಣರಾಗಿದ್ದ). ಒಬ್ಬ ಒಬ್ಬ ಆಸಿಫ್(ರಾಜ್ಯಪಾಲ) ಉಪಾಧಿಯುಳ್ಳವ, ಆ ಯುಗದ ಲುಖ್ಮಾನ್ (ಧೀಮಂತ) ಹಾಗೂ ಒಳ್ಳೆ ಮನೆತನದವನು, ಉನ್ನತ ವಂಶದವನು. ಉಪಾಯಗಳಲ್ಲಿ ಪ್ರತಿ ಒಬ್ಬರು ಬೂಅಲಿ ಸೇನಾ ಹಾಗೂ ಭಾಷಣಗಳಲ್ಲಿ ಬೂರ್ಝುರ್‌ಗಳಿರಿದ್ದ ಹಾಗೆ ಎಲ್ಲರೂ ಶಾಹರವರ ಕೈಯಲ್ಲಿ ತರಬೇತಿ ಪಡೆದವರು. ಎಲ್ಲರೂ ಶಾಹರ ಕೈ ಜೋಡಿಸಲು ಬಂದು ತಲಪಿದರು. ಎಷ್ಟೊ ಹೊತ್ತಿಗೆ ದಕ್ಷಿಣದ ಶಾಹರು ಎಷ್ಟೋ ಖಾಸಾ ಏಕಾಂತದಲ್ಲಿರುವರು, ಸಭೆಯನ್ನು ಮನರಂಜನೆ ಮಾಡುವರು. ಆಗ ಅಪರಿಚತರೆಲ್ಲ ದೂರವಾದರು. ದೇಶದ ಆಡಳಿತಗಾರರು ಮಾತ್ರ ಉಳಿದುಕೊಂಡರು. ಪ್ರತಿಯೊಬ್ಬ ವ್ಯಕ್ತಿಯೂ ವಿಶೇಷ ನಿಷ್ಠಾವಂತ, ಅವರೆಲ್ಲ ಬಾದಶಾಹರ ದರ್ಬಾರಕ್ಕೆ ಆಗಮಿಸಿದರು. ಅವರಿಗೆ ಯುಗದ ಅರಿಸ್ಟಾಟಲ್ ಅಂತನೇ ಹೇಳಬೇಕಾಗುತ್ತದೆ. ಅಂದರೆ ಅವರು ಅಬ್ದುಲ್ ಮುಹಮ್ಮದ್ ಹಾಗೆ ಕಾಣಿಸುತ್ತಾರೆ. ಅವರ ಕೈಯಲ್ಲಿ ಶಾಹಿ ವ್ಯವಸ್ಥೆ ಯೋಗ್ಯವಾದುದು. ಅವನ ಕಾರ್ಯನಿರ್ವಹಣೆಯಿಂದ ದೇಶಕ್ಕೆ ಶಕ್ತಿ ಸಿಗುತ್ತದೆ. ಶಹಬಾಷ್! ಅವನು ಅಭಿಪ್ರಾಯ ಹೇಳುವನೂ ಹಾಗೂ ಬೇರೆಯವರ ಅಭಿಪ್ರಾಯದ ಸಹಾಯವೂ ಪಡೆಯುತ್ತಿದ್ದ, ಬಲು ಉಪಾಯದಿಂದ ಗಾಳಿಗೂ ಸೆರೆ ಹಿಡಿಯುತ್ತಿದ್ದ. ಬಲು ದೂರದರ್ಶಕ ಸೂರ್ಯನ ಕಣ್ಣಿನ ಹಾಗೆ, ಜಂಷೀದಿನ ಲೋಟದಂತೆ ಬಲು ಧೀಮಂತ, ಬಲು ಬುದ್ಧಿವಂತ, ತನ್ನ ಬುದ್ಧಿಯಿಂದ ದ್ವೇಷವನ್ನು ದೂರಮಾಡುವನು. ಪಾರಿವಾಳ ಹಾಗೂ ಗಿಡುಗದಲ್ಲಿ ಒಗ್ಗಟ್ಟು ಮಾಡಿಸುವನು. ಅವನನ್ನು ನಂಬಿ ಅವನ ಕಾಲದಲ್ಲಿ ಕಳ್ಳರೂ ಹಾಗೂ ಒಳ್ಳೆಯವರೂ ಸಹ ನಂಬುತ್ತಿದ್ದರು. ತನ್ನ ಬುದ್ಧಿ ಹಾಗೂ ಸೈನ್ಯದಿಂದ ಅರಸುತನಕ್ಕೆ ಶಕ್ತಿ ಕೊಡುವನು. ಸತ್ಯ ತಿಳಿಯುವನು. ಸತ್ಯ ನೋಡುವನು ಹಾಗೂ ಸತ್ಯವನ್ನೇ ಇಷ್ಟ ಪಡುವನು. ಶ್ರದ್ಧೆಯುಳ್ಳ ಮನುಷ್ಯ ಬಾದಶಾಹರ ನಿಷ್ಠಾವಂತ, ಸುಶೀಲತೆ ಅವನ ಆತ್ಮದಲ್ಲಿ ಬೆರತುಹೋಗಿತ್ತು. ದೃಷ್ಟಿಯಲ್ಲಿ ಪ್ರಾಮಾಣಿಕತೆ, ವಿನ್ಯಾಸದಲ್ಲಿ ಮನಸ್ಸಿತ್ತು. ಅವನ ಸಂಗಡದಿಂದ ನೋವಿನ ಮನಸ್ಸಿಗೆ ಆರಾಮು ಸಿಗುತ್ತಿತ್ತು. ಅವನ ಒಂದುಮಾತು ಹತಭಾಗಿಗಳಿಗೆ ನಿತ್ಯ ಹೊಸ ಜೀವನ ಕೊಡುತ್ತಿತ್ತು. ದಾನಧರ್ಮದ ಆಕಾಶ, ಸಹಾನುಭೂತಿ, ಪುಣ್ಯ ಹಾಗೂ ದಯೆಮಾಡುವವ. ಅವನ ಹೃದಯ ಸಮುದ್ರದ ಅಲೆಗಳ ಹಾಗೆ ನಿತ್ಯ ಅಂಗೈಯಲ್ಲಿರುತ್ತದೆ. ನಿತ್ಯವೂ ಆ

ಬಕ್ಷೀಸಿನ ಮೋಡಕ್ಕೆ ಸುರಿಸುವನು, ವಿದ್ಯೆಯ ತೋಟಕ್ಕೆ ಜೀವ ನೀಡುವನು. ಅವನ ಅಸ್ತಿತ್ವ ನಿಪುಣತೆಯ ಪುತ್ಥಳಿ, ಪ್ರತಿಯೊಂದು ವಿದ್ಯೆಗೆ ಅವನ ಸ್ಮರಣ ಶಕ್ತಿ ಜೀವ ಕೊಡುತ್ತದೆ. ಅವನ ಅಂತಃಕರಣದಿಂದ ಯಾವ ಮಾತಲ್ಲಿ ರಸ ತುಂಬುತ್ತದೆಯೋ ಆ ಮನಸ್ಸು ಅಮೃತ ತುಂಬಿ, ಸಿಹಿ ಮಾತನಾಡುತ್ತಾನೆ. ಖಡ್ಗ ಯಾರ ಕೈಯಲ್ಲಿರುತ್ತದೆಯೋ ಅವನದೇ ಆಜ್ಞೆ ಹಾಗೂ ಅವನ ಬಳಿ ಅವನ ಕುದುರೆ ಮುಲ್ಕೆ ಮೈದಾನ, ಮನಸಾರೆ ಯಾವ ನಿಷ್ಕಾಪಟ್ಯದ ದಾರಿ ಮೇಲೆ ನಡೆದ ತನ್ನ ಗೌರವ ಕಾಪಾಡಿಕೊಂಡು ಶಾಹನ ಹೆಸರು ಕಾಪಾಡಿದ. ಅದೇ ಸಾಲಲ್ಲಿ ಒಬ್ಬ ಸುಪ್ರಸಿದ್ಧನಿದ್ದ ದಕ್ಷಿಣ ಭಾಗದ ಅವನೊಬ್ಬ ಪ್ರತಿಷ್ಠಿತ ದಂಡ ನಾಯಕ, ಸರ್ಕಾರದ ಮಂತ್ರಿ, ಸೌಭಾಗ್ಯದ ರಾಜ, ಅವನ ಹೆಸರು ಮುಹಮ್ಮದ್ ಹಾಗೂ ಇಖ್ಲಾಸ್ ಖ಼ಾನ್ ಬಿರುದು. ಅವನಂತೂ ನಿಷ್ಠೆಯ ಕಾಮ ಕಸ್ತೂರಿಯ ಸುಗಂಧ ಈ ವಿಶೇಷ ಉದ್ಯಾನದ ತಾತ್ಪರ್ಯ ಎಷ್ಟೊಂದು ರಹಸ್ಯ ಬಲ್ಲವರಿದ್ದಾರೆ ಅವರಲ್ಲಿ ಸಂಕ್ಷಿಪ್ತ ಶಹಿನ್ಷಾಹರ ಸಾಮಿಪ್ಯ ಹೊಂದಿದವ ಹಾಗೂ ಭರವಸೆಗೆ ಯೋಗ್ಯ, ಶೂರ, ಸದ್ಗುಣ ಹಾಗೂ ಒಳ್ಳೆ ಸ್ವಭಾದವ, ಅದೃಷ್ಟಶಾಲಿ ವಂಶದವನು. ದಕ್ಷಿಣದಲ್ಲಿ ಮಹನಿಯತೆಗೆ ಅವನ ಮನೆಯಲ್ಲಿ ಜಾಗವಿದೆ. ಈ ಪ್ರಪಂಚದಲ್ಲಿ ಒಳ್ಳೆತನಕ್ಕೆ ಹೆಸರಿದೆ. ಯಾರ ಮುಖದಿಂದ ಹೃದಯದಲ್ಲಿ ಶ್ರೀಮಂತಿಕೆ ನೆಲಯೂರುತ್ತದೆಯೋ ಅವನ ಕೈಯಿಂದ ಬತ್ತಳಿಕೆ ಕಟ್ಟಿಸಿಕೊಳ್ಳುವುದು ಹೆಮ್ಮೆ ಪಡುವಂತಹದು. ಯಾರು ಸಮುದ್ರದ ಹೃದಯ ಯಾರ ತಾಯಿ ಹೃದಯಕ್ಕೆ ನೀರು ಕೊಡುವಳೋ ಅದರ ದರ್ಪದಿಂದ ಸಿಡಿಲು ಶಕ್ತಿ ಪಡೆಯಿತು. ನಿತ್ಯ ಖಡ್ಗದ ಸಾಮಿಪ್ಯ ಹೊಂದಿರುವನು, ಆ ಹುಲಿಯನ್ನು ಎದುರಿಸವವನು ಯಾರೂ ಇರಲಿಲ್ಲ. ಈ ಹುಲಿ ಅಂತಹ ಗಂಡು ಹುಲಿಗಳ ಸೈನ್ಯ ಇಟ್ಟಿದ್ದ, ಯಾರ ಮೇಲೆ ಆಕ್ರಮಿಸುತ್ತಿದ್ದನೋ ಅವರನ್ನು ಹೊಡೆದು ಮುಗಿಸಿ ಬಿಡುತ್ತಿದ್ದ. ಈ ಶೂರ ಯುದ್ಧದಲ್ಲಿ ಖಡ್ಗ ಎಳೆದರೆ ಹತ್ತಿಗೆ ಕಿರಣ ತಾಗಿದರೆ ಹೇಗೆ ಉರಿಯುತ್ತದೆಯೋ ಹಾಗೇ ಸೂರ್ಯ ಸುಡಲಾರಂಭಿಸುತ್ತದೆ, ಬಲು ಹೆಸರಾಂತ, ಮರ್ಯಾದಸ್ತ ಹಾಗೂ ವಿಜ್ರಂಭಣೆಯಿಂದ ಶಾಹರ ಪ್ರತಿಯೊಂದು ಕೆಲಸದ ಮೇಲೆ ಅರ್ಪಣಾಭಾವ ಇಡುವನು. ಒಬ್ಬ ಖಾನ್‌ಶರ್ಝನಿದ್ದ. ಅವನಿಗೆ ಅಲ್ಲಾಹ ನಿತ್ಯ ಸಹಾಯ ಮಾಡುತ್ತಿದ್ದ. ಅಲಿರವರ ಸಂಪುತ್ರ,ಮುಸ್ತಫ಼ಾ (ಸೊ) ಅವರ ಅಜ್ಜ, ಅವನ ಗದ್ದಲದಿಂದ ಕಲ್ಲು ನೀರಾಗುತ್ತದೆ. ಅವನ ದರ್ಪದಿಂದ ಬೆಂಕಿಯೂ ಸಹ ಕಲ್ಲಲ್ಲಿ ಅಡಗಿಕೊಳ್ಳುತ್ತದೆ. ಗಗನ ಯಾವ ಕೈಯಲ್ಲಿ ಶಕ್ತಿ ಇಟ್ಟಿದ್ದಿತೋ ಆ ಖಡ್ಗವನ್ನು ನೋಡಿ ವಿಜಯವೂ ಸಹ ಹುಮ್ಮಸ್ಸು ಪಡೆಯುತ್ತದೆ. ಪುಣ್ಯ ಸಹಜಪ್ರವೃತ್ತಿ, ಸುಗುಣ, ಮಹಾ ಸಾಹಸಿ ತನ್ನ ತೋಳದ ಬಲದಿಂದ ಅದೃಷ್ಟಶಾಲಿ. ಯಾವುದೇ ದೇಶ ಲಂಗು ಲಗಾಮಿಲ್ಲದೇ ಬಂಡಾಯ ಏಳುತಿತ್ತೋ ಅವುಗಳನ್ನು ಜಯಗಳಿಸಲು ಇವನೇ ಸನ್ಮಾರ್ಗ ಹೊಂದಿದ ಮಾರ್ಗದರ್ಶಕ. ತನ್ನ ಜೀವವನ್ನೇ ಮುಡುಪಿಟ್ಟು ಆಟಆಡಿ ಎದುರಾಳಿಯ ಮನಸ್ಸಿನ ಇಂದ್ರಜಾಲವನ್ನು

ಮುರಿಯುವವನು ಎಂದು ಈ ಶರ್ಝ್ತಾ ತನ್ನ ಗಮನ ಸೆಳಿಯುತ್ತದೆ. ಆಗ ಐರಾವತನೂ ಸಹ ಇಂದ್ರನ ಸ್ಥಾನದಲ್ಲಿ ಮಲಗಲು ಸಾಧ್ಯವಿಲ್ಲ. ಯಾರು ತನ್ನನ್ನು ಗಜಪತಿ ಎಂದು ಮಿದುಳಿರುವ ಜನರ ಮೇಲೆ ತನ್ನ ಹಸ್ತ ಎಸೆದು ಅವರ ಮಿದುಳನ್ನು ಕುತ್ತುಹಾಕುವನು. ಶಾಹನ ದೃಷ್ಟಿ ಎಲ್ಲಿಯವರಿಗೆ ಬೀರುತ್ತದೆಯೋ ಅಲ್ಲಿಯವರೆಗೂ ಅವನ ಪ್ರವೇಶ. ಅವನು, ದೃಷ್ಟಿಯೂ ಹೋಗದೇ ಇರುವಂತಹ ಜಾಗದಲ್ಲಿ ಇವನು ಹೆಜ್ಜೆ ಇಡುವನು. ಇವನ ಸೈನ್ಯದ ಹೃದಯ ಅಗ್ನಿಯದು. ಇವನ ಖಡ್ಗದ ನಾಲಿಗೆ ಜ್ವಾಲಾಮುಖಿ, ಈ ಅಗ್ನಿ ಯಾರ ಹೃದಯದ ಮೇಲೆ ಉದ್ರೇಕಗೊಳ್ಳುತ್ತದೆಯೋ ಅವನ ಮನೆ ಹೃದಯದಿಂದ ಉದ್ರೇಕಗೊಂಡು ಉರಿಯುತ್ತದೆ. ಅವನ ಒಂದೇ ರೀತಿಯ ಸೈನ್ಯ ವಿಶಿಷ್ಠ ಸುಂಟರಗಾಳಿ ಆದರೆ ಇದು ಶರ್ಝ್ತಾನ ಅಮಲೇರಿದ ಆನೆಯ ಸೈನ್ಯ. ಇದು ಮಹಾಬಲಿ ಶಾಹರ ಆಜ್ಞೆಯ ಮೇರೆ ತ್ಯಾಗ ಮಾಡುವನು. ಅಲಿರವರಿಂದ ಗೌರವಿಸಲಾಗಿದೆ ಹಾಗೂ ಸದಾ ಅಲಿರವರ ಸಹಾಯ ಇದೆ. ಇವನು ಮಹಾನ್ ಬಹ್ಲುಲ್ ಖ಼ಾನನ ಮೊಮ್ಮಗ, ಅಬದುರ್‍ರಹೀಂ ರವರ ಮಗ ಅಬ್ದುಲ್ ಕರೀಂ ಬಲು ಸುಪ್ರಸಿದ್ಧ ಫೌಜ್ದಾರ, ಖರ್ಚು ಮಾಡಲು ಪ್ರಾಣ ನಗದು, ಇದನ್ನು ಬಿಟ್ಟರೇ ಅಧಿಕವಾಗಿರುವ ಕೈಗಳು, ಸಾಲಕೊಡಲು ಸಿದ್ದ, ಸದಾ ಜೀವವನ್ನು ಅಂಗೈಯಲ್ಲಿ ಇಡುವನು. ನಿತ್ಯ ಶಾಹರ ಎತ್ತರವಾದ ನೆರಳು ಅವನ ತಲೆ ಮೇಲೆ ಹಾಗೂ ದೊಡ್ಡ ಮನ್ಸಬ್ ಧರಿಸಿದವನು. ಸರ್ಕಾದ ಸದಸ್ಯರನ್ನು ತಿಳಿದು ಅವರನ್ನು ಅಲಂಕರಿಸುವುದರಲ್ಲಿ ಉತ್ತಮ ಕೆಲಸ ಮಾಡುತ್ತಿದ್ದ. ಅಧಿಕ ಕೆಲಸವಿದ್ದಾಗ ಬಲು ಚಾತುರ್ಯದಿಂದ ಬುದ್ಧಿವಂತಿಗೆಯಿಂದ ಕೆಲಸ ಮಾಡುತ್ತಿದ್ದ. ಅವನು ಪ್ರತಿಯೊಂದು ಕಾರ್ಯದಲ್ಲಿ ನೇರವಾಗಿ ಹೊಣೆಹೊತ್ತಿದ್ದರಿಂದ ಯಾವ ಕೆಲಸದಲ್ಲೂ ಸಹ ಕೊರತೆ ಇರುತ್ತಿರಲಿಲ್ಲ. ಅವನ ಸೈನ್ಯ ನದಿಯಂತೆ ಕಾಣುತ್ತಿತ್ತು. ಏನಾದರು ಆಕ್ರಮಣಿಸಿ ಮುಖತಿರುಗಿಸಿದರೆ ವಿಜಯದ ಅಲೆ ಬರುತ್ತಿತ್ತು. ಅವನ ದೊಡ್ಡಸ್ತಿಗೆ ನಿತ್ಯವೂ ಶತ್ರುಗಳ ಮೇಲೆ ಕಾಣಿಸಿಕೊಳ್ಳುತ್ತದೆ. ಸಮರಕ್ಕೆ ನಿಂತುಕೊಂಡರೆ ಬೆಟ್ಟದಂತೆ ಕಾಣಿಸುತ್ತಾನೆ. ದಂಡಿನ ಕೋಪಕಾರೆಯಿಂದ ಶತ್ರು ತಾಳ್ಮೆ ಕಳೆದುಕೊಳ್ಳುತ್ತಾನೆ. ಬಂದೂಕುಗಳಿಂದ ಸಿಡಿಲುಗಳು ಹಾಗು ಬಾಣಗಳಿಂದ ಮೋಡ ಕವಿದುಕೊಳ್ಳುತ್ತದೆ. ದೊಡ್ಡ ಅದೃಷ್ಟವಂತ ಖ಼ವಾನೀನ್ ಖ಼ಾನ್ ಪುಣ್ಯವಂತ ಹಾಗೂ ಶೌರ್ಯದ ಗುರುತು, ಶಾಹರ ಸಹಾಯದ ಹೆಸರುಗಳಿಸುವ, ದೃಢನಿಲುವು ತೆಗೆದುಕೊಂಡು ಜಗಳಾಡುವನು ರಣಧೀರರಲ್ಲಿ ಇನ್ನೂ ಅನೇಕರು ಅಪ್ರತಿಮರಿದ್ದರು. ಆಗ ಒಬ್ಬೊಬ್ಬರಾಗಿ ದಕ್ಷಿಣದ ಮಂತ್ರಿಗಳೆಲ್ಲ ಎದ್ದರು. ಪ್ರತಿಯೊಬ್ಬರು ಯುಗದ ವಿದ್ವಾಂಸ ತನ್ನಲ್ಲಿ ತಾನು ಗಣ್ಯ. ಭಯ ಭೀತಿ ತೋರಿಸಿ ಯುದ್ಧ ಗೆಲ್ಲುವರು. ಕುದುರೆಗಳ ಮಂದೆಗಳ ಗುಂಪು ಗುಂಪಲ್ಲಿ ಒಬ್ಬೊಂಟಿಗನೇ ತನ್ನ ಕುದುರೆಯನ್ನು ಓಡಿಸುತ್ತ ಮೊದಲನೆ ಸಾಲಲ್ಲಿ ನುಗ್ಗಿಸುವರು. ಎಕೋಜಿ ಶಾಹ್‌ಜಿರವರ ಪುತ್ರ ಮಂತ್ರಿಗಳಲ್ಲಿ ಬಲು ಹೆಸರಾಂತ ಬುದ್ಧಿವಂತ. ಸರ್ಕಾರದ ಕೆಲಸಗಳಲ್ಲಿ ತುಂಬ ವಿವೇಕಿ. ಶಾಹರ ಸೈನ್ಯದಲ್ಲಿ ಅವನು ತುಂಬ ಮಹಾಬಲ. ಅವನ ಸೈನ್ಯದ ಭಾಲೆಗಳ

ಭಾರವನ್ನು ನೋಡಿ ಮುಘಲರು ನಿತ್ಯ ಮನಸ್ಸಿನಲ್ಲಿ ಮತ್ಸರ ಪಡೆಯುತ್ತಿದ್ದರು. ಗೂಟದಿಂದ ಕಟ್ಟಿರುವ ಅನೇಕ ಕುದುರೆಗಳ ಹಗ್ಗಗಳನ್ನು ಮುರಿದು ಹಾಕಿದ, ದೃಢವಾಗಿ ಯುದ್ಧಮಾಡುವರ ಹೃದಯಗಳಲ್ಲಿ ಭಯ ಹುಟ್ಟಿಸಿದ. ಅನೇಕ ಕುಂಟುತ್ತಿರುವ ಭೋಂಸ್ಲೆ ಕೋತಿಗಳು, ಕಗ್ಗತ್ತಲೆಯ ಪ್ರಪಂಚಕ್ಕೆ ತುಳುಯುತ್ತ ಮುಂದುವರಿದರು. ದಕ್ಷಿಣದ ಶಹಿನ್ಷಾಹರ ಕ್ಷೀಣ ಜನರನ್ನು ನೋಡಿ, ಅವನ ಕೆಲಸ ಮಾಡುವ ನಂಬಿಗಸ್ತರನ್ನು ನೋಡಿ, ಸಂತೋಷ ಪಟ್ಟು ಆಕಾಶದ ಶಾಹ ಜನಾಬರು 'ಓ ಶಾಹರ ಸಾಮಗ್ರಿಯ ಗಟ್ಟಿ ಹಗ್ಗ ನೀವು ಹಿಡಿದಿರುವುದರಿಂದ ದಕ್ಷಿಣದ ಈ ಮನೆ ಬೀಳದಿಂತಿರುತ್ತದೆ. ಏಕೆಂದರೆ ನೀವು ಈ ಸಾಮ್ರಾಜ್ಯದ ಕಂಬಗಳು. ಮುಘಲರು ಸಂಪೂರ್ಣವಾಗಿ ವಚನಭ್ರಷ್ಟತೆ ಮಾಡಿ ಇಲ್ಲಿ ಬಂದು ಗೊಂದಲ ಎಬ್ಬಿಸಲಿದ್ದಾರೆ (ಆಕ್ರಮಿಸಿಲಿದ್ದಾರೆ) ಕುತಂತ್ರಿಗಳು ಮುಂದಾಳಿಯಾಗಿದ್ದಾರೆಂದರೆ ಅವರಿಗೆ ಶೈತಾನ ಮಾರ್ಗದರ್ಶನ ನೀಡುತ್ತಿದ್ದಾನೆ. ಆ ವಚನಭ್ರಷ್ಟರಿಗೆ ಅವನು ಮುಸ್ಲಿಮೇತರರ ಪೂಜಾ ಗೃಹ ತೋರಿಸಿದ್ದಾನೆ. ತನ್ನ ಅಂಗೈಯಲ್ಲಿ ಆಸೆ ದುರಾಸೆಯ ಸ್ವರ್ಗ ತೋರಿಸಿದ್ದಾನೆ. ನದಿಯನ್ನು ಬಿಸಿಲುಕುದುರೆ ಮಾಡಿ ತೋರಿದ್ದಾನೆ. ಕೊಲ್ಲುವ ವಿಷಕ್ಕೆ ಪನ್ನೀರಿನ ಹೆಸರು ಕೊಟ್ಟಿದ್ದಾನೆ. ಅಗ್ನಿಷ್ಟಿಗೆಯನ್ನು ಉದ್ಯಾನವೆಂದು ತಿಳಿಸಿದ್ದಾನೆ. ದಾಳಿಂಬರ ಬೀಜ ಅವರಿಗೆ ಬೆಂಕಿಯ ಹಾಗೆ ಕಾಣಿಸುತ್ತಿದೆ. ನಮ್ಮಿಂದ ಸಹಾಯ ಪಡೆದು ಯುದ್ಧ ಮಾಡಿದರು, ನಂತರ ನಮಗೆ ಕೆಟ್ಟದ್ದನ್ನು ಬಯಸಿ ಶತ್ರು ಆದ. ಅವನಂತೂ ಕೆಟ್ಟವನೇ, ಕೆಟ್ಟ ಪದಾರ್ಥದಿಂದ ಪಾಪ ಸಮರ್ಥನಾಗಿದ್ದರೆ ನಮಗೆ ಸಹಾಯ ಮಾಡುವನು ಮಾನವನನ್ನು ಸೃಷ್ಟಿಸಿದ್ದಾನೆ. ಅವನಿಗೆ ವಿಗ್ರಹಾರಾಧನೆಯ ಬಲವಿದ್ದರೆ ನಮಗೂ ಸಹ ನಮ್ಮ ಪಾಲಕನ ಸಾಮಿಪ್ಯದ ಅಮಲಿದೆ. ಅವನು ನಾಸ್ತಿಕನ ದೇವಾಲಯದಿಂದ ಶರಣ ಪಡೆಯುತ್ತಿದ್ದರೇ. ನಮಗೂ ಹಝ್ರತೆ ಆಸಾರ್‌ರವರ ಸಹಾಯವಿದೆ. ನಮ್ಮ ಸಂಖ್ಯೆ ಕಡಿಮೆ ಇದ್ದರೇನಾಯಿತು ನಮ್ಮ ಮಧ್ಯೆ ಬಾಣ ಹಾಗೂ ಖಡ್ಗವಿದೆ. ನಾನು ಸಿಕಂದರ್, ನನ್ನ ಖಡ್ಗ ಇಂದು ಎಲ್ಲ ತರದ ತಡೆ ಈ ಮಾತನ್ನು ತಿಳಿಯದೆ ಆ ಯಾಜೂಜ್ ಮಾಜೂಜ್(ಪ್ರವಾದಿ ನೂಹರ ಮೊಮ್ಮಗನ ಹೆಸರು ಮತ್ತು ಅವನ ಸಂತತಿ, ಅಲಂಕೃತವಾಗಿ ಪಿತೂರಿಕೋರ ಅಥವಾ ಗಲಭೆಕೋರ) ಇಲ್ಲಿ ಓಡಿ ಬಂದಿದ್ದಾರೆ. ಕಡ್ಡಿಕಸದ ಒಂದು ರಾಶಿ ಇದ್ದರೇನಾಯಿತು ಅದನ್ನು ಸುಡಲು ಒಂದು ಸಣ್ಣ ಕಿಡಿ, ಒಂದು ಸಣ್ಣ ಬೆಂಕಿ ಸಾಕು. ನೀವು ಬಾದಶಾಹರ ಹಿತೈಶಿಗಳು ಹಾಗೂ ಝಿಲ್ಲೆ ಇಲಾಹಿರವರ ಕೃಪಾದೃಷ್ಟಿ ಬೀರಲ್ಪಟ್ಟವರು. ಅವರೆಲ್ಲ ಬರುವ ಮುನ್ನ ನೀವು ಅವರ ಮುಂದೆ ಹೋಗಿ, ನಿತ್ಯ ಎದ್ದುನಿಂತು ಗೌರವ ಕೊಡುತ್ತೀರಿ. ಅವರನ್ನು ಕರೆತನ್ನಿ ಒಂದು ತಲೆಯ ಮಿದುಳು ಮತ್ತೊಂದು ತಲೆಗೆ ತಿನ್ನಿಸಿ, ಒಬ್ಬರಿಗೆ ಚೆನ್ನಾಗಿ ರಕ್ತದ ಕಣ್ಣೀರನ್ನು ಕುಡಿಸಿ, ಒಬ್ಬೊಬ್ಬರ ಕೊರಳಲ್ಲಿ ಕರುಳಿನ ಹಾರ ಮಾಡಿ ತೊಡಿಸಿ, ಒಬ್ಬರ ತಲೆಯ ಚೆಂಡನ್ನು ಇಳಿಸಿ ಕೆಳಗೆ ಬೀಸಾಡಿ, ಬರುವ ಅತಿಥಿಗಳನ್ನು ಚೆನ್ನಾಗಿ ಕುಟ್ಟಿ ವೀಳ್ಯದೆಲೆ ತಿನ್ನಿಸಿ, ರಕ್ತ ಚಿಮ್ಮಿಸಿ, ಒಳ್ಳೆ ಬಣ್ಣ ಬಡೆದು ನಿಸ್ಸಂದೇಹವಾಗಿ ಅವರನ್ನು ಬೀಸಾಡಿ, ಇದರ ನಂತರ ನಜ್ಮಲ್ ಬಣ್ಣ

ಬಡೆದು ಕಾಲಿನ ಕೆಳಗೆ ನಿತ್ಯಕಾಣುವ ಹಾಗೆ ಅತಿಥಿಗಳ ಮೇಲೆ ಮುತ್ತುಗಳನ್ನು ನಿವ್ವಳಿಸಿರಿ ಹಾಗೂ ಏನಾದರೂ ಅವರು ಮುಂದೆ ಸಾಗಿದರೆ ನಾನು ಅವರನ್ನು ಚೆನ್ನಾಗಿ ಕೆಳಗಿಳಿಸಿ ನಾಶದ ದಾರಿಯಿಂದ ನರಕಕ್ಕೆ ಕಳುಹಿಸುವೆ. ಹಾಲನ್ನು ನೋಡಿ ಮಹಾಬಲಿಯನ್ನು ಮರೆತು ತನ್ನೊಡನೆ ಸಾವು ತೆಗೆದುಕೊಂಡು ಕುಣಿದುಕೊಂಡು ಬರುತಿದ್ದಾರೆ. ತನ್ನ ರಕ್ತವನ್ನು ತನ್ನ ತಲೆ ಮೇಲೆ ಸೇರಿಸಿಕೊಂಡಿದ್ದಾರೆ. ಮೊಲ ತಾನೇ ಓಡಿ ಅಡುಗೆ ಮನೆಗೆ ಬಂದಿದೆ. ಇಂದು ನೀವೊಂದು ಶೂರರಾದರೆ ಶೂರರಲ್ಲಿ ನಿಮ್ಮ ಹೆಸರು ಉಳಿದುಕೊಳ್ಳುತ್ತದೆ. ನಿಮ್ಮ ಹೆಸರಾದರೆ ನಮ್ಮ ಕೆಲಸವಾಗುತ್ತದೆ. 'ಮಂತ್ರಿಗಳೆಲ್ಲ ಶಾಹರಿಂದ ಈ ಮಾತನ್ನು ಕೇಳಿದಾಗ ಅವರು 'ನಿಮ್ಮ ಮಾತನ್ನು ಕೇಳಿ ನಾವೆಲ್ಲ ಶೌರ್ಯದಿಂದ ಉಬ್ಬಿದೆವು' ಎಂದು ಹೇಳಿದರು. ಶಾಹರ ನೆಲದಿಂದ ಗೌರವ ಪಡೆಯಲು, ತನ್ನ ಹೆಸರು ಹಾಗೂ ಮರ್ಯಾದೆ ಹೆಚ್ಚಿಸಲು ಅದೇ ಕ್ಷಣ ಅಚಲ ಹುಲಿ ಶರ್ಝ, ಒಂದರಿಂದ ಒಂದು ಬೇಗನೇ ವಿವೇಕದಲ್ಲಿ ಬಂದವು. ಶಾಹರೇ ನಿಮ್ಮಿಂದ ನಾವು ಪ್ರತಿಷ್ಠಿತರಾಗಿದ್ದೇವೆ. ನಿಮ್ಮ ಸಾಮ್ರಾಜ್ಯದಿಂದ ನಾವೆಲ್ಲ ನಿರಪೇಕ್ಷರಾಗಿದ್ದೇವೆ. ಈ ಯುಗದಲ್ಲಿ ತಾವೇ ಅಪ್ರತಿಮ ಬಾದಶಾಹರು, ನಿಜಾಂಶವೆಂದರೆ ತಾವೇ ಈ ಕಾಲದ ಬಾದಶಾಹರು. ನೀವು ಯಾರ ದಾಸರೂ ಅಲ್ಲ, ಅಧೀನರೂ ಅಲ್ಲ, ನೀವು ಸ್ವತಂತ್ರರು. ತಾವು ದಾಸನ ಮೇಲೆ ಯಾವ ಉಪಕಾರ ಮಾಡಿದ್ದಿರೋ ಅವನು ಸಂತುಷ್ಟನಾಗಿದ್ದಾನೆ. ಬಡವರ ಮೇಲೆ ಕೃಪೆ ನಿನ್ನ ದಾಸ್ಯಾರಾಧನೆಯ ಬಂಡವಾಳ. ನಿನ್ನ ಮನೆ ನಮಗೆ ನಿತ್ಯವೂ ನೆಮ್ಮದಿಯ ಮನೆ. ನಿನ್ನ ನೆರಳು ತೂಬಾ(ಸ್ವರ್ಗದ ಒಂದು ಫಲ ಭರಿತ ವೃಕ್ಷ)ಗಿಂತ ಅತಿ ಫಲಭರಿತವಾಗಿದೆ. ನಿಮ್ಮ ನಿಯತ್ತನ್ನು ತಿಂದು ನಾವು ಬೆಳೆದಿದ್ದೇವೆ. ನಿನ್ನ ಉಪ್ಪು ತಿಂದಿದ್ಧೇವೆ ಅದರ ಋಣ ತೀರಿಸುವ ಸರಿಯಾದ ಸಮಯ ಈಗ ಬಂದಿದೆ. ಮುಘಲರು ಅಸಲಿಗೆ ನಪುಂಸಕರು ಆದರೆ ನೆಪಹೂಡುವರು. ನಮ್ಮ ಶೌರ್ಯವೇ ನಮ್ಮ ಢಾಲು, ಮುಘಲರ ಶಸ್ತ್ರಗಳೆಂದರೆ ಬಾಣ ಬಂದೂಕು, ಆದರೆ ನಮ್ಮ ಹಿಡಿತ ಗದೆ, ಖಡ್ಗ ಮತ್ತು ಕಠಾರಿ, ಮುಘಲರು ಚಕ್ರಗಳ ತೋಪದ ಮರೆಯಲ್ಲಿ ಯುದ್ಧ ಮಾಡುವರು. ನಾವು ನುಗ್ಗಿ ದಂಡನ್ನು ಅಸ್ತವ್ಯಸ್ತ ಮಾಡುವೆವು. ಬಿಲ್ಲನು ಎಳೆದ ತಕ್ಷಣ ಅವರ ಪ್ರಜ್ಞೆ ತಪ್ಪುತ್ತದೆ. ನಾವು ಸಣ್ಣ ಶಸ್ತ್ರಗಳಿಂದ ಜಗಳಾಡುವೆವು. ಮುಘಲರು ಬಂದು ಒದೆ ತಿನ್ನುತ್ತಾರೆ. ದಕ್ಷಿಣದ ಯುದ್ಧಗಳಿಗೆ ಆದಷ್ಟು ದೂರವಿರುತ್ತಾರೆ. ಸಾಯುವಾಗ ಪ್ರತಿಯೊಬ್ಬನು ತನ್ನ ಮಗನನ್ನು ಕರೆದು 'ಈ ಮಾತು ಜ್ಞಾಪಕವಿಟ್ಟಿಕೋ ದಕ್ಷಿಣದ ಮೇಲೆ ಯುದ್ಧ ಮಾಡುವ ಅವಸರ ಬಂದರೆ ನಿನ್ನ ಸೇವೆಯನ್ನು ಬಿಟ್ಟುಹಾಕು. ಏಕೆಂದರೇ ಆ ಜಾಗದಿಂದ ನೀನು ಮರಳಿ ಹಿಂದೆ ಬರಲಾರೆ' ಎಂದು ಮಗನಿಗೆ ಬುದ್ಧಿವಾದ ಹೇಳುತ್ತಾರೆ. ಇವರು ಬರುವಾಗ ತನ್ನ ಮಕ್ಕಳನ್ನು ಹಕ್ಕಿನಿಂದ ವಂಚಿತನನ್ನಾಗಿ ಮಾಡಿ, ಪಂಚಾಯಿತಿ ಸೇರಿಸಿ ಪತ್ನಿಯ ಸಂಬಂಧ ಮುರಿಯುತ್ತಾರೆ, ಓ ಶಾಹನೇ ನಿನ್ನ ದಯೆ ನಮಗೆ ಅಮೃತ, ಈ ಅಮೃತದಿಂದ ಎರಡು ಲೋಕಗಳಲ್ಲಿ ಸದೈವವಾಗಿ ಜೀವಿಸಬೇಕಾಗಿದೆ.

ಯಾವ ವ್ಯಕ್ತಿ ಇಲ್ಲಿ ನಿನ್ನ ಕಾರ್ಯದಲ್ಲಿ ಮುಕ್ತಾಯವಾಗುವನೋ ಅವನ ಇಡೀ ಜನ್ಮ ಸಾರ್ಥಕವಾದಂತೆ. ಪ್ರತಿಯೊಬ್ಬರಿಂದ ಗಟ್ಟಿ ಧೈರ್ಯದ ಮಾತು ಹೇಳಿ ಗಂಡು ಹುಲಿಯಾದಾಗ ಸುಪ್ರಸಿದ್ಧ ದಂಡ ನಾಯಕ ಶರ್ಝಖಾನನು ತಡಮಾಡದೇ ನಮಸ್ಕರಿಸುತ್ತ ಹೇಳಿದ, 'ಕೃತಜ್ಞತೆ ನಿನ್ನಂತಹ ಸಾಹಸಿ ಯುವಕ ಶಾಹರಲ್ಲಿ ಯಾರು ಅಜಯ ಆಗಲಿಲ್ಲ. ನಿನ್ನ ಹಿಂದಿನವರ ಮೇಲೆ ನೀನು ಮುನ್ನಡೆ ಸಾಧಿಸಿದ್ದಿಯ. ಯುದ್ಧ ಮಾಡುವುದು ಹಾಗೂ ಮಾಡಿಸುವುದು ಇದು ನಿನಗೇ ಯೋಗ್ಯವಾದದ್ದು. ವೀರರಿಗೆ ನಿನ್ನ ಮಾರ್ಗದರ್ಶನವಿದೆ. ನಿನ್ನ ಖಡ್ಗದ ಮೇಲೆ ಆಣೆ ಮಾಡಿ ಹೇಳುವೆ ನಿನ್ನ ಶೌರ್ಯ ನೋಡಿ ನಿಸ್ಸಂದೇಹವಾಗಿ ಎಲ್ಲಾ ಸಿಪಾಯಿಗಳು ತನ್ನ ಶೌರ್ಯದ ಆತ್ಮಪ್ರಶಂಸೆ ಮಾಡಲು ಬಿಟ್ಟುಬಿಡುತ್ತಾರೆ. ಶಾಹರ ಮೇಲೆ ಅರಸುತನ ನಿನಗೆ ಶೋಭಿಸುತ್ತದೆ. ವೀರರು ನಿನ್ನನ್ನು ಶಾಹ್ ಸಿಪಾಯಿ ಎನ್ನುತ್ತಾರೆ. ಯುದ್ಧಕ್ಕಾಗಿ ಸಾಲು ಕಟ್ಟುವುದರಲ್ಲಿ ನೀನು ಎಲ್ಲರಕ್ಕಿಂತ ಮುಂದೆ ಇರುವೆ ನಿನ್ನ ಖಡ್ಗದ ಮುಂದೆ ಅಮಲೇರಿದ ಆನೆಯೂ ಸಹ ತಣ್ಣಗಾಗುತ್ತದೆ. ಯಾವಾಗ ಜೌಹರ್ ಸಲಾಬತ್ ಖಾನ ಶತ್ರುವಾದನೋ ಆಗ ಶಾಹರು ಅವನ ಗಡದ ಮೇಲೆ ತನ್ನ ದಂಡಿನೊಂದಿಗೆ ಆಕ್ರಮಿಸಿದರು. ಅವನು ಕೆಡಕನ್ನುಂಟಮಾಡಬೇಕೆಂದು ಮನೆ ಮನೆಯಲ್ಲಿ ಪಿತೂರಿಯ ಬೆಂಕಿ ಹಚ್ಚಿದ. ಖಡ್ಗದ ನೀರಿನಿಂದ ಆ ಬೆಂಕಿಯನ್ನು ಆರಿಸಲು ನೀನು ಸ್ವತಃ ಯುದ್ಧ ಮಾಡಿದೆ. ನಿನ್ನ ಕ್ರೋಧ ಸಲಾಬತನ್ನು ಅಟ್ಟಿಸಿತು. ಅವನು ಓಡಿಹೋದ. ಎದೆ ಒಡೆದು ಹೋಗಿ ಸತ್ತ. ಪ್ರಪಂಚದಲ್ಲಿ ಮಲ್ನಾಡಿನ ಯಾವ ಭಯ ಭೀತಿಯಿತ್ತೋ ಅಲ್ಲಿ ಸಿಕಂದರ್ ಸಹ ನುಗ್ಗಲು ಸಾಧ್ಯವಿರಲಿಲ್ಲ, ಆ ದೇಶದ ಸರ್ಹದ್ದಿನಲ್ಲಿ ನುಗ್ಗಿ ಅವನ ತುಳಿಯಲು ಅನೇಕ ಇಂದ್ರಜಾಲವನ್ನು ಮುರಿದು ತಡೆಗಳನ್ನು ಪಾರು ಮಾಡಬೇಕಾಯಿತು. ನೀನು ಅಂತಹ ಇಂದ್ರಜಾಲವನ್ನು ಮುರಿದೆ ಹಾಗೂ ಆ ರಾಜನ ಕೈ ಮುರಿದು ಸಿಂಹಾಸನವನ್ನು ಪಡೆದೆ. ಎಲ್ಲಿ ಬುದ್ಧಿಗೆ ಜಾಗವಿಲ್ಲದಂತಾಗುತ್ತೆ ಅಲ್ಲಿ ನಿನ್ನ ಠಿಕಾಣೆ ಇರುತ್ತದೆ. ಎಲ್ಲಿ ದೃಷ್ಟಿ ಕೆಲಸ ಮಾಡುವುದಿಲ್ಲವೊ ಅಲ್ಲಿ ನೀನು ಕೆಲಸ ಮಾಡುವೆ. ಸಿಕಂದರ ಸಹ ನಿನ್ನ ಜೊತೆಯಲ್ಲಿ ಕುದುರೆ ಸವಾರಿ ಮಾಡಲು ಸಾಧ್ಯವಿಲ್ಲ ಎಂದ ಮೇಲೆ ಅನ್ಯ ಅರಸರ ಲೆಕ್ಕವೇನು? ನಾನಂತೂ ನಿನ್ನಿಂದ ಪ್ರತಿಷ್ಠಿತನಾಗಿರುವವನು. ಅವನಿಗೆ ನೀನು ಯುದ್ಧದ ಕೆಲಸ ಕೊಟ್ಟಿರುವೆ. ನಾನು ಮುಘಲರೊಂದಿಗೆ ಹೇಗೆ ಹೋರಾಡುವೆ ಎಂದರೆ ಇಂದಿನವರಿಗೆ ಯಾರೂ ಸಹ ಆ ರೀತಿಯ ಯುದ್ಧ ಮಾಡಿರಲಾರರು. ಮುಂದೆ ಹಿಂದೆ ಕೊಕ್ಕರೆಗಳ ಹಿಂಡುಗಳಿನಿಟ್ಟುಕೊಂಡು ಏನೂ ಚಿಂತೆ ಇಲ್ಲದೇ ಬರುತಿದ್ದಾರೆ. ಅವರಿಗೆ ಸಮುದ್ರದ ಶಿಕ್ಷೆಯಂತೆ ವೃತ್ತ ಮಾಡಿ ಕೊಕ್ಕರೆಗಳಂತೆ ಎಲ್ಲರನ್ನು ಚೆಂಡು ಮಾಡುವೆ. ಅವರನ್ನು ಹಿಂಬಾಲಿಸಿ ಬೆನ್ನು ಹತ್ತಿ ಬೇಗನೇ ಕಳುಹಿಸಿಕೊಡುವೆ. ಅವರ ಒಣಗಿದ ತುಟಿಗಳು ಒದ್ದೆಯಾಗಬೇಕಾದರೆ ನರ್ಬದಾ ತುಟಿಗಳ ಮೇಲೆ, ಅಂದರೆ ಅವರನ್ನು ಹಿಂಬಾಲಿಸಿ

ಹೇಗೆ ಓಡಿಸುವೆ ಎಂದರೆ ಓಡುತ್ತಾ ಓಡುತ್ತ ದಾಹಗೊಂಡು ನರ್ಬದಾ ನದಿಯ ಬಳಿ ಹೋಗಿ ಸುಧಾರಿಸಿ ಕೊಳ್ಳುತ್ತಾರೆ. ಅವರು ನಡೆಯಬೇಕೆಂದರೆ ಎಂತಹ ಕಪಾಳೇಟನ್ನು ಕೊಡುವೆವೆಂದರೆ ಅವರು ತಮ್ಮ ನಡಿಗೆ ಮರೆಯುವರು. ಸದ್ಯೆವಾಗಿ ಕೋಳಿಯ ಮರಿಗಳಂತೆ ಮಾಡುವೆ. ಹಾವಿನ ತಲೆ ಮತ್ತು ಬಾಲ ಚೆಚ್ಚುವೆ ಅದು ಸುರುಳಿ ಸುತ್ತುತ್ತಾ ಮಾಯವಾಗಬೇಕು. ಹೇಳುವುದೇನಿದೆ ಅವರನ್ನು ಬಾಗಿಸಿ ಹೇಗೆ ನಾಶ ಮಾಡುವೆಂದರೆ ಅವರಿಗೆ ಕಾಳು ನೀರು ಹುಲ್ಲಿನ ಮೇಲೆ ಕಣ್ಣು ಬೀಳುವುದಿಲ್ಲ. ಬಿಜಾಪುರವನ್ನು ಇಣಿಕಿ ನೋಡುವವರಿಗೂ ಪೇದೆ ತನ್ನ ಹೇಸರಕತ್ತೆಗಳನ್ನು ಅಟ್ಟಿಸಿಕೊಂಡು ತೆಗೆದುಕೊಂಡು ಹೋಗುವರು. ಅಂದರೆ ಪೇದೆಗಳನ್ನು ಹೇಗೆ ಓಡಿಸುವೆವೆಂದರೇ ಅವರು ಹಿಂದೆತಿರುಗಿ ನೋಡಲು ಸಾಧ್ಯವಿಲ್ಲ. ನಮ್ಮ ಸಿಪಾಯಿತನದ ಬಗ್ಗೆ ದೊಡ್ಡಸ್ತಿಗೆ ಏನು ಹೇಳಲು ಸಾಧ್ಯ? ಎಲ್ಲಿಯವರಿಗೆ ನಾವಿದ್ದೇವೆ ಶಾಹರಿಗೆ ಯುದ್ಧವಾಡುವ ಅವಕಾಶ ಬರುವುದಿಲ್ಲ. ನಾವು ಇರುವವರೆಗೂ ಜಗಳ ಶಾಹರ ಬಳಿ ಬರುವುದಿಲ್ಲ. ಲಕ್ಷಾಂತರ ಮುಘಲರು ಬಂದರೇನಾಯಿತು ಸಿಪಾಯಿಗಳಿಗೆ ಅಲಿರವರ ಸಹಾಯ ಇದ್ದೇ ಇರುತ್ತದೆ. ಇಂತಹ ವಿಚಿತ್ರ ಮಾತುಗಳಲ್ಲಿ ಶರ್ಝನ ವಿಶೇಷತೆ ಇದೆ. ನೀವು ಯಾವ ಕೆಲಸ ಮಾಡಲು ಆಜ್ಞೆ ಮಾಡುವಿರೋ ಅದರಿಂದ ಎರಡು ಪಟ್ಟು ಕೆಲಸ ಮಾಡುವ. ಶಾಹಿನ್ಶಾಹರು ಎಲ್ಲರ ಮಾತನ್ನು ಮೆಚ್ಚಿ ಎಲ್ಲರನ್ನು ಒಂದು ಕಡೆ ಸೇರಿಸಿ ಉಪದೇಶಿಸಿದರು. ಆಲಂ ಪನಾಹರವರು ಎಲ್ಲರನ್ನು ಆದೇಶಿಸಿ, 'ದಂಡನ್ನು ಒಂದು ಸಲ ವೀಕ್ಷಿಸಿ, ಹಾಗೇನೆ ಶತ್ರುವನ್ನು ಹೊಡೆಯಲು ಮಂತ್ರಿಗಳಲ್ಲದೇ ಇನ್ನಾರು ವಿಶೇಷ ಜನ ಇರುವರು ನೋಡಿ' ಎಂದು ಶಾಹರು ಆಜ್ಞಾಪಿಸಿದಾಗ ಜನ ಮುಜ್ರಾ ಮಾಡಲು ತನ್ನ ಕತ್ತುಗಳನ್ನು ಮೇಲೆ ಮಾಡಿದರು. ದಕ್ಷಿಣದ ಸಿಪಾಯಿಗಳು ಬಲು ದರ್ಪದವರು ಅವರನ್ನು ನೋಡಿದರೇ ಭೀತಿ ಉಂಟಾಗುತ್ತದೆ. ಏಕೆಂದರೆ ಇವರು ಖಡ್ಗದ ನೀರಲ್ಲಿ ಈಜಾಡುವರು. ಬನಿ ಹಾಶಂ ಮುಸ್ತಫಾರವರ ಉತ್ತರಾಧಿಕಾರಿ, ಇವರಲ್ಲಿ ಸೈಯ್ಯದರು, ಗೌರವಾನ್ವಿತರು ಹಾಗೂ ಮಾನ್ಯತೆ ಪಡೆದವರು, ಹಸನಿ ಮತ್ತು ಹುಸೈನಿ ಹಾಗೂ ಅನೇಕ ಅಲ್ವಿಗಳು, ಮದನಿ ಮಕ್ಕಿ ಹಾಗೂ ರಿಝ್ವಿ ಅನೇಕರು, ಅನೇಕರು ಅಸ್ನು ಅಥವಾ ರಾಂಜೂರಿ, ಅಗ್ನಿ ಪೂಜಕರು, ಖಾದ್ರಿ, ಸರ್ಮದಿ, ಬುಖಾರಿ, ಬಹ್ರಿ ಹಾಗೂ ಅನೇಕ ಮಷ್ಹದಿ, ಅರಬ್ ಶೇಖ್ ಹಾಗೂ ಅನ್ಸಾರ್ ಶುಭ ಧರ್ಮದವರು, ಸಿದ್ದೀಖಿ, ಫಾರೂಖಿ, ನೂರಿ, ಖುರೈಷ್, ಜುನೈದಿ, ಭಲೀಂ, ಇಬ್ನೆಉಮೂರ್, ಬಖ್ತಾರಿ, ಖಿಲಜಿ ಇವರು ಮರೆಯಲ್ಲಿದ್ದು ಕೈ ಮುರಿಯುವರು. ಝುಂದಿವಾಲ್, ಅನ್ಜಾನ್, ವೇಡಿಮತಿ, ಖಂಟಾಲ್, ಕಜ್ಲಿ, ಸಟಿ, ಸೂಖ್ತಿ, ಪ್ರತಿಯೊಂದು ಯುದ್ಧದಲ್ಲಿ ಹೊಸ ಜಯಗಳಿಸುವ ಪ್ರಚಂಡ ಶರ್ಝಯರ ಸಾಲು ಮೆಹ್ದವಿರವರದು, ಗುಜ್ರಾತಿನ ಶೂರರು ದಂಡಲ್ಲಿ ಸುಂದರವಾದ ಹುಲಿಗಳಂತೆ ಕಾಣುವರು. ಜೀವನ್ ಪುರದ ಅನೇಕ ಬಾಡಿವಾಲರು ಅವರ ದೃಷ್ಟಿಯಲ್ಲಿ ಸಮರ ಬಿಟ್ಟರೆ ಬೇರೆ ಯಾವುದೇ ವಿಷಯ ಬರುವುದೇ ಇಲ್ಲ. ದಕ್ಷಿಣದ ರಣಧೀರರಲ್ಲಿ ಅತಿ ಚುರುಕುತನವಿದೆ. ಮುಘಲ

ಸಿಪಾಯಿಗಳಲ್ಲಿ ಅಬಿಸೀನಿಯ ನಿವಾಸಿಗಳಲ್ಲಿ ಆಲಸ್ಯತನ ಜಾಸ್ತಿ ಇದೆ. ಅಮಾರಿ, ನೂರಿ ಹೆಚ್ಚು ಪ್ರಸಿದ್ಧರು, ಕರಾಕಿ ಹಾಗೂ ದಾಮೂದರು ಏನೂ ಕೆಲಸಕ್ಕೆ ಬಾರದೇ ಇರುವರು. ಅನಾರಿ ಮತ್ತು ನುಕ್ರಿ ಅಂತೂ ಪ್ರಪಂಚಕ್ಕೆ ವಿಪತ್ತುಗಳು, ನಾಸಾರತಿಯರು ಕಾಲುವೆ ತೋಡುವರು. ಮವಾಲ ಹೆಸರಿನವರು ಶೂರರಲ್ಲಿ ಹೆಸರುವಾಸಿ, ಅವರು ನಿರಂಕುಶ ಹಾಗೂ ಧೃಢ ನಿಲುವು ತೆಗೆದುಕೊಳ್ಳುವರು. ಪ್ರಾಣಕ್ಕಿಂತ ಅವರಿಗೆ ಮರ್ಯಾದೆ ಪ್ರಿಯವಾದುದು, ಸರ್ಕಾರದ ವ್ಯಾಪಾರದಲ್ಲಿ ಜೀವ ನಗದು ಕೊಡುವರು. ಇವರೆಲ್ಲರು 'ನಮ್ಮೆಲರ ಮೇಲೆ ಶಾಹರ ಕೆಲಸ ಬಿದ್ದಿದೆ, ನಮ್ಮ ಜೀವ ಖರ್ಚು ಮಾಡಿ ಇಂದು ಪ್ರಪಂಚದಲ್ಲಿ ನಮ್ಮ ಹೆಸರು ಉಳಿಸಕೊಳ್ಳಬೇಕಾಗಿದೆ. ದೆಹಲಿಯ ಹೆಸರಾಂತ ಪಠಾಣ ಅವರಂತೂ ನಿತ್ಯ ಮುಘಲರ ರಕ್ತದಾಹಕರು. ರುಹೇಲ್ಖಂಡ್‌ನ ರುಹೇಲರು ಬತ್ತಳಿಕೆ ಕಟ್ಟುವರು. ಬೆಟ್ಟದಲ್ಲಿ ವಾಸ ಮಾಡುವರು ಹಾಗೂ ಬಹಳ ಗಟ್ಟಿಯಾಗಿ ಯುದ್ಧ ಮಾಡುವರು, ಬಟನ್ನಿ, ಲೋದಿ, ಸುರಾನಿ ಪನಿ, ಲೊಹಾನಿ, ಸುರಾನಿ, ಸಟರ್ಬನಿ, ಮಿಯಾನಿ, ಮಕ್ಕಿ, ಮಸ್ವಾನಿಗಳು, ಬಲೋಚ್, ಅಸ್ತ್ರಾನಿ, ಸುರ್ಜ್ವಾನಿಗಳು, ಘುರ್ಘುನ್ನಿ, ಎಷ್ಟೋ ಜನ ಘಲ್ಝಾಯಿ ಹಾಗೂ ಅಫ್ವಾಂ, ಘರಖೀಲ್, ಘರ್ಘಶ್ತಿ ಅಫ್ಘಾನರು ಅನೇಕರು ತರೀನ್, ದಲೇರ್ಝಾಕ್, ಸುರ್ಖ್, ಕಂಬು, ತರಾಹಿ, ಜಮಂದ್, ಖೀಷ್ಗಿ, ನಾಮ್ಜು, ಲದಾಖೀಲ್, ಯೂಸುಫ್ ಝುಯಿ, ನಾಘ್ದಾನ್, ಓಝ್ಛಿ, ಕಝ್ರಾನಿ ಹಾಗೂ ಖೋಖ್ರಾಂ, ಅನೇಕ ಖಲಜ್ ಸೂರೂಪನಿ ಹಾಗೂ ಕಾಕಡರು, ಅದೆಷ್ಟೋ ನಿಯಾಝ್ಛಿ, ಬಾಬಿ ಹಾಗೂ ಬಾಬರ್, ಸತಿ ನಾಸಿರ್, ತಾಂಕ್ ಹಾಗೂ ಸರ್ವಾನಿಯರು, ಮಂದಿ, ಘೋರಿ, ಶರ್ವಾನಿ, ಜಲ್ವಾನಿಗಳು. (ಮುಸಲ್ಮಾನ ಸಿಪಾಯಿಗಳ ಪಟ್ಟಿ ಮಾಡಿದ ನಂತರ ಸುಸ್ರತಿ ಮರಾಠರ ವಿವಿಧ ಜಾತಿ ಹಾಗೂ ಪಂಗಡದವರ ಬಗ್ಗೆ ಪಟ್ಟಿ ಮಾಡುತ್ತಾ ಹೋಗುತ್ತಾನೆ.) 'ಮರಾಠರಲ್ಲೂ ಅನೇಕ ಜಾತಿಗಳಿವೆ ಉದ್ದ ಕೈಯುಳ್ಳವರು ಪಾವೊಲೆ ಯುದ್ಧ ಮಾಡುವರು. ಸಂಪಾಕಿ, ಜಗ್‌ಥಾಪ್, ಜಾದೊನ್ಪವಾರ್, ಅಂದಲ್ಕಾರ್, ನಲ್ವಾರ್, ನೆಬಾಳ್ಕಾರ್, ಮುಹಿತೆ, ಖರಾರೆ, ಖಂದಾಕ್ಕಿ, ಸಿಂಧಿ, ಪಾಂಧ್ರಿ, ನಮ್ಕಳೆ, ಭೋನ್ಸ್ಲೆ, ತುಂಬ ಗಟ್ಟಿ ಖಂಡದವರು ಘೋಡ್‌ಘೋಡೆ ಹಿಂದೆ ತಿರುಗದೇ ಇರುವರು. ಬೊರಾಂಟೆ, ಕಾಂಟೆ ಹೋರಾಟ ಮಾಡಿ ನಾಶಮಾಡುವರು. ಪತೋಲೆ, ವರುಣ, ನಹೋರೆ ಪಂದ್ಯ ಶೃಂಗರಿಸುವರು ಹಾಗೂ ಭಭೂಸೆ, ಚೌಹಾಣ್ ಹಾಗೂ ಭಾಂದ್ವಲ್ಕಾರ್. ಅನೇಕರು ಲೋಮತರು ಅನೇಕರು ಪಾನ್ ಪಾಟೆ, ಹಾಗೂ ಲೊಕಾಟೆ, ಚಾಟೆ, ಸಾಟೆಗಳು ಅನೇಕರು. ಖನಾರೆಗಳು ಅನೇಕರು ಹಂಬ್ರಗಳು, ಹಿಂದಿ, ಬರ್ಗಿ, ಗೋಲಿ, ಧನ್ಗರಗಳು. ತುರ್ತು ಸಮಯದಲ್ಲಿ ಅವರು ಕಾಣಿಸಿಕೊಳ್ಳುವುದಿಲ್ಲ. ಅವರು ಪ್ರಮಾಣಿಕ ಜನರ ಸಹೋದರರಾಗಿದ್ದರೆ ಕಳ್ಳತನದಲ್ಲಿ ಅವರ ಅಪ್ಪ. ಅವರ ಪ್ರತಿಯೊಬ್ಬ ಹೆಣ್ಣು ಮಕ್ಕಳು ಹೇಳಬೇಕಾದರೆ ಅಪ್ಸರೆಯರು, ಚಂದ್ರನಿಗೂ ತಮ್ಮ ಪ್ರೇಮಿಯನ್ನು ತೋರಿಸಿತ್ತಾರೆ. ಅನ್ವೇಷಣದ ವಿಶೇಷತೆ ವ್ಯಕ್ತಪಡಿಸುವಾಗ ಮಧ್ಯದಲ್ಲಿ ಹರಿಯುತ್ತಿರುವ ನೀರು ಬಂದರೂ ಸಹ ಅದರಲ್ಲಿ ಹಾರುವಂತಹ ವ್ಯಕ್ತಿಗಳು, ಓಡಲಾರಂಭಿಸಿದರೆ

ಗಾಳಿ ಜೊತೆಯಲ್ಲಿ ಮಾತನಾಡುವರು (ಅತ್ಯಂತ ದುಡುಕು ಹಾಗೂ ಚುರುಕುತನ = ಮಹಾ ಕುತಂತ್ರ) ಅವನ ತಲೆ ಕಡೆದುಕೊಂಡು ಕೈಯಿಂದ ಕೈಗೆ (ತಕ್ಷಣ) ಹಾರಿಸಿಕೊಂಡು ಹೋಗುವರು. ಅವರು ಹಾಕಿರುವ ಪಾದರಕ್ಷೆಹೆಜ್ಜೆಗಳ ಕೆಳಗೆ ಗುಡುಗುತ್ತವೆ, ತನ್ನ ಹಿಂದೆ ಬೆಂಕಿ ಉದುರಿಸುವ ಸಿಡಿಲುಗಳು ಬೀಳುತ್ತವೆ. ಪ್ರತಿಯೊಬ್ಬನೂ ಭಲ್ಲೆಯ ಪೇಚಲ್ಲಿ ಬಲು ಶೂರರು, ಚಂದ್ರನ ಹಸ್ತ ಬಿಚ್ಚಿದ್ದರೂ ಸಹ ಆ ಕೈಯಿಂದ ಕಡಗ ತೆಗೆದು ಕೊಳ್ಳುವರು. ಸೈನ್ಯದ ಶೂರರು ಒಯ್ಯಾರೆಯಲ್ಲಿ ಮುಖ ಮುಚ್ಚಿಕೊಂಡರೆ ಇವರು ಭಲ್ಲೆಯ ಬೆರಳಿಂದ ಮುಖದ ಪರದೆಯನ್ನು ತೆರೆಯುವರು. ರೋಮಿವರೆಲ್ಲರೂ ಸಶಸ್ತ್ರಕಾವಲುಗಾರರೂ ಬಂದೂಕುಗಳಿಂದ ಮೋಡದ ಕೆಲಸ ತೆಗೆದುಕೊಂಡರು. ಅನೇಕ ರಣಧೀರರ ಬಳಿ ವಿವಿಧ ಸಶಸ್ತ್ರಗಳು, ಹುರ್ಝೂರ್‌ರವರು ಬಂದ ಮೇಲೆ ಎಲ್ಲ ಸಿಪಾಯಿಗಳು ಎದ್ದು ನಿಂತರು. ಶಸ್ತ್ರಸಜ್ಜಿತರಾದುದರಿಂದ ಪ್ರತಿಯೊಬ್ಬರ ಮೈ ಮೇಲೆ ಗಿಲೀಟು ಮಾಡಿರುವ ಹಾಗೆ ಮಿನುಗುವಂತೆ ಕಾಣುತ್ತಿದ್ದರು. ಒಬ್ಬೊಬ್ಬನ ದರ್ಶನದಲ್ಲಿ ಮೋಡ ಕಾಣುವೆವು. ಶಸ್ತ್ರಗಳು ಚಿಕ್ಕದಾದರೂ ದಖನಿಯರ ಹಠಾತ್ ಆಕ್ರಮಣ ಬಲು ದೊಡ್ಡದು. ಆದರೂ ಇವರು ಆನೆಗಳನ್ನು ಬಾಗಿಸಿ ಹೊಡೆದು ತಿರುಗಿಸುತ್ತಾರೆ. ಪಠಾಣರು ಯುದ್ಧದ ಮೇಲೆ ಬಲು ಕಠಿಣ ನಾಯಕತ್ವ, ಮರಾಠರಂತೂ ಯುದ್ಧ ಅಂದರೇ ಸಾಕು ಮೊದಲು ಬರುತ್ತಾರೆ. ಬಾದಶಾಹರು ಇವರೆಲ್ಲರನ್ನು ಸಂತೋಷ ತುಂಬಿದ ದೃಷ್ಟಿಯಿಂದ ನೋಡಿದ್ದರಿಂದ ಸಿಪಾಯಿಗಳ ಅದೃಷ್ಟ ಇನ್ನಷ್ಟು ಖುಲಾಯಿಸಿತು. ಬಾದಶಾಹರು ಹೇಳಿದರು 'ನಾವು ದಕ್ಷಿಣದ ಬಾದಶಾಹರು, ನೀವುಗಳು ನಮ್ಮ ಸರ್ಕಾರದ ವಾರೀಸದಾರರು. ನೀವು ಸಿಪಾಯಿಗಳು. ನಿಮ್ಮ ಸಿಪಾಯಿತನ ಲೋಕಪ್ರಸಿದ್ಧವಾದದು. ಆದರೆ ಮುಘಲರು ಇನ್ನು ದೂರವಿರುವುದರಿಂದ ಇಲ್ಲಿಲ್ಲೇ ನಿಮ್ಮ ಸಿಪಾಯಿಗಿರಿಯ ರೂಪ ತೋರಿಸುವುದು ಹೇಗೆಂದರೇ ಸೂರ್ಯನಿಲ್ಲದೇ ಬಿಸಿಲಿದ್ದ ಹಾಗೆ. ಮುಘಲರು ಸಿಪಾಯಿಗಳಲ್ಲ ಹಾಗೂ ಅವರಿಗೆ ಸಿಪಾಯಿ ಕೆಲಸ ಮಾಡಲು ಬರುವುದಿಲ್ಲ ಹಾಗೂ ಸಿಪಾಯಿಗಳ ಮೌಲ್ಯವೂ ಅವರು ತಿಳಿದಿಲ್ಲ. ಅವರಿಗೆ ಪರಿಸ್ಥಿತಿಯಿಂದ ಬುದ್ಧಿಯನ್ನು ನೋಡಲು ಸಾಧ್ಯವಿಲ್ಲ. ಅವರ ಮಿದುಳಿನಲ್ಲಿರುವ ಬುದ್ಧಿಯಿಂದ ಮರ್ಯಾದಸ್ತರಿಗೆ ಕಳಂಕವಾಗುತ್ತದೆ. ಯಾರು ಮಾನವನೋ ಅವನು ಸಾಧುವಿನ ಮೌಲ್ಯ ತಿಳಿಯುತ್ತಾನೆ. ಹಾಗೇಯೆ ಒಬ್ಬ ಸಿಪಾಯಿಯಾದವನೇ ಒಬ್ಬ ಸಿಪಾಯಿಯ ಮೌಲ್ಯ ತಿಳಿಯುವವನು. ಯಾರು ಮರ್ಯಾದೆ ಕೆಲಸಕ್ಕೆ ತನ್ನ ಜೀವನ ಮಾರುವನೋ ಅವನು ನಮ್ಮಿಂದ ಮಾನ ಬಿಟ್ಟು ಇನ್ನೇನು ಕೇಳಲು ಸಾಧ್ಯ? ಸಿಪಾಯಿಯ ಖಡ್ಗಕ್ಕೆ ನಾವು ಮರ್ಯಾದೆ ಕೊಡುತ್ತೇವೆ. ಯಾರು ಸಿಪಾಯಿ ಇರುವನೋ ಅವನಿಗೆ ಮೊದಲನೆಯ ಸಾಲಲ್ಲಿಟ್ಟು ನಾವು ತಾಂಬೂಲ ನೀಡುತ್ತೇವೆ. ಅಂದರೆ ಎಲ್ಲರ ಮುನ್ನ ಅವನಿಗೆ ಸನ್ಮಾನ ನೀಡಲಾಗುತ್ತದೆ. ಸಿಪಾಯಿಯಿಂದಲೇ ಅರಸುತನಕ್ಕೆ ಶಕ್ತಿ ದಂಡಿನಲ್ಲಿ ಒಡಕುಂಟು ಮಾಡುವವನು ದೊಡ್ಡವನಲ್ಲ. ಯಾವ ಸಿಪಾಯಿ ಒಂದೇ ಮನಸ್ಸಿಂದ ಇರುವುದಿಲ್ಲವೋ

ಅವನ ಮಹನಿಯತೆ ಸುಳ್ಳಾಗಿರುತ್ತದೆ. ಅಂದರೆ ಯಾವ ಸಿಪಾಯಿ ಪ್ರಮಾಣಿಕನಾಗಿ ಇರುವುದಿಲ್ಲವೋ ಅವನು ಲಕ್ಷ ಬಡಾಯಿ ಕೊಚ್ಚಿಕೊಂಡರೂ ಅವನು ದೊಡ್ಡವನಾಗಲು ಸಾಧ್ಯವಿಲ್ಲ. ಸಿಪಾಯಿಗಳ ಖಜಾನೆ ನನ್ನ ಬಳಿ ಇದೆ. ನಾನೊಬ್ಬ ಮುತ್ತುಗಳನ್ನು ಪರೀಕ್ಷಿಸುವವನು ಅಂದರೆ ಜನರನ್ನು ಪರೀಕ್ಷಿಸುವವನು, ಪ್ರತಿಯೊಂದು ದೇಹವನ್ನು ಆರಿಸಿ ಆರಿಸಿ ಪ್ರೀತಿ ಮಾಡಿರುವೆ. ಯಾವ ಕೆಲಸ ನಿಮಗೆ ಮಾಡಲು ಕೊಡಲಾಗಿದೆಯೋ ಅದರ ಮೇಲೆ ಭರವಸೆ ಮಾಡಬಲ್ಲೆನು.ಇಂದಿನವರೆಗೂ ನಾವೆಲ್ಲ ಜೊತೆಗೂಡಿ ನಡೆಯುತ್ತಿದ್ದೆವು. ನಿಮ್ಮ ಮಾತನ್ನು ನಂಬಿ ನಾವು ಕೆಲಸ ಮಾಡಲು ಹೊರಟಿದ್ದೇವೆ. ನಮ್ಮ ಮಾತಿಗೆ ಬೆಲೆ ಕೊಡಿ, ಆ ಎಲ್ಲ ಕೆಲಸ ಮಾಡುವ ಗಳಿಗೆ ಇಂದು ಬಂದಿದೆ. ನಮ್ಮ ಮನೆ ಮೇಲೆ ಮುಘಲನಂತಹ ಶತ್ರು ಬಂದಿರುವನು. ಶತ್ರುವು ಅತಿದೊಡ್ಡ ಸೈನ್ಯ ತೆಗೆದುಕೊಂಡು ಬರುತ್ತಿದ್ದಾನೆ. ಯಾರಿಗೆ ವಾರೀಸು ಸೊತ್ತಾಗಿ ದೇಶಪ್ರೇಮ ಸಿಕ್ಕಿದೆಯೋ ಅವನು ತನ್ನ ಪ್ರಾಣ ಕೊಟ್ಟು ಮನೆಯನ್ನು ಸಂರಕ್ಷಿಸುತ್ತಾನೆ. ಯಾರು ನನಗೆ ಅಪ್ರತಿಮವಾಗಿ ಕಾಣಿಸಿದನೋ ಅವನನ್ನು ಒಂದು ಕ್ಷಣದಲ್ಲಿ ಮಂತ್ರಿ ಮಾಡಿದೆ. ಯಾರು ಕೆಲಸದ ಮೇಲೆ ತನ್ನ ಪ್ರಾಣ ಖರ್ಚು ಮಾಡಿದನೋ ಅದರ ನೋವು ನನಗೂ ಸಹ ಇದೆ. ನಾನು ಅವನಿಗೆ ಐಶ್ವರ್ಯ ಕೊಟ್ಟೆ.' ಶೂರರು ಇದೆಲ್ಲ ಕೇಳಿ ತನ್ನ ಪ್ರಾಣವು ಲೆಕ್ಕಿಸಿದೆ ಹೇಳಿದರು 'ನಾವು ಇಲ್ಲಿ ಆದಿಕಾಲದಿಂದಲೂ ವಾಸಿಸಿದ್ದೇವೆ. ಏಳು ಪೀಳಿಗೆಗಳು ಕಳೆದಿವೆ. ನಾವು ಅನೇಕ ಮಹಾನ್ ಬಾದಶಾಹರು ಹಾಗೂ ರಾಜರ ಬಗ್ಗೆ ಕೇಳಿದ್ದೇವೆ. ಅವರು ಮಹಾನ್ ಆಗಿ ಹೋದವರು. ಆದರೆ ಗಗನದ ಕಣ್ಣು ನಿನ್ನಂತಹ ಧೀಮಂತನನ್ನು ನೋಡಿಲ್ಲ. ನೀನಂತೂ ಶಾಹರಲ್ಲಿ ಸುರೂಪಿ. ಈ ಪ್ರಪಂಚದಲ್ಲಿ ಬೇರೆ ಉದಾಹರಣೆ ಸಿಗುವುದು ಕಷ್ಟ. ನಿನ್ನ ಪ್ರೀತಿ ವಾತ್ಸಲ್ಯ ಸೃಷ್ಟನೆಯನ್ನು ಅಧೀನಗೊಳಿಸುತ್ತದೆ. ಮಾತುಗಳ ಪವಾಡದಿಂದ ನೀನು ಸದ್ಗುರು. ನಮ್ಮ ಪ್ರಾಣ ನಿನ್ನ ವಾತ್ಸಲ್ಯದ ಕೈಯಲ್ಲಿದೆ. ನಿನ್ನ ಮಾತಿನ ಮೇಲೆ ನಾವು ನಮ್ಮ ಶರೀರವನ್ನು ತ್ಯಾಗ ಮಾಡಿದ್ದೇವೆ. ಶಾಹರಿಗೆ ಮತ್ತೊಂದು ಹೆಸರು ಶಹರ್ ಯಾರ್, ಓ ಪ್ರಸಿದ್ಧಿ ಆ ಹೆಸರು ನಿನಗೆ ಶೋಭಿಸುತ್ತದೆ. ಬಲು ಪ್ರೀತಿಯಿಂದ ನೀನು ಅರಸುತನ ಮಾಡಿದೆ. ಶಾಹನೆ ಪ್ರಪಂಚದಲ್ಲಿ ನೀನೇ ಭಾರವಾಗಿ ಕಾಣಿಸುವೆ. ನೀನು ಪ್ರಪಂಚದಲ್ಲಿ ಸಿಪಾಯಿಯ ಮರ್ಯಾದೆ ಹೆಚ್ಚಿಸಿದೆ. ನಿನ್ನ ಮುಂದೆ ಸಿಪಾಯಿಗೆ ತನ್ನ ಪ್ರಾಣ ಪ್ರಿಯವಾದುದಲ್ಲ, ಜೀವಂತವಾಗಿದ್ದರೆ ದೊಡ್ಡವನಾಗುತ್ತಾನೆ. ಸತ್ತುಹೋದರೆ ಕೆಲಸಕ್ಕೆ ಬರುವ ವಸ್ತುವಾಗುವನು. ನೀನು ಕ್ಷೇಮವಾಗಿ ಸುರಕ್ಷಿತ ಇದ್ದರೆ ಅನಾಥರಿಗೆ ಯಾವ ನೋವು ಇರುವುದಿಲ್ಲ, ಏಕೆಂದರೆ ನಿನ್ನ ಕೃಪೆ ಅವರನ್ನು ಪೋಷಣೆ ಪಡಿಸುತ್ತದೆ. ನಾವು ಏಳು ಪೀಳಿಗೆಗಳಿಂದ ನಿನ್ನ ಉಪ್ಪು ತಿಂದಿದ್ದೇವೆ. ನಾವು ಮನಸ್ಸಿನಲ್ಲಿ ನಿನಗೆ ಕೆಟ್ಟದನ್ನು ಬಯಸಲು ಸಾಧ್ಯವೇ? ಅಥವಾ ಅದನ್ನು ಹತ್ತಿರ ಸೇರಿಸಲೂ ಸಾಧ್ಯವೇ? ನಮ್ಮ ಕಾಠಿಣ್ಯ ರುಸ್ತುಂನಂತೆ, ನಮ್ಮ ಮುಂದೆ ಹತ್ತು ಭೂತ ಪುತ್ರರೂ ಏನೂ ಇಲ್ಲ. ನಾವು ಖಡ್ಗದಿಂದ ಗೆಳೆತನ ಏಕೆ ಮಾಡೋಣ, ರಜಪೂತರೂ ಆಫೀಂ ತಿನ್ನುವವರಾದರೆ

ಮುಘಲರು ಕೆಟ್ಟದ್ದನ್ನು ಮಾಡುವರು. ಓ ಶಹಾ ಅವರು ಇಲ್ಲೇನಾದರೂ ಕುರಿಮಂದೆ, ಕುರಿಗಳ ಮಂದೆ ಕಾಯುವವನಾಗಿ ಗಮಾರರನ್ನು ತಂದರೆ ನಮ್ಮಂತಹ ಘಾಝಿಗಳಿದ್ದು ನಿನ್ನ ಸೈನ್ಯದ ಅವಮರ್ಯಾದೆ ಆಗುವುದು. ನಾವು ಖಡ್ಗದ ಪೇಚು ಮಾಡದಿದ್ದರೇ ಹಬ್ಬ ಹೇಗೆ ಆಗುತ್ತದೆ. ನೋಡು ನೋಡುತ್ತಲೇ ಗಮಾರರು ಆ ಕುರಿಗಳನ್ನು ನಾಶ ಮಾಡುತ್ತಾರೆ. ಪ್ರತಿ ಕ್ಷಣ ಲಕ್ಷಾಂತರರಿಗೆ ಅಪ್ಪಳಿಸಿ ಕೊರಳು ಕೊಯ್ದು ಹಾಕುವೆವು. ಕುರಿಮಂದೆ ಕಾಯುವವರಿಂದ ಹಳ್ಳಿಗಮಾರರು ಎದ್ದಿದ್ದಾರೆ. ಅವರ ಧ್ವನಿ ಕೇಳಿದರೇ ಹೃದಯ ಹೊಡೆದು ಹೋಗುತ್ತದೆ. ಶೂರರ ಹೃದಯಗಳನ್ನು ಈ ರೀತಿ ಪರೀಕ್ಷಿಸಿ ನೋಡಿದರೆ ಪ್ರತಿಯೊಂದು ಶರೀರದಲ್ಲಿ ಮಾತಿನ ತಾತ್ಪರ್ಯ ಸಿಗುತ್ತದೆ. ನಿನ್ನ ಕೈಯಿಂದ ಎಲ್ಲರನ್ನೂ ತಾಂಬೂಲ ಕೊಟ್ಟುಕೊಟ್ಟೂ ನೀನು ಪ್ರತಿಯೊಂದು ಶರೀರದ ಮರ್ಯಾದೆ ಕಾಪಾಡಿಕೊಂಡೆ. ನಿನ್ನ ದೃಷ್ಟಿಯಲ್ಲಿ ಎಲ್ಲರೂ ಮರ್ಯಾದಸ್ತರು. ದೊಡ್ಡ ಪ್ರತಿಷ್ಠಿತನಾಗುವ ಉಮೇದನ್ನು ತೋರಿ ಪ್ರಾಣ ಹೇಗೆ ಖರ್ಚು ಮಾಡುವ ಗುಟ್ಟನ್ನು ಕಲಿಸಿದೆ. ಶಾಹರು ಮಂತ್ರಿಗಳಿಗೆ ಖಡ್ಗಗಳೊಂದಿಗೆ ಗೌರವ ವಸ್ತ್ರಗಳನ್ನು ಕೊಟ್ಟು ಗೌರವಿಸಿ 'ಪ್ರತಿ ಸೂಬೆದಾರ ತಮ್ಮ ತಮ್ಮ ಸೈನ್ಯವನ್ನು ತೆಗೆದುಕೊಳ್ಳಿ, ನಿಮಗೆ ಅಧಿಕಾರ ಕೊಟ್ಟಿದ್ದೇವೆ. ಒಬ್ಬರಿಂದ ಒಬ್ಬರು ನೀವೆಲ್ಲ ಶೂರರು ನೀವೆಲ್ಲ ಒಗ್ಗಟ್ಟಾಗಿ ಸಾಹೇಬರ ಕೆಲಸ ಮಾಡಿ', ಹೀಗೆ ಪ್ರತಿಯೊಂದು ಮಾತಿನಿಂದ ಅವರನ್ನು ಹುರಿದುಂಬಿಸಿ, ಅಲ್ಲಾಹನ ಮೇಲೆ ವಿಶ್ವಾಸವಿಟ್ಟು ಅವರನ್ನು ರವಾನಿಸಿದರು. ಯಾವಾಗ ಶಾಹ್ ಮಹಾಬಲಿರವರು ಅಪ್ಪಣೆ ನೀಡಿದರೋ ಎಲ್ಲರೂ ಎದ್ದು ಯಾ ಅಲಿ ಮದದ್‌ನ ಘೋಷಣೆ ಕೂಗಿದರು. ಓ ಯುಗದ ಅರಿಸ್ಟಾಟಲ್ ನೀನು ಸತ್ಯವನ್ನು ಮೆಚ್ಚುವನು. ದೇವರ ಸೃಷ್ಟಿಗೆ ಪ್ರಾಮಾಣಿಕ ಮೊದಲಿಗೆ ಸದ್ಗುಣದಿಂದ ಎಲ್ಲರ ಮನ ಗೆದ್ದು ನಾವೆಲ್ಲ ಒಬ್ಬರ ಜೊತೆಯಲ್ಲಿ ಒಬ್ಬರಾಗಿದ್ದೇವೆ. ತನ್ನಲ್ಲಿ ತಾನು ಇಂದು ಒಗ್ಗಟ್ಟನ್ನು ನಿಭಾಯಿಸಿಕೊಳ್ಳಿ, ಒಗ್ಗಟ್ಟಾಗಿರಿ, ನಾವು ಶತ್ರುಗಳಿಗೆ ವಿರಹ ಕೊಡಬೇಕಾಗಿದೆ,' ಎಂದು ಹೇಳಿದೊಡನೆ ಸಿಪಾಯಿಗಳು ತಮ್ಮೊಡನೆ ಒಂಬತ್ತು ಗಜ ಶವ ಬಟ್ಟೆಯನ್ನು ತಗೆದುಕೊಂಡು ಮೈ ಮೇಲೆ ತೊಟ್ಟಿಕೊಂಡರು. ನಗಾರಿ ಹಾಗೂ ವಿಜಯದ ಗಂಟೆ ಜೊತೆಗಿಟ್ಟುಕೊಂಡರು. ಮಿನುಗುವ ಬಿಲ್ಲು ಬಾಣ ತೆಗೆದುಕೊಂಡರು. ಜೊತೆಯಲಿ ಸಿಡಿಮದ್ದಿನ ಗುಂಡುಗಳ ಗಣಿ ಬೆಟ್ಟದಂತೆ ತೆಗೆದುಕೊಂಡರು. ಸಶಸ್ತ್ರಧಾರಿಗಳು ಸಶಸ್ತ್ರಗಳನ್ನು ಆರಿಸಿಕೊಂಡು ಬಲು ಗಟ್ಟಿ ಬೇಲಿ ನಿರ್ಮಿಸಿದರು. ಬಾದಶಾಹನ ಖಜಾನೆಯು ಸಹ ಬಹಳಷ್ಟು ತೆಗೆದುಕೊಂಡು ಶತ್ರುವಿನ ಕಡೆ ರವಾನೆ ಆದರು. ಶರ್ಝುಖಾನ್ ತನ್ನನ್ನು ಚೇತರಿಸಿಕೊಳ್ಳುವವರಿಗೆ ಮೊಘಲ್ ಗಾಳಿಯಂತೆ ಬಂದು ನಿಂತ. ಇನ್ನು ಆ ದೊಡ್ಡ ದಂಡು ಯಾವುದೇ ಆಕ್ರಮಣ ಮಾಡಿರಲಿಲ್ಲ. ಆಗಲೆ ಅಲಿಯ ಬಲು ಗಟ್ಟಿ ದಂಡು ಹೊರಟಿತು. ದಕ್ಷಿಣದ ಶೂರರು ಬಲು ಹುಮ್ಮಸ್ಸಿನಿಂದ ಹೊರಟರು. ಅವರ ಜೊತೆಯಲ್ಲಿ ಹೆಸರಾಂತ ಮಂತ್ರಿಗಳು ಹೊರಟರು. ಒಬ್ಬರಿಕ್ಕಿಂತ ಒಬ್ಬರು ಉತ್ತಮ ಸೂಬೆದಾರರು. ಪ್ರತಿಯೊಬ್ಬ ಮಂತ್ರಿಗಳ ಬಳಿ ಅವರ ಜಯಶಾಲಿ

ಜನರಿದ್ದಾರೆ. ಇವರಿಬ್ಬರೂ ಸಿಪಾಯಿಗಳನ್ನು ಅತ್ಯುತ್ಸಾಹ ತುಂಬಿ ಅವರ ಮನವನ್ನು ಹೆಚ್ಚಿಸಿ ಶತ್ರುಗಳ ಮೇಲೆ ಆಕ್ರಮಣ ಮಾಡಿಸುತ್ತಾರೆ. ಮಹಾನ್ ಮುಘಲರ ಆಗಮನಕ್ಕಿಂತ ಮುಂಚೆ ಶರ್ಝ್ ಖಾನನು ಈ ಯೋಜನೆ ಮಾಡಿದ, ಅಂದರೆ ದಖನ ಮಂತ್ರಿಗಳೇ ತೂಕದಲ್ಲಿ ಭಾರವಾಗಿರುವರು. ಅವರ ಬಹುಶಿಶುಗಳ ಜನನದ ಮೇಲೆ ಖಡ್ಗವನ್ನು ಹೊಡೆಯುವೆ. ಖಡ್ಗದ ಪರೀಕ್ಷೆಯಲ್ಲಿ ಯಾರು ಗೆಲ್ಲುವರೆಂದು ನಾನು ನೋಡಬೇಕು. ತನ್ನ ಅಶ್ವಗಳನ್ನು ತೆಗೆದು ಅವರ ಕಡೆ ತಿರುಗಿಸುವೆ. ಅಶ್ವಸವಾರಿ ಮಾಡಲು ಕುದುರೆ ಹೇಗೆ ಇಡುವನು ಹಾಗೂ ಶತ್ರುಗಳ ಮೇಲೆ ಖಡ್ಗದ ಹರಿವನ್ನು ಹೇಗೆ ಮಾಡುತ್ತಾನೆ. ಸಹೋದರರೆಲ್ಲರೂ ಸೇರಿ ಸಮರವಾಡಲಿದ್ದಾರೇನೋ ಸರಿ, ಶತ್ರುಗಳ ಮೇಲೆ ಖಡ್ಗ ನಡೆಸಲಿದ್ದಾರೆ. ಮುಘಲ್ ಕೆಟ್ಟ ಸಂತತಿ ಎಲ್ಲರನ್ನು ಗುರಿತಿಸುವರು. ನನ್ನ ಹೆಸರನ್ನು ಎಲ್ಲರ ಮುಂದೆ ಜ್ಞಾಪಿಸಿಕೊಳ್ಳುವರು. ನಾನು ಅವರನ್ನು ವಶೀಕರಿಸುತ್ತೇನೆಯೋ ಅಥವಾ ಮತ್ತೇನಾದರು ಆದೀತೆ? ಇದೇ ಚಿಂತೆಯಲ್ಲಿ ಮುಳುಗಿದ್ದ. ಅಲ್ಲಾಹನು ಅವನ ಸ್ವಚ್ಛ ಇರಾದೆಯನ್ನು ನೋಡಿ ಪ್ರಸನ್ನವಾಗಿ ಕೃಪೆ ಮಾಡಿ ಅವನ ಮನದ ಇಚ್ಛೆಯನ್ನು ಪೂರ್ಣಗೊಳಿಸುವನು. ಯಾರ‍್ಯಾರು ಅಲ್ಲಾಹನ ಹೆಸರಿನ ಮೇಲೆ ಕೊಡಲು ಬಂದರೋ ಅವರಿಗೆ ಹೀಗೆಯೇ ಚಿಂತೆಗಳು ಅವರ ಮನಸ್ಸನ್ನು ಕಾಡುವುದು.(೩೨೪-೪೫೫೬)

ಮೊದಲನೆಯ ಜಯ ಅಂದರೆ ಶರ್ಝನು ಮುಘಲರ ಯಾವ ಉದ್ದೇಶವಿತ್ತೋ ಅದನ್ನು ಮಂಗಳ ಬೀಡ್ ಬಳಿತಲುಪಿ ತನ್ನ ಸೈನ್ಯದೊಡನೆ ಆಕ್ರಮಿಸಿದ.

ಯಾವ ಪಕ್ಷಿ ತನ್ನ ಮನಸ್ಸಿನಲ್ಲಿ ಆಸೆ ಬೆಳಿಸಿಕೊಳ್ಳುತ್ತದೆಯೋ ಅದು ಬಲೆ ಮೇಲೆ ಇಟ್ಟಿರುವ ಕಾಳನ್ನು ಕುಟ್ಟಿ ನಾಶವಾಗಿಸುತ್ತದೆ. ಅವಿವೇಕಿಯ ಅವಲಂಬನೆ ಯುಗದ ಮೇಲಿರುತ್ತದೆ. ಅವನು ಕೊಡುವುದರ ಮೇಲೆ ಭರವಸೆ ಇಟ್ಟಿರುತ್ತಾನೆ. ತನ್ನ ಬಲದ ಮೇಲೆ ಸಂತೋಷ ಪಟ್ಟು ಆಜ್ಞೋಲ್ಲಂಘನೆ ಮಾಡುತ್ತಾನೆ. ಇದರ ಫಲಿತಾಂಶ ಎಂದರೆ ಅವನನ್ನೇ ನೆಲಕ್ಕೆಉರುಳಿಸಿ ಕೆಳಗೆ ಬೀಳಸಲಾಗುತ್ತದೆ. ಕಾವ್ಯದ ಖಜಾನೆಯುಳ್ಳವನು ಪ್ರಸಿದ್ಧನಾಗುತ್ತಾನೆ. ಮೊದಲನೆಯ ಜಯದಲ್ಲಿ ಹೀಗೆ ಮುತ್ತುಗಳನ್ನು ನಿವಾಳಿಸುತ್ತಾನೆ. ಮಘಲ್ ತನ್ನ ಜಾಗ ಬಿಟ್ಟು ಹೊರಟಿದ್ದ ಶಾಹನ ಖಡ್ಗದ ನೆರಳು ಅವನ ಮೇಲೆ ಬೀಸಿರಲಿಲ್ಲ. ಪ್ರಪಂಚದಲ್ಲಿ ಅವನನ್ನು ಎದುರಿಸುವವರು ಯಾರೂ ಇಲ್ಲವೆಂದು ತಿಳಿದು ಎದೆ ಉಬ್ಬಿಸಿ ಅಹಂಕಾರ ಮತ್ತು ಗರ್ವದಲ್ಲಿ ಮುಳಿಗಿದ್ದ. ಅದೇ ಅಹಂಕಾರದಲ್ಲಿ ನಿಶ್ಚಿಂತೆಯಿಂದ ಹೊರಟಿದ್ದ, ಸುಣ್ಣದ ಹರಳುಗಳನ್ನು ಮೌನವಾಗಿ ನುಂಗುತ್ತಿದ್ದ, ದೇಶ ಗೆಲ್ಲುವ ಅಮಲದಲ್ಲಿ ಬಿಜಾಪುರದ ಸರಹದ್ದಿನಲ್ಲಿ ನುಗ್ಗಿ ಬಂದ. ದಾರಿಯಲ್ಲಿ ಒಂದು ಕೋಟೆ ಇತ್ತು ಅದು ಕಿತ್ತುಹಾಕಬೇಕೆಂದೆ ಖಾಲಿ ಮಾಡಲಾಗಿತ್ತು. ಮುಘಲನು ಬುದ್ಧಿವಂತಿಗೆಯಿಂದ ಕೆಲಸ ಮಾಡದೇ ಖಾಲಿ ಮನೆಯಲ್ಲಿ ನಾಯಿಗಳ ಆಟವೇ ನಡಿಯುತ್ತದೆ ಎಂದು ಯೋಚಿಸಿ, ದುಃಸ್ಥಿತಿಯಲ್ಲಿದ್ದ ಕೋಟೆಯನ್ನು ಮತ್ತಷ್ಟು

ಗಟ್ಟಿ ಮಾಡಿ ಅದರಲ್ಲಿ ಒಬ್ಬ ಪಂಜ್ಹಝಾರಿ ಸೂಬೆದಾರನ್ನು ನೇಮಿಸಿದ. ಅವನ ಹೆಸರು ಸರ್‌ಫರಾಝ್ ಖಾನ್, ದೆಹಲಿ ಪ್ರಸಿದ್ಧ ಮನುಷ್ಯ ಧೈರ್ಯಶಾಲಿ ಶೂರರಲ್ಲಿ ಪರಿಗಣಿಸಲ್ಪಟ್ಟವನು, ಕಠಿಣಕರ ಜಾಗದಲ್ಲಿ ಕಾದಿರಿಸಲ್ಪಡುತ್ತಿದ್ದವನು. ಬತ್ತಳಿಕೆ ಕಟ್ಟುವಿಕೆಯಲ್ಲಿ ಬಲು ಅಹಂಭಾವ ಪಡುತ್ತಿದ್ದವನು. ಬಾಣಗಳ ಬೀಸಣಿಗೆ ಮಾಡಿಕೊಂಡು ಗಾಳಿಯಾಡಿಸಿಕೊಳ್ಳುತ್ತಿದ್ದವನು. ಎಂದಾದರೂ ಖಡ್ಗದ ಪೇಚು ಮಾಡಿದರೆ ಪ್ರಳಯಕ್ಕೂ ಕೈ ಮಿಲಾಯಿಸುವನು. ಬಲು ಶೌರ್ಯದಿಂದ ತನ್ನ ದಂಡಕ್ಕೆ ಸಾಮಾನು ಸರಬರಾಜು ಮಾಡಲು ತನ್ನ ಪ್ರಾಂತ್ಯದಿಂದ ಬಲು ಬಲವಾದ ದಂಡನ್ನು ತಗೆದುಕೊಂಡ. ದಂಡದ ದಾರಿಯ ಬಗ್ಗೆ ಏನೂ ತಿಳಿಯದೆ ಅಸಂಖ್ಯಾತ ಚೀಲಗಳನ್ನು ಇಳಿಸುತ್ತಿದ್ದ. ಪ್ರತಿಯೊಂದು ಚೀಲವು ತುಂಬಿದ್ದವು. ಏನೇನು ಬೇಕಾಗಿತ್ತೋ ಅದರಲ್ಲಿ ಬಹಳಷ್ಟು ಮಾಲು ತುಂಬಿತ್ತು. ಅಲ್ಲಿ ಅಸಂಖ್ಯಾತ ಮಾಲನ್ನು ಇಳಿಸುವ ಸುದ್ದಿ ಶರ್ಝ್ ಖಾನನಿಗೆ ತಿಳಿದಾಗ, ಅದಾಗ್ಯೂ ಆ ಖಜಾನೆ ಮಿತಿಮೀರಿದ್ದರೂ ಸಹ ಅದರ ಸುತ್ತಲೂ ಯಕ್ಷಗಳ ದಂಡಿದೆ. ಖಾನನು ತನ್ನ ಸಹೋದ್ಯೋಗಿಗಳನ್ನು ಕುರಿತು ನಾವು ಅದನ್ನು ವಶೀಕರಿಸಿಕೊಂಡರೆ ಹೇಗಿರುತ್ತೆ? ಅಲ್ಲಾಹನು ಬಲು ಸೊಗಸಾದ ಮೊದಲನೆಯ ಶಿಕಾರಿ ಕೊಟ್ಟಿರುವನು. ಆ ಖಜಾನೆವರೆಗೂ ಬಲು ಚಾತುರ್ಯದಿಂದ ಯಾವ ಸೂಚನೆ ಇಲ್ಲದೇ ತಲುಪಿ ಆ ಎಲ್ಲ ಯಕ್ಷರನ್ನು ನೆಲಕ್ಕೆ ಉರುಳಿಸಿ ಬಲಿ ಕೊಟ್ಟು, ಮಹ್ದಿರವರ ಹೆಸರು ಕೇಳಿ ಕೋಪದಿಂದ ಉಕ್ಕಿ ಭೂಮಿ ಕೆಳಗಿನಿಂದ ಸಂಪತ್ತು ಹೊರಗೆ ಬರುತ್ತದೆ. ಯಾವುದೇ ಕೆಲಸ ಈ ರೀತಿಯಾಗಿ ಮುಫತ್ತಾಗಿ ಜಾಗವಿಲ್ಲದೇರುವ ಕಡೆ ಖಜಾನೆ ಹಾಗೂ ಯಕ್ಷ ದೃಷ್ಟಿ ಕೆಳಗೆ ಪ್ರಕಟವಾಗುವುದು. ನಾವು ನಿತ್ಯವೂ ಅಲಿರವರ ಜಪ ಮಾಡುತ್ತಿರುತ್ತೇವೆ. ನಾವೇನೇ ಯಕ್ಷನ ಹತ್ಯೆಗೆ ಜಗಳ ಮಾಡಬೇಕಾಗಿದೆ. ಇದೆಲ್ಲ ಯೋಚಿಸಿ ಅವನು ತನ್ನ ಕುದುರೆ ಮೇಲೆ ಸವಾರಾಗಿ ತನ್ನ ಸೈನ್ಯದೊಡನೆ ಆಕ್ರಮಿಸಿದ. ಹೀಗೆ ಸಶಸ್ತ್ರ ಸೈನ್ಯದ ಮುಖ ನೋಡುತ್ತಿದ್ದ ಹಾಗೆ ನೀಲಿ ಆಕಾಶಕ್ಕೆ ಹೆದರಿಕೆಯಿಂದ ಕಾಲಿಲ್ಲದಂತಾಯಿತು. ಬಾವುಟಗಳು ತನ್ನ ನಾಲಿಗೆಗಳಿಂದ ಕೋಪ ಉದುರಿಸಿದಾಗ ಸೂರ್ಯನ ದೀಪ ಗಾಳಿಯಿಂದ ಮಿಣುಕಲಾರಂಭಿಸಿತು. ಯಾವಾಗ ಇವರು ಕೋಟೆಯ ಬದಿ ತಲುಪಿದರೋ, ಸಶಸ್ತ್ರ ಸೈನ್ಯವನ್ನು ನೋಡಿ ಹೀಗೆ ಊಹಿಸಿ, ಕೆಟ್ಟ ಹುಟ್ಟಿನ ಶತ್ರು ಧೂಳು ಮತ್ತು ಗಾಳಿ ಹೀಗೆ ಗೋಲಾಕಾರದ ಗುಂಡಾಗಿ ಬರುತ್ತಿದೆಯೇ? ಎಂದು ಯೋಚಿಸಿತು. ಇಲ್ಲಿ ಬೆಂಕಿ ಹೇಗೆ ಹಚ್ಚಿಕೊಂಡಿತು ಇಲ್ಲೆಲ್ಲೂ ಹೊಗೆನೆ ಇರಲಿಲ್ಲವಲ್ಲ, ಇಲ್ಲಿ ಯಾವ ಗುಡ್ಡೆಯೂ ಇರಲಿಲ್ಲ. ಈಗ ಬೆಟ್ಟ ಎಲ್ಲಿಂದ ಬಂತು. ಪ್ರತಿಯೊಂದು ಶರೀರದಲ್ಲಿ ಜೀವಗಾಳಿ ಬಿರುಗಾಳಿಯಾಗಿ ಇಡೀ ಭೂಮಿ ಮೇಲೆ ಚದುರಿತು. ಇದೇನೋ ಆಪತ್ತು, ಇದು ಹಾನಿಯು ಉಂಟುಮಾಡುತ್ತದೆ ಎಂದು ಸ್ವಲ್ಪ ಚಿಂತಿಸಿದ ನಂತರ ಈ ಮಾತು ಅವರಿಗೆ ಖಚಿತವಾಯಿತು. ಆ ಸೈನ್ಯದ ಎಲ್ಲ ಬಲಿಷ್ಠ ಜನರೂ ಸಹ ಶತ್ರುವಿನ ಆಗಮನದಿಂದ ಸಂಶಯಕ್ಕೀಡಾದರು. ಆವಾಗಲೇ ಅಲ್ಲೇ ಒಂದು ಘೋಷಣೆ

ಎಲ್ಲರ ಮನದಲ್ಲಿ ಪ್ರತಿಧ್ವನಿಸಿದಾಗ ಎಲ್ಲ ಜಾಗದಲ್ಲಿ ಗೊಂದಲ ಉಂಟಾಯಿತು. ಈ ಗೊಂದಲದ ಶಬ್ದ ಕೆಲವು ವಿಶೇಷ ಜನರ ಕಿವಿಗೆ ಬಿದ್ದಾಗ ಶೂರರ ಮನದಲ್ಲಿ ಸ್ಫೂರ್ತಿ ಹುಟ್ಟಿತು. ಎಲ್ಲ ಕಡೆ ನಗಾರಿಗಳು ಬಾರಿಸತೊಡಗಿದವು ಬಿಗುಲು ಗರ್ಜಿಸಲಾರಂಭಿಸಿದವು. ಎಲ್ಲ ಗಮಾರರಿಗೆ ಜಗಳ ಮಾಡಿಸಲು ಕೊಳಲು ಹಾಗೂ ಶಂಖ ಊದಲಾಯಿತು. ಪೇದೆ ಅಮಕಿಕೊಂಡು ಹೊಡೆಯಲು ಸಿದ್ಧರಾದರು ಹಾಗೂ ಸವಾರರೂ ಹೃದಯಗಳನ್ನು ಕಟ್ಟಲಾರಂಭಿಸಿದರು. ಕೋಟೆ ಮೇಲೆ ಸಿಡಿಮದ್ದಿನಿಂದ ಆಕ್ರಮಿಸಿ ಕೋಟೆಯನ್ನು ಸಿಡಿಮದ್ದಿನ ಗಂಟು ಬೆಂಕಿ ಮಾಡಿದರು. ಲಾಗ ಹೊಡೆದು ಎಂತಹ ಜಾಗ ಹಿಡಿದರು. ಯಾರು ಆ ಕೋಟೆಯಲ್ಲಿ ಗಟ್ಟಿ ಪ್ರೇತಗಳಿದ್ದವೋ ಅಲ್ಲಿ ಎಲ್ಲರೂ ಕೋಟೆ ಮತ್ತು ಅದರ ಗೋಡೆಗಳ ಮೇಲೆ ಹತ್ತಿದರು. ಸರ್‌ಅಫ್ರಾಝ್ ಖಾನನು ಸಿದ್ಧನಾಗಿದ್ದ ಅವನು ಕೋಟೆ ಬಾಗಿಲಿನ ಮುಂದೆ ಸೈನ್ಯದೊಂದಿಗೆ ಬಂದಾಗ ಸಾವು ನಮ್ಮವರೆಂದು ಪಠಾಣರು ನಿಂತರು. ರಜಪೂತರಿಗೆ ಹಾಗೂ ಬಕ್ಸರಿಗೂ ಸ್ಫೂರ್ತಿ ಬಂದಿತು. ಬಿಲ್ಲುಗಾರರು ಭಲ್ಲೆಯವರೂ ನಾವು ಸಹ ಭಲ್ಲೆಗಳನ್ನು ಬಾಣಗಳಿಂದ ಕಡಿಮೆಯಾಗಲು ಭಾಲೆಗಳನ್ನು ಬೀಳಿಸಲು ಬಿಡುವುದಿಲ್ಲವೆಂದು ಮುಂದೆ ಬಂದರು. ಒಂಟೆರವರು ಹಾಗೂ ಮಹಾವತರೂ ಸಹ ಮುಖದ ಮೇಲೆ ಬಂದು ವೇಗವಾದ ರಾಮಬಾಣಗಳನ್ನು ರಚಿಸಿಕೊಂಡರು. ಅಲ್ಲಿಯವರಿಗೆ ಶರ್ಝಿನ ಸೈನ್ಯ ಒಂದು ಗುಂಪಾಗಿ ಬಂದು ಶತ್ರುಗಳನ್ನು ಹೊಡೆಯಲು ಅಲೆಯಾಗಿ ಮೂಡಿತು. ನೋಡು ನೋಡುತ್ತಲೇ ಇಬ್ಬರ ಮಧ್ಯೆ ಬಲು ಕಠಿಣವಾದ ಒಂದು ಆಪತ್ತಿನ ಬೆಂಕಿ ಉರಿಯಲಾರಂಭಿಸಿತು. ಬಾಣಗಳಿಂದ ಕೇಡುಂಟು ಮಾಡುವ ಗದ್ದಲ ಉಂಟಾಯಿತು. ಭೂಮಿ ಮೇಲೆ ಸಿಡಿಲು ತುಂಬ ಹೆದರಿಕೆಯಿಂದ ಬೆಚ್ಚಿ ಬಿತ್ತು. ಬಲು ಕಠಿಣ ಹೊಡೆತಗಳಿಂದ ಹೊಗೆ ಸೇರಿ ಕೆಲವು ಕ್ಷಣಗಳಿಗೆ ಆಕಾಶವೇ ಕಳೆದುಹೋಯಿತು. ಸಹಸ್ರಾರು ಬಂದೂಕುಗಳಿಂದ ಮೂಡಿದ ಬೆಂಕಿಯ ಬಟ್ಟೆ ಗಗನದ ಕಲ್ಲಿದ್ದಲನ್ನು ಬೆಂಕಿ ಮಾಡಿತು. ಸೂರ್ಯ ಬಿಸಿಯಾಗಿ ಚಿನ್ನದ ರೂಪತಾಳಿ ಆ ಜಾಗದಲ್ಲಿ ಬಿಸಿಲು ಹೃದಯ ಕಂಪಿಸಿತು. ನಂತರ ಗುಂಡುಗಳು ಲಕ್ಕಲಕ್ಕನೇ ಸುರಿಯಲಾರಂಭಿಸಿದವು. ಸರಣಿಯಲ್ಲಿ ಇಡಿ ಬೆಂಕಿಯನ್ನು ಅರೆಯುತ್ತಿದ್ದವು. ಅದರ ಹೊಗೆ ಎಷ್ಟು ದಟ್ಟವಾಗಿತ್ತೆಂದರೇ ಮಂಜಿನ ಹನಿಗಳು ಸಹ ಎಲ್ಲವೂ ಬಂದೂಕಿನ ಗುಂಡುಗಳಾದವು. ಒಂದರ ಮೇಲೊಂದು ಬಾಣಗಳನ್ನು ಚರ್ಮದ ಕೆಳಗೆ ನುಗ್ಗಿಸಿ, ಚೂಪಾದ ಭಲ್ಲೆಯ ಮೊನೆಗಳನ್ನು ತೆಗೆದುಕೊಂಡು ಚುಚ್ಚಿದರು. ಆದರೆ ರಣದಲ್ಲಿ ವಾಸಮಾಡಲು ಸಾವು ತನ್ನ ಮನೆ ನಿರ್ಮಿಸಿತು. ಬಿಲ್ಲುಗಾರರ ಬಾಣಗಳಿಂದ ಛಾವಣಿ ಮಾಡಲಾಯಿತು. ಪ್ರವಾದಿ ಸುಲೈಮಾನರ ಹಾಗೆ ಪಕ್ಷಿಗಳ ಸಾಲಿನ ನೆರಳಿನಂತೆ ಜಗಳದ ಜಾಗದಲ್ಲಿ ಬಾಣಗಳು ಹಬ್ಬಿದವು. ಶರ್ಝಿ ನೋಡಿದ ಈ ಆಕ್ರಮಣದಿಂದ ಸೂರ್ಯ ರೆಕ್ಕೆಗಳನ್ನು ಬಡೆದು ಹಾರಲು ಸಾಧ್ಯವಿಲ್ಲವೆಂದು ದಣಿದು ಅಲ್ಲೆ ಸಿಕ್ಕಿಕೊಂಡಿದೆ. ತನ್ನೊಡನೆ ಒಳ್ಳೆಯವರನ್ನು ಕರೆದುಕೊಂಡ, ಅವಿವೇಕಿ ಮರಾಠರಿಗೆ ಎರಡು ಏಟು ಕೊಟ್ಟ. ಈ

ಆಕ್ರಮಣವನ್ನು ನೋಡಿ ಎಲ್ಲರೂ ಸುಮ್ಮನಾದರೂ ಇದ್ದಿಕ್ಕಿದ್ದ ಹಾಗೆ ಬಂದು ಸಶಸ್ತ್ರಗಳನ್ನು ಏರಿಸಿದರು. ಆಕ್ರಮಣಗಾರರು ಮೋಸದಿಂದ ಹೊರಬಂದು ಎಲ್ಲರನ್ನು ಸೆರೆಹಿಡಿದರು. ಇದನ್ನು ನೋಡಿ ಪ್ರಾಣ ಕಾಪಾಡಲು ಕಷ್ಟವಾಯಿತು. ಶತ್ರುವಿನ ಮೇಲೆ ಆತಂಕ ಹೂಡಲು ಗುಲ್ಲೆಬ್ಬಿಸಿಲಾಯಿತು. ಸಮರದ ಸಮುದ್ರದ ಮೇಲೆ ಖಡ್ಗಗಳಿಂದ ಸೇತುವೆ ಕಟ್ಟಲಾಯಿತು. ಖಡ್ಗದ ಮೋಡದಿಂದ ನೀರು ಸುರಿದಿದ್ದರಿಂದ ಯುದ್ಧದ ಉದ್ಯಾನಕ್ಕೆ ಜೀವ ಸಿಗುತ್ತದೆ. ಖಡ್ಗಗಳು ಇನ್ನಷ್ಟು ಉದ್ವೇಗವಾದಾಗ ಯುದ್ಧ ಮತ್ತಷ್ಟು ಕಾವೇರಿತು. ಬಾಣಗಳ ಹಾರಾಟದಿಂದ ಹತ್ಯೆಗಳಾಗುತ್ತಿದ್ದವು. ಬಾಣಗಳು ಹಾಗೂ ಭಲ್ಲೆಗಳ ಆಕ್ರಮಣ ಹೆಚ್ಚಾಗಿದ್ದನ್ನು ಕಂಡು ಭಲ್ಲೆಗಳಿಂದ ಸುಸ್ತಾಗಿದ್ದವರ ಕಾಲು ಕತ್ತರಿಸಲಾಯಿತು. ಬಾಣಗಳ ಮೊನೆಗಳಿಂದ ಅನೇಕರನ್ನು ಟೊಲ್ಲು ಮಾಡಿದ್ದವರನ್ನು ಖಡ್ಗದ ಒಂದೇ ನಾಲಿಗೆ ತಾಗಿದ ತಕ್ಷಣ ಶರೀರ ಎರಡು ಭಾಗವಾಯಿತು. ಕುದುರೆ ಆನೆಗಳ ಎದೆಗಳನ್ನು ತುಳಿಯುತ್ತ ಹೋದವು. ಖಡ್ಗ ತಾಗಿದ್ದರಿಂದ ತುರಿಗಳುಂಟಾಯಿತು. ಕುದುರೆಗಳ ತಲೆಯ ಸುಂದರ ಭಲ್ಲೆಗಳು ಚುಚ್ಚಿ ಕ್ಷಣದಲ್ಲಿ ಆನೆಗಳನ್ನು ನೆಲ ತೋರಿಸಿತು. ತೋಟದಲ್ಲಿ ಅವರ ಛತ್ರಿಗಳೊಡನೆ ಆಟ ಆಡಿ ಆನಂದವಾಗಿ ಬೆರತುಕೊಂಡರು. ಎದುರಾಳಿ ಕಡೆಯಿಂದ ಬರುವ ಹಗೆತನ, ಖಡ್ಗದಿಂದ ಖಡ್ಗಕ್ಕೆ ನೆಂಟಸ್ತನವಾಯಿತು. ಖಡ್ಗವು ಖಡ್ಗದ ಮನಸ್ಸಿನಲ್ಲಿ ಜಾಗ ಮಾಡಿತು. ಒಬ್ಬರಿಂದ ಒಬ್ಬರಿಗೆ ನೀರು ಮತ್ತು ಬೆಂಕಿ ಕೊಟ್ಟಿತು. ಮೋಸ ನಡೆಯಿತು ಜಗಳ ನಡೆಯಿತು, ಮುರಿಯುವಿಕೆ ಕೊರತೆ ನಷ್ಟ ಒಂದು ಕಡೆಯಾದರೆ ಮತ್ತೊಂದು ಕಡೆ ಹಾರಾಡಿ ತರೆಯಲ್ಲಿ ಆಶ್ರಯ ಪಡೆಯುವರಿದ್ದರು. ಎಲ್ಲವನ್ನು ಮುಗಿದದ್ದನ್ನು ಕಂಡು ಅಲ್ಲೇ ತಲೆ ಮೇಲೆ ಸ್ವಚ್ಛ ಕೈ ಇಟ್ಟಿದ್ದೇನೆ ಬೇರೆ ಏನೂ ಮಾತನಾಡದೆ ಒಂದೇ ಏಟಲ್ಲಿ ಮುಗಿಸುವರು. ಕವಚಧಾರಿಗಳ ಮೇಲೆ ಬಲವಾದ ಹಲ್ಲೆ ಮಾಡಿದರೆ ಕುದುರೆಗಳ ಜೀನನ್ನು ಕತ್ತರಿಸಿಕೊಂಡು ಹೋಗಿ ಕಟ್ಟಿಗೆಯಲ್ಲಿ ನುಗ್ಗುತ್ತದೆ. ಗದೆಗಳು ನಿಂತರೆ ರಕ್ತ ಹೊರಚಿಮ್ಮುತ್ತದೆ. ನೀರು ಸಹ ತೆಗೆಯುತ್ತಾರೆ. ಆದರೆ ಕಾಲು <u>ಹೊಡೆದು.</u> ಎಲ್ಲ ರೀತಿಯ ಅಧಿಕ ಜಗಳವಾಯಿತು. ಅಹಂಕಾರ ಮುರಿದು ಅಹಂಕಾರಿ ಹೃದಯಗಳು ನಾಶವಾದವು. ಶತ್ರುವಿನ ಸೈನ್ಯದ ಮೇಲೆ ಆಕ್ರಮಿಸಿದನ್ನು ವಿವರಿಸಲು ನಿನ್ನ ನಾಲಿಗೆ ಆತ್ಮಪ್ರಶಂಸೆ ಮಾಡಲು ಬಾಯಿಬರದು. ಸೈನ್ಯಗಳಲ್ಲಿ ಯುದ್ಧ ನಡೆಯುತ್ತಿರುವಾಗ ಯಾರು ಎಲ್ಲೆಂದು ಕಾಣಿಸುವರು ಓಡಿಹೋಗಿ ಎಲ್ಲೋ ಮರೆಯಲ್ಲಿ ಸಿಕ್ಕಿಹಾಕಿಕೊಂಡಿರುವರು. ಶತ್ರುಗಳು ಆಡು ಕುರಿಗಳು ಬಕ್ರೀದಿನ ಪ್ರಾಣ, ಘಾಝಿಯರು ಪ್ರತಿಯೊಂದು ಶರೀರವನ್ನು ಎಳೆದು ಕೊರಳು ಕುಯ್ಯಿತಿದ್ದಾರೆ. ಶರೀರಗಳಿಂದ ತಲೆ ಬೇರೆಯಾದುದರಿಂದ ರಕ್ತ ಹಂಡೆ ಮೇಲೆ ಜೇನು ತುಪ್ಪದ ಮೆರುಗುವ ಪಿಂಗಾಣಿ ಪಾತ್ರೆ ಹೋಗಿ ಬಿದ್ದ ಹಾಗೆ ಹರಿಯುತ್ತಿದೆ. ಇದರಿಂದಾಗಿ ಭೂಮಿಯ ಮೇಲ್ಭಾಗದ ಚಿತ್ರ ಹೇಗಾಗಿತ್ತು ಎಂದು ಹೇಳುವುದಾದರೆ ಭೂಮಿ ಅವರ ಚಿತ್ರಶಾಲೆಯಾಗಿತ್ತು. ಎಲ್ಲಕಡೆ ರಕ್ತದ ಅಣೆಕಟ್ಟೆಯಾಗಿ ಅದರಲ್ಲಿ ರುಂಡ ಮುಂಡ ಇಣುಕುತಿದ್ದವು. ರಣರಂಗದಲ್ಲಿ ರಕ್ತ ಹೆಪ್ಪು ಕಟ್ಟಿದ್ದು ಹೇಗೆ ಕಾಣಿಸುತ್ತಿತ್ತೆಂದರೆ

ಗಗನದಲ್ಲಿ ದಿಗಂತ ಹಾಗೂ ದಿಗಂತದಲ್ಲಿ ಸೂರ್ಯ ಗಟ್ಟಿಯಾದ ರಕ್ತದ ಹನಿಗಳಿಂದ ಬಣ್ಣ ಬಣ್ಣದ ದುಪಟ್ಟವಾಯಿತು. ಭೂಮಿ ತಾಜಾ ಕೆಂಪು ಕುಸುಂಬೆ ಪೂ ತೊಟ್ಟಕೊಂಡಿತು. ರಕ್ತದಿಂದ ಖಡ್ಗ ಹರಿತ ಮಂದವಾದುದರಿಂದ ಮುತ್ತುಗಳು ನೀರಿನ ಗುಳ್ಳೆಗಳಂತೆ ತೇಲಾಡಿದವು. ಮತ್ತಷ್ಟು ಏಟುಗಳು ಬಿದ್ದುದ್ದರಿಂದ ಮೃತ್ಯುವಿನ ಕೈ ಸೋತು ಅದಕ್ಕೆ ಸಾಕಾಯಿತು. ಆ ನೀರು ತೊಳೆಯುವವರೆಗೆ ಅದು ದಣಿದಿತು. ನಿಂತಿರುವ ಸೈನ್ಯದ ಮೇಲೆ ಖಡ್ಗ ಹೇಗೆ ಕಂಪಿಸಿತೆಂದರೆ ಆಕಾಶದ ಹೆಜ್ಜೆಯೂ ಕೂಡ ತತ್ತರಿಸಿತು. ಮುಘಲರು ಶರ್ಝನನ ಈ ಕಾಠಿಣ್ಯತೆ ನೋಡಿ ಒಂದೊಂದು ಶರೀರವೂ ಓಡಲು ಪ್ರಾರಂಭಿಸಿತು. ಸರ್‌ಅಫ್ರಾಝ್ ಖಾನ್ ಅಲ್ಲೇ ವಿಳಂಬ ಮಾಡದೆ ತಾನು ತನ್ನ ಕುದುರೆಯಿಂದ ಇಳಿದು ಓಡಿ ಹೋಗುವವರ ಚಿಂತೆ ಬಿಟ್ಟು ಬತ್ತಳಿಕೆ ಕಟ್ಟುವಿಕೆಯ ಧರ್ಮವನ್ನು ಚೆನ್ನಾಗಿ ಪಾಲಿಸಿದನು. ಆಗ ತಮ್ಮ ಪ್ರಾಣವನ್ನು ಲೆಕ್ಕಿಸಿದೇ ಬಾಣವನ್ನಿಟ್ಟು ನಿರ್ಮಿಸಿದ. ಇದನ್ನು ನೋಡಿ ಅನೇಕ ಬಂಡುಕೋರ ಜೊತೆಗಾರರೂ ಸಹ ತನ್ನ ಬತ್ತಳಿಕೆಗಳನ್ನು ತೆಗೆದುಕೊಂಡು ಕುಳಿತರು. ತನ್ನ ಸ್ನೇಹದ ಜೊತೆಯಲ್ಲಿ ಅವನು ಬಿಲ್ಲನ್ನು ಕೈಗೆ ತೆಗೆದು ಕೊಂಡ, ಅವನೊಡನೆ ಅರವತ್ತು ಮಂದಿ ಜೊತೆಗೂಡಿದರು. ಬಿಲ್ಲುಗಳೆಲ್ಲ ಕೋಪಗೊಂಡು ಹುಬ್ಬೇರಿಸಿದವು. ಆದರೆ ಉಬ್ಬಿದ ಬಾಣ ಬಲು ಕೋಪಿಷ್ಠನಾದ. ಕಿವಿಯಲ್ಲಿ ಪಿಸು ಮಾತು ನಡೆಯಿತು. ಅದರಂತೆ ಮೈದಾನದಲ್ಲಿ ಬಾಣಗಳು ಓಡಲಾರಂಭಿಸಿದವು. ಪ್ರತಿಯೊಂದು ಶರೀರಕ್ಕೆ ಭಲ್ಲೆಯ ಮೊನೆ ತಾಗಿತು. ಕವಚ ಲಕ್ಷಾಂತರ ಎದೆಗಳನ್ನು ಹೊಲಿಯಲಾರಂಭಿಸಿತು. ಬಹಳ ಗಟ್ಟಿ ಬಿಲ್ಲುಗಳು ಜೋರಾಗಿ ಎದ್ದುದರಿಂದ ಶಪಾಷಪ್ ಎಂದು ಬಾಣಗಳ ಶಬ್ದ ಬರಲಾರಂಭಿಸಿತು. ಅಷ್ಟೊಂದು ಬಾಣಗಳು ಒಂದೇ ಸಮಾಪ್ರತಿ ತೂತಿನಿಂದ ಬಿಟ್ಟಾಗ ಸೂರ್ಯ ಉಸಿರು ಕಟ್ಟಿ ನೋಡಿದ್ದನ್ನು ಕಂಡು ಕಿರಣ ಭಯಬಿದ್ದಿತು. ಶರ್ಝ ಇವೆಲ್ಲವನ್ನು ನೋಡಿ ಈಗ ಚಿಂತೆ ಮಾಡುವಂತಹದು ಏನೂ ಇಲ್ಲ ಎಂದು ಕೊಂಡು ಕುದುರೆ ಮೇಲಿಂದಲೇ ನೆಲದ ಮೇಲೆ ಹಿಮ್ಮಡಿ ಹೊಡೆದ. ಮರ್ಯಾದಸ್ಥ ಯುವಕರೆಲ್ಲರೂ ಅಲ್ಲೇ ಕುದುರೆಗಳ ಮೇಲಿಂದ ನೆಲದ ಮೇಲೆ ಆಕ್ರಮಣಿಸಿದರು. ಸಮುದ್ರದ ಅಲೆಗಳಲ್ಲಿ ಮೊಸಳೆಗಳು ಇರುವಹಾಗೆ ಖಡ್ಗಗಳ ಸೈನ್ಯದಲ್ಲಿ ಹೂತುಕೊಂಡರು. ಕೊಳಲಿಂದ ಚಂಚಲ ಗೀತೆ ಹಾಡಲು ಮುಚ್ಚಿರುವ ಬಾಯಿಯಿಂದ ಸಾಧ್ಯವೆ, ಅದು ಬಿಚ್ಚಿದರೆ ಒಂದೊಂದು ಹೂವು ಬಳ್ಳಿ ಆಗುವವು. ಹೂಗಳಿಂದ ಹೊರಟಿದ್ದ ಕಿಡಿಗಳಿಂದ ಗಾಳಿ ಪ್ರಸನ್ನಗೊಂಡಿತು. ರಾತ್ರಿಯಲ್ಲಿ ಹೊಗೆ ಎದ್ದಿದ್ದರಿಂದ ಪ್ರತಿಯೊಂದು ಹೂವು ಮಾಣಿಕ್ಯದಂತೆ ಮಿಂಚು ಹುಳವಾಯಿತು. ಶಸ್ತ್ರಗಳ ಎಲ್ಲ ಬಾಯಿ ನೇರವಾಗಿ ನುಗ್ಗಿದ್ದರಿಂದ ಎರಡೂ ಕಡೆ ಬೆನ್ನು ಕಾಣತೊಡಗಿತು. ಖಡ್ಗಗಳಿಗೆ ಹಲ್ಲು ಮೂಡಿ ಬಂದಿತು. ಆದರೆ ಅಲ್ಲಿ ಯಾರೂ ಇರಲಿಲ್ಲ. ಯಾವ ದೊಡ್ಡ ದಂತ ಮೂಡಿತ್ತೋ ಅದು ಬೇರೆ ದಂತಗಳ ಮೇಲೆ ಬೀದ್ದಿತು. ಅವನು ಏನು ಮಾಡಬಲ್ಲ ಅಂದರೆ ಖಡ್ಗಗಳ ಹರಿತದ ಮೇಲೆ ಅನೇಕ ಹಳ್ಳಗಳು ಬಿದ್ದಿವೆ ಎಂದು ದೃಷ್ಟಿ ಬಹು ಬೇಗನೇ

ಗುರುತಿಸಿಕೊಂಡಿತು. ಕೋಟೆ ಮೇಲೆ ಮತ್ತಷ್ಟು ಬಲವಾದ ಆಕ್ರಮಣ ನಡೆಸಿ ಅವರನ್ನು ಹೊಡೆದು ನುಗ್ಗಿ ಜಮೆದಾರನ ಮೇಲೆ ಕೈ ಮಾಡಿದರು. ಭೀಕರ ಯುದ್ಧ ನಡೆದು ಒಬ್ಬರನ್ನೊಬ್ಬರು ಆಲಂಗಿಸಿದರು. ಅದರಿಂದಾಗಿ ಕಠಾರಿಗಳು ಸಹ ಬೀಳುವ ಹಾಗೆ ಕಾಣಿಸಿದವು. ಜಾಲದ ಮೇಲೆ ಮೀನಿಗೆ ಯಾವುದೇ ಹತೋಟಿ ಇರುವುದಿಲ್ಲವೋ ಹಾಗೆ ಕವಚಧಾರಿ ಯುವಕರಲ್ಲಿ ನಡಿಯುವ ಶಕ್ತಿ ಇರಲಿಲ್ಲ. ಅದೇ ಸಮಯದಲ್ಲಿ ಹಠಾತ್ತನೇ ಎಲ್ಲ ಪಂಕ್ತಿಗಳನ್ನು ಪರಾಜಯಗೊಳಿಸಿ ಸರ್‌ಅಫ್ರಾಝ್ ಖಾನನ ತಲೆ ಕತ್ತಿರಿಸಿ ಎಸೆದ. ಎಷ್ಟೊಂದು ಪ್ರಸಿದ್ಧ ಶೂರರಿದ್ದರೋ ಅವರೆಲ್ಲ ಖಡ್ಗ ಎಳೆದುಕೊಂಡರು. ಆದರೆ ಒಮ್ಮೆಲೇ ನಿರಾತಂಕ ಹತ್ಯೆಗೊಂಡರು. ಕರಿ ನೆಲದ ಮೇಲೆ ಎಷ್ಟೊಂದು ರಕ್ತ ಹರಿಯಿತೆಂದರೆ ವೀಳ್ಯದೆಲೆ ತಿಂದ ನಂತರ ಹಲ್ಲುದೆರೆಸಿದಂತೆ ಎಂದು ತಿಳಿ. ನಂತರ ಆತ್ಮಗಳ ಗಾಳಿ ಅಲೆ ಅಲೆಗಳಂತೆ ಎದ್ದೇಳಿತು. ಅದರಲ್ಲಿ ಸೈನ್ಯದ ಸೈನ್ಯವೇ ಮೃತ್ಯುವಿನ ನದಿಯಲ್ಲಿ ಮುಳುಗಿತು. ಆಕಾಶದಲ್ಲಿ ಸಾವಿನ ಮತ್ತೆ ಸಂಚಾರವಾದಾಗ ಎರಡೂ ಕಡೆ ರಕ್ತದ ನದಿಗಳಲ್ಲಿ ಅಲೆಗಳ ಪದರಗಳಿತ್ತು. ತೋಟದಲ್ಲಿ ಹೊಸದಾಗಿ ಎಲೆಗಳು ಉದುರಿದಂತೆ ಕಣ್ಣಿನ ಮುಂದೆ ಅಂತಹ ಉದುರು ಕಾಣಿಸಿತು. ವಿವಿಧ ಶಸ್ತ್ರಗಳು ಗುರಾಣಿ, ಭಲ್ಲೆ, ಖಡ್ಗಗಳೆಲ್ಲವೂ ಮುರಿದು, ಕಡ್ಡಿ ಕಸ ಕಾಲಲ್ಲಿ ಸಿಗುವಂತೆ ಹರಡಿದ್ದವು. ಹೂವು ತನ್ನ ದಂಟಿನ ಜೊತೆಯಲ್ಲಿ, ಎಲೆ ಕೊಂಬೆಯೊಂದಿಗೆ ಹಸ್ತದಂತೆ ಕಾಣುತ್ತಿತ್ತು. ಖಡ್ಗದ ಮೇಲಿನ ದಾರಿಯಿಂದ ಶತ್ರುಗಳ ಸಾಲುಗಳು ದಾರಿ ಮಾಡಿಕೊಂಡು ಶೂನ್ಯ ಲೋಕದಲ್ಲಿ ಹೊರಟರು. ಪ್ರಸಿದ್ಧ ವ್ಯಕ್ತಿಗಳನ್ನು ಸೆರೆ ಹಿಡಿದು ಅವರ ಐಶ್ವರ್ಯ ಹಾಗೂ ದೇಶವನ್ನು ಧ್ವಂಸ ಮಾಡಿದವು. ಸಹಸ್ರಾರು ಸಂಖ್ಯೆಯಲ್ಲಿ ಜನಸಾಮಾನ್ಯರು ನಾಶವಾಗಿ ಅವರ ಹೆಂಡತಿ ಮಕ್ಕಳೆಲ್ಲರನ್ನು ಬಂದಿ ಮಾಡಿಕೊಳ್ಳಲಾಯಿತು. ಹೀಗೆ ಧ್ವಂಸ ಮಾಡಿ ಅವರಿಗೆ ದಿನದ ಪಡಿಯು ಇಲ್ಲದಂತೆ ಮಾಡಿದರು. ಅವರ ಸೈನ್ಯಕ್ಕೆ ತಿನ್ನಲು ಮಣ್ಣೂ ಸಹ ಮಿಕ್ಕಲಿಲ್ಲ. ಅಲಿರವರ ಮೊದಲು ಜಯಗಳಿಸಿದ ಗುಂಪು ದಾರಿ ಮೇಲೆ ನಿಂತು ವಿಜಯೋತ್ಸವ ಆಚರಿಸಿ ಸಂತೋಷವಾದ್ಯ ಬಾರಿಸಿದರು. ದೊಡ್ಡ ವಿಜಯದ ಇದು ಮೊದಲನೆ ಹಂತ ಶರ್ಝಾ಼ ಖಾನ್ ಈ ಜಯದಿಂದ ಹುಮ್ಮಸು ಎರಡು ಪಟ್ಟು ಜಾಸ್ತಿಯಾಯಿತು. ಈ ಸಮರ ಹೀಗೆ ತೀಕ್ಷ್ಣವಾಗಿ ಜಾರಿ ಇದ್ದಾಗಲೇ ಒಬ್ಬ ಸುದ್ದಿಗಾರ ಓಡಿಬಂದು 'ಜೈಸಿಂಘ್ ತಂಗಿರುವ ಸ್ಥಳದಲ್ಲೇ ನಿಂತು ಎಲ್ಲ ಸೇನಾಪತಿಗಳನ್ನು ಹಂಚುತ್ತಿದ್ದಾನೆ. ದೊಡ್ಡ ಸೈನ್ಯದೊಂದಿಗೆ ಬಲು ದೊಡ್ಡ ಆಕ್ರಮಣ ಮಾಡಲಿದ್ದಾನೆ. ಕೋಟೆ ಮೇಲೆ ಧಾವಿಸಿ ಅದನ್ನು ಉರುಳಿಸುವನು ಬೆಳಗ್ಗೆ ಆಗುವವರೆಗೂ ನಾವು ಇದರ ಫಲಿತಾಂಶ ಕೊಡುವೆವು ಎಂದು ಎಲ್ಲರೂ ತಮ್ಮ ಜಾಗದಲ್ಲಿ ದೃಢ ಕರಾರು ಮಾಡಿದ್ದಾರೆ ಎಂದು ಸುದ್ದಿ ಕೊಟ್ಟ. ಆಗ ಶರ್ಝಾ಼ ಖಾ಼ನ್ ತನ್ನ ಖಡ್ಗ ತೂಗಿಸಿ 'ಶತ್ರುವಿನ ಮೇಲೆ ಮತ್ತೊಮ್ಮೆ ನಿಸ್ಸಂಕೋಚವಾಗಿ ಹಲ್ಲೆ ಮಾಡಿ, ಅವರು ತನ್ನ ತಲೆ ಬುರುಡೆ ಮರೆತಿದ್ದಾರೆ. ಅವರ ಮಿದುಳು ಕೆಟ್ಟು ಹೋಗಿ ಸುಮ್ಮನೆ ಕೋಪ ಹಿಡಿದಿದ್ದಾರೆ. ಇನ್ನು ನಮ್ಮಿಂದ ಅವರಿಗೆ ಕೆಲಸ ಬಿದ್ದಿಲ್ಲ.

ಅತಿಯಾಶೆಯಿಂದ ಆಸೆಗಾರನನ್ನಾಗಿ ತಪ್ಪು ಕಲ್ಪನೆಯಲ್ಲಿದ್ದಾರೆ. ಈ ಸಲ ಯಾವ ಆಟ ನಡೆಯುತ್ತದೆಂದು ನಾವು ನೋಡೋಣ. ಜೀವ ಸೋತವರನ್ನು ಪರಿಶೋಧನೆ ಮಾಡ ಬೇಕಾಗಿದೆ. ಬಿಜಾಪುರದ ಮೇಲೆ ಹೋಗುವವರ ಮುಖ ನಾನು ಖಡ್ಗದ ಬೆಳಕಲ್ಲಿ ನೋಡುವೆ ಎಂದು ಹೇಳಿ ತನ್ನ ಮನಸ್ಸಿನ ದಾರಿ ಹಿಡಿದ. ಇಡೀ ಸೈನ್ಯಕ್ಕೆ ಒಗ್ಗಟ್ಟಾಗಿ ಯುದ್ಧ ಮಾಡಲು ನೇಮಿಸಿ, ಇದಕ್ಕಾಗಿ ತನ್ನ ಸೈನ್ಯ ಹಂಚಿ, ಅವರಿಗೆ ದಾರಿ ನಿಶ್ಚಯಿಸಿ ಅಲ್ಲಾಹನ ಮೇಲೆ ಭರವಸೆ ಇದ್ದರೆ ಸಾಕು, ಯಾರು ಶತ್ರುವಿನ ಮೇಲೆ ಜಗಳವಾಡುವನೋ ಅವನಿಗೆ ಜಯ ಸಿಕ್ಕೇ ಸಿಗುತ್ತದೆ. ಅಲಿ ಅಂತೂ ಅಲ್ಲಾಹನ ಮೇಲೆ ಭರವಸೆ ಮಾಡುವನು. ದೊಡ್ಡ ಕಾರ್ಯದಲ್ಲಿ ಅವನಿಗೆ ಮಹಾನತೆ, ಪ್ರತಿಷ್ಠೆ ಎಲ್ಲವೂ ದೊರೆಯುತ್ತದೆ. (೪೫೩೬–೪೬೬೬)

ಎರಡನೆಯ ಜಯ: ಮುಘಲರು ಪಟ್ಟಣದ ಮೇಲೆ ಆಕ್ರಮಿಸಿದರು ಹಾಗೂ ಶರ್ಝಾ ಮತ್ತು ಹುಲಿಯೊಡನೆ ಯುದ್ಧ ನಡೆಯಿತು

ಅದೊಂದು ಪೂರ್ಣ ಶುಭ ಗಳಿಗೆಯಲ್ಲಿ ರಾತ್ರಿ ಜಯದ ಗರ್ಭಧಾರಣೆ ಮಾಡಿತ್ತು. ಗಗನ ತನ್ನ ತಲೆ ಮೇಲೆ ಪೂರ್ಣ ಚಂದ್ರನ ಒರೆ ಧರಿಸಿತ್ತು. ಹಸಿರು ಕವಚದ ಮೇಲೆ ಅಮೂಲ್ಯವಾದ ತೋಳುಬಳೆ ಕಟ್ಟಿಕೊಂಡಿತು. ಸೂರ್ಯ ಹಾಗೂ ಮಂಗಳ ಗೃಹ ಇನ್ನಷ್ಟು ಪ್ರಕಾಶಮಯವಾಗಿ, ಹರಿತವಾದ ಖಡ್ಗ ಮತ್ತು ಕಠಾರಿ ಕೊಟ್ಟ ಗಾಳಿಯ ಹೊದಿಕೆಯ ಮೇಲೆ ಆಕಾಶಗಂಗೆ ವಿಜ್ರಂಭಣೆಯಿಂದ ಹೊರಟು ಕರ್ಕಾಕಟ ರಾಶಿಯ ಗುರಾಣಿ ಎತ್ತಿಕೊಂಡಿತು. ಬಿಲ್ಲು ಬಾಣ ಹಾಗೂ ಬತ್ತಳಿಕೆ ಅವಸರಗೊಂಡು ಕಾಮನ ಬಿಲ್ಲು ಹಾಗೂ ಪ್ರಕಾಶಮಯ ನಕ್ಷತ್ರ ತೆಗೆದುಕೊಂಡು ಮಾರ್ಗ ನಂದಿಯ ಬಾಲವನ್ನು ಅಮುಕಿ ಕಳೆದು ಹಾಗೂ ಸಿಂಹ ಜೀನಿನ ಚರ್ಮ ಕಿತ್ತು ಹಾಕಿತು. ತನ್ನ ಕಣ್ಣಿನ ಮುಂದಿರುವ ಎದುರಾಳಿಯ ಮೇಲೆ ಹಲ್ಲೆ ಮಾಡಲು ಮುಂಜಾನೆಯ ಒಳ್ಳೆ ಕುದುರೆಯನ್ನಿಟ್ಟ. ಅದೇ ರಾತ್ರಿ ಯುಗದ ಅರಿಸ್ಟಾಟಲ್ ಬಳಿ ದಕ್ಷಿಣದ ಎಲ್ಲ ಸರ್ದಾರರು ಅತಿಥಿಯಾಗಿದ್ದರು. ಮನಮೆಚ್ಚುವ ಬಲು ಸುಂದರ ಸಭೆ ಅಲಂಕರಿಸಲಾಗಿತ್ತು. ನಿವಾಸಗಳಲ್ಲಿ ಪ್ರತಿಯೊಂದು ಆತ್ಮ ಸಂತೋಷ ಪಡೆಯುತ್ತಿತ್ತು. ಒಂದು ಕಡೆ ಶೂರರೆಲ್ಲ ಸಾಲು ಕಟ್ಟಿ ಬೆನ್ನಗಳೆಲ್ಲ ಹಿಂದೆ ಮಾಡಿ ಮನರಂಜಿಸುತ್ತಿದ್ದರೆ ಮತ್ತೊಂದು ಕಡೆ ಖಡ್ಗಬಿಟ್ಟರೆ ಬೇರೆ ಮನರಂಜನೆಯ ರಿವಾಜಿರಲಿಲ್ಲ. ವೀರ ಶೌರ್ಯದ ಮಾತು ಬಿಟ್ಟರೆ ಬೇರೆ ಯಾವ ಮಾತಿರಲಿಲ್ಲ. ಶಾಹ್ನಾಮ ಓದುವರು ಶಾಹ್ನಾಮ ಪುಸ್ತಕ ತೆಗೆದು ಕೊಂಡು ಓದುತ್ತಿದ್ದು ಶೌರ್ಯದ ವಿಚಾರದ ಬಗ್ಗೆ ರುಸ್ತುಂನ ನಾಲಿಗೆಯಲ್ಲಿ ಮಾತನಾಡಿದರು. ಖಡ್ಗ ಬಿಟ್ಟರೆ ಕೈಗೆ ಬೇರೆ ಆಶ್ರಯವಿರಲಿಲ್ಲ. ಸಮರದ ಮಾತಿನ ಅಭ್ಯಾಸ ನಡೆಯುತ್ತಿತ್ತು. ನಿಝಾಮಿಯ ಅನೇಕ ಪುಸ್ತಕಗಳು ತೆಗೆದುಕೊಂಡು ಸಿಕಂದರ್ ಬಗ್ಗೆ ವರದಿ ಮಾಡಿರುವ, ಅದಕ್ಕೆ ಸಂಬಂಧಿಸಿದ ಸೂಕ್ಷ್ಮ ವಿಷಯಗಳನ್ನು ಹೇಳುತ್ತಿದ್ದರು. ನಿಜವಾಗಿಯೂ ಒಯ್ಯಾರೆಯಿಂದ ಕಾಲಿಗೆ

ನಮಸ್ಕರಿಸುತ್ತಿದ್ದರು. ಅನೇಕರು ಅಬ್ಬರದ ಸಂದನ್ನು ಕೇಳಿ ಅಮಲೇರುತ್ತಿದ್ದರು. ಶೂರರು ಪ್ರತಿಸಲ ಅನೇಕರೀತಿಯ ಯುದ್ಧಕ್ಕೆ ಸಂಬಂಧಿಸಿದ ಗೀತೆ ಅಥವಾ ಕಥೆಯನ್ನು ಕೇಳಿ ಅವರ ಶೌರ್ಯ ಎರಡು ಪಟ್ಟು ಹೆಚ್ಚಾಗುತ್ತ ಹೋಗಿ, ಗಂಡಸರ ಶರೀರದಲ್ಲಿ ಗಂಡಸ್ತನ ಹೇಗೆ ಉಬ್ಬಿತೆಂದರೆ ಕವಚದ ಬಳೆಗಳು ಮೈಮೇಲೆ ಬಿಗಿಯಾದವು. ಅನೇಕ ಹುಲಿಗಳು ತನ್ನ ಓರೆಗಳಿಂದ ಖಡ್ಗಗಳನ್ನು ತೆಗೆದು ತನ್ನ ಬೆರಳುಗಳ ತೂಕದಿಂದ ಧಾರೆಗಳ ಪ್ರವಾಹ ನೋಡುತ್ತಿದ್ದರು. ಎಲ್ಲರೂ ಹೃತ್ಪೂರ್ವಕಾಗಿ ಬೇಗನೇ ಮುಘಲರಿಂದ ಕೆಲಸ ಬರಲಿ ಎಂದು ಕಾಯುತಿದ್ದರು. ಅಂದರೆ ಮುಘಲರಿಯ ಯುದ್ಧವಾಡಲು ಪ್ರತಿಯೊಬ್ಬನೂ ಸಮರವಾಡಲು ವ್ಯಾಕುಲನಾಗಿದ್ದ. ಆಗ ಒಬ್ಬ ಗೂಢಚಾರಿ ಬಂದು ಯಾರು ಹಗೆತನದ ಕೆಟ್ಟ ಆಸೆ ಇಡುವನು,ಯಾವಾಗ ಸೂರ್ಯನ ಒತ್ತು ಕಡಿಮೆಯಾಗುತ್ತದೆಯೋ ಆಗ ಚಂದ್ರ ಹಾಗೂ ನಕ್ಷತ್ರಗಳಿಂದ ಸೋತು ಹೊಗುತ್ತದೆ. ಶತ್ರು ಆಗ ಅಪಶಕುನ ಮಾಡಿ ಒಳ್ಳೊಳ್ಳೆ ದಂಡನಾಯಕರನ್ನು ಆರಿಸಿ ಮೊದಲಿಗೆ ದಕ್ಷಿಣದ ಮಂತ್ರಿಗಳನ್ನು ಸೋಲಿಸಲು ಬಿಜಾಪುರದ ಕಡೆ ಓಡಿಸಿದ. ನನ್ನ ಕೆಲಸವೇ ಹೊಡೆತ ಕೊಡುವುದು. ಪ್ರಾಬಲ್ಯ ತೋರುವುದು ಎಂದು ತಿಳಿದಿದ್ದಾನೆ ಅಥವಾ ಅವನ ಕಂದಕ ಖಾಲಿ ಎಂದು ತಿಳಿದಿದ್ದಾನೆ. ಶತ್ರು ಕಡೆಯಿಂದ ಯಾವಾಗ ಈ ರಹಸ್ಯ ತಿಳಿಯಿತೋ ಗಂಡು ಹುಲಿಗಳೆಲ್ಲ ಗರ್ಜಿಸಿದವು. ಯುಗದ ಅರಿಸ್ಟಾಟಲ್(ಬಾದಶಾಹ)ರ ಇಚ್ಛೆ ಅಂದರೆ ಮುಘಲರ ಜೊತೆ ಸಾಲು ಕಟ್ಟಿ ಸಮರವಾಡ ಬೇಕೆಂಬುದಾಗಿತ್ತು. ಅವನ ಮೇಲೆ ದೊಡ್ಡ ಆತಂಕ ಏರಿಸಬೇಕು ಅವನು ಕನಸಲ್ಲೂ ಗಾಬರಿಯಾಗಿ ಓಡಬೇಕು. ಇದನ್ನು ಕೇಳಿ ಆ ಗಂಡು ಇಷ್ಟು ಮಾತ್ರ ಹೇಳಿದ, ನೀವು ಸ್ವತಃ ಹೋಗ ಬೇಕು ಮತ್ತು ಮುಳ್ಳು ತೆಗೆಯ ಬೇಕು. ನಾವು ಖಡ್ಗದಿಂದ ಮುಂದೆ ಸಾಗಿ ಅವರ ತಲೆಯಲ್ಲಿರುವ ಅಹಂಕಾರ ಅಹಂಭಾವ ಇಳಿಸುವೆವು. ಅವರನ್ನು ಸುತ್ತಲಿಂದಲೂ ಘೆರಾವು ಮಾಡಿ ಹೇಗೆ ಗಾಬರಿ ಮಾಡುವೆವೆಂದರೆ ಅವರು ಓಡಬೇಕೆಂದರೂ ಅವರಿಗೆ ದಾರಿ ಸಿಗದೇ ಇರುವ ಹಾಗೆ ಮಾಡುವೆ. ಅದಾಗ್ಯೂ ಎಲ್ಲರೂ ಕರಾರು ಮಾಡಿ ಮುಂದೆ ಹೋಗಿ ಯುದ್ಧ ಮಾಡಲು ತೀರ್ಮಾನಿಸಿದರು. ಅಂಗಸ್ನಾನ ಮಾಡಿ ಪ್ರವಾದಿಯರು ಹಾಗೂ ಇಸ್ಲಾಮಿನ ಜನರ ಮೇಲೆ ದರೂದೊ ಸಲಾಮ್ ನಂತರ ಒಳಿತಿನ ಇರಾದೆ ಮಾಡಿ, ಫಾತೆಹ ಓದಿದರು. ಶೂರರೆಲ್ಲರೂ ದೀನ್ ದೀನ್ ಘೋಷಿಸಿದರು. ಭಲ್ಲೆಧಾರಿಗಳೆಲ್ಲ ಝೀನ್ ಝೀನ್ ಎಂದು ಘೋಷಣೆ ಕೂಗಿದರು, ಒಂದೇ ಕ್ಷಣದಲ್ಲಿ ಎಲ್ಲರೂ ನಿಸ್ಸಂಕೋಚವಾಗಿ ಸಿದ್ಧರಾದರು. ಶಸ್ತ್ರಗಳನ್ನು ಧರಿಸಿದ ವೀರ ರಣಧೀರರು ಹಾಗೂ ಕುದುರೆಗಳು, ಶಸ್ತ್ರಧರಿಸಿದ ಸಿಪಾಯಿಗಳು, ಭೂಮಿ ಬಲು ಆರಾಮವಾಗಿ ಪ್ರತಿಯೊಂದು ಕೀಲು ಅಲುಗಾಡುವ ಹಾಗೆ ಕಾಣಿಸುತ್ತಿದ್ದಾರೆ. ಯಾರೋ ಕವಚ ಧರಿಸಿದರೆ ಮತ್ಯಾರೋ <u>ಕರೋ</u> ಧರಿಸಿ ಈಗ ನನ್ನ ಮೇಲೆ ಲಕ್ಷ ಆಕ್ರಮಣ ನಡೆಯಿಲಿ. ನನಗೇನು ಆಗಲಾರದು ಎಂದು ಹೇಳುತ್ತಿದ್ದಾರೆ. ಯಾರೋ ಕಬ್ಬಿಣದ ಯುದ್ಧ ಕವಚ ಧರಿಸಿದ್ದರೆ ಮತ್ಯಾರೋ ಸಾಮಾನ್ಯ ಯುದ್ಧ

ಕವಚ ಧರಿಸಿರುವನು. ಅಂದರೆ ನಾಲ್ಕು ಮಿನುಗುವ ಕನ್ನಡಿಗಳನ್ನು ಕಟ್ಟಿಕೊಂಡಿರುವರು ಎಂದು ಹೇಳಬಹುದು. ಇನ್ನು ಅನೇಕರು ಬಗೆ ಬಗೆಯ ಕವಚಗಳು ಅಂದರೆ ದೊಪ್ಲಿ, ಚುಹಲ್ ಖದ್, ಲುಬಾದ, ಅಬಾ, ಕೀಚಾಂ, ತೋಥಿಯಾಂ ಅಗಣಿತ ಕವಚಗಳನ್ನು ಧರಿಸಿರುವರು. ಖೋಖಿ ತಲೆ ಮೇಲೆ ಕಟ್ಟಿ ಅದರ ಮೇಲೆ ಒರೆ ಧರಿಸಿದ. ಆದರೆ ತಲೆಯನ್ನು ಹೊಡೆಯುವ ಅಮೂಲ್ಯ ಧರಿಸಿದೆ ಇರಲಿಲ್ಲ. ದೊಡ್ಡ ಕಾಲುಚೀಲ ಹಸ್ತರಕ್ಷಕ ಚೀಲ, ಪ್ರತಿ ಕೀಲುಗಳಿಗೆ ಮೊಣಕಾಲು ಕವಚಗಳನ್ನು ಕಟ್ಟಿ, ವ್ಯಾಯಾಮಕ್ಕೆ ಬೇಕಾಗಿರುವ ಓಳ್ಳೆ ಶಸ್ತ್ರಗಳೆಲ್ಲ ಎತ್ತಿಕೊಂಡು ತನ್ನ ಕೈಯಲ್ಲಿ ಇಟ್ಟುಕೊಂಡರು. ಅವು ಸಮುದ್ರದ ಹಡಗಿನಂತೆ ಕಾಣುತ್ತವೆ. ಅದು ತನ್ನ ಬಾಲದಿಂದ ನಿಸ್ಸಂಕೋಚವಾಗಿ ಮೈ ಮೇಲೆ ಹೊಡೆದು ಹಾಕುತ್ತದೆ. ಹೆಬ್ಬಾವಿನ ನಾಲಿಗೆ ಹಾಗೆ ಹರಿತವಾದ ಖಡ್ಗಕಾಣುತ್ತದೆ. ಅದು ಹಲ್ಲೆ ಮಾಡಿದರೆ ಸಹಸ್ರಾರು ಕಿಡಿಗಳು ಹಾರುತ್ತವೆ. ಫಿರಂಗಿ ಪ್ರತಿ ಸಾವಿನ ನದಿಯ ದಡ ಅದರ ನೀರಿನ ಕ್ಯುಯಿಲು ಲೋಕವನ್ನೇ ಮುಳುಗಿಸುತ್ತದೆ. ಆನೆ ಮಿದುಳನ್ನು ತಿನ್ನಲು ನಾಯಿಗಳು ತಯಾರಾದವು. ತುಟಿಗಳಿಂದ ನಾಲಿಗೆ ತೆಗೆದು ನೀರಲ್ಲಿ ಮುಳಿಗಿಸಿದವು. ಕೊಡಲಿಗೆ ಸದ್ಯವಾಗಿ ನಾನು ಸಂತೋಷ ಕೊಡುವವ ಎಂದು ಹೇಳಿದರೆ ಸಾವಿನ ಹಸ್ತದ ಸುತ್ತಲೋ ಉಗುರಿದೆ. ದವಡೆಯ ಬಹುವಚನ ಕಠಾರಿ, ಆದರೆ ತೆರೆದ ಮಾವೊಂಟಿಯಂತೆ ಗದೆ ಅದಕ್ಕೆ ಓರೆಯಾಗಿದೆ. ಪ್ರತಿಯೊಂದು ಬಾಂಕಿನ ಮುಳ್ಳು ಪ್ರಳಯ ಉಂಟುಮಾಡುವಂತಹದು. ಆದರೆ ಹಲ್ಲು ಹಾವಿನ ವಿಷ ಇದ್ದಂತೆ. ಪ್ರತಿಯೊಂದು ಖಪ್ವ ಎಂದರೆ ಅದು ಚೇಳಿದ್ದ ಹಾಗೆ, ಅದರ ಮುಂದೆ ಶತ್ರುವಿನ ಮೊನೆಯ ಹರಿತ ಕಡಿಮೆ ಎಂದು ಎನ್ನಬಹುದು. ಕಠಾರಿಯ ಮೀನು ಬಹಳ ಆಳವಾದದು. ಅದು ಎದುರಾಳಿಯ ರಕ್ತದಲ್ಲಿ ಈಜಬೇಕೆನ್ನುತ್ತದೆ. ಯುದ್ಧದಲ್ಲಿ ಎದೆಯನ್ನು ಕೋಟೆಯಂತೆ ಮಾಡಿ ನಿಂತುಕೊಳ್ಳಲು ಗುರಾಣಿಯಾಗಿ ಜೀವಕ್ಕೆ ಓರೆ ಕೊಡುತ್ತದೆ. ಪ್ರತಿಯೊಂದು ಬಾಣ ಮೃತ್ಯುವಿನ ಪತ್ರದಂತೆ ತಾಗಿದ ಹಾಗೆಯೇ ನೀರು ಕುಡಿಯದೇ ಪ್ರಾಣದ ಬಿಡುಗಡೆ ಆಗುತ್ತದೆ. ಭಲ್ಲೆ ಹಸಿದ ಹೆಬ್ಬಾವಿನಂತೆ ಕಾಣುತ್ತದೆ. ಶತ್ರುವಿನ ಜೀವ ಅದರ ತುತ್ತು ಎಂದು ಕಾಣಿಸುತ್ತದೆ. ಈ ಕಡೆಯಿಂದ ತಟ್ಟೆ ಬಿಚ್ಚಿದರೆ ಅದು ಆಕಡೆ ಹಾರಿ ಹೋಗಿ ಜಗಳ ಮಾಡುತ್ತಿರುತ್ತದೆ. ಸಿಡಿ ಮದ್ದು ಹಾಗೂ ಬಂದೂಕು ಸಹ ಶತ್ರುವಿಗೆ ಚೆನ್ನಾಗಿ ವಿಚಾರಿಸಿಕೊಳ್ಳುತ್ತದೆ. ಅಂದರೆ ಈ ಕಡೆ ಶರೀರಕ್ಕೆ ಗುಂಡು ತಾಗಿದರೆ ಜೀವ ಬಹಳ ಕಳವಳ ಪಡೆಯುತ್ತದೆ. ಕೊರಳು ಬಿಗಿಯುವ ಹಗ್ಗ ಯಾರ ಕೊರಳಲ್ಲಿ ಹಾರವಾಗಿ ಬೀಳುತ್ತದೆಯೋ ಅದು ಪ್ರಾಣವನ್ನು ಕಣ್ಣುಗಳಲ್ಲಿ ತರುವವರೆಗೂ ಅದು ಜರುಗುವುದಿಲ್ಲ. ಸಿಪಾಯಿಗಳು ಸಶಸ್ತ್ರಗಳನ್ನು ಧರಿಸಿದ್ದಾರೆ. ಹೀಗೆ ಸಜ್ಜುಗೊಂಡು ಕುದುರೆಗಳ ಮೇಲೆ ಹೊರಟಿದ್ದಾರೆ. ಅನೇಕ ರೀತಿಯ ಚಂಚಲವಾದ ಕುದುರೆಗಳಿವೆ. ಅವುಗಳೆದ್ದರೆ ಗಾಳಿಯೂ ಸಹ ಕಳವಳಗೊಳ್ಳುತ್ತದೆ. ಮುಂಜಾನೆ ವಿಶೇಷವಾಗಿ ಯಾವ ಬಣ್ಣಗಳನ್ನು ತನ್ನೊಡನೆ ತರುತ್ತದೆಯೋ ಅದನ್ನು ನೋಡಿ ಒಂದೊಂದು ಹೂವು ನಾಚಿಕೆಯಿಂದ ಮುದುಡುತ್ತದೆ.

(ನುಸ್ರತಿ ಇಲ್ಲಿ ಅನೇಕ ಕುದುರೆಗಳ ಗುಣವಿಶೇಷತೆ ತೋರುತ್ತಾ ಹೋಗುತ್ತಾನೆ.) ದರ್ಯಾಯಿ ಗುಣಹೊಂದಿದ ಕುದುರೆ ಸಮುದ್ರದ ಮೇಲೂ ಬಲು ವೇಗದಿಂದ ಹೊರಡುತ್ತವೆಂದರೆ ಅದರ ಕಾಲಿಗೆ ನೀರು ಸಹ ತಗಲುವುದಿಲ್ಲ. ಇರಾಖಿ ಕುದುರೆಗಳು ತನ್ನ ಬೆವರು ನಕ್ಷತ್ರಗಳ ಮೇಲೆ ಎಸೆಯುತ್ತಾರೆ. ಕಿನಾರಕ್ಕೆ ಸಂಪೂರ್ಣ ಅವರದೇ ಹಕ್ಕು. ಕಚಯಿ ರೂಪವಂತ ಚಂಚಲ ಹಾಗೂ ಮನಮೋಹಕ, ಅದರ ವೇಗ ನೋಡಿ ಪವನನೂ ಸಹ ತನ್ನ ಬುದ್ಧಿ ಕಳೆದುಕೊಂಡರು. ತುರ್ಕಿ ಕುದುರೆಗಳ ವೇಗ ಅದರ ಧೂಳು ಗಾಳಿಯಲ್ಲಿ ಕಾಣಿಸುತ್ತದೆ. ಅವುಗಳು ಮುಂದೆ ಹೋದರೆ ತೋಟದ ಮೇಲೆ ಪವನದ ಹಾಡು ಕೇಳಬಹುದು. ಮನ್ಜಸ್‌ನ ಶೀಘ್ರತೆಯನ್ನು ನೋಡಿ ಪ್ರತಿ ಸಮಯ ತಣ್ಣಗಾಳಿ ಪದೇ ಪದೇ ಶಹಬಾಸ್ ಎನ್ನುತ್ತದೆ. ಬೆಟ್ಟಗಳ ಮೇಲೆ ಬೆಟ್ಟದ ಚೆಲುವೆಗಳಿದ್ದರೆ ಹೇಗೆ ಹೊರಡುತ್ತಾರೆಂದರೆ ಅಲೆಯ ಮೇಲೆ ಹಡಗು ಹೋದ ಹಾಗೆ ಹೋಗುತ್ತದೆ. ಒಂದೊಂದು ಶಾಹಿ ಕುದುರೆಯ ಮೇಲೂ ತೃಪ್ತಿ ಶೋಭಿಸುತ್ತದೆ. ಆ ಕುದುರೆಗಳ ಮೇಲೆ ಹುಮಾ, ಮುಕುಟ ಹಾಗೂ ಕಾಲ್ಬಳೆ ತೊಡಿಸಿ ಬೆನ್ನಿನ ಮೇಲೆ ಕಸೂತಿ ಕೆಲಸ ಮಾಡಿದ ಬಟ್ಟೆ ಹೊದಿಸಲಾಗಿದೆ. ಯಾವುದೋ ಹರಿತವಾದ ವಸ್ತುವಿಗೆ ತಗುಲಿದರೆ ನಿಸ್ಸಂಕೋಚವಾಗಿ ಹಲ್ಲು ಡೊಂಕಾಗುವುದು. ಯಾವುದೇ ಶರ್ಝುದಿಂದ ಡಿಕ್ಕಿ ಹೊಡೆದರೆ ಗಾಯದಿಂದ ಸೊಟ್ಟನಾಗಿ ದಾರಿ ಮೇಲೆ ಬಿದ್ದಿರುವನು. ಯಾವುದೋ ಕುದುರೆಗೆ ಜಲಾಜಲ್ ಕಟ್ಟಿದ್ದರೆ ಮತ್ತೊಂದಕ್ಕೆ ತಬಲ್ ಮಗದೊಮ್ಮೆಗೆ ಗೆಜ್ಜೆ ಕಟ್ಟಲಾಗಿದೆ. ಇನ್ನೊಂದು ಕುದುರೆ ಮೇಲೆ ಬಿಗುಲು ಚಿರತೆಯ ಚರ್ಮದ ಮೇಲೆ ಭೈರೋಂ ಹಾಡಲಾಗುತ್ತಿದೆ. ಕವಚಗಳನ್ನು ಧರಿಸಿ ಅಲಂಕರಿಸಿ ನಡೆದುಕೊಂಡು ಹೋಗುತ್ತಿದ್ದರೆ ದೇವಚರಿಗಳು ತನ್ನ ರೆಕ್ಕೆಗಳನ್ನು ಹರಡಿಸಿಕೊಂಡು ಹಾರಾಡುತ್ತಿದ್ದಾರೆಂದು ಕಾಣಿಸುತ್ತದೆ. (ಇದರ ನಂತರ ನುಸ್ರತಿ ಆನೆಗಳ ಪ್ರಶಂಸೆ ಮಾಡುತ್ತಾ) ಅಮಲೇರಿದ ಆನೆ ಅಲಬರ್ಝ್ ಬೆಟ್ಟದಂತೆ ಕಾಣುತ್ತವೆ. ಈ ಅಲಂಕೃತ ಆನೆಗಳು ಒಂದೊಂದು ಉಕ್ಕಿನ ಬುರ್ಜಿಗಳಂತೆ, ನಡಿಗೆ ಅದರದು ನಿಧಾನವಾದರೂ ಸಹ ಧೂಳಿನ ಗಾಳಿಯಂತೆ ಕಾಣಿಸಿದರೂ ತೋಪಿನ ಗುಂಡಂತೆ ಶಬ್ದ ಎದ್ದಹಾಗೆ ಕಾಣಿಸುತ್ತದೆ. ಒಮ್ಮೆ ಇವು ಸಿಂಹಾಸನದ ಮೇಲೆ ಶಾಹರನ್ನು ಕೂರಿಸಿಕೊಂಡು ಹೋದರೆ ಮತ್ತೊಮ್ಮೆ ಜಗಳ ಕಾಯುತ್ತಾ ಕಾಣುತ್ತವೆ. ಎದುರಾಳಿಯ ಹೃದಯದ ಮೇಲೆ ಅವು ನದಿಯ ಅಲೆ, ಆದರೆ ಸೈನ್ಯದ ಮುಂದೆ ತನ್ನ ನಡಿಗೆಯ ಕೋಟೆ ಇದು. ದೇಶದ ವಿಜಯದ ಆಶ್ರಯದಂತೆ, ದಂತಗಳ ಚಾವಿಗಳಿಂದ ಬಾಗಿಲನ್ನು ತೆರೆಯುತ್ತವೆ. ಎದುರಿಗೆ ಬಂದವರನ್ನು ಹಠಾತ್ತನೇ ದೂರ ಮಾಡುವ ಸೊಂಡಿಲು, ಅದಾಗ್ಯೂ ಪ್ರಳಯದ ಕಹಳೆ ಇಟ್ಟಿಕೊಂಡಿರುವುದು. ನಡೆಯುವಾಗ ಸದಾ ವಿಜಯ ಮತ್ತು ಸಹಾಯ ತೆಗೆದುಕೊಂಡು ಹೊರಡುತ್ತವೆ. ತನ್ನ ಎರಡು ಕಿವಿಗಳಿಂದ ಪ್ರತಿಕ್ಷಣ ಸನ್ನೆ ಮಾಡುತ್ತಿರುತ್ತದೆ. ಎಲ್ಲಿ ಇವು ತನ್ನ ಜೀವಹಿಡಿದು ನಾಲ್ಕು ಕಂಬಗಳಂತೆ ನಿಂತುಕೊಂಡಿರುತ್ತವೆಯೋ ಅಲ್ಲಿ ಆ ದಂಡಿನ ಮೇಲೆ ಆಕಾಶ ಬೀಳುವುದಿಲ್ಲ. ವೃಕ್ಷವಿಲ್ಲದೇ ಯಾವುದೇ ತೋಟ, ಕಿರುತೋಟ

ಮನಮೋಹಕವಾಗಲು ಸಾಧ್ಯವಿಲ್ಲ. ಹಾಗೆಯೇ ಆನೆ ಇಲ್ಲದೇ ಯಾವ ದಂಡು ಸಹ ಶೋಭಿಸುವುದಿಲ್ಲ. ಯಾವಾಗ ಸೈನ್ಯ ಸಿದ್ಧವಾಯಿತೋ ಆಗ ಸುತ್ತಲಿಂದಲೂ ನಗಾರಿಗಳ ಮೇಲೆ ಮರಗಳ ಏಟು ಬಿದ್ದಿತು. ಆಕಾಶದಲ್ಲಿ ನಕ್ಷತ್ರಗಳು ತಟ್ಟೆಯಲ್ಲಿ ಪಾದರಸ ಕಂಪಿಸುವಂತೆ ಕಂಪಿಸಲಾರಂಭಿಸಿದವು. ನಗಾರಿಗಳ ಜೊತೆಯಲ್ಲಿ ಭೈರೋಬರ್ಫ್ಮ ಬಾರಿಸಿದಾಗ ಶಿವಾಲಕ ಪರ್ವತವು ಗರ್ಜಿಸಿತು. ಅಲಿರವರ ದಂಡು ಹೊರಟಿತೆಂದು ನೋಡಿದಾಗ ವಿಜಯದ ದೇವಚರರು ಅವರ ಮೇಲೆ ಚಪ್ಪರದಂತಾದವು. ಹುಝೂರ್‌ರವರು ಹೊರಟ ತಕ್ಷಣ ಅವರ ದರ್ಬಾರಿನಲ್ಲಿ ನೀಲಿಬಣ್ಣದ ತಟ್ಟೆಯಲ್ಲಿ ಮುಂಜಾನೆಯ ಪ್ರಕಾಶ ತುಂಬಿ ತಂದಾಗ, ಪ್ರತಿ ಸ್ಥಳದಲ್ಲಿ ದಂಡು ಸಿದ್ಧವಾದಾಗ ಎಲ್ಲ ಮಂತ್ರಿಗಳು ಒಬ್ಬರಾದ ಮೇಲೆ ಒಬ್ಬರು ಹೊರಟರು. ಅಶ್ವ ಪಡೆ ಕೋಪಗೊಂಡು ಅಮಲೇರಿದಂತೆ ನಡೆಯಿತು. ವೇಗವಾಗಿ ಹೋಗುವ ಅಶ್ವಗಳು ಗಾಳಿಯ ಮೇಲೆ ದೃಷ್ಟಿ ಇಟ್ಟಿದ್ದರು. ನಿಮ್ಮ ಆಕ್ರಮಣ ಉತ್ತೀರ್ಣವಾಗಲೆಂದು ಆಕಾಶದಿಂದ ವಾಣಿ ಬರುತ್ತಿತ್ತು. ಅದು ಪ್ರತಿಕ್ಷಣ ನಾಲಿಗೆ ಚಾಚಿ ಮಹನೀಯತೆ ಪ್ರಸ್ತಾಪ ಮಾಡುತ್ತಿತ್ತು. ಅದಕ್ಕಿಂತ ಹೆಚ್ಚಾಗಿ ಗದರಿಕೆಯ ತಾಪದ ಹೆಸರು ಕೇಳಿ ವಿಜಯ ಆ ಧ್ವಜಗಳ ನೆರಳಲ್ಲಿ ಸಾಗಿತು. ಇಡೀ ಸೈನ್ಯ ಎಲ್ಲೆಡೆಯೂ ಸಮುದ್ರದ ಹಾಗೆ ಕಾಣುತ್ತಿತ್ತು. ಕೊಡೆಗಳ ನೆರಳಿನ ಸಾಲು ಅಲೆಗಳ ಮೇಲೆ ಮೂಡುವ ಬುರುಗಿನ ಹಾಗೆ ಕಾಣುತ್ತಿತ್ತು. ಇಡೀ ಭೂಮಿ ಸೈನ್ಯದ ಕಾಲಿನ ಕೆಳಗೆ ರುಬ್ಬಿಹೋಗಿ ಧೂಳೆದ್ದು ಆಕಾಶದ ತಟ್ಟೆಯಲ್ಲಿ ಶೇಖರಿಸಿತು. ಅದನ್ನು ಅದ್ವಿತೀಯ ಎಂದು ತಿಳಿದು ಅದನ್ನು ಲೋಕ ಅಬೀರ್(ಸುಗಂಧ ಚೂರ್ಣ) ಎದೆಗೆ ಹಚ್ಚಿಕೊಂಡಿತು. ಎದುರಾಳಿಯ ಕೋಟೆಯವರೆಗೂ ತಲಪುತ್ತಿದ್ದ ಹಾಗೆ ಇಬ್ಬರ ಹೃದಯಗಳಲ್ಲಿ ಸಶಸ್ತ್ರ ಚುಚ್ಚಿ ಎರಡು ಕಣ್ಣುಗಳಾದವು. ಭೀಕರ ಗಾಳಿ ಬೆಳಗ್ಗಿನ ಕಾರ್ಮೋಡದಂತೆ ಎದ್ದಿತು. ಚಂದ್ರನಿಗೆ ನವ ಚಂದ್ರ ಮೂಡಿತು. ಶಾಹಿ ಸೈನ್ಯದ ಮಾರ್ಗದರ್ಶಕ ಗಗನವಾಗಿದ್ದರಿಂದ ಅಂಧಕಾರದಿಂದ ಯಾವುದೇ ಕಷ್ಟವಾಗಲಿಲ್ಲ, ಸೂರ್ಯನ ತೇಜಸ್ವಿಯ ಪಂಜಿ ಹುರಿದು ಅದರ ದೃಷ್ಟಿಯ ಕೆಳಗೆ ದಾರಿಯನ್ನು ಬೆಳಗಿಸಿತು. ಎದುರಿಗೆ ಗಗನದವರೆಗೂ ಹಠಾತ್ತನೇ ಧೂಳು ಎದ್ದು ಅಖಂಡವಾಗಿ ಭೂಮಿಯಿಂದ ಆಕಾಶಕ್ಕೆ ಹಾರಿತು. ಈ ಕಾರಣದಿಂದ ಭೂಮಿಯ ಮಣ್ಣಿನ ಹಾಸಿಗೆಯನ್ನು ಗಾಳಿ ಎತ್ತಿಕೊಂಡು ಹೋಗಿ ಆಕಾಶಕ್ಕೆ ತೆರೆ ಕಟ್ಟಿತು ಇದರಿಂದಾಗಿ ಎಲ್ಲರ ದೃಷ್ಟಿ ಮಂದವಾಯಿತು. ನೇತ್ರಗಳು ಮುಂದಿನ ದೃಶ್ಯ ನೋಡಲಾಗಲಿಲ್ಲ. ಅಲ್ಲಿ ಯಾವ ಮೋಡ ಇಳಿದು ಬಂದಿದೆಯೋ ಅಥವಾ ಭೂಮಿ ಬೆಳದು ಎತ್ತರವಾಗಿ ಹೋಗಿದೆಯೋ ಅಥವಾ ಆಕಾಶ ಇಳಿದು ಬಂದಿದೆಯೋ ಎಂದು ಅವರು ಹೇಳುತಿದ್ದರು. ಆದರೆ ಶಾಹಿ ಸೈನ್ಯ ಕಷ್ಟ ಕೊಡಲು ಬರುತ್ತಿದೆ. ಶತ್ರುವಿನ ಹೃದಯಗಳ ಮೇಲೆ ಅದು ತೆರೆ ಎಳೆದಿತ್ತು. ಈಗ ನಾನು ದೆಹಲಿ ಸೈನ್ಯದ ಬಗ್ಗೆ ಹೇಳುತಿದ್ದೇನೆ. ಅದು ಹೇಗೆ ಹೃದಯದ ಮೇಲೆ ನಡೆದಿತ್ತು. ಆ ಸೈನ್ಯವನ್ನು ನೋಡಿ ಇದರ ಆರಂಭ ಹಾಗೂ ಕೊನೆ ಎಲ್ಲಿಯದೆಂದು ತಿಳಿಯಲು ಸಾಧ್ಯವಿರಲಿಲ್ಲ. ಆನೆಗಳಿಂದ ತುಂಬಿದ

ಸಿಡಿಮದ್ದುಗಳ ಉಗ್ರಾಣ ಮೈಲಿಗಟ್ಟಲೇ ಹೋಗುತ್ತಿದೆ.ಅದರಲ್ಲಿ ಅದರ ಸರ್ದಾರ ಚಿಕ್ಕ ಅಸ್ವಾಬೆ ಫ್ಹೀಲ್ ಹಾಗಿದ್ದಾನೆ. ಸಂಪೂರ್ಣವಾಗಿ ಒಮ್ಮೆ ದಂಡನ್ನು ನೋಡಿದರೆ ಒಬ್ಬ ದಂಡನಾಯಕ ಅದರಲ್ಲಿ ದಾರಾ ಹಾಗೆ ಕಾಣುವನು. ಅವರಲ್ಲಿ ಚಿಕ್ಕ ಹಾಗೂ ದೊಡ್ಡ ಮನಸಬ್ದಾರರಿದ್ದರು. ಅನೇಕರು ಶತಮಾನಿತರು ಹಾಗೂ ಸಹಸ್ರಾರಿಗಳು. ಒಂದೊಂದು ದೇಶದ ಹೆಸರಾಂತ ಸಿಪಾಯಿಗಳು, ಎರಡು ಸೈನ್ಯಗಳುಳ್ಳ, ಮೂರು ಸೈನ್ಯಗಳುಳ್ಳ ನಿಸ್ಸಂದೇಹವಾಗಿ ಸೈನ್ಯ ಮುಘಲರು ಅನೇಕ ದೇಶದ ಹಾಗೂ ಅನೇಕ ಪಟ್ಟಣದವರು ಅನೇಕ ಹಿಂದುಗಳು ಹಾಗೂ ನದಿಯಾಚೆಯ ತೂರಾನ್ ದೇಶದವರು. ಚುಘ್ತಿ, ಖಿಝುಲ್ಬಾಷ್, ಉಝ್ಬುಕ್ ಶಕ್ತಿಶಾಲಿಯರು, ಅನೇಕರು ಖಾಂಧಾರಿಯರು ಅನೇಕರು ಬಲ್ಖ ಹಾಗೂ ಕಾಬುಲ್‌ರವರು, ಸೌಜನ್ಯತೆಯಲ್ಲಿ ಬಡವರು, ಪ್ರೇಮದಲ್ಲಿ ಜಿಪುಣರು, ಬುದ್ಧಿವಂತಿಕೆಯಲ್ಲಿ ಗಿಣಿ, ದಾರಿದ್ರ್ಯದಲ್ಲಿ ಗೂಬೆಗಳು, ಅವರ ಕಲೆಯಲ್ಲಿ ಬಲು ದೊಡ್ಡ ಪಗಡೆಯಾಟದ ಮೋಸವಿದೆ. ಶೈತಾನನೂ ಸಹ ಜನ್ಮ ಜಗತ್ತಿನ ಶಿಷ್ಯ. ಇವರಲ್ಲಿ ಅಸಲಿಗೆ ಸೌಜನ್ಯತೆಯ ವಾಸನೆಯೂ ಇಲ್ಲ. ಇವರೊಂದಿಗೆ ಯಾರು ಪುಣ್ಯ ಮಾಡುತ್ತಾರೋ ಅವರೊಂದಿಗೆ ಇವರು ಪಾಪ ಮಾಡುವರು. ಮೋಸ ಮಾಡಲು ಪ್ರಪಂಚಕ್ಕೆ ಅಮ್ಮ ಎನ್ನುವರು. ತನ್ನ ಇಷ್ಟವನ್ನು ಅಡಗಿಸಿ ಜನರನ್ನು ತೋರಲು ತಂಗಿಯೆನ್ನುವರು. ಪಾಪ ಇವರು ತಂದೆಯಿಂದ ವಾರೀಸು ಸೊತ್ತನ್ನಾಗಿ ಪಡೆದಿದ್ದಾರೆ. ಸಹೋದರನ ರಕ್ತ ತಾಯಿ ಹಾಲು ಗುರುತಿಸುತ್ತಾರೆ. ಎಲ್ಲಿ ಏನು ಲಾಭವಿದೆ ಎಂದು ಹುಡುಕುವರು ತನ್ನ ಲಾಭಕ್ಕಾಗಿ ತಂದೆಗೂ ಬಿಡುವುದಿಲ್ಲ ಹಾಗೂ ಸಹೋದರನಿಗೂ ಬಿಡುವುದಿಲ್ಲ. ಮೀರ್ಝಾ ಅನ್ನುವರು ಒಬ್ಬರು ಕಷ್ಮೀರಿನ ಮೀರ್‌ರವರಿದ್ದರು. ಸಿಪಾಯಿ ವೃತ್ತಿಯಲ್ಲಿ ಸುತ್ತಲಿಂದಲೂ ನಿರ್ಗತಿಕರು. ಅನೇಕರು ಖುರಾಸಾನಿಯರು, ಇಸ್ಫಹಾನಿಯರು,ಅನೇಕರು ದಮಾವಂದಿ ಮತ್ತು ಅಫ್ಘಾನಿಯರು, ಅನೇಕರು ಸಬ್ಝ್ ವಾರಿ ಹಾಗೂ ಬುಖ಼ಾರಿಯರು, ಅನೇಕರು ಹರಾತಿ, ತೂಸಿ ಹಾಗೂ ಲಾರಿಯರು. ಅನೇಕರು ತುರ್ಕರು ಹಾಗೂ ಗರ್ಜಿಯರು, ಅನೇಕರು ರೋಮಿಯರು, ಸಮರ್‌ಖಂದ್, ಶೀರಾಝ್ ಹಾಗೂ ಝುರೂಮಿಯಾನ್, ಹೊವೆಝಾಯಿ, ಹರವಿ ಹಾಗೂ ಹಂಕರಿ ಸಜಸ್ತಾನಿಯರು ಅಸಲಿಗೆ ಹಾಗೂ ಆಝುರಿನ ವಂಶದವರು, ಯಾರೋ ಹಗ್ಗದ ಏಣಿ ಉರುಳಲ್ಲಿ ಪರಿಣಿತರಾದರು. ಮತ್ಯಾರೋ ಗದಾಯುದ್ಧದಲ್ಲಿ ಚುರುಕು, ಬಿಲ್ಲುಗಾರಿಕೆಯಲ್ಲಿ ಯಾರೋ, ಭಲ್ಲೆಗಾರಿಕೆಯಲ್ಲಿ ದುರಸ್ತಿಯಾದವರು ಈ ವೀರರು ಜಗಳದ ಹಸಿವು ತೆಗೆದುಕೊಂಡು ಓಡಾಡುತ್ತಾರೆ. ಕಬ್ಬಿಣ ಅಗಿದರೂ ಅವರ ಮನಸ್ಸಿಗೆ ತೃಪ್ತಿ ಇಲ್ಲ ಆದರೂ ಅವರಿಗೆ ಮನಶಾಂತಿ ಇಲ್ಲ. ಹುಲ್ಲುಕಡ್ಡಿ ಅವರ ದಂತಗಳ ಒಂದು ಆಭರಣ ಕಾಣಿಸುತ್ತದೆ. ತೂಕವಾದ ಗದೆ ಬಾಯಿಗೆ ಬಂದ ತುತ್ತನ್ನಾಗಿ ಕಾಣಿಸುತ್ತದೆ. ನಿತ್ಯವೂ ಕನಸಲ್ಲಿ ದೊಡ್ಡ ಭಾಗ ಎತ್ತುವರು. ಸದೈವ ತನ್ನ ಮುಖ ಖಡ್ಗದ ನೀರಿನಿಂದ ತೊಳೆಯುವರು. ಖಡ್ಗ ಎಂದಿಗೂ ಮೊಂಡ ಆದರೆ ಕನಸಲ್ಲಿ ದೊಡ್ಡ ಭಾಗ ಬಯಸುತ್ತಾರೆ. ತನ್ನ ರಕ್ತದ

ಮದ್ಯ ತಾನೇ ಕುಡಿಯದೇ ಅಮಲೇರಿ ಕೋಪದಿಂದ ಕಬಾಬ್ ಆಗುವರು. ಅನೇಕ ಜಾತಿಯ ರುಹೇಲಗಳು ಬಲಶಾಲಿ ಪಂಜಾಬಿಯರು, ಆದರೆ ಇವರ ಹೃದಯ ಕಲ್ಲಿನಂತಹದು. ರಜಪೂತರಲ್ಲಿ ಅನೇಕರು ರಾವೊ ಹಾಗೂ ರಾಣೆಗಳಿದ್ದರು. ಅಹಂಕಾರದಲ್ಲಿ ಶೈತಾನರು. ಹಾಗೂ ಜಗಳದಲ್ಲಿ ಭೂತರು. ಸಸೊವಿ, ಕಚ್ವಿ, ಕಾಬಿ, ಕಾಬಿ ಚನ್ವಾರ್ (ಕಾಪರ್ ಚನ್ವಾರ್), ಸೂರ್ಯವಂಶಿ, ಸರ್ಸಾಟ್, ಕೋಹಲ್ ಪನ್ವಾರ್, ಅಮಿತ್, ದೆವ್ಡೆ, ಚಂದ್ರಾದತ್, ಚಂದೇಲ್, ಸೇಂಥಲ್, ಸೋಂಬನ್ಸ, ಕೇಂಜಿ, ನವಾಂಝಿಲ್, ಮೋರೆ, ಝುಟ್ವೆ ಹಾಗೂ ಝಾಲರು ಅನೇಕರು, ಸೋಲಂಕಿ, ಮರ್ಮಾರ ಥಾಲರು ಅನೇಕರು, ಬಂಕೇಸ್(ಬನ್ಸ)ಹಾಗೂ ಖೆಲೂತರ ಧಾಂದಲೆಯಾದರೆ ತೊಮೇಲ್ (ತೊಮಲ್) ಹಾಗೂ ಸೊಹರ್ಾ ಎಷ್ಟೋ ಪಾಸಲೆಗಳು. ಅನೇಕರು ಭರಿ, ವಾಝಿ, ವಾಖಲಿ, ಭಟಿ, ಟಾಂಕ್ ಹಾಗು ಭಾಯಿ ಅನೇಕರು ವಾರ್ಲಿ, ಥರಾನ, ಕಸೇಮೊ ಬನಾ ಬರ್ ಗೋಜರ್, ಘರಾವಾರ್, ಲೊಂದೇಲ್, ಜಾಧೊ, ತನೋರ್ ಅನೇಕರು ಉತ್ತಮ ಕುಲಜಾತರು. ಅನೇಕರು ಅಪ್ರತಿಮ ವಿರರು, ಚೌಹಾನ್ ಹಾಗೂ ರಾಠೋರ್, ಖಾಜರ್ ಅಹೀರ್ ಅವರಲ್ಲಿ ಶೌರ್ಯ ಬಿಟ್ಟರೆ ಅವರಲ್ಲಿ ಏನೂ ಇಲ್ಲ. ನಗರಗಳಲ್ಲಿ ಜೀವಂತವಾಗಿರುವ ಇಂತಹ ಗಮಾರರು. ನಗರದ ಜೀವನ ಬದುಕುತ್ತಿರುವ ಈ ಗಮಾರರ ಮೇಲೆ ನಾಗರಿಕತೆಯ ಪ್ರಭಾವ ಒಂದು ಕಣದಷ್ಟು ಆಗಿಲ್ಲ. ಇವರ ಉದಾಹರಣೆ ಹೇಗೆಂದರೆ ನೀರಲ್ಲಿ ಸದಾ ಇರುವ ಕಲ್ಲಿದ್ದಲು ಹಾಗೆ. ಅನೇಕರು ಭೇಲರು, ಖನೋಜಿಯರು, ಬಡಾಡಿಯರು, ಹಾಗೂ ಖಾನ್ದೀಶಗಳಾದರೆ, ಬಂಗಾಳದ ಕೋಟಾಲ್ ಭೇಸಿಯರು ಅನೇಕರು ಅವರು ಮಾಟ ಮಂತ್ರ ಮಾಡಿ ಉಫ್ ಎಂದು ಊದಿದರೇ ಸಾಕು ನಿಸ್ಸಂದೇಹವಾಗಿ ಹರಿಯುತ್ತಿರುವ ನೀರು ಸಹ ನಿಂತು ಹೋಗುತ್ತದೆ. ಈ ರೀತಿಯಾಗಿ ಅನೇಕ ಜನರೆಲ್ಲ ಸೇರಿ ದೊಡ್ಡ ವಾದ್ಯದೊಂದಿಗೆ ವೇಷ ಧರಿಸಿ ಹೊರಟಿದ್ದರು. ಶರೀರದ ಮೇಲೆ ಯಾವುದೋ ಉಕ್ಕಿನ ಬಟ್ಟೆ ಧರಿಸಿ ಶರೀರದ ಕೂದಲ ಹಾಗೆ ಶಸ್ತ್ರಗಳನ್ನು ಕಟ್ಟರುವವರು. ಕೆಳಗಿನ ಉಡುಪು ಕೆಲವರು ಕೇಸರಿ ಧರಿಸಿದ್ದರೆ ಮತ್ಯಾರೋ ಜರಿಯ ಬಟ್ಟೆ ಕಟ್ಟಿರುವರು. ತುರಾಯಿ ಖಚಿತವಾದದು ಮೊಗ್ಗುಗಳ ಹಾಗೆ ಇಟ್ಟರೆ ಮತ್ಯಾರೋ ಮೋಹನ್ ಮಾಲೆ ಕತ್ತಲ್ಲಿ ಹಾಕಿರುವರು. ಕೆಲವರು ಮುಕುಟ್ ಮಾಲೆ ಹಾಕಿರುವರು. ಮುಘಲ್ ಪ್ರತಿಯೊಂದು ಕಲೆಯಲ್ಲಿ ದೊಡ್ಡ ಕಲಾವಿದರು. ಜಗಳದ ಕಲೆಯಲ್ಲಿ ಅವನಿಗೆ ನೆಪ ಬೇಕು. ತನ್ನೊಡನೆ ಇವನು ಚಲಿಸುವ ಸೈನ್ಯದ ಕೋಟೆ ತೆಗೆದುಕೊಂಡು ಹೋಗುತ್ತಾನೆ. ಆದರೆ ಸೈನ್ಯಕ್ಕೆ ಸಿಡಿಮದ್ದಿನ ಅಗ್ನಿಯ ಗಂಟಿದ್ದಂತೆ. ಸರ್ಪಣಿಯ ಕೊಂಡಿಗಳಿಂದ ಆವರಣ ಕಟ್ಟುವನು. ಕಬ್ಬಿಣದ ಜಾಗದಲ್ಲಿ ಅಮಲೇರಿದ ಆನೆಗಳಿರುವವು. ಉತ್ತಮವಾದ ನಾಳದ ಬಂದೂಕು ಚೀನ ದೇಶದ್ದು ಹಾಗೂ ದೇಸಿಯ ಬಂದೂಕುಗಳಿದ್ದರೆ ಖಡ್ಗಗಳು ಹಾಗೂ ಸಣ್ಣ ಬಂದೂಕುಗಳು ಅನೇಕ ರೋಂ ದೇಶದಾಗಿದೆ. ಇದರ ಒಂದು ರಂಜಕ ಗುಂಡುಗಳಿಗೆ ಸೋಲಿಸುತ್ತದೆ. ಜೋರಾಗಿ ಗಾಳಿ ಬೀಸಿದರೆ ಅಗ್ಗಿಷ್ಟಗೆಯಲ್ಲಿ ಬೆಂಕಿ ಪ್ರಜ್ವಲಿಸುತ್ತದೆ.

ಒಂಟೆಗಳ ಸಾಲು ಸಾಲುಗಳೇ ಇವೆ. ಇವೆಲ್ಲ ಈ ಕೋಟೆಗೆ ಸಾಕಾಗಿ ಇನ್ನು ಮಿಕ್ಕುತ್ತದೆ. ಅಮಲೇರಿದ ಆನೆಗಳು ಸಣ್ಣ ಬೆಟ್ಟ ಹತ್ತುವಂತೆ, ಬಂದೂಕುಗಳು ಸಣ್ಣ ತೋಪುಗಳು ಸುತ್ತಲಿಂದಲೂ ಬಹಳ ಜೋರಾಗಿ ಹಾರುತ್ತಿವೆ. ಚಕ್ರಧಾರಿ ತೋಪುಗಳ ಮುಂದೆ ಅವುಗಳು ಹುಲ್ಲು ಕಡ್ಡಿಗಳಂತೆ ಕಾಣುತ್ತಿವೆ. ಗಟ್ಟಿಯಾದ ಕೋಟೆಯ ದಂಡಿನ ಸುರಂಗದ ಮುಂದೆ ದುರ್ಬಲವಾಗಿ ಕಾಣುತ್ತವೆ. ಒಂದೊಂದು ಚೀಲ ಎತ್ತಿರುವನಿಗೆ ನೀನು ಬೆಟ್ಟ ಎಂದು ತಿಳಿ. ಪೆಟ್ಟಿಗೆಗಳನ್ನೇ ಗುಂಡುಗಳ ಗಾಜಿನ ಗಣಿ ಎಂತಿದೆ. ದೊಡ್ಡ ಸಿಡಿಮದ್ದಿನ ಉಗ್ರಾಣದ ಒಂದೊಂದು ತೋಪಿನ ಗುಂಡಿನಿಂದ ಭೂಮಿಯ ಎದೆ ಸೀಳಿಹೋಗುತ್ತದೆ. ಆ ಗುಂಡನ್ನು ನೋಡಿದ ತಕ್ಷಣ ಭೂಮಂಡಳ ತನ್ನ ಒಯ್ಯಾರೆ ಮರೆಯುತ್ತದೆ. ಗಗನ ಹುಕ್ಕಾಬಾರ್ಝ್(ತಂಬಾಕು ಸೇವನೆಯ ನಳಿಕೆಧಾರಿ) ಸಹ ಅದನ್ನು ನೋಡಿ ಮುದುಡಿ ಹೋಗುತ್ತದೆ. ಪ್ರತಿಯೊಂದು ತೋಪು ಮೋಡ ಆದರೆ ಸಿಡಿಲು ಸುರಿಸುವ ಜಲದಲ್ಲಿ ಅಗ್ನಿ ಸುರಿಸುವುದೇ ಗುಂಡುಗಳ ಕಾರ್ಯ. ಒಂದು ತೋಪು ಭೂಮಿ ಮೇಲೆ ಗರ್ಜಿಸಿದರೆ ಸಮುದ್ರದ ನೀರು ಆತಂಕದಿಂದ ಆವಿಯಾಗಿ ಹಾರುತ್ತದೆ. ಹಠಾತ್ತನೆ ಸಹಸ್ರಾರು ದೆಹಲಿಯರ ಮೇಲೆ ಬಾಣ ಒಂದೊದು ಸೈನ್ಯವೂ ಸಹ ದೊಡ್ಡ ಸರ್ಪದ ಜೀವ. ಒಂಟೆ ಭಾರದ ಬಾಣಗಳ ಸಹಸ್ರಾರು ಸಾಲು ಬಿದುರಿನ ಬೆಟ್ಟದಂತೆ ಕಾಣುತ್ತದೆ. ಕರಿನಾಗರ ಹಾವಿನಂತಹ ಬುರ್ಜಿಗಳಿಗೆ ನೋಡುತ್ತಿದ್ದ ಹಾಗೆಯೇ ಇವು ಯಾರೋ ಬಲು ದೊಡ್ಡ ಕೊಲೆಗಾರರು, ಇವು ನಮ್ಮ ಬಾಲ ಕತ್ತರಿಸುವರೆಂದು ತಿಳಿದು ಅಲ್ಲೇ ಮಾಯವಾಗುತ್ತಾರೆ. ಎಷ್ಟು ಬುಂದೇಲಗಳಿರುವರೋ ಬೆತ್ತ ಮತ್ತು ಎಕ್ಕೇಯಿಂದ ಬಂದೂಕು ಕೊಟ್ಟು ಭಲ್ಲೆಯ ಮಕೋಠದ ನಟನೆ ಮಾಡುತ್ತಾರೆ. ಎಷ್ಟೊಂದು ಬಾಣಗಳಿವೆ ಎಂದರೆ ಅವುಗಳು ಗುಂಪಾಗಿ ಹಾರಿದರೆ ನಕ್ಷತ್ರಗಳಿಗೆ ಕಾಳುಗಳ ಹೂಗಳೆಂದು ಭಾವಿಸಿ ಕತ್ತರಿಸಿ ಬೀಸಾಡುವರು. ಅವುಗಳೇನಾದರೂ ದಂಡಿನ ಮೇಲೆ ಬಿದ್ದರೆ ಅದರ ಅತ್ಯಾಚಾರದಿಂದ ಸೋಲಿಸಿ ಗುಂಡಾಗಿ ಚೆನ್ನಾಗಿ ಬೆರತು ಮತ್ತಷ್ಟು ಚೂಪಾಗುವುವು. ದೊಡ್ಡ ಕೀಟಗಳು ಹಾಗೂ ಇರುವೆಗಳಂತಹ ಸಾಲುಕೈಗೆ ತೆಗೆದುಕೊಂಡು ಪೇದೆಯರ ಸೈನ್ಯಗಳ ಮಿಡಿತೆಯಿಂದ ಅಪಾರ. ಹೀಗೆ ಜೈಸಿಂಘ್ ತನ್ನ ಸೈನ್ಯ ಅಲಂಕರಿಸಿದ್ದನ್ನು ನೋಡಿ ಅವನು ದೇವರನ್ನು ಮರೆತು ಆತ್ಮಸ್ತುತಿ ಎಂತಹದು ಮಾಡಿದನೆಂದರೆ, ಮುಸಲ್ಮಾನ ಅದನ್ನು ಪುನರುಚ್ಚರಿಸಲು ಹೆದರುವನು. ಕ್ರೈಸ್ತರು ಇದನ್ನು ಕೇಳಿ ಪರಿತಾಪ ಮಾಡಿದರು. ಹೀಗೆ ಸೈನ್ಯಗಳು ನವಜಾತ ಅಲಂಕರಿಸಿಕೊಂಡು ಹೊರಡುವ ಹಾಗೆ ಹೊರಟವು. ಆದರೆ ಶಾಹನ ಮುಖ ಮರೆಯಾಗಿತ್ತು. ಏಕೆಂದರೆ ಧೂಳೆದ್ದು ಮಧ್ಯದಲ್ಲಿ ತೆರೆ ಹಾಕಿತು. ಹಠಾತ್ತನೆ ಅಲಂಕರಿಸುವ ಜ್ಞಾಪಕ ಬಂದು ಧೂಳನ್ನು ಹಾರಿಸಿ ಸೌಂದರ್ಯ ಕಂಡುಬಂದಿತು. ಅರಮನೆಯಲ್ಲಿ ಮಾತು ಭಾರವಾದೀತೆ ಎಂದು ತಿಳಿದು ವೀಕ್ಷಣೆ ಮೇಲೆ ಬುದ್ಧಿಗೆ ಜಾಗವಿಲ್ಲ. ಪ್ರತಿಯೊಬ್ಬ ಪುರುಷನ ಆಸಕ್ತಿ ಹೆಚ್ಚಿ ತಾಜಾ ಆಯಿತು. ಬಹು ವೇಗದಿಂದ ಸಂತೋಷ ತಾಜಾ ಆಯಿತು. ವಿಸ್ಮಯ ವರ್ಣರಂಜಿತ ಸೈನ್ಯ ಮನಮೆಚ್ಚವಂತದಿತ್ತು.

ಆದರೆ ಬಲು ಗಟ್ಟಿ ಹಾಗೂ ರಕ್ತಪಾತವೂ ಹೌದು. ಅದರ ಪ್ರತಿಯೊಂದು ನಡೆ ಪ್ರಿಯೆಯ ಪ್ರೀತಿಯಿಂದ ತುಂಬಿದ ಸೈನ್ಯದ ಬಾವುಟ ಪ್ರಿಯೆಯ ಸೆರಗು ಮನಸೋಲುವ ಬಣ್ಣ ಬಣ್ಣದ ನಡೆಗೆಯಿಂದ ಸೈನ್ಯ ತೆರೆಯಾರ್ ರಾಜನ ಸೈನ್ಯ ಹೊರಟಂತೆ ಕಾಣುತ್ತಿತ್ತು. ಅಹಂಕಾರಿ ಪಠಾಣರು ಒಂದು ಪದರಾಗಿ ನಡೆದಾಗ ಅವರನ್ನು ನೋಡಿ ಅನೇಕ ಯುವಕರು ತಮ್ಮ ಬತ್ತಳಿಕೆಗಳನ್ನು ತುಂಬಿಕೊಂಡರು. ಇವುಗಳನ್ನು ಗುರುತಿಸಿರಿ. ಓ ಅಹಂಕಾರಿಗಳೇ ಇವು ಮುಳ್ಳುಭರಿತ. ಇವು ಹಜಾಮ ಕೇರಿ ಮನೆಯ ಬತ್ತಳಿಕೆಗಳು. ಈಗ ರಜಪೂತರು ನಡೆದರೆ ಅವರ ಮಾನ ಅರಳಿತು ಅವರ ಮಿನುಗುವ ಭಲ್ಲೆಗಳು ನೋಡಲು ಯೋಗ್ಯ, ಅಗ್ನಿ ತನ್ನ ಕತ್ತು ಎಳೆದು ಎಳೆದು ಉದ್ರೇಕಗೊಳ್ಳುತ್ತಿದೆ. ಅದು ಉದ್ದ ನಾಲಿಗೆಗಳನ್ನು ಸಣ್ಣ ಮಾಡುವುದಿಲ್ಲ. ಶೂರರು ಈ ಭಲ್ಲೆಗಳನ್ನು ನೋಡಿ ಇವು ಹಿಲಾಲುಗಳು (ಒಂದು ಬಗೆಯ ದೀಪ). ಇವುಗಳನ್ನು ಹಚ್ಚಿಸಿಕೊಂಡು ಪುತ್ರರು ಹಿಡಿದಿರುವರು. ಮರಾಠರು ಸೈನ್ಯ ರಚಿಸಿ ಹೊರಟಿತು. ಅವರ ಭಲ್ಲೆಗಳ ಗೊಂಚಲಗಳನ್ನು ನೋಡಿ ಈ ಬಿದುರುಗಳನ್ನು ತೆಗೆದುಕೊಂಡು ನಿಂತಿರುವರು. ಇವು ಕಬ್ಬಿನ ಜಲ್ಲೆಗಳು ನಮಗಿದು ಉಜ್ಜಿದ ಹುಲ್ಲು ತಂದಿರುವರು. ಜರಿ ಬಟ್ಟೆಗಳನ್ನು ನೋಡಿ ಇವುಗಳಿಗೆ ಅಡಿಯಿಂದ ಮುಡಿಯವರೆಗೆ ಬೆಂಕಿ ಹಚ್ಚಿಕೊಳ್ಳಿ ಎಂದು ಈ ಹುಲಿಗಳು ಹೇಳುತ್ತಾರೆ. ನಗಾರಿಗಳ ಜೋರಾದ ಶಬ್ದ ಹಾಗೂ ಅನೇಕ ವಾದ್ಯಗಳ ಶಬ್ದಗಳನ್ನು ಕೇಳಿ, ಯುದ್ಧದ ಶಂಖ ಬಿಗುಲ್ ಊದಿದುದನ್ನು ಕೇಳಿ ಉಮ್ಮಸಲ್ಲಿ ಬಂದು, ವಾದ್ಯಗಳ ಶಬ್ದಗಳು ಮನಸ್ಸನ್ನು ಇನ್ನಷ್ಟು ಸಂತೋಷ ಪಡಿಸುತ್ತದೆ. ಆನೆಯ ಹೊಸ ನಡಿಗೆಯ ಮೇಲೆ ಗಂಟೆಗಳು ಒಂದು ಅಧಿಕ ಸೂಕ್ತ ತಾಳದ ಮೇಲೆ ಬಾರಿಸುತ್ತವೆ. ಈ ಅತ್ಯುತ್ತಮ ಸಂಗೀತ ಶಾಸ್ತ್ರದ ತಮಾಷೆ ನೋಡಿ ಇದು ಜಾದೂಗಾರನ ಗೊಂದಲವೆಂದು ಹೇಳುತ್ತಾರೆ. ಬೆಟ್ಟದಂತಹ ಈ ಸೈನ್ಯ ನದಿಯ ಹಾಗೆ ಅಲೆಗಳನ್ನು ಹೊಡೆದು ಕೊಂಡು ಹೋಗುತ್ತಿದೆ. ಎರಡು ಸೈನ್ಯಗಳು ಸರಿಸಮಾನ ಇತ್ತು. ಆದರೆ ಶಿವಾಜಿ ಇದರಲ್ಲಿ ವ್ಯತ್ಯಾಸಭರಣದಂತಿದ್ದ. ಎರಡೂ ಕಡೆ ಎರಡೂ ಸೈನ್ಯಗಳು ಹೀಗೆ ಸರಿಸಮಾನವಾಗಿದ್ದು ಭೂಮಿ ತಕ್ಕಡಿಯ ತಟ್ಟೆಗಳಂತಾಯಿತು. ಒಂದು ದಂಡು ನಿಂತುಕೊಂಡರೆ ಮತ್ತೊಂದು ನಡೆಯುತ್ತಿತ್ತು. ಒಂದು ಕಡೆ ತೂಕ ಮಾಡಿದರೆ ಒಂದು ಕಡೆ ವಾಲುತ್ತದೆ. ಇಂತಹದರಲ್ಲಿ ಅನುಭವಿ ಜನ ಇದನ್ನು ವ್ಯತ್ಯಾಸಭರಣವೆಂದು ತಿಳಿದು ಬೇಗನೇ ಸರಿಮಾಡಬೇಕೆಂದಾಗ ಈ ಮಧ್ಯೆ ದೇವನಿಗಾಗಿ ಮೃತ್ಯು ಕಂಡು ಬಂತು. ಆಗ ಶರ್ಜಾಖಾನ್ ಬಲು ಜೋರಾಗಿ ಓಡಿ ಬಂದು ಸೇರಿಕೊಂಡ. ಅವನ ಸೈನ್ಯ ನದಿಯ ಹಾಗಿದೆ. ಆಕಾಶದತ್ತ ಧೂಳಿನ ಅಲೆ ಎದ್ದಿದೆ ಎಂದು ನೋಡಿ ಅವನು ಮನದಲ್ಲಿ ಅಂದು ಕೊಂಡು ಮುಘಲರ ಕಡೆ ಮುಖ ಮಾಡಿ ನೆಟ್ಟಗೆ ನಿಂತನು. ಇಂದು ಶಾಹರ ಕೆಲಸ ಬಿಟ್ಟರೆ ಯಾವ ಕೆಲಸ ಮಾಡುವುದಿಲ್ಲ. ತನ್ನ ಸ್ನೇಹಿತರಿಗೆ ಸಲಾಮು ಮಾಡುವುದಿಲ್ಲ. ಕೈ ಕೈ ಮಿಲಾಯಿಸಿ ಖಡ್ಗದೊಡನೆ ಯುದ್ಧ ಮಾಡುವ ಶಕ್ತಿ ಅಂತೂ ಬಡವರಲ್ಲಿ ಇದೆ. ನಾನೋ ಕೊಂಚ ಖಡ್ಗದ ಚಪ್ಪಾಳೆ

ತಟ್ಟಿದರೆ ಮುಘಲರಿಗೆ ಒಂದೇ ಸಮನಾಗಿ ಸಂಪೂರ್ಣವಾಗಿ ಕುಣಿಸಿಹಾಕುವೆ. ನಮ್ಮ ಖಡ್ಗದ ಮುಂದೆ ಅವರು ಸ್ವಲ್ಪ ನಡೆದುಕೊಂಡು ಬಂದರೆ ಸಾಕು, ಆಗ ಅವರ ರುಂಡ ಎಲ್ಲಿದೆ ಮುಂಡವೆಲ್ಲಿದೆ ಎಂದು ಗುರುತಿಸಲಾರರು. ಅಲ್ಲೇ ಶರ್ಝಾಖಾನನಿಗೆ ಮಾತು ಕೊಡಲು ಬಾದಶಾಹರು ಬಂದು ಕುದುರೆಯನ್ನು ವೃತ್ತಾಕಾರದ ಸುತ್ತು ಓಡಿಸಿದ್ದಾರೆ. ಯುಗದ ಅರಿಸ್ಟಾಟಲ್ (ಬಾದಶಾಹ)ರವರು ಅದ್ವಿತೀಯ ನಿಂತು ಎಡ ಬಲದ ಸೈನ್ಯಗಳನ್ನು ಗಂಭೀರವಾಗಿ ವೀಕ್ಷಿಸಿದರು. ಆಗ ಶೂರರು ಆಕ್ರಮಿಸಲು ಇಣುಕಿ ನೋಡಿ ಹೊರಟರು. ಕುದುರೆಗಳ ವೇಗವನ್ನು ಹೆಚ್ಚಿಸಿ ಮುಂದೆ ಹೊರಟರು. ಮುಘಲ್ ತನ್ನ ಸಿಡಿಮದ್ದಿನ ಉಗ್ರಾಣದ ಸಾಧನಗಳನ್ನು ನೋಡಿ ಸೈನ್ಯ ಎದ್ದೇಳುವ ದಾರಿ ನೋಡಹತ್ತಿದರು. ಎದುರಾಳಿಯ ಈ ಕಲೆಯನ್ನು ಅಂದಾಜು ಮಾಡಿ, ಓ ಶರ್ಝಾಖಾನ್ ಈಗ ನೀನು ಸಾಮರ್ಥ್ಯ/ಸಂದರ್ಭ ಗುರುತಿಸುವನಾಗು, ಏಕೆಂದರೇ ಹಾವು ಕುಂಡಲ(ವರ್ತುಲ) ಹೊಡೆದು ಕುಳಿತಿದೆ. ಅದಕ್ಕೇನಾದರೂ ಕೆಣಕಿದರೆ ನಿಶ್ಚಿಂತವಾಗಿ ಆವರಿಸಿಕೊಳ್ಳುತ್ತದೆ. ನಾವೇ ಖುದ್ದಾಗಿ ಸದ್ದಿಲ್ಲದೇ ಅದಕ್ಕೆ ಕೆಣಕಿ ಅದನ್ನು ಉದ್ದ ಮಾಡಿ ಆ ಹಾವಿಗೆ ಹೊಡೆಯ ಬೇಕಾಗಿದೆ. ನೆಟ್ಟಿಗೆ ನಿಂತಿದ್ದವರು ಮಗ್ಗಲಾಗಿ ಹೊರಟರು. ಗದರಿಸಲು ಮುಘಲ್ ದೃಢನಾಗಿ ಆಕ್ರಮಿಸಿದ. ಅವನಿಗೆ ಎಳೆಯಲು ಇದನ್ನೇ ಒಳ್ಳೆಯದೆಂದು ತಿಳಿದು ಅವನಿಗೆ ಉದ್ದನೇ ಮಾಡಿ ಮೈದಾನದಲ್ಲಿ ತರಬೇಕು. ಮೆಲ್ಲನೇ ಜಾಗ ಮಾಡಿಕೊಂಡು ಹೊರಟರು. ಭೂಮಿ ಮೇಲೆ ಬೆಕ್ಕು ನೋಡಿಕೊಂಡು ನಡೆಯುವಂತೆ ಹೊರಟರು. ಮುಘಲರು ದಕ್ಷಿಣದ ಯುದ್ಧದ ಕಲೆಯನ್ನು ಸಂಪೂರ್ಣವಾಗಿ ಮರೆತಿದ್ದರು. ಕೋಪದಲ್ಲಿ ಬಂದು ಅವರು ದಾರಿಯಲ್ಲಿ ಕದಲದೇ ಎದುರಿಸಲು ನಿಂತರು. ದೃಷ್ಟಿ ಗಾಳಿಯಲ್ಲಿಟ್ಟು ಇನ್ನು ಹೆಚ್ಚು ಜನ ಇಳಿದು ಬಂದರು. ಹೀಗೆ ಬಹು ದೂರ ಮೈದಾನದಲ್ಲಿ ಅವರನ್ನು ಎಳೆದು ಕೊಂಡು ಬಂದರು. ಆದರೆ ಇವರು ಮಾತ್ರ ಅಲ್ಲೇ ನಿಂತುಕೊಂಡಿದ್ದರು. ದಂಡನಾಯಕರು ತನ್ನತಾನೇ ಬಂದು ಸೇರಿ ತನ್ನ ಸೈನ್ಯವನ್ನು ಶೇಖರಿಸಲಾರಂಭಿಸಿದರು. ಆಗ ಮುಘಲ್ ತನ್ನ ಜಾಗದಲ್ಲಿ ವಿಸ್ಮಿತನಾಗಿ ಈ ಗಳಿಗೆಯಲ್ಲಿ ಏನೋ ಮೋಸ ನಡಿಯಲಿದೆ ಎಂದು ಕೊಂಡ. ಅದೇ ಸಮಯದಲ್ಲಿ ಬಿಲ್ಲುಗಾರರು ತನ್ನ ಹೋರಾಟ ಪ್ರಾರಂಭಿಸಿದರು. ಸಮಯ ಸಾಧಿಸಿ ಜಗಳದ ಬೆಂಕಿಯನ್ನು ಹಚ್ಚಿದರು. ದೊಡ್ಡ ಪ್ರಮಾಣದಲ್ಲಿ ಬಾಣಗಳು ಗಾಳಿ ಮೇಲೆ ಕಾಲಿಟ್ಟಾಗ ಬಿಸಿಲನ್ನು ಅಮುಕಿ ತನ್ನ ನೆರಳನ್ನು ಬೀಳಿಸುತ್ತಿದ್ದರು. ಇಂತಹದರಲ್ಲಿ ಗಾಳಿಯು ಅಗ್ನಿಯ ಆಕಾಶ ಹಾಗೂ ಹೊಗೆಯ ಮೋಡ ಸೃಷ್ಟಿಸಿ ಒಂದು ಅಸದೃಶ ಮಹತ್ಕಾರ್ಯ ಅಂತ್ಯಗೊಳಿಸಿತು. ಎರಡೂ ಕಡೆಯಿಂದ ಎಂತಹ ಯುದ್ಧ ಪ್ರಾರಂಭವಾಯಿತೆಂದರೆ ಜಟ್ಟಿಗಳಿಗೂ ಸಹ ನಾಚಿಕೆ ಬಂತು. ಶತ್ರುಗಳ ಮಿದುಳುಗಳನ್ನು ಬೇಗನೇ ತಿನ್ನಲು ಖಡ್ಗಗಳ ಬಾಯಿಗಳಲ್ಲಿ ನೀರು ಬರಲಾರಂಭಿಸಿತು. ಬಿಲ್ಲುಗಳು ಎಳೆಯಲಾರಂಭಿಸಿದವು ಹಾಗೂ ಬತ್ತಳಿಕೆಗಳಿಂದ ಬಿಲ್ಲುಗಳು ಉಕ್ಕಲಾರಂಭಿಸಿದವು. ತೋಳು ಹುಚ್ಚನಾಗಿ

ಹೇಗೆ ಉಬ್ಬುತ್ತದೆಯೋ ಹಾಗೆ ಬಿಲ್ಲು ಭಲ್ಲೆಗಳ ಬಣ್ಣ ಗಟ್ಟಿಯಾಗಿ ಉಬ್ಬಿತು. ಅಶ್ವಗಳು ಬೆಂಕಿಯಾಗಿ ಕುಣಿದವು. ರಣಧೀರರು ಹುಲಿ ಎದ್ದು ಬಂದಹಾಗೆ ಕಾಣುತ್ತಿದ್ದವು. ತಿಂಗಳುಗಳು ತರಲು ಹೇಗೆ ಗಾಳಿಯ ಚಿನ್ಹೆ ಇದೆಯೋ ಹಾಗೆಯೇ ಮರಾಠರು ಯುದ್ಧಕ್ಕೆ ಇನ್ನು ಕೋಪ ಬರಿಸುವವರಾಗಿದ್ದರು. ಹಕ್ಕಿಗಳಂತೆ ಗಾಳಿಯಲ್ಲಿ ರೆಕ್ಕೆ ಆಡಿಸುವರು. ಅಧಿಕ ಮಧ್ಯದಿಂದ ಭಲ್ಲೆಯನ್ನು ಮಿನುಗಿಸುವರು. ಹುಲಿ ಬೇಟೆಗಾಗಿ ಹೊರಡುವ ಹಾಗೆ ಎರಡೂ ಕಡೆಯಿಂದ ಮರಾಠರು ಬಂದರು. ಯುದ್ಧ ಮಾಡಲು ಕುದುರೆಗಳನ್ನು ತಳ್ಳಲಾರಂಭಿಸಿದರು. ಭಲ್ಲೆಗಳ ದಂಡೆಗಳು ಸೇರಲಾರಂಭಿಸಿದವು. ಹಿಡಿಯುವುದು ಬಿಡುವುದು ಮತ್ತೆ ಅಣ್ಣ ಅಣ್ಣ ಎಂದು ಹೇಳುವರು. ಭಲ್ಲೆಗಾರಿಕೆಯಲ್ಲಿ ಬಾಣಗಳಿಂದ ಕತ್ತು ಗಾಯ ಎಲ್ಲಿ ಖಡ್ಗದಿಂದ ಕೊಂಚ ಗಾಯವಾದರೆ ಅಲ್ಲಿ ಏಳು ಭಲ್ಲೆಗಳ ಮೊನೆಗಳನ್ನು ತೆರೆದು ಎಸೆಯುವರು. ಎಲ್ಲಿಯವರಿಗೆ ಜಟ್ಟಿಗಳು ಖುದ್ದಾಗಿ ಜಗಳ ಮಾಡಲಿಲ್ಲವೋ ಅಲ್ಲಿಯವರಿಗೂ ಮರಾಠರೂ ಜಗಳಾಡಿದರು. ನೆಲದ ಮೇಲೆ ರಕ್ತ ಬಿದ್ದು ಮತ್ತೆ ನಾಶವಾಯಿತು. ಜಗಳಾಡುವ ಗೊಂದಲ ಮತ್ತೆ ಕೆಂಪಾಗಿ ಹೋಯಿತು. ಮುಖದ ಮುಂದೆ ಸುತ್ತಲೂ ಈ ತಮಾಷೆಯಾಗುತ್ತಿದೆ. ಜಟ್ಟಿಗಳೆಲ್ಲ ಬಹಳ ಚೆನ್ನಾಗಿ ಎದುರಿಸಿದರು. ಯಾವ ಸಮುದ್ರ ನೀಲಿ ಸಶಸ್ತ್ರ ಸೈನ್ಯವಿತ್ತೋ ಆ ಸಮುದ್ರದಲ್ಲಿ ಖಡ್ಗದ ಪೇಚುಗಳಿಂದ ಅಲೆಗಳುಂಟಾಯಿತು. ಆ ಸೈನ್ಯದ ಸಶಸ್ತ್ರಧಾರಿಗಳು ತಡಮಾಡದೇ ಶರ್ಝಾಖಾನನು ತನ್ನ ಕುದುರೆಯನ್ನು ಏತ್ತಿದ, ಬಾದಶಾಹರು ಬಂದು ಕುದುರೆಯನ್ನು ವೃತ್ತಾಕಾರದ ಸುತ್ತು ಓಡಿಸಿ ನಮ್ಮ ಕೈ ಕುಲಿಕಿಸಿ ನಿಜವಾಗಲು ನಮ್ಮ ಮಾನ ಹೆಚ್ಚಿಸಿದರು. ಯುಗದ ಅರಿಸ್ಟಾಟಲ್ ಸಫಲರಾದವರು. ಅಲ್ಲಿಂದಲೇ ತಮ್ಮ ಶಾಹಿ ಸೈನ್ಯದೊಡನೆ ಬಂದು ಎದುರಿಗೆ ಇಳಿದರು ಮತ್ತೊಂದು ದಿಕ್ಕಿಂದ ಬಹ್ಲುಲ್‌ಖಾನ್ ಸಫ್‌ಶಿಕನ್(ಬಿರುದು,=ಸಾಲು ಮುರಿಯುವನು) ತನ್ನ ಭಾರಿ ಸೈನ್ಯದೊಡನೆ ಆಕ್ರಮಣಿಸಿದ. ದಕ್ಷಿಣದ ಎಲ್ಲ ಮಂತ್ರಿಗಳು ಅವರು ಚಿಕ್ಕವರೇ ಆಗಲಿ ದೊಡ್ಡವರೇ ಆಗಲಿ ಎಲ್ಲರೂ ಸಮರಾಡುತ್ತ ಎದುರಾಳಿಯ ಮೇಲೆ ಆಕ್ರಮಿಸಿದರು. ಸಹಸ್ರಾರು ಕುದುರೆಗಳ ಲಕ್ಷಾಂತರ ಗೊರಸುಗಳ ಭಾರತೊಡಗಿತು. ಭೂಮಿಯ ಸಪ್ಪಳದಿಂದ ಆಕಾಶ ಕಂಪಿಸ ತೊಡಗಿತು. ಖಡ್ಗದ ನಾಲಿಗೆ, ಅಪಾರ ರಕ್ತದಾಹದಿಂದ, ಖಡ್ಗ ಒರೆಯ ತುಟಿಗಳಿಂದ ಹೇಗೆ ಹೊರಗೆ ಬರುತ್ತದೆಯೋ ಹಾಗೆ ಬಂದಿತು. ರಕ್ತ ಕಾಲುವೆಗೆ ಹರಿದಿದ್ದರಿಂದ ಶರೀರಗಳು ಒಣಗಿದವು. ದಣಿದು ನಯನಗಳ ಚಿಲುಮೆಗಳು ಒಣಗಿದವು. ಪ್ರತಿಯೊಂದು ಬಾಯಿಯಿಂದ ಹೊಡಿ ಹೊಡಿ ಎಂಬ ಒಂದೇ ಶಬ್ದ ಕೇಳಿಸುತ್ತಿತ್ತು. ಜೀವ ಶತ್ರುವಿನ ತುಟಿಗಳ ಮೇಲೆ ಜಾಗ ಮಾಡಿಕೊಂಡಿತ್ತು. ಈಗ ಆಟ ಆಡಲೇ ಬೇಕೆಂಬ ಸಂದರ್ಭ ಬಂದಿದೆ ಎಂದು ನೋಡಿ ಮುಘಲ ಆಗಲೇ ತೋಪುಗಳನ್ನು ಹೊಡೆಯಲಾರಂಭಿಸಿದ. ಕೆಡಕುಂಟು ಮಾಡುವ ಬಾಣಗಳಿಂದ ಗದ್ದಲ ಎದ್ದಿತು. ಚಿಕ್ಕ ತೋಪುಗಳ ಗರ್ಜನೆಯಿಂದ ಶಕ್ತಿ ಎದ್ದಿತು. ಯಾವಾಗ ಚಿಕ್ಕ ತೋಪುಗಳು ಒಂಟಿ ಒಂಟಿಯಾಗಿ ಹೊಡೆದಾಗ ಹೊಗೆ ಗಾಳಿಯಾಗಿ ಬೆಂಕಿಯ

ಸುತ್ತಲೂ ಹೊಗೆ ಎದ್ದಿತು. ಅದರಲ್ಲಿ ಖಡ್ಗಗಳು ಮಿನುಗುವಂತೆ ಕಾಣುತ್ತಿದ್ದವು. ಆದರೆ ಧೂಳಲ್ಲಿ ಎಲೆಗಳು ಹಾರುತಿದ್ದವು. ಬಿಸಿ ತಾಗಿ ಆಕಾಶ ಕಾದಿದುದರಿಂದ ಸೂರ್ಯನ ಚಿಲುಮೆ ಬಸಿದು ಹೋಗಿ ಮರೆಯಾಯಿತು. ಎಲ್ಲಿಯವರಿಗೆ ದೃಷ್ಟಿ ಹೋಗುತ್ತಿತ್ತು ಅಲ್ಲಿಯವರಿಗೂ ಹೊಗೆ ಕುಳಿತಿದ್ದು. ಆಕಾಶ ಭೂಮಿ ಮೇಲೆ ಬಂದು ಕುಳಿತಿರುವ ಹಾಗೆ ಕಾಣುತ್ತಿತ್ತು. ಗಾಳಿಯಲ್ಲಿ ಬಂದೂಕುಗಳಿಂದ ಹೊರಟ ಗುಂಡುಗಳ ಸಡಗರ ಏನು ಹೇಳುವುದು ಅವು ದೃಷ್ಟಿ ಚಲಿಸುವ ದಾರಿಯನ್ನೇ ಮುಚ್ಚಿ ಹಾಕಿತು. ಈ ದೃಶ್ಯ ನೋಡಿ ಆಕಾಶದವರೆಲ್ಲ ವಿಸ್ಮಯಿಸುತ್ತ ನೆಲ ಗಾಳಿಯ ಮೇಲೆ ಏಕೆ ತೂಗಾಡುತ್ತಿದೆಯೆಂದು ಕೇಳಿದರು. ಮುಘಲರ ಮಾರ್ಗದರ್ಶಕ ಅಮಲೇರಿದ ಆನೆಗಳ ಸೈನ್ಯ ತೆಗೆದುಕೊಂಡು ಮುಂದಿದ್ದ, ಅವನ ಮೇಲೆ ಎಲ್ಲರ ಮುಂಚೆ ಶರ್ಝಾಖಾನನು ಆಕ್ರಮಣಿಸಿದ. ಸಶಸ್ತ್ರ ಸೈನ್ಯ ಬಹಳ ಗಟ್ಟಿಯಾಗಿ ನಿಂತಿತು. ಕಾಡಲ್ಲಿ ಹುಲಿ ಗರ್ಜಿಸುವ ಹಾಗೆ ಬೆಂಕಿಯಾಗಿ ಗರ್ಜಿಸಿದರು. ಆನೆಗಳ ಮೇಲೆ ಹುಲಿಗಳ ಕೈ ಬೀಳುತಿದ್ದ ಹಾಗೆ ಆನೆಗಳು ತಲೆ ಬಡಿಯುತ್ತ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡವು. ಕಬ್ಬಿಣದ ನಳಿಕೆಗಳಲ್ಲಿ ಪಟಾಕಿಗಳು ಪ್ರಾಬಲ್ಯದಿಂದ ಹುರಿಯುವ ಹಾಗೆ ಬಹಳಷ್ಟು ಜನ ಸೇರಿ ಹಠಾತ್ ಆಕ್ರಮಣ ನಡೆಸಿದರು. ಆಕ್ರಮಣದಿಂದ ಪ್ರತಿಯೊಂದು ಮುಖ ಆನೆಯ ದಂತ ಕಬ್ಬಿಣ ತುಂಡುಗಳ ಹಾಗೆ ಮುರಿದವು. ಸವಾರರ ಮೇಲೆ ಅವರ ಈ ನಿರ್ಮಾಣದಿಂದ ಕಷ್ಟ ಬಂತು. ಕುದುರೆಗಳಿಗೆ ತಿರುಗುವುದರಲ್ಲಿ ಬಲು ಶ್ರಮವಹಿಸ ಬೇಕಾಯಿತು. ರಕ್ತದಿಂದ ಹಿಂಡಿದ ರಸದಲ್ಲಿ ಸವಾರರು ಮುಳುಗಿದರು ಅಧಿಕ ಬೆವರಲ್ಲಿ ರಕ್ತದ ಎಳೆಗಳು ಮುಳುಗಿದವು. ಒಬ್ಬನ ರಕ್ತದಿಂದ ಮತ್ತೊಂದು ಕುದುರೆ ಬಣ್ಣ ಬದಲಾಯಿಸಿತು. ಮೊದಲು ಅದು ಕಸ್ತೂರಿಯ ಕರಿ ಬಣ್ಣಕ್ಕೆ ತಿರುಗಿ ನಂತರ ನೀಲಿ ಹಾಗೂ ಕೆಂಬಣ್ಣದ ಕುದುರೆಯಾಯಿತು. ಹುಡುಕಿ ಹುಡುಕಿ ತಲೆಗಳನ್ನು ಕತ್ತರಿಸಿದರು ಹೀಗೆ ರುಂಡ ಮುಂಡಗಳು ಚಿಲ್ಲಾಪಿಲ್ಲಿಯಾಗಿ ಬೀಳಿಸಿದರು. ಯಾವ ಮರಾಠನ ಮೇಲೆ ಆಕ್ರಮಣದಿಂದ ಪಟ್ಟಾಗುತ್ತಿತ್ತೋ ರಕ್ತ ಚಿಮ್ಮಿದ ಜಾಗದಲ್ಲಿ ಧೂಳೆದ್ದಿತು. ಸಶಸ್ತ್ರಗಳು ಗೊಂಚಲ ಹಾಗೆ ಅಪೂರ್ವ ಕೆಲಸ ಮಾಡಿತು. ಜೋಳದ ಕಡ್ಡಿಗಳನ್ನು ಕತ್ತರಿಸುವ ಹಾಗೆ ಭಲ್ಲೆಗಳು ಹತ್ಯೆ ಮಾಡುತ್ತಿದ್ದವು. ಶಿವಾಜಿ ಮೇಲೆ ಆಗಿದ್ದ ಕಠೋರ ಆಕ್ರಮಣವನ್ನು ನೋಡಿ ಮುಘಲ್ ತನ್ನ ಬುದ್ಧಿ ಕಳೆದುಕೊಂಡ. ಕುಮ್ಮಕ್ಕು ಸಹ ಮಾಡಲು ಸಾಧ್ಯವಾಗಲಿಲ್ಲ. ಶಿವಾಜಿ ಮೇಲೆ ಈ ಪ್ರಳಯ ಮುರಿದು ಬಿದ್ದಾಗ ಮುಘಲರ ಮೊನೆ ಹಿಡಿದು ಓಡಲಾರಂಭಿಸಿದ. ಯಾರು ಒಗಟ ಹಾಗೆ ಕುಳಿತಿದ್ದರೋ ಅವರಿಗೆ ಈ ಹುಲಿಗಳು ಕೈ ಹಾಕಿ ಬೆನ್ನಹತ್ತಿದರು. ಬೇರೆ ದಂಡನಾಯಕರು ಸಹ ಕೊಳ್ಳೆಹೊಡೆದರು. ತೋಪುಗಳನ್ನು ಹೊರಳಾಡಿಸಿದರು. ತನ್ನ ಹರಿತವಾದ ಸಶಸ್ತ್ರಗಳನ್ನು ಎತ್ತಿಕೊಂಡು ಮೊಘಲ ಮೇಲೆ ಸುತ್ತಲಿಂದಲೂ ಹಲ್ಲೆ ನಡೆಸಿ ಸೋಲಿಸಿದರು. ಯಾವಾಗ ಬಿಲ್ಲುಗಳ ಸೆಳೆದಾಟ ಪ್ರಾರಂಭವಾಯಿತೋ ಬಾಣಗಳಲ್ಲಿ ಗಾಳಿ ತುಂಬಿತು ಬತ್ತಳಿಕೆಯಾಯಿತು. ಬಿಲ್ಲುಗಳ ಬಾಣಗಳಂತೂ ಎಳೆ ಮಕ್ಕಳು. ಅವು ಬತ್ತಳಿಕೆಯ ಗೂಡುಗಳಲ್ಲಿ ಇದ್ದವು.

ಅವುಗಳ ತೋಳಿನ ರೆಕ್ಕೆಗಳು ಹುಟ್ಟಿಲ್ಲ. ಅವು ಬಾಯಿ ಬಿಡುತ್ತವೆ, ತಾನು ಎರಡು ತೋಳುಗಳನ್ನು ಜಾಡಿಸಿ ಒಂದು ಕ್ಷಣದಲ್ಲಿ ಎಲ್ಲರಿಗೂ ಮೈದಾನದಲ್ಲಿ ಹಾರಿಸಿದರು, ಹೊಲದಲ್ಲಿ ಸಹಸ್ರಾರು ಪಕ್ಷಿಗಳು ಹಾರುವ ಹಾಗೆ ಶೂರರು ಒಂದೇ ಸಲ, ಸಾಲಿಂದ ಅಗಣಿತ ಬಾಣಗಳು ಬಿಟ್ಟರು, ಬಾಣಗಳನ್ನು ಎತ್ತರ ಹಿಡಿತಿದ್ದ ಹಾಗೆ ಲೋಕ ಕೆಂಪಾಯಿತು. ಅಂದರೇ ಗುಳ್ಳೆನರಿಗಳ ಸೈನ್ಯ ಹೊರಟಿದೆ ಎಂದೂ ಸಹ ಹೇಳಬಹುದು. ಪರಿಣಿತ ಬಿಲ್ಲುಗಾರರು ದಾರಿಯಲ್ಲಿ ಅಡ್ಡ ಬಂದು ಆನೆಯ ದಂತದ ಮೊನೆಗೆ ಕಟ್ಟಿದ ಮುತ್ತುಗಳನ್ನು ಬಲು ಸಂತೋಷದಿಂದ ಬಾಳೆ ಕಂಬ ಎಂದು ತಿಳಿದು ಬಾಣಗಳನ್ನು ಆನೆಯ ದಂತದಿಂದ ಸ್ವಚ್ಚ ಮಾಡಿದರು. ಯಾವಾಗ ಪ್ರತಿಯೊಂದು ಶರೀರದ ರೋಮ ರೋಮಕ್ಕೂ ಬಾಣಗಳು ತಗಲಿತೋ ರಕ್ತ ಕಾರಂಜಿ ಹಾರುವಂತೆ ಕಾಣಿತು. ಬಾಣಗಳಿಂದ ತುಂಬಿರುವ ಹೊದಿಕೆ ಭರ್ತಿಯಲ್ಲಿ ಬಂದಂತೆ ಸಹಸ್ರಾರು ಗುಂಪುಗಳಿವೆ ಎಂದು ಕಾಣುತ್ತದೆ. ಬಾಣಗಳು ತಲೆ ಮೇಲಿಂದ ಹೋದರೇ ಸೊಂಟದ ಮಣಿಗಳು ಸಡಿಲಾಗುತ್ತದೆ. ಎಷ್ಟೊಂದು ಬಾಣಗಳು ಕಣ್ಣಲ್ಲಿ ಬಾಣದ ತುದಿ ಹೂತಿರುವುದು ಪಾತಿಯಲ್ಲಿ ಎರಡು ಎಲೆ ಬಂದಿರುವ ಹಾಗೆ ಕಾಣುತ್ತವೆ. ಬಾಣಗಳಿಂದ ಕವಚಧಾರಿಗಳ ಗತಿ, ಕೋಪದಲ್ಲಿ ಕರಡಿಯ ಕೂದಲು ಉಬ್ಬಿರುವ ಹಾಗೆ ಕಾಣುತ್ತಿದೆ. ಕವಚ ಇಲ್ಲದೇ ಇರುವವರ ಮೇಲೆ ಬಹಳಷ್ಟು ಬಾಣಗಳು ಕಚ್ಚಿ ಪ್ರತಿ ಕುದುರೆ ದೊಡ್ಡ ಭೂತವೇ ಏನೋ ಹಾಗೆ ಕಾಣುತ್ತಿದೆ. ಒಂಟೆಗಳ ಬೆನ್ನಿನ ಮೇಲೆ ಬಾಣಗಳು ಹೂತು ಹೋಗಿರುವುದರಿಂದ, ನವಿಲು ಕುಣಿಯಲು ರೆಕ್ಕೆಗಳನ್ನು ಹರಡಿಸುವ ಹಾಗೆ ಕಾಣುತ್ತಿವೆ, ಆನೆಗಳ ವರ್ತುಲ ಹೀಗೆ ನಿರಂತರವಾಗಿ ದೊಡ್ಡ ಕೀಟಗಳ ಗುಂಪಿಗೆ ರೆಕ್ಕೆ ಹೊಡೆದಂತಾಗಿದೆ. ಶತ್ರುಗೆ ಬಾಣ ತಗುಲಿ ಇನ್ನು ಸರಿಹೋಗಿಲ್ಲ, ಆಗಲೇ ಸಿಡಿಮದ್ದಿನ ಉಗ್ರಾಣದ ಸರ್ಪಣಿಯನ್ನು ಕಿತ್ತು ಹಾಕಿ ಹೂತುಹೋದರು. ಆಗ ಆನೆಗಳು ಹೀಗೆ ವರ್ತುಲಾಕಾರದಲ್ಲಿ ತಲೆಬಾಚಿಗೊಂಡು ಎಮ್ಮೆಗಳು ಕಲ್ಲೊಗ್ಗಿಚ್ಚು ಕಿತ್ತು ಹಾಕಿದಂತೆ ಹೊರಟವು. ಆನೆಗಳು ಕುದುರೆಗಳು ಒಂದರ ಮೇಲೆ ಒಂದು ಬಿದ್ದು ತನ್ನದೂ ಹಾಗೂ ಬೇರೆಯವರದೂ ಮಣಗಂಟು ಸೇರಿಸಿದರು. ದಂಡಿನಲ್ಲಿ ಹಾಂ ಹಾಂ ಎಂಬ ಒಂದು ಶಬ್ದ ಎದ್ದಾಗ ಮೋಡದ ಹೃದಯವೂ ನೀರಾಯಿತು. ಹೊಗೆ ಮತ್ತು ಧೂಳು ಸೇರಿದ್ದರಿಂದ ಕತ್ತಲು ಸ್ವರ್ಗದವರೆಗೆ ಹರಡಿತು. ಖಡ್ಗದ ಮೇಲೆ ಖಡ್ಗ ಬಿದ್ದು ತನ್ನತಾನೆ ಗುಲ್ಲು ಗಲಾಟೆ ಪ್ರಾರಂಭವಾಯಿತು. ಧೂಳು ಮತ್ತು ಹೊಗೆ ಆಗ ಚೆನ್ನಾಗಿ ಅರಿಯಿತು. ನಯನದ ಕಾಡಿಗೆ ಡಬ್ಬಿ ಆ ಪುಡಿಯನ್ನು ತನ್ನ ಬಾಯಿಯಿಂದ ಹೊರಗೆ ತೆಗೆದಾಗ ಧೂಳು ಎಲ್ಲರ ಮೂಗುಗಳಲ್ಲಿ ತುಂಬಿ ತಲೆಯೊಳಗೆ ನುಗ್ಗಿತು. ಆಗ ಉಸಿರುಕಟ್ಟಿದಂತಾಗಿ ರಣಧೀರರೆಲ್ಲ ದಣಿದರು. ಗಾಳಿ ಮಿದುಳಲ್ಲಿ ಧೂಳು ತುಂಬಿ ಪ್ರಜ್ಞಾಹೀನರಾಗಿ ಮೂರ್ಛೆ ಹೋದರು. ಇದರಿಂದಾಗಿ ಪ್ರಪಂಚದ ಕಿವಿಗೆ ಮಾತು ಕೇಳದಂತಾಗಿ ಕಿವಡರಾದರು. ಸಿಪಾಯಿಗಳು ಬಂದೂಕುಗಳಲ್ಲಿ ಸಿಡಿಮದ್ದು ತುಂಬಿ ಬೆಂಕಿ ಹಚ್ಚಿದ್ದರಿಂದ ಧೂಳಲ್ಲಿ ಕಿಡಿಗಳಿಂದ ಜ್ವಾಲೆ ಬಂದು

ಸುರಂಗ ಆಯಿತು. ಧೂಳು ಬೆವರಲ್ಲಿ ಬೆರೆತಾಗ ಅದೇ ತೆರೆಮರೆಯಾಗಲು ಚಂದನವಾಯಿತು. ಖಡ್ಗದ ಬಾಲದಿಂದ ಜ್ವಾಲೆ ಎಚ್ಚರಗೊಂಡು ಸೂರ್ಯನ ಬಟ್ಟೆಗಳಿಗೆ ಬೆಂಕಿ ಹಚ್ಚಿಕೊಂಡಿತು. ಖಡ್ಗಗಳ ಮೋಡಗಳ ಹೆಸರೇನು ಹೇಳಲಿ, ಅದರಿಂದಲೇ ಕಿಡಿಗಳ ಮಳೆ ಸುರಿಯಿತು. ಎಲ್ಲಕಡೆ ಜಾಸ್ತಿ ಕಿಡಿಗಳು ಸಿಡಿದ ಕಾರಣ ಅನೇಕ ಅಗ್ನಿ ಪರದೆಗಳೆಲ್ಲ ನಷ್ಟವಾಗಿ ದಾರಿಯಾದವು. ಮೃತ್ಯು ಹೆದರಿ ಪರದೆಯಲ್ಲಿ ವ್ಯಾರೆಯಿಂದ ಕುಳಿತು ಪ್ರತಿ ಧೀರನಿಗೆ ನೋಡುತ್ತಿದೆ. ಖಡ್ಗ ತನ್ನತಾನೆ ಮಹನೀಯತೆಯಲ್ಲಿ ಮುಳುಗಿದಾಗ ಅಂತರಂಗದಲ್ಲಿ ಜೀವ ಮುಳುಗಿತು. ಶತ್ರುವಿನ ಜೀವಕ್ಕೆ ಜಾಸ್ತಿ ಭಾರವಾಗಬಾರದೆಂದು ಖಡ್ಗಗಳು ತಮ್ಮ ಹರಿತವನ್ನು ಮತ್ತಷ್ಟು ಹೆಚ್ಚಿಸಿಕೊಂಡವು. ಫತಾ ಫಟ್ ರುಂಡ ಮುಂಡಗಳು ಬೀಳಲಾರಂಭಿಸಿದವು. ಅಮಲೇರಿದ ಆನೆಗಳು ತಮ್ಮ ಸೊಂಡಿಲಗಳನ್ನು ಕತ್ತಲ್ಲಿ ಹಾಕಿಕೊಂಡವು. ಬಲಿಷ್ಟಶಾಲಿ ಬಂದೂಕುಗಳನ್ನು ಸುತ್ತಲೂ ಕೈಗೆ ತೆಗೆದುಕೊಂಡರು. ಗದೆಯು ಚರ್ಮದೊಳಗೆ ನುಗ್ಗಿ ಜೀವದೊಂದಿಗೆ ಮಾತನಾಡಿತು. ಯಾವ ಕಡೆ ಚಾಕು ತನ್ನ ಕಾಂತಿ ತೋರಿಸಿತೋ ಅಲ್ಲಿ ಕವಚಗಳು ಕುಯ್ದು ಹೋಗಿ ಕೈಗೆ ಬರುತ್ತಿತ್ತು. ಕೊಡಲಿ ನಿಸ್ಸಂದೇಹವಾಗಿ ಶರೀರವನ್ನು ಖೀಮ(ಕುಟ್ಟಿದ ಮಾಂಸ) ಮಾಡುತ್ತದೆ. ಭಾರಿ ಗದೆ ತಲೆಯನ್ನು ಕುಫ್ತ(ಕೊಚ್ಚಿದ ಮಾಂಸವನ್ನು ಬೇಯಿಸಿ ಮಾಡಿದ ಬಿಲ್ಲೆ) ಮಾಡುವುದು. ಯಾವಾಗ ಕಠಾರಿಗಳು ಎದೆಗಳನ್ನು ಸೀಳಿದಾಗ ಅದರ ಮೊನೆಯಿಂದ ಹೃದಯದ ಹೋಳುಗಳು ಬಿಚ್ಚಿದವು. ಅವೆಲ್ಲ ಪೂರೈಕೆಯಾಗಿ ಎಲ್ಲವೂ ರಕ್ತದ ಶರಬತ್ತಲ್ಲಿ ಸೇರಿಕೊಂಡು ಎದೆಗಳಲ್ಲಿ ಮುರಬ್ಬ(ಸಕ್ಕರೆ ಪಾಕದಲ್ಲಿ ಹಾಕಿ ತಯಾರಿಸಿದ ಫಲಗಳ ಪಾಕ)ಆಗಿ ಹೋಯಿತು. ಪ್ರತಿಯೊಂದು ಭಲ್ಲೆ ಒಂದು ರೀತಿಯ ಕ್ರೂರಿಯಾಗಿದ್ದ ಅದು ಮಿದುಳು ತಿಂದರೆ ಹೃದಯ ಕತ್ತರಿಸಿ ಹೋಗುತ್ತಿತ್ತು. ಭಲ್ಲೆಯವರು ತಿರುಗಿಸಿ ಬಾಣಗಳಿಂದ ಬಿಚ್ಚಿ ಅನೇಕ ತಲೆಗಳಿಗೆ ಒಂದು ಕ್ಷಣದಲ್ಲಿ ತಲೆಯ ಹೂವು ಮಾಡಿದವು. ಶಪಾ ಶಪ್ ಎಂದು ಬರ್ಚಿಗಳು ಮುಷ್ಠಿಗಳಿಂದ ಬಿಚ್ಚಿದಾಗ ಅನೇಕ ಸವಾರರಿಗೆ ಉಲ್ಟಾ ಗಲ್ಲು ಕೊಟ್ಟವು. ಒಂದೊಂದು ಗೊಂಚಲದಿಂದ ಸಹಸ್ರಾರು ಸುನೀತಿಗಳು ಬಿಟ್ಟಾಗ ಹನಿಗಳ ಬದಲಾಗಿ ಸಿಡುಲುಗಳು ಸುರಿದವು. ಯಾರ ಕತ್ತಲ್ಲಿ ಕೊರಳು ಬಿಗಿಯುವ ಹಗ್ಗ ಹಾರವಾಗಿ ಬಂದು ಬೀಳುತ್ತದೆಯೋ ಅವನ ಕಣ್ಣು ಮಬ್ಬಾಗಿ ಹೊರ ಬಿದ್ದವು. ಎಲ್ಲಿಯವರೆಗೆ ಅನೇಕ ರೀತಿಯ ಸೈನ್ಯಗಳು ಹರಡಿಕೊಂಡಿತ್ತೋ ಅಲ್ಲೆಲ್ಲ ಕಹಳೆ ಊದಿ ಪ್ರಳಯ ಖಾಯಂ ಆಗಿದೆ ಎಂದು ಕಾಣಿಸುತ್ತಿತ್ತು. ಯಾರೂ ಸಹ ಇನ್ನೊಬ್ಬನ ಸಹಾಯ ಮಾಡಲು ಸಾಧ್ಯವಿರಲಿಲ್ಲ. ಪ್ರತಿಯೊಬ್ಬನ ಮೇಲೆ ತನ್ನ ತಾನೆ ಕಷ್ಟ ಬಂದಿತ್ತು. ರಣಧೀರರಿಗೆ ಯಾವಾಗ ಕುಂಡಲಿ ಕಟ್ಟಬೇಕಾಗಿ ಬಂತೋ, ಖಡ್ಗಗಳ ಪ್ರಕಾಶದಿಂದ ಬೆಳದಿಂಗಳು ಬಿತ್ತು. ಖನಾ ಖನ್ ಎಂಬ ಶಬ್ದ ಜೋರಾಗಿ ಎದ್ದಾಗ ಅದನ್ನು ಕೇಳಲಾರದೇ ಆಕಾಶ ತನ್ನ ಕಿವಿ ಮುಚ್ಚಿಕೊಂಡಿತು. ಖಡ್ಗ ಎಲ್ಲೆಡೆಯೂ ಕಡು ಬಿಸಿಲಾಗಿತ್ತು, ಗುರಾಣಿ ಬಿಟ್ಟರೇ ತಲೆ ಮೇಲೆ ಯಾವ ನೆರಳಿರಲಿಲ್ಲ. ಖಡ್ಗಗಳಿಂದ

ಬೆಂಕಿ ಹಾರಿ ಬೀಳುತ್ತಲೇ ಇತ್ತು. ಗುರಾಣಿಗಳು ಆ ಬೆಂಕಿಯಿಂದ ಸುಟ್ಟು ಹಪ್ಪಳವಾಗಿದ್ದವು. ಗದ್ದಲದ ಸದ್ದು ಖಡಿ ರಾಗದಂತೆ ಸರಿಹೋದ ನಂತರ ಖನಾ ಖನ್‌ನಿನ ಝೇಂಕಾರ ತಾಳವಾಯಿತು. ಆಕಾಶ ಮತ್ತು ಭೂಮಿ ಒಂದೇ ಸ್ಥಿತಿಯಲ್ಲಿ ಸೇರಿ ಖಡ್ಗದ ತಾಳದ ಮೇಲೆ ಕುಣಿದವು. ಮುಘಲರ ಮೇಲೆ ದಕ್ಷಿಣದ ಐದು ಬಾದಶಾಹರು ಭರವಸೆ ಇಟ್ಟಿದ್ದರು. ಈ ಐವರ ಬೆಂಕಿ ಸಹಸ್ರಾರರ ಮೇಲೆ ಆವರಿಸಿತು. ಆಕ್ರಮಿಸಲು ಅವನೊಬ್ಬನೇ ಬಂದಿದ್ದ. ಥಾಳಿಗೆ ಹಠಾತ್ತನೇ ಬಂದು ಯಾರು ಸೇರಿದನೋ ಒಬ್ಬನೇ ಬಂದ ಇಬ್ಬರಾಗಿ ಹಿಂದುರಿಗಿದ. ರುಂಡ ಸ್ವಲ್ಪ ಸ್ಥಿರವಾಗಿ ಕಾಲು ಚಾಚಿದಾಗ ಗೂಟದಂತೆ ಕಂಡಿತು. ಅದನ್ನು ರೆಂಬೆ ಕಡಿದ ಮರದಂತೆ ಕಿತ್ತು ಹಾಕಿದರು. ಎಲ್ಲಿ ದೋಷರಹಿತ ಕೈ ಹಾಕಿದರೋ ರುಂಡ ಮುಂಡದೊಂದಿಗೆ ನಗುನಗುತಾ ಮಾತಾಡುತ್ತಾ ಹಾರಿತು. ಖಡ್ಗಗಳು ಅಪ್ರತಿಮ ಗರಗಸಗಳಾದವು. ಕವಚದ ಹೊದಿಕೆಯಿಂದ ಅನೇಕ ಶರೀರಗಳನ್ನು ಸೀಳಿ ಎಸೆದರು. ಕಟ್ಟಿಗೆಯ ಕುದುರೆ ಸವಾರಿ ಮಾಡಿದ ಹಾಗೆ ಯುದ್ಧ ನಡೆಯುತ್ತಿರುವಾಗ ಅದರ ಮಧ್ಯದಲ್ಲಿ ಭಲ್ಲೆಗಳಿಂದ ಹೊಡೆಯುತ್ತ ಆಟ ಆಡಿದರು. ಭಲ್ಲೆಗಳ ದೊಣ್ಣೆಗಳು ರಕ್ತದಿಂದ ಕಳೆಹತ್ತಿದವು. ಅದರ ಮೊನೆಯ ನಾಲಿಗೆಯ ಮೇಲೆ ದಂತಗಳು ಶರ್ಕರವಾದವು. ಎಳೆದಾಟದಲ್ಲಿ ಕಠಾರಿಯ ಮೀನು ಮಣ್ಣಾಯಿತು. ರಕ್ತದಿಂದ ಹವಳ ತನ್ನತಾನೆ ಬಣ್ಣ ತುಂಬಿಕೊಂಡು ಸ್ತ್ರೀ ವಿಲಕ್ಷಣವಾಗಿ ಗುರುತಿಲ್ಲದಂತಾಯಿತು. ರಕ್ತದಲ್ಲಿ ತನ್ನ ಮುಖ ನೋಡಿ ಗುರುತು ಹಿಡಿಯಲಿಲ್ಲ. ಗುರುತು ಮಾಡಿ ತೋರಿಸಬೇಕೆಂದಾಗ ಪ್ರಾಯದಲ್ಲಿ ಬಾಲ್ಯದ ನೆನಪು ಬಂತು. ಪ್ರಪಂಚದಲ್ಲಿ ಎಷ್ಟು ಜನ್ಮವಿದೆಯೋ ಅವೆಲ್ಲ ಕಡಿಮೆ ಬಿದ್ದು ಜಗಳ್ಗಂಟಾಗಿ ಹೋದ, ಅತಿ ರಾಜಕೀಯ ತೋರಿದ್ದರಿಂದ ಚಪ್ಪಟೆ ಮೂಗಿನವಳೆಂದು ಗುರಿತಿಸಲ್ಪಟ್ಟಳು. ಅಮಲೇರಿದ ಆನೆಗಳು ನಿರ್ಮಲ ವಿಕೇಶಿ ಆಗಿದ್ದವು. ಪ್ರತಿಯೊಂದು ಸೊಂಡಲು ರಕ್ತ ಹಾರುವ ಯಂತ್ರವಾಯಿತು. ಆ ಕಾರಂಜಿಯ ಮೇಲೆ ತಲೆಯ ಚೆಂಡು ಹಾರಿಬಿದ್ದರೆ ಅದನ್ನು ಶಕ್ತಿಯಿಂದ ಎಳೆದು ಆ ಯಂತ್ರದಿಂದ ಹಾರಿಸುತಿದ್ದರು. ರಕ್ತದ ಕಲೆಗಳಿಂದ ಧೂಳೆಲ್ಲ ಕೆಂಪಾಯಿತು ನಾಸ್ತಿಕರ ತಲೆ ಮೇಲೆ ಗುಲಾಲ್ ಆಗಿ ಬೀಳುತ್ತಿತ್ತು. ಪ್ರತಿಯೊಂದು ಅಮಲೇರಿದ ಆನೆಯ ಪಗದಾಳ ಮುರಿಯಿತು. ಕವಚವೇ ಆಗಲಿ ಅಥವಾ ಬಾಣ ಬಿಡುವವನ ಬಿಲ್ಲಿನ ಎರಡು ಪದರಗಳು ಸಹ ಮುರಿಯಲಿಲ್ಲ. ಖಡ್ಗದ ಬಾಲ ಪ್ರಳಯ ಹಬ್ಬಿಸಿತ್ತು. ಮೃತ್ಯು ಇಳಿದು ಏಕಾಏಕಿ ಸಂಕಷ್ಟ ತರುತ್ತಿತ್ತು. ಮೃತ್ಯುವಿನ ಮುಂದೆ ಮೋಸದ ಏನು ಶಕ್ತಿ? ದಾವೂದರ ಕವಚವೂ ಸಹ ಜೇಡರ ಬಲೆ ಎಂದು ಕಾಣುತ್ತಿತ್ತು. ಖಡ್ಗದ ನೆರಳು ಶರೀರದ ಮೇಲೆ ಬೀಳುವ ಮುನ್ನ ಕವಚ ಮುರಿದು ಮೃತ್ಯವಿನ ಬಾಗಿಲಿಗೆ ಜಾಗ ಕೊಡುತ್ತದೆ. ಸಶಸ್ತ್ರಗಳನ್ನು ಧರಿಸಿದರೆ ಗಂಡಸರಿಗೆ ಸಹಾಯವಾಗುತ್ತದೆ. ಮೃತ್ಯು ಬಂದರೆ ಅದೇ ಭೂಕಂಪ ಆಗುತ್ತದೆ. ಮೃತ್ಯುವಿಗೆ ಯಾವ ಗಂಡಸಿನ ಮೇಲೆ ಪ್ರಬಲ ಆಸೆ ಆಗುತ್ತದೆಯೋ ಅದೇ ಕವಚದ ಬಳೆ ರೋಮ ರೋಮಕ್ಕೂ ಕಂಠ ಕಡಗ ಆಗುತ್ತದೆ. ಬಿರುಗಾಳಿ ಮೃತ್ಯವಿನ ಊಟದ

ಹಾಸು ಆಯಿತು, ಖಡ್ಗದ ಬಾಯಿ ತುತ್ತುಗಳಿಂದ ತುಂಬಿತು. ಖಚಾ ಖಚ್‌ನಲ್ಲಿ ಕಠಾರಿಯ ಮೀನಿನ ಹಿಡಿ. ರಕ್ತದಿಂದ ನಿರ್ಮಾಣ ಆಗಿರುವ ಹವಳ ತನ್ನ ಶರೀರಕ್ಕೆ ತುಂಬಿದೆ. ಆದರೆ ಅಗ್ನಿಯಲ್ಲಿ ಪ್ರತಿಸಲವು ದೇಪ ಕೊಡುತಿದ್ದವು. ಖಡ್ಗಗಳ ನಾಲಿಗೆಗಳು ಹಾಗೂ ತುಟಿಗಳು ಒಣಗಿದವು. ಎಲಬುಗಳು ವಿವಿಧ ರೀತಿಯ ರಕ್ತ ಬಯಸುತ್ತವೆ, ಕತಾಂ (ಒಂದು ತೆಳುವಾದ ಬಟ್ಟೆ ಅದನ್ನು ಚಂದ್ರನ ಕಿರಣಗಳು ಹರಿದುಬಿಡುತ್ತದೆ) ಬಟ್ಟೆಯ ಮುಖದ ಮೇಲೆ ಯಾರ ಹಲ್ಲು ಬೀಳುವುದು. ಬರ್ಚಿಗಳ ಮೊಳೆಗಳ ದಂತ ಮುರಿದು ಮೂಕ ಇರುವೆಗಳ ಬಾಯಿಯ ಹಾಗೆ ತೆರೆದಿವೆ. ಕವಚದ ಬಳೆಗಳು ಖಡ್ಗದ ಬಾಯಿಯಲ್ಲಿ ಹೂತು ಅದರ ದಂತಗಳಲ್ಲಿ ಎಲಿಚೆಹಣ್ಣಿನ ಎಳೆಗಳಾಗಿ ಖಡ್ಗಗಳ ಬಾಯಿಯಿಂದ ತಂತಿ ನೇರವಾಗಿ ಹೊರಟು, ಅಲುಗಾಡುತ್ತಿರುವ ದವಡೆಗಳನ್ನು ಕಟ್ಟುತ್ತಿವೆ. ರಕ್ತ ತುಂಬಿ ಎಲ್ಲ ಹಿಡಿಗಳು ಕಟ್ಟಿಹೋಗಿವೆ. ಪಿರ್ಜದಲ್ಲಿ ಬಿಚ್ಚಿದರೆ ಬೆರಳುಗಳು ಏಳುವವು. ಎಷ್ಟೊಂದು ಪಗದಾಳಗಳನ್ನು ಜೋಡಿಸಿದ್ದವೋ ಅವೆಲ್ಲ ಮೋಸ ಮಾಡಿದವು. ಕೈ ನರಗಳು ಕೆಲಸ ಮಾಡಿ ಮಾಡಿ ದಣಿದವು. ಬಿಲ್ಲುಗಳ ಗಟ್ಟಿತನ ಅನೇಕ ಎದೆಗಳನ್ನು ಹೊಡೆದು ಹಾಕಿದವು. ನೇತ್ರಗಳ ರಕ್ತ ಕಣ್ಣುಗಳ ದಾರಿಯಿಂದ ಸಂಪೂರ್ಣವಾಗಿ ಹರಿಯಿತು. ರಕ್ತ ಹರಿದು ಕಣ್ಣುಗಳು ಗಾಯವಾದವು. ಅಸ್ತಿತ್ವಗಳು ಬಿರುಕು ಬಿಟ್ಟು ನರವೆಲ್ಲ ಗಟ್ಟಿಯಾದವು. ಅಸ್ತಿತ್ವಗಳು ಮುರಿದವು. ನಾವು ನಮ್ಮಷ್ಟಕ್ಕೇ ಎಷ್ಟೋ ಪ್ರಾಣದ ಮೇಲೆ ಆಸೆ ಬಿಟ್ಟು ಲಕ್ಷ ಆಟ ಆಡಿದರೂ ರಕ್ತ ರುಂಡ ಮುಂಡದಲ್ಲಿ ಚಲ್ಲಾಪಿಲ್ಲಿಯಾಯಿತು. ಮುಘಲರು ಮನೆಗೆ ಅತಿಥಿಯಾಗಿ ಬಂದರು ಅವರಿಗೆ ಹೀಗೆ ಆದರ ಸತ್ಕಾರ ಮಾಡಿ ಮರ್ಯಾದೆ ಕೊಟ್ಟರೆಂದರೆ ನಿಸ್ಸಂದೇಹವಾಗಿ ಭೂಮಿ ಬಣ್ಣದ ಉನ್ನತ ಸ್ಥಾನವಾಯಿತು. ಅದು ಹಟಾತ್ತನೆ ಶರೀರವನ್ನು ಬಗೆ ಬಗೆಯ ಬಣ್ಣ ಮಾಡಿ ಸಂತೋಷ ಪಡಿಸಿತು. ಊಟ ಉಪಚಾರಕ್ಕೆ ಸೋಲಲಿಲ್ಲ ಯಾರದೂ ಗೌರವ ಹಾಗೂ ವಸ್ತ್ರಗಳನ್ನು ಕೊಡುವುದು ಮರೆಯಲಿಲ್ಲ. ಅನೇಕರು ಮೃತ್ಯುವಿನ ಮದ್ಯ ಕುಡಿದು ಅಮಲೇರಿದರು. ತಲೆ ಅಲ್ಲಾಡಿಸುತ್ತ ಕುಳಿತರು. ಕೈತಾಗಿಸಿ ಅಮಲೇರಿ ಜರೂರಾಗಿ ನಟನೆ ಮಾಡುವರು. ಅವರ ಮಿದುಳು ಬಾದಾಮಿ ಹಾಗೂ ತುಟಿಗಳು ದ್ರಾಕ್ಷಿಯಂತೆ ಕಾಣುತ್ತಿದೆ. ಅನೇಕರು ತನ್ನ ದುಃಖದ ಕಣ್ಣೀರು ತಿಂದು ಕುಡಿದರು. ತನ್ನ ತಲೆ ಬುರುಡೆಯಲ್ಲಿ ಮಿದುಳುಗಳು ವಣಗಿದ ಮೊಸರು, ಸಿಪ್ಪೆ ತೆಗೆದ ಜೋಳವಾಯಿತು. ಬಹಳ ಹುಡುಕಾಡಿದ ಮೇಲೆ ಕೈಗಳಲು ಚಮಚವಾಯಿತು. ತನ್ನ ಕಣ್ಣೀರಿನ ಬಿಸಿ ಬಿಸಿ ಗಂಜಿ ಕುಡಿದರು. ವಿಸ್ಮಯವೆಂದರೆ ರಕ್ತದಲ್ಲಿ ಹರಳುಗಳ ಸ್ವಭಾವ ಏನಿತ್ತು? ಹೀಗೆ ಈ ರೀತಿಯ ಜ್ವಾಲೆ ಪಲಾವ್ ಮಾಡಿದ್ದರು. ಆನೆಯನ್ನು ಕತ್ತರಿಸಿ ಗಾಯದ ಎಲೆ ಭಾಂತಿ ಚುಖಂದರಿನ ಚಕ್ರದಾಕಾರದ ಮುರಿದ ಆನೆ ದಂತ, ಪ್ರತಿಯೊಂದು ಶಸ್ತ್ರಕ್ಕೆ ಕಾಣುವ ಹಾಗೆ ರಕ್ತ ಕೊಟ್ಟರು, ಕವಚದ ಮೇಲೆ ಕಿತ್ತಳೆ ಅಂತಹ ನಿಲುವಂಗಿ ತೊಟ್ಟರು. ಕುಸುಂಬ(ಕೆಂಪು) ಹೂವಿನ ಜಾಗದಲ್ಲಿ ರಕ್ತದ ಹನಿಗಳು ಚಿಮ್ಮಿಸಲಾಯಿತು. ಕೇಸರಿ ಬಣ್ಣದ ಉಡುಪು

ಚರ್ಮದ ಹಾಗೆ ಮಾಡಿದರು. ಕುದುರೆಗಳ ಗೊರಸಿನ ಮೇಲೆ ಅಪ್ರತಿಮ ಸುಗಂಧ ತಂದಿದ್ದರಿಂದ ಲೋಕದ ಪಾದದ ಧೂಳು ಅಬೀರ್(ಸುಗಂಧ ಚೂರ್ಣ)ವಾಯಿತು. ಬೆನ್ನು ಹತ್ತಿದರಿಂದ ತಲೆಯಲ್ಲ ರಕ್ತದಲ್ಲಿ ಮುಳುಗಿ ಬೇರೆಯಾದವು. ತನ್ನದೇ ಜಾಲರಿ ಮುಖ ವರಿಸಿಕೊಳ್ಳುವ ರುಮಾಲಾಯಿತು. ಕವಚಧಾರಿಗಳ ಮೇಲೆ ಯಾರಾದರು ತನ್ನ ಜೀವಕ್ಕೂ ಲೆಕ್ಕಿಸದೆ ಹಿಂಬಾಲಿಸಿದರೆ ಅವಶ್ಯಕತೆಯಂತೆ ಬಟ್ಟೆ ತಲೆ ಕೆಳಗೆ ತೆಗೆದುಕೊಂಡರು. ಪ್ರಳಯದವರೆಗಿನ ನಿದ್ರೆ ತೆಗೆದುಕೊಳ್ಳಬೇಕಾಯಿತು ನಿದ್ರೆಯ ತಂಗಿ ಬಂದು ಕತ್ತಿದ್ದಿತು. ಅನೇಕ ಜನರಿಗೆ ತಮ್ಮ ಇಚ್ಛೆಯ ವಿರುದ್ಧ ನಿಲುವಂಗಿಯೇ ಅರಳು ತುಂಬಿದ ಹಾಸಿಗೆ ಆಯಿತು. ಹಾಗೂ ಅನೇಕ ಜನರಿಗೆ ಕವಚವೇ ರಜಾಯಿ ಆಯಿತು. ಮೃತ್ಯುವಿನ ಕನಸಲ್ಲಿ ಎಷ್ಟೋ ಜನ ಉಸಿರು ಕಟ್ಟಿಹೋದರು. ಅನೇಕರು ನಿಶ್ಚಿಂತರಾದರೆ ಅನೇಕರು ವ್ಯಾಕುಲಗೊಂಡರು. ಅನೇಕರು ಬಿಸಿಲಿನ ತಾಪದಲ್ಲಿ ದುರುಗುಟ್ಟುವಂತೆ ಕಾಣುತ್ತಿದ್ದರೆ ಅನೇಕರು ಹಲ್ಲು ಕಡಕೊಂಡು ಓಡಾಡುತ್ತಿದ್ದರು. ಶಸ್ತ್ರಗಳು ಬಿಸಿಯಾಗಿ ಎದೆಗಳು ರೊಟ್ಟಿ ಸುಡುವ ಭಟಿಯಾದವು. ಬೆಂಕಿ ಹುರಿದುದರಿಂದ ಪಕ್ಕೆಲಬುಗಳು ನುಚ್ಚುನೂರಾದವು. ಭಟ್ಟಿಗಳಿಂದ ಎದೆಗಳ ರಕ್ತದ ಧಾರೆ ಹಾರಿ ಅಲ್ಲಲ್ಲಿ ಮತ್ತಷ್ಟು ಚಂಡಮಾರುತ ಎದ್ದಿತು. ಭೂಮಿ ಮೇಲೆ ರಕ್ತದ ತೊಟ್ಟಿ ತುಂಬಿ ಹಠಾತ್ತನೆ ಮೇಲೆದ್ದಿದ್ದು ಏರುತ್ತಲೇ ಹೋಯಿತು. ಸೂರ್ಯ ಈ ಜೋರಾದ ಚಂಡಮಾರುತವನ್ನು ನೋಡಿ ಚಂದ್ರನ ನಾವೆ ತೆಗೆದುಕೊಂಡು ಅದರಲ್ಲಿ ಸವಾರಾದ. ಬಲಶಾಲಿ ಆಮಂತ್ರಣ ಬರಲಾರಂಭಿಸಿದ ಕಾರಣ ಆನೆಗಳು ತಕ್ಕಡಿಯ ಹಾಗೆ ಅಲುಗಾಡಿದವು. ಕುದುರೆಗಳು ಬಿಸಿಯಾಗಿ ನೀರಿನ ಸಪೂರಧಾರೆಯಾಗಿ ನೀರು ತುಂಬುವ ಚರ್ಮದ ಚೀಲ ಹಾಗೆ ಊದಿ ಗಾಳಿತುಂಬಿಕೊಂಡಿತು. ಸುತ್ತಲೂ ಮರಗಳು ಸುತ್ತು ಹೊಡೆಯಲಾರಂಭಿಸಿದವು. ಸ್ಥಾನಗಳ ಮತ್ಸ್ಯ ಹಿಂದುರಿಗಿದವು. ನಗಾರಿಗಳು ರಕ್ತದಲ್ಲಿ ತಳತಳಕವಾಗಿ ಬಿದ್ದು ನೀರಿನ ಮೇಲೆ ಗುಳ್ಳೆಗಳ ಹಾಗೆ ಕಾಣಿಸುತಿದ್ದವು. ಕವಚಧಾರಿಗಳು ರಕ್ತದಲ್ಲಿ ಸಿಕ್ಕಿಹಾಕಿಕೊಂಡು ಮೀನು ಜಾಲವನ್ನು ಕಿತ್ತು ಹಾಕಿ ಓಡಿದಂತೆ ಕಾಣುತಿದ್ದವು, ಬಿಸಿಲಿನ ತಾಪದಿಂದ ನೀರಿನ ಬಾತುಕೋಳಿ ನೀರಲ್ಲಿ ಮುಳುಗಿ ನೆಲ ಹರಿದ ಹಾಗೆ ಕವಚಧಾರಿಗಳು ಹೋಗಿ ನೆಲ ಹಿಡಿದಿದ್ದರು. ರಕ್ತದ ನೀರಲ್ಲಿ ಕವಚದ ತುಂಡುಗಳು ಪಾಚಿಯಾಗಿವೆ. ದಪ್ಪ ಸಿಪ್ಪೆಯಂತಹ ಕೈಚೀಲಗಳು ಚಿಪ್ಪಿನ ಹಾಗೆ, ನೀರೆರೆಯು ಆದರೆ ಚೇಳು ಮತ್ತು ಅದರ ಮರಿಯಾಗಿ ನಿಜವಾಗಿಯೂ ಕಠಾರಿಯ ಹಿಡಿಯಂತೆ ಝೇಂಕರಿಸುತ್ತವೆ. ಹಾವಿನ ಮರಿಗಳು ಕೊರಳಿನ ಹಗ್ಗ ಹಾವಿನಂತಿರುವ ಮೀನು ಒಳ್ಳೆ ಭಲ್ಲೆ ಮುರಿದರು ಗಾಡಿಗಳು ಬಾಣಗಳು ಎಲ್ಲ ಮರಳಿನ ಮೇಲೆ ಮೀನುಗಳು ಬಿದ್ದಿರುವ ಹಾಗಿವೆ. ಬಿಲ್ಲುಗಳು ಹೆಣ್ಣು ನಾಗರಹಾವು ಬಿಸಿಲು ಕಾಯಲು ಬಿದ್ದಿರುವ ಹಾಗೆ ಮುರಿದುಬಿದ್ದಿವೆ. ಬಿಲ್ಲಿನಸರಿಗೆ ರಕ್ತದ ಮಧ್ಯದಲ್ಲಿ ಸಹಸ್ರಾರು ಕೆಸರಿನ ಹುಳುಗಳಂತೆ ಸೇರಿಕೊಂಡಿವೆ. ಭಲ್ಲೆಗಳು ಜೋಳದ ಕಡ್ಡಿಗಳಂತೆ ಕಾಣುತ್ತವೆ, ರಕ್ತ ನೀರಿನೊಂದಿಗೆ ಯುದ್ಧ ಮಾಡಿರುವಂತೆ ಕಾಣಿಸುತ್ತದೆ. ಕವಚಧಾರಿಗಳೆಲ್ಲ

ಭಲ್ಲೆಗಳಲ್ಲಿ ಸಿಕ್ಕಿ ಬಿದ್ದಿದ್ದಾರೆ. ಯುದ್ಧದ ಸಮಯದಲ್ಲಿ ತುಳಿದಾಟದಿಂದ ಆಳವಾದ ಗುಂಡಿಗಳು ಮೀನುಗಳ ಅಲೆ ಬರುವಂತೆ ಕಾಣಿಸುತ್ತಿದೆ. ಮೃತ್ಯುವಿನ ದೇವಚರರು ಜಾಸ್ತಿನೇ ಬಂದಿರುವರು. ಅವು ಮೀನುಗಳ ಮೇಲೆ ಕೋಡಿಯಾಲನಂತೆ ಕುಣಿಯುತ್ತಿವೆ. ಆ ಕೋಡಿಯಾಲ(ರಾಮ ಹಕ್ಕಿ) ತನ್ನ ರೆಕ್ಕೆಯನ್ನು ಜೋಡಿಸಿ ಎಸೆಯುವವರಿಗೆ ಪ್ರತಿ ಕ್ಷಣದಲ್ಲಿ ಅನೇಕರ ಆತ್ಮಗಳು ಹಾರುವಂತೆ ಕಾಣುತ್ತಿವೆ. ದೇವಚರ ಕೈಗಳಿಂದ ಭಾರಿ ಕೆಲಸ ಮಾಡಿಸಿದ್ದರಿಂದ ಒಂದು ಜೀವದಿಂದ ಸಹಸ್ರಾರು ಕೊಂಬೆಗಳನ್ನು ಹೊಡೆದುಕೊಂಡವು. ಗಾಳಿ ಎಲ್ಲ ಆತ್ಮಗಳಿಂದ ತುಂಬಿಕೊಳ್ಳುತ್ತಿತ್ತು. ಪವನ ತನ್ನ ರೆಕ್ಕೆ ಇನ್ನು ಜೋರಾಗಿ ಹೊಡೆಯುತ್ತಿತ್ತು. ಆತ್ಮಗಳ ಗಾಳಿಯ ಒತ್ತಡ ಕಡಿಮೆಯಾದ ಮೇಲೆ ಈ ಆಕಾಶದ ಗಾಜಿನ ಮರೆ ಪಲ್ಲಟಿಸಿದಾಗ ಸೂರ್ಯದ ಈ ಕಂದೀಲ ಬಿದ್ದು ಹೋಯಿತು. ಆಗಲೇ ಮೋಡ ತೆರೆ ಎಳೆಯಿತು. ಎದುರಾಳಿ ನೋಡಿದ ಈಗ ಯುದ್ಧ ತನ್ನ ಉಚ್ಚಮಟ್ಟಕ್ಕೇರಿದೆ ತನ್ನ ಜನರೆಲ್ಲ ಈ ಅಂಗಳದಲ್ಲಿ ಬಿದ್ದಿದ್ದಾರೆ. ಎಷ್ಟೊಂದು ಮಹಾಸೇನೆ ಬಂದಿತ್ತು ಅದರಲ್ಲಿ ಅರ್ಧ ಮಾತ್ರ ಮಿಕ್ಕಿದೆ ಅವು ಗಾಯಗೊಂಡು ಅರೆಜೀವವಾಗಿವೆ. ಅದರಲ್ಲು ಅರ್ಧಜನರ ಪೂರ್ತಿ ಪ್ರಾಣ ಹೋಗಿದೆ. ಯಾರು ಪೂರ್ಣವಾಗಿದ್ದರೋ ಅವರಿಗೆ ಅರಿವು ಇರಲಿಲ್ಲ. ಯಾರು ದೃಢವಾಗಿ ಕಾಲೂರಿ ನಿಂತಿದ್ದರೋ ಅವರಿಗೆ ಕಾಲು ಎತ್ತಿಡಲು ಶಕ್ತಿಯಿರಲಿಲ್ಲ. ಎಲ್ಲ ಅಂಗಗಳು ಶಕ್ತಿಹೀನವಾಗಿದ್ದವು ಶಸ್ತ್ರಗಳು ಪ್ರತಿಯೊಬ್ಬನ ಕೈಗಳಿಂದ ಸ್ನೇಹ ಕಳೆದುಕೊಂಡಿದ್ದವು. ಬಗ್ಗಿಸಿದ ಬಿಲ್ಲುಗಳು ಸೋಲು ಒಪ್ಪಿದ್ದವು. ಬಾಣಗಳು ದಣಿದು ಅವುಗಳ ತುದಿಗಳ ಬಾಯಿ ಅಗಲವಾಗಿದ್ದವು. ಭೀತಿ ಹಾರಿದ್ದರಿಂದ ಕೈಗಳಿಂದ ವಿಡಂಬನೆ ಬಿಟ್ಟು ಹೋಯಿತು. ಭಯದಿಂದ ಕಣ್ಣು ಹೊರಹೊಮ್ಮಿ ಶಸ್ತ್ರಗಳೆಲ್ಲ ತೊಳೆದು ಹೋಯಿತು. ಕೊಂಬೆ ಮುರಿದರೆ ಎಲೆಗಳು ಹೇಗೆ ದುರ್ಬಲವಾಗುತ್ತವೋ ಹಾಗೆ ಅಲಿಬಂದ್ ಮುರಿದು ಗುರಾಣಿಗಳು ಉಡಾಳವಾದವು. ರಾಜ್ಯಭಾರವನ್ನು ಮರೆತು ರಜಪೂತರು ಬರ್ಚಿಗಳಿಗೆ ಸೋತರು. ಅವುಗಳನ್ನು ದಂತದಲ್ಲಿ ಕಡ್ಡಿ ಇಡುವ ಹಾಗೆ ಇಟ್ಟು ಬಂದರು. ಅವರು ತಮ್ಮ ಹಳೇ ಕಾನೂನನ್ನು ಮರೆತರು. ಅವರ ಮಹಾ ಸಿಡಿಮದ್ದಿನ ಉಗ್ರಾಣವೂ ಸಹ ಏನೂ ಕೆಲಸಕ್ಕೆ ಬರಲಿಲ್ಲ. ಮಿಕ್ಕಿದ ಖಡ್ಗಗಳಲ್ಲಿ ಹಳ್ಳಬಿದ್ದಿವೆ. ಪಾದರಕ್ಷೆಯ ಅಡಿಭಾಗ ಹರಿದಿದ್ದರಿಂದ ಕಾಲಿನ ಆಭರಣ ಕಾಣಿಸತೊಡಗಿತು. ಯಾವಾಗ ಅವನ ಮೇಲೆ ಲಾತಗಳು ಬೀಳಲಾರಂಭಿಸಿದವೋ ಒಂದು ಕ್ಷಣವೂ ತಡೆಯಲು ಸಾಧ್ಯವಾಗದೇ ಅಲ್ಲಿಂದಲೇ ಹಿಂದುರಿಗಿ ಹೊಲ ಬಿಟ್ಟು ಓಡಿಹೋದ. ಒಂದೊಂದು ತೋಪಿನ ಭಾರ ಅವನಿಗೆ ಹತ್ತರಷ್ಟು ಜಾಸ್ತಿ ಆಯಿತು. ಸಿಡಿಮದ್ದಿನ ಉಗ್ರಾಣ ತೆಗೆದು ಓಡುವವರೆಗೆ ಅವನು ದಣಿದನು. ಅವನನ್ನು ಹಿಂಬಾಲಿಸಿ ಅವನನ್ನು ಆಕ್ರಮಣಿಸಿದರು. ಬಾಣಗಳನ್ನು ಬಿಡುತ್ತಲೇ ಇದ್ದ ಅದರ ನೋವು ಅವರು ಪಡೆಯುತ್ತಲೇ ಇದ್ದರು. ತಡೆ ಉಂಟಾದ ಜಾಗದಲ್ಲಿ ಸ್ವಲ್ಪ ಬಿಗಿಯಾದರೇ ಸಾಕು ಅವರನ್ನು ಕೆಣಕಿ ಹೊಡೆಯುವರು. ಹೀಗಾಗಿ ಭೂಮಿ ಮೇಲೆ ಬಿದ್ದು ಅನೇಕ ಸಲ ಫಾಝಿಲುಗಳ

ಕಾಲಕೆಳಗೆ ಬಂದರು. ಮರಾಠರ ಮುಂದೆ ಗೋಗರಿಸುತ್ತ ಅನೇಕ ಸಲ ಬಿದ್ದರು, ಇನ್ನು ಹೆಚ್ಚು ಪೆಟ್ಟು ಬಿದ್ದಮೇಲೆ ಅದರಲ್ಲೇ ತೊಳಗಿ ಇದೇನು ಆಕಾಶದ ಆಪತ್ತು ತಲೆ ಮೇಲೆ ಬಿದ್ದಿತಲ್ಲ ಎನ್ನುವರು. ಒಂದು ಕ್ಷಣದಲ್ಲಿ ಒಂದೇಸಲ ಎಲ್ಲರೂ ಚಕಿತರಾದರು. ಮಾತು ತಿಳಿಯುವುದರಲ್ಲಿ ಮುಜುಗರ. ದಕ್ಷಿಣದವರು ರಣಧೀರರ ನಡಿಗೆ ನಡೆದಿದ್ದಾರೆ. ಒಮ್ಮೆ ಶತ್ರು ಗೋಗರೆದರೆ ಅವರನ್ನು ಜೋಪಾನವಾಗಿಡುತ್ತಾರೆ. ಬಾದಶಾಹರು ಯುದ್ಧದ ಈ ಬಣ್ಣ ನೋಡಿ ಪ್ರಸಿದ್ಧ ಜನರೊಡನೆ ಮಾತನಾಡುತ್ತಾ ಈವತ್ತಿಗೆ ಇವರ ತಲೆ ಮೇಲೆ ಹೊಡೆಯುದನ್ನು ಸಾಕು ಮಾಡಿ. ಶರೀರದ ಗಂಟು ಕಟ್ಟುವುದು ಬೇಕಾಗಿಲ್ಲ ಎಂದು ಹೇಳಿದಾಗ ರಣಧೀರರು ಆಗ ತಿರುಗುತ್ತಿರುವ ಲಗಾಮು ತಡೆದುಕೊಂಡರು. ಆಗ ಅವರಿಗೆ ಅಲ್ಲಿಂದ ಹೊರಡುವ ಅವಕಾಶ ದೊರಕಿತು. ಮತ್ತೊಬ್ಬರನ್ನೂ ಚಿಂದಿಸಿದೆ. ಆ ಕಡೆ ಓಡಿದರು ದಾರಿ ಸಿಕ್ಕಿದರೇ ಸಾಕು ಎಂದು ತನ್ನ ಜೀವಕ್ಕೂ ಚಿಂತಿಸದೇ ಓಡಿ ಹೋದರು. ಯಾವಾಗ ಮುಘಲರು ನೂರು ಬಾಣದ ದೂರಕ್ಕೆ ಹೋದರೋ ಅವರಿಗೆ ಕೋಟೆವರೆಗೆ ಲಘುವಾಗಿ ಹಿಂಬಾಲಿಸಿಕೊಂಡು ಹೋದರು. ಅವರಿಗೆ ಕೋಟೆಯೊಳಗೆ ಹಾಕಿ ಅಂದು ಅವರಿಗೆ ಕ್ಷಮಿಸಿ ಹಿಂದುರಿಗಿದರು. ಏಕೆಂದರೇ ಎಲ್ಲರ ಖಡ್ಗಕ್ಕೆ ರಕ್ತ ಹೊದಿಕೆ ಹಾಗೆ ಹಿಡಿದಿತ್ತು. ಮುಘಲರಿಗೆ ತಲುಪಿಸಿ ಹಿಂದಿರುಗಿ ರಣರಂಗಕ್ಕೆ ಬಂದು ವಿಜಯದ ವಾದ್ಯಗಳನ್ನು ಬಾರಿಸಿದರು ಎಷ್ಟೊಂದು ಗೊಂದಲ ಎಬ್ಬಿಸಿಕೊಂಡು ಹೋದರೆಂದರೆ ಭೂಮಿ ಆಕಾಶ ತಳತಳಕವಾದವು. ಆದರೆ ಆ ಸದ್ದು ಶತ್ರುಗೆ ಪ್ರಳಯದ ಕಹಳೆ ಆಯಿತು. ಶವಗಳನ್ನು ಎತ್ತುವ ಸಂಕೇತವಾಯಿತು. ಇಡೀ ರಣದಲ್ಲಿ ಉತ್ಸಾಹ ತುಂಬುತ್ತಾ ಹೋಯಿತು. ಶವಗಳಿಗೂ ಪ್ರಜ್ಞೆ ಬರಲಾರಂಭಿಸಿದಂತೆ ಕಾಣಿಸಿತು. ಆ ಪ್ರಪಂಚದಲ್ಲಿ ದೊಡ್ಡ ವಿಸ್ಮಯಕರ ಅತಿಥಿ ಸತ್ಕಾರವಾಯಿತು. ನಿಶ್ಚೇತನ ಸಮರ ಪ್ರಿಯರೆಲ್ಲರೂ ಅಲಂಕರಿಸಿಕೊಂಡು ಬಂದರು. ಎಲ್ಲಿ ನಿನ್ನ ಮೇಲೆ ಸುತ್ತಲೂ ರಕ್ತ ಬಿದ್ದರೆ ತಿಳಿದುಕೋ ಅಲ್ಲಿ ಮಕ್ಮಲಿನ ಉನ್ನತಸ್ಥಾನ ಹಾಗೂ ಕುರ್ಚಿ ಕಾಣಿಸುತ್ತದೆ. ಅಧಿಕ ಆಧಿಪತ್ಯದ ಶಿಷ್ಟಾಚಾರಗಳೊಂದಿಗೆ ಮೃಗಗಳ ಸೈನ್ಯ ತೆಗೆದುಕೊಂಡು ಬಲು ಠೀವಿಯಿಂದ ಬಂದರು. ಪಟ್ಟೆಧಾರಿ ರೌಕೆಯನ್ನು ಸಿಂಹಗಳು ಧರಿಸಿ ಧೀರ ಶಾಹ ಕುರ್ಚಿಮೇಲೆ ಕುಳಿತರು. ಎಲ್ಲ ಜಾಗದಲ್ಲಿ ಚರ್ಮದ ಕೋಟು ಧರಿಸಿದ್ದವರು ಮುಂದಾಳಾಗಿ ಬಂದು ಕೈ ಕೆಳಗೆ ನಿಂತರು ಚಿರತೆಗಳು ನೀಲಿ ಬಣ್ಣದ ನಿಲುವಂಗಿ ಧರಿಸಿದವು. ತೋಳಗಳು ಮುತ್ತಿನ ಕವಚ ಕಟ್ಟಿಕೊಂಡು ತಲೆಗಟ್ಟಿ ಮಾಡಿಕೊಂಡು ದಾಂಡಿಗರು ಬಂದರು ತನ್ನ ಮೈಯನ್ನು ಬತ್ತಳಿಕೆ ಮಾಡಿ ಬೆನ್ನನ್ನು ಮುಳ್ಳು ಮಾಡಿಕೊಂಡರು. ಆ ಜಾಗ ಬಾಣಗಳಿಂದ ತುಂಬಿ ಬಿರುಸಾಯಿತು. ಬಾಯಿ ಬಿಟ್ಟು ಬಲಿಷ್ಟರಾಗಿ ಕಾಣಿಸತೊಡಗಿದರು. ಎತ್ತಲಿಂದಲೋ ನಾಯಿಗಳಿಂದ ಹೊಸ ಕವಚ ತೆಗೆದು ಕೊಂಡು ಕಟ್ಟಿಕೊಂಡರು. ಸಭೆಯಲ್ಲಿ ಇಚ್ಛಿಸುವವನ ಧರ್ಮಿಷ್ಠತೆ ಕಳೆದು ಹೋಯಿತು. ಮನೆ ಕತ್ತಲೆಯಾದರೆ ರುಜುವಾತು ಮಾಡುವವರಿಲ್ಲದೇ ಮಿದುವಾಯಿತು. ಪ್ರತಿಯೊಂದು ಗುಳ್ಳೆನರಿ ತನ್ನನ್ನು ಆಕರ್ಷಸಿಲು ಬಾಲದಲ್ಲಿ ಜಡೆಯ

ಚಾವಲಿ ಇಟ್ಟುಕೊಂಡು ಅಲಂಕರಿಸಿಕೊಂಡವು. ಒಂದು ಸಲ ಸುಗಂಧ ಸೇರಿ ಹೊರಟಿತು. ಬೆಕ್ಕುಗಳು ಸ್ವಚ್ಛವಾದ ಬುರ್ಖಾ ಧರಿಸಿದ್ದರಿಂದ ಚೆನ್ನಾಗಿ ಕಾಣಿಸುತ್ತವೆ. ಮುಖದ ಮೇಲೆ ಕೈ ಇಟ್ಟಿಕೊಂಡು ನಾಚುತ್ತ ನಡೆಯುತ್ತಿದ್ದವು. ಕಿರೀಟಧಾರಿ ಉಣ್ಣೆ ಬಟ್ಟೆ ರತ್ನ ಕಂಬಳಿ ಧಾರರೆಲ್ಲರೂ ಬುದ್ಧಿವಂತರೆಲ್ಲರೂ ಕರಿ ಕಿವಿದವರಾಗಿ ಬಂದರು. ದೇವಭೀತರೆಲ್ಲ ಅಮಲೇರಿ ಕಂಬಳಿಧಾರಿಗಳಾದರು, ಸನ್ಮಾರ್ಗದರ್ಶನದವರು ನೀಚ ರಸಭರಿತರಾಗಿ ಹುಡುಕಿಕೊಂಡು ಬಂದರು. ಮೃಗಗಳು ಜಗಳಾಡಲು ಹೊರಟಿದ್ದವು. ಜಿಡ್ಡ ತುತ್ತುಗಳನ್ನು ತಿನ್ನಲು ತನ್ನ ಹಲ್ಲುಗಳನ್ನು ತಿಕ್ಕಿಕೊಂಡರು. ಒಂದು ಸೈನ್ಯ ಆದ ಮೇಲೆ ಮತ್ತೊಂದು ಸೈನ್ಯ ಸುತ್ತಲಿಂದಲೂ ಓಡಿ ಬಂದಿತು. ನರಿಗಳು ಡಂಗೂರ ಹೊಡೆಯುವವನ ಹಾಗೆ ಕೂಗಲಾರಂಭಿಸಿದವು. ಅನೇಕರು ಓಟದಲ್ಲಿ ಕೂಗುತ್ತ ಧೈರ್ಯದಿಂದ ಸುದ್ದಿಕೊಡುವವನ ಹಾಗೆ ಬಂದರು, ಸುದ್ದಿ ಬೇಗ ತರಲು ಹುಡುಕಾಡಿದರು. ಕವಿಗಳ ಗುಂಪು ಬೇರೆ ಓಡಿತು. ಅತಿಯಾಶೆ ಮಾಡಲು ಕುದುರೆಯನ್ನು ಹಿಂದಿರುಗಿಸಿ ಹಿಡಿದರು. ಸಮರದ ಮೋಸದಿಂದ ಗಾಳಿ ಹೀಗೆ ಬೆಳ್ಳನೆ ಆದರೆ ಅವರು ಆಕಾಶಗಳಿಗೆ ತೂತು ಬಿತ್ತು ಎಂದು ಹೇಳುತ್ತಾರೆ. ಪ್ರತಿಯೊಬ್ಬನೂ ಸಮರದ ಮೋಸಕ್ಕೆ ಬಂದು ಕುಳಿತಿರುವರು. ನೋಡಿದವರಿಗೆ ಅವನು ಅತ್ಯಾಚಾರಿಗಳ ಆಕ್ರಮಣದಿಂದ ಹುತಾತ್ಮನಾದ ಎಂದು ಕಾಣುತ್ತಾನೆ. ರೆಕ್ಕೆಗಳನ್ನು ಹರಡಿಸಿ ಅವನ ಮುಖದ ಮೇಲೆ ಸಮರ್ಪಿಸುವರು. ಆದರೆ ರುಂಡಗಳು ಅತ್ಯಾಚಾರಿಗಳ ಕಾಲಲ್ಲಿ ತಂದು ಹಾಕುವರು. ಅಂದರೆ ಅವಮರ್ಯಾದೆ ಮಾಡುವರು. ಗಿಡುಗಗಳು ಮಿದುಳುಗಳನ್ನು ತನ್ನ ಆಹಾರ ಮಾಡಿಕೊಂಡರೆ ಕವಿಗಳು ಅದರ ಮುಖ ಜಗತ್ತಿನ ನಯನಗಳಾದವು ಎಂದು ಹೇಳುವರು. ಅತಿಯಾಶೆ ಮೋಸಗಳಿಂದ ಓಡಿ ದೂರ ನಿಂತಿತು. ಆಗ ನಾಯಿಗಳಿಗೆ ಹಾಗೂ ಕಾಗೆಗಳಿಗೆ ಒಳ್ಳೆ ಸಮಯ ದೊರಕಿತು. ಮದ್ಯ ತುಂಬಿಸಿಡುವ ಉದ್ದ ಕತ್ತಿನ ಹೂಜಿಯನ್ನು ತಂದು ಕತ್ತಿನವರೆಗೆ ತುಂಬಿ ಹುಲಿಯ ಬಾಯಿಗಿಟ್ಟಾಗ ಅವು ಅಮಲೇರಿ ಬೆಂಕಿಯಾಗಿ ಗರ್ಜಿಸಲಾರಂಭಿಸಿದವು. ಅದರಿಂದಲೇ ಪ್ರಮತ್ತವಾಗಿ ಎದ್ದು ಎಷ್ಟೋ ಚಿರತೆಗಳು ಸೇರಿ ಜಗಳ ಮಾಡಿದವು. ಕರಿಕಿವಿ ಹುಲಿಗಳಿಂದ ಜಗಳಾಡಿ ಅವರ ನಳಿಕೆಗಳನ್ನು ಹೊಡೆದು ಅದರಲ್ಲಿರುವ ತಿರುಳನ್ನು ಉದುರಿಸಿ ತಿಂದರು. ನಾಯಿಗಳು ತಮ್ಮ ಸ್ನೇಹಿತರೊಡನೆ ಗಸ್ತ್ ಹೊಡೆಯುತ್ತಲೇ ಇದ್ದವು. ಒಂದೊಂದು ಮೂಳೆಗೂ ಸಹ ಸುಮ್ಮನೆ ತಿರಸ್ಕರಿಸುತ್ತಾ ಜಗಳ ಮಾಡುತ್ತಿದ್ದವು. ಕೊರಳಲ್ಲಿ ಕರುಳುಗಳನ್ನು ಹಾಕಿಕೊಂಡು ಸಂತೋಷ ಆಚರಿಸಿದರು. ಕಾಗೆಗಳು ತಿಲಕ ಹಚ್ಚಿಕೊಂಡು ಬ್ರಾಹ್ಮಣಾದವು. ತೋಳ ಪ್ರತಿಯೊಂದು ಗಟ್ಟಿ ಮೂಳೆಗಳನ್ನು ಮೂಸಿ ಅವುಗಳನ್ನು ಮಿದುವಾದ ಹಲ್ವ ಮಾಡಿತು. ಎಲ್ಲಿ ಮಹನೀಯ ಒಂಟೆಯ ದೊಡ್ಡ ರುಂಡ ಬಿದ್ದಿದೆಯೋ ಅಲ್ಲಿ ತೋಳ ಅದರ ಪಕ್ಕದಲ್ಲಿ ಕೊರಳಿನ ಹಾರವಾಗಿದೆ. ಕರಡಿಯ ನಾಲಿಗೆಯ ಶಕ್ತಿಯಾಯಿತು. ಒಂದೊಂದು ಕಾಲು ನೆಕ್ಕುವವರಿಗೆ ದಣಿದುಹೋದ. ಪ್ರತಿಯೊಬ್ಬರೂ ಮೇಣಕೊಬ್ಬಿನ ಹೊದಿಕೆಯನ್ನು ಅಡಿಯಿಂದ

ಮುಡಿಯುವರೆಗೆ ಉಸಿರಾಡಲು ಮುಖ ಬಿಟ್ಟು ಹೊತ್ತಿಕೊಂಡು ನೇತಾಡುತ್ತ ತಿರುಗಿದರು. ಬೆಕ್ಕುಗಳು ಪಂಜರದ ಅತ್ಯುತ್ತಮ ಮನೆಯಲ್ಲಿ ಕುಳಿತು ರಂಧ್ರಗಳಿಂದ ದೃಷ್ಟಿಹಾಕಿ ಇಣುಕಿ ನೋಡಿತ್ತಿದ್ದವು. ಆನೆಗಳ ಎಷ್ಟೊಂದು ಪಂಜರಗಳು ಖಾಲಿಯಾಯಿತೆಂದರೇ ಹೆಗ್ಗಿಡುಗನ ಮರಿಗಳು ತಮ್ಮ ಮನೆ ತಯಾರಾಗಿದೆ ಎಂದು ತಿಳಿದವು. ಗಾಳಿ ಮಾಜರನ ಪಂಜರವನ್ನು ಬಿಚ್ಚಿದರೆ ಜೀವದಾಸೆ ಬಿಟ್ಟು ಮೀನನ್ನು ಹಿಡಿದಿರುವ ಹಾಗೆ ಕಂಡಿತು. ಇವೆಲ್ಲ ಸೇರಿ ಗುಡುಗುತ್ತ ಓಡಾಡುತ್ತಿವೆ. ಇಂತಹದರಲ್ಲಿ ಬಿರುಗಾಳಿಗಿಂತ ದೊಡ್ಡ ಚಂಡಮಾರುತ ಎದ್ದಿತು. ಸಂಧ್ಯಾತರು ಕುರ್ಕುರೆ ಬಾರಿಸುತ್ತ ಸಹಸ್ರಾರ ಸಂಖ್ಯೆಯಲ್ಲಿ ರಣಕೇದರ ಸೈನ್ಯ ಬಂದಿತು. ಎತ್ತರದ ಕರಿ ಮುಖ ಕರ್ರನೇ ದೊಡ್ಡ ಉಗುರು ಅವರ ಖಡ್ಗಗಳು ಹಾಗೂ ಹಲ್ಲು ಕಠಾರಿ, ಅನೇಕ ಗುಂಪುಗಳಲ್ಲಿ ಹಂಚಿಹೋದರು. ಕುರೂಪಿ ಹೆಸರಿನವರು ಹಾಗೂ ಶರೀರದವರು ಪುನಃ ಪುನಃ, ಅಗ್ನಿ ಗಾಳಿಯ ಉಡುಪನ್ನು ಧರಿಸಿ ನಂತರೆ ಎಲ್ಲೋ ಹಗಲಾಗುವುದು ಮತ್ತೆಲ್ಲೋ ಇರುಳು ಸಂತೋಷದಿಂದ ರಣದ ಯಾತ್ರೆಗೆ ಬಂದರು. ಮನಸ್ಸಿಗೆ ಬೇಕಾದದ್ದೆಲ್ಲ ಬಹಳಷ್ಟು ತಿಂದರು ವಿಧವಿಧವಾದ ಆಹಾರದಿಂದ ತೃಪ್ತಿ ಪಟ್ಟು ಬೇಗನೇ ಮದ್ಯದ ಸಭೆ ಶೂರರು ಅಲಂಕರಿಸಿದರು. ಅಮಲೇರಿಸುವ ಮದ್ಯದ ಕೊಡಗಳನ್ನು ತುಂಬಿದ್ದವು. ಪ್ರತಿಯೊಬ್ಬ ತಿರುಕನ ಕೈಯಲ್ಲಿ ಮದ್ಯ ಕುಡಿಯಲು ತಲೆ ಬುರುಡೆ ಇತ್ತು. ಭಲ್ಲೆಗಳಲ್ಲಿ ಶರೀರದ ಮೇಲೆ ಶರೀರ ಪೋಣಿಸಿದ್ದವು. ಖಡ್ಗಗಳ ಮೇಲೆ ಸೀಖ಼ನ ಹಾಗೆ ಹುರಿಯಲಾಗಿತ್ತು. ಪ್ರತಿಯೊಬ್ಬನೂ ನಕಲು ಮಾಡಿ ಸಂತೋಷದಿಂದ ಕಬಾಬ್ ತಿನ್ನುವವನು. ಗೊರಸಿನ ಬಟ್ಟಲುಗಳಲ್ಲಿ ತುಂಬಿಕೊಂಡು ಮದ್ಯ ಕುಡಿಯುವನು. ಲೋಟಗಳನ್ನು ಕುಡಿಯುತ್ತ ಕುಡಿಯುತ್ತ ಲಘುವಾಗಿ ಅಮಲೇರುತ್ತಾ ಮನಸನ್ನು ಸೆರೆಹಿಡಿಯುವ ಸಂಗೀತನೃತ್ಯದ ಉತ್ಸವ ಆಚರಿಸಿದವು. ಶೈತಾನಗಳಲ್ಲಿ ಆಸಕ್ತಿ ಹುಟ್ಟಿತು. ಪ್ರತಿಯೊಂದು ಜೀವದಲ್ಲಿ ಪ್ರಬಲ ಆಸೆ ಪ್ರಕಟಿಸಿತು. ತಲೆ ಲೋಟಗಳನ್ನು ಚೆನ್ನಾಗಿ ಬಿಡಿಸಿ ನರಗಳನ್ನು ಕಟ್ಟಿ ತಂತಿ ಹಾಗೆ ಬಾರಿಸಿದರು. ಒಂಟೆಯ ಪಕ್ಕೆಲಬಿನ ಬಿಲ್ಲುಗಳನ್ನು ಮಾಡಿದವು. ಪಂಜರದ ಡೊಲ್ಲನ್ನು ಅಲಂಕರಿಸಿ ವಿಚಿತ್ರ ವಸ್ತು ತೋರಿಸಿದರು. ಒಳ್ಳೆ ಸಂಗೀತ ಬಾರಿಸುವ ಕಡೆ ತಂತಿಗಳನ್ನು ಬಿಗಿದರು. ತಾಳ ಅಂತೂ ಆನೆ ಗಂಟೆಯ ಶಬ್ದವಾಯಿತು. ತರಂಗ, ಮುಂಡದ ಡೊಳ್ಳು ವಾದ್ಯಗಳಾದವು. ಈ ದುರ್ದೈವಿಯರ ಮನಮೆಚ್ಚಿಸಲು ನರ್ತಕಿಯರ ಅನೇಕ ಗುಂಪುಗಳು ಬಂದು ನಿಂತವು. ರೆಕ್ಕೆ ಹೊಡೆದ ತಕ್ಷಣ ಮೋಸದ ರಣರಂಗದ ದಿನವಾಯಿತು. ಅತಿಯಾಶೆ ತನ್ನ ಎತ್ತರಕ್ಕೆ ಏರಿತು. ಕಾಗೆಯ ಕಂಠ ಘೋರ ಉತ್ತಮ ವಾದ್ಯವಾಯಿತು. ಸುಂದರ ಸನ್ಯಾಸಿನಿ ತನ್ನ ವಸ್ತ್ರಗಳನ್ನು ಕಳೆದು ಅಡಿಯಿಂದ ಮುಡಿವರಿಗೆ ಅಲಂಕರಿಸಿಕೊಂಡು ಕುಣಿದರು. ನವಯವ್ವನದ ಹೊಸ ಋತು ವಯ್ಯಾರೆಯನ್ನು ತೋರಲು ಮಡಿಲನ್ನು ತೆಗೆದುಕೊಂಡು ತನ್ನ ಎದೆ ಮೇಲೆ ಕಟ್ಟಿಕೊಂಡರು. ಚಂದ್ರಮುಖಿಯರು ಗಂಟನ್ನು ಬಿಚ್ಚಿ ಬಾವುಟ ಮಾಡಿದರು. ಧ್ವಜದ ತಲೆಯನ್ನು ತೆರೆದು ಲಂಗಗಳನ್ನು ಮಾಡಿಕೊಂಡರು, ಆನೆದಂತದ

ತುಂಡುಗಳು ಕಡಗಳಾಯಿತು, ಯಾವ ಉಗುರು ಉದುರಿತ್ತೋ ಅವುಗಳನ್ನು ಕೈ ಬಳೆ ಮಾಡಿಕೊಂಡರು. ದೊಡ್ಡ ದೊಡ್ಡ ಮುತ್ತುಗಳನ್ನು ಹೆಚ್ಚಾಗಿ ಆರಿಸಿಕೊಂಡು ಮಿನುಗುವಂತೆ ಆಭರಣಗಳನ್ನು ಮಾಡಿಕೊಂಡರು. ಕುದುರೆಗಳ ಕಡಗವನ್ನು ತನ್ನ ಕಾಲಿನ ಕಾಲ್ಕಡಗ ಮಾಡಿಕೊಂಡರು. ಮದ್ಯ ಕುಡಿದು ಮೂರ್ಛೆ ಹೋದರು. ತಲೆ ಸರಿಸಿ ಗಂಗಾದನ್ ಮಾಡಿದರು. ಚೋಪದ ಎಣ್ಣೆ ಹಚ್ಚಿ ಮುಖ ಮಂಜನ ಮಾಡಿದರು. ರಕ್ತದ ಲೇಪನ ಹಾಗೂ ಮೇಣದ ಅಂಜನ ಈ ವಸ್ತುಗಳಿಂದ ತನ್ನನ್ನು ಅಲಂಕರಿಸಿ ಕ್ಷಣಕ್ಷಣಕ್ಕೂ ಸುಂದರವಾಗಿ ಕಾಣಿಸುತ್ತಿದ್ದರು. ಉಕ್ಕಿನ ಕವಚಗಳಿಂದ ಸಣ್ಣ ಕನ್ನಡಿಯನ್ನು ತೆಗೆದರು. ನೃತ್ಯಗಾರರ ಗುಂಪು ಸಿದ್ದವಾಗಿ ಜಲಾಜಲ್‌ವನ್ನು ಗೆಜ್ಜೆ ಕಾಲಿಗೆ ಕಟ್ಟಿ, ಹಂದಿಯ ಹಸ್ತ ತುರಾಯಿ ಮಾಡಿಕೊಂಡು ತಲೆಮೇಲೆ ಇಟ್ಟುಕೊಂಡರು. ಶೂರರ ಕೊರಳಲ್ಲಿ ಮೊಟ್ಟೆಗಳ ಹಾರ ಹಾಕಿದರು ಎಲ್ಲರೂ ಅಮಲೇರಿ ಆಸಕ್ತಿಯಿಂದ ಬಾರಿಸುತ್ತ ಕುಣಿಯತ್ತ ಉತ್ಸವ ಆಚರಿಸುತ್ತಿದ್ದರು. ಇನ್ನು ಹೆಚ್ಚು ಸಂತೋಷಪಟ್ಟು ಮತ್ತಷ್ಟು ತಮಾಷೆ ನೋಡುತ್ತಲೇ ಇದ್ದರು. ಪ್ರಾಣ ಸಖ ಅಗ್ನಿಸಂತತಿಯಾಗಿ ಅವರನ್ನು ಮನಸಾರೆ ಮೆಚ್ಚಿ ಅಡಿಯಿಂದ ಮುಡಿಯವರೆಗೆ ಬೆಂಕಿಯಾಗಿ ಉದ್ರೇಕಗೊಂಡು ಸಿಡಿಲಿಂದ ಹೆಚ್ಚಾಗಿ ಗುಡುಗುತ್ತಾ ಹೊರಟರು. ಪ್ರಿಯರ ವಯ್ಯಾರ ನೋಡಿ ತನ್ನ ವಿವೇಕ ಕಳೆದುಕೊಂಡು ಶರೀರದ ಬಟ್ಟೆ ಎಲ್ಲ ಹರಿದು ಚೂರು ಚೂರು ಮಾಡಿಕೊಂಡರು. ಈ ಗೊಂದಲದಿಂದ ಇಂದ್ರಲೋಕದಲ್ಲಿ ಕೊಲಾಹಲ ಉಂಟಾಯಿತು. ಪಾದದ ಸಪ್ಪಳದಿಂದ ಪಾತಾಳದಲ್ಲಿ ಬಿರುಕು ಉಂಟಾಯಿತು. ಪ್ರತಿಯೊಂದು ದೆವ್ವದ ಹಾಸ್ಯಾಸ್ಪದ ಭಾವಚಿತ್ರ ನೋಡಿ ನೋಡುವವರ ದೃಷ್ಟಿಯು ಸಹ ಕುರೂಪಿ ಆಯಿತು. ಬೆಕ್ಕು ಹೆದರಿ ಭೂಮಿಗೆ ನುಗ್ಗಿತು. ಪ್ರತಿಯೊಬ್ಬ ಶಪಿತ ಬಿದ್ದು ಬಿದ್ದು ನಕ್ಕ. ಅಯ್ಯೋ ಪಾಪವೆಂದು ಕರುಣೆ ತೋರಿ ಎಬ್ಬಿಸ ಬೇಕಾಯಿತು. ಅತಿ ಭಯದಿಂದ ತನ್ನ ಉಸಿರನ್ನು ಎಳೆದುಕೊಂಡಿತು. ವನ್ಯ ಮೃಗಗಳು ಆ ಕಡೆಯಿಂದ ತನ್ನ ದೃಷ್ಟಿ ತಿರಿಗಿಸಿಕೊಂಡು ತಮಾಷೆ ನೋಡುವುದರಲ್ಲಿ ಮಗ್ನರಾಗಿ ಸಂತುಷ್ಟವಾಗುತ್ತಿದ್ದವು. ಕರಡಿಯ ನಯನಗಳಲ್ಲಿ ಪ್ರಮತ್ತದ ಬಣ್ಣ ಇಳಿದು ಅನೇಕರು ತಮ್ಮ ಕೈಯಿಂದಲೇ ಸಂತೋಷದ ನಡೆಯಿಂದ ದಂಗು ಬಡಿದರು. ಆವೇಶದಲ್ಲಿ ಬಂದು ಕರಡಿ ನಿಂತರೆ ಪ್ರತಿ ತಾಳಕ್ಕೆ ಕಾಲು ಮುಗಿದರು. ಪ್ರತಿಯೊಬ್ಬಳು ಪ್ರಿಯೆ ಕೋಪ ಮಾಡಿದಾಗ ಪ್ರಿಯನ ದೃಷ್ಟಿಯಲ್ಲಿ ಕತ್ತಲೆ ಆವರಿಸಿತು. ಹುಲಿ ಕಣ್ಣುಗಳ ರತ್ನಗಳನ್ನು ನಿವಾಳಿಸಿತು. ತೋಳ ತನ್ನ ಅತ್ಯುನ್ನತ ಕೆಂಪು ರತ್ನದಂತಹ ಕಣ್ಣುಗಳನ್ನು ನಿವಾಳಿಸಿತು. ಪ್ರತಿಯೊಬ್ಬನೂ ತನ್ನ ಘಟನೆಗಳನ್ನು ವಿವೇಕದಿಂದ ಬಿಚ್ಚಿಟ್ಟಾಗ ಬಾಧೆ ದೂರಾಗಿ ಮೈ ಹಗುರವಾಯಿತು. ನಾಯಿಗಳು ಕರುಳಿನ ಹಾರಗಳನ್ನು ತಂದು ಕೊರಳಲ್ಲಿ ಹಾಕಿದವು. ನರಿಗಳು ಕೊಬ್ಬಿನ ಪದರ ಹೊದಿಸಿದವು. ಗಂಡು ಕರಡಿ ಮೋಹಕ್ಕೊಳಗಾಗಿ ಹೆಣ್ಣು ಕರಡಿಗೆ ಗೌರವಿಸುತ್ತ ಎದ್ದು ಅದಕ್ಕೆ ಕೆಂಪು ಮಕ್ಮಲಿನ ಸಿಂಹಾಸನ ಕೊಟ್ಟಿತು. ಕೊಂಚ ಅರಿಕೆ ಪಟ್ಟು

ಅಭಿಲಾಷಿಗಳ ಮನಸಲ್ಲಿ ಯಾರ ಮನಸಲ್ಲೂ ಎಳ್ಳಷ್ಟು ಆಕಾಂಕ್ಷೆ ಏರಲಿಲ್ಲ. ಈ ಉತ್ಸವಕ್ಕೆ ಮುಕ್ತಾಯದ ಹಂತದಲ್ಲಿ ತಂದಾಗ ಗೆಳತಿಯರು ಶಾಹನ ವಿಜಯ ಹಾಡಿದರು. ಇದನ್ನು ಕೇಳಿ ಶಾಹರು ಪ್ರಸನ್ನರಾದರು ಹಾಗೂ ಓ ಅಲ್ಲಾಹರೇ ಶಾಹನಿಗೆ ನಿತ್ಯವೂ ಜಯ ಕೊಡು. ಇಡೀ ಭೂಮಿಯನ್ನು ವಧುವಿನ ಉಡುಪು ಧರಿಸು ಎಂದು ದೇವಚರರು ಶಾಹರಲ್ಲಿ ಒಳ್ಳೆ ಗುಣಗಳನ್ನು ಕಂಡು ಪ್ರಾರ್ಥಿಸಿದರು. (೪೬೬೬-೫೧೬೫)

■

*

ಅಧ್ಯಾಯ – ೧೦

ಬಾದಶಾಹ ವಿಜಯ ಸಾಧಿಸಿದ ಸುದ್ದಿ ಕೇಳಿ ಉತ್ಸವ ಆಚರಿಸಿದ ಗುಣ ಭಾಗ್ಯಶಾಲಿ ಜನರ ಮೇಲೆ ತನ್ನ ಇನಾಮುಗಳ ಸುರಿಮಳೆ

ಭಲೆರೇ! ಲೋಕದ ಮಹಾದೇವನೇ ನಿನ್ನ ಕೃಪೆ ಒಮ್ಮೆ ದುಃಖ ತೋರಿಸಿ ಅತಿಹೆಚ್ಚಾಗಿ ಸಂತೋಷ ಪಡಿಸುವೆ. ಒಮ್ಮೆ ಒಂದು ಕ್ಷಣದಲ್ಲಿ ಹೃದಯದ ಮೇಲೆ ಭಾರ ತಂದಿಡುತ್ತಿಯಾ. ಇರುವವರಿಗೂ ಸಂತೋಷದ ಉಮೇದಾರನ್ನಾಗಿರಬೇಕು ಎಂದು ಸುವಾರ್ತೆ ಬರುತ್ತದೆಯೋ ಅದರ ಮುಂಜಾನೆ ಈದ ಕಾಣಿಸಲ್ಪಡುತ್ತದೆ. ಅದೇ ರಾತ್ರಿ ಮೊದಲಿಗೆ ಶಾಹರು ಶತ್ರುವಿನ ಅಧಮ ಸೈನ್ಯ ಹೊರಟು ಹೋದ ಸುದ್ದಿ ಕೇಳಿದರು. ಒಬ್ಬರಾದ ಮೇಲೆ ಒಬ್ಬ ಸರದಾರ್ರ ಪಂಕ್ತಿ ಆಕ್ರಮಿಸಲು ಓಡಿತು. ಆಗ ಆದಿಲ್ ಶಾಹ ಮಹಾಬಲಿ ಮೌನವಾಗಿ ಸಿದ್ಧರಾದರು. ಕೋಟೆ ಮೇಲೆ ಯಾವ ಸಾಮಾನಿನ ಅವಶ್ಯಕತೆ ಇತ್ತೋ, ತಡ ಮಾಡದೆ ಶೀಘ್ರವಾಗಿ ಕಳಿಸುತಿದ್ದರು. ಸುತ್ತಲಿದ್ದ ತೋಪುಗಳನ್ನು ತುಂಬಿಸಿದರು. ತನ್ನ ಕೈಯಲ್ಲಿ ಹುಖ್ಖಗಳ ಏಟುಗಳನ್ನು ಇಟ್ಟಕೊಂಡರು. ಎಲ್ಲ ಕಾರ್ಯಕರ್ತರು ಸಿದ್ಧರಾಗಿ ಬೇಗನೇ ಕೆಲಸ ಮಾಡಲಾರಂಭಿಸಿದರು. ದಡೆ ದಡೆಯಲ್ಲಿ ಸಹಸ್ರಾರು ದೀಪಗಳನ್ನು ಜೋಡಿಸಿದರು. ತಗಟ್(ಒಂದು ಬಗೆಯ ಜರಿ ಬಟ್ಟೆ)ಕೋಟೆಗೆ ತಾಗಿಸಿ ಮಿನುಗುವಂತೆ ಮಾಡಿ ಆಕಾಶದತ್ತ ದೃಷ್ಟಿಯಿಟ್ಟು ಬಾಣಗಳನ್ನು ಇಟ್ಟರು. ಪರಿಭಾವನೆಗಳನ್ನು ಹಾರಿಸಲು ಪ್ರಾಣಗಳನ್ನಿಟ್ಟರು. ವಿವಿಧ ರೀತಿಯ ತಲೆಗಳನ್ನು ಹೊಡೆದು ತಿನ್ನಲು ತನ್ನ ಕರೇಲಗಳ ಹಲ್ಲುಗಳನ್ನು ಮಸೆದರು. ಕಣ್ಣುಗಳ ಜೀವದ ಪ್ರಜ್ಞೆಯನ್ನು ಹರಿಸಲು ಅಂಬಲಿಗೆ ಮನಸಲ್ಲಿ ಆವೇಶ ಬರಲಾರಂಭಿಸಿತು. ಎದುರಾಳಿಗೆ ಅಗ್ನಿಕುಂಡದಲ್ಲಿ ಹುರಿಸಲು ಕೆಲಸದಾಳಗಳು ಬೆಂಕಿ ಸುರಿಯಲು ಕಾಯುತ್ತಿದ್ದರು. ಶಾಹರ ಮಾರ್ಗದರ್ಶನ ತಲುಪಿಸಲು ಎಲ್ಲ ಜಾಗದಲ್ಲಿ ಆನೇಕ ಬುರ್ಜಿಗಳ ಮೇಲೆ ಶಾಹರು ಕುಳಿತರು. ಜ್ಞಾಪಿಸಿಕೊಂಡು ಹೇಳಿದರು. ಆ ಜವಾನರೆಲ್ಲಿದ್ದಾರೆ ಅವರ

ದೃಷ್ಟಿಯಲ್ಲಿ ಆಕಾಶವೇ ಇರಲಿಲ್ಲ ಅವರ ತಮಾಶೆಯ ಸಮಯ ಇಂದು ಬಂದಿದೆ. ಆದರೆ ಆ ತಮಾಶೆ ಈವತ್ತು ನನ್ನ ಕೆಲಸಕ್ಕೆ ಬರುತ್ತದೆ. ಅದೇ ತಮಾಶೆ ನೋಡಲು ನನ್ನ ಪ್ರತಿಯೊಂದು ಬರ್ಜಿ ಛಜ್ಜೆಯಾಗಿದೆ. ಖಂದಕದ ಒಳಗಿನ ಆಟ ನೋಡೋಣ ಕೊಂಚ ಆ ರಣಧೀರ ಅವರನ್ನು ಹೇಗೆ ಪಾರು ಮಾಡುತ್ತಾರೆ. ಇಂದು ಕೆಟ್ಟ ವಸ್ತು ಸಹ ಒಳ್ಳೆಯದಾಗುತ್ತದೆ. ಕೆಟ್ಟ ಆಟಗಳಿಗೂ ಸಹ ಒಳ್ಳೆ ಬಣ್ಣ ಸಿಗುತ್ತದೆ ಎಂದು ಹೇಳಿದರು. ಸಶಸ್ತ್ರಗಳೊಂದಿಗೆ ಕೋಟೆಗೆ ಸಿಗಿಸಿ ಕಾಲುಗಳನ್ನು ತಗೆದು ಶತ್ರುಗಳ ಹೆಸರನ್ನು ಕಂದಕದಲ್ಲಿ ಮುಳುಗಿಸಿ, ಅಲ್ಲೇ ಶಾಹರು ಈ ಮಾತು ಹೇಳಿದರು ಇಂದು ದೇವರಿಚ್ಛಿಸಿದರೆ ನನಗೆ ಫುರಸತ್ತು ಸಿಕ್ಕಿದೆ. ಸೈನ್ಯದ ಸಾಲುಗಳಲ್ಲಿ ನುಗ್ಗಿ ಯುದ್ಧ ಮಾಡಿದ ಈ ಜೀವಕ್ಕೆ ಈ ಕೋಟೆ ಮೇಲೂ ಯುದ್ಧ ಆಡಿಸಬೇಕೆಂದಿದ್ದೇನೆ. ದೇವರಾಣೆಗೂ ಇಂದು ಯಾವರೀತಿಯ ಆಕ್ರಮಣ ಮಾಡುವೆ ಎಂದರೆ ಸುರಂಗ ರಕ್ತದಿಂದ ತುಂಬಿ ಅದನ್ನು ಖಂದಕ ಮಾಡುವೆ. ಹೇಗೆ ಎಂದರೆ ಶತ್ರುಗಳ ಮೇಲೆ ಯುಗ ಯುಗದವರೆಗೆ ಇಡೀ ಪ್ರಪಂಚ ಹೀಗೆ ಹರಿಯುತ್ತಿರಲಿ. ಏಟು ತಿಂದು ಓಡಿ ಹೋದವನ ಜೀವವೂ ಒಂದು ಜೀವವೇ. ಅದಾಗ್ಯೂ ಸದಾ ನಾನು ಗಟ್ಟಿಮನಸ್ಸುಳ್ಳವ, ಆಕ್ರಮಿ, ಆದರೆ ಇಂದು ನಾನು ಮಂಗಳ ಗೃಹದಂತೆ ರಕ್ತಪಾತ ಮಾಡುವವನಾಗಿದ್ದೇನೆ. ಈ ಶಾಹನೊಡನೆ ರಾತ್ರಿ ಬಾಕಿಯಾಗಿರಲಿ. ಇದೇ ಹತ್ತಿರದಿಂದ ಗರ್ಜಿಸುತ್ತಿದೆ. ಇಡೀ ರಾತ್ರಿ ಬಹಳಷ್ಟು ಕೆಲಸಗಳನ್ನು ಮಾಡಿ ಆಕ್ರಮಣ ನಿರೀಕ್ಷಿಸಿದರು. ಹಟಾತ್ತನೇ ಚತುರ ಆಕ್ಾಶ ವೇಗವಾಗಿ ನಡೆಯುವವ ಮುಂಜಾನೆ ಓಡುತ್ತಾ ಸುದ್ದಿ ತಂದಿತು. ಅಂದರೆ ಶಾಹನ ಭಾಗ್ಯದಿಂದ ನಾವು ಶತ್ರುವನ್ನು ಮುರಿದು ಹಿಂಬಾಲಿಸಿದ್ದೇವೆ. ಮುಘಲರ ಹುಲಿ ಹಾಗು ಶರ್ಝಗಳ ಮುಂದೆ ಅಧೋಗತಿಯಾಗಿ ಬಿದ್ದು ಬಿಟ್ಟರು. ಈ ರೀತಿ ಪರಾಜಯಗೊಂಡರು. ಜೀವದಾನ ಕೊಡದೇ ಇದ್ದರೂ ಸಹ ಯಾವ ವ್ಯತ್ಯಾಸವಿರಲಿಲ್ಲ. ತನ್ನ ಬೆವರಿನಲ್ಲೇ ಎಲ್ಲರೂ ಮುಳುಗಲಿದ್ದರು. ಈ ಸುವಾರ್ತೆ ಶಾಹರ ರೋಷನ್ ಮಹಲಿಗೆ ಬಂದಿತು. ಆದಾಗ್ಯೂ ಅದರ ಹೆಸರು ಪುಟಾಣಿ ದೇಶ, ಆದರೆ ಅದು ಮಹನಿಯತೆಗೆ ಇರುವ ಯೋಗ್ಯವಾದ ಸ್ಥಳ, ವಂಶಪಾರಂಪರೆಯಾಗಿ ಆದಿಕಾಲದಿಂದಲೂ ಸದಾ ನಂಬಿಕಸ್ಥರು. ಶಾಹನ ಸೇವೆಯಲ್ಲಿ ಅರ್ಪಣಾಭಾವರಾದವರು. ದೊಡ್ಡ ಕಾರ್ಯಗಳ ಮೇಲೆ ಹತೋಟಿ ಇಡುವರು. ಶಾಹರ ದರ್ಬಾರದಲ್ಲಿ ಯೋಗ್ಯವಂತರು ಇರುವರು. ಬಾದಶಾಹನ ದರ್ಬಾರದಲ್ಲಿ ಪಾಂಡಿತ್ಯ ಹೊಂದಿದವರೆಲ್ಲ ಒಂದು ಖಜಾನೆಯಂತೆ. ಸೂಕ್ಷ್ಮಮತಿಗಳು ಸಿಗುವಂತಹ ಬಣ್ಣ ತುಂಬಿದ ಮನೆ ಅದು. ಅವರ ಅನುಮತಿಯ ಮೇರೆಗೆ ಬಾದಶಾಹರ ಸಂಬಂಧಿಸಿದ ಇರುಳಿನ ಅನೇಕ ಕಾರ್ಯಗಳೆಲ್ಲವೂ ಅವಲಂಬಿಸಿದೆ. ಅವನ ಬಳಿ ಸದ್ವರ್ತನೆ ಕಣ್ಣಾರೆ ಕಾಣಿಸುತ್ತದೆ. ನಿಷ್ಠೆಯ ಅತ್ಯುತ್ತಮ ಸಂತೋಷದ ಒಂದು ಲೋಕ, ಸಜ್ಜನತೆಯ ಒಂದು ಲೋಕವೇ ಇಡುವವನು. ಬುದ್ಧಿವಂತಿಕೆಯ ನಾವೆ ಅವನ ಸಹಜಪ್ರವೃತ್ತಿ ಒಂದೊಂದು ಮಾತು ಸಹ ನಿಸ್ಸಂದೇಹವಾಗಿ ಅಮೂಲ್ಯ ಪಂಕ್ತಿಯಂತೆ.

ವಿಜಯದ ಸುವಾರ್ತೆಯನ್ನು ಕೇಳಿದಾಗ ಅವನು ಹೆಸರಾಂತ ಮಂತ್ರಿಗಳ ನಿವೇದನೆ ತೆಗೆದುಕೊಂಡು ಶಾಹರ ಸೇವೆಯಲ್ಲಿ ಬಂದು ಪ್ರಾರ್ಥಿಸುತ್ತ ವಿಜಯದ ಉದ್ದೇಶವನ್ನು ಮೌಖಿಕವಾಗಿ ಹೇಳಿದ. ಶಹಿನ್ಷಾಹರು ಅದನ್ನು ಕೇಳಿ ಅಲ್ಲಾಹನ ಪ್ರಶಂಸೆ ಮಾಡಿ ಅದನ್ನು ಓದಲು ಆ ವ್ಯಕ್ತಿಗೆ ಕೊಟ್ಟರು ಎಂದೂ ಧರ್ಮನಿಷ್ಠೆಯ ಮೇಲೆ ನಿತ್ಯವೂ ಆಕ್ರಮಣಿಸುವುದು ಅವನಿಗೆ ಯೋಗ್ಯ, ಅವನ ಹೆಸರು ಧರ್ಮಾಜಿಪಂಡಿತ. ತನ್ನ ಯೋಗ್ಯತೆಯಿಂದ ಹೆಸರು, ಪ್ರಖ್ಯಾತಿ, ಮಹನಿಯತೆ ಪಡೆದವ. ಶಹಿನ್ಷಾಹರ ನಂಬಿಕಸ್ಥ ಹಿರಿಯ. ಅವನ ದೃಷ್ಟಿ ಕಾಣುತ್ತಿದ್ದ ಹಾಗೆ ಎಂದೂ ಉತ್ತಮ ಹೆಸರು ಹೆಚ್ಚಿಸಲಾಗುತ್ತಿರುತ್ತದೆ. ಹೂವಲ್ಲಿ ಬಣ್ಣ ಮತ್ತು ಸುಗಂಧ ಹೇಗಿರುತ್ತದೆಯೋ ಹಾಗೆಯೇ ನಿತ್ಯವೂ ಅವನ ಜೀವನದಲ್ಲಿ ನೀತಿ ನಡತೆ ಹಾಗೂ ಹಿರಿಮೆ ಇರುತ್ತದೆ. ತನ್ನ ಕಲೆಯಲ್ಲಿ ಅವನು ವಿದ್ವಾಂಸ ಅನ್ನಿಸಿಕೊಂಡಿರುವನು. ಇದಲ್ಲದೇ ಬೇರೆ ಕಲೆಗಳಲ್ಲೂ ಸಹ ಚಾಣಾಕ್ಯ ಅನ್ನಿಸಿದವನು. ರಾಜನ ಸಭೆಯಲ್ಲಿ ಬರೆಯಲ್ಪಟ್ಟಿದ್ದನ್ನು ನೋಡದೇ ಓದುವನು. ಬೇರೆ ಭಾಷೆಯನ್ನು ಸಹ ಬಲು ಕಲಾತ್ಮಕವಾಗಿ ಓದುತ್ತಿದ್ದ. ಬಾದಶಾಹರ ಬಳಿ ಹೋಗಬೇಕಾದರೆ ಅವನಲ್ಲದೇ ಬೇರೆ ಯಾವ ಮಾರ್ಗ ಸಹ ಇರಲಿಲ್ಲ. ಸಾಹೆಬರ ಸತ್‌ಸ್ವಭಾವ ನೋಡಿ ಮುಂದೆ ಹೆಜ್ಜೆ ಇಡುವನು. ಆಗ ಆ ವ್ಯಕ್ತಿ ತನ್ನ ಕಲೆಯಿಂದ ಹೊಳೆಯುವಂತೆ ಮಾಡಿ ಶಾಹೆ ಫಾಝಿರವರನ್ನು ಪ್ರಸನ್ನ ಮಾಡಿದ. ಮಂತ್ರಿಗಳ ಪರಿಶ್ರಮವನ್ನು ಶ್ಲಾಘಿಸಿ ತನ್ನ ದೃಷ್ಟಿಯಲ್ಲಿ ಎಲ್ಲರ ಮಹತ್ವವನ್ನು ಹೆಚ್ಚಿಸಿಕೊಂಡರು. ಮುಂಜಾನೆವರೆಗೆ ಮಡಿಲು ತನ್ನ ಭಾರವನ್ನು ಎತ್ತಿಟ್ಟಿತು ಮತ್ತು ಇರುಳು ವಿನೋದಾವಳಿಯನ್ನು ತೆಗೆದು ಕೊಂಡು ಹೊರಗೆ ಬಂದಿತು. ಆದ್ಯತೆ ಮೇರೆ ಮೊದಲನೆಯ ಕೆಲಸ ಮಾಡಿದ್ದೆಂದರೆ ಅದು ಸ್ನಾನ ಮಾಡಿ ಹೊಸ ಉಡಪನ್ನು ಧರಿಸಿ ಆಭರಣಗಳನ್ನು ತೊಟ್ಟುಕೊಂಡಿತು. ಜರಿಯಂತಹ ಒಂದು ಹೊಸ ಪೆಟ್ಟಿಗೆಯನ್ನು ತರೆಸಿತು. ಆಗ ಶಾಹ ಫಾಝಿರವರು ವಝ್ಹು (ಅಂಗಸ್ನಾನ) ಮಾಡಿ ಮುಂಜಾನೆ ನವಾಝು ಮಾಡಿದರು. ಭೂಮಿಗೆ ಆಕಾಶದಿಂದ ಮರ್ಯಾದೆ ಹೆಚ್ಚಿಸಲು ಹುಮಾಯೂನ್ ಮಹಲ್ ಕಡೆ ಹೊರಟರು. ಯುವ ಶಹಿನ್ಷಾಹ ಸಿಂಹಾಸನ ಏರಿದಾಗ ಆಕಾಶ ತನ್ನ ತಲೆ ಭೂಮಿ ಮೇಲಿಟ್ಟ. ಸೂರ್ಯ ಹೊರಗೆ ಬಂದು ಶಾಹರ ಮುಖ ನೋಡಿದಾಗ ಸಂತೋಷದಿಂದ ಅವನ ಮೇಲೆ ಜ್ಯೋತಿ ಹೆಚ್ಚುತ್ತಲೇ ಹೋಯಿತು. ಶಹಿನ್ಷಾಹರು ಎತ್ತರ ಕತ್ತಿನ ವಿಶೇಷ ಜನರಿಗೆ ಆಹ್ವಾನಿಸಿದರು. ಶಾಹ ಇಬ್ರಾಹೀಮಿನ ಪೋಶಿತ ಸ್ತ್ರೀ ಇಮ್ಮಡಿ ಶಾಹನ ಉನ್ನತ ಸ್ಥಾನದ ಸುಪುತ್ರ. ಬುದ್ಧಿವಂತ, ಸೌಜನ್ಯತೆಯಿಂದ, ಗೌರವದಿಂದ ಹುಸೈನಿ ಕುಲಜರಲ್ಲಿ ಉನ್ನತ ವಂಶದವ. ಅವನ ಪೂರ್ವಜರು ಆಧಿಪತ್ಯದ ಕೆಲಸಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮೋಹಿತರಾಗಿ ಒಳ್ಳೆ ಹೆಸರನ್ನು ಗಳಿಸಿದರು. ಯಾವ ನಿಷ್ಠಾವಂತನೂ ಎಂದಿಗೂ ಯಾವ ವಕ್ರತೆಯೂ ಮಾಡದೇ ತನ್ನ ಮಡಿಲನ್ನು ಧೂಳು ಎಬ್ಬಿಸಲು ಬಿಡಲಿಲ್ಲ. ನಂಬಿಕೆ/ವಿಶ್ವಾಸದಲ್ಲಿ ಹೆಸರು ಗಳಿಸಿದರು. ನಂಬಿಕೆ ಜೊತೆ ಸೇರಿ ತನ್ನ ಮಹನೀಯತೆಯನ್ನು ಹೆಚ್ಚಿಸಿಕೊಂಡರು.

ಈ ಸುಕುಮಾರ ಆ ಆದಿ ಮನೆತನದಿಂದ ಬಂದು ತನ್ನ ಮನೆತನದ ಹೆಸರು ಹೆಚ್ಚಿಸಬೇಕೆಂದಿದ್ದಾರೆ. ಅವರ ವರ್ತನೆ, ನಿಷ್ಠೆಯ ಸದ್ಪದ್ಧತಿ ಭಗವಂತನ ಸೃಷ್ಟಿಯೊಂದಿಗೆ ನಿತ್ಯವೂ ಸ್ನೇಹಿಯಾಗಿದ್ದರು. ಯಾರ ನಾಲಿಗೆಯಿಂದ ಶಾಹನ ಆಜ್ಞೆ ಕೇಳಿದರೋ ಆವಾಗಲೇ ಉದ್ದೇಶ ಆ ಮಾತಿನ ಮೇಲೆ ಹೊರಡುತ್ತಾ ಇತ್ತು. ಹುರ್ಝೂರ್‌ರವರ ಮುಂದೆ ಆ ಶೂರರ ಸಾಲು ಬಂದು ನಿಂತು ಮುಜುರೆ ಮಾಡಿದರು. ಇವೆಲ್ಲವೂ ಬಹಿರಂಗವಾಗಿ ದರ್ಬಾರಿನ ಶಿಷ್ಟಾಚಾರದಿಂದ ತುಂಬಿದೆ. ಆದರೆ ಹೃದಯ ವಿಜಯದ ಸಂತೋಷದಿಂದ ತುಂಬಿದೆ. ಲೋಕ ಉದ್ದೇಶಗಳ ಫಲ ಪಡೆಯಲು ವ್ಯಾಕುಲಗೊಂಡಿದೆ. ಆದ್ದರಿಂದ ಇನಾಮುಗಳ ವಸ ತಾಜವಾಯಿತು. ಶಾಹನ ಹೃದಯದ ಸಮುದ್ರ ತುಂಬುತ್ತ ತುಂಬುತ್ತಾ ಎತ್ತರ ತಲಪಿತು. ಎರಡು ಕೈಗಳ ಅಲೆ ಮುತ್ತು ಚಲ್ಲಾಟವಾಯಿತು. ಹೃದಯ ಆ ಕ್ಷಣ ಬಂದು ಶಾಹನಿಗೆ ಭೇಟಿಯಾದ. ಅದಕ್ಕೆ ಪ್ರಪಂಚದ ಎಲ್ಲ ಉದ್ದೇಶಗಳು ಪಡೆದುಕೊಂಡಿತು. ಅದೇ ಸಮಯದಲ್ಲಿ ಮಂತ್ರಿಗಳ ದ್ವಾರ ಪಾಲಕರು ಹಾಜರಾಗಿ ಮುಜರೆ ಮಾಡಿದರು. ಪ್ರತಿಯೊಬ್ಬನ ಅಸಲನ್ನು ತಿಳಿದು ಇನಾಮುಗಳನ್ನು ಕೊಟ್ಟರು. ಅನುಗುಣದ ಮೇಲೆ ತೆರೆಗೆ ಮರ್ಯಾದೆ ನೋಡಿ ಅವರನ್ನು ಗೌರವ ವಸ್ತ್ರ ಹಾಗೂ ತಾಂಬೂಲ ಕೊಟ್ಟರು. ಶಹಿನ್ಷಾಹರು ತಾವೊಬ್ಬರೇ ಸಂತೋಷವನ್ನು ಆಚರಿಸುವ ಬದಲು ಇಡೀ ನಗರದಲ್ಲಿ ಸಂತೋಷದ ಉತ್ಸವ ಆಚರಿಸಿ ಏಕೆಂದರೇ ಇಂದು ಕಡ್ಡಾಯವಾಗಿ ಉತ್ಸವ ಆಚರಿಸಲೇ ಬೇಕಾಗಿದೆಯೆಂದು ಕಾಣಿಸುತ್ತದೆ ಎಂದು ಹೇಳಿದರು. ಉತ್ಸವಕ್ಕೆ ವಿಶೇಷ ಸಂಗೀತ ಸಭೆ ಯೋಜಿಸಲ್ಪಟ್ಟಿತು. ಹೆಸರಾಂತ ಪ್ರತಿಷ್ಠರೆಲ್ಲ ಶಾಹರಿಗೆ ಬಂದು ಭೇಟಿಯಾದರು. ಅದರಲ್ಲೂ ವಿಶೇಷವಾಗಿ ಈ ರಾಜದರ್ಬಾರಿನ ಸಹವಾಸಿ, ನಿಷ್ಠೆಯ ಮುತ್ತು ಅಪ್ಪಟ ಸ್ನೇಹಿತ. ಅಲಿ ಅಂದರೇ ಆ ಹೆಸರಲ್ಲಿ ಮೆಚ್ಚುಗೆ ಇದೆ. ಅವನಿಗೆ ಸಹಾಯಕನಾಗಿ ಸದಾ ಮುರ್ತುರ್ಝೂರವರಿದ್ದಾರೆ. ಅವನ ಸಾಹಸ ಸಾಮರ್ಥ್ಯ ಬಾದಶಾಹರಿಗೆ ಸದಾ ಮೆಚ್ಚುಗೆಯಾಯಿತು. ಅವನ ಅತ್ಯುತ್ತಮ ಕರ್ಮ ಪ್ರಪಂಚಕ್ಕೆ ಅಧೀನಗೊಳಿಸಿಕೊಳ್ಳುತ್ತದೆ. ತೊಂದರೆಯನ್ನು ಹೂತಿಕ್ಕುವ ಶಕ್ತಿ ಅವನಲ್ಲಿದೆ. ಹೃದಯದ ಮೊಗ್ಗು ಮಾತಿನ ತಂಗಾಳಿಯಿಂದ ಅರಳುತ್ತದೆ. ಅವನ ಗೌರವಾನ್ವಿತ ಮಹನಿಯತೆಗೆ ಶೋಭಿಸುತ್ತದೆ. ಮಹನಿಯತೆಯಿಂದ ಪ್ರಪಂಚ ಮೋಸದ ಮನಸ್ಸು ಮಾಡಲು ಇಚ್ಛಿಸುವುದಿಲ್ಲ, ಅದರ ಒಳ್ಳೆಯ ರುಚಿ ಸುಖಿಸಬಹುದು. ಅವು ಪ್ರಪಂಚದಲ್ಲಿ ನಿಯತ್ತುಗಳು ಹೆಚ್ಚಿಸುತ್ತವೆ. ಐಶ್ವರ್ಯಕ್ಕಾಗಿ ತನ್ನ ಗುಣವನ್ನು ಹರಡಿಸುವರು. ನಿತ್ಯ ಈ ಮನೆಯಲ್ಲಿ ಪ್ರವೇಶಿಸಲು ನಿರೀಕ್ಷಿಸತ್ತಾರೆ. ಜನ್ಮ ನಿತ್ಯಕರ್ಮವೆಂದು ತಿಳಿದು ಅಲಿಶಾಹನ ಪ್ರೀತಿ ಏನೆಂದು ತಿಳಿದುಕೊಂಡು ಯುಗದ ದೃಷ್ಟಿಯಲ್ಲಿ ಜಾಗ ಮಾಡಿದೆ. ಆ ಶರೀರದಲ್ಲಿ ಆತ್ಮ ಜನ್ಮಕ್ಕೆ ಹುಡುಕಾಡಿದರೆ ಅದರ ರೋಮ ರೋಮದಲ್ಲಿ ಅಲಿಯ ಉಸಿರೇ ಸಿಗುವುದು. ಯಾರು ಈ ದರ್ಬಾರಿನ ಖಾಸಾ ಇದ್ದರೋ ಅವರೆಲ್ಲ ಸೇರಿ ಶಾಹರ ಮುಂದೆ ಬಂದು ಕುಳಿತರು. ಸುಲೈಮಾನರ ಆಜ್ಞೆಯಂತೆ ಅಪ್ಸರೆಯರ ತಂಡಗಳು ಹೊರಟವು. ಸೈನ್ಯಗಳಿಗೆ ಪ್ರೀತಿಯನ್ನು ಧಾವಿಸಲು

ಪೂರ್ಣ ಮಾಡಿತು. ಸಂಘರ್ಷಿಸುವುದು ಸೈನ್ಯದ ಕೆಲಸ. ದೊಡ್ಡ ವಾದ್ಯ ಸಾಧನಗಳೊಂದಿಗೆ ದೃಢರಾದರು. ಉತ್ಸವ ಆಚರಿಸಲು ಸುಂದರಿಯರ ಸೈನ್ಯ ತೆಗೆದುಕೊಂಡು ಬಂದರು. ದೂರದಲ್ಲಿ ಆನೆಗಳು ಸಂತೋಷದಿಂದ ಕೆಲವೊಮ್ಮೆ ಕಡಿಮೆ ಕೆಲವೊಮ್ಮೆ ಹೆಚ್ಚು ರಸ ಸುರಿಸುತ್ತಾ ನಿಂತಿದ್ದವು. ಅವರು ಯಾವಾಗ ಆಸಕ್ತಿಯ ಸುರಗಳನ್ನು ಏಬ್ಬಿಸಲು ಜಾಗ್ರತರಾಗಿ ತಾಳ ಹಿಡಿದು ಹಾಡಲು ಪ್ರಾರಂಭಿಸಿದಾಗ ಮದ್ಯಪಾನದ ಸರತಿ ನಡೆಯಿತು. ಅನುರಾಗದ ಪ್ರಭಾವ ಏರಿ ಪ್ರಜ್ಞೆ ಅಮಲೇರಿತು. ದೊಡ್ಡ ಸವಾರರಿಗೆ ಆನಂದೋದ್ರೇಕದ ಮಿಂಚುನೋಟ ಕೊಡಲು ತಾಳ ತರಂಗದೊಡನೆ ಜೋರಾಗಿ ಬಾರಿಸಲ್ಪಟ್ಟವು. ನಗಾರಿಗಳ ಒಂಟೆಗಳು ತಂಬೂರಿಯಾದವು. ಹೃದಯಕ್ಕೆ ಕೆಣಕುವ ಆಸೆ ಆಯಿತು. ಪ್ರತಿಯೊಂದು ಹೃದಯದ ಮೇಲೆ ಅನುರಾಗದ ಬಾಣ ಬಿಡುವ ಎಲ್ಲ ಸಲಕರಣೆಗಳೆಲ್ಲವೂ ಬಿಲ್ಲುಗಳನ್ನು ಎಳೆದುಕೊಂಡು ಗುರಿಮುಟ್ಟಿದಂತಾಯಿತು. ಸುರಮಂಡಲ ಬಾಣದ ಧೂಳು ಎದ್ದಂತೆ ಕಾಣತೊಡಗಿದವು. ರಸದ ಬಾಣಗಳನ್ನು ಕೆಣಕಿದರೆ ಸ್ವರಗಳು ಏಳುತಿದ್ದವು. ಭಲ್ಲೆಗಳ ತಲೆ ನಿಸ್ಸಂದೇಹವಾಗಿ ಉತ್ತಮವಾಗಿದ್ದು ಅಲಂಕೃತ ಗೀತೆಗಳು ಅದರ ಶೀರ್ಷಿಕೆ ಆಯಿತು. ರತ್ನ ಖಚಿತ ಸಶಸ್ತ್ರಗಳಲ್ಲಿದ್ದು ಅಂದರೆ ಅಲಂಕೃತವಾಗಿ ಒಬ್ಬ ಒಬ್ಬ ಸ್ತ್ರೀಯೂ ಅನೇಕ ದೊಡ್ಡಸವಾರರಿಗೆ ಕೆಣಕುತ್ತಿದ್ದಳು. ತನ್ನ ಮೋಹ ಹಾಗೂ ತೃಪ್ತಿ ವ್ಯಕ್ತಪಡಿಸಲು ಅಪ್ಸರೆಗಳು ತಮ್ಮ ರೆಕ್ಕೆಗಳನ್ನು ದಂಡಿನ ತಲೆ ಮೇಲೆ ಹರಡಿಸಿದವು. ಹೀಗೆ ಇಡೀ ಸೈನ್ಯ ಒಟ್ಟಿಗೂಡಿ ವೈಭವದಿಂದ ಪ್ರೀತಿಯಲ್ಲಿ ಯಾವಾಗ ಅಲೆಗಳೆದ್ದು ಬಿಸಿ ಏರಿದವೋ ಆ ದೃಶ್ಯ ನಿಸ್ಸಂದೇಹವಾಗಿ ನೋಡಬೇಕಾಗಿತ್ತು. ಬಾಣದಂತಹ ರೆಪ್ಪೆಗಳ ಹುಬ್ಬಗಳನ್ನು ಬಿಲ್ಲು ಮಾಡಿ ಕಣ್ಣುಗಳನ್ನು ಮುಚ್ಚಿ ಹಿಡಿದುಕೊಂಡು ನಡೆದರು. ಯಾವ ಕಡೆ ಗುಂಗುರು ತಲೆಕೂದಲಿನ ಬಿಲ್ಲು ಸ್ವಲ್ಪ ಡಿಕ್ಕಿ ಹೊಡೆದರೆ ಇಂತಹ ಪ್ರೀತಿಯ ಆಟದ ಕೈಯಲ್ಲಿ ಕಣ್ಣಿನ ಗದೆ ಹೃದಯಕ್ಕೆ ಚುಚ್ಚಲು ಹೀಗೆ ಮಾಡಿದವು. ಚಾತುರ್ಯ ಬಂದು ಕೀಟಲೆಯಿಂದ ಮುಖ ಕೊಟ್ಟಾಗ ತನ್ನ ಪ್ರೇಮದ ಖಡ್ಗದಿಂದ ಅದನ್ನು ವರ್ಣರಂಜಿತ ಮಾಡಿತು. ಪ್ರತಿಯೊಂದು ಅಲುಗಾಡುವ ತುಟಿ ಹರಿತ ಕಂಡ ಹಾಗೆ ಕಾಣುತ್ತದೆ. ಅದೇ ಮಧುರ ಶಬ್ದ ಪ್ರಾಣವನ್ನು ಹೊಡೆಯುತ್ತದೆ. ಗಾಳಿ ಅವರ ಮುಖಗಳ ಮೇಲೆ ಸುಗಂಧ ಹರಡಿಸಿದಾಗ ಪ್ರೀತಿಯ ಆದಿ ಗಾಯಗಳು ಮತ್ತೆ ಚಿಗುರಿದವು. ಹೆಚ್ಚು ಸುಂದರ ಮುಂದೆ ತಾಳ್ಮೆ ಸೋತಿತು. ಪ್ರೀತಿಯ ಶಕ್ತಿ ಬುದ್ಧಿಯನ್ನು ಕುತ್ಸಿಸಿತು. ಪ್ರೀತಿಯಿಲ್ಲದೆ ಅನುರಾಗಿಗೆ ಬಣ್ಣವಿಲ್ಲ. ನಗ್ನನಿಗೆ ಪ್ರೀತಿ ಬಿಟ್ಟರೇ ಯಾರು ಜೊತೆಗಾರ ಇಲ್ಲ. ಪ್ರೀತಿಯನ್ನು ತಿಳಯದೆ ಇರುವ ಸ್ತ್ರೀ ಆಗುವುದಿಲ್ಲ. ಪ್ರೀತಿಯಿಲ್ಲದೇ ಓಡಾಡುವುದು ಚತುರತೆ ಅಲ್ಲ. ಪ್ರೀತಿಯ ಹೆಸರು ಸೃಷ್ಟಿ ಮೌನವಾಗಿ ತೆಗೆದುಕೊಳ್ಳುತ್ತದೆ. ಆದರೆ ಪ್ರೀತಿಯ ಛಾಯೆ ದಕ್ಷಿಣದ ಮೇಲಿದೆ. ನೋಡಿ ನಿಮಗೇನಾದರು ವಿವೇಕವಿದ್ದರೆ ಕೆಟ್ಟದೃಷ್ಟಿಯಿಂದ ಮದನ ರೂಪ ಅಲಿ ಆದಿಲ್ ಶಾಹನನ್ನು ನೋಡ ಬೇಡಿ. ಅವರ ದರ್ಶನ ಪ್ರಿಯರಿಗೆ ಮದ್ಯ, ಮದಮತಿಯರಿಂದ ಶಾಹನ ಕಣ್ಣುಗಳು ಪ್ರಕಾಶವನ್ನು

ಕಸಿದುಕೊಳ್ಳುತ್ತದೆ. ಯಾರಾದರು ಸೈನ್ಯವನ್ನು ಹೊಡೆದು ಬಣ್ಣ ಕೊಟ್ಟು ಸ್ತ್ರೀಯನ್ನು ಇಟ್ಟಿಕೊಂಡರೆ ಅದರ ಪ್ರಭಾವದಿಂದ ಇಡೀ ಸಭೆ ಬಾಗುತ್ತದೆ. ಶಾಹರು ಒಯ್ಯಾರದವರ ಸ್ಫೂರ್ತಿ ತಾಂಬೂಲ ಮತ್ತು ಹೂಮಾಲೆಗಳನ್ನು ಕೊಟ್ಟು ಇನ್ನು ಹೆಚ್ಚಿಸಿದರು. ಸಭೆಗಳ ಮುಂದೆ ಹೋಗಿ ಇನ್ನಷ್ಟು ಸುಗಂಧಿತರಾದರು. ಉದ್ಯಾನದಿಂದ ಹೊರಟು ಹಳೇ ಹುಡುಕಾಟದಲ್ಲಿ ಒಳಗೆ ಹೋಗಿ ಸತ್ತರು. ಆಗಲೇ ಶಾಹರು ಅದೃಷ್ಟವಂತರನ್ನು ಕರೆಸಿ, ಮಂತ್ರಿಗಳ ಮನಸ್ಸನ್ನು ಸಂತೋಷ ಪಡಿಸಲು ಅತ್ಯಮೂಲ್ಯ ಗೌರವ ವಸ್ತ್ರ ತರಿಸಿ ವಾಡಿಕೆಯಂತೆ ಅದೃಷ್ಟವಂತರ ಜೊತೆಯಲ್ಲಿ ಕಳುಹಿಸಿಕೊಟ್ಟರು. ಒಳ್ಳೆ ಅಲಂಕೃತ ಖಡ್ಗಗಳನ್ನು ಆರಿಸಿ ಆರಿಸಿ ಕೊಟ್ಟರು. ಕುದುರೆಗಳು ಮತ್ತು ಆನೆಗಳು ಸಹ ರವಾನಿಸಿದರು. ಹೀಗೆ ಒಬ್ಬೊಬ್ಬರನ್ನು ತನ್ನ ಮರ್ಯಾದೆ ಮತ್ತು ಹೆಸರನ್ನು ಗಳಿಸಲು, ಒಂದರಿಂದ ಒಂದು ಹೆಚ್ಚು ಕೆಲಸ ಮಾಡಲು ಇನಾಮುಗಳನ್ನು ಕೊಟ್ಟು ಸಿಪಾಯಿಗಳ ಮನಸ್ಸನ್ನು ಗೆದ್ದುಕೊಂಡರು. ಅವರು ಆ ಕೆಲಸದ ಮೇಲೆ ತಲೆಯಿಂದ ಜೀವವನ್ನೇ ಖರ್ಚು ಮಾಡಿದವರಿದ್ದರು. ಓ ಅಲ್ಲಾಹನೇ ಈ ಮಹತ್ವ ಬಲ್ಲವ ಶಹಿನ್ಶಾಹರು. ಈ ಪ್ರಪಂಚದಲ್ಲಿ ಸದಾಕಾಲ ಅಜೇಯವಾಗಿರಲಿ.(೫೧೬೬-೫೪೯೧)

ಜೈಸಿಂಘ್‌ನ ಆಶ್ಚರ್ಯದ ವಿವರಣೆ ಹಾಗೂ ಅವನ ಸೈನ್ಯದ ಹೊಡೆತ. ಬಲುನಾಚಿಕೆ ಪಟ್ಟು ಕೋಟೆಯಿಂದ ಮುಂದೆ ಬಂದ

ಈ ಮಾತಂತೂ ನಿಜ ಉಪದೇಶಿಸುವವನ ಮಾತು ಕೇಳದೇ ಇದ್ದು ಕೊನೆಗೆ ಎರಡರಷ್ಟು ಪಶ್ಚಾತ್ತಾಪ ಪಡೆಯುತ್ತಾನೆ. ಮೋಸಗಾರನ ಮಾತನ್ನು ನಂಬಿದ. ಯಾವಾಗ ಜೈಸಿಂಘ್‌ಗೆ ಬಲು ಜೋರಾದ ಪೆಟ್ಟು ಬಿತ್ತೋ ಅಹಂಭಾವದಿಂದ ಕಣ್ಣು ಮುಚ್ಚಿಕೊಂಡ. ಬುದ್ಧಿ ಬಂದಾಗ ಕಣ್ಣುತೆರೆಯಿತು. ಇಡೀ ಕೋಟೆಯಲ್ಲಿ ಗೊಂದಲ ಉಂಟಾಯಿತು. ಈ ಕಾರ್ಯದಿಂದ ಎಲ್ಲರ ಮನಸ್ಸಿಗೆ ಬೇಜಾರಾಯಿತು. ದಂಡನಾಯಕನ ಮೂರ್ಖತನದಿಂದ ಇಡೀ ದೃಶ್ಯ ನಿಂದನೆಯಲ್ಲಿ ಸಿಕ್ಕಿಬಿದ್ದಿತು. ಯಾರ ಬಳಿ ದಂಡು ಇದೆಯೋ ಅದನ್ನು ಜಗಳಾಡಿಸಲು ತಿಳಿದಿಕೊ ಇದು ನಿನ್ನ ತಲೆ ಮೇಲೆ ಬೆಂಕಿ ಇಟ್ಟ ಹಾಗೆ ಎಂದು ಹೇಳಲಾಗುತ್ತದೆ. ನೀನು ದಕ್ಷಿಣ ದೇಶದವರನ್ನು ಹಲ್ವ ಎಂದು ತಿಳಿದು ತಪ್ಪು ಮಾಡಿದೆ. ಯುದ್ಧ ಮಾಡಿ ದೆಹಲಿ ಸೈನ್ಯದ ಮರ್ಯಾದೆ ಕಳೆದೆ. ಇನ್ನು ಮುಂದೆ ಏನು ಕೆಲಸ ಬೀಳುತ್ತದೆಯೋ, ಒಂದೊಂದು ದಿನ ಹೇಗೆ ಕಳೆಯುತ್ತದೆಯೋ, ದೇವರೇ ಬಲ್ಲನು. ಎಲ್ಲರ ಮೇಲೆ ಒಂದೇ ಸಲ ಹರಿತದ ಏಟು ಬಿತ್ತು. ಮೊನೆಮೇಲೆ ಮಾಡಿದ ಶಪಥ ಬಲು ಭಾರವಾಯಿತು. ಯಾರು ಈ ಯುದ್ಧದ ಚಕ್ರದ ಮೇಲೆ ಸವಾರರಾಗಿದ್ದಾರೋ ಅವರ ನಾಲಿಗೆ ಮೇಲೆ ಅದರ ಸ್ವಾದ ಹಾಗೇ ಉಳಿದುಕೊಳ್ಳುತ್ತದೆ. ಮುಂದೆಯೂ ಸಹ ಒಂದಾದ ಮೇಲೆ ಒಂದು ಬಂದರೇ ಹೇಗೆ ದೃಢವಾಗಿ ನಿಂತು ನಿಭಾಯಿಸಲು ಸಾಧ್ಯ. ಪ್ರತಿಯೊಬ್ಬ ಪುರುಷನ ಬಾಯಿಯಲ್ಲಿ ಇದೇ ಮಾತು. ಹಗಲೂ ರಾತ್ರಿ ಇದೇ ದೊಡ್ಡ ಚಿಂತೆಯಾಗಿದೆ. ಒಂದೊಂದು ಜಾಗದಲ್ಲಿ ಸಹಸ್ರಾರು

ಗಾಯಗೊಂಡವರು ನರಳುತ್ತಿದ್ದರು. ಒಂದೊಂದು ದಿನ ಸಹಸ್ರಾರು ಗಾಯಗಳಲ್ಲಿ ತೊಡಗಿ ಹೋಗುತಿದ್ದವು. ಸಹಸ್ರಾರರು ಸತ್ತು ಸತ್ತು ನಿತ್ಯ ಅಸಹಯಾಕರಾಗಿ ದುರ್ಬಲರಾಗಿ ನೀಚರಾಗಿ ಹೆಗ್ಗಿಡುಗನ ತುತ್ತಾದರು. ಇಡೀ ಕೋಟೆಯ ಮೇಲೆ ದೃಷ್ಟಿ ಓಡಿಸಿದಾಗ ಪ್ಲೇಗುರೋಗದ ಸೋಂಕು ಕಂಡುಬಂದಿತು. ಉತ್ತಮ ಹಾಗೂ ಸಾರ್ವಜನಿಕ ಜನರಿಂದ ಸುಖ ಶಾಂತಿ ವಿದಾಯವಾಗಿತ್ತು. ಇವೆಲ್ಲವನ್ನು ನೋಡಿದರೆ ಇಲ್ಲಿ ಅನೇಕ ದಿನಗಳಿಂದ ದೊಡ್ಡ ಬರ ಬಂದ ಹಾಗೆ ಕಾಣಿಸುತ್ತಿತ್ತು. ಹೆದ್ದಾರಿ ಮುಚ್ಚಿ ಹೋಗಿತ್ತು. ಹೊಲ ಜಮೀನುಗಳೆಲ್ಲ ಬರಡಾಗಿದ್ದವು. ಅಲಿ ಶಾಹನ ಸೈನ್ಯಗಳು ಸಂರಕ್ಷಕರಾಗಿ ಕೋಟೆಯನ್ನು ಕಾಯುತ್ತಿದ್ದರು. ಕರಾಳ ರಾತ್ರಿ ಬರುತ್ತಿದ್ದಂತೆ ಅವರ ಮೇಲೆ ಬಾಣಗಳ ಕಷ್ಟ ಎತ್ತಿ ಹಾಕಲಾಗುತ್ತಿತ್ತು. ಪ್ರತಿಯೊಂದು ಬಾಣ ಬಲು ಗೊಂದಲದಿಂದ ಎದ್ದು, ಆನೆಗಳು ಹಾಗೂ ಕುದುರೆ ಲಾಯಗಳ ಮೇಲೆ ಎಸೆಯಲಾಗುತ್ತಿದ್ದವು. ಮನುಜರು ಹೆದರಿ ನೆಲವನ್ನು ಅಗೆದು ಅದರಲ್ಲಿ ಅಡಗಿಕೊಳ್ಳುತ್ತಿದ್ದರು. ಮೃತ್ಯು ಅವರನ್ನು ಹಿಡಿಯಲು ಸಾಧ್ಯವಾಗುತ್ತಿರಲಿಲ್ಲ. ಜಗತ್ತಿಗೆ ಲಾಭ. ಮುಂಜಾನೆಯಾದರೆ ಸುತ್ತಲು ಬೆಳಕು ಮೋಡದ ಚೂರುಗಳ ಹಾಗೆ ಕಾಣುತ್ತಿತ್ತು. ಕೋಟೆಯಿಂದ ಯಾವುದಾದರು ಸೈನ್ಯ ಹೊರಟು ಅವರ ಮೇಲೆ ಹೋದರೆ ಅವರ ಮೇಲೆ ಆ ಮೋಡ ಇನ್ನಷ್ಟು ಸುರಿದು ಅವರನ್ನು ಮುಳುಗಿಸುತ್ತಿತ್ತು. ಮರಾಠರು ದೊಡ್ಡ ಭಲ್ಲೆಗಳನ್ನು ತೆಗೆದು ಕೊಂಡು ದಾರಿ ಮೇಲೆ ಹಾವು ಚೇಳುಗಳಂತೆ ಓಡಾಡುತಿದ್ದರು. ಆನೆ ಸೈನ್ಯದ ಹೊರಗೆ ಸಿಕ್ಕಿದರೆ ಅದನ್ನು ಭಲ್ಲೆಯ ಒಂದು ಕೊಂಡಿಯನ್ನು ತಿವಿದು ಅಲ್ಲೇ ಸೀಳಿ ಹಾಕುತ್ತಿದ್ದರು. ಅವರು ಕೋಟೆ ಬಿಟ್ಟು ಹೊರಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ಹೋದರೆ ಸಾಕು ಒಂಟೆಗಳ ಹಾಗೂ ಎತ್ತುಗಳ ಮೇಲೆ ಆಕ್ರಮಣವಾಗುತ್ತಿತ್ತು. ದರೋಡೆಗಾರರು ಕತ್ತೆ ಎತ್ತುಗಳೆಲ್ಲ ತೆಗೆದುಕೊಂಡು ಹೋದರು. ಅಗಸರಿಗೆ ಕತ್ತೆಗಳಿಲ್ಲದ ಕಾರಣ ಒಂಟೆಗಳ ಮೇಲೆ ಕೊಳಕು ಬಟ್ಟೆ ಹೇರಿಸಿಕೊಂಡು ಹೋಗಬೇಕಾಗಿ ಬಂತು, ಅವರು ಈ ಕಷ್ಟ ಹಗಲುರಾತ್ರಿ ಸಹಿಸುತ್ತಿದ್ದರು. ಇಡೀ ಸೈನ್ಯ ಅನೇಕ ತುಕಡಿಗಳಲ್ಲಿ ಹಂಚಿ ಹೋಗಿ ಪ್ರತಿಯೊಬ್ಬರ ಮನಸಲ್ಲಿ ಮತ್ಸರ ಜಾಗಮಾಡಿತು. ದಂಡನಾಯಕನೊಡನೆ ಎಲ್ಲರೂ ಐಕ್ಯತೆ ಮುರಿದರು. ಆ ಜೈಸಿಂಘ್ ಆದಾಗ್ಯೂ ಬುದ್ಧಿವಂತನಾಗಿದ್ದ ಮೋಸ ಮಾಡುವುದರಲ್ಲಿ ಬಲು ಚತುರನಾಗಿದ್ದ. ಶಾಹನ ಗಾಂಭೀರ್ಯವನ್ನು ನೋಡಿದ. ಮಂತ್ರಿಗಳ ವೈಮನಸ್ಸನ್ನು ನೋಡಿದ. ಎರಡು ಕಡೆಯಿಂದಲೂ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡ. ಎರಡು ಬೀಸುವ ಕಲ್ಲಿನ ಭಾಗದ ಮಧ್ಯದಲ್ಲಿ ಬೀಸಿ ಹೋದ. ಆಗ ಅವನ ತಲೆ ಮೊಣಕಾಲಿನ ಅತಿಥಿಯಾದ. ದೃಷ್ಟಿಯ ತಂಗುವ ಸ್ಥಳ ಕೊರಳ ಪಟ್ಟಿಯಾಯಿತು. ಎಲ್ಲರಿಂದ ದೂರ ಆಗುವ ಉಮ್ಮೇದು ಕಾಣತೊಡಗಿತು. ಸತ್ತ ಕಳ್ಳನ ಶೃಂಗಾರ ಮುಗಿಯುತ್ತಾ ಬಂದಿತ್ತು. ಅದಾಗ್ಯೂ ತನ್ನ ಮೇಲೆ ಆಶ್ಚರ್ಯ ನಿಲ್ಲಿಸಿಕೊಂಡ. ಅಹಂಕಾರ ಏನೋ ಪಟ್ಟ ಆದರೇ ನಾಚಿಕೆ ಬಂದು ಆವರಿಸಿತು. ಇಲ್ಲಿಂದ ಲೋಕ ಕೊಲ್ಲುವುದಕ್ಕೆ ಕುಳಿತಿಲ್ಲ ಇನ್ನು ಮುಂದೆ ಸರಿಯಾಗಿ ಸಾಗಬೇಕಾಗಿರುವುದೇ ಸರಿ ಎಂದುಕೊಂಡು

ಮಂತ್ರಿಗಳ ಡೇರೆಗಳಿಗೆ ತಾನೆ ನಡೆದುಕೊಂಡು ಹೋಗಿ ಮುಖಸ್ತುತಿ ಮಾಡಿ ಅವರನ್ನು ಸಂತೈಸಲು ಪ್ರಾರಂಭಿಸಿದ. ಬೇಸರದಿಂದ ತಾಳ್ಮೆಕಳೆದುಕೊಂಡಿದ್ದರು. ಮಂತ್ರ ಮಾಡಿ ಎಲ್ಲರನ್ನು ಮೋಸ ಮಾಡಬೇಕು ಪ್ರೀತಿಯ ಮೂರು ಸಂಖ್ಯೆಯ ಗುರತನ್ನು ತಿಳಿಯಲು ಆ ದುಷ್ಟನು ಸಹಸ್ರಾರರ ಗುರಿಗಳನ್ನು ಮುರಿದ. ಅಲ್ಲಿಂದ ಹೊರಟು ಒಂದು ಸೈನ್ಯವನ್ನು ರಚಿಸಿ ಸೈನ್ಯ ಮತ್ತು ಡೇರೆಗಳನ್ನು ತೆಗೆದುಕೊಂಡು ಹೊರಟ, ಆಗ ಸೈನ್ಯದ ಆನೆ ಕೊಕ್ಕರೆಗಳ ಹಿಂಡು ಹೊರಗಿತ್ತು. ಅವನ ಸೈನ್ಯ ಹೊರಗೆ ಬಂದ ತಕ್ಷಣ ಸಮುದ್ರದ ಸಹಸ್ರಾರು ಶತ್ರುಗಳಂತೆ ಕಚ್ಚಿಕೊಂಡರು. ಯಾವನು ಬಯಸಿದನೋ ಅವನೊಬ್ಬನೇ ಯಾರಿಗೆ ಬೇಕು ಅವನನ್ನು ಬೇಗನೇ ಹಿಡಿದು ತಿನ್ನುವನು ಆಕ್ರಮಿಸಿ ಸ್ವತಂತ್ರಗೊಳಿಸಿ ಹಾರಿಸಿಕೊಂಡು ಹೋಗುತಿದ್ದ. ಆನೆಗಳ ಮೇಲೆ ಚರ ಚರ ಎಂದು ಸಹಸ್ರಾರು ಬಾಣಗಳನ್ನು ಎಸೆಯುತ್ತಿದ್ದರು. ಪ್ರತಿಯೊಂದು ಬಾಣ ಅನೇಕರಿಗೆ ಪ್ರಾಣ ಹಾನ ಮಾಡುತ್ತಾ ಇತ್ತು. ಪ್ರತಿಯೊಂದು ಶರೀರಕ್ಕೆ ಕುದುರೆಯೇ ಮರದ ಬೇಕಾಯಿತು. ಅದೇ ಭಾರ ಕಾರಾಗೃಹದ ಜೊತೆಯಾಯಿತು. ತನ್ನ ಡೇರೆಗಳನ್ನು ಬಿಟ್ಟು ಹೊರಗೆ ಬರಲಿಕ್ಕಾಗದೇ ಮುಗಿದಿದ್ದನ್ನು ನೋಡಿ ದುಷ್ಟದ ಅಭ್ಯಾಸ ಇರುವವರು ಲಾತ ತಿನ್ನುತಲೇ ಇದ್ದರು. ಎಲ್ಲರನ್ನು ಹೊಟ್ಟೆ ಅಗಲಿಸಿ ಕರೆದುಕೊಂಡು ಹೋಗುತಿದ್ದರು, ಅದು ಕೋಳಿ ತನ್ನ ಮರಿಗಳನ್ನು ತೆಗೆದುಕೊಂಡು ಹೋಗುವ ಹಾಗೆ ಕಾಣುತ್ತಿತ್ತು. ಹೀಗೆ ಪ್ರತಿದಿನ ಸ್ವಲ್ಪ ಸ್ವಲ್ಪ ತಂಗುತ್ತಾನೆ ನಡೆಯುತ್ತಿದ್ದ. ಎಲ್ಲಾದರೂ ಸಿಕ್ಕಿಹಾಕಿಕೊಂಡರೆ ಎಲ್ಲರೂ ಒಂದೇ ಜಾಗದಲ್ಲಿ ಬಿದ್ದು ಬೀಳುವರು. ಸುತ್ತಲಿಂದಲೂ ಡೇರೆಗಳನ್ನು ಆವರಿಸಿಕೊಂಡು ಅದರಲ್ಲಿ ನುಗ್ಗಿ ಅವರನ್ನು ಕೆಣಕಿ ಕೆಣಕಿ ಹೊಡೆಯುತ್ತಿದ್ದರು. ಹಗಲ್ಹೊತ್ತಿನಲ್ಲಿ ಅವರನ್ನು ಏನೂ ಕೆಲಸ ಮಾಡಲು ಬಿಡುತ್ತಿರಲಿಲ್ಲ, ಇರುಳಲ್ಲಿ ಅವರನ್ನು ವಿಶ್ರಾಂತಿ ಮಾಡಲು ಬಿಡುತ್ತಿರಲಿಲ್ಲ. ಶಿಕಾರಿಗೆ ಹಾನಿ ಮಾಡಬೇಕೆಂಬ ದೃಷ್ಟಿಯಿಂದ ಸಮುದ್ರದ ಮೇಲೆ ಹತ್ತಿ ಕರ್ಣಕುಂಡಲ ಹೊಡೆದು ಕುಳಿತರು. ನಿತ್ಯ ದಾರಿಹೋಕರನ್ನು ಸಹಸ್ರಾರರಿಗೆ ಲೂಟಿ ಹೊಡೆಯುತ್ತಿದ್ದರು. ಅವರನ್ನು ಸುತ್ತಲಿಂದಲೂ ಆವರಿಸಿಕೊಂಡು ಶಿಕಾರಿ ಮಾಡುತ್ತಿದ್ದರು. ಸಹಸ್ರಾರಗಳಿಂದ ಪ್ರತಿನಿತ್ಯ ಹಳ್ಳಗಳನ್ನು ತುಂಬಿಸುತಿದ್ದರು. ಒಂಟೆಗಳನ್ನು ಎಳೆದುಕೊಂಡು ಹೋಗುತಿದ್ದರು. ಮುಘಲರು ಕೋಟೆಯ ಓರೆಯಲ್ಲಿ ಅಡಗಿಕೊಂಡಿದ್ದರೆ ಸಿಕ್ಕಿಹಾಕಿಕೊಂಡವರನ್ನು ಹುಡುಕಿ ತೆಗೆಯುತ್ತಿದ್ದರು. ಆ ದರಿದ್ರ ಗೂಬೆಗಳು ಕಷ್ಟ ಸಹಿಸಲಾರದೇ ಇಳಿದು ಬಂದರೆ ಅಲ್ಲಿಯ ಭೂಮಿ ಅಗೆದು ಕಾಲಿನಿಂದ ಎಸೆಯುತ್ತಿದ್ದರು. ಈ ಅಪಶಕನಗಳು ಉಸಿರು ಕಟ್ಟಿಕೊಂಡು ದಂಡುಗಳ ಓರೆ ಪಡೆದು ನಡೆದುಕೊಂಡು ಬರುತ್ತಲೇ ಇದ್ದರು. ಅನೇಕ ಹೃದಯಗಳು ಅಂತರಂಗದಲ್ಲಿ ಗಾಯಗೊಂಡಿದ್ದವು. ಬಿಜಾಪುರ ಒಂದು ಮನ್ಝಿಲ್(ಯಾತ್ರೆಯಲ್ಲಿ ತಂಗುವ ಸ್ಥಳ)ಇರುವಾಗ ಹೆಚ್ಚು ಕಡಿಮೆ ಎಲ್ಲರೂ ಬಂದು ಸೇರಿದರು. ಮುಂದೆ ಮಾಡುವ ಕಾರ್ಯವೇನು ಇರಲಿಲ್ಲ, ಆದ್ದರಿಂದ ಅನಿವಾರ್ಯವಾಗಿ ಅಲ್ಲೇ ತಂಗಿದರು. ಮುಂದೆ ಉಪ್ಪೀರು ಸಿಗುವುದು ಸಹ ಸಿಗುವ ಭರವಸೆ ಇರಲಿಲ್ಲ.

ಆದ್ದರಿಂದ ಅತ್ತೂ ಅತ್ತೂ ಕಣ್ಣುಗಳನ್ನು ಖಾಲಿ ಮಾಡಿದರು. ಮೀನುಗಳಿಗೆ ತನ್ನ ಕೂದಲಿನ ಬನವನ್ನು ಕಿತ್ತರು. ಏಕೆಂದರೆ ಹುಲ್ಲಿನ ಕಡ್ಡಿಯೂ ಸಿಗುವುದು ಕಷ್ಟವಾಗಿತ್ತು. ಹಿಂದೆ ಸೈನ್ಯವಿದೆ ಮುಂದೆ ಕೋಟೆ ಎರಡು ಕಡೆ ತೊಂದರೆ ಇದೆ ಇವರು ಮಧ್ಯದಲ್ಲಿ ಹೀಗೆ ಸಿಕ್ಕಿಹಾಕಿಕೊಂಡರು. ಮುಂದೆ ಶಾಹರ ಸೈನ್ಯದ ತುಕಡಿಯ ಬೆಂಕಿ ಹಚ್ಚಿದೆ ಹಾಗೂ ಬೆನ್ನಿನ ಮೇಲೆ ಖಡ್ಗಗಳ ಸಮುದ್ರ ನಿಜವಾಗಿಯೂ ನಿಂತಿದೆ. ಕಲ್ಲಿನ ಹೃದಯದವ ಬೆಂಕಿ ಮತ್ತು ನೀರಲ್ಲಿ ಬಿದ್ದು ಸುಟ್ಟು ಬೆಂದುವ ಸ್ಥಿತಿ ದುಃಖದಲ್ಲಿದೆ. ಬಲು ಗಟ್ಟಿ ಏಟುಗಳಲ್ಲಿ ಸಿಕ್ಕಿಹಾಕಿಕೊಂಡು ಬಲು ಕೆಟ್ಟ ಪರಿಸ್ಥಿತಿ, ಮೊಳೆ ಹೊಡೆದರೆ ಹೇಗೆ ತೊಂದರೆಯಾಗುತ್ತದೆಯೋ ಹಾಗೆ ಒಳಗಿಂದ ನೋವುಪಟ್ಟರು. ಮುಂದೆ ಹೋದರೆ ಏಟುಗಳನ್ನು ತಡೆಯುವ ಶಕ್ತಿ ಇರಲಿಲ್ಲ. ಮೊನೆ ಮೇಲೆ ಒಂದು ಹೆಜ್ಜೆ ಇಟ್ಟು ನಡಿಯಲು ಸಾಧ್ಯವಿರಲಿಲ್ಲ. ನಾಲ್ಕು ಕಡೆಯಿಂದಲೂ ಪ್ರಚಂಡ ಸೈನ್ಯಗಳು ಗೆರಾವು ಮಾಡಿದ್ದವು. ದಾರಿಯಿಂದ ಗಾಳಿ ಬರುವುದು ಸಹ ನಿಂತು ಹೋಗಿತ್ತು. ಹಠಾತ್ತನೆ ಮಡಿಲಲ್ಲಿ ಸಿಕ್ಕಿಹಾಕಿಕೊಂಡರು. ತಡೆಯಲಾಗದೇ ಇರುವ ಪರಿಸ್ಥಿತಿ ಉಂಟಾಯಿತು. ಎಲ್ಲ ರೀತಿಯ ಬರ ಉಂಟಾಯಿತು ಹಿತ್ತಾಳೆಯ ಬೆಲೆ ನಿಸ್ಸಂದೇಹವಾಗಿ ಚಿನ್ನಕ್ಕೆ ಆಯಿತು. ಬೆಳ್ಳಿ ಮತ್ತು ಕಲಾಯಿಯ ಮೂಲ್ಯ ಒಂದಾಯಿತು. ದ್ರೋಹಿಗಳ ಮುಖದ ಮೇಲೆ ಉಪ್ಪಿರಲಿಲ್ಲ ಅತ್ತೂ ಅತ್ತೂ ಉಪ್ನೀರು ಹರಿದು ಕಣ್ಣುಗಳು ಒಣಗಿದವು. ಎಲ್ಲರೂ ಸುಸ್ತಾಗಿ ಸೇಡಿನ ಕಾರಾಗೃಹದಲ್ಲಿ ಬಿದ್ದಿದ್ದವು. ಮೂಸಲು ತುಪ್ಪನೂ ಇಲ್ಲ ಬಾಯಿಗಿಡಲು ಎಣ್ಣೆನೂ ಇಲ್ಲ. ನೊಣಗಳಿಗೆ ಏನೂ ಸಿಗದೇ ಇರುವುದರಿಂದ ಪಶ್ಚಾತಾಪ ಪಡುತ್ತಿವೆ. ಇರುವೆಗಳಿಗೆ ತಿನ್ನಲು ಇಷ್ಟು ಸಕ್ಕರೆ ಸಹ ಸಿಕ್ಕಲಿಲ್ಲ. ಹುಲ್ಲಲ್ಲಿ ಎಲ್ಲೂ ಭತ್ತ ಇಲ್ಲ. ಅಕ್ಕಿಗಿಂತ ಹೆಚ್ಚಾಗಿ ಬಿದುರಿನ ಅಕ್ಕಿ, ಕೋಳಿ ಒಂದು ಕಾಲ್ಪನಿಕ ಹಕ್ಕಿಯಂತೆ ಅದೃಶ್ಯವಾಯಿತು. ಕಾಗೆ ಮರಿಗಳು ಅವರಿಗೆ ಪಾರಿವಾಳಗಳಾಗಿದ್ದವು. ತೊಳೆಯಲು ಸಾಬೂನು ಸಿಗದೇ ವ್ಯಾಕುಲವಾಗಿದ್ದರು. ಚಂದ್ರನಿಂದ ಹರಿದ ನೀರು ಗಗನಕ್ಕೆ ಸೇರಿತು. ಎಣ್ಣೆ ಬಣ್ಣದ ಡ್ರಂ ಹೊರುವವರು ಇನ್ನಷ್ಟು ಕೊಳಕರಾದರು; ಎಷ್ಟು ಕೊಳಕರೆಂದರೇ ಅವರನ್ನು ಸುಟ್ಟರೂ ಸಹ ಅವು ಸುಡುವಂತಿರಲಿಲ್ಲ. ಬೇಳೆಯ ಅಗಲು ಒಂದು ಹುಲ್ಲಿನ ಸರಿಸಮಾನವಾಯಿತು. ಹುಲ್ಲು ಕಡ್ಡಿ ಚಿನ್ನದ ನಳಿಕೆಯಾಯಿತು. ಅಫೀಮು ತಿನ್ನುವರಿಗೆ ಕಚ್ಚ ಸಿಗಲಿಲ್ಲ. ಚರಸ್ ತಕೊಳ್ಳುವನು ಕೆಮ್ಮಿ ಕೆಮ್ಮಿ ಕರಗಲಾರಂಭಿಸಿದ. ಚರ್ಮದ ಸ್ನೇಹ ಬಿಟ್ಟು ಹೋಗಿ ಕತ್ತು ಸಡಿಲಾಯಿತು. ವೀಳ್ಯದೆಲೆ ಬದಲಿಗೆ ಯಕೃತ್‌ನ ರಕ್ತ ಕುಡಿಯುತ್ತಿದ್ದರು. ತಂಬಾಕುವಿನ ಹೃದಯದಲ್ಲಿ ಹೊಗೆಯ ಗುರುತುಗಳಿದ್ದವು. ಯಾರು ಬಂಗಿ ತಿನ್ನುವರಿದ್ದರೋ ಅದನ್ನು ಮರೆತು ಹಗಲೂ ರಾತ್ರಿ ದುಃಖದಲ್ಲಿ ದಂಗುಬಡಿದು ಮುಳುಗಿದ್ದರು. ವಿಚಾರಗಳನ್ನು ಬೆಯಿಸಲು ಕಟ್ಟಿಗೆನೂ ಸಿಗಲಿಲ್ಲ. ಮೂಳೆಗಳ ಮಿಡಿತದಿಂದ ಅಂತರಂಗ ಹುರಿಯುತ್ತಿತ್ತು. ಎಂದೋ ಅಲ್ಪ ಆಹಾರ ಸಿಕ್ಕಿದ್ದವೋ ಆವಾಗಲಿಂದ ಬಿಕ್ಕಿ ಬಿಕ್ಕಿ ಹೊಟ್ಟೆಗಳಲ್ಲಿ ಬೆಂಕಿ ಬಿದ್ದಿವೆ. ಪ್ರೀತಿಯಿಂದ ಆ ಸಹೋದರ

ಖಾನನ ನಕಲು ಮಾಡಿದ. ಜೋಳದ ರೊಟ್ಟಿಯ ತುಂಡಿಗೆ ಮಿಠಾಯಿ ಎಂದು ತಿಂದರು. ಕುದುರೆಗಳು ಪಟ್ಟಿಗಳಲ್ಲಿ ಸಿಕ್ಕಿಕೊಂಡು ಅಗೆಯುವ ಸದ್ದು ಮಾಡುತ್ತಿವೆ. ತನ್ನ ಸವಾರರಿಗೆ ಗೊರಸುಗಳಿಂದ ಗೋರಿಗಳನ್ನು ತೋಡುತ್ತಿವೆ. ಹೊಟ್ಟೆ ಹಸಿದ ಆನೆಗಳು ತನ್ನ ತಲೆಗಳ ಮೇಲೆ ಧೂಳು ಹಾಕಿಕೊಳ್ಳುತ್ತಿವೆ. ಸೊಳ್ಳೆಗಳು ಒಂಟೆಗಳಂತಾಗಿವೆ. ಎತ್ತುಗಳೆಲ್ಲ ತನ್ನ ಬಾಲದ ಭಾರದೊಂದಿಗೆ ಹಾರಿದವು. ಯಾವ ವ್ಯಕ್ತಿಯೂ ಒಂದು ಸಲ ನೆಲದ ಮೇಲೆ ಬಿದ್ದರೇ ಸಾಕು ಮತ್ತೆ ಎದ್ದು ಕುಳಿತುಕೊಳ್ಳಲಿಲ್ಲ. ಸಿಪಾಯಿಗಳು ದಂಡನಾಯಕನ ಡೇರೆ ಮುಂದೆ ಬಂದು ಕಿರುಚಾಟ ಮಾಡುತ್ತಿದ್ದಾರೆ. ಓ ಕಟುಕನೇ ನೀನು ಎಂತಹ ಕೆಲಸ ಮಾಡಿದೆ ಎಲ್ಲರಿಗೂ ಪ್ರೇರಿಸಿ ಜೀವ ತೆಗೆದುಕೊಳ್ಳುತ್ತಿದ್ದಿಯಾ, ನಿಜವಾಗಲೂ ನೀನು ಗಂಡಸಾಗಿದ್ದರೇ ಇಂದು ಹೊರಗೆ ಬಂದು ನೀರಲ್ಲಿ ಹೂತು ಹಾಕು ಅಥವಾ ಬೆಂಕಿಯಲ್ಲಿ ಸುಟ್ಟು ಹಾಕು. ನಿನ್ನ ಬಳಿ ಅಫೀಂ ಇದ್ದರೆ ಕೊಡು ಪರವಾಗಿಲ್ಲ ವಿಷ ತಿಂದು ಒಂದೇ ಸಲ ಸತ್ತು ಹೋಗುವೆವು. ಎಲ್ಲಿಯವರೆಗೆ ಶಕ್ತಿಶಾಲಿ ಗಂಡಸಿನ ಮೈಯಲ್ಲಿ ಪ್ರಾಣವಿದೆಯೋ ಬೆಕ್ಕಿಗಿಂತಲೂ ಆ ಸತ್ತು ಹೋದ ಹುಲು ಕಡಿಮೆಯೇ. ಇಲ್ಲಿಯವರೆಗೆ ಬರುವ ಶಿಕ್ಷೆ ನಾವು ಅನುಭವಿಸಿದೆವು. ಸಣ್ಣವರೂ ದೊಡ್ಡವರೆಲ್ಲರೂ ತುಂಬ ಬೇಸರಪಟ್ಟೆವು. ದೇವರ ಸೃಷ್ಟಿಗೆ ಸುಮ್ಮನೆ ಆಸೆ ತೋರಿಸಬೇಡ. ವ್ಯರ್ಥದಲ್ಲಿ ಸಾಯಿಸಿದರೇ ದೊಡ್ಡ ಶಾಪ ಸಿಗುತ್ತದೆ. ಸೂಕ್ಷ್ಮವಾಗಿ ಸುತ್ತ ಮುತ್ತ ಪರಿಶೀಲಿಸು, ತುಂಬ ಕೋಪ ಮಾಡಬೇಡ. ಈಗ ಸ್ವಲ್ಪ ಶಕ್ತಿ ಉಳಿದಿದೆ. ಗಟ್ಟಿ ದೇಶ ಇದು. ಖಾರೂನ ಖಜಾನೆ ಎಂದು ತಿಳಿ. ಇದರ ಮೇಲೆ ನೀನು ಹೋಗಿ ಕುಳಿತಿರುವೆ. ಇದರಿಂದ ನಿನ್ನ ಜೀವಕ್ಕೆ ಹಾನಿ ಇದೆ. ಯಾವ ಸರಳ ಅಂಶಗಳನ್ನು ತೋರಿ ನೀನು ಕರೆ ತಂದಿರುವೆ ಶೀಘ್ರವಾಗಿ ಆ ಐದನ್ನು ಕೊಟ್ಟು ಅನುಭವಿಸು. ದಂಡನಾಯಕ ಎಲ್ಲ ಮಾತನ್ನು ಕೇಳಿದ. ಅಂತರಂಗದಲ್ಲಿ ಜೀವ ಸುಟ್ಟು ಬೂದಿಯಾಯಿತು ಆದರೂ ಏನೂ ಉತ್ತರ ಕೊಡಲು ಸಾಧ್ಯವಾಗಲಿಲ್ಲ. ಸಿಪಾಯಿಗಳು ಹೀಗೆ ಕರೆ ಕೊಟ್ಟು ಹಿಂದಿರುಗಿದರು. ವರ್ತಕ ತೂಕ ಮಾಡಿ ಎತ್ತಿಕೊಂಡು ಹೋದರು. ತನ್ನ ಬಳಿ ಅದರ ಉತ್ತರ ಹುಡುಕುತ್ತ ಇರುವಾಗಲೇ ಗಡಿಯಿಂದ ಸುವಾರ್ತೆ ಬಂದಿತು. ಅದೇ ಸಣ್ಣ ಕನ್ನಡಿಯಲ್ಲಿದ್ದ ಕಂಠಮಾಲೆಯನ್ನು ನೋಡಿ ತನ್ನ ಲಾಲಸೆಗೆ ನಗದನ್ನು ಕೊಟ್ಟು ಪೋಷಣೆ ಮಾಡಲಾರಂಭಿಸಿದ. ಅಲ್ಲಾಹನ ನ್ಯಾಯಾಲಯದಲ್ಲಿ ವಿಚಿತ್ರವಾದ ಶಕ್ತಿ ಇದೆ. ಕ್ರೂರಿಗೆ ಆಸೆ ತೋರಿಸಿ ಒದೆಯುತ್ತಾನೆ. ನೋಡಿ ಈ ಆಕಾಶವೂ ಏನು ಲೆಕ್ಕವಿಲ್ಲದಷ್ಟು ಮದ್ಯಪಿ. ಬಾಯಾರಿದವರನ್ನು ಮದ್ಯ ತೋರಿಸಿ ಮೋಸಗೊಳಿಸುತ್ತಾನೆ. ಕೆಟ್ಟದ್ದನ್ನು ಬಯಸುವವನು ಎಲ್ಲಿ ಒಳ್ಳೆ ಫಲ ಪಡೆಯಲು ಸಾಧ್ಯ? ಹೂವನ್ನು ಕಿತ್ತುಕೊಳ್ಳಲು ಹೋಗಿ ಮುಳ್ಳಲ್ಲಿ ಸಿಕ್ಕಿಹಾಕಿಕೊಂಡನು. ಈ ಹೊಸ ವಿಜಯದ ಸಂತೋಷದ ವಾರ್ತೆಯನ್ನು ಬರೆಯುವ ಲೇಖಕ ಅಪ್ರತಿಮ ನೇರ ಮಾತು ಹೀಗೆ ಬರೆಯುವನು. ಅಂದರೆ ಆ ಮುಖ್ಯ ಜೈಸಿಂಘ್ ಬಳಿ ಬಂದು ಏನು ಅಲ್ಪ ಆಹಾರ ಬೇಕಾಗಿತ್ತೋ ಎಲ್ಲ ಊಹಿಸಲಾಗದ ಎಲ್ಲ ರೀತಿಯ ಹೊರಲಾರದ ತೂಕ, ಮಿತಿಮೀರಿದ

ಕತ್ತೆಗಳು, ಹೇಸರಕತ್ತೆಗಳು, ಒಂಟೆಗಳು ಒಂದೊಂದು ಜಿನಸಿಯ ಸಹಸ್ರಾರು ತುಂಬಿದ ಮೂಟೆಗಳು ಅಗಣಿತ ತಕ್ಕಡಿಗಳು ಹಾಗೂ ಅದೆಷ್ಟೋ ತಲೆ ಮೇಲೆ ಹೊರುವಷ್ಟು ಭಾರ, ಆನೆಗಳ ಮೇಲೆ ತುಂಬಿದ ಆದಾಯದ ಚಿನ್ನದ ನಾಣ್ಯಗಳು, ಬಹಳಷ್ಟು ರೂಪಾಯಿಗಳು ತೆಗೆದ ಅದು ಸಹ ಅಗಣಿತವಾಗಿದ್ದವು. ತಾವು ಶೌರ್ಯದಲ್ಲಿ ನಿರ್ಭಯರಾಗಿರುವಿರಿ. ನಿಮ್ಮ ಬಳಿ ಹೆಸರಾಂತ ವೀರ ಸೈನ್ಯವೂ ಇದೆ. ಯಾವ ಕನ್ಯೆ ಜೊತೆಯಲ್ಲಿ ಬೇಕಾದರೂ ಇರಬಹುದು ಅವರು ಸುಂದರವಾಗಿದ್ದಾರೆ ನಿಮಗೆ ಮೆಚ್ಚುಗೆ ಆಗುತ್ತದೆ. ಅದು ಎಲ್ಲರಿಂದ ಒಳ್ಳೆ ಗುಣ ಹೊಂದಿರುವಳು. ಶರ್ಝಾಖಾನ್ ಎದ್ದು ಸಶಸ್ತ್ರಗಳನ್ನು ಕಟ್ಟಿದ ದರೋಡೆಕೋರರ ಮೇಲೆ ಆ ಸಂಪತ್ತನ್ನು ಶುದ್ಧ ಮಾಡಿ ಹೇಳಿದ. ನನ್ನ ದಾವೆ ಹಾಗೂ ಇದು ಶಾಹನ ಕೆಲಸ. ಆ ಎಲ್ಲ ಸಂಪತ್ತು ನಾನು ಸಾರ್ವಜನಿಕರ ಸ್ವತ್ತನ್ನಾಗಿ ಕೊಟ್ಟೆ. ಅದಾಗಿ ಅನೇಕ ದಿನಗಳಿಂದ ಬಲು ಚತುರರು ಬುದ್ಧಿವಂತರ ಬಳಿ ಹೋಗಿ ಅರ್ಧಾಣಿ ಗುಣವುಳ್ಳ ವಸ್ತುವನ್ನು ಸಾವಿರ ರೂಪಾಯಿಯಲ್ಲಿ ಮಾರುತ್ತಿದ್ದಾರೆ. ಅಯೋಗ್ಯರೆಲ್ಲ ಕುದುರೆಗಳನ್ನು ಖರೀದಿಸುತ್ತಿದ್ದಾರೆ. ಭಿಕ್ಷುಕರು ಜರಿ ಬಟ್ಟೆ ತೊಡುವವರಾಗಿದ್ದಾರೆ. ಅಗಸರೆಲ್ಲ ಒಳ್ಳೆ ಬೆಲೆ ಬಾಳುವ ರೇಷ್ಮೆ ಬಟ್ಟೆಗಳನ್ನು ಕತ್ತೆಗಳ ಮೇಲೆ ಪರದೆಯಂತೆ ಹಾಕುತಿದ್ದಾರೆ. ಜಗತ್ತಿನ ಜನ್ಮದಿಂದ ಕ್ರೂರಿಗಳೆಲ್ಲರೂ ಹಾಗೂ ಪುಣ್ಯಾತ್ಮರೆಲ್ಲ ಶ್ರೀಮಂತರಾಗಿ ಎಲ್ಲಿಯವರೆಗೆ ಜೀವಂತವಾಗಿದ್ದಾರೋ ಪ್ರತಿ ದಿನ ಹಬ್ಬ ಆಚರಿಸುವರು. ಆಗಲೇ ಯುಗದ ಅರಿಸ್ಟಾಟಲ್ ಬಳಿ ಬಂದು ಯಾರೋ ಒಬ್ಬ ವ್ಯಕ್ತಿ ಏನೂ ಹೆದರದೆ ಹೀಗೆ ಹೇಳಿದ 'ತನ್ನ ಮನಸನ್ನು ನಂಬಿ ಎದುರಾಳಿಲ್ಲದೆ ಅಲ್ಪ ಆಹಾರದೊಡನೆ ಹರಟೆ ಹೊಡೆದುಕೊಂಡು ತೆಗೆದುಕೊಂಡು ಬರುತಿದ್ದಾನೆ(ಅಲ್ಪ ಸೈನ್ಯದೊಡನೆ ಆಡಂಬರದಿಂದ ಬರುತಿದ್ದಾರೆ) ನೀವೇನೆ ಶತ್ರುಗಳಿಂದ ಭವ್ಯತೆಯನ್ನು ಕಸಿದು ದಪ್ಪ ಜಾಲೆಯಲ್ಲಿ ಹೂತಿಟ್ಟಿರುವಿರಿ. ಯಾರಾದರೂ ತಲೆ ಎತ್ತಿದರೆ ಎಲ್ಲರನ್ನು ಬಿಟ್ಟು ಅವನ ತಲೆ ಚೆನ್ನಾಗಿ ಚೆಚ್ಚಬಹುದು. ಆದರೆ ನನಗೆ ಸುದ್ದಿ ಸಿಕ್ಕಿರುವುದೇನೆಂದರೇ ಅಲ್ಲಾಹನು ಅಗೋಚರದಿಂದ ಶಿಕಾರಿಯನ್ನು ಕಳುಹಿಸುತ್ತಾನೆ. ಸುಮ್ಮನಿದ್ದರೆ ಮಾತು ದಕ್ಷಿಣದ್ದು ಬರುತ್ತದೆ. ತಿಳಿಗೇಡಿ ಅವಿಧೇಯರಾದರೇ ತನ್ನ ನೈಜತೆ ತೋರುತ್ತಾರೆ ಹಾಗೂ ಕುದುರೆಗಳಿಗೆ ಒದೆಯಲು ಓಡುತ್ತಾರೆ. ನನಗೆ ಇಂದು ಕಡ್ಡಾಯವಾಯಿತು ಮದ್ದಿಲ್ಲದಂತವನಾಗಿ ಎರಡು ಹೆಜ್ಜೆ ಮುಂದೆ ಹೋಗಲು ಕಷ್ಟವಾಯಿತು. ಯಾರು ಯೋಗ್ಯರೋ ಅವರೇ ಪಡೆಯಬೇಕು. ಹಕ್ಕಿರುವವನಿಗೆ ಅವನ ಹಕ್ಕು ತಲಪಬೇಕು ಎಂದು ಹೇಳಿ ಕುದುರೆ ಹತ್ತಿ ಅಮಲೇರಿದ ಸೈನ್ಯವನ್ನು ತೆಗೆದುಕೊಂಡು ಗುಡುಗುತ್ತಾ ಹೊರಟ, ತನ್ನ ಅಚಲ ದಂಡಿನೊಡನೆ ಶತ್ರುವಿನ ಮೇಲೆ ಮತ್ತೆ ಮತ್ತೆ ಆಕ್ರಮಣಿಸುತ್ತ ಹೋದ. ಚಪೊ ಪಾರ್ಚಿಖಾನನ ಧೈರ್ಯದಿಂದ ಪ್ರಭಾವಗೊಂಡು ಇತರರೆಲ್ಲರೂ ಎಡ ಬಲ ಹಿಂದೆ ಮುಂದೆ ಹೋಗಲಾರಂಭಿಸಿದರು. ಶರ್ಝ ಏನು ಮುಖ ಮಾಡಿದ್ದನೋ ಅದರ ಕ್ರೋಧದಿಂದ ಕಾಡಿಗೆ ಬೆಂಕಿ ಬಿತ್ತು. ಸಿಕಂದರ್ ಅವನು ತನ್ನ ಸೈನ್ಯದ ಗೋಡೆಯೊಳಗೆ ಇದ್ದ. (ಅವನು ತನ್ನ ಗಡಿ ಬಳಿ ಇದ್ದ.) ನನ್ನ ಹೆಸರು

ಶರ್ಝಾಖಾನ್, ನಾನು ಅವನ ಗಡಿಯೊಳಗೆ ಹೋಗಿ ಹೊಡೆದು ಬರುವೆ ಎಂದು ಹೇಳಿದಾಗ ದಂಡ ನಾಯಕ ಹಾಗೂ ಇತರೆ ಸರ್ದಾರರೆಲ್ಲ ಈ ಮಾತನ್ನು ಕೇಳಿ ಇವರು ಇತ್ತ ಕಡೆ ಗಾಬರಿಗೊಂಡರು. ಅವರು ಅತ್ತ ಕಡೆ ವ್ಯಾಕುಲಗೊಂಡರು. ಶರ್ಝಾಖಾನ್ ಯಾವ ವಿವೇಚನೆಯಿಂದ ಹೊರಟನೋ ಆಗ ಶತ್ರು ಧೈರ್ಯ ಕಳೆದುಕೊಂಡು ಗಾಬರಿಯಾಗಿ ಕೋಲಾಹಲ ಉಂಟಾಯಿತು. ಯಾವಾಗ ಶರ್ಝಾ ಆನೆ ತೆಗೆದು ಕೊಂಡು ಭರವಸೆಯಿಂದ ಒಳಗೆ ನುಗ್ಗಿದನೋ ಶತ್ರು ಎಲ್ಲೆಲ್ಲಿದ್ದರೋ ಅಲ್ಲೇ ಕಾಡನ್ನು ತುಂಬಿದರು. ಶತ್ರುಗಳ ದೇಶದಲ್ಲಿ ದರ್ಪ ಆವರಿಸಿತು. ಒಂದೊಂದು ಹೃದಯದಲ್ಲಿ ಅನೇಕ ಲಕ್ಷದ ಚಿಂತನೆ ಉಂಟಾಯಿತು. ಪ್ರಜೆ ದೇಶ ಬಿಟ್ಟು ಓಡಲಾರಂಭಿಸಿದಾಗ ಜಮೀನ್ದಾರ ಎಚ್ಚರಗೊಂಡ. ಪಠಾಣ ತನ್ನದೇಯಾದ ಲಕ್ಷ ಬಡಾಯಿ ಮಾಡುತ್ತಾನೆ. ನಗಾರಿ ಶಬ್ದ ಕೇಳಿ ಪ್ರತಿಯೊಂದು ಭೂಖಂಡಗಳಿಂದ ಹಜಾಮರು ಬಂದರು. ನಗಾರಿಗಳ ಶಬ್ದ ಕೇಳಿ ಹೃದಯಗಳೆಲ್ಲ ಕರಗಿದವು. ಯಕೃತ್‌ಖಂಡ ಗರ್ಜಿಸುತ್ತ ಅಲ್ಲಾಡಿ ಹೋದವು. ಅದೋ ನೋಡಿ ಆದಿಲ್ ಸೈನ್ಯ ಬಂದಿದ್ದೇ ಬಂತು ಎಂದು ದಂಡಲ್ಲಿ ಸುದ್ದಿ ಹರಡುತ್ತಿದ್ದ ಹಾಗೆ ಗೊಂದಲ ಉಂಟಾಯಿತು. ಯಾರದೋ ತಲೆಯ ಮುಂಡಾಸ ಮತ್ಯಾರದೋ ಕೈಯಲ್ಲಿತ್ತು. ಕುದುರೆಗಳ ಮೇಲೆ ಅನೇಕರು ತಳತಳಕ ಝೀನ್ ಹಾಕಿದರು. ಲಗಾಂ ಮರೆತು ಕುದುರೆಯ ಬಾಲದಡಿಯಿಂದ ಹಾದು ಹೋಗುವ ಚರ್ಮದ ಪಟ್ಟಿ ಬಾಯಿಗೆ ತೊಟ್ಟರು. ಸೊಂಟದ ಪಟ್ಟಿ ಕಟ್ಟಲು ಪುರಸತ್ತು ಸಿಕ್ಕಲಿಲ್ಲ ಹಾಗೂ ಯಾವುದೇ ಶಸ್ತ್ರಗಳನ್ನು ಜೋಡಿಸಲು ಸಾಧ್ಯವಾಗಲಿಲ್ಲ. ಮನಸ್ಸು ಗಟ್ಟಿ ಮಾಡಿ ಯಾರು ನಿಲ್ಲಲು ಸಾಧ್ಯವಾಗಲಿಲ್ಲ. ಬಿಲ್ಲುಗಳ ಮೇಲೆ ಬಿಲ್ಲು ತಂತಿ ಎಳೆಯಲು ಸಾಧ್ಯವಾಗಲಿಲ್ಲ. ಹೆದರಿಕೆಯಿಂದ ಕಂಪಿಸುತ್ತ ಕೈಗಳಿಂದ ಬಾಣಗಳು ಬೀಳಲಾರಂಭಿಸಿದವು. ಸಹೋದರನೇ ಸಹೋದರನನ್ನು ಮುರಿದು ಓಡಿಹೋದ. ತಾಯಿ ಮಗುವನ್ನು ಬಿಟ್ಟು ಓಡಲಾರಂಭಿಸಿದಳು. ತಂದೆ ಮಗನಲ್ಲಿ ಒಗ್ಗಟ್ಟಿರಲಿಲ್ಲ. ಸ್ನೇಹಿತರು ಸ್ನೇಹವನ್ನು ನಿಭಾಯಿಸಲಿಲ್ಲ. ತನ್ನ ಜೀವ ಉಳಿಸಲು ತನ್ನ ವಸ್ತುಸ್ಥಿತಿಯನ್ನು ಲೆಕ್ಕಿಸದೆ ಯಾರಿಗೆ ಯಾವ ಕಡೆ ಗಮನ ಹರಿಯಿತೋ ಅವನು ಓಡಿಹೋದ. ಹಠಾತ್ತನೆ ಹಿಂದುರಿಗಿ ನೋಡಿದಾಗ ಆ ಪಠಾಣ, ಅವನ ಡೇರೆ ಹಾಗೂ ಸೈನ್ಯದ ಗುರುತೇ ಇಲ್ಲದಂತಾಯಿತು. ಎಷ್ಟೊಂದು ಪ್ರವೀಣರಿದ್ದರೋ ಅವರೆಲ್ಲ ಅನನುಭವಿಯಾದರು. ಕಾಳಿಲ್ಲದ ಹೊಟ್ಟು ಆಕಾಶಕ್ಕೆ ಹಾರಿತು. ಪಠಾಣ ತನ್ನ ಅಧಿಕಾರದಂತೆ ಸಿಪಾಯಿಗಳನ್ನು ಕರೆದು ನಾನು ನನ್ನ ತಲೆಯೊಡನೆ ಆಡುತ್ತಿದ್ದೇನೆ. ಇಲ್ಲಿ ರಕ್ತದ ಹೋಲಿ ಆಡಲಿದ್ದೇನೆ. ಯಾರು ಈ ತಮಾಶೆ ನೋಡಿ ಸಹಿಸುವರೋ ಅವನು ನನ್ನ ಪಕ್ಕಕ್ಕೆ ಬಂದು ನಿಂತುಕೊಳ್ಳಿ ಗಂಡಸರು ಮಾಡಿದರೆ ಅನೇಕ ಲಕ್ಷಾಂತರ ಕೆಲಸಗಳು ಬರುತ್ತದೆ. ಹೇಡಿಗಳಂತೆ ಆದರೆ ಪ್ರವೀಣರೂ ಸಹ ಅನನುಭವಿಯಾಗುವರು. ನಪುಂಸಕನ ನೆರಳಿಂದ ದೂರವಿರಿ. ಅವನ ಕಾಲಿಂದ ಹೆಜ್ಜೆ ಮುಂದುಹೋಗಲು ಸಾಧ್ಯವಿಲ್ಲ ಯಾರು ಹೋಗಬೇಕು ಎಂದವರು ತನ್ನ ದಾರಿ ಹಿಡಿದು ಕೊಂಡು

ಹೋಗಬಹುದು ನಿಮಗೆ ಸಲಾಮು ಅಲೈಕುಂ ಹಾಗೂ ಖುದಾ ಹಾಫಿಝ್‌ವೀರರು ಸಲಾಮಿನ ಉತ್ತರವಾಗಿ ವಲಲೇಕುಂ ಸಲಾಂ ಎಂದು ಹೇಳಿ ಉತ್ತರ ಹೆಸರು ಪಡೆದವನೆ ಕೊಂಚ ನಮ್ಮ ಮಾತನ್ನು ಕೇಳು ಈ ರೀತಿಯ ತಮಾಷೆ ಮಾಡುವುದು ಸಿಪಾಯಿಯ ವಾಡಿಕೆ ಧನಿ ನೋಡಿದರೆ ಸಾಕು. ವಿಜಯ ಮೌನ ಸಾಧಿ ಬರುತ್ತದೆ. ಸಿಪಾಯಿಗೆ ಲಜ್ಜೆ ನಿತ್ಯವೂ ಪ್ರಾಣಕ್ಕಿಂತ ಪ್ರೀತಿಯಾಗಿರುತ್ತದೆ. ಲಜ್ಜೆಯ ಮೇಲೆ ಸಹಸ್ರಾರು ಪ್ರಾಣ ಬಲಿಯಾಗುತ್ತದೆ. ಎಷ್ಟು ದಿನ ಬದುಕುತ್ತೇವೆಂದು ಗೊತ್ತಿದೆ. ಆದಂ ಸಂತಾನ ಕೊನೆಗೂ ಅಳಿಸಿಹೋಗುತ್ತದೆ. ಯಾವುದೇ ವ್ಯಕ್ತಿ ಸಾಯಿಲಿ ಅವನಿಗೆ ಚಿಂತೆ ಇರಬೇಕು ದೊಡ್ಡ ಮಾತೆಂದರೆ ಹೆಸರು ಜೀವಂತವಾಗಿರಬೇಕು. ನಾಚಿಗೆನೆ ಗಂಡಸಿನ ಜೀವ. ಜೀವಿತರಿಗೆ ಸಾವಿನ ನಾಚಿಗೆಯಾಗಬೇಕು. ಸ್ನೇಹಿತನ ಬದಲು ಸ್ನೇಹಿತ ಪ್ರಾಣ ಕೊಡಬೇಕು. ಧಣಿಗಳ ದೊಡ್ಡ ಮಾನ ಜೀವ ತೆಗೆದುಕೊಳ್ಳುತ್ತದೆ. ಧಣಿಯ ಮುಂದೆ ಸಿಪಾಯಿ ಪ್ರಾಣ ಬಿಡುತ್ತಾನೆ ಹಾಗೂ ಅವನು ಸದೈವವಾಗಿ ಹೊಣೆಮುಕ್ತದ ಆಶ್ರಯ ಪಡೆಯುತ್ತಾನೆ. ಯಾರು ತನ್ನ ಧಣಿಗೆ ಸಾಯಿಸಿ ತನ್ನ ಜೀವ ಉಳಿಸಿಕೊಳ್ಳುತ್ತಾನೆಯೋ ಎಲ್ಲಿಯವರಿಗೆ ಜೀವಿತವಿರುವನೋ ಅವನ ಮುಖದ ಮೇಲಿರುವ ಮಸಿ ಹೋಗುವುದಿಲ್ಲ. ನಮ್ಮ ಬುದ್ಧಿಗಳಿಗೆ ಸುಮ್ಮನೆ ಮೆಯಿಸ ಬೇಡ ಒಂದೊಂದು ಶರೀರದ ಪರಿಶ್ರಮ ಪರೀಕ್ಷಿಸಿ ನೋಡಿಕೋ. ಇಂದು ನಮ್ಮ ಬತ್ತಳಿಕೆ ಕಟ್ಟಿ ಏನು ಮಾಡುತ್ತೇವೆ, ನಮ್ಮ ಹೆಸರನ್ನು ಉಳಿಸಿಕೊಂಡು ಹೇಗೆ ಸಾಯುತ್ತೇವೆ ನೋಡು. ಈ ಕೆಲಸದಿಂದ ಶರ್ಝಾಖಾನ್ ಸಂತೋಷ ಪಟ್ಟು ಹೇಳಿದ, ಒಳ್ಳೆ ಜನ ಎಂದು ತಿಳಿದು ನಾವು ಜ್ಞಾಪಕ ಇಟ್ಟಿಕೊಂಡಿದ್ದೇವೆ. ನಿಂತಿದ್ದ ದಂಡಿನ ಸ್ನೇಹಿತರ ಗುಟ್ಟನ್ನು ಪಡೆಯಲು ಧೈರ್ಯದ ಒರೆಗಲ್ಲಿನ ಮೇಲೆ ಎಲ್ಲರ ಶಕ್ತಿಯನ್ನು ತಿಕ್ಕಿ ನೋಡಿದ. ಪಠಾಣ ತನ್ನ ಕಾಠಿಣ್ಯವಿಟ್ಟು ತನ್ನ ಮಾರ್ಗದರ್ಶಕರ ಮುಖ ನೋಡಿ ಹೇಳಿದ, ಹಾಗಾದರೇ ಇಲ್ಲೊಂದು ರತ್ನಗಂಬಳಿ ತಂದು ಹಾಸಿ ಅಖಂಡವಾದ ಒಂದು ರೀತಿಯ ಗೂಡನ್ನು ತಯಾರಿಸಿ, ಅಪರೂಪದ ಶಾಮಿಯಾನ ಹಾಕಿ. ಇಲ್ಲೊಬ್ಬ ಹೊಸ ಅತಿಥಿ ಬರಲಿದ್ದಾನೆ. ಅವನನ್ನು ಕರೆತರಲು ಮುಂದಾಗಿ ಪ್ರಸಿದ್ಧನಿಗೆ ಕಳುಹಿಸಿ, ಅಧಿಕ ಬಾಣಗಳ ಚತುರ ವೇಗದವರನ್ನು ಕಳುಹಿಸಿ, ಬಿಲ್ಲಿನ ಹೊಸ ನಾಚಿಗೆಯುಳ್ಳ ವಧುವಿನ ಮುಖ ಪರದೆ ತೆರೆಯಿರಿ. ಬಿಲ್ಲಿನ ಧಾರೆಯ ಕೇಶವನ್ನು ಎಳೆದು ಹಿಡಿದಿರಿ. ಪ್ರತಿಯೊಬ್ಬ ಗಂಡಸಿನ ಮುಂದೆ ಮನಮೆಚ್ಚುವ ಸ್ತ್ರೀ ಇಡಿರಿ, ಒಬ್ಬೊಬನ ಬಳಿ ಎರಡು ನಾಲಕ್ಕು ಬತ್ತಳಿಕೆ ಇಟ್ಟಿರಿ. ಅವುಗಳನ್ನು ತಬ್ಬಿಕೊಂಡು ನಾವು ಸಹಿಸಬೇಕಾಗಿದೆ. ಕಠಾರಿಗಳಿಂದ ನಾವು ಕೈಚುಂಬಿಸ ಬೇಕಾಗಿದೆ. ನಮ್ಮ ಪ್ರಾಣದ ಗೌರವ ತೆಗೆದುಕೊಳ್ಳದೆ ನಂತರ ಸುಮ್ಮನೆ ಹೋಗುವ ಕಾರ್ಯ ಮತ್ತೆ ಬರುವುದಿಲ್ಲ. ಅದಾಗ್ಯೂ ಇಲ್ಲಿ ಬರುವವರಿಗೆ ಸ್ವಾಗತ ಮಾಡಲು ನಾವು ಶ್ರಮಪಟ್ಟು ಎಲ್ಲ ವ್ಯವಸ್ಥೆ ಮಾಡಬೇಕಾಗಿದೆ. ಇಲ್ಲಿ ಅಧ್ಯಕ್ಷರು ಮನಮೋಹಕರಾಗಿ ಬರುವವರಿಗೆ ಅಲ್ಲಿ ಅದ್ವಿತೀಯಾಗಿ ಜವಾನರೆಲ್ಲ ಸೇರಿರಿ. ಎಲ್ಲಿಯವರೆಗೆ ಶರ್ಝನ ಸೈನ್ಯ ಕಂಡು

ಬರುತ್ತದೆಯೋ ದಂಡಿನ ಎತ್ತರ ಬೆಟ್ಟವೇ ಕಾಣಿಸುತ್ತದೆ. ಒಬ್ಬೊಬ್ಬ ಜವಾನ ಸಶಸ್ತ್ರಧಾರಿಯಾಗಿ ಏರುತ್ತಾ ಹೋದ, ಇದನ್ನು ನೋಡಿದರೆ ಉಕ್ಕಿನ ಕೋಟೆ ಚಲಿಸಿದಂತೆ ತಿಳಿಯುತ್ತಿತ್ತು. ಶಸ್ತ್ರಗಳ ಮೇಲೆ ಬಿಸಿಲು ಬಿದ್ದ ಕಾರಣದಿಂದ ಅದರ ಮಿನುಗಿನಿಂದ ಮಾರ್ಗ ಸಣ್ಣ ಕನ್ನಡಿಯಂತೆ ಕಾಣತೊಡಗಿತು. ಪ್ರತಿಯೊಂದು ಗುರಾಣಿ ಜರಿಬಟ್ಟೆಯ ಹಾಗೆ ಜರಿಹರಡಿದಂತೆ ಕಾಣುತ್ತಿತ್ತು. ಇದು ಸೂರ್ಯನ ಮೇಲೆ ಚಮಕಿ ಎಸೆದಂತೆ ಕಾಣುತ್ತಿತ್ತು. ಪಠಾಣ ಇವೆಲ್ಲವನ್ನು ಕಣ್ಣುತುಂಬ ನೋಡಿ ತನ್ನ ಎಲ್ಲ ಜವಾನರನ್ನು ಒಟ್ಟಿಗೂಡಿಸಿ ಕುಳಿತ. ಸಲಾಬತ್‌ನ ಯುದ್ಧಕ್ಕಾಗಿ ರಚಿಸಿದ ಸಾಲನ್ನು ಶರ್ಝಗಳು ದಿಟ್ಟಿಸಿ ನೋಡಿ ಖಡ್ಗಗಳನ್ನೆಳೆದು ಆಕ್ರಮಿಸಿಲು ಕುದುರೆಗಳನ್ನು ಓಡಿಸಿದರು. ಗಾಳಿಯ ನೆರಳು ಬಿದ್ದು ಖಡ್ಗಗಳ ರೂಪ ಬಿಸಿಲು ಜರಿಬಟ್ಟೆಯನ್ನು ಧರಿಸಿತು. ನಿಚ್ಚಳ ಬಿಸಿಲಲ್ಲಿ ಅದಾಗ್ಯೂ ಖಡ್ಗಗಳ ಪ್ರಕಾಶ ಗಾಳಿಯ ಅಲೆಗಳು ಉಕ್ಕಿ ನದಿ ಬಿಸಿಲುಗುದುರೆ ಆಯಿತು. ಕುದುರೆಗಳ ಕೆಳಗಿಂದ ಧೂಳೆದ್ದಿತು. ಪ್ರತಿ ಕ್ಷಣ ಕೂಗಾಟದ ಬಿರುಗಾಳಿ ಎದ್ದಿತು. ಗಗನದ ಅಗ್ಗಿಷ್ಟಿಗೆ ಮೇಲೆ ಧೂಳು ಬಿದ್ದು ಸೂರ್ಯದ ಬೆಂಕಿಯನ್ನು ಹುಗಿದು ಸೂರ್ಯಕ್ಕೆ ತಂಪು ಮಾಡಿದಾಗ ಮಿನುಗುವ ಬದಲಿಗೆ ದೂರದರ್ಶಕದ ನಕಲಂತೆ ಕಾಣಿತು. ಎಲ್ಲ ಮುಖಗಳಿಗೆ ಧೂಳು ತುಂಬಿತು. ಭೂಮಿ ಎಲ್ಲಕ್ಕಿಂತ ಹೆಚ್ಚು ಕರಗಾಯಿತು. ಕುದುರೆಗಳ ಗೊರಸಗಳಿಂದ ಬೆಂಕಿ ಬೀಳುತ್ತಿದ್ದರೆ ಹಿಂಜಿದ ಅರಳೆ ಉರಿಯುತ್ತಿತ್ತು. ಧೂಳು ತುಂಬಿದ ಗಾಳಿ ಸಂಪೂರ್ಣವಾಗಿ ಬೆಂಕಿಯಾಯಿತು. ಯಾವಾಗ ಸಾಲುಗಳೆಲ್ಲ ಯುದ್ಧಕ್ಕಾಗಿ ಮುಂದುವರಿದವೋ ಸಾರಥಿಗಳು ಸಿದ್ಧರಾಗಿ ಕುದುರೆ ಓಡಿಸಿದರು. ಬತ್ತಿಯುಳ್ಳ ಬಾಣಗಳಿಂದ ಮತ್ತಷ್ಟು ಹೊಗೆ ಏರಿ ಬಂತು ಗಗನ ಹೆದರಿದಂತೆ ಕಂಡಿತು. ಬಾಣಗಳ ಬೆಂಕಿಯಿಂದ ಬಿಸಿಲು ಕೆಂಪಗಾಯಿತು. ಸೂರ್ಯನ ಹೊಟ್ಟೆಯಲ್ಲಿ ಉರಿತ ಪ್ರಾರಂಭವಾಯಿತು. ಎರಡು ಕಡೆಯಿಂದ ಬಾಣಗಳು ರವಾನೆಯಾದವು. ಯುದ್ಧ ಆಡಿಸಲು ಪರಿಶ್ರಮ ಪ್ರಾರಂಭವಾಯಿತು. ಶೂರ ಕಿವಿಗೆ ಗಲಾಟೆ ಹೋಗಿ ಬಿದ್ದಾಗ ಎರಡು ಕಡೆಯ ಸಾಲುಗಳಿಗೆ ಹೃದಯಗಳನ್ನು ಬಿಸಿ ಮಾಡಿತು. ಆಕ್ರಮಿಸಲು ದಖನಿ ಜವಾನರು ಬಂದಾಗ ಬಿಲ್ಲುಗಳೇ ತೆಗೆದುಕೊಂಡು ಪಂಕ್ತಿಗಳ ಮೇಲೆ ಪಂಕ್ತಿಯಾಗಿ ಪಠಾಣರು ಬಂದರು. ಪ್ರೀತಿಯ ವ್ಯಾಪಾರದಲ್ಲಿ ಬಂದು ಜೀವಕ್ಕೆ ಚೆಂಡನ್ನು ಮಾಡಿ ಮುಂದೆ ಕುಳಿತು ಬತ್ತಳಿಕೆಗಳೆಲ್ಲ ಸುರಿದರು. ತೋರಿಸಲು ಒಬ್ಬರಿಕ್ಕಿಂತ ಒಬ್ಬರು ಬತ್ತಳಿಕೆ ಕಟ್ಟಿದರು. ಅವರು ಬಿಲ್ಲುಗಳನ್ನು ಎತ್ತಿಕೊಂಡು ಗೋಳಾಟ ಗುಲ್ಲೆಬ್ಬಿಸಿದರು. ಬಿಲ್ಲುಗಳೊಡನೆ ಚೇಷ್ಟೆ ಮಾಡಲು ಲಜ್ಜೆಯನ್ನು ಬಿಟ್ಟು ಜೀವ ತೆಗೆದು ಹೋಗಲು ಹರಿಣ ಮುದುಡಿ ನಿಂತಿತು. ಬಿಲ್ಲುಗಳೆಲ್ಲ ಪ್ರೀತಿಯಿಂದ ಅಹಂಭಾವದಲ್ಲಿ ಬಂದವು. ಬಾಣ ಒಯ್ಯಾರದಿಂದ ಹಾರಲಾರಂಭಿಸಿದವು. ಪ್ರತಿಯೊಂದು ಬೆಡಗು ತೀರದಲ್ಲಿ ಹರಿತ ಎಂದು ತಿಳಿ. ಪ್ರತಿಯೊಂದು ಒಯ್ಯಾರ ಮನಸ್ಸಿನ ಮೇಲೆ ಪ್ರಭಾವ ಬೀರುವಂತಹ ರಕ್ತ ಚಲ್ಲುವ ಎಂದು ತಿಳಿ. ಬಿಲ್ಲುಗಳ ಅಲೆಗಳಿಗೆ ಪ್ರಜ್ಞೆ ಬಂದಿರುವುದನ್ನು ನೋಡಬೇಕು ಬೇರೆ ಅರ್ಥದಲ್ಲಿ ನದಿಗೆ ಉತ್ಸಾಹ ಬಂದಿದೆ.

ಸಹಸ್ರಾರು ಬಾಣಗಳು ಒಂದೇ ಸಲ ಬಿಟ್ಟಾಗ ಸೂರ್ಯನ ಯಕೃತ್ತಿನಿಂದ ಹನಿಗಳು ಕಿತ್ತಿಹೋಯಿತು. ಬಾಣಗಳ ಹೆಚ್ಚು ಪ್ರಯೋಗದಿಂದ ರಂಧ್ರತಂತು ಜಾಲವಾಯಿತು. ಇಡಿ ಆಕಾಶದ ಹೆಂಚು ಮುರಿದು ಎಸೆದರು. ಸಾಲುಗಳ ಮೇಲೆ ಬಾಣಗಳ ಆಕ್ರಮಣ ಹೆಚ್ಚಾಗಿ ಸುರಾಯಿಗಳ ನದಿ ಹರಿಯುವಂತೆ ಕಾಣುತ್ತಿತ್ತು. ಬಾಣಗಳ ಬಿಸಿಗಾಳಿ ತಾಗಿ ಸೈನ್ಯದ ಗುಂಪನ್ನು ತಲೆಕೆಳಗೆ ಮಾಡಿತು. ಈ ಆಕ್ರಮಣದಿಂದ ಇಡೀ ಸೈನ್ಯದ ವೃಕ್ಷ ಅಲುಗಾಡಿತು, ಪ್ರವಾಹ ಬಂದ ಕಾರಣ ಇಡಿ ಫಲವೆಲ್ಲ ಪಟಾಪಟ್ಟನೆ ಉದುರಿ ಬೇರೆಯಾಯಿತು. ಕುದುರೆಗಳಿಗೆ ಬಾಣಗಳು ದೆವ್ವ ಮಾಡಿದವು. ಅದರ ಮೇಲೆ ಸವಾರಾಗಿರುವವನು ಗಂಡು ಅಪ್ಸರೆಯಂತೆ ಕಾಣುತ್ತವೆ. ಎಲ್ಲ ಸಲಾಮುಗಳನ್ನು ಮುರಿದು ಮಣ್ಣಲ್ಲಿ ಬೆರೆಸಿದರು. ಕೊಂಡಿಗಳು ಶರೀರವನ್ನು ಅರಳಿಸಿ ಉದ್ಯಾನವನ ಮಾಡಿತು. ಕೂಕ್ ಹರಿತವಾದ ರೆಕ್ಕೆಗಳ ಹಕ್ಕಿ ಬಾಣಗಳನ್ನು ಮುಚ್ಚಿ ತಲೆಯಲ್ಲಿರುವ ಮಿದುಳುಗಳ ಮೇಲೆ ಕುಕ್ಕಿ ರಕ್ತಕುಡಿದು ಎಸೆದವು. ಒಳಗಿನ ಭಾಗ ಬಾಣಗಳಿಂದ ತೂತು ಬಿದ್ದು ಪರದೆ ಇರುವ ಪಲ್ಲಕ್ಕಿ ತೂತಾಗಿ ಕಾಣುತ್ತಿತ್ತು. ಅನೇಕ ಹೃದಯಗಳಲ್ಲಿ ಬಾಣಗಳ ಮೊನೆ ಹೂತು ರಕ್ತ ಜೇನುತುಪ್ಪದ ಪೌಲಿಗಳಂತೆ ಛತ್ತು ಕಟ್ಟಿತು. ಬಾಣ ಒಂದರಿಂದ ಬೇರೆಯಲ್ಲಿ ಹೂತು ಹೊಡೆದವು. ಆನೆ ಮೇಲೆ ಉಗುರಿಗೆ ಎಸೆದರು. ಬಾಣದಲ್ಲಿ ಬಾಣಮಾಡಿ ಜಾಗ ಕಾಣುತ್ತಿತ್ತು ಸೂಜಿಯಲ್ಲಿ ದಾರ ಪೋಣಿಸಿದ ಹಾಗೆ ಕಾಣುತ್ತದೆ. ಅದೇ ಬಾಣ ಒಂಟೆ ಮೇಲೆ ಬಿದ್ದು ಹೂತಿದರೆ ಹಕ್ಕಿಯ ರೆಕ್ಕೆ ಕಿತ್ತುಹೋಗಿ ಮುರಿದು ಹೋಗಿ ಗೂಟದಂತೆ ಕಾಣುತ್ತವೆ. ಗಲಗಿನ ಹೊಲ ಯಾ ಕಾಡಿನ ಶರೀರದ ಮೇಲಿರುವ ಬಾಣಗಳನ್ನು ತೆಗೆದು ಆನೆಗಳು ಏಟುಗಳಿಂದ ದಣಿದು ಬೆಟ್ಟದಂತೆ ನಿಂತಿವೆ. ಆನೆಗಳ ಕಿವಿಗಳ ತಟ್ಟೆ ನಿಶಾನೆಗಳ ವೇಷ ಲಹರಿಗಳಿಂದ ಹೊಡೆದು ಬಾಣಗಳಿಂದ ತುಂಬಿದವು. ಶರ್ಝಾ ಖಾನ್ ಬಾಣಗಳ ನದಿಯ ಅಲೆಗಳನ್ನು ನೋಡಿ ಅಂದಾಜಿಸಿದೇನೆಂದರೇ ಈಗ ಬೆಟ್ಟ ಅಲುಗಾಡಿ ತಳಕೆಳಗಾಗಲಿದೆ. ಎದುರಾಳಿ ಇಡಿ ಸೂರ್ಯನಂತೆ ಆವರಿಸಿ ಸಹಸ್ರಾರು ಬಾಣಗಳನ್ನು ಸುರಸಲಿದ್ದಾನೆ. ಶರ್ಝನು ತನ್ನ ನಾಲಿಗೆಯನ್ನು ಬಿಗಿ ಹಿಡಿದುಕೊಂಡು ನಿಂತುಕೊಂಡು ದೂರದ ಹಾಗೂ ಕೆಳಗಿನ ತಮಾಶೆಯನ್ನು ನೋಡುತ್ತಾ ನಿಂತನು. ಭಲ್ಲೆದಾರಿಗಳಿಗೆ ಕಣ್ಣುಹೊಡೆದು ಹೇಳಿದ. ನೋಡಿ ಈ ಆಪತ್ತಿನ ವರ್ತುಲದಲ್ಲಿ ಇಣಿಕಿ ನೋಡಿ ಭಲ್ಲೆಗಳಿಂದ ಏಳಿಸಲು ಬಂದು ಇವನು ನಿಂತುಕೊಂಡು ನಮಗೆ ದೊಡ್ಡ ತಮಾಶೆ ತೋರಲಿದ್ದಾನೆ. ನನಗಂತೂ ಇದು ಕಷ್ಟಕರ ಕೆಲಸ ಇವರೆಲ್ಲರನ್ನು ಸ್ವಲ್ಪ ಪರೀಕ್ಷಿಸಿ ನೋಡಿ ಯಾರು ಭಲ್ಲೆದಾರರಿದ್ದೀರಿ ಮೈದಾನದಲ್ಲಿ ಬನ್ನಿ, ಭಲ್ಲೆಯ ಪೇಚನ್ನು ಮಾಡಿ ಈ ವರ್ತುಲ ಮುರಿಯಿರಿ, ಹೀಗೆ ಮಾಡಲಿಕ್ಕೆ ಸಾಧ್ಯವಿಲ್ಲ ಎಂದರೆ ಅವು ಭಲ್ಲೆಗಳಲ್ಲ ಬರಿ ಬಿದಿರಿನ ಕಡ್ಡಿ ಎಂದು ಭಾವಿಸಿ ನೀವೇನು ಮೀಸೆ ಹೊತ್ತು ಓಡಾಡುತ್ತಿದ್ದೀರೋ ಅಥವ ಚಪ್ಪರದ ಹುಲ್ಲು. ಈ ಮಾತನ್ನು ಕೇಳಿ ಮರಾಠರು ಭಲ್ಲೆಗಳನ್ನು ಭುಜಗಳ ಮೇಲೆ ಏರಿಸಿ ಚೇಳುಗಳ ದೊಡ್ಡ ಸೈನ್ಯದಂತೆ ಹೊರಟರು. ಇವರೆಲ್ಲರೂ ಮುಂದೆ ಬಂದು ಒಂದು ಗಟ್ಟಿ

ಸಾಲನ್ನು ಕಟ್ಟಿದರು. ಆಗಲೇ ಶರ್ಝ ಖಾನನ ಸುಪುತ್ರ ಭಲೆರೆ ನಿರ್ಮಲ ಸೈಯ್ಯದ್ ಸಜ್ಜನರ ಆಶ್ರಯ ಪಡೆದವ ಅವನ ಪ್ರಸಿದ್ಧ ಹೆಸರು ಮಖ಼್‌ದೂಂ ಶಾಹ. ನಿಜಾಂಶವೆಂದರೆ ಹುಲಿಯ ಮರಿ ಹುಲಿನೇ ಆಗುವುದು. ಬೆಂಕಿಯೇ ಉರಿಯುತ್ತದೆ ಆದರೆ ಬೆಂಕಿನೇ ಕೊಡುತ್ತದೆ. ಸಣ್ಣ ವಯಸ್ಸು ಆದರೆ ಧೈರ್ಯದಿಂದ ದೊಡ್ಡ ಕೆಲಸ ಸಾಧಿಸುವನು. ಎಲ್ಲಿಯವರೆಗೆ ಆಕಾಶವಿದೆಯೋ ಅಲ್ಲಿಯವರೆಗೆ ತಲೆ ಕೊಟ್ಟು ನಿಂತುಕೊಂಡ, ಯಾರು ತನ್ನ ರಿಕಾಬಿನ ಮೇಲೆ ಚತುರ ದೃಷ್ಟಿ ಇಡುವುದಿಲ್ಲವೋ ಕುದುರೆಯಿಂದ ಮುಂದೆ ಬೇಗನೇ ಕೈ ಚಲಾಯಿಸುವವನು. ಶಾಹರು ಈ ರೀತಿಯಾಗಿ ಯುದ್ಧಕ್ಕಾಗಿ ಸಾಲುಕಟ್ಟಿ ಒಂಭತ್ತನೇ ವರ್ಷದಲ್ಲಿ ಖಡ್ಗ ಹಿಡಿದಿದ್ದರು. ಅಪ್ಪ ಏನು ಸೇನಾನಾಯಕತ್ವ ಮಾಡಿದ್ದ. ಅವನೇ ಸ್ವತಃ ಹರಿತ ತೆಗೆದುಕೊಂಡ. ಸೇನಾನಾಯಕ ಆಗಾಗ ಚಿನ್ನದ ವರಕಿನ ರಹಸ್ಯವನ್ನು ತಿಳಿದಿದ್ದ ನನ್ನ ಹೃದಯದಲ್ಲಿ ಎಂತಹ ರೇಖೆ ನೆಲಸಿದೆ. ಮರಾಠರ ಯುದ್ಧದಲ್ಲಿ ಹತೋಟಿ ತಪ್ಪಿದೆ. ಅದರಲ್ಲಿ ನಮ್ಮ ಧ್ವಜವೇ ಕಾಣಿಸುತ್ತಿದೆ. ನಾವು ನಮ್ಮ ಮೇಲೆ ಹತೋಟಿ ಇಡಬೇಕು. ಉಬ್ಬುವುದು ಬೇಕಿಲ್ಲ. ನಮ್ಮ ಧ್ವಜದ ಮಾಲೆ ಸುತ್ತುವುದು ಬೇಡ. ಈ ಸಮಯದಲ್ಲಿ ಗಟ್ಟಿ ಭಲ್ಲೆಗಳನ್ನು ತೆಗೆದುಕೊಂಡು ಹೂತುಕೊಂಡು ನಮ್ಮ ತಲೆ ಕೊಡಬೇಕಿದೆ. ಈ ಮಾತನ್ನು ಹೇಳಿ ಸುತ್ತಲಿಂದಲೂ ಆವರಿಸಿದ್ದ ಆಪತ್ತನ್ನು ತೆರೆಯಲು ಭಲ್ಲೆಯನ್ನು ತಳ್ಳಿ ತನ್ನ ಜನರಿಗೆ ಆಟ ತೋರಲು ಹೊರಟ. ಸೂರ್ಯನಂತಹ ವರ್ತುಲವನ್ನು ರಕ್ತ ಕುಡಿಸಿದ. ದಿನದ ಜಾಸ್ತಿ ಭಾಗ ಬೇಗನೇ ಮುಗಿಯಲಿದೆ ಎಂದು ನೋಡಿ ಪ್ರಸಿದ್ಧರು ಸುತ್ತಲಿಂದಲೂ ಆಕ್ರಮಿಸಿದರು. ಎರಡು ಕಡೆಯ ಸೈನ್ಯಗಳ ಮಧ್ಯೆ ಕರಾಳ ಯುದ್ಧ ನಡೆಯಿತು. ಅಧಿಕ ಗೊಂದಲವನ್ನು ನೋಡಿ ಗಗನ ಮಾಯವಾಯಿತು. ತೋಪಿನ ಬಾಯಿಗಳಿಂದ ಗೋಲೆಗಳ ಹಿಂಡು ಹಾಗೂ ಚಿಕ್ಕ ತೋಪುಗಳನ್ನು ದಾಟಿಸಲು ಪ್ರಾಣವೇ ಹೋಗುತ್ತಿತ್ತು. ಹೇಗೆ ಹೊಡೆಯಲಾರಂಭಿಸಿದರೆಂದರೆ ಕುದುರೆಗಳನ್ನು ಹೂತಿಸಿ ಬಾಣ ಖಡ್ಗಗಳು ಹೂತುಹೋಯಿತು. ಬಾಣಗಳು ಹಾಗೂ ಖಡ್ಗಗಳು ಸುರಿಯಲು ಆರಂಭವಾದವು. ರಕ್ತದ ಸುರಿಮಳೆ ಹಾಗೂ ಸಿಡಿಲು ಕಾರ್ಮೋಡ ಪ್ರತಿಯೊಂದು ಖಡ್ಗದಿಂದ ಅಗಣಿತ ಬೆಂಕಿ ಬೀಳುತ್ತಿತ್ತು. ಎಲ್ಲ ಶಸ್ತ್ರಗಳು ಕೆಂಪು ಬೆಂಕಿಯಂತಾದವು. ಖಡ್ಗಗಳ ಮೋಡಗಳಿಂದ ಬೆಂಕಿಯ ಕಣಗಳ ಹೂವು ಉದುರಿದವು. ಜಾಗದ ಬದಲು ಎಲ್ಲ ಹೂವು ಧೂಳು ಧರಿಸಿದವು ಬೆಂಕಿಯ ಕಣಗಳಿಂದ ಬಿದಿರು ಬೆಂಕಿ ಹಿಡಿಯಿತು. ಬಾಣಗಳು ಹೋಗುವುದನ್ನು ನೋಡಿದರೆ ಅವು ಹುಲ್ಲಿನ ಕಡ್ಡಿಗಳಂತೆ ಕಾಣುತ್ತಿದ್ದವು. ಬೆಟ್ಟಗಳು ಗಾಳಿಯಲ್ಲಿ ಧೂಳಾಗಿ ನಿಂತವು. ಕಿಡಿಗಳ ನರಗಳಿಂದ ರಕ್ತದ ಚಿಮ್ಮು ಹೂವಂತೆ ಕಾಣುತ್ತಿದೆ. ರಕ್ತ ನೆಲದ ಮೇಲೆ ಹೆಪ್ಪು ಕಟ್ಟಿ ಗಾಳಿಯಲ್ಲಿ ಹೊಗೆ ಭೂಮಿಗಳು ಎಂಟು ಹತ್ತು ಆಕಾಶಗಳಾದವು. ಕುದುರೆಗಳ ಗೊರಸುಗಳು ರಕ್ತದಿಂದ ಗೋರಂಟಿ ಅಂಟಿಸಿದಂತಾಯಿತು ಹಾಗೂ ಬಾಲ ಮನ್ಜೀಟಿನ ರತ್ನದ ಬಣ್ಣ ತಿರುಗಿತು. ಶತ್ರುಗಳ ಗಾಯಗಳು ಹೆಚ್ಚಿದಂತೆ ಕೋಪ ಜಾಸ್ತಿಯಾಯಿತು. ಅನೇಕರು ತಮ್ಮ ಅಡ್ಡ ಶಸ್ತ್ರಗಳನ್ನು

ಹಿಡಿದಾಗ ಕೊಂಡಿಗಳಲ್ಲಿ ಕುದುರೆ ಚರ್ಮ ಕೈಗೆ ಬರುತ್ತಿತ್ತು. ತಲೆ ನೋಡಿ ಶಿರಸ್ತ್ರಾಣದ ಮೇಲೆ ಪ್ರತಿಯೊಂದು ಹಲ್ಲೆ ಮುಗಿದಾಗ ಚೆನ್ನಾಗಿ ಹೂತು ಅವುಗಳನ್ನು ಮುರಿದರು. ಕಾಡಲ್ಲಿ ಮುಳ್ಳುಗಳು ಹೇಗೆ ಬಟ್ಟೆಗಳನ್ನು ಹರಿಯುತ್ತವೋ ಹಾಗೆ ಎದೆಗಳ ಮೇಲೆ ಶಸ್ತ್ರಗಳನ್ನು ಹೊಡೆದು ನುಚ್ಚುನೂರು ಮಾಡಿದರು. ಆದರೆ ದಕ್ಷಿಣದ ಸಿಪಾಯಿಗಳು ಶೂರರು, ಖಡ್ಗದಿಂದ ಯುದ್ಧ ಮಾಡುವುದರಲ್ಲಿ ಪ್ರಸಿದ್ಧರು. ಖಾನನ ಸುಪುತ್ರನು ಭಲ್ಲೆಯನ್ನು ಎತ್ತಿಕೊಂಡು ಎಲ್ಲ ಕಡೆ ಯುದ್ಧಕ್ಕಾಗಿ ನಿಂತಿದ್ದ ಪಂಕ್ತಿಗಳ ಮೇಲೆ ನಿರಂತರವಾಗಿ ಹೋರಾಡಿದ. ಯುದ್ಧದ ನದಿಯಲ್ಲಿ ಶರ್ಝನ ಸೈನ್ಯ ಸುತ್ತಲಿಂದಲೂ ಅಲೆಗಳನ್ನು ಏಳಿಸಿ ಪ್ರವಾಹ ಉಂಟು ಮಾಡಿತು, ತಲೆಕೆಳಗಾಗಿ ನದಿಯ ಬಣ್ಣ ಬದಲಿಸಿತು. ಮೀನು ಮತ್ತು ಮೊಸಳೆಗೆ ಕಲಾಯಿ ಮಾಡಿದಂತಾಯಿತು. ಖಡ್ಗದಲ್ಲಿ ನೀರು ಮತ್ತು ಬೆಂಕಿ ಅಡಗಿದ್ದು ಆಗ ಅವು ಎರಡರ ಗುಟ್ಟು ರಟ್ಟಾಯಿತು. ಆಕ್ರಮಿಸಿದರೆ ದಟ್ಟನೆ ಬೆಂಕಿ ಉದುರಿ ಕುಯಿದಾಗ ಪ್ರಾಣ ನೀರಲ್ಲಿ ಮುಳುಗುತ್ತಿತ್ತು. ಭೀಕರ ಯುದ್ಧ ನಡೆದ ಹಾಗೆ ಕಾಣುತ್ತಿತ್ತು. ಶತ್ರು ಪ್ರಾಣ ಕೊಡಲು ಸಿದ್ಧನಾದಂತೆ ಕಂಡಿತು. ಯುದ್ಧ ಬೆಂಕಿಯಾಗಿ ಜ್ವಾಲಮುಖಿಯಾಗಿ ಗಗನದ ಮನೆ ಸುಡಲು ಸಿದ್ದವಾಯಿತು. ಎರಡು ಸೇನೆ ಸೇರಿ ರುಬ್ಬುವಂತೆ ಕಾಣತೊಡಗಿದವು. ಎಂತಹ ಗಂಟು ಬಿತ್ತೆಂದರೆ ಬಿಚ್ಚಲು ಸಾಧ್ಯವಿಲ್ಲದಂತೆ ಕಾಣಿತು. ಆಗ ಖಾನ್ ಹೇಳಿದ ಈಗ ನನ್ನ ಕೆಲಸ ಬೆಂಕಿ ಚೆನ್ನಾಗಿ ಹುರಿದಿದೆ ಅದನ್ನು ರಕ್ಷಿಸಬೇಕು. ಮುಘಲರ ದಂಡಂತು ಯಕ್ಷಗಳ ದಂಡು ಎಷ್ಟಾದರು ನಾಶ ಮಾಡಿರಿ ಕಡಿಮೆಯಾಗುವ ಸಂಭವ ಕಡಿಮೆ. ಜೀವಂತ ಇರುವವರನ್ನೂ ಸಾಯಿಸುತ್ತಾನೆ. ನಮ್ಮ ಬಳಿ ಲಕ್ಷಕ್ಕೆ ಒಬ್ಬ ವ್ಯಕ್ತಿ ಇದ್ದಾನೆ. ಅದರಲ್ಲಿ ಕುಸಿತ ಆಗಬಾರದು. ಕಾಲು ಮುರಿದರೆ ಹುಲ್ಲಿಗೇನು ವಿಪತ್ತು ಆದರೇ ತೋಳುಗಳನ್ನು ಕಾಪಾಡಿಟ್ಟುಕೊಂಡಿರಬೇಕು. ಶತ್ರುಪಂಕ್ತಿಗಳಿಗೆ ಅವಮಾನಿಸಲು ಶರ್ಝನು ಕುದುರೆ ಮೇಲಿಂದ ಗೋತ ಹೊಡೆದ. ಖಾಫ್ ಬೆಟ್ಟದ ಬಲಿಷ್ಠವಾದ ಶರ್ಝನನ್ನು ಅತಿ ಬಡಾಯಿ ಹೊಡೆದು ಮೋಸಮಾಡಿದ ಎಂದು ಹೇಳಲಾಗುತ್ತದೆ. ಹಾಗೆಯೇ ಶರ್ಝನು ವರ್ತಿಸಿದ. ಅದಾಗ್ಯೂ ಶೂರ ಭೂಮಿಗೆ ನಿತ್ಯವೂ ಊರುಕೊಂಡಿರಲಿ. ಇಳಿಯುವಾಗ ನಮ್ಮ ಜೊತೆಯಲ್ಲಿ ದೃಢವಾಗಿ ಬರಲಿ. ಯಾವಾಗ ಪಂಕ್ತಿಯನ್ನು ತಳ್ಳಿದನೋ ವೈಶಿಷ್ಟ್ಯ ರುಬ್ಬಿತು ಆಗ ಜಗಳದ ಬೆಂಕಿಯ ಮೇಲೆ ಎಣ್ಣೆ ಬಿತ್ತು. ಯುದ್ಧ ಕಾವು ಏರಿದಾಗ ಖಡ್ಗ ಹೆಬ್ಬಾವಾಗಿ ಖಡ್ಗದ ಹರಿತ ಬೆಂಕಿಯಾಗಿ ಶತ್ರುಗಳ ಮೇಲೆ ಉದುರಲಾರಂಭಿಸಿತು. ಅಸ್ತಿತ್ವಗಳ ಮೇಲೆ ಖಡ್ಗಗಳ ನೀರು ಸುರಿಯಲಾರಂಭಿಸಿದಾಗ ನರಗಳಿಂದ ಕೆಂಪು ರಕ್ತದ ನದಿಗಳು ಹರಿದು ಕೋಡಿಬಿದ್ದವು. ಖಡ್ಗ ಹಾಗೂ ಬಾಣ ಪರಸ್ಪರ ಅಪ್ಪರಿಸಿಕೊಂಡು ಒಬ್ಬರಿಂದ ಒಬ್ಬರಿಗೆ ಪ್ರಶ್ನೋತ್ತರ ಪ್ರಾರಂಭವಾಯಿತು. ಪಠಾಣರ ಕೈಬಲದ ಶಕ್ತಿಯನ್ನು ತೆಗೆದುಕೊಂಡು ದೃಷ್ಟಿಯ ಜೀವ ಇಡೀ ಪ್ರಪಂಚದಲ್ಲಿ ತುಂಬಿದರು. ಕವಚದ ಒಂದೊಂದು ಕೊಂಡಿಯಲ್ಲಿ ಬಾಣ ಹೂತು, ಪ್ರತಿಯೊಂದು ಶರೀರಕ್ಕೆ ಪಾತೆ ಕಟ್ಟಿ ಮರ ಬೆಳಿಸಿದರು. ಒದ್ದೆ ಗೋಡೆ ಮೇಲೆ ಹೇಗೆ ಮುಹರ್

ಇಡುತ್ತಿದ್ದರು. ತನ್ನ ಈ ಉದ್ಯಮದಲ್ಲಿ ಯಾವುದೇ ಬದಲಾವಣೆ ಬರಲು ಕೊಡಲಿಲ್ಲ. ಬಾಣಗಳನ್ನು ಆರಿಸಿ ಕೇಶಾಗ್ರಖಂಡನೆ ಏನು ಮಾಡಿದರೋ ಕವಚದ ಕೊಂಡಿಯ ಒಂದು ಮುಳ್ಳುಸಹ ಇರಲಿಲ್ಲ. ತಲೆ ಮೇಲಿನ ಹೊದಿಕೆಗೆ ಕೋಳಿ ಮೊಟ್ಟೆ ಎಂದು ತಿಳಿದು ಶಿರಸ್ತ್ರಾಣದ ಕಾಡನ್ನು ಬಾಣಗಳಿಂದ ಸ್ವಚ್ಛ ಮಾಡಿದರು. ಎಲ್ಲ ಬಿಲ್ಲುಗಳು ಬಿರುಕು ಬಿಟ್ಟು ಮುರಿಯುವವರೆಗೂ ಚತುರ ಬಾಣ ಅಧಿಕವಾಗಿ ನಿರಂತರ ನಡೆಯುತ್ತಲೇ ಇದ್ದವು. ಪ್ರಪಂಚದ ಉಗುರುಗಳ ಮೇಲೆ ತಗಲಿರುವ ರಕ್ತದಿಂದ ಖಚಿತವಾದ ತುಂಡುಗಳು ಹಳ್ಳಿ ಗಮಾರದಂತೆ ನೋಡುತಿದ್ದವು. ಆದರೆ ಧಾವಿಸುತ್ತ ಶರ್ಝಾ ಹೊತುಕೊಂಡು ಹೋಗುತ್ತಲೇ ಇದ್ದ. ಅವನಿಗೆ ಬಾಣ ಹಾಗೂ ಖಡ್ಗ ಕಸಿಕಡ್ಡಿ ಇದ್ದಹಾಗಿತ್ತು. ಶರ್ಝನ ಕೈಯಲ್ಲಿ ಖಡ್ಗ ಪ್ರತಿಷ್ಠಿತವಾಗಿ ಅದರ ನಾಲಿಗೆ ಇನ್ನಷ್ಟು ಉದ್ದನೇ ಮಾಡಿದ. ಯಾವಾಗ ಎದುರಾಳಿಗೆ ಎಲ್ಲವು ಪರಿಪೂರ್ಣವಾಗಿ ಅರಿವು ಕೊಟ್ಟಾಗ ಕವಚದ ಪ್ರತಿಯೊಂದು ಕೊಂಡಿಯು ಕಿವಿಯಾಗಿ ಕೇಳಿತು. ಶತ್ರುವಿನ ಜೀವ ಶರೀರದಲ್ಲಿ ಸಹಸ್ರಾರು ತುಟಿಗಳನ್ನು ಬಿಚ್ಚಿ ಗಾಯಗಳ ಕೂಗು ತಂದಿತು. ಈ ಶಹಜವಾನರು ಯಾವ ಕಡೆ ತಿರುಗುವರೋ ನಿಸ್ಸಂದೇಹವಾಗಿ ಯುದ್ಧದ ಸಾಲುಗಳನ್ನು ತಳಕೆಳಗೆ ಮಾಡಿ ಮೊಗಚುವರು. ಆನೆ ಹೇಗೆ ದೊಡ್ಡ ತೊಲೆ ಮುದುಡಿ ಎಸೆಯುತ್ತದೆಯೋ ಹಾಗೆಯೇ ಯುದ್ಧದಲ್ಲಿ ಅದೇ ರೀತಿಯಾಗಿ ವರ್ತಿಸಿ ಬಾಣಗಳನ್ನು ಮುರಿದು ಬೀಸಾಡಿದರು. ಯಾವುದೇ ಶರೀರದ ಮೇಲೆ ಒಳ್ಳೆ ಹಲ್ಲೆ ಮಾಡುವರೋ ಆತ್ಮಕ್ಕೂ ತಿಳಿಯದಂತೆ ಅದು ಶರೀರ ದಾಟಿರುತ್ತದೆ. ಕೈ ಬಿಟ್ಟು ಖಡ್ಗಗಳ ಏಟುಗಳನ್ನು ಬಿಚ್ಚಿ ಹೊಡೆದರೆ ಹೊಡೆತಗಳ ಮಂಥನ ಅಡ್ಡಬಂದು ಸಿಪ್ಪೆ ಕಪ್ಪಗಾಗುತ್ತದೆ. ಕವಚದಿಂದ ತಾಟಿನ ಜಾಲಿ ಸುಲಿದು ಹೋಗಿ ಮೂಳೆಗಳಿಂದ ಎಣ್ಣೆ ಪಸೆ ಬಿಟ್ಟುಹೋಗಿ ಬೆತ್ತದಂತಾದವು. ಹಲ್ಲೆಯಲ್ಲಿ ಕೊಂಡಿಗಳು ಹೋಗಿ ಕವಚದಲ್ಲಿ ಹೂತುಹೋದವು ಗಾಯಗಳು ಯಾವಾಗ ನಗುತ್ತವೋ ಅವು ದಂತಗಳಹಾಗೆ ಕಾಣುತ್ತವೆ. ರಕ್ತದ ಕಲೆಗಳಿಂದ ಎಲ್ಲ ಗುರಾಣಿಗಳು ಸುಂದರ ಕೆಂಪು ಬಣ್ಣ ಧರಿಸಿದವು. ಅದರಲ್ಲಿ ನಿಜವಾದ ಕೆಂಪು ಬಣ್ಣ ಅಡಗಿ ಹೋಯಿತು. ಸಾವು ಮನೆಯೊಳಗೆ ಹೋಗಿ ನೋಡಿತು ಶರೀರದ ಗಾಯಗಳ ಅನೇಕ ಬಾಗಿಲುಗಳನ್ನು ತೆರೆದಿತು. ಸಾವಿನದೇ ಕಾರಣ ಅವರ ಕೈಯಲ್ಲಿತ್ತು. ಏಟು ಬೀಳುತ್ತಿದ್ದ ಹಾಗೆ ಜೀವ ತೆಗೆದುಕೊಂಡು ಹೋಯಿತು. ಪಠಾಣರು ಇಂತದ್ದರಲ್ಲಿ ತನ್ನ ಅರಿವು ಕಳೆದುಕೊಳ್ಳಲಿಲ್ಲ, ಬಾಣ ಕಠಾರಿಗಳ ಮರ್ಯಾದೆ ಉಳಿಸಿಕೊಂಡರು. ಎಷ್ಟೊಂದು ಬಾಣಗಳು ಹಾಗೂ ಮೆಹರಿಗಳೆಲ್ಲ ಶರೀರದ ಯಾವುದೇ ಭಾಗದಲ್ಲಿ ತಗಲಿದ್ದವೋ ಅದರ ಗುರುತುಗಳಿರಲಿಲ್ಲ. ಎದುರಿಸುವವರ ಮೇಲೆ ಯಾವಾಗ ಭಾರ ಬಿತ್ತೋ ಒಂದೊಂದು ಶರೀರ ವಿನಾಕಾರಣ ಶಸ್ತ್ರಗಳನ್ನು ಎತ್ತಿಕೊಂಡಿತು. ಅದು ಚಾಕುಗಳೇ ಇರಲಿ, ಕಟ್ಟುಕೆ ಇರಲಿ, ಕಠಾರಿ ಇರಲಿ ಅವನು ಸಾಯುವವರೆಗೂ ಹೊಡೆಯುತ್ತಲೇ ಇದ್ದನು. ತನ್ನ ಅಸ್ತಿತ್ವಗಳ ಮೇಲೆ ಶ್ರಮದಿಂದ ದುಃಖ ಎಷ್ಟೊಂದು ಇತ್ತು ಜೀವವಿಲ್ಲದೇ ಶರೀರದಿಂದ ಸುಖ

ಪಡೆಯಲಿಲ್ಲ. ಬೇರೆ ಆಗುವ ತನಕ ಶರೀರದ ಭಾಗಗಳಿಗೆ ಶ್ರಮ ಮುಚ್ಚಿದ ನಂತರವೂ ಅವರು ನಷ್ಟ ಅನುಭವಿಸುತ್ತಲೇ ಇದ್ದರು. ರಕ್ತದ ದಾರಿಯಿಂದ ಉಷ್ಣ ಹೊರಬರಲಾರಂಭಿಸಿತು. ಬೇರೆಯಾಗಲು ನರ ನರ ಹಾರಲಾರಂಭಿಸಿತು. ಕರಿ ಶರೀರಗಳು ಕೆಂಪು ಬಣ್ಣವಾಗಿ ಬಿದ್ದಿದ್ದವು. ರಕ್ತ ಬಣ್ಣದಂತೆ ಭಲ ಭಲ ಹಾರಿತು ಹೂವಿನ ಹಾಗೆ. ಆ ಕರಿ ಬಣ್ಣ ಹಾಸ್ಯಕ್ಕಾಗಿ ಎರಚಿಸುತ್ತಿದ್ದ. ಅದರಿಂದ ಪ್ರತಿಯೊಬ್ಬ ಜವಾನನೂ ಸಹ ಸಂಪೂರ್ಣವಾಗಿ ಹೊಣೆಮುಕ್ತನಾದನು. ಅವನ ದೃಷ್ಟಿ ವಿಶೇಷವಾಗಿ ವೈಶಿಷ್ಟ್ಯ ಮೇಲಿತ್ತು ಇಡೀ ದಂಡಿನ ತಾತ್ಪರ್ಯ ಅದರ ಮೇಲೆ ಆಧಾರವಾಗಿತ್ತು. ವೈಶಿಷ್ಟ್ಯತೆಯಿಂದ ವೈಶಿಷ್ಟ್ಯತೆಯ ಮಾತು ಹೀಗೆ ಬೆಳೆಯಿತು, ಶರ್ಝುನ ಮಾತು ತಿರಸ್ಕರಿಸಲು ಯಾರಿಂದ ಸಾಧ್ಯ? ಅವನ ಹೃದಯದ ಬಂಡವಾಳ ನೋಡಲು ಜಲಧಾರೆಯಿಂದ ಅವನ ಎದೆಯ ಎಲ್ಲ ಸಣ್ಣರಂದ್ರಗಳನ್ನು ಮಾಡಿದ. ಕಠಾರಿಗಳಿಂದ ಶರ್ಝುನು ಸರ್‌ಪಂಜ ಹೊಡೆದು ಎಷ್ಟೊಂದು ಗಟ್ಟಿ ಜೀವಗಳಿದ್ದವೊ ಅವೆಲ್ಲವೂ ಹೊರಗೆ ತೆಗೆದರು. ಕಠಾರಿಗಳ ಹಿಡಿಗಳಿಗೆ ಸ್ವಲ್ಪ ರಕ್ತ ತಗಲಿ ಬರ್ಚಿಗಳ ಕೈ ಡೊಂಕಾಗಿ ಅದರ ದಂತಗಳು ಮುರಿದವು. ಕೈಯೊಂದಿಗೆ ಕೊರಳು ಹೀಗೆ ರುಂಡದೊಡನೆ ಯುದ್ಧ ಆಡುತ್ತ ಹೇಗೆ ಕಾಣುವುದೆಂದರೆ ಕರಿಮಣಿ ಸಿಕ್ಕಿಕೊಂಡು ಪಡತಿಗಳು ಉದುರುತ್ತವೆ. ಸುಲೈಮಾನರ ಪಗದಾಳಗಳ ಮೇಲೆ ಚಾವುಟಿ ಬಿದ್ದ ಹಾಗೆ ಕಣ್ಣುಗಳಲ್ಲಿ ದಾತಿ ಬಂದು ದಂತಗಳು ಉದುರಿದವು. ತಲೆ ಮತ್ತು ಕರುಳು ಎಲ್ಲ ಚಲ್ಲಾಪಿಲ್ಲಿಯಾಗಿದ್ದನ್ನು ನೋಡಿದರೆ ಕಲ್ಲಂಗಡಿಯ ಬಳ್ಳಿ ಹಬ್ಬಿದೆ ಎಂದು ಹೇಳಬಹುದು. ಯಾರು ತಮ್ಮ ಹೊಟ್ಟೆಗಳ ಮೇಲೆ ಗುರಾಣಿಗಳನ್ನು ಹಿಡಿದು ಹೊರಳಿ ಬಿದ್ದಿದ್ದರೋ ಅವರು ಕಲ್ಲಿನ ಮೇಲೆ ಕೆಸರಿನಹುಳುಗಳು ಹಿಡಿದ ಹಾಗೆ ಕಾಣುತ್ತಿದ್ದವು. ಒಬ್ಬನ ಕರಳು ಇನೊಬ್ಬನ ಜೊತೆಯಲ್ಲಿ ಕಟ್ಟಿದ್ದವು. ಎಷ್ಟೊಂದು ತೋಳ ಹಾಗೂ ನರಿಗಳಿದ್ದವೋ ಅವುಗಳಿಗೆಲ್ಲ ಗಾಳಿ ಸನ್ನೆ ಕೊಟ್ಟಿತು. ಹದ್ದು ಕಾಗೆಗಳೆಲ್ಲ ಶವಗಳನ್ನು ಸೆರೆಹಿಡಿದವು. ಯಾರು ಪಕ್ಕೆಲುಬು ಎಸೆದು ಬಿದ್ದಿದ್ದನೋ ಅವನ ಮುಖ ಸಂಪೂರ್ಣವಾಗಿ ವಿರೂಪಗೊಂಡಿತ್ತು. ಭೂಮಿ ಹಾಗು ಅದರ ಉನ್ನತ ಸ್ಥಾನ ಎಲ್ಲವೂ ಒಂದೇ ಬಣ್ಣ ಆಯಿತು. ಭೀಕರ ಯುದ್ಧ ನಡೆದು ಶವಗಳಿಂದ ಭೂಮಿ ಇಕ್ಕಟ್ಟಾಯಿತು. ಉನ್ನತ ಸ್ಥಾನ ಮತ್ತೆ ತಾಜಾ ಕೆಂಪು ಕಂಡಿತು. ಪ್ರತಿಯೊಂದು ಬಿದ್ದಿದ್ದ ಶರೀರ ಖಾಲಿ ಕಾಣುತ್ತಿತ್ತು. ಸುತ್ತಮುತ್ತಿನ ಎಲ್ಲ ಯುದ್ಧದ ಸಾಲುಗಳನ್ನು ಹೊಡೆದು ಸ್ವಚ್ಛ ಮಾಡಲಾಗಿತ್ತು. ಯಾವ ಸಶಸ್ತ್ರಗಳನ್ನು ಹಿಡಿದಿದ್ದರೋ ಅವೆಲ್ಲ ನಾಶವಾದವು. ಯಾರು ಮಾತು ಕೇಳಿದರೋ ಅವರಿಗೆ ಆಶ್ರಯ ಕೊಡಲಾಯಿತು. ಯಾರು ಜೀವದಾನ ಕೇಳಿದರೋ ಅವರಿಗೆ ಅದು ಕೊಡಲಾಯಿತು. ಅವನ ಸಂಬಂಧಿಕರು ಕೈದಿ ಆದವರನ್ನು ಉಪಕಾರ ಮಾಡಿ ಒಂದು ಉದಾಹರಣೆ ಖಾಯಂ ಆಗಲೆಂದು ಅವರಿಗೆಲ್ಲ ಸ್ವತಂತ್ರಗೊಳಿಸಿದರು. ತಾವು ಅವರ ಮೇಲೆ ದಯಾಳುಗಳಾಗಿದ್ದೇವೆ ಎಂದು ಸಾಬೀತು ಮಾಡಲು ಅವರಿಗೆ ಸನ್ಮಾನಿಸಿದರು. ಅಂದರೆ ಶವಬಟ್ಟೆ ಕೊಟ್ಟರು. ಜನರಲ್ಲಿ ಹಣಪೋಲನ್ನು ಮಾಡಿದರು ಎಷ್ಟು ಅವರು

ತೆಗೆದುಕೊಂಡು ಹೋಗಲು ಸಾಧ್ಯವೋ ಕೊಟ್ಟರು. ಉಳಿದಿದ್ದನ್ನೆಲ್ಲ ಶೇಖರಿಸಿ ಒಂದು ಬಲೆಯಲ್ಲಿ ಕಟ್ಟಿ ಎಸೆದರು. ಅವನು ಸಮರ ಮೈದಾನದಲ್ಲಿ ನಿಂತು ವಿಜಯದ ವಾದ್ಯಗಳನ್ನು ಬಾರಿಸಲು ತೊಡಗಿದ. ಶತ್ರುಗಳು ಅಲ್ಲಲ್ಲಿ ಎಚ್ಚರಿಕೆ ಹಾಗೂ ಬುದ್ಧಿವಾದ ಪಡೆದರು. ಆಶಂಕೆಯಿಂದ ಕೆಲಸ ತೆಗೆದುಕೊಂಡು ವಿಜಯ ಸಾಧಿಸಿದರು. ನಂತರ ಜೈಸಿಂಘ್‌ನನ್ನು ನೋಡಿಕೊಳ್ಳಲು ಹೊರಟ ಎಲ್ಲ ಆಧಾರ ಸಲಾಬತ್‌ನ ಬರುವಿಕೆ ಮೇಲಿತ್ತು. ಅವನು ಬಂದ ನಂತರ ಯುದ್ಧದ ತಯಾರಿ ಮಾಡಬೇಕಿತ್ತು. ಅವನನ್ನು ಕೊಂಡು ಶೂನ್ಯತೆಯ ಪ್ರಪಂಚಕ್ಕೆ ಕಳುಹಿಸಿದಾಗ ದಂಡನಾಯಕನ ಕಾಲು ತತ್ತರಿಸಿದವು. ಎಲ್ಲ ಲಡಿಗಳು ಹೆಚ್ಚು ಸಂಖ್ಯೆಯಲ್ಲಿ ಬಂದು ಸೇರಿದ ಕಾರಣ ನದಿಗೆ ಮುಂದೆ ಸಾಗುವ ದಾರಿಸಿಗಲಿಲ್ಲ.(೫೪೨-೫೬೦೭)

ಮಾತೇನೆಂದರೇ ಜೈ ಸಿಂಘ್ ದುಸ್ಥಿತಿಯಲ್ಲಿ ಸನಕ್ ಕೋಟೆಯ ಬಳಿ ಓಡಾಡಿಕೊಂಡು ಬಿಲ ಒಳಗಿನಿಂದ ಇಣಿಕಿದ.

ಭಲೆರೇ! ಅಲಿ ಆದಿಲ್ ಶಾಹ್ ಬುದ್ಧಿವಂತ. ಅವನ ದೊಡ್ಡ ಮಂತ್ರಾಲೋಚನೆ, ಅವನ ಅದೃಷ್ಟ ಶ್ರೇಷ್ಠ ಬಲು ಸದ್ವಿಚಾರಿ, ದೊಡ್ಡ ಪ್ರಾಮಾಣಿಕ, ದೊಡ್ಡ ಕಾರ್ಯನಿವಾಹಕ ದೊಡ್ಡ ಮುಂದಾಳು. ಎಲ್ಲಿಯವರೆಗೆ ಮುಘಲ್ ಆತ್ಮೀಯನಾಗಿದ್ದನೋ ಅಲ್ಲಿಯವರಿಗೂ ಸಹಬಾಳುವೆ ನಡೆಸುವವನಾಗಿ ಸ್ನೇಹ ನಿಭಾಯಿಸಿಕೊಂಡು ಬಂದ. ಯಾವಾಗ ಅವನ ಮನಸ್ಸು ಕೆಟ್ಟದನ್ನು ಆಲೋಚಿಸಲಾರಂಭಿಸಿತೋ ಆಗ ಅವರನ್ನು ಶಿಕ್ಷಿಸುತ್ತ ಪಾಠಕಲಿಸಿದ. ಈ ಅಂಶವನ್ನು ಊಹಿಸುವರು ತಿಳಿಯಬಹುದು. ಅಂದರೆ ಮುಘಲ್ ಸಾವಂದಿ ಕೋಟೆ ಬಳಿ ಬಂದಿದ್ದಾನೆ. ಯುದ್ಧದಲ್ಲಿ ನಿತ್ಯವೂ ಹೇಗೆ ಪರಾಜಿಸುವನೆಂದರೆ ಮತ್ತೆ ಅವರು ಕೋಟೆಯೊಳಗೆ ಇಣುಕಿ ನೋಡುವ ಧೈರ್ಯ ಮಾಡದೇ ಹಿಂದುರುಗುತ್ತಿದ್ದರು. ಶಾಹನ ಚಿಂತನೆ ಒಪ್ಪಿಕೊಳ್ಳುವಂತಹದೆ. ಅವರು ಮನ ಬಿಚ್ಚಿ ಎಲ್ಲ ಕಥೆ ಹೀಗೆ ಹೇಳಿದರು. ಜೈಸಿಂಘ್ ಬಹಳ ಆಸೆಯಿಂದ ಬರುತ್ತಿದ್ದಾನೆ, ಪ್ರತಿಕ್ಷಣ ಆ ಜೀವನ ಬರುತ್ತಿದ್ದ ಹಾಗೆ ದಕ್ಷಿಣದ ಸುಪ್ರಸಿದ್ಧ ದಂಡನಾಯಕ ಶರ್ಝಾ ಖಾನ್ ಮುಘಲರ ಸರಹದ್ದಿನ ಮಧ್ಯದಲ್ಲಿ ಹೋಗಿ ಸಲಾಬತ್ ಖಾನನ ದಂಡನ್ನು ವಧಿಸಿದ ಎಂಬ ಸುದ್ದಿ ಬಂತು. ತನ್ನ ಸಾಮಾನೆಲ್ಲ ಸುಟ್ಟು ಹಾಳಾಗಿದ್ದನ್ನು ನೋಡಿ ಸರಿಯಾಗಿದ್ದ ಕೆಲಸವೆಲ್ಲ ಕೆಟ್ಟುಹೋಯಿತು. ಈ ಮಾತನ್ನು ಕೇಳಿ ಅವನ ಸೊಂಟ ಬಿದ್ದು ಹೋಯಿತು. ಅಫೀಮಿನ ಮದ್ಯ ಇಳಿದು ಬಾಯಿಯಲ್ಲ ಹುಳಿಯಾಯಿತು. ಬೆಳಗಿದ್ದ ದಿನ ಅಡಗಿ ಹೋಗಿ ಕತ್ತಲೆ ಆವರಿಸಿತು. ಆಕಾಶ ತಲೆ ಮೇಲೆ ಬಿದ್ದಿತು. ಹೃದಯದಲ್ಲಿ ಇರುಳಾಗಿ ನಕ್ಷತ್ರಗಳೆಲ್ಲ ಉದುರಿದವು. ಬೆಂಕಿ ಹರಿದು ಅಶ್ರು ಬದಲಿಗೆ ಬೆಂಕಿ ಬೀಳಲಾರಂಭಿಸಿತು. ಗಾಳಿ ಜೀವನದ ವೃಕ್ಷದ ಬೇರು ಕಿತ್ತುಹಾಕುತ್ತಿದೆ. ಡೇರೆಯ ಹಗ್ಗದ ಜೊತೆಯಲ್ಲಿ ಎಲ್ಲ ಮೊಳೆಗಳೆಲ್ಲ ಕಿತ್ತುಹೊಗುತ್ತಿದೆ. ಈ ಗಾಳಿಯಿಂದ ಡೇರೆ ತನ್ನ ಕಾಲೂರಿ ನಿಲ್ಲಲು ಸಾಧ್ಯವಿಲ್ಲ ಹಾಗೂ ವೃಕ್ಷ ತನ್ನ ತೂಕದೊಂದಿಗೆ ಖಾಯಂ ಇರಲು ಸಾಧ್ಯವಿಲ್ಲ.

ಅಲ್ಲಿಂದ ಮುಂದೆ ಸಾಗುವ ಪ್ರಸ್ತಾಪ ಅವನು ಮರೆತು ಅಲ್ಲಿಂದ ತಪ್ಪಿಸಿಕೊಂಡು ಹೋಗುವ ಚಿಂತೆ ಕಾದಾಡಿತು. ಮುಘಲ್ ನಿಸ್ಸಂದೇಹವಾಗಿ ಈಗ ಹಿಂದುರಗಲಿದ್ದಾನೆ. ಏಕೆಂದರೆ ಶಿವಾಜಿ ಮೋಸ ಮಾಡಿ ಓಡಿ ಹೋಗಿದ್ದಾನೆ. ಸೈನ್ಯದಲ್ಲಿ ಎತ್ತು ಒಂಟೆ ಏನೂ ಉಳಿದಿಲ್ಲ. ಅನೆಗಳಿಗೂ ಬಾಲ ಹಿಡಿದು ಏಳಿಸಬೇಕಾಗಿದೆ. ಕುದುರೆ ತನ್ನ ಸವಾರರನ್ನು ತೆಗೆದುಕೊಂಡು ಹೋಗುವುದಿಲ್ಲ ಎಂದು ಹಟ ಮಾಡುತ್ತಿದೆ. ಜನರ ತಲೆ ಮೇಲೆ ಪೇಟಾ ಭಾರದಂತೆ ಕಾಣುತ್ತದೆ. ನಡಿಯಲೇ ಬೇಕೆಂದು ಕಡ್ಡಾಯವಾದಾಗ ಪ್ರತಿಯೊಂದು ಶರೀರ ನಡೆಯುವ ಸಂಕಲ್ಪ ಮಾಡುವಂತೆ ಕಂಡಿತು. ಬಡಪಾಯಿಗಳ ಎಲ್ಲ ಸಾಮಾನು ಲೂಟಿ ಹೋದವು, ತನ್ನ ಪ್ರಾಣ ಉಳಿಸಿಕೊಂಡು ಹೋಗುವುದು ತನ್ನನ್ನು ನಿರ್ವಹಿಸಲು ಕಷ್ಟವಾಗಿತ್ತು. ಹಾಗೆ ಉರಿಯಲು ಬಿಟ್ಟು ಬಲು ಭಾರವಾದ ಸಾಮಾನು ಜೊತೆಯಲ್ಲಿ ತೆಗೆದುಕೊಂಡು ಹೋಗಲು ಸಾಧ್ಯವಾಗದೇ ಅಲ್ಲೇ ಬಿಟ್ಟರು. ಹೊದಿಕೆಯವರು ಈ ರೀತಿಯ ಅನೇಕ ಕೆಲಸ ಮಾಡಿದರು, ಎಲ್ಲರೂ ಬಡವರಾಗಿ ಹೋದರು. ತನ್ನ ನಾಚಿಗೆ ಗೌರವ ಕಳೆದುಕೊಂಡು ಲಜ್ಜೆ ನಾಚಿಗೆ ಬಿಟ್ಟು ಹತಾತ್ತನೆ ಚಿಕಿತ್ಸೆ ಇಲ್ಲದಂತಾಗಿ ಹಾರಿದರು. ಇಂತಹದರಲ್ಲಿ ಅಲಿಯ ದಂಡು ಅವರನ್ನು ಘೇರಾವು ಮಾಡಿ ಸುತ್ತುವರಿಸಿಕೊಂಡು ದಿನಾ ಕೀಟಲೆ ಮಾಡುತ್ತ ಕೆಣಕಲಾರಂಭಿಸಿತು. ಹೋರಾಟ ಹೊಡೆದಾಟ ನೋಡಿ ಕೋಪ ಬಿಟ್ಟು ತುತ್ತಿಗಾಗಿ ಬಾಯಿ ಮುರಿಸಿಕೊಂಡು ತಲೆ ಮೇಲೆ ಏಟು ಸುರಿಯಲಾರಂಭಿಸಿತು. ಅಲ್ಲಿ ಯಾವುದೇ ಡೇರೆ ಕಾಣುತ್ತಿರಲಿಲ್ಲ ಎಲ್ಲೋ ತುಂಡುಗಳನ್ನು ಬಿಟ್ಟು ಹೋದರು. ಎಲ್ಲರನ್ನು ಕುರಿಗಳ ಹಾಗೆ ಅಟ್ಟಿಸಿಕೊಂಡು ಹೋದರು. ಮರಾಠರು ಅವರನ್ನು ಚಿವುಟುತ್ತ ಓಡಾಡುತ್ತಿದ್ದರು. ಯಾರು ಸಿಕ್ಕಿ ಹಾಕಿಕೊಳ್ಳುತ್ತಿದ್ದನೋ ಅವನನ್ನು ತೋಳಗಳಂತೆ ಕಿತ್ತು ತಿನ್ನುತ್ತಿದ್ದರು. ಒಂದೊಂದು ದಿಸೆಯೂ ತಂಗುವ ಸ್ಥಳದಿಂದ ದೂರ ಕಾಣುತ್ತಿದ್ದವು. ಕಾಲು ಊತದಿಂದ ಕಾಲಲ್ಲಿ ಬೇಡಿ ಹಾಕಿದಂತೆ ಕಾಣುತ್ತಿತ್ತು. ಯಾವಾಗ ಬೆಳಗ್ಗೆಯಿಂದ ಸಂಜೆಯವರಿಗೆ ನಡಯುತ್ತಿದ್ದರೋ ಎಲ್ಲಿ ತಂಗುವರೋ ಕೋಸು(೩೪೪೨ ಗಜದೂರ)ಗಳ ಸಂಖ್ಯೆ ಲಕ್ಷಗಳಲ್ಲಿ ತುಳುಯುತ್ತಿತ್ತು. ದಿನ ಅದೇ ಕಥೆಯಾಗಿ ಜೊತೆಗಾರರೊಡನೆ ಒಂಭತ್ತು ದಿನಗಳಲ್ಲಿ ಒಂದು ಒಂದುವರೆ ಕೋಸಿನ ದೂರ ಪಾರು ಮಾಡುತ್ತಿದ್ದರು. ತಪ್ಪಿಸಿಕೊಂಡು ಹೋಗುವ ಶಕ್ತಿ ಕಳೆದುಕೊಂಡಿದ್ದರು. ಹಿಂದಿರುಗಲು ಸಾಧ್ಯವಾಗದೇ ಕೈ ಕಾಲು ಅಪ್ಪಳಿಸುತ್ತಿದ್ದರು. ಯಾರಿಗೆ ಬಟ್ಟೆ ಸಹ ಗಟ್ಟಿ ಕಾಣುತ್ತಿತ್ತೋ ಅದನ್ನು ಕಿತ್ತು ಬೀಸಾಡಿದರು. ಹಾಗೇ ನಗ್ನಾಗಿ ಹೊರಟು ಹೋಗುತ್ತಿದ್ದ. ದುರಾಸೆ ಪಟ್ಟು ಒಂದೊಂದು ಹಾಸಿಗೆ ತೆಗೆದುಕೊಂಡಿದ್ದರೋ ಮಾರನೇಯ ದಿನವೇ ಅದನ್ನು ತಲೆಯಿಂದ ಎತ್ತಿ ಬೀಸಾಡಿದರು. ಯಾವ ಜಾಗದಲ್ಲಿ ಉರುಳುತ್ತ ಬೀಳುತ್ತ ಇಳಿಯುತ್ತಿದ್ದರೋ ನಿನ್ನೆ ತಂದಿದ್ದನ್ನು ಇಂದು ಕಿತ್ತು ಒಗೆಯುತ್ತಿದ್ದರು. ಫಿರಂಗಿ ಹಾಗೂ ತೋಪು ಖಾನೆಯ ಕಿಟಿಕೆಯಲ್ಲ ತೆಗೆದು ಬೇರೆ ಮಾಡಿ ಎಲ್ಲವನ್ನು ಸುಟ್ಟು ಹಾಕಿದರು. ಯಾರು ಗಾಯಗೊಂಡು ಬಿದ್ದರುವನೋ, ಯಾರೋ ದುಃಖಿತನಾಗಿ ಬಿದ್ದಿರುವನೋ ಅವನಿಗೆ ಇಡೀ ಪ್ರಪಂಚದ

ಧೂಳು ಅವನ ಮೇಲೆ ಬೀಳುತ್ತಿದೆ. ಮಗನ ಮುಂದೆ ತಂದೆ ಗಾಯಗೊಂಡಿದ್ದರೆ ಅವನೂ ಸಹ ಜೊತೆಯಲ್ಲಿ ಕರೆದುಕೊಂಡು ಹೋಗಲು ಸಿದ್ಧನಾಗಿಲ್ಲ. ಹೀಗೆ ಕಾಠಿಣ್ಯದಿಂದ ಪ್ರತಿ ದಿನ ಮುಘಲ ಸಾಯುತ್ತ ಸಾಗುತಿದ್ದ. ನಿತ್ಯವೂ ಒಂದಲ್ಲ ಒಂದು ತೊಂದರೆ ಅಮುಕುತ್ತ ಹೋಗುತ್ತಿದ್ದಾಗ ತನ್ನ ಜೀವನದ ಕೊನೆ ಹಂತಗಳು ಕಾಣತೊಡಗಿದವು. ಪ್ರಸನ್ನತೆ ಆ ದೀನಾವಸ್ಥೆ ಜನರಿಗೆ ಶಕ್ತಿಶಾಲಿ ಮಾಡುತ್ತಿತ್ತು. ದಿನೇ ದಿನೇ ಸೈನ್ಯ ಹೊಸರೂಪ ತಾಳಿತು. ಎಲ್ಲರೂ ಉಳಿಯುವ ಆಸೆ ಮನದಲ್ಲಿಟ್ಟುಕೊಂಡು ಪ್ರಾಣಸಹಿತ ಮುಳುಗುವರು ಕೋಟೆ ಬಳಿ ಬಂದರು. (೫೬೦೫-೫೬೫೦)

ಈ ವಿಜಯ ಅಂದರೆ ಶಾಹನ ಸಾಮ್ರಾಜ್ಯದ ಮಂತ್ರಿ ದಂಡನಾಯಕ ಇವನು ಶತ್ರುಗೆ ತನ್ನ ಖಡ್ಗದ ನೀರು ಸುರಿಸಿ ಯುದ್ಧದ ಸಾಲುಗಳನ್ನು ಮುಳುಗಿಸಿದ

ಭಲೆರೇ! ನೃಪತಿ ಶಾಹ್ ಉನ್ನತ ವಿಜಯದವ, ಅವನ ಕೈ ಕೆಳಗೆ ತರಬೇತಿ ಹೊಂದಿದವ ರುಸ್ತುಂಗೂ ಸಹ ಸೋಲಿಸುವನು. ದೇವನ ಭಕ್ತ ಅವನು ನಿಜವಾದ ಸಿಂಹ, ಶೌರ್ಯದಿಂದ ಒಂದೇ ಹೆಸರಿನವನು ನಿಜವಾದ ಹೈದರ್. ಅವನು ಪರಿಪೂರ್ಣ ಕಲೆ ಕಲಿಸಿರುವನು. ತಾನು ಕಲಿತಿದ್ದನ್ನು ಎಲ್ಲರಿಗೆ ಕಲಿಸಿದ್ದರಿಂದ ಇಡೀ ಪ್ರಪಂಚದ ಮೇಲೆ ಅವನ ಚಿನ್ಹೆ ಇದೆ. ಖಡ್ಗ ಬೀಸುವ ಕಲೆಯಿಂದ ಯುದ್ಧದಲ್ಲಿ ಪಂಕ್ತಿಗಳಲ್ಲಿ ಹೋರಾಡಿ ಶಾಹನು ಸಿಪಾಯಿಗಿರಿಗೆ ಮರ್ಯಾದೆ ಕೊಟ್ಟ. ಸಲಹಾದಾರ, ಸರ್ದಾರ, ಪ್ರತಿಯೊಬ್ಬ ಮಂತ್ರಿ ಪ್ರತಿಯೊಂದು ಶರೀರಕ್ಕೆ ದೃಷ್ಟಿಯಲ್ಲಿಟ್ಟುಕೊಂಡು ತನ್ನ ಉದಾಹರಣೆ ಇಟ್ಟ. ಒಬ್ಬರಿಂದ ಒಬ್ಬ ಖಡ್ಗದ ಪ್ರಹಾರ ಮಾಡಿ ಒಬ್ಬರಿಂದ ಒಬ್ಬರು ಇನ್ನು ಗಟ್ಟಿ ಏಟನ್ನು ಕೊಡುವರು. ಆ ಶತ್ರು ನಡೆಯುತ್ತ ನಡೆಯುತ್ತಾ ತನ್ನ ಗಡಿ ಸೇರಲು ಹೊರಟು ಹೋದ ಎಂದು ಹೇಳಲಾಗುತ್ತದೆ. ದಕ್ಷಿಣ ಸಾಮ್ರಾಜ್ಯದ ಸವಾರರು ಅಂದರೆ ಸರ್ಕಾರದ ಹೆಸರಾಂತ ಮಂತ್ರಿಗಳು, ಎಷ್ಟೊಂದು ಅದೃಷ್ಟಶಾಲಿಗಳಲ್ಲಿ ಕೆಲಸ ಮಾಡುವ ಕಾರ್ಯಕುಶಲತೆ ಇದೆಯೋ ಅವರಿಗೆಲ್ಲ ಶಹಿನ್ಷಾಹರ ಕೃಪೆಗಳ ಪಾತ್ರರಾಗಿರುವರು. ಯಾರ ಕೈಯಲ್ಲಿ ಪ್ರತಿಷ್ಠೆಯ ಕುದುರೆ ಲಗಾಮವಿರುವುದೋ ಅವನು ಏನನ್ನು ಬಯಸುತ್ತಾನೆ ಅವೆಲ್ಲವೂ ಅವನ ಕೈ ಸೇರುತ್ತದೆ. ಅವನ ಖಡ್ಗ ತನ್ನತಾನೆ ಅಲಂಕರಿಸಿ ನಿಂತುಕೊಂಡು ವಿಜಯದ ವಧುವಿನ ದರ್ಶನ ನೀಡುತ್ತದೆ. ಶರಫ್ (ಗೌರವದ ಸ್ಥಾನ) ಮಹನೀಯತೆಯಲ್ಲಿದೆ ಅದರ ಗುಣ ನಿಷ್ಠೆಯ ಹೆಸರು. ಖಾನೆ ಖಾನಾನ ಸುಪುತ್ರ ಭಾಗ್ಯಶಾಲಿ, ಅಚಲ, ಗಟ್ಟಿ ಸೈನ್ಯ ಉಳ್ಳವ ಅವನ ಸೈನ್ಯದ ಪ್ರತಿಯೊಬ್ಬ ಸಿಪಾಯಿ ಪಂಕ್ತಿ ಮುರಿಯುವವ, ದೆಹಲಿಯ ನಾನು ದೆಹಲಿಯ ಹೃದಯಭಂಜನ ಎನ್ನಿಸಿಕೊಂಡಿರುವವನು. ಪ್ರತಿಯೊಬ್ಬ ವ್ಯಕ್ತಿ ಕೆಲಸದಲ್ಲಿ ಅನುಪಮ. ಗಾಳಿ ಮೇಲೆ ದೃಷ್ಟಿ ಆಕಾಶದಲ್ಲಿ ಪರಿಭಾವನೆ, ಪ್ರತಿಯೊಬ್ಬ ವ್ಯಕ್ತಿ ತನ್ನ ಕಲೆಯಲ್ಲಿ ರುಸ್ತುಂ ಭೀಕರ ಯುದ್ಧದಲ್ಲಿ ಇನ್ನಷ್ಟು ಜಾಗ್ರತ. ನಾಲ್ಕು ಲಾಳಗಳನ್ನು ಹಿಡಿದು ಒಂದೇ ಸಲ ಅಮುಕುವರು. ಎರಡು ಬೆರಳುಗಳಿಂದ ನಿಸ್ಸಂದೇಹವಾಗಿ ಹಿಸುಕಿ

ಅಮುಕುವರು.ತನ್ನ ಶಕ್ತಿಯಿಂದ ಆರೆಕೋಲನ್ನು ಕೊರಳಿನ ಆಭರಣ ಮಾಡುವರು. ಡೋಲಿನ ಕಬ್ಬಿನ ಬಳೆಯು ಸಹ ಹಿಸುಕಿದರೆ ಅದು ಬಿದಿರಾಗುತ್ತದೆ. ವನ್ಯದ ಹುಲಿಗೆ ತಪರಾಕಿ ಹೊಡೆಯುವವರಲ್ಲ, ತನ್ನ ಹೆಜ್ಜೆಯಿಂದ ನಾಗರಹಾವಿಗೆ ಉಜ್ಜಿ ನಾಶ ಮಾಡುವರು. ಅವರ ದೃಷ್ಟಿಯಲ್ಲಿ ಯುದ್ಧದ ಜಗಳ ಕುಣಿಯುತ್ತಿರುತ್ತದೆ. ಸಹಸ್ರಾರರನ್ನು ತಾನೇ ಒಬ್ಬ ಶರೀರದ ಮೇಲೆ ಎತ್ತಿಕೊಳ್ಳುವನು. ಬಂದೂಕುಧಾರಿಗಳು ಖಡ್ಗಧಾರಿಗಳೇ ಹೋರಾಟದಲ್ಲಿ ಜೇಷ್ಠತೆ ತೋರಿದರೆ ಎಲ್ಲೋ ಬಾಣಧಾರಿಗಳ ಹೋರಾಟವು ಇದೆ. ಮಹಾ ಸಾಮರ್ಥ್ಯದ ಮೇಳದ ಮೇಲೆ ಅವರ ದೃಷ್ಟಿ ಇರುವುದು, ಆನೆ ಮೇಲೆ ಕಷ್ಟ ಬಂದರೂ ಸಹ ತಡೆದುಕೊಳ್ಳುವರು. ತನ್ನ ಕಾಲಿನ ಮೇಲೆ ಕಟಾರಿಯನ್ನಿಟ್ಟು ಕಾಗೆ ರೆಕ್ಕೆ ಬಿಚ್ಚುವುದರೊಳಗೆ ಅದನ್ನು ಹೊಡೆಯುವರು. ಭಾವನೆಯ ಒಂದು ಮಾತಿನ ಮೇಲೆ ಲಕ್ಷಾಂತರ ಪ್ರಾಣಗಳನ್ನು ಕೊಡುವರು. ಲಜ್ಜೆಯ ಕೊಳೆಯಿಂದ ತಮ್ಮ ಪ್ರಾಣವನ್ನು ನಿತ್ಯ ನಿರ್ಮಲ ಇಡುವರು. ಯುದ್ಧ ಶೂರರಿಗೆ ಎಲ್ಲೋ ಖಡ್ಗದ ಯುದ್ಧವಾದರೆ ಎಲ್ಲೋ ದುಷ್ಟರಿಗೆ ಕಷ್ಟವಾಗುತ್ತಿದೆ. ಕುದುರೆಗಳು ಎಂತಹ ಶಕ್ತಿಶಾಲಿ ಇಟ್ಟಿದ್ದಾರೆಂದರೇ ಒಂದು ತಪರಾಕಿ ಕೊಟ್ಟರೆ ಆನೆಗಳನ್ನು ಉರುಳಿಸಿ ಮಲಗಿಸುತ್ತವೆ. ತಾನು ಸೊಂಟ ಕಟ್ಟಿ ನಿಂತರೆ ಬಂದೂಕು, ಖಡ್ಗ, ಕರ್ದಿ ಹಾಗೂ ಅನೇಕ ಬಾಗ್ದಾರ್ ಕಬ್ಬಿಣದ ಬಳೆಗಳನ್ನು ಮುರಿದು ಎಸೆಯುವರು ಆನೆದಂತಗಳನ್ನು ಮೇಣದ ಬತ್ತಿ ಎಂದು ತಿಳಿದು ಮುರಿದು ಎಸೆಯುವರು. ಖಾನನ ದಂಡನಾಯಕತ್ವ ಬಲು ಅಪ್ರತಿಮ, ಪ್ರತಿಯೊಬ್ಬ ವ್ಯಕ್ತಿ ವೈಶಿಷ್ಟ್ಯದಿಂದ ಒಬ್ಬ ಮಂತ್ರಿಯಂತೆ ಕಾಣುತ್ತಾನೆ. ಬಾದಶಾಹರು ತನ್ನ ಮನಸಲ್ಲಿ ಹೀಗೆ ಚಿಂತಿಸಿದರು. ಮುಘಲ್ ಮುನಿಸಿಕೊಂಡು ಸುಮ್ಮನೆ ಹೊರಟು ಹೋದ. ಅಯ್ಯೋ ಕೆಲಸ ಕೆಟ್ಟುಹೋಯಿತು. ಬಿಜಾಪುರದ ಕೋಟೆಯವರಿಗೆ ಹೋಗಿ ಅದರ ಗೌರವವನ್ನೂ ಸ್ವೀಕರಿಸದೆ ಹತಬಾಗಿ ಮೌನವಾಗಿ ಹಿಂದುರುಗಿ ಹೋದ. ಅವನು ಅಲ್ಲಿ ಹೋಗಿ ಮರ್ಯಾದೆ ಸ್ವೀಕರಿಸದಿದ್ದರೇ ಏನಾಯಿತು? ನನ್ನ ಬಳಿ ಶಾಹನು ಕೊಟ್ಟಿರುವುದು ಬಹಳಷ್ಟು ಇದೆ. ಬುರ್ಘಾರಿಗಳು ಹಾಜರಾಗಿರಿ. ಇಂದು ನನ್ನ ಖಡ್ಗ ಅವರ ಕೈಯಲ್ಲಿ ತೊಡಿಸುವೆ ಯುದ್ಧದ ಸ್ವಾದ ಇಂದು ಹೇಗೆ ತೋರುವೆ ಎಂದರೆ ತುತ್ತುಗಳಲ್ಲಿ ಖಡ್ಗಗಳನ್ನು ಅವರ ಮುಖದ ಮೇಲೆ ತಿರುಗಿಸುವೆ. ತನ್ನಲ್ಲೇ ಈ ಮಾತನ್ನು ಖಾತ್ರಿ ಮಾಡಿಕೊಂಡು ತಾನೆ ಹೊರಟು ಯುದ್ಧ ಮಾಡಬೇಕೆಂದು ನಿರ್ಣಯಿಸಿ 'ನನ್ನ ಸೈನ್ಯ ಒಂದು ಕಡೆ, ಎದುರಿಗೆ ಮುಘಲರ ಇಡೀ ಸೈನ್ಯ ಎಂತಹ ಘೋರ ಯುದ್ಧವಾಗುವುದೆಂದರೆ ಇಡೀ ಪ್ರಪಂಚ ನೋಡುತ್ತದೆ. ಖಡ್ಗದಿಂದ ಖಂಡಿಗಳ ಮೇಲೆ ಖಂಡಿ ನೀರು ಸುರಿಯುತ್ತದೆ. ಎಲ್ಲ ಸಹೋದರರ ಕಣ್ಣು ತಂಪಾಗುವುದು' ಎಂದು ಹೇಳಿದರು. ಒಮ್ಮೆಲೆ ದೇವರಾಣೆ ಅದೊಂದು ದಿನ ಶುಭವಾಗಿತ್ತು. ಆ ದಿನ ತೋಟಕ್ಕೆ ಹೊಸವರ್ಷದ ಮೊದಲ ದಿನವಾಗಿತ್ತು. ತನ್ನ ಮೆಚ್ಚುಗೆಯ ಶೂರರಿಗೆಲ್ಲ ನೆನಿಸಿಕೊಂಡು ಅವರಿಗೆ ಒಳ್ಳೆ ಶಸ್ತ್ರಗಳನ್ನು ಹಂಚಿ 'ಓ ಶೂರರೇ ಮೈದಾನದಲ್ಲಿಳಿದು ನನ್ನ ತಮಾಶೆಯನ್ನು ನೋಡಿ, ನಿಮ್ಮ

ತಮಾಶೆಯನ್ನು ತೋರಿಸಿ, ಇಂದು ನಾವು ಯುದ್ಧಕ್ಕೆ ಹೊಸಚಾಲನೆ ನೀಡುವೆವು. ಖಡ್ಗದೊಂದಿಗೆ ಚೌಗಾನ್ ಪೇಚು ಸಹ ಮಾಡುವೆವು. ಇಂದಿನಿಂದ ನಿಮ್ಮನ್ನು ಚೆನ್ನಾಗಿ ಜಾಗ್ರತವಾಗಿರಿಸಿಕೊಳ್ಳಿ, ಸ್ವತಃ ಮೈದಾನದಿಂದ ಚೆಂಡನ್ನು ತೆಗೆದುಕೊಂಡು ಹೋಗಿ, ನೀವು ಹೋರಾಡಿ ನಿಮ್ಮ ಸೈನ್ಯಕ್ಕೂ ಹೋರಾಡಿಸಿ. ಎರಡು ದೇಶಗಳಲ್ಲಿ ಒಂದು ದೇಶದ ಹೆಸರನ್ನು ಬೆಳಗಿಸಿ. ನಾನು ನಿಂತು ಶೌರ್ಯದಿಂದ ಹೋರಾಡಿ ಎದುರಾಳಿಯನ್ನು ದಂಗುಬಡಿಸುವೆ. ಇಡೀ ಯುಗವನ್ನು ರಕ್ತದ ಬಣ್ಣಬಳಿಸುವೆ. ಯುಗದ ಮೇಲೆ ಸದೈವವಾಗಿ ಒಂದು ಚಿತ್ರ ಉಳಿಸಲು ಭೂಮಿ ಮೇಲೆ ಅವರ ಅಸ್ತಿತ್ವದ ಚಿನ್ಹೆಯನ್ನು ಅಳಿಸುವೆ. ನನಗೆ ಅಲ್ಲಾಹನ ದರ್ಬಾರಿನ ಸನ್ಮಾರ್ಗದರ್ಶನ ಇದೆ, ನಾನು ಅಲಿ ಶಾಹನ ಪೋಷಣೆಯಲ್ಲಿ ಬೆಳದಿರುವೆನು. ನಿಮ್ಮ ಮನಸಲ್ಲಿರುವ ಮಾತನ್ನು ಏನಾದರು ಇದ್ದರೆ ಹೇಳಿ, ಅದನ್ನು ಕೇಳುವ ಅಧಿಕಾರ ನನಗಿದೆ,' ಎಂದು ಹೇಳಿದಾಗ ಒಬ್ಬನಿಂದ ಒಬ್ಬ ಸಿಪಾಯಿ ಕೋಪದಲ್ಲಿ ಬಂದು ಸಮಯ ಸಿಕ್ಕಿದಾಗ ಮೋಸ ಮಾಡಿ ಆಟ ತನ್ನದಾಗಿ ಮಾಡಿಕೊಳ್ಳಲು ಸಿದ್ಧರಾದರು. ಆಗ ಖಾನ್ ಹೇಳಿದ ದೇವನಿಚ್ಛಿಸಿದರೆ ಈ ಕೆಲಸ ಒಂದು ಕ್ಷಣದಲ್ಲಿ ಆಗಿಹೋಗುತ್ತದೆ. ಅದು ತಾವು ಸಹ ನೋಡಬಹುದು. ನೀನು ದಕ್ಷಿಣದ ಆ ಹೆಸರಾಂತ ಮಂತ್ರಿ, ಯಾವ ದೇಶದಲ್ಲೂ ಸಹ ಅದರ ಉದಾಹರಣೆ ಸಿಗುವುದಿಲ್ಲ. ಪ್ರಪಂಚದಲ್ಲಿ ನಿನ್ನ ಸಿಪಾಯಿ ಪೋಷಣೆಯ ಒಂದು ಉದಾಹರಣೆ ಇದೆ ಸಿಪಾಯಿ ನಿನ್ನ ನಿಷ್ಠೆಯಿಂದ ಅತಿ ಸಂತುಷ್ಟನಾಗಿದ್ದಾನೆ. ಸಿಪಾಯಿಯಲ್ಲಿ ಏನು ಗುಣವಿದೆ ಎಂದು ತಿಳಿಯುವುದೇ ನಿನ್ನ ಹಕ್ಕು, ಸಿಪಾಯಿ ಪೋಷಣೆಯ ಕಲೆ ಅಂತೂ ನಿನ್ನದೇಯಾಗಿದೆ. ಈ ನಾಲಿಗೆ ನಿತ್ಯವೂ ಗರ್ವದಿಂದ ನಿನ್ನ ಹೆಸರನ್ನು ತೆಗೆದುಕೊಳ್ಳುತ್ತದೆ. ನಿನ್ನ ಮನೆ ಸಿಪಾಯಿಗೆ ಶಾಂತಿಗೃಹವಾಗಿದೆ. ಇಂದು ಸಿಪಾಯಿ ಪೋಷಣೆ ನಿಶ್ಚೇತನವಾಗಿಲ್ಲ. ಯಾವುದೇ ಅರಸನ ಬಳಿ ಈ ರೀತಿಯ ಇಂತಹ ಸೈನಿಕರಿಲ್ಲ. ಕೇವಲ ಚಂದ್ರ ಹೇಗೆ ಪ್ರೀತಿಯಿಂದ ಬೆಳೆದು ಸಂಪೂರ್ಣವಾಗುವುದು, ಹಾಗೆಯೇ ನಿನ್ನ ಪ್ರೀತಿಯಿಂದ ಸಿಪಾಯಿಯ ಮೌಲ್ಯ ಹೆಚ್ಚಾಗುತ್ತದೆ. ಇಂದು ಸಿಪಾಯಿ ಮನಸ್ಸನ್ನು ಹೇಗೆ ಗೆದ್ದಿದ್ದಿಯಾ ಎಂದರೆ ಎಲ್ಲರೂ ಹೇಳುವುದು ಏನೆಂದರೇ ನಿನ್ನನ್ನು ಬಿಟ್ಟರೆ ಯಾರು ದೊಡ್ಡ ದಂಡನಾಯಕನಲ್ಲ, ಅದೇ ನಮಗೆ ಅತಿ ದೊಡ್ಡ ಮರ್ಯಾದೆ. ಇಂದು ಇರಬೇಕಾದರೆ ನಿನ್ನ ಬಳಿಯೇ ಮತ್ತೆ ರುಸ್ತುಂ ಇದ್ದಿದ್ದರೂ ಸಹ ಅವನು ನಿನ್ನ ಬಳಿ ನೌಕರಾಗಿರುತ್ತಿದ್ದ, ಅಲ್ಲಾಹನು ನಿನಗೆ ಈ ಕಲೆಯನ್ನು ನೀಡಿರುವನು, ನಿನ್ನ ಅರಿವಿನಿಂದ ಎಂದೂ ತಪ್ಪಾಗಲು ಸಾಧ್ಯವಿಲ್ಲ, ನೀನು ಯಾರಿಗಾದರೂ ಪ್ರೀತಿಸಿದ್ದರೆ ಅವನಿಗೆ ಚೆನ್ನಾಗಿ ತಿಳಿದೇ ಮಾಡಿರಬೇಕು ಹಾಗೂ ಅವನ ಒಳ್ಳೆಯತನದಲ್ಲಿ ಏನೂ ಸಂದೇಹವಿಲ್ಲ. ಎಲ್ಲರ ದೃಷ್ಟಿಯಲ್ಲಿ ಈ ಮಾತು ಮನೆಮಾಡಿದೆಂದರೆ ಯಾರಲ್ಲಿ ಯಾವ ಗುಣವಿದೆಯೋ ಅವನು ಬಹಳ ಚೆನ್ನಾಗಿ ನಿಭಾಯಿಸುವರು. ಮುಘಲರ ಮನಸಲ್ಲಿ ನದಿಯ ಸ್ವಭಾವವಿದೆ. ದೃಷ್ಟಿಯಲ್ಲಿ ಸೋರುವ ಬದಲು ಮೋಸವಿದೆ. ನಿತ್ಯವೂ ಅವರನ್ನು ನಮ್ಮ ಕಾಲಿನ

ಧೂಳು ಹುಸಿಕಿರುತ್ತದೆ. ನಮ್ಮ ಕೂಗಿನ ಮುಂದೆ ಅವರ ಸಿಡಿಮದ್ದಿನ ಉಗ್ರಾಣ ತಣ್ಣಗಾಗುವುದು. ನಮ್ಮ ಖಡ್ಗಗಳು ಅವರ ವಿರುದ್ಧ ಎದ್ದರೆ, ಅವರು ತಮ್ಮ ಎಲ್ಲ ಬಡಾಯಿ ಮರೆಯುವರು. ನಮ್ಮ ಕಾರ್ಯ ನಿಸ್ಸಂದೇಹವಾಗಿ ಅವರ ಬಾಯಿ ಮುಚ್ಚುತ್ತದೆ. ಅವರಿಗೆ ಮಾತನಾಡುವ ಧೈರ್ಯ ಬರದು. ಯಾವಾಗ ನಾವು ಹಲ್ಲು ಕಡಿದು ಹಚ್ಚಿಕೊಂಡರೇ ಸಾಕು ಅವರ ಕಟಾರಿಗಳ ಹಲ್ಲೆಲ್ಲ ಕಿತ್ತು ಕೈಗೆ ಕೊಡುವೆವು. ನಾವು ಅವರನ್ನು ಹೊಡೆಯಲು ಕೈ ಮಾಡುತ್ತಿದ್ದೇವೆ. ಅವರು ತಿಳಿಯುದರೊಳಗೆ ನಿತ್ಯ ಬರ್ಚಿ ಭಲ್ಲೆಗಳು ಅವರ ಮೇಲೆ ಬೀಡು ಬಿಟ್ಟಿರುತ್ತದೆ. ಯುದ್ಧದ ತೊಡಕುಬಿಡಿಸುವ ಕೆಲಸ ನಮ್ಮ ಮನಸ್ಸಿಗೆ ಮೆಚ್ಚುಗೆಯಾದಂತಹದು, ಕುದುರೆಗಳ ವೇಗ ನಮ್ಮ ಕೆಲಸಕ್ಕೆ ಬರುತ್ತದೆ. ನಮ್ಮ ಆಕ್ರಮಣ ಇಡೀ ಮೈಯಲ್ಲಿ ಹೂತು ಹೋಗುತ್ತದೆ, ನಮ್ಮ ಕೈಯಲ್ಲಿ ಜೀವ ಸಿಕ್ಕಿಬಿದ್ದು ಸುಡಲಾರಂಭಿಸುತ್ತದೆ. ನಮ್ಮ ಖಡ್ಗದ ಬೆಂಕಿಯ ಕಳವಳ ನೋಡಿ ಅಸ್ತಿತ್ವದಲ್ಲಿ ಪ್ರಾಣ ಒಣಗಿ ಗಟ್ಟಿಯಾಗುತ್ತದೆ. ಎಂದಾದರು ನಮ್ಮ ಶಸ್ತ್ರ ಎದ್ದರೆ ಸಾಕು ಅವನು ತನ್ನ ಜಾಗ ಬಿಟ್ಟು ಒಂದು ಹೆಜ್ಜೆಯೂ ಸಹ ಮುಂದೆ ಹೋಗಲು ಸಾಧ್ಯವಿಲ್ಲ. ಏನಾದರು ಕುದುರೆ ಸವಾರನ ಮೇಲೆ ಹಲ್ಲೆ ಮಾಡಿದರೆ ಪ್ರಾಣದ ಮೇಲೆ ಪ್ರಾಣ ಎರಡೂ ಒಂದೇ ಸಲ ಹೊರಟು ಹೋಗುತ್ತವೆ. ನಾವು ಸಮರದ ಎಲ್ಲ ಒಳಸಂಚು ತಿಳಿಯುತ್ತೇವೆ. ಖಡ್ಗವನ್ನು ನಾವು ಮುರಿದು ಹಾಕುತ್ತೇವೆ. ನಾವು ನುಗ್ಗಿ ಹೂತು ಹಲ್ಲೆ ಮಾಡಿದರೇ ಸಹಸ್ರಾರರನ್ನು ಮುಗಿಸಿಬಿಡುತ್ತೇವೆ. ನಾವು ಒಂದು ಕಿರುಜಗಳದಲ್ಲಿ ಹತ್ತು ಕೆಲಸಗಳನ್ನು ಮಾಡುವೆವು. ನಾವು ಈ ಗಮಾರರಿಗೆ ಒಪ್ಪುವುದಿಲ್ಲ. ನಾವು ಮುಂದೆ ನುಗ್ಗಿ ಆಕ್ರಮಿಸುತ್ತೇವೆ ಹಾಗೂ ಅವರಿಗೆ ಸಾಯುವುದೇ ಗೊತ್ತು. ಇಡೀ ಮುಘಲರು ತಲೆಗಳನ್ನು ಕೂಡಿಸಲು ಯೋಚಿಸುತ್ತಿದ್ದಾರೆ ಆದರೇ ಪಠಾಣರು ಎಷ್ಟಾದರೂ ವರ್ತಕರಲ್ಲವೇ. ನಮ್ಮ ಖಡ್ಗದ ಗುಣ ಇಡೀ ಪ್ರಪಂಚಕ್ಕೆ ತಿಳಿದಿದೆ. ಇತ್ತಿಂದ ಹೊಕ್ಕಿದರೇ ಆ ಕಡೆಯಿಂದ ಬರುವುದು ಇದರಿಂದಾಗಿ ಜಗತ್ತಿನಲ್ಲಿ ನಮ್ಮ ಹೆಸರು ಸಹ ಇದೆ. ಎರಡು ಮಾತನ್ನು ಪರೀಕ್ಷಿಸಲು ಅಂದರೆ ಅವರಲ್ಲಿ ಎಷ್ಟು ಬಲವಿದೆ ಎಂದು ಮುಘಲರು ಸೈನ್ಯ ರಚಿಸಿಕೊಂಡು ಬರುತ್ತಿದ್ದಾರೆ. ಈಗ ನಾವು ನಮ್ಮ ಹೆಜ್ಜೆ ಮುಂದಿಟ್ಟು ಎಂತಹ ತಮಾಷೆ ತೋರುವೆವು ನೋಡಿ ಅಂದರೆ ದೆಹಲಿಯ ಹೃದಯವನ್ನು ನಾವು ಅಲುಗಾಡಿಸಿ ಹೇಗೆ ನಮ್ಮ ಹೆಸರು ಮಾಡುವೆವು ಇದರಲ್ಲಿ ವ್ಯರ್ಥವಾಗಿ ಬಡಾಯಿ ಕೊಚ್ಚುಕೊಳ್ಳುವುದಂತು ಏನೂ ಇಲ್ಲ. ಚೌಗಾನಿನ ಚೆಂಡು ಮೈದಾನದಲ್ಲಿದೆ. ರಣಧೀರರ ಮಾತನ್ನು ದಂಡನಾಯಕರು ಕೇಳಿದರು. ನಿಜವಾದ ಮಾತುಗಳನ್ನು ಕೇಳಿ ವೀರರ ವೀರ ಸಂತುಷ್ಟನಾದ. ಎಲ್ಲರೂ ಒಗ್ಗೂಡಿ ಒಂದು ಪ್ರಮಾಣ ಮಾಡಿದರು. ಒಂದು ಅಚಲ ಸೈನ್ಯ ರಚಿಸಿ ಆ ಹೆಸರಾಂತ ಹೊರಟ. ಇಂದು ನನ್ನ ಪ್ರಾಣವನ್ನು ಅರ್ಪಿಸಿ ನನ್ನ ಮಾನ ಉಳಿಸಿಕೊಳ್ಳಬೇಕೆಂದು ಪ್ರತಿಯೊಬ್ಬ ಜವಾನನೂ ತನ್ನ ಮನದಲ್ಲಿ ಈ ಆಸೆ ಅಲಂಕರಿಸಿ ನಡೆಯುತ್ತಿದ್ದ. ಇಂದು ಅಲ್ಲಾಹನು ಪ್ರಿಯ ವಿರಾಮ ನೀಡಿರುವನು ಅಂದರೆ ಸಾಹೆಬರ ಮುಂದೆ

ಜೀವ ಕೊಡುವುದು ಯಾವ ಮಹಾ ವಸ್ತು. ಎಲ್ಲ ನೀಚರು ಒಬ್ಬನಿಂದ ಒಬ್ಬ ಕೆಟ್ಟದ್ದನ್ನೇ ಕೇಳುತ್ತಾನೆ. ಆದರೆ ಶೂರ ನನ್ನ ಮುಂದೆ ನಿಯಮಿತ ಏನು ವಸ್ತುವಲ್ಲ ಎಂದು ಹೇಳುವನು. ಅವನು ಉದ್ರೇಕಗೊಂಡು ಶತ್ರುವಿನ ಮುಖದ ಮೇಲೆ ಬಂದು ಶತ್ರುವಿನ ಕಡೆ ದುರಗುಟ್ಟಿಕೊಂಡು ನೋಡುತ್ತಾನೆ. ಈಗ ದೆಹಲಿಯ ಸೈನ್ಯ ಜಾಗ್ರತವಾಗಿ ಸುಂದರ ಸ್ತ್ರೀ ನಡೆಯುವ ಹಾಗೆ ಬರುತ್ತಿದೆ ಎಂದು ಕಾಣಿಸುತ್ತದೆ. ಶಸ್ತ್ರಗಳ ಅತ್ಯುನ್ನತ ಆಭರಣ ಅದಕ್ಕೆ ಮನಮೋಹಕವಾಗಿ ಕಾಣಿಸುತ್ತದೆ. ಬಣ್ಣ ಬಣ್ಣದ ಗುರಾಣಿಗಳು ಅದಕ್ಕೆ ಬಟ್ಟೆಯ ಹಾಗೆ ಕಾಣುತ್ತದೆ. ಸಶಸ್ತ್ರಗಳಲ್ಲಿ ಒಯ್ಯಾರದ ಸಂಗೀತ ಕಾಣುತ್ತದೆ. ಮಿಲನದಲ್ಲಿ ಅವು ರಕ್ತ ಸುರಿಸುವ ಬೆಡಗಾಗುತ್ತದೆ. ತನ್ನ ದೇಶದ ಮದುಮಗಳ ಮಂಚದ ಸ್ವಾಭಾವಿಕ ಒಲವು ಇಟ್ಟುಕೊಂಡು ತಾಜಾ ಪರಿಣಾಮದ ರುಚಿ ತೂಗಾಡಿದಂತೆ ಕಾಣಿಸುತ್ತದೆ. ಚಳಿಗಾಲ ಹೋದ ನಂತರ ವಸಂತದಿಂದ ಎಲ್ಲೆಡೆಯು ಹಚ್ಚ ಹಸಿರಾಗಿ ಹೊಸ ಬಣ್ಣ ಹಾಗೂ ರಸದ ಹೂವು ಹಣ್ಣು ಬಂದಿತು. ಈ ಯವ್ವನದಲ್ಲಿ ಇನಷ್ಟು ಹೆಚ್ಚು ದರ್ಶನವಿತ್ತು ಒಂದು ಒಯ್ಯಾರದ ಶೈಲಿಯಿಂದ ಸೌಭಾಗ್ಯದಲ್ಲಿದ್ದರು ಅಂದರೆ ಯಾವ ಮುಖವನ್ನು ನೋಡಿದಾಗ ಪುರುಷರಿಗೆ ಸ್ವಾಭಾವಿಕ ಒಲವು ಉಬ್ಬಿ ಶೂರರಿಗೆ ಶೀಘ್ರವಾಗಿ ಮಿಲನದ ರುಚಿ ಹೃದಯದಲ್ಲಿತ್ತು. ಶ್ರಾವಣಮಾಸದ ಮೋಡಗಳು ಹೇಗೆ ಚಲಿಸುತ್ತವೋ, ಹಾಗೆಯೇ ಆನೆಗಳ ಹಿಂಡಿಂಡೇ ಹೊರಟಿತು. ಅಲ್ಲಿ ಪ್ರಪಂಚ ಹುರಿಸುವ ಅಗ್ನಿಯ ಗಾಳಿಯ ಖಜಾನೆ, ಪ್ರಳಯ ಉಂಟುಮಾಡುವ ಸಿಡಿಮದ್ದಿನ ಉಗ್ರಾಣ ಬಲು ಕೋಪದಲ್ಲಿತ್ತು. ಅದು ಖಾಫ್ ಬೆಟ್ಟವನ್ನೇ ಜಯಗಳಿಸುವ ಅತ್ಯಂತ ಮಹಾಕಾರ್ಯದ ಸಂಕಲ್ಪ ಮಾಡಿದವನು ಒಂದು ಕ್ಷಣದಲ್ಲಿ ಅದನ್ನು ಹಾರಿಸಿ ಮೈದಾನ ಮಾಡುವನು. ಪಠಾಣಗಳ ಸೈನ್ಯ ಹಿಂದಿಂದೆ, ರಾಜಪೂತರ ಬಾಗಿಲುಗಳನ್ನು ತೆರೆಯುತ್ತ ಹೋಯಿತು. ದೊಡ್ಡ ಡೋಲಿನ ಶಬ್ದದಿಂದ ಇಡೀ ಪೃಥ್ವಿ ಅಲುಗಾಡಿಸಿತು. ಭೈರಾಂಪ್ತೀನಿನ ಬೆನ್ನೆಲಬಿಗೆ ಕಂಪಿಸುತ್ತಿತ್ತು. ನಗಾರಿ ಬಾರಿಸಿದಾಗ ಆಕಾಶ ಕಂಪಿಸುತ್ತಿತ್ತು. ಸೂರ್ಯ ಝಾಂಕ್ದಗಳ ಶಬ್ದದಿಂದ ಹೆಚ್ಚು ಕೋಪಿಸಿಗೊಂಡಿತು. ಇದಲ್ಲದೇ ಭೂಮಿಯಿಂದ ಧೂಳೆದ್ದಾಗ ಆಕಾಶದವರಿಗೆ ಒಂದು ಸ್ಥಂಬ ನಿಂತಹಾಗೆ ಕಾಣಿಸಿತು. ಈ ರೀತಿಯಾಗಿ ಒಯ್ಯಾರ ಹಾಗೂ ನಟನೆಯಿಂದ ಸೈನ್ಯ ಮೆಲ್ಲನೇ ಬರತೊಡಗಿತು. ಇದರಲ್ಲಿ ಇಖ್ಲಾಸ್ ಖಾನನ ಪಾತ್ರ ಮುಖ್ಯವಾಗಿ ಕಾಣಿಸುತ್ತಿತ್ತು. ಸೈನ್ಯದ ಜೋಲಾಟ ದೃಷ್ಟಿಯಲ್ಲಿತ್ತು. ಆದರೆ ದೃಷ್ಟಿ ಒಳ್ಳೆದಾರಿಯನ್ನು ಹಿಡಿದಿತ್ತು. ಅದು ಹೀಗೆ ಹೇಳುತ್ತಿತ್ತು ಅಲ್ಲಿ ನಾನು ಹೋಗಿ ಸಿಕ್ಕಬೇಕಾಗಿದೆ ಅಂದರೆ ಪ್ರಾಣದಲ್ಲಿಯೇ ಹಾಗೂ ಇವೇ ಎರಡೇ ಎರಡಾಗಿ ಉಳಿಯಬೇಕು. ಒಬ್ಬನೇ ಎಲ್ಲ ಕೆಲಸ ಮಾಡಲು ನಿಂತು ಅವರಿಗೆಲ್ಲ ಸಂಗ್ರಾಮದಲ್ಲಿ ಚೆನ್ನಾಗಿ ಸಿಕ್ಕಿಸುವೆ. ಯಾವಾಗ ಘೋರ ಯುದ್ಧ ಪ್ರಾರಂಭವಾಗುತ್ತದೆಯೋ ಆಗ ಮಿತಿಮೀರಿ ಗೊಂದಲ ಮಾಡುವೆ. ಆ ಗೊಂದಲವನ್ನು ಕೇಳಿ ಜನರೆಲ್ಲ ಓಡಿಬರುವರು. ಕೂಗಾಟ ಮಾಡುತ್ತ ನಾಶದ ಮೇಲೆ ನನ್ನ ಕೆಲಸ ಆಗುವುದು. ನನ್ನ ಬಟ್ಟೆ ಹರೆದು

ಚಿಂದಿ ಚಿಂದಿ ಮಾಡುವೆ. ಏಕೆಂದರೇ ಪುರುಷರ ಮುಂದೆ ಮತ್ತೆ ಶೃಂಗರಿಸಿಕೊಂಡು ಬರಬಾರದು. ಇಡೀ ದಿನ ಇದೇ ಇಚ್ಛೆಯಲ್ಲಿ ತೊಡಗಿದ್ದ. ಇದು ಹತೋಟಿಯ ಸವಿ ಪ್ರತೀಕ್ಷೆಯಲ್ಲಿದ್ದ. ಈ ಮಧ್ಯದಲ್ಲಿ ಅವರು ಬಂದರು. ಇದೇ ಸರಿಯಾದ ಸಮಯವೆಂದು ಖಾನ್ ಮನಸ್ಸಿನಲ್ಲಿ ಅಂದುಕೊಂಡ, ಖಾನ್ ಮತ್ತು ಅವನ ಸಂಬಂಧಪಟ್ಟ ಹಾಗೂ ವಿಶೇಷ ಜನ ಪ್ರತಿಯೊಬ್ಬ ವ್ಯಕ್ತಿ ಗುರಿತಪ್ಪದೇ ಇರುವರು, ಸಲಹಾದಾರನ ದೃಷ್ಟಿ ಸರ್ದಾರನ ಮೇಲಿದೆ. ಮಂತ್ರಿಗಳ ಮೇಲೆ ಸರ್ದಾರ ದೃಷ್ಟಿ ಇಟ್ಟಿದ್ದಾನೆ, ಮಂತ್ರಿಗಳು ಚಿಕ್ಕವರು ದೊಡ್ಡವರೆಲ್ಲರೂ ನಾವು ಬಾದಶಾಹನ ಕೆಲಸದಲ್ಲಿ ಯಾರು ಯಾರಿಗಿಂತಲೂ ಏನು ಕಡಿಮೆ ಆಗಬಾರದೆಂದು. ಒಟ್ಟಾರೆ ಇದೇ ಮಾತನ್ನು ಸಂಕ್ಷಿಪ್ತವಾಗಿ ಹೀಗೆ ಹೇಳುವೆ. ಅಂದರೆ ಪ್ರತಿಯೊಬ್ಬನೂ ಶೂರ ಗಂಡು ಶಾಹನ ಕೆಲಸದಲ್ಲಿ ತನ್ನ ಜೀವ ಹೀಗೆ ಸುಡಲು ಸಿದ್ಧನಾಗಿದ್ದಾನೆ. ಅದರಿಂದಾಗಿ ಪ್ರಳಯದವರೆಗೆ ಅವನ ಹೆಸರು ಏಕೆ ಜೀವಂತವಾಗಿರಬಾರದು. ಈ ಮಧ್ಯ ಒಂದು ದಿನ ಮುಘಲ್ ಹರಕು ಮುರುಕು ಸಾಮಾನೆಲ್ಲ ಕಟ್ಟಸುವ ಕೆಲಸದಲ್ಲಿ ತೊಡಗಿ ಹೊರಗೆ ಕಾಲು ಚಾಚಿ ನಿಂತಿದ್ದ. ಆದರೆ ಫತೆಹ್ ಖಾನ್ ಎಂಬವನು ಮರ್ಯಾದಸ್ಥನಿದ್ದ. ಅವನು ಹೈಬತ್ ವಲಿ ಖಾನನ ಮಗ. ಅವನಿಗೆ ಬಾದಶಾಹರೆ ಪರೀಕ್ಷಿಸಿದ ನಂತರ ತಾನೆ ಖುದ್ದಾಗಿ ಫತೆಹ್ ಜಂಗ್ ಖಾನನ ಬಿರುದು ಕೊಟ್ಟಿದ್ದರು. ಸಿಪಾಯಿ ವೃತ್ತಿಯಲ್ಲಿ ಬಹಳ ಪ್ರಸಿದ್ಧಿ ಪಡೆದ ಹಾಗೂ ಆ ಸಿಪಾಯಿ ತಾನು ಮಂತ್ರಿ ಆಗ ಬೇಕೆಂದಿದ್ದ. ಪ್ರತಿಯೊಂದು ಕೆಲಸದಲ್ಲಿ ಜಾಗೃತ. ತನ್ನ ಅಸ್ತಿತ್ವದಲ್ಲಿ ಗಾಂಭೀರ್ಯವುಳ್ಳವನು, ಶಾಹನ ಆದಿಕಾಲದಿಂದಲೂ ಮರ್ಯಾದಸ್ಥ, ಶಾಹನ ಕೆಲಸದ ಮೇರೆ ಜನ್ಮದಿಂದ ಪ್ರಾಣ ತ್ಯಾಗ ಮಾಡುವವನು, ಆಗ ಅವನು ಖಾನನ ಸೂಬೆಯಲ್ಲಿ ಮಂತ್ರಿಯಾಗಿದ್ದ. ಅನೇಕರು ಮುಘಲರ ಪರ ಇರುವವರೂ ಸಹ ಇದ್ದರು. ಆಗ ನನ್ನ ಹೆಸರು ಫತೆಹ್ ಜಂಗ್ ಖಾನ್. ನಾನು ಇಲ್ಲಿ ಅತ್ಯುತ್ತಮ ಖಡ್ಗದ ಪೇಚನ್ನು ತೋರುವೆ. ಎಲ್ಲರೂ ತನ್ನ ಕುಟುಂಬದವರನ್ನು ಐಚ್ಛಿಕವಾಗಿ ಬಿಟ್ಟಿದ್ದಾರೆ ಸಿಪಾಯಿ ತನ್ನ ಶರೀರ ಮಾತ್ರ ಗೆಳೆಯನಾಗಿಟ್ಟಿಕೊಂಡಿರುವನು. ಸದಾ ಜಾಗೃತೆಯಿಂದ ಇರುವ ಖಾನ್ ಆ ಬಂಧನ ಏನು ಸಿಕ್ಕಿತೋ ಒಂದು ತೋಪಿನ ಗೋಲ ಶತೃವಿನ ಮೇಲೆ ಗುರಿ ಇಟ್ಟು ನಿಂತ. ಮುಘಲರ ಸೈನ್ಯ ಒಂದ್ಸಲ ಹಿಡಿತದಲ್ಲಿ ಬಂದರೆ ಸಾಕು ಅದನ್ನು ಹೊಡೆಯುವ ಸಂಕಲ್ಪ ಮಾಡಿಕೊಂಡ. ಹಠಾತ್ತನೆ ಬಲು ಗರ್ವದಿಂದ ಎದ್ದು ನಿಂತನು ಆದರೆ ಬೆಂಕಿ ಮತ್ತು ಕಿಡಿಗಳು ಏಳಲಾರಂಭಿಸಿದವು. ಆ ಕಿಡಿಗಳು ಆ ರಾಶಿ ಮಧ್ಯದಲ್ಲಿ ಬಿದ್ದಾಗ ಸಹಸ್ರಾರು ಖಡ್ಗಗಳ ಬೆಂಕಿಯಿಂದ ಪ್ರಜ್ವಲಿಸಿತು, ಯಾರೋ ನಿಂತ ಹಾಗೆಯೇ ಕಷ್ಟಕೊಡುವವನಾಗಿ ಏಟಿನ ಲೋಹದಿಂದ ಕಲಾಯಿ ಮಾಡಲಾರಂಭಿಸಿದ. ಇನ್ನು ಅನೇಕ ಖಡ್ಗಗಳ ಏಟುಗಳು ಸುತ್ತಲಿಂದ ಬಿದ್ದಿತೋ ಆಗ ಶರೀರ ಎರಡು ಬೆಟ್ಟಗಳಂತಾದವು ಅಂದರೆ ಗೆರಾವು ಮಾಡಿಕೊಂಡರು. ಶತ್ರು ಬಲು ಕಷ್ಟದಲ್ಲಿ ಸಿಕ್ಕಿಹಾಕಿ ಕೊಂಡಿದ್ದಾನೆಂದು ನೋಡಿದಾಗ, ಖಡ್ಗ ಹೂತಿಸಿ ಚಕ ಪಕ ಮಾಡಲಾರಂಭಿಸಿದರು. ಮೈಮೇಲೆ ಖಡ್ಗಗಳನ್ನು

ಹೊಡೆಯುವ ಮೊದಲೇ ಜೀವ ಆ ಶರೀರಗಳನ್ನು ಬಿಟ್ಟು ತೊಲಗಿದವು. ಕೆಲವರನ್ನು ಉದುರಿಸಿದರು. ಇನ್ನು ಕೆಲವರು ತಾವೆ ಉದುರಿದವು. ಎರಡು ಕಡೆ ಹೆಸರಾಂತ ವ್ಯಕ್ತಿಗಳು ಬಿದ್ದರು. ಈ ಧೂಳಿನ ಗಾಳಿ ನಿಲ್ಲುವವರೆಗೆ ಅನೇಕ ಸಾಲುಗಳನ್ನು ಉಲ್ಟಾ ಪಲ್ಟಾ ಮಾಡಿಟ್ಟರು. ಈ ಸ್ಥಿತಿ ನೋಡಿ ದಂಗುಬಡಿದು ನಿಲ್ಲುವವರೆಗೆ ಇನ್ನಷ್ಟು ಬಣ್ಣ ಬಣ್ಣದ ಸೈನ್ಯ ತೆಗೆದರು. ಈ ದಿನಗಳಲ್ಲಿ ಇದೊಂದು ಹೊಸ ಕಾರ್ಯವಾಗಿತ್ತು. ಎಲ್ಲೆಡೆಯು ಅದರ ಚರ್ಚೆ ನಡೆಯುತ್ತಿತ್ತು. ಪ್ರತಿಯೊಂದು ಗುಂಪಿನ ಸರ್ದಾರ ಈ ಯುದ್ಧವನ್ನು ತಿರಸ್ಕರಿಸುತ್ತಿದ್ದ. ಆದರೆ ಯಾವಾಗ ಖಾನ್ ಮುಘಲರ ಮೇಲೆ ಆಕ್ರಮಿಸಲು ಹೊರಟನೋ ಆಗ ಶೂರರೆಲ್ಲರೂ ಒಬ್ಬನ ಕೈ ಇನ್ನೊಬ್ಬ ಹಿಡಿದು ಜೊತೆಯಲ್ಲಿ ಹೊರಟರು, ಆಗ ಜವಾನರೆಲ್ಲರೂ ತಮ್ಮ ಶಸ್ತ್ರಗಳನ್ನು ಎತ್ತಿಕೊಂಡು ತಮ್ಮ ಕುದುರೆಗಳ ಲಗಾಮು ಸಂತೋಷದಿಂದ ಹಿಡಿದರು. ತಮ್ಮ ಹೃದಯದ ಛಾಯೆಯನ್ನು ಕುದುರೆಗಳ ಮೇಲೆ ಎಸೆದರು. ಕೋಪದಲ್ಲಿ ಬಂದು ಮರೆಯಾದರು. ಮುಘಲನಿಗೆ ಈ ಕೆಲಸ ಯಾವುದೇ ತೊಡಕಿನಿಂದ ಖಾಲಿ ಇಲ್ಲವೆಂದು ಆಗ ಸಂಶಯ ಬಂದಿತು. ಯಾವಾಗ ಬೆತ್ತಲೆ ಖಡ್ಗಗಳು ಹೊಳೆಯಲಾರಂಭಿಸಿತೋ ಆಗ ಹೃದಯಗಳಲ್ಲಿ ಹೆದರಿಕೆ ಉಂಟಾಗಿ ಢವಢವಿಸಲಾರಂಭಿಸಿದವು. ಗಗನದಲ್ಲಿ ಮೋಡ ತೇಲುವ ಹಾಗೆ ಶಸ್ತ್ರಧಾರಿಗಳ ಹೃದಯದಲ್ಲಿ ಕೆಂಪು ಗುರುತುಗಳು ಚಲಿಸಿದವು. ಆ ಸೈನ್ಯದಲ್ಲಿ ಜೈಸಿಂಘ್ ಹಾಗೂ ಅನೇಕ ರೀತಿಯ ರಜಪೂತರಿದ್ದರು. ಯಾವಾಗ ಅವನು ಚೆನ್ನಾಗಿ ಕಣ್ಣು ಬಿಟ್ಟುನೋಡಿದನೋ ಶಸ್ತ್ರಧಾರಿಗಳ ದೃಷ್ಟಿಗಳಲ್ಲಿ ತುಂಬಿರುವ ಕೋಪವನ್ನು ತೂಕ ಮಾಡಿ, ಈ ವ್ಯಕ್ತಿ ಅಂತು ಅವಧೂತ ಅಚಲ ರಾವೊ, ರಾಣೆ ಅಥವ ರಾಜಪೂತನಿರಬೇಕು. ಬರುವವನು ಯಾರು ಎಂದು ಗುರುತು ಹಿಡಿಯಬೇಕು. ಇಡೀ ಸೈನ್ಯದಿಂದ ಇವನು ಪೂರ್ಣವಾಗಿ ಬೇರೆಯೇ ಇದ್ದಾನೆ. ನನಗೆ ಈ ಯುವಕನ ಯವ್ವನ ಬಲು ಕೆಟ್ಟದಾಗಿ ಕಾಣುತ್ತಿದೆ. ಖಂಡಿತವಾಗಿಯೂ ಇವನು ಕೆಟ್ಟದ್ದನ್ನು ಆರಿಸಿಕೊಂಡಿರುವನು. ಯಾವ ಕೆಟ್ಟವನಿಂದ ಕೊನೆಗೂ ಕೆಲಸ ಬಿತ್ತೋ, ಕೊನಗೂ ಕಷ್ಟ ಸಹಿಸಲೇಬೇಕಿದೆ. ರಾಂ ರಾಂ ಹೇಳಿ ಈ ಅಹಂಕಾರಿ ಸಶಸ್ತ್ರಧಾರಿ ಎದ್ದು ನಮ್ಮ ಮೇಲೆ ಬಿಸಿಯಾಗಿ ಬೀಳಲಿದ್ದಾನೆ. ಉಕ್ಕಿನ ಗುಂಡಾಗಿ ಸಿಡಿಮದ್ದಿನ ಉಗ್ರಾಣದ ಬದಿ ಹೊಡೆಯಲಿದ್ದಾನೆ. ಇಲ್ಲಿಯವರೆಗೆ ನಿಂತುಕೊಂಡು ಫಿರಂಗಿಯನ್ನು ಜೋಡಿಸಿದ್ದಾನೆ. ಸೊಂಟ ಕಟ್ಟಿ ಖಡ್ಗವನ್ನು ಎತ್ತಕೊಳ್ಳ ಬೇಕು. ಯಾವಾಗ ಶತ್ರು ಜೋಡಿಸಲು ಬಂದರೋ ಆವಾಗಲೇ ಖಾನನು ಹಠಾತ್ತನೇ ಕುದುರೆ ಎತ್ತಿದನು. ನೆಲದ ಮೇಲೆ ಕುದುರೆಗಳ ತಳ ಬಾರಿಸತೊಡಗಿತು. ಆಗ ಭೂಮಿ ಧೂಳಾಗಿ ಗಾಳಿ ಮೇಲೆ ಹಾರತೊಡಗಿತು. ಗಗನದ ಕನ್ನಡಕ ದೂರದರ್ಶಕದ ಕನ್ನಡಿ ಬೆನ್ನಿನ ಕಡೆಯಿಂದ ಖಂಡಿತವಾಗಿಯೂ ಕಾಲುಭಾಗ ಆಯಿತು. ಅದರಲ್ಲಿ ಫಿರಂಗಿಯ ಹೊಗೆ ಕಾಣಿಸಿತು. ಭೂಮಿ ಅಂತೂ ಮೇಲಾಯಿತು ಹಾಗೂ ಆಕಾಶ ಕೆಳಗಾಯಿತು. ಕೋಟೆಯ ಫಿರಂಗಿಗಳ ಮುಖದಿಂದ ಬೆಂಕಿ ಹೊರಟು ಗುಂಡುಗಳ ಬೆಟ್ಟದ ದಿಂಡುರುಳಿಸಿತು.

ಹೊಗೆಯಾಗಿ ನದಿ ದೃಷ್ಟಿಕೆಳಗೆ ಬಿದ್ದಿತು. ಗಾಳಿ ಅದನ್ನು ತೆಗೆದುಕೊಂಡು ಆಕಾಶದವರೆಗೆ ಹತ್ತಿತು. ಹೊಗೆ ಮತ್ತು ಆಕಾಶ ಶೀಘ್ರವಾಗಿ ಸೇರಿದವು. ಸೂರ್ಯ ಸಂಪೂರ್ಣವಾಗಿ ನೊರೆ ಹಾಗು ನೀರ್ಗುಳ್ಳೆಯಾಯಿತು. ಹೊಗೆ ಧೂಳನ್ನು ಇನ್ನಷ್ಟು ದಟ್ಟನೇ ಮಾಡಿತು. ಪ್ರತಿಯೊಂದು ಬಟ್ಟಲು ಬಾಯಿ ತೆಗೆದುಕೊಂಡು ಹನಿ ತೆಗೆದುಕೊಳ್ಳಬೇಕೆಂದಿತು. ಈ ಕಾರಣದಿಂದಾಗಿ ಕುದುರೆಗಳು ಮೈದಾನದಲ್ಲಿ ಓಡಲು ಮರೆತವು. ಹೇಗೆಂದರೆ ಜಲಪ್ರಳಯದಲ್ಲಿ ಅಪ್ಸರೆಗಳ ಗತಿಯಾಗುತ್ತದೆ. ಪ್ರತಿಯೊಂದು ಆನೆ ದಿಗ್ಭ್ರಮೆಗೊಂಡು ಲಂಗರು ಹಾಕಿದ ಹಡಗಿನಂತೆ ನಿಂತಿತು. ಕಪ್ಪು ಸಮುದ್ರದ ಮೇಲೆ ಬೆಂಕಿಯ ಅಲೆ ಅಲೆಯಂತೆ ಆಗ ಸೈನ್ಯದ ಸೈನ್ಯವೇ ಅಧಿಕ ಬಾಣಗಳನ್ನು ತೆಗೆದುಕೊಂಡು ಎದ್ದಿತು, ಮರಳು ಮೀನಿನ ಮರಳಲ್ಲಿ ಚದುರಿದಂತೆ ಬಾಣಗಳು ಸಂಪೂರ್ಣವಾಗಿ ಬಲು ವೇಗವಾಗಿ ಚಲಿಸಿದವು. ಪ್ರತಿಯೊಂದು ಮೊಸಳೆ ಕೇಳುವುದನ್ನೇ ಬಿಟ್ಟಿದೆ ಎಂತೆ ಕಾಣುತ್ತದೆ. ಯಾವುದನ್ನು ಬಿಡದೆ ಬಾಯಿ ಹಾಕಿದರೆ ಪ್ರಾಣದ ಮೇಲೆ ಆಪತ್ತು ಬರುತ್ತದೆ. ನೀರಲ್ಲಿ ಮೀನುಗಳು ಬೀಳುವಂತೆ ಖಡ್ಗಗಳು ಬಲದಲ್ಲಿ ಕಾಲಕಾಲಕ್ಕೆ ಸೇರುತ್ತಿವೆ. ಆದರೆ ಖಾನ್ ಫಾರಿಖಿ ತನ್ನ ಯುದ್ಧಕ್ಕಾಗಿ ಸಾಲನ್ನು ರಚಿಸಿ ಶತ್ರುಗಳ ಕಡೆ ಮುಖ ಮಾಡಿ ಎದ್ದು ಹೊರಟ. ಅವನಿಗೆ ಮಸ್ಲೀರುಖ್(ಒಂದು ನೋವಿನ ಹೆಸರು)ನ ನೋವು ಎದ್ದಿತು. ಆಗ ಅವನು ಕೆಲವು ಜನರ ಮೇಲೆ ನಿಸ್ಸಂಕೋಚವಾಗಿ ಹಲ್ಲೆ ಮಾಡಿದ. ಚಲಿಸುತ್ತಿರುವ ಸೈನ್ಯದ ಮುಂದೆ ಬೆಟ್ಟದ ಹಾಗೆ ಸೇತುವೆಯನ್ನು ಕಟ್ಟಿ ಹರಿಯುತ್ತಿರುವ ನದಿಯನ್ನು ಸೆರೆ ಹಿಡಿದು ನೀರಿನ ತೊಟ್ಟಿ ಎಂತೆ ಜಂಜಾಟವಾಯಿತು. ಖಡ್ಗಗಳ ಬೆಳಕು ಶತ್ರುವಿನ ನೇತ್ರಗಳ ಬೆಳಕನ್ನು ಕಿತ್ತುಕೊಂಡಿತು ಅದರ ತುಕ್ಕು ಕಣ್ಣಿನ ರೆಪ್ಪೆಗಳಲ್ಲಿ ಕಾಣಿಸಿಕೊಂಡಿತು. ಶೂರರು ಗರ್ಜಿಸಿ ಬಂದು ನಿಂತಾಗ ಬಂದೂಕುಧಾರಿಗಳೆಲ್ಲ ಪಲ್ಟಿ ಹೊಡೆದು ಬಿದ್ದವು. ಖಡ್ಗದ ಹರಿತ ಬಾಯಿಯೊಳಗೆ ಹೋಗಿ ಕಿತ್ತಿತು. ತೋಪಿನ ಗುಂಡು ಒಳಗೆ ಹೋಗಿ ನೂಲುಂಡೆ ಅಯಿತು. ಬಂದೂಕುಗಳಿಗೆ ಗುಂಡುಗಳು ಹೀರಿ ವಾಂತಿಮಾಡುತ್ತಿದ್ದವು, ರಂಜಕದ ದಾರಿಯಾಗಿ ಸಿಡಿಮದ್ದಿನ ಗುರಾಣಿಯಾಯಿತು. ಪ್ರತಿಯೊಂದು ಬಾಣಕ್ಕೆ ತಾಪ ಹಿಡಿದು ಛಳಿ ಏರಿತು, ಜ್ವರ ತಿಂದು ಮೌನವಾಗಿ ಹೆದರಿ ಗಾಬರಿಗೊಂಡು ಬಿದ್ದಿದ್ದರು. ಬಿಲ್ಲುಗಳ ಆತಂಕದಿಂದ ಸೊಂಟ ಬಿದ್ದುಹೋಯಿತು ಹಾಗೂ ಕತ್ತು ಉರುಳಿ ಕೂಪ್ ಮೇಲಕ್ಕೆ ಬಂತು. ಬಾಣ ತಯಾರಿಸುವ ಒಂದು ಗಟ್ಟಿ ಮರ ಕೀಳಿಸಲು ದೊಡ್ಡಗರಿ ಕಳೆದುಕೊಂಡರು. ಹಕ್ಕಿಗಳೇನೋ ಇದ್ದವು ಆದರೆ ಅವು ಬಲೆಯಲ್ಲಿ ಬಿದ್ದವು. ರಜಪೂತರು ಬರ್ಚಿಗಳೊಡನೆ ನಿಂತು ನಿಂತು ದಣಿದರು. ಹಾಸಿಗೆ ಹಾಸುವರ ಕೈಗಳಂತೆ ಬತ್ತಿಗಳನ್ನು ಮೇಣಮಾಡಿದರು. ಕಮಾನ್ದಾರ ಹಗ್ಗದ ಏಣಿಯನ್ನು ಬೀಸಲು ಪ್ರಯತ್ನಿಸಿದರೆ ಅದು ಅವನ ಮೇಲೆ ಹಿಂದಿರುಗಿ ಬಿದ್ದತು. ಅವನ ಕೈಯಿಂದಲೇ ಅವನು ಅದರಲ್ಲೇ ಪೂರ್ಣವಾಗಿ ಮುಚ್ಚಿಹೋದ. ಗದಾಧಾರಿಗಳಿಗೆ ಗದೆ ತುಂಬ ಹಗುರ, ಮಗು ಕೈಯಲ್ಲಿ ಕಾಣಿಸಿತು. ಜೀನಿನ ಮೇಲೆದ್ದ ಅನೇಕ ಸವಾರರನ್ನು ಅಡಿಮೇಲು ಮಾಡಿದರು,

ಒಬ್ಬೊಂಟಿಗನೇ ಹೋಗಿ ಆತಂಕದ ತಂತಿಯಂತೆ ಬಿದ್ದರು. ಚೇತರಿಸುವ ಮುನ್ನವೇ ಶೂರರ ಮೇಲೆ ಹಲ್ಲೆ ಮಾಡಿದರು. ಖಡ್ಗದ ಮಿಂಚು ಹೃದಯ ಸೀಳಿ ಎರಡು ಭಾಗ ಮಾಡಿತು, ಪ್ರತಿಯೊಬ್ಬನ ಬಾಯಿಯಿಂದ ಒಂದೇ ಕೂಗು ಹೊರಟಿತ್ತು. ಯುದ್ಧದ ಪಂಕ್ತಿಯಲ್ಲಿ ನಾಲ್ಕು ದಿಕ್ಕಿನಿಂದಲೂ ಹೊಡೆ ಹೊಡೆ ಎಂಬ ಶಬ್ದ ಕೇಳಿಬರುತ್ತಿತ್ತು. ಶೂರರು ಒಬ್ಬರ ಮೇಲೆ ಒಬ್ಬರು ನೆಟ್ಟಗಾದರು. ಸನ್ಮುಖ ಮಿಲನದಿಂದ ದೃಷ್ಟಿ ಮಿಲನವಾಯಿತು. ಶರೀರಗಳನ್ನು ಕವಚದೊಂದಿಗೆ ಸೇರಿಸಿ ಮುರಿಯಲಾರಂಭಿಸಿದರು. ಒಬ್ಬನ ಕೈ ಇನ್ನೊಬ್ಬ ತೆಗೆದು ಕೊಂಡು ಜೋಡಿಸಿದರು. ಈ ದೃಶ್ಯ ಕಂಡು ಜೈಸಿಂಘ್‌ನ ಮನಸಲ್ಲಿ ಆತಂಕ ಉಂಟಾಯಿತು. ಯುದ್ಧದಲ್ಲಿದ್ದ ಆನೆ ಮೇಲೆ ಸವಾರರಾಗಿದ್ದ, ಎಲ್ಲರೂ ಸೇರಿ ಅವನ ಮೇಲೆ ಬೆಟ್ಟದ ಮೇಲೆ ಮಳೆಸುರಿಯುವ ಹಾಗೆ ಒಂದು ರೀತಿಯಲ್ಲಿ ಹೀಗೆ ಧಾವಿಸಿದರು. ದೊಡ್ಡ ತೂಕದ ದಂಡನಾಯಕ ಬಿದ್ದು ಬಿಟ್ಟ, ಆನೆ ಹೊಡೆದಾಗ ಮುಖಂಡ ಹರಿತವಿಲ್ಲದಂತಾದ. ಖಡಾ ಖಡ್ ಖಲಿ ಎಲ್ಲರದು ಒಂದೇ ಗತಿಯಾಗಿ ಟಂಕಸಾಲೆಯ ಕಾರ್ಖಾನೆಯಂತೆ ಕಾಣಿಸಿತು. ಹಲ್ಲೆಗಳ ಶಬ್ದ ಹೆಚ್ಚು ಕಡಿಮೆ ಎದ್ದೇಳಿತು. ಅನೇಕ ಸುರಗಳು ಸೇರಿ ಒಂದು ಮನಮೆಚ್ಚುವ ಸಂಗೀತ ಬಾರಿಸತೊಡಗಿತು. ಶಸ್ತ್ರಗಳಿಂದ ಕಬ್ಬಿಣದ ಶಕ್ತಿಯ ಬೆಂಕಿಯ ಕಿಡಿಗಳಿಂದ ಭಯಂಕರ ಬೆಂಕಿ ಏಳುತ್ತಿತ್ತು. ಕ್ರೋಧದಿಂದ ಪ್ರತಿಯೊಬ್ಬ ಶೂರ ಸೂರ್ಯನಂತೆ ಕಾದು ಖಡ್ಗ ಎತ್ತಿಕೊಂಡು ಬಿಸಿಲುಗುದುರೆ ಹಾಗೆ ಓಡುತ್ತಿದ್ದ. ಈ ಬಿಸಿಲುಗುದುರೆಗಳಲ್ಲಿ ಯಕ್ಷ ಕಳವಳಗೊಂಡ ಅದೇ ಕ್ರೋಧದಲ್ಲಿ ಜಲಮೃತ್ಯುವಿನ ಕಠಿಣ ಶಿಕ್ಷೆ ಪಡೆದನು. ಆನೆ ಮತ್ತು ಕತ್ತಿಯ ಹಗೆತನ ಬಲು ಕೆಟ್ಟದ್ದಾಗಿತ್ತು. ಅದರ ಸೊಂಡಿಲ ಚೂರಿಗೆ ಸವತೇಕಾಯಿ ಆಗಿತ್ತು. ಗದೆಗಳಿಂದ ತಲೆಬುರುಡೆ ಹೊಡೆದು ಮಿದುಳು ತೆಂಗಿನಕಾಯಿ ಹೊಡೆದಿಟ್ಟಂತೆ ಕಾಣುತ್ತಿತ್ತು. ಹೊಡೆತ ಹೊಡೆಯುವವನು ಹಾಗೂ ಹೊಡೆತ ತಿನ್ನುವವನಿಗೆ ಹುಡುಕಿ ನೋಡಿದರೆ ಮೋಡ ತನ್ನ ಹಲ್ಲುಗಳಲ್ಲಿ ಅದರ ಸೊಂಡಿಲ ಹಿಡಿದಿಟ್ಟಂತೆ ಕಾಣುತ್ತಿತ್ತು. ಹೊಳೆಯುವ ಮಿಂಚು ಕೈ ಎತ್ತಿ ಹೊಡೆದಾಗ ಮೋಡ ಅವರ ಕೈಯಲ್ಲಿ ಅಗ್ನಿಯಾಗಿ ಸುರಿಯಿತು. ಈ ಸಣ್ಣ ಜಗಳದಲ್ಲಿ ಭೂಮಿ ನೀರಲ್ಲಿ ಬಿದ್ದ ಅನೇಕ ಗುಂಡುಗಳ ಸುಳಿಯಲ್ಲಿ ಸಿಕ್ಕಿಕೊಂಡಿತು. ಶಸ್ತ್ರಧಾರಿಗಳು ಸಮುದ್ರದ ಅಲೆಗಳಂತೆ ಎಲ್ಲೆಡೆ ಹರಡಿರುವರು. ಅವರ ಮಹಾ ಹೃದಯ ಚಿಪ್ಪಿನ ಏಕೈಕ ದೊಡ್ಡಮುತ್ತಂತೆ ಕಾಣಿಸುತ್ತದೆ. ಯಾರ ತಲೆ ಮೇಲೆ ಮೊಸಳೆ ಹೊಡೆದರೋ ಅದು ಹೂತುಹೋಗಿ ನಿಸ್ಸಂದೇಹವಾಗಿ ಅವನ ರುಂಡ ಎರಡು ಭಾಗಗಳಾಗಿ ಬಿದ್ದಿದೆ. ಯಾರು ಆನೆ ದಂತವನ್ನು ಕೈಕೊಟ್ಟು ಎತ್ತಿದರೋ ಅದನ್ನು ಬಾಳೆ ಕಂಬದಂತೆ ಮುರಿದು ಬೀಸಾಡುತ್ತಿದ್ದರು. ಮುರಿಯುವುದರಲ್ಲಿ ಕೋಮಲತೆ ತೋರಿಸುವುದಾದರೇ ಪ್ರತಿಯೊಂದು ಕೂದಲಿನ ಲಕ್ಷಾಂತರ ತುಂಡು ಹಾರಿಸುವರು. ಯಾರಾದರು ಗಟ್ಟಿ ಕೈ ತೋರಿಸಿದರೆ ಆನೆಗೂ ಕವಚದೊಡನೆ ಹತ್ಯೆ ಮಾಡುವರು. ಯಾವುದಾದರು ಕಟಾರಿ ಬಂದು ಕವಚವೂ ಕಿತ್ತಿದರೆ ಹೃದಯದ ಮೊನೆಗಳಿಂದ ಗಂಟನ್ನು ಬಿಚ್ಚುವರು. ಪ್ರತಿಯೊಂದು ಗಟ್ಟಿ

ಪಕ್ಕೆಲಬನ್ನು ಜಂದಾರಿನ ನಾಲಿಗೆಗಳನ್ನು ಸುಲಿದಂತೆ ಸುಲಿಯುವರು. ಎಲಬುಗಳನ್ನು ತೆಗೆದುಕೊಂಡು ಸಂಗೀತ ವಾದ್ಯದ ತಾಳ ತುಂಬುವರು. ಕಟಾರಿಗಳ ನಾಲಿಗೆಯಿಂದ ಅಕ್ಷರವನ್ನು ಹೊರಡಿಸುವರು. ರಕ್ತದ ಬಾಣಗಳನ್ನು ಹೊಡೆದು ಒಂದೊಂದು ವೃಕ್ಷಕ್ಕೂ ಸಹಸ್ರಾರು ಶಸ್ತ್ರಸಲಾಕಿಗಳಲ್ಲಿ ಹಂಚುವರು. ನರಗಳನ್ನು ಖಡ್ಗದಿಂದ ಉಜ್ಜಿ ಮೇಲ್ಮುಖ ಮಾಡಿದರೆ ಗಗನದ ಸೂರ್ಯದ ತಟ್ಟೆಯಲ್ಲಿ ರಕ್ತ ಕಾಣುವುದು. ಯಾವಾಗ ಸೂರ್ಯ ದಿಗಂತದ ರೂಪ ಧರಿಸಿದನೋ, ಪ್ರಪಂಚದ ಮೇಲೆ ಕುಸುಂಬದ ಹಾಗೆ ಕೆಂಪು ಬಿಸಿಲು ಬಿದ್ದಿತು. ಭೂಮಿ ರಕ್ತದ ಬಣ್ಣ ತೃಪ್ತಿಯಾಗಿ ಕುಡಿಯಿತು. ಗಾಳಿ ಮನ ಬಿಚ್ಚಿ ಚಿತ್ರ ಮಾಡಲು ಅದರ ಮೇಲೆ ಹನಿ ಉದುರಿಸುತ್ತಿದೆ. ಕವಚದ ಕೊಂಡಿಗಳ ಮಧ್ಯದಲ್ಲಿ ರಕ್ತದ ಹನಿಗಳಿದ್ದು ಪ್ರತಿಯೊಂದು ಕೊಂಡಿ ರಕ್ತದ ಕಣ್ಣುಗಳಂತೆ ಕಾಣುತ್ತವೆ. ಕವಚದ ಕೊಂಡಿಗಳು ಹರಿತದ ಬಲದಿಂದ ಅದಾಗ್ಯೂ ಸುಳಿ ಹರಿತಕ್ಕೆ ತಿರುಗುವುದರಲ್ಲಿತ್ತು. ಆದರೆ ಹಲ್ಲೆಯ ಮನೆಯ ತೂಕದ ಮುಂದೆ ಧಾರೆಯಹರಿವಿನ ಮುಂದೆ ಬಿಚ್ಚಿತು. ಸಾಮ್ರಾಜ್ಯದ ಕೆಲಸ ಬಿದ್ದಾಗ ರಾಜರು ಒಳ್ಳೆ ದಾರಿಗೆ ಬಂದರು. ಇಬ್ಬರೂ ಸೇರಿ ಒಂದು ಮಾತಿನ ಒಪ್ಪಂದಕ್ಕೆ ಬಂದರು. ಅವರಿಗೆ ದಕ್ಷಿಣದ ಸಾಮ್ರಾಜ್ಯದ ಆಡಳಿತ ಅದೇ ಸೂಬೆದಾರಿಯ ಅರ್ಹರೆಂದು ತಿಳಿಯಾಲಾಗುವುದು ಎಂದು ಉಭಯ ಸರ್ಕಾರಗಳ ಮಧ್ಯೆ ಹಿಂಜರಿಯುವಿಕೆ ಆಗುವವರೆಗೆ ಅಗಣಿತ ಜನರು ಪ್ರಪಂಚದಲ್ಲಿ ಸತ್ತರು. ಕುದುರೆಗಳ ಮತ್ತು ಸವಾರರ ಬಲ ಕುಸಿಯಿತು. ಖಡ್ಗದ ಆಸೆ ಆಕಾಂಕ್ಷವೂ ಯಾವುದು ಉಳಿಯಲಿಲ್ಲ. ನದಿಗಳಿಗೆ ಖಡ್ಗಗಳಿಂದ ರಕ್ತ ಹರಿಯಿತು. ಅದರಲ್ಲಿ ಅನೇಕರು ಮುಳುಗಿದರು. ಬರ್ಚಿಗಳ ಮೇಲೆ ರಕ್ತ ಹೆಪ್ಪುಕಟ್ಟಿ, ಬೆರಳುಗಳು ಬಿಚ್ಚಿದರೇ ಪ್ರತಿಯೊಂದು ಹಸ್ತ ಗುಂಪಿನ ಮುಷ್ಟಿಯಾಯಿತು. ಶತ್ರಗಳ ಮೇಲೆ ಹಗಲು ಇರುಳಾಯಿತು ಹಾಗೂ ಭೂತಗಳು ತನ್ನ ಕೈ ಕಾಲು ಬಿಚ್ಚಿದವು ಇಂತಹದರಲ್ಲಿ ಅವರಿಗೆ ಅಲುಗಾಡುವ ಶಕ್ತಿಯೂ ಇರಲಿಲ್ಲ. ಶರೀರ ಅಮುಕಿ ಹೋಗಿತ್ತು. ಅದರ ಬೆವರಿನಲ್ಲಿ ಸುರಂಗ ಬಿದ್ದಿತ್ತು. ಹೀಗೆ ಅವರಿಗೆ ಎದ್ದೇಳಿಸದೆ ಸ್ವಪ್ನ ಆವರಿಸಿತು. ಅವರ ಮೇಲೆ ಲಕ್ಷಾಂತರ ಬಿಂದಿಗೆಗಳ ನೀರು ಸುರಿದರೂ ಅವರು ಏಳುವವರಲ್ಲ. ಅನೇಕ ಮಲಗುವರು ಬಲು ಗಾಢ ನಿದ್ರೆ ಮಾಡುವ ಬದಲಾಗಿ ಗಾಯಗಳಿಂದ ರೋಸಿಹೋಗಿ ಗೊಂದಲ ಎಬ್ಬಿಸಿದ್ದರು. ಕುದುರೆಗಳು ನಿಜವಾಗಲೂ ಈಗ ಹೋಗುವುದು ಬೇಕಿಲ್ಲ ಎಂದು ನಿಶ್ಚಯಿಸಿ ನಿದ್ರೆಯಲ್ಲಿ ಮಸ್ತಾಗಿ ಕಾಲನ್ನು ಅಗಲಿಸಿಕೊಂಡು ಮಲಗಿದವು. ಹಗಲು ಬಂದಾಗ ಬೆಟ್ಟಗಳು ಉತ್ಪತ್ತಿಯಾಗಿ ಪದೆಪದೇ ಆಕ್ರಮಣದಿಂದ ಗಾಯಗಳ ಲಡಿಗಳೇ ಹೊರಟಿವು. ಪ್ರತಿಯೊಂದು ಆನೆ ದಂತ ಮರಳು– ಮೀನಿನಂತೆ ಸೊಂಡಿಲುಗಳಿಂದ ಮುರಿದು ಜೇಡರ ಹಾಗೆ ಬಿದ್ದಿದ್ದವು. ರಕ್ತ, ನೀರು ಕಲ್ಲು ಹಾಗೂ ಮೂಳೆಗಳ ಮಧ್ಯ ಖಡ್ಗಗಳು, ತಲೆ ಬುರುಡೆಗಳು ಹಾಗೂ ಮಿದುಳುಗಳು ಕೆಸರಾಗಿದ್ದವು. ಖಡ್ಗದ ದೊಡ್ಡ ತುಂಡು ಅಬ್ರಕದಂತೆ ಕಾಣುತ್ತಿತ್ತು ಸಣ್ಣ ಚೂರೆಲ್ಲ ನಿಸ್ಸಂದೇಹವಾಗಿ ಮರಳ ಹಾಗೆ ಕಂಡಿತು. ಬಿಚ್ಚಿರುವ ಹಸ್ತಗಳು ಉದುರಿ ರಕ್ತದಲ್ಲಿ ಬಿದ್ದಿದ್ದವು, ಪ್ರತಿಯೊಂದು

ಹಸ್ತ ಹವಳದ ಕೊಂಬೆಯಂತೆ ಕಾಣುತ್ತಿತ್ತು. ಲಾಳಗಳೆಲ್ಲ ಜಗಜ್ಯೋತಿಯಾದವು. ದೊಡ್ಡ ಮುತ್ತುಗಳೆಲ್ಲ ಕೆಂಪು ಮಾಣಿಕ್ಯದಂತೆ ಕಂಡಿತು. ಹಲ್ಲೆಯಲ್ಲಿ ತಲೆಗಳು ದಾಳಿಂಬರಿಯ ಹಾಗೆ ಬಿಚ್ಚಿಕೊಂಡು ಅಸಂಖ್ಯಾತ ದಾಳಿಂಬರೆ ಬೀಜ ಕಾಣಿಸಿತು. ಯಾವ ತಲೆಗಳು ಮುಂಡಾಸೆ ಜೊತೆ ಸೇರಿಬಿದ್ದವೋ ಅವು ದೊಡ್ಡ ಬುಟ್ಟಿಯಲ್ಲಿ ಕಲ್ಲಂಗಡಿಹಣ್ಣು ಇಟ್ಟಿರುವಹಾಗಿದ್ದವು. ರುಂಡಗಳು ಸಹಸ್ರಾರು ಭಾಗಗಳಲ್ಲಿ ಬಿದ್ದಿವೆ ಕಣ್ಣಿನ ಕಾಳು, ತಲೆ ಇತ್ಯಾದಿಗಳೆಲ್ಲ ಕೆಟ್ಟ ಜಾಗದಲ್ಲಿ ಬಿದ್ದಿವೆ. ಕೈ ಕಾಲಿನ ನಲ್ಲಿಗಳು(ಮೂಳೆ) ಅಧಿಕ ಮುಖಗಳನ್ನು ಕಡ್ಡಿಗಳಂತೆ ಆಡುತ್ತ ತುಳಿದು ಹಾಕುತ್ತಿದ್ದರು. ರಕ್ತದ ಬೆರಳುಗಂಟು ಎಲ್ಲ ಕಡೆ ಉಬ್ಬಿ ಅದರ ಪ್ರತಿಬಿಂಬ ಆಕಾಶದ ಎಲ್ಲ ಮಟ್ಟದಲ್ಲಿ ಕಾಣಿತು. ಆದರೆ ವಕ್ರ ತಲೆಬುರುಡೆಗಳು ನೀರಿನ ಗುಳ್ಳೆಗಳಂತೆ ಕಾಣತೊಡಗಿದವು. ಸ್ಥಾನದ ಮತ್ಸ್ಯ ಒಂಟೆಮೇಲೆ ಬಿದ್ದುದನ್ನು ಬೆಟ್ಟಗಳ ಮೇಲೆ ಮೀನು ಬಿದ್ದಹಾಗೆ ಕಾಣುತ್ತಿತ್ತು. ಮೃತ್ಯು ಖಡ್ಗದ ಮೇಲೆ ದೊಡ್ಡ ರೆಕ್ಕೆಗಳನ್ನು ಹರಡಿಸಿ ಆ ಖಡ್ಗ ಯಾವ ಕಡೆ ಆಕ್ರಮಿಸುತ್ತಿತ್ತೊ, ಪ್ರತಿಯೊಬ್ಬರ ಜೀವಗಳೆಲ್ಲ ಹಾರಿದವು. ಗಾಳಿ ಪದೇ ಪದೇ ಆತ್ಮಗಳಿಗೆ ಡಿಕ್ಕಿ ಹೊಡೆದು ದಿಗಂತದೊಂದಿಗೆ ಅಲೆಗಳು ಸೇರಿ ತಾಪ ಏರಿತು. ಈ ರೀತಿಯಾಗಿ ಪ್ರಳಯ ಖಾಯಂ ಆದಂತೆ ಒಂದು ಪ್ರಪಂಚ ಅಧಿಕವಾಗಿ ನಾಶವಾಯಿತು. ಮುಘಲ್ ಸೈನ್ಯದಲ್ಲಿ ಗುಲ್ಲೆದ್ದಿತು ಸರ್ವ ಸಂಪೂರ್ಣ ನಾಶವಾದಂತೆ ಕಂಡಿತು. ರಜಪೂತರು ಜೀವದ ಆಸೆ ಬಿಟ್ಟರು, ದರ್ಪದಿಂದ ಬೆತ್ತದ ಹಾಗೆ ಗಡ ಗಡ ನಡಗುತ್ತಿದ್ದರು. ಶಂಖ ಊದಿದ್ದನ್ನು ಕೇಳಿ ಎದ್ದರು. ಅವರು ನುಚ್ಚುನೂರಾಗಿರುವ ಹೃದಯ ಭುಜದ ಮೇಲೆ ಹಾಕಿಕೊಂಡರು. ತಲೆ ಮೇಲಿಂದ ಮುಂಡಾಸಗಳನ್ನು ತೆಗೆದು ಬೀಸಾಡಿ ಅಲ್ಲಿಂದ ಮೆಲ್ಲನೆ ಜಾರಿಕೊಳ್ಳಲಾರಂಭಿಸಿದರು. ಮುಂದೆ ಹೋಗಬೇಕೆಂದರೆ ಮನಸ್ಸು ಹಿಂದೇಟು ಹಾಕಿತು. ಆದ್ದರಿಂದ ಅಲ್ಲೇ ಬಿದ್ದುಕೊಂಡಿದ್ದರು ಅಂತರಂಗದಲ್ಲಿ ಧೈರ್ಯ ಸೋಲನುಭವಿಸಿತು. ಮುಂದೆ ಸಾಗಬೇಕೆಂದರೆ ಕೈಗಳು ಸೋತು ಹೊಗಿದ್ದವು. ಮರಳಿ ಹಿಂದೆ ಹೋಗಬೇಕೆಂದು ಎಲ್ಲ ಸಿದ್ಧತೆ ಇದ್ದವು. ಒಳ್ಳೆಯ ಜೈಸಿಂಘ್ ಯುದ್ಧ ಮಾಡಲು ಬಂದವನು ಅಂಗಳದಲ್ಲಿ ಬಂದು ರೆಕ್ಕೆನೂ ಹೊಡೆಯಲಿಲ್ಲ. ಗಮನಿಸಿ ನೋಡಿದರೆ ಒಂದು ಅರಮನೆಯಂತೆ ಆನೆ, ಅದರ ಮೇಲೆ ಒಂದು ಸಣ್ಣ ಅಂಬಾರಿ ಅದು ಸಹ ಸಂಪೂರ್ಣವಾಗಿ ಒದ್ದೆಯಾದಂತೆ ಕಂಡಿತು. ಅದರ ಮೇಲೆ ಹತ್ತಲು ಏಣಿ ಕಟ್ಟಿದೆ. ಆನೆಯ ಎತ್ತರದವರೆಗೆ ಒದ್ದೆಯಾಗಿ ಹೇಗೆ ತುಂಬಿಕೊಂಡಿತ್ತೆಂದರೆ ರಕ್ತದ ಮೋರಿ ಅದರಲ್ಲಿ ಏರಿಬಂದು ಅಂಬಾರಿ ರಕ್ತದ ನೀರಿನಿಂದ ತೊಟ್ಟಿಯಾಯಿತು. ಜೈಸಿಂಘ್ ಅದರಲ್ಲಿ ಮುಳುಗಲಾರಂಭಿಸಿದ. ಆನೆ ಗತಿ ಅಂತೂ ಮಳೆಯ ಭಾವಣಿ ಇದ್ದಂತಿತ್ತು. ಸೊಂಡಿಲದ ಚಿಕ್ಕ ಕಾಲುವೆಯಿಂದ ರಕ್ತ ಮುಕ್ಕುಳಿಸುತ್ತ ಹೊರಟಿತು. ರಕ್ತದ ಜಡಿಮಳೆ ಚಂಡಮಾರುತವಾಗಿ ಆನೆ ಕಾಲಿನ ಬೇಡಿ ಆಯಿತು. ಖಡ್ಗದ ಮೇಲೆ ಅವನ ದೃಷ್ಟಿ ಇಲ್ಲದಂತಾಗಿ ಪ್ರಜ್ಞೆ ಮುಂದೆ ಅವನ ಜೀವ ಸೋತಿತು. ಕೆಳಗೆ

ನೋಡಿದರೆ ಮೃತ್ಯುವಿನ ಮುಖ ಕಾಣುತ್ತಿತ್ತು, ಜೀವ ಈಗ ಶರೀರದ ದೇಶ ಬಿಟ್ಟು ಜರುಗಲು ಸಿದ್ಧವಾಗಿದೆ, ಈಗಂತೂ ಜೀವ ಹೊರಟು ಹೋಗುತ್ತೆ. ಯೋಚಿಸಿ ದುಃಖಿತನಾದ. ಈಗ ಏನು ಮಾಡಲಿ ಎಂದು ಯೋಚಿಸಿದಾಗ ಮುಖದ ಮೇಲೆ ಗೆಲ್ಲುವ ಆಸೆ ಹೋಗಿ ಕಣ್ಣುಗಳು ಮೃತ್ಯುವಿನ ಕನಸು ಕಾಣತೊಡಗಿದವು. ಯುದ್ಧದ ಗರಗಸದ ಬಾಚಣಿಗೆ ದಂಡನಾಯಕನಿಗೆ ಚೆನ್ನಾಗಿ ಅಂಗವಿಕಲರನ್ನಾಗಿ ಮಾಡಿತು. ಆದ್ದರಿಂದ ಸಿಪಾಯಿಗಳು ದಂಗಬಡಿದು ನಾಲ್ಕು ದಿಕ್ಕುಗಳಿಂದಲೂ ಜರುಗಿ ನಿಂತಿರುವರು. ಎಲ್ಲ ಶಸ್ತ್ರಗಳಿಂದ ಹರಿತ ಹಾರಿಹೋಗಿ ಹಲ್ಲೆ ಮಾಡುವ ಶಕ್ತಿ ಕಳೆದುಕೊಂಡಿತ್ತು. ಎಲ್ಲರ ಹೆಜ್ಜೆ ಸನ್ಮುಖದವರ ಮುಂದೆ ಸರಿದು ಹೋಗುವಂತೆ ಕಂಡಿತು, ಪ್ರತಿಕ್ಷಣ ಹಿಂದೆ ತಿರುಗಿನೋಡಲಾರಂಭಿಸಿದರು. ಮುಖದ ಚಿಲುಮೆಗಳಿಂದ ಮಾನ ಬಸಿದು ಹೋಗಿತ್ತು. ನಾವಿನ್ಯತೆಯ ತೋಟ ಸರ್ವ ಸಂಪೂರ್ಣ ಒಣಗಲು ಹತ್ತಿತು. ಶೀಲದ ಎದೆ ಆತಂಕದಿಂದ ಸೀಳಿ ಹೋಗುತ್ತಿತ್ತು. ಅತ್ಯಾಸೆ ಪ್ರಾಣದ ಮರ್ಯಾದೆಯ ಮೂಗು ಕ್ಯುಯಿಸಿತು. ಯಾವಾಗ ಇಡೀ ದಂಡು ಕಂಗಾಲಾಗಿ ಬಂದಿತೋ ದಂಡನಾಯಕರ ಧೈರ್ಯ ಕಳೆದುಹೋಯಿತು. ಆ ದಂಡಿನ ಕಡೆ ನೋಡಿ ಖಾನ್ ಇಂತಹವರನ್ನು ಹೊಡಿಯುವ ಬದಲು ಜೀವದಾನ ಕೊಡುವುದು ಒಳ್ಳೆಯದು ಎಂದು ಹೇಳಿದ. ಯಾರು ಋಣದಿಂದ ತಲೆ ಬಾಗಿಸುವನೋ ಅವನು ಪ್ರತಿಸಲ ಸಾಯುತ್ತಲೇ ಇರುತ್ತಾನೆ. ಈಗ ಹಿಂದಿರುಗಿ ಜಗಳ ಮಾಡುವ ಬಲ ಎಲ್ಲಿದೆ? ಒಂದು ಪಕ್ಷ ಯುದ್ಧ ಮಾಡಿದರೂ ಧೈರ್ಯ ಕಾಪಾಡಲು ಕಷ್ಟ, ಪಶುವಿನ ಮುಂದೆ ಪಶು ಓಡಿದ ಹಾಗೆ ಮುಖದ ಮೇಲೆ ಧೈರ್ಯ ಮತ್ತೆ ಹಿಂದಿರುಗಿ ಬರುವುದಿಲ್ಲ. ಆ ಉದ್ದಟ್ಟ ಸೋಲಿನ ನಂತರವೂ ಮತ್ತೆ ಹಿಂದಿರುಗಿ ಬಂದರೆ ಅವನ ಹೆಜ್ಜೆ ಗಟ್ಟಿಯಿದ್ದರೂ ಸಹ ಮನಸ್ಸು ಗಟ್ಟಿ ಇರಲು ಸಾಧ್ಯವಿಲ್ಲ. ಈ ದುಷ್ಟನಿಗೆ ಇಲ್ಲೆ ಬಿಡಿ ಪ್ರಳಯದ ದಿಕ್ಕು ಅವನ ಮುಖದ ಕಡೆಗೆ ತಿರುಗಿದೆ ಎಂದು ಖಾನ್ ಹೇಳಿದ. ಈ ದೊಡ್ಡ ಆಪತ್ತು ತಲೆ ಮೇಲೆ ಬರುವುದು ಬೇಡ ಎಂದು ಯೋಚಿಸಿ ಅವರಿಗೆ ಜೀವದಾನ ಕೊಟ್ಟು ಬಿಟ್ಟ. ಈ ರೀತಿಯಾಗಿ ಮುಘಲರ ಇಡೀ ಸೈನ್ಯವನ್ನು ಪರಾಜಯಗೊಳಿಸಿ ಅವರ ಎದೆ ಮೇಲೆಯೇ ಬೀಡು ಬಿಟ್ಟ, ಎದುರಾಳಿಯ ಎದೆಗಳ ಮೇಲೆ ಬಾವುಟಗಳನ್ನು ಹೂತಿಸಿದ. ಅವರ ಅಂತರಂಗಗಳ ಮೇಲೆ ಡೇರೆಗಳ ಬೆಟ್ಟ ನಿಲ್ಲಿಸಿದ. ದೊಡ್ಡ ಡೋಲುಗಳನ್ನು ಬಾರಿಸಿ ಅವರ ಎದೆಗಳನ್ನು ಹೊಡೆದ ಅದರ ಕರ್ಕಶ ಶಬ್ದದಿಂದ ಅವರ ಕಿವಿಗಳು ಕಿವುಡಾದವು. ಇಡೀ ದಂಡಲ್ಲಿ ದೀಪಗಳನ್ನು ಹಚ್ಚಿಸಿ ದುಃಖಿತರ ದೀಪ ಹೃದಯಗಳ ಮೇಲೆ ಕಲೆಗಳನ್ನುಂಟು ಮಾಡಿದ. ಕ್ಷೀಣನು ಕ್ಷಣ ಕ್ಷಣಕ್ಕೂ ಮೆಚ್ಚದಿದ್ದ ಹಾಗೆ ಮಾಡಿದ. ಬಿಳಿಬಣ್ಣದ ಶರೀರಗಳನ್ನು ಎತ್ತಿನ ಗಾಡಿಯ ಎತ್ತುಗಳನ್ನಾಗಿ ಮಾಡಿದ. ಖಾನನ ಸೈನ್ಯ ಹೊರಬಂದಾಗ ಸಿಪಾಯಿಗಳ ರುಂಡ ಮುಂಡ ರಕ್ತದಲ್ಲಿ ಅದ್ದು ಉದ್ಯಾನವನದ ಹಾಗೆ ಕಾಣುತ್ತಿತ್ತು ಎಂದು ಹೇಳಲಾಗುತ್ತದೆ. ಖಾನನ

ಬಟ್ಟೆಗಳ ಕೆಂಪು ಬಣ್ಣ ಮನ ಮೆಚ್ಚುವಂತಿದ್ದವು. ಸಿಪಾಯಿಗಳು ಅನೇಕ ಬಣ್ಣ ಧರಿಸಿ ವರನಾಗಿದ್ದವು. ಖಡ್ಗಗಳ ರೇಖೆ ಹಾರಿ ಹರಿತವಾದಾಗ ಎಷ್ಟೊಂದು ಖಡ್ಗಗಳಿದ್ದವೋ ಅವಕ್ಕೆಲ್ಲ ನಡುಕ ಬರಲಾರಂಭಿಸಿತು. ಯಾವ ವಿಶೇಷ ಖಡ್ಗ ಸ್ವರ್ಣ ಘಟಿತವಾಗಿತ್ತೋ ಅದು ಖಚಿತ ಆೀವಿ ಪಡೆದು ನಾನಾವಿಧದ ಕೆಂಪು ಬಣ್ಣದ ಮನೆಯಾಯಿತು. ಸಿಪಾಯಿಗಳ ಸಡಗರದ ಮೇಲೆ ರಕ್ತ ನಿರ್ಮಲವಾದ ನೀರಿನ ಮೇಲೆ ಮೋಡಗಳು ತೇಲುವಂತೆ ಕಂಡಿತು. ಗಗನ ಈ ತಮಾಶೆ ನೋಡಿ ಖಾನನಿಗೆ ಶಹಬಾಸ್ ಎಂದಿತು. ತನ್ನ ಖಡ್ಗಕ್ಕೆ ತಾನು ಪ್ರಶಂಸಿಸಿದ. ಬಲು ಧೈರ್ಯ ತೋರಿ ಪ್ರಪಂಚಕ್ಕೆ ಸಂತೋಷ ಪಡಿಸಿದ. ಹಾಸಿಗೆಗಳು ಸಿಪಾಯಿಗೆ ಕೊಡುವ ವಸ್ತು ಸಿಪಾಯಿಯೇ ಪ್ರಾಣದ ಸಹೋದರ ಎಂದು ಹೇಳಲಾಗುತ್ತದೆ. ಹೀಗೆ ಖಾನನ ಹೆಸರು ಎರಡು ಹೃದಯಗಳಲ್ಲಿ ಹೆಸರಾಯಿತು. ಏಕೆಂದರೆ ಮುಘಲರ ಜೊತೆಯಲ್ಲಿ ಚೆನ್ನಾಗಿ ಕಾಲ ಕಳೆದು ಯುದ್ಧ ಮಾಡಿದ. ತನ್ನ ಹಾಗು ಶಾಹನ ಹೆಸರು ಗಳಿಸಿದ. ತನ್ನ ತಂದೆಯ ಮರ್ಯಾದೆ ಉಳಿಸಿಕೊಂಡ. ಸಂಬಂಧಿಕರ ಮನಸ್ಸು ಸಂತೋಷ ಪಟ್ಟವು. ವಿಶೇಷವಾಗಿ ಶತ್ರುಗಳಿಗೆ ಬಲು ದುಃಖವಾಯಿತು. ಹಠಾತ್ತನೇ ಉರಿಯುತ್ತಿರುವ ಮೇಲೆ ಏನೋ ಬಿತ್ತು. ರಾತ್ರಿ ಆಗುವವರೆಗೂ ಜೈಸಿಂಘ್ ಅಲ್ಲೇ ನಿಂತುಕೊಂಡು ಅನೇಕ ರಾವೊ. ರಾಣೆ. ಕುಂವರ್ ಯುದ್ಧದಲ್ಲಿ ಬಹಳಷ್ಟು ಗಾಯಗೊಂಡು ಬರುತಿದ್ದಾರೆ. ಕುಟುಂಬದವರೆಲ್ಲ ಶೋಕ ಆಚರಿಸಿದರು. ಅವರಲ್ಲದೇ ಬೇರೆ ಹೆಸರಾಂತ ಜನರ ಬಗ್ಗೆ ಶೋಕವನ್ನು ಆಚರಿಸಿದರು. ಯಾರು ತಮ್ಮ ಜಾತಿಯಿಂದ ಅಗ್ನಿಯವರಾಗಿದ್ದರೋ ಅವರೆಲ್ಲರನ್ನು ಒಂದು ಗುಹೆ ತೋಡಿ ಅದರಲ್ಲಿ ಎಸೆದು ಬೆಂಕಿ ಹಚ್ಚಿದರು. ಇದೇ ನರಕಕ್ಕೆ ಹೋಗುವ ದಾರಿ ಎಂದು ಹೇಳಿದರು. ಇನ್ನಷ್ಟು ಅಗಣಿತ ಜನರಿಗೆ ಅಲ್ಲೇ ರಣದಲ್ಲೇ ಬಸಂತ ಆಗಬೇಕಾಗಿತ್ತೋ ಅವರನ್ನು ಬಿಟ್ಟು ಹೊರಟು ಹೋದ. ಒಂದು ಕ್ಷಣ ಅವರಿಗೆ ಆವೇಶ ಬಂದು ಆ ಭೂತಗಳು ತಮ್ಮ ಆತ್ಮಗಳನ್ನು ಬೆಳಗಿಸಿ ಹಗೆತನದ ನಗ್ನ ಖಡ್ಗವನ್ನು ಕೈಗೆ ತೆಗೆದುಕೊಂಡು ಬೆಂಕಿಯನ್ನು ಬಾಯಿಯಿಂದ ಎಸೆಯುತ್ತ ಮಂದಿರಕ್ಕೆ ಹೋದವು. ಯೋಗಿಗಳು ತಮ್ಮ ಉದ್ದನೇ ಜಟೆಗಳನ್ನು ಬಿಚ್ಚಿದರು. ಹಾಗೆಯೇ ಸನ್ಯಾಸಿನಿಯರು ಸಹ ನೆಲಕ್ಕೆ ತಾಗುವ ಜಡೆಗಳನ್ನು ಬಿಚ್ಚಿದರು. ರಣದಲ್ಲಿ ಅನೇಕ ಮುಂಡವಿಲ್ಲದ ರುಂಡಗಳು ಕುಣಿಯುತ್ತಿದ್ದವು, ಅನೇಕ ರುಂಡ ಮುಂಡವಿಲ್ಲದೇ ಕಟಕಟ ಶಬ್ದ ಮಾಡುತ್ತಿದ್ದವು. ದೊಡ್ಡ ಆಕಾರದವರು ಎತ್ತರದಲ್ಲಿ ಚಿಕ್ಕವರು ದೊಡ್ಡವರು ಇವರೆಲ್ಲರೂ ಬೆಂಕಿಯ ಕೊಡೆಗಳಂತೆ ಕಾಣುತ್ತಿದ್ದವು. ಇವರೆಲ್ಲರಿಗೆ ಒಗ್ಗೂಡಿಸಿ ಪಾದಜೋಟನ್ನು ಬೆಳಗಿಸಿ. ದೀಪಗಳಂತೆ ಹಸ್ತಗಳು ಬೆರಳುಗಳು ಮಣಿಗಳಂತೆ. ಕಾವಿ ಬದಲಾಗಿ ಅವರ ಮುಖಕ್ಕೆ ರಕ್ತ ಹಚ್ಚಿದರು. ತಲೆಗಳಿಗೆ ಕಟಾರಿಯ ಕೊಂಡಿಗಳ ಹಾರ ಮಾಡಿದರು. ಅದೆಷ್ಟೋ ಲಾಳಗಳನ್ನು ತೆಗೆದು ಕೊರಳಿನಲ್ಲಿ ಹಾಕಿಕೊಂಡರು. ಅದರಲ್ಲಿ ಆನೇಕ ಕವಚ ಆದರೆ ಮತ್ತಷ್ಟು ತೇಪೆ ತಗಲಿದ ಉಡುಪನ್ನು ಮಾಡಿಕೊಂಡರು. ಮತ್ಯಾರೋ ಕವಚ

ತೆಗೆದುಕೊಂಡು ಶವವಸ್ತ್ರಗಳನ್ನು ಮಾಡಿದರೆ, ಮತ್ಯಾರೋ ಅದನ್ನು ರವಿಕೆಗಳ ಮೊಗ್ಗು ಮಾಡಿಕೊಂಡರು. ಬಲು ಜಗಳ ಕಣ್ಣುಗಳು ಮಾಡಿದವು, ಸುಲೈಮಾನರವರ ಪಗದಾಳಗಳನ್ನು ಬೆಳ್ಳನೆ ಮಾಡಿದರು, ಅನೇಕ ಕುದುರೆಗಳ ತಲೆಗಳನ್ನು ತೆಗೆದುಕೊಂಡು ಶಂಖ ಮಾಡಿಕೊಂಡರು. ಶಂಖಗಳನ್ನು ಬಾರಿಸಲು ಕೈಗಳ ಸೊಂಡಿಲು ಮಾಡಿದರು. ಕುದುರೆ ಬಾಲವನ್ನು ಕೈ ಬಳೆಯಂತೆ ಮಾಡಿದರು. ಆನೆಗಳ ದಂತವನ್ನು ದೊಣ್ಣೆಯಂತೆ ತೆಗೆದು ಹೋದರು, ಆನೆಗಳ ತಲೆಬುರುಡೆಗಳು ಪ್ರತಿಯೊಬ್ಬರ ಲೋಟಗಳಾದವು. ಆ ಲೋಟಗಳನ್ನು ತುಂಡುಗಳಿಂದ ಚೆನ್ನಾಗಿ ಒಳಗೆ ತುಂಬುತ್ತಾ ಹೋದರು, ಜೀನಿನ ಮೇಲೆ ಹಾಕುವ ಬಟ್ಟೆಯನ್ನು ಒಬ್ಬ ಗುರುತಿಸಿ ಯಾರೋ ಹೇಳಿದ ತೊಟ್ಟಿಲಲ್ಲಿ ತೂಗುವುದನ್ನು ತಿರುಹು ಎಂದು ತಿಳಿ. ರಣವನ್ನು ರುಚಿಕರ ಊಟದಿಂದ ತುಂಬಿದ ಸ್ವರ್ಗ ಎಂದು ತಿಳಿ, ಒಳ್ಳೆಯವರು ಕೆಟ್ಟವರೆಲ್ಲರೂ ಸೇರಿ ಪರಮಾನಂದ ಪಡೆದರು. ಆನೆಗಳ ತಲೆಬುರುಡೆಗಳು ಹಲೀಂ ತಯಾರಿಸುವ ದೊಡ್ಡ ಪಾತ್ರೆಯಾಯಿತು. ಕೊಬ್ಬಿನ ಎಣ್ಣೆ ಬಿಟ್ಟು ನಿಹಾರಿ ಬೇಗನೆ ತಯಾರಿಸಿದರು. ತುಂಡಾಗಿದ್ದ ಕಲಿಜ ಮತ್ತು ಹೃದಯ ಅವೆಲ್ಲ ಒಂದಾಗಿ ಚರ್ಬಿಯಲ್ಲಿ ಸೇರಿಕೊಂಡವು. ದಂತಗಳ ಅಕ್ಕಿ ಮೇಲೆ ನಾಲಿಗೆ ಊಟ ಅದರಲ್ಲಿ ಆನೆಗಳ ಕಿವಿಗಳು ಚಪಾತಿಗಳಾದವು. ತಲೆಗಳು ಈರುಳ್ಳಿ, ಹಸ್ತಗಳು ಹಸಿಶುಂಟಿಯಂತೆ, ಅದರಲ್ಲಿ ಮೂಲಂಗಿ ಆನೆಗಳ ದಂತಗಳಾಗಿದ್ದವು. ಮೂಳೆಗಳ ಚೂರೆಲ್ಲ ಹೋಗಿ ಭೇಜಗಳಲ್ಲಿ ಸೇರಿದವು. ತಲೆ ಬುರುಡೆಗಳು ಹಳೆ ಪೋರಗಳಾದವು. ಕಣ್ಣುಗಳಲ್ಲಿ ಅಶ್ರುವಿನ ಧಾರೆ ಜಾಗ್ರತವಾಗಿ ಪ್ರತಿಯೊಂದು ಕಣ್ಣಿನ ಪುತ್ತಲಿ ನಾಲಕ್ಕಾಯಿತು. ಉಪ್ಪಿನಕಾಯಿಗಳನ್ನು ಹೀಗೆ ಬಾಯಿಗಿಟ್ಟುಕೊಂಡು ಅವರು ರುಚಿಕರ ಊಟ ತಿಂದು ಪ್ರತಿಯೊಂದು ಶರೀರದ ಭಿನ್ನ ಭಿನ್ನವಾದ ರುಚಿ ಪಡುತ್ತಿದ್ದರು. ಯಾವ ಸಾಲಿನ ಜೊತೆ ಆ ಖಡ್ಗ ಯುದ್ಧ ಮಾಡುತ್ತದೆಯೋ ಅಲಿ ಶಾಹನ ಹೃದಯದ ಪ್ರಭಾವ ಖಡ್ಗ ತೆಗೆದುಕೊಳ್ಳುತ್ತದೆ. ಯಾವಾಗ ಅವರು ಯುದ್ಧದ ಮೇಲೆ ಯುದ್ಧಕ್ಕೆ ಬಂದರು. ಪರಾಜಯಗೊಂಡರೋ ಅದರ ಸುದೈವದಿಂದ ಅವರೆಲ್ಲರೂ ಇಸ್ಲಾಂ ಪಡೆದರು. ಎಷ್ಟೋಂದು ನಾಸ್ತಿಕತೆಯ ದಾರಿ ಮರೆತು ಇಸ್ಲಾಮಿನ ಆಚಾರಗಳೆಲ್ಲ ಒಪ್ಪಿಕೊಂಡರು. ಯುದ್ಧದ ನಂತರ ಸಭೆ ಅಲಂಕೃತವಾಯಿತು. ನನ್ನ ಸಹಜಪ್ರವೃತ್ತಿಗೆ ಕಾರ್ಯದಲ್ಲಿ ತೊಡಗಿಸಿದೆ. ಮೃಗಗಳು ತಮ್ಮ ಕಾರ್ಯಾಚರಣೆಗಾಗಿ ನಿವಾಸ ಮಾಡಿದವು. ಎಲ್ಲರನ್ನು ಇಂದು ಅತಿಥಿಗಳನ್ನಾಗಿ ಕರೆಯಬೇಕಾಗಿದೆ ಎಂದು ಹೇಳಿ ಇಂದು ರಾತ್ರಿ ಸಂತೋಷ ಆಚರಿಸತಕ್ಕದ್ದು ಯಾರು ಮಲಗಬೇಡಿ ಸಂಗೀತ ಏರ್ಪಡಿಸಲಾಗಿದೆ. ಆತಿಥ್ಯವಂತೂ ಇದ್ದೇ ಇತ್ತು ಅದರಿಂದ ಎಲ್ಲೆಡೆ ಸಂತೋಷ ಹರಡಿತ್ತು. ಉನ್ನತ ಸ್ಥಾನರಚಿಸಿ ಸಾಲು ಸಾಲುಗಳಲ್ಲಿ ಕುಳಿತರು. ನಾಲಕ್ಕು ದಿಶೆಗಳಲ್ಲಿ ಸಹಸ್ರಾರು ಕುರ್ಚಿಗಳನ್ನು ಜೋಡಿಸಿ ಅಂಬಾರಿ ಮಾಡಿದರು, ಜರಿಬಟ್ಟೆ ಹಾಸಿ ಗುರಾಣಿಗಳನ್ನು ಜೋಡಿಸಿ ಎತ್ತರದ ಕಟ್ಟೆ ಮಾಡಿದರು. ಪ್ರತಿಯೊಂದು ಹೊದಿಕೆಗೆ ನಿಸ್ಸಂದೇಹ ಡೋಲಿ ಮಾಡಿದರು. ಕಾಗೆ

ಬಂಗಾರವನ್ನು ಕಂದೀಲು ಮಾಡಿದರು. ಮುಂಭಾಗದಲ್ಲಿ ಬಂದು ಎಲ್ಲವನ್ನು ಕ್ರಮಾನುಸಾರ ಇಟ್ಟರು. ಆನೆಯ ಎಲುಬಿನ ಕೀಲನ್ನು ಮೇಣದ ಪಾತ್ರೆ ಮಾಡಿ ಆನೆ ದಂತಗಳೇ ಪ್ರತಿಯೊಂದು ಕರ್ಪೂರದ ದೀಪವಾಯಿತು. ಕಬ್ಬಿಣ ಯಾ ಶಿಲೆಯ ಚೂರು ರಜಗಳು ಜ್ಯೋತಿಯ ಜ್ವಾಲೆಯಾಯಿತು. ಇಷ್ಟೆಲ್ಲ ಮಾಡಿ ಮೃಗಗಳನ್ನು ಕೂಗಿದರು. ಓ ಕಾಡಾಡಿ ಸರ್ದಾರರೇ ಬನ್ನಿ ನೀವು ಸಂತೋಷದ ಸಂಪತ್ತನ್ನು ಪಡೆಯಬೇಕೆಂದರೆ ಬೇಗ ಬೇಗನೇ ಬಂದು ಸಂಗೀತ ಕೊಡಿ. ಈ ಕೂಗನ್ನು ನರಿಗಳ ವರ್ತುಲ ಮಾಡಿಕೊಂಡು ಮಧುರ ಸ್ವರವುಳ್ಳ ಪದ್ಯ ಹಾಡಿದರು. ಸ್ವರವನ್ನು ಚೆನ್ನಾಗಿ ಜೋಡಿಸಿ ರಾಗ ಎಳೆದಾಗ ಇದನ್ನು ಕೇಳಿ ಆಸಕ್ತಿವವುಳ್ಳವರೆಲ್ಲ ಜಾಗೃತರಾದರು. ಕೆಲವು ಕವಿಗಳು ಸಂತೋಷ ಪಟ್ಟು ತನ್ನ ಕೊಠಡಿಗಳಿಂದ ಹೊರಬಂದರು, ಮಹನೀಯತೆಯಿಂದ ಹುಲಿಗಳು ಬಡಾಯಿ ಜಾಗೃತಿಸಿದರು ಅದಾಗ್ಯೂ ಕಣ್ಣು ಮುಚ್ಚಿಕೊಂಡು ಜಪ ಕೇಳುತ್ತಿದ್ದರು. ಆದರೆ ಮನದಲ್ಲೇ ಇಂದು ಏನೇನು ತಿನ್ನ ಬೇಕಾಗಿದೆ ಎಂದು ಯೋಚಿಸುತ್ತಿದ್ದರು. ಅಂತರಂಗದ ದೃಷ್ಟಿ ಮಿದುಳಿನ ಮೇಲಿಟ್ಟು ಅನೇಕ ಕೊಬ್ಬಿನ ಪದಾರ್ಥಗಳನ್ನು ಬಹಿರಂಗವಾಗಿ ಆಹಾರವನ್ನಾಗಿ ಸ್ವೀಕರಿಸಿದರು ಹಾಗೂ ಯಾವಾಗ ಹೊಟ್ಟೆ ತುಂಬುವ ಅವಶ್ಯಕತೆ ಇತ್ತೋ ಅಲ್ಲಿ ಎಷ್ಟೊಂದು ಸೂಫಿಗಳ ಜಾಲವಿತ್ತೋ ಎಲ್ಲ ನಿಂತುಕೊಂಡರು. ನರಿ ವಿರಾಗಿಯಾದ ಹಾಗೂ ತೋಳ ಸೆರೆಯಿಂದ ಬಿಡುಗಡೆ ಹೊಂದಿದ. ಏನು ವಸ್ತುಗಳಿತ್ತೋ ಅವೆಲ್ಲ ಎಂಜಲು ಮಾಡಿಕೊಂಡು ಬಿದ್ದು ತಿನ್ನಲಾರಂಭಿಸಿದವು. ನಾಯಿ ತನ್ನ ಸಂತೃಪ್ತಿ ಕಾಡಲ್ಲಿ ಬೀಸಾಡಿ ಬಂದವು. ಶುದ್ಧ ಅಶುದ್ಧ ಏನೂ ನೋಡಲಿಲ್ಲ. ಇಲಿಗಳನ್ನು ಬಿಟ್ಟು ಪಾಪದಿಂದ ಮರಳಿದವು ಬೆಕ್ಕುಗಳು, ಮಹನೀಯರು ಬಿಟ್ಟಿರುವುದನ್ನು ತಿನ್ನಲು ಹೊರಟವು. ಮಹನೀಯ ನರಿ ತನ್ನ ಅಪ್ರತಿಮ ಮೋಸದ ಕಲೆ ಮರೆಯಲಿಲ್ಲ ಹಾಗೂ ಅಲಂಕರಿಸಿ ಕೊಂಡು ಬಂದಿತು. ತನ್ನ ಸ್ವಭಾವ ತೋರಲು ಇಳಿದು ಎಲ್ಲರೂ ಜಗಳ ಆಡುವ ಸ್ಥಿತಿಗೆ ಬಂದರು. ಬಲು ಸಂತೋಷ ಪಟ್ಟ ನಂತರ ಎಲ್ಲರ ಮೇಲೆ ಒಂದು ಹೊಸ ಸ್ಥಿತಿ ಬಂದು ಯಾರು ನೆಲದ ಮೇಲೆ ನಿಂತುಕೊಳ್ಳದೇ ಜಗಳವಾಡಿದ್ದನೋ ಅವನ ಸ್ಥಿತಿ ಏನಾಯಿತೆಂದರೆ ಅವನು ತನ್ನ ಮೈ ಮೇಲೆ ಮಕ್ಮಲಿನ ಕೆಂಪು ನಿಲುವಂಗಿ ಧರಿಸಿಕೊಂಡು ಎದ್ದ(ಅಂದರೆ ಗಾಯಗೊಂಡ)ಪ್ರತಿಯೊಬ್ಬನೂ ತನ್ನ ತನ್ನ ಒಳ್ಳೆ ಸಂತೋಷದ ಸ್ಥಿತಿಯಲ್ಲಿ ಮುಂಜಾನೆವರೆಗೆ ಅನೇಕ ಒಯ್ಯಾರದ ಕೊಡುಗೆಗಳಲ್ಲಿದ್ದರು, ಎಷ್ಟೊಂದು ಆಹಾರ ಸೇವನೆ ಮಾಡೋಣ ಹಾಗೂ ಎಷ್ಟೊಂದು ಎತ್ತಿಕೊಂಡು ಹೋಗೋಣ, ಎತ್ತಿಕೊಂಡು ಹೋದರೆ ಯಾವ ಜಾಗದಲ್ಲೂ ಇಡಲು ಸಾಧ್ಯವಿಲ್ಲ. ಏನಾದರೂ ಜಾಸ್ತಿ ತಿಂದರೇ ಹೊಟ್ಟೆ ಒಡೆದು ಹೋಗಬಹುದು. ಅದನ್ನು ಸುಧಾರಿಸಿಕೊಳ್ಳಲು ಅನೇಕ ದಿನಗಳು ಬೇಕಾಗುತ್ತದೆ. ಅನೇಕ ಅನೇಕ ದಿನಗಳವರಿಗೂ ಸ್ನೇಹಿತರು ಶತ್ರುಗಳೆಲ್ಲ ಸೇರಿ ಕಾಗೆ ಹದ್ದು ಗಿಡುಗ ಎಲ್ಲವೂ ಸೇರಿ ಹಬ್ಬ ಆಚರಿಸುತ್ತಿದ್ದವು.

ತಮ್ಮ ಹೃದಯಗಳಿಂದ ಮೋಸ ಕಪಟ ಎಲ್ಲ ತಗೆದು ಬೀಸಾಡಿ, ಎಲ್ಲಿವರೆಗೂ ಜೀವಂತವಾಗಿದ್ದರೋ ಅಲ್ಲಿಯವರೆಗೆ ಯಾವ ವನಕ್ಕೂ ಹೋಗಲಿಲ್ಲ. ಕಾಗೆಗಳು ಇಂತಹ ರುಚಿಗಳನ್ನು ಮನಸಲ್ಲಿ ಹೇಗೆ ಬಿಡಾರೆ ಬಿಟ್ಟರೆಂದರೇ ಹಣ್ಣು ಹಂಪಲ ತೋಟಗಳನ್ನು ಮರೆತವು. ಅತಿಶಯ ಯಾವಾಗ ಆಕಾಶ ಮುಟ್ಟುತ್ತದೆಯೋ ಆಗ ಅದೇ ಕೃತಜ್ಞತೆಯಲ್ಲಿ ಶಾಹನ ಪ್ರವಚನ ಓದಲಾಗುತ್ತದೆ. ಓ ಅಲ್ಲಾಹನೇ ಅಲಿ ದಂಡನ್ನು ನಾಶಪಡಿಸುವನು, ದಕ್ಷಿಣದಲ್ಲಿ ಅವನು ದಾನದ ಗಣಿ. ಪ್ರವಾದಿ ಮುಹಮ್ಮದ್(ಸೊ)ರವರ ಶಿಫಾರಸ್ಸಿನ ಮೇರೆಗೆ ಈ ಶಾಹನ ಮೇಲೆ ಎಲ್ಲ ಸಹಾಯ ಮುಕ್ತಾಯವಾಗಲಿ. (೫೬೫೦-೫೯೧೩)

■

*

ಅಧ್ಯಾಯ - ೧೧

ಈ ವೃತಾಂತ ಹೀಗಿದೆ, ಅಂದರೆ ಖುತುಬ್ ಶಾಹರವರು ಶಾಹರೊಂದಿಗೆ ತಾನು ಭೇಟಿಮಾಡಿ ಬುಲ್ಬುಲ್ ಎಂಬ ದಂಡನಾಯಕನೊಡನೆ ಕುಮ್ಮಕ್ಕು ಕಳುಹಿಸಿದರು.

ಯಾರ ಮೇಲೆ ಅಲ್ಲಾಹನ ಅಸಂಖ್ಯಾತ ಕರುಣೆ ಇದೆಯೊ ಅವನಿಗೆ ಆಕಾಶದಿಂದ ಸಹಾಯ ಕಳುಹಿಸುವವನು. ನಿಸ್ಸಂದೇಹವಾಗಿ ತಾನು ಯಾವನ ಸಹಾಯ ಮಾಡುವನೋ ಅವನಗೆ ಮನುಜ ಏನು ಸಹಾಯ ಮಾಡಬಲ್ಲ. ಅಬಾಬೀಲರೊಡನೆ ಆನೆಯವರನ್ನು ಯಾವ ವಕೀಲನನ್ನು ತಾನು ಹೊಡೆದು ಧೂಳು ಮಾಡಿದ್ದನೋ. ಅವನ ಕೃಪೆ, ಸಹಾಯದಿಂದ ಅಧೀನ ಇರುವವರು, ಅವರಿಗೆ ನೇರ ಜಯ ಸಿಗಲು ಸಾಧ್ಯವಿಲ್ಲ. ಯಾರ ಮೇಲೆ ಸ್ವಲ್ಪವೂ ದೃಷ್ಟಿ ಬಿದ್ದರೆ ಸಾಕು ಅವನು ಅವರ ಕೈಯಿಂದ ಸ್ನೇಹಿತ ಹಾಗೂ ಶತ್ರುವಿನ ಹೃದಯಗಳನ್ನು ಸೇರಿಸುವನು. ಯಾರಲ್ಲಿ ಅತ್ಯಂತ ಶೌರ್ಯ ಕಾಣಿಸಿಕೊಳ್ಳುತ್ತದೆಯೋ ಅವರ ಸಹಾಯ ಮಾಡುವುದೇ ಧೀಮಂತಿಕೆ. ಅಲ್ಲಾಹನು ಉಪಕಾರದ ಅಂತಸ್ತಿನ ಬಗ್ಗೆ ಕುರಾನಿನಲ್ಲಿ ಸಾಕ್ಷಿ ಕಳುಹಿಸಿರುವನು. ಯಾರು ಯಾರ ಮೇಲೆ ಉಪಕಾರ ಮಾಡುವುದಿಲ್ಲ ಈ ಮಾತು ತಿಳಿದುಕೋ, ಅದಂತೂ ಅವನ ಉಪಕಾರ ಇದು ನೀನು ಚೆನ್ನಾಗಿ ತಿಳಿದುಕೋ. ಈ ಮನಮೋಹಕ ಪುಸ್ತಕ ಬರಹಗಾರ ಈ ಅದ್ವಿತೀಯ ಒಳ್ಳೆ ದೀರ್ಘಕತೆ ಹೀಗೆ ಬರೆಯುವನು. ಅಂದರೆ ಯಾವಾಗ ಶಾಹ್ ಅಲಿ ಅದಿಲ್ ನೃಪತಿ ಮೇಲೆ ಅತ್ಯುತ್ತಮ ದೆಹಲಿಯ ಸೈನ್ಯ ಮುಸುಕ ತೊಡಗಿತು, ಪ್ರತಿಯೊಂದು ಯುದ್ಧದಲ್ಲಿ ಅವರನ್ನು ರಣರಂಗದಲ್ಲಿ ತುಳಿದು ತನ್ನ ಅಸ್ತಿತ್ವವನ್ನು ಕಿತ್ತುಹಾಕಿ ಬಲ ಎದ್ದೇಳಿತು. ತನ್ನವರು ಹಾಗೂ ಬೇರೆಯವರಲ್ಲಿ ಈ ಮಾತು ಬಲು ಮೆಚ್ಚುಗೆ ಪಟ್ಟಿತು ಹಾಗೂ ದೂರದರ್ಶಿಗಳಲ್ಲಿ ಈ ಸಲಹೆಯಾಯಿತು ಇಂತಹ ಸಮಯದಲ್ಲಿ ಒಗ್ಗಟ್ಟಾಗಿರಬೇಕು ಶುದ್ಧ ಮನಸ್ಸಿನಲ್ಲಿ ಕಾಪಟ್ಯವಿರಕೂಡದು. ಮುಘಲ್ ಇಂದಿನವರೆಗೆ ಯಾರಿಂದಲೂ ಸಹ ಪ್ರಾಮಾಣಿಕತೆ ನಿರ್ವಹಿಸಿಲ್ಲ, ಅವನ ಮಾತಿನಂತೆ

ಅವನ ಮನಸ್ಸು ಸಹ ಸ್ವಚ್ಛವಿಲ್ಲ. ಮನಸ್ಸಲ್ಲಿ ಈ ವಿಚಾರ ಮಾಡಿ ಅಲಿ ಆದಿಲ್ ಶಾಹರೊಡನೆ ಒಂದಾಗಿರ ಬೇಕು ವಿಶೇಷವಾಗಿ ಇದು ರಾಜಯೋಗ್ಯ ಒಳ್ಳೆ ಸಲಹೆ. ಸಂಪೂರ್ಣ ಸಹಾನುಭೂತಿ, ಬುದ್ಧಿವಂತ, ಖುತುಬ್ ಶಾಹಿ ಆಕಾಶಗಳ ಬಲಶಾಲಿ, ಉತ್ಕೃಷ್ಟತೆಯಲ್ಲಿ ನರಿ ಬುದ್ಧಿವಂತಿಕೆಯ ಖಜಾನೆ, ಕಲೆಗಾರ, ಸೂಕ್ಷ್ಮಮತಿ, ಧೀಮಂತ. ಅವನ ತುಟಿಯಲ್ಲಿ ಮಾತು ಬಣ್ಣ ಹಿಡಿಯುತ್ತವೆ, ಪ್ರತಿಯೊಬ್ಬನಿಗೂ ತನ್ನ ಭಾಷಣದಿಂದ ಮನಸ್ಸು ಸಂತೋಷ ಪಡಿಸುವನು, ವಾಗ್ಮಿಗೆ ಯಾರ ಕೈ ನೆರಳಿರುತ್ತದೆಯೋ ಅವನ ಮೆಚ್ಚುಗೆಯಿಂದ ಅವನ ಕಲೆಗೆ ಶಾಶ್ವತ ಸಿಗುತ್ತದೆ. ದಾನಧರ್ಮದಲ್ಲಿ ಹಾತಿಂಗೂ ಸಹ ಮೀರಿಸಿದವನು, ಅಭಿಪ್ರಾಯಗಳಲ್ಲಿ ಧೈರ್ಯಕ್ಕೆ ಲಕ್ಷಾಂತರ ಅರ್ಥ ಇರುವುದು. ಶೂರ ದಂಡನಾಯಕ ಆಗಿದ್ದರಿಂದ ಸನ್ಮಾನ್ಯತೆ ಮನೆ. ಇದರಿಂದಾಗಿ ದೇಶದೆಲ್ಲೆಡೆ ವಸಂತವಿರುವುದು. ಅರಸುತನದ ಸಮೃದ್ಧದ ಕಾರಣದಿಂದಾಗಿ ನಮ್ಮ ಹೈದ್ರಾಬಾದಿನ ದೊಡ್ಡ ಭಾಗ್ಯ ಮಹನೀಯರ ಆಶೀರ್ವಾದಗಳಿಂದ ಅದೃಷ್ಟಶಾಲಿ, ಯಾರಲ್ಲಿ ಅಧಿಕ ಶಕ್ತಿಇದೆಯೋ ಅವನೇ ಭಾಗ್ಯಶಾಲಿ. ಪ್ರತಿಯೊಂದು ಹೆಜ್ಜೆಗೂ ದೊಡ್ಡವರ ಸಂಪ್ರದಾಯ ಅನುಸರಿಸಿ ನಡೆಯುವನು. ನಿತ್ಯ ಧರ್ಮನಿಷ್ಠತೆಯಿಂದ ತೊಡಗಿರುತ್ತಾನೆ. ಬುದ್ಧಿ ಮತ್ತು ಮಂತ್ರಾಲೋಚನೆಯಲ್ಲಿ ದಾರ್ಶನಿಕ ಕಾಣುತ್ತಾನೆ. ಬಲು ದೂರದೃಷ್ಟಿವುಳ್ಳವ ಮಹಾ ಪರೀಕ್ಷಿಸಲ್ಪಟ್ಟ, ಸಿಂಹಾಸನ ಹಾಗೂ ಕಿರೀಟದ ಮರ್ಯಾದಿಸುವನು. ಅವನು ಸುಲ್ತಾನ್ ಅಬ್ದುಲಾಹ ಸುಂದರ ಭಾಗ್ಯಶಾಲಿ. ಅವನ ಖಡ್ಗ ನೋಡಲು ಹೊಳಪಿನ ನದಿ ಅದು ಶತ್ರುಗಳ ಮೇಲೆ ಅಗ್ನಿಯ ಮಳೆ ಸುರಿಸುತ್ತದೆ. ಅದು ಅನೇಕ ವಿದ್ರೋಹಿಗಳನ್ನು ತುಳಿದು ಅದೆಷ್ಟೋ ರಾಜರಿಗೆ ವಿಧೇಯ ಮಾಡಿಟ್ಟಿದೆ. ಮುಹಮ್ಮದ್(ಸೊ)ರವರ ಛಾಯೆ ನಿತ್ಯ ಮನಸ್ಸನ್ನು ಬೆಳಗಿಸಿರುತ್ತದೆ. ನಿಷ್ಠೆಯಿಂದ ನಿಷ್ಕಳಂಕ ಅಲಿರವರ ಸ್ನೇಹಿತ. ಒಟ್ಟಾರೆ ಮಾತಿನ ಅರ್ಥವೇನೆಂದರೆ ಮುಘಲರು ಯಾವಾಗ ಶಾಹನ ಮೇಲೆ ಆಕ್ರಮಿಸಿದರೋ ಆಗ ಖುತುಬ್ ಶಾಹನು ತನ್ನ ಗುಟ್ಟು ಬಲ್ಲವರೊಂದಿಗೆ ರಾಜಕಾರಣದ ಮಾತು ಬಿಚ್ಚಿ ಹೇಳಿದ. ಇಂದು ನಾವು ಮುಘಲರೊಂದಿಗೆ ಸಂಧಿ ಇಟ್ಟಕೊಳ್ಳಬೇಕೆ ಬೇಡವೇ ಎಂದು ತೀರ್ಮಾನಿಸಲು ಆದಿಲ್‌ಶಾಹರಿಲ್ಲದೇ ಈ ಸಲಹೆ ಕೊಡಲು ಸಾಧ್ಯವಿಲ್ಲ. ಕಷ್ಟದ ಸಮಯದಲ್ಲಿ ಇವರು ಕೆಲಸಕ್ಕೆ ಬರುವರು. ಮುಘಲರು ತನ್ನ ಜಾತಿ ಬುದ್ಧಿ ತೋರದೇ ಇರುವುದಿಲ್ಲ, ಯಾರು ಮೂರ್ಖತನ ಬಿಡುವುದಿಲ್ಲವೋ ಅವನು ಬುದ್ಧಿವಂತನಲ್ಲ, ವಧುವಿನ ತಲೆಗೆ ಹೂಲಡಿಗಳನ್ನು ಕಟ್ಟುವ ಬದಲಾಗಿ ಮೊಣಕಾಲಿಗೆ ಕಟ್ಟುವರೋ. ದಕ್ಷಿಣ ಒಂದು ವ್ಯಕ್ತಿಯಾದರೆ ಬಿಜಾಪುರ ಅದರ ಶರೀರ, ನಾವು ಹೇಗೆ ಮನುಜರಿದ್ದೇವೆ ಅಲಿ ಶಾಹರವರು ಆತ್ಮ. ಪ್ರಾಣ ರಕ್ಷಣೆ ಮಾಡುವುದನ್ನು ನೋಡಕೊಳ್ಳಬೇಕು ಇದಕ್ಕಿಂತ ಒಳ್ಳೆಯ ಕೆಲಸ ಇನ್ನು ಯಾವುದು ಇಲ್ಲ. ಪ್ರಜ್ಞೆ ಪ್ರಾಣದ ಆಜ್ಞೆಪಾಲಿಸುತ್ತದೆ, ನಾವು ಶಾಹನಿಗೆ ಸಹಾಯ ಮಾಡಬೇಕು. ಪೇಶ್ವೆರೊಂದಿಗೆ ಚಿಂತನೆ ನಡೆಸಿದ ನಂತರ ಶಾಹನಿಗೆ ಕುಮ್ಮಕ್ಕು ಕಳುಹಿಸಬೇಕೆಂಬ

ಮಾತು ಖಚಿತವಾಯಿತು. ಅವರಲ್ಲಿ ಒಬ್ಬ ಪೇಶ್ವೆ ಉತ್ತಮ ಹೆಸರು ಪಡೆದವನಾಗಿದ್ದ. ಅವನ ಪ್ರಸಿದ್ಧ ಹೆಸರು ನೆಕೊ ನಾಂ ಖಾನ್. ದೇವಭೀತ, ಬಲು ಪ್ರಾಮಾಣಿಕ ಹಾಗೂ ಮಂತ್ರಿಗಳಲ್ಲಿ ಉನ್ನತ ಸ್ಥಾನ ಪಡೆದವನು, ಹಳೇ ಕಾರ್ಯಕರ್ತ, ಒಳ್ಳೆ ಅಭಿಪ್ರಾಯ ಹೇಳುವವ, ಗಟ್ಟಿ ಹೃದಯಗಳನ್ನು ಹೊಡೆಯುವವ, ಅವನು ಕುದುರೆ ಸಾಲುಗಳನ್ನು ಮುರಿಯುವವ ಮಂತ್ರಿಗಳಲ್ಲಿ ಸದಾ ಸೈನ್ಯದ ಮುಖಂಡ, ಸಾಮ್ರಾಜ್ಯದಲ್ಲಿ ನಿತ್ಯ ನಾಯಕತ್ವ ಇಡುವನು, ತನ್ನ ಒಡೆಯನಿಗೆ ನಿತ್ಯ ಪ್ರಾಮಾಣಿಕನಾಗುತ್ತಿದ್ದ, ಬಾದಶಾಹನ ಪ್ರತಿಯೊಂದು ಕೆಲಸ ಮನಸಾರೆ ಮಾಡುವನು, ಖುತುಬ್ ಶಾಹನು ಇವನನ್ನು ಉದ್ದೇಶಿಸಿ ಹೇಳಿದ. ಓ ನೇಕ್ನಾಮ್ ಸಾಮ್ರಾಜ್ಯದಿಂದ ಏನೇನು ಬೇಕು ತೆಗೆದುಕೊಂಡು ಅಲಿ ಆದಿಲ್ ಶಾಹನ ಸನ್ನಿಧಿಗೆ ಹೋಗು, ನೌಕರ ಚಾಕರರು ಅದ್ವಿತೀಯ ಸಿಡಿಮದ್ದಿನ ಉಗ್ರಾಣ ಹಾಗೂ ದೊಡ್ಡ ಸೈನ್ಯ ತೆಗೆದುಕೊಂಡು ಹೋಗಿ, ಮೊದಲಿಗೆ ಶಾಹನಗೆ ಕಾಣಿಕೆ ಕೊಟ್ಟು ಶಾಹನ ಆಜ್ಞೆ ಪಾಲಿಸು, ಅವರ ಇಷ್ಟಾನುಸಾರ ಕೆಲಸ ಮಾಡು, ಶಾಹರ ಕೆಲಸ ಮಾಡಿ ನನಗೆ ಕೃತಜ್ಞತೆ ತೋರು. ಆಧಿಪತ್ಯದ ಮಂತ್ರಿಗಳ ಮೇಲೆ ಒಡೆಯನನ್ನಾಗಿ ಮಾಡಿ ಅವನಿಗೆ ದಂಡನಾಯಕತ್ವ ಕೊಟ್ಟು ರವಾನಿಸಿದ. ಅಲ್ಲಿಂದ ಆ ದಂಡನಾಯಕ ಸಂತೋಷದಿಂದ ತಬಲ ಹೊಡೆಯುತ್ತ ರವಾನೆಯಾದ. ಒಳ್ಳೆ ಹೋರಾಟಗಾರರನ್ನು ಆರಿಸಿಕೊಂಡು ತನ್ನ ಜೊತೆಯಲ್ಲಿಟ್ಟಿಕೊಂಡ. ಅದರೊಂದಿಗೆ ಅನೇಕ ಹೆಸರಾಂತ ನಾಯಕರಿಗೂ ಕರೆದುಕೊಂಡ, ಸಹಸ್ರಾರು ಗೂಢಾಚಾರರನ್ನು ಸಹ ತೆಗೆದುಕೊಂಡ. ಮೋಡಗಳನ್ನು ಹೊಡೆಯಲು ಚಕ್ರವುಳ್ಳ ತೋಪುಗಳನ್ನು ತೆಗೆದುಕೊಂಡ, ಬಾಣಧಾರಿಗಳು ಹಾಗೂ ಸಿಡಿಮದ್ದಿನ ಉಗ್ರಾಣ, ಅತ್ಯಧಿಕ ಸಾಮಾನು, ಫಿರಂಗಿ ಎಳೆಯುವ ಅನೇಕ ಎತ್ತಿನ ಗಾಡಿಗಳು, ಅತ್ಯುನ್ನತ ಕಬ್ಬಿಣದ ಪಂಜಗಳನ್ನು ತೆಗೆದುಕೊಂಡ. ತನ್ನ ಸೈನ್ಯದ ವೈಭವ ಹೆಚ್ಚಿಸಲು ಅಗಣಿತ ಅಮಲೇರಿದ ಆನೆಗಳನ್ನು ತೆಗೆದುಕೊಂಡ, ಎಲ್ಲಿ ಈ ಸೈನ್ಯ ನಡೆಯುತ್ತಿತ್ತೋ ಅಲ್ಲಿ ಭೂಮಿಯ ಸೆರಗು ಜಾರುತ್ತಿತ್ತು. ಅನೇಕ ದಿನದವರೆಗೂ ಎಲ್ಲೂ ತಂಗದೇ ನಡೆಯುತ್ತಲೇ ಹೋದರು. ತನ್ನ ಬಳಿಗೆ ಇದ್ದ ಪಡಿತರ ಮುಗಿಯುವವರೆಗೆ ಶಾಹನ ದಂಡು ಮುಘಲರನ್ನು ಪರಾಜಯಗೊಳಿಸಿದ್ದರು. ಯಾವಾಗ ಅವರು ಬಿಜಾಪುರದ ಬಳಿ ಬಂದರೋ ಆಗ ಶಾಹರವರು ಅವರನ್ನು ಬರ ಮಾಡಕೊಳ್ಳಬೇಕೆಂದು ನಿಶ್ಚಯಿಸಿದರು. ಬರಮಾಡಿಕೊಳ್ಳಲು ಅನೇಕ ರಾಯರಿಗೆ ರವಾನಿಸಿದರು. ಅವರನ್ನು ಗೌರವಪೂರ್ವಕ ಕರೆತನ್ನಿರೆಂದು ಪ್ರಧಾನ ಮಂತ್ರಿಗೆ ಹೇಳಿದರು. ಪ್ರತಿ ಹೆಜ್ಜೆ ಹೆಜ್ಜೆಗೂ ಸಹ ಅವರನ್ನು ಮರ್ಯಾದೆಯಿಂದ ತನ್ನಿ. ಯಾರು ಶಾಹನ ಕೈಗಳಿಂದ ಗೌರವಿಸಲಾಗಿರುವನೋ ಅವನಿಗೆ ಯಾವ ಮಾತಿನ ಚಿಂತೆಯೂ ಇಲ್ಲ.(೫೯೧೪–೫೯೭೩)

ನಕಲು ಏನೆಂದರೆ ಯುಗದ ಅರಿಸ್ಟಾಟಲ್(ಬಾದಶಾಹ)ರವರೇ ತಾನೇ ಸ್ವತಃ ದಂಡನಾಯಕನಿಗೆ ಗೌರವಪೂರ್ವಕ ಕರೆ ತರಲು ಹೋದರು.

ಪ್ರತಿ ಸೇನೆಯ ಸಂಕೇತದ ನಡುವೆ ನಡೆದ ಪ್ರಸ್ತಾಪ ಬರೆಯಲಿದ್ದೇನೆ, ಆ ಎರಡು ಸಮುದ್ರಗಳನ್ನು ಸಂಕ್ಷಿಪ್ತವಾಗಿ ನಾನು ಬರೆದಿದ್ದೇನೆ. ಪ್ರಸಿದ್ಧ ಯುಗದ ಅರಿಸ್ಟಾಟಲ್‌ನ ಸಲಹೆ ಮೇಲೆ ಸಾಮ್ರಾಜ್ಯ ಅವಲಂಬಿಸಿದೆ. ಯಾರು ಬುದ್ಧಿಯ ತಕ್ಕಡಿಯಿಂದ ಖಾತರಿಯನ್ನು ತೂಗಿದನೋ ಆಗ ಆಕಾಶ ಮತ್ತು ಭೂಮಿ ತೂಕಮಾಡಿರಲಿಲ್ಲ. ಬಾದಶಾಹನ ಶೌರ್ಯದ ಸೂರ್ಯ ಕಾದ ಬಿಸಿಲು, ಬುದ್ಧಿವಂತಿಕೆಯಲ್ಲಿ ಶಾಹನ ಸಲಹೆಯ ನೈಜ ರೂಪ ಕಾಣಿಸುತ್ತದೆ; ಶಾಹ ತನ್ನ ದರ್ಬಾರಿನಲ್ಲಿ ತ್ರಿಲೋಕದ ಜನರಿಗೆ ಅವರ ಸಲಹೆ ಪಡೆಯಲು ಸೇರಿಸುತ್ತಾನೆ, ಅದರಲ್ಲಿ ಶಾಹನ ಸರ್ಕಾರದ ಮೇಣದ ಬತ್ತಿ ಕಾಣಿಸಿಕೊಳ್ಳುತ್ತದೆ. ಜಪಮಾಲೆ ಮೇಲೆ ಹೇಗೆ ಇಮಾಂ ಇರುವನೋ ಅವನ ಮಾತು ಕೇಳಿ ಜಪಮಾಲೆಯ ಪ್ರತಿಯೊಂದು ಮಣಿ ತಿರುಗುತ್ತದೆಯೋ ಹಾಗೆಯೇ ಸಾಮ್ರಾಜ್ಯದ ಮಂತ್ರಿಗಳಿದ್ದಾರೆ. ಪ್ರವಾದಿರವರ ಹೆಸರಿನಿಂದ ಸದಾ ಶಕ್ತಿ ಇಟ್ಟಿರುವರು, ಅಲಿರವರ ಶಕ್ತಿಯಿಂದ ಕೀರ್ತಿ ಬಂತು. ಭಯದಿಂದಲೇ ಒಂದೇ ಮನಸ್ಸಿನಿಂದ ಕಾರ್ಯ ನಡೆಯುತ್ತದೆ. ಭಯದಿಂದಲೇ ಒಳ್ಳೆ ಕಾರ್ಯಚರಣೆ ಮಾಡಿ ತೋರಿಸಿದ. ಈ ಕಾರ್ಯ ಎರಡು ಜಗತ್ತಲ್ಲಿ ಕೆಲಸಕ್ಕೆ ಬರುತ್ತದೆ, ಯೋಗ್ಯವಾದ ಹೆಸರೆಂದರೆ ಅಬ್ದುಲ್ ಮುಹಮ್ಮದ್. ಯಾವಾಗ ಶಾಹರು ಆಜ್ಞೆ ಮಾಡಿದರೋ ಆಗ ಕುಮ್ಮಕ್ಕನ್ನು ಮರ್ಯಾದೆಯಿಂದ ತರಲು ಹೊರಟ. ಅತಿಥಿಗಳು ಬರುತ್ತಿದ್ದಾರೆ ಅವರಿಗೆ ಬೇಕಾಗಿರುವ ಸಾಮಾನು ಸಾಮಗ್ರಿ ಉಡುಪು ಶೃಂಗಾರ, ಹಾಸಿಗೆಯನ್ನು ತೆಗೆದುಕೊಂಡ. (ರತ್ನ)ಘಟಿತ ಅಮೂಲ್ಯವಾದ ಕಲ್ಲಿರುವ ಅನೇಕ ಪೆಟ್ಟಿಗೆಗಳನ್ನು ತೆಗೆದುಕೊಂಡ, ಗೌರವ ವಸ್ತ್ರಗಳ ಅನೇಕ ಗಂಟುಗಳನ್ನು ತೆಗೆದುಕೊಂಡ, ದಾರಿ ದಾರಿಯಲ್ಲಿ ಆನೆ ಹಾಗೂ ಕುದುರೆಗಳನ್ನು ತೆಗೆದುಕೊಂಡ. ಪ್ರತಿಯೊಂದು ಅಸ್ತಿತ್ವ ಹಾಗೂ ಎಳೆಗಳನ್ನು ಅಲಂಕಾರ ಮಾಡಲು ಬೇಕಾದ ಸಾಮಗ್ರಿಗಳನ್ನು ತೆಗೆದು ಕೊಂಡು ಇಡೀ ಸೈನ್ಯಕ್ಕೆ ಅಲಂಕಾರ ಮಾಡಿರಿ ಎಂದು ಹೇಳಿದ. ಒಂಟೆ ಮತ್ತು ಆನೆಗಳ ಬೆನ್ನುಗಳ ಮೇಲೆ ಕೇಸರ್ ತುಂಬಿದ. ಪನ್ನೀರ ಬಟ್ಟಲುಗಳಲ್ಲಿ ತುಂಬಲು ಕಸ್ತೂರಿ, ಸಿಂಧೂರ ಬಟ್ಟಲುಗಳಲ್ಲಿ ತುಂಬಿ ಅವನ್ನು ಅದ್ವಿತೀಯ ಚಿತ್ರಮಾಡಿದರು, ಆನೆ ಮತ್ತು ಇತರ ಪ್ರಾಣಿಗಳ ಮೇಲೆ ಜರೀ ಕೆಲಸ, ಜರಿ ಮುದ್ರಿತ ಹಾಗೂ ಚಿನ್ನದ ಸರಿಗೆಗಳಿಂದ ನೇಯ್ದ ಬಟ್ಟೆಗಳನ್ನು ಹಾಕಿದರು. ಕಾಞ್ಚನದ ಹಾರಗಳು ಕಿವಿಮೇಲೆ ಕಟ್ಟಲಾಯಿತು. (ರತ್ನ)ಘಟಿತ ಪರ್ದಾ ಇರುವ ಪಲ್ಲಕ್ಕಿ ಆರಿಸಿ ಕಟ್ಟಲಾಯಿತು ಅದರ ಮೇಲೆ ಹಾಕಿದ ಸಡಿಲ ಬಟ್ಟೆಗಳನ್ನು ರೇಷ್ಮೆ ಲಡಿಗಳಿಂದ ಕಟ್ಟಲಾಯಿತು. ಎಷ್ಟು ಅಲಂಕಾರ ಮಾಡಬೇಕಾಗಿತ್ತೋ ಅದು ಸಾಕಾಗದೆ ಅದನ್ನು ಇನ್ನಷ್ಟು ಚಿನ್ನ ಬೆಳ್ಳಿಯಿಂದ ಅಲಂಕರಿಸಲು ಮತ್ತಷ್ಟು ಹೆಚ್ಚು ಬೆಳ್ಳಿ ಬಂಗಾರ ತಂದು ಚೆನ್ನಾಗಿ ಅಲಂಕರಿಸಿದರು. ಒಂದರ ಎದುರು ಒಂದೊಂದು ದರ್ಪಣ, ದಾರಿಯನ್ನು ಅಮುಕಿ ಮುಖದ ಮೇಲೆ ಶರ್ಝ ಹಚ್ಚಿದರು. ಅನೇಕ ರೀತಿಯಲ್ಲಿ ಅನೇಕ ಚಿತ್ರಗಳನ್ನು ಬರೆದು ಹೆಚ್ಚಾಗಿ ಅಲಂಕರಿಸಿದರು. ಭಾಲೆ ಹಾಗೂ ಕವಚಗಳಲ್ಲಿ

ಮತ್ಯಾರೋ ಮನಮೋಹಕನಾಗಿ ಕಾಣುತ್ತಿದ್ದ. ಪ್ರತಿಯೊಂದು ಆನೆಯ ಮೇಲೆ ಗುರಾಣಿ ಜರಿಬಟ್ಟೆ ಆಯಿತು. ಮಹಾವುತರಿಗೆ ಜರಿಬಟ್ಟೆ ಕೊಡಲಾಯಿತು, ಮಹಾವುತರು ಕೈಯಲ್ಲಿ ಅಂಕುಶ ಹಿಡಿದು ಶೂರರಾಗಿ ಕುಳಿತಿದ್ದರು. ನಗಾರಿ ಬಾರಿಸುವ ಗಟ್ಟಿ ಕೈವುಳ್ಳವರು ಧ್ವಜಗಳು ಎತ್ತಕೊಂಡರು. ಆನೆ ಜೊತೆಯಲ್ಲಿ ಸೇರಿ ನಡಿಯುವರೂ ಅನೇಕರು, ಅವರಲ್ಲಿ ಅನೇಕರು ಮದವೇರಿದವರು. ಅನೇಕರು ಸ್ವತಂತ್ರರು ಔತಣ ಕೊಡಲು ಮುಂದೆ ಮುಂದೆ ಹೋದರು. ಅನೇಕರು ಎಂತಹವರಿದ್ದರೆಂದರೆ ಪ್ರೇರೇಪಣೆಯಿಲ್ಲದೇ ಇದ್ದರೆ ಅಲ್ಲಾಡುವರಲ್ಲ. ಶರೀರದಿಂದ ಬಾಗಿರುವ ಹಾಗೆ ಕಾಣುತ್ತಿದ್ದರು ಆದರೇ ಅವರ ಹೃದಯ ಹುಲಿಗಳದ್ದಾಗಿದೆ. ಮೂಗಿನಿಂದ ಸೊಂಡಿಲ ಮಾಡುವ ಕೆಲಸ ಮಾಡುತ್ತಾರೆ. ದೊಡ್ಡ ಡೊಲುಗಳ ಶಬ್ದ ಕೇಳಿ ಎಲ್ಲರೂ ಹೊರಡಲು ಸಿದ್ಧರಾದರು. ದಂಡನಾಯಕ ಅಂಬಾರಿ ಮೇಲೆ ಸವಾರಾದಾಗ ದಾರಿಯ ಎರಡು ಬದಿಯಲ್ಲಿ ಮಂತ್ರಿಗಳ ಸೈನ್ಯ ಹೊರಟಿತು. ಎಡ ಬಲ ಮುಂದೆ ಹಿಂದೆ ಒಂದಾಗಿ ಅಲಿರವರ ದಂಡು ಮುಂದೆ ಸಾಗಿತು. ವೇಗವಾಹಿಯರು ಸ್ಥಾನಗಳನ್ನು ತೆಗೆದುಕೊಂಡರು, ಬೆತ್ತ ಹಾಗೂ ಬಕ್ಸೇರೆಗಳು ಸಂತೋಷದಿಂದ ಜೊತೆಯಲ್ಲಿ ಹೊರಟರು. ತಲೆ ಮೇಲೆ ಗರಿಗಳನ್ನು ಕಟ್ಟಿ ಸೊಂಟದ ಮೇಲೆ ಗಂಟೆಗಳನ್ನು ಕಟ್ಟಿಕೊಂಡು ಚತುರ ಕುದುರೆಗಳ ನಡಿಗೆ ನಡೆದರು. ನವಿಲುಗರಿಯ ಬೀಸಣಿಗೆ ಆಕಾಶವಾಗಿ ಆ ದಂಡನಾಯಕನ ಮುಖದ ನೆರಳಾಯಿತು. ಕುದುರೆಗಳು ಜರಿ ಜೀನು ಹಾಕಿಕೊಂಡು ಚಿನ್ನದ ಆಭರಣಗಳನ್ನು ಧರಿಸಿ ಮಿನುಗುತ್ತ ನಡೆದವು. ಅನೇಕ ಬಣ್ಣದ ಗುರಾಣಿಗಳು ಮರಗಳಲ್ಲಿ ಹೊಸ ಎಲೆ ಚಿಗುರಿದಂತೆ ಬಹಳ ಚೆನ್ನಾಗಿ ಕಾಣುತ್ತಿತ್ತು. ಗರ್ಜಿಸುವ ನಗಾರಿಗಳು ಹೃದಯದಲ್ಲಿ ಹುಮ್ಮಸ್ಸು ತುಂಬುತ್ತಿದ್ದರೆ ಹಜಾಮರ ನಾದಗಳು ಕಿವಿಗಳಲ್ಲಿ ತುಂಬುತ್ತಿದ್ದವು. ಆನೆ ಕಾಲಿನ ಬಳೆ ಹಾಗೂ ಕಾಲಿನ ಆಭರಣ ಶ್ರುತಿ ಬಾರಿಸುತ್ತಿದ್ದರೆ, ಅತ್ಯಧಿಕ ಗಂಟುಗಳಿಂದ ಕಟ್ಟಿರುವ ಗೆಜ್ಜೆಯ ನಾದ ಕೇಳಿಬರುತ್ತಿದೆ. ಸಿಪಾಯಿಗಳು ತಮ್ಮ ಕುದುರೆಗಳೊಡನೆ ಸಂತೋಷದ ಮಾತನಾಡುತ್ತ ನಗು ನಗುತ್ತಾ ಹೋಗುತ್ತಿದ್ದರು. ಪ್ರತಿಯೊಂದು ಸಿಂಹಾಸನ ಪ್ರಿಯೆಯ ಕಣ್ಣಿನಂತೆ ಕಾಣುತ್ತಿದ್ದವು. ಒಳ್ಳೆ ಕಣ್ಣಿನ ಹುಬ್ಬು ಶತ್ರುವಿನ ಕಣ್ಣು ಗೊಂಬೆಯಾಗಿದ್ದವು. ಅಂಬಾರಿಗಳು ಭೂಮಿಮೇಲೆ ಚಲಿಸುತ್ತಿದ್ದರೆ ಗಗನದ ಕಣ್ಣು ನೋಡುತ್ತ ನೋಡುತ್ತ ದಣಿದವು. ವಿಚಿತ್ರವೆಂದರೆ ಯಾವುದಾದರು ಮನೆ ತನ್ನತಾನೆ ನಡೆದರೆ ಆ ಮನೆಯ ಧಣಿಗಳ ಹೆಜ್ಜೆ ಸಹ ಅಲುಗಾಡುವುದಿಲ್ಲ. ರಸ್ತೆಯ ಎರಡು ಬದಿಯ ಛಾವಣಿಗಳ ಮೇಲೆ ಛಜ್ಜೆಗಳಿವೆ, ಪ್ರತಿಯೊಂದು ಆನೆ ಮೇನೆ ಅಂಬಾರಿ ಅಲಂಕೃತವಾಗಿದೆ. ಸಭೆಗಳನ್ನು ನಡೆಸಲು ಸವಾರಿಗಳಲ್ಲಿ ನಿಪುಣರು ತನ್ನ ಜೊತೆಯಲ್ಲಿ ಕುಳಿತಿರುವರಲ್ಲಿ ನಿತ್ಯ ಒಗ್ಗಟ್ಟಿರುತ್ತಿದ್ದರು. ಉಯ್ಯಾಲೆ ನಿತ್ಯ ಚೈತನ್ಯ ಪೋಷಕ ಕಾಣಿಸುತ್ತದೆ. ಅದರ ಉಯ್ಯಾಲೆ ನಿತ್ಯ ಸುಖ ಕೊಡುತ್ತದೆ. ಸಮುದ್ರದ ದಾರಿಯ ಮೇಲೆ ಸಮಾಧಾನವಾಗಿ ಕಾಣುತ್ತದೆ. ಋತವಿಲ್ಲದೇ ಆಶ್ಚರ್ಯಕರವಾಗಿ ಹಡಗು ನಡೆಯುತ್ತಿದೆ. ಬೆಟ್ಟದಂಥ ರಥ ನಡೆದರೆ ಜಾಗೃತ ಕಾಣುತ್ತದೆ. ಅದರ

ಸಾರಥಿಗಳು ಅರ್ಜುನ ಹಾಗೆ ಕಾಣಿಸುವರು. ಎತ್ತಗಳು ರಥಗಳನ್ನು ತೆಗೆದುಕೊಂಡು ಹೋದರೆ ಶುಕ್ರಗೃಹಕ್ಕೆ ಆವೇಶ ಬಂದಿತು. ಒಬ್ಬರನ್ನೊಬ್ಬರು ಭೇಟಿ ಮಾಡುವ ಆಶಯದಲ್ಲಿ ಬಲು ದೂರ ಆಸಕ್ತಿಯಿಂದ ಹೋಗುವರು. ನದಿ ಸಮುದ್ರಕ್ಕೆ ಸೇರುವಂತೆ ಆಕಡೆಯಿಂದ ಎದುರಾಗಿ ಆ ಸೈನ್ಯ ಬಂದಿತು. ಅಲಿ ಆ ಸೈನ್ಯದ ನದಿಯ ಸ್ಫೂರ್ತಿ ನೋಡಿದ ಅದರ ಮುಂದೆ ಒಂದು ಅಲೆಯನ್ನು ತಂದು ಅದಕ್ಕೆ ಜಾಗೃತಗೊಳಿಸಿದ ಆಗಲೆ ಒಂದು ಕ್ಷಣದಲ್ಲಿ ಸಮುದ್ರದಲ್ಲಿ ಒಂದು ಅಲೆ ಹೊಡೆದು ನದಿಯನ್ನು ತನ್ನ ಮಧ್ಯಕ್ಕೆ ಎಳೆದುಕೊಂಡಿತು. ದೂರ ದೂರದವರೆಗೂ ಎರಡು ಸೈನ್ಯಗಳು ಕಾಣಿಸುತ್ತಿದ್ದವು ಆದರೆ ಈಗ ಒಂದಾದವು. ಅವರಿಗೆ ಎಷ್ಟೊಂದು ಗೌರವ ಮಾಡಬೇಕಾಗಿತ್ತೋ ಅವೆಲ್ಲ ಮಾಡಲಾಯಿತು. ಅವರಿಗೆ ಮಹನಿಯತೆಯ ವೈಭವ ತೋರಿದರು. ಶಹಿನ್ಷಾಹನ ಪೇಶ್ವಾ ಅವರಿಗೆ ಗೌರವದೊಂದಿಗೆ ಕರೆದುಕೊಂಡು ಹೊರಟನು. ಒಂದು ಜಾಗ ಬಲು ಪರಿಶ್ರಮದಿಂದ ಅಲಂಕರಿಸಲಾಗಿತ್ತು ಅದು ಬಲು ಮನಮೋಹಕವಾಗಿತ್ತು. ಯುಗದ ಅರಿಸ್ಟಾಟಲ್ ಆ ಜಾಗಕ್ಕೆ ಬಂದರು. ಅವರೊಂದಿಗೆ ಸಾಲು ಸಾಲಾಗಿ ಬಂದು ಅವರ ಜೊತೆಯಲ್ಲಿ ಕುಳಿತರು. ಖುತುಬ್ ಶಾಹನ ಪೇಶ್ವಾ ನೇಕ್ ನಾಂನ ಮಹನಿಯತೆ ಹಾಗೂ ಬುದ್ಧಿವಂತಿಗೆಯಲ್ಲಿ ಸಂಪೂರ್ಣತೆಯನ್ನು ಕಂಡು ಯುಗದ ಅರಿಸ್ಟಾಟಲ್ ಅವನೊಂದಿಗೆ ಮಾತನಾಡಲು ಸಿದ್ಧನಾಗಿ ಮನಸನ್ನು ನಿಷ್ಠೆಯಿಂದ ತುಂಬಿಕೊಂಡ. ಮಾತಿನ ತಾತ್ಪರ್ಯ ಮೊದಲು ಪಡೆದು ಬುದ್ಧಿವಂತಿಗೆಯ ಬಲ ತೋರಿಸಿದ. ಅವನು ಮಾತಿನ ಮುತ್ತುಗಳನ್ನು ಹರಡಿಸಿದಾಗ ಅದರ ಕಿರಣ ಜಗತ್ತಲ್ಲಿ ಒಂದು ಗುರುತನ್ನು ಹಿಡಿಯಿತು. ಅವನ ಭಾಷಣ ಶುದ್ಧ ಮಾಟ, ಅವನ ಮಾತಿನಿಂದ ಶ್ರೇಷ್ಠತೆಯ ನೈಪುಣ್ಯ ಪಡೆದಿತ್ತು. ಯಾರು ಅವನ ಸಮೀಪದಲ್ಲಿ ಕುಳಿತನೋ ಅವನು ಬಲ ತನ್ನ ಬಳಿ ಪಟ್ಟ, ತನ್ನ ಮನೋವೃತ್ತಿಯ ಹೂವನ್ನು ಕೊಟ್ಟು ಹೂವಿನ ಪರಿಮಳ ಅದರಲ್ಲಿ ತುಂಬಿದ. ಪ್ರಾಣದ ಸಂತುಷ್ಟ ನಿಷ್ಠೆಯನ್ನು ಹೃದಯಕ್ಕೆ ಕೊಟ್ಟು ಯಾವ ವಿಶೇಷ ಉಡುಗೊರೆ ಇದ್ದವೋ ಅವನ್ನು ವಿಮೋಚಿಸಿದ. ತನ್ನ ನಿಷ್ಠೆಯಿಂದ ಯಾವಾಗ ಪ್ರಾಣದ ಹೃದಯವನ್ನು ಎಲ್ಲ ಬಣ್ಣಿಸಿದನೋ ಆಗ ಬಹಿರಂಗ ಗೌರವ ಮಾಡಬೇಕೆಂದ. ಅವನ ಸೂಬೆಯಲ್ಲಿ ಎಷ್ಟೊಂದು ಮಂತ್ರಿಗಳಿದ್ದರೋ ಸಿಪಾಯಿಗಳು ದೊಡ್ಡ ಸಭೆಯ ಬಲು ಅದ್ವಿತೀಯರು. ಅವರೆಲ್ಲರಿಗೂ ಬಲು ಪ್ರೀತಿಯಿಂದ ರುಚಿಕರ ಊಟ ಮಾಡಿಸಿ ಅವರನ್ನು ಗೌರವಿಸಲಾಯಿತು. ಅಗಣಿತ ಕೈ ಕಡಗಗಳು ಪದಕಗಳನ್ನು ಕೊಟ್ಟ ಅದರ ಜೊತೆಯಲ್ಲಿ ಕುದುರೆ ಆನೆ ಹಾಗೂ ಆಭರಣ ಮತ್ತು ಉಡುಪುಗಳನ್ನು ಕೊಟ್ಟರು. ಜರಿ ಮುಂಡಾಸ, ಸೊಂಟದ ಪಟ್ಟಿ, ನಿಲುವಂಗಿ, ಹೊದಿಕೆ ಹಂಚಿದರು. ಬಣ್ಣ ಬಣ್ಣದ ಕೇಸರಿಯನ್ನು ಎಲ್ಲರ ಮೇಲೆ ಎರಿಚಿಸಿದರು. ತನ್ನ ಬಾದಶಾಹನ ಮಹನಿಯತೆ ಹೀಗೆ ತೋರಿಸಿ ಪರಜನರಲ್ಲಿ ತನ್ನ ಹೆಸರನ್ನು ಹೆಚ್ಚಿಸಿದ. ನೆಮತ್ತಿನ ಕೃತಜ್ಞತೆಯಿಂದ ಪ್ರತಿಯೊಬ್ಬನೂ ಪ್ರಸನ್ನರಾದ ನಂತರ ಅವರೆಲ್ಲರಿಗೂ ಶಾಹರ ಸೇವೆಯಲ್ಲಿ ಕರದುಕೊಂಡು ಬಂದನು. ನೇಕ್ನಾಮಿನ ಆ ದಿನ ಸುದ್ದಿ ಪ್ರಧಾನ

ಮಂತ್ರಿ ಶಾಹನಿಗೆ ಕಳುಹಿಸಿದಾಗ ಅವರ ವೈಭವನ್ನು ಹೆಚ್ಚಿಸಲು ಶಾಹರು ಸ್ವತಃ ಅಲಿ ಬುರ್ಜಿನ ಮೇಲೆ ಆಗಮಿಸಿದರು, ನೋಡಿ ಅಲಿ ಶಾಹರ ಇವೆಲ್ಲ ವಿಚಿತ್ರ ಕೆಲಸ ಅವರು ಅರಸೊತ್ತಿಗೆಯ ಗೌರವ ಸ್ವೀಕರಿಸುತ್ತಿದ್ದಾರೆ.(೫೯೭೪-೬೧೧೫)

ಮಾತೇನೆಂದರೆ ಶಹಿನ್ಶಾಹರು ಅವರೊಂದಿಗೆ ಭೇಟಿ ಮಾಡಿ ದೃಷ್ಟಿ ಮುಜ್ರಾಮಾಡಿ ಸಾಮ್ರಾಜ್ಯದ ಒಂದು ಹೊಸ ಬಾಗಿಲು ತೆರೆದರು.

ಪ್ರಭಾತ ಯಾವಾಗ ನಿಜವಾದ ರೂಪ ತಾಳಿತೊ ಹಗಲಿರುಳಿನ ಮಿಲನ ಕಾಣಬಂತು. ದೊಡ್ಡ ಬುರ್ಜಿನ ಮೇಲೆ ಶಾಹರು ಉನ್ನತ ಸ್ಥಾನದಲ್ಲಿ ಕುಳಿತು ಆಕಾಶದ ದೃಷ್ಟಿಯಷ್ಟು ಎತ್ತರದ ಗೌರವ ಪಟ್ಟರು. ಉಭಯ ಸಮುದ್ರಗಳು ಒಂದಾಗಿ ಒಂದು ಜಾಗಕ್ಕೆ ಬಂದು ಇಬ್ಬರು ಶಾಹರ ಎರಡು ಅದೃಷ್ಟಶಾಲಿಗಳು ಸೇರಿ ಬರುತ್ತಿದ್ದನ್ನು ನೋಡಿ ಆ ಸೈನ್ಯವನ್ನು ವೀಕ್ಷಿಸಲು ಸ್ವತಃ ಫಾಝ್ಲುರವರೇ ಹೊರಟರು. ಪ್ರತಿಯೊಬ್ಬರು ತಮ್ಮ ಸೇವೆಯಲ್ಲಿ ಹಟ ಮಾಡಿ ಎಲ್ಲ ಸೇವಕರು ಸಿದ್ದರಾಗಿ ಹೊರಟರು. ಪ್ರಸಿದ್ಧ ದರ್ಬಾರಿಗಳು ಸಾಲು ಸಾಲಾಗಿ ಹೊರಟರು. ಎಲ್ಲ ಮಂತ್ರಿಗಳ ಸೈನ್ಯವೆಲ್ಲ ಸಿದ್ಧವಾದವು. ಸೈನ್ಯ ಹಿಂದು ಮುಂದು ಒಂದು ಘನತೆಯಿಂದ ಹೊರಟಿತು. ಯುದ್ಧಮಾಡುವ ಆಯುಧಗಳದ್ದೇ ಒಂದು ವಿಶೇಷ ತುಕಡಿಯನ್ನು ರಚಿಸಿದರು. ಪ್ರತಿಯೊಂದು ಸೈನ್ಯದಲ್ಲಿ ಶಾಹನ ಆಳಿಕೆ ಇರುವುದು. ಎಷ್ಟೊಂದು ರೀತಿಯ ಸ್ಪರ್ಧೆಗಳಿದ್ದವೋ ಎಲ್ಲವೂ ಚೆನ್ನಾಗಿ ನೆರವೇರಿದ್ದವು. ಆಕಾಶ ನೃತ್ಯ ಮಾಡುತ್ತ ಚರಕ ಹೊಡೆಯಲಾರಂಭಿಸಿತು. ಸೂರ್ಯ ಆವೇಶ ಬಂದು ವಿವೇಕ ಕಳೆದುಕೊಂಡನು. ಯಾವಾಗ ಆ ಉನ್ನತ ಬುರ್ಜಿನ ಮೇಲೆ ಶಾಹ ಬಹಾದ್ದುರ್ ಬಂದರೋ ಭೂಮಿ ಹಾಗು ಯುಗ ಪ್ರಕಾಶಮಯ ಮಾಡಿದರು. ಶಾಹರು ಪೀಠ ಅಲಂಕರಿಸಿದಾಗ ಭೂಮಿಯು ಆಕಾಶದ ಮೇಲೆ ದೊಡ್ಡಸ್ತಿಕೆ ತೋರಿತು. ಭೂಮಿಯ ಬುನಾದಿ ಎತ್ತರ ಪಟ್ಟಂತೆ ಕಂಡಿತು, ಆಕಾಶದ ಮೇಲೆ ಶಾಹರ ನೆರಳು ಬಿದ್ದಹಾಗೆ ಕಂಡಿತು. ಶಾಹರ ಮೇಲೆ ಬೀಸಣಿಗೆಯಾಗಿ ಸೂರ್ಯ ನೆರಳು ಮಾಡಿದ ಇದರಿಂದಾಗಿ ಹತ್ತಿರ ಹಾಗೂ ದೂರ ಸ್ಪಷ್ಟವಾಗುತ್ತಿತ್ತು. ಬಾದಶಾಹನ ದೃಷ್ಟಿ ಸೈನ್ಯಗಳ ಮೇಲೆ ಬಿದ್ದಾಗ ಇಡೀ ಕಾನನದಲ್ಲಿ ರಾಜದರ್ಶನ ಕಾಣತೊಡಗಿತು. ಹೊಸ ಸೈನ್ಯ ಹೊಸಬಣ್ಣದ ಗುರಾಣಿಗಳೊಡನೆ ಬಂದಾಗ ಜ್ಯೋತಿರ್ಮಯ ಹಗಲು ವಧುಗಳ ಬಣ್ಣ ಹಿಡಿಯಿತು. ಭೂಮಿ ತಾಜಾತನವನ್ನು ಪಡೆದು ಸಂತೋಷಗೊಂಡಂತೆ ಕಂಡಿತು. ಗಾಳಿ ನೆರಳಿಂದ ಅದಕ್ಕಾಗಿ ವಿಸ್ತರಿಸಿಕೊಂಡಿತು. ಸಹಸ್ರಾರು ಉದ್ಯಾನಗಳು ವರ್ಣಮಯವಾಗಿ ಕಂಡವು. ಅನೇಕ ಉದ್ಯಾನವನಗಳೆಲ್ಲ ಮನಮೆಚ್ಚುವಂತೆ ಕಂಡವು. ಪೇದೆಗಳಲ್ಲಿ ಕೆಲವು ನವತಾರುಣ್ಯರು ಅದರಲ್ಲಿ ಸರ್ವೆಮರಗಳಂತೆ ಸೆಟೆದಿದ್ದು ಮನಮೆಚ್ಚಿತು. ಪ್ರತಿಯೊಂದು ಎಲೆ ನೆರಳು ಕೊಡುವಂತೆ ಕಾಣುತ್ತದೆ. ಕುದುರೆಗಳು ಹೊಸತಾಗಿ ನೆಟ್ಟಿರುವ ಮರಗಳಂತೆ ತೂಗುತ್ತಿವೆ. ವಾದ್ಯ ಬಾರಿಸುವರ ವಾದ್ಯ ಮೃಗಗಳು ಹಾಗೂ ಹಕ್ಕಿಗಳು ಕೂಗುವಂತೆ ಕೇಳಿಸುತ್ತಾ ಇದೆ.

ಈ ಸೈನ್ಯದ ಹೊಳಪು ಬಿಸಿಲಿನ ಕಾರಣ ಸ್ವಚ್ಛನೀರಿನ ಬೀಸುವ ಕಲ್ಲಿನ ಭಾಗದಂತೆ ಕಾಣುತ್ತದೆ. ಶಸ್ತ್ರಧಾರಿಗಳು ಸೈನ್ಯದಲ್ಲಿ, ನೀರಿನಲ್ಲಿ ಖಡ್ಗ ತೆಗೆದುಕೊಂಡು ನಿಂತಿರುವ ಹಾಗೆ ಉತ್ತಮವಾಗಿ ಕಾಣುತ್ತಾರೆ. ಚುಂಬಕದ ಬೆಂಕಿ ಇಡಲು ಸೂರ್ಯನಿಗೆ ಗದರಿಸಿ ತೋಪುಗಳಿಂದ ಎದ್ದ ಹೊಗೆ ಮೋಡಗಳಂತೆ ಹರಡಿತು. ಬಂದೂಕಿನಿಂದ ಹೊರಡಿಸಿದ ಒಂದೊಂದು ಅದ್ವಿತೀಯವೂ ಹೊಗೆ ಮೋಡದ ತುಂಡಂತೆ ಓಡುತ್ತಿತ್ತು. ಯಾವುದೇ ಫಿರಂಗಿ ಕಡಿಮೆ ತೂಕ ಹಿಡಿಯುವಂತಿರಲಿಲ್ಲ, ಅವು ದೊಡ್ಡ ಕೊಕ್ಕು ತುದಿಯಲ್ಲಿ ಮಗುವನ್ನು ಹಿಡಿದಿರುವ ಹಾಗೆ ಕಾಣುತ್ತಿದ್ದವು. ಈ ಸೈನ್ಯ ಯಾವಾಗ ಶಾಹರ ಹುಝೂರಿಯಲ್ಲಿ ಬಂದಿತೋ ಅದರಲ್ಲಿ ವಿಶೇಷವಾಗಿ ಚಕ್ರವುಳ್ಳ ತೋಪುಗಳಿದ್ದವು. ಫಿರಂಗಿಗಳ ವೈಭವ ತುಂಬಿದ ಹರಿಯುವ ನದಿಯಲ್ಲಿ ಮೊಸಳೆಗಳ ಸ್ತಂಭದಂತೆ ಕಾಣತೊಡಗಿತು. ಫಿರಂಗಿಗಳಿಂದ ಸುತ್ತಲೂ ಮೊಸಳೆಯ ಆಟದಿಂದ ಸೈನ್ಯದ ನದಿಯಲ್ಲಿ ಕಳವಳವುಂಟಾಗಿದೆ. ಚಿಕ್ಕ ತೋಪುಗಳು ಮೊಸಳೆ ಮರಿಗಳಂತೆ ಕಾಣುತ್ತವೆ. ಅವು ಒಂಟೆಗಳ ಬೆನ್ನಿನ ಮೇಲೆ ಬಿಸಿಲು ಕಾಯುವ ಹಾಗಿವೆ. ಚಿಕ್ಕವರು ದೊಡ್ಡವರು ಪ್ರತಿಯೊಬ್ಬರು ಸ್ಫೂರ್ತಿಯಲ್ಲಿ ಪ್ರತಿಯೊಂದು ಶರೀರ ವಿವೇಕದಲ್ಲಿ ಉಸಿರು ಬಿಡುತ್ತಿದ್ದಾರೆ. ಒಂದೊಂದು ಸಿಡಿಮದ್ದಿನ ಚೀಲ ಆಹಾರವಾಗಿ ತೆಗೆದುಕೊಳ್ಳುತ್ತವೆ. ತೋಪಿನ ಗುಂಡುಗಳ ತುತ್ತುಗಳನ್ನಾಗಿ ಬಾಯಿ ಬಿಚ್ಚಿ ತೆಗೆದುಕೊಳ್ಳುತ್ತವೆ. ಪ್ರತಿಸಲವೂ ಗಾಳಿಯ ಮೇಲೆ ಬಾಯಿ ಎತ್ತಿ ಎಲ್ಲವೂ ಜ್ವಾಲೆ ಸ್ಫೂತಿಯಲ್ಲಿ ಬಿಡುತ್ತವೆ. ಯಾವಾಗ ಫಿರಂಗಿಗಳ ಆರ್ಭಟ ಹೆಚ್ಚಾದಾಗ ಮೋಡಗಳ ಅಂತರಂಗ ಹೊಡೆದು ಹೋಯಿತು. ಗಾಳಿ ಮೇಲೆ ಯಾವಾಗ ಬೆಂಕಿ ಮತ್ತು ಹೊಗೆ ಏರಿದಾಗ ಸೂರ್ಯನಿಗೆ ಜ್ಯೋತಿ ಸಿಕ್ಕು ಆಕಾಶದ ವೇಷಪಲ್ಲಟಿಸಿತು. ಯುಗದ ಅರಿಸ್ಟಾಟಲರು ಎರಡು ದೇಶದ ಸಹಸ್ರಾರು ಸಾಲು ಪಡೆಯುವುದರಲ್ಲಿ ಉತ್ತೀರ್ಣರಾದರು. ತನ್ನ ವೈಶಿಷ್ಟವಿತ್ತು ಹಾಗು ಆ ನೇಕ್ನಾಂ ಇದ್ದ ತನ್ನ ಪಾದಗಳನ್ನು ಬಿಟ್ಟು ಶಾಹನಿಗೆ ಸಲಾಂ ಮಾಡಿದ. ಶಹಿನ್ಷಾಹರು ಆಗ ಆ ಕಡೆ ನೋಡಿ ಎರಡು ಬಾದಶಾಹರ ಮುಜ್ರಾ ಒಪ್ಪಿಕೊಂಡರು. ಆಗ ಶಾಹರು ಅಬ್ದುಲ್ ಮುಹಮ್ಮದ್‌ಗೆ ಕರೆದರು ಹಾಗೂ ಆ ನೇಕ್ನಾಂಗೂ ಸಹ ಕರೆತನ್ನಿ ಎಂದು ಹೇಳಿದರು. ಯುಗದ ಅರಿಸ್ಟಾಟಲ್ ಅವರನ್ನು ಪಟ್ಟಣದಲ್ಲಿದ್ದ ಸೈನ್ಯದೊಳಗೆ ಕರೆದು ಕೊಂಡು ಹೋದರು. ಆಗ ಹೆಸರಾಂತ ದಂಡನಾಯಕ ಶಾಹರ ಸೇವೆಯಲ್ಲಿ ತಲುಪಿದ. ಜನತಾ ದರ್ಶನಕ್ಕಾಗಿ ಹುಝೂರ್‌ರವರಿಗೆ ಕರೆದುಕೊಂಡು ಹೋದನು. ಆಗ ಶಾಹರು ಎಲ್ಲರಿಗೂ ಪ್ರವಾದಿ ಸುಲೈಮಾನರು ಸಿಂಹಾಸನದ ಮೇಲೆ ಕುಳಿತಿರುವ ಹಾಗೆ ಕಾಣಿಸಿಕೊಂಡರು. ಶಾಹರು ಆಸಿಫ್‌ಗೆ ಹತ್ತಿರ ಬರುವಂತೆ ಹೇಳಿದರು. ಅವರಿಗೆ ಕರೆ ತಂದು ಟಪ್ಪೋತಿನಲ್ಲಿ ಕೂರಿಸಿ ಎಂದರು. ನೇಕ್ನಾಂ ಬಂದು ಶಾಹರ ಹುಝೂರಿನಲ್ಲಿ ಕುಳಿತಾಗ ಒಂದು ಕ್ಷಣದಲ್ಲಿ ಯಾತ್ರೆಯ ದಣಿವು ದೂರವಾಯಿತು. ಶಾಹರು ಸಭಿಕರ ಮೇಲೆ ದೃಷ್ಟಿ ಬೀರಿದಾಗ ಸಿಪಾಯಿಗಳ ಸಾಲುಗಳಿದ್ದವು. ಮಂತ್ರಿಗಳ ಕಡೆ ಶೂರ ನೋಡಿದಾಗ ಅವು ಶರ್ಝು ಅಥವ ನಿಜವಾದ ಹುಲಿಗಳ ಹಾಗೆ ಕಾಣಿಸಿದವು.

ಪ್ರತಿಯೊಬ್ಬ ಸಭಿಕ ಎಂತಹ ವೈಭವವುಳ್ಳವನಿದ್ದನೆಂದರೆ ಅವನು ಯೂನಾನಿನ ಗುರುವಂತೆ ಗುರು ಆಗಿದ್ದ. ಆದರೆ ಅವನು ಶಾಹರನ್ನು ಎಲ್ಲ ದೃಷ್ಟಿಗಳಿಂದ ಗುರು ಎಂದು ಸ್ವೀಕರಿಸಿ ಏನೆಂದು ಕರೆಯಬೇಕಿಂದಿದೆಯೋ ನಿಸ್ಸಂದೇಹವಾಗಿ ಕರೆಯಬಹುದು. ನೇಕ್ನಾಂ ತನ್ನ ಜಾಗದಲ್ಲಿ ಬಲು ಗಂಭೀರನಾಗಿದ್ದ, ಅವನು ಗುರು, ಬುದ್ಧಿವಂತ ಹಾಗೂ ಲೋಕಾನುಭವಿಯಾಗಿದ್ದ. ಮನಸ್ಸಿನಲ್ಲಿ 'ನಾನು ಅನೇಕ ರಾಜರು ಅರಸರನ್ನು ನೋಡಿದ್ದೇನೆ ಆದರೆ ಇಂತಹ ಶಾಹನನ್ನು ನೋಡಿಲ್ಲ' ಅಂದು ಕೊಂಡನು. ಎರಡು ಬಗೆಯ ಜನ ಲೋಕದಲ್ಲಿದ್ದಾರೆ, ಯಾರೋ ಖಡ್ಗದಿಂದ ಮತ್ಯಾರೋ ಒಳ್ಳೆ ನಾಲಿಗೆಯಿಂದ ದೇಶ ಗೆಲ್ಲುವರು. ಇವನೇ ಅಜೇಯ ಆಗುವನೆಂದು ಕಾಣಿಸುತ್ತದೆ. ಇವನ ಮುಂದೆ ಸಿಕಂದರ್ ಸಹಾ ಗುರುತಿಲ್ಲದವನಾಗುವನು. ಈ ಶಾಹ ಮಹತ್ವ ಬಲ್ಲವನಾಗಿದ್ದು ಮುತ್ತನ್ನು ಗುರುತಿಸಬಲ್ಲನು, ಯೋಗ್ಯತೆಯನ್ನು ಮನವರಿಕೆ ಮಾಡಿ, ಅವನ ಪ್ರಾಣದ ರತ್ನ ಕೈಗೆ ತೆಗೆದುಕೊಂಡು ಅವನಿಗೆ ಹೃದಯದ ಪ್ರಪಂಚದಲ್ಲಿ ಜಾಗ ಕೊಟ್ಟನು. ಒಂದು ದಯೆತೋರಿ ಇಷ್ಟೊಂದು ಪ್ರತಿಷ್ಠಿತ ಮಾಡಿದನೆಂದರೆ ಎಲ್ಲಾ ರೀತಿಯಲ್ಲಿ ಎಲ್ಲರೂ ನಿರಪೇಕ್ಷಿತರಾದರು. ಶಾಹನ ಕೈಯಿಂದ ದಯೆಯ ಕೊರಳು ಹಗ್ಗ ಹೇಗೆ ಬೀಸಲಾಯಿತೆಂದರೆ ಎಲ್ಲರ ಕೊರಳಲ್ಲಿ ಉಪಕಾರದ ಕಟ್ಟು ಬಿದ್ದಿತು. ಈ ರೀತಿಯಾಗಿ ಎಲ್ಲರಿಗೂ ಅಗಣಿತ ಗೌರವ ವಸ್ತ್ರಗಳನ್ನು ಕೊಡಲಾಯಿತು. ಇದರಿಂದಾಗಿ ಪ್ರತಿ ಕಣವೂ ಸೂರ್ಯನಾಗಿ ಕಂಡವು. ಶಾಹನ ದೃಷ್ಟಿ ಪರುಷದ ಕಲೆ ಮಾಡುತ್ತದೆ ಇದರ ಸ್ಪರ್ಷದಿಂದ ಎಲ್ಲ ಅಸ್ತಿತ್ವಗಳೆಲ್ಲ ಚಿನ್ನ ಮಾಡಿಬಿಡುತ್ತದೆ. ಎಲ್ಲರ ಮನಸ್ಸಲ್ಲಿ ಈ ವಿಷಯ ಕಾದಾಡಿತು ಅದಾಗಿ ಪಕ್ಷಿಯ ಮೇಲೆ ಈಗ ಪರಿಣಾಮ ಬೀರಲಿದೆ. ಶಾಹನ ನೆರಳಿಂದಾಗಿ ಇಡೀ ನಗರ ಸ್ವರ್ಗದಂತೆ ಕಾಣತೊಡಗಿತು. ಎಲ್ಲ ಕಡೆಯು ತನ್ನತಾನೆ ಶಾಂತಿ ಇತ್ತು. ಹೆಸರಾಂತ ಜನರೆಲ್ಲ ಎದ್ದು ನಿತ್ಯವೂ ಶಹಿನ್ಷಾಹನ ಐಶ್ವರ್ಯದಿಂದ ವಿರಳವಾಗಿ ಕೊಡುಗೆಗಳನ್ನು ಪಡೆದರು. ನಗರ ಶಾಹನ ಸೇವೆಯಲ್ಲಿ ಮನಸ್ಸಾರೆ ಸೇರಿದಾಗ ಹಿಂದೆ ಮುಂದೆ ಜನರೆಲ್ಲ ಸೇರಿದರು. ಶರ್ಝಾಖಾನ್ ಯುದ್ಧ ಮುಗಿಸಿಕೊಂಡು ಬಂದು ಶಾಹನ ಸೇವೆಯಲ್ಲಿದ್ದು ವಿಶ್ರಾಂತಿ ಪಡೆದ. ಒಬ್ಬರು ಇನ್ನೊಬ್ಬರನ್ನು ಗೌರವಿಸಲಿದ್ದರು. ಅಷ್ಟರಲ್ಲಿ ಮತ್ತೆ ಗೊಂದಲದ ಬೆಂಕಿಯ ಜ್ವಾಲೆ ಎದ್ದಿತು ಅಂದರೆ ಯಾವಾಗ ಹಿಂದಿರುಗಿದ ಅದೃಷ್ಟದಿಂದ ಶತ್ರು ದೊಡ್ಡ ಪರಾಜಯ ಹೊಂದಿ ಓಡಿದ್ದ ಅವನ ಒಡೆಯನಿಗೆ ಈ ಸುದ್ದಿ ತಿಳಿದಾಗ ಅನೇಕ ದಿನಗಳವರಿಗೆ ಆಶ್ಚರ್ಯದಿಂದ ತನ್ನ ವಿವೇಕ ಕಳೆದುಕೊಂಡ, ಊಟ ತಿಂಡಿ ಬಿಟ್ಟು ತನ್ನ ಶಕ್ತಿ ಕಳೆದುಕೊಂಡ. ತನ್ನ ತುಟಿಗಳ ಸ್ಥಿತಿಯಿಂದ ಕಾಣಬಂದ. ಆಗ ಜೈಸಿಂಘ್ ಕಡೆಯಿಂದ ಮುಖ ತಿರಿಗಿಸಿಕೊಂಡು ಭೀಮಾರಿಯ ಬೆಂಕಿಯ ಹೊದಿಕೆ ಅವನ ಮೇಲೆ ಹೊದಿಸಿದ. ನಾಚಿಗೆಯಿಂದ ಕಷ್ಟದಲ್ಲಿ ಸಿಕ್ಕಿಹಾಕಿಕೊಂಡ. ತನ್ನ ಜೀವ ಕೊಡಲು ಮತ್ತೆ ಬೆಂಕಿಯಲ್ಲಿ ಬಿದ್ದ. ಮತ್ತೆ ಯುದ್ಧದ ಹೊಸ ಸಿದ್ಧತೆಯನ್ನು ಮಾಡಿ, ತನ್ನ ಪ್ರಾಣಕ್ಕೂ ಲೆಕ್ಕಿಸದೆ ತನ್ನ ಮುಖ ತಿರುಗಿಸಿದ, ಆದರೆ ಯಾವ ಹೃದಯ ಆತಂಕದ

ಗಾಯ ತಿಂದಿದ್ದವೋ ಖಡ್ಗ ನೋಡಿ ನೋವು ಜ್ಞಾಪಿಸಿಕೊಂಡು ಮುಖ ತಿರಿಗಿಸಿಕೊಳ್ಳುತ್ತಿದ್ದ. ಜೈಸಿಂಘ್ ಮತ್ತೆ ತನ್ನ ಚದುರಿದ ಸೈನ್ಯ ಮತ್ತೆ ಜೋಡಿಸಿ ಯುದ್ಧಕ್ಕೆ ಸಿದ್ಧನಾಗುತಿದ್ದಾನೆಂಬ ಮಾತಿನ ಸುದ್ದಿ ಶಹಿನ್ಷಾಹರ ಬಳಿ ಬಲು ವೇಗವಾಗಿ ತಿಳಿಯಿತು. ಇದನ್ನು ಕೇಳಿ ಶಾಹರು ಸಹ ಮತ್ತೊಮ್ಮೆ ಅವನಿಗೆ ಚೆನ್ನಾಗಿ ಬಾಗಿಸಲೇ ಬೇಕೆಂದುಕೊಂಡರು. ಅವನ ಸೈನ್ಯಕ್ಕೆ ದೆಹಲಿಯ ದಾರಿ ತೋರಿಸ ಬೇಕೆಂದು ಯೋಚಿಸಿದರು. ಈ ಯುದ್ಧದ ಸಿದ್ಧತೆಗಾಗಿ ಒಂದು ಹೊಸ ಸಭೆಯನ್ನು ಕರೆಯುವ ಏರ್ಪಾಡು ಮಾಡಿದರು.(೬೦೧೬-೬೧೧೯)

ಮಾತೇನೆಂದರೆ ಮುಘಲ್ ಹೋಗಿದ್ದವನು ಮತ್ತೆ ಹಿಂದಿರುಗಲಿದ್ದಾಗ ಶಾಹರು ಎರಡು ಅಚಲ ಶಾಹಿ ಸೈನ್ಯಗಳಮೇಲೆ ಗಮನ ಹರಿಸಿದರು.

ಯಾವಾಗ ಸೂರ್ಯ ಸನ್ಮಾನ್ಯತೆಯ ಗೃಹದ ಮಧ್ಯ ಬಂದು ಪೃಥ್ವಿಗೆ ಹೊಸ ವಸಂತದ ಗೌರವ ವಸ್ತ್ರ ನೀಡಿದ. ಯುಗಕ್ಕೆ ಒಂದು ಹೊಸ ಸೌಂದರ್ಯ ಸೃಷ್ಟಿಯಾಯಿತು. ಗಾಳಿ ಒಳ್ಳೆ ನವಯವ್ವನ ಪಡೆಯಿತು. ಹೂ ಬನಕ್ಕೆ ಶೀಲದ ಮೋಡ ಕೊಟ್ಟಾಗ ಹೂಗಳ ರೋಮ ರೋಮವು ಆನಂದದಿಂದ ತುಂಬಿತು. ಉದ್ಯಾನವನಗಳಿಂದ ಬಣ್ಣ ಕಸಿದಿದ್ದರಿಂದ ಪ್ರಿಯೆಗಳ ಹೃದಯದ ಮೊಗ್ಗು ಬಿಗುವಾದವು. ಸರ್ವೆಯ ಮಕ್ಕಳು ಎತ್ತರದಲ್ಲಿ ನೆಟ್ಟಗಾದವು ಹಾಗೂ ಹೂವು ಚಂದ್ರ ಬೆಳಕಿನ ಕಣ್ಣಾದವು. ಮೊಗ್ಗು ಯಾವಾಗ ಆಸಕ್ತಿಯಿಂದ ನಕ್ಕಾಗ ಹೂವಾಯಿತು. ಒಯ್ಯಾರದಲ್ಲಿದ್ದು ಮೊಗ್ಗು ಮಂದಹಾಸ ಬೀರಿತು. ಸೂಜಿ ಮಲ್ಲಿಗೆಯ ಬಳ್ಳಿಯಂತೆ ಹರಡುತ್ತಲೇ ಹೋಯಿತು. ಸಂಪಿಗೆ ಜೊತೆಯಾಡಿ ಕೊರಳಿನ ಹಾರ ಆಯಿತು. ಯವ್ವನದಲ್ಲಿ ಹುಲ್ಲು ಬೆಳೆಯುತ್ತ ಹೋಯಿತು ಹಾಗೂ ರೇಹಾನ(ಸುಗಂಧ ಹುಲ್ಲು)ಮದನದ ಸುಂಗಂಧ ಪಡೆದುಕೊಂಡಿತು. ಪ್ರತಿಯೊಂದು ಹೂವಿನ ಕಣ್ಣಲ್ಲಿ ದಟ್ಟ ಪ್ರೀತಿ ಉದ್ಭವಿಸಿತು. ಪ್ರತಿಯೊಂದು ಕೊಂಬೆಯ ಅಂಕುರಕ್ಕೆ ಯವ್ವನ ಬಂದಿತು. ಯುವ ಕೊಂಬೆ ನೋಡುತ್ತ ನೋಡುತ್ತಲೇ ತನ್ನ ತೋಳುಗಳನ್ನು ಉಬ್ಬಿಸುತ್ತಾ ಅರಳಿಸಿತು. ಸುಗಂಧ ವನಸ್ಪತಿಯ ಕೂದಲಿಂದ ನೀರು ತೂಗಿ ಶೋಕವೃಕ್ಷಕ್ಕೆ ಮೋಸ ಮಾಡುತ್ತಿದೆ. ಬುಲ್ ಬುಲ್ ಹಕ್ಕಿಯ ಮನುರಂಜನೆಗೆ ಕೆಂಪು ಹೂವು ತನ್ನ ನೇತ್ರಗಳಲ್ಲಿ ಕಾಡಿಗೆ ಹಚ್ಚಿಕೊಂಡಿತು. ಹೊಸ ಮಯ್ಯೂರಿಗೆ ದುಃಖ ನೀಡಲು ಮಾಟಗಾರ್ತಿ ಪ್ರೇಮದ ಸುವಾಸನೆ ಊದಿತು. ತುರಾಯಿ ಮರದ ಸದ್ಗುಣ ನೋಡಿರಿ ಸುಂದರ ಕಾಡು ಕೋಳಿ ತೂಗುವುದನ್ನು ಮರೆತು ಹಾಗೆ ನಿಂತುಕೊಂಡಿತು. ಪಕ್ಷಿಗಳು ಪ್ರತಿಯೊಂದು ಹೂವಿನ ಮೇಲೆ ಮರುಳಾದಂತೆ ಕಾಣತೊಡಗಿದವು. ಒಂದೊಂದು ಮನಸ್ಸಲ್ಲಿ ಒಂದೊಂದು ಸ್ಥಿತಿ ಸೃಷ್ಟಿಯಾದಂತೆ ಕಂಡಿತು. ಉನ್ನತ ಸ್ವರದಿಂದ ಪ್ರಿಯರು ಕೂಗುವ ಸ್ವರ ಮಾಡಿ ಪ್ರತಿಯೊಬ್ಬ ತನ್ನ ಪ್ರಿಯೆಯರ ಮೇಲೆ ಮೋಹಿಯಾಗುತಿದ್ದಾರೆ. ಎಲ್ಲಿ ನೋಡಿದರು ವಿಶಾಲ ಮೈದಾನಗಳಲ್ಲಿ ಅತ್ಯುನ್ನತ ದೃಶ್ಯಗಳನ್ನು ನೋಡಲು ಸಿಗುತ್ತಿವೆ.

ಸುಂದರ ವಾಯುಸೇವನೆಯ ಜಾಗದ ವಿಶಾಲ ಪ್ರಪಂಚ ಕಂಡುಬರುತ್ತದೆ. ಪ್ರತಿ ಅರಮನೆ ಭೋಗವಿಲಾಸದಂತೆ ಕಾಣುತ್ತದೆ, ಪ್ರತಿಯೊಂದು ಏಕಾಂತ ಸ್ಥಳ ವಿಶ್ರಾಂತಿ ಗೃಹವಾಯಿತು. ಇಂತಹ ಒಳ್ಳೆ ಸಮಯದಲ್ಲಿ ಯಾವಾಗ ದಕ್ಷಿಣದ ಸುಲ್ತಾನರು ವಿಶೇಷವಾದ ಸಭೆ ಏರ್ಪಡಿಸಿದರು. ಈ ಸಭೆಯಲ್ಲಿ ನವವಸಂತ ಅಧ್ಯಕ್ಷನಾದ. ಸೂರ್ಯ ತನ್ನತಾನೆ ಅದೃಷ್ಟಶಾಲಿ ವ್ಯವಸ್ಥಾಪಕನಾಗಿದ್ದ. ಅರಮನೆಗಳು ಹೊಸ ವಧುವರರ ಹಾಗೆ ಅಲಂಕರಿಸಿದ್ದವು, ಭೂಮಿ ಮೇಲೆ ಅಧಿಕ ಹಣ್ಣುಹಂಪಲಗಳಿಂದ ತುಂಬಿ ತುಳುಕಿ ಅದು ಸೀರೆ ಉಟ್ಟುಕೊಂಡಂತೆ ಕಂಡಿತು. ಅರಮನೆ ಮುಂದು ಮಗು ನಿಸ್ಸಂದೇಹವಾಗಿ ಸ್ತ್ರೀ ತನ್ನ ಮುಂದೆ ಸ್ವಚ್ಛವಾದ ಸಣ್ಣ ಕನ್ನಡಿ ಇಟ್ಟಿರುವಂತೆ ಕಾಣುತ್ತದೆ. ಎಲ್ಲಿ ಸಾಲ ಮುರಿಯುವ ಜಟ್ಟಿಗಳು ಕಳವಳ ಪಡೆಯುತ್ತಿದ್ದಾರೆ ಏಕೆಂದರೆ ಇದರಿಂದಾಗಿ ದೆಹಲಿಯ ಖಡ್ಗದ ಹೃದಯ ಮುರಿದು ನುಚ್ಚುನೂರಾಗುತ್ತಿದೆ, ಸೊಂಟ ಕಟ್ಟಿ ಕೈಯಲ್ಲಿ ಖಡ್ಗ ತೆಗೆದುಕೊಂಡು ಶತ್ರುವಿನ ಮೇಲೆ ಜ್ಯೋತಿರ್ಮಯ ಹಗಲನ್ನು ರಾತ್ರಿ ಮಾಡುತ್ತೇನೆ. ಯಾವಾಗ ಸಾಹೇಬ ಸಿಂಹಾಸನದ ಮೇಲೆ ಏರಿ ಅಧ್ಯಕ್ಷನಾದನೋ ಸೂರ್ಯ ಹಾಗೂ ಪೂರ್ಣ ಚಂದ್ರದ ಪ್ರತಿಸ್ಪರ್ಧಿಯಾಗಿ ಕಾಣಿಸಿಕೊಂಡನು. ಆಗ ಬಾದಶಾಹರು ಉಭಯ ಸಾಮ್ರಾಜ್ಯದ ಮಂತ್ರಿಗಳನ್ನು ಕರೆಯಿರಿ ಎಂದು ಆಜ್ಞೆ ಮಾಡಿದಾಗ ಶೂರ ಸಾಮ್ರಾಜ್ಯದ ಸದಸ್ಯರೆಲ್ಲರೂ ಬಂದರು. ಎಲ್ಲ ಶರ್ಝು ಹಾಗೂ ಹುಲಿಗಳು ದರ್ಬಾರಿನಲ್ಲಿ ಆಗಮಿಸಿದರು. ಅನೇಕ ಹೆಸರಾಂತ ಬಂಡಾಯರೂ ಸಹ ಸೇರಿದರು. ಎಷ್ಟೊಂದು ಸೈನ್ಯದ ಸರ್ದಾರರಿದ್ದರೋ ಅವರು ಸಹ ಶಸ್ತ್ರದ ಉಡಪು ಧರಿಸಿ ಎಲ್ಲವನ್ನು ಬಿಗಿದುಕೊಂಡು ಮನಮೋಹಕರಾಗಿ ಕಾಣುತ್ತಿದ್ದರು, ಕಣ್ಣುಗಳು ಬಿಟ್ಟರೆ ಬಿಗಿದ ಮೈ ಇತ್ತು ಮತ್ತೇನೂ ಕಾಣಿಸುತ್ತಿರಲಿಲ್ಲ. ಎಷ್ಟೊಂದು ಖುತುಬ್ ಶಾಹಿ ಜವಾನರನ್ನು ಕರೆತಂದಿದ್ದನೊ ಅವರೆಲ್ಲ ಮಂತ್ರಿಗಳು ಲೋಕಪ್ರಸಿದ್ಧಿ ಆಗಿದ್ದವರು. ಒಂದೇ ಹಲ್ಲೆಯಲ್ಲಿ ಒಬ್ಬರಿಂದ ಒಬ್ಬರು ನಗ್ನ ಮಾಡಿಹಾಕುವರು, ನಾಲಿಗೆ ಒಳ್ಳೆಯದೆ ಹಾಗೂ ಮನಸಲ್ಲಿ ನಗ್ನ ಮಾಡುವರು. ಈ ಮುಘಲ ನಾಚಿಕೆ ಕೆಟ್ಟವನು ಮತ್ತೆ ಬಲಿಷ್ಠನಾಗಿ ಈ ಕಡೆ ಮುಖ ತಿರುಗಿಸಿದ್ದಾನೆ. ಎರಡು ದಂಡುಗಳು ಎರಡು ತೋಳಗಳಂತೆ ಅಲಂಕರಿಸಿದವು. ಅಲಿಯವರ ಸಹಾಯ ಪಡೆದು ಬಲಿಷ್ಠರಾದರು. ಎರಡು ಸೈನ್ಯಗಳು ಎಡ ಬಲರಾಗಿ ಇದಕ್ಕೆ ಮುಖದ ಮೇಲೆ ಎರಡು ಹೊಡೆದು ಅದರ ಮುಖ ತಿರುಗಿಸಬೇಕು ಅಂದರೆ ಒಂದೇ ಹಲ್ಲೆಯಲ್ಲಿ ಚಂದ್ರಕ್ಕೆ ತಾಗಿಸಬೇಕು ಮನಸ್ಸಿಗೆ ನೋವಾದರೆ ಜೀವ ಕಳವಳಗೊಳ್ಳುತ್ತದೆ. ಶೂರರಲ್ಲಿ ಶಾಹರು ತನ್ನ ಮಾತಿಟ್ಟಾಗ ಎಲ್ಲ ಹುಲಿ ಶರ್ಝುಗಳೆಲ್ಲ ಗರ್ಜಿಸಿ 'ಕೇವಲ ನಿನ್ನ ಆಜ್ಞೆಯೇ ನಿಜ. ಮಾತಿಗೆ ಜಯ ಕೊಡುತ್ತದೆ. ಈ ತೋಳಗಳೆಲ್ಲ ಆಸಕ್ತಿ ವಹಿಸಿ ಪ್ರಾಣಕೊಟ್ಟು ಕೆಲಸ ಮಾಡುವೆವು. ಬಾದಶಾಹರೇ ತಾವೇ ಬಂದು ನೋಡಿ ಈ ಕೆಲಸ ಹೇಗೆ ಆಗುತ್ತದೆಂದು ನೋಡಿ ಕೊಳ್ಳಿ. ನಾವು ಸದಾ ನಿಮ್ಮ ದಾಸ್ಯತನ ಮಾಡಿದ್ದೇವೆ, ನಿನ್ನ ಒಂದೊಂದು ಕೆಲಸದ ಮೇಲೆ ನಾವು ಪ್ರಾಣ ತ್ಯಾಗ ಮಾಡುತ್ತೇವೆ. ಬಾದಶಾಹರು ಈ ಮಾತು ಕೇಳಿ

ನಿಸ್ಸಂದೇಹವಾಗಿ ನಿಜವೆಂದು ನಂಬಿದರು. ಎಲ್ಲರಿಗೂ ಗೌರವ ಕೊಟ್ಟು ಖಡ್ಗ ಹಾಗೂ ತಾಂಬೂಲ ಕೊಟ್ಟರು. ಒಳ್ಳೆತನದ ಬಣ್ಣ ಬಣ್ಣಗಳಲ್ಲಿ ಹೇಗೆ ಮುಳಿಗಿಸಿದರು ಎಂದರೆ ಉದ್ಯಾನವನ ಹಾಗೂ ಅವರಲ್ಲಿ ಯಾವುದೇ ವ್ಯತ್ಯಾಸವಿಲ್ಲದಂತಾಯಿತು. ಅಲಿಶಾಹನ ಅದೃಷ್ಟಶಾಲಿ ಸರ್ದಾರರು ಹಾಗೂ ಖುತುಬ್ ಶಾಹರ ಹೆಸರಾಂತ ಶೂರರೆಲ್ಲರೂ ಸಹ ಮುಘಲರೊಡನೆ ಯುದ್ಧ ಮಾಡಲು ಎರಡು ದಂಡುಗಳು ಸೇರಿ ಒಂದಾಗಿ ಹೊರಟವು. ಮಂತ್ರಿಗಳು ಯಾರಿಂದ ಏನೂ ಕಡಿಮೆ ಕಾಣುತ್ತಿರಲಿಲ್ಲ, ಎರಡು ಬಾದಶಾಹಿಯರು ಏಕಾಭಿಪ್ರಾಯವುಳ್ಳವರಾದರು. ನಿತ್ಯ ಗಂಡು ಹುಲಿಗಳ ಮನಸಲ್ಲಿ ಇದೇ ಚಿಂತೆ ಅಂದರೆ ಶರ್ಝುಗಳ ಬಾಲ್ಯಸ್ನೇಹಿತರನ್ನು ನಿರ್ವಹಿಸಿಕೊಂಡು ಹೋಗಬೇಕಾಗಿದೆ ಎಂಬ ಮಾತು ಮನೆಮಾಡಿತ್ತು. ಸಪುರ ಜನರ ಮನಸಲ್ಲಿ ಈ ಲಾಲಸೆ ಹುಟ್ಟಿತು ಅಂದರೆ ದೆಹಲಿಯ ದಂಡಿನ ಮೇಲೆ ಹೋಗಿ ಆಕ್ರಮಿಸಬೇಕಾಗಿದೆ. ವಿಶೇಷವಾಗಿ ಶಾಹರ ವಿಶೇಷ ಜನರಲ್ಲಿ ಅದರಲ್ಲೂ ಖಾನೆ ಖಾನನ ಸುಪುತ್ರ ಖವಾಸ್ ಖಾನ್ ಇದ್ದನು, ಅಂದರೆ ಹುಲಿಗಳ ಮುಂದೆ ನರಿಯಂತೆ ಶಿವಾಜಿ ಓಡಿಹೋಗಿ ಮುಘಲರಜೊತೆಯಲ್ಲಿ ಸೇರಿದ. ಅವನು ಮನಸ್ಸಲ್ಲಿ ಅಂದಕೊಂಡಿದ್ದೇನೆಂದರೆ ಈ ಸಲ ಹೋಗಿ ಅಣ್ಣನ ಹಾಗೆ ನಾನು ಮುಘಲರ ಮೇಲೆ ಹೆಸರು ಗಳಿಸಬೇಕು. ಇದೇ ಇರಾದೆಯಿಂದ ತಮ್ಮನಿಗೆ ಹುಝೂರ್‌ರವರ ಸೇವೆಯಲ್ಲಿಟ್ಟು ಇವನು ಶೂರ ದಂಡನಾಯಕನ ಹಾಗೆ ಹೊರಟು ಹೋದ. ಯುಗದ ಅರಿಸ್ಟಾಟಲ್ ಹೊರಟಾಗ ಅವನ ಜೊತೆಯಲ್ಲಿ ಸಪುರ ಶರ್ಝುಗಳು ಸಹ ರವಾನೆಯಾದರು. ಖುತುಬ್ ಶಾಹನ ನವಚೈತನ್ಯ ಸೈನ್ಯ ತೆಗೆದುಕೊಂಡು ನೇಕ್ನಾಂ ಬಲಿಷ್ಠನಾಗಿ ಹೊರಟ. ಎಲ್ಲಿಂದ ಈ ಅಗಣಿತ ದಂಡು ಹೊರಟಿತೋ ಅಲ್ಲಿ ಭೂಮಿಯ ಮುಖದ ಮೇಲೆ ನೀರಿನ ಕಲೆಯೂ ಇರಲಿಲ್ಲ. ದಂಡಿನ ಭಾರದಿಂದ ಕುಸಿದು ನೆಲದ ಕೆಳಗಿರುವ ನದಿ ನಾಲೆಗಳ ತುಟಿಗಳೆಲ್ಲ ಒಣಗುತಿದ್ದವು. ಅಲಿಯ ಸೈನ್ಯ ಇಳಿದಾಗ ದೂರದಿಂದ ನೋಡಿದರೆ ಸಹಸ್ರಾರು ಅಕಾಶಗಳು ಹಾಗೂ ಸಹಸ್ರಾರರು ಸೂರ್ಯಗಳಂತೆ ಕಾಣುತ್ತಿದ್ದವು. ಶಾಹನ ಚಾಕರಿ ಚಂದ್ರನಿಗೆ ಶಕ್ತಿ ಕೊಡುತ್ತದೆ. ಹೃದಯದ ಡೇರೆಗಳು ನಕ್ಷತ್ರಗಳಿಂದ ಹೊಳಪು ತೆಗೆದುಕೊಳ್ಳುತ್ತವೆ. ಬಾಝಾರಿನ ಪ್ರತಿಯೊಂದು ದಾರಿ ಆಕಾಶಗಂಗೆ ಆಗಿವೆ. ಅದರಲ್ಲಿ ಖುತುಬ್ ಶಾಹರ ಧ್ವಜದ ನಿಷಾನೆಗಳಿವೆ. ಪ್ರತಿಯೊಂದು ಬಝಾರು ಸಹ ಈಜಿಪ್ಟಿನ ಬಜಾರಾಗಿದೆ. ಅರಸರಿಗೆ ಯಾವ ವಸ್ತುಗಳು ಬೇಕು ಅವೆಲ್ಲ ದೊರೆಯುತ್ತವೆ. ಪ್ರತಿಯೊಂದು ಅಂಗಡಿ ಹೇಗೆ ತುಂಬಿದವೆಂದರೆ ನೋಡುವವರು ಮತ್ಸರಪಡುವರು. ಪ್ರವಾದಿ ಸುಲೈಮಾನರ ದಂಡಿನ ಸಮಾಧಾನಕ್ಕಾಗಿ, ಇದರಲ್ಲಿ ಇರಾಖಿನ ಸಾಮಾನು ಎಷ್ಟೊಂದು ತುಂಬಿದೆ. ಹೀಗೆ ವಿಜ್ರಂಭಣೆಯಿಂದ ಈ ದಂಡು ದಿನೆ ದಿನೆ ಸಾಗಿತು. ಶತ್ರು ಇನ್ನು ಅವನ ಗಡಿಯಲ್ಲಿ ಇರುವಾಗಲೇ ಅವರ ಮೇಲೆ ಈ ಮಹಾ ದಂಡು ದಾಟಿತು. ಯಾವಾಗ ಈ ದೊಡ್ಡ ಸೈನ್ಯದ ಹೆಸರು ಶತ್ರು ಕೇಳಿದನೋ ಆಗ ಅವನ ಕಾಲು ಹಿಂಜರಿಯುತ್ತಾ ಹೋಯಿತು.

ಯಾವಾಗ ಮುಘಲರ ಹತ್ತಿರ ಬಂದರೋ ಆಗ ಎರಡು ದಂಡುಗಳನ್ನು ಎರಡು ಭಾಗಗಳಲ್ಲಿ ಹಂಚಲಾಯಿತು. ಖಾಸ ಮಂತ್ರಿಗಳನ್ನು ಒಂದು ಆನೆ ಮೇಲೆ ಏರಿಸಿಕೊಂಡು ಅಟಲ್ ಖಾನ್, ಶರ್ಝಾ ಖಾನ್ ಹಾಗೂ ಖವಾಸ್ ಖಾನ್ ಹೊರಟರು. ಎರಡನೆಯ ದಂಡಿನಲ್ಲಿ ಬಹ್ಲುಲ್ ಖಾನ್ ಸಾಲು ಮುರಿಯುವ ಕೆಲವು ಮಂತ್ರಿಗಳನ್ನು ಆರಿಸಿ ತನ್ನೊಡನೆ ಕರೆದುಕೊಂಡು ಒಂದು ಗುಂಪು ಮಾಡಿದನು. ಯುಗದ ಅರಿಸ್ಟಾಟಲ್‌ರವರು ಎಲ್ಲ ವ್ಯವಸ್ಥೆ ತಮ್ಮ ಬಳಿ ಇಟ್ಟಿಕೊಂಡು ಎಲ್ಲರಿಗೂ ಕುಮ್ಮಕ್ಕು ಮಾಡುವ ಅಧಿಕಾರ ಇಟ್ಟಿಕೊಂಡರು. ತನ್ನ ಜಾಗದಲ್ಲಿ ಈ ರೀತಿಯ ಎಲ್ಲ ವ್ಯವಸ್ಥೆ ಪೂರ್ಣಗೊಂಡಾಗ ಮುಘಲರ ಮೇಲೆ ದಾಳಿ ಮಾಡಿದರು. ಇದರಿಂದಾಗಿ ಈ ಭೂಮಿ ಮೇಲೆ ಜೀವಿಸುತ್ತಿರುವವರ ಮೃತ್ಯು ಆಗುತ್ತಾ ಹೋಯಿತು. ಊಟ ಮಾಡುವ ತಟ್ಟೆಗಳಂತೆ ಪ್ರಾಣಗಳನ್ನು ತನ್ನ ಬಳಿ ಎಳೆದು ಕೊಂಡಿತು.(೬೧೨೦-೬೧೯೪)

ಈ ಜಯ ಎಂತಹದೆಂದರೆ ಖಝುಲ್ ಬಾಷ್ ಹಾಗೂ ಉಝ್ಬುಕ್‌ರನ್ನು ಮುಳುಗಿಸಿತು,ರಜಪೂತರು ಹಾಗೂ ಮರಾಠರ ಸೈನ್ಯಗಳನ್ನು ತನ್ನ ಕಾಲಡಿಯಲ್ಲಿ ತುಳಿದಿಟ್ಟರು.

ನಾನು ಆ ವಿಜಯದ ದೀರ್ಘ ಕಥೆಯನ್ನು ಹೇಳಲು ಹೊರಟಿದ್ದೇನೆ. ಧೈರ್ಯದ ದೀರ್ಘ ಕಥೆಯನ್ನು ಬಿಚ್ಚಿ ಹೇಳಲು ಹೇಳುತ್ತಿದ್ದೇನೆ. ಅಂದರೆ ಯಾವಾಗ ಅಲಿ ಶಾಹರ ಭಾರಿ ಸೈನ್ಯ ಗಡಿಯಲ್ಲಿ ಎದೆಯ ಮೇಲೆ ಕುಳಿತಿತೋ ಮುಘಲ್ ಮೇಲೆ ಇದರ ದರ್ಪಬಿದ್ದು ಅವನು ಹೆದರಿದ್ದ. ಖಡ್ಗದ ಬೆಂಕಿಯ ಮುಂದೆ ಅವನು ತಡಿಯುವ ಶಕ್ತಿ ಕಳೆದುಕೊಂಡ ಹಾಗೂ ಸಮ್ಮುಖದಲ್ಲಿ ಬಂದು ಕಣ್ಣಲ್ಲಿ ಕಣ್ಣಿಟ್ಟು ನೋಡಲು ಸಾಧ್ಯವಾಗದಂತಾಯಿತು. ಎಲ್ಲೆಡೆಯು ಯಾವುದಾದರೂ ಆಧಾರ ಆಶ್ರಯ ಹುಡುಕುತ್ತ ಓಡಾಡುತ್ತಿದ್ದ. ಆಗ ಹೆಸರಾಂತ ಖಾನ್ ಬಹಳ ಶೀಘ್ರದಿಂದ ವಿಶೇಷವಾಗಿ ಖವಾಸ್‌ನ ಖಾನನನೊಡನೆ ಇಬ್ಬರೂ ಪರಸ್ಪರ ಮಾತುಕತೆ ಹಾಗೂ ಸಲಹೆನಂತರ ಒಂದು ಮನಸ್ಸಿಂದ ಕೂಡಿದರು, ಎದ್ದು ಸೊಂಟ ಕಟ್ಟಿ ಅಲ್ಲೇ ಸೇರಿದರು. ಶರ್ಝಾ ಖಾನ್ ಹೇಳಿದ, ನಮ್ಮಿಂದ ಯಾವುದೆ ಕಷ್ಟ ಅಥವ ದುಃಖವಿಲ್ಲ ಅವರು ಬೇಕೆಂದು ಎಚ್ಚರತಪ್ಪಿದವರಂತೆ ನಾಟಕ ಆಡುತ್ತಿದ್ದಾರೆ. ನಾವು ಹೋಗಿ ಅವರಿಗೆ ಕೆಣಕಿ ಕೋಪ ಬರುವಂತೆ ಮಾಡದೇ ಇದ್ದರೆ ಆ ಸೈನ್ಯ ಮೈದಾನದಲ್ಲಿ ಇಂದು ಬರುವುದಿಲ್ಲ. ತನ್ನ ಕುದುರೆ ಝುಫರ್ ಬಕ್ಷ್ ತರಿಸಿ ಫಿರಂಗಿ ಸೈನ್ಯ ತೆಗೆದುಕೊಂಡು ತಡಮಾಡದೆ ಹೊರಟ. ಒಳ್ಳೆ ಘನತೆಯುಳ್ಳ ಶೂರ ಮಂತ್ರಿಗಳು ಅವರೊಡನೆ ಒಂದು ತೂಕವಾಗಿ ಸೇರಿಕೊಂಡು ನಡೆದರು. ಎರಡು ದೇಶಗಳ ಸಮರ ಹಾಗೂ ಚತುರ ಜವಾನರನ್ನು ಆರಿಸಿದರು. ಅವರೆಲ್ಲರೂ ಒಬ್ಬರಿಂದ ಒಬ್ಬರು ಕೆಲಸದಲ್ಲಿ ಜಾಗೃತರಾಗಿದ್ದವರು. ಎಲ್ಲರೂ ಸೇರಿ ಶಿಕಾರು ಹುಡುಕಲಾರಂಭಿಸಿದ್ದರು. ಇಂತಹದರಲ್ಲಿ, 'ಇಂದು ಮುಘಲ್ ಒಂದು ಒಳ್ಳೆ ಸೈನ್ಯವನ್ನು ಸೇರಿಸಿ ಆಕಡೆ ಏನೋ ಕೆಲಸಕ್ಕೆ ಕಳುಹಿಸಿದ್ದಾನೆ, ಖಝುಲ್

ಬಾಷ್ ಹಾಗೂ ಉರ್ಬುಕ್‌ರ ಒಂದು ಸೈನ್ಯವಿದೆ. ಮತ್ತೊಂದು ಮರಾಠಿ ಸೇನಾಪತಿ ಇದ್ದಾನೆ, ಮರಾಠರಲ್ಲಿ ರಜಪೂತರೂ ಸಹ ಇದ್ದಾರೆ. ಖರ್ಝುಲ್ ಬಾಷ್ ಹಾಗೂ ಉರ್ಬುಕ್ ಸೇರಿ ಅವಧೂತರಿದ್ದಾರೆ. ಒಬ್ಬರು ಹೃದಯದಲ್ಲಿ ಬರ್ಚಿ ಮತ್ತು ಭಲ್ಲೆಗಳನ್ನು ಹೊಡೆಯುವರು. ಮತ್ತೆ ಎರಡನೆ ಸೈನ್ಯ ಬಿಲ್ಲು ಖಡ್ಗಗಳಿಂದ ತುಂಬಿವೆ. ಆದರೆ ಅವರು ಎಲ್ಲಿದ್ದಾರೆ ಅವರ ಠಿಕಾಣಿ ಎಲ್ಲೂ ಕಾಣುತ್ತಿಲ್ಲ. ಎರಡು ಸೈನ್ಯಗಳಲ್ಲಿ ಬೆಂಕಿಯ ಚಂಡಮಾರುತ ಅಡಗಿದೆ' ಎಂದು ಅವರಿಗೆ ಸುದ್ದಿ ಸಿಕ್ಕಿತು. ಶರ್ಝಾ ಖಾನ್ ಈ ಮಾತುಗಳನ್ನು ಕೇಳಿದಾಗ ಅಲ್ಲಿ ಹತ್ತಿರದಲಿದ್ದವರೆಲ್ಲರಿಗೂ ಕೋಪ ಏರಿತು. ಆವಾಗಲೇ ಶರ್ಝಾ ಖಾನ್ ತನ್ನ ಸೈನ್ಯರಚಿಸಿ ಶತ್ರುಗಳ ಕಡೆ ತನ್ನ ಸೈನ್ಯವನ್ನು ತಿರುಗಿಸಿದ. ಎಲ್ಲರೂ ತನ್ನ ಕುದುರೆಗಳ ಲಗಾಂ ಎಳೆದರು. ಕುದುರೆಗಳನ್ನು ಗಾಳಿಮೇಲೆ ಹಾರಿಸಿದರು. ಕುದುರೆಗಳ ಶರೀರದಿಂದ ಬೆವರು ಹರಿಯುತ್ತಿತ್ತು. ಬಾಯಿಯಿಂದ ಕಫ ಕಿತ್ತಿಕೊಂಡಿತು. ಸಮುದ್ರದದಾರಿಯಾಗಿ ಪ್ರತಿಯೊಂದು ಕಡೆ ಅಲೆಗಳೆದ್ದವು. ಶರ್ಝಗಳ ಲಾಟು ಆಕ್ರಮಣಿಸುವವರಿಗೆ ಮುಳ್ಳುಭರಿತ ಸಣ್ಣ ದಾರಿ ಕಂಡಿತು. ಬರಿಯದೆ ಇಂದು ನಡೆದು ಸೈನ್ಯ ಬಲು ತೊಂದರೆ ಅನುಭವಿಸಿತು. ಇಂತಹದರಲ್ಲಿ ಕಠಾರಿಗಳ ಯುದ್ಧ ಆಗಮಿಸಿತು(ಮುಳ್ಳುಗಳು ಚುಚ್ಚಲಾರಂಭಿಸಿದವು). ಆದರೂ ಸಹ ನಿಲ್ಲದೇ ನುಗ್ಗುತ್ತಲೇ ಮುಂದೆ ಹೋಗುತ್ತಲೇ ಇದ್ದುದ್ದರಿಂದ ಸವಾರಗಳ ಶರೀರಗಳೆಲ್ಲ ಕಸಕಡ್ಡಿಗಳಾದವು. ಕಷ್ಟಪಟ್ಟು ಸೈನ್ಯ ಹೊರಗೆ ಬಂದಾಗ ಮುಂದೆ ಹರಿತಧಾರಿಗಳು ಹರಿತ ತೆಗೆದುಕೊಂಡು ನಿಂತಿದ್ದರು. ಆಗ ಹಠಾತ್ತನೇ ಅವರ ದೃಷ್ಟಿ ಪ್ರಸಿದ್ಧ ಖರ್ಝುಲ್‌ಬಾಷ್ ಹಾಗೂ ಉಜ್ಬಕ್‌ರವರ ಮೇಲೆ ಬಿತ್ತು. ಅದಾಗ್ಯೂ ಪ್ರತಿಯೊಬ್ಬ ವ್ಯಕ್ತಿ ಅಲ್ಬರ್ಝ ಬೆಟ್ಟದಂತಿದ್ದಾನೆ. ಒಬ್ಬನ ಕೈಯಲ್ಲಿ ಕೊಡಲಿ ಇದ್ದರೆ ಮತ್ತೊಬ್ಬನ ಕೈಯಲ್ಲಿ ಗದೆ ಇದೆ, ಅನೇಕರ ಸಾಮಾನು ಬಿಲ್ಲು ಬಾಣಗಳಾದರೆ ಮತ್ಯಾರೋ ಹಗ್ಗದ ಏಣಿ, ಮತ್ಯಾರೋ ಭಲ್ಲೆ ಮತ್ಯಾವೋ ಖಡ್ಗಧಾರಿಯಾಗಿರುವವನು. ಪ್ರತಿಯೊಬ್ಬ ಗಂಡಸಿನ ಆಸೆ ಬಲು ಸಣ್ಣದು. ಹೃದಯ ರುಸ್ತುಂನಂತಹ ಹಾಗೂ ಶರೀರ ದೆವ್ವನಂತಹ ಬೆಳ್ಳಗೆ. ಅವರ ಹೊಟ್ಟೆ ಅಗ್ನಿಕುಂಡಕ್ಕಿಂತ ಏನು ಕಡಿಮೆ ಇರಲಿಲ್ಲ. ಏನಾದರೂ ಬಾಯಿಗೆ ಹೋದರೆ ಸಾಕು ಅವೆಲ್ಲ ಭಸ್ಮವಾಗುವುದು. ಒಂದು ಮಡಕೆ ತುಂಬಮದ್ಯ ಅವರಿಗೆ ಬಹಳ ಕಡಿಮೆ, ಅಮಲು ಸೇವನೆಯ ಬಳಿಕ ಬಾಯಿರುಚಿಗೆ ಚಿಕ್ಕ ಬಾಲದ ಟಗರ ಜೋಡಿಯೂ ಸಹಜ ಕಾಣಿಸುತ್ತದೆ. ತನ್ನ ಗಡ್ಡ ಮೀಸೆ ಕತ್ತರಿಸಿ ಚೇಳು ತನ್ನ ವಿಷದ ಕೊಂಡಿಯನ್ನು ಮುರಿದು ಬೀಸಾಡಿರುವ ಹಾಗೆ ತಮ್ಮ ಮುಖ ಮಾಡಿಕೊಂಡಿದ್ದಾರೆ. ಬಿಲ್ಲು ಹಿಡಿಯುವ ಕಲೆ ಅವರಿಂದ ಅರ್ಜುನ ಹಾಗೂ ಲಕ್ಷ್ಮಣ ಕಲಿಯಬೇಕು. ಅವರ ಬಾಣದ ಮುಂದೆ ಎತ್ತರವಾದ ಬಾಣವೂ ದಣಿಯುತ್ತದೆ. ಅವರ ಯುದ್ಧದ ಮುಂದೆ ರುಸ್ತುಮಿನ ಕುದುರೆ ರಖ್ಷ್ ಸಹ ಚೆಂಡಾಗುವುದು. ಅವರೇನಾದರು ರುಸ್ತುಮಿನ ಬಿಲ್ಲಿನ ಸೆಳೆತ ಎಳೆದರೆ ನರಗಳು ಹಾಗೂ ಮೂಳೆಗಳೆಲ್ಲ ಕಟಕಟನೆ ಮುರಿಯುವವು. ತಟ್ಟೆ ಅವರ ಆಟಕ್ಕೆ ಆಕಾಶದ ಧ್ರುವ ನಕ್ಷತ್ರಗಳು ಚಿನ್ನ ಬೆಳ್ಳಿಯ ನೀರು ಕುಡಿಯುವ ಲೋಟಗಳು

ಸೂರ್ಯ ಹಾಗೂ ಚಂದ್ರ ಅಗುವವು. ಅವರೇನಾದರೂ ಹಿಂದೆ ತಿರುಗಿ ಬಾಣ ಚಲಾಯಿಸಿದರೆ ತಟ್ಟೆಯಲ್ಲಿರುವ ನೀರಿನ ಲೋಟಗಳು ಪರಾಜಯಗೊಳ್ಳುತ್ತವೆ. ಯಾರಾದರೂ ಸಮ್ಮುಖದಲ್ಲಿ ಬಂದು ಒಂದು ಹಿಡಿಯಾಗಿ ಬಾಣಗಳಿಟ್ಟರೆ ಆಕಾಶಕ್ಕೂ ಅವರು ನವಿಲುಗರಿ ಮಾಡಿಬಿಡುತ್ತಾರೆ. ಈ ಶರ್ಝುಗಳ ಸಾಲು ಅವರ ಮೇಲೆ ಗುರಿ ಇಟ್ಟು ಏಳುವವರಿಗೆ ಅವರು ಸಹ ಸಮ್ಮುಖದಲ್ಲಿ ತಮ್ಮ ಸೈನ್ಯವನ್ನು ಕಟ್ಟಿ ನಿಂತಿರುತ್ತಾರೆ. ಈಗ ತನ್ನ ಬಿಸಿ ಕುದುರೆಗಳನ್ನು ಸಾಲುಗಳಲ್ಲಿ ಹಾಕಿರಲಿಲ್ಲ. ಇಡೀ ಸೈನ್ಯದ ಹೃದಯಗಳಲ್ಲಿ ಸ್ಫೂರ್ತಿ ತುಂಬಿತು. ಓರೆಗಳಿಂದ ಖಡ್ಗಗಳು ಹೊರಬಂದು ದಾಳಿ ಮಾಡಿದವು. ಕುದುರೆಗಳು ಮುರಿದು ಬಿದ್ದವು. ಸಾಲುಗಳ ಮೇಲೆ ಪ್ರತಿಯೊಬ್ಬ ಶೂರ ಕದಲದೆ ಗುರಾಣಿ ತೆಗೆದುಕೊಂಡು ಕಣ್ಣುಗಳಿಂದ ಅವರನ್ನು ತೀಕ್ಷ್ಣ ದೃಷ್ಟಿಯಿಂದ ನೋಡಿದರು. ಪ್ರತಿಯೊಂದು ಪಕ್ಷಿ ಭಲ್ಲೆಯ ಅತ್ಯುತ್ತಮ ಮೊನೆಯದವನು ಕತ್ತು ಉದ್ದಮಾಡಿ ಕುಟ್ಟಲು ನೋಡುತ್ತಿದ್ದರು. ಖಡ್ಗಗಳ ಹೊಟ್ಟೆ ಹಸಿದು ನಾಲಿಗೆ ಸಿಡಿಲಾಗಿ ಬೆಂಕಿ ಬಾಯಿಯವರೆಗೂ ಹತ್ತಿಕೊಂಡಿತು. ವೀರರ ಬಾಯಿಂದ ನೀರು ಜಾರಿಯಾದಾಗ ತನ್ನ ಕಠಾರಿಗಳು ಅದರಿಂದ ಹಲ್ಲುಗಳು ಚೂಪು ಮಾಡಿಕೊಂಡವು. ಪಳಗಿದ ಅಮಲೇರಿದ ಆನೆತನ್ನ ಸೊಂಡಿಲ ಎತ್ತಿ ನಿಂತುಕೊಂಡು ತಾಳ ಹೊಡೆದುಕೊಂಡು ಸೈನ್ಯದ ಮೇಲೆ ಸೈನ್ಯವನ್ನೇ ಉರಿಳಿಸಬೇಕೆಂದಾಗ, ಆನೆಯನ್ನು ಕೊಚ್ಚಿ ಕುಪ್ತ ಮಾಡಿ ಬೀಸಾಡಲು ಪ್ರತಿಯೊಬ್ಬರು ಮಚ್ಚಾಗಿ ನಿಂತರು. ಶರ್ಝುಗಳು ಸಾಲುಕಟ್ಟಿಕೊಂಡು ನೇರವಾಗಿ ಹೋದರು. ಅವರ ಕಣ್ಣಲ್ಲಿ ಕಣ್ಣು ಸೇರಿಸುತ್ತಾ ಹೋದರು. ಯಾವಾಗ ಯುದ್ಧದ ಮಾನದ ಮೇಲೆ ಪ್ರಾಣ ಮುಡುಪಾಗಿಟ್ಟು ಬಂದರೋ ಆಗ ಬಾಣಗಳಿಂದ ಮುಂಚಿತವಾಗಿ ಕುದುರೆಗಳನ್ನು ಎತ್ತಿದರು. ಶೂರರು ಯುದ್ಧದಲ್ಲಿ ಕಾಲು ಬಡೆದು ಬಂದು ಆಕಾಶವನ್ನು ಒಡೆದು ಧೂಳಲ್ಲಿ ಬೀಸಾಡಿದರು. ಭೂಮಿಯದೇ ಸಿಂಹಾಸನದ ಮೇಲೆ ಪ್ರವಾದಿ ಸುಲೈಮಾನರಿಗೆ ಗಾಳಿ ಅದನ್ನು ತೂಗಾಡಿಸುತ್ತ ತನ್ನ ಕುತೂಹಲ ತೋರುತ್ತ ಎತ್ತಿಕೊಂಡು ಹೋದ. ಸೈನ್ಯ ಎದ್ದೇಳುವವರೆಗೆ ಖಝುಲ್‌ಬಾಷ್ ಮತ್ತು ಉಝ್ಬಕರು ತಮ್ಮ ಸಶಸ್ತ್ರಗಳನ್ನು ಎತ್ತಿಕೊಂಡರು. ಖಡ್ಗ ಓರೆಗಳಿಂದ ಹುತ್ತಗಳಿಂದ ಹಾವುಗಳು ಹೊರಬಂದಂತೆ ಹೊರಬಂದವು. ಕೊಳವೆ(ಇದರಲ್ಲಿ ಸಿಡಿಮದ್ದನ್ನು ಸಿಡಿಸಿ ಬಾಣ ಯಾ ಕಲ್ಲುಗಳನ್ನು ಎಸೆಯುತ್ತಾರೆ)ಬಿಸಿಯಾದವು. ಹೃದಯ ಏರಿ ಆತುರಗೊಂಡಿತು ಕಡಾಕಡ್ ಕೂಗುತ್ತ ಗುಂಡುಗಳು ಬಿಟ್ಟವು. ಬಿಲ್ಲುಗಳು ಜೋರಾಗಿ ಸಿಡಿದವು. ಎಲ್ಲ ಕೋಣೆಗಳಿಂದ ತುಂಬ ಗದ್ದಲ ಎದ್ದಿತು. ಬಿಲ್ಲುಗಳು ಜವಾನರಿಗೆ ಶಕ್ತಿಶಾಲಿಯಾಗಿ ಪಡೆದು ಬಲು ಆಸಕ್ತಿಯಿಂದ ಎದೆಗಳ ಕಟ್ಟನ್ನು ಬಿಚ್ಚಿ ಎಸೆದವು. ಬಾಣಗಳಲ್ಲಿ ಬಾಣ ಸೇರಿ ಮೊಸಳೆಯ ಜೊತೆಯಲ್ಲಿ ಎರಡು ಮರಿಗಳು ಇದ್ದಹಾಗೆ ಅಲಂಕರಿಸಿದ್ದವು. ಕೊಳವೆಯ ಬೆಂಕಿಯ ಮೋಡಗಳು ಕವಿದವು. ಬಾಣಗಳ ಮೊನೆ ಸಿಡಿಲಿನ ಹಾಗೆ ಮಿನುಗುವವು. ಅನೇಕ ಬಾಯಿಗಳಲ್ಲಿ ಬಾಣಗಳ ಗುಂಡುಗಳನ್ನು ಸಿಕ್ಕಿಕೊಂಡು ಪ್ರತಿಯೊಂದು ಬಾಣ ನೀಲಮಣಿ ಲಡಿಯಾಗಿ ಬಿದ್ದಿತು. ಬೆಂಕಿಯ

ಮೇಲೆ ಗಾಳಿಯ ಪಕ್ಷಿಗಳನ್ನು ಹೊದಿಸಿಕೊಂಡಿದ್ದರಿಂದ ಬಾಣ ಸುಟ್ಟಿರುವ ಕಬಾಬ್ ಆದವು. ಅನೇಕ ಬಾಣಗಳು, ಪ್ರತಿಕ್ಷಣ ಮಾಡಲ್ಪಟ್ಟ ಬಾಣ ಬಲುವೇಗದಿಂದ ಹಾರಿ ನವಿಲುಗರಿಗಳಿಂದ ಮಾಡಿದ ಕುಂಚವಾಗಿ ಭೂಮಿ ಮೇಲೆ ನೆರಳು ಮಾಡಿತು. ಸಣ್ಣ ರಂಧ್ರಿನ ಎಲೆಗಳನ್ನು ಸುತ್ತಿದರೆ ಹೇಗೆ ಇರುತ್ತದೆಯೋ ಹಾಗೆ ಧ್ವಜಗಳನ್ನು ಬಿಚ್ಚಿ ಬಿಟ್ಟಿದ್ದರು. ಅನೇಕ ಬಾಣಗಳನ್ನು ಭಲ್ಲೆಯ ದಂಡೆಯಲ್ಲಿ ಚುಚ್ಚಿಕೊಂಡು ತುರಾಯಿ ಮರದ ಕೊಂಬೆಗಳಂತೆ ನಿಂತಿರುವರು. ಆದರೆ ಹುಲಿ ಹೃದಯದ ಗಂಡಸರ ಖಡ್ಗದ ಹರಿತ ಯಾರಿಗೂ ಸಹ ಹೂತಲು ಬಿಡಲಿಲ್ಲ. ಅಲಿರವರ ಸೈನ್ಯದ ಮೇಲೆ ದೇವರ ಸಹಾಯ ಇದ್ದ ಕಾರಣದಿಂದಾಗಿ ಭೂತಪುತ್ರರ ಬದಿ ನಡೆಯಲು ಸಾಧ್ಯವಿಲ್ಲ. ಶರ್ಝ ಗರ್ಜಿಸಿಕೊಂಡು ಪ್ರಜ್ಞೆ ಇಲ್ಲದಂತಾಗಿದ್ದ, ಆಗ ತಾನೇ ಅರಿವುಮೂಡಿಸಿಕೊಂಡು ಬಂದು ಶರ್ಝನ ಕುಕ್ಕೆಯನ್ನು ಎಸೆದಾಗ ಅದು ತನ್ನ ಹಸ್ತದಿಂದ ಇಡೀ ಸೈನ್ಯವನ್ನೇ ಆವರಿಸಿಕೊಂಡನು. ಯಾರ ತಲೆಯ ಮೇಲೆ ಈ ಹಸ್ತ ಬಿತ್ತೋ ಪ್ರಾಣ ಹೋಯಿತು ಎಂದು ಮನಸ್ಸಿನಲ್ಲಿ ದುಃಖ ಪಟ್ಟನು. ಎದುರಾಳಿ ಈ ಸ್ಥಿತಿ ನೋಡಿ ಆಶ್ಚರ್ಯದಲ್ಲಿ ಮುಳುಗಿದ. ಬುದ್ಧಿಯ ಕುದುರೆಯ ಮಿದುಳಲ್ಲಿ ಕುಂಟಿದೆ. ಆಗಲೇ ಹುಲಿಗಳ ಸಾಲುಗಳಿಂದ ಶರ್ಝ ಖಾನ್ ಹುಲಿ ಕುಮ್ಮಕ್ಕು ಕೊಟ್ಟು ಬಲು ಶೌರ್ಯದಿಂದ ಆಕ್ರಮಿಸಿದಾಗ ಶತ್ರುವಿನ ಇಡೀ ಸೈನ್ಯ ಅಸ್ತವ್ಯಸ್ತವಾಯಿತು. ಭೂಮಿಯನ್ನೆ ಮೊಗಚಿ ಹೊಡೆದರು ಎಂದು ಹೇಳಬಹುದು. ಎರಡು ಕಡೆಯಿಂದಲೂ ಸಮತೋಲನ ಹೇಗೆ ಅಯಿತೆಂದರೆ ಖಡ್ಗದ ಬೆಂಕಿ ನೀರಿನ ಹಾಗೆ ಸುರಿಯಲಾರಂಭಿಸಿತು. ಬೆಂಕಿಯಲ್ಲಿ ಬೆಂಕಿ ಸೇರಿ ಉದ್ರೇಕಗೊಂಡಿತು. ಶಸ್ತ್ರಗಳ ಕಿಣಿಗಳಿಂದ ಗಾಬರಿ ಎದ್ದೇಳಿತು. ಬಾಣ ಹಾಗೂ ಕೊಳವೆಗಳೂ ಸಹ ಅಚಲವಾಗಿ ಕೆಲಸ ಮಾಡಿದಾಗ ಎಲ್ಲ ಶಸ್ತ್ರಗಳು ಸಹ ತಮ್ಮ ಕೆಲಸ ಮಾಡಲಾರಂಭಿಸಿದವು. ಮೇಲಿಂದ ಜೀವ ತೆಗೆಯಲು ರುಂಡವನ್ನು ಕಟ್ಟಲು ಕೊರಳು ಬಿಗಿಯುವ ಹಗ್ಗ ಕೇಶಗಳನ್ನಾಗಿ ಹರಡಿತು. ಸವಾರರುಗಳೇ ಕೆಂಪು ಕಾದಿದ ಕಬ್ಬಿಣದ ಹಾಗೆ ಹೊದಿಕೆಯಂತಾಗಿ ಗದೆಗಳನ್ನು ಮಾಡಲು ಸುತ್ತಿಗೆಯ ತೂಕ ಬಿಟ್ಟರು. ನಾಲ್ಕು ಕನ್ನಡಿಗಳನ್ನು ಸ್ವಚ್ಛ ಮಾಡಿದರು. ಪ್ರತಿಯೊಂದು ಕೊಡಲಿ ನಿಸ್ಸಂದೇಹವಾಗಿ ಹೊಳೆಯಿತು. ಮುಘಲ ಖಡ್ಗ ದಖನಿಯರ ಮೇಲೆ ಕೊಡಲಿ ಮುಂದೆ ಉಗುರಿದ್ದಹಾಗಿದೆ. ಮುಘಲರು ದೂರ ದೂರದವರಿಗೆ ಲಕ್ಷಾಂತರ ಕಲೆ ಸ್ವೀಕಾರ ಮಾಡುವುದಾದರೆ ಮಾಡಲಿ ಆದರೆ ದಖನಿಯರೊಡನೆ ಎದುರು ಬದುರಾಲು ನಿಸ್ಸಂದೇಹವಾಗಿ ಹೆದರುತ್ತಾನೆ. ಅಕ್ಕಸಾಲಿಗ ಹತ್ತು ಸುತ್ತಿಗೆ ಎತ್ತಿ ಹೊಡೆಯಲಿ ಆದರೆ ಕಮ್ಮಾರನ ಒಂದು ಏಟು ಅದಕ್ಕಿಂತ ಹೆಚ್ಚಾಗಿ ಕಾಣುತ್ತದೆ. ಜವಾನರೆಲ್ಲ ಇತ್ತಲಿಂದ ಅತ್ತ ಕೋಪ ತೆಗೆದುಕೊಂಡು ರಣಹುಚ್ಚರಾಗಿ ಹೊಡೆಯುತ್ತಿದ್ದರು. ಪ್ರತಿಯೊಂದು ಬಿಲ್ಲಿಗೆ ವಜ್ರದ ಸುತ್ತುನೋಡಿ ದಖನಿಯ ಮೇಲೆ ಮುರಿಯಲು ಪರೀಕ್ಷಿಸಿದರು. ನೇತಾಡುತ್ತಿರುವ ಕೈಗಳನ್ನು ಎತ್ತಿಕೊಂಡು ಬಿಟ್ಟರೆ ಗಾಯ ಕಟ್ಟಿರುವ ದಾರದಂತೆ ಕಾಣತೊಡಗಿದವು. ಅದನ್ನು ಸೀಳಿ ಬಿಟ್ಟರೆ ಖಡ್ಗ ಸ್ವಚ್ಛ ಮಾಡಿದರೆ ಕೆಂಪು ಇರವುದಿಲ್ಲವೇ

ಹಾಗೆ ಅದು ದಾರ ಆಗಿ ಇರುವುದಿಲ್ಲ. ಯಾರಾದರು ಸೊಂಟದ ಮೇಲೆ ಹಲ್ಲೆ ಮಾಡಿದರೆ ಎರಡು ನರನಾಡಿಗಳು, ಎರಡು ಪರದಲಿ(ಸಾಹಸ, ಚುರುಕುತನ) ಹಾಗೂ ಎರಡು ಸೊಂಟ ಆಗುವವು. ಭೂಮಿ ಮೇಲೆ ಒಬ್ಬರಿಂದ ಒಬ್ಬರು ಹಲ್ಲೆ ಮಾಡುತ್ತ ಕಾಣುತ್ತಾರೆ. ಎರಡು ಸವಾರರು, ಎರಡು ಜೀನು ಹಾಗೂ ಎರಡು ಕುದುರೆ, ಸವಾರ ಸವಾರನ ಮೇಲೆ ಆಕ್ರಮಣ ಮಾಡಿದರೆ ಕುದುರೆ ಕುದುರೆಗಳು ಕೆಳಗೆ ಬಿದ್ದು ವದ್ದಾಡುತ್ತಿವೆ. ಗಾಳಿ ಅಗ್ನಿಯ ಭಟ್ಟಿಯಾಗಿ ಧಡ ಧಡ ಉರಿಯುತ್ತಿದೆ. ಗೊರಸೆಗಳಿಂದ ಹಾರಿ ಕಣಗಳು ಭಟ್ಟಿಯಲ್ಲಿ ಸುಟ್ಟ ಸುಣ್ಣ ಆಗಿವೆ. ಅನೇಕ ಅಲಂಕಾರ ಮಾಡುವವರಿಗೆ ವಜ್ರ ಲಾಳವಾಗಿವೆ. ಕಾಲಿನ ಕಬ್ಬಿಣದ ಬಳೆ ವಜ್ರಗಳ ರತ್ನವಾಗಿವೆ. ತಲೆಗಳು ಹೊಡೆದು ಖರ್ಬೂಜದ ಹಾಗೆ ಬಿದ್ದಿವೆ. ತಲೆ ಕಲ್ಲಂಗಡಿಯಂತೆ ಉದುರುತ್ತ ಕಾಣುತ್ತಿವೆ. ಅನೇಕರ ಮುಂಡಗಳು ಕತ್ತರಿಸಿ ನೆಲದ ಮೇಲೆ ಬಿದ್ದು ಉರಳಿವೆ. ಪ್ರತಿಯೊಂದು ಮೀಸೆ ಜೀನಿನ ಕೆಳಗೆ ದಾರಿ ಹೋದ ಹಾಗೆ ಕಾಣುತ್ತದೆ. ಶತ್ರುವಿನ ಮೇಲೆ ಅಧಿಕ ಮೃತ್ಯು ಇಳಿದಾಗ ಎಲ್ಲರು ಬಾಗಿದರು. ಮುಂದೆ ಹೃದಯವನ್ನು ಸುಡುವುದರಿಂದ ಕಣ್ಣುಗಳು ದಣಿದವು. ಖಡ್ಗದ ಭೀತಿ ಅಂತರಂಗದಲ್ಲಿ ಬಿದ್ದು ರಕ್ತ ಮಾಂಸ ಎಲ್ಲ ಸೇರಿ ಕೆಸರಾಯಿತು. ಮೈಯಲ್ಲಿ ಎಲ್ಲಿ ಜೀವ ಓಡಾಡಿತ್ತಿತ್ತು ಅದರ ಹೆಜ್ಜೆ ಆ ಕೆಸರಲ್ಲಿ ಜಾರುತಿದ್ದವು. ಸತ್ತವರು ಎಲ್ಲ ಕೈಗಳು ಮರೆತು ಸತ್ತುಬಿದ್ದಿದ್ದರು. ಎತ್ತರದ ಪಾಯಿಜಾಮದಲ್ಲಿ ಸಿಕ್ಕಿ ಸೋಲನುಭವಿಸಿದರು. ಯಾರು ಸಿಕ್ಕಿಹಾಕಿಕೊಂಡಿದ್ದರೋ ಅವರೆಲ್ಲರಿಗೂ ಹೊಡೆದರು. ಅವರೆಲ್ಲರನ್ನು ಹಿಂಬಾಲಿಸಿ ಅವರ ಡೇರೆಗಳವರೆಗೆ ಹಿಂದೆ ಜರುಗಿಸಿದರು. ಆ ಓಡಿಹೋದವರನ್ನು ತೆಗೆದುಕೊಂಡು ಹೋಗಿ ಡೇರೆಗಳಲ್ಲಿ ಹಾಕಿದರು. ಆ ಆಕ್ರಮಣದಿಂದ ಮತ್ತೆ ಹಿಂದುರುಗಿ ಯುದ್ಧ ಮಾಡಲು ಬಂದಾಗ ಜವಾನರು ಎಲ್ಲಿಯವರೆಗೂ ತೀವ್ರ ಕೋಪದಲ್ಲಿದ್ದರೋ ಅಲ್ಲಿಯವರೆಗೆ ಖಡ್ಗಗಳಿಂದ ರಕ್ತದ ಹನಗಳು ತೊಟ್ಟಿಕ್ಕುತ್ತಿದ್ದವು. ಅಲ್ಲಿಯವರಿಗೆ ಅದೇ ದಾರಿಯಿಂದ ಬೇರೆ ಸೈನ್ಯ ಹೊಂಚುಹಾಕುವ ಸ್ಥಳದಿಂದ ತಲೆ ಎತ್ತಿಕೊಂಡು ಬಂದಿತು. ಯಾವಾಗ ಆ ಸೈನ್ಯ ಸಮ್ಮುಖದಲ್ಲಿ ಸರಿಯಾಗಿ ಬಂದಿರಲಿಲ್ಲ. ಅದರ ಬದಿ ಸಹ ಸರಿಯಾಗಿ ಕಾಣಲಿಲ್ಲ, ಪದರ ಪದರದಂತೆ ಅಚಲ ಭಲ್ಲೆಗಳು ತೋಟದಲ್ಲಿ ಗೋಡೆಗಳ ಜಾಗ ಇರುವ ಹಾಗೆ ಕಾಣತೊಡಗಿದವು. ಅಲ್ಲಲ್ಲಿ ಬರ್ಚಿಗಳ ಠೀವಿ ಕಾಣತೊಡಗಿದವು ಅವು ಸುಂದರ ಲೇಖನಿಗಳಿಗಾಗಿ ಬೆಳೆದಿರುವ ಹಾಗೆ ಇದೆ. ಸೈನ್ಯದ ತುಕಡಿಗಳು ಭೂಮಿಯಿಂದ ಆಕಾಶದವರೆಗೆ ಬಿದಿರಿನ ತಟ್ಟಿ ನಿಂತಿರುವ ಹಾಗೆ ಕಾಣಿಸುತ್ತವೆ. ಪ್ರತಿಯೊಂದು ಭಲ್ಲೆ ಸೂರ್ಯನಿಂದ ನೀರು ಕುಡಿದು ಊದಿ ಬಿಸಿಲಿಗೆ ಪ್ರಕಾಶವನ್ನು ಕೊಡುತ್ತಿದೆ. ಬರ್ಚಿಗಳು ಎತ್ತರದಲ್ಲಿ ಸಾಗಿದರೆ ಪ್ರತಿಯೊಂದು ನಕ್ಷತ್ರ ತನ್ನ ಕಣ್ಣು ಮುಚ್ಚಿಕೊಂಡಿತು. ಸಿಡಿಮದ್ದಿನ ಉಗ್ರಾಣ ಮುಂದೆ ಗರ್ಜಿಸುವಂತೆ ಕಾಣಿಸುತ್ತದೆ. ಆನೆ ಹಾಗೂ ಒಂಟೆಗಳ ಮೋಡ ಕವಿದಂತೆ ಕಾಣುತ್ತದೆ. ಆನೆ ಸೊಂಡಿಲು ಬಿಲ್ಲಿನ ಹಾಗೆ ಬಾಗಿರುವುದು ಆನೆ ಮೇಲೆ ನಕ್ಷತ್ರ ಇದ್ದಹಾಗೆ ಕಾಣಿಸುತ್ತದೆ. ಚಿಕ್ಕತೋಪುಗಳ ಹೊಗೆಯ ಮೋಡ ಅದರ ಮೇಲೆ

ಸಿಡಿಲು ಹುಲ್ಕಡ್ಡಿಯಂತೆ ಇದೆ. ಕಲ್ಲು ಮತ್ತು ಬೆಂಕಿ ಅಧಿಕವಾಗಿ ಉದುರುತ್ತಿದೆ. ಸಣ್ಣ ತುಪಾಕಿ ಹುರಿದುಂಬಿ ಗರ್ಜಿಸುತ್ತಿದೆ. ಇಡೀ ಸೈನ್ಯದಲ್ಲಿ ಲೋಕ ಸಿಕ್ಕಿಕೊಂಡಿದೆ. ಸಿಪಾಯಿಯಿಂದ ಸರದಾರವರೆಗೆ ಜೊತೆಯಂತೆ ಇವೆ. ಗಲಗಿನ ಕಾಡಲ್ಲಿ ಹುಲಿ ಕೋಪಗೊಂಡಿದೆ. ಮರಾಠ ದೊಡ್ಡ ನಿಯಮದವ ಜಾಧವರಾವೊ ಕುಟುಂಬದಲ್ಲಿ ಹಾಗೂ ಸಾಲಲ್ಲೂ ಸಹ ತೂಕದವವನು, ಹಿಂತಿರುಗಿರುವ ಸಿಪಾಯಿ ಹಾಗೂ ತಾನೂ ಒಬ್ಬ ಶೂರ, ಮತ್ತೊಬ್ಬ ರಾಯೆ ರಾಣೆ ಅವನು ಸಹ ಬಲು ಬಲುಶಾಲಿ, ಅವನು ಜೈಸಿಂಘ್‌ಜೊತೆ ಕಲ್ಲಿನ ಹಾಗೆ ಇದ್ದ. ವಿಶೇಷವಾಗಿ ಅವರಲ್ಲಿ ಇನ್ನಷ್ಟು ಹೆಚ್ಚಿಗಿದ್ದವನೆಂದರೆ ಕೇಸರಿ ಸಿಂಘ್ ಆನೆಯ ಹಾಗೆ. ಅವನಿಗೆ ಜಗಳ ಯುದ್ಧವೆಂದರೆ ಆಟ, ರಕ್ತದ ಸ್ವಪ್ನ. ಎಲ್ಲರೂ ಬೆಂಕಿಯಲ್ಲಿ ಬೀಳಲು ಆದ್ಯತೆ ಕೊಟ್ಟರು. ಒಳ್ಳೆ ಜೀವಗಳನ್ನು ಆ ಗಮಾರರು ಜೀವಿಸಲು ಬಿಡಲಿಲ್ಲ. ಶರ್ಝ ಖಾನ್ ನೋಡಿದ ಏನೋ ಬರುವುದನ್ನು ನೋಡಿ ಓ ಶೂರರೇ ನಾನು ನಿಜ ಹೇಳುತ್ತಿದ್ದೇನೆ ದೊಡ್ಡ ಜನ ಬರುತ್ತಿದ್ದಾರೆ ಎಂದು ಹೇಳಿದ. ಗಟ್ಟಿಯಾಗಿ ಮೃತ್ಯು ಆರಿಸಿಕೊಂಡಿದ್ದಾರೆ ಸಾಯುವವನು ಒಳ್ಳೆಯದೋ ಕೆಟ್ಟದ್ದೋ ನೋಡುವುದಿಲ್ಲ ಅವನಿಗೆ ಆಕಾಶ ಒಂದೇ ಒಂದು ಗೇಣಿರುತ್ತದೆ. ಅವರ ಜೊತೆಯಲ್ಲಿ ನಾವು ಹೋರಾಡಬೇಕಾಗಿದೆ. ಮೊದಲನೆಯ ಸೈನ್ಯದೊಡನೆ ತಯಾರಾಗಿ ಆಕ್ರಮಿಸಬೇಕಾಗಿದೆ. ಶರ್ಝಖಾನನು ಆಗಲೇ ಎಡ ಬಲ ನೋಡಿದ ಹಾಗೂ ಸೈನ್ಯವನ್ನು ಹಂಚಿ ಸಿದ್ಧಮಾಡಿಕೊಂಡ, ಗಂಡು ಹುಲಿಗಳಿಗೆ ಅಹಂಕಾರ ಏರಿತು. ಆಕಾಶಕ್ಕೆ ಒಂದು ಹೊಸ ಗದ್ದಲ ನೋಡಲು ಸಿಕ್ಕಿತು. ಒಬ್ಬರಿಂದ ಒಬ್ಬರು ಆಸಕ್ತಿ ತುಂಬಿ ನೆಟ್ಟಗಾದರು. ಒಬ್ಬರ ಮೇಲೆ ಒಬ್ಬರು ತೀಕ್ಷ್ಣವಾದ ಕಣ್ಣಿಟ್ಟು ಅವರಿಬ್ಬರು ಏನಲ್ಲ ಏನೋ ಮಾಡುತ್ತ ಇದ್ದರು. ಪ್ರತಿಸ್ಪರ್ಧಿಗೆ ಚೆನ್ನಾಗಿ ಒಬ್ಬರಿಂದ ಒಬ್ಬರು ತಿಳಿದು ಆಸಕ್ತಿ ಭಾವೋದ್ರೇಕದಿಂದ ಮರ್ಯಾದೆಯೊಂದಿಗೆ ಜಗಳ ಆಡಲು ಸಿದ್ಧರಾದರು. ಎದುರಾಳಿ ಸೈನ್ಯವೂ ತನ್ನ ಕಾಲನ್ನು ಹೂತ್ತುಕೊಂಡು ಉಕ್ಕಿನ ಬೆಟ್ಟದಂತೆ ನಿಂತರು. ಸೈನ್ಯದ ಸುತ್ತಲೂ ಒಂಟೆಗಳನ್ನು ಕೂರಿಸಿದರು ಹಾಗೂ ಆನೆಗಳನ್ನು ಹೆಜ್ಜೆಯಿಂದ ಹೆಜ್ಜೆ ಜೋಡಿಸಿ ನಿಲ್ಲಿಸಿದರು. ಎದುರಾಳಿಯ ಈ ವ್ಯವಸ್ಥೆ ನೋಡಿದಾಗ ಜವಾನರು ತಮ್ಮ ಕುದುರೆಗಳನ್ನು ಎತ್ತಿಕೊಂಡು ಎಷ್ಟು ವೇಗದಿಂದ ಕೋಪದಿಂದ ಹರಿಸಿದರೆಂದರೆ ನದಿಗಳ ಮೇಲೆ ಬಿಸಿಲುಗುದುರೆಗಳ ನಾವೆ ಹರಿಯುವಂತೆ ಓಡಿಸಿದರು. ಆಗ ಭೂಮಿಮೇಲೆ ಕುದುರೆಗಳ ಗೊರಸು ಬಾರಿಸಿದಾಗ ಭೂಮಿ ಮಧ್ಯದಿಂದ ಮಾಯವಾಗಿ ಗಾಳಿಯಾಯಿತು. ಆಕಾಶ ಧೂಳಿನ ಗೋಡೆಯಲ್ಲಿ ನೆಮ್ಮದಿ ಪಟ್ಟಿತು. ನಕ್ಷತ್ರಗಳನೆಲ್ಲ ಜೋಡಿಸಿ ಗಂಟು ಮಾಡಿ ಎಸೆದರು. ಯಾವಾಗ ಏನೂ ಕಾಣದಂತಾಯಿತೋ ಶತ್ರು ತೋಪುಗಳಿಗೆ ಬತ್ತಿ ತೋರಿಸಿತು. ಭೂಮಿ ಕಂಪಿಸಿ ಪರ್ವತಗಳು ಅಲುಗಾಡಿದವು. ಆಕಾಶದ ಬದಿ ನಡುಗಿತು. ಬಾಣಗಳ ಆಕ್ರಮಣ ಹೇಗೆ ಎದ್ದೇಳಿತೆಂದರೆ ಶೇಷ ನಾಗರಹಾವಿನ ಸೈನ್ಯ ಪಾತಾಳದಿಂದ ಹೊರಬಂದಂತೆ ಕಾಣಿಸಿತು. ಯಾವಾಗ ಭೂಮಿ ನಿರ್ಜೀವಿಯಾಗಿ ಜನ್ಮ ಮಂಡಾಗಿ ಬಿದ್ದತೋ

ಧೂಳಿನಿಂದ ಆಗ ಜೀವತುಂಬಿ ಎದ್ದುನಿಂತಿತು. ಹೊಸ ಸ್ತ್ರೀಯು ಎದ್ದು ನಿಂತಿದ್ದನ್ನು ನೋಡಿ ಹೊಗೆ ಅದನ್ನು ಕರಿ ಸೀರೆ ಉಟ್ಟಿಸಿತು. ಗಾಳಿ ಕೂದಲನ್ನು ಅಲಂಕಾರ ಮಾಡುವವಳಾಗಿ ಬೆಂಕಿಯ ಮುಕುಟ ತೊಡಸಿತು. ಜರಿಯ ತಗಟನ್ನು ಹೊದಿಸಿ ಯಾವಾಗ ಬೆಂಕಿ ಆಕಾಶದ ಎತ್ತರ ಮುಟ್ಟಿದಾಗ ಶಿಖೆಗಳ ಮೇಲೆ ಹೊಗೆಯ ಹಗ್ಗದ ಏಣಿಯ ವಾಸನೆ ಹಬ್ಬಿತು. ಆಕಾಶದವರೆಗೆ ಹೊಗೆಯ ಏಣಿಗಳು ಕಟ್ಟಿಕೊಂಡು ನಕ್ಷತ್ರಗಳವರೆಗೆ ಏರಿ ಕಿಡಿಗಳು ತುಂಬಿದವು. ಹೊಗೆಯಿಂದ ಫಿರಂಗಿಗಳ ಧೂಳು ರಾತ್ರಿಯಾದಾಗ ಅದರಲ್ಲಿ ಗುಂಡುಗಳು ಕಿಡಿಗಳಂತೆ ಹಾರುತ್ತಿದ್ದವು.ಅಚಲ ಸೈನ್ಯದ ಈ ಬೆಟ್ಟದಲ್ಲಿ ಇವೆಲ್ಲ ಧಡಾ ಧಡ್ ಎಂದು ಯಾವಾಗ ಒಂದು ಕ್ಷಣದಲ್ಲಿ ಆಯಿತು, ಲೆಕ್ಕವಿಲ್ಲದಷ್ಟು ಬಾಣಗಳ ಪಕ್ಷಿಗಳು ಇದನ್ನು ಕೇಳಿದಾಗ ಅವುಗಳಿಗೆ ರೆಕ್ಕೆಹೊಡಿಯುವ ಶಕ್ತಿಸಹ ಇರಲಿಲ್ಲ. ಆಗ ಬಿಲ್ಲುಗಳ ಗೂಡುಗಳಿಂದ ವಿವಶವಾಗಿ ಬಾಣಗಳನ್ನು ಹೊಡೆದಾಗ ಪ್ರತಿಯೊಂದು ಗುಂಡಾಗಿ ಹಾರಿದವು. ಗಾಳಿಯ ಮೇಲಿರುವ ಮೈದಾನದಿಂದ ದಾಟಿದಾಗ ತೋಪಿನ ಗುಂಡುಗಳ ಕಾಳುಗಳೆಲ್ಲ ತಿಂದು ಮುಗಿಸಿದವು. ಸನಾಸನ್ ಎಂದು ಅಗಣಿತ ಶಿಲ್ಲೆಗಳು ಬಿಟ್ಟಾಗ ಅಗ್ನಿಯ ಹೂಬನ ಮುಳ್ಳುಗಾಡಾಯಿತು. ಆದರೆ ಆ ಕಡ್ಡಿಕಸ ತಲೆಕೆಳಗಾದಾಗ ಈ ಬೆಟ್ಟ ಸಮುದ್ರದ ಅಲೆಯ ಹಾಗೆ ಬಂದು ಬಿದ್ದಿತು. ಖಡ್ಗ ಅಲೆಯಂತೆ ಸೈನ್ಯದ ವೈಭವದ ಸಮುದ್ರಕ್ಕೆ ಹೊಡೆದು ಮಗ್ಗುಲು ಬದಲಾಯಿಸಿ ಆ ಬೆಟ್ಟವನ್ನು ಚಪ್ಪಟೆಯಂತೆ ಮಾಡಿತು. ಆನೆಗಳು ಹಾಗೂ ಒಂಟೆಗಳ ಮೇಲೆ ಸರ್‌ಪಂಜ ಹೊಡೆದು ಆ ಹುಲಿ ಶರ್ಝಗಳು ಆ ಸೈನ್ಯದ ಶಿಕಾರಿಮಾಡಿದವು. ಯಾವಾಗ ಸಿಡಿಮದ್ದಿನ ಗೋಡೆ ಸಡಿಲು ಬಿದ್ದಾಗ ಆಗಲೇ ಶತ್ರು ತಯಾರಾಗಿ ತನ್ನ ಕಾಲು ಇಳಿಸಿ, ಸಶಸ್ತ್ರಗಳನ್ನು ಮುಂದೆ ಮಾಡಿ, ಅದರ ಓರೆಯಲ್ಲಿ ತೊಡಗಿಸಿಕೊಂಡು, ಎದುರಾಗಿ ಎದೆ ಕುಟ್ಟಿ ನಿಂತಿದ್ದರು. ಭಲ್ಲೆಗಳ ಸಾಧನೆಗಳನ್ನು ದಾಟಿ ಅವರು ಹೀಗೆ ನಿಂತರೆಂದರೆ ಅವರ ಎದೆಯನ್ನು ತಾಗಿಹೋಗುವವರಿಗೆ ಅದು ರುಬ್ಬುಹೋಗುತ್ತಿತ್ತು. ಪ್ರತಿಯೊಬ್ಬ ಭಲ್ಲೆಧಾರಿ ಶಿಕಾರಿಯಂತೆ ನಿಂತಿರುವನು. ಇದನ್ನು ನೋಡಿ ಆತ್ಮದ ಪಕ್ಷಿ ಕೈ ಚಾಚಿ ಹುಡುಕುತ್ತಿದೆ. ಎರಡು ಕೈಗಳಿಂದ ಭಲ್ಲೆಗಳು ಎಲ್ಲಿ ಬಂದು ಬೀಳುತ್ತವೋ ಅವು ಸವಾರನನ್ನು ಕುದುರೆಗಳ ಸಮೇತ ಉಲ್ಟಾ ಮಾಡಿ ಬೀಸಾಡುತ್ತವೆ. ರಕ್ತದ ಕಟ್ಟೆಯನ್ನು ಚೆನ್ನಾಗಿ ಜಾಲಿಸಲು ಎಲ್ಲ ಶೂರರ ಢಾಲುಗಳನ್ನು ಚಲಿಸಲಾರಂಭಿಸಿದವು. ಎಷ್ಟು ನಯನಗಳ ಹಾವುಗಳಿದ್ದವೋ ಅವೆಲ್ಲ ಮೂಡಿದವು. ಅವುಗಳೆಲ್ಲ ಹೋದಾಗ ಆನೆಗಳು ನಾಶವಾದವು. ಬಾಯಿ ಹಾಕಿ ನೀರು ಕುಡಿದಾಗ ಅದು ವಿಷವಾಗಿತ್ತು. ಅದು ಆನೆಗಳ ಪ್ರಾಣಕ್ಕೆ ಹಾನಿಯುಂಟು ಮಾಡಿತು. ಸಾಮಿರಿಯ ಮೋಸ ಬಯಲು ಪಡೆಸಿ ಬಲು ದಾವೆಯಿಂದ ಸಾವಿರಾರು ಹಾವುಗಳನ್ನು ನಡೆಸಿದರು. ಇಸ್ಲಾಂರವರ ಮೇಲೆ ವಿಪತ್ತು ಬಂದು ಬಿದ್ದಾಗ ಪ್ರತಿಯೊಬ್ಬರ ಮೇಲೆ ಅಧಿಕ ಚಿಂತೆ ಬಂದು ನಿಂತಿತು. ಹೊಸದಾದ ಕಷ್ಟಕರ ಈ ಗಳಿಗೆಯಲ್ಲಿ ಶರ್ಝಾ ಖಾನನು ತನ್ನ ಖಡ್ಗವನ್ನು ಪ್ರವಾದಿ ಮೂಸಾರವರ ಕೋಲನ್ನು ಮಾಡಿಕೊಂಡನು. ಕೋಲನ್ನು ವೇಗವಾದ

ಹೆಬ್ಬಾವನ್ನಾಗಿ ಮಾಡಿ ಹಾವುಗಳ ಸೈನ್ಯವನ್ನು ಭಸ್ಮ ಮಾಡುತ್ತ ಹೋದನು. ಅನೇಕ ಶೂರರು ರಕ್ತದಲ್ಲಿ ಮುಳಿಗಿದರು. ಪ್ರತಿಯೊಬ್ಬ ಶೂರ ತೀವ್ರ ಮಂಗಳ ಗ್ರಹನಾಗಿ ಕಾಣಿಸಿಕೊಂಡನು. ಬರ್ಚಿಗಳ ಕಾರ್ಮೋಡಗಳು ಯಾವಾಗ ಬಿಚ್ಚಿಕೊಂಡವೋ ಆಗ ಮಳೆಧಾರೆಗಳು ಇಳಿಯುತ್ತಿದ್ದ ಹಾಗೆ ಅದರಲ್ಲಿ ಆ ದೃಶ್ಯದಲ್ಲಿ ಕಂಡು ಬಂದವು. ಯಾವ ಭೂಮಿ ಮೇಲೆ ಭಯಂಕರ ಬೆಂಕಿ ಸುರಿದಾಗ ಖಡ್ಗಗಳು ಹೊಡೆದು ಜಲದ ಹನಿಗಳು ಹಾರಿದವು. ಶರೀರ ಮತ್ತು ಆತ್ಮದ ಮೇಲೆ ಕೆಳಗೆ ಜಾರತೊಡಗಿದವು. ಗಾಳಿ, ಧೂಳು ಹಾಗೂ ಭೂಮಿ ಮೇಲೆಲ್ಲ ರಕ್ತದ ಕೆಸರಾಯಿತು. ಭೂಮಿ ಮೇಲೆ ಶರೀರಗಳು ದೃಢನಿಲುವಿನಿಂದ ನಡೆಯಲು ಸಾಧ್ಯವಿರಲಿಲ್ಲ ಹಾಗೂ ಗಾಳಿಯ ಮೇಲೆಯೂ ಸಹ ಗಟ್ಟಿಯಾಗಿ ಯಾವ ಉಸಿರು ನಡೆಯಲು ಸಾಧ್ಯವಿರಲಿಲ್ಲ. ಭಲ್ಲೆಗಳ ಎಳೆ ಎಳೆಯಲ್ಲಿ ರಕ್ತ ತುಂಬಿ ಅದು ಕಬ್ಬಿನ ಜಲ್ಲೆಗಳಂತೆ ರಸದಲ್ಲಿ ಕಾಣುವೆವು. ಪೀಡೆಯನ್ನು ಭಲ್ಲೆಗಳ ಭುಜಗಳ ಮೇಲೆ ಕಟ್ಟಿ ಓಟ ನಡೆಸಿ ಪ್ರತಿಯೊಂದು ಕ್ಷಣದಲ್ಲಿ ಅದನ್ನು ಮುರಿಯುತ್ತ ಹೊರಟರು. ಮಹಾ ಜ್ವಾಲೆಗಳನ್ನು ಸಾಕಷ್ಟು ಬಾಗಿಸಿ ಮುರಿದು ಎಸೆದರು. ಸಾಲುಗಳ ಮೇಲೆ ಸಾಲುಗಳನ್ನು ಕಿತ್ತು ಹಾಕಿ ರಾಶಿ ಮಾಡಿ ಎಸೆದರು. ಕುದುರೆಗಳಿಂದ ತುಳಿಯಲ್ಪಟ್ಟು ನಿಶ್ಶಕ್ತಿಯಾಗಿ ರಕ್ತದರಸ ನಿರ್ಮಲ ನೀರಾಯಿತು. ದೇವಪ್ರಿಯನ ಮುಂದೆ ಹೇಗೆ ಭೂತ ಸೋಲುತ್ತಾನೋ ಹಾಗೆ ಧರ್ಮನಿಷ್ಠರಮುಂದೆ ಅಳಿಕರ ಪುತ್ರರರು(ರಜಪೂತರು) ದಣಿದರು. ಗೆರೆ ಎಳೆಯಲು ಹೇಗೆ ಲೇಖನಿಯನ್ನು ಸುಲಿಯುವರೋ ಹಾಗೆ ಅವರ ಮೇಲೆ ಬರ್ಚಿಗಳನ್ನು ನುಚ್ಚುನೂರು ಮಾಡಿದರು. ಕೈ ತೂಗಿ ಮಿದುಳುಗಳ ಮೇಲೆ ಹಲ್ಲೆ ಮಾಡಿದಾಗ ಅದು ಬೆಣ್ಣೆಯಿಂದ ಕೂದಲು ಹೇಗೆ ತೆಗೆದು ಹಾಕಿದರೆ ಸ್ವಚ್ಛವಾಗುತ್ತದೆಯೋ ಹಾಗೆ ಸ್ವಚ್ಛವಾದವು. ಯಾರ ಮುಖದ ಮೇಲೆ ಉಲ್ಟಾ ಕೈ ಹೊಡೆಯುವರೋ, ಖಡ್ಗದ ಹಿಡಿಯಿಂದ ಬಲು ಸುಲಭವಾಗಿ ತಲೆ ಬುರುಡೆ ಹೊಡೆಯುವರು. ವಜ್ರಕ್ಕೆ ವಜ್ರನೇ ಮುರಿಯುವ ಕೆಲಸ ಹೇಗೆ ಮಾಡುತ್ತದೆಯೋ ಹಾಗೆ ಅವರು ಬಾಯಿ ಸೀಳಿ ಎಲ್ಲ ಹಲ್ಲುಗಳು ಕತ್ತರಿಸಿದರು. ಬಹಳ ಧೂಳು ಭೂಮಿಯಲ್ಲಿ ಸೇರಿತು. ಒಂದು ನೋಟದಲ್ಲಿ ಅನೇಕ ಅದೆಷ್ಟೊ ಭಾರವಾಯಿತು. ಆ ಮುಖ್ಯಸ್ಥರು ಸಹ ತಮ್ಮ ಜೀವದ ಆಸೆ ಬಿಟ್ಟರು. ಆಟ ಆಡಲು ನಿಂತರು. ತಮ್ಮ ತಲೆಗಳನ್ನು ಚೆಂಡುಗಳನ್ನಾಗಿ ಮಾಡಿ ಆಡಲು ನಿಂತರು. ಪ್ರತಿಸ್ಪರ್ಧಿಗಳ ಮೇಲೆ ಮೋಸದಿಂದ ಭೇಟಿಯಾದರು. ಇದೇ ಮಿಲನದಲ್ಲಿ ಹುಲು ಹಾಗೂ ಶರ್ಝುಗಳು ಸೇರಿದರು. ಆಟದಲ್ಲಿ ಸಂತುಷ್ಟರಾಗಿ ಕಾಲುಗಳನ್ನು ತೆಗೆದರು. ಸಹಸ್ರಾರು ಚೆಂಡುಗಳು ಮೇಲೆ ಹಾರಿದವು. ಶಸ್ತ್ರಗಳ ಹಿಡಿಗಳಲ್ಲಿ ಅವು ಬಂದು ಸೇರಿದವು. ತಪರಾಕಿ ಹೊಡೆದಾಗ ಸಾವಿರಾರು ಆತಂಕಗಳು ಎದ್ದವು. ಕೆಲವು ತಲೆಗಳು ಬಿದ್ದು ಚೆಂಡುಗಳಾಗಿ ದಾಟಿದವು. ಫಿರಂಗಿಗಳು ಹಾಗೂ ಶೂರರು ಪರಸ್ಪರ ಜೋಡಣೆಯಾಗಿ ಪ್ರತಿಯೊಂದು ಕಠಾರಿ ಜೊತೆ ಚಾಕುವಿನ ಸ್ಪರ್ಧೆ ನಡೆಯಿತು. ಪಟ ಪಟನೆ ಯಾವ ಕಡೆ ಕೈ ಏಳಿತೋ ಅದು ಎತ್ತಿಕೊಂಡು ಹೋಯಿತು. ಕಸಕಡ್ಡಿ ಸುತ್ತಿಸುಳಿದು ಮೋಡವಾಯಿತು. ದವಡೆ

ಹಲ್ಲಿನ ಜೊತೆ ಆನೆಯು ಸಹ ಮಾರಾಟವಾಗಬೇಕೆಂದ ಹಾಗೆ ಚೆನ್ನಿಗರು ಚಕ್ಕಂದ ಆಡುವರು. ಅಂತಃಕರಣದಲ್ಲಿ ಸಹಸ್ರಾರು ಕಠಾರಿಗಳು ಮುಳುಗುವವರ ಹಾಗೆ ಅಲ್ಲಲ್ಲಿ ಮುಳುಗುತ್ತಿವೆ. ಕೊರಳು ಪಟ್ಟಿಯವರಿಗೆ ಎಲ್ಲವೂ ಸರಿದು ಪ್ರತಿ ಕ್ಷಣ ಅವರಿಗೆ ಮುಳುಗಿಸಲ್ಪಟ್ಟಿತು. ಖಡ್ಗ ಗಾಳಿಪಟದಂತೆ ತನ್ನ ರೆಕ್ಕೆಯನ್ನು ವಿರಾಮದಿಂದ ಬಿಚ್ಚಿ ಪ್ರಾಣದ ಬೆಂಕಿ ಆರಿಸುತ್ತಿದೆ, ಪ್ರತಿ ಕ್ಷಣ ಜೀವನದ ದೀಪ ಆರಿಸುತ್ತಿದೆ. ಖಡ್ಗದ ಮೇಲೆ ಖಡ್ಗ ಬಿದ್ದು ಖನಾ ಖನ್ ಆಯಿತು. ಸಶಸ್ತ್ರ ಹಾಗೂ ಖಡ್ಗದಲ್ಲಿ ಛನಾ ಛನ್ ಆಯಿತು.ಹಾರುತ್ತಿರುವ ಹಲ್ಲೆ ತಾಗಿದರೆ ಪ್ರತಿಕ್ಷಣ ಸಶಸ್ತ್ರಗಳಿಂದ ಕಿಣಿಗಳು ಶರೀರದಿಂದ ರಕ್ತಹಾರುತ್ತಿವೆ ಎಂದು ಕಾಣಿಸಿತು. ರಕ್ತದ ಹನಿಮಳೆಯಿಂದ ಕಿಣಿಗಳ ಬಣ್ಣ ಬಿದ್ದು ಶಿಲಾರಾಳಲ್ಲೆವೂ ನಿಸ್ಸಂದೇಹವಾಗಿ ಕೆಂಪು ರತ್ನಗಳಾದವು. ನದಿಗಳಲ್ಲಿ ರಕ್ತದ ಕೆಸರು ತುಂಬಿ, ಸಶಸ್ತ್ರಗಳ ಬೆಟ್ಟಗಳು ವೇಗವಾಗಿ ತನ್ನ ಬದಿಗಳನ್ನು ಕತ್ತರಿಸಿಕೊಂಡು ಹರಿದುಹೋಯಿತು. ಖಡ್ಗಗಳಲ್ಲಿ ಇಂಗಿದ ರಕ್ತ ರಕ್ತಾಶ್ರು ತೊಟ್ಟು ಮುತ್ತು ಬಣ್ಣ ಹಿಡಿದು ನೀರು ನೀರು ರತ್ನದ ಬಣ್ಣವಾಯಿತು. ಗಾಳಿ ರಕ್ತದ ಹನಿಗಳಿಂದ ಸಂತುಷ್ಟವಾಯಿತು. ಭೂಮಿಯನ್ನು ನೋಡಿ ಕೆಂಪು ಹೂವು ನೋವು ಪಟ್ಟಿತು. ಆಕಾಶದ ಚೆಂಡು ನೀಲಿ ಬಣ್ಣವಿದ್ದಿದ್ದು ಎಲ್ಲವನ್ನು ರಕ್ತದ ಬಣ್ಣದಲ್ಲಿ ಬಣ್ಣಿಸಿ ರಕ್ತದ ನೋಟ ಹಿಡಿಯಿತು. ಹುಬ್ಬುಗಳು ಕೆಳಗೆ ಮೇಲೆ ಹತ್ತಿಳಿದು ನಿಂತು ಮೌನವಾದವು. ಆಕಾಶ ಮತ್ತು ಭೂಮಿಯು ಒಂದೇ ಬಣ್ಣವಾಯಿತು. ಭೂಮಿ ಮೇಲೆ ರಕ್ತದ ಹೆಪ್ಪುಕಟ್ಟಿದೆ ಅದರ ಮೇಲೆ ದಂಡುಗಳ ಅಲೆಗಳು ಸಾಗುತ್ತಿವೆ. ಹೆಪ್ಪುಕಟ್ಟಿರುವ ರಕ್ತದ ಮೇಲೆ ಕುದುರೆಗಳ ಬೆವರನ್ನು ಹಾಕಿ ರಕ್ತ ಗೊರಸಗಳಿಂದ ಸೋರಿಸಿ ಪಾತಾಳ ಕೆಂಪು ಮಾಡಿದರು. ಒಂದು ಕ್ಷಣ ಹತ್ಯಾಕಾಂಡವಾಯಿತು. ಗಾಯಗೊಂಡ ಅವರ ಸಾಲು ಸಾಲಗಳೇ ಉಧುರಿದವು. ಅವರ ಕುಟುಂಬದಿಂದ ಜಾಧವ ರಾವೊ ಬಂದು ನೋಡಿದಾಗ ಅದೆಷ್ಟೋ ಬೀಡುಗಳನ್ನು ಬಿಟ್ಟಿರುವುದನ್ನು ನೋಡಿದನು. ಅದರಲ್ಲಿ ದೊಡ್ಡ ದೊಡ್ಡ ರಾಯರು, ರಾಣಿಗಳು ಬಿದ್ದಿರುವರು. ಇನ್ನು ಅನೇಕ ಪರಿಚಯದವರೆಲ್ಲ ಬಿದ್ದಿರುವರು. ಮತ್ತೆ ರಣರಂಗದಲ್ಲಿ ಸ್ವತಃ ಕೇಸರ್ ಸಿಂಘ್ ಅಲ್ಲಿಗೆ ಬಂದು ಎಲ್ಲ ಹೆಸರಾಂತ ರಜಪೂತರೆಲ್ಲ ಹತ್ಯೆ ಆಗಿರುವುದನ್ನು ನೋಡಿದನು. ಅವರನ್ನು ನೋಡಿ ಪ್ರಾಣದ ಜೊತೆಯಲ್ಲಿ ಶರೀರವೂ ತುಂಡು ತುಂಡಾಗಿ ಸಂತೆಯಲ್ಲಿ ಕಣಗಳನ್ನು ಹಾಯುವವರೆಗೆ ಮೃತ್ಯು ದಣಿ ದಣಿದನು. ಇಡಿ ಜಗತ್ತಿನ ವಿಪತ್ತು ಇವರ ತಲೆ ಮೇಲೆ ಬಿತ್ತು. ಮೃತ್ಯು ಇಡೀ ಪ್ರಪಂಚ ಬಿಟ್ಟು ಅಲ್ಲೇ ನಿಂತುಕೊಂಡಿತು. ಶೂನ್ಯತೆ ಹಾಗೂ ಜಗತ್ತು ಪಿತೂರಿಯವರಿಂದ ಸ್ವಚ್ಛವಾಯಿತು. ಮಣ್ಣಿನ ಹುಟ್ಟು ಮಣ್ಣಾಗಿ ಹೋದವು. ಆನೆಗಳು ಬಂದು ಯುದ್ಧ ಮಾಡಿ ವಕ್ರಗಳಾದವು. ಗಾಢವಾದ ಗಾಯದಿಂದ ರಕ್ತದ ಹೊಲಿಗೆಗಳು ಆದವು. ಆನೆಯವರು ಉದರುವ ಪ್ರತಿ ಸೊಂಡಿಲಗಳನ್ನು ಹುಡುಕಾಡುತ್ತಿದ್ದಾರೆ. ಅದೋ ಅಲ್ಲಿ ಆ ಗುಹೆಯಲ್ಲಿ ಬಲು ರಕ್ತದಾಹಿ ಸಂಯಮದಿಂದ ಕುಳಿತಿರುವಳು, ಎಂದು ಆನೆಯವರು ಸೊಂಡಿಲನು ನೋಡಿದಾಗ ಹೇಳಿದರು.

ಆನೆಗಳ ಮೇಲೆ ಯುದ್ಧದ ಬಲು ಪ್ರಭಾವ ಬಿದ್ದಿತು. ರಕ್ತ ಲಡಿಗಳಲ್ಲಿ ಸುರಿದು ನದಿಗಳಲ್ಲಿ ಹರಿಯಿತು. ಅದರಲ್ಲಿ ಅಲೆಗಳ ರಾಶಿಗಳು ಅಲ್ಲಲ್ಲಿ ಕಂಡಬಂದವು. ಅವು ಬೆಟ್ಟಗಳಲ್ಲಿ ಊರುಗಳು ನೆಲಸಿದಂತೆ ಕಾಣುತ್ತಿದ್ದವು. ಸ್ವಾಭಾವಿಕವಾಗಿ ಸತ್ತ ಪ್ರಾಣಿ, ಶವ ತಿನ್ನುವರೆಲ್ಲ ಮನೆ ಮಾಡಿಕೊಂಡು ಒಳ್ಳೆ ವಸಂತ ಆಚರಿಸುತ್ತ ಏಕಾಂತದಲ್ಲಿ ಸುಖದಿಂದ ಇದ್ದರು. ಕವಚಗಳೆಲ್ಲ ಹೆಂಚಗಳಾದವು. ನರಿಗಳು ತನ್ನ ಮನೆಗೆ ಅವುಗಳನ್ನು ತಂದು ಹೆಂಚಿನ ಮೇಲೆ ಹೊದಿಸುವ ಮಣ್ಣಿನ ಓಡುಹಾಕಿದರು. ಒಂದೇ ಜಾಗದಲ್ಲಿ ಕರಡಿ ಮತ್ತು ತೋಳ ಸೇರಿ ಇದ್ದವು. ಒಂಟೆ ಶರೀರದಲ್ಲಿ ಬಂದು ಮಹನೀಯರು ಕುಳಿತರು. ಮನೆ ಹೊದೆಸಲು ಬಳಲಿದ ಕಿರುಬ ಊಟದ ಎಲೆ ಬದಲಾಗಿ ಕವಚ ತೆಗೆದುಕೊಂಡು ಹೋಯಿತು. ಪ್ರತಿ ಕ್ಷಣ ಗಂಭೀರವಾಗಿ ಹಳೇ ಗುಡಿಸಲನ್ನು ಮುರಿದು ಹೊಸದಾಗಿ ಕಟ್ಟಿದ. ಯಾವದೋ ಹುಲಿಗೆ ಆನೆ ಪಂಜರ ಸಿಕ್ಕಿತು. ಪ್ರತಿಯೊಂದು ಸೊಂಡಿಲ ಕರಿ ನಾಗರಹಾವಿಗೆ ಸಿಕ್ಕಿತು. ಸದಾ ವೃಕ್ಷದ ಮೇಲೆ ಇದ್ದು ಯಾವುದನ್ನು ಪಡೆಯದೇ ಇದ್ದವೋ ಮೋಸಕ್ಕೆ ಪ್ರತಿಯೊಂದು ಟೊಲ್ಲು ಗೂಡಾಯಿತು. ರಕ್ತ ಮತ್ತು ನೀರು ಕುಡಿದು ಕುಡಿದು ಬಾಗಿದವರೆಲ್ಲ ದೊಡ್ಡವರಾಗಿ ದಷ್ಟಪುಷ್ಟರಾಗಿ ಚಚೂಡಿಗಳ ಮನೆಗಳಂತೆ ಅವರ ಒರೆ ಕಾಣುತ್ತಿದ್ದವು. ಹದ್ದುಗಳು ವಧು. ಕಾಗೆಗಳು ವರರಾಗಿ ಹೊಸ ಬಟ್ಟೆ ತೊಟ್ಟು ತುಂಬ ಜಂಬಪಟ್ಟರು. ವನ್ಯ ಮೃಗಗಳು ಹಕ್ಕಿಗಳೆಲ್ಲ ಕೆಂಪಗಿನಲ್ಲಿ ಮುಳುಗಿ ಎಲ್ಲರ ಒಂದೇ ಬಣ್ಣವಾದ್ದರಿಂದ ಅವರಿಗೆ ಗುರುತು ಹಿಡಿಯುವುದೇ ಕಷ್ಟವಾಯಿತು. ಕಾಗೆ ಮರಿಯನ್ನು ಹದ್ದು ಮಡಿಲಲ್ಲಿ ತೆಗೆದುಕೊಂಡಿತು. ತೋಳ, ಕತ್ತೆ ಕಿರುಬನ ಜೊತೆ ಸ್ನೇಹ ಬೆಳಸಿಕೊಂಡಿತು. ನರಿಯಿಂದ ನರಿ ಮರೆಯಾಗಿ ಹೃದಯಗಳನ್ನು ಕಟ್ಟಿಕೊಂಡವು. ಕರಡಿಗಳ ಜೊತೆ ಜೊತೆಯಲ್ಲಿ ಹುಲಿಗಳು ಜೊತೆಯಾದವು. ಈ ರೀತಿಯಾಗಿ ಬಲು ಬೇಗನೇ ಒಂದು ಪ್ರಪಂಚವೇ ನೆಲಸಿದ್ದನ್ನು ನೋಡಿ ಜೊತೆಯಲ್ಲಿ ಇದ್ದಿದ್ದ ದೆಹಲಿಯ ಖಡ್ಗದ ಹೃದಯದ ನೀರು ಇಳಿದು ಹೋಯಿತು. ಈ ತಮಾಷೆ ಮುಗಿಯುವ ಮಂಚೆಯೇ ಹತ್ಯಾಕಾಂಡ ಮಾಡಿ ಖೈದಿಗಳನ್ನು ಎಳೆದುಕೊಂಡು ಹೋದರು. ಶಾಹರ ಬೆಂಬಲ ಕೆಲಸಕ್ಕೆ ಬಂತು. ಧಣಿಯರು ಎಲ್ಲವೂ ಚೆನ್ನಾಗಿ ಕೆಲಸ ನಿಭಾಯಿಸಿದರು. ಯಾವ ಕೆಲಸ ಭ್ರಮೆಯಲ್ಲೂ ಇರಲಿಲ್ಲವೋ ಆ ಕೆಲಸ ಮಾಡಿದರು. ಎಂತಹ ಕೆಲಸ ಹೇಗೆ ಮಾಡಬೇಕೆಂದು ತಿಳಿಯಲಾಗದೆ ಕೆಲಸ ಹಾಗೂ ಚಿಂತೆಯಲ್ಲೂ ಅಂತಹ ಕೆಲಸಗಳನ್ನು ಮಾಡಿದರು. ದಕ್ಷಿಣದ ಖಡ್ಗದ ದರ್ಪ ಪ್ರಪಂಚದ ಮೇಲೆ ಕೂಡಿಸಿದರು. ದೆಹಲಿ ದೇಶದಲ್ಲಿ ಶಾಹನ ತನ್ನ ಗರ್ಜನೆ ಇಟ್ಟನು. ತನ್ನ ಹೆಸರು ಪ್ರಪಂಚದಲ್ಲಿ ಸದ್ಯೆವಾಗಿ ಗಟ್ಟಿ ಮಾಡಿಕೊಂಡ. ಖಡ್ಗದ ಮಹನೀಯತೆಯನ್ನು ಚರಮ ಸೀಮೆ ಮುಟ್ಟಿಸಿದ. ದೊಡ್ಡ ಮಹನೀಯರು ಮೇಧಾವಿಗಳು ಹೇಳಿರುವ ಹಾಗೆ ಅದಾಗ್ಯೂ ಅಂಕುರದ ಮೇಲೆ ಒಳ್ಳೆಯದು ಕೆಟ್ಟದ್ದೆಲ್ಲ ಸಾಗಲೇ ಬೇಕು. ಆದರೇ ಪುಣ್ಯವಂತನೇ ಬದುಕುವನು ಹಾಗೂ ನಿಧನಹೊಂದಿದ ನಂತರವೂ ಬಲು ಮರ್ಯಾದೆಯಿಂದ ಅವನನ್ನು

ಜ್ಞಾಪಿಸಿಕೊಳ್ಳಲಾಗುತ್ತದೆ. ಹೆಸರು ಉಳಿದುಕೊಳ್ಳವುದು ಬಹಳ ದೊಡ್ಡ ಮಾತು, ಏಕೆಂದರೆ ಈ ಶರೀರವಂತೂ ನಾಶವಾಗುವುದೇ, ಜನನದ ಜೊತೆಯಲ್ಲಿ ಇದನ್ನು ತಂದಿರುವನು ನಿಜಾಂಶವೆಂದರೆ ಮೃತ್ಯು ಇದನ್ನು ತೆಗೆದುಕೊಂಡು ಹೋಗುತ್ತದೆ. ಬಲು ವಿಚಿತ್ರವಾದ ಚಂಚಲ ಕಲ್ಲುಹೃದಯದವ ಸ್ತ್ರೀ ಮೃತ್ಯು ನೆಪದ ಪರದೆಯಲ್ಲಿ ಅಡಗಿಕೊಂಡು ಕುಳಿತಿರುವಳು. ತನ್ನ ಸಮಯ ಬಂದಾಗ ಯಾರನ್ನು ಭೇಟಿ ಮಾಡಲು ಬರಬೇಕೋ ಬಂದು ತನ್ನ ಕೆಲಸ ಮುಗಿಸಿಕೊಂಡು ಮಾತು ಬೇರೆಯವರ ಮೇಲೆ ಹಾಕುತ್ತಾಳೆ. ಓ ಪುಣ್ಯವಂತನೇ ಪ್ರಾಣಕ್ಕಿಂತ ದೊಡ್ಡದು ಸಂಪತ್ತಲ್ಲ, ಇದರಿಂದ ನೀನು ಎರಡು ಜಗತ್ತಿನ ಒಳ್ಳೆತನ ಖರೀದಿಸಲು ಸಾಧ್ಯವಿಲ್ಲ. (೬೧೯೫–೬೪೨೬)

ಅಯ್ಯೋ! ಈ ಕಥೆ ಹೀಗಿದೆ, ಅಂದರೆ ಶರ್ಜ್ಹನದ ಜೀವನದ ಬದುಕು ಹೀಗೆ ಇಲ್ಲಿಂದ ಅವನು ಮೃತ್ಯುವಿನ ಕೈ ಹಿಡಿದು ಸ್ವರ್ಗಕ್ಕೆ ಹೋದ

ಗಂಡಸಾದವನು ಹೀಗೆ ತನ್ನ ಜೀವನ ಸಾರ್ಥಕ ಮಾಡಿದ ಅಂದರೆ ಅವನ ಜೀವನ ಸಾಹೇಬರ ಕೆಲಸದಲ್ಲಿ ಖರ್ಚಾಯಿತು. ಯಾರ ಒಡೆಯ ಸಂತುಷ್ಟನಾಗುತ್ತಾನೋ ಅವನಿಂದ ಅಲ್ಲಾಹನು ಸಹ ಸಂತುಷ್ಟನಾಗುತ್ತಾನೆ. ಅವನಿಗೆ ಇಲ್ಲಿಯೂ ಸಹ ಮರ್ಯಾದೆ ಸಿಗುತ್ತದೆ. ಮತ್ತೆ ಅಲ್ಲೂ ಸಹ ನಿತ್ಯವಿರುವ ಮಹನೀತೆಯೂ ಸಹ ಸಿಗುತ್ತದೆ. ಆತ್ಮ ಸಂತುಷ್ಟದ ಕಾರಣದಿಂದ ಅವನ ಕುಟುಂಬದ ಮೌಲ್ಯ ಹೆಚ್ಚುತ್ತದೆ. ಭಲೆರೇ! ಮಹಿಮಾವಂತ(ಅಲ್ಲಾಃಹ)ನ ಮಹಿಮೆ ಅಸದೃಶ್ಯ ಅವನ ಕೆಲಸಗಳ ಕಡೆ ದೃಷ್ಟಿ ಸಹ ಹೋಗುವುದಿಲ್ಲ. ಯಾವಾಗ ಆ ಸೃಷ್ಟಿಕರ್ತ ಜೀವರಾಶಿಯನ್ನು ಹುಟ್ಟಿಸಲು ಭೂಮಿ ಮೇಲೆ ಆಕಾಶದ ಒಳ್ಳೆ ಕೋಟೆ ಕಟ್ಟಿದ. ಒಬ್ಬೊಬ್ಬ ಶೂರ ರುಸ್ತುಂನಂತವನು ಸೃಷ್ಟಿಯಾದನೆಂದರೆ ಅವರ ಬಲದ ಮುಂದೆ ಗಂಡು ಹುಲಿಯೂ ಸಹ ಬಾಗುತ್ತಿದ್ದವು. ರಣರಂಗದಲ್ಲಿ ಗರ್ಜಿಸುವ ಪ್ರತಿಯೊಬ್ಬ ಜವಾನರ ಕಾರಣ ಭೂಮಿ ಮತ್ತು ಆಕಾಶ ನಡುಗುತ್ತಿದ್ದವು. ಕರುಣೆಯ ಅಸ್ತಿತ್ವ ಶರ್ಜ್ಹ ಖಾನನ ಆಸ್ತಿತ್ವ ಹುಟ್ಟಿಸಿತು. ಬಲು ಚಿಕ್ಕ ವಯಸ್ಸಲ್ಲಿ ಮಹನೀಯತೆ ಸಹ ಸ್ಥಾಪಿಸಿಕೊಂಡನು ಹಾಗೂ ಸದೈವ ಉನ್ನತಿ ಪಡೆಯುತ್ತಲೇ ಇದ್ದ. ಅಲ್ಲಾಹನ ಕರ್ತವ್ಯದ ದಾಸ್ಯ ಇನ್ನು ಆಗಿರಲಿಲ್ಲ ಆದರೂ ತನ್ನ ಶೌರ್ಯದಿಂದ ಧೈರ್ಯದ ಮೇಲೆ ಸಾಲವನ್ನು ಮಾಡಿಟ್ಟ. ಹುಟ್ಟಿದ್ದಾಗಲೆ ಶರ್ಜ್ಹನ ಉದಾಹರಣೆ ಹಿಡಿದ. ದೃಷ್ಟಿಯಲ್ಲಿ ಆನೆ ಬಿಟ್ಟರೆ ಬೇರೆಯಾವ ಭಾವನೆ ಇಟ್ಟಕೊಳ್ಳಲಿಲ್ಲ. ಕೋಲಿನ ಜಾಗದಲ್ಲಿ ಫಿರಂಗಿಯನ್ನು ತೆಗೆದುಕೊಂಡ. ಮೇಳದ ಜಾಗದಲ್ಲಿ ಒಬ್ಬನೆ ಹೊತು ಹೋಗಿ ಕಲಹ ಮಾಡುತ್ತಿದ್ದ. ಕುದುರೆ ಮೇಲೆ ಏರಿ ಸುತ್ತುವುದೆ ಮನೆಯಲ್ಲಿ ಅವನ ಆಟವಾಗಿತ್ತು. ಯುದ್ಧ ಬಿಟ್ಟರೆ ಬೇರೆ ಯಾವ ತಮಾಶೆಯೂ ಸಹ ನೋಡುತ್ತಿರಲಿಲ್ಲ. ತನ್ನ ಹೆಸರಿನ ಎತ್ತರ ಏರಿಸುತ್ತಲೇ ಹೋದಾಗ ಯುಗದ ಮೇಲೆ ಅವನ ನೆರಳು ಬಲು ದೊಡ್ಡಾಗುತ್ತ ಹೋಯಿತು. ವರಿಷ್ಠನ ಮೇಲೆ ತನ್ನ ಹಿಡಿತ ಸಾಧಿಸಿದಂತೆ ಮಾಡಿದ. ಪ್ರತಿಯೊಂದು ಸಾಲದಲ್ಲಿ ತನ್ನದೇ ಶಕ್ತಿಯನ್ನು ಹೆಚ್ಚಿಸಿದ. ಯಾವುದಾದರು

ದೊಡ್ಡ ಕೆಲಸದಲ್ಲಿ ತನ್ನ ಹೆಜ್ಜೆ ಇಟ್ಟರೆ ಅಲ್ಲಿ ತನ್ನ ಹೆಸರಿನ ಧ್ವಜವನ್ನು ಎತ್ತಿ ಹಿಡಿದ. ಯಾವಾಗ ಆ ಶೂರನ ಅದೃಷ್ಟ ಹಾಜರಾಯಿತೋ ಆಗ ಕಣ ಕಣವೂ ಸಹ ಮೂಡುತ್ತಾ ಹೋಯಿತು. ಆಗ ಶಾಹ ಫಾಝಿ ಒಳ್ಳೆಯವರನ್ನು ಮೆಚ್ಚುವನು. ಅವನ ಮೌಲ್ಯ ತನ್ನ ದೃಷ್ಟಿಯಲ್ಲಿ ಹೆಚ್ಚಿಸಿಕೊಂಡನು. ತನ್ನ ಆಶ್ರಯದಲ್ಲಿ ತೆಗೆದುಕೊಂಡು ಒಂದು ಕ್ಷಣದಲ್ಲಿ ಕಣವನ್ನು ದೊಡ್ಡ ಸೂರ್ಯಮಾಡಿದ. ಶಾಹರಿಂದ ಗೌರವ ಪಡೆಯುತ್ತಲೇ ಇದ್ದು ಸೂರ್ಯನಂತೆ ನಾಲ್ಕು ದಿಕ್ಕಿನಲ್ಲಿ ಪ್ರಸಿದ್ಧನಾದ. ಶಾಹನ ಸಹಾಯಕ್ಕೆ ಇನ್ನಷ್ಟು ಬಲ ಪಡಿಸಲು ಅನೇಕ ಯುದ್ಧಗಳಲ್ಲಿ ಭಾಗವಹಿಸಿದ. ನಿತ್ಯ ಶರ್ಝಿಯ ಶಿಕಾರಿ ಮಾಡಿದ ಹಾಗೂ ರಣರಂಗದಲ್ಲಿ ದೇಶಕ್ಕಾಗಿ ಬಹಳಷ್ಟು ಗೆದ್ದನು. ಕೊನೆಗೆ ನೇರವಾಗಿ ಅತಿ ದೊಡ್ಡ ಶರ್ಝಾ ಆದಾಗ ಅವನ ಹೆದರಿಕೆಯಿಂದ ದೆಹಲಿ ನಡುಗಿಹೋಯಿತು. ಯಾವಾಗ ಶರ್ಝಿನ ಕೆಲಸ ಉತ್ತಮತೆಗೆ ತಲುಪಿದಾಗ ಅವನ ಕೆಲಸದ ಬಗ್ಗೆ ಯಾರೂ ಉಸುರುತ್ತಿರಲಿಲ್ಲ. ಪರಿಪೂರ್ಣತೆಯನ್ನು ಅಂತ್ಯಕ್ಕೆ ತೆಗೆದುಕೊಂಡು ಹೋಗಬೇಕೆಂದಿದ್ದ, ಪರಲೋಕದ ಗೌರವ ಸಹ ಪಡೆಯಬೇಕೆಂದಿದ್ದ. ಅವನು ಬಯಸಿದಂತೆಯೇ ಇಚ್ಛಾನುಸಾರದ ನವೀನ ಅವನಿಗೆ ಪ್ರತಿಯೊಂದು ಗಂಡು ಮಕ್ಕಳು ಹುಟ್ಟುತ್ತಾ ಹೋಯಿತು. ಎಲ್ಲಿಯವರೆಗೆ ಜೀವಂತವಾಗಿದ್ದನೋ ತನ್ನ ಗೌರವ ಕಾಪಾಡಿಕೊಂಡ. ಏಕೆಂದರೆ ಅವನ ನಂತರ ಅವನ ಸುಪುತ್ರರರ ಒಳ್ಳೆ ಹೆಸರಿರಲಿ. ಅವನ ವ್ಯಕ್ತಿತ್ವದಲ್ಲಿ ಸದ್ವಿಚಾರವಿತ್ತು. ಇಬ್ಬರು ಈ ಮಹನೀಯರಿಗೆ ಕೈಯಲ್ಲಿ ತೆಗೆದುಕೊಂಡ. ಎರಡು ಶರ್ಝಿಗಳನ್ನು ತನ್ನ ಉತ್ತರಾಧಿಕಾರಿ ಇಟ್ಟು ಒಳ್ಳೆ ಹಿರಿಮೆಯಿಂದ ಹುತಾತ್ಮದ ಲೋಟ ಕುಡಿದ. ಅಂದರೆ ಯಾವಾಗ ಶಾಹನ ಸೈನ್ಯ ಶತ್ರುಗಳನ್ನು ಓಡಿಸಲು ಸರಹದ್ದಿನಲ್ಲಿ ಸಂಪೂರ್ಣವಾಗಿ ಇಳಿದಿತ್ತು. ದೇವನ ವಿಧಿ; ಒಂದುದಿನ ಶತ್ರುಗಳ ಮೇಲೆ ಬಲು ಶೀವಿಯಿಂದ ಅಲಿರವರ ದಂಡನಾಯಕರ ಗುಂಪುಗಳು ಹೊರಟಿದ್ದವು. ಮುಘಲರಿಗೂ ಸಹ ಈ ಸುದ್ದಿ ತಿಳಿದಿತ್ತು. ಅವನೂ ಸಹ ಸೈನ್ಯ ಸಿದ್ಧಮಾಡಿಕೊಂಡು ಬಂದನು. ಎಲ್ಲಿಯವರೆಗೂ ಸೈನ್ಯ ಕಾಣಲಿಲ್ಲವೋ ಅದಕ್ಕೆ ಮುನ್ನ ದಾರಿಯ ಮೇಲೆ ಬಲು ಧೂಳು ಕಾಣಿಸಿಕೊಂಡಿತು. ಆ ಧೂಳು ಗಾಳಿಯ ಸುಳಿಯಲ್ಲಿ ಹೋಗಿ ಭೂಮಿಯ ಹೊಟ್ಟೆ ಆಕಾಶಬುಟ್ಟಿಯಂತೆ ಊದಿಕೊಂಡಿತು.ಆ ಧೂಳನ್ನು ಅಡಿಯಿಂದ ಮುಡಿಯವರೆಗೆ ನೋಡಿದಾಗ ದಂಡಿನ ತಲೆ ಕಾಣಿಸಿಕೊಂಡಿತು. ಹೇಳುವುದಾದರೆ ಭೂಮಿ ಬಸರಾದಂತಿದೆ. ದಂಡಿನ ಮಗು ಹೆರಲು ಸಿದ್ದನಾಗಿ ಎರಡು ದೇಶಗಳ ಹೆಸರಾಂತ ಶೂರ ರಣಧೀರರು ಅಲ್ಲೇ ನಿಂತರು. ಎಷ್ಟು ಜನ ಹೊಸ ಹಾಗೂ ಹಳೆ ಮಂತ್ರಿಗಳಿದ್ದರೋ ಅವರೆಲ್ಲರನ್ನು ಎರಡು ಭಾಗಗಳಲ್ಲಿ ಹಂಚಲಾಯಿತು. ಅನೇಕ ದೊಡ್ಡ ಶೂರ ಮಂತ್ರಿಗಳು ಒಂದು ಗೋಲದಂತೆ ಬಹ್ಲುಲೊಡನೆ ಹೊರಟರು. ಎರಡನೆಯ ಸೈನ್ಯ ರಚಿಸಿದಾಗ ಅದರಲ್ಲಿ ವಿಶೇಷವಾಗಿ ಖವಾಸ್‌ಖಾನ್ ಮತ್ತು ಶರ್ಝಖಾನ್ ಅವರೊಡನೆ ಹೊರಟರು. ಎಲಿಯ್ಯುವರೆಗೂ ಬಹ್ಲುಲ್ ಯುದ್ಧದ ವ್ಯವಸ್ಥೆ ಮಾಡುವವರೆಗೆ ಶತ್ರು ಸೈನ್ಯ ಅವನ ಮೇಲೆ ಆಕ್ರಮಿಸಿತು. ಎರಡೂ ಕಡೆ

ಘೋರ ಯುದ್ಧ ಪ್ರಾರಂಭವಾಯಿತು. ಅದರಿಂದಾಗಿ ಭೂಮಿ ಮತ್ತು ಆಕಾಶದ ಬಣ್ಣವೇ ಬದಲಾಯಿತು. ಎರಡು ಸೈನ್ಯಗಳು ಸಮತೋಲನೆಯಿಂದ ಯುದ್ಧ ಮಾಡುತ್ತಿದ್ದರು. ಒಂದು ಸೈನ್ಯ ಇನ್ನೊಂದು ಸೈನ್ಯದ ಮೇಲೆ ಬಿದ್ದಿತು.ಎರಡು ಸೈನ್ಯ ಸೇರಿ ಜಗವನ್ನು ಉದ್ವೇಗಿಸಿತು. ಚಕಮಕದಿಂದ ಇಬ್ಬರು ಹುರಿದುಹೋದರು. ಬಿಲ್ಲುಗಳ ಕಟ್ಟುವಿಕೆಯನ್ನು ವಧುವರರು ಬಿಟ್ಟಾಗ ಕಣ್ಣುಗಳ ಮೋರಿಗಳನ್ನು ತಿರುಗಿಸಿ ಬಿಟ್ಟಾಗ ಅವು ಚುರುಕಾದವು. ಬಾಣಗಳನ್ನು ಹೇಗೆ ಸೇರಿಸದರೆಂದರೆ ಅವುಬಾಯಿ ಚಾಚುವಂತೆ ಕಾಣತೊಡಗಿದವು. ಬೆರಳುಗಳ ಜಾಗದಲ್ಲಿ ಬಿಲ್ಲು ತಂತಿ ಅಡ್ಡಬಂದಿತು. ಹಗುರವಾಗಿ ಹೀಗೆ ನೇತಾಡುತ್ತ ರೆಕ್ಕೆ ಬಡಿದು ಅಧಿಕ ವೇಗವಾಗಿ ಹೊರಟಿದ್ದವು. ಬಾಣಗಳು ಸಾಕಿದ ಹಕ್ಕಿಯಂತೆ ತೆರೆ ತೆಗೆದುಕೊಂಡು ಪರಸ್ಪರ ಮೊನೆಗಳಿಂದ ಸಂತೋಷದಿಂದ ಆಟ ಆಡಿದರು. ಬರ್ಚಿಗಳೊಡನೆ ಭಲ್ಲೆಗಳ ಮದುವೆ ಆಗಲಾರಂಭಿಸಿತು. ವಿವಾಹಧನದಲ್ಲಿ ರತ್ನಗಳ ರಾಶಿಗಳನ್ನು ನಗದಾಗಿ ಕಟ್ಟಿದರು. ರಣಧೀರರ ತಲೆಗಳು ಸಶಸ್ತ್ರಗಳ ನೆರಳಾಯಿತು. ಶತ್ರುವಿನ ಕಾಲು ಜಾರಲಾರಂಭಿಸಿದವು. ಬಾಣಗಳು ಅಸ್ತಿತ್ವಗಳ ಮೇಲೆ ರೋಮ ರೋಮಕ್ಕು ತಗುಲಿ ಶತ್ರುಗೆ ಮುಂದೆ ತಂದು ನಿಲ್ಲಿಸಿದವು. ಮುಘಲ್ ಅಧಿಕ ತಿವಿತದಿಂದ ಸೋಲನ್ನು ಒಪ್ಪಿ ಮನಸ್ಸಿನಲ್ಲೇ ಜೀವದಾನ ಕೇಳಬೇಕೆಂದುಕೊಂಡನು. ಆದರೆ ಶರ್ಝು ಖಾನ್ ಮತ್ತು ಖವಾಸ್ ಖಾನ್ ವಿಶೇಷವಾಗಿ ವೈಶಿಷ್ಟ್ಯತೆ ಮೇಲೆ ನಿಗಾವಹಿಸಿದರು. ಮಿನುಗುವ ದೃಷ್ಟಿ ಒಬ್ಬರ ಮೇಲೆ ಒಬ್ಬನೂ ಕಟ್ಟಿ ಇಬ್ಬರು ಎದುರುಬದುರಾಗಿ ಉತ್ಸಾಹದಲ್ಲಿ ನಿಂತರು. ಇಬ್ಬರು ಸೇರಿರುವವರ ಮಧ್ಯೆ ಕೆಲಸಬಂದು ಬಿತ್ತು, ಇಬ್ಬರೂ ಅನುಭವಿಯರು ಮುಘಲರು ಅವರು ಮುಂದೆ ಬಂದು ಕೈ ಹೊಡೆಯಲಿ, ಆದರೆ ಇವರು ಮುಘಲರು ಸ್ವತಃ ಮುಂದೆ ಬಂದು ಆಕ್ರಮಿಸಲೆಂದು ಹೇಳಿದರು. ಇವರು ಸ್ವತಃ ಮುಘಲ್ ತಾನು ತಾನೇ ಬರಲಿ ಬಂದರೆ ಅವರನ್ನು ಕುಟ್ಟಿ ಹಾಕಬೇಕಾಗಿದೆ, ಇದರಲ್ಲೇ ಹಗಲು ಕಳೆಯಿತು. ನಿರೀಕ್ಷೆಯಲ್ಲೇ ಸಂಜೆ ಆಯಿತು. ಇಂದು ವ್ಯರ್ಥದಲ್ಲಿ ರಾತ್ರಿ ಆಗಲು ಬಂತು ಎಂದು ಹುಲಿ ಶರ್ಝಾನು ತನ್ನ ಮಾತು ಹೇಳಿದ. ಮುಘಲರಂತೂ ತನ್ನ ತಾನೆ ಅಲ್ಲಾಡುವವನಲ್ಲ. ನಮ್ಮ ಮೇಲೆ ಯುದ್ಧ ಮಾಡಲು ಬರುವವರಲ್ಲ. ಈಗ ನಾವೇ ಹೋಗಬೇಕಾಗಿದೆ. ಕೆಣಕಿ ಕಷ್ಟಕೊಟ್ಟು ಅವರಿಗೆ ಯುದ್ಧ ಮಾಡಲು ತರಬೇಕಾಗುತ್ತದೆ. ಬೇಲಿಯಲ್ಲಿ ಕರಿ ನಾಗರ ಹಾವು ಕೊಂಡಲ ಹೊಡೆದು ಕೂತಿದೆ ಅದಿಕ್ಕೆ ಹುರಿದುಂಬಿಸಿ ಮೈದಾನದಲ್ಲಿ ತರಬೇಕಾಗಿದೆ. ಇಬ್ಬರು ಹೀಗೆ ಮಾತನಾಡಿಕೊಂಡು ಹೋದರು. ಮುಂದೆ ವೇಗವಾಗಿ ಸಾಗಿದರು. ಅವರಿಗೆ ಅವಮಾನ ಸಹ ಮಾಡಿದರು. ಅವರ ಕಣ್ಣಿಗೆ ತನ್ನ ಕಾಲಿನ ಧೂಳು ಶತ್ರುವಿನ ಕಣ್ಣಲ್ಲಿ ಎರಚಿದರು. ಆದರೂ ಸಹ ಅವರು ತಮ್ಮ ಜಾಗದಿಂದ ಅಲುಗಾಡಲಿಲ್ಲ. ಏನೆಲ್ಲ ಮಾಡಿದರೂ ಅವರು ಕಲ್ಲಾಗಿರಬೇಕು. ಎಷ್ಟು ಹೊಡೆದರೂ ಸಹ ಹೊಡೆಯುತ್ತಿಲ್ಲ. ಶರ್ಝಾ ಖಾನ್ ವಿವಶನಾಗಿ ‘ಈಗ ನಾವು ನಮ್ಮ ಡೇರಿಗಳಿಗೆ ಹಿಂದುರಿಗಬೇಕಾಗಿದೆ. ಯುದ್ಧ ಮಾಡದೇ ಅವರು ಸಾಕಷ್ಟು ಸಂಯಮಿಸುತ್ತಿದ್ದಾರೆ. ಇದಂತು ಗಲೀಜು

ಇದು ಮುಟ್ಟಾಗಿರುವವಳ ಜೊತೆಯಲ್ಲಿದ್ದ ಹಾಗೆ. ಇಬ್ಬರು ಸೇರಿ ಇದೇ ತೀರ್ಮಾನ ತೆಗೆದುಕೊಂಡು ತನ್ನ ತನ್ನ ಸೈನ್ಯ ತೆಗೆದುಕೊಂಡು ಹೊರಟರು. ಮನಸ್ಸಿಂದ ಯುದ್ಧದ ಅನುಮಾನ ತೊಳೆದು ಹಾಕಿದರು.ಎದ್ದು ಮೈ ಮುರಿದು ಉದ್ದವಾಗಿ ಹೊರಟರು. ಸ್ವಚ್ಛವಾದ ದಾರಿಯಲ್ಲಿ ಪ್ರತಿಯೊಂದು ವಸ್ತು ಕಾಣುಸಿತ್ತಿತ್ತು. ಇಳಿಜಾರು ಬಂದರೆ ಅಡಗಿ ಹೋಗುತ್ತಿದ್ದವು. ಎದುರಾಳಿಯ ಸೈನ್ಯ ಅನೇಕ ತುಕಡಿಗಳಲ್ಲಿ ಹಂಚಿಹೋಗಿ ಓಡುತ್ತಾ ಬರುತ್ತಿತ್ತು. ಯುದ್ಧ ಮಾಡಲು ಸಾಮರ್ಥ್ಯ ಹೊಂದದೇ ಇರುವ ನರಿಗಳು, ಇವರು ಸಿಂಹರು ಅವು ನರಿಗಳಾಗಿದವು. ಯಾವುದನ್ನೂ ಯೋಚಿಸದೇ ಶರ್ಝಾ ಖಾನ್ ತಮ್ಮ ಚಿಂತೆಯಲ್ಲೇ ಮುಳುಗಿ ಸಾಗುತ್ತಿದ್ದ. ಪ್ರತಿಯೊಂದು ಯುಗದಲ್ಲೂ ಉತ್ತಮರೂ ಸಾಮಾನ್ಯರೂ ಅಯ್ಯೋ ಅಂದಿದ್ದಾರೆ. ಏಕೆಂದರೆ ಮೃತ್ಯುವಿನ ಮದ್ಯ ಕುಡಿಸುವವನ ಬಟ್ಟಲು ಯಾರಿಗೂ ಕಾಣಿಸುವುದಿಲ್ಲ. ಮೃತ್ಯುವಿನ ಸವಾರ ಗಾಢವಾದ ಗಾಯ ಮಾಡುವವನು. ಆದರೆ ಖಡ್ಗ ಕಾಣುವುದಿಲ್ಲ. ಮೃತ್ಯುವಿನ ಸೈನ್ಯ ಕಾಣಿಸುವುದಿಲ್ಲ. ಪ್ರತಿಯೊಂದು ಕ್ಷಣವೂ ಒಂದು ರಾತ್ರಿ ಇದ್ದಂತೆ. ಮೃತ್ಯು ಯಾವಾಗ ಪ್ರಾಣದ ಮೇಲೆ ಗುಂಡು ಹಾರಿಸುತ್ತದೆಯೋ ಸಿಡಿಮದ್ದು ಹಾರುವುದಿಲ್ಲ. ಬೇಟೆಗಾರನೂ ಕಾಣುವುದಿಲ್ಲ. ಮೃತ್ಯವಿನ ಕೊರಳಿನ ಹಗ್ಗ ರುಸ್ತುಂಗೂ ಸಹ ಬಿಡಲಿಲ್ಲ ಹಾಗೂ ಯಾವ ದೆವ್ವವೂ ಈ ಕಟ್ಟನ್ನು ಮುರಿದು ಓಡಿಹೋಗಲು ಸಾಧ್ಯವಾಗಲಿಲ್ಲ. ಮೃತ್ಯುವಿನ ಕೆಲಸ ಹೇಗೆಂದರೆ ಯಾರಿಗೂ ಸುದ್ದಿ ತಿಳಿಯುವುದಿಲ್ಲ. ಸ್ನೇಹಿತನೇ ಆಗಲಿ ಶತ್ರುವೆಯಾಗಿರಲಿ ಅವರ ದೃಷ್ಟಿ ಇಲ್ಲಿಯವರೆಗೂ ಇರುತ್ತದೆ. ಅಯ್ಯೋ! ದೇವರಿಗಾಗಿ ಪ್ರಸಿದ್ಧರೆಲ್ಲರೂ ಹೊರಟು ಹೋಗುತಿದ್ದಾರೆ. ಅನೇಕ ಸವಾರರೆಲ್ಲರೂ ಅಪರಿಚಿತರಾಗಿ ಕಾಣಿಸಿದರು. ಒಂದೇ ದಿಕ್ಕಲ್ಲಿ ನಿಂತಿದ್ದರು. ದಿಕ್ಕಲ್ಲಿ ಸ್ಥಿರತೆ ಇರಲಿಲ್ಲ. ದೃಷ್ಟಿ ತಮ್ಮ ಬೆನ್ನಿನ ಮೇಲಿಟ್ಟಿದ್ದರು. ಶರ್ಝಾ ಖಾನಿನ ಒಬ್ಬ ಸುಪುತ್ರ ಇಲ್ಲಿ ತಮಾಶೆ ನೋಡಲು ಬಂದಿದ್ದ. ಚಿಕ್ಕವನೇ ಇದ್ದ. ಆದರೆ ಗಟ್ಟಿ ವಜ್ರದ ಚೂರಾಗಿದ್ದ. ಉಕ್ಕಿನ ಗಣಿಯಲ್ಲೂ ಸಹ ದೂರ ದೂರದವರಿಗೆ ನುಗ್ಗುವನು. ಅವನನ್ನು ನೋಡಿ ಹುಲಿ ಯಕೃತ್ ಸಹ ನೀರಾಗಿ ಹೋಗುತ್ತಿತ್ತು. ಬೆಂಕಿ ಜ್ವಾಲೆಯಂತೆ ಕಾಣುತ್ತಿದ್ದ. ಆದರೆ ಅವನು ಬೆಂಕಿಯ ಬಿರುಗಾಳಿಯಾಗಿದ್ದ. ಹುಟ್ಟಿದಾಗಲೆ ಕಠಾರಿಯ ಮುಳ್ಳಿನ ಹಾಗೆ ಹರಿತವಾಗಿದ್ದ. ರಕ್ತ ಚಿಮ್ಮಿಸುವ ಅವನ ಸ್ವರವೂ ತೀಕ್ಷ್ಣವಾಗಿದೆ. ಬೆಂಕಿಯ ಕಿಣಿಯಲ್ಲಿ ಹುರಿ ಹುಟ್ಟುಗುಣವಾಗಿ ತೋರುತ್ತದೆ. ವೇಗ ತೋರಿದರೆ ರಾತ್ರಿಯನ್ನು ಹಗಲು ಮಾಡಿ ತೋರುವನು. ಅವನ ಹೆಸರು ಸೈಯ್ಯದ್ ಹಬೀಬ್ ಅವನು ಆಗ ಶರ್ಝಾ ಖಾನನ ಹತ್ತಿರದಲ್ಲೇ ಇದ್ದ. ಯಾವಾಗ ಅಪರಿಚಿತ ಸವಾರರು ಕಂಡರೋ ಆಗ ತಾನೇ ಆ ಸವಾರರ ಭಾರತೆಗೆದು ಕೊಳ್ಳಲು ಅವರ ಮೇಲೆ ಹಲ್ಲೆ ಮಾಡಲು ಹಠಾತ್ತನೇ ಆ ಅಪೂರ್ವ ತನ್ನ ಕುದುರೆಯನ್ನು ಎತ್ತಿ ಅವರ ಮೇಲೆ ಒಬ್ಬೊಂಟಿಗನೇ ಆಕ್ರಮಿಸಿದ. ಯಾವ ಗೊಂದಲ ಮಲಗಿತ್ತೋ ಅದು ಕ್ಷಣದಲ್ಲಿ ಎದ್ದೇಳಿತು. ಅದನ್ನು ಹೀಗೂ ಹೇಳಬಹುದು. ಅಂದರೆ ಹತ್ತಿಯಲ್ಲಿ ಬೆಂಕಿ ಹಚ್ಚಿಕೊಂಡಿತು. ಆ ಒಂಟಿ ಶರೀರ

ಭೂತದ ಮೇಲೆ ಹೋಗಿ ಬಿದ್ದಿತು. ಅಂದರೆ ಸಿಡಿಮದ್ದಿನ ಗುಡ್ಡೆಮೇಲೆ ಜ್ವಾಲೆ ಹೋಗಿ ಬಿತ್ತು. ಪ್ರಪಂಚ ಸುಡುವ ಖಡ್ಗಗಳಿಂದ ಭೀತಿ ಎದ್ದೇಳಿತು. ಶರೀರದಿಂದ ರಕ್ತದ್ದೇ ಜ್ವಾಲೆ ಎದ್ದೇಳಿತು. ಶರೀರದ ಕೊಳೆ ನೀಗಿಸುವ ಕಲ್ಲಿಗೆ ಸುತ್ತಲಿಂದಲೂ ಕೆಣಕಿ ಬಹಳ ಸೊಳ್ಳೆಗಳು ಘೆರಾವೊ ಮಾಡಿ ಬಹಳ ಮುಳ್ಳುಗಳನ್ನು ಚುಚ್ಚಿದವು. ಕೈ ಚಾಚಿ ಎದುರಾಳಿಗೆ ತೋರಿಸುತ್ತೇನೆ. ಖಡ್ಗಗಳ ಬಾಯಿ ಕೆಂಪುಮುಖದವಾದವು. ಶೌರ್ಯದಲ್ಲಿ ಅವನ ವ್ಯಕ್ತಿತ್ವ ವಿಚಿತ್ರ ಕಾಣಿಸಿತು. ಚಿಕ್ಕ ವಯಸ್ಸಿನ ವರನಾಗಿ ಬಲು ಚೆನ್ನಾಗಿ ಕಾಣಿಸಿದ. ಶರೀರದ ಬಟ್ಟೆಗಳನ್ನು ರಕ್ತದ ಕೆಂಪು ಬಣ್ಣದಲ್ಲಿ ಬಣ್ಣಿಸಿದ. ಖಡ್ಗ ತಲೆ ಮೇಲೆ ರೂಮಾಲು ಹಾರಿದಂತೆ ಹಾರತೊಡಗಿತು. ಸುತ್ತಲಿಂದಲೂ ಬಲವಂತವಾಗಿ ಘೆರಾವೊ ಮಾಡಿ ಗಾಯಗೊಂಡ ನಾಗರಹಾವಿಗೆ ನವಿಲುಗಳು ಹೇಗೆ ಸುತ್ತಿಕೊಳ್ಳುತ್ತವೋ ಹಾಗೆ ಸಿಕ್ಕಿಸಿಕೊಂಡರು. ಆ ಹುಲಿ ಮರಿ ಕೋಪಬಂದು ಗರ್ಜಿಸಿದಾಗ ಆ ಸದ್ದು ಶೂರ ಶರ್ಝಾ ಖಾನ್ ಕೇಳಿಸಿಕೊಂಡು, ತನ್ನ ಸೈನ್ಯವನ್ನು ಅಲ್ಲೇ ಬಿಟ್ಟು ಯುದ್ಧ ಗರ್ಜನೆ ಗರ್ಜಿಸುತ್ತಾ ತನ್ನ ಸುಪುತ್ರನ ಬಳಿ ತಲುಪಿ ಗಂಟನ್ನು ಕತ್ತರಿಸಿ, ಖಡ್ಗ ಶತ್ರುಗಳ ಮೇಲೆ ಹಾರಿಸಿದ. ಒಂದು ಕ್ಷಣದಲ್ಲಿ ಕತ್ತಲೆಯನ್ನು ಬೆಳಕಿನಲ್ಲಿ ಬದಲಾಯಿಸಿದ. ಒಂದೇ ಕ್ಷಣದಲ್ಲಿ ಸವಾರರನ್ನು ಕೂಡಿಸಿ ತನ್ನ ಮಗನನ್ನು ತೆಗೆದುಕೊಂಡು ಹೊರಟ. ತನ್ನನ್ನು ಒಂದು ರೀತಿಯಲ್ಲಿ ಹಿಸುಕಿದಂತೆ ಕಾಣಿಸಿತು. ಯಾರ ಕೈಯೂ ಅವನ ಮೇಲೆ ಕಾಣಲಿಲ್ಲ. ಶತ್ರು ತನ್ನ ಜಾಗದಲ್ಲಿ ಆಶ್ಚರ್ಯದಿಂದ ದಂಗು ಬಡೆದ. ಅವರು ನಾವು ಯುದ್ಧ ಗೆದ್ದೆವು ಎಂದು ಸಂತೋಷಪಟ್ಟರು. ಆದರೆ ಈ ದೃಶ್ಯ ನೋಡಿ ಆಶ್ಚರ್ಯದಲ್ಲಿ ಮುಳುಗಿದರು. ಅಲ್ಲಿಂದ ಹಿಂದುರುಗಿ ಬರುವವರೆಗೂ ಸಂತೋಷ ಆಚರಿಸಿತಿದ್ದರು. ಆದರೆ ಶರ್ಝಾ ಖಾನ್ ಕುದುರೆ ಮೇಲಿಂದ ಅಲ್ಲೇ ಬಿದ್ದುಹೋದ. ಮೃತ್ಯುವಿನ ಮದ್ಯಪಾನ ಮಾಡಿಸುವವನು ಏನು ಯೋಚಿಸಿದನೋ ಹುತಾತ್ಮದ ಲೋಟ ತೆಗೆದುಕೊಂಡು ಶಹಬಾಸ್ ಎಂದು ಲೋಟ ತುದಿಗಳನ್ನು ಮುಟ್ಟುತ್ತಲೇ ಅಮಲೇರಿತು. ಅದೆ ಸ್ಥಿತಿಯಲ್ಲಿ ಬಿದ್ದು ಪ್ರಾಣ ಬಿಟ್ಟ. ಸಾಹೇಬರ ಜೊತೆಯಲ್ಲಿ ಸದ್ವಿಚಾರದಿಂದ ಇದ್ದದ್ದು ಸಾರ್ಥಕವಾಯಿತು. ಎರಡು ಲೋಕಗಳಲ್ಲಿ ತನ್ನ ಇಚ್ಛೆಯನ್ನು ಪಟ್ಟನು. ಹುತಾತ್ಮನ ಸನ್ಮಾನ ಸ್ವೀಕರಿಸಿ ಬಲು ಗೌರವದಿಂದ ಸ್ವರ್ಗದ ದೇಶಕ್ಕೆ ಹೊರಟು ಹೋದನು. ಎಲ್ಲರ ಹೃದಯಗಳ ಮೇಲೆ ಸಂಶಯನ್ನು ಇಟ್ಟು ಹೋದ. ಗಾಯವೇ ಕಾಣದಿದ್ದರೆ ಅದರ ಗುರುತು ಸಹ ಇರುವುದಿಲ್ಲ. ಅವನ ಬಳಿ ಯಾರೂ ಬಂದು ಹೊಡೆದು ಹೋಗಲಿಲ್ಲ. ಬಾಣ, ಗುಂಡಿನ ಮೇಲೆಯೂ ಅನುಮಾನವಿರಲಿಲ್ಲ. ಯಾವ ಸೈನ್ಯಕ್ಕೂ ಇದರ ಮೇಲೆ ಅಹಂಕಾರವಿರಲಿಲ್ಲ.ಈ ಶೂರ ಹೀಗೆ ಅದನ್ನು ಇಳಿಸಿ ಹೋದನು. ಈ ಶೂರ ಎಲ್ಲಿಯವರಿಗೆ ಜೀವಂತನಾಗಿದ್ದನೋ ಶತ್ರುಗಳ ಮೇಲೆ ಜಯ ಸಾಧಿಸಿದ. ಬರಿ ಜಯದ ಮೇಲೆ ಸಾಕು ಮಾಡಲಿಲ್ಲ. ದೇವರೇ ಬಲ್ಲನೋ! ಎಲ್ಲರಿಗೂ ಈ ಮಾತು ಗುಟ್ಟಾಗೇ ಇತ್ತು. ಯಾರ ಮೇಲೆ ಏನು ಮೋಸ ನಡೆಯಿತು ಎಂದು ಯಾರಿಗೂ ಸಹ ನಂಬಲು ಸಾಧ್ಯವಾಗಲಿಲ್ಲ. ಮೃತ್ಯು ಯಾರ

ಶರೀರದಲ್ಲಿ ಬಂದು ಗೊಂದಲ ಎಬ್ಬಿಸುತ್ತದೆಯೋ ಅವನಿಗೆ ಕವಚದ ಪ್ರತಿಯೊಂದು ಕೊಂಡಿಯಿಂದ ಹೆದರಿಕೆ ಉಂಟಾಗುತ್ತದೆ. ಆಕಾಶ ಇದನ್ನು ನೋಡಿ ಯಕೃತಿನ ರಕ್ತ ತಿಂದು ತನ್ನ ಕಣ್ಣಿನಲ್ಲಿ ರಕ್ತ ತುಂಬಿಕೊಂಡ. ಶೌರ್ಯದ ಮನೆಯಲ್ಲಿ ಆಗ ಶೋಕ ಪ್ರಾರಂಭವಾಯಿತು ಜೀವನದಲ್ಲಿ ಇಂತಹ ದೊಡ್ಡ ದುಃಖ ಬಿದ್ದಿತು. ಖಡ್ಗ ತನ್ನ ಓರೆಯ ಕೋಣೆಯಲ್ಲಿ ಕುಳಿತು ಅಳುತ್ತಾ ತನ್ನನ್ನೇ ಕಳೆದುಕೊಳ್ಳುತ್ತಿತ್ತು. ಕವಚದ ಹೃದಯದಲ್ಲೂ ಅನೇಕ ತೂತು ಬಿದ್ದವು. ಆಸಕ್ತಿ ಅತ್ತು ತನ್ನ ನೇತ್ರಗಳೆಲ್ಲ ಬೆಳ್ಳನೇ ಮಾಡಿಕೊಂಡ. ಕುದುರೆಗಳಿಗೆ ಕುಂಟು ನೆಪ ಹುಟ್ಟಿತು. ಅವುಗಳ ಲಾಳ ಎದೆಗಳ ಮೇಲೆ ತುಕ್ಕು ಹಿಡಿಯಿತು. ಲೋಕದ ಬಾಯಿಯಲ್ಲಿ ನೀರು ಕಹಿಯಾಯಿತು. ವಿಷದ ರುಚಿ ನೋಡಿದರೂ ಅದು ಜೇನು ತುಪ್ಪದಂತೆ ಕಾಣುವುದು. ಅತ್ತು ಅತ್ತು ಕಣ್ಣುಗಳೆಲ್ಲ ಕಪ್ಪಾಯಿತು. ಪ್ರಪಂಚದ ನೇತ್ರದ ಪುತ್ಥಳಿಗಳಂತು ಜಲ ಮಾಂಸ <u>ಆಟಕವಾಗಿ</u> ಇದ್ದಿತು. ಪ್ರತಿಯೊಂದು ಶರೀರದ ಹೃದಯಗಳಲ್ಲಿ ಆಶ್ಚರ್ಯ ಸ್ಥಾನ ಮಾಡಿಕೊಂಡಿತು. ಎಲ್ಲರಿಗೂ ಪ್ರಪಂಚ ಅಪರಿಚಿತವಾಗಿ ಕಾಣತೊಡಗಿತು. ಸೂರ್ಯ ರಾತ್ರಿಯನ್ನು ಹಿಡಿದುಕೊಂಡಿದ್ದ, ಭೂಮಿ ಅಳುತ್ತಿತ್ತು. ಚಂದ್ರ ಸೂರ್ಯನಿಕ್ಕಿಂತ ಅಧಿಕವಾಗಿ ನೋವಲ್ಲಿ ಮುಳುಗಿತು. ಪ್ರಪಂಚ ಜೀವನದ ದಾರಿ ಮರೆಯಿತು. ಶಾಂತಿಯ ತಂಗುವ ಸ್ಥಳದಿಂದ ಬೇಜಾರಾಯಿತು. ದುಃಖದಿಂದ ಅನೇಕರು ಅವಮಾನಿತರಾಗಿ ಮಣ್ಣು ಬೀಸಿದರು. ಯಾವಾಗ ಸಾಧ್ಯತೆ ಇತ್ತೋ ಆಗ ಜ್ಞಾಪಿಸಿಕೊಳ್ಳುತ್ತಿದ್ದರು. ಖಡ್ಗದ ಹರಿತ ಶೋಕದಿಂದ ನಡುಗಿತು. ಬೆಂಕಿಯಿಂದ ಹುರಿ ಹೊರಟುಹೋಗಿ ಅದು ಶೀತಲವಾಗಿ ಬಿದ್ದಿತು. ಎಲ್ಲಿಯವರೆಗೂ ಎಲ್ಲ ಜನ ಇದೇ ದುಃಖದಲ್ಲಿ ಮುಳುಗಿದ್ದರೋ ಆಗ ಸಲಾಬತ್ ಫಸಂಗ್ ಸಹ ಈ ದುಃಖದಲ್ಲಿ ಸೇರಿ ಇಡೀ ಸೈನ್ಯವನ್ನು ಸಂತೈಸಿ ರವಾನಿಸಿದರು. ಅಂದರೆ ಅವನ ಜಾಗ ಒಂದು ಕ್ಷಣಕ್ಕೂ ಖಾಲಿ ಇರುವುದಿಲ್ಲ. ಆ ಪ್ರಸಿದ್ಧನ ಪುತ್ರ ಕೀರ್ತಿಶೇಷನಾಗಿರುವನು. ಸಿಪಾಯಿಗಳು ಹೊಸ ಪರಾಜಯವನ್ನು ತೋರಲು ಶರ್ಝನ ಎರಡು ಬಲಶಾಲಿ ತೋಳಗಳನ್ನಿಟ್ಟಿಕೊಂಡರು. ಶಾಹ ಆಲಂ ನವಾಝ್ ನೀವು ಸದಾ ಜೀವಂತವಾಗಿರಿ. ತಂದೆಯಿಂದ ಮಗನನ್ನು ಪ್ರತಿಷ್ಠಿತ ಮಾಡಿದರು. ಶಾಹರು ಶರ್ಝನ ಹೆಸರು ಪುನರುಚ್ಚರಿಸಿದರು. ಒಬ್ಬ ಹೋದರೇನಾಯಿತು ಇಂದು ಅವನ ಜಾಗದಲ್ಲಿ ಇಬ್ಬರಿದ್ದಾರೆ. ತಾವು ಬಾದಶಾಹರು ಅಲ್ಲಾಹನ ಹುಲಿಯರ ಸಮನಾಮದವರು ಆದ್ದರಿಂದ ಈ ಉಪ್ಪಲ್ಲಿ ಸದಾ ವೈಶಿಷ್ಟ್ಯ ಇದೆ. ಒಂದು ಕ್ಷಣದಲ್ಲಿ ಕಣಕ್ಕೆ ಸೂರ್ಯನಂತೆ ಮಾಡುವರು. ತಾವು ಕೈ ಹಿಡಿದರೆ ಮಣ್ಣು ಸಹ ಪರುಷ ಕಾಣುವುದು. ತಾವು ಲೋಕದಲ್ಲಿ ಸದೈವಾಗಿರಿ ಓ ಮಹತ್ವ ಬಲ್ಲವ ಈ ಕರುಣಾಳು ಅಂದರೆ ತಾವು ಅನಾಥರಿಗೆ ಮುತ್ತು ಮಾಡುವಿರಿ.(೬೪೨೭– ೬೫೬೦)

ಮಾತೇನೆಂದರೆ ಅಲಿ ಶಾಹ ಅನಾಥರ ಪೋಷಕ, ಒಬ್ಬ ಶರ್ಝ್‌ನ ಬದಲಾಗಿ ಮುಂದೆ ಬಂದು ಇಬ್ಬರು ಪುತ್ರರಿಗೆ ತೆಗೆದುಕೊಂಡ.

ಯಾವ ತಂದೆ ಶಾಹರ ಸೇವೆ ಮಾಡುತ್ತ ತ್ಯಾಗ ಮಾಡಿದನೋ ಅವನ ಸುಪುತ್ರರು ಅವನಿಗಿಂತಲೂ ದೊಡ್ಡವರಾದರು. ಶರ್ಝ್‌ನು ಕೆಲಸದಲ್ಲಿ ತನ್ನ ಪ್ರಾಣ ಅರ್ಪಿಸಿದನು ಎಂದು ಶಾಹರು ಯಾವಾಗ ಈ ವಾರ್ತೆ ಕೇಳಿದರೋ, ತನ್ನ ಇಡೀ ಜೀವನದಲ್ಲಿ ಅವನು ಬಹಳ ಪ್ರಾಮಾಣಿಕ ಎಂದು ನಾಚಿಗೆಯ ಕಲೆ ತೆಗೆದುಕೊಳ್ಳಲಿಲ್ಲ, ಒಳ್ಳೆ ನಡೆತ ನಡೆದ ಹಾಗೂ ಯಾವ ದಾರಿಯಲ್ಲಿ ಶಕ್ತಿ ಸಿಗುತ್ತದೆಯೋ ಅದೇ ದಾರಿಯಲ್ಲಿ ನಡೆದ. ಪ್ರಪಂಚದ ಹೃದಯದ ಮೇಲೆ ಈ ಹೊಸ ಗತಿ ಅಚ್ಚಾಗಿ ಉಳಿದುಕೊಂಡಿತು. ಅದೃಷ್ಟಶಾಲಿ ಮಾಡಲು ಬಾದಶಾಹರು ಕರುಣೆ ತೋರಿದರು. ಸಿಪಾಯಿಗೆ ಎಲ್ಲ ಒಳಿತುಗಳನ್ನು ಕಲಿಸಿದರು. ಯುದ್ಧಗಳಲ್ಲಿ ಯಾವುದೇ ಕಷ್ಟವಾಗುತ್ತಿರಲಿಲ್ಲ. ಅದಂತು ಸ್ವಚ್ಛವಾಗುತ್ತಿದ್ದವು. ಏಕೆಂದರೆ ಅವನು ಒಗಟನ್ನು ಬಿಡಿಸಿದ್ದ. ವಿಶ್ವಸನೀಯ ಮನುಷ್ಯ ಎಂದು ಶಾಹರು ಚೆನ್ನಾಗಿ ಬಲ್ಲಿದರು. ಸಜ್ಜನ ಸಹಜ ಪ್ರವೃತ್ತಿಯ ಮೇಲೆ ಅಧಿಕ ಆಯಾಸ ಬಂದು ಬಿದ್ದಿತು. ಆಗ ಅವರು ಹೇಳಿದರು 'ಅವನ ಜಾಗದಲ್ಲಿ ಅವನ ಇಬ್ಬರು ಪುತ್ರರಿದ್ದಾರೆ ಅವರ ಕೈ ಹಿಡಿದು ಅವನಿಂದ ಹೆಚ್ಚಾಗಿ ಗೌರವ ಕೊಡುವೆ. ಶರ್ಝ್‌ಯ ಉತ್ತರಾಧಿಕಾರಿ ಎರಡು ಪುತ್ರರಾಗಿದ್ದರು. ನಿರ್ಮಲ ಹೃದಯಗಳು ದುಃಖದಿಂದ ಮಂದವಾಗಿದ್ದವು. ಕರುಣೆ ನಿಭಾಯಿಸಲು ಮಹತ್ವ ಬಲ್ಲವ ಶಾಹ ಅತ್ಯುನ್ನತ ವಂಶಹೃದಯಗಳಿಗೆ ದಯೆಯಿಂದ ತಮ್ಮ ಕೈಯಿಂದ ಅದೇ ಮಹನೀಯತೆಯನ್ನು ನಿಶ್ಚಯಿಸಿ ಅದೇ ಸೌಭಾಗ್ಯಕ್ಕೆ ಉತ್ತರಾಧಿಕಾರಿ ಮಾಡಿದರು. ಶಹಿನ್ಷಾಹರ ಪ್ರಪಂಚದಲ್ಲಿ ಗುಣಗಳು ತುಂಬಿವೆ ಅದರಿಂದಾಗಿ ಪ್ರತಿಯೊಂದು ಮನಸ್ಸಿನ ಮೇಲೆ ಉಮೇದು ಹೀಗೆ ಸ್ವಚ್ಛವಾಯಿತು. ಈ ರೀತಿಯಾಗಿ ಶಹಿನ್ಷಾಹರ ಸಹಾಯ ಇಷ್ಟೊಂದು ಸೊಬಗು ಕೊಟ್ಟಿತು. ಅಂದರೆ ನಿಜವಾಗಿಯೂ ತಂದೆಯ ಕೆಲಸ ಮಗ ಮಾಡಬೇಕು. ಓ ಮನಸ್ಸೇ ನೀನು ಈ ಮಾತು ಇಲ್ಲೇ ಬಿಟ್ಟುಹಾಕಿ ಮತ್ತೆ ವಿಜಯದ ಪ್ರಸ್ತಾಪ ಮೊದಲ ಹಾಗೆ ಮಾಡುತ್ತಾ ಹೋಗು. ದಕ್ಷಿಣ ಹೃದಯದಲ್ಲಿ ಜಯದ ಗುರುತೇನಿದೆಯೋ ಅದು ಶಾಹರ ಹೆಸರಿನ ಹೆಗ್ಗಳಿಕೆಯಿಂದ ಇರುವುದು ಇದನ್ನು ತಿಳಿ. ಆದಿನದಿಂದಲೇ ಯಾರಿಗೆ ಕೀರ್ತಿ ದೇವದೇಣಿಗೆಯಾಗಿ ಸಿಕ್ಕಿದೆಯೋ ಅವನ ಮೇಲೆ ಆಕಾಶವೂ ಆಕ್ರಮಿಸಿದರೆ ಅದು ಸಹಾ ನಾಶವಾಗುವುದು. ಶರ್ಝ್‌ನ ಕಥೆ ಕೇಳಿ ಆ ಬಲಶಾಲಿ ಜೈಸಿಂಘ್‌ನೊಡನೆ ಸೇರಿ ಅಲುಗಾಡಿಸಲು ಬಂದನು. ಇಲ್ಲಿ ಸಹಸ್ರಾರು ಹುಲಿಗಳಿವೆಯೆಂದು ಅವನು ತಿಳಿದಿರಲಿಲ್ಲ. ಶರ್ಝ್‌ಗಳು ಎಷ್ಟಿವೆ ಎಂದು ಗುರುತು ಹಿಡಿಯಲಿಲ್ಲ, ತನ್ನ ವಿವೇಕದ ಮೇಲೆ ಗಮನ ಹರಿಸದೇ ಮೈದಾನದಲ್ಲಿ ಧುಮುಕ ಬೇಕೆಂದು ಬಂದನು. ಈ ಮಾತನ್ನು ಕೇಳಿ ಗಂಡುಹುಲಿಗಳು ಕೋಪಗೊಂಡು ನಿಸ್ಸಂದೇಹವಾಗಿ ಹಸು ಹುಲಿಯ

ಆಹಾರವೆಂದು ಹೇಳಿದರು. ಈ ಮಾತು ಕೇಳಿ ಯುಗದ ಅರಿಸ್ಟಾಟಲ್ ಪುಣ್ಯವಂತ ಹೇಳಿದ, ಇಂದು ಹಬ್ಬ ನಡೆಯಿರಿ ಇಂದು ಹಸು ಬಲಿಕೊಡುವೆ. ಶರ್ಖಿನ ಸುಪುತ್ರ ಮಖ್ದೂಂ ಶಾಹ್ ಶತ್ರು ಬರುವುದನ್ನೇ ಕಾಯತೊಡಗಿದ. ಖವಾಸ್ ಖಾನ್ ಬಂದು ಸಾಂತ್ವನ ಹೇಳಿ ಅವನ ಸೇಡನ್ನು ತೀರಿಸಿಕೊಳ್ಳುವುದರಲ್ಲಿ ಭಾಗಿಯಾಗಿ ಹೇಳಿದ, ನಾನು ನಿನಗೆ ಸಹಾಯ ಮಾಡುವೆ. ಖಡ್ಗ ನೀನು ನಿನ್ನ ಮನಸ್ಸಿಗೆ ಹೇಗೆ ತೋಚುತ್ತದೋ ಹಾಗೆ ಆಡಿಸು, ದೇವರಿಚ್ಛಿಸಿದರೆ ಒಂದು ಸಲ ಹೇಗೆ ವರ್ತಿಸುವೆವೆಂದರೇ ಅವರಿಗೆ ಬೆದರಿಸಿ ಹೀಗೆ ಕಾಡು ತುಂಬ ಬರುವೆವು. ಅವರಿಗೆ ತಮ್ಮ ನೆರಳನ್ನೇ ನೋಡಿ ನಮ್ಮನ್ನು ಹಿಂಬಾಲಿಸುತ್ತಿದ್ದಾರೆಂದು ಭಾವಿಸಿಕೊಂಡು ಓಡುತ್ತಾ ಓಡುತ್ತಾ ಕಾಲೆಳೆದುಕೊಂಡು ಸತ್ತುಹೋಗುವರು. ಯುದ್ಧ ಹೇಗೆ ಮಾಡಬೇಕೆಂದು ತೀರ್ಮಾನಿಸಿ ಮಾತು ಬರಲಿ ಎಂದು ನಿರೀಕ್ಷಿಸುತ್ತಿದ್ದರು. ಶತ್ರು ಫಲಿತಾಂಶದ ಮೌಲ್ಯವನ್ನೇ ತಿಳಿಯಲಿಲ್ಲ. ದೇಶದ್ರೋಹಿಯಾಗಿ ಗೊಂದಲವೆಬ್ಬಿಸಬೇಕೆಂದ. ಆದರೆ ದೇವರ ಸಹಾಯ ಯಾರ ಕಡೆ ಇರುತ್ತದೆಯೋ ಶತ್ರು ಅವನ ಮುಂದೆ ಸದೈವ ನಾಚಿಕೆ ಪಡುತ್ತಾನೆ. (೬೫೬೩-೬೫೭೦)

ಈ ಜಯವೆಂದರೆ ಖವಾಸ್ ಖಾನ್ ಶರ್ಖಿ ಮಗನಿಗೆ ಕರೆದುಕೊಂಡು ಯುದ್ಧಕ್ಕಾಗಿ ಸಾಲು ಕಟ್ಟಿ ಯುದ್ಧ ಹೂಡಿ ಜೈಸಿಂಘ್‌ಗೆ ಕಾಡಲ್ಲಿ ಓಡಾಡಿಸಿದ.

ಗಗನದ ಮೈದಾನ ಖಾಲಿ ಇದೆ ಎಂದು ತಿಳಿದು ಚಂದ್ರ ತನ್ನ ಸೈನ್ಯಗಳನ್ನು ಎದೆ ಉಬ್ಬಿಸಿಕೊಂಡು ಹೊರಟ. ಅಲ್ಲೇ ಒಂದು ಹೊಸ ಪ್ರಪಂಚದ ಸೂರ್ಯ ತನ್ನ ಖಡ್ಗ ಎಳೆದು ಕೊಂಡು ಓಡಿ ಹೋಗಿ ಬೇಲಿಯನ್ನು ಮುರಿದ. ಸಲಾಬತ್ ಅವನ ಮುಂದೆ ತನ್ನ ಪ್ರಾಣಾಪಾಯದ ಕೆಲಸ ಮಾಡಿ, ಒಂದು ಕ್ಷಣದಲ್ಲಿ ಇಡೀ ದಂಡಿನ ಗುರುತಿಲ್ಲದ ಹಾಗೆ ಮಾಡಿದ. ಈ ವಿಜಯದ ಮಾತು ಎಷ್ಟೊಂದು ಬರೆಯಬೇಕಾಗಿತ್ತೋ ಅದನ್ನು ನುಸ್ರತಿ ತಮ್ಮ ಪುಸ್ತಕದಲ್ಲಿ ಬರೆದಿದ್ದಾನೆ. ಅಂದರೆ ಒಂದು ರಾತ್ರಿ ಆ ನೀಚ ನಾಸ್ತಿಕ ಕೇಡದ ಮನಸ್ಸನ್ನು ಉಬ್ಬಿಸಿದ. ಇಡೀ ಸೈನ್ಯವನ್ನು ಒಂದು ಕ್ಷಣದಲ್ಲಿ ರಚಿಸಿ ಎಲ್ಲರನ್ನು ಉದ್ವೇಗಿಸಿ ಸೇರಿಸಿದ. ಅಂದರೆ ನೀವುಗಳು ಅತ್ಯುತ್ತಮ ರಣಧೀರರು. ಇದು ನೀವು ಚೆನ್ನಾಗಿ ತಿಳಿದುಕೊಳ್ಳಿ. ಮನಸ್ಸಿನಲ್ಲಿ ಊಹಿಸಿಕೊಳ್ಳಿ ಆದಿಲಿನ ಸೈನ್ಯ ನಿಮ್ಮ ಮೂಗು ಕತ್ತರಿಸಿ ನಮಗೆ ನಾಚಿಗೆ ಪಡುವಂತೆ ಮಾಡಿ ನಮ್ಮನ್ನು ದಾರಿ ಹಿಡಿಯುವ ಹಾಗೆ ಮಾಡರುವವು. ಮತ್ತೆ ಹಿಂದಿರುಗಿ ಹೋಗಿ ಜೀವನ ಮಾಡಬೇಕಾಗಿದ್ದರೆ. ನಾವು ನಾಚಿಗೆಯನ್ನೇ ತೆಗೆದುಕೊಂಡು ಹೋಗಬೇಕಾಗಿದೆ. ಅದು ಏನಾದರು ಆಗಲಿ ಇಂದು ಮನಸ್ಸು ಗಟ್ಟಿ ಮಾಡಿ ತಾಮ್ರದ ಮೂಗನ್ನು ಹಚ್ಚಿಸಿಕೊಂಡು ಹೋಗಬೇಕಾಗಿದೆ. ಹೀಗೆ ಅವರನ್ನು ನಾಚಿಗೆ ಬರುವಹಾಗೆ ಮಾಡಿ ಪ್ರತಿಯೊಬ್ಬರ ಮನಸ್ಸನ್ನು ಗಟ್ಟಿ ಮಾಡಿ ಯುದ್ಧದ ಕಡೆ ಹೋಗುವ ಹಾಗೆ ಸವಾರರನ್ನು ಬಿಸಿ ಏರಿಸಿದ. ಎಲ್ಲರೂ ಹೊಡೆಯಬೇಕು ಅಥವ ಸಾಯಬೇಕು ಎಂದು ಕರಾರು

ಮಾಡಿದರು. ಶಸ್ತ್ರಗಳನ್ನು ಧರಿಸಿ ಹೆಸರಾಂತರೆಲ್ಲ ಸೈನ್ಯ ಸಿದ್ಧ ಮಾಡಿದರು. ಬಲು ಶೀವಿಯಿಂದ ಮುಂದೆ ಸಿಡಿಮದ್ದಿನ ಉಗ್ರಾಣ ಅಲಂಕರಿಸಿದ. ಬಲು ಶಿಸ್ತಿನಿಂದ ಸೈನ್ಯಗಳನ್ನು ಇಳಿಸಿದ. ಫಿರಂಗಿಗಳನ್ನು ಬಲು ಸೂಕ್ಷ್ಮತೆಯಿಂದ ಹೊಟ್ಟೆ ತುಂಬಿಸಿದ ಹಾಗೂ ಗಾಡಿಗಳಲ್ಲಿ ಬಹಳಷ್ಟು ಜನ ಕುಳಿತುಕೊಂಡು ಹೊರಟರು. ಹುಲಿಗಳ ಜೊತೆಯಲ್ಲಿ ಅದರ ಮರಿಗಳು ಹೋಗುವಂತೆ ತಾಯಂದರು ಮಕ್ಕಳನ್ನು ಕರೆದುಕೊಂಡು ಹೊರಟರು. ವೇಗವಾದ ಅನೇಕ ಸಣ್ಣ ತೋಪುಗಳನ್ನು ಆರಿಸಿಕೊಂಡು ಒಂಟೆ ಆನೆ ಕುದುರೆಗಳು ಬಲು ವೇಗವಾಗಿ ನಡಿಯುವುದನ್ನು ತೆಗೆದುಕೊಂಡರು. ಅದನ್ನು ತೆಗೆದುಕೊಂಡು ದಂಡನಾಯಕರು ಹೊರಟರು. ಸದಾರರೆಲ್ಲರೂ ಆನೆ ಮೇಲೆ ಸವಾರಾಗಿ ಹೊರಟರು. ಪಠಾಣರು ತಮ್ಮ ಗಡ್ಡಉದ್ದನೆ ಬಿಟ್ಟುಕೊಂಡು ನಡೆದರೆ ರಜಪೂತರು ತಮ್ಮ ಮೀಸೆ ತಿರುಗಿಸಿಕೊಂಡು ನಡೆದರು. ಮುಘಲರು ಅಸದೃಶ ಮೋಸದಲ್ಲಿ ಸಿಕ್ಕಿಕೊಂಡು ಮತ್ತೆ ಹುಲಿಯಾಗಿ ಹೊರಟಿದ್ದರು. ಕೊಡಲಿ, ಗದೆ ಹಾಗೂ ಭಲ್ಲೆಗಳು ಎಲ್ಲವನ್ನು ಸನದು ಪಡೆದಹಾಗೆ, ಕೊಳವೆಯಲ್ಲಿ ಬಾಣವಿಟ್ಟು, ಬರ್ಚಿ ಹಗ್ಗದ ಏಣಿ ಜೊತೆಯಲ್ಲಿ ಸೇರಿಸಿದರು. ನಗಾರಿಗಳ ಸಡಗರದ ಮನೋವಿಕಾರ ಪ್ರಳಯದ ಭೂಕಂಪ ಸ್ಥಾಪಿಸಿದರು. ಅವನ ಸೈನ್ಯ ದಜ್ಜಾಲಿನ ಸೈನ್ಯದಂತೆ ಕಾಣುತ್ತಿತ್ತು. ಪ್ರತಿಯೊಬ್ಬನ ಕೂಗು ಕತ್ತೆಯಂತೆ ಕೂಗುತ್ತಿತ್ತು. ಅವನು ಯಾವ ಸೈನ್ಯ ರವಾನಿಸಿದ್ದಾನೆ ಎಂದು ತಿಳಿದಿಲ್ಲ. ಯುಗದ ಸಾಹೇಬರು ಮೆಹದಿರವರ ಆರಾಧಕ ಎಂದು ತಿಳಿದಿಲ್ಲ. ಕೆಟ್ಟದ್ದನ್ನು ಬಗೆಯುವನು ದುರಭಿಪ್ರಾಯದೊಂದಿಗೆ ಪ್ರಳಯದ ಗುರಾಣಿಯನ್ನು ಎತ್ತಬೇಕೆಂದಾಗ ಅದೇ ಸಮಯದಲ್ಲಿ ದಕ್ಷಿಣದ ಪ್ರಸಿದ್ಧ ದಂಡನಾಕರಾದ ರಣಧೀರರೆಲ್ಲ ಯುಗದ ಅರಿಸ್ಟಾಟಲ್‌ರೊಂದಿಗೆ ವಿಶೇಷ ಸೇವಕರಾಗಿ ಭೇಟಿ ಮಾಡಿ ಪರಸ್ಪರ ಮಾತನಾಡಿ ಕೈ ಜೋಡಿಸಿದರು. ರಣಧೀರರೆಲ್ಲ ಮತ್ತೆ ಶತ್ರುವಿನ ಕಡೆ ಗಮನ ಹರಿಸಿದರು. ಕುದುರೆಗಳಿಗೆ ಹೊಸ ಲಾಳಗಳು ಕಟ್ಟಿಸಿದರು. ಆವರಣ ಬಿಚ್ಚಿ ಸಶಸ್ತ್ರಗಳನ್ನು ಏರಿಸಿದರು. ಅದರ ಹೊದಿಕೆಗಳನ್ನು ತೆಗೆದು ಓರೆಗಳಲ್ಲಿ ಇಟ್ಟರು. ಸಶಸ್ತ್ರಗಳನ್ನು ಉಕ್ಕಿನ ಕೋಟೆಯಂದು ಭಾವಿಸಿ ತಮ್ಮ ಅಸ್ತಿತ್ವಕ್ಕೆ ಅದರ ಮರೆಯಲ್ಲಿಟ್ಟರು. ಹಿಂದೆ ಮುಂದೆ ಕೆಳಮಟ್ಟದಲ್ಲಿ ನಡೆಯನು ತನ್ನನ್ನು ಮಾನಸಿಕವಾಗಿ ತಯಾರಿಸಿಕೊಂಡರು. ಹೊರಬಂದು ಇಳಿಜಾರದಲ್ಲಿ ಎರಡು ಸಾಲಾಗಿ ನಡೆದರು. ಎದುರಾಳಿಯ ಒಂದು ದಳವನ್ನು ಎರಡು ಮಾಡಲು ಹೊರಟರು. ಸಾಮಾನು ಸಾಗಿಸುವ ಬಂಡಿ ತನ್ನ ತಾನೇ ವೇಗದಿಂದ ಗಾಳಿ ಹೋದ ಹಾಗೆ ಹೋಯಿತು. ಕುದುರೆಗಳಲ್ಲಿ ವೇಗ ಹಾಗೂ ಅದರ ಸವಾರರಲ್ಲಿ ಕೋಪ ಏರಿತು. ನಗಾರಿ ಗರ್ಜಿಸುತ್ತಾ ಹಾಗೂ ಭೈರವಿ ಬಾರಿಸುತ್ತಿದ್ದ ಹಾಗೆಯೇ ಗಂಡು ಹುಲಿಗಳು ಅಮಲೇರಿ ಗರ್ಜಿಸಿದವು. ಈ ಸದ್ದಿನಿಂದ ಆಕಾಶದಲ್ಲಿ ಯಾವ ಕಾರ್ಯವು ಸಾಧನೆ ಆಗಲಿಲ್ಲ. ಭೂಮಿ ಒಳ್ಳೆ ರತ್ನಗಳ ಗುರಾಣಿಯ ಕಿರೀಟವಾಯಿತು. ಪ್ರಜ್ಞೆ ಇರುವವರು ಬಣ್ಣ ಬಣ್ಣದ ಗುರಾಣಿಗಳನ್ನು ನೋಡಿ ಇಂದು ಗಾಳಿ ಫಕೀರ ಆಗಿದೆಯೆಂದರು. ಹೀಗೆ ನಡೆದುಕಕೊಂಡು ಮುಂದೆ

ಹೋಗುವವರಿಗೆ ಬೆಂಕಿ ಹತ್ತಿಕೊಂಡು ಓಡುತ್ತಿದೆಂದು ಕಾಣುತ್ತಿತ್ತು. ಹಿಂದೆ ಮುಂದೆಯಾಗಿ ಹೊಡೆದುಕೊಂಡು ಹೋಗಲು ಶೂರರು ಹರಿತವಾದ ಖಡ್ಗಗಳನ್ನು ಎತ್ತಿಕೊಂಡರು. ಮುಂದೆ ಬಹ್ಲುಲ್ ಒಂದು ಸೈನ್ಯವನ್ನು ಕಟ್ಟಿದರೆ ಬೇರೆಯವನು ಸ್ವಲ್ಪ ಹಿಂದೆ ದೃಢ ಮಾಡಿದನು. ಮುಘಲ್ ಸರಿಯಾಗಿ ತನ್ನ ಮುಂದೆ ಸೈನ್ಯಗಳನ್ನು ನೋಡಿ ಒಂದು ಕ್ಷಣಕ್ಕೆ ಇಂದ್ರಿಯ ಅನುಭವಿಸಿದೇನೆಂದರೆ ನಿರ್ಭಯನಾಗಿ ಅವರಿಗೆ ಗದರಿಸುತ್ತಿದ್ದಾರೆ. ಹೃದಯಾಳದಿಂದ ಖಾತರಿಯ ಒಂದು ಧೂಳಂತೆ ಎದ್ದಿತು. ಅದು ಆಕಾಶದಿಂದ ಭೂಮಿಯವರೆಗೆ ಕಾಣಿಸಿತು. ಆಗ ಜನ ಗಂಭೀರವಾಗಿ ಆಕಾಶ ಭೂಮಿಯಲ್ಲಿ ನಕ್ಷತ್ರಗಳನ್ನು ತೆಗೆದಿದ್ದಾನೆ ಎಂದರು. ಸುರ್ಬತ್ತಿಗೆ ಬಾಣಗಳ ಬೆಂಕಿ ಇಟ್ಟಾಗ ಗಾಢವಾದ ನಿ ದ್ರೆಯಲ್ಲಿದ್ದ ಇಂದ್ರನು ಎದ್ದೇಳಿದ. ಅದನ್ನು ಹೀಗೂ ಹೇಳ ಬಹುದು ಅಂದರೆ ಭೂಮಿ ಬೆಂಕಿಯ ಮೋಡವಾಗಿ, ಆಕಾಶದ ಮೇಲೆ ಕೆಂಪು ಜ್ವಾಲೆಗಳು ಸುರಿದವು. ಬಿರುಗಾಳಿ ಇನ್ನಷ್ಟು ತೀವ್ರವಾಗಿ ಲಕ ಲಕನೆ ಬಿಟ್ಟಾಗ ಹೊಗೆಯ ಧಾರೆಗಳಲ್ಲಿ ಬೆಂಕಿಯ ಹನಿಗಳು ಬಿದ್ದವು. ಗೋಲಗಳು ಬಾಣಗಳ ನರ್ತನೆ ತೆಗೆದುಗೊಂಡವು. ಚಕ್ರವುಳ್ಳ ತೋಪುಗಳ ಪಾತ್ರೆಗಳು ನಿಸ್ಸಂಕೋಚವಾಗಿ ಹಾರಿದವು. ಗುಂಡುಗಳು ಬಾಣಗಳ ತಲೆಯ ಮೇಲೆ ಹೊಡೆದವು. ಗಾಳಿ ಬೆಂಕಿಯ ಕೆಂಡಗಳನ್ನು ರುಬ್ಬಿಟ್ಟವು. ಧೂಳನ್ನು ಹೊಗೆ ಹೇಗೆ ಸುತ್ತಿಕೊಂಡಿತೆಂದರೆ ಭೂಮಿ ತನ್ನ ತಲೆ ಮೇಲೆ ಆಕಾಶವನ್ನು ಹೊದ್ದುಕೊಂಡಿದೆ. ಭೂಮಿಯಿಂದ ಆಕಾಶದವರಿಗೆ ಧೂಳು ಹೆಚ್ಚಿತು ಹಾಗೂ ಧೂಳಿನ ಕೈಗಳಿಂದ ಸೃಷ್ಟನೆ ಪಾತಾಳ ಸೇರಿತು. ಬಾಣಗಳು ಊದಿಕೊಂಡು ಎದ್ದಿದರೆ ಹಾವುಗಳ ಹಾಗೆ ಕಾಣುವವು. ಆ ಕೀಟಗಳು ಕುದುರೆ ಗೊದ್ದೆಗಳಂತಿದ್ದವು. ಇದೆ ಸ್ಥಿತಿಯಲ್ಲಿ ಪ್ರಭಾತ ಉದ್ವೇಗಿಸಿತು, ದೊಡ್ಡ ಸೈನ್ಯದ ಮೇಲೆ ಸೈನ್ಯವೂ ಒಂದು ಕಂಪನ ಕೊಟ್ಟಿತು. ಕಂಪನದಿಂದ ಭೂಮಿ ಕೆಳಗಿನಿಂದ ಅಲುಗಾಡಿತು. ದೊಡ್ಡ ಸಪ್ಪಳದಿಂದ ಸಮುದ್ರದಲ್ಲಿ ಕೋಲಾಹಲ ಉಂಟಾಯಿತು. ಕೋಪದಿಂದ ಶರೀರದ ರೋಮ ರೋಮ ಉಬ್ಬಿದವು. ಕರಡಿ ಹುಲಿಗಳು ಮುಂದೆ ಬಂದವು. ಎಲ್ಲ ಸಶಸ್ತ್ರಗಳು ಹೊರಬಂದು ತನ್ನ ಕೆಲಸದಲ್ಲಿ ತೊಡಗಿದವು. ಎಲ್ಲೆಡೆಯು ಹೊಡೆ ಹೊಡೆ ಎಂದು ಗುಲ್ಲೆಬ್ಬಿತು. ಒಂದು ಕ್ಷಣದಲ್ಲಿ ಲೋಕವನ್ನು ಶೂನ್ಯ ಮಾಡುವ ಶೂರರು ಪ್ರಾಣ ತೆಗೆದುಕೊಂಡು ಹೋಗಲು ನಿತ್ಯ ತಯಾರಿದ್ದರು. ಅವರ ಕೈಯಲ್ಲಿ ಹರಿತವಾದ ಖಡ್ಗ ಹೇಗೆ ಕಾಣಿಸಿತೆಂದರೆ ಲಕ್ಷ ಜೀವಗಳನ್ನು ತೆಗೆದುಕೊಂಡು ಹೋಗಲು ಒಂದು ದಿಬ್ಬಣವಿದೆ. ಮೃತ್ಯು ಜೀವನದ ಮೇಲೆ ಆಗ ನಿರಾತಂಕವಾಗಿ ತಲುಪಿ, ಜವಾನರ ಕೈ ಹಿಡಿದು ಖಡ್ಗ ನಿರಂತರ ಹೊಡೆಯಿತು. ಒಂದು ಮೆರವಣಿಗೆಯಲ್ಲಿ ಸಹಸ್ರಾರರನ್ನು ತಂದರು. ಒಂದೊಂದು ಕ್ಷಣದಲ್ಲಿ ಅನೇಕ ಜೀವಗಳು ತೆಗೆದುಕೊಂಡು ಹೊರಡುತ್ತಿದ್ದರು. ಅಸ್ತಿತ್ವದ ಊರುಗಳೆಲ್ಲ ನಿರ್ಜನ ಪ್ರದೇಶಗಳಾದವು. ಹೃದಯದ ನಗರವಲ್ಲಿ ಕೆಟ್ಟದ್ದು ಜಾಗ ಹಿಡಿಯಿತು. ರಕ್ತದ ಹನಿಮಳೆ ಧೂಳಾಯಿತು. ದೊಡ್ಡ ಮಳೆಯ ಆತ್ಮವು ಬಿರುಗಾಳಿಯಾಯಿತು. ಆತ್ಮಗಳ ಬಿರುಗಾಳಿಯ ತಳದಿಂದ ಪ್ರಜ್ಞೆ

ಹಾರಿ ಹೋಯಿತು. ಜಗತ್ತಿನ ಪ್ರಜ್ಞೆ ಧೂಳಿನ ಕೆಳಗೆ ಹೂತಿಕೊಂಡಿತು. ಮುಘಲಿನ ಮೇಲೆ ದೊಡ್ಡ ಲಜ್ಜೆ ಬೀಳುತ್ತಾ ಹೋಯಿತು. ಏನೆಲ್ಲ ಮುಂದೆ ನಡಿಯುತ್ತಿತ್ತೋ ಅದರಿಂದ ಅವನ ಮನಸ್ಸು ಹುಚ್ಚು ಹಿಡಿದಂತಾಯಿತು. ಶೂರರು ಮತ್ತೆ ಮೈದಾನದಲ್ಲಿ ಬರಲು ಇಚ್ಛಿಸಿದರು. ಚೆನ್ನಾಗಿ ಅವರನ್ನು ಓಡಿಸಿ ಎಳೆದು ಅವನ ಸೊಂಟ ಮುರಿಯಬೇಕೆಂದರು. ಬಹಿರಂಗದಲ್ಲಿ ಬಲು ವೇಗದಿಂದ ಉಸಿರಾಡಿದಾಗ ಎದುರಾಳಿ ಅವರಿಗೆ ಏನೋ ಹೆಚ್ಚು ಕಡಿಮೆ ಅಯಿತೆಂದು ಸಂತೋಷ ಪಟ್ಟನು. ಕುದುರೆಗಳ ರೆಕ್ಕೆಗಳು ಪ್ರಜ್ಞೆಯನ್ನು ಬಿಟ್ಟು ಎಸೆದವು. ಅದೇನೇ ಆಗಲಿ ಇಡೀ ಭೂಮಿಯೇ ದೂರಹೋಗಿ ಬೀಳಲಿ, ಇಡೀ ಸೈನ್ಯದ ಹಲ್ಲು ಮುರಿದು ತೂಗಿಸಿ ಮುಖ ಎಸೆದರು. ಗುರಿ ಹಿಡಿದು ಲಕ್ಷಾಂತರ ಸಲ ಯೋಚನೆ ಮಾಡಿ ಒಂದು ನರದ ಮೇಲೆ ತೂಕವಿಟ್ಟರು. ಮತ್ತೆ ಸೈನ್ಯ ಸಂಘಟಿಸಬಾರದೆಂದು ಯಾರಿಗೂ ಸೇರಲು ಅವಕಾಶ ನೀಡಲಿಲ್ಲ. ಓಡಿ ಹೋಗಿ ಸೈನ್ಯವನ್ನು ಹಿಡಿಯಲು ಪ್ರಯತ್ನಿಸಿ ವಿಪತ್ತನ್ನು ತಮ್ಮ ತಲೆಯ ಮೇಲೆ ಹಾಕಿಕೊಂಡರು. ಬಹ್ಲುಲ್ ಖಾನನು ಮತ್ತೆ ಒತ್ತಿ ಹೇಳಿದ, ಮುಘಲ್ ಅಂತೂ ಅವಿವೇಕತನದಿಂದ ಬೆಡಗು ಬಿನ್ನಾಣ ಮಾಡುತ್ತಿದ್ದಾನೆ. ಎಲ್ಲವನ್ನೂ ನಮ್ಮ ಹತೋಟಿಯಲ್ಲಿದೆ ಎಂದು ಅವನು ತಿಳಿದಿಲ್ಲ. ಆದ್ದರಿಂದ ಈಗ ನಾನು ನನ್ನ ಕಲೆಯನ್ನು ತೋರುವೆ. ಅದೇ ಜಾಗದಲ್ಲಿ ಪಾದಗಳ ಮೇಲೆ ಸಂಪೂರ್ಣ ಭಾರ ಹಾಕಿ ಕುಳಿತ, ಮುಖಾ ಮುಖಿನಿಂತ ಮತ್ತೆ ಬಿಲ್ಲನ್ನು ಎತ್ತಿ ಸರಿಮಾಡಿದ. ಎಲ್ಲ ಸಾಹುಕಾರರು, ಮಂತ್ರಿಗಳೆಲ್ಲ ಎದ್ದು ತಮ್ಮ ಕೆಲಸದ ಮೇಲೆ ಬರಲು ಬೈತಳಗಳನ್ನು ಕಟ್ಟಿಕೊಂಡರು. ಪ್ರತಿಯೊಬ್ಬ ಗಂಡಸು ತನ್ನ ಶಕ್ತಿ ಪ್ರದರ್ಶಿಸಲು ತಮ್ಮ ಬಾಣಗಳನ್ನು ಹೀಗೆ ಖೈಬರ್‌ನಹಾಗೆ ಮಾಡಿದರು. ಬಿಲ್ಲುಗಳಿಂದ ಬಾಣಗಳು ಎಷ್ಟೊಂಡು ಜೋರಾಗಿ ಹೋದವೆಂದರೆ ಎಲ್ಲಿಯವರೆಗೂ ರೆಕ್ಕಗಳನ್ನು ಮುರಿಯಲಿಲ್ಲವೋ ಅಲ್ಲಿಯವರೆಗೆ ಹಾರಿದವು. ಭಲ್ಲೆಗಳ ಬಾಣಗಳು ಕಳೆದು ಹೋಗುವವರೆಗೂ ದೂರದವರಿಗೂ ಕಾಣಿಸಿಕೊಂಡವು. ಮೇಲುಸಿರು ಆದುದರಿಂದ ಹಿಂದೆ ಬಿದ್ದವು. ಆನೆಗಳ ಮುಖಗಳ ಮೇಲೆ ಹೀಗೆ ಸಂಪೂರ್ಣವಾಗಿ ಕಚ್ಚಿದವೆಂದರೆ ಪ್ರತಿಯೊಂದು ಪಗದಾಳ ಹೇಗೆ ಕಾಣಿಸುತ್ತಿದ್ದರೆಂದರೆ ಬಾಗಿಲಿನ ಒಂದು ಭಾಗ ಕಾಣುತ್ತಿದ್ದವು. ಕುದುರೆಗಳು ದೇವಚರ ಎಂದು ಹೇಳಲಾಗುತ್ತದೆ. ಅದಕ್ಕೆ ರೆಕ್ಕೆಗಳಿರಲಿಲ್ಲ. ಎಲ್ಲ ಬಾಣಗಳೇ ಅವುಗಳಿಗೆ ರೆಕ್ಕೆಗಳಾಗಿದ್ದವು. ಪ್ರತಿಯೊಂದು ಮುಖಗಳನ್ನು ಬಾಣಗಳು ಹೊಡೆದು ರುಂಡಗಳಿಂದ ಬೇರ್ಪಡಿಸಿದ್ದರಿಂದ ಅನೇಕ ಸವಾರಗಳ ಶರೀರಗಳು ಹಲಸಿನಹಣ್ಣಂತೆ ಆದವು. ಬಾಣಗಳ ಮೊನೆಯು ಅನೇಕ ದೀಪಗಳನ್ನು ಹಚ್ಚಿ ಕತ್ತಲೆತುಂಬಿದ ಮಿದುಳುಗಳನ್ನು ಜ್ಯೋತಿರ್ಮಯ ಮಿದುಳುಗಳಾಗಿ ಮಾಡಿದವು. ಆಟ ಅಡುವ ಹಾಗೆ ಮೊಳೆಗಳನ್ನು ಕಣ್ಣುಗಳಲ್ಲಿ ಕಾಡಿಗೆ ಬಟ್ಟಲಿಂದ ಕಾಡಿಗೆ ಕಡ್ಡಿ ಹಚ್ಚುವ ಹಾಗೆ ಎಸೆದರು. ಶಿಖೆಗಳ ಹಾಗೆ ತಲೆಗಳು ಹೊಸತಾಗಿ ಕಾಣಿಸಿದವು, ಬಾಣಗಳು ಹರಿದು ಹೊದಿಕೆ ಹಾಗಲಕಾಯಿ ಹಾಗೆ ಕಾಣಿಸಿದವು. ಎದುರಾಳಿಯ ಕೋಪ ಈ ರೀತಿಯಾಗಿ ತಣ್ಣನೇ ಮಾಡಿ ಇಡೀ

ಸೈನ್ಯಕ್ಕೆ ಬಾಣಗಳಿಂದ ಮೆತ್ತಿದರು. ಬಹ್ಲುಲ್ ಇಡೀ ರಣರಂಗದ ಕೇಂದ್ರಬಿಂದು ಆಗಿದ್ದಾನೆ ಎಂದು ಆ ಕ್ಷಣ ಖವಾಸ್ ಖಾನ್ ಕೇಳಿದಾಗ ಹೇಳಿದ, ಈಗ ಶತ್ರುಗೆ ತಕೊಳ್ಳಲೇ ಬೇಕಾಗುತ್ತದೆ, ಶೀಘ್ರವಾಗಿ ಸೇರಿಸಿಕೊಂಡು ಈಗ ಹೊಡೆಯಲೇ ಬೇಕಾಗಿದೆ. ಹಾವಿಗೆ ಅದರ ಬಾಲ ತುಳಿದು ತಿರುಗಿಸಕೊಳ್ಳ ಬೇಕು. ನಂತರ ಅದರ ಹೆಡೆಯನ್ನು ಬಿಲ ಆಗುವ ಹಾಗೆ ಕುಟ್ಟಬೇಕು. ಮಂತ್ರಿಗಳು ಈ ಮಾತು ಕೇಳಿ ವ್ಯಾಕುಲಗೊಡರು. ರಣರಂಗದ ಎಲ್ಲ ಸಿಪಾಯಿಗಳು ಸಹ ಹುಚ್ಚರಾದರು. ಆಗ ಅಮಲೇರಿದ ಹುಲಿಗಳ ಸೈನ್ಯ ತೆಗೆದುಕೊಂಡು ಖಾನ್ ಎದ್ದನು. ಶರ್ಝಾ ಖಾನನ ಪುತ್ರ ಮುಂದಿದ್ದ. ಒಂದು ಘೋಷಣೆ ಕೂಗಿ ಯಾವಾಗ ಶೂರರು ಎದ್ದೇಳಿದರೊ ಆಗ ಆಕಾಶದ ಅಂತರಂಗ ಹರಿಯಿತು. ಮೋಡಗಳ ಹೊಟ್ಟೆಯಲ್ಲಿದ್ದ ಸಿಡಿಲಿನ ಹಸಿ ಮಗು ವ್ಯಾಕುಲಗೊಂಡು ಹೊರಬಿತ್ತು. ಹಠಾತ್ತನೇ ಕೆಳಗಿಂದ ಧೂಳು ಯಾವ ರೀತಿಯಲ್ಲಿ ಎದ್ದಿತೆಂದರೆ ಆಕಾಶ ಹಾಗೂ ಮೋಡ ಒಂದೇ ಆದವು. ಆಕಾಶವು ಶಾಹನ ಕೆಲಸದಲ್ಲಿ ಓಡುತ್ತ ತೊಡಗಿದೆ. ದಣಿದು ಸ್ವಲ್ಪ ನಿಂತು ಮತ್ತೆ ಕೆಲಸದಲ್ಲಿ ತೊಡಗಿತು. ಮೋಡಗಳಲ್ಲಿ ಧೂಳು ಕಲಿಸಿ ಆಗ ಒಂದೆರಡು ಹೊರೆ ಬಿಸಿ ಕಿಣಿಗಳಿಂದ ತುಂಬಿಕೊಂಡು ಸಾರಿಸಿಕೊಂಡ. ಒಬ್ಬರಿಗೊಬ್ಬರು ಪರಸ್ಪರ ಸೇರಿ ಒಬ್ಬೊರೊಬ್ಬರು ಸಹಾಯ ಮಾಡಿದರು. ಮರಾಠರು ಹಿಡಿದು ಅವಿವೇಕರನ್ನು ಹಿಡಿದುಕೊಂಡು ನಡೆದರು. ಯುವ ಮಹನೀಯರು ಕಂಕಳದಲ್ಲಿ ಭಾಲೆಗಳನ್ನು ತೆಗೆದುಕೊಂಡು ಏಕದಂತ ಆನೆ ಎದ್ದಂತೆ ಎದ್ದರು. ಒಬ್ಬರ ಮುಂದೆ ಇನ್ನೊಬ್ಬ ಬಂದಿದ್ದರಿಂದ ಮನಸ್ಸಿನಲ್ಲಿ ನಾಚಿಕೆ ಉಂಟಾಗಿ, ಬೆಂಕಿಯಾಗಿ ತನ್ನ ಕುದುರೆಗಳನ್ನು ಕಾಸಿದರು. ಕುದುರೆಗಳು ಫರ್ ಫರ್ ಎಂದು ಕೊಂಡು ಹಾರುತ್ತ ಹೋದವು. ಮೂಗಿನ ಸೊಳ್ಳೆಗಳಿಂದ ಭತ್ತೆ ಊದುತ್ತ ಹೊರಟವು. ಶೂರರ ಮನಸ್ಸಿನಲ್ಲಿ ಬೆಂಕಿ ಹತ್ತಿಕೊಂಡಿತು. ನಂತರ ಸಶಸ್ತ್ರಗಳ ಬೆಂಕಿ ಉದ್ವೇಗಿಸಿತು. ಎದುರಾಳಿ ಬಹ್ಲುಲ್ ಮುಂದೆ ಸ್ಥಿರವಾಗಿ ನಿಂತಿದ್ದ. ಅವನ ಬೆನ್ನಿನ ಕಡೆ ದಂಡನಾಯಕರೆಲ್ಲ ತಮ್ಮ ಸೈನ್ಯಗಳನ್ನು ಮುಂದೆ ಮಾಡಿ, ತಮ್ಮ ಎಲ್ಲ ಸೈನ್ಯವನ್ನು ಜಗಳಾಡಿಸುತ್ತಿದ್ದರು. ಹಠಾತ್ತನೆ ಇವರು ಹಿಂದಿಂದ ಬಂದರು. ತಲೆಗಳ ಮೇಲೆ ಕೈಗಳು ಸುರಿಯಲಾರಂಭಿಸಿದವು. ಶತ್ರುವಿನ ತಲೆ ಮೇಲೆ ಭಾರ ಬಿದ್ದಾಗ ಅವನು ಆಕಾಶ ತಲೆ ಮೇಲೆ ಬಿತ್ತು ಎಂದು ತಿಳಿದ. ಹಠಾತ್ತನೆ ಆ ಗಳಿಗೆಯಲ್ಲಿ ಎಂತಹ ಹರಿತವಾಯಿತೆಂದರೆ ಬೆಟ್ಟದ ಮೇಲೆ ಸಿಡಿಲುಗಳ ಏಟು ಬಿದ್ದ ಹಾಗೆ ಆಯಿತು. ಬೆಟ್ಟಕ್ಕೆ ಬೆಂಕಿಬಿತ್ತು ಅಂತಲೂ ಹೇಳಬಹುದು. ಆಗ ಗಾಳಿಯ ಕಾಡು ಹತ್ತಿ ಉರಿಯಿತು. ಆಕಾಶದ ತನ್ನೂರು ಅವರ ಮೇಲೆ ಬಿಸಿಯಾಯಿತು, ನಕ್ಷತ್ರಗಳು ಹೊಗೆಯಾಗಿ ಹಾರಲ್ಪಟ್ಟವು. ಅಂತರಂಗದಲ್ಲಿ ದೀಪ ಭಲ್ಲೆಯಾಯಿತು ಒಳ್ಳೆಯದು, ಕತ್ತಲೆ ಇದ್ದದ್ದು ಬೆಳಕಾಯಿತು. ಮುಘಲ್ ತಲೆ ಮೇಲೆ ಏಟು ತಂದು ಎಲ್ಲೆಂದು ಕಾಣಿಸಿಕೊಂಡ, ಪ್ರಜ್ಞೆ ಇಲ್ಲದೆ ಪ್ರಾಣ ಗೂಟದಂತೆ ಕಾಣಿಸಿಕೊಂಡಿತು. ನಂತರ ಅಲ್ಲೇ ನಿಂತು ಶಸ್ತ್ರಗಳನ್ನೆತ್ತಿಕೊಂಡ. ಒಂದೊಂದು ಶರೀರದ ಮೇಲೆ ಅನೇಕ ರೀತಿಯ ಏಟುಗಳು

ಬಿದ್ದವು. ಕೊರಳು ಬಿಗಿಯುವ ಹಗ್ಗ ಅಜಗರದಂತೆ ಬಾಯಿ ಬಿಚ್ಚಿಕೊಂಡು ಆತ್ಮಗಳನ್ನು ಗಂಟಲಲ್ಲಿ ಅಮುಕಿಕೊಳ್ಳಲು ಹೊರಟ. ಗಾಳಿಯ ಮೇಲೆ ಬೆಂಕಿಹರಡುವ ವಾಯು ಜೊತೆಯಲ್ಲಿ ಹಾರಿದವು. ಬಂದೂಕಿನ ರೆಂಬೆಗಳಿಂದ ಗುಂಡುಗಳು ಹಾರಿದವು. ಬಾಣಗಳ ಹಾರುವಿಕೆಯಿಂದ ರೆಕ್ಕೆಗಳ ಸದ್ದು ಎದ್ದೇಳಿತು. ಇದನ್ನು ಕೇಳಿ ಜೋರಾಗಿ ಓಡಿದವರ ಕಾಲುಗಳೆಲ್ಲ ಊದಿದವು. ತುಟಿಗಳಲ್ಲಿ ಗದೆಯ ಒಳ್ಳೆ ಕಳುವಿಕೆ ಕಾಣಿಸಿಕೊಂಡಿತು. ಕೊಡಲಿಗಳು ಮೆಹಂದಿಯಂತೆ ಕೆಂಪಾದವು. ಮುಘಲರು ಹಾಗೂ ದಖನಿಗಳಲ್ಲಿ ಭಾವೋದ್ರೇಕ ಬಂದಿತು. ನಿರಂತರವಾಗಿ ಒಬ್ಬರ ಮೇಲೆ ಒಬ್ಬರು ಧಬ್ ಎಂದು ಬಿದ್ದರು. ಖಡ್ಗದ ನೀರು ಮೃತ್ಯುವಿನ ಷರಾಬಾಯಿತು. ಲೋಟ ಜೀವಕ್ಕೆ ಕುಡಿಸಬೇಕೆಂದು ಇನ್ನೇನು ಹಿಡಿದಿದ್ದ, ಅದನ್ನು ಕುಡಿಸಲು ಅಲ್ಲೆ ತುಟಿಗಳು ಹುಟ್ಟಿದವು. ಒಂದು ತುಟಿಯಿಂದ ಈ ಮದ್ಯ ರುಂಡದಲ್ಲಿ ಬಿದ್ದಾಗ ಪ್ರತಿಯೊಂದು ನರದಲ್ಲಿ ಅಮಲ ಕಣ್ಣುಗಳವರೆಗೆ ಏರುತ್ತದೆ. ಒಂದಾದ ಮೇಲೆ ಒಂದು ಗೌರವ ಹಾಗೂ ಕಷ್ಟದೊಂದಿಗೆ ಮದ್ಯ ಕುಡಿಸಲು ತನ್ನ ಕೈಗಳನ್ನು ಮುಂದು ಮಾಡಿದರು. ಯಾವ ಶರೀರದಲ್ಲಿ ಅಮಲ ಹುಟ್ಟುತ್ತದೋ ಅಲ್ಲೇ ಅವನ ಮುಖದ ಮೇಲೆ ಕೆಂಪು ಕಾಣತೊಡಗುತ್ತಿತ್ತು. ಶತ್ರಗಳು ಅನೇಕರು ಇದರ ಒಳ್ಳೆ ಪ್ರಭಾವದಿಂದ ಏರಿದವು. ಇನ್ನು ಅನೇಕರು ಪ್ರಾಣದ ಪ್ರಜ್ಞೆ ಹೋಗಿ ವಿವೇಕ ಕಳೆದು ಕೊಂಡರು. ಅನೇಕರಂತೂ ಒಂದೇ ನೋಟದಲ್ಲಿ ಎಲ್ಲವೂ ಮರೆತೇ ಹೋದರು. ಕುದುರೆಗಳು ಮೇಲೆ ತೂಕ ಕಳೆದುಕೊಂಡು ಅಲ್ಲಾಡಿದವು. ತಲೆಗಳಿಂದ ಪಗಡಿಗಳು ಬಿದ್ದುಹೋದವು. ಮುಖದಮೇಲೆ ಕೂದಲುಗಳೆಲ್ಲ ಹರಡಿದವು. ಪ್ರಾಣ ಸುಸ್ತಾದುದರಿಂದ ಕೈಗಳಿಂದ ಶಸ್ತ್ರಗಳು ಉದರಿದವು. ಅನೇಕರಿಗೆ ಅದೆಷ್ಟು ಮದವೇರಿತೆಂದರೆ ಹಠಾತ್ತನೆ ದೃಷ್ಟಿಯಲ್ಲಿ ಕತ್ತಲೆ ಆವರಿಸಿತು. ಹಿರಿತನದ ಸವಾರಗಳ ಖಡ್ಗಗಳು ನೀರು, ಮಂಜಗಡ್ಡೆ ಅಥವಾ ಪೆಟ್ಲಪ್ಪು ತಾಗಿಸಿ ತಣಿಸಿ ಕೆಂಪಾಗಿರುವ ಕಣ್ಣುಗಳ ಗುರಾಣಿಗಳನ್ನು ಸ್ವಚ್ಛ ಮಾಡಿದರು. ಭಾಲೆಯ ದಂಡನಾಯಕ ರಕ್ತದಿಂದ ಕೆಂಪಾದ. ಖಡ್ಗಗಳ ಮೇಲೆ ಸ್ಯಾವಿಗೆಯ ಜಾಗ ಹಬ್ಬವಾಯಿತು. ಕವಚಧಾರಿಗಳಿಗೆ ಹೊಡೆದು ತುತ್ತು ಮಾಡಿ ತಿಂದರು. ಅದರ ಕೊಂಡಿಗಳು ಮಿದುಳುಗಳಲ್ಲಿ ಆಟ ಆಡಿ ಎಸೆದವು. ಪ್ರಾಣಕ್ಕೆ ಅಲ್ಲೇ ಸ್ಯಾವಿಗೆ ಎಳೆಗಳ ಹಾಗೆ ಎಸೆದರು. ಖಡ್ಗದ ಹರಿತ ಮೇಲೆ ರಕ್ತದ ಕೆಸರು. ಅದು ಇವು ಎರಡರ ಮಧ್ಯೆ ಸಿಕ್ಕಿಹಾಕಿಕೊಂಡಿತು. ಕಠಾರಿಗಳು ಕೆಸರಿನಲ್ಲಿ ದವಡೆಗಳ ಹಾಗೆ ಬಿದ್ದವು. ಫಿರಂಗಿಗಳಿಗೆ ಬಾಯಿತುಂಬ ಹಲ್ಲು ಬಂದವು. ರಕ್ತ ಕಠಾರಿಗಳ ಮೇಲೆ ಬಣ್ಣಿಸಿದ್ದರಿಂದ ಚಪ್ಪಟೆ ಇದ್ದ ಮೀನು ಬಿಚ್ಚಿಕೊಂಡು ಹಾವಿನಂತಿರುವ ಮೀನಾಯಿತು. ಚೇಳಿನ ಮೊನೆಯ ಕೊಂಡಿ ಮುರಿದು ಬಿದ್ದಿತು. ಈಗ ಅದರಲ್ಲಿ ಯಾವುದೇ ರೀತಿಯ ವಿಷ ಕಾಣಲಿಲ್ಲ. ನಾಗರಹಾವುಗಳು ಕಚ್ಚಾಡುತ್ತ ಬಾಲ ಹೇಗೆ ತಿನ್ನುತ್ತವೋ ಅದೇ ರೀತಿ ಉದುರಿ ಭಲ್ಲೆಗಳಿಂದ ಕಡಿಮೆಯಾದವು. ಗುರಾಣಿಗಳು ಏಟು ತಿಂದು ಹೇಗೆ ಚೂರಾದವೆಂದರೆ ಚಂಕರೆ ಹುಳುಗಳು ಎಲೆ ಕತ್ತರಿಸಿ ತಿನ್ನುವ ಹಾಗಾದವು. ಹುಲಿ ಶರ್ಝಗಳ ಆಟ

ರಣದಲ್ಲಿ ನಡೆಯಿತು. ಕುದುರೆಗಳಲ್ಲಿ ಆನೆಗಳ ಸೈನ್ಯವೆಲ್ಲ ಮಿಶ್ರಣವಾದವು. ಮುಘಲರಲ್ಲಿ ಅನೇಕ ಪಂಜ್ಹರ್ಝಾರಿಗಳು ಬಿದ್ದವು, ಹೆಸರಾಂತ ಕುನ್ವರ್ ಭಾರಿ ಭಾರಿ ರಾಯರುಗಳು ಸಹ ಬಿದ್ದವು. ಅಗಣಿತ ಸಿಪಾಯಿಗಳು ಯುದ್ಧದಲ್ಲಿ ಕೊಲ್ಲಲ್ಪಟ್ಟವು. ಕುದುರೆಗಳು ರಕ್ತದ ಕೆಸರಲ್ಲಿ ಹೂತುಹೋದವು. ಯುದ್ಧ ಮಾಡುವ ಠೀವಿ ಯಾವುದೂ ಸರಿ ಇರಲಿಲ್ಲ. ಕೆಲಸ ಮಾಡಿ ಮಾಡಿ ಎಲ್ಲ ಆಯುಧಗಳೆಲ್ಲ ಸುಸ್ತಾದವು. ನಾಲ್ಕು ದಿಶೆಗಳಿಂದ ಶೂರರ ಗುಲ್ಲು ಗದ್ದಲ ಕೇಳಿ ಚಿಕ್ಕ ತೋಪುಗಳೆಲ್ಲ ಉಸಿರು ಕಟ್ಟಿಕೊಂಡು ಬಿದ್ದಿದ್ದವು. ನಳಿಕೆಗಳಿಗೆ ವಿಷ ಸೇರಿತು. ಹೃದಯದಲ್ಲಿ ಆಸಕ್ತಿಯ ಬಿಸಿ ತಣ್ಣಗಾಯಿತು. ಬಿರುಗಾಳಿಯ ರಭಸ ತೋಪುಗಳನ್ನು ಬಣಜೆ ಮಾಡಿತು. ಎಷ್ಟೊಂದು ಮಕ್ಕಳವಂತ ತಾಯಿಗಳಿದ್ದರೋ ಅವರು ಸಹ ಬಂಜೆಯರಾದರು. ಬಾಣಗಳು ತನ್ನ ಹೆಬ್ಬಾವಿನಂತಹ ಆಕ್ರಮಣ ಮರೆತು ಪಟಾಕಿಗಳ ಹಾಗೆ ಲೋಕದ ಕಾಲಿಗೆ ಬಿದ್ದವು. ಸೊಳ್ಳೆಗಳಿಂದ ಹೆದರಿ ದೀನಾವಸ್ಥೆಯಾದವು. ಸೂಜಿಯ ರಂಧ್ರಕ್ಕೆ ಬಾಗಿಲಿನ ಬಾಯಿ ಮುಚ್ಚಿತು. ಆನೆಗಳು ಕತ್ತು ಕೆಳಗೆ ಮಾಡಿ ಭೂಮಿ ಮೂಸಿದವು. ತಬಲ ಹಾಗೂ ಕರ್ನಾಯಿಗಳ ಕಿವಿ ಕಿವುಡಾದವು. ಗುರಾಣಿಗಳು ಒಂದರ ಮೇಲೆ ಒಂದು ಬಿದ್ದು ಮರಗಳನ್ನು ಕಡಿದ ನಂತರ ಪರ್ವತಗಳ ಸ್ಥಿತಿ ಹೇಗಾಗುತ್ತವೋ ಹಾಗೆ ಸುಸ್ತಾದವು. ಭಲ್ಲೆಗಳ ಸೊಂಟಗಳಿಂದ ಮಣಿಗಳು ಇಳಿದವು. ಬರ್ಚಿಗಳ ಹೆಡೆಗಳು ಊದಿ ಕತ್ತು ಸಹ ಬಿದ್ದಿತು. ಖಾನ್ ಜೈಸಿಂಘ್‌ಗೆ ಭೇಟಿ ಮಾಡಿದ ಬಲು ಶಕ್ತಿಶಾಲಿ ಹಾಗೂ ಅಧಿಕ ಠೀವಿ ಕಾಣಿಸಿತು ಆದರೆ ಗಾಬರಿಗೊಂಡ. ಅದಾಗ್ಯೂ ಅವನು ಸಹಸ್ರಾರು ಪೇಚುಗಳನ್ನು ಪರೀಕ್ಷಿಸಿದ. ಕೊನೆಗೂ ಖಾನ್ ಕೊನೆ ಆಟ ಆಡಿ ಜೂಜಿನಲ್ಲಿ ಗೆದ್ದನು. ಯೌವನದ ತಾಜಾ ಹುಮ್ಮಸ್ಸನ್ನು ತೋರಿ ಅವನ ಎಲ್ಲ ಗರ್ಭ ಆಟಗಳ ಜೀವನಕ್ಕೆ ಸಾಕುಮಾಡಿದ. ಆಡಳಿತ ಮಾತುಗಳನ್ನು ಮನಸ್ಸಿನಿಂದ ಮರೆಯಿಸಿ, ಸರ್ಕಾರವಿದ್ದರೂ ಸಹ ಲಜ್ಜೆಯಲಿ ಸಾಯುವ ಹಾಗೆ ಮಾಡಿದ. ಶರ್ಝನ ಮರಿಗೆ ತೆಗೆದುಕೊಂಡು ಶಿಕಾರಿ ಆಡಿದ. ಯುದ್ಧದಲ್ಲಿ ಆನೆಗಳನ್ನು ಹೊಡೆದು ಬೆಟ್ಟವನ್ನು ಮಾಡಿದ. ಆಗ ಶತ್ರುಗಳು ಅಲ್ಲಿಂದ ಓಡುತ್ತಾರೆಂದು ಖಚಿತವಾಯಿತು ಹಾಗೂ ಅದೇ ದಿನ ಯುದ್ಧದ ಕೊನೆ ದಿನವಾಯಿತು. ಯಾರು ತನ್ನ ಬಾಯಿಯಿಂದ ಬಲು ಬಡಾಯಿ ಮಾತನಾಡಿಕೊಂಡು ಬಂದಿದ್ದರೋ ಅದಕ್ಕಿಂತ ಹೆಚ್ಚಾಗಿ ಅದರ ವಿರುದ್ಧವಾಗಿ ಕಾಣಿಸಿತು. ಕಾಲಿಡುತ್ತಿದ್ದ ಹಾಗೆ ಅವನನ್ನು ಹೊಡೆದಟ್ಟಿದ್ದನು ಏಕೆಂದರೆ ಎಲ್ಲಿ ಕಾಲು ಹಿಡಿಕೊಂಡರೆ ಮೈದಾನನೂ ಹಿಡಿಯುವನು ಅದಾಗಬಾರದು. ಆ ದಿನ ಅದೆಂತಹ ಪರಾಜಯ ಹೊಂದಿ ಹೋದರೆಂದರೆ ದೆಹಲಿ ದೇಶ ಸಿಗುವ ದಾರಿ ಹಿಡಿದರು. ಮೈದಾನಗಳಲ್ಲಿ ಅವರಿಗೆ ಕುಡಿಯಲು ನೀರು ಸಿಗಲಿಲ್ಲ. ಯಮುನಾ ನದಿಯ ನೀರು ಅವರಿಗೆ ಬಿಸಿಲುಗುದುರೆ ಆಯಿತು. ಯಾವಾಗ ಖಾನ್ ಯುದ್ಧದಿಂದ ಹಿಂದುರಿಗಿದನೋ ಆಗ ಬೇಸಿಗೆ ಕಾಲವಿತ್ತು. ಸೂರ್ಯ ಸಿಂಹಾಸನವೇರಿ ಕುಳಿತಿದ್ದ. ಭೂಮಿ ಮೇಲೆ ಒಂದು ವಂಸತ ಆಗಲಿತ್ತು. ಒಳ್ಳೆ ಯುದ್ಧದ ಮೈದಾನದಲ್ಲಿ ಒಂದು ಹೊಸ ವಸಂತ ಸೃಷ್ಟಿಸಿದ. ಭೂಮಿ ರಕ್ತದ

ಹನಿಗಳಿಂದ ಉದ್ಯಾನವನವಾಯಿತು. ಕೆಂಪು ಹೂವಿನ ಪ್ರತಿಯೊಂದು ಕರಿಮಚ್ಚೆ ಅರಳಿದ ಹೂಗಳಲ್ಲಿ ಕಾಣಿಸಿಕೊಂಡಿತು. ಆ ಬಣ್ಣ ಎಲ್ಲರ ಹೃದಯಗಳಲ್ಲಿ ಕಾಣಿಸುತ್ತಾ ಇತ್ತು. ಸುಗಂಧ ವನಸ್ಪತಿಯ ಪ್ರೀತಿಯೊಂದು ಕೇಶ ದಾಳಿಂಬರೆ ಹಣ್ಣಂತೆ ಕಾಣತೊಡಗಿದವು. ನರ್ಗಿಸ್ ಕಣ್ಣುಗಳ ಬನ ಅರಳಿತು. ತಲೆಗಳ ರಾಶಿ ಕಲ್ಲಂಗಡಿ ಹಣ್ಣಿನಂತೆ ಸೀಳಿ ಬಿದ್ದಿದ್ದವು. ಕೈಗಳ ಹಸ್ತಗಳು ಮನೆ ಚಾವಿಗಳಂತಾದವು. ರಕ್ತದ ಸುರುವಿಕೆಯ ನಿಲುವು ನೀರಿನ ತೊಟ್ಟಿಯಂತೆ ನಿಂತಿತು. ಅದರ ಮೇಲೆ ಅಂತರಜಲ ಆನೆಯ ಕಿವಿಯಂತಾಯಿತು. ಈ ರೀತಿಯಾಗಿ ರಣದ ಉದ್ಯಾನವನ ಮನಮೋಹಕವಾಯಿತು. ಆಗ ವಸಂತ ಆಡಲು ರಣಕೇದಗಳೆಲ್ಲವೂ ಬಂದವು. ನಿರ್ಮಲವಾದ ಕವಚಗಳೆಲ್ಲ ಚೆನ್ನಾಗಿ ಆರಿಸಿಕೊಂಡು ಅಲಂಕಾರಕ್ಕಾಗಿ ಕನ್ನಡಿಗಳನ್ನು ಜೋಡಿಸಿದವು. ತೋಟದಿಂದ ತೋಟ ಗುಲಾಲ್ ಚೆನ್ನಾಗಿ ಕಾಣಲು ರಣರಂಗಕ್ಕೆ ಕೆಂಪು ಮಣ್ಣ ಹಾಸಿದರು. ಬಲು ದೊಡ್ಡ ಮುತ್ತುಗಳನ್ನು ಆರಿಸಿ ರುಮಾಲುಗಳಲ್ಲಿ ತುಂಬಿಕೊಂಡರು. ತಟ್ಟೆಗಳ ಜಾಗದಲ್ಲಿ ಗುರಾಣಿಗಳನ್ನು ಜೋಡಿಸಿದರು. ಕೊಬ್ಬಿನಿಂದ ಜರಿಯ ವೇದಿಕೆ ನಿರ್ಮಿಸಿದರು. ಕವಚಗಳಂತೆ ನಿಲುವಂಗಿಗಳನ್ನು ಇಳಿದಿದ್ದೆಲ್ಲ ಹಾಸಿಗೆಗಳಿಗೆ ಹೊದಿಕೆ ಹಾಕಿದರು. ಆನೆ ದಂತಗಳು ಬಾಳೆಗಿಡದಂತೆ ನಿಂತವು. ಅದರ ಮೇಲೆ ಕಬ್ಬಿನ ಜಲ್ಲೆಗಳು ಭಲ್ಲೆಗಳಂತೆ ನಿಂತವು. ಕುದುರೆಗಳ ರುಂಡಗಳು ಮದ್ಯದ ಮಡಕೆಗಳಾದವು. ಮದ್ಯದಲೋಟಗಳು ಹೇಸರಕತ್ತೆಗಳ ತಲೆಯಾದವು. ಆನೆಗಳ ಸೊಂಡಿಲ ಹಾವಾಡಿಗನ ಪುಂಗಿ ಮಾಡಿಕೊಂಡರು. ಬಣ್ಣ ಬಣ್ಣದ ತಲೆ ಬುರುಡೆಗಳು ಅನೇಕ ಮಾಡಿದವು. ಮತ್ತೆ ಸಾಲು ಸಾಲುಗಳಲ್ಲಿ ಕುಳಿತು ಸಂಗೀತ ನೃತ್ಯದಲ್ಲಿ ತೊಡಗಿ ಎಲ್ಲೆಡೆಯು ಉತ್ಸವದ ವಾತಾವರಣ ಕಲ್ಪಿಸಿದರು. ರಣರಂಗ ಸುತ್ತಲಿಂದಲೂ ಮೋಡ ಕವಿದಂತೆ ಕಾಣಬೇಕಾಗಿತ್ತು. ಆದರೆ ಇಲ್ಲಿ ಬಣ್ಣ ಸುರಿಯಲಾರಂಭಿಸಿತು. ಶರೀರಗಳ ಮೇಲೆ ಊಹಿಸಲಾರದಷ್ಟು ರಕ್ತ ಚಿಮ್ಮಿದ್ದರಿಂದ ಸನ್ಯಾಸಿನಿಗಳ ಬಟ್ಟೆಗಳೆಲ್ಲ ಕುಸಂಬದ ಹೂವಂತೆ ಕೆಂಪಾದವು. ಎಷ್ಟೊಂದು ಭೂತಪುತ್ರರಿದ್ದರೋ ಅತಿ ರಕ್ತದಿಂದ ಕರಿಚರ್ಮದ ಆಕ್ರಮಣದ ಬಣ್ಣಪಟ್ಟವು. ಬಣ್ಣ ಬಡಿದು ಹೋಗಿ ಕುಯುಕ್ತಿ ರೆಕ್ಕೆ ಎಲ್ಲ ಬಿಳಿಗಿಣಿಯ ಹಾಗೆ ಕಾಣಿಸಿದವು. ಗಿಣಿಯ ಒಳ್ಳೆ ಕೆಂಪು ಬಣ್ಣದ ಕೊಕ್ಕು ತುದಿ ಕಾಣಿಸಿತು. ಹಕ್ಕಿಗಳಿಗೆ ಉದ್ಯಾನವನ ದೃಶ್ಯವಾಯಿತು. ವನ್ಯ ಮೃಗಗಳಿಗೆ ಆ ಫಲ ಮೇವು ಆಯಿತು. ಮದ್ಯವೇರಿದ ನಂತರ ದಿಟ್ಟಿಸಿ ನೋಡಿದಾಗ ಎಲ್ಲರೂ ಒಂದೇ ರೀತಿಯಾಗಿ ಕಾಣಿಸಿದರು. ಮುತ್ತು ಎಲ್ಲ ರೀತಿಯಲ್ಲಿ ಹಳದಿ ಕಾಣತೊಡಗಿತು. ಮದ್ಯದ ಪ್ರಭಾವ ಏರಿದ್ದರಿಂದ ತೋಳದ ಕಣ್ಣು ಕೆಂಪು ಮಾಡಿಕೊಂಡು ದಾಂಡಿಗರು ದುಃಖ ದೂರ ಮಾಡಲು ಹೇಗೆ ಓಡಾಡುತ್ತಾರೆಯೋ ಹಾಗೆ ಅಮಲೇರಿ ತಿರುಗುತ್ತಿದ್ದರು. ನರಿ ಎಷ್ಟೊಂದು ಸಂತೋಷ ಆಚರಿಸಿತೆಂದರೆ ಎಲ್ಲರೂ ನಕ್ಕು ನಕ್ಕು ಬಿದ್ದರು. ಶರ್ಝುನಗೆ ಮದ್ಯ ನೆತ್ತಿಗೇರಿತು. ಕರಡಿಗಳಿಗೆ ಎಷ್ಟೊಂದು ಅಮಲೇರಿತೆಂದರೆ ಎಲ್ಲರೂ ನೋಡಿ ದಂಗುಬಡಿದರು. ಅನೇಕ ಜನರು

ಈ ಆಹಾರ ಸೇವನೆ ಮಾಡಿದರು. ಶಾಹನ ಸೌಭಾಗ್ಯದಿಂದ ಎಲ್ಲರು ಆರಾಮು ಪಡೆದರು. ಯಾವಾಗ ಶಾಹರ ಸದ್ಗುಣವೆಲ್ಲ ಪೂರೈಸಿದರೋ ಎಲ್ಲ ಸಾರ್ವಜನಿಕರಲ್ಲಿ ಈ ಸುದ್ದಿ ಹರಡಿಸಿದರು. ಅಂದರೆ ಖಾಫ್ ಬೆಟ್ಟದ ಶರ್ಝು ಮನಸ್ಸಿನಲ್ಲಿ ಅತಿಯಾಸೆ ಇಟ್ಟುಕೊಂಡು ಈ ವ್ಯಕ್ತಿಗಳನ್ನು ನೋಡಿ ಅಧಿಕ ಉತ್ಸಾಹ ಪಟ್ಟ. ಹೆಬ್ಬಾವು ಎದ್ದು ಒಂಟಿಯಾಗಿ ಹೋಯಿತು. ರಕ್ಕೆ ಮೇಲೆ ಮಾಡಿಕೊಂಡು ಅಧಿಕ ರೆಕ್ಕೆ ಬಡಿದುಕೊಂಡು ಹೋದ. ಶಾಹನ ಗುಣಗಳಿಂದ ಪ್ರಪಂಚ ತುಂಬಿದೆ. ಓ ಶಾಹರೇ ಅದೇ ದಕ್ಷತೆಯಿಂದ ನಿತ್ಯ ನಿತ್ಯವೂ ನೀವು ಸಾಮ್ರಾಜ್ಯವನ್ನು ಆಳಿರಿ. ಓ ಅಲ್ಲಾಹನೇ ಈ ನಮ್ಮ ಶಾಹ ಪ್ರತಿಷ್ಠೆಯಿಂದ ಸಂತೋಷವಾಗಿರಲಿ ಹಾಗೂ ಶತ್ರು ಮೇಲೆ ನಿತ್ಯ ಹುಣ್ಣಿನ ಮೇಲೆ ಹುಣ್ಣಾಗಲಿ. (೬೪೯೧-೬೭೭೭)

■

*

ಅಧ್ಯಾಯ -೧೨

ಅಲಿನಾಮದ ಗುಣ ಹಾಗೂ ಕೃತಿಯ ಸಂತೋಷದ ಮುಕ್ತಾಯ, ಆದಿಲ್‌ನ ಪ್ರಶಂಸೆ ಅವನಿಂದಾಗಿ ಈ ಹೊಸ ಮಹಾನತೆ ದೊರಕಿತು.[೧೦೬]

ಶಾಹನ ವಿಚಿತ್ರ ವಿಚಿತ್ರವಾದ ಸುದೈವವಿದೆ. ಅವನು ಎಂತೆಂತಹ ಕೆಲಸ ಮಾಡುವವಂದರೆ ಕಲ್ಪನೆಯೂ ಸಹ ಅಸಹಾಯವಾಗುತ್ತದೆ. ಶಾಹನ ರಹಿತ ಯಾವ ಜಯ ಬರೆಯಲು ಆಗಲಿಲ್ಲ. ಈ ರೀತಿ ನೀತಿಯ ಪಂಕ್ತಿಗಳು ಯಾರು ಹೇಳಲು ಆಗಲಿಲ್ಲ. ಆಕಾಶದ ಹೊಸ ಕಾರ್ಯ ಹೇಗೆ ಸ್ವಪ್ನವೋ, ಯಾವುದನ್ನು ಜ್ಞಾಪಕವಿರುವುದಿಲ್ಲವೋ ಅದು ನೀರಿನ ಮೇಲಿನ ಬರಹ. ಮಹಾಜಾಣ ಅದ್ವಿತೀಯನಾಗುತ್ತಾನೆ. ಅವನ ಲಿಖಿತ ಕಲ್ಲಿನ ಮೇಲಿನ ಗೆರೆಯಾಗುತ್ತದೆ. ಅದಾಗ್ಯೂ ಸಹಜ ಪ್ರವೃತ್ತಿಗಳ ಮರಗಳ ಸಾಲುಗಳಿವೆ. ಆದರೆ ಅವು ಶಾಹರ ಸುಖದುಖ ನೋಡಿ ಫಲ ನೀಡುತ್ತವೆ. ಆದರೆ ಈ ಫಲದ ಸ್ವಾದ ಕೊನೆಯ ದಿನವರೆಗೂ ಇರುತ್ತದೆ. ಅವರ ಜೀವನ ಪ್ರವೃತ್ತಿಗೆ ಶಹಬಾಷ ಎನ್ನುವುದು. ಅದೇ ಭಾಗ್ಯ ಶಾಲಿಯ ಎರಡು ದೆಸೆಗಳಿವೆ. ಅವರು ಕವಿಗಳನ್ನು ಎಲ್ಲರಲ್ಲಿ ಆರಿಸಿಕೊಳ್ಳುತ್ತಾನೆ. ಕವಿ ಬಲು ಅದೃಷ್ಟದಿಂದ ಸಿಗುತ್ತಾನೆ. ಯಾರಿಗೆ ಸಿಕ್ಕಿದ ಅವನು ಕೊನೆ ದಿನದವರೆಗೂ ಸಾಮ್ರಾಜ್ಯ ಪಡೆದಂತೆ. ಮಹನೀಯತೆ ಶರೀರ ಹಾಗೂ ಪ್ರಾಣದ್ದಾಗುತ್ತದೆ. ಆದರೆ ದೊಡ್ಡಸ್ತಿಕೆ ಮನುಷ್ಯನಿಗಿಂತ ಹೆಚ್ಚು. ಕವಿಗಳಿಂದ ಯುಗದಲ್ಲಿ ಜ್ಞಾಪಕವಿದ್ದಾರೆ. ಅದಾಗ್ಯೂ ಫರೀದೂನ್ ಮಾಡದೇ ಇದ್ದಿದ್ದರೆ ಕೀಖ್ಬಾದಿನ ಯಾವ ಸ್ಥಾನಮಾನ ಇರುತ್ತಿರಲಿಲ್ಲ. ಕವಿ ಅವನ ಗುಣಗಳನ್ನು ಪ್ರಸ್ತಾಪಿಸಿದ. ಆದ್ದರಿಂದಲೇ ರುಸ್ತುಂನ ಮೇಲೆ ಇಲ್ಲಿಯವರೆಗೂ ಶಹಬಾಷಗಿರಿ ಇದೆ. ಅಲ್ಲಾಹನು ನಿನಗೆ ಬಹಳಷ್ಟು ನೀಡಿರುವನು. ಕವನದ ದೇಶ ಕೊಟ್ಟು ಐಶ್ವರ್ಯ ನೀಡಿದ್ದಾನೆ. ಈ ಕಲೆಯ ಸುದೈವದಲ್ಲೇ ಅವನ ಕಡೆ ಹಿಂದಿರುಗಿ ಶಾಹರ ಪ್ರಶಂಸೆಯಿಂದ ಕೃತಿಯನ್ನು ಪ್ರಾರಂಭಿಸಿದಾಗ ಹೇಗೆ ಕಾಣಿಸಿತೆಂದರೆ ಮೊದಲಿಗೆ

ನನ್ನ ಕೈಗಳಿಂದ ಸನ್ಮಾನ್ಯತೆ ಮೇಲೆ ಪ್ರತಿ ಮಾತಿನಿಂದ ನಾಲಿಗೆ ಪಡೆಯಿಲಿ. ಯಾವ ಅದೃಷ್ಟಶಾಲಿಯ ಹೆಸರು ನಾನು ತೆಗೆದುಕೊಂಡೆ ಅವನು ಗೌರವಿಸಿದ್ದರಿಂದ ಕೊನೆಯ ದಿನದವರೆಗೂ ಅವನು ಜಗತ್ತಿನಲ್ಲಿ ಭಾಗ್ಯಶಾಲಿಯಾದ. ಶಾಹನ ಮೆಚ್ಚುಗೆ ಪಡೆದ ಮರ್ಯಾದಿಷ್ಟರು ಕರುಣೆ ಕೃಪೆಯಿಂದ ಸುದೈವರು. ಅದೇ ಹೆಸರಾಂತ ವ್ಯಕ್ತಿಗಳಲ್ಲಿ ಅನೇಕ ಭಾಗ್ಯಶಾಲಿಯರ ಹೆಸರು ಅಲ್ಲಲ್ಲಿ ತೆಗೆದುಕೊಂಡಿರುವೆ. ಅನೇಕ ಕಡೆ ಅಭಿಪ್ರಾಯದೊಡನೆ ಪ್ರತ್ಯೇಕವಾಗಿ ಅದೃಷ್ಟಶಾಲಿಯರ ಪರಿಶ್ರಮವನ್ನು ಸಾರ್ಥಕ ಮಾಡಿರುವೆ. ನಾನು ಈ ಕೃತಿಯನ್ನು ಎಷ್ಟು ಸಂಪೂರ್ಣವಾಗಿ ಬರೆದಿದ್ದೇನೆಂದರೆ ಪ್ರತಿಯೊಂದು ಮಾತು ಒತ್ತುಕೊಟ್ಟು ಹೇಳಿದ್ದೇನೆ. ಶೂರರ ಸಾಹಸವನ್ನು ಹೊಗಳಿದ್ದೇನೆ. ಯುದ್ಧದ ಸ್ವಾದದ ತಾತ್ಪರ್ಯ ನಾನು ಬರೆದಿದ್ದೇನೆ. ಪರಿಶ್ರಮ ಹುರಿದುಂಬಿಸಿದ್ದರಿಂದ ಯುವಕರಿಗೆ ಆಗ ಅತ್ಯಾಸೆ ಹುಟ್ಟಿತು. ಪ್ರಮುಖ ಘಟನೆಗಳೆಲ್ಲವನ್ನು ದೊಡ್ಡ ಕಾರ್ಯಗಳು ಯಾವುದೇ ಮುಚ್ಚುಮರೆ ಮಾಡಲಿಲ್ಲ. ಯಾವದು ಅವಶ್ಯವಾಗಿತ್ತೋ ಅವೆಲ್ಲವನ್ನು ಬಹಿರಂಗ ಪಡೆಸಿದ್ದೇನೆ. ಎಲ್ಲಿ ಯಾವುದಾದರು ಘಟನೆ ಪ್ರಸ್ತಾಪಿಸಿದ್ದೇನೆಯೋ ದೇವರಿಗೆ ಸಾಕ್ಷಿಯಿಟ್ಟು ನಿಜ ಮಾತನ್ನು ಹೇಳಿದ್ದೇನೆ. ಯಾರಿಗೂ ಸಹ ಪಕ್ಷಪಾತ ಮಾಡಲಿಲ್ಲ. ಏನೆಲ್ಲ ಇತ್ತೋ ಬಹಳಷ್ಟು ಯಾವುದೇ ಕಾಪಟ್ಯವಿಲ್ಲದೇ ಹೇಳಿದ್ದೇನೆ. ವಾಕ್ಚಾತುರ್ಯದಿಂದ ಯಾವ ಕೆಲಸವನ್ನೂ ತೆಗೆದುಕೊಂಡಿಲ್ಲ. ನನ್ನ ಪಂಕ್ತಿಗಳಲ್ಲಿ ಸಿಹಿಮಾತಿನ ಅಮೃತವನ್ನು ಹೀರಿಸಿ ಶೂರರ ಹೆಸರುಗಳಿಗೆ ಜೀವ ಕೊಟ್ಟಿದ್ದೇನೆ. ವಿಶೇಷವಾಗಿ ಯಾವಾಗ ಶರ್ಝಾ ಖಾನ್ ಹುತಾತ್ಮನಾದನೋ ಆಗ ಈ ಕೃತಿಯಲ್ಲಿ ಆ ಪುಣ್ಯವಂತನ ಹೆಸರು ಬರೆದೆ. ಏಕೆಂದರೆ ಅವನು ಸದಾ ಶಾಹನ ಕೆಲಸದ ಮೇಲೆ ತನ್ನನ್ನು ತ್ಯಾಗ ಮಾಡುವನು. ಯಾವುದೇ ಮೋಸ ಅಥವಾ ವಂಚನೆ ಇಲ್ಲದೆ ಒಳ್ಳೆಯ ಹೆಸರು ಮಾಡಿಕೊಂಡು ಹೋದ. ಕೊನೆಯ ದಿನದವರೆಗೆ ಅವನ ಆತ್ಮ ಸಂತುಷ್ಟವಾಗಿರಲಿ. ಲೋಕ ಅವನ ಕಾರ್ಯಗಳನ್ನು ಜ್ಞಾಪಕವಿಟ್ಟುಕೊಳ್ಳುತ್ತದೆ. ಈ ಮಸ್ನವಿ ಬಲು ವಿಚಿತ್ರ ಕಲೆಯಿಂದ ಹೇಳಿರುವೆ. ಈ ಕಲೆಯಲ್ಲಿ ಅನೇಕ ರೀತಿಯ ಶಕ್ತಿ ಇದೆ. ಒಂದೊಂದು ಸಭೆಯನ್ನು ಅಲಂಕರಿಸಿರುವೆ. ಯುದ್ಧದ ಒಳ್ಳೆ ಹೂಬನ ಅರಳಿಸಿರುವೆ. ಈ ಕೃತಿಯಲ್ಲಿ ನಾನು ಸಂಪೂರ್ಣ ಕಲೆಯನ್ನು ತುಂಬಿರುವೆ. ಕೋಮಲತೆಯಿಂದ ಇಡೀ ಕೃತಿಯನ್ನು ತುಂಬಿಟ್ಟಿದ್ದೇನೆ. ಅನೇಕ ವಿಶ್ವಸ್ಥ ಯುದ್ಧಗಳ ಎಲ್ಲಿ ಅವಶ್ಯಕತೆ ಇತ್ತೋ ಅಲ್ಲಿ ಪ್ರಶಂಸ ಗೀತೆಯನ್ನು ಹೇಳಿರುವೆ. ಒಂದು ಹೊಸ ಶೈಲಿಯನ್ನು ಅಲಂಕರಿಸಿ ಆಗಲೇ ಸೂಕ್ತ ಕವನವೂ ಬರೆದೆ. ಇತಿಹಾಸಕಾರರ ಪಾದದ ಗುರ್ತಿನ ಮೇಲೆ ನಡೆದು ಸಂದರ್ಭಾನುಸಾರ ಕಥೆ ಮೇಲೆ ಕಥೆ ಬರೆಯುತ್ತಾ ಹೋದೆ. ನಿಸ್ಸಂದೇಹವಾಗಿ ಯುದ್ಧದ ಪ್ರತಿಯೊಂದು ಪಂಕ್ತಿಯು ಸಿಪಾಯಿಗೆ ತರಬೇತಿ ಶಾಲೆ ಇರುವಹಾಗೆ ಇದು ಚೆನ್ನಾಗಿ ಬಲ್ಲಿರಿ. ಅರಸರ ದರ್ಬಾರಿನ ಇದು ಸಂಗೀತ, ಮಂತ್ರಿಗಳಿಗೆ ಯುದ್ಧದ ಅತ್ಯುನ್ನತ ಕಾರಣವಿದು. ಸೌಂದರ್ಯದಲ್ಲಿ ಇದು ಯಾವ ಮಾತಿನಿಂದ ಕಡಿಮೆ ಇಲ್ಲ. ಇದು ನಿತ್ಯ ಮೆಚ್ಚುಗೆ ಪಡೆಯುತ್ತದೆ. ದೇವಭಕ್ತರು ಈ ಪಂಕ್ತಿಗಳನ್ನು ಕೇಳಿದರೆ

ಅವಿರೋಧವಾಗಿ ಇದರಿಂದ ಆಸಕ್ತಿ ಪಡೆಯುವರು ಹಾಗೂ ಹೃದಯ ಅಶುದ್ಧತೆಯಿಂದ ಸ್ವಚ್ಛವಾಗುವುದು. ಯಾರಾದರು ಕಾಪಟ್ಯದಿಂದ ಇದನ್ನು ಓದಿದರೆ ಅವನ ಇಡೀ ಮೈಯಲ್ಲಿ ಪ್ರಾಣದ ಸಿಹಿ ವಿಷ ಯಾರೋ ತುಂಬಿದ ಹಾಗೆ. ಇದರಲ್ಲಿ ಪ್ರಿಯೆಯ ಸೌಂದರ್ಯ ಹಾಗೂ ಸಂಗೀತ ಇದೆ ಎಂದು ಎಲ್ಲರೂ ಹೇಳುವರು. ಸ್ತ್ರೀಯ ಮುಖದಲ್ಲಿ ಬೆಡುಗು-ಬಿನ್ನಾಣ ನಾನು ತೋರಿರುವೆ. ಈ ಮಸ್ನವಿ ಓದಿದ ನಂತರ ಸಹಜ ಪ್ರವೃತ್ತಿಯಲ್ಲಿ ಎಲ್ಲ ಜಾಗದಲ್ಲಿ ಶಕ್ತಿ ತೋರುತ್ತದೆ. ಕಬ್ಬಿನ ಜಲ್ಲೆಯ ರಸ ಹಿಂಡಿ ಎಲ್ಲ ಸಿಪ್ಪೆ ತೆಗೆದು ಹಾಕಿರುವೆ. ಪ್ರತಿಯೊಂದು ಮಾತಿನ ತಿರುಳನ್ನು ದೃಷ್ಟಿಯಲ್ಲಿಟ್ಟು ಗುಟ್ಟನ್ನು ತೆಗೆದುಕೊಂಡೆ. ಅರ್ಥಗಳ ಜಾಗದಲ್ಲಿ ತಿರುಳನ್ನು ತೆಗೆದುಕೊಂಡೆ. ನುಡಿಯ ಅನೇಕ ಹೂಗಳಿಂದ ನಾನು ತಾತ್ಪರ್ಯ ತೆಗೆದುಕೊಂಡೆ. ಅಂದರೆ ಪನ್ನೀರು, ಅನುಚಿಂತನೆಗಳನ್ನು ನಾನು ಬಹಳ ಛಿದ್ರಾನ್ವೇಷಣೆ ಮಾಡಿ ಯಾವುದನ್ನು ತೆಳ್ಳಗಿತ್ತೋ ಅದರಲ್ಲಿ ಸ್ವಚ್ಛ ಮಾಡಿದೆ. ಪ್ರಬಂಧಗಳಲ್ಲಿ ಅಲ್ಲಲ್ಲಿ ಮಾತುಗಳನ್ನು ಹೇಳಿ ಅಲ್ಲಾಹನ ಕೃಪೆಯ ಶಕ್ತಿಯನ್ನು ಬಿಚ್ಚಿಟ್ಟಿದ್ದೇನೆ. ಒಂದೊಂದು ಕಲೆಯಲ್ಲಿ ಅನೇಕ ಜಾದುವಿನ ಒಯ್ಯಾರ ತೋರಿಸಿ ತುಂಟರ ಮೂಕಬಂಧನ ಮಾಡಿದ್ದೇನೆ. ದಾರಿಯ ಹಾದಿ ಸರಹದ್ದಿನ ಬದಿ ಬಿಟ್ಟು ಸಿಕಂದರನಾಗಿ ಉಕ್ಕಿನ ಕಟ್ಟೆ ಕಟ್ಟಿದ್ದೇನೆ. ಯಾಜೂಜುಗಳು ಅಧಿಕದಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿದ್ದರೂ ಸಹ ನಾನೆಲ್ಲಿದ್ದೇನೆ. ಅಲ್ಲಿ ಟಂಕ ಹೊಡೆಯಲು ಸಾಧ್ಯವಿಲ್ಲ. ನಾನು ಕಠಿಣಕರ ದಾರಿಯನ್ನು ಹಿಡಿದಿರುವೆ. ಅಗಣಿತ ಪ್ರಶಂಸೆ ಗೀತೆಗೆಳನ್ನು ಹೇಳಿರುವೆ. ನನಗೆ ಪ್ರೀತಿ ಮಾತುಗಳಲ್ಲಿ ಅಪ್ರತಿಮ ನೋಡಿ ಇದರ ಉದಾಹರಣೆ **'ಗುಲ್ಷನೆ ಇಷ್ಕ್'**ಎಂಬ ಕೃತಿ. ಪ್ರಿಯಕರ–ಪ್ರೇಯಸಿಯರಲ್ಲಿ ಏನೇನು ಕೆಲಸಗಳಾಗುತ್ತವೋ ಆ ಸೌಮ್ಯತೆಗಳಿಂದ ಪೂರ್ಣ ಮಾಡಿರುವೆ. ಯುದ್ಧದ ಕಲೆ ನೋಡುವುದಾದರೇ ಈ ಪಂಕ್ತಿ ಎತ್ತರವಾದದ್ದು, ಆದರೆ ಮಾತು ಬಲು ಸಂಕ್ಷಿಪ್ತ. ಅಲಿರವರ ಪ್ರಶಂಸೆಯಲ್ಲಿ ಏನೂ ಕೊರತೆ ಇಲ್ಲದಂತೆ ನಾನು ಮಾತುಗಳನ್ನು ಹೇಳಿರುವೆ, ಬರೆದಿರುವೆ. ನಾನು ಅದು ಸಹ ನನ್ನ ಹಾಗೆ. ಎಲ್ಲರ ಜೊತೆಯಲ್ಲಿ ನಾನು ಒಳ್ಳೆ ಸಂಬಂಧ ಬೆಳಸಿರುವೆ. ಆದ್ದರಿಂದನನ್ನ ಮೇಲೆ ಗಲಾಟೆ ಮಾಡುವ ಶತ್ರು ನನಗೆ ಯಾರೂ ಸಹ ಇಲ್ಲ. ನನ್ನ ಚಿಂತನೆಯ ಕುದುರೆ ವೇಗದಿಂದಲೂ ಅತಿ ಹೆಚ್ಚಾಗಿದೆ. ಆಕಾಶದ ಮೇಲೆ ಅದು ನೆಲೆಸಿ ಬೆಳಕು ಬೀರುತ್ತದೆ. ನನ್ನ ಲೇಖನಿ ಅಮಲೇರಿದ ಆನೆಯಿಂದ ಹೆಚ್ಚು ಯಾವ ಕಡೆ ತಿರುಗುತ್ತದೆ ಜಯ ಸಾಧಿಸುತ್ತದೆ. ನನ್ನ ಅಪ್ರತಿಮ ಶೈಲಿಯೇ ನನ್ನ ಬಾವುಟ, ಕವಿತೆಯ ಸಾಲುಗಳಲ್ಲಿ ಆನೆಯ ಮೇಲೆರಿವ ಗುರಾಣಿ. ಎದುರಾಳಿಗೆ ಉಸಿರೆತ್ತಲು ಅವಕಾಶವಿಲ್ಲ, ಅವನಿಗೆ ತಣ್ಣಗೆ ಮಾಡಲು ನನ್ನ ಕೈಚಳಕವೆಂದರೆ ಹೊಸ ಹೊಸ ವಿಷಯಗಳು, ನನ್ನ ಪಂಕ್ತಿಗಳು ಶೂರರ ಹೃದಯಗಳಲ್ಲಿ ಒಂದು ಹೊಸ ಸ್ಫೂರ್ತಿ ತುಂಬುತ್ತದೆ, ನಾನು ಬಳಿಸಿರುವ ಪ್ರತಿಯೊಂದು ಅಕ್ಷರವೂ ರುಸ್ತುಮಿನ ಕವಚದ ಹಾಗಿದೆ. ನಾನು ಕವಿತೆಯಲ್ಲಿ ಯಾವ ಮುತ್ತುಗಳನ್ನು ಪೋಣಿಸಿ ಹಾರ ಮಾಡಿ ತಂದಿರುವೆನು ಅವು ಈ ದೇಶದ

ಬರಿ(ದಕ್ಷಿಣದ ಮದುವೆಗಳ ಒಂದು ರಿವಾಜು)ಯಿಂದ ತುಂಬಿವೆ. ಅದಾಗ್ಯೂ ಮಹಮೂದ್ ಘಝ್ನಿ ಶಾಹ್ನಾಮ ಅಂತಹ ಮಹಾಕಾವ್ಯ ಬರೆಸಿದ. ಯಾವಾಗ ಶೌರ್ಯದ ಗುಣ ಮುಂದೆ ಇಟ್ಟು ನೋಡುತ್ತೇವೆಯೋ ಮಹಮೂದಲ್ಲೇ ಆಗಲಿ ಅಥವಾ ಅವನ ಸಂಬಂಧಿಕರಲ್ಲೇ ಆಗಲಿ ಅವರಲ್ಲಿ ಶೌರ್ಯದ ಗುಣ ನೋಡಲು ಸಾಧ್ಯವಿಲ್ಲ. ವಿವೇಕ ಇದರಲ್ಲಿ ಹೀಗೆ ತಪ್ಪಿಸಿಕೊಳ್ಳುತ್ತದೆ. ಅಂದರೆ ಪ್ರಾಕೃತಿಕವಾಗಿ ಅದಕ್ಕೆ ನೀಡೇ ಇಲ್ಲ. ತನ್ನಲ್ಲಿ ನೀನು ಎಂದೂ ಕೆಲಸದಲ್ಲಿ ಹೆಚ್ಚು ಕಡಿಮೆ ಎನ್ನಿಸಿಕೊಳ್ಳಲೇ ಇಲ್ಲ. ಖಂಡಿತವಾಗಿ ಎಂದೂ ಪ್ರಶಂಸೆಯಲ್ಲಿ ಇನ್ನಿತರೆ ವಸ್ತುಗಳನ್ನು ಮಿಶ್ರಿಸಿಲ್ಲ. ಲೋಕದ ಚಿಂತನೆ ಹಾಗೆಯೇ ನೀಚಮಾಡಿಟ್ಟಿದೆ. ಅವಿವೇಕಿ ತನ್ನ ಜಗತ್ತಿನ ಅದರ ಪ್ರಸ್ತಾಪನೆ ಮಾಡಿದೆ. ದೇವರ ದಯೆಯಿಂದ ಅಲಿ ನೃಪ ತನ್ನನ್ನು ದಂಡನಾಯಕನೆಂದು ಸಾಬೀತು ಪಡಿಸಿದ. ಮಾತಿನ ಅತಿದೊಡ್ಡ ಬಂಡವಾಳ ನೀಡಿ ನನಗೆ ಕೆಲಸದ ಬಗ್ಗೆ ಹೇಳಿದರು. ತನ್ನ ಕಲೆಯನ್ನು ವ್ಯಕ್ತಪಡಿಸಲು ದುಃಖ ಸಹಿಸುವುದು ಅನುಮೊದನೀಯ. ನೀವು ಪ್ರಯತ್ನಸಿದರೆ ಪ್ರತಿಯೊಂದು ಪಂಕ್ತಿ ನನಗೆ ಲಕ್ಷಾಂತರ ಖಜಾನೆ ಪಡೆಯುತ್ತದೆ. ಯಾವ ಮಾತಿನ ಮೇಲೆ ಹೃದಯದ ಕೋಣೆಯಲ್ಲಿ ನಾನು ಕಷ್ಟ ಪಟ್ಟರೆ ಅದಕ್ಕೆ ಅದರ ಮಹತ್ವವೂ ತಿಳಿಯುತ್ತದೆ ಹಾಗೂ ಸರಿಯಾದ ಬೆಲೆಯೂ ಹುಟ್ಟುತ್ತದೆ. ಪುಣ್ಯವಂತ ಫಿರ್ದೌಸಿ ವಿಚಿತ್ರವಾದ ಕೆಲಸ ಮಾಡಿದ. ತನ್ನ ದುಃಖವನ್ನು ಮರೆತು ತಾನು ಆತ್ಮವನ್ನು ಪ್ರಸನ್ನ ಮಾಡಿದ. ಅದಾಗ್ಯೂ ನಾನು ಶಾಹನ ವಿವೇಕ ಮೇಲೆ ದೃಷ್ಟಿಯಿಟ್ಟು ನಂತರ ಎಲ್ಲ ಕಲೆಗಳನ್ನು ನೋಡುತ್ತೇನೆ. ಆಗ ನನ್ನ ಮನಸ್ಸಿಗೆ ನಿಸ್ಸಂದೇಹವಾಗಿ ಹೀಗೆ ಖಾತರಿಯಾಗುತ್ತದೆಂದರೆ ಶಾಹರು ನನ್ನ ಸೂಕ್ಷ್ಮಮತಿ ಪಂಕ್ತಿಗಳನ್ನು ಕೇಳುವರು. ಶಾಹರ ನನ್ನ ಕಡೆ ನೋಡುವುದೇ ಚಿನ್ನದ ಗಣಿಕೊಟ್ಟ ಹಾಗೆ. ಸೂರ್ಯ ತನ್ನ ರಸಾಯನಿಕ ಕ್ರಿಯೆಯಿಂದ ತಯಾರುಮಾಡುವ ಚಿನ್ನ ಬೆಳ್ಳಿಯನ್ನು ಎಸೆದ. ಶಾಹನ ಬಳಿ ಕವಿತೆಯ ಮಹತ್ವ ಬಹಳಷ್ಟಿದೆ. ರತ್ನ ವ್ಯಾಪಾರಿಯೇ ರತ್ನವನ್ನು ಪರೀಕ್ಷಿಸಬಲ್ಲ. ನಿಸ್ಸಂದೇಹವಾಗಿ ನಾನು ಸಂಕ್ಷಿಪ್ತ ಮಾತುಗಳನ್ನು ಹೇಳಿರುವೆ. ಅಂದರೆ ಇದು ದಕ್ಷಿಣದ ಶಾಹ್ನಾಮಾವೆಂದ ತಿಳಿ. ನಿಜಾಂಶದಲ್ಲಿ ಏನೇನು ಘಟನೆಗಳನ್ನು ನಡೆದವೋ ಅವೆಲ್ಲವನ್ನು ದೃಷ್ಟಿಯಲ್ಲಿಟ್ಟುಕೊಂಡು ದೋಷಮುಕ್ತ ಮಾಡಿ ಎಲ್ಲ ಕಲೆಗಳನ್ನು ನಾಲಿಗೆ ಮೇಲಿಟ್ಟೆ. ಅಲ್ಲಾಹನು ಆದಮನಿಗೆ ಗುಟ್ಟಲ್ಲಿದ್ದ ಎಲ್ಲ ಭಾಷೆಗಳನ್ನು ಕಲಿಸಿದ್ದ. ಅದರ ಮೇಲೆ ಆದಮಿನ ಸಂತತಿ ಬೆಳೆಯಿತು. ಅವರ ಮಾತುಗಳು ಬೇರೆ ಬೇರೆಯಾದವು. ಅವರಲ್ಲೂ ಸಹ ಯಾರು ಕವಿತೆಯ ಗುರುಗಳಿದ್ದರೋ ಅವರ ಅದೇ ಭಾಷೆಯಲ್ಲಿ ಅವರ ಅದೇ ಪಂಕ್ತಿಗಳು ನೆನಪಿನಲ್ಲಿ ಅಚ್ಚಳದವು. ಪಂಕ್ತಿಯ ಕೋಮಲತೆಯನ್ನು ಮರೆತುಬಿಡು, ಏಕೆಂದರೆ ಸುವಾಸನೆಯಿಂದಲೇ ಹೂವು ತನ್ನ ಮೌಲ್ಯ ಪಡೆಯುತ್ತದೆ. ನಾನು ಅವಿವೇಕಿಯರ ಮಾತೇನು ಹೇಳುವುದಿಲ್ಲ. ತಿಳಿಗೇಡಿ ಇದ್ದರೆ, ಅಸೂಯೆ ಪಡೆಯುವವರ ಕೈಗೆ ಸೇರುವುದಿಲ್ಲ. ಆದರೆ ಯಾರು ವಿವೇಚನೆಯುಳ್ಳ ಕವಿಗಳಿದ್ದಾರೋ ಈ ಕಲೆಯ ಮೇಲೆ ಮೋಹಕ್ಕೊಳಗಾಗಿ ಇದನ್ನು

ಸದಾ ಗೌರವಿಸುವರು. ಓ ಅಲ್ಲಾಹನೇ ನನ್ನ ಈ ಪಂಕ್ತಿಗಳು ಮೆಚ್ಚುಗೆಯಾಗಿರಲಿ ದುಂಬಿಗೆ ಹೇಗೆ ಹೂವು ಮೆಚ್ಚುಗೆಯಾಗಿರುತ್ತದೆಯೋ ಅದೇ ರೀತಿಯಾಗಿ ಅವರ ದೃಷ್ಟಿಬಳಿ ಇವುಗಳನ್ನು ಹಾಗೇ ಮಾಡು. ಪ್ರತಿಯೊಂದು ಹೃದಯಕ್ಕೆ ಇದನ್ನು ಓದುವ ಆಸಕ್ತಿಯನ್ನು ಕೊಡು. ಶೂರರಿಗೂ ಸಹ ಗಮನದ ಪ್ರಬಲ ಆಸೆ ಕೊಡು. ಅಲಿಶಾಹನ ದೃಢತೆಯ ಹಾಗೆ ಅಪ್ರತಿಮ ನನ್ನ ಈ ಸ್ವಂತ ಕೈಯಿಂದ ಮಾಡಿದ ವಸ್ತುವನ್ನು ಲೋಕ ಪ್ರಿಯ ಮಾಡು. ಮನಸ್ಸುಗಳ ಮೇಲೆ ಈ ಉದ್ದೇಶವನ್ನು ಪ್ರಕಟಿಸು. ಮಹನೀಯರ ಪ್ರಾರ್ಥನೆಯನ್ನು ಸದೈವ ನನ್ನ ಹಕ್ಕಿಗೆ ಇರುವ ಹಾಗೆ ಮಾಡು. ಇದಕ್ಕೆ ಮತ್ಸರಿಯ ಕೆಟ್ಟ ದೃಷ್ಟಿ ತಾಗಿಸಬೇಡ, ಟೀಕೆ ಟಿಪ್ಪಣಿಯ ನಾಲಿಗೆಯನ್ನು ಸಂಪೂರ್ಣ ಮುಚ್ಚಿಹಾಕು. ಶಾಹನ ದರ್ಬಾರುಗಳು ನಿತ್ಯವೂ ಹೀಗೆ ಸೇರುತ್ತಿರಲಿ. ಆ ಸಭೆಗಳಲ್ಲಿ ಈ ಕೃತಿ ಮೇಣದ ಬತ್ತಿಯಂತಿರಲಿ. ಓ ಬಾದಶಾಹರೆ ಈ ಮುತ್ತುಗಳನ್ನು ನಿತ್ಯವೂ ತೂಕ ಮಾಡಿ ಇಡುತ್ತಾ ಇರಿ. ಪ್ರತಿ ಕ್ಷಣದ ಪ್ರೀತಿಯೊಂದು ರೆಪ್ಪೆಬಡಿವಷ್ಟರ ಕಾಲದಲ್ಲಿ ಇದರ ಮೌಲ್ಯ ಹೆಚ್ಚುತ್ತಿರಲಿ. ಓ ಆಕಾಶವೇ ನೋಡು ಈ ಮುತ್ತುಗಳನ್ನು ಹಾಗೆ ಇಟ್ಟಿರು. ಓ ಯುಗವೇ ಈ ಮುತ್ತುಗಳನ್ನು ಪ್ರಪಂಚದಲ್ಲಿ ಇಟ್ಟುಬಿಡು. ಪ್ರವಾದಿ ಮುಹಮ್ಮದ್(ಸೊ)ರವರ ವಶೀಲಿಯಿಂದ, ನಿತ್ಯವೂ ಇದನ್ನು ಜಗತ್ತಿನಲ್ಲಿ ಈ ಪ್ರಪಂಚಕ್ಕೆ ಕೆಲಸದಲ್ಲಿ ತೊಡಗಿಸಿರು. ನಾನು ಯಾವಾಗ ಧೈರ್ಯಮಾಡಿ ಶಾಹನ ದೃಢತೆಯನ್ನು ಬರೆದನು ಆಗ ಒಂದು ಸಾವಿರದ ಎಪ್ಪತಾರು (೧೦೭೬ಹಿ) ವರ್ಷವಿತ್ತು. ಆದರೂ ಸಹ ನಾನು ಅಲ್ಲಾಹನಿಂದ ಈ ಉಮೇದು ಸಹ ಇಟ್ಟಿರುವನೋ ನಿತ್ಯ ಶಾಹನಿಂದ ನಿತ್ಯವೂ ವಿಜಯದ ಅಪಾರ ಮಾತುಗಳು ಜೀವಂತವಾಗಿ ಹೊರಹೊಮ್ಮುತಿರಲಿ. ನಾನೂ ಬರೆಯುವೆ ಹಾಗೂ ಅನೇಕ ಜನರೂ ಬರೆಯುವರು. ಎಲ್ಲಿಯವರೆಗೆ ಈ ಲೋಕವಿದೆಯೋ ಚಿಕ್ಕವರೇ ಆಗಲಿ ದೊಡ್ಡವರೇ ಆಗಲಿ ಎಲ್ಲರೂ ಬರೆಯುವರು. ಓ ನುಸ್ರತಿ ಈಗ ನಿನ್ನ ಕವಿತೆಯನ್ನು ಮುಗಿಸು. ಪ್ರಾರ್ಥನೆಯಿಂದಲೇ ನಿನ್ನ ಉದ್ದೇಶ ಪೂರ್ಣವಾಯಿತು. ಓ ಅಲ್ಲಾಹನೇ ಖಡ್ಗದ ಮಿಂಚಿಗೆ ಸೂರ್ಯನ ಹಾಗೆ ನಕ್ಷತ್ರಗಳನ್ನು ಹೂತ ಚಂದ್ರನ ಮುಖವನ್ನು ಒತ್ತುತ್ತಾ ಇರುತ್ತದೆಯೋ ಅಲ್ಲಿಯವರಿಗೂ ಶಾಹನೂ ದೃಢತೆಯಿಂದ ಜಯಶೀಲನಾಗಿರಲಿ. ಶತ್ರುಗಳ ಮೇಲೆ ಅವನ ಖಡ್ಗ ನಿತ್ಯವೂ ಸುರಿಯುತ್ತಿರಲಿ. (೬೭೭೮-೬೮೭೪)

■

ಮುಲ್ಲಾ ನುಸ್ರತಿ

ವಿರಚಿತ

ತಾರೀಖೇ ಸಿಕಂದರಿ

ಅನುವಾದ

ಡಾ. ವಿಠ್ಠಲರಾವ್ ಟಿ. ಗಾಯಕ್ವಾಡ್

*

ಪ್ರಸ್ತಾವನೆ

ಈ ಕೃತಿಗೆ ಪ್ರಸ್ತಾವನೆಯನ್ನು ಬರೆಯುವ ಅವಕಾಶ ನನಗೆ ಲಭಿಸಿರುವುದು ಸಂತಸದ ವಿಷಯ. ಇದರ ಲೇಖಕರಾದ ಶ್ರೀ ದೇವೀಸಿಂಗ್ ಚೌಹಾನ್ ಹಾಗೂ ನಾನು ಹಳೆಯ ಸ್ನೇಹಿತರು. ೧೯೩೨ರಲ್ಲಿ ನಾನೊಮ್ಮೆ ತುಳಜಾಪುರ ತಾಲೂಕಿನ ಹಿಪ್ಪರಗಾ ಊರಿನ ಪಾಠಶಾಲೆಯೊಂದಕ್ಕೆ ಭೇಟಿಕೊಟ್ಟಿದ್ದೆ. ಆಗ್ಗೆ ಅಲ್ಲಿ ಶ್ರೀ ದೇವೀಸಿಂಗ್ ಅವರು ಶಿಕ್ಷಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಅನಂತರ ಅವರು ಉನ್ನತ ಶಿಕ್ಷಣಕ್ಕಾಗಿ ಪುಣೆಗೆ ಬಂದು ಮಹೋಪಾಧ್ಯಾಯರಾಗಿದ್ದ ದ.ವಾ. ಪೋತದಾರರ ಶಿಷ್ಯರಾದರು. ಶಿಕ್ಷಣ ಪೂರ್ಣವಾದ ಮೇಲೆ ಅವರು ಹೋದುದು ಸ್ವಾಮಿ ರಾಮಾನಂದ ತೀರ್ಥರ ಬಳಿಗೆ. ಅಂಬಾ ಜೋಗಾಈಯಲ್ಲಿ ಸ್ವಾಮಿಜಿಯವರ ಯೋಗೇಶ್ವರಿ ಪಾಠಶಾಲೆಯು ಇತ್ತು. ಸ್ವತಃ ಸ್ವಾಮಿಜಿಯವರೇ ಅಲ್ಲದೆ ಅಲ್ಲಿನ ಅನೇಕ ಶಿಕ್ಷಕರು ಅಂದಿನ ಸಂಸ್ಥಾನದ ರಾಜಕಾರಣದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಶ್ರೀ ದೇವೀಸಿಂಗ್ ಅವರೂ ಕೂಡ ರಾಜಕಾರಣದಲ್ಲಿ ಭಾಗವಹಿಸುವ ಉದ್ದೇಶದಿಂದಲೇ ಅಲ್ಲಿಗೆ ಹೋಗಿದ್ದರು. ಮುಂದಿನ ಅವರ ಬದುಕು ಬೇರೆ ಬೇರೆ ನೆಲೆಯದ್ದಾಗಿತ್ತು. ಜೈಲುವಾಸ, ಅಲ್ಲಿಂದ ಪಲಾಯನ, ಪುನಃ ಕಠಿಣ ಜೈಲುವಾಸ, ಭೂಗತರಾಗಿದ್ದುದು ಇತ್ಯಾದಿ ಅನೇಕ ಘಟನೆಗಳು ಅವರ ಬದುಕಿನಲ್ಲಿ ಸಂಭವಿಸಿದವು. ಆದರೆ ಅದರ ಜೊತೆಜೊತೆಗೆ ದೇಶ ಸಂರಕ್ಷಣಾ ಹೋರಾಟವನ್ನು ಮಾಡಿದ್ದರು. ಸ್ವಾತಂತ್ರ್ಯಾನಂತರ ಅವರು ಕೆಲವು ಕಾಲ ಪೋಲಿಸ್ ಇಲಾಖೆಯಲ್ಲಿ ಕಾರ್ಯ ನಿರ್ವಹಿಸಿದರು. ಆ ಸಂಸ್ಥಾನವನ್ನು ಭಾರತದಲ್ಲಿ ವಿಲೀನಗೊಳಿಸಿ ಪುನರ್ ರಚಿಸಲಾಯಿತು. ಹೈದರಾಬಾದ್ ರಾಜ್ಯವನ್ನು ಮೂರು ಭಾಗ ಮಾಡಿ ಅವನ್ನು ಅಕ್ಕಪಕ್ಕದ ರಾಜ್ಯಗಳಲ್ಲಿ ಸಮಾವಿಷ್ಟಗೊಳಿಸಿದಾಗ ಶ್ರೀ ದೇವೀಸಿಂಗ್ ಚೌಹಾನರು ಮರಾಠಾವಾಡ ಪ್ರದೇಶದ ನಿವಾಸಿಗಳಾಗಿದ್ದರಿಂದ ಮಹಾರಾಷ್ಟ್ರದ ನಾಗರಿಕರಾದರು. ೧೯೫೭ರ ಮಹಾಚುನಾವಣೆಯವರೆಗೂ ಅವರು

ಕಾಂಗ್ರೆಸ್ ಪಕ್ಷದಲ್ಲಿದ್ದು ಜನಸೇವೆ ಮಾಡುತ್ತಿದ್ದರು. ಆರಂಭದಲ್ಲಿ ಅವರು ಹೈದರಾಬಾದ್‌ನ ಶಿಕ್ಷಣ ಮತ್ತು ಗ್ರಾಮಾಭಿವೃದ್ಧಿ ಖಾತೆಯ ಮಂತ್ರಿಯಾಗಿಯೂ, ಅನಂತರ ಮಹಾರಾಷ್ಟ್ರಕ್ಕೆ ಸೇರಿಕೊಂಡ (ಅದರ ಒಂದು ಭಾಗ) ಮೇಲೆ ಅವರು ಪ್ರಥಮವಾಗಿ ಕೃಷಿಖಾತೆ, ಅನಂತರದಲ್ಲಿ ಕಾರ್ಮಿಕ ಮತ್ತು ಸಾರಿಗೆ ಖಾತೆಯ ಉಪಮಂತ್ರಿಯಾಗಿ ಕಾರ್ಯನಿರ್ವಹಿಸಿದರು. ೧೯೬೭ರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಸ್ಪರ್ಧಿಸಿದರೂ ಅವರು ಯಶಸ್ವಿಯಾಗಲಿಲ್ಲ. ನಾನು ರಾಜಕಾರಣದ ಬಗ್ಗೆ ತಿಳಿದವನಲ್ಲ. ಶ್ರೀ ದೇವೀಸಿಂಗರ ವೈಯಕ್ತಿಕ ಮಾಹಿತಿಯೂ ಅಷ್ಟೇನು ಅರಿತವನಲ್ಲ. ಹಾಗಾಗಿ ಈ ಅಪಜಯದಿಂದ ಅವರಿಗೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಆದ ಲಾಭನಷ್ಟಗಳ ಬಗ್ಗೆ ಏನನ್ನೂ ಹೇಳಲಾರೆ. ಆದರೆ ಒಂದು ಮಾತ್ರ ಸತ್ಯ. ಇದರಿಂದಾಗಿ ಶ್ರೀ ದೇವೀಸಿಂಗರು ಮಹಾರಾಷ್ಟ್ರದ ಇತಿಹಾಸದ ಬಗೆಗಿನ ಸೂಕ್ಷ್ಮ ಹಾಗೂ ಉತ್ಸಾಹಿ ಅಧ್ಯಯನಕಾರರೆಂದು ಎಲ್ಲೆಡೆ ಗುರುತಿಸಲ್ಪಡುವಂತಾಯಿತು. ಇತಿಹಾಸದ ಅಧ್ಯಯನದ ದೃಷ್ಟಿಯಿಂದ ಇದೊಂದು ಲಾಭವೇ ಸರಿ. ಇದಕ್ಕೆ ಮುನ್ನವೇ ಅವರು ಸಂಸ್ಕೃತ, ಮರಾಠಿ, ಇತಿಹಾಸ ಇತ್ಯಾದಿ ವಿಷಯಗಳ ಅಧ್ಯಯನ ಮಾಡುತ್ತಿದ್ದವರು. ಮುಂದೆ ಅವರು ಅವುಗಳ ಅಮೂಲಾಗ್ರ ಅಧ್ಯಯನದಲ್ಲಿ ತಮ್ಮನ್ನು ಪೂರ್ಣವಾಗಿ ತೊಡಗಿಸಿಕೊಂಡರು.

ಅವರ ಅತೀವ ಉತ್ಸಾಹ ಮತ್ತು ಸಾತತ್ಯವಾದ ಅಧ್ಯಯನದಿಂದಾಗಿ ಹಲವಾರು ಗ್ರಂಥಗಳು ಹೊರಬರುತ್ತಿರುವುದು ಸ್ವಾಭಾವಿಕವೇ. ಈ ಕೃತಿಗಳ ಸ್ವರೂಪವನ್ನು ಗಮನಿಸಿದರೆ ಈ ಮಾತಿನ ಸತ್ಯಾಸತ್ಯತೆಯು ತಿಳಿಯುವುದು. ಅವರು ಚುನಾವಣೆಯಲ್ಲಿ ಪರಾಜಿತರಾದ ಘಟನೆಯು ಐತಿಹಾಸಿಕ ದೃಷ್ಟಿಯಿಂದ ಲಾಭದಾಯಕವಾದ ಸಂಗತಿ ಎಂದೇ ಹೇಳಬಹುದೇನೋ. ಯಾವುದೇ ವಿಷಯವನ್ನಾಗಲಿ ಅದರ ಸಾಂಗೋಪಾಂಗ ಅಧ್ಯಯನ ಮಾಡಿದ ಮೇಲೆಯೇ ಯಾರಿಗಾದರೂ ಆ ವಿಷಯದ ಯಾವ್ಯಾವ ಉಪಾಂಗಗಳ ಮೇಲೆ ಬೆಳಕು ಚೆಲ್ಲಬೇಕಾದ ಅವಶ್ಯಕತೆ ಇದೆ ಎಂಬುದು ಅಧ್ಯಯನಕಾರರ ಮನಸ್ಸಿಗೆ ಹೊಳೆಯುವುದು. ಶ್ರೀ ದೇವೀಸಿಂಗ್ ಚೌಹಾನರ ವಿಷಯದಲ್ಲಿಯೂ ಸಹ ನಾವು ಅದನ್ನೇ ಹೇಳಬಹುದು.

ಮಹಾರಾಷ್ಟ್ರದ ಇತಿಹಾಸದ ಅಭ್ಯಾಸಿಗಳಲ್ಲಿ ತಮ್ಮ ವಿಷಯದಲ್ಲಿ ಇನ್ನೂ ಸರ್ವಾಂಗೀಣ ವಿದ್ವತ್ತಿನ ಅಗತ್ಯವಿದೆ ಎಂದೆನಿಸುವುದೊ ಇಲ್ಲವೊ ಎಂಬುದರ ಬಗ್ಗೆ ಆಗಾಗ್ಗೆ ನನಗೆ ಸಂಶಯ ಬರುವುದುಂಟು. ಕಾರಣ ಅವರೆಲ್ಲ ಕೇವಲ ಮರಾಠಿ, ಇಂಗ್ಲಿಷ್, ಸಂಸ್ಕೃತ ಮತ್ತು ಹಿಂದಿ ಭಾಷೆಗಳಲ್ಲಿನ ವಾಙ್ಮಯದಿಂದಷ್ಟೆ ಸಮಾಧಾನ ಮಾಡಿಕೊಂಡಿದ್ದಾರೆ. ಮರಾಠಿ ಇತಿಹಾಸದ ಬಗ್ಗೆ ಪೂರ್ಣ ಅಧ್ಯಯನ ಸಾಧ್ಯವಾಗಬೇಕಾದರೆ ಉರ್ದು, ಫಾರ್ಸಿ, ಪೋರ್ಚುಗೀಸ್, ಡಚ್, ಕನ್ನಡವೇ ಮೊದಲಾದ ಬೇರೆ ಬೇರೆ ಭಾಷೆಗಳನ್ನು ಕಲಿಯಬೇಕಾದ್ದು ಅವಶ್ಯ. ಆದರೆ ಇಂಥ ಜ್ಞಾನವುಳ್ಳವರು ಕೆಲವೇ ಮಂದಿ ಮಾತ್ರ. ಶ್ರೀ ಚೌಹಾನ ಅವರು ಮೇಲಿನ ಎಲ್ಲಾ

ಭಾಷೆಗಳನ್ನು ಓದಿ ಬರೆಯಬಲ್ಲ ವ್ಯಕ್ತಿ. ಅವರು ಹೈದರಾಬಾದಿನಲ್ಲಿ ಇದ್ದುದರಿಂದ ಉರ್ದು ಭಾಷೆಯನ್ನು ಸಹ ಚೆನ್ನಾಗಿ ಕಲಿತಿದ್ದಾರೆ. ಫಾರ್ಸಿ ಭಾಷೆಯ ಬಗ್ಗೆ ಅಪಾರ ಜ್ಞಾನವುಳ್ಳ ಅವರು ದಖನಿ ಹಿಂದಿಯಲ್ಲಿನ ಹಲವಾರು ಪ್ರಾಚೀನ ಕಾವ್ಯಗಳನ್ನು ಇತಿಹಾಸ ಮತ್ತು ಭಾಷೆಗಳ ದೃಷ್ಟಿಯಿಂದ ಅಧ್ಯಯನ ಮಾಡಿದ್ದಾರೆ. ಅದರ ದೃಗ್ಗೋಚರ ಫಲವೇ ಈ ಕೃತಿ.

'ತಾರೀಖೇ-ಅಸಿಕಂದರಿ' ಕಾವ್ಯವು ಮುಲ್ಲಾ ನುಸ್ರತಿಯು ರಚಿಸಿದ್ದು. 'ಬಸಾತಿನು-ಸ್ಸಲಾತೀನ' ಎಂಬ ಐತಿಹಾಸಿಕ ಫಾರ್ಸಿ ಕೃತಿಯ ೪೪೧ನೆಯ ಪುಟದಲ್ಲಿ ಈ ಕಾವ್ಯದ ಉಲ್ಲೇಖವಿದೆ. ಈ ಕೃತಿಯನ್ನು 'ವಿಜಾಪುರದ ಆದಿಲಶಾಹಿ ಮನೆತನದ ಇತಿಹಾಸ' (ವಿಜಾಪುರಚ್ಯಾ ಆದಿಲಶಾಹಿ ಘರಾಣ್ಯಾಚಾ ಇತಿಹಾಸ) ಎಂಬ ಹೆಸರಿನಲ್ಲಿ ಮರಾಠಿ ಭಾಷೆಗೆ ಶಕ ೧೮೦೮ರಲ್ಲಿ ಅನುವಾದ ಮಾಡಿ ಪ್ರಕಟಿಸಲಾಗಿದೆ. ಅದರಲ್ಲಿನ ೨೨೮ನೆಯ ಪುಟದಲ್ಲಿ ಈ ಕಾವ್ಯದ ಉಲ್ಲೇಖ ಬರುತ್ತದೆ. ಆದರೆ ಅದರ ಉರ್ದು ಮತ್ತು ಹಿಂದಿ ಅನುವಾದಗಳಲ್ಲಿ ಮಾತ್ರ ಈ ಉಲ್ಲೇಖವೇ ಕಂಡುಬರುವುದಿಲ್ಲ. ಆದಾಗ್ಯೂ ಈ ಹಿಂದಿ ಮೂಲದ ಕಾವ್ಯವನ್ನು ಪರಿಶೀಲಿಸುವ ಕಾರ್ಯಕ್ಕೆ ಯಾರೂ ತೊಡಗಿದಂತೆ ಕಾಣುವುದಿಲ್ಲ. ಈ ಕಾವ್ಯದ ಪ್ರತಿಯೊಂದು ವಿಭಜನಾ ಪೂರ್ವ ಕಾಲಕ್ಕೆ ಭಾರತದಲ್ಲಿದ್ದ ಡಾ.ಅಬ್ದುಲ್ ಹಕ್ ಅವರ 'ಅಂಜುಮನ್-ಇ-ತರಕ್ಕೀ-ಇ-ಉರ್ದು' ಸಂಸ್ಥೆಯಲ್ಲಿ ಇದ್ದಿತು. ದೇಶ ವಿಭಜನಾ ನಂತರ ತಮ್ಮ ಸಂಸ್ಥೆಯೊಡನೆ ಕರಾಚಿಗೆ ಹೋಗಿ ನೆಲೆಸಿದ ಶ್ರೀ ಹಕ್ ಅವರು ಅಲ್ಲಿಯೇ ನಿಧನರಾದರು. ನಂತರ ಪತ್ರವ್ಯವಹಾರ ನಡೆಸಿದರೂ ಆ ಪ್ರತಿಯ ಬಗ್ಗೆ ಯಾವುದೇ ಮಾಹಿತಿಯು ಲಭ್ಯವಾಗಲಿಲ್ಲ. ಆ ಹಸ್ತಪ್ರತಿಯನ್ನು ಆಧರಿಸಿ ಡಾ. ಹಕ್ ಅವರು ೧೮೪೪ರಲ್ಲಿ ಒಂದು ಕೃತಿಯನ್ನು ಪ್ರಕಟಿಸಿದ್ದರು. ಶ್ರೀ ಚೌಹಾನರು ತಮ್ಮ ಕೃತಿಯ ಕಾವ್ಯಪಾಠವನ್ನು ರೂಪಿಸಲು ಆ ಕೃತಿಯ ಕಾವ್ಯ ಭಾಗವನ್ನೇ ಆಧರಿಸಿದ್ದಾರೆ.

ಅರಬೀ, ಫಾರ್ಸಿ, ಉರ್ದು ಇತ್ಯಾದಿ ಭಾಷೆ ಮತ್ತು ಅವುಗಳ ಉಪಭಾಷೆಗಳ ಲಿಪಿಯು ಸದೋಷವಾದುದು. ಈ ಲಿಪಿಗಳಲ್ಲಿ ಹ್ರಸ್ವ ಅ, ಇ, ಉ-ಈ ಸ್ವರಗಳಿಗೆ ಚಿಹ್ನೆಗಳಲ್ಲಿ ಹಾಗೆಯೇ ಈ, ಏ, ಐ, ಆಯ್, ಯ್ ಮತ್ತು ಊ, ಓ, ಅವ್ ಮತ್ತು ವ್-ಇವುಗಳಿಗೆ ಕ್ರಮವಾಗಿ ಚಿಹ್ನವಿರಹಿತ ಯಾಯ್ ಮತ್ತು ವಾಯ್-ಈ ಎರಡು ವರ್ಣಗಳನ್ನು ಪ್ರಯೋಗಿಸಲಾಗುತ್ತದೆ. ಹಾಗಾಗಿ ಅವುಗಳನ್ನು ಎಲ್ಲಿ ಮತ್ತು ಹೇಗೆ ಉಚ್ಚರಿಸಬೇಕೆಂದು ತಿಳಿಯುವುದಿಲ್ಲ. ಎಲ್ಲಾ ವರ್ಣಗಳನ್ನು ಸಾಮಾನ್ಯವಾಗಿ ಚಿಹ್ನರಹಿತವಾಗಿಯೇ ಬರೆಯುತ್ತಿರುವುದರಿಂದ ಹೀಗಾಗಿದೆ ಎನಿಸುತ್ತದೆ. ಈ ಲಿಪಿಯಲ್ಲಿ ಬರೆದ ಸಂಸ್ಕೃತ ಮತ್ತು ಸಂಸ್ಕೃತೋದ್ಭವ ಶಬ್ದಗಳನ್ನು ಓದುವುದು ಬಹಳ ಕಠಿಣ. ಈ ಪರಿಸ್ಥಿತಿಯಿಂದಾಗಿ ಅದರಲ್ಲಿ ಸಹಜವಾಗಿಯೇ ತಪ್ಪುಗಳಾಗುತ್ತಿವೆ. ವಾಚನವೇ ಸದೋಷಮಯವಾಗಿರುವುದರಿಂದ ಅದರ ಸರಿಯಾದ ಅರ್ಥವನ್ನು ಗ್ರಹಿಸಲಾಗುತ್ತಿಲ್ಲ.

ಪ್ರಸ್ತುತ 'ತಾರೀಖೇ-ಅಸಿಕಂದರಿ' ಕಾವ್ಯವೂ ಇದಕ್ಕೆ ಹೊರತಲ್ಲ. ಮೂಲ ಹಸ್ತ-ಪ್ರತಿಯೇನಾದರೂ ಸಿಕ್ಕಿದ್ದಲ್ಲಿ ಅದರಿಂದ ಇದಕ್ಕಿಂತಲೂ ಯೋಗ್ಯವಾದ ಪಾಠವು ದೊರಕುವ ಸಾಧ್ಯತೆಯಿತ್ತು. ಆದರೆ ಈಗ್ಗೆ ಆ ಪ್ರತಿಯ ದರ್ಶನವೂ ಅಸಾಧ್ಯವಾಗಿದೆ.

ಇದಕ್ಕಿಂತಲೂ ನನಗೆ ಕಂಡುಬಂದಿರುವ ಮುಖ್ಯವಾದ ಕಟುಸತ್ಯವೆಂದರೆ ಮುಸ್ಲಿಮೇತರ ವಿದ್ವಾಂಸರು ಅರಬೀ-ಫಾರ್ಸಿಗಳನ್ನು ಅಭ್ಯಸಿಸುತ್ತಿರುವ ಹಾಗೆ ಮುಸ್ಲಿಂ ವಿದ್ವಾಂಸರು ಸಂಸ್ಕೃತಾದಿ ಭಾಷೆಗಳನ್ನು ಅಧ್ಯಯನ ಮಾಡುತ್ತಿಲ್ಲದಿರುವುದು. ಆದರೂ ನಾವೇ ಸರ್ವಜ್ಞರು, ಬೇರೆಯವರಾರೂ ನಮ್ಮ ಸಮೀಪಕ್ಕೆ ಬರಲಾರರು ಎಂಬುದು ಮುಸ್ಲಿಂ ವಿದ್ವಾಂಸರ ಊಹೆಯಾಗಿರುವುದು ನನ್ನ ಅನುಭವಕ್ಕೆ ಬಂದಿದೆ. ವಸ್ತುಸ್ಥಿತಿ ಹೀಗಿರುವಾಗ ಮುಸ್ಲಿಂ ವಿದ್ವಾಂಸರು ಸಂಪಾದಿಸಿರುವ ಹಿಂದಿ ಕೃತಿಗಳು ನಿರ್ದೋಷವಾದುವೇನಲ್ಲ. ಪ್ರಸ್ತುತ ಮತ್ತು ಈ ಪ್ರಕಾರದ ಅನ್ಯಕೃತಿಗಳ ಬಗ್ಗೆಯೂ ಈ ಮಾತನ್ನೇ ಹೇಳಬಹುದು. ಶ್ರೀ ಚೌಹಾನ್ ಅವರು ಈ ದಖನಿ ಹಿಂದಿಯ ಶುದ್ಧಕಾವ್ಯ ಪಾಠವನ್ನು ಕೊಡುವುದಕ್ಕಾಗಿ ಬಹಳ ಪ್ರಯತ್ನ ಮಾಡಿದ್ದಾರೆ. ಅವರ ಈ ಕಾರ್ಯವು ಸ್ತುತ್ಯ ಮತ್ತು ಅಭಿನಂದನೀಯ. ಅವರ ಪರಿಶ್ರಮದ ಫಲವೇ ನಮ್ಮೆದುರಿನ ಪ್ರಸ್ತುತ ಕೃತಿ.

ಈ ಕೃತಿಯಲ್ಲಿ ಶ್ರೀ ಚೌಹಾನ್ ಅವರು ವಿಷಯದ ದೃಷ್ಟಿಯಿಂದ ಐತಿಹಾಸಿಕ ಮತ್ತು ಭಾಷಿಕ ಹಿನ್ನೆಲೆಯನ್ನು ಗಂಭೀರವಾಗಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ ಎಂದು ಹೇಳಬಹುದು. ಇತಿಹಾಸದ ಅಭ್ಯಾಸಿಗಳಿಗೆ ಈ ಕೃತಿಯು ಅತಿ ಮಹತ್ವವಾದೀತೆಂದು ನನಗೆ ಅನಿಸುವುದಿಲ್ಲ. ಆದರೆ ಇತಿಹಾಸಜ್ಞರು ಉಪಲಬ್ಧವಿರುವ ಎಲ್ಲಾ ಐತಿಹಾಸಿಕ ಕೃತಿಗಳನ್ನು ಅನುಶೀಲನ ಮಾಡಬೇಕಾದ್ದಂತೂ ಅಗತ್ಯ. ಈ ಕೃತಿಯ ಪ್ರಸ್ತಾವನೆ ಮತ್ತು ಕೊನೆಗೆ ನೀಡಿರುವ ಟಿಪ್ಪಣಿಗಳಲ್ಲಿ ಶ್ರೀ ಚೌಹಾನ್ ಅವರು ತಮ್ಮ ಇತಿಹಾಸದ ಅರಿವನ್ನು ಪೂರ್ಣವಾಗಿ ಮನಗಾಣಿಸಿದ್ದಾರೆ. ಅಷ್ಟೇ ಅಲ್ಲದೆ ಈ ಬಗ್ಗೆಯೇ ಬಂದಿರುವ 'ಪರ್ಣಾಲಪರ್ವಪಗ್ರಹಣಾಖ್ಯಾನ' ಕಾವ್ಯದ ಸಂಬಂಧಿತ ಭಾಗವನ್ನು ಈ ಅನುವಾದದೊಡನೆ ಒದಗಿಸಿದ್ದಾರೆ.

ಈ ಕೃತಿಯ ವೈಶಿಷ್ಟ್ಯವೆಂದರೆ, ಭಾಷೆಯ ಅಧ್ಯಯನ. ಇದಕ್ಕಾಗಿಯೇ ಶ್ರೀ ಚೌಹಾನರು ಪ್ರಥಮವಾಗಿ ತಾರೀಖೇ-ಅಸಿಕಂದರಿಯ ಉರ್ದು ಲೇಖನವನ್ನು ನಾಗರಿಕರಿಗೆ ಲಿಪ್ಯಂತರ ಮಾಡಿ ನಂತರ ಅದರಲ್ಲಿನ ಕಠಿಣವಾದ ಅರಬೀ, ಫಾರ್ಸಿ, ಸಂಸ್ಕೃತ, ಸಂಸ್ಕೃತೋದ್ಭವ ಇತ್ಯಾದಿ ಶಬ್ದಗಳ ಅರ್ಥ ಮತ್ತು ವ್ಯುತ್ಪತ್ತಿಯನ್ನು ನೀಡಿದ್ದಲ್ಲದೆ ಅದರ ಪರ್ಯಾಯ ದೇಶಿ ಅರ್ಥಪಾಠವನ್ನು ನೀಡಿದ್ದಾರೆ. ಕೊನೆಗೆ ಅರಬೀ, ಫಾರ್ಸಿ, ಸಂಸ್ಕೃತ, ಸಂಸ್ಕೃತೋದ್ಭವ ಮತ್ತು ದೇಶಿ ಶಬ್ದಾರ್ಥ ಕೋಶವನ್ನು ನೀಡಲಾಗಿದೆ ಇಲ್ಲಿ. ಅಧ್ಯಯನಾಸಕ್ತರಿಗೆ ಈ ಕೃತಿಯು ಎಲ್ಲಾ ದೃಷ್ಟಿಯಿಂದಲೂ

ಉಪಯುಕ್ತವಾಗಿಸಬೇಕೆಂಬ ಉದ್ದೇಶದಿಂದ ಶ್ರೀ ಚೌಹಾನರು ಬಹಳ ಪ್ರಯತ್ನ ಮಾಡಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

'ದೃಷ್ಟ ಕಿಮಪಿ ಲೋಕೇಸ್ಮಿನ ನಿರ್ದೋಷನ ನಿರ್ಗುಣವಮ್' ಅಥವಾ 'ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾ' ಎಂಬ ಶುಭಾಷಿತಗಳು ಅತಿ ಪ್ರಸಿದ್ಧವಾಗಿವೆ. ಅಂತೆ ಇದರಲ್ಲಿ ಯಾವ ನ್ಯೂನತೆಗಳು ಇಲ್ಲ ಎಂದು ಯಾರೂ ಹೇಳಲಾರರು. ವಿಶೇಷವಾಗಿ ಯಾವುದೇ ವಿಧಾಯಕ ಕಾರ್ಯವನ್ನು ಮಾಡುವಾಗ ಮಾನವೀಯ ಬುದ್ಧಿ ಸಾಮರ್ಥ್ಯ ಅಥವಾ ಕಾರ್ಯಶಕ್ತಿಗೆ ಸೀಮಿತತೆಯು ಇರುವುದರಿಂದ ಕೆಲವಾರು ದೋಷಗಳು ಇಲ್ಲವೆ ನ್ಯೂನತೆಗಳು ಇರುವುದು ಸಹಜವೇ. ಈ ವಿಷಯದಲ್ಲಿನ ತಜ್ಞರಿಗೆ ಮಾತ್ರ ಇಂಥ ದೋಷಗಳು ಕಾಣುತ್ತವೆ. ಈ ಕೃತಿಯ ವಿಷಯದಲ್ಲಿಯೂ ಇಂಥದು ಇರಬಹುದಾಗಿದೆ.

ಶ್ರೀ ಚೌಹಾನರು ಮಾಡಿರುವಷ್ಟು ಅಧ್ಯಯನವನ್ನು ಬೇರೆ ಅನ್ಯರು ಮಾಡಿದ್ದಲ್ಲಿ ಮಾತ್ರ ಬಹುಶಃ ಕೆಲವಾರು ದೋಷಗಳು ಕಾಣಬಹುದು. ಅದಲ್ಲದೆ, ಈ ಬಗೆಯ ದೋಷದರ್ಶನವು ಉಪಕಾರಕರ ಕೃತ್ಯವೇ. ದಖನಿ ಹಿಂದಿಯ ನಾಗರೀ ಲಿಪಿಯಲ್ಲಿ ಪ್ರಕಟಿಸುತ್ತಿರುವುದರಲ್ಲಿ ಇದೇ ಮೊದಲ ಕೃತಿ. ಉರ್ದು ಲಿಪಿಯೇ ಸದೋಷವಾಗಿರುವುದರಿಂದ ಈ ಕೃತಿಯನ್ನು ಉರ್ದುವಿನಲ್ಲೆ ಮುದ್ರಿಸಿದ್ದರೆ ಪಾಠ–ಸಂಪಾದನೆಯ ಕೆಲವು ತಪ್ಪುಗಳು ಸಹಜವಾಗಿಯೇ ಇಲ್ಲವಾಗುತ್ತಿದ್ದವು. ಇಲ್ಲಿ ಹಾಗಾಗಲು ಸಾಧ್ಯವಿಲ್ಲ. ಬಹಳ ಪರಿಶ್ರಮದಿಂದ ಅಧ್ಯಯನ ಮಾಡಿ ಈ ಕೃತಿಯನ್ನು ಹೊರತಂದಿರುವುದಕ್ಕೆ ಶ್ರೀ ದೇವೀಸಿಂಗ್ ಚೌಹಾನರಿಗೆ ನನ್ನ ಅಭಿನಂದನೆಗಳು. ಈ ಬಗ್ಗೆ ಚೌಹಾನರು ಮುಂದೆ ಬರೆಯುವ ಲೇಖನಗಳು ಇದಕ್ಕಿಂತಲೂ ಪರಿಪೂರ್ಣವಾಗಿರುತ್ತವೆಂಬ ಬಗ್ಗೆ ನನಗೆ ಖಾತ್ರಿ ಇದೆ.

ಗ.ಹ.ಖರೇ

ಕಾರ್ಯದರ್ಶಿ (ಚಿಟಣೀಸ್)

ಭಾರತ ಇತಿಹಾಸ ಸಂಶೋಧನ ಮಂಡಳಿ, ಪುಣೆ.

■

*

ತಾರೀಖೇ – ಅಸಿಕಂದರಿ (ಸಿಕಂದರನ ಇತಿಹಾಸ)

(ಕೃತಿಯ ಕಾಲ ಶಕ ೧೫೯೫=ಹಿಜರಿ ೧೦೮೩)

ಪ್ರಾಸ್ತಾವಿಕ :

ತಾರೀಖೇ–ಅಸಿಕಂದರಿ ಎಂಬುದು ಮಹಾಕವಿ ಮುಲ್ಲಾ ನುಸ್ರತಿಯು ದಖ್ಖನಿ ಹಿಂದಿ ಭಾಷೆಯಲ್ಲಿ ಬರೆದ ಕೊನೆಯ ಗ್ರಂಥವಾಗಿದೆ. ಈ ಗ್ರಂಥವನ್ನು ಶಕ ೧೫೯೫ (ಹಿಜರಿ ೧೦೮೩)ರಲ್ಲಿ ರಚಿಸಲಾಯಿತು. ಡಾ.ಅಬ್ದುಲ್ ಹಕ್ ಅವರು ಅಭಿಪ್ರಾಯಪಡುವಂತೆ ಇದರ ಒಂದೇ ಒಂದು ಪ್ರತಿ ಮಾತ್ರ ಇರುವುದು. ಕೆಲವು ವರ್ಷಗಳ ಹಿಂದೆ ಈ ಪ್ರತಿಯು ಡಾ. ಹಕ್ ಅವರ ಬಳಿಯೇ ಇತ್ತು. ಆದರೆ ಈಗ್ಗೆ ಅದು ಕರಾಚಿ (ಪಾಕಿಸ್ತಾನ)ಯಲ್ಲಿ ಇರಬಹುದೆಂದು ಊಹಿಸಲಾಗಿದೆ. ಡಾ. ಹಕ್ ಅವರು ಹೇಳಿರುವ ಪ್ರಕಾರ ಈ ಕೃತಿಯಲ್ಲಿರುವುದು ಕೇವಲ ೫೫೪ ಪಂಕ್ತಿಗಳು. ಎರಡನೆಯ ಅಲಿ ಆದಿಲಶಾಹಿಯ ಮೃತ್ಯು, ಸಿಕಂದರ ಆದಿಲಶಾಹಿಯ ರಾಜ್ಯಾರೋಹಣ, ಉಮ್ರಾಣಿಯಲ್ಲಿ ನಡೆದ ಯುದ್ಧ ಮತ್ತು ಈ ಕಾವ್ಯದ ರಚನೆ ಇವುಗಳೆಲ್ಲವೂ ಸಂಭವಿಸಿದುದು ಹಿಜರಿ ೧೦೮೩ರಲ್ಲಿ.

ಅನೇಕ ಫಾರ್ಸಿ ಕೃತಿಗಳಲ್ಲಿ ವಿಜಾಪುರದ ಇತಿಹಾಸವನ್ನು ಕುರಿತಂತೆ ಉಲ್ಲೇಖವಿರುವುದು ಕಂಡುಬರುತ್ತದೆ. ಆದರೆ ಉಮ್ರಾಣಿಯ ಯುದ್ಧದ ವರ್ಣನೆಯು ನಮಗೆ ಕಾಣಸಿಗುವುದು ಕೇವಲ "ಬಸಾತಿನುಸ್ಸಲಾತೀನ್" ಎಂಬ ಕಾವ್ಯದಲ್ಲಿ ಮಾತ್ರ. ಮಹಮದ್ ಇಬ್ರಾಹಿಂ ಜುಬೇರಿ ಎಂಬುವವನು ಹಿಜರಿ ೧೨೪೧ (ಶಕ ೧೭೪೭) ರಲ್ಲಿ ಈ ಕಾವ್ಯವನ್ನು ರಚಿಸಿದನು. ಅಂದರೆ ಭಾರತದಲ್ಲಿ ಬ್ರಿಟಿಷ್ ಪ್ರಭುತ್ವ ಆರಂಭವಾದ ಮೇಲೆ ಈ ಕಾವ್ಯದ ರಚನೆಯಾದುದು. ಜುಬೇರಿಯು ಮೂಲತಃ ವಿಜಾಪುರದ ನಿವಾಸಿಯಾಗಿದ್ದನು. ತನ್ನ ಈ ಇತಿಹಾಸ ಗ್ರಂಥದಲ್ಲಿ ಆತ ನುಸ್ರತಿಯ 'ತಾರೀಖೇ–

ಅಸಿಕಂದರಿ' ಕಾವ್ಯವನ್ನು ಉಲ್ಲೇಖಿಸಿದ್ದಾನೆ. (ನುಸ್ರತಿ: ಪುಟ ೨೨೩ ಮತ್ತು ಖರೆ ಕೃತ ಶಿವಚರಿತ್ರ–ವೃತ್ತ–ಸಂಗ್ರಹ:ಖಂಡ–೨, ಪುಟ–೯೪). ನುಸ್ರತಿಯು ಆಗಿ ಹೋದ ೧೫೨ ವರ್ಷಗಳ ನಂತರ ಜುಬೇರಿಯ ಸಿಕಂದರ್ ಆದಿಲಶಾಹಿಯ ಇತಿಹಾಸವನ್ನು ಬರೆದುದು. ಆತ ನೀಡಿರುವ ತನ್ನ ಆಧಾರಭೂತ ಕೃತಿಗಳ ಪಟ್ಟಿಯಲ್ಲಿ ತಾರೀಖೇ–ಅಸಿಕಂದರಿ ಕೃತಿಯ ಹೆಸರಿಲ್ಲ. ಆದರೆ ಅವನು ಒಂದೆಡೆಯಲ್ಲಿ ಅಬ್ದುಲ್ ಕರೀಮ್ ಬಹಲೋಲಖಾನನ ಗುಣವರ್ಣನೆ ಮಾಡುವಾಗ ತಾರೀಖೇ–ಅಸಿಕಂದರಿಯನ್ನು ಉಲ್ಲೇಖ ಮಾಡಿದ್ದಾನೆ. 'ತಾರೀಖೇ–ಅಸಿಕಂದರಿಯಲ್ಲಿ ನುಸ್ರತಿಯು ಹಿಂದಿ ಭಾಷೆಯಲ್ಲಿ ಬಹಲೋಲಖಾನನ ಶೌರ್ಯವನ್ನು ಸ್ತುತಿಸಿದ್ದಾನೆ.' ಜುಬೇರಿಯು ಸಿಕಂದರ್ ಆದಿಲಶಾಹಿಯ ಇತಿಹಾಸ ಸಂಬಂಧವಾಗಿ ಶೇಖ್ ಅಬ್ದುಲ್ ಹಸನ್‌ನು ಬರೆದ ಆದಿಲಶಾಹಿ ಇತಿಹಾಸವನ್ನು ಸಹ ಉಲ್ಲೇಖಿಸಿರುವನಾದರೂ ಮತ್ತೊಂದು ಕಡೆಯಲ್ಲಿ "ಈ ಗ್ರಂಥವು ನನಗೆ ನೋಡಲು ದೊರೆತಿಲ್ಲ" ಎಂಬುದಾಗಿ ಹೇಳಿದ್ದಾನೆ. ಈ ಹಿನ್ನೆಲೆಯಲ್ಲಿ ಜುಬೇರಿಯು ಸಿಕಂದರ್ ಆದಿಲಶಾಹಿ ಕಾವ್ಯದ ಐತಿಹಾಸಿಕ ಘಟನೆಗಳನ್ನು ಬರೆಯಲು–ಏನಿಲ್ಲವೆಂದರೂ ಉಮ್ರಾಣಿಯ ಯುದ್ಧದ ವರ್ಣನೆಯಲ್ಲಿಯಾದರೂ ತಾರೀಖೇ–ಅಸಿಕಂದರಿಯನ್ನು ಆಧರಿಸಿದ್ದಾನೆ ಎಂದು ಹೇಳಲಡ್ಡಿಯಿಲ್ಲ. ನುಸ್ರತಿಯು ಮಹಮದ್ ಬರ್ಕಿಯನ್ನು ಶ್ಲೇಷಾತ್ಮಕವಾಗಿ ಉಲ್ಲೇಖಿಸಿದ್ದರೆ, ಜುಬೇರಿಯು ಸ್ಪಷ್ಟವಾಗಿ ನಮೂದಿಸಿರುವುದು ಮುಖ್ಯವಾಗಿ ಗಮನಿಸಬೇಕಾದ ಸಂಗತಿ.

ನುಸ್ರತಿಯ ಕಾವ್ಯದ ಭಾಷೆಯು ಹಿಂದಿ ಎಂಬುದು ಮಹಮದ್ ಇಬ್ರಾಹಿಂ ಜುಬೇರಿಯ ಅಭಿಪ್ರಾಯ. (ಬ–ಜಬಾನೆ ಹಿಂದಿ ಮಜ್ಮೂಹ್ ಪರ್ದಾಖ್ತ: ಅಸ್ತ) ಜುಬೇರಿಯು ಹಿಜರಿ ೧೨೪೧ (ಶಕ ೧೭೪೭)ರ ನಂತರದ ಕಾಲದವನು. ಆ ಕಾಲದಲ್ಲಿ ದಖನಿ ಹಿಂದಿಯ ಈ ಗ್ರಂಥದ ಭಾಷೆಯನ್ನು ಹಿಂದಿ ಅಥವಾ ಹಿಂದವೀ ಎಂಬ ಹೆಸರಿನಲ್ಲಿ ಕರೆಯುತ್ತಿದ್ದಿರಬೇಕು.

ವಿಜಾಪುರದಲ್ಲಿ ದಖ್ಖನಿ :

ಸ್ಪಷ್ಟವಾಗಿ ಹೇಳಬೇಕೆಂದರೆ ದಖನಿಯು ರೂಕ್ಷ ನುಡಿಯ ಒಂದು ರೂಪ. ಬಹಮನಿ ರಾಜ್ಯವು ಸ್ಥಾಪನೆಯಾದ ನಂತರ ಈ ಭಾಷೆಯು ದಕ್ಷಿಣ ಭಾಗದ ಪ್ರದೇಶಗಳಿಗೆ ಪಸರಿಸಲು ಆರಂಭಿಸಿತು. ಬಹಮನಿ ರಾಜ್ಯದ ಕಾಲದಿಂದಲೇ ಈ ಭಾಷೆಯು ಆರಂಭವಾಯಿತೆಂದೂ ಕಾಣುತ್ತದೆ. ಬಹಮನಿ ರಾಜ್ಯಕ್ಕೆ ಸೇರಿದವನಾದ ಗುಲಬರ್ಗಾ ನಿವಾಸಿ ಪ್ರಸಿದ್ಧ ಸೂಫಿ ಸಂತ ಖ್ವಾಜಾ ಬಂದೇ ನವಾಜ್ ಗೇಸೂದ ರಾಜರನ್ನು ಈ ಭಾಷೆಯ ಪ್ರಥಮ ದಾಕ್ಷಿಣಾತ್ಯ ಲೇಖಕನೆಂದು ಒಪ್ಪಿಕೊಳ್ಳಲಾಗಿದೆ. ಬಹಮನಿಯರ ಕಾಲದಲ್ಲಿಯೇ ದಖನಿ ಹಿಂದಿಯಲ್ಲಿ ನಿಜಾಮಿ ಎಂಬ ಕವಿಯು ಶಕ ೧೩೭೩ರಲ್ಲಿ "ಕದಮ್‌ರಾವ್ ಔರ್ ಪದಮ್" ಎಂಬ ಮೊದಲ ಕಥನ ಕಾವ್ಯ (ಮಸನವಿ)ವನ್ನು ರಚಿಸಿದನು.

ದಕ್ಷಿಣ ಭಾರತದಲ್ಲಿ ದಖನಿ ಹಿಂದಿಯ ವಿಕಾಸದ ಶ್ರೇಯಸ್ಸು ವಿಜಾಪುರದ ಆದಿಲಶಾಹಿ ಮತ್ತು ಹೈದರಾಬಾದಿನ ಕುತುಬ್‌ಶಾಹರಿಗೆ ಸಲ್ಲುವುದು. ಈ ಕಾರ್ಯಕ್ಕೆ ಅಹಮದ್‌ನಗರದ ನಿಜಾಮಶಾಹಿ, ಬೀದರಿನ ಬರೀದ್‌ಶಾಹಿ ಮತ್ತು ಎಲಿಚಪುರದ ಇಮಾದ್‌ಶಾಹಿಗಳ ಸಹಾಯವೂ ಒದಗಿ ಬಂದಿತು. ಈ ಭಾಷೆಯ ವಿಕಾಸವಾಗದಿದ್ದರೆ ಈ ಮೇಲಿನ ರಾಜ್ಯಗಳಾವುವು ಬಹಳ ಕಾಲ ಉಳಿಯದೆ ಅಸ್ತಂಗತವಾಗುತ್ತಿದ್ದವು. ಎಂಬುದು ಸತ್ಯ ಸಂಗತಿ. ನಿಜಾಮ ಶಾಹಿಯ ಕಾಲದಲ್ಲಿಯೇ ಜಾಲನ್‌ನ ಶಾಹಿ ಅಶ್ರಫನು ಶಕ ೧೪೨೬ (ಇಸವಿ ಸನ್ ೯೦೯)ರಚಿಸಿದ "ನವರಸಹಾರ್" ಮತ್ತು ಅಹಮದ್ ನಗರದ ಶೌಕಿಯು ಶಕ ೧೫೪೮ (ಸನ್ ೧೦೩೫)ರ ಸುಮಾರಿನಲ್ಲಿ ರಚಿಸಿದ "ಫತಃನಾಮಾ-ಎ-ನಿಜಾಮಶಾಹಿ" ಎಂಬ ಕಥನ ಕಾವ್ಯಗಳು ಬಂದಿದ್ದುವು.

ಬಹಮನಿ ರಾಜ್ಯದ ಅದ್ವಿತೀಯ ಮುತ್ಸದ್ದಿಯೂ, ಪ್ರಧಾನನೂ ಆದ ಖ್ವಾಜಾ ಇಮಾದುದ್ದೀನ್ ಮಹಮೂದ್ ಗವಾನನನ್ನು ಶಕ ೧೪೦೩ (ಹಿಜರಿ ೮೮೬) ರಲ್ಲಿ ಸುಳ್ಳು ಆಪಾದನೆಯ ಮೇಲೆ ವಧಿಸಲಾಯಿತು. ಅನಂತರದ ಹತ್ತು-ಹದಿನೈದು ವರುಷಗಳಲ್ಲಿಯೇ ವೈಭವೋಪೇತವಾಗಿದ್ದ ರಾಜ್ಯದ ವ್ಯವಸ್ಥೆಯು ಸಂಪೂರ್ಣವಾಗಿ ಕುಸಿಯತೊಡಗಿತು. ಮುಂದಿನ ರಾಜರುಗಳೆಲ್ಲ ಅಶಕ್ತರು, ಅವಿವೇಕಿಗಳು ಆಗಿದುದ್ದರಿಂದ ಅವರ ಸರದಾರರುಗಳಲ್ಲಿಯೇ ಪರಸ್ಪರ ಶತ್ರುತ್ವ ಮತ್ತು ಮತ್ಸರವು ಶಿಖರಪ್ರಾಯವಾಗಿ ಬೆಳೆಯಿತು. ಹಿರಿಯ ಸೇನಾಧಿಪತಿ, ಮಂತ್ರಿ ಮತ್ತು ರಾಜನನ್ನು ಕೊಲ್ಲುವುದಕ್ಕೆ ಒಳಸಂಚು ನಡೆಯಲು ಆರಂಭವಾದವು. ಇಂತಹ ಸಮಯದಕ್ಕಾಗಿ ಕಾಯುತ್ತಿದ್ದ ಕುಶಲರೂ, ಶೂರರೂ ಆದ ಸರದಾರರು ತಂತಮ್ಮ ಸ್ವತಂತ್ರ ರಾಜ್ಯಗಳನ್ನು ಸ್ಥಾಪನೆ ಮಾಡಿಕೊಂಡರು. ಅವರಲ್ಲಿ ಸಮರ್ಥಶಾಲಿಯೂ, ಪರಾಕ್ರಮಿಯೂ ಆಗಿದ್ದ ವಿಜಾಪುರ ಮತ್ತು ಗೋವೆಯ ಸುಭೇದಾರ (ಮುಖ್ಯಾಧಿಕಾರಿ) ಯುಸುಫ್ ಆದಿಲಖಾನನು ಪ್ರಪ್ರಥಮವಾಗಿ ತನ್ನದು ಸ್ವತಂತ್ರ ರಾಜ್ಯವೆಂದು ಘೋಷಿಸಿಕೊಂಡನು. ಶಕವರ್ಷ ೧೪೧೨ (ಹಿಜರಿ ೮೯೫)ರಲ್ಲಿ ಆತ ವಿಜಾಪುರವನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡುದಲ್ಲದೆ, ರಾಜ ಚಿಹ್ನೆಯನ್ನು ಸಹ ಧರಿಸಿಕೊಂಡನು. ಅವನ ನಂತರ ಜುನ್ನರ್‌ನ ನಿಜಾಮುಲ್ಮುಲ್ಕ್, ಬೀದರಿನ ಕಾಸಿಂ ಬರೀದ್‌ಶಾಹ, ಎಲಿಚಪುರದ ಇಮಾದುಲ್ಮುಲ್ಕ್ ಮತ್ತು ಗೋವಳಕೊಂಡ ಸುಲ್ತಾನನ ವಂಶಜ ಕುತುಬುಲ್ಮುಲ್ಕ್ ಇವರೆಲ್ಲರೂ ಸ್ವತಂತ್ರರಾದರು.

ವಿಜಾಪುರದಲ್ಲಿ ಆದಿಲಶಾಹಿ ರಾಜ್ಯ ಸ್ಥಾಪನೆಯಾಗಿ ಸುಮಾರು ನೂರು ವರುಷಗಳವರೆಗೆ ದಖನಿ ಭಾಷೆಯ ವಿಶೇಷ ಪ್ರಗತಿಯಾಗಲಿಲ್ಲ. ಕಾರಣ ಇರಾನೀ ಯೋಧರು, ಶಿಯಾ ಧರ್ಮಪಂಥೀಯರು ಹಾಗೂ ಫಾರ್ಸಿ ಭಾಷಾ ಪ್ರಭಾವ ಇವುಗಳೆಲ್ಲ ಆದಿಲಶಾಹಿಯ ಆಸ್ಥಾನದಲ್ಲಿ ಹೆಚ್ಚಾಗಿತ್ತು. ಮೊದಲನೆಯ ಇಬ್ರಾಹಿಂ ಆದಿಲಶಾಹಿ (ಮರಣ ಶಕ ೧೪೭೯)ಯು ಮೊದಲಿಗೆ ತನ್ನ ರಾಜ್ಯದಲ್ಲಿ ದಖನಿ

ಭಾಷೆಯನ್ನು ಬಳಕೆಗೆ ತಂದನು. ಆದರೆ ಮುಂದೆ ಅವನ ಮಗನಾದ ಮೊದಲನೆಯ ಅಲಿಯು ಈ ಧೋರಣೆಯನ್ನು ಮುಂದುವರಿಸಿಕೊಂಡು ಹೋಗಲಿಲ್ಲ. ಅನಂತರ ಬಂದ ಅವನ ಮಗ ಎರಡನೆಯ ಇಬ್ರಾಹಿಂ ಆದಿಲಶಾಹಿಯು ಪುನಃ ದಖನಿ ಭಾಷೆಗೆ ರಾಜಾಶ್ರಯ ಪ್ರವೃತ್ತಿಯನ್ನು ಮುಂದುವರೆಸುವುದಕ್ಕೆ ಕಾರ್ಯ ಪ್ರವೃತ್ತನಾದನು. ಜ್ಞಾನ ಮತ್ತು ಕಲೆಯ ಭೋಕ್ತೃವಾಗಿದ್ದ ಆತ ಫಾರ್ಸಿಯೊಂದಿಗೆ ದಖನಿ ಭಾಷೆಯ ಪ್ರಗತಿಗಾಗಿಯೂ ಶ್ರಮಿಸಿದನು. ಪೂರ್ಣ ಮನಸ್ಸಿನಿಂದ ದಖನಿಯನ್ನು ಸ್ವೀಕಾರ ಮಾಡಿದ್ದ ಆತನ ಆಡಳಿತದ ಕಾಲದಲ್ಲಿ ವಿಜಾಪುರವು ಸಾಹಿತ್ಯ, ಸಂಗೀತ, ಕಲೆಯೇ ಮೊದಲಾದುವುಗಳ ಮುಖ್ಯ ಕೇಂದ್ರವಾಗಿ ಬೆಳೆಯಿತು. ಅದರೊಡನೆ ಆತ ವಿಜಾಪುರದಲ್ಲಿ ಕಟ್ಟಿಸಿದ ದೊಡ್ಡ ದೊಡ್ಡ ಪ್ರಾಸಾದಗಳು, ಗುಮ್ಮಟಗಳು ಮತ್ತು ಕೆರೆಗಳು ಆ ಪಟ್ಟಣಕ್ಕೆ ಹೆಚ್ಚು ಶೋಭೆಯನ್ನು ತಂದುಕೊಟ್ಟವು. ಸ್ವತಃ ಕವಿಯಾದ ಆತ ಸಂಗೀತದಲ್ಲಿಯೂ ಬಹಳ ಆಸಕ್ತನಾಗಿದ್ದನು. ಹೆಚ್ಚಿನ ಆಸಕ್ತಿ ಮತ್ತು ಪರಿಶ್ರಮದಿಂದ ದಖನಿ ಭಾಷೆಯನ್ನು ಅಧ್ಯಯನ ಮಾಡಿ, ಅನೇಕ ರಾಗಬದ್ಧ (ಸಂಗೀತ) ಕಾವ್ಯಗಳನ್ನು ದಖನಿಯಲ್ಲಿಯೇ ರಚಿಸಿದ್ದಾನೆ. ಅವನ ಈ ಕಾವ್ಯಸಂಗ್ರಹ "ನವರಸ" ಭರಿತವಾದುದಾಗಿದ್ದು ಫಾರ್ಸಿ ಭಾಷೆಯಲ್ಲಿ ಪ್ರಕಟಿಸಲಾಗಿದೆ. ಇಬ್ರಾಹಿಮನು ತನ್ನ ನಿತ್ಯ ವ್ಯವಹಾರದಲ್ಲಿ ಮರಾಠಿ ಭಾಷೆಯನ್ನು ಬಳಸುತ್ತಿದ್ದನು ಎಂಬುದಾಗಿ ಅಸದ್‌ಬೇಗ್ ಕಜವಿನಿಯು ತನ್ನ ಬರೆಹದಲ್ಲಿ ಹೇಳಿದ್ದಾನೆ. ಇಬ್ರಾಹಿಮನಿಗೆ "ನವರಸ" ಎಂಬ ಶಬ್ದದ ಬಗ್ಗೆ ಬಹಳ ಮೋಹವೆಂಬಂತೆ ಕಾಣುವುದು. ಆ ಕಾರಣದಿಂದಾಗಿಯೇ ಆತ "ನವರಸಪುರ" ಎಂಬ ಹೆಸರಿನ ಒಂದು ನಗರವನ್ನೇ ಸ್ಥಾಪಿಸಿದ್ದನು. ತನ್ನ ದರಬಾರಿನಲ್ಲಿ ಅನೇಕ ಕಲಾವಿದರಿಗೆ ಆಶ್ರಯ ನೀಡಿದ್ದು ಇಲ್ಲಿ ಗಮನಾರ್ಹ. ಫರಿಶ್ತಾ ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದ ಫಾರ್ಸಿ ಇತಿಹಾಸಕಾರನೂ, ಲೇಖಕನೂ ಆಗಿದ್ದ ಮಹಮದ್ ಕಾಸಿಂ ಫರಿಶ್ತಾ ಇಬ್ರಾಹಿಮನ ಆಸ್ಥಾನದಲ್ಲಿದ್ದನು. ಅವನನ್ನು ಫಾರ್ಸಿ ಗದ್ಯಶೈಲಿಯ ಪ್ರವೀಣನೆನ್ನಲಾಗಿದೆ.

ಇಬ್ರಾಹಿಮ್‌ನ ಮರಣಾನಂತರ ಗದ್ದುಗೆಯನ್ನು ಏರಿದವನು ಮಹಮದ್ ಆದಿಲಶಾಹಿ. ಆತನೂ ದಖನಿ ಭಾಷೆಗೆ ಪ್ರಾಮುಖ್ಯ ನೀಡಿದ್ದನು. ಮಹಮದ್‌ನು ಕಾಲವಾದ ಮೇಲೆ ಅವನ ಪುತ್ರ ದ್ವಿತೀಯ ಅಲಿ ಆದಿಲಶಾಹಿಯು ಶಕ ೧೫೭೮ರಲ್ಲಿ ಸಿಂಹಾಸನಕ್ಕೆ ಬಂದನು. ಸುಖಲೋಲುಪನೂ, ಸೋಮಾರಿ ಪ್ರವೃತ್ತಿಯವನೂ ಆಗಿದ್ದ ಆತ ಆಡಳಿತ ನಡೆಸುವಲ್ಲಿ ಅಸಮರ್ಥನಾದ. ಹಾಗಾಗಿ ಅವನ ಕಾಲದಲ್ಲಿ ರಾಜ್ಯವು ಕ್ರಮೇಣ ದುರ್ಬಲವಾಗುತ್ತಾ ನಡೆಯಿತು. ಆದರೆ ಆತ ದಖನಿ ಹಿಂದಿಯ ಪ್ರಗತಿಗಾಗಿ ತೋರಿಸಿದ ಆಸಕ್ತಿ ಮತ್ತು ಪರಿಶ್ರಮದಿಂದಾಗಿ ಅದು ಹೆಚ್ಚಾಗಿ ಪ್ರಭಾವ ಹೊಂದಿತು. ಅವನ ದರಬಾರಿನಲ್ಲಿ ಅನೇಕ ಕಲಾವಿದರು, ಪಂಡಿತರು ಹಾಗೂ ಇತಿಹಾಸಕಾರರು ಇದ್ದರು. ಆತ ತನ್ನ ಅಜ್ಜ ಮತ್ತು ತನ್ನ ತಂದೆಯಿಂದ ಕೇವಲ ಸಮೃದ್ಧವೂ,

ವಿಶಾಲವೂ ಆದ ರಾಜ್ಯವೊಂದನ್ನಷ್ಟೆ ಪಡೆದಿರಲಿಲ್ಲ. ಅದರ ಜೊತೆ ಜೊತೆಗೆ ಸಾಹಿತ್ಯ ಪರಂಪರೆಯ ದೊಡ್ಡ ಖನಿಜವು ದೇಣಿಗೆಯ ರೂಪದಲ್ಲಿ ಅವನಿಗೆ ಲಭಿಸಿತ್ತು. ಅವನ ತಾಯಿಯೂ "ಬಡೀ ಸಾಹಿಬಾ" (ಮಹಾನ್ ವ್ಯಕ್ತಿ) ಎಂದೇ ಪ್ರಸಿದ್ಧಳಾಗಿದ್ದಳು. ಕುತುಬಶಾಹಿ ಮನೆತನಕ್ಕೆ ಸೇರಿದ ಅವಳಿಗೂ ಸಾಹಿತ್ಯ ಸಂಪತ್ತು ಲಭಿಸಿತ್ತು. ಈ ರೀತಿಯಲ್ಲಿ ವಿಜಾಪುರ ಮತ್ತು ಗೋವಳಖಂಡದ ಕಲೆ ಮತ್ತು ಸಾಹಿತ್ಯ ಪರಂಪರೆಯು ಒಕ್ಕಡೆ ಮೇಳೈಸಿದುದರಿಂದಾಗಿ ಅಲಿ ಆದಿಲಶಾಹಿಯು ಕಲೆ ಮತ್ತು ಸಾಹಿತ್ಯದಲ್ಲಿ ಪಾಂಡಿತ್ಯ ಪಡೆದಿದ್ದನು.

ದ್ವಿತೀಯ ಅಲಿ ಆದಿಲಶಾಹಿಯು ಸ್ವತಃ ಒಬ್ಬ ಶ್ರೇಷ್ಠ ಕವಿಯೆನಿಸಿದ್ದನು. ಅವನ ಕಾವ್ಯ ಸಂಕಲನದ ಒಂದು ಹಸ್ತಪ್ರತಿಯುನ್ನು ಹೈದರಾಬಾದ್‌ನ ಸರ್ಕಾರಿ ಅಭಿಲೇಖಾಲಯದಲ್ಲಿ ಇಡಲಾಗಿದೆ. ಅವನ ಈ ಕಾವ್ಯವು ಫಾರ್ಸಿಗಿಂತಲೂ ಮೊದಲು ದೇವನಾಗರಿಯಲ್ಲಿ ಪ್ರಕಟವಾಗಿತ್ತು. ಸಾಹಿತಿಗಳಿಗೆ ಮುಖ್ಯವಾಗಿ ಆಶ್ರಯ ನೀಡುವ ಮೂಲಕ ಆತ ತನ್ನ ಪೂರ್ವಾರ್ಜಿತ ಸಾಹಿತ್ಯ ಪರಂಪರೆಯ ಉತ್ತಮ ಬೆಳವಣಿಗೆಗೆ ಕಾರಣಕರ್ತನಾದನು. ದೊಡ್ಡ ದೊಡ್ಡ ಕವಿಗಳು, ಇತಿಹಾಸಕಾರರು ಅವನ ಆಸ್ಥಾನದಲ್ಲಿದ್ದರು. ಅವರಲ್ಲಿ "ತಾರೀಖೇ-ಅಲಿ" ಕೃತಿಯ ಲೇಖಕ ಶಾಹ ನೂರುಲ್ಲಾ ಮತ್ತು "ಗುಲ್‌ಶಾನ್-ಇಶ್ಕ್", "ಅಲೀನಾಮಾ" ಹಾಗೂ "ತಾರೀಖೇ-ಅಸಿಕಂದರಿ"ಯ ಕರ್ತೃ ಮುಲ್ಲಾ ನುಸ್ರತಿಯರೂ ಸೇರಿದ್ದಾರೆ. ನುಸ್ರತಿಯು ಅವನ ಆಸ್ಥಾನದ ಶ್ರೇಷ್ಠ ಕವಿಯಷ್ಟೇ ಅಲ್ಲ, ದಖನಿ ಭಾಷೆಯ ಕವಿಗಳಲ್ಲೆಲ್ಲಾ ಸರ್ವಶ್ರೇಷ್ಠನೆಂದು ಭಾವಿಸಲಾಗಿದೆ. ಅವನಿಗಿಂತ ಮೊದಲು ಯಾರೂ ಅವನಷ್ಟು ದೊಡ್ಡ ಕವಿ ಎಂದು ಕರೆಯಲ್ಪಟ್ಟಿರಲಿಲ್ಲ. ಅವನ ನಂತರದ ಪ್ರಸಿದ್ಧ ಕವಿ ಎಂದು ಕರೆಯಲ್ಪಟ್ಟವನೆಂದರೆ ವಲೀ ಔರಂಗಾಬಾದಿ (ಮರಣ, ಶಕ ೧೬೭೯) ಆದರೆ ಅವನು ನುಸ್ರತಿಯ ಮಟ್ಟಕ್ಕೆ ನಿಲ್ಲಲಾರನೆಂದು ಹೇಳಲಾಗಿದೆ. ಉರ್ದು ಭಾಷೆಯ ಶ್ರೇಷ್ಠ ವಿದ್ವಾಂಸರೂ, "ಬಾಬಾ-ಎ-ಉರ್ದೂ" ಎಂದು ಸನ್ಮಾನಿತರಾದವರೂ ಆದ ಪ್ರೈ. ಡಾ. ಅಬ್ದುಲ್‌ಹಕ್ ಅವರು ಹೀಗೆಯೇ ಅಭಿಪ್ರಾಯಪಟ್ಟಿದ್ದಾರೆ. (ಗುಲ್‌ಶನ್-ಇಶ್ಕ್, ಶಕ ೧೮೭೫. ಪ್ರಸ್ತಾವನೆ ಪುಟ-೧೨) ಇವರಲ್ಲದೆ ರುಸ್ತುಮಿ (ಶಕ ೧೫೭೨), ಮಿರಾ ಹಶ್ಮಿ (ಶಕ ೧೬೦೧೦), ಅಯಾಗೀ(ಶಕ ೧೫೫೩) ಮುಂತಾದ ಕವಿಗಳು ಅಲಿ ಆದಿಲಶಾಹಿಯ ಉದಾರ ಆಶ್ರಯದಿಂದಾಗಿ ದಖನಿ ವಾಜ್ಮಯಕ್ಕೆ ತಮ್ಮ ಅಪಾರ ಕೊಡುಗೆಯನ್ನು ಕೊಟ್ಟವರಾಗಿದ್ದಾರೆ.

ಮುಲ್ಲಾ ನುಸ್ರತಿಯು ಶ್ರೇಷ್ಠ ಮಟ್ಟದ ಕವಿಯಾಗಿದ್ದನು. ಅವನು ಬರೆದ ಮೂರು ಕಾವ್ಯಗಳೇ ಅಲ್ಲದೆ ಇನ್ನೂ ಕೆಲವು ಬಿಡಿ ಬಿಡಿಯಾದ ಕವಿತೆಗಳೂ ಉಪಲಬ್ಧವಾಗಿವೆ. ಅವನು ತನ್ನ "ಗುಲ್‌ಶನೆ-ಇಶ್ಕ್" ಎಂಬ ಮೊದಲ ಕೃತಿಯನ್ನು ರಚಿಸಿದ್ದು ಹಿಜರಿ ೧೦೬೮ (ಶಕ ೧೫೭೯)ರಲ್ಲಿ. ಇದೊಂದು ಸುಂದರವಾದ ಪ್ರೇಮಕಾವ್ಯವಾಗಿದ್ದು, ಮಂಝುನ್ ಕವಿಯ "ಮಧುಮಾಲತಿ" (ಶಕ ೧೪೬೭)

ಎಂಬ ಕಥನಕಾವ್ಯ (ಮನಸವಿ)ವನ್ನು ಆಧರಿಸಿದೆ. ದಖನಿ ಹಿಂದಿಯಲ್ಲಿನ ಪ್ರೇಮಕಾವ್ಯಗಳಲ್ಲೆಲ್ಲ ಇದನ್ನೇ ಸರ್ವೋತ್ತಮವೆಂದು ಪರಿಗಣಿಸಲಾಗಿರುವುದು. ಆತನು ಬರೆದ ಮತ್ತೊಂದು ಗ್ರಂಥ "ಅಲಿನಾಮಾ"ವು ಮೊಗಲರು, ಶಿವಾಜಿ ಮತ್ತು ಆದಿಲಶಾಹಿ ರಾಜ್ಯಗಳ ನಡುವಣ ಯುದ್ಧಗಳ ವಿವರವನ್ನು ಒಳಗೊಂಡಿದೆ. ಇದರಲ್ಲಿ ಸುಮಾರು ೬೦೦೦ ಬೈತ್ (ದ್ವಿಪದಿ)ಗಳು ಹಾಗೂ ಕಾಲಕಾಲಕ್ಕೆ ಆತನು ಬರೆದ ಕಶೀದೆ ()ಗಳು ಅಂತರ್ಭಾವಗೊಂಡಿವೆ. ಹಾಗೆಯೇ ಆತ ತನ್ನ ಮಹಾಕಾವ್ಯಗಳಲ್ಲಿ ಅನೇಕ ವ್ಯಕ್ತಿಗಳು ಹಾಗೂ ಯುದ್ಧಗಳನ್ನು ಗಂಭೀರವಾಗಿಯೇ ವರ್ಣಿಸಿದ್ದಾನೆ. ಅವನ ಕಥಾನಕವನ್ನು ವಿಶ್ವಸನೀಯವು, ಆಕ್ಷೇಪಾರ್ಹವಲ್ಲದ ಐತಿಹಾಸಿಕ ದೃಷ್ಟಿಯುಳ್ಳುದೆಂದು ಒಪ್ಪಿಕೊಳ್ಳಾಗಿದೆ. ತನ್ನ ಕಾವ್ಯದಲ್ಲಿ ನುಸ್ರತಿಯು ಫಾರ್ಸಿ ಶಬ್ಧಗಳನ್ನೇ ಹೆಚ್ಚಾಗಿ ಬಳಸಿರುವನಾದರೂ ಅವನ ಭಾಷೆ ಮಾತ್ರ ಹಿಂದಿಯೇ. ಅಲ್ಲದೇ ಅವನು ವಿಪುಲವಾಗಿ ಬಳಸಿರುವ ಮರಾಠಿ ಶಬ್ಧಗಳನ್ನು ನೋಡಿದಾಗ ಆತನಿಗೆ ಮರಾಠಿ ಭಾಷೆ ಮತ್ತು ಸಂಸ್ಕೃತಿಯ ಆಳವಾದ ಜ್ಞಾನವಿತ್ತು ಎಂಬುದಕ್ಕೆ ಸಾಕ್ಷಿಯಾಗಿದೆ. ಆತನ "ಅಲಿನಾಮಾ"ದಲ್ಲಿ ಸುಮಾರು ಒಂದು ಸಾವಿರ ಮರಾಠಿ ಶಬ್ದಗಳು ಪ್ರಯೋಗವಾಗಿವೆ. "ತಾರೀಖೇ-ಅಸಿಕಂದರಿ"ಯು ಮುಲ್ಲಾ ನುಸ್ರತಿಯ ಕೊನೆಯ ಕಾವ್ಯ. ಡಾ. ಹಕ್ ತಮ್ಮ "ಮುಲ್ಲಾ ನುಸ್ರತಿ" (ಶಕ ೧೮೬೬) ಎಂಬ ಕೃತಿಯಲ್ಲಿ ಈ ಕಾವ್ಯದ ಸಾರಾಂಶವನ್ನು ನೀಡಿದ್ದಾರೆ. ಇದರ ಸಂಪೂರ್ಣ ಕಾವ್ಯಭಾಗವನ್ನು ಅವರು ಔರಂಗಾಬಾದಿನ 'ಅಂಜುಮನ್-ತರಿಸ್ಕೀ ಎ-ಉರ್ದು' ಎಂಬ ಸಂಸ್ಥೆಯಿಂದ ಪ್ರಕಟಿತವಾಗುವ "ಉರ್ದು" ಎಂಬ ತ್ರೈಮಾಸಿಕದ ಮೂಲಕ ಪ್ರಕಟಿಸಿದರು. ಇದರ ಮೂಲ ಹಸ್ತಪ್ರತಿಯು ಭಾರತದಲ್ಲಿ ಅಲಭ್ಯವಾದ ಕಾರಣ ಎಷ್ಟು ಸಂಹಿತೆ ಲಭ್ಯವಾಗಿದೆಯೋ ಅಷ್ಟನ್ನು ಮಾತ್ರ ಈ ಮೂಲಕ ವಾಚಕರಿಗೆ ಒದಗಿಸಿಕೊಟ್ಟಿರುತ್ತೇನೆ.

ಮೇಲಿನ ಮೂರು ಕಾವ್ಯಗಳೇ ಅಲ್ಲದೆ ಇನ್ನೂ ಕೆಲವು ಕಶೀದೆ ಮತ್ತು ಕವಿತೆಗಳನ್ನು ನುಸ್ರತಿಯು ಬರೆದಿದ್ದಾನೆ. ಅವನ ಹತ್ತು-ಹನ್ನೆರಡು ಕಶೀದೆಗಳು ದೊರೆತಿವೆ. ಅವುಗಳಲ್ಲಿ ಏಳು ಕಶೀದೆಗಳು "ಅಲಿನಾಮಾ" ಎಂಬ ಕಾವ್ಯದ ಒಂದು ಭಾಗವಾಗಿ ಬಂದಿವೆ. ಒಂದು ಕಶೀದೆಯಲ್ಲಿ ನುಸ್ರತಿಯು ತನ್ನ ಶತ್ರುಗಳು ಹಾಗೂ ನಿಂದಕರನ್ನು ಬಣ್ಣಿಸಿದ್ದಾನೆ. ಮತ್ತೊಂದು ಕಶೀದೆಯು "ನಬಿ"ಯೊಡನೆ ಅವನಿಗಿದ್ದ ಸಂಬಂಧವನ್ನು ಕುರಿತದ್ದು. ಈ ಕಶೀದೆಗಳನ್ನು "ಚರ್ಖಿಯಾಸ್" ಎಂಬ ಹೆಸರಿನಿಂದ ಕರೆಯಲಾಗಿದೆ. "ಚರ್ಖಿಯಾತ್" ಎಂಬುದು ಕಶೀದೆಯದ್ದೇ ಒಂದು ರೂಪವಾಗಿದೆ. ಒಂದು ಕಶೀದೇಯು ತನ್ನ ಕುದುರೆಯ ನಿಂದಾಗರ್ಭಸ್ವತಿಯನ್ನು ಕುರಿತುದಾಗಿದ್ದರೆ, ಮತ್ತೊಂದರಲ್ಲಿ ಅಲಿ ಆದಿಲಶಾಹಿಯೊಡನೆ ಹೊಂದಿದ್ದ ಸಂಬಂಧ ಮತ್ತು ಪ್ರಶಂಸೆಯು ವ್ಯಕ್ತವಾಗಿದೆ. "ಅಲಿನಾಮಾ" ಮತ್ತು "ಗುಲ್‌ಶನೆ-ಇಶ್ಕ್" ಕಾವ್ಯಗಳ ಅಧ್ಯಯನದಲ್ಲಿನ ಎರಡೆರಡು ಸಾಲುಗಳನ್ನು ಏಕತ್ರಗೊಳಿಸಿದರೆ ಒಂದು ಕಶೀದೆಯು ಸಿದ್ಧವಾಗುವುದು.

ಈ ರೀತಿಯಿಂದ ನೋಡಿದಾಗ ನುಸ್ರತಿಯು ಬರೆದ ಕಶೀದೆಗಳ ಸಂಖ್ಯೆ ಹನ್ನೆರಡಾಗಿದೆ. ನುಸ್ರತಿಯ ಕೆಲವು ಗಝಲ್ ಮತ್ತು ರುಬಾಯಿಗಳೂ ಇದ್ದು, ಅವುಗಳೆಲ್ಲವೂ "ನುಸ್ರತಿ" ಎಂಬ ಕೃತಿಯಲ್ಲಿ ಬಂದಿವೆ. ಇದಲ್ಲದೆ ಅವನು ಒಂದು "ಮರ್ಸಿಯಾ"(ಶೋಕಗೀತೆ) ಕಾವ್ಯವನ್ನು ಬರೆದಿದ್ದಾನೆಂದು ಡಾ. ಜೋರ್ ಅವರು ತಮ್ಮ "ತಜ್ಕಿರೇ-ಮಖ್ತೂತಾತ್' ಎಂಬ ಕೃತಿಯ ನಾಲ್ಕನೆಯ ಅಧ್ಯಾಯ (ಪುಟ.೧೮೧)ದಲ್ಲಿ ಉಲ್ಲೇಖಿಸಿದ್ದಾರೆ. ಒಟ್ಟಾರೆ ಹೇಳುವುದಾದರೆ ಮುಲ್ಲಾ ನುಸ್ರತಿಯು ತನ್ನ ಕಾಲದಲ್ಲಿ ದಖನಿಯಲ್ಲಿ ರೂಢವಾಗಿದ್ದ ಎಲ್ಲ ಪ್ರಕಾರಗಳಲ್ಲೂ ತನ್ನ ಕೌಶಲ್ಯವನ್ನು ಮೆರೆದಿರುವುದು ಸ್ಪಷ್ಟ.

ಅಹಮದನಗರದ ನಿಜಾಮಶಾಹಿಯಲ್ಲಿ ಕವಿಯಾಗಿದ್ದ ಶಾಹಿ ಅಶ್ರಫ್‌ನು ಶಕ ೧೪೨೬ (ಹಿಜರಿ ೯೦೯)ರಲ್ಲಿ ಜಾಲನಾ (ಮಹಾರಾಷ್ಟ್ರ)ದಲ್ಲಿ ಇದ್ದುಕೊಂಡು ಬರೆದ "ನವ-ಸರಹಾರ್" ಎಂಬುದನ್ನು ಪ್ರಸಿದ್ಧ ಕಥನಕಾವ್ಯ (ಮಸನವಿ) ವೆಂದು ಪರಿಗಣಿಸಲಾಗಿದೆ. ಆತನ ಇನ್ನೂ ಎರಡು ಮಸನವಿಗಳಿವೆ. ಶೌಹ ಮಿರಾಂಜೀ ಶಂಸುಲ್ ಉಶ್ಯಕ್ (ಮರಣ ಹಿಜರಿ ೯೭೦, ಶಕ ೧೪೮೫) ಮತ್ತು ಅವನ ಮಗ ಶಾಹಿ ಬರ್ಹಾನುದ್ದೀನ ಜಾನಮ್ (ಮರಣ ಹಿಜರಿ ೯೯೦, ಶಕ೧೫೦೪) ಎಂಬ ಈ ಇಬ್ಬರು ಸೂಫಿ ಕವಿಗಳು. ಇವರು ಮತ್ತು ಇವರ ಶಿಷ್ಯಂದಿರು ಸುಮಾರು ಎಪ್ಪತ್ತೈದು ವರುಷಗಳ ಕಾಲ ದಖನಿ ಭಾಷೆಯ ಪ್ರಗತಿಗೆ ಶ್ರಮಿಸಿದ್ದಾರೆ. ಎರಡನೆಯ ಇಬ್ರಾಹಿಮ ಆದಿಲಶಾಹಿಯ "ನವರಸ" (ಹಿಜರಿ ೧೦೦೮, ಶಕ ೧೫೨೨) ಕೃತಿಯು ಇಲ್ಲಿ ಗಮನೀಯ. ಅವನ ಆಸ್ಥಾನ ಕವಿಯಾಗಿದ್ದ ಅಬ್ದುಲ್ಲಾನು ರಚಿಸಿದ "ಇಬ್ರಾಹಿಂ ನಾಮಾ" (ಹಿಜರಿ ೧೦೧೨, ಶಕ ೧೫೨೬) ಕೃತಿಯು ಈ ದಿಶೆಯಲ್ಲಿ ಮುಖ್ಯವಾದುದು. ಇದಲ್ಲದೆ ವಿಜಾಪುರದ ದಖನಿ ಕವಿಗಳಾದ ಶಹಬಾಜ್ ಹುಸೇನಿ, ಆಶಿಕ್ ದಖನಿ, ಅಬುಲ್ ಹಸನ ಕಾದರಿ, ಮಲಿಕಾ ಖುಶ್‌ನೂದ್, ಮುಕೀಮಿ ಮುಂತಾದವರ ಕಾವ್ಯಗಳು ಉಪಲಬ್ಧವಾಗಿವೆ.

ಮಹಾಕವಿ ನುಸ್ರತಿಯ ಚರಿತ್ರೆ :

ಪ್ರೊ. ಡಾ. ಮೌಲವಿ ಅಬ್ದುಲ್ ಹಕ್ ಅವರು "ಶು ಅರಾ-ಎ-ದಖನ್" ಎಂಬ ಕೃತಿಯನ್ನು ಆಧರಿಸಿ ನುಸ್ರತಿಯ ಪೂರ್ಣ ಹೆಸರು ಮಹಮದ್ ನುಸರತ್ ಎಂಬುದಾಗಿತ್ತು. ಹಾಗೂ ಆತ ಕರ್ನಾಟಕದ ಅಧಿಕಾರಿಗಳ ಸಂಬಂಧಿಯಾಗಿದ್ದನೆಂದು ಹೇಳಿದ್ದಾರೆ. ಡಾ. ಸೈಯದ್ ಮುಹಿಯುದ್ದೀನ್ ಕಾದರಿ ಜೋರ್ ಎಂಬುವವರು ತಮ್ಮ "ತಜ್ಕಿರೇ ಮಖ್ತೂತಾತ್" (ಶಕ ೧೮೮೧) ಎಂಬ ಕೃತಿಯ ಐದನೆಯ ಅಧ್ಯಾಯದಲ್ಲಿ (ಪುಟ-೮೧) ಹೇಳಿರುವಂತೆ ನುಸ್ರತಿಯ ಜನ್ಮಸ್ಥಳ ಅರ್ಕಾಟ್ ನಗರ. ನುಸ್ರತಿಯ ತಂದೆಯು ವಿಜಾಪುರದ ಆದಿಲಶಾಹಿ ರಾಜ್ಯದಲ್ಲಿ ಒಬ್ಬ ಸೇನಾಧಿಕಾರಿಯಾಗಿದ್ದನು. ಈ ಎರಡು ಅಂಶಗಳನ್ನು ಆಧರಿಸಿ ನುಸ್ರತಿಯು ಕರ್ನಾಟಕದ

ಅರ್ಕಾಟ್ ನಗರದಲ್ಲಿ ಜನಿಸಿದ್ದನೆಂದು ಒಪ್ಪಬಹುದಾಗಿದೆ. ಈ ಕವಿಯು "ನುಸ್ರತಿ" ಎಂಬ ಕಾವ್ಯನಾಮವನ್ನು ಧರಿಸಿದ್ದರೂ ಆತನ ನಿಜವಾದ ಹೆಸರು ಮಹಮದ್ ನುಸ್ರತಿಯೇ ಎಂದು ಹೇಳಬಹುದು. ಆದರೆ ಒಂದು ವಿಚಾರ ಸ್ಪಷ್ಟ. ಈ ವಿಷಯಕ್ಕೆ ಸಂಬಂಧಿಸಿದಂತೆ ಈವರೆಗೂ ಖಚಿತ ಆಧಾರ ಮಾತ್ರ ಲಭಿಸಿಲ್ಲ.

ಒಂದು ಹಳ್ಳಿಯ ಸನದ (ಶಾಸನ, ದಾನಪತ್ರ)ನ್ನು ಆಧರಿಸಿ ಡಾ.ಹಶ್ ಅವರು ಮುಲ್ಲಾ ನುಸ್ರತಿಯ ತಂದೆಯ ಹೆಸರು ಶೇಖ್ ಮಖ್ದೂಮ್ ಎಂದು ಹೇಳಿದ್ದಾರೆ. (ಡಾ.ಹಶ್-"ಮುಲ್ಲಾ ನುಸ್ರತಿ" ಶಕ. ೧೮೬೬, ಪುಟ-೧೧) ಇದೇ ಕೃತಿಯ ೧೦ನೆಯ ಪುಟದಲ್ಲಿ ಮುಲ್ಲಾ ನುಸ್ರತಿಗೆ ಇಬ್ಬರು ಸಹೋದರರಿದ್ದರು ಎಂದೂ ಹೇಳಲಾಗಿದೆ. ಅವನ ಹಿರಿಯ ಸಹೋದರ (ಅಣ್ಣ) ಶೇಖ್ ಮನ್ಸೂರ್ ಮತ್ತು ಕಿರಿಯ ಸಹೋದರ(ತಮ್ಮ) ಶೇಖ್ ಅಬ್ದುರ್ ರೆಹಮಾನ್ ಈ ಮೂವರು ಸೋದರರು ಬೇರೆ ಬೇರೆ ಕಾರ್ಯಕ್ಷೇತ್ರದಲ್ಲಿದ್ದರು. ತಂತಮ್ಮ ಕ್ಷೇತ್ರದಲ್ಲಿ ಬಹಳ ಕುಶಲರಾಗಿದ್ದರೆಂದು ಹೇಳಲಾಗಿದೆ. ಹಿರಿಯ ಸೋದರನು ಸರಕಾರಿ ಕೆಲಸದಲ್ಲಿದ್ದರೆ, ಕಿರಿಯವ ಸೈನ್ಯದಲ್ಲಿದ್ದ. ಮಧ್ಯದವನಾದ ಮುಲ್ಲಾ ನುಸ್ರತಿಯು ಕಾವ್ಯ ಕ್ಷೇತ್ರದಲ್ಲಿ ಪ್ರಖ್ಯಾತಿ ಪಡೆದಿದ್ದನು. ಮುಲ್ಲಾ ನುಸ್ರತಿಗೆ ಇಬ್ಬರು ಸೋದರರಿದ್ದ ವಿಚಾರ ಅವನ "ಅಲಿನಾಮಾ" ಕೃತಿಯಲ್ಲಿಯೂ ಇದೆ. ಅದರಲ್ಲಿ ಅವನು ಹೀಗೆ ಬರೆದಿದ್ದಾನೆ. –

ದೋ ಬಾಜೂ ಮೇರೆ ದೀನ್ ವ ದುನಿಯಾ ಕೆ ಜೋರ್
ತುಟೇ ಥೇ ಸೋ ಜೀವ ಮೇ ಮುಜ ಐನ್ ಶೋರ್
ಜಮನ್ ಜುಗ ದಿಖತ್ ದಿಲ್ ಶೋ ಮುಜ ಬಾಗ್-ಬಾಗ್
ದಿಯಾ ಥಾ ಫಲಕ ದಾಗ ಬಾಲಾಏ ದಾಗಾ।

–ಅಲಿನಾಮಾ, ೭/೨೧-೨೨

ನುಸ್ರತಿಯ ಈ ಉದ್ದೇಶದಿಂದ ತಿಳಿದುಬರುವುದೇನೆಂದರೆ ಹಿಜರಿ ೧೦೭೬ (ಶಕ ೧೫೮೭)ರಲ್ಲಿ ಅವನ ಇಬ್ಬರು ಸೋದರರು ಮರಣ ಹೊಂದಿದರು. ಅವನ ಎರಡು ಕೈಗಳಂತಿದ್ದ ಇಬ್ಬರು ಸೋದರರ ಸಾವು ಅವನನ್ನು ಶೋಕಾಕುಲನನ್ನಾಗಿ ಮಾಡಿತು. ತನ್ನೆರಡು ಕೈಗಳನ್ನು ಯಾರೋ ಕತ್ತರಿಸಿ ಹಾಕಿದರು ಎಂಬುದು ಅವನ ಭಾವನೆ. ಬಹುಶಃ ಇವನ ಈ ಇಬ್ಬರೂ ಸೋದರರು ಜಯಸಿಂಹನು ವಿಜಾಪುರದ ಮೇಲೆ ಮಾಡಿದ ಆಕ್ರಮಣದಿಂದ ಸಾವನ್ನಪ್ಪಿರಬಹುದು. ಆ ಕಾರಣದಿಂದಾಗಿಯೇ ಆತನ ದುಃಖವು ಈ ಕೃತಿಯ ರಚನಾ ಕಾಲದಲ್ಲಿ ತೀವ್ರವಾಗಿ ಕಾಡುತ್ತಿರುವಂತೆ ಕಾಣುತ್ತದೆ.

ನುಸ್ರತಿಯು ತನ್ನ ಬಗ್ಗೆ ತಾನು ಮಾಡಿಕೊಂಡಿರುವ ವರ್ಣನೆಯಿಂದ ತಿಳಿದು ಬರುವುದೇನೆಂದರೆ, ಅವನು ಬೆಳೆದು ಬಂದುದು ಸೈನಿಕ ನೆಲೆಯಲ್ಲಿ. ಅವನ ಮನೆತನವು

ಸೇನಾವೃತ್ತಿಯನ್ನು ಮಾಡಿಕೊಂಡೇ ಬಂದಿತ್ತು. ಆತ ತನ್ನ "ಗುಲ್‌ಶನೇ-ಇಶ್ಕ್" ಎಂಬ ಕಥನ ಕಾವ್ಯದಲ್ಲಿ ಹೀಗೆ ಬರೆದುಕೊಂಡಿದ್ದಾನೆ. "ನಾನು ನಿಜವಾಗಿಯೂ ಹೇಳಬೇಕೆಂದರೆ ಸೈನ್ಯದಲ್ಲಿ ಒಬ್ಬ ಸಿಪಾಯಿಯಾಗಿ ಆದಿಲ್‌ಶಾಹಿಯ ಊಳಿಗದಲ್ಲಿದ್ದೆನು". ನುಸ್ರತಿಯ ತಂದೆಯು ಆದಿಲಶಾಹಿಯ ಸೈನ್ಯದಲ್ಲಿಯೇ ಇದ್ದವನು. ಅದನ್ನೂ ನುಸ್ರತಿಯು ತನ್ನ "ಗುಲ್‌ಶನೆ-ಇಶ್ಕ್" (ಪ್ರಕರಣ ೭, ೧೩ ರಿಂದ ೧೫ನೆಯ ಸಾಲು) ಕಾವ್ಯದಲ್ಲಿ ಉಲ್ಲೇಖಿಸಿದ್ದಾನೆ.

ಕಿ ಥಾ ಮುಜ ಪಿದರ್ ಸಾ ಶುಜಾಅತ್ ಮಾದ್
ಕದೀಮ್ ಯಕ್ ಸಿಲಹದಾರ್ ಜಮಾ ರಿಕಾಬ್
ವೋ ಶಹ ಕಾಮ್ ಪರ್ ಜಿಂದಗಾಗಿ ಮನೇ
ಕಮರ್ ಬಸ್ತಾ ಥಾ ಜಾನ-ಫಶಾನಿ ಮನೇ
ಬಜಾನೆ ಜವಮ್ ಆಪನಾ ನಗೋ-ನಾಮ್
ಅಪಸ್ ಜಿಂದಗಿ ಮೇ ಕಿಯಾ ಖೂಬ್ ಕಾಮ್।

("ನನ್ನ ತಂದೆಯು ಬಹಳ ಶೂರ ವ್ಯಕ್ತಿ. ಆತ ಬಾದಶಾಹನ ಸೈನ್ಯದಲ್ಲಿ ಒಬ್ಬ ಅಧಿಕಾರಿಯಾಗಿದ್ದನು. ಬಾದಶಾಹನ ಆಜ್ಞೆಯನ್ನು ಮನಃಪೂರ್ವಕವಾಗಿ ಪಾಲಿಸುವುದು ಮತ್ತು ನಿಷ್ಠೆಯಿಂದ ಕೆಲಸ ಮಾಡುವುದು ಇವೆರಡನ್ನೂ ತನ್ನ ಜೀವನ ನೀತಿಯನ್ನಾಗಿ ಜೀವನ ಪರ್ಯಂತ ಪಾಲಿಸಿಕೊಂಡು ಬಂದಿದ್ದನು. ತನ್ನ ಜೀವನವು ನಿಷ್ಕಳಂಕವಾಗಿರಬೇಕು ಎಂಬುದೇ ಆತನ ಸತತ ಪ್ರಯತ್ನವಾಗಿತ್ತು.")

ನುಸ್ರತಿಯ ಶಿಕ್ಷಣ :

"ಗುಲ್‌ಶನೆ-ಇಶ್ಕ್" ಎಂಬ ಕಾವ್ಯದಲ್ಲಿ ಮುಲ್ಲಾ ನುಸ್ರತಿಯ ಶಿಕ್ಷಣದ ಬಗ್ಗೆ ಮಾಹಿತಿಯು ಲಭ್ಯವಾಗುತ್ತದೆ. ಬಾಲಕ ನುಸ್ರತಿಯ ಶಿಕ್ಷಣಕ್ಕೆಂದು ಉತ್ತಮವಾದ ವ್ಯವಸ್ಥೆಯನ್ನು ಮಾಡಿದ ಅವನ ತಂದೆಯು ಪ್ರಶಂಸಾರ್ಹರು. ನುಸ್ರತಿ ಹೇಳುವಂತೆ (ಗುಲ್‌ಶನೆ-ಇಶ್ಕ್, ಡಾ. ಹಕ್, ಶಕ ೧೮೫೪, ಪ್ರಕರಣ ೮, ಸಾಲು ೧೭-೧೮)

ನಜರ್ ಧರ್ ಕೇ ಮುಜ ಪರಬಿಯತ್ ಮೇ ಸದಾ
ರಖ್ಯಾ ನೇ ಕಧೀ ಮುಜ ಅಪಸ ಪೇ ಜುದಾ
ಸಿಕಚ ಮುಜ ತೇ ಜಾನೆ ಕೋ ನಿಸದಿನ ಮನೇ
ಫಿರೇ ಲಈ ಬುಜುರ್ಗಾ ಶೀ ಮಜಲಿಸ ಮನೇ।

(ನನಗೆ ಉತ್ತಮ ಶಿಕ್ಷಣ ದೊರೆಯಬೇಕೆಂಬ ದೃಷ್ಟಿಯಿಂದ ಆತ ನನ್ನನ್ನು ಎಂದಿಗೂ ತನ್ನಿಂದ ದೂರವಾಗಿಇಲ್ಲವೆ ಬೇರೆಯಾಗಿ ಇಡುತ್ತಿರಲಿಲ್ಲ. ಹಗಲು ರಾತ್ರಿ ಯಾವಾಗೆಂದರೆ ಆಗ್ಗೆ ಅವನು ನನ್ನನ್ನು ದೊಡ್ಡ-ದೊಡ್ಡವರ ಕಾರ್ಯಕ್ರಮಗಳಿಗೆ

ಕರೆದುಕೊಂಡು ಹೋಗುತ್ತಲಿದ್ದನು. ಒಂದಲ್ಲ ಒಂದು ಬಗೆಯಲ್ಲಿ ನಾನು ಚೆನ್ನಾಗಿ ಕಲಿಯಬೇಕು ಎಂಬುದು ಅವನ ಮುಖ್ಯ ಉದ್ದೇಶ(ಹೇತು)ವಾಗಿತ್ತು".) ತನ್ನ ಶಿಕ್ಷಣ ಪ್ರಗತಿಯ ಸಂಬಂಧವಾಗಿ ನುಸ್ರತಿಯು ಹೀಗೆ ಹೇಳಿದ್ದಾನೆ. (ದ್ವಿಪದಿ ೧೬, ಸಾಲು ೧೯–೨೩)

ಅದಿಕ್ ಥೀ ಚ ಲಗ ಮುಜ ಮೇ ನ್ದನವಂದಗೀ
ಮೇರೇ ಹಕ್ ಮೇ ಅಂದೇಶ ಉಸ್ತಾದಗೀ
ಮುಅಲ್ಲಿಮ್ ಜೋ ಮೇರೇ ಜಿತೇ ಖಾಸ್ ಥೇ
ಧರನಹಾರ್ ವೋ ಮುಜ ಸೂ ಇಖ್ಲಾಸ್ ಥೇ
ಕುಭ್ ಯಹ ಮೈ ಸಂಭಾಲ್ಯಾ ಜಬ್ ಅಪನಾ ಶ಼ಊರ್
ಗಯಾಕರ್ ಕಿತಾಬಾ ಪರ್ ಅಕ್ಸರ್ ಉಬೂರ್
ನಿಭಾಯಾ ಹರ್ ಯಕ್ ತರಹ ಶಾ ಫೂಲ್‌ಬನ
ರಖ್ಯಾ ದಿಲ್ ಮೇ ತಿಸ ಬಾಗವಾನೀ ಕಾ ಫನ್
ದೇಖ್ಯಾ ಕ್ಯೋ ಜೋ ಹರ ಬಜ್ಮ ಮೇ ಕರ ಖಯಾಲ್
ಹರಿಫಾ ಕಿವ ಹೈ ಸೌ ಸರಮಸ್ತ ಹಾಲ್
ಯದೀ ಮುಜ ಮನೇ ಇಶ್ಕ್ ಹೌರ್ ಶೌಕ್ ಥಾ
ಉಸೀ ಕೇ ನಜಾರ್ಯಾ ಮೇ ನಿತ ಜೌಕ್ ಥಾ।

("ನಾನು ಚಿಕ್ಕವನಿದ್ದಾಗ ನನಗೆ ಶಿಕ್ಷಕರನ್ನು ಕಂಡರೆ ಬಹಳ ಭಯವಾಗುತ್ತಿತ್ತು. ಯಾರು ನಿಜವಾಗಿಯೂ ಶಿಕ್ಷಕರಾಗಿದ್ದಾರೋ ಅವರು ಮಾತ್ರ ನನ್ನ ಬಗ್ಗೆ ಬಹಳ ಪ್ರೀತಿ ತೋರಿಸುತ್ತಿದ್ದರು. ಪ್ರೌಢ ವಯಸ್ಕನಾದ ಮೇಲೆ ನಾನು ಹಲವಾರು ಗ್ರಂಥಗಳನ್ನು ಓದಿ ಅವುಗಳ ಬಗ್ಗೆ ಪ್ರಾವೀಣ್ಯತೆ ಸಾಧಿಸಿದೆನು. ಎಲ್ಲ ಬಗೆಯ ಸಾಹಿತ್ಯದಲ್ಲಿಯೂ ನನಗೆ ಬಹಳ ಉತ್ಸುಕತೆ ಹಾಗೂ ನಿರೀಕ್ಷೆ ಇರುತ್ತಿತ್ತು. ಅನಂತರ ಅಂತಹ ಸಾಹಿತ್ಯ ಕೃತಿಗಳನ್ನು ನಾನು ಕೂಡ ರಚಿಸಬೇಕೆಂದು ನಿಶ್ಚಯಿಸಿ, ಆ ಕಲೆಯನ್ನು ಹಸ್ತಗತಗೊಳಿಸಿಕೊಳ್ಳುವಲ್ಲಿ ಕಾರ್ಯಪ್ರವೃತ್ತನಾದೆನು. ಸಾಹಿತ್ಯ ಕ್ಷೇತ್ರದಲ್ಲಿ ಯಾರು ಯಾರು ಗಮನಾರ್ಹ ಕೊಡುಗೆಯನ್ನು ನೀಡಿದ್ದರೋ ಅಂಥ ವ್ಯಕ್ತಿಗಳ ಸಭೆ–ಸಮ್ಮೇಳನಗಳಲ್ಲಿ ಭಾಗವಹಿಸಿ ಸೂಕ್ಷ್ಮವಾಗಿ ಗಮನಿಸುತ್ತಿದ್ದೆನು. ಈ ಕೆಲಸವು ನನಗೆ ಬಹಳ ಪ್ರಿಯವಾದುದಾಗಿತ್ತು. ಇಂಥ ದೃಶ್ಯಗಳನ್ನು ಸತತವಾಗಿ ನೋಡುತ್ತಾ ಇರಬೇಕು ಎಂಬ ಇಚ್ಛೆಯೂ ನನ್ನಲ್ಲಿ ತೀವ್ರವಾಗಿತ್ತು.")

ನುಸ್ರತಿಯ ಗುರು ಯಾರು ?

ಮುಲ್ಲಾ ನುಸ್ರತಿಯು ಮತ್ತೆ ಮತ್ತೆ ಎರಡನೆಯ ಆದಿಲಶಾಹಿಯು ತನ್ನ ಗುರುವೆಂದು ಹೇಳಿಕೊಂಡಿದ್ದಾನೆ. ಅವನು ಹೇಳುವಂತೆ–

ಮುಜ ಉಸ್ತಾದ ಉಸ್ತಾದೇ ಆಲಮ್ ಅಛೇ
ಜಿತಾ ಇಲ್ಮ್, ಅಜಬರ್ ಜಿಸೇ ಜಮ್ ಅಛೇ।
(ಗುಲ್‌ಶನೇ-ಇಶ್ಕ್, ಅಧ್ಯಾಯ ೭.೩)

ಉಸ್ತಾದೇ-ಆಲಮ್ ಎಂಬುದರ ಅರ್ಥ ಜಗದ್ಗುರು. ಆತ ಅಲಿ ಆದಿಲ್‌ಶಾಹಿಯ ಅಜ್ಜ ಹಾಗೂ ಮಹಮದ್ ಆದಿಲಶಾಹಿಯ ತಂದೆ. ಆತನಿಗೆ ದ್ವಿತೀಯಾ ಇಬ್ರಾಹಿಮ್ ಆದಿಲಶಾಹಿ ಎಂಬ ಪದವಿಯನ್ನು ಲಭ್ಯವಾಗಿತ್ತು ಎನ್ನಲಾಗಿದೆ.೧ ನುಸ್ರತಿಯಲ್ಲಿ ಹಲವಾರು ಬಾರಿ "ಅಲಿಯು ತನ್ನ ಪದವಿಯನ್ನು ಸಾರ್ಥಕಪಡಿಸಿಕೊಂಡಿದ್ದಾನೆ"೨ ಎಂದು ಅಲಂಕಾರಿಕ ಭಾಷೆಯಿಂದ ವರ್ಣನೆ ಮಾಡಿರುತ್ತಾನೆ. ಹಾಗಾಗಿಯೇ ಆತ ಅಲಿಯ ಹೆಸರು ಬಂದಾಗಲೆಲ್ಲ ಅವನನ್ನು 'ಉಸ್ತಾದೇ ಆಲಮ್' ಅರ್ಥಾತ್ ಜಗದ್ಗುರು ಎಂಬುದಾಗಿ ಆತ ಅತ್ಯಂತ ಗೌರವ ಭಾವದಿಂದಲೇ ಉಲ್ಲೇಖ ಮಾಡಿದ್ದಾನೆ. ಅಂತೆ ಇಲ್ಲಿಯೂ ಕವಿಯು ಅವನನ್ನು ಉಸ್ತಾದೇ-ಆಲಮ್ ಎಂದಿದ್ದಾನೆ. ಅಲಿಯು ಸಂಪೂರ್ಣ ಜ್ಞಾನ ಸಂಪನ್ನನಾದ ದೊಡ್ಡ ವ್ಯಕ್ತಿ. ಹಾಗಾಗಿ ಅವನೇ ನುಸ್ರತಿಗೆ ಗುರುವಾಗಿದ್ದ. ಈ ಗುರು ಸಂಬಂಧದ ಆದರವನ್ನು ಹಲವಾರು ಬಾರಿ ವ್ಯಕ್ತಪಡಿಸಿರುವುದುಂಟು.೩ ಅವನು ಹೇಳಿರುವಂತೆ- "ನೀವೇ ನನಗೆ ಈ ಕ್ಷೇತ್ರದಲ್ಲಿ ವಿಶೇಷ ಶಿಕ್ಷಣ ನೀಡಿದಿರಿ. ಅದರಿಂದಾಗಿಯೇ ನಾನು ಈ ಕೌಶಲ್ಯವನ್ನು ತೋರಿಸಲು ಸಾಧ್ಯವಾಯಿತು. ನೀವೇ ಈ ಸಸಿಯನ್ನು ನಟ್ಟಿರುವಿ, ಆ ಕಾರಣ ನೀವೇ ಇದರ ಕಾಳಜಿ ವಹಿಸಬೇಕು. ಈ ಸಸಿಯು ವಿಶಾಲ ವೃಕ್ಷವಾಗಿ ಬೆಳೆದಲ್ಲಿ ಮಾತ್ರ ಸರ್ವ ಜಗತ್ತಿಗೂ ಇದರ ನೆರಳು ಪಸರಿಸುತ್ತದೆ. ನೀವು ನನ್ನಲ್ಲಿ ಕಲಾಗುಣವನ್ನು ರೂಪಿಸಿರುವುದರ ಕಾರಣದಿಂದಾಗಿಯೇ ನನಗೆ ಕವಿಯೆಂಬ ಈ ಸ್ಥಾನವು ದೊರೆಯುವುದಕ್ಕೆ ಸಾಧ್ಯವಾಯಿತು."

ಆದರೆ ಅಲಿ ಆದಿಲಶಾಹಿಯು ಮುಲ್ಲಾ ನುಸ್ರತಿಗೆ ಗುರುವಾಗಿದ್ದನೆಂದು ಒಪ್ಪಿಕೊಳ್ಳುವುದು ಸೂಕ್ತವೆನಿಸುವುದಿಲ್ಲ. ಅಲಿ ಆದಿಲಶಾಹಿಯ ಬಗ್ಗೆ ಮುಲ್ಲಾ ನುಸ್ರತಿ ಏನೆಲ್ಲ ಬರೆದುಕೊಂಡಿರುವನೋ ಅದೆಲ್ಲ ಅವನ ಬಗೆಗೆ ಆತ ಹೊಂದಿರುವ ಆದರವನ್ನು ತೋರಿಸುವ ಉದ್ದೇಶದ್ದೇ ಹೊರತು ಬೇರೆ ಮತ್ತೇನೂ ಅಲ್ಲ. ಕಾಳಿದಾಸನ "ನನು ಪರಮಾರ್ಯೇಣ್ ನ ಗೃಹತ್ಯಾ ವಚಃ।" ಈ ವಚನದಲ್ಲಿರುವ ಅದರ ಮುಖ್ಯ ಅರ್ಥವನ್ನು ಗಮನಿಸಬೇಕು. ಮುಲ್ಲಾ ನುಸ್ರತಿಯ ಗ್ರಂಥವನ್ನು ಕೂಡ ಈ ಹಿಂದೆಯೇ ನೋಡಬೇಕು ಎಂಬುದಕ್ಕೆ ಎರಡು ಕಾರಣಗಳಿವೆ. ನುಸ್ರತಿಯು ಅಲಿಯ ಆಶ್ರಿತ ವ್ಯಕ್ತಿ ಎಂಬುದು ಒಂದು ಕಾರಣ. ಆದಿಲಶಾಹಿಯಿಂದ ಅವನಿಗೆ ಬಹಳೇ ಸಹಾಯ ಲಭಿಸುತ್ತಿತ್ತು. ಅದನ್ನು ಕವಿಯು ಅನೇಕ ಕಡೆಗಳಲ್ಲಿ ಉಲ್ಲೇಖ ಮಾಡಿದ್ದಾನೆ. ಅವನು ಹೇಳುವಂತೆ-

೧) ಉಸ್ತಾದೇ –ಆಲಮ್ ಬರಾಹೀಮ್ ಶಾಹೇ–ಜಮನ,
ಗಯಾ ಥಾ ಜೋ ಕರ ಬಾಗ್ ಮುಲ್ಕೇ ದಕನ।
–ಗುಲ್‌ಶನೇ–ಇಶ್ಕ್, ಅಧ್ಯಾಯ ೭.೭ ಮತ್ತು ೪೩.೩

೨) ಸವಾಈ ಯೋ ಉಸ್ತಾದ್ ಆಲಮ್ ಹುಆ,
ಮುರಬ್ಬೀ ಜಮಾನೇ ಕಾ ಜಮ ಜಮ ಹುಆ।
–ಗುಲ್‌ಶನೇ–ಇಶ್ಕ್, ಅಧ್ಯಾಯ ೪೩.೧೭

೩. ಮುಜೇ ತರಬಿಯತ್ ತೂ ಕಿಯಾ ಹೈ ಕಕರ
ದಿಖಾಯಾ ಹೂಂ ಕರ್ ಕಿಯಾ ಆಜ್ ಐಸಾ ಹುನಾರ ।
–ಗುಲ್‌ಶನೇ–ಇಶ್ಕ್, ಅಧ್ಯಾಯ ೭.೧೩೨

ಹಕ್ಕಾ ಕಿ ಮೈ ತುಜ ಹಾತ್ ಕಾ ದರ ಅಸ್ಲ ಪಾಲ್ಯಾ ಝಾಡ್ ಹೂಂ
ಪರವರ್ದಾ ತೂ ಕೈತಾ ಕಕರ ಶಾಯಸ್ತಾ ಹೂ ಇಸ್ ನಾರ್ ಕಾ ।

(ನಿಜವಾಗಿಯೂ ಹೇಳುವುದಾದರೆ ನೀನು ನಿನ್ನ ಕೈಗಳಿಂದಲೇ ಪೋಷಿಸಿದ ವೃಕ್ಷ ನಾನು. ನೀವು ನನ್ನನ್ನು ಹೀಗೆ ಪಾಲಿನೆ–ಪೋಷಣೆ ಮಾಡಿದುದರಿಂದಾಗಿಯೇ ನನಗೆ ಈ ಸಂಸ್ಕಾರವು ಬಂದಿತು.೪

ಇಂಥದೇ ಭಾವನೆಯನ್ನು ಕವಿಯು ಇನ್ನೂ ಕೆಲವು ಕಡೆ ವ್ಯಕ್ತಪಡಿಸಿರುವುದು ಉಂಟು. ೫

ಗುಲ್‌ಶನೇ–ಇಶ್ಕ್ ಎಂಬ ಕಾವ್ಯದ ಏಳನೆಯ ಅಧ್ಯಾಯದಲ್ಲಿ ದಖನಿ ಕವಿಗಳ ಪರಂಪರೆಯಂತೆ ನುಸ್ರತಿಯು ದ್ವಿತೀಯ ಆದಿಲಶಾಹಿಯನ್ನು ಸ್ತುತಿಸಿದ್ದಾನೆ. ಅವುಗಳಲ್ಲಿನ ಎರಡು ಸಾಲುಗಳು ಇಂತಿವೆ–

ನ ತೂ ಜಾನತಾ ಹೈ ಬಹರ್ ಹಾಲ್ ಮ್ಯೆಂ
ಕಿ ತರ್‍ಯೈಚ ಖಾ ಸೇ ಕಾ ಹೂಂ ಮಾಲ್ ಮ್ಯೆಂ।

ಇಲ್ಲಿ ಹೇಳಿರುವ ಅಲಿಯ 'ಖಾಸಾ' ಎಂದರೆ ಖಾಸಗಿ ಸರದಾರ ಯಾರು? ಎಂಬ ಬಗ್ಗೆ ನುಸ್ರತಿಯಲ್ಲಿ ಸ್ಪಷ್ಟ ಉತ್ತರವಿಲ್ಲ. 'ಅಲಿನಾಮಾ' ಕೃತಿಯಲ್ಲಿ ನುಸ್ರತಿಯು ದೊಡ್ಡ ದೊಡ್ಡ ಸರದಾರರು ಮತ್ತು ಗುಣಾಢ್ಯರಾದ ವ್ಯಕ್ತಿಗಳನ್ನು ಮತ್ತೆ ಮತ್ತೆ ಸ್ತುತಿಸಿದ್ದಾನೆ. ಹಾಗೆ ಸ್ತುತಿಸಲ್ಪಟ್ಟವರಲ್ಲಿ ಅಲಿ ಆದಿಲಶಾಹಿಯಲ್ಲಿ ಗೌಣ ದರ್ಜೆಯ ಸರದಾರನಾಗಿದ್ದ ಸೈಯದ್ ಇಲಿಯಾಸ್ ಶರಜಾಖಾನನೂ ಒಬ್ಬ. ಅಲಿಯ ಮಹಾಮಂತ್ರಿ ಅಬ್ದುಲ್ ಮುಹಮದ್, ಪ್ರಥಮ ವರ್ಗದ ಸೇನಾಪತಿ ಖವಾಸ್‌ಖಾನ್, ಮತ್ತು ಬಹಲೋಲಖಾನ್ ಇವರೆಲ್ಲರಿಗಿಂತಲೂ ಶರಜಾಖಾನನ ಬಗ್ಗೆಯೇ ಹೆಚ್ಚು ಉಲ್ಲೇಖ ಮತ್ತು ಸ್ತುತಿಯು 'ಅಲಿನಾಮಾ'ದಲ್ಲಿ ಕಾಣಸಿಗುವುದು. ಬಹುಶಃ ಈ ಮೇಲೆ ಹೇಳಿದ

'ಖಾಸಾ' ಎಂಬುದು 'ಶರಜಾಖಾನ'ನನ್ನೇ ಸಂಕೇತಿಸಿರಬಹುದೆಂದು ಹೇಳಿದಲ್ಲಿ ತಪ್ಪಾಗುವುದಿಲ್ಲ. ನುಸ್ರತಿಗೆ ಅಲಿಗಿಂತಲೂ ಹೆಚ್ಚಾಗಿ ಶರಜಾಖಾನನಿಂದಲೇ ಹೆಚ್ಚು ಸಹಾಯ ಮತ್ತು ಸಹಕಾರ ದೊರಕುತಿದ್ದಿರಬಹುದು ಎಂದು ಇದರಿಂದ ಊಹಿಸಲಾಗಿದೆ.

ಹಾಗೆಯೇ–

ಲಗಾಯಾ ತೇರಾ ತೂಚ ಅಪಸ ಹತ ಸೂ ಪಾಲ,
ಕಿ ತಾ ಸಾಯಬಾ ಜಗ ಕೋ ಹೋ ಹರ ನಿಹಾಲ ।
(ಅಧ್ಯಾಯ ೭.೧೪೬)

ಮುಜೇ ತರಬಿಯತ್ ಕರ್ ತೂ ಜಾಹೀರ್ ಕಿಯಾ,
ಶಊರ್ ಇಸ್ ಹುನರ್ ಕಾ ದೇ ಶಾಇರ ಕಿಯಾ
(ಅಧ್ಯಾಯ ೭.೧೫೩)

೪. ಅಲಿನಾಮಾ : ಸಂಪಾದಕರು : ಪ್ರಾ. ಸಿದ್ದಿಕೀ, ಶಕ ೧೮೮೧, ಅಧ್ಯಾಯ ೧೫.೨೮೬

೫. ಮುಂಜೇ ತರಬಿಯತ್ ತೂ ಕಿಯಾ ಹೈ ಕಕರ
ದಿಖಾಯಾ ಹೂ ಕರ್ ಆಜ್ ಐಸಾ ಹುನರ
ಲಗಾಯಾ ತೇರಾ ತೂಚ್ ಅಪಸ ಹತ ಸೂ ಪಾಲ,
ಕಿ ತಾ ಸಾಯಬಾ ಜಗ್ ಕೋಂ ಹೋಂ ಹರ ನಿಹಾಲ
ವೋ ಮುಜ ಮನ್ ಕೋಂ ಪರವರ್ದಾ ಬಿಹತ್ತರ ಕಿಯಾ।
ಸೌ ಬಾಸೋ ಸೂ ತಿಸ ಮನ ಮುಅತ್ತರ ಕಿಯಾ।
(ಗುಲ್‌ಶನೆ–ಇಶ್ಕ್, ಅಧ್ಯಾಯ ೭. ೧೩೨, ೭.೧೪೬ ಮತ್ತು ೫.೪೩)

"ಕವಿತ್ವವು ಪರಮೇಶ್ವರನಿಂದ ದತ್ತವಾಗಿದೆ" ಎಂಬುದು ನುಸ್ರತಿಯ ಸ್ಪಷ್ಟ ಉಕ್ತಿ. ವಿಶೇಷವೆಂದರೆ ಕವಿ ಪರಂಪರೆಯ ಮನೆತನವವು ಅವನದಲ್ಲ. ಬದಲಾಗಿ ಅವನದು ಕ್ಷತ್ರಿಯ ಕುಲ. ಎಂಟನೆಯ ಮತ್ತು ಒಂಬತ್ತನೆಯ ಅಧ್ಯಾಯದಲ್ಲಿ ನುಸ್ರತಿಯು ಈ ಮಾತನ್ನು ಖಚಿತವಾಗಿ ಹೇಳಿದ್ದಾನೆ. ಅವನು ಹೇಳುವಂತೆ–

ನ ಕುಭ್ ಶಾಇರಿ ಕಸ್ಬ್ ಕಾ ಕಾಮ ಹೈ
ಕಿ ಯೋ ಹಕ್ ಕೀ ಬಕ್ಷೀಶ್ ತೇ ಇಲ್ಹಾಮ್ ಹೈ।

(ಕೇವಲ ಅಧ್ಯಯನ ಮಾಡುವುದರಿಂದಷ್ಟೇ ಕವಿತ್ವ ಸಿದ್ಧಿಸುವುದಿಲ್ಲ. ಅದು ಈಶ್ವರನಿಂದ ಲಭ್ಯವಾಗುವ ಒಂದು ಅಂತಃಸ್ಫೂರ್ತಿಯಾಗಿದೆ.) ಮುಂದುವರೆದು ಮತ್ತೆ ಹೇಳಿದ್ದಾನೆ –

ಕರೂ ಶುಕ್ರ ಮುನ್‌ಇಮ್ ಲಾರಿಬ್ ಮ್ಯೆಂ
ಕಿ ಪಾಯಾ ಹುಃ ಯೋ ಗಜ ಅಜ ಗೈಬ್ ಮ್ಯೆ।

ಹಾಗೆಯೇ –

ಜಹೇ ಹಕ್ ಕೀ ಬಕ್ಷೀಶ ಖುಶ್ ಫಾತ್ ಕಾ,
ಸೋ ಸರರಿಶ್ತಾ ಪಾಯಾ ಅಜಬ್ ಬಾತ್ ಕಾ।

(ಈಶ್ವರನ ಕೃಪೆಯಿಂದಾಗಿಯೇ ಆಶ್ಚರ್ಯ ಪ್ರಣೀತವಾದ ಈ ವಾಣಿಯ ಪೂರ್ಣ ಜ್ಞಾನ ಸೂತ್ರವು ನನ್ನ ಕೈಯಲ್ಲಿ ಬಂದಿತು)

ಅಲಿ ಆದಿಲಶಾಹಿಯು ಗುರುವಾಗಿದ್ದನೆಂಬ ಉಲ್ಲೇಖ ಬಂದಿರುವುದು ಕೇವಲ "ಗುಲ್‌ಶನೆ-ಇಶ್ಕ್" ಕೃತಿಯಲ್ಲಿ ಮಾತ್ರ. ಅದು ನುಸ್ರತಿಯ ಮೊದಲ ಕಾವ್ಯ "ಅಲಿನಾಮಾ"ದಲ್ಲಿ ಬಾದಶಾಹನ ದಾನಶೂರ ಗುಣ, ಸಹಾಯ ಮತ್ತು ಉಪಕಾರ ಬುದ್ಧಿ ಇವುಗಳನ್ನಷ್ಟೇ ನುಸ್ರತಿಯು ಅಲ್ಲಿಲ್ಲಿ ಉಲ್ಲೇಖ ಮಾಡಿರುತ್ತಾನೆ. ಆದರೆ ಆತ ತನ್ನ ಗುರುವಾಗಿದ್ದನೆಂದು ಖಚಿತವಾಗಿ ಅದರಲ್ಲಿ ಎಲ್ಲಿಯೂ ಹೇಳಿಲ್ಲ.

ಈ ಬಗ್ಗೆ ಮತ್ತೊಂದು ಮುಖ್ಯ ವಿಚಾರವನ್ನು ಅವಶ್ಯ ಗಮನಿಸಬೇಕು. ಅದೆಂದರೆ ಗುರು ಪದವಿಯನ್ನು ಒಪ್ಪಿಕೊಳ್ಳುವಲ್ಲಿ ಗುರು-ಶಿಷ್ಯರ ನಡುವಣ ವಯೋಮಿತಿಯನ್ನು ಗಮನಿಸುವ ಅಗತ್ಯತೆ. ಅಲಿ ಆದಿಲಶಾಹಿಯು ಹಿಜರಿ ಸನ್ ೧೦೪೯(ಶಕ ೧೫೬೧)ರಲ್ಲಿ ಜನಿಸಿದನು. ತನ್ನ ಹದಿನೆಂಟನೆಯ ವಯಸ್ಸಿಗೆ ಸಿಂಹಾಸನವನ್ನು ಏರಿದ ಆತ ಹಿಜರಿ ಸನ್ ೧೦೮೩ (ಶಕ ೧೫೯೪)ರಲ್ಲಿ ಇಹಲೋಕವನ್ನು ತ್ಯಜಿಸಿದನು. ಮುಲ್ಲಾ ನುಸ್ರತಿಯು ತನ್ನ ಪ್ರಥಮ ಕಾವ್ಯವನ್ನು ರಚಿಸಿದ್ದು ಹಿಜರಿ ಸನ್ ೧೦೬೮ (ಶಕ ೧೫೮೦)ರಲ್ಲಿ ಅಂದರೆ ಅಲಿಯ ರಾಜ್ಯಾರೋಹಣವಾದ ಒಂದು ವರ್ಷದ ನಂತರ ಪೂರ್ಣಗೊಳಿಸಿದ್ದನೆಂಬುದಾಗಿ ತಿಳಿದು ಬರುತ್ತದೆ. ಅಲ್ಲದೆ ಹಿಜರಿ ಸನ್ ೧೦೭೬(ಶಕ ೧೫೮೭)ರಲ್ಲಿ "ಅಲಿನಾಮಾ" ಎಂಬ ಅವನ ಇನ್ನೊಂದು ಕೃತಿಯೂ ಪೂರ್ಣಗೊಂಡಿತು. ಈ ಅಂಶಗಳ ಹಿನ್ನೆಲೆಯಿಂದ ಗಮನಿಸಿದಾಗ ನುಸ್ರತಿಯು ಬಾದಶಾಹನಿಗಿಂತ ವಯಸ್ಸಿನಲ್ಲಿ ಬಹಳ ದೊಡ್ಡವನಾಗಿದ್ದನೆಂಬುದು ಸುಸ್ಪಷ್ಟ. ಹಾಗಾಗಿ ಆತ ಅಲಿಯನ್ನು ತನ್ನ ಗುರುವಾಗಿ ಸ್ವೀಕರಿಸುವ ಸಾಧ್ಯತೆಯೇ ಕಂಡುಬರುವುದಿಲ್ಲ.

ನುಸ್ರತಿಗೆ "ಮಲ್ಲಿಕುಶ್‌ಶುಅರಾ" ಅರ್ಥಾತ್ "ಕವಿರಾಜ" ಎಂಬ ಬಿರುದು ಲಭಿಸಿತ್ತು. ಇದು ಔರಂಗಜೇಬನು ವಿಜಾಪುರವನ್ನು ಆಕ್ರಮಿಸಿದ ನಂತರ ಅವನಿಗೆ ದೊರೆತುದೆಂದು ಹೇಳಲಾಗಿದೆ. ಆದರೆ ಆ ಸಾಧ್ಯತೆಯು ಸರಿಯೆನಿಸುವುದಿಲ್ಲ. ಆ ಪದವಿಯು ಅವನಿಗೆ ಅಲಿಯ ಜೀವಿತ ಕಾಲದಲ್ಲಿಯೇ ಲಭಿಸಿತ್ತು ಎಂದು ಹೇಳುವುದೇ ತರ್ಕಬದ್ಧವೆನಿಸುತ್ತದೆ. ಸಿಕಂದರ್ ಆದಿಲಶಾಹಿಯು ನಾಲ್ಕು ವರುಷದವನಿದ್ದಾಗಲೇ

ಅವನ ರಾಜ್ಯದಲ್ಲಿನ ದೊಡ್ಡ ದೊಡ್ಡ ಸರದಾರರುಗಳಲ್ಲಿ ತಂತಮ್ಮ ಪ್ರಭಾವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಒಂದು ದೊಡ್ಡ ಸಂಘರ್ಷ, ಸ್ಪರ್ಧೆಯೇ ಏರ್ಪಟ್ಟಿತ್ತು. ಹಾಗಿರುವಾಗ ಆ ಕಾಲದಲ್ಲಂತೂ ಇಂಥ ಬಹುಮಾನಿತ ಪದವಿಯನ್ನು ನೀಡಲಾಗಿತ್ತು ಎಂಬುದು ಸಾಧ್ಯವಿಲ್ಲದ ಮಾತು. ಇನ್ನು ಔರಂಗಜೇಬನು ಈ ಪದವಿಯನ್ನು ನೀಡಿದ್ದನೆಂಬ ವಿಚಾರ ಕೇವಲ ಆಧಾರ ರಹಿತವಷ್ಟೆ ಅಲ್ಲ, ಹಾಸ್ಯಸ್ಪದವೂ ಆದುದು. ಕಾರಣ ವಿಜಾಪುರವು ಪತನವಾದ ಕಾಲಕ್ಕೆ (ಹಿಜರಿ ಸನ್ ೧೧೯೭, ಶಕ ೧೬೮೮) ನುಸ್ರತಿಯು ಬದುಕಿಯೇ ಇರಲಿಲ್ಲವೆಂಬುದು ಗಮನಾರ್ಹ.

ಗುಲ್‌ಶನೆ ಇಶ್ಕ್ ಕೃತಿ ರಚನೆಯ ಹೊತ್ತಿಗೆ ನುಸ್ರತಿಯು ಸುಮಾರು ನಲವತ್ತು ವರುಷದವನಾಗಿದ್ದನೆಂದು ಹೇಳುವುದಕ್ಕೆ ಯಾವುದೇ ಅಡ್ಡಿಯಿಲ್ಲ. ಆ ಹೊತ್ತಿಗೆ ಅಲಿಯ ವಯಸ್ಸು ಕೇವಲ ಹತ್ತೊಂಬತ್ತು ವರುಷ. ಅಲಿ ಸ್ವತಃ ಉತ್ಕೃಷ್ಟ ಕವಿಯೆನಿಸಿದ್ದನು. ಆತ ದಖನಿ ಹಿಂದಿಯಲ್ಲಿ ಬರೆದ ಕಾವ್ಯಗಳನ್ನು ಡಾ. ಶ್ರೀರಾಮ ಶರ್ಮಾ ಎಂಬುವವರು ಸಂಪಾದಿಸಿ ಶಕ ೧೮೮೦ರಲ್ಲಿ ಪ್ರಕಟಿಸಿದ್ದಾರೆ. ನುಸ್ರತಿಯು ಅಲಿಗಿಂತಲೂ ಶ್ರೇಷ್ಠಮಟ್ಟದ ಕವಿ. ಜೊತೆಗೆ ವಯಸ್ಸಿನಿಂದಲೂ ಚಿಕ್ಕವನಾಗಿದ್ದ ಅಲಿಗೆ ನುಸ್ರತಿಯಂತಹ ಶ್ರೇಷ್ಠ ಕವಿಯ ಗುರುಸ್ಥಾನ ದಕ್ಕುವುದು ಸಾಧ್ಯವೇ ಇಲ್ಲ.

ಇದರ ಅರ್ಥವಿಷ್ಟೆ, ಮುಲ್ಲಾ ನುಸ್ರತಿಗೆ ನಿಜವಾದ ಅರ್ಥದಲ್ಲಿ ಯಾವ ಗುರುವೂ ಇರಲಿಲ್ಲ. ಸ್ವಯಾರ್ಜಿತವಾಗಿಯೇ ಅವನಿಗೆ ಈ ಕವಿತ್ವವು ಸಿದ್ಧಿಸಿತ್ತು. ಇನ್ನು ಅವನಿಗೆ ಮಲಿಕುಶ್‌ಶುಅರಾ ಅರ್ಥಾತ್ ಕವಿರಾಜ ಎಂಬ ಪದವಿಯೂ ಕೂಡ ಅಲಿಯಿಂದ ಅವನಿಗೆ ದೊರೆಯುವುದು ಸಾಧ್ಯವೇ ಇಲ್ಲ. ಇಂಥ ಪದವಿಯನ್ನು ನೀಡುವಂತಹ ವಾತಾವರಣವೂ ಸಹ ಕಾಲದಲ್ಲಿ ಇರಲೇ ಇಲ್ಲ.

ನುಸ್ರತಿಯ ನಿಧನ-ಕಾಲ :

ಹಲವಾರು ವರುಷಗಳವರೆಗೆ ನುಸ್ರತಿಯು ನಿಧನವಾದ ಕಾಲ ಯಾವುದು ಎಂಬುದರ ಬಗ್ಗೆ ಖಚಿತತೆ ಇರಲಿಲ್ಲ. ಡಾ. ಅಬ್ದುಲ್ ಹಕ್ ಅವರು ತಮ್ಮ 'ಮುಲ್ಲಾ-ನುಸ್ರತಿ' ಕೃತಿಯ (ಶಕ ೧೮೬೬) ಹದಿನಾರನೆಯ ಪುಟದಲ್ಲಿ ನುಸ್ರತಿಯು ಹಿಜರಿ ಸನ್ ೧೧೯೫ರಲ್ಲಿ ಮರಣ ಹೊಂದಿದನೆಂದು ಹೇಳಿದ್ದಾರೆ. 'ನವಾ-ಏ-ಆದಬ್' (ಮುಂಬಯಿ)ನ ಏಪ್ರಿಲ್ ೧೯೫೪ರ ಸಂಚಿಕೆಯಲ್ಲಿ ಪ್ರಕಟಗೊಂಡ ಒಂದು ಲೇಖನದಲ್ಲಿ ನಸಿರುದ್ದೀನ್ ಹಶ್ಮಿಯವರು ಹೇಳಿರುವಂತೆ ಹೈದರಾಬಾದಿನ ಸಾಲಾರಜಂಗ್ ಗ್ರಂಥಾಲಯದಲ್ಲಿ ನುಸ್ರತಿಯ "ಗುಲ್‌ಶನೇ-ಇಶ್ಕ್' ಕೃತಿಯ ಅನೇಕ ಪ್ರತಿಗಳಿವೆ. ಅವುಗಳಲ್ಲಿನ ಎರಡು ಪ್ರತಿಗಳಲ್ಲಿ ಮಾತ್ರ ಈ ಕೆಳಗೆ ಕೊಟ್ಟಿರುವ ರುಬಾಯಿಯು ಇದೆ. ಅವುಗಳ ಪ್ರತಿಯೊಂದು ಒಂದು ಮತ್ತೊಂದರ ಭಾಷಾಂತರವಾಗಿರುವ ಸಾಧ್ಯತೆಯೂ ಇದೆ.

ಜರಬ್ ಶಮಶೇರ್ ಯಹ ದುನಿಯಾ ಛೋಡ್
ಜಾಕೆ ಜನ್ನತ ಕೆ ಘರ ಮೇ ಖುಶ್ ಹೋರಹೇ
ಸಾಲೇ ತಾರೀಖ್ ಆ ಮಲಾಯಕ್ ತೇ
ಯೂ ಕಹೇ "ನುಸ್ರತಿ ಶಹೀದ್ ಅಹೈ"॥

(ಖಡ್ಗದಿಂದ ಗಾಯವಾದ ಕಾರಣ ನುಸ್ರತಿಯು ಈ ಜಗತ್ತನ್ನು ಬಿಟ್ಟು ಹೋದನು. ಅವನಿಗೆ ಸ್ವರ್ಗಕ್ಕೆ ಹೋದುದರಿಂದ ಆನಂದವೇ ಆಯಿತು. ದೇವದೂತರು ಬಂದು ಅವನ ಮೃತ್ಯು ಸಂಗತಿಯನ್ನು ಹೀಗೆ ಹೇಳಿದರು- "ನುಸ್ರತಿ ಹುತಾತ್ಮನಾದನು.")

ಕೊನೆಯ ಸಾಲುಗಳಲ್ಲಿ ರೇಖಿತಗೊಳಿಸಿರುವ ಮೂರು ಶಬ್ಧಗಳ ಹಿಜರಿ ಕಾಲ ಗಣನೆಯ ಅನುಸಾರ ಅವನ ನಿಧನ ವರ್ಷ ೧೦೮೫. ಅಬಜದ್-ಪದ್ಧತಿಯ ಅನುಸಾರ ಆ ಅಕ್ಷರಗಳ ಮೌಲ್ಯವು ಈ ಕೆಳಗಿನಂತಿವೆ.-

ನೂನ=೫೦, ಸಾದ=೯೦, ರೇ=೨೦೦, ತೇ=೪೦೦, ಶೀನ=೩೦೦, ಹೇ=೫, ಯಾ=೧೦, ದಾಲ್=೪, ಅಲಿಫ್=೧, ಹೇ=೫ ಮತ್ತು ಯಾ=೧೦. ಈ ಎಲ್ಲ ಅಂಕಿಗಳನ್ನು ಏಕತ್ರಗೊಳಿಸಿದರೆ ೧೦೮೫ರ ಸಂಖ್ಯೆಯಾಗುತ್ತದೆ. ಈ ವರ್ಷವನ್ನೇ ನುಸ್ರತಿಯ ಮರಣ ಕಾಲವೆಂದು ಬಹುತೇಕ ಎಲ್ಲ ವಿದ್ವಾಂಸರು ಮಾನ್ಯ ಮಾಡಿದ್ದಾರೆ.೬

ಮುಲ್ಲಾ ನುಸ್ರತಿಯ ಇಬ್ಬರು ಸೋದರರೂ ಅವನು ಬದುಕಿರುವಾಗಲೇ ನಿಪುತ್ರಿಕರಾಗಿ ಮರಣ ಹೊಂದಿದ್ದರು. ನುಸ್ರತಿಗೂ ಕೂಡ ಗಂಡು ಸಂತಾನವಿರಲಿಲ್ಲ. ಕೇವಲ ಒಬ್ಬ ಮಗಳಷ್ಟೇ ಇದ್ದಳು. ಅವಳ ವಂಶಸ್ಥರು ಇನ್ನು ವಿಜಾಪುರದಲ್ಲಿದ್ದಾರೆ.೭

ನುಸ್ರತಿಯು ಕೊಲೆಯಾಗಿದ್ದ ಎಂಬುದಾಗಿಯೂ ಊಹಿಸಲಾಗಿದೆ. ಆದರೆ ಇದಕ್ಕೆ ಯಾವುದೇ ಖಚಿತ ಆಧಾರಗಳು ಲಭ್ಯವಿಲ್ಲ. ಡಾ. ಹಕ್ ಅವರು ಸ್ವತಃ ಸಂಶೋಧನ ಆಧಾರದಿಂದ ಹೇಳಿರುವಂತೆ ನುಸ್ರತಿಯ ಸಮಾಧಿಯು ವಿಜಾಪುರದ ನಗೀನ ಭಾಗ್‌ನ ಸರ್ಕಾರಿ ಪ್ರೌಢಶಾಲೆಯ ಪ್ರಾಂಗಣದಲ್ಲಿದೆ.

ನುಸ್ರತಿಯ ದಾರಿದ್ರ್ಯ :

ನುಸ್ರತಿಯ ತಂದೆಯು ತೀರಾ ವಿಪನ್ನಾವಸ್ಥೆಯಲ್ಲಿ ಬದುಕಿದ್ದನೆಂಬುದು ಅವನ ಗ್ರಂಥದಿಂದಲೇ ತಿಳಿದುಬರುವಂಥ ಪ್ರಮುಖ ವಿಷಯ. ಆತ ತನ್ನ ದಾರಿದ್ರ್ಯದ ಸ್ವರೂಪವನ್ನು ತನ್ನ ಗ್ರಂಥದಲ್ಲಿ ಅನೇಕ ಬಾರಿ ಉಲ್ಲೇಖ ಮಾಡಿದ್ದಾನೆ. ಗುಲಶನೇ-ಇಶ್ಕ್ ಎಂಬ ಅವನ ಮೊದಲ ಕಾವ್ಯದಲ್ಲಿ ಆತನು ಹೇಳಿರುವುದು ಇಂತಿದೆ.೮

ಕಿಯಾ ಶಿಅರ್ ದಿಕ್ಕತ್ ಮೇ ಮೈ ದಿಲ್ ಕೋ ಸೋಂಪ
ಕಿ ದೇತಾ ಹೈ ತೇರಾ ಸಮಜ್ ಮುಜ ಕೋ ಚೋಪ।

(ನಾನು ಬಹಳ ಕಷ್ಟದಿಂದ ಜೀವನ ನಡೆಸುತ್ತಿದ್ದರೂ ದಿಟ್ಟತನದಲ್ಲಿಯೇ ಬರೆಯುತ್ತಿದ್ದೇನೆ. ಅಲಿಯೇ ನೀನಾದರೂ ಎನ್ನ ಕವಿತೆಗಳ ರಸಗ್ರಹಣ ಮಾಡುತಲಿರುವುದರಿಂದಲೇ ನನಗೆ ಪ್ರೇರಣೆಯು ಹೆಚ್ಚಾಗುತ್ತಿದೆ.)

ನುಸ್ರತಿಯು ಅಲಿ ತನ್ನ ರಾಜ್ಯಾರೋಹಣಕ್ಕೆ ಮೊದಲಿನಿಂದಲೇ ಅಂದರೆ ಆತ ಯುವರಾಜನಾಗಿದ್ದಾಗಿನಿಂದಲೇ ತನಗೆ ಅವನ ಪರಿಚಯವು ಚೆನ್ನಾಗಿ ಇದ್ದಿತೆಂದು ಬರೆದಿದ್ದಾನೆ. ಅಲಿ ಆದಿಲಶಾಹಿಯು ಚಿಕ್ಕವನಾಗಿರುವಾಗಿನಿಂದಲೂ ಕಾವ್ಯ ಮತ್ತು ಕವಿಗಳ ಬಗ್ಗೆ ಬಹಳ ಅಕ್ಕರೆಯನ್ನು ತೋರುತ್ತಿದ್ದನು. ಇನ್ನು ಯುವರಾಜನಾದ ಮೇಲೆಯಂತೂ ಆತ ನುಸ್ರತಿಯ ಕಾವ್ಯದ ರಸಗ್ರಹಣ ಮಾಡಿ ಅವನನ್ನು ಪ್ರಶಂಸೆ ಮಾಡುತ್ತಿದನೆನ್ನಲಾಗಿದೆ. (ಅಧ್ಯಾಯ ೮,೩೦,೩೧,೩೬)

೬. ತಜ್ಕಿರೇ-ಮಖ್ತೂತಾತ್ : ಡಾ. ಕಾದರೀ ಜೋರ್, ಭಾಗ-೫, ಪುಟ ೪೧.

೭. ಮುಲ್ಲಾ - ನುಸ್ರತಿ –ಡಾ. ಹಕ್, ಶಕ೧೮೬೬, ಪುಟ ೧೦ ಮತ್ತು ೧೩.

೮. ಗುಲ್‌ಶನೆ-ಇಶ್ಕ್-ಅಧ್ಯಾಯ ೭.೧೪೧

ಮೇರಾ ಶಹ ಜೋ ಬೂಜಕ ಅಹೇ ಜೋಹರೀ
ವೋ ಶಹಜಾದಗೀ ಮೇ ಅಥಾ ಮುಶಾರೀ
ನವೇ ಚಾಂದ್ - ಸಾ ಶಹ ನವಬಾಲಾ ಅಥಾ
ಚಡತ ಬಿದ ಕಾ ದಿನ - ದಿನ ಉಜಾಲಾ ಅಥಾ।
ಮೇರಿ ತಬಅ ಕೀ ಖನ ಕೋ ಕಾಬಿಲ್ ಪಥಾನ್
ನ ಕೋಈ ಖನ ಹೈ ಕರ ಇಸ್ ಮುಕಾಬಿಲ ಪಥಾನ್।

(ನವೀನ ರಾಜಪುತ್ರನು ತರುಣ. ಅವನ ಪ್ರಕಾಶವಾದರು ದಿನೇ ದಿನೇ ವೃದ್ಧಿಸುತಲಿತ್ತು. ನನ್ನ ಕವಿತ್ವ ಶಕ್ತಿಯನ್ನು ಅವನು ಸ್ಪಷ್ಟವಾಗಿಯೇ ಗುರುತಿಸಿದನು. ನನ್ನ ಹಾಗೆ ಯೋಗ್ಯನೂ, ಉತ್ಸಾಹಿಯೂ ಆದ ಕವಿ ಮತ್ತೊಬ್ಬನು ಇರಲಿಲ್ಲ ಎಂಬುದು ಅವನಿಗೆ ಖಾತ್ರಿಯಾಗಿತ್ತು.)

ಆ ತರುಣನು ರಾಜನಾದ ಮೇಲೆ ಆತ ಕವಿಯನ್ನು ಕರೆದುಕೊಂಡು ಬರುವಂತೆ ಹೇಳಿ ಕಳುಹಿಸಿದನು.

ಬುಲಾ ಭೇಜ ಬಂದೇ ಕೋ ಉಸ್ ಹಾಲ್ ಮೇ
  ನಜರ್ ಕರ್ ಮೇರೆ ಬೇ - ಬಹಾ ಮಾಲ ಮೇ
ಪರಖನಾ ಚಲ್ಯಾ ಯೋ ರತನ ಸರ - ಬಸರ
  ಥಕೇ ಪಾರಖೀ ಧಿಕ್ ಯೋ ಅಹಲೇ - ನಜರ್ ।

ರಾಜನು ಅವನ ಅಮೂಲ್ಯವಾದ ಕಾವ್ಯ ಸಂಪತ್ತನ್ನು ಗಮನಿಸಿದನು. ಆ ಕಾವ್ಯ ಸಂಪತ್ತನ್ನು ನೋಡಿದ ಅವನ ವಿದ್ವಾಂಸರೆಲ್ಲ ಆಶ್ಚರ್ಯ ಚಕಿತರಾದರು.

ಆಗ ತನ್ನ ಪರಿಶ್ರಮದ ಫಲವು ಖಚಿತವಾಗಿ ಲಭಿಸುವುದು ಎಂಬುದಾಗಿ ಆತ ಭಾವಿಸಿದ್ದನು.

ಗರ್ ಇಸ್‌ಮೇ ಥಕ್ ಬೈತ ಬೀ ಆವಿ ಕಾಮ್
ತೋ ಹುಈ ಚೀಜ್ ಮಾನೋ ಮಶವಕ್ತ ತಮಾಮ್ ।

(ಅಧ್ಯಾಯ ೧೧. ೯೩)

ಎಂಟು ವರುಷ ಕಳೆದ ಅನಂತರ ನುಸ್ರತಿಯು 'ದಖನ್ ಕಾ ಶಾಹನಾಮ' ಎಂಬ ಕೃತಿಯನ್ನು ರಚಿಸಿದನು. ಆದರೂ ಅವನ ಬಡತನ ಮಾತ್ರ ಕಡಿಮೆಯಾಗಲಿಲ್ಲ. 'ಅಲಿ ನಾಮಾ' ಎಂಬ ಕಾವ್ಯದಲ್ಲಿ ತನ್ನ ದಾರಿದ್ರ್ಯದ ಬಗ್ಗೆ ತೀವ್ರ ವೇದನೆಯನ್ನು ವ್ಯಕ್ತಪಡಿಸಿದ್ದಾನೆ ನುಸ್ರತಿ. ಈ ಗ್ರಂಥದ ೧೫. ೯ಳನೇ ಅಧ್ಯಾಯದಲ್ಲಿ ಆತ ಹೇಳಿರುವುದು ಇಂತಿದೆ–

ಹೂಂ ಮೈ ತೋ ಬೇ–ಸಾಮಾನ ಆದೀಕ್ ದುಶ್ಮನ್ ತೋ ಹೈ ಭಾರೀ ಅಟಲ
ಪಾನೇ ಸಿಲಾಹ್ ಇಸ್ ಜಂಗ್ ಕೋ ಶಹ ಕಾ ಧರೂ ದರಬಾರ್ ಆಜ್।

ಅನಂತರ ೧೫ನೇಯ ಅಧ್ಯಾಯದಲ್ಲಿನ ೧೨ಳ ರಿಂದ ೧೩೧ರ ವರೆಗಿನ ಸಾಲುಗಳಲ್ಲಿ ಅವನು ತನ್ನ ತೀರಾ ದಾರಿದ್ರ್ಯದಿಂದ ಕೂಡಿರುವ (ಚಂದ್ರಮೌಳಿ) ಮನೆಯ ಅವಸ್ಥೆಯನ್ನು ಉಪಹಾಸದಿಂದ ಹೇಳಿಕೊಂಡಿದ್ದಾನೆ.

ಪನ್ ಕ್ಯಾ ಕರೂ ಆವಿ ಶಾಹ ಮೈ ಕಈ ಬಾತ್ ಬೇ–ಸಾಮಾನ ಹೂಂ।
ಅವ್ವಲ್ ತೋ ಘರ್ ಐಸಾ ನಹೀ ಜಾ ಠಾರ್ ಹೋಯ್ ರಾಹತ್ ಭರೀ ।
ಘರ್ ಬೀ ನ್ಹನಾ ಸಾ ವಲೇ ದಾಯಮ್ ಹೈ ಯೋ ಇಲ್ಲತ್ ಉಸೇ
ಲಡಕಾಂದ ಸೋ ಹಮ್‌ಸಾಯ ಬದ್ ವೈಸೀಚ್ ಭುಈ ಕೀ ಬದತರೀ ।
ಮುತಲಕ್ ಅರಾಜಿಲ್ ಕೌಮ್ ಹೈ ತಿಸ್ ಗರ್ದ್ ಐಸೇ ಬೀ ಚಲ್ಯಾ
ಸಮಝೋ ವೋ ಗಾಲಿ ಧಾಂವೂ ಕೋ ಸಚ್ಚಿ ಗಮತ ಹೌರ್ ಮಸಖರೀ।
ಜಿನಕೀ ಜಬಾ ಸೇ ಲಾಮೋ ಔರ್ ಕಾಫ್ ಆತಾ ಹೈ ಶೈತಾ ಸೀಕನೇ ।
ಸಾಚೇಪನೇ ಸೂ ಜಬ್ ಕರೇ ತಾಲೀಮ್, ಜಂಗ್, ಜರಗರೀ,
ಹಂಗಾಮ ಪರ್ ಬರಸಾತ್ ಟುಕ ಪಡತೇ ಹೈ ಲರ್ ಕಾ ನೀರ ಭರ್
ಘರ್ ಹೌಜ್ ಹೋಕರ್ ಕೀಚ್ ಕೀ ರಹೀ ಧೂಪ್ ಕಾಲೇ ಲಗ ತರೀ ।
ಇಸ್ ಸಾಲ್ ತೋ ಲರ್ ಕಾ ಸಿತಮ್, ಸಾಮಾನ ಘರ್ ಕಾ ಲೇ ಗಯಾ

ಉಬರ್ಯಾ ಹೈ ಯಕ್ ಥಾಲೀ ಲಿಹಾಫ ಯಾನೇ ಗಂಗನ ಹೌರ್ ಧರತರೀ,
ಬಂದೇ ಕಾ ಆಖಿರ ಅರ್ಜ್ ಯೋ ಹೈ ಅಏ ಜಹಾಂ ಕೇ ಸಾಯಬಾ,
ಯಾ ಕರ ಬಡೇ ಫರ್ ಕೋ ಖಡಾ, ಯಾ ಕರ ಕರಮ್ ಸೂ ಯಾವರೀ।
ಫರ್ಮಾ ಸೂ ಆಲೀ ಹುಕ್ಮ್ ಕೇ ಬಖ್‌ಶೀಶ್ ಮುಂಜ ಐಸಾ ಫರ್ ದಿಲಾ
ಜೋ ಸಾಫ್ ತರ್ ಮುಜ ತಬಅ ತೇ ಹೋಯ್ ಜಾ ಸಫಾಏ ಬಿಹತರೀ ।

(ಬೇಸಾಮಾನ–ಕಾಂಚನರಹಿತ; ಠಾರ್ –ಜಾಗ; ರಾಹತಭರಿ–ಸುಖ; ನನ್ಹಾ–ಚಿಕ್ಕದು; ವಲೆ–ಆದರೆ; ದಾಯಮ–ಚಿರಂತನ; ಇಲ್ಲತ್–ದುರಭ್ಯಾಸ; ಲಡಕಾಂದ್–ಮಕ್ಕಳು; ಹಮ್‌ಸಾಯ–ನೆರೆಯವನು; ಭುಈ–ಭೂಮಿ; ಬದತರೀ–ನಿಕೃಷ್ಟತೆ; ಮುತಲಕ್–ಕೇವಲ; ಅರಾಜಿಲ–ನೀಚ; ಕೌಮ–ಜಾತಿ; ಲಾಮೋ ಕಾಫ–ದೂಷಣೆ; ತಾಲೀಮ–ಶಿಕ್ಷಣ, ಅಭ್ಯಾಸ; ಜಂಗ್–ಯುದ್ಧ; ಜರಗರೀ–ಅಕ್ಕಸಾಲಿಯ ಕೌಶಲ; ತರೀ–ಕರುಣೆ; ಲರ–ತರಂಗ, ನೀರಿನ ತೆರೆ; ಸಿತಮ–ಜುಲುಮೆ, ಅತ್ಯಾಚಾರ; ಉಬಾರನಾ–ಶೇಷ; ಸಾಯಬಾ–ರಕ್ಷಕ; ಯಾವರಿ–ಮೈತ್ರಿ, ಸ್ನೇಹ; ಆಲಿ–ಉಚ್ಚ; ತಬಅ–ಸ್ವಭಾವ; ಜಾಂ–ಜಗತ್ತು.)

ನುಸ್ರತಿಯು ಬಾದಶಹನಿಂದ ತನಗೆ ಲಭಿಸುತ್ತಿದ್ದ ಧನ, ಸನ್ಮಾನಗಳ ಬಗ್ಗೆ ಎಲ್ಲಿಯೂ ಉಲ್ಲೇಖ ಮಾಡಿಲ್ಲ. ಒಂದೆಡೆ ಆತ ತನ್ನ ದಾರಿದ್ರ್ಯದ ಬಗ್ಗೆ ಹೇಳುತ್ತಾ ಎಲ್ಲ ದಾಕ್ಷಿಣಾತ್ಯರ ಬಗ್ಗೆಯೂ ಕಟುವಾಗಿ ಟೀಕಿಸಿದ್ದಾನೆ. ಇದರಿಂದ ಅರ್ಥವಾಗುವುದೇನೆಂದರೆ ನುಸ್ರತಿಯು ತನ್ನ ಕೊನೆಗಾಲದವರೆಗೂ ಬಡತನದಲ್ಲಿಯೇ ಬದುಕಿದ್ದನು ಎಂಬುದು. ಮತ್ತೊಂದೆಡೆ ಅವನು ಹೇಳಿರುವ ಮಾತುಗಳು ಇಂತಿವೆ:

ಯಾರನೇ ದಕನ್ ಕಿಸ್‌ಸೂ ವಫಾಈ ನ ಕರೇ
ಹೋಏ ತೋ ಬುಲಂದ್ – ಬಖ್ತ್ ಭಲಾಈ ನ ಕರೇ ।
ಖೂಬೀ ತೋ ಉನ್‌ಕೀ ಕಿಯಾ ಕಿತಅ ನಜರ್
ಉಪಕಾರ್ ಹೈ ಕಿ ಫಿರ್ ಕೋ ಬುರಾಈ ನ ಕರೇ ।

(ದಾಕ್ಷಿಣಾತ್ಯ ಮಿತ್ರರು ವಿಶ್ವಾಸಾರ್ಹರಲ್ಲ. ತಾವು ಉಚ್ಚ ಸ್ಥಾನದಲ್ಲಿದ್ದರೂ ಯಾರಿಗೂ ಒಳಿತನ್ನು ಮಾತ್ರ ಮಾಡಲಾರರು. ಇನ್ನು ಅವರು ಸದ್ಗುಣಗಳ ಬಗ್ಗೆ ಒಮ್ಮೆಯಾದರೂ ಯೋಚಿಸುವುದಿಲ್ಲ. ದಾಕ್ಷಿಣಾತ್ಯರು ಯಾರೊಬ್ಬರಿಗೂ ಹಾನಿ ಮಾಡದೆ ಸುಮ್ಮನಿದ್ದರೆ ಅಷ್ಟೇ ಸಾಕು ಅದನ್ನೇ ದೊಡ್ಡ ಉಪಕಾರ ಎನ್ನುಬಹುದು.)

'ದಕನ್' ಎಂಬುದರ ಅರ್ಥ ದಾಕ್ಷಿಣಾತ್ಯ. ನುಸ್ರತಿಯು ಈ ಶಬ್ದವನ್ನು ವಿಜಾಪುರ ರಾಜ್ಯ, ವಿಜಾಪುರದ ಸೇನೆ ಮತ್ತು ಅಧಿಕಾರಿ ವರ್ಗ ಎಂಬ ಅರ್ಥದಲ್ಲಿಯೇ ಪ್ರಯೋಗಿಸಿರುವಂತೆ ಕಾಣುವುದು. ಅದು ಆದಿಲಶಾಹಿಯ ಉಚ್ಚ ಅಧಿಕಾರಿಗಳು ಹಾಗೂ ನೇತಾರರನ್ನು ಕುರಿತ ಉಲ್ಲೇಖವೇ ಎಂಬುದು ಸುಸ್ಪಷ್ಟ.

ನುಸ್ರತಿಯ ಸಾಧು ಸ್ವಭಾವ :

ಪರಮೇಶ್ವರನ ಕುರಿತು ಸ್ತುತಿ ಮಾಡುವಾಗಲೆಲ್ಲ ನುಸ್ರತಿಯು ತನ್ನ ಆಶೆ ಆಕಾಂಕ್ಷೆಗಳನ್ನು ಪೂರ್ಣವಾಗಿ ಅವನಲ್ಲಿ ಹೇಳಿಕೊಂಡಿದ್ದಾನೆ. ಅವುಗಳಲ್ಲಿ ತನಗೆ ಅಪ್ರತಿಮ ಕವಿತಾಶಕ್ತಿ ಲಭಿಸಬೇಕು ಎಂಬುದೂ ಒಂದು. ಅವನ ಕಾವ್ಯದ ಕೆಲವು ಸಾಲುಗಳಲ್ಲಿ ಅವನ ಸ್ವಭಾವ, ಕುಲ-ಶೀಲಗಳೆಲ್ಲ ವ್ಯಕ್ತವಾಗಿವೆ. 'ಗುಲ್‌ಶನೇ-ಇಶ್ಕ್' ಕಾವ್ಯದಲ್ಲಿ (೨. ೪೬ರ ಅಧ್ಯಾಯ) ಆತ ಹೀಗೆ ಹೇಳಿದ್ದಾನೆ-

ಮೇರೆ ಮನ್ ಕಾ ತೋತೀ ತೋ ಬೇಕಾಮ್ ಹೈ,
ಕಮಾನಾ ತೋ ಬಾತ್ ಉಸ್‌ಕೋ ಇಲ್ಹಾಮ್ ಹೈ ।

(ನನ್ನ ಮನವು ಒಂದು ನಿಷ್ಕಾಮ ಗಿಳಿಯಂದದಿ ಶೂನ್ಯವಾದುದು. ಯಾವಾಗ ನನ್ನಿಂದ ಸಾಹಿತ್ಯ ನಿರ್ಮಿತವಾಗುವುದೋ ಅದೆಲ್ಲವೂ ನನಗೆ ದೊರೆತ ಸಾಕ್ಷಾತ್ ಈಶ್ವರನ ಅಂತಃ ಪ್ರೇರಣೆಯೇ ಹೌದು.)

ಮುಂದೆ ಅಧ್ಯಾಯ ೨. ೬೦ರಲ್ಲಿ ಅವನು ಹೀಗೆ ಪ್ರಾರ್ಥನೆ ಮಾಡಿದ್ದಾನೆ-
ಯಹಾಂ ಕೀ ನ ಕಿಸ್ ಝೂಡ್ ಕೋ ಕೀಡ ಲಾಲಾ
ನ ವಸ್ವಾಸ್ ಖನ್ನಾಸ್ ಕೀ ಪೀಡ ಲಾ।

(ಪರಮೇಶ್ವರಾ ನನ್ನ ಜೀವರೂಪಿ ವೃಕ್ಷಕ್ಕೆ ಎಂದಿಗೂ ಕೃತಘ್ನತೆಯೆಂಬ ಹುಳುವನ್ನು ಹತ್ತಗೊಡದಿರು. ಅಂತೆಯೆ ಎನ್ನ ಮನಸ್ಸನ್ನು ಸಂಶಯಕ್ಕೆ ಆಹಾರವಾಗದಂತೆ ಕಾಪಾಡು.)

ಅವನು ಮತ್ತೆ ಹೇಳಿರುವುದಿಂತಿದೆ-(ಅಧ್ಯಾಯ ೨, ೬೬,೬೮,೬೯)
ಮುಜೇ ದೀನ ವ ದುನಿಯಾ ಮೇ ಇಜ್ಜತ್ ಸೂ ಕಾಮ್
ಬುಜೂ ಬೇಹಯಾಈಕಾ ಜೀನಾ ಹರಾಮ್।
ನಕೋ ರಖ್ ಕಮೀನ್ಯಾ ಕೇ ಉಪಕಾರ ಮೇ
ನ, ಮುಜ ಸರನಾವಾ ದಾಮ್ ಕೇ ಭಾರ್ ಮೇ।
ನಕೋ ಮುಜ ಕು ಕೋತಾಹಬೀ ಖೇಶ್ ದೇ
ದೇ ಬೇಗಾನಾಪನ ದೂರ ಅಂದೇಶ ದೇ।

(ಮೃತ್ಯು ಲೋಕದಲ್ಲಿಯೇ ಆಗಲಿ ಸ್ವರ್ಗ ಲೋಕದಲ್ಲಿಯೇ ಆಗಲಿ ಮಾನವಂತನಾಗಿ ಬಾಳಬೇಕು ಎಂಬುದು ನನ್ನ ಭಾವನೆ. ಹೇ ಪರಮೇಶ್ವರಾ, ನನ್ನ ಮನಸ್ಸಿನಲ್ಲಿ ಅಪಮಾನಕರವಾದ ಬದುಕಿನ ಬಗ್ಗೆ ಎಂದೆಂದು ತಿರಸ್ಕಾರವಿರುವಂತೆ ದಯಮಾಡು. ಅಂತೆ ನೀಚ ಜನರಿಂದ ಎಂದೆಂದೂ ನಾನು ದೂರವಿರುವಂತೆ ದಯಪಾಲಿಸು. ಧನ, ದೌಲತ್ತಿಗೆ ಬಲಿಯಾಗುವಂತಹ ಸಂದರ್ಭ ಮಾತ್ರ ಎಂದೆಂದಿಗೂ ಬಾರದಿರಲಿ ನನಗೆ. ನನ್ನ ಹಿರಿಯರೆಲ್ಲ ದೂರ ದೃಷ್ಟಿಯುಳ್ಳವರಾಗಿದ್ದರು. ನನ್ನನ್ನು ಆ

ರೀತಿಯಲ್ಲೇ ನಿರ್ಭಯನೂ, ದೂರದೃಷ್ಟಿಯುಳ್ಳ ವ್ಯಕ್ತಿಯನ್ನಾಗಿಯೂ ಮಾಡುವುದು.)

ನುಸ್ರತಿಯನ್ನು ಉಳಿದು ಅನ್ಯರಲ್ಲಿ ಕೆಲವರು ಮಾತ್ರ ಪರಮೇಶ್ವರನನ್ನು ಹೀಗೆ ಪ್ರಾರ್ಥಿಸಿದ್ದಾರೆ. ಹಾಗಾಗಿ ಅವನ ಈ ವಾಕ್ಯಗಳು ಅವನ ಜೀವನವನ್ನು ಪ್ರತಿಬಿಂಬಿಸುವುವಾಗಿವೆ ಎಂದು ಭಾವಿಸಿದ್ದೇನೆ ನಾನು. ಸಾಮಾನ್ಯ ಕವಿಗಳಿಗಿಂತ ಇಲ್ಲಿ ಭಿನ್ನ ವಿಚಾರಗಳು ಕಾಣಸಿಗುವುದರಿಂದ ಈ ಮೂಲಕ ನುಸ್ರತಿಯ ಮನಃಸ್ಥಿತಿಯನ್ನು ಅರಿಯಬಹುದಾಗಿದೆ.

ನುಸ್ರತಿಯ ಭಕ್ತಿ–ಭಾವ :

ಪ್ರವಾದಿ ಮಹಮದ್ ಪೈಗಂಬರ್ ಮತ್ತು ತನ್ನ ಮನೆಯ ವ್ಯಕ್ತಿಗಳನ್ನು ಬಿಟ್ಟರೆ ಸೈಯದ್ ಮಹಮದ್ ಹುಸೇನಿಯ ಬಗ್ಗೆಯಷ್ಟೆ ನುಸ್ರತಿಯ ಮನಸ್ಸಿನಲ್ಲಿ ಅತೀವ ಶ್ರದ್ಧೆ ಮತ್ತು ಭಕ್ತಿ ಇತ್ತು. ಸೈಯದ್ ಮಹಮದ್ ಹುಸೇನಿ 'ಬಂದೇ ನವಾಜ್' ಎಂಬ ಹೆಸರಿನಿಂದ ಪ್ರಸಿದ್ಧನಾಗಿದ್ದಾನೆ. ಈತ ದಖನಿಯ ಪ್ರಥಮ ಲೇಖಕನಷ್ಟೆ ಅಲ್ಲ, ಶ್ರೇಷ್ಠ ಸಂತನೂ ಹೌದು. ಮೈಸೂರು ರಾಜ್ಯದ (ಇಂದಿನ ಕರ್ನಾಟಕ) ಗುಲಬರ್ಗಾದಲ್ಲಿ ಆತನ ಪವಿತ್ರ ಸ್ಥಾನ (ದರ್ಗಾ)ವಿದೆ. ನುಸ್ರತಿ ಅವನ ಬಗ್ಗೆ ಹೇಳಿರುವುದು ಹೀಗೆ – (ಅಧ್ಯಾಯ ೬. ೨)

ಜಬಾ ಧೋ ಕೇ ಪುಲನೀರ ಸೂಂ ಮುಖ ಮೇ ಲಾವು
ಯೇ ಸಯ್ಯದ್ ಹುಸೇನಿ ಕಾ ನಾಂವು।

'ಬಂದೇ ನವಾಜ್'ರ ಬಗ್ಗೆ ಕವಿಯ ಮನಸ್ಸಿನಲ್ಲಿ ಎಷ್ಟರ ಮಟ್ಟಿಗೆ ಭಕ್ತಿಯಿತ್ತು ಎಂಬುದನ್ನು ಈ ಸಾಲುಗಳು ದರ್ಶಿಸುತ್ತವೆ. ಬಂದೇ ನವಾಜರ ಸಮಾಧಿ ಸ್ಥಳದ ವರ್ಣನೆಯು ನುಸ್ರತಿಯಲ್ಲಿ ಈ ಕೆಳಗಿನಂತೆ ಬಂದಿರುವುದು –

ದಖನ್ ಕೀ ಅಜಬ್ ಬಖ್ತವರ ಖಾಕ ಹೈ,
ಕಿ ಜಿಸ್ ಬೀಚ್ ತುಜ ಖ್ವಾಬ್ ಗಹ ಪಾಕ ಹೈ ।
ಯಹ ಭುಈ ಕಿಸ್ ಖತರ ತೇ ನ ಹೋಯ್ ಹೌಲನಾಕ್
ಕಿ ಹೈ ಕಲ್ ಹೈ ತಿಸ್ ಗುಲ ತೇರಾ ಕಬ್ರ ಪಾಕ ।

(ನಿನ್ನ ಸಮಾಧಿ ಇರುವ ದಕ್ಷಣದ ಭೂಮಿಯಿದು ನಿಜವಾಗಿಯೂ ಭಾಗ್ಯಸಂಪನ್ನ. ನಿನ್ನ ಸಮಾಧಿಯ ತಾಯಿತವನ್ನು ಕೊರಳಲ್ಲಿ ಧರಿಸಿರುವುದರಿಂದ ಈ ಭೂಮಿಗೆ ಯಾವುದೇ ಭಯ ಸಂಕಟಗಳು ಬರಲಾರವು.)

ದಖನಿ ಹಿಂದಿಯ ವಿದ್ವಾಂಸರಲ್ಲಿ ಒಬ್ಬರಾದ ಕಾರ್ಸಾ ದ ತಾಸಿಯವರ ಅಭಿಪ್ರಾಯದಂತೆ ನುಸ್ರತಿಯು ಮೂಲತಃ ಬ್ರಾಹ್ಮಣ ಕುಲದಲ್ಲಿ ಜನಿಸಿದ್ದನು. ಅನಂತರ ಮತಾಂತರಗೊಂಡು ಮುಸಲ್ಮಾನನಾದ. ಆದರೆ ತಮ್ಮ ಈ ಅಭಿಪ್ರಾಯಕ್ಕೆ ಏನು

ಆಧಾರವೆಂಬ ಬಗ್ಗೆ ಅವರಲ್ಲಿ ಸ್ಪಷ್ಟನೆಯಿಲ್ಲ. ನುಸ್ರತಿಯ ಕೃತಿಯನ್ನು ಅಧ್ಯಯನ ಮಾಡಿದರೆ ತಾಸಿಯರ ಅಭಿಪ್ರಾಯ ಸತ್ಯಕ್ಕೆ ದೂರವಾದುದು ಎಂಬುದು ಖಚಿತವಾಗುತ್ತದೆ. ಬಂದೇನವಾಜರನ್ನು ಕುರಿತು ಬರೆದಿರುವ ಈ ಸಾಲುಗಳಲ್ಲಿ ಆತನ ಹಿರಿಯರೂ ಮುಸಲ್ಮಾನರೇ ಆಗಿದ್ದರು ಎಂಬುದು ದೃಢವಾಗುತ್ತದೆ.

ಬ-ಹಮ್ದುಲಿಲ್ಲಾ ಕುರಸೀಬ-ಕುರಸೀ ಮೇರಿ
ಚಲೀ ಆಈ ಹೈ ಬಂದಗೀ ಮೇ ತೇರೀ।

(ಪರಮೇಶ್ವರನ ಕೃಪೆಯಿಂದ ನನ್ನ ಪೂರ್ವಜರೆಲ್ಲ (ತಲೆಮಾರು) ನಿನ್ನ ಸೇವೆಯನ್ನು ಮಾಡುತ್ತಲೇ ಬಂದಿದ್ದಾರೆ.)

ನುಸ್ರತಿಯ ಗ್ರಂಥದಲ್ಲಿ ವಿಫುಲವಾಗಿ ಕಾಣಸಿಗುವ ಸಂಸ್ಕೃತ, ಹಿಂದಿ ಮತ್ತು ಮರಾಠಿ ಶಬ್ದಗಳನ್ನು ಆಧಾರವಾಗಿಟ್ಟುಕೊಂಡು ತಾಸಿಯವರು ಹೀಗೆ ಹೇಳಿರಬಹುದು. ಫಾರ್ಶಿ ಲಿಪಿಯಲ್ಲಿ ಬರೆದಿರುವ ಭಾಷೆಯು ಉರ್ದುವಾಗಿದ್ದು, ಅದು ಮುಸಲ್ಮಾನರ ಭಾಷೆ ಎಂಬುದರಿಂದ ಬಹುಶಃ ಅವರು ಹೀಗೆ ಊಹಿಸಿರಬಹುದು. ಆದರೆ ಇದು ಕೇವಲ ಒಂದು ಕಲ್ಪನೆಯ ಭರಾಟೆಯಲ್ಲದೆ ಮತ್ತೇನೂ ಅಲ್ಲ.

ಬ್ರಜ್, ಅವಧಿ, ರಾಜಸ್ಥಾನಿ, ಗುಜರಾತಿ, ಮರಾಠಿ ಇತ್ಯಾದಿ ಭಾರತೀಯ ಭಾಷೆಗಳಂತೆಯೇ ದಖನಿಯೂ ಒಂದು ಭಾರತೀಯ ಭಾಷೆ ಎಂಬುದು ನಿರ್ವಿವಾದ ಸಂಗತಿ. ದೆಹಲಿ ಮತ್ತು ಮೇರಠ್‌ನ ಸುತ್ತಮುತ್ತ ಪ್ರಚಲಿತದಲ್ಲಿದ್ದ ರೂಕ್ಷ ಭಾಷೆಯೊಂದರಿಂದ ಈ ಭಾಷೆ ಹುಟ್ಟಿಕೊಂಡಿತು ಎನ್ನಲಾಗಿದೆ. ಪಾಕಿಸ್ತಾನಿ ವಿದ್ವಾಂಸರೂ ಈ ಅಭಿಪ್ರಾಯವನ್ನು ಒಪ್ಪಿದ್ದಾರೆ. ಡಾ. ಶೌಕತ್, ಸಬ್ಜ ಬಾರಿಯವರೂ 'ಉರ್ದು ಜಬಾನ್ ಕಾ ಇರ್ತಕಾ' (ಕಿತಾಬ್ ಘರ್, ಢಾಕಾ) ಎಂಬ ಕೃತಿಯಲ್ಲಿ (ಶಕ ೧೮೭೮) ಇದನ್ನು ಒಪ್ಪಿಕೊಂಡು ಬರೆದರೆ, ಪಾಕಿಸ್ತಾನದ ಅಧಿಕೃತ ಜ್ಞಾನಕೋಶದಲ್ಲಿಯೂ ಈ ಅಭಿಪ್ರಾಯವೇ ದಾಖಲಾಗಿದೆ.

ವಿಜಾಪುರದ ಸ್ಥಿತಿ :

ದ್ವಿತೀಯ ಅಲಿ ಆದಿಲಶಾಹಿಯು ಹಿಜರಿ ೧೦೮೩(ಶಕ ೧೫೯೪)ರಲ್ಲಿ ನಿಧನ ಹೊಂದಿದನು. ಅವನ ನಿಧನದೊಂದಿಗೆ ವಿಜಾಪುರದ ವರ್ಚಸ್ಸು ಮತ್ತು ವೈಭವ ಎರಡೂ ನಾಮಾವಶೇಷಗೊಂಡವು. ಅವನ ನಂತರ ಅವನ ಮಗ ಕೇವಲ ನಾಲ್ಕು ವರ್ಷದ ಬಾಲಕ ಸಿಕಂದರನಿಗೆ ಪಟ್ಟಾಭಿಷೇಕ ಮಾಡಲಾಯಿತು. ರಾಜ್ಯದ ಸಕಲ ಅಧಿಕಾರವು ಅನನುಭವಿಗಳೂ, ಸ್ವಾರ್ಥಿಗಳೂ ಆದ ಮಂತ್ರಿಗಳ ಕೈವಶವಾಯಿತು. ಅವರುಗಳಲ್ಲಿಯೇ ಪರಸ್ಪರ ರೂಪಗೊಂಡ ವೈಮನಸ್ಯ ಮತ್ತು ಮತ್ಸರಗಳಿಂದ ಈ ರಾಜ್ಯ ಅವಸಾನವಾಯಿತು.

ಬಹಮನಿ ಸಂಸ್ಥಾನದ ಪ್ರಭಾವೀ ಮಂತ್ರಿಯೂ ಇರಾನ್ ವಂಶಸ್ಥ ಸರದಾರನೂ ಆದ ಯೂಸುಫ್ ಆದಿಲಖಾನನು ಹಿಜರಿ ೮೯೫(ಶಕ ೧೪೧೨)ರಲ್ಲಿ ವಿಜಾಪುರದಲ್ಲಿ ಆದಿಲಶಾಹಿ ರಾಜ್ಯವನ್ನು ಸ್ಥಾಪಿಸಿದನು. ಸಿಕಂದರನು ಆ ವಂಶದ ಎಂಟನೆಯ ದೊರೆ. ಅವನ ಪೂರ್ವಜರಾದ ಮೊದಲನೆಯ ಇಬ್ರಾಹಿಂ, ಮೊದಲನೆ ಆದಿಲಶಾಹಿ, ಅವನ ಮೊಮ್ಮಗ ಎರಡನೆಯ ಇಬ್ರಾಹಿಂ ಆದಿಲಶಾಹಿ ಮತ್ತು ಅವನ ಮಗ ಮಹಮದ್ ಇವರುಗಳೆಲ್ಲ ವಿಶೇಷವಾಗಿ ಪರಾಕ್ರಮಿಗಳೂ, ಕರ್ತೃತ್ವಶಾಲಿಗಳೂ ಹಾಗೂ ಕೀರ್ತಿಶಾಲಿಗಳೂ ಆಗಿದ್ದವರು. ಶಿವಾಜಿ ಮಹಾರಾಜನ ಮರಣಾನಂತರ ಔರಂಗಜೇಬನು ಈ ರಾಜ್ಯವನ್ನು ಹಿಜರಿ ೧೦೯೭ (ಶಕ ೧೬೦೮)ರಲ್ಲಿ ಆಕ್ರಮಿಸಿಕೊಂಡನು.

ವಿಲಾಸಿ ಬದುಕು, ಸ್ತ್ರೀ ಲೋಲುಪತೆ ಹಾಗೂ ಅಸಂಯಮ ನಡವಳಿಕೆ ಇವುಗಳಿಂದಾಗಿ ಆದಿಲಶಾಹಿಯು ತೀವ್ರವಾದ ಬೇನೆಗೆ ಈಡಾದನು. ಹಕೀಮರು, ವೈದ್ಯರು ಎಷ್ಟೇ ಔಷಧೋಪಚಾರ ಮಾಡಿದರಾದರೂ ಆತನ ರೋಗವು ವಾಸಿಯಾಗಲಿಲ್ಲ. ಇದರಿಂದ ತೀರಾ ನಿರಾಶೆಗೊಳಗಾದ ಆತ ಒಂದು ದಿನ ರಾಜ್ಯದ ಮಹಾಮಂತ್ರಿ ಅರಸ್ತೂ-ಏ-ದೌರಾ ಅಬ್ದುಲ್ ಮುಹಮದ್ ಅವರನ್ನು ಕರೆದು ಹೀಗೆ ಹೇಳಿದನು: "ನಾನು ಬಹಳ ದಿನ ಬದುಕಿರಲಾರೆ. ರಾಜ್ಯದ ವ್ಯವಸ್ಥೆಯಂತೂ ತೀರಾ ಜಟಿಲವಾಗಿದೆ. ಒಂದು ಕಡೆ ಮೊಗಲ್ ದೊರೆಯು ಕಾದು ನಿಂತಿದ್ದರೆ, ಮತ್ತೊಂದು ಬದಿಯಲ್ಲಿ ಶಿವಾಜಿ ಧಾಳಿಗೆ ಸಿದ್ಧನಾಗಿದ್ದಾನೆ. ನನ್ನ ಮರಣಾನಂತರ ಯಾವ ದುಃಸ್ಥಿತಿ ಬಂದೊದಗುವುದೊ ತಿಳಿಯದು! ಆ ಕಾರಣ ರಾಜಪುತ್ರನನ್ನು ಸಿಂಹಾಸನದ ಮೇಲೆ ಕೂರಿಸಿ, ನೀನೇ ಸಕಲ ರಾಜ್ಯಾಡಳಿತವನ್ನು ವಹಿಸಿಕೊಳ್ಳುವುದು ಸೂಕ್ತ ಎಂಬುದು ನನ್ನ ಭಾವನೆ. ಈ ರೀತಿಯ ವ್ಯವಸ್ಥೆಯಾದಲ್ಲಿ ಯಾರೂ ನಿನ್ನನ್ನು ವಿರೋಧಿಸುವ ಸಾಹಸ ಮಾಡಲಾರರು. ಇದರಿಂದ ರಾಜ್ಯಕ್ಕೆ ಸುರಕ್ಷಿತತೆಯು ಸಾಧ್ಯವಾಗುವುದಲ್ಲದೆ, ನನಗೂ ಸುಖ-ಸಮಾಧಾನಕರ ಸಾವು ಬರುವುದು".

ಅಬ್ದುಲ್ ಮುಹಮದ್ ಹನ್ನೆರಡು ವರುಷಗಳಿಂದ ರಾಜ್ಯದ ಸಕಲ ಆಗುಹೋಗುಗಳಲ್ಲಿ ಬಹಳ ನಿಷ್ಠೆಯಿಂದಲೇ ಪಾತ್ರವಹಿಸಿದವನಾಗಿದ್ದನು. ಅವನ ಕರ್ತೃತ್ವ ಮತ್ತು ಸ್ವಾಮಿ ನಿಷ್ಠೆಯ ಬಗ್ಗೆಯಂತೂ ಯಾರ ಮನಸ್ಸಿನಲ್ಲಿಯೂ ಸಂಶಯವಿರಲಿಲ್ಲ. ಅಲಿಯ ರಾಜ್ಯದ ಸ್ಥಿರತೆ ಮತ್ತು ಸಂರಕ್ಷಣೆಯು ಅನುಭವಿಯೂ, ರಾಜಕಾರಣ ಕುಶಲನೂ ಮತ್ತು ದಕ್ಷ ಆಡಳಿತಗಾರನೂ ಆಗಿದ್ದ ಅಬ್ದುಲ್ ಮುಹಮದ್‌ನಿಂದ ಮಾತ್ರ ಸಾಧ್ಯವಾಗುವುದಾಗಿತ್ತು. ಹಾಗಾಗಿಯೇ ರಾಜನಿಗೆ ಇತರ ಎಲ್ಲರಿಗಿಂತಲೂ ಅವನಲ್ಲಿಯೇ ಹೆಚ್ಚು ವಿಶ್ವಾಸ. ಅಬ್ದುಲ್ ಮುಹಮದ್ ಅತಿಶಯವಾದ ದೂರದೃಷ್ಟಿಯುಳ್ಳವನಾಗಿದ್ದನು. ಈಗಿರುವ ರಾಜ್ಯದ ಪರಿಸ್ಥಿತಿಯು ಮತ್ತು ಅಧಿಕಾರಿಗಳ ಸ್ವಭಾವ ತೀರಾ ದುಃಸ್ಥಿತಿಯಲ್ಲಿದ್ದು, ರಾಜನ ಮರಣಾನಂತರವಂತೂ ಅದು ಇನ್ನೂ

ಉಲ್ಬಣಿಸುವುದು ಎಂಬುದನ್ನು ಆತನ ಅನುಭವ ದೃಷ್ಟಿಗೆ ಹೊಳೆಯದೆ ಇರಲಿಲ್ಲ. ಅದರಿಂದಾಗಿ ಅವನು ಈ ಜವಾಬ್ದಾರಿಯನ್ನು ಹೊರಲು ನಿರಾಕರಿಸಿದನು. ರಾಜ್ಯದ ಹಿತಚಿಂತಕರು ಮತ್ತು ಮಿತ್ರರೆಲ್ಲರೂ ಕೂಡಿ ಅಬ್ದುಲ್ ಮುಹಮದ್‌ನಿಗೆ ತಂತಮ್ಮ ರೀತಿಯಿಂದ ಒಪ್ಪಿಸುವುದಕ್ಕೆ ಬಹಳೇ ಪ್ರಯತ್ನ ಮಾಡಿದರು. ಆದರೆ ಅಬ್ದುಲ್ ಮುಹಮದ್ ಮಾತ್ರ ಇದಕ್ಕೆ ಸುತಾರಾಂ ಸಿದ್ಧನಾಗಲಿಲ್ಲ. ಬದಲಾಗಿ ಅವನು ಈ ಪರ್ಯಾಯವೊಂದನ್ನು ಮುಂದಿಟ್ಟನು: "ಖವಾಸಖಾನನು ರಾಜಪುತ್ರನನ್ನು ಸಿಂಹಾಸನದ ಮೇಲೆ ಕೂರಿಸಿ ರಾಜಧಾನಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ವ್ಯವಸ್ಥೆಯನ್ನು ನೋಡಿಕೊಳ್ಳಬೇಕು. ನನಗೆ ಈಶಾನ್ಯ ಭಾಗದ ಶಾಹ್‌ದುರ್ಗ (ನಳದುರ್ಗ, ಉಸ್ಮಾನಾಬಾದ್ ಜಿಲ್ಲೆ. ಮಹಾರಾಷ್ಟ್ರ) ಮತ್ತು ಗುಲಬರ್ಗಾ ಪ್ರದೇಶವನ್ನು ವಹಿಸಿಕೊಟ್ಟಲ್ಲಿ. ಮೊಗಲರನ್ನು ತಡೆದು ನಿಲ್ಲಿಸಲು ನನಗೆ ಸಾಧ್ಯವಾಗುತ್ತದೆ. ಹಾಗೆಯೇ ಅಬ್ದುಲ್ ಕರೀಮ್ ಬಹಲೋಲಖಾನರಿಗೆ ಪಶ್ಚಿಮ ಭಾಗದ ಮೀರಜ್-ಪನ್ಹಾಳ ಘಾಟಿನ ಆಡಳಿತವನ್ನು ವಹಿಸಿದರೆ, ಆತ ಶಿವಾಜಿಯನ್ನು ಬಂದೋಬಸ್ತ ಮಾಡಬಲ್ಲನು. ಮುಝಫರ್ ಖಾನನನ್ನು ದಕ್ಷಿಣ ಭಾಗದ ಉಸ್ತುವಾರಿಗೆ ನೇಮಿಸಿದಲ್ಲಿ ಬಿದನೂರು ಮತ್ತು ಇತರೆ ರಾಜರ ಮೇಲೆ ಗಮನ ವಹಿಸಿ ನಮ್ಮ ರಾಜ್ಯದ ವ್ಯವಸ್ಥೆಯನ್ನು ಪೂರ್ಣವಾಗಿ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ. ಉಳಿದವರೆಲ್ಲರೂ ಖವಾಸಖಾನರ ಆಜ್ಞೆಯನ್ನು ತಪ್ಪದೆ ಪಾಲಿಸಿಕೊಂಡು ಹೋಗುವುದು." ಅಬ್ದುಲ್ ಮುಹಮದ್‌ನ ಈ ಸೂಚನೆಯು ಒಂದು ರೀತಿಯಲ್ಲಿ ವಿಜಾಪುರ ರಾಜ್ಯದ ಅಸ್ತಂಗತಕ್ಕೆ ನಾಂದಿಯೇ ಆಗಿತ್ತು ಎಂಬುದನ್ನು ಮತ್ತೆ ಹೇಳಬೇಕಾಗಿಲ್ಲ.

ಖವಾಸಖಾನನಂತೂ ಈ ಸೂಚನೆಯನ್ನು ತೀರಾ ಉತ್ಸಾಹದಿಂದ ಒಪ್ಪಿಕೊಂಡನು. ಎರಡೂ ಪಕ್ಷಗಳವರು ಪ್ರತಿಜ್ಞೆ ಮಾಡಿ, ರಾಜನು ನಿಧನನಾದ ಮರುದಿನದಿಂದಲೇ ಈಗ ಒಪ್ಪಿಕೊಂಡ ವ್ಯವಸ್ಥೆಯನ್ನು ಮಾಡುವುದೆಂದು ನಿರ್ಣಯಿಸಿದರು. ಇತ್ತ ರಾಜನ ರೋಗವು ವೃದ್ಧಿಗೊಂಡಂತೆಯೇ ಅತ್ತ ಸರದಾರರುಗಳ ಗುಪ್ತ ಚಟುವಟಿಕೆಗಳೂ ಬೆಳೆಯುತ್ತಾ ಹೋದವು. ಕೇವಲ ಅಬ್ದುಲ್ ಮಹಮುದ್‌ನು ಮಾತ್ರ ತಾನು ಕೊಟ್ಟ ವಚನದಂತೆ ನಡೆದುಕೊಳ್ಳುವ ಸ್ಥಿತಿಯಲ್ಲಿದ್ದನು. ತನ್ನ ರೋಗದಿಂದ ಮುಕ್ತನಾಗಲಾರದೆ ದ್ವಿತೀಯ ಅಲಿಯು ಹಿಜರಿ ೧೩-೮-೧೦೮೩(ಮಾರ್ಗಶಿರ ಶುದ್ಧ ೧೫,ಶಕ ೧೫೯೪) ರಂದು ನಿಧನನಾದನು. ರಾಜಕುಮಾರ ಸಿಕಂದರನನ್ನು ಸಿಂಹಾಸನದ ಮೇಲೆ ಕೂರಿಸಿದ ಖವಾಸಖಾನನು ರಾಜ್ಯದ ಸಮಸ್ತ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡನು. ಮುಂದೆ ಅವನ ವರ್ತನೆ ವ್ಯತಿರಿಕ್ತವಾಗಿತ್ತು. ರಾಜಪುತ್ರನು ತುಂಬ ಚಿಕ್ಕವನಾಗಿರುವುದರಿಂದ ಕೋಟೆ(ಗಡ) ಮತ್ತು ದುರ್ಗ(ಕಿಲ್ಲೆ)ಗಳನ್ನು ವಹಿಸಿಕೊಡಲು ಸಾಧ್ಯವಿಲ್ಲವೆಂದು ಅಬ್ದುಲ್ ಮುಹಮ್ಮದನಿಗೆ ಹೇಳಿದ ಖವಾಸಖಾನ್.

ಹಾಗಾಗಿ ಆತ ವಿಜಾಪುರ ರಾಜ್ಯದ ಬಗ್ಗೆ ನಿರಾಸಕ್ತನಾದನು. ಅವನ ಈ ವೈರಾಗ್ಯ ಭಾವವು ವಿಜಾಪುರದ ದೌರ್ಭಾಗ್ಯದ ಸಂಕೇತವಾಯಿತು.

ಸಿಂಹಾಸನವನ್ನು ಏರಿರುವ ರಾಜ ಚಿಕ್ಕವನಾಗಿದ್ದುದು, ಸರದಾರರುಗಳ ಸ್ವಾರ್ಥಪ್ರವೃತ್ತಿಯು ಹೆಚ್ಚಿದುದರಿಂದಾಗಿ ರಾಜ್ಯದ ಸಂರಕ್ಷಕರಲ್ಲಿ ಸಂದೇಹ ಪ್ರವೃತ್ತಿಯು ಬಲವಾಯಿತು. ರಾಜ್ಯದ ವ್ಯವಸ್ಥೆಯಂತೂ ಭಗ್ನಗೊಂಡು ವಿನಾಶದತ್ತ ಸರಿಯುತ್ತಿತ್ತು. ಅಲ್ಲಿಯವರೆಗೆ ಸುಮ್ಮನಿದ್ದ ಅಕ್ಕಪಕ್ಕದ ರಾಜರುಗಳು ರಾಜ್ಯದಲ್ಲಿ ಕ್ಷೋಭೆಯುಂಟು ಮಾಡಲು ಸಿದ್ಧರಾದರು. ಎಲ್ಲೆಡೆ ಅಶಾಂತಿ, ವಿದ್ರೋಹ ತಲೆ ಎತ್ತಿತ್ತು. ಆದಿಲಶಾಹಿ ರಾಜ್ಯದ ಇಂಥ ಸಂದಿಗ್ಧ ಪರಿಸ್ಥಿತಿಯನ್ನು ಅರಿತುಕೊಂಡ ಶಿವಾಜಿಯು ಈ ಸುವರ್ಣಾವಕಾಶದ ಲಾಭ ಪಡೆಯುವುದೆಂದು ನಿರ್ಧರಿಸಿದರು. ಈ ಮೊದಲೇ ಆತನು ಆದಿಲಶಾಹಿಯ ಕೊನೆಗಾಲದಲ್ಲಿ ಆದಿಲಶಾಹಿ ಮತ್ತು ಮೊಗಲರ ಅನೇಕ ಕೋಟೆ ಕೊತ್ತಳಗಳನ್ನೆಲ್ಲ ವಶಪಡಿಸಿಕೊಂಡಿದ್ದನು. ಆದಿಲಶಾಹಿ ರಾಜ್ಯದ ಇಂದಿನ ಪರಿಸ್ಥಿತಿಯಲ್ಲಿ ಅದಕ್ಕೆ ನಿಜವಾಗಿ ಯಾರೂ ಆಧಾರ ಸ್ಥಂಭವಾಗಿ ನಿಂತಿಲ್ಲ. ಹಾಗಾಗಿ ಯಾರೂ ಜವಾಬ್ದಾರಿ ಹೊತ್ತು ಶತ್ರುವನ್ನು ಎದುರಿಸುವುದಕ್ಕೆ ಮುಂದೆ ಬರಲಾರರು ಎಂಬುದನ್ನರಿತ ಶಿವಾಜಿಯು ಸುಲಭವಾಗಿ ಪನ್ಹಾಳ ಕೋಟೆಯನ್ನು ಆಕ್ರಮಿಸಿದನು. ಅನಂತರ ಆದಿಲಶಾಹಿ ರಾಜ್ಯದ ಪ್ರದೇಶಗಳನ್ನು ಗೆದ್ದುಕೊಳ್ಳಲು ಅವನು ಕೊಂಕಣ ಭಾಗ ಮತ್ತು ದಕ್ಷಿಣದಲ್ಲಿ ಬಹಳ ದೂರದವರೆಗೂ ತನ್ನ ಸೈನ್ಯವನ್ನು ಕಳುಹಿಸಿದ್ದನು.

ಕಥಾ ಸೂತ್ರ :

ಅಲಿ ಆದಿಲಶಾಹಿಯು ನಿಧನ ಹೊಂದಿದ ತಕ್ಷಣವೇ ಶಿವಾಜಿಯು ವಿಜಾಪುರ ಸಾಮ್ರಾಜ್ಯದ ಅಧಿಕಾರವನ್ನು ನಾಶ ಮಾಡುವ ನಿಶ್ಚಯ ಮಾಡಿದ್ದ ಎಂಬುದು ಸಹಜವಾಗಿ ಮನದಟ್ಟಾಗುವ ಸಂಗತಿ. ವಿಜಾಪುರದ ದರಬಾರಿನಲ್ಲಿದ್ದ ತನ್ನ ರಾಯಭಾರಿಯಾಗಿದ್ದ ಬಾಬಾಜಿ ಪುಂಡೆನಾಈಕ್ ಎಂಬಾತನನ್ನು ಶಿವಾಜಿಯು ಶೀಘ್ರವಾಗಿ ಬರುವಂತೆ ಹೇಳಿ ಕಳುಹಿಸಿದ್ದು ಇದಕ್ಕೆ ಸಾಕ್ಷಿ. ಈ ಘಟನೆಯನ್ನು 'ಜಧೇ ಶಕಾವಲಿ' ಮತ್ತು ಜಯರಾಮ ಕವಿಯು ಬರೆದ 'ಪರ್ಣಾಲಪರ್ವತಗ್ರಹಣಾಖ್ಯಾನ' ಎಂಬ ಎರಡೂ ಕೃತಿಗಳು ಉಲ್ಲೇಖಿಸಿವೆ.

ಈ ಪ್ರಕ್ರಿಯೆಯಿಂದಾಗಿ ವಿಜಾಪುರದಾದ್ಯಂತ ಗಂಭೀರವಾಗಿ ಕೋಲಾಹಲವು ಉಂಟಾಯಿತು. ನುಸ್ರತಿಯು "ತಾರೀಖೇ-ಅಸಿಕಂದರಿ" ಕೃತಿಯಲ್ಲಿ ವಿವರಿಸಿರುವುದು ಹೀಗೆ-

ಬದ-ಅಂದೇಶ ಬದ-ಕೇಶ ಯಾನೆ ಸಿವಾ
ಹುಆ ಶಾದ್ ಅಮಲ ದೇಕ ಶಹಿ ಕಾ ನವಾ।

ಹತೀ ಮುಲ್ಕ ಮೇ ಆಗ್ ಸುಲಗೀ ಹೈ ಸಾಂಚ್
ಕಿ ಸಬ್ ಶಹರ ಬೇ-ಕಲ ಹೈ ಲಗತೆ ಹೀ ಆಂಚ್ ।
ಹುಆ ಫರ್ಜ್ ಇತಾ ಯೂಂ ಕಿ ಯೋ ಆಗ್ ಆಜ್
ಸುಲಗನೇ ನ ದೇನೆ ಕೀ ಕರನಾ ಇಲಾಜ್।

(ಅಧ್ಯಾಯ ೨, ೧೬, ೧೭, ೧೮)

(ವಿಜಾಪುರ ರಾಜ್ಯದ ಹೊಸ ಅವಸ್ಥೆಯನ್ನು ಕಂಡು ಶಿವಾಜಿಗೆ ಬಹಳ ಆನಂದವಾಯಿತು. ಅವನು ವಿಜಾಪುರ ರಾಜ್ಯದ ಎಲ್ಲೆಡೆ ಕಿರುಕುಳ ನೀಡಲಾರಂಭಿಸಿದ್ದಾನೆ. ಹಾಗಾಗಿ ಸಕಲ ಪಟ್ಟಣವು ನಿಷ್ಪ್ರಾಣಗೊಂಡಿದೆ. ಈ ಸ್ಥಿತಿಯನ್ನು ಬದಲಾಯಿಸುವುದೇ ಎಲ್ಲಕ್ಕಿಂತ ಮೊದಲ ಕಾರ್ಯ.)

"ಬಸಾತಿನುಸ್ಸಲಾತೀನ್" (ವಿಜಾಪುರದ ಆದಿಲಶಾಹಿ) ಗ್ರಂಥದಲ್ಲಿ ಖವಾಸಖಾನ್ ಮತ್ತು ಬಹಲೋಲಖಾನರ ನಡುವಣ ವೈಮನಸ್ಯ ಸ್ಪಷ್ಟವಾಗಿ ಉಲ್ಲೇಖಗೊಂಡಿಲ್ಲ. ಆದರೆ ಜಯರಾಮ ಕೃತ. "ಪರ್ಣಾಲಪರ್ವತಗ್ರಹಣಾಖ್ಯಾನ" ಕಾವ್ಯದಲ್ಲಿ ಈ ವೈಮನಸ್ಯದ ಬಗ್ಗೆ ವಿಸ್ತೃತ ವಿವರಣೆಯು ಇದೆ. 'ಬಸಾತಿನುಸ್ಸಲಾತೀನ್' ಕೃತಿಯಲ್ಲಿ ಅಬ್ದುಲ್ ಮುಹಮದ್ ಮತ್ತು ಖವಾಸಖಾನ ಇವರಿಬ್ಬರ ನಡುವೆ ಉಂಟಾದ ಮಾತುಕತೆಯ ವರ್ಣನೆಯ ಹಿನ್ನೆಲೆಯಿಂದಲೂ ಈ ಪರಿಸ್ಥಿತಿಯ ಕಲ್ಪನೆ ಬರುವುದು. ಖವಾಸ್‌ಖಾನನು ಕೇವಲ ವಚನ ಭಂಗವನ್ನಷ್ಟೇ ಅಲ್ಲ ಸ್ವಾಮಿದ್ರೋಹವನ್ನು ಸಹ ಬಗೆದಿದ್ದನು. ಹಾಗಾಗಿ ದೊಡ್ಡ ದೊಡ್ಡ ನೇತಾರರು ಮಾತ್ರವಲ್ಲ. ಸಾಮಾನ್ಯ ಜನತೆಯಲ್ಲಿನ ಜಾಗರೂಕ ವರ್ಗದವರೂ ಅವನಿಗೆ ವಿರೋಧವಾಗಿದ್ದರು. ನುಸ್ರತಿಯು ವರ್ಣಿಸಿರುವಂತೆ, ಒಂದೊಮ್ಮೆ ಖವಾಸಖಾನನು ಮಹಾಸಭೆಯನ್ನು ಕರೆದು ಅದರಲ್ಲಿ ಬಹಲೋಲಖಾನನನ್ನು ಸತ್ಕಾರ ಮಾಡಿದ್ದರೂ ಅದರಿಂದ ಬಹಲೋಲಖಾನನ ಕೋಪವೇನೂ ಶಮನವಾಗುತ್ತಿರಲಿಲ್ಲ. ನುಸ್ರತಿಯು ಈ ಬಗೆಗೆ ಬಹಳ ಸೂಕ್ಷ್ಮವಾಗಿಯೇ ಚಿತ್ರಿಸಿದ್ದಾನೆ ಈ ವಸ್ತುಸ್ಥಿತಿಯ ಸೂಕ್ಷ್ಮ ಗ್ರಹಿಕೆಯಿಂದ ಈ ಕಾವ್ಯವು ಸಮಗ್ರವಾಗಿ ಲಭ್ಯವಾಗಿದ್ದರೆ, ಇನ್ನೂ ಬಗ್ಗೆ ಹೆಚ್ಚು ಬೆಳಕು ಚೆಲ್ಲುವ ಸಾಧ್ಯತೆ ಇತ್ತು. ಈಗ್ಗೆ ಉಪಲಬ್ಧವಾಗಿರುವ ಕಾವ್ಯದ ಸ್ವರೂಪವನ್ನಷ್ಟೆ ಆಧರಿಸಿ ಗಮನಿಸಿದರೂ ವಿಜಾಪುರಕ್ಕೆ ಒದಗಿದ ದುರಾವಸ್ಥೆಯ ಮುಖ್ಯ ಕಾರಣಪುರುಷನೆಂದರೆ ಖವಾಸಖಾನ್ ಎಂಬುದು ಬಹಲೋಲಖಾನನ ವರ್ಣನೆಯಿಂದ ಸ್ಪಷ್ಟವಾಗುತ್ತದೆ. ಜಯರಾಮ ಪಂಡಿತನು ಇದನ್ನು ತನ್ನ ಕಾವ್ಯದಲ್ಲಿ ಸವಿಸ್ತಾರವಾಗಿಯೇ ವರ್ಣಿಸಿದ್ದಾನೆ. ನುಸ್ರತಿಯು ಹೇಳಿವಂತೆ-

ತುಮ್ಹಾರಾ ಜೋ ಶಾಯದ್ ಹೈ ಖಾತಿರ ಶರೀಫ
ತೋ ಕ್ಯಾ ಹೈ ವಈ ಜೋ ಮಿಲ್ಯಾ ಕೋಈ ಹರೀಫ ।

ಈ ಸಾಲುಗಳಿಂದ ತಿಳಿಯುವುದೇನೆಂದರೆ, ಬಹಲೋಲಖಾನನು

ಖವಾಸಖಾನನನ್ನು ಕುರಿತಂತೆ ಆ ಶಿವಾಜಿಯ ಮಿತ್ರನೆಂದು ತುಂಬಿದ ದರಬಾರಿನಲ್ಲಿ ಆರೋಪಿಸಿದ್ದನು. ಖವಾಸ್‌ಖಾನ್ ಮತ್ತು ಬಹಲೋಲಖಾನರ ನಡುವಣ ಸಂಬಂಧ ಆಂತರಿಕವಾಗಿ ಚೆನ್ನಾಗಿರಲಿಲ್ಲ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಜಯರಾಮ ಪಂಡಿತನು ತನ್ನ ಕಾವ್ಯದಲ್ಲಿ ಹೀಗೆ ಹೇಳಿದ್ದಾನೆ– "ಸರದಾರರೆಲ್ಲರೂ ಹೀಗೆ ಹೇಳಿದರು. ಶಿವಾಜಿಯನ್ನು ಯಶಸ್ವಿಯಾಗಿ ಎದುರಿಸಿ ನಿಲ್ಲಬಲ್ಲಂಥ ಒಬ್ಬನೇ ಒಬ್ಬ ಪರಾಕ್ರಮಿ ಸರದಾರನೆಂದರೆ, ಬಹಲೋಲಖಾನ್ ಮಾತ್ರ. ಅವನನ್ನು ಬಿಟ್ಟು ಉಳಿದವರಾರೂ ಶಿವಾಜಿಯ ಎದುರು ಧೈರ್ಯವಾಗಿ ನಿಲ್ಲಲಾರರು. ಹಾಗಾಗಿ ಈ ಕಾರ್ಯಕ್ಕೆ ಬಹಲೋಲಖಾನನನ್ನು ನೇಮಿಸಬೇಕೆಂದು ಅವರೆಲ್ಲರು ಆಗ್ರಹಿಸಿದರು. ಬಹಲೋಲಖಾನನು ಈ ಮಾತನ್ನು ಒಪ್ಪಿಕೊಂಡನು."

ಸಭಾಸದನು ಬರೆದಿರುವಂತೆ ಬಹಲೋಲಖಾನನು ಸುಮಾರು ಹನ್ನೆರಡು ಸಾವಿರದಷ್ಟು ಸಂಖ್ಯೆಯ ಸೈನ್ಯವನ್ನು ತೆಗೆದುಕೊಂಡು ಶಿವಾಜಿಯ ಪಾರುಪತ್ಯ ಮಾಡಲು ಹೊರಟನು. ಪ್ರಯಾಣ ಮಾಡುತ್ತಾ ಮಾಡುತ್ತಾ ಅವನ ಸೇನೆ ಉಮ್ರಾಣಿಗೆ ಬಂದು ಸೇರಿತು. ಉಮ್ರಾಣಿ ವಿಜಾಪುರದಿಂದ ಪಶ್ಚಿಮಕ್ಕೆ ಸುಮಾರು ಮೂವತ್ತು ಮೈಲಿಗಳ ದೂರದಲ್ಲಿದೆ. ಆದರೆ ಅಷ್ಟರಲ್ಲಾಗಲೇ ಶಿವಾಜಿಯ ಸೇನೆ ಬಂದು ಅದನ್ನು ಆಕ್ರಮಿಸಿತ್ತು. ಶಿವಾಜಿ ಇಷ್ಟೊಂದು ವೇಗದಲ್ಲಿ ಎದುರು ಬೀಳುವ ಸಿದ್ಧತೆ ನಡೆಸಿರುತ್ತಾನೆಂದು ಬಹಲೋಲಖಾನನು ಊಹಿಸಿರಲಿಲ್ಲ. 'ಬಸಾತಿನುಸ್ಸಲಾತೀನ್' ಕೃತಿಯಲ್ಲಿ ವರ್ಣಿಸಿರುವಂತೆ ಶಿವಾಜಿಯು ವಿಜಾಪುರದ ಸೇನೆಯ ಚಲನವಲನವನ್ನು ಗಮನಿಸಿದ ಆತ ತಕ್ಷಣ ತನ್ನ ದಳದ ಇಬ್ಬರು ಸೇನಾಪತಿಗಳನ್ನು ಸ್ವತಃ ಸೂಚನೆಕೊಟ್ಟು ಹದಿನೈದು ಸಾವಿರ ಸಂಖ್ಯೆಯ ಸೇನೆಯೊಂದಿಗೆ ಕಳುಹಿಸಿದನು. ಇತ್ತ ತಾನು ಇತ್ತೀಚೆಗೆ ಹಿಡಿದಿದ್ದ ಪನ್ಹಾಳ ಕೋಟೆಯಲ್ಲಿ ಮುಕ್ಕಾಮು ಹೂಡಿದನು. ನುಸ್ರತಿಯೂ ಈ ಸಂಗತಿಯನ್ನು ಉಲ್ಲೇಖಿಸಿದ್ದಾನೆ. ಬಹಲೋಲಖಾನನ ಸೈನ್ಯ ಕೆರೆಯ ಒಂದು ಬದಿಯಲ್ಲಿ ವಿಶ್ರಮಿಸಿಕೊಳ್ಳುತ್ತಿರುವಾಗ ಮರಾಠಾ ಸೈನ್ಯವು ಒಮ್ಮೆಗೆ ಸುತ್ತುವರೆದು ಘೇರಾಯಿಸಿ ಯುದ್ಧ ನಡೆಯಿತು. ಆಗ್ಗೆ ವಿಜಾಪುರದ ಸೈನಿಕರಿಗೆ ಕುಡಿಯುವುದಕ್ಕೆ ನೀರು ಸಹ ಸಿಗಲಿಲ್ಲವೆಂದು ನುಸ್ರತಿ ವಿಸ್ತೃತವಾಗಿ ವರ್ಣಿಸಿದ್ದಾನೆ. ಸಭಾಸದನು ಬರೆದ ಶಿವಾಜಿಯ ಚರಿತ್ರೆ (ಬಖರ್)ಯಲ್ಲಿ ಮತ್ತು ಜಯರಾಮ ಪಂಡಿತನ 'ಪರ್ಣಾಲಾಖ್ಯಾನ'ದಲ್ಲಿಯು ಈ ಘಟನೆಯು ಮೇಲಿನಂತೆಯೇ ವರ್ಣಿಸಲ್ಪಟ್ಟಿದೆ.

ನುಸ್ರತಿಯು ತನ್ನ ಕಾವ್ಯದಲ್ಲಿ "ಬರ್ಕ್" (ಸಿಡಿಲು) ಎಂಬ ಶಬ್ದವನ್ನು ಶ್ಲೇಷಾತ್ಮಕವಾಗಿ ವರ್ಣಿಸುತ್ತಾ (ಅಧ್ಯಾಯ ೪ :೨೯ ರಿಂದ ೩೨) 'ಬರ್ಕಿ' ಎಂಬ ಹೆಸರುಳ್ಳ ಸೇನಾಪತಿಯೊಬ್ಬ ವಧಿಸಲ್ಪಟ್ಟಿದ್ದನ್ನು ಸೂಚಿಸುತ್ತಾನೆ. ಪರ್ಣಾಲಾಖ್ಯಾನ ಕಾವ್ಯದಲ್ಲಿ ಜಯರಾಮ ಪಂಡಿತನು "ಮಹಮದ್ ಬರ್ಕಿ" ಎಂಬ ಹೆಸರನ್ನು

ಸ್ಪಷ್ಟವಾಗಿ ಉಲ್ಲೇಖ ಮಾಡಿದ್ದಾನೆ. ಅಂತೆಯೇ "ಬಸಾತಿನುಸ್ಸಲಾತೀನ್" ಕೃತಿಯಲ್ಲಿಯೂ (ಈ ಕೃತಿಯ ಇದೇ ಇತಿಹಾಸ ಕಾಲದ "ತಾರೀಖೇ ಅಸಿಕಂದರಿ"ಯನ್ನು ಆಧರಿಸಿದೆ.) ಜುಬೇರಿಯು ಮಹಮದ್ ಶಕೀರ್ ಎಂಬ ಹೆಸರಿನ ಸರದಾರನು ಕೊಲ್ಲಲ್ಪಟ್ಟನೆಂದು ಉಲ್ಲೇಖಿಸಿರುವನು. ನುಸ್ರತಿಗೂ ಈ ವ್ಯಕ್ತಿಯನ್ನೇ ವರ್ಣಿಸುವ ಉದ್ದೇಶವಿತ್ತೆಂದು ಕಾಣುತ್ತದೆ.

ಮರಾಠಾ ಸೈನಿಕರು ಬಹಲೋಲಖಾನನ ಒಂದು ಆನೆಯನ್ನು ವಶಪಡಿಸಿಕೊಂಡು ಅದನ್ನು ಶಿವಾಜಿಯ ಬಳಿ ಕೊಂಡೊಯ್ದರು ಎಂದು ಜಯರಾಮ ಪಂಡಿತನು ಬರೆದಿದ್ದಾನೆ. ವಿಜಾಪುರದವರ ಒಂದು ಆನೆಯನ್ನು ಮರಾಠರು ತಮ್ಮ ವಶಕ್ಕೆ ತೆಗೆದುಕೊಂಡಿದ್ದರೆಂಬ ಉಲ್ಲೇಖವು "ಜೇಥೆ ಶಕಾವಲೀ"ಯಲ್ಲಿಯೂ ಬಂದಿದೆ. ಆದರೆ ನುಸ್ರತಿ ಮಾತ್ರ ಇಂಥ ಯಾವುದೇ ಉಲ್ಲೇಖವನ್ನು ಮಾಡಿಲ್ಲ.

ಅಂತಿಮವಾಗಿ ಈ ಯುದ್ಧದ ಕೊನೆ ಎಲ್ಲಿ ಮತ್ತು ಹೇಗಾಯಿತು? ಸಭಾಸದನ ಶಿವಾಜಿಯ ಚರಿತ್ರೆ (ಬಖರ್)ಯಲ್ಲಿ ಹೀಗೆ ಬಂದಿದೆ. ಬಹಲೋಲಖಾನನು ಪ್ರತಾಪರಾವನೊಂದಿಗೆ ಒಪ್ಪಂದ ಮಾಡಿಕೊಂಡು. ತನ್ನ ಸೈನ್ಯದೊಡನೆ ತಿಕೋಟಾದೆಡೆಗೆ ವಾಪಸ್ಸು ನಡೆದನು. "ಪರ್ಣಶಾಲಾಖ್ಯಾನ"ದಲ್ಲಿ ಜಯರಾಮ ಪಂಡಿತನು ಹೇಳಿರುವಂತೆ ಬಹಲೋಲಖಾನನು ಹೋದದ್ದು ಪ್ರತಾಪರಾವ್‌ನ ನಿರ್ದೇಶನಾನುಸಾರ. (ಪರಿಶಿಷ್ಟ ಅಧ್ಯಾಯ ೫. ೧೦೫). ಈ ಎರಡೂ ಸಮಕಾಲೀನ ಗ್ರಂಥಗಳಲ್ಲಿ ಸಾಮ್ಯತೆಯು ಕಂಡುಬರುತ್ತದೆ. ಈ ಸಂಬಂಧದಲ್ಲಿ ಹೀಗೂ ಹೇಳಲಾಗಿದೆ, ಬಹಲೋಲಖಾನನನ್ನು ಇಷ್ಟೊಂದು ಸುಲಭವಾಗಿ ಬಿಟ್ಟು ಬಂದುದಕ್ಕಾಗಿ ಶಿವಾಜಿಯು ತುಂಬಾ ಕೋಪಗೊಂಡು ಪ್ರತಾಪರಾವ್‌ನನ್ನು ನಿಂದಿಸಿದನು. "ಬಸಾತಿನುಸ್ಸಲಾತೀನ"ನಲ್ಲಿಯೂ ಶಿವಾಜಿಯ ಕೋಪದ ವರ್ಣನೆ ಬಂದಿದೆ.

ಬಹಲೋಲಖಾನನ ವರ್ಣನೆಯು ನುಸ್ರತಿಯಲ್ಲಿ ಬಂದಿರುವುದು ಹೀಗೆ, ಸ್ವತಃ ಯುದ್ಧ ಮಾಡುವುದಕ್ಕಿಂತ ಬೇರೆಯವರನ್ನು ಯುದ್ಧಕ್ಕೆ ಪ್ರೇರೇಪಿಸುವುದು ಮಹತ್ವದ ಕೆಲಸ. ಇದರ ಅರ್ಥವಿಷ್ಟೆ, ಬಹಲೋಲಖಾನನಿಗೆ ತನ್ನ ಸೈನ್ಯವನ್ನು ಹುರಿದುಂಬಿಸುವ ಕಲೆಯು ಚೆನ್ನಾಗಿತ್ತು. ಮುಸಲ್ಮಾನ ಸೇನೆ ಕಡಿಮೆ ಸಂಖ್ಯೆಯಲ್ಲಿ ಇದ್ದರೆ ಶತ್ರುಸೇನೆಯು ಮರದ ಎಲೆಗಳಿಗಿಂತಲೂ ಅಧಿಕವಾಗಿತ್ತು ಎಂದು ನುಸ್ರತಿಯು ಹೇಳಿದ್ದಾನೆ. ಎಂತಲೇ ಇಂಥ ಕಠಿಣ ಸಂದರ್ಭದಲ್ಲಿ ಒಪ್ಪಂದ ಮಾಡಿಕೊಳ್ಳುವುದೇ ತನಗೆ ಹೆಚ್ಚು ಹಿತವೆಂದು ಬಹಲೋಲಖಾನನು ಭಾವಿಸಿದ್ದನು.

ಈ ಯುದ್ಧವು ಜರುಗಿದ್ದು ಚೈತ್ರ ಶಕ ೧೫೯೫ರಂದು. ಶಿವಾಜಿಯ ಕ್ರೋಧ, ನಿಂದನೆಯಿಂದ ನೊಂದು ಕುಪಿತನಾಗಿದ್ದ ಪ್ರತಾಪರಾವನು ನೇಸರಿ ಎಂಬ ಸಣ್ಣ ಊರಿನ ಬಳಿ ಬಹಲೋಲಖಾನನನ್ನು ಎದುರಿಸಿದನು. ಮಾಘ ಶುದ್ಧ ೧೪ನೆಯ

ಶಿವರಾತ್ರಿ ಶಕ ೧೫೯೫ರಂದು ತನ್ನ ಪ್ರಾಣವನ್ನೇ ಪಣವಾಗಿಟ್ಟು ಹೋರಾಡುತ್ತಲೇ ಪ್ರತಾಪರಾವನು ಮಡಿದನು.

ಆದಿಲಶಾಹಿಯ ಅಂತ್ಯ :

ಸಿಕಂದರ್ ಆದಿಲಶಾಹಿಯು ವಿಜಾಪುರದ ಎಂಟನೆಯ ರಾಜ. ಅವನು ತನ್ನ ನಾಲ್ಕನೆಯ ವರುಷದಲ್ಲಿಯೇ ಸಿಂಹಾಸನಕ್ಕೆ ಬಂದಿದ್ದನು. ಅಲಿಯ ಮರಣಾನಂತರ ಖವಾಸ್‌ಖಾನ್ ಎಂಬ ಅಧಿಕಾರಿಯು ರಾಜ್ಯದ ಸಮಸ್ತ ಅಧಿಕಾರವನ್ನು ತನ್ನ ಕೈಗೆ ತೆಗೆದುಕೊಂಡನು. ಪರಿಣಾಮವಾಗಿ ಆದಿಲಶಾಹಿಯ ವಿಶ್ವಾಸಾರ್ಹನೂ, ತುಂಬ ಅನುಭವಿಯೂ ಆಗಿದ್ದ ಪ್ರಧಾನ ವ್ಯಕ್ತಿ ಅಬ್ದುಲ್ ಮುಹಮದ್‌ನು ನಿರಾಶೆ ಮತ್ತು ಅಪಮಾನದಿಂದ ತನ್ನ ಜಹಗೀರಿಗೆ ಹೊರಟು ಹೋದನು. ಇತ್ತ ಅವನ ಮಗ ಅಬ್ದುಲ್ ರಹೀಮ್ ಮತ್ತು ಬಹಲೋಲಖಾನನ ಮಗ ಅಬ್ದುಲ್ ಕರೀಮ್ ಬಹಲೋಲಖಾನ್-ಇವರಿಬ್ಬರಿಗೂ ಬಹಳ ಕೋಪ ಮತ್ತು ನಿರಾಶೆಯುಂಟಾಗಿತ್ತು. ಖವಾಸಖಾನನು ಅಬಿಸೀನಿಯಾದ ನೀಗ್ರೋ ಮತ್ತು ವಿರೋಧಿ ಪಕ್ಷಕ್ಕೆ ಸೇರಿದವನಾಗಿದ್ದನು. ಆ ಕಾರಣ ಅವನ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಛಲ ಬಹಲೋಲಖಾನನ ಮನಸ್ಸಿನಲ್ಲಿ ಗಟ್ಟಿಯಾಗಿ ಬೇರೂರಿತ್ತು. ಮತ್ತೊಂದೆಡೆ ರಾಜ್ಯದ ಆರ್ಥಿಕ ಪರಿಸ್ಥಿತಿಯು ಗಂಭೀರವಾಗಿದ್ದು, ಖಜಾನೆಯೂ ಬರಿದಾಗಿ ಹೋಗಿತ್ತು. ಇದೇ ಸಮಯದಲ್ಲಿ ತನ್ನ ಪಠಾಣ ಸೈನಿಕರಿಗೆ ಈಗಿಂದೀಗಲೇ ವೇತನ ಪಾವತಿಸಬೇಕೆಂದು ಬಹಲೋಲಖಾನನು ಒತ್ತಾಯಿಸಿದನು. ಇದರಿಂದ ಖವಾಸಖಾನನಿಗೆ ಪೇಚಿಗಿಟ್ಟುಕೊಂಡಿತು. ಕೊನೆಗೆ ಆತ ಔರಂಗಜೇಬನ ದಾಕ್ಷಿಣಾತ್ಯ ಸುಬೇದಾರನಾಗಿದ್ದ ಬಹಾದ್ದೂರ್‌ಖಾನನಲ್ಲಿ ಸಹಾಯ ಯಾಚಿಸಿದನು. ೧೯ನೆಯ ಅಕ್ಟೋಬರ್ ೧೬೭೫ (ಶಕ ೧೫೯೭) ರಂದು ಪಂಢರಪುರದಲ್ಲಿ ಇಬ್ಬರೂ ಒಂದು ಒಪ್ಪಂದಕ್ಕೆ ಬಂದರು. ಬಹಲೋಲಖಾನನಂಥ ವಿಜಾಪುರದ ಪಠಾಣನನ್ನು ಶಿಕ್ಷಿಸಲು ಬಹಾದ್ದೂರ್‌ಖಾನನು ತನಗೆ ಸಹಾಯ ಮಾಡುವುದು ಹಾಗೂ ಶಿವಾಜಿಯನ್ನು ನಿಯಂತ್ರಿಸಲು ತಾನು ಮೊಗಲರಿಗೆ ಸಹಾಯ ಮಾಡುವಂತಹ ವಿಚಾರವೇ ಅವರ ನಡುವಣ ಒಪ್ಪಂದದ ಪ್ರಮುಖ ಅಂಶ.

ತನ್ನ ವಿರೋಧಿಗಳನ್ನು ಅಂತ್ಯಗೊಳಿಸಲು ಖವಾಸಖಾನನು ರೂಪಿಸಿದ ಯೋಜನೆಯೇ ಮುಂದೆ ಅವನ ವಿನಾಶದ ಮುಖ್ಯ ಕಾರಣವೂ ಆಯಿತು. ಬಹಲೋಲಖಾನನು ಒಂದು ಕ್ಷುಲ್ಲಕ ಕಾರಣವನ್ನು ಹಿಡಿದು ನವೆಂಬರ್ ೧೬೭೫ರಂದು ಖವಾಸಖಾನನನ್ನು ಬಂಧಿಸಿ ಬಂಕಾಪುರದ ದುರ್ಗಕ್ಕೆ ತಳ್ಳಿ, ರಾಜ್ಯದ ಸರ್ವ ಅಧಿಕಾರವನ್ನು ತಾನೇ ಹಿಡಿದುಕೊಂಡನು. ಆದರೆ ಖಜಾನೆಯ ದುರ್ದೆಶೆ ಹಾಗೂ ಆಂತರಿಕ ಕಚ್ಚಾಟಗಳ ಸಂಕಟ ಅವನನ್ನು ಬಾಧಿಸತೊಡಗಿದವು. ಅಧಿಕಾರ ಕೈಗೆ

ಬಂದೊಡನೆ ಪಠಾಣಿಗರಿಗೆಲ್ಲ ಉತ್ತಮೋತ್ತಮ ಜಹಗೀರುಗಳನ್ನು ಕೊಟ್ಟನು. ಇದರಿಂದಾಗಿ ದಕ್ಷಿಣದಲ್ಲಿದ್ದ ಅಬಿಸೀನಿಯಾದ ಜನರು ಅವನ ವಿರೋಧಿಗಳಾದರು. ಅವರಲ್ಲಿ ಕೆಲವರು ಮೊಗಲರ ಸೇವೆಗೆ ಹೋಗಿ ಸೇರಿಕೊಂಡರು. ಅಬಿಸೀನಿಯಾದ ಒಬ್ಬ ಅಸಂತುಷ್ಟ ಸರದಾರ ಶೇಖ್ ಮಿನ್‌ಹಾಜ್ ಎಂಬಾತ ಬಹಲೋಲಖಾನನ ಬಲಗೈಯಂತಿದ್ದ ಖಿಜರ್‌ಖಾನ್ ಪನ್ನಿ ಎಂಬುವವನನ್ನು ಕೊಂದುಹಾಕಿದನು. ಇದನ್ನು ಕಂಡ ಬಹಲೋಲಖಾನನು ಕೊಲೆಯ ಸೇಡನ್ನು ಕೊಲೆಯಿಂದಲೇ ತೀರಿಸಿಕೊಳ್ಳುವುದಾಗಿ ನಿರ್ಧರಿಸಿದನು. ಪರಿಣಾಮವಾಗಿ ೧೮ನೆಯ ಜನವರಿ ೧೬೭೬ರಂದು ಖವಾಸಖಾನನನ್ನು ವಧಿಸಲಾಯಿತು. ಅದರಿಂದಾಗಿ ರಾಜ್ಯದ ಎಲ್ಲೆಡೆ ಆತಂಕ, ಭೀತಿಯ ವಾತಾವರಣವು ಹರಡಿತು. ಇತ್ತ ಶಿವಾಜಿ ಮಹಾರಾಜ ಮತ್ತು ಅತ್ತ ಮೊಗಲರು ಆದಿಲಶಾಹಿ ರಾಜ್ಯವನ್ನು ಇಲ್ಲವಾಗಿಸಲು ಇಂಥ ಸಮಯವನ್ನೇ ಕಾಯುತ್ತಿದ್ದರು.

ಖವಾಸಖಾನನ ಕೊಲೆಯ ಕಾರಣ ಮೊಗಲ್ ಸುಭೇದಾರ ಬಹಾದ್ದೂರ್ ಖಾನನು ಕೋಪಗೊಂಡು ವಿಜಾಪುರದ ಮೇಲೆ ಆಕ್ರಮಣ ಮಾಡಿದನು. ಇಂಥ ಸಮಯದಲ್ಲಿ ಖವಾಸಖಾನನ ಪರವಾಗಿದ್ದ ಜನರಾರೂ ಬಹಲೋಲಖಾನನ ಸಹಾಯಕ್ಕೆ ಬರಲಿಲ್ಲ. ಅದರಿಂದಾಗಿ ಬಹಾದ್ದೂರ್‌ಖಾನನು ನಳದುರ್ಗವನ್ನು ಸುಲಭವಾಗಿ ಗೆದ್ದುಕೊಂಡನಲ್ಲದೆ, ಮುಂದೆ ಕೆಲವು ದಿನಗಳ ನಂತರ ಲಂಚವನ್ನಿತ್ತು ಗುಲಬರ್ಗಾದ ಕೋಟೆಯನ್ನು ವಶಪಡಿಸಿಕೊಂಡನು. (ಅಗಷ್ಟ ೧೬೭೭)

ಇದರಿಂದ ಬಹಳ ದುಃಖಿತನಾದ ಬಹಲೋಲಖಾನನು ಕೆಲವೇ ತಿಂಗಳುಗಳಲ್ಲಿ ಅಂದರೆ ೨೩ನೆಯ ಡಿಸೆಂಬರ್ ೧೬೭೭ರಂದು ಸಾವನ್ನಪ್ಪಿದನು. ಅವನ ನಂತರ ವಿಜಾಪುರದ ಅಧಿಕಾರವು ದಕ್ಷಿಣದ ನೇತಾರ ಸಿದ್ಧಿ ಜೌಹಾರ್ ಸಲಾಬತ್‌ಖಾನನ ಅಳಿಯ ಸಿದ್ಧಿ ಮಸೂದನ ಕೈಗೆ ಬಂದಿತು. ಪಠಾಣರ ರಹಸ್ಯ ಕಾರ್ಯಚಟುವಟಿಕೆ ಮತ್ತು ಖಜಾನೆಯ ದುರ್ದೆಶೆಯಿಂದಾಗಿ ಆತನೂ ರಾಜ್ಯ ನಿರ್ವಹಣೆ ಮಾಡಲಾಗಲಿಲ್ಲ. ಹಾಗಾಗಿ ಅವನು ಗೋವಲಕೊಂಡ ಮತ್ತು ಅನಂತರ ಮೊಗಲ್ ಸರದಾರ ದಿಲೇರಖಾನನ ಸಹಾಯಕ್ಕೆ ಪ್ರಯತ್ನಿಸಿದನು. ಆದರೆ ಅದು ಸಾಧ್ಯವಾಗದೆ ಹೋಗಿ ಕೊನೆಗೆ ಶಿವಾಜಿಯ ಸಹಾಯ ದೊರಕಿಸಿಕೊಂಡು ಮೊಗಲರನ್ನು ವಿರೋಧಿಸತೊಡಗಿದನು. ಆದಾಗ್ಯೂ ರಾಜ್ಯದ ಸ್ಥಿತಿಯೂ ಇನ್ನೂ ಬಿಗಡಾಯಿಸಲು ಮಸೂದ್‌ಖಾನನು ನಿರಾಶೆಗೊಂಡು, ರಾಜ್ಯದ ಕಾರ್ಯಭಾರವನ್ನೆಲ್ಲ ಬಿಟ್ಟುಕೊಟ್ಟು ಅದವನಿ (ಇಂದಿನ ಅಧೋನಿ)ಯ ತನ್ನ ಜಹಗೀರಿಗೆ ಹೋಗಲು ಇಚ್ಛಿಸಿದನು. ಈ ವಿಷಯವನ್ನು ತರುಣ ಬಾದಶಹನಲ್ಲಿ ಹೇಳಿ ಶಕ ೧೬೦೫ರಲ್ಲಿ ಹೊರಟುಹೋದ. ಶಿವಾಜಿಯ ಮರಣಾನಂತರ ಔರಂಗಜೇಬನು ಮರಾಠರು ಮತ್ತು ವಿಜಾಪುರದ ಅಧಿಪತ್ಯವನ್ನು ಅಂತ್ಯಗೊಳಿಸಲು ದಕ್ಷಿಣಕ್ಕೆ ಧಾವಿಸಿದನು. ಹದಿನೈದು ವರುಷಗಳ

ದೀರ್ಘ ಹೋರಾಟದ ನಂತರ ವಿಶಾಲವೂ, ಸಮೃದ್ಧವೂ ಆಗಿದ್ದ ವಿಜಾಪುರ ಸಾಮ್ರಾಜ್ಯವು ಶಕ ೧೬೦೮ರಲ್ಲಿ ಔರಂಗುಜೇಬನಿಂದ ಪತನವಾಯಿತು. ಹದಿನೆಂಡು ವರುಷದ ರಾಜನನ್ನು ಕೈದಿಯಾಗಿ ಬಂದಿಸಲಾಯಿತು. ಮುಂದೆ ಶಕ ೧೬೨೧ರಲ್ಲಿ (೩ನೆಯ ಏಪ್ರಿಲ್ ೧೭೦೦) ಆತ ಸೆರೆಮನೆಯಲ್ಲಿಯೇ ತನ್ನ ಕೊನೆಯುಸಿರೆಳೆದನು.

ಶಿವಾಜಿಯ ವ್ಯಕ್ತಿತ್ವ :

ಮಹಾಕವಿ ನುಸ್ರತಿಯು ತನ್ನ "ಅಲೀನಾಮಾ" ಎಂಬ ಚಿಕ್ಕಕಾವ್ಯದಲ್ಲಿ ಅನೇಕ ವೀರರು, ಯೋಧರು ಮತ್ತು ರಾಜರುಗಳ ಸ್ವಭಾವವನ್ನು ಚಿತ್ರಿಸಿದ್ದಾನೆ. ಅಲಿ ಆದಿಲಶಾಹಿಯೇ ಈ ಕೃತಿಯ ನಾಯಕ. ಅವನನ್ನು ಬಿಟ್ಟರೆ ಅತ್ಯಂತ ಹೆಚ್ಚು ವರ್ಣನೆ ಮಾಡಲಾಗಿರುವ ವ್ಯಕ್ತಿಯೆಂದರೆ, ಛತ್ರಪತಿ ಶಿವಾಜಿ ಮಹಾರಾಜ. ಹಾಗಾಗಿರುವುದಕ್ಕೆ ಸ್ವಾಭಾವಿಕ ಕಾರಣವೆಂದರೆ ಆತ ಆದಿಲಶಾಹಿಯ ಶತ್ರುವಾಗಿದ್ದುದು. ಶಿವಾಜಿಯ ತಂದೆ ಶಹಜಿ ಭೌಂಸ್ಲೆಯು ಆದಿಲಶಾಹಿ ದೊರೆಯ ಸರದಾರನಾಗಿದ್ದನು. ಹಾಗಾಗಿ ಸಹಜವಾಗಿಯೇ ಶಿವಾಜಿಯೂ ಆದಿಲಶಾಹಿಯ ಕೃಪಾಕಟಾಕ್ಷವನ್ನು ಬಯಸಿ ಬರುವನೆಂದು ಎಲ್ಲರೂ ಭಾವಿಸಿದ್ದರು. ಆದರೆ ಆತ ಸರ್ವರ ಈ ಅಪೇಕ್ಷೆಯನ್ನು ಸಂಪೂರ್ಣವಾಗಿ ಭಂಗಗೊಳಿಸಿದನು. ಆ ಕಾರಣದಿಂದ ಶಿವಾಜಿಯನ್ನು ಒಬ್ಬ ಮಹಾ ಮೋಸಗಾರ, ಕ್ಷುದ್ರ ಮತ್ತು ದುಷ್ಟನೆಂದು ತೋರಿಸುವ ಪ್ರಯತ್ನ ಮಾಡಿದ್ದಾನೆ ನುಸ್ರತಿ. ಆದಿಲಶಾಹಿಯ ಆಸ್ಥಾನ ಕವಿಯಾಗಿದ್ದ ನುಸ್ರತಿಯು ಶಿವಾಜಿಯ ಎಲ್ಲ ಕೃತ್ಯಗಳು ಮತ್ತು ಧೋರಣೆಗಳು ತನ್ನ ರಾಜನ ವಿರೋಧವಾಗಿದ್ದುವೆಂದು ಬಣ್ಣಿಸಿರುವುದರಲ್ಲಿ ಆಶ್ಚರ್ಯವೇನೂ ಇಲ್ಲ.

ನುಸ್ರತಿಯು ಸೂಕ್ಷ್ಮದೃಷ್ಟಿಯುಳ್ಳ ಕವಿ. ಹಾಗಾಗಿ ಅವನಿಗೆ ಸಮಕಾಲೀನ ಮಹಾನ್ ವ್ಯಕ್ತಿಗಳು ಮತ್ತು ಪರಿಸ್ಥಿತಿಯ ಬಗ್ಗೆ ಪೂರ್ಣ ಅರಿವು ಇತ್ತು. ಶಿವಾಜಿಯ ಬಗ್ಗೆ ವರ್ಣಿಸುವಾಗಲೆಲ್ಲ ಆತ ಅವನ ವಿರೋಧಿ ನೆಲೆಯಲ್ಲಿಯೇ ನಿಂತಿರುವುದು ಸ್ಪಷ್ಟ. "ಅಲೀನಾಮಾ" ಕಾವ್ಯದ ಆರಂಭದಲ್ಲಿಯೇ ನುಸ್ರತಿಯು ಶಿವಾಜಿಯನ್ನು ಆದಿಲಶಾಹಿ ವಿರೋಧಿ ವ್ಯಕಿಗಳ ಅಧ್ವರ್ಯು ಎಂದಿದ್ದಾನೆ.

ಸಿವಾ ಕರ ಜೋ ಯಕ್ ಫಿತ್ನಾ–ಅಂಗೇಜ್ ಥಾ,
ಬಡಾ ಚೋರ್ ಮೋಜೀ ವ ಖೂ–ರೇಜ್ ಥಾ।
ದಖನ್ ಕೀ ಜಮೀ ಖೀಚ್ ತುಖ್ಮೇ–ಫಸಾದ್,
ಜೋ ಪೇರ್ಯಾ ಸೋ ಅವ್ವಲ್ ಯಹೀ ಬದ್ –ನಿಹಾದ್ ।
(ಅಲೀನಾಮಾ. ಅಧ್ಯಾಯ ೧೦. ೫,೬)

(ಶಿವಾಜಿ ಎಂಬ ಹೆಸರಿನ ಮನುಷ್ಯ ಬಹಳ ತಂಟೆಕೋರ. ಅವನು

ಮಹಾಚೋರನು, ಕ್ರೂರಿಯೂ, ರಕ್ತ ಪಿಪಾಸುವೂ ಆದ ವ್ಯಕ್ತಿ. ದಕ್ಷಿಣದ ಭೂಮಿಯಲ್ಲಿ ವಿದ್ರೋಹದ ಬೀಜವನ್ನು ಬಿತ್ತಿದಂತಹ ಮೊದಲ ವ್ಯಕ್ತಿಯೆಂದರೆ ಅವನೇ.)

ದಕ್ಷಿಣದಲ್ಲಿ ವಿದ್ರೋಹ ಪ್ರವೃತ್ತಿ ಬೆಳೆದುದಕ್ಕೆ ಶಿವಾಜಿಯೇ ಜವಾಬ್ದಾರ ಎಂಬುದು ನುಸ್ರತಿಯ ಮತ. ಒಂದು ದೃಷ್ಟಿಯಿಂದ ನೋಡಿದಲ್ಲಿ ಇದು ತಪ್ಪಾಗಿ ಕಾಣುವುದು. ಶಿವಾಜಿಯೇ ಎಲ್ಲರಿಗಿಂತ ಮೊದಲು ಸ್ವರಾಜ್ಯ ಸ್ಥಾಪನೆಗೆ ಪ್ರಯತ್ನ ಮಾಡಿದನೆಂಬ ವಿಷಯ ಸರ್ವರಿಗೂ ತಿಳಿದುದೇ ಆಗಿದೆ. ನುಸ್ರತಿಯು ಶಿವಾಜಿಯ ಶತ್ರುವಿನ ಪಕ್ಷಪಾತಿ. ಹಾಗಾಗಿ ಅವನು ಶಿವಾಜಿಯು ಬಗ್ಗೆ ಮಾಡಿರುವ ವರ್ಣನೆ ನಿಂದಾಸ್ಪದವಾಗಿಯೇ ಇರಬೇಕಾದ್ದು ದೃಗ್ಗೋಚರ. ಆದರೆ ಈಗ್ಗೆ ಮುನ್ನೂರು ವರ್ಷಗಳ ನಂತರ ಅದನ್ನು ನೋಡಿದಾಗ ಆ ನಿಂದೆಯೂ ಒಂದು ಹೆಗ್ಗಳಿಕೆಯ ಅರ್ಥದಲ್ಲಿಯೇ ವ್ಯಕ್ತವಾಗುತ್ತದೆ. ಲೋಕಮಾನ್ಯ ತಿಲಕರ ವಿಷಯದಲ್ಲಿಯೂ ಇಂಥದೇ ಅಭಿಪ್ರಾಯವಿದೆ. ಚಿರೋಲ್ ಎಂಬ ಸದ್ಗೃಹಸ್ಥನೊಬ್ಬ ಲೋಕಮಾನ್ಯ ತಿಲಕರ ವಿರೋಧಿಯಾಗಿದ್ದು, ಸದಾ ಅವರನ್ನು ನಿಂದಿಸುವುದೇ ಅವನ ಕಾರ್ಯವಾಗಿತ್ತು. ಒಮ್ಮೆ ಅವನು ಹೇಳಿದ್ದು ಹೀಗೆ, ತಿಲಕರೇ ಭಾರತೀಯ ಅಶಾಂತಿಯ ಜನಕ. ಈ ಟೀಕೆಯು ಆ ಹೊತ್ತಿನಲ್ಲಿ ಬಹಳ ಜನರನ್ನು ನೋಯಿಸಿತ್ತು. ಆದರೆ ಈಗ್ಗೆ ಅದೇ ಒಂದು ಪ್ರಶಂಸೆಯಾಗಿ ಪರಿಣಮಿಸಿದೆ. ನುಸ್ರತಿಯು ಶಿವಾಜಿಯನ್ನು ಕುರಿತು ಮಾಡಿರುವ ನಿಂದೆಯೂ ಇಂದು ಹಾಗೆಯೇ ಆಗಿದೆ. ಅಂದರೆ ಆತನ ಅಂದಿನ ನಿಂದೆಯು ಇಂದು ವಿಶೇಷ ಸ್ತುತಿಯಾಗಿ ಕಾಣುತ್ತಿದೆ.

ನುಸ್ರತಿಯು ಮತ್ತೊಂದೆಡೆಯಲ್ಲಿ ಹೀಗೂ ಹೇಳಿದ್ದಾನೆ, ಶಿವಾಜಿಯು ಒಂದು ಕಡೆಯಲ್ಲಿ ಸ್ಥಿರವಾಗಿ ನಿಂತು ಯುದ್ಧ ಮಾಡುತ್ತಿರಲಿಲ್ಲ. ಅವನಿಂದಾಗಿ ಅನೇಕ ಮನೆಗಳು ನಾಶವಾದವು. (ಅಲಿನಾಮಾ, ಅಧ್ಯಾಯ ೧೦.೯). ವಿಜಾಪುರ ರಾಜ್ಯದ ಅನೇಕ ಪ್ರದೇಶಗಳು ಹಾನಿಯನ್ನು ಅನುಭವಿಸಿದವು ಎಂಬುದರ ಕಡೆ ಲಕ್ಷ್ಯವನ್ನು ಸೆಳೆಯಲು ನುಸ್ರತಿಯು ಈ ರೀತಿಯಲ್ಲಿ ಉಲ್ಲೇಖ ಮಾಡಿದ್ದಾನೆ. ಶಿವಾಜಿ ಉತ್ತರ (ಮೊಗಲರ ರಾಜ್ಯ) ಮತ್ತು ದಕ್ಷಿಣದವರ (ವಿಜಾಪುರ ರಾಜ್ಯ) ಕತ್ತಿಗಳ ನಡುವೆ ಸಿಲುಕಿಕೊಂಡಿದ್ದನು. ತಾನು ಸ್ವತಃ ತಟಸ್ಥನಾಗಿ ಇರುವಂತೆ ತೋರಿಸಿಕೊಳ್ಳುತ್ತಲಿದ್ದ ಅವನು ದೊಡ್ಡ ದೊಡ್ಡ ಸಾಮ್ರಾಟರ ನಡುವೆ ಯುದ್ಧ ಉಂಟಾಗುವಂತೆ ಮಾಡುತ್ತಿದ್ದನು. (ಅಲೀನಾಮಾ, ಅಧ್ಯಾಯ.೧೦,೧೧) ಫಿರಂಗಿಗಳಿಗಿಂತಲೂ ಅವನು ಭಯಂಕರ ಶತ್ರುವಾಗಿದ್ದನು. ನುಸ್ರತಿಯು ಶಿವಾಜಿಯನ್ನು ಉದ್ದೇಶಿಸಿ ಬಳಸಿರುವ ವಿಶೇಷಣ "ಕಾಕಿರ್" (ಶತ್ರು) ಎಂಬ ಪದ. ಶಿವಾಜಿಯು ದಕ್ಷಿಣದಲ್ಲಿ ಜಗಳ, ತಂಟೆ ಮತ್ತು ವಿದ್ರೋಹವನ್ನು ಹುಟ್ಟು ಹಾಕಿದ ವ್ಯಕ್ತಿ. ಹಾಗಾಗಿ ಮೊಗಲರು ಮತ್ತು ಆದಿಲಶಾಹಿಗಳ ದೃಷ್ಟಿಯಲ್ಲಿ ಆತ ಅಕ್ಷಮ್ಯ ಅಪರಾಧಿಯಾಗಿದ್ದನು.

ನ ಉಸ್ ಕತ್ಲ ಹಜ್ ತೇ ಇಬಾದತ್ ನ್ಹನೀ,
ಹರಮ್ ಮೇ ಬೀ ಸಂಪಡೇ ತೋಥಾ ಕುಶ್ತನೀ ।
(ಅಲೀನಾಮಾ.೧. ೧೦,೧೬)

(ಶಿವಾಜಿಯು ಎಷ್ಟೊಂದು ಕ್ರೂರಿ ಮತ್ತು ಅಪರಾಧಿಯಾಗಿದ್ದಾನೆಂದರೆ ಮೆಕ್ಕಾದ ಧರ್ಮಮಂದಿರದಲ್ಲಿ ಅವನು ಪೂಜೆ ಮಾಡುತ್ತಲಿರುವಾಗ ಕೈಗೆ ಸಿಕ್ಕಿದರೂ ಸರಿಯೇ ಅವನನ್ನು ವಧಿಸಬೇಕಾದ್ದು ಅಗತ್ಯ.)

ಶಿವಾಜಿಯ ವಿಷಯದಲ್ಲಿ ನುಸ್ರತಿ ಮಾಡಿರುವ ಈ ಟೀಕೆಯು ಆ ಕಾಲದ ರಾಜ್ಯಕರ್ತರಿಗೆ ಹೆಚ್ಚು ಪ್ರಿಯವಾದುದೇ ಆಗಿತ್ತು. ಔರಂಗಜೇಬನೂ ಕೂಡ ಈ ಸಾಲುಗಳನ್ನು ಓದಿದ್ದನು ಎನ್ನಲಾಗಿದೆ. "ಬಸಾತಿನುಸ್ಸಲಾತೀನ್" ಕೃತಿಯ ಆಧಾರದಿಂದ ಡಾ. ಅಬ್ದುಲ್ ಹಕ್ (ನುಸ್ರತಿ, ಪುಟ-೧೧೨)ಅವರು ಹೇಳಿರುವುದೇನೆಂದರೆ, ಔರಂಗಜೇಬನ ಆಜ್ಞೆಯನುಸಾರ ವಿಜಾಪುರದ ರಾಜ್ಯವು ಪತನವಾದ ಮೇಲೆ ಅಲ್ಲಿನ ಕೆಲವು ವಿದ್ವಾಂಸರು ಮತ್ತು ಮೌಲ್ವಿಗಳು ಸಂಘಟಿತರಾಗಿ ಔರಂಗಜೇಬನ ಭೇಟಿಗೆ ಹೋದರು. ಆಗ್ಗೆ "ವಿಜಾಪುರವು ಇಸ್ಲಾಮೀ ರಾಜ್ಯವಾಗಿತ್ತು. ಅದನ್ನು ನಾಶ ಮಾಡಿದುದೇಕೆ?" ಎಂಬ ಪ್ರಶ್ನೆಯನ್ನು ಅವನೆದುರು ಮಂಡಿಸಿದರು. ಅದಕ್ಕೆ ಔರಂಗಜೇಬನು "ಶಿವಾಜಿಯು ಇಸ್ಲಾಂ ಮತ್ತು ದೆಹಲಿಗಳೆರಡಕ್ಕೂ ಶತ್ರುವಾಗಿದ್ದನು. ಅವನು "ಹರಮ್ ಮೇ ಬೀ ಕುಶ್ತನಿ"ಯಾಗಿದ್ದನು. ಹೀಗಿರುವಾಗ ನಿಮ್ಮ ರಾಜ್ಯವು ಶಿವಾಜಿಗೆ ಆಶ್ರಯ ನೀಡಿತ್ತು. ಆ ಕಾರಣ ಶಿವಾಜಿಯನ್ನು ಅಡಗಿಸುವುದಕ್ಕೆ ನಿಮ್ಮ ರಾಜ್ಯದ ವಿನಾಶವೂ ಒಂದು ಭಾಗವಾಗಬೇಕಾಗಿ ಬಂದಿತು" ಎಂದು ಉತ್ತರಿಸಿದ್ದನು.

ಶಿವಾಜಿಯು ಬಹಳ ಚತುರನೂ, ಕುಟಿಲ ತಂತ್ರವುಳ್ಳ ವ್ಯಕ್ತಿಯಾಗಿದ್ದನೆಂದು ನುಸ್ರತಿಯು ಅನೇಕ ಬಾರಿ ಹೇಳಿದ್ದಾನೆ. ಶಿವಾಜಿಯು ಸೂರತ್ ಪಟ್ಟಣ ಲೂಟಿ ಮಾಡಿದ ಬಗ್ಗೆ ನುಸ್ರತಿಯು ತುಂಬಾ ಮಾರ್ಮಿಕವಾಗಿಯೂ, ವಸ್ತುಸ್ಥಿತಿ ದರ್ಶಕವಾಗಿಯೂ ವರ್ಣಿಸಿರುವನು –

ಮುಗಲ್ ಕೂಂ ಲಗಾ ಖೇಲ್ ಯಾ ವಾ ಇಧರ್
ಬಂದರ್ ಪರ್ ಅಪೀ ಉಟ್ ಕೋ ದೌಡ್ಯಾ ಉಧರ್ ।
(ಅಲೀನಾಮಾ. ಅಧ್ಯಾಯ, ೧೮. ೧೦)

ಇಲ್ಲಿನ "ಯಾ ವಾ ಇಧರ್" ಶಬ್ಧವು ತುಂಬಾ ಮಾರ್ಮಿಕವಾಗಿಯೂ, ಕೌಶಲ್ಯ ಪೂರ್ಣತೆಯಿಂದಲೂ ಬಳಸಿದುದಾಗಿದೆ. ಮೊಗಲ್ ಸರದಾರರನ್ನು ಶಿವಾಜಿಯು ಬೇರೆ ಬೇರೆ ಕಾರಣಗಳ ಮೂಲಕ ಒಂದಲ್ಲ ಒಂದು ಕಾರ್ಯದಲ್ಲಿ ಸಿಲುಕುವಂತೆ ಮಾಡಿ ತನ್ನ ಲೂಟಿ ಕಾರ್ಯದಲ್ಲಿ ಯಶಸ್ವಿಯಾಗುತ್ತಿದ್ದನು. ಹಾಗಾಗಿ ಔರಂಗಜೇಬನಿಗೆ ಶೋಚನೀಯ ಸ್ಥಿತಿಯು ಮತ್ತೆ ಮತ್ತೆ ಬಂದೊದಗುತ್ತಿತ್ತು.

ಪಕಡ್ ಆಪನೇ ದಾಂತೋ ಮೇ ಹೈರತ್ ಮೂ ಬೋಂಟ್
ಕ್ಯಾ ಚಾಬ್ರತಾ ಸಖ್ತ್ ಗುಸ್ಸೇ ಸೂ ಹೋಂಟ್ ।
(ಅಲೀನಾಮಾ. ಅಧ್ಯಾಯ ೧೮. ೨೫)

ಇದರಿಂದ ಕೇವಲ ಔರಂಗಜೇಬನಿಗಷ್ಟೇ ಅಲ್ಲ. ಇಡೀ ಜಗತ್ತಿಗೆ ಆಶ್ಚರ್ಯ ಉಂಟಾಗುತ್ತಿತ್ತು.

ಸುನೇ ಪರ್ ಜೋ ಹೈರಾ ಹುಏ ಸಬ್ ಜಹಾಂ
ರಹೇ ದೇಕ್ ಥಕ್ ದೀದ್ –ಏ–ಆಸ್ಮಾ ।
(ಅಲೀನಾಮಾ ಅ.೧೭. ೧೯)

(ಈ ಘಟನೆಯನ್ನು ಕೇಳಿದ ಸರ್ವ ಜಗತ್ತಿಗೂ ಚಿಂತೆಯುಂಟಾಯಿತು. ಆಕಾಶವೂ ಕೂಡ ಈ ಘಟನೆಯನ್ನು ತನ್ನ ವಿಸ್ಫುರಿತ ನೇತ್ರಗಳಿಂದ ನೋಡತೊಡಗಿತು.)

ರಾಜ್ಯದ ಬಂಡಿಯನ್ನು ನಡೆಸುವ ಶಿವಾಜಿಯ ಕೌಶಲವನ್ನು ಕಂಡ ನುಸ್ರತಿ ಅವನ ಗುಣಗ್ರಹಣಗಳನ್ನು ವಿಶೇಷವಾಗಿ ಸ್ತುತಿಸಿರುವನು –

ದೋನೋ ಮಾರ್ ಹಮ್‌ತೋಲ್ ಥೇ ಯೂಂ ಅಗರ್
ಸಿವಾ ಉನ್‌ಮೇ ಪಾಸಂಗ ಕಾ ಥಾ ಫತರ್ ।
ದೋನೋ ಭಾರ್ ಹಮ್‌ತೋಲ್ ಥೇ ದೋ–ರುಖನ್
ಜಮೀ ಹುಈ ತರಾಜೂ ಕೇ ಪಲಡ್ಯಾ ನಮುನ ।
ತೋ ಸಂಜಿದಾ ಲೋಗ್ ಉಸಕೂ ಪಾಸಂಗ ಜಾನ
ಮಂಗೇ ತುರ್ತ್ ಕರನೇ ವೋ ಪಲ್ಲೇ ಕೂಂ ಕಾನ ।
(ಅಲೀನಾಮಾ, ಅ.೨೮,೧೮೭,೧೮೮,೧೯೦)

(ಮೊಗಲ್ ಮತ್ತು ಆದಿಲಶಾಹಿ ಸೈನ್ಯಗಳೆರಡೂ ಸಮತೂಕದವುಗಳಾಗಿದ್ದವು. ಶಿವಾಜಿಯು ಈ ಸಮತೂಕಗಳಿಗೆ ಕಲ್ಲಾಗಿದ್ದನು. ಎರಡೂ ಸಮತೋಲನಗಳು ತಂತಮ್ಮ ಸೈನ್ಯದಿಂದಾಗಿ ಭೂಮಿಯ ತಕ್ಕಡಿಯ ಪರಡಿಗೆ (ತಟ್ಟೆ)ಯಂತಿದ್ದವು. ಹಾಗಾಗಿ ಎರಡೂ ರಾಜಕಾರಣ ಪಟುತ್ವ ಪಕ್ಷಗಳು ಶಿವಾಜಿಯನ್ನು ಸಮತೂಕವುಳ್ಳ ದೊರೆಯೆಂದೇ ಅರಿತು ಅವನ ಸಹಾಯದಿಂದ ತಮ್ಮ ಪರಡಿಗೆಯನ್ನು ಭಾರಗೊಳಿಸಿಕೊಳ್ಳಲು ಪ್ರಯತ್ನಿಸುತ್ತಿದ್ದವು.)

ಭೂಮಿಯ ಮೇಲೆಯೇ ಆಗಲೀ, ಸಮುದ್ರದ ಮೇಲೆಯೇ ಆಗಲಿ ಶಿವಾಜಿಯು ಶತ್ರುಗಳನ್ನು ಸೂರೆ ಹೊಡೆದು ಬರಿಗೈ ಮಾಡಿ ಬಿಡುತ್ತಿದ್ದನು. ಅದನ್ನು ಕೂಡ ನುಸ್ರತಿಯು ವಿಸ್ಮಯದಿಂದಲೇ ಬಣ್ಣಿಸಿದ್ದಾನೆ–

ಜೋ ಥೀ ಬಹ ಹೌರ ಬರ ಪೋ ಜಿಸಕೀ ಝುಡಪ
ಪಡ್ಯಾ ಫಡಫಡತಾ ಚ ಕೋನೇ ಮೇಂ ಛುಪ್ ।

(ಅಲೀನಾಮಾ. ಅ.೨೨.೩೨)

'ತಾರೀಖೇ-ಅಸಿಕಂದರಿ'ಯಲ್ಲಿಯೂ ಕವಿ ಶಿವಾಜಿ ಮತ್ತು ಅವನ ಸೇನೆಯ ಶೌರ್ಯವನ್ನು ಬಣ್ಣಿಸಿದ್ದಾನೆ. ಆದಿಲಶಾಹಿ ಮತ್ತು ಮೊಗಲರ ಗಗನಚುಂಬಿ ಕೋಟೆಗಳನ್ನು ಶಿವಾಜಿಯು ತನ್ನ ಕೌಶಲ್ಯದಿಂದ ವಶಪಡಿಸಿಕೊಂಡಿದ್ದನು. ಈ ಪ್ರಸಂಗದ ವರ್ಣನೆಯು ನುಸ್ರತಿಯ 'ತಾರೀಖೇ-ಅಸಿಕಂದರಿ' ಕಾವ್ಯದ ಅಧ್ಯಾಯ ೧.೨೧ರಲ್ಲಿ ಬಂದಿದೆ. ಶಿವಾಜಿಯು ಲೂಟಿ ಹೊಡೆದ ಬಂದರುಗಳ ವಿವರಗಳೂ ಅಲ್ಲಿದೆ.

ಬಚೇ ಆಸಮಾ ಕೇ ಜೋ ಗಡ ಥೇ ಬುಲಂದ್
ಲಿಯಾ ಚಡ ಸಟ್ಯಾ ವಾಂ ಸೋ ಘನ ಕಾ ಕಮಂದ
ಕರ್‍ಯಾ ಚಡ ಜಹಜಾ ಜೋ ದರ್ಯಾ ಪೋ ದೌಡ
ಕಿಯಾ ಲೂಟ ಬಂದರ್ ಫಿರಂಗ್ಯಾಕೇ ಚೌಡ ।

(ಅ.೧.೨೧.೨೨)

ಆದಿಲಶಾಹಿ ಮತ್ತು ಮೊಗಲರ ಸೇನಾಪತಿಗಳಾರೂ ಶಿವಾಜಿಯನ್ನು ಎದುರಿಸಿ ಹೋರಾಡಿ ಗೆಲ್ಲಲಾಗಲಿಲ್ಲ. ಒಂದೋ ಅವರು ಹೋರಾಟದಲ್ಲಿ ಸಾಯುತ್ತಿದ್ದರು. ಇಲ್ಲವೆ ಶಿವಾಜಿಯ ಕೈಯಲ್ಲಿ ಸೆರೆಸಿಕ್ಕು ಬಂದಿಗಳಾಗಿ ಸುಮ್ಮನೆ ಬಿದ್ದಿರುತ್ತಿದ್ದರು.

ಜೋ ಉಪಸೇ ಜತೇ ಫೌಜದಾರಾಂ ಲಡೇ,
ಲುಟೇ ಗಏ ವುತೇ ಯಾ ಸಪಡ ಬಂದ ಪಡೇ ।

(ಅ.೧.೨೫)

ಶಿವಾಜಿಯ ಭೀತಿ :

ಶಿವಾಜಿಯನ್ನು ಹೀನಾಮಾನವಾಗಿ ಖಂಡಿಸುವುದೇ ನುಸ್ರತಿಯ ಮುಖ್ಯ ಉದ್ದೇಶವಾಗಿತ್ತು. ಆದಿಲಶಾಹಿಯ ರಾಜ್ಯಕ್ಕೆ ಎಂಥ ಭಯವಿತ್ತು ಶಿವಾಜಿಯಿಂದಾಗಿ ಎಂಬುದು ಈತನ ವರ್ಣನೆಯಿಂದ ತಿಳಿದುಬರುತ್ತದೆ. ಸ್ವತಃ ಬಾದಶಹನೇ ಅಲ್ಲದೆ, ಅವನ ಸೇನಾಪತಿಯೂ ಹಾಗೂ ನುಸ್ರತಿಯೂ ಕೂಡ ಅವನ ಪರಾಕ್ರಮದಿಂದ ಭಯಕಂಪಿತರಾಗಿ ಹೋಗಿದ್ದರು. ಸಿದ್ಧಿ ಜೌಹರ್ ಸಲಾಬತ್ ಖಾನನು ಒಮ್ಮೆ ಶಿವಾಜಿಯನ್ನು ಪನ್ಹಾಳ ಕೋಟೆಯಲ್ಲಿ ಕೈದಿಯಾಗಿ ಬಂಧಿಸಿಟ್ಟಿದ್ದಾಗ, ಆತ ಅಲ್ಲಿಂದ ತಪ್ಪಿಸಿಕೊಂಡು ಹೋಗಲು ಇಡೀ ರಾಜಧಾನಿಯಲ್ಲಿಯೇ ವಿಪರೀತ ಗೊಂದಲ ಉಂಟಾಗಿತ್ತು. ನುಸ್ರತಿ ಅದನ್ನು ವರ್ಣಿಸಿರುವುದು ಹೀಗೆ –

ಆಬ ಇಸ ಬಂದ ತೇ ಫಿರ ಕೋ ಶೌತಾ ಛುಟ್ಯಾ
ಬಡಾ ಜಾ ಬರ್ಜಾ ಫಿರ್ ಗೋಗಾ ಉಠ್ಯಾ
ಸುಲಗ ಕರ ಉಠೀ ದಾಬ ಛೋಡೆ ಸೋ ಆಗ
ಸೋತಾ ಥಾ ಸೋ ಕಿಲಾ ಉಠ್ಯಾ ಫಿರ ಕೋ ಜಾಗ ।
ಶರೀರಾಂ ಕೇ ಗೋಯಾ ಖುಲೇ ಸರ ತೇ ಬಖ್ತ
ಜೋ ಗಡ ಮೋಮ ಥಾ ಸೋ ಹುಆ ಸಂಗ ಸಖ್ತ ।

(ಅಲೀನಾಮಾ. ಅ.೧೧. ೫೪ ರಿಂದ ೫೬)

ಔರಂಗಜೇಬನು ಒಮ್ಮೆ ಮಿರ್ಝಾ ಜಯಸಿಂಹನನ್ನು ಬಹಳಷ್ಟು ಸೇನೆ ಮತ್ತು ದ್ರವ್ಯದೊಡನೆ ಶಿವಾಜಿಯ ಮೇಲೆ ಯುದ್ಧಕ್ಕೆ ಕಳುಹಿಸಿದನು. ಆಗ್ಗೆ ಜಯಸಿಂಹನ ಮನಸ್ಸಿನಲ್ಲಿಯೂ ಕೂಡ ಶಿವಾಜಿಯ ಬಗ್ಗೆ ಬಹಳ ಭೀತಿ ತುಂಬಿಕೊಂಡಿತು.

ಹುಆ ಕೂಚ ಪರ ಕೂಚ ಗರಚಿ ರವಾ
   ವಲೇ ಫಿಕ್ರ ಸೂಂ ಥಾ ಪರೇಶಾನ ಜಾಂ ।
ಕಿ ಶಾಇಸ್ತಾ ಖಾಂ ಸೂಂ ವೋ ಐಸಾ ಕಿಯಾ
   ದುಜಾ ಛೀನ ಜಸವಂತ ಸೂ ಜಯ ಲಿಯಾ ।
ದಂದೀ ತೋ ಫರೇಭೀ ಹೈ ಮಶಹೂರ್ ಯೂಂ
   ಜೋ ಐಸೇ ಸೇ ಪೂರಾ ಪಡೇ ಜಾಯೇ ಕ್ಯೋಂ ।
ಕಮಾಲ ಖಿರ್ದ ಸೂಂ ಯೋ ಹುಆ ಮುತಬ್ದೀ
   ನ ಜಾನ್ಯಾ ಕಿ ನೇಕೀ ಅಂಗೇ ಯಾಬದೀ ।

(ಅಲೀನಾಮಾ. ಅ.೧೯. ೨೪ ರಿಂದ ೨೭)

ಜಯಸಿಂಹನು ಅಲ್ಲಲ್ಲಿ ಬೀಡುಬಿಡುತ್ತಾ ಶಿವಾಜಿಯನ್ನು ಎದುರಿಸಲು ಮುನ್ನಡೆಯುತ್ತಿದ್ದನಾದರೂ ಅವನ ಬಗ್ಗೆ ಅತೀವ ಚಿಂತಾಗ್ರಸ್ಥನಾಗಿದ್ದನು. ಶಾಇಸ್ತೇಖಾನನ ಪ್ರಾಣಭೀತಿಯನ್ನು ತನ್ನ ಬೆರಳುಗಳಿಂದ ನಿಭಾಯಿಸಿದ್ದ ಶಿವಾಜಿ, ಜಸವಂತಸಿಂಹನ ಯಶಸ್ಸನ್ನು ಪೂರ್ಣವಾಗಿ ಹರಣಮಾಡಿದ್ದನು. ಈ ಎರಡೂ ಘಟನೆಗಳು ಜಯಸಿಂಹನಿಗೆ ತಿಳಿದಿದ್ದವು. ಹಾಗಾಗಿಯೇ ಆತ ಶಿವಾಜಿಯಂಥ ತೀರಾ ಗಂಡಾಂತರಕಾರಿಯಾದ ಶತ್ರುವನ್ನು ಹೇಗೆ ನಿಯಂತ್ರಿಸಬಹುದು ಎಂಬ ಬಗ್ಗೆ ಗಂಭೀರವಾಗಿ ಆಲೋಚಿಸುತ್ತಿದ್ದನು. ಬಹಳ ಜಾಗರೂಕತೆಯಿಮದ ತಾನು ಬಂದ ಕಾರ್ಯವನ್ನು ನಿರ್ವಹಿಸುತ್ತಿದ್ದನಾದರೂ ಒಂದು ಚಿಂತೆ ಮಾತ್ರ ಅವನನ್ನು ಪೂರ್ಣವಾಗಿ ಆವರಿಸಿತ್ತು. ಅದೇನೆಂದರೆ ಈ ಕಾರ್ಯದಲ್ಲಿ ತಾನು ಯಶಸ್ಸಿನ ಒಡೆಯನಾಗುವೆನೋ, ಅಥವಾ ಅಪಯಶಸ್ಸು ಸೆರಗಿನಲ್ಲಿ ಬಿದ್ದು ಹಿಂತಿರುಗಿ ಹೋಗುವಂತಾಗುವುದೋ ಎಂಬ ಸಂಗತಿ.

ಮರಾಠರ ಸ್ವಭಾವ ಚಿತ್ರಣ :

ಶಿವಾಜಿ ಮತ್ತು ಅವನ ಸೈನ್ಯದ ಬಗ್ಗೆ ನುಸ್ರತಿಯ ಮನಸ್ಸಿನಲ್ಲಿ ವಿಪರೀತ ದ್ವೇಷ ತುಂಬಿರುವುದರಲ್ಲಿ ಅಂತಹ ಅಸ್ವಾಭಾವಿಕವಾದುದು ಏನೂ ಇಲ್ಲ. ಈ ದ್ವೇಷ ಅವನ ಕಾವ್ಯದಲ್ಲಿ ಅಲ್ಲಲ್ಲಿ ಸ್ಪಷ್ಟವಾಗಿಯೇ ವ್ಯಕ್ತವಾಗಿದೆ. ಶಿವಾಜಿಯ ಸೈನ್ಯದ ಅರ್ಥಾತ್ ಮರಾಠರನ್ನು ಕುರಿತು ಆತ ಹೀಗೆ ವರ್ಣಿಸಿದ್ದಾನೆ;

ಮಿಲಾಯಾ ಮುಖಂಡ ಚೋರ ಖೂಂ – ಖಾರ ಕೈ
  ಉಪಸ ಸಾರಕೇ ರಿಂದೋ – ಅಯ್ಯಾರ ಕೈ ।
ಲಿಯಾ ಕರ ಅಂಗೇ ಕುನಭಟಾ ಘನ ಕೇ ಜೋರ
  ಖನೌರೇ ದಖಡೇ ಕರ ಅವಬಾಶ ಚೋರ ।

(ಅಲೀನಾಮಾ.ಅ.೧೭, ೧೮,೧೯)

(ಚೋರರು, ರಕ್ತ ಪಿಪಾಸುಗಳು ಮತ್ತು ಉಗ್ರಸ್ವಭಾವದ ಜನರನ್ನು ಏಕತ್ರ ಕೂಡಿಸಿದ್ದ ಶಿವಾಜಿಯು ಸ್ವತಃ ಅಂಥವನೇ ಆಗಿದ್ದ. ಯಾವ್ಯಾವ ಕುಣಬಿಯರು ಡಾಕು ಮತ್ತು ಲೂಟಿಕೋರರಾಗಿದ್ದಾರೋ ಅಂಥವರನ್ನೆಲ್ಲ ಸೇರಿಸಿಕೊಂಡು ಆತ ತನ್ನ ಕೌಶಲ್ಯದಿಂದ ಎಲ್ಲ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದನು.)

ಶಿವಾಜಿಯನ್ನು ಮತ್ತು ಮರಾಠರನ್ನು ನಿಂದಿಸುವಾಗ್ಗೆ ನುಸ್ರತಿಯು ತನಗೆ ಇಷ್ಟವಿಲ್ಲದಿದ್ದರೂ ಸರಿ, ಶಿವಾಜಿ ಮತ್ತು ಅವನ ಪರಾಕ್ರಮಶಾಲಿಯಾದ ಸೇನೆಯನ್ನು ಸ್ತುತಿಸದೆ ಬಿಟ್ಟುಬಿಡಲು ಸಾಧ್ಯವಾಗಲಿಲ್ಲ. ದಕ್ಷಿಣದಲ್ಲಿ ವಿದ್ರೋಹದ ಬೆಂಕಿಯನ್ನು ಪಸರಿಸಿದವನೆಂದರೆ ಶಿವಾಜಿಯೇ, ಶತ್ರುಗಳನ್ನು ಅಪಾಯಕ್ಕೆ ತಳ್ಳಲೆಂದೇ ಅವನಿಂದ ಅನೇಕ ಸ್ಥಳಗಳು ನಿರ್ಮಾಣಗೊಂಡಿದ್ದವು. ಇನ್ನು ಅವನ ಸೈನ್ಯವೋ ನೋಡಲು ಮೃಗಜಲ ಸ್ವರೂಪದ್ದಾಗಿದ್ದರೂ, ಶತ್ರುವನ್ನು ಮುಳುಗಿಸಿ ಬಿಡುವಷ್ಟು ಜಲಪ್ರಳಯಕಾರಿಯೂ ಆಗಿತ್ತು. (ಅಲೀನಾಮಾ, ಅ.೧೮. ೧೦). ಹೆಗಲ ಮೇಲೆ ಭಲ್ಲೆಯನ್ನು ಹೊತ್ತು ನಡೆವ ಮರಾಠ ಸೈನ್ಯವು ಸಿಡಿಲಿನ ದಂಡೇ ಹೌದು. (ಅಲೀನಾಮಾ, ಅ.೩೧, ೧೨೬). ಮರಾಠರ ಸೈನ್ಯ ಜನರನ್ನೆಲ್ಲ ದೋಚುತ್ತಾ ಸಂಚರಿಸುತ್ತಿತ್ತು. ಅವರೆಲ್ಲ ತೋಳಗಳಂತಿದ್ದು, ಏನು ದೊರೆಯುವುದೋ ಅದನ್ನೇ ತಿಂದು ಮುನ್ನುಗ್ಗುವ ಕಲಿಗಳಾಗಿದ್ದರು. (ಅಲೀನಾಮಾ,ಅ.೩೨. ೩೦).

ಇಂತಹ ನಿಂದಾತ್ಮಕ ವರ್ಣನೆಗಳಂತೆಯೇ ಮರಾಠರ ಶೌರ್ಯವನ್ನು ಬಹಳ ಆಕರ್ಷಕವಾಗಿಯೇ ಚಿತ್ರಿಸಿದ್ದಾನೆ ನುಸ್ರತಿ. ಅವನು ಹೇಳುವಂತೆ, ಮರಾಠ ಸೈನಿಕರು ಚಲಿಸುವ ವೇಗವನ್ನು ಅರಿಯುವುದು ಯಾರಿಂದಲೂ ಸಾಧ್ಯವಿಲ್ಲ. ಮರಾಠಾ ಮನುಷ್ಯ ಸಭ್ಯನಿಗೆ ಸೋದರನೂ, ಚೋರನಿಗೆ ಗುರುವೂ ಆಗಿದ್ದನು. ಅವರ ಪ್ರತಿಯೊಂದು ಕುದುರೆಯು ಅಪ್ಸರೆಯಂತಿದ್ದು, ಅವು ನಿಶಾಪತಿಯಾದ ಚಂದ್ರನಿಗೆ ಪ್ರೇಯಸಿಯಾಗಿದ್ದವು.

ಮರಾಠಾ ವೀರರು ಬಹಳ ಚಾತುರ್ಯದಿಂದ ಗೆರಿಲ್ಲಾ ರೀತಿಯಲ್ಲಿ (ವಿಶಿಷ್ಟ ಯುದ್ಧ ಕೌಶಲ–ಗನಿಮೀಕಾವಾ) ಹೋರಾಡುತ್ತಿದ್ದರು. ಆಗ ಜಗತ್ತನ್ನು ಮೋಸಗೊಳಿಸುವ ನದಿಯ ಸುಳಿಯೂ ಕೂಡ ಪೇಚಿಗೆ ಒಳಗಾಗದೇ ಇರುತ್ತಿರಲಿಲ್ಲ. ಬಹಳ ವೇಗವಾಗಿ ಧಾವಿಸುವಾಗ್ಗೆ ಮರಾಠರ ಮುಂಡಾಸು (ಪೇಟ) ಅಥವಾ ಶಮಲಾವು ಅವರ ಸಹಾಯಕ್ಕೆ ಬರುತ್ತಿದೆಯೋ ಎಂಬಂತೆ ಎತ್ತರದಲ್ಲಿ ಇರುತ್ತಿತ್ತು ಅವರ ಚಪಲಚಿತ್ತತೆಗೆ ಪಾದಗಳಡಿಯ ಭೂಮಿಯೂ ಕಂಪಿಸುತ್ತಿತ್ತು. ಇನ್ನು ಯುದ್ಧದಲ್ಲಿ ಅವರು ಶತ್ರು ಸೈನ್ಯದ ಮೇಲೆ ಬೆಂಕಿಯ ಮಳೆಯನ್ನೇ ಸುರಿಸುತ್ತಿದ್ದರು. ಪ್ರತಿಯೊಬ್ಬ ಮರಾಠಾ ಸೈನಿಕನೂ ಭಲ್ಲೆಯನ್ನು ಪ್ರಯೋಗಿಸುವುದರಲ್ಲಿ ಬಹಳ ಪ್ರವೀಣನಾಗಿದ್ದನು. ಅವನು ಕೌಶಲದಿಂದ ಯುದ್ಧ ಮಾಡುವ ರೀತಿ ಹೇಗಿತ್ತೆಂದರೆ, ಚಂದ್ರನ ಕೈಯಲ್ಲಿನ ಕಡಗವನ್ನು ಕೂಡ ಆತ ತೆಗೆದುಕೊಂಡು ಬಂದೇ ತೀರುತ್ತಿದ್ದನು. ಸೈನ್ಯ ರೂಪದ ಪ್ರೇಯಸಿಯಲ್ಲಿ ಆತನು ಸದಾ ಅನುರಕ್ತ. ತನ್ನ ಭಲ್ಲೆಯ ತುದಿಯಿಂದಲೇ ಅವಳ ಮುಖದ ಮೇಲಿನ ಸೆರಗನ್ನು ಸರಿಸುತ್ತಿದ್ದನು ಆತ. ಅಂತೆಯೇ ಅವಳ ತೊಡೆಗಳ ಮೇಲೆಯೇ ತನ್ನ ಪ್ರಾಣ ಬಿಡುವ ದೃಢ ಮನಸ್ಸುಳ್ಳವನಾಗಿದ್ದನು. (ಅಲೀನಾಮಾ. ಅ.೨೬. ೨೨೧ ರಿಂದ ೨೨೭).

'ಅಲೀನಾಮಾ' ಕಾವ್ಯದ ಏಳು ವರ್ಷಗಳ ನಂತರ ಬರೆದ 'ತಾರೀಖೇ–ಅಸಿಕಂದರಿ'ಯಲ್ಲಿಯೂ ವೃದ್ಧ ನುಸ್ರತಿ ಮರಾಠಾ ಸೇನೆಯ ಬಗ್ಗೆ ಇದೇ ಅಭಿಪ್ರಾಯವನ್ನು ಪ್ರಕಟಿಸಿದ್ದಾನೆ. ಅವನು ಹೇಳುವಂತೆ,

ಸಿವಾ ಕಾ ವೋ ಲಷ್ಕರ ತೋ ಸೂರತ – ಹರಾಮ
ಮಗರ ನಸ್ಲ ಶೈತಾನ ಕಾ ಥಾ ತಮಾಮ ।

(ಅ.೪. ೫೭)

(ಶಿವಾಜಿಯ ಸೈನ್ಯವು ಕೇವಲ ತನ್ನ ಕರ್ತೃತ್ವದಿಂದಷ್ಟೆ ಅಲ್ಲ, ನೋಡುವುದಕ್ಕೂ ಅಷ್ಟೇ ಭಯಂಕರವಾಗಿತ್ತು. ಅದನ್ನು ಸೇನೆ ಎಂಬುದಕ್ಕಿಂತ 'ಶೈತಾನನ ಸಂತತಿ' ಎಂದು ಕರೆಯುವುದೇ ಹೆಚ್ಚು ಸೂಕ್ತ.)

ಈ ಸೈನ್ಯದ ಶೌರ್ಯ ವರ್ಣನೆಯು ಅವನಲ್ಲಿ ಹೀಗಿದೆ –
ದಿಸೇ ಐನ ಉಜಲ ಪನ ದೇಖತ ನೈ ಡರೇ
ಕಿ ನಾಮೋಸ ಕೂಂ ಬೇಳ ಅಂಗೇ ಜಿವ ಕರೇ ।

(ಅ.೪. ೫೦)

(ಮೃತ್ಯುವೇ ಎದುರು ನಿಂತಿದ್ದರೂ ಭಯಪಡುವವರಲ್ಲ ಮರಾಠಾ ಸೈನಿಕರು. ಅವರಿಗೆ ತಮ್ಮ ಕೀರ್ತಿಯೊಂದೇ ಮುಖ್ಯವಾಗಿತ್ತು. ಹಾಗಾಗಿ ತಮ್ಮ ಪ್ರಾಣವನ್ನು ಅಂಗೈಲ್ಲಿ ಹಿಡಿದುಕೊಂಡೇ ಅವರು ಮುನ್ನುಗ್ಗುತ್ತಿದ್ದರು.) ಹಾಗೆಯೇ–

ಕಿ ಯಕ ಪೈಸ ಆತೇ ಕೂ ಕರನೇ ಕೂ ಪಸ
    ದಿಸೇ ಫಿರ ಉಸೀ ಏಕ ಕೇ ಜಾಗೇ ಪೋ ದಸ ।

(ಅ.೪. ೫೦)

(ಮುನ್ನುಗ್ಗಿ ಬಂದ ಒಬ್ಬ ಸೈನಿಕ ಅಕಸ್ಮಾತ್ ದಣಿದನೆಂದರೆ ಆ ಸಮಯಕ್ಕೆ ಅವನ ಸ್ಥಳದಲ್ಲಿ ಹತ್ತು ಮಂದಿ ಮರಾಠಾ ಸೈನಿಕರು ಬಂದು ನಿಂತಿರುತ್ತಿದ್ದರು.)

ಹೀಗಿದ್ದುದರಿಂದಲೇ ಆದಿಲಶಾಹಿಯ ಯಾರೇ ಸೇನಾಪತಿಗಳು ಶಿವಾಜಿಯನ್ನು ಎದುರಿಸಬೇಕಾದ ಪ್ರಸಂಗ ಬಂದಾಗ ಸಹಜವೋ ಅಸಹಜವೋ ಅಂತೂ ಇದಕ್ಕೆ ಅವರು ಅದಕ್ಕೆ ಸಿದ್ಧರಾಗಿರುತ್ತಿರಲಿಲ್ಲ. ನುಸ್ರತಿಯು ಹೇಳುವಂತೆ–

ಜೋ ಉಸ್‌ಸೇ ಜಿತೇ ಫೌಜದಾರಾ ಲಡೇ
    ಲುಟೇ ಗಏ ವುತೇ ಯಾ ಸಪಡ ಬಂದ್ ಪಡೇ ।

(ಯಾರ್‍ಯಾರು ಸೇನಾಪತಿಗಳು ಶಿವಾಜಿಯೊಂದಿಗೆ ಹೋರಾಡಿದರೋ ಅವರೆಲ್ಲ ಒಂದೋ ಇಲ್ಲವಾಗುತ್ತಿದ್ದರು. ಇಲ್ಲವೆ ಕಾರಸ್ಥಾನಕ್ಕೆ ತಳ್ಳಲ್ಪಡುವುದೇ ಅವರ ಅಂತಿಮ ಗತಿಯಾಗಿರುತ್ತಿತ್ತು.)

ಮರಾಠರ ಈ ಶೌರ್ಯ ಚಿತ್ರಣ ಬಹಳ ಗಮನಾರ್ಹವಾದುದು. ಮರಾಠಿಯಲ್ಲಾಗಲಿ ಅಥವಾ ಸಂಸ್ಕೃತದಲ್ಲಾಗಲಿ ಬೇರೆ ಯಾವುದೇ ಶಿವಾಜಿಯ ಕಾಲದ ಕಾವ್ಯಗ್ರಂಥಗಳಲ್ಲಿ ಅಥವಾ ಇತಿಹಾಸ ಕೃತಿಗಳಲ್ಲಿ ಮರಾಠರ ಶೌರ್ಯವನ್ನು ಕುರಿತು ಇಷ್ಟೊಂದು ಮಾರ್ಮಿಕವಾಗಿಯೂ, ವಾಸ್ತವವಾಗಿಯೂ ಇರುವ ಚಿತ್ರಣ ಕಾಣಸಿಗುವುದಿಲ್ಲ. ಭಾರತೀಯ ಇತಿಹಾಸದಲ್ಲಿ ಕಳೆದ ಮೂರು ನೂರು ವರ್ಷಗಳ ಕಾಲಖಂಡದಲ್ಲಿ ಮರಾಠರು ಅಪ್ರತಿಮ ಶೌರ್ಯದಿಂದ ಮೆರೆದಿದ್ದಾರೆ ಎಂಬ ಸತ್ಯವನ್ನು ಯಾರೂ ಅಲ್ಲಗಳೆಯಲಾರರು. ಈ ಉಲ್ಲೇಖದಿಂದ ನುಸ್ರತಿಯು ಉದಾರ ಶತ್ರುವಿನ ಹಾಗೆ ಈ ಸತ್ಯವನ್ನು ಮಾನ್ಯ ಮಾಡಿರುವುದು ಇದರಿಂದ ವಿದಿತವಾಗುತ್ತದೆ. ಇಂಗ್ಲಿಷ್, ಡಚ್, ಫ್ರೆಂಚ್, ಪೋರ್ಚುಗೀಸ್, ಮೊಗಲ್, ಆದಿಲಶಾಹಿ ಇವರೆಲ್ಲರೂ ಮರಾಠರಿಗೆ ಶತ್ರುಗಳಾಗಿದ್ದರು. ಆದರೆ ಮರಾಠರಿಂದ ಎಲ್ಲರಿಗಿಂತ ಹೆಚ್ಚು ಹಾನಿ ಅನುಭವಿಸಿದ್ದು ವಿಜಾಪುರದ ಆದಿಲಶಾಹಿಗಳೇ. ಐತಿಹಾಸಿಕ ಹಿನ್ನೆಲೆಯಿಂದ ಗಮನಿಸಿದಾಗ್ಯೂ ನುಸ್ರತಿಯು ಈ ಅಭಿಪ್ರಾಯ ಮಹತ್ವದ್ದಾಗಿದೆ. ನುಸ್ರತಿಯಂತಹ ನಿಷ್ಠಾವಂತ (ಕಟ್ಟರ್) ಶತ್ರುವೂ ಮರಾಠರ ಶೌರ್ಯವನ್ನು ಇಷ್ಟೊಂದು ಸುಂದರವಾಗಿ ಮೆಚ್ಚುಗೆಯಿಂದ ವರ್ಣಿಸಿರುವುದು ಗಮನೀಯ!

ಕಾವ್ಯದರ್ಶನ (ಸಂಹಿತಾ) :

ಡಾ. ಅಬ್ದುಲ್ ಹಕ್ ಅವರ ಅಭಿಪ್ರಾಯದಂತೆ ಈ ಕೃತಿಯ ಒಂದೇ ಒಂದು

ಪ್ರತಿಯು ಮಾತ್ರ ಉಪಲಬ್ಧವಾಗಿರುವುದು ಎಂಬುದನ್ನು ಈ ಮೊದಲೇ ಹೇಳಲಾಗಿದೆ. ಬಹುಶಃ ಈ ಪ್ರತಿಯೂ ಕೂಡ ಅವರ ಬಳಿಯಲ್ಲೇ ಇದ್ದಿರಬೇಕು. ಡಾ.ಹಕ್ ಅವರು ನಿಧನರಾದುದು ಕರಾಚಿಯಲ್ಲಿ. 'ತಾರೀಖೇ–ಅಸಿಕಂದರಿ'ಯ ಪ್ರತಿಯು ಭಾರತದಲ್ಲಿ ಎಲ್ಲಿಯೂ ಉಪಲಬ್ಧವಿಲ್ಲ. ಹಾಗಾಗಿ ಈ ಮೂಲ ಹಸ್ತಪ್ರತಿಯೂ ಕರಾಚಿಯಲ್ಲಿರುವ ಅವರ ಗ್ರಂಥಾಲಯದಲ್ಲಿಯೇ ಇರಬಹುದೆಂದು ಊಹಿಸಲಾಗಿದೆ.

ಪ್ರಸ್ತುತ ಕೃತಿ ಸಂಪಾದನೆಯು ಡಾ. ಹಕ್ ಅವರ 'ಮುಲ್ಲಾ ನುಸ್ರತಿ'ಯನ್ನೇ ಆಧರಿಸಿದೆ. ಕೇವಲ ಈ ಕೃತಿಯೊಂದು ಮಾತ್ರವೇ 'ತಾರೀಖೇ–ಅಸಿಕಂದರಿ'ಯ ಬಗ್ಗೆ ಮಾಹಿತಿಯನ್ನು ಒದಗಿಸುವುದಾಗಿದೆ. ಭಾರತೀಯ ಇತಿಹಾಸ ಸಂಶೋಧನ ಮಂಡಳಿಯ ಪುಣೆಯ ಮೇಲ್ವಿಚಾರಕ ಪ್ರಾಧ್ಯಾಪಕ ಗಣೇಶ ಹರಿ ಖರೆಯವರು ಶಿವಾಜಿ ಮತ್ತು ಅವನ ಸಮಕಾಲೀನ ಮಹಾರಾಷ್ಟ್ರದ ಇತಿಹಾಸದ ಬಗೆಗಿನ ವಿದ್ವಾನ್ ಮಾನ್ಯ ಸಂಶೋಧಕರಾಗಿದ್ದಾರೆ. ಅವರು ತಮ್ಮ ಶಿವಚರಿತ್ರ ಸಂಶೋಧನ ವೃತ್ತ (ಶಕ ೧೮೭೮) ಎಂಬ ಕಿರು ಹೊತ್ತಿಗೆಯಲ್ಲಿಯೂ ಐತಿಹಾಸಿಕ ದೃಷ್ಟಿಯಿಂದ ಪ್ರಸ್ತುತ ಕೃತಿಯ ಸಾರಾಂಶವನ್ನು ನೀಡಿದ್ದಾರೆ. ಆ ಕೃತಿಗೂ ಸಹ ಡಾ. ಅಬ್ದುಲ್ ಹಕ್ ಅವರ 'ಮುಲ್ಲಾ ನುಸ್ರತಿ' ಕೃತಿಯೇ ಆಧಾರ. ಈ ಕಾವ್ಯದ ಮೂಲ ಪ್ರತಿಯನ್ನು ಕರಾಚಿಯಿಂದ ತರಿಸಿಕೊಳ್ಳುವ ಪ್ರಯತ್ನ ಮಾಡಿದೆನಾದರೂ ಸಾಧ್ಯವಾಗಲಿಲ್ಲ. ಆ ಕಾರಣ ಡಾ. ಹಕ್ ಅವರ ಗ್ರಂಥವಷ್ಟೇ ನನ್ನ ಈ ಸಂಹಿತೆಗೆ ಮುಖ್ಯ ಆಧಾರವಾಗಿದೆ.

ಈ ಕಾವ್ಯವು ಮೂಲತಃ ೫೫೪ ಬೈತ್, ಜೋಡಿ ಅಥವಾ ದ್ವಿಪಜ್ತೆಯುಳ್ಳದ್ದಾಗಿದೆ. ಡಾ. ಹಕ್ ಅವರು 'ಮುಲ್ಲಾ ನುಸ್ರತಿ' ಎಂಬ ತಮ್ಮ ಕೃತಿಯಲ್ಲಿ ೨೨೮ ದ್ವಿಪಜ್ತೆಗಳನ್ನಷ್ಟೇ ಉದ್ಧೃತಗೊಳಿಸಿದ್ದಾರೆ. ಅದರಲ್ಲಿಯೂ ಎರಡು ಅಪೂರ್ಣವಾಗಿವೆ. ಮೂರನೆಯ ಅಧ್ಯಾಯದಲ್ಲಿನ ಎಂಟನೆಯ ಸಾಲು ಮತ್ತು ಮೂರನೆಯ ಅಧ್ಯಾಯದ ಮೊದಲ ಸಾಲಿನ ಅರ್ಧ ಭಾಗವಷ್ಟೆ ಇವೆ. ಇಲ್ಲಿಯೂ ಅವುಗಳನ್ನು ಆ ಸ್ವರೂಪದಲ್ಲಿಯೇ ಉಳಿಸಿಕೊಳ್ಳಲಾಗಿದೆ.

ಡಾ. ಹಕ್ ಅವರು ಕಾವ್ಯದ ಸಾರಾಂಶವನ್ನು ಕೊಡುವಾಗ ಅನೇಕ ಕಡೆಗಳಲ್ಲಿ ಇಲ್ಲಿಗೆ ಮೊದಲ ಅಧ್ಯಾಯದ ಮುಕ್ತಾಯ, ಇಲ್ಲಿ ಯುದ್ಧ ಮುಗಿಯಿತು ಎಂದು ಹೇಳಿದ್ದಾರೆ. ಹಾಗೆಯೇ ೨೬೪ನೆಯ ಪುಟದಲ್ಲಿ ಅವರು ಕೊನೆಯ ಅಧ್ಯಾಯವು ಮುಗಿಯಿತು ಎಂದು ಹೇಳಿರುವುದರಿಂದ ಇಲ್ಲಿ ಐದು ಅಧ್ಯಾಯಗಳಲ್ಲಿ ಒಟ್ಟಾರೆ ೨೨೮ ಸಾಲುಗಳನ್ನಷ್ಟೇ ಕೊಡಲಾಗಿದೆ.

ಕಾವ್ಯದ ಭಾಷೆ :

ನುಸ್ರತಿಯು ತನ್ನ ಕಾವ್ಯ ಭಾಷೆಯನ್ನು ಯಾವ ಹೆಸರಿನಿಂದ ಕರೆಯುತ್ತಿದ್ದನೆಂಬ ವಿಚಾರವು ಈ ಗ್ರಂಥದಲ್ಲಿ ಲಭಿಸುವುದಿಲ್ಲ. ಇದೊಂದು ತುಂಬಾ ಚಿಕ್ಕ ಕಾವ್ಯ.

ಅಲ್ಲದೆ ನುಸ್ರತಿಯು ಹೇಳಿರುವಂತೆ ಅದರ ಭಾಷೆ 'ಸರಸರಿ' (ಅ.೧.೭) ಎಂದಾಗಿರುವುದರಿಂದ ಅವನು ಸ್ವತಃ ತನ್ನ ಭಾಷೆಯ ಬಗ್ಗೆ ಮಾತ್ರ ಏನನ್ನು ಹೇಳಿಲ್ಲ. ಅವನು ತನ್ನ 'ಗುಲಶನೇ-ಇಶ್ಕ' ಎಂಬ ಕಥನ ಕಾವ್ಯದಲ್ಲಿ ತನ್ನ ಭಾಷೆಗೆ 'ಹಿಂದಿ' ಎಂಬುದಾಗಿ ಅವನೇ ನಾಮಾಭಿದಾನ ನೀಡಿದ್ದಾನೆ.

ಫಸಾಹತ ಮೇ ಗರ ಫಾರಸೀ ಖುಶಕಲಾಮ
ಧರೇ ಫಖ್ರ ಹಿಂದಿ ಬಚನ ಪರ ಮುದಾಮ । (ಅ.೪೩. ೬೯)

ವಗರ ಶಿಅರ ಹಿಂದಿ ಬಾಜೇ ಹುನರ
ನ ಸಕತೇ ಲಿಯಾ ಮೇ ಸಂವರ । (ಅ.೪೩. ೭೦)

ದೇವೇ ದಾದ ಸುನ ಫಾರಸೀ ಶಿಅರ-ದಾಂ
ಜೋ ಹಿಂದಿ ಸುನೇ ತೋ ಕಹೇ ದಿಲ್ ಸೂಂ ಹಾಂ ।(ಅ.೪೩. ೭೨)

ಇಲ್ಲಿ ಅವನು ತನ್ನ ಹಿಂದಿ ಭಾಷೆಯನ್ನು ಫಾರ್ಸಿ ಭಾಷೆಯೊಂದಿಗೆ ಹೋಲಿಸಿರುವನು. 'ಅಲೀನಾಮಾ' ಎಂಬ ಮಹಾಕಾವ್ಯದಲ್ಲಿ ಅವನು ಹೀಗೆ ಹೇಳಿದ್ದಾನೆ.-

ಕಹೇ ಹಿಂದಿಯಾ ಗರಚಿ ಫನ ಸೂಂ ಬುಲಂದ
ಕಿತಕ ವಿರ್ದ ಕಡಕೇ ಕಿತಕ ಸಾಕ ಛಂದ । (ಅ.೭. ೧೨೨)

ಬುಜುರ್ಗೀ ಹೈ ಹಿಂದಿ ಮೇ ಅಕ್ಸರ ಸಿಕಾಈ
ವಗರ ನೈ ತೋ ಮಜ್ಮೂನ್ ಕೀ ಕಾ ಬಡಾಈ । (ಅ.೭.೧೨೬)

ಅಗರ ಕೋಇ ಹೋ ಮಾನೀ ಕೂ ಕರ ಆರಸೀ
ಪಡೇ ರಿಜ್ಮಯಾ ಹಿಂದಿ ಯಾ ಫಾರಸೀ । (ಅ.೭.೧೩೩)

ಈ ಆಧಾರದಿಂದ ನುಸ್ರತಿಯು ತನ್ನದು ಹಿಂದಿ ಭಾಷೆಯೆಂದು ಹೇಳುತ್ತಿದ್ದಾನೆಂಬುದು ಸ್ಪಷ್ಟವಾಗುತ್ತದೆ.

ನುಸ್ರತಿಯು ತನ್ನ ಭಾಷೆಯನ್ನು 'ದಖನಿ' ಎಂಬ ಹೆಸರಿನಿಂದ ಕರೆಯಲು ಇಚ್ಛಿಸುತ್ತಿರಲಿಲ್ಲ. ಅವನ ಪ್ರಕಾರ ಅವನದು ಹಿಂದಿ ಭಾಷೆಯೇ. 'ದಖನಿ' ಅಥವಾ 'ದಕ್ಖಿನ' ಎಂಬ ಭಾಷೆಯ ಬಗ್ಗೆ ಆಗ ಒಳ್ಳೆಯ ಅಭಿಪ್ರಾಯವು ಇರಲಿಲ್ಲವೆಂಬುದು ಇದರಿಂದ ತಿಳಿಯುತ್ತದೆ. ಹಾಗಾಗಿಯೇ ಆತ ತನ್ನ ಭಾಷೆಯನ್ನು 'ಹಿಂದಿ'ಯೆಂದೇ ಕರೆದಿದ್ದಾನೆ. ಅವನ ವಿರೋಧಿಗಳು ಅವನನ್ನು ಹೀಯಾಳಿಸುವುದಕ್ಕಾಗಿ ಅವನದು 'ದಖನಿ' ಭಾಷೆ ಎಂದು ಹೇಳುತ್ತಿದ್ದರು ಎಂಬುದಾಗಿಯೂ ಉಲ್ಲೇಖಿಸಿದ್ದಾನೆ.

ಅದೇಖ್ಯಾ ಅದಿಕ ಹೋ ಹಸದ ಸೂ ಕಬಾಬ
ರಖೇ ಬೋಲ ಇತನಾ ಕಿ ದಖನೀ ಕಿತಾಬ। (ಗುಲ್‌ಶನೇ–ಇಶ್ಕ, ಅ.೪೩. ೭೩)

'ಬಸಾತೀನುಸ್ಸಲಾತೀನ' ಎಂಬ ಆದಿಲಶಾಹಿ ಇತಿಹಾಸವನ್ನು ಕುರಿತ ಫಾರ್ಸಿ ಭಾಷೆಯ ಕೃತಿಯಲ್ಲಿ ಲೇಖಕ ಮಿರ್ಜಾ ಮಹಮದ್ ಜುಬೇರಿ 'ಬಿಜಾಪುರಿ' (ಶಕ ೧೭೪೦) ಯನ್ನು ಬಿಟ್ಟರೆ ಯಾರೂ 'ತಾರೀಖೇ–ಅಸಿಕಂದರಿ' ಕಾವ್ಯವನ್ನು ಉಲ್ಲೇಖಿಸಿಲ್ಲ. ಜುಬೇರಿ ಮಾತ್ರ ೧೫೦ ವರುಷಗಳ ನಂತರವೂ ತನ್ನ ಐತಿಹಾಸಿಕ ಕೃತಿಯಲ್ಲಿ ಈ ಕಾವ್ಯವನ್ನು ಉಲ್ಲೇಖಿಸಿ ಇತಿಹಾಸ ಲೇಖನಕ್ಕೆ ಆಧಾರಭೂತವಾದ ಗ್ರಂಥವೆಂದು ಒಪ್ಪಿಕೊಂಡಿದ್ದಾನೆ. ಅಲ್ಲದೆ ಮಿಯಾ ನುಸ್ರತಿಯು 'ತಾರೀಖೇ–ಅಸಿಕಂದರಿ' ಕಾವ್ಯವನ್ನು ಹಿಂದಿ ಭಾಷೆಯಲ್ಲಿ ಬರೆದಿದ್ದಾನೆ ಎಂಬುದಾಗಿಯೂ ಹೇಳಿದ್ದಾನೆ. "ಮಲ್ಲಿಕುಶ್ಯಾರಾ ಮಿಯಾ ನುಸ್ರತಿ ದರ್ ತಾರೀಖೇ–ಅಸಿಕಂದರಿ ಕಿ ಬ–ಜಬಾನೆ ಹಿಂದಿ ಮಜ್ಮಆ ಪರ್ದಾಖ್ತಾ ಅಸ್ತ ಕಿ ಖ–ಜಂಗೇ–ಉಮರಾನ್ ಮಶ್ಹೂರ್ ಗಶ್ತಹ ಅಸ್ತ ದಾದೇ ತಹ್ವುರ –ವ–ಶುಜಾಅತೇ–ಅಬ್ದುಲ್ ಕರೀಮ್ ಖಾನ್ ವ ಸುಖನ್ವರೀಎ–ಫಸಾ–ಹತೋ ಬಲಾಗತೇ ಖ್ವೇಶ್ ಆಂಚುನಾ ದಾದಹ್ ಆಸ್ತ ಕಿ ಸುಖಂದಾನಾ ನೇ – ಇನ್ಸಾಫ್ ಕೇಶ ವ ಹುನರ್ ಶಿನಾಸಾ ನೇ ಮಾನೀ – ಅಂದೇಶ ಗೋಹರಾಎ–ತಹಸೀನ ವ ತಾಲೀಎ–ಆಫರೀನ್ ಬರಾ ನಿಸಾರ ಮೇ ಕುನದ!"

("ಮಿಯಾ ನುಸ್ರತಿಯು ಹಿಂದಿ ಭಾಷೆಯಲ್ಲಿ ರಚಿಸಿರುವ ಕಾವ್ಯ 'ತಾರೀಖೇ–ಅಸಿಕಂದರಿ'. ಅದು ಉಮ್ರಾಣಿಯ ಯುದ್ಧದಲ್ಲಿ ಅಬ್ದುಲ್ ಕರೀಮ್ ಬಹಲೋಲಖಾನನು ತೋರಿಸಿದ ಯುದ್ಧ ನೈಪುಣ್ಯತೆ ಮತ್ತು ಶೌರ್ಯವನ್ನು ಕುರಿತ ವರ್ಣನೆಯಾಗಿದೆ. ಈ ಕಾವ್ಯದಲ್ಲಿ ಕವಿಯ ಪ್ರಸಾದ ಮತ್ತು ಓಜೋ ಗುಣವು ಎದ್ದು ಕಾಣುತ್ತದೆ. ಹಾಗಾಗಿಯೇ ನ್ಯಾಯ ಪ್ರವೃತ್ತರಾದ ಸಾಹಿತ್ಯ ವಿದ್ವಾಂಸರು ಮತ್ತು ಕಲಾಭಿಜ್ಞ ಸಾಹಿತ್ಯ ಪ್ರೇಮಿಗಳು ಅದನ್ನು ಸ್ತುತಿಸಿರುವುದು. ಅದರ ಗುಣಗ್ರಹಣತೆಯ ಕಾರಣ ಮುತ್ತಿನ ಹೂವುಗಳು ಚೆಲ್ಲಿ ಬಿಡುವವೋ ಎನೋ ಎಂಬ ಅಪೇಕ್ಷೆಯು ಇದೆ").

ಭಾಷೆಯ ಸ್ವರೂಪ :

ದಖನಿ ಹಿಂದಿ ಎಂಬುದು ನವೀನ ಆರ್ಯಭಾಷಾ–ವಂಶಕ್ಕೆ ಸೇರಿದ ಪಶ್ಚಿಮಿ ಹಿಂದಿಯ ಒಂದು ಆಡುನುಡಿಯಾದ ಕೌರವಿ ಅಥವಾ ರೂಕ್ಷ ನುಡಿಯ ವಿಕಸಿತ ರೂಪವಾಗಿದೆ. ಈ ಅಭಿಪ್ರಾಯವನ್ನು ಈಗ್ಗೆ ಎಲ್ಲ ವಿದ್ವಾಂಸರು ಮತ್ತು ಭಾಷಾತಜ್ಞರು ಮಾನ್ಯ ಮಾಡಿದ್ದಾರೆ. ಈ ಹಿಂದೆ ಈ ಭಾಷೆಯ ಮೂಲದ ಬಗ್ಗೆಯೇ ಭಿನ್ನಾಭಿಪ್ರಾಯವಿತ್ತು. ಕೆಲವು ಮುಸಲ್ಮಾನ ವಿದ್ವಾಂಸರು ಅಭಿಪ್ರಾಯ ಪಟ್ಟಿರುವಂತೆ ಅನೇಕ ಆಡುಭಾಷೆಗಳ ಮಿಶ್ರಣದಿಂದ 'ದಖನಿ' ಭಾಷೆಯು ರೂಪಗೊಂಡಿದೆ. ಮತ್ತೆ ಕೆಲವರು ದಖನಿಗೆ ಮೂಲ ಬ್ರಜ್ ಎಂದೂ ಹೇಳಿರುವುದುಂಟು. ಆದರೆ ಒಂದು

ನೂರು ವರುಷಗಳಾದ ನಂತರ ಈಗ್ಗೆ ಏಕಾಭಿಪ್ರಾಯಕ್ಕೆ ಬರಲಾಗಿದೆ. ಅದರ ಪ್ರಕಾರ ದಖನಿಯು ಹುಟ್ಟಿದ್ದು ದೆಹಲಿ ಮತ್ತು ಅದರ ಸುತ್ತಮುತ್ತಣ ಪ್ರದೇಶಗಳಲ್ಲಿ. ಈ ವಿದ್ವಾಂಸರಲ್ಲಿ ಪೂರ್ವ ಪಾಕಿಸ್ಥಾನದಲ್ಲಿನ ಢಾಕಾ ನಿವಾಸಿಯಾದ ಡಾ. ಶೌಕತ್ ಸಬ್ಜಾವಾರಿ ಮತ್ತು ಅಲೀಗಢದ ವಿದ್ವಾಂಸರ ವಿಶೇಷ ಸಂಗತಿಯೂ ಉಲ್ಲೇಖನಾರ್ಹ.

ದಖನಿ ಹಿಂದಿಯಲ್ಲಿ ಸಾಹಿತ್ಯ ಸಂಪತ್ತು ಸಮೃದ್ಧವಾಗಿದೆ. ಮುಲ್ಲಾ ನುಸ್ರತಿ, ವಲೀ ಔರಂಗಾಬಾದಿ, ಗವಾಸಿ, ಮುಲ್ಲಾ ವಜಹಿ ಅವರುಗಳಂಥ ಕವಿ ರತ್ನಗಳು ದಖನಿ ಹಿಂದಿಯಲ್ಲಿ ಪ್ರಮುಖರು. ಅವರ ಕೆಲವು ಸಾಹಿತ್ಯ ಕೃತಿಗಳು ಈಗ್ಗೆ ಫಾರ್ಸಿ ಲಿಪಿಯಲ್ಲಿಯೂ, ಮತ್ತೆ ಕೆಲವು ದೇವನಾಗರಿ ಲಿಪಿಯಲ್ಲಿಯೂ ಪ್ರಕಟವಾಗಿವೆ. ಈ ಕವಿಗಳ ಕಾವ್ಯಗಳನ್ನು ಅಭ್ಯಸಿಸಿದಾಗ ಕಂಡುಬರುವ ಸಂಗತಿಯೆಂದರೆ, ಅವರ ಭಾಷೆಯಲ್ಲಿನ ಅಧಿಕಾಂಶದ ಶಬ್ದಗಳು ಸಂಸ್ಕೃತದ ತತ್ಸಮ ಇಲ್ಲವೆ ತದ್ಭವ ರೂಪಗಳಾಗಿರುವುದು. ನವೀನ ಆರ್ಯ ಭಾರತೀಯ ಕುಟುಂಬದಲ್ಲಿನ ಇತರ ಭಾಷೆಗಳಂತೆ ಈ ಭಾಷೆಯಲ್ಲಿಯೂ ದೇಶೀ ಶಬ್ದಗಳೇ ಹೇರಳ ಪ್ರಮಾಣದಲ್ಲಿವೆ. ತತ್ಸಮ, ತದ್ಭವ ಮತ್ತು ದೇಶೀ ಶಬ್ದಗಳೇ ಇದರಲ್ಲಿ ಶೇಕಡ ಎಂಬತ್ತರಷ್ಟಿದ್ದು, ಉಳಿದುವು ಮಾತ್ರ ಫಾರ್ಸಿ ಮತ್ತು ಅರೇಬಿಯನ್ ಶಬ್ದಗಳು. ದಖನಿಯ ಆರಂಭ ಕಾಲದಲ್ಲಿ ಫಾರ್ಸಿ ಶಬ್ದಗಳ ಪ್ರಮಾಣವು ಹೆಚ್ಚಾಗಿತ್ತು. ಆದಾಗ್ಯೂ ಇವುಗಳ ಸಂಖ್ಯೆ ಶೇಕಡ ಹದಿನೈದು, ಇಪ್ಪತ್ತಕ್ಕಿಂತಲೂ ಹೆಚ್ಚಾಗಿಲ್ಲ.

ಇತರ ಭಾಷೆಗಳಂತೆಯೇ ದಖನಿಯ ಶಬ್ದ ಭಂಡಾರವು ಸಂಸ್ಕೃತ ಹಾಗೂ ಅಪಭ್ರಂಶ ಭಾಷೆಗಳನ್ನು ಅವಲಂಬಿಸಿದೆ. ಹಾಗೆಯೇ ದಖನಿಯ ಮೇಲೆ ಮರಾಠಿ ಭಾಷೆಯ ಗಾಢ ಪ್ರಭಾವವೂ ಉಂಟು. ಮಹಾರಾಷ್ಟ್ರ ಮತ್ತು ಆ ಪರಿಸರದಲ್ಲಿಯೇ ಸುಮಾರು ನಾಲ್ಕುನೂರು–ಐದುನೂರು ವರ್ಷಗಳ ಕಾಲ ದಖನಿಯ ಪಾಲನೆ, ಪೋಷಣೆಯೊಂದಿಗೆ ಅದರ ಸಂವರ್ಧನೆಯಾದುದು ಗಮನಾರ್ಹ. ಹೀಗಿರುವಾಗ ದಖನಿಯ ಮೇಲೆ ಮರಾಠಿ ಭಾಷೆಯ ಪ್ರಭಾವ ಆಗದೆ ಇರುವುದಕ್ಕೆ ಸಾಧ್ಯವಿಲ್ಲ. ಮರಾಠಿಯ ಸಂಪರ್ಕದಿಂದಲೇ ಆ ಭಾಷೆಗೆ ಹೆಚ್ಚಿನ ಸಮೃದ್ಧಿಯು ಬಂದಿತು. ದಖನಿ ಮತ್ತು ಮರಾಠಿ ಭಾಷೆಗಳೆರಡನ್ನೂ ಒಂದೇ ಮಹಾನ್ ಕುಲದ ಕನ್ಯೆಗಳು ಎಂದು ಹೇಳಲಾಗಿದೆ. ಅಪಭ್ರಂಶ ಭಾಷೆಯೇ ಇವೆರಡಕ್ಕೂ ಜನನಿ.

ಭಾರತೀಯ ಸಂವಿಧಾನದ ೩೫೧ನೆಯ ಪರಿಚ್ಛೇದದಲ್ಲಿ 'ರಾಷ್ಟ್ರಭಾಷೆ'ಯನ್ನು ಇತರೆಲ್ಲ ಪ್ರಾದೇಶಿಕ ಭಾಷೆಗಳ ಮೂಲಕವೇ ಸಂಪನ್ನಗೊಳಿಸಬೇಕು ಎಂದು ಆದೇಶಿಸಲಾಗಿದೆ. ದಖನಿ ಹಿಂದಿಯು ನಾಲ್ಕುನೂರು ವರುಷಗಳ ಹಿಂದೆಯೇ ಸ್ವಯಂ ಸ್ಫೂರ್ತಿಯಿಂದ ಈ ಮಾರ್ಗದಲ್ಲಿಯೇ ತನ್ನ ಔನ್ನತ್ಯವನ್ನು ಸಾಧಿಸಿತ್ತು ಎಂಬುದು ಆಶ್ಚರ್ಯಚಕಿತವೂ, ಆನಂದದಾಯಕವೂ ಆದ ಸಂಗತಿಯಾಗಿದೆ. ನುಸ್ರತಿ, ವಜಹಿ,

ಗವಾಸಿ ಮತ್ತಿತರೆ ಹಲವಾರು ಕವಿಗಳ ಸಾಹಿತ್ಯವನ್ನು ಗಮನಿಸಿದರೆ ಈ ವಾಸ್ತವ ಸಂಗತಿಯು ಸಹಜವಾಗಿಯೇ ಅರಿವಿಗೆ ಬರುತ್ತದೆ.

ಕೆಲವು ಶಬ್ದಗಳು ತದ್ಭವವಾಗಿರುವುದರಿಂದ ಅವುಗಳೆಲ್ಲವು ಸಂಸ್ಕೃತೋತ್ಪನ್ನ ಎಂದು ಹೇಳಬೇಕಾಗುವುದು. ಆದರೆ ಅವು ಕಾಣಸಿಗುವುದು ಮರಾಠಿಯಲ್ಲಿ ಮಾತ್ರ. ಈ ಕೆಲವು ಶಬ್ದಗಳು ಮರಾಠಿಗಷ್ಟೇ ವಿಶಿಷ್ಟವಾದವು – ಬೇಡ (ನಕೋ), 'ಚ' (ಪುಷ್ಠರ್ಥಕ ಪ್ರತ್ಯಯ), ಅಧಿಕ (ಲಈ), ಇನ್ನು (ಅಜೂನ್, ಆಝೂನ್)– ಇಂತಹ ಅನೇಕ ಶಬ್ದಗಳು ಮರಾಠಿಯವುಗಳಾದರೂ ದಖನಿ ಹಿಂದಿಗೂ ಆವಶ್ಯಕವಾದವುಗಳಾಗಿವೆ. ಈ ಶಬ್ದಗಳನ್ನು ಬೇರೆ ಇನ್ನಾವುದೇ ಭಾಷೆಯಲ್ಲಿಯೂ ಕಾಣುವುದಕ್ಕೆ ಸಾಧ್ಯವಿಲ್ಲ. ಮರಾಠಿಯಿಂದಾಗಿ ದಖನಿಯಲ್ಲಿಯೂ ಕೆಲವು ಧ್ವನ್ಯಾತ್ಮಕ ಬದಲಾವಣೆಗಳು ಉಂಟಾಗಿವೆ. ದಖನಿಯಲ್ಲಿ ಮರಾಠಿ ಶಬ್ದಗಳ ಪ್ರಮಾಣವು ಸುಮಾರು ಶೇಕಡ ನಾಲ್ಕೈದರಷ್ಟಿವೆ. ಕೆಲವು ಮರಾಠಿ ವಾಕ್ಯಗಳು ಮತ್ತು ಹೇಳಿಕೆಗಳು ದಖನಿಯಲ್ಲಿಯೂ ಬಂದಿವೆ. ಮರಾಠಿ ವ್ಯಾಕರಣದ ಕೆಲವು ವೈಶಿಷ್ಟ್ಯಗಳು ದಖನಿ ಹಿಂದಿಯ ಶ್ರೇಷ್ಠ ವಿದ್ವಾಂಸರುಗಳ ಜಿಹ್ವಾಗ್ರದಲ್ಲಿ ನಲಿದಾಡುತ್ತಿದ್ದುದನ್ನು ಕಾಣಬಹುದಾಗಿದೆ. ಕೇವಲ ಮರಾಠಿಗೆ ಮಾತ್ರ ಸೀಮಿತವೆಂದು ಗುರುತಿಸಲಾಗಿರುವ ಸಂಭಾಷಣೆಯ ಪ್ರಕಾರ ಮತ್ತು ಅರ್ಥ, ವ್ಯಕ್ತಿ ವಿಶೇಷಣಗಳೂ ದಖನಿ ಭಾಷೆಯಲ್ಲಿವೆ. ಅಖಿಲ ಭಾರತೀಯ ಪ್ರಾಚ್ಯ ವಿದ್ಯಾಪರಿಷತ್ತಿನ ಗೌಹಾತಿಯ ಸಮ್ಮೇಳನದಲ್ಲಿ (ಶಕ ೧೮೮೬) ಈ ಕುರಿತು ನಾನು ಮಂಡಿಸಿದ ಪ್ರಬಂಧ ಹಾಗೂ 'ರಾಷ್ಟ್ರವಾಣಿ' (ಪುಣೆ)ಯ ಜೂನ್ ೧೯೬೩ರ ಸಂಚಿಕೆಯಲ್ಲಿ ಪ್ರಕಟವಾದ ನನ್ನ ಲೇಖನವನ್ನು ಜಿಜ್ಞಾಸುಗಳು ಗಮನಿಸಬಹುದು.

ಬ್ರಜ್ ಭಾಷೆಯು ಅವಧೀ ಭಾಷೆಯ ಮೇಲೆಯೂ ಮತ್ತು ಅವಧಿಯು ಬ್ರಜ್ ಭಾಷೆಯ ಮೇಲೆಯೂ ಪರಸ್ಪರ ಪ್ರಭಾವ ಬೀರಿವೆ. ಅಂತೆಯೇ ದಖನಿಯ ಮೇಲೆ ಅವಧೀ, ಬ್ರಜ್ ಭಾಷೆಗಳ ಪ್ರಭಾವವೂ ಇದೆ. ದಖನಿಯಲ್ಲಿ ದ್ವಿತೀಯ ಮತ್ತು ಚತುರ್ಥಿ ವಿಭಕ್ತಿ ಪ್ರತ್ಯಯಗಳಲ್ಲಿ ಕೂ, ಕೋಗಳ ಪ್ರಯೋಗ ಮಾಡಲಾಗುತ್ತಿದ್ದು, ಅದು ಬ್ರಜ್ ಭಾಷೆಯ ಪರಿಸರ್ಗದಿಂದ ಬಂದುದಾಗಿದೆ.

ಅದರಂತೆಯೇ ದಖನಿಯು ತೃತೀಯ ವಿಭಕ್ತಿ ಪ್ರತ್ಯಯ 'ನೇ' ಅಥವಾ 'ನೈ'ಗಳನ್ನು ಮರಾಠಿಯಿಂದ ಸ್ವೀಕರಿಸಿದೆ. ಬ್ರಜ್ ಮತ್ತು ಅವಧಿಯಲ್ಲಿ ತೃತೀಯೇಯ ಪ್ರತ್ಯಯಗಳು ಇಲ್ಲ. 'ನೇ' ಪ್ರತ್ಯಯವನ್ನು ಕುರಿತು ಭಾರತೀಯ ಪ್ರಾಚ್ಯ ವಿದ್ಯಾಪರಿಷತ್ತಿಗೆ ಅಲೀಗಢ ಅಧಿವೇಶನದಲ್ಲಿ ನಾನೊಂದು ಪ್ರಬಂಧವನ್ನು ಮಂಡಿಸಿದ್ದೆನು. ಪರಿಷತ್ತಿನ ೧೯೬೬ರ ವರದಿಯಲ್ಲಿ ಅದರ ಸಮಾವಿಷ್ಟವಾಗಿದೆ. ಅವಧಿಯಂತೆಯೇ ದಖನಿಯಲ್ಲಿಯೂ ತೃತೀಯ ವಿಭಕ್ತಿ ಪ್ರತ್ಯಯವಾಗಿ 'ಸೇ, ಸೇತೇ, ಸಿತೇ–ಸೀತೇ, ಥೇ'

ಈ ಪರಿಸರ್ಗಗಳನ್ನು ಬಳಸಲಾಗುತ್ತದೆ. ಹಾಗೆಯೇ ದಖನಿಯು ಅವಧಿ ಭಾಷೆಯ 'ಕಾ, ಕೇರಾ–ರೀ–ರೇ' ಈ ಷಷ್ಠಿ ವಿಭಕ್ತಿಯ ಪ್ರತ್ಯಯದಲ್ಲಿ 'ಸೇ, ಸೇತೇ, ಸಿತೇ–ಸೀತೇ, ಥೇ' ಈ ಪರಿಸರ್ಗಗಳನ್ನು ಪ್ರಯೋಗಿಸಲಾಗಿದೆ. ಅದರಂತೆಯೇ ದಖನಿಯು ಅವಧಿ ಭಾಷೆಯಿಂದ 'ಕಾ, ಕೇರಾ–ರೀ–ರೇ' ಈ ಷಷ್ಠಿ ವಿಭಕ್ತಿ ಪ್ರತ್ಯಯಗಳನ್ನು ಸ್ವೀಕರಿಸಿದೆ. ರಾಜಸ್ಥಾನಿ ಮತ್ತು ಗುಜರಾತಿ ಭಾಷೆಗಳಂತೆಯೇ ದಖನಿಯಲ್ಲಿಯು 'ತೆ, ತೇಂ, ಥೇ' ಇವು ಪಂಚಮಿಯ ಪ್ರತ್ಯಯಗಳಾಗಿವೆ. ಇದಕ್ಕಾಗಿ 'ಮರಾಠಿ ಮತ್ತು ದಖನಿ ಹಿಂದಿ' ಎಂಬ ನನ್ನ ಕೃತಿಯನ್ನು ನೋಡಬಹುದು.

'ತಾರೀಖೇ – ಅಸಿಕಂದರಿ' ಕಾವ್ಯದಲ್ಲಿ ಕಂಡುಬರುವ ಮರಾಠಿ ಶಬ್ದಗಳ ಒಂದು ಕೋಶವನ್ನು ಸಿದ್ಧಪಡಿಸಿ ಈ ಕಾವ್ಯದ ಕೊನೆಯಲ್ಲಿ ಸೇರಿಸಲಾಗಿದೆ. ಈ ಕಾವ್ಯದಲ್ಲಿ ಕೇವಲ ೨೨೮ ದ್ವಿಪದಿ (ಬೈತ್)ಗಳಿದ್ದು, ಅದರಲ್ಲಿ ಸುಮಾರು ನೂರರಲ್ಲಿ ಕೇವಲ ಮರಾಠಿ ಶಬ್ದಗಳು ಮಾತ್ರವೇ ಇವೆ. ಬಹುಶಃ ಅವುಗಳಲ್ಲಿ ಕೆಲವನ್ನು ಬ್ರಜ್, ಅವಧಿ ಇತ್ಯಾದಿ ಹಿಂದಿಯ ಉಪಭಾಷೆಗಳಲ್ಲಿಯೂ ಬಳಸುತ್ತಿದ್ದಿರಬಹುದು. ಆರಂಭದ ಮರಾಠಿ ಲೇಖಕರು ಈ ಶಬ್ಧಗಳನ್ನು ತಮ್ಮ ವಾಙ್ಮಯದಲ್ಲಿ ಪ್ರಯೋಗಿಸಿರುವುದುಂಟು. ಇದರಲ್ಲಿನ ಬಹಳಷ್ಟು ಶಬ್ದಗಳು ಇಂದಿಗೂ ಗ್ರಾಂಥಿಕ ಹಾಗೂ ಗ್ರಾಮ್ಯ ಮರಾಠಿಯಲ್ಲಿ ಪ್ರಚುರವಾಗಿವೆ. ಜ್ಞಾನೇಶ್ವರನ ಜ್ಞಾನೇಶ್ವರಿ; ಭಾಸ್ಕರಭಟ್ಟ ಬೋರಿಕರ ಕೃತ ಶಿಶುಪಾಲ ವಧ, ನರೇಂದ್ರನ ರುಕ್ಮಿಣಿ– ಸ್ವಯಂವರ, ಕೃಷ್ಣಾಜಿ ಅನಂತ ಸಭಾಸದರು ಬರೆದ ಶಿವಾಜಿಯ ಚರಿತ್ರೆ ಈ ಎಲ್ಲಾ ಕೃತಿಗಳೊಡನೆ ಈ ಶಬ್ದಗಳ ಸಂಬಂಧವಿರುವುದನ್ನು ಸಂದರ್ಭ ಸೂಚಿಯಲ್ಲಿ ಗುರುತಿಸಲಾಗಿದೆ. ಫಾರ್ಸಿ–ಅರಬೀ ಶಬ್ದಕೋಶವೂ ಇದರೊಡನೆ ಸೇರಿಕೊಂಡಿದೆ. ಅಲ್ಲದೆ ಫಾರ್ಸಿ ಶಬ್ದಗಳ ವ್ಯುತ್ಪತ್ತಿಯನ್ನು ಗುರುತಿಸಲಾಗಿದೆ. ಹಾಗೆಯೇ ಜಯರಾಮ ಕವಿಯ 'ಪರ್ಣಾಲ ಪರ್ವತ–ಗ್ರಹಣಾಖ್ಯಾನ' ಕಾವ್ಯದ ಐದನೆಯ ಪ್ರಕರಣವನ್ನು ಇಲ್ಲಿ ಭಾಷಾಂತರದೊಂದಿಗೆ ಸೇರಿಸಲಾಗಿದೆ. ಅದರಲ್ಲಿ ಉಮ್ರಾಣಿಯ ಯುದ್ಧದ ವರ್ಣನೆ ಇದೆ. ಈ ಎಲ್ಲಾ ಸಾಮಗ್ರಿಗಳು ಅಧ್ಯಯನಾಸಕ್ತರಿಗೆ ಉಪಯುಕ್ತವಾಗುವುದೆಂದು ಆಶಿಸುತ್ತೇನೆ.

ಮುಂಬಯಿ,
ಶ್ರಾವಣ ೧೫, ಶಕ ೧೮೯೩ — ದೇವೀಸಿಂಗ್ ಚೌಹಾನ್

■

*

ಅಧ್ಯಾಯ – ೧

ಸರಾನಾ ಜಿತಾ ಸೋ ಖುದಾ ಕೂಂ ಸರೇ
ಕಿ ವೋ ಐನ್ ಹಿಕ್‌ಮತ್ ಹೈ ಜೂ ಉನಕರೇ । ೧

"ಸಿಕಂದರನ (ಆದಿಲಶಾಹಿ) ಇತಿಹಾಸ" ಎಂಬ ಹೆಸರಿನ ಈ ಕೃತಿಯು ಮುಲ್ಲಾ ನುಸ್ರತಿ ರಚಿಸಿದ್ದಾಗಿದೆ. ಆ ಬಗ್ಗೆ ಎಷ್ಟು ಸ್ತುತಿ ಮಾಡಬೇಕೆನಿಸುವುದೋ ಅದನ್ನೆಲ್ಲ ಪರಮೇಶ್ವರನ ಹೆಸರಿನಲ್ಲೇ ಮಾಡುವುದು. ಅವನ ಚಾತುರ್ಯದಿಂದಲೇ ಎಲ್ಲಾ ಘಟನೆಗಳು ಘಟಿಸುತ್ತವೆ.

ಸರಾನಾ–(ಸರಾಹನಾ : ಹಿಂದಿ)–ಸ್ತುತಿಸುವುದು (ಸಂ.ಶ್ಲಾಘಾ, ಶ್ಲಾಘಾನಾದಿಂದ) ಐನ (ಅರಬಿ)–ಕೇವಲ, ಹಿಕಮತ –ಚಾತುರ್ಯ.

(೧) ಜೌ ಅಚತಾ ಸುರಜ ದಿನ ಕುಂ ನಿತ ಬರ–ಕರಾರ
ತೌ ಕ್ಯೋಂ ನಿಸ ಕೂಂ ಆತಾ ಚಂದರ ಪೋ ಮದಾರ ।೨

ಒಂದು ವೇಳೆ ಸೂರ್ಯನು ಏನಾದರೂ ದಿನನಿತ್ಯವೂ ಖಾಯಮ್ಮಾಗಿ ಇದ್ದು ಬಿಟ್ಟಿದ್ದರೆ ರಾತ್ರಿಯ ವೇಳೆ ಚಂದ್ರನನ್ನು ಆಧರಿಸುವುದಾದರೂ ಏಕೆ ಬೇಕು ?

ಬರ–ಕರಾರ–ಸ್ಥಿರ, ಖಾಯಂ. ಮದಾರ–ಆಧಾರ. ಸುರಜ<ಸೂರ್ಯ. ನಿಸ<ನಿಶಾ. ಬರ(ಫಾ.)<ಸಂ.ಉಪರಿ–ಮೇಲೆ. ಅಲ್ಲಿ.

ಬಡೇ ಬಾದಶಹ ಗರನ ಹೋತೆ ಸಲಫ
ನ ಪಾತೇ ಶಹೀ ಶಾಹಜಾದೆ ಖಲಫ । ೩

ಪೂರ್ವಜರು ದೊಡ್ಡ ದೊಡ್ಡ ರಾಜರು ಆಗಿರದಿದ್ದರೆ ಅವರ ಪುತ್ರರಾದ ಯುವರಾಜರಿಗೆ ರಾಜ್ಯ ಪದವಿಯು ಲಭಿಸುತ್ತಿರಲಿಲ್ಲ.

ಗರ–ಒಂದುವೇಳೆ, ಸಲಫ–ಪೂರ್ವಜರು, ಶಹಿ<ಶಾಹ(ಫಾ.) ಸಂ.ದ ಕ್ಷಾತ್ರ ಶಬ್ದದಿಂದ ವ್ಯುತ್ಪನ್ನ. ಬಾದಶಾಹಿ ರಾಜ್ಯ. ಶಾಹಜಾದಾ – ರಾಜಪುತ್ರ. (ಸಂ.ಕ್ಷತ್ರಜಾತಃ). ಪಾನಾ< ಸಂ.ಪ್ರ+ಆಪ–ಅಭಿಸುವುದು. ದೊರಕುವುದು.

ಬಹನಹಾರ ಹೈ ಜಿಸ ಜಮಿ ಪೋ ಜೋ ಖೂಂ
ಬಹೇ ಕ್ಯೋಂ ನ ಹೋವೇ ಸಬಬ ಕುಚ ಜಬೂಂ ।೪

ಯಾವ ಭೂಮಿಗೆ ರಕ್ತಾರ್ಪಣವು ಆಗಬೇಕಾಗಿದೆಯೇ ಅದನ್ನು ಅದಕ್ಕೆ ಅರ್ಪಿಸಲೇಬೇಕು. ಆ ಕಾರಣವು ಎಷ್ಟೇ ಸರಳವಾಗಿರಲಿ ಇಲ್ಲವೇ ಕ್ಷುದ್ರವಾದುದಾಗಿರಲಿ.

ಆಮೀ<ಜಮೀನ–ಭೂಮಿ. (<ಸಂ.ಕ್ಷಾ ಜ್ಮಾದಿಂದ ವ್ಯುತ್ಪನ್ನವಾದುದು)

ಖೂ<ಖೂನ<ಸಂ. ಸ್ನು (ವಧಿಸುವುದು), ವಧ–ರಕ್ತ, ಸಬಬ–ಕಾರಣ, ಜಬೂ<ಜಬೂನ್–ಕ್ಷುದ್ರ, ಪೋ<ಉಪರಿ–ಮೇಲೆ, ಬಹನಹಾರ < ಸಂ. ವಹನ+ಕಾರ.

ನ ಪಾತಾ ಜಬೂ ವಕ್ತ ಗರ ಕಸ ತೇ ಕಸ
ಹ್ರತಾ ಕ್ಯೋಂ ಕಯಾಮತ ಲಗ ಉಸ ನರ ಕಾ ಜಸ । ೫

ಮಹಾನ್ ಮಹಾನ್ ಶಕ್ತಿಶಾಲಿಗಳಿಗೂ ಕೆಟ್ಟ ದಿನಗಳು ಬರದೆ ಇದ್ದಲ್ಲಿ ಅವರ ಯಶಸ್ಸು ಕಲ್ಪಾಂತರದವರೆಗೂ ಉಳಿಯುವುದಕ್ಕೆ ಸಾಧ್ಯವಾಗುವುದಾದರೂ ಹೇಗೆ ?

ಕಸ–ಶಕ್ತಿ (ಸಂ.ಕಷ–ಶಕ್ತಿ ಬರುವುದು; ಇಲ್ಲಿನ ಒಟ್ಟಾರೆ ಅರ್ಥ ಶಕ್ತಿಯುಳ್ಳವನು). ಹ್ರತಾ–ಉಳಿಯುತ್ತಿತ್ತು. ಕಯಾಮತ (ಅರಬೀ)–ಪ್ರಳಯ, ಕಲ್ಪಾಂತರದ ದಿನ. (ಈ ದಿನದಂದು ಎಲ್ಲಾ ಮೃತ ಆತ್ಮಗಳು ಜೀವಂತವಾಗಿ ಪಾಪ–ಪುಣ್ಯ ಪರೀಕ್ಷೆಗೆಂದು ನಿಂತಿರುತ್ತವೆ ಎಂಬುದಾಗಿ ಇಸ್ಲಾಂ ಧರ್ಮವು ಹೇಳುತ್ತದೆ.) ಜಸ<ಸಂ.ಯಶ.ಲಗ<ಲಕ<ಲಗ್ನ–ತೊಡಗು.

ಜನಮ ಹೈ ಉಸೀ ಮರ್ದ ಕಾ ಜಿಂದಾ ನಾಮ
ಬಡೀ ಜಿಸ ತೇ ಹೈ ನೆಕ ನಾಮೀ ತಮಾಮ ।೬

ಯಾರು ಸತ್ಕೀರ್ತಿಯನ್ನು ಸಂಪಾದಿಸುವರೋ ಅವರ ಹೆಸರು ಸದಾ ಅಮರವಾಗಿರುತ್ತದೆ.

ಜನಮ<ಸಂ.ಜನ್ಮ(ಸದಾ ಎಂಬುದು ಇಲ್ಲಿನ ಅರ್ಥ). ಜಿಂದಾ<ಜಿಂದಹ–ಜೀವಂತ, (ಸಂ.ದ ಜೀವತದಿಂದ ಬಂದಿದೆ) ಸ್ಥಿರ. ನೆಕ(ಫಾ)–ಕಲ್ಯಾಣಕಾರಿ. ನೆಕ ನಾಮಿ–ಸತ್‌ಕೀರ್ತಿ. ತಮಾಮ–ಪೂರ್ಣ.

(೨) ಕಹನಹಾರ ಯೋ ತಾರೀಖೇ – ಅಸಿಕಂದರಿ
ಲಗೇ ಜಿಸ ಕೀ ಗುಫ್ತಾರ ಯೂ ಸರ್ಸರೀ । ೭

ನಾನು ಹೇಳುತ್ತಿರುವುದು ಸಿಕಂದರನ ಇತಿಹಾಸವನ್ನು ಇಲ್ಲಿ ನನ್ನ ಈ ವಾಣಿಯು ಸರಳ (ನಿಷ್ಕಪಟ)ವಾಗಿದೆ ಎಂಬುದಾಗಿ ಭಾವಿಸಿದ್ದೇನೆ.

(ಈ ಕವಿಯು "ಅಲೀನಾಮಾ" ಎಂಬ ಮಹಾಕಾವ್ಯವೊಂದನ್ನು ರಚಿಸಿದ್ದಾನೆ. ಅದು ೪೩ ಅಧ್ಯಾಯ ಮತ್ತು ೫೭೫೩ ಶೇರ-ಶ್ಲೋಕಾರ್ಧಗಳನ್ನು ಉಳ್ಳ ಕೃತಿ. ಅದರ ಭಾಷೆಯು ಬಹಳ ಪರಿಣಾಮಕಾರಿಯಾದುದು. ಆ ಕಾರಣ ಆ ಗ್ರಂಥದೊಂದಿಗೆ ಹೋಲಿಸಿದಲ್ಲಿ ಪ್ರಸ್ತುತ ಕಾವ್ಯದ ಭಾಷೆಯು ಬಹಳ ಸರಳ ಎಂಬುದು ಕವಿಯ ಭಾವನೆ.)

ತಾರೀಖ (ಅರಬೀ)-ಇತಿಹಾಸ. ಅಸಿಕಂದರಿ-ಸಿಕಂದರನಿಗೆ ಸಂಬಂಧಿಸಿದುದು.

(ಫಾರ್ಸಿ ಭಾಷೆಯ "ಈ" ಎಂಬ ಪ್ರತ್ಯಯವು ಸಂಸ್ಕೃತದ "ಈಯ" ಪ್ರತ್ಯಯದಿಂದ ರೂಪುಗೊಂಡುದಾಗಿದೆ.) ಗುಫ್ತಾರ (ಫಾ) –ವಾಣಿ (ಗುಫ್ತಾನ-ನುಡಿಯುವುದು).

(೩) ....

ಸಹಿಸ ಹೌರ ಅಸೀ ಪರ ಜೌ ಥೇ ತೀನ ಸಾಲ । ೮

(ಇದರಲ್ಲಿನ ಮೊದಲ ಸಾಲು ಲಭ್ಯವಾಗಿಲ್ಲ.)

ಯಾವಾಗ ಒಂದು ಸಾವಿರ ಮತ್ತು ಎಂಬತ್ತರ ಮೇಲೆ ಮೂರು ವರುಷವಾಯಿತೋ (ಆಗ ಈ ಗ್ರಂಥವನ್ನು ರಚಿಸಲಾಯಿತು) ಅಂದರೆ ೧೦೮೩ ಹಿಜರಿ ವರ್ಷ.

ಸಹಿಸ<ಸಂ.ಸಹಸ್ರ. ಅಸೀ<ಸಂ. ಅಶೀತಿ-ಎಂಬತ್ತು. ಹೌರ<ಅವರ,ಸಂ. ಅಪರದಿಂದ. ಜೌ<ಜವ<ಸಂ.ಯಾವತ.

ಜೌ ಮುಲ್ಕೇ-ದಕಿನ ಮೇ ಹುಆ ಶಾಹ ನೌಂ
ಲಿಬಾಸ ಆಪ ದುನಿಯಾ ಕರೀ ತಾಜಾ ನೌ । ೯

ದಕ್ಷಿಣ ದೇಶದಲ್ಲಿ ಎಂದು ಹೊಸ ರಾಜನು ಬರುವನೋ ಆಗ್ಗೆ ಜಗವೇ ಹೊಸ ವೇಷಭೂಷಣಗಳನ್ನು ಧರಿಸುವುದು.

ಮುಲ್ಕ (ಅ.)-ದೇಶ, ಲಿಬಾಸ –ವೇಶ. ತಾಜಾ<ತಾಜಹ್-ಹೊರತು, ನೂತನ. ಜೌ<ಯದಾ-ಯಾವಾಗ. ನೌ<ಸಂ, ನವ-ಹೊಸತಾದ. ದಕಿನ<ದಕ್ಖನ<ಸಂ.ದಕ್ಷಿಣ.

(೪) ಹವಸ-ತನ ಜೋ ಹರ ತನ ಕೂಂ ಘರ ಘರ ಜುದಾ
ಕಿ ಹೋನಾ ಶಹೀ ಕೇ ಅಪೀ ಕದಖುದಾ । ೧೦

ಸ್ವಾರ್ಥ ಮತ್ತು ಮಹಾತ್ವಾಕಾಂಕ್ಷೆಯುಳ್ಳ ಪ್ರತಿಯೊಬ್ಬ ವ್ಯಕ್ತಿಗೂ ತನ್ನ ರಾಜ್ಯದ ಒಡೆಯ (ಸ್ವಾಮಿ) ಇಲ್ಲವೆ ನೇತಾರ (ಮುಂದಾಳು)ನಾಗಬೇಕು ಎಂಬ ಭಾವನೆಯು ಮನಸ್ಸಿನಲ್ಲಿ ಮೂಡುತ್ತಿತ್ತು.

ಹವಸ (ಅ)–ಇಚ್ಛೆ(ಮರಾಠಿ:ಹೌಸ್). ತನ–ಶರೀರ. ಜುದಾ–ಬೇರೆಯಾಗು. ಶಹಿ<ಶಾಹಿ–ರಾಜ್ಯ. ಅಫೀ<"ಆಪ" (ಸ್ವತಃ)ನ ತೃತೀಯಾ ವಿಭಕ್ತಿ. ಆಪ<ಆತ್ಮ. ಕದಖುದಾ(ಫಾ)–ಮನೆಯ ಒಡೆಯ, ಗೃಹಪತಿ.(ಸಂ.ಕಟ–ಸ್ವಧಾದಿಂದ).

ಸುಲಗ ನ್ಯೆ ಸಕೀ ಕಿಸ ತೇ ಫಿತ್ನೇ ಕೀ ಆಗ
ಥಂಡಾ ಹೋ ಕೋ ಬೈಠ್ಯಾ ಸಬ ಇಕ ಪಲ ಮೇ ಜಗಾ । ೧೧

ವಿದ್ರೋಹದ ಬೆಂಕಿಯನ್ನು ಹೊತ್ತಿಸಲು ಯಾರಿಗೂ ಸಾಧ್ಯವಾಗಲಿಲ್ಲ. ಹಾಗಾಗಿ ಜಗತ್ತೆಲ್ಲ ಒಂದೇ ಕ್ಷಣದಲ್ಲಿ ಶೀತಲ (ತಣ್ಣಗಾಗಿ)ಗೊಂಡು ಹೋಯಿತು.

ಸುಲಗನಾ–ಬೆಂಕಿ ಹೊತ್ತಿಕೊಳ್ಳುವುದು. ಫಿತ್ನಾ<ಫಿತ್ನ:–ವಿದ್ರೋಹ.
ಅಗ<ಆಗ್ (ಸಂ.ಅಗ್ನಿ)– ಬೆಂಕಿ. ಥಂಡಾ–ತಣ್ಣಗೆ, ಶೀತಲ.

ಲಿಏ ಹಾತ ಸೋ ಕಾಮ್ ಖಾನೆ–ಖವಾಸ
ಕಿಏ ಶುಕ್ರ ಅಕ್ಸರ ಸೋ ತಿರಲೋಕ ಖಾಸ । ೧೨

ಖವಾಸಖಾನನು ಕಾರಭಾರ (ಕಾರ್ಯ)ವನ್ನೆಲ್ಲ ಯಾವಾಗ ತನ್ನ ಕೈಗೆ ತೆಗೆದುಕೊಂಡನೊ ಆಗ ಮೂರು ಲೋಕದ ಜನರಿಗೆಲ್ಲ ಸಮಾಧಾನವಾಯಿತು.

ಶುಕ್ರ (ಅ.) – ನೀಡುವವನನ್ನು ಸ್ತುತಿಸುವುದು, ಆಭಾರಿ. ಅಕ್ಸರ (ಅ."ಕಸೀರ್"ನ ತದ್ಭವ)–ಅತ್ಯಂತ ಹೆಚ್ಚಾಗಿರು. ಖಾಸ (ಅ.) – ವಿಶೇಷ.

ಯಹೀ ಬೋಲ ಹರ ಮುಕ ಸೇ ಆತಾ ಹುಆ
ಕಿ ಬದ–ನಿಯ್ಯತ್ಯಾ ಕಾ ನ ಭಾತಾ ಹುಆ । ೧೩

ಸ್ವಾರ್ಥಿಗಳು, ದುಷ್ಟರು ಅಂದುಕೊಂಡಂತೆ ಆಗಲಿಲ್ಲ–ಎಂಬ ಉದ್ಗಾರ ಪ್ರತಿಯೊಬ್ಬರ ಬಾಯಿಂದಲೂ ಹೊರ ಹೊಮ್ಮಿತು.

ಆತಾ<ಆನಾ–ಬರುವುದು. ಬದ–ನಿಯ್ಯತ್ಯಾ–ಬದನೀಯ್ಯತ(ದುರ್ವಾಸನೆಯನ್ನು ಪೋಷಿಸುವವನು)–ದುಷ್ಟಭಾವನೆ ಎಂಬುದರ ಬಹುವಚನ ರೂಪ. ಭಾನಾ–ಒಪ್ಪಿಕೊ, ಹಿಡಿಸು.

ಕರೇ ಲಗ ಖಿರದ –ಮಂದ ಬಈಅತ ದುರಸ್ತ
ಹುಏ ಲೋಗ್ ಬದ–ಅಹದ ಪೈಮಾ ಕೇ ಸುಸ್ತ । ೧೪

ಬುದ್ಧಿವಂತರು ಮತ್ತು ಚತುರರು ಆದ ಜನರು ತಮ್ಮ ಅನುಯಾಯಿಗಳನ್ನೂ ಸಹ ಸುಧಾರಣೆಯಾಗುವಂತೆ ಮಾಡುತ್ತಾರೆ. ತಾವು ಕೊಟ್ಟ ಅಭಿವಚನವನ್ನು ಮರೆತ ದುಷ್ಟರಂತೆ ಅವರು ಜನರಿಗೆ ವಚನ ಭಂಗ ಮಾಡಿ ಸುಧಾರಣೆ ಮಾಡುವುದನ್ನು ಮರೆಯುವುದಿಲ್ಲ.

ಖಿರದ – ಬುದ್ಧಿ. ಖಿರದಮಂದ – ಬುದ್ಧಿವಂತ, ಚತುರ. ಬಈಯತ(ಅ) – ಅನುಯಾಯಿ. ಬದ – ಕೆಟ್ಟದ್ದು. ಅಹದ – ವಚನ, ಪಣ. ಬದ – ಅಹದ – ವಚನ ನೀಡಿಯೂ ದುಷ್ಟತನವನ್ನು ತೋರುವವರು. ಪೈಮಾ < ಪೈಮಾನ(ಫಾ) < ಸಂ.ಪ್ರತಿಮಾನ – ಅಭಿವಚನ.

ಶರೀರಾ ಶರಾರತ ಹುವೈದಾ ಕಿಐ
ಅಸರ ಜಿವ ಮೇಂ ಮಸ್ತೀ ಕಾ ಪೈದಾ ಕಿಐ ।೧೫

ಕ್ರೂರ ಜನರು ತಮ್ಮ ಕ್ರೌರ್ಯವನ್ನು ತೋರ್ಪಡಿಸುವರು. ಅವರು ತಮ್ಮ ಹೃದಯದ ತುಂಬೆಲ್ಲ ಗರ್ವವನ್ನೇ ರೂಪಿಸಿಕೊಂಡಿರುತ್ತಾರೆ. ಅರ್ಥಾತ್ ಕ್ರೂರ ಮನುಷ್ಯರು ಪ್ರಚಲರಾಗಿರುವರು.

ಶರ(ಅ.) – ದುಷ್ಟತನ, ಕ್ರೂರತನ, ಶರೀರಾ – ಕ್ರೌರ್ಯ, ವಿದ್ರೋಹ.

ಶರಾರತ್ (ಅ.) –ವಿದ್ರೋಹ ಪ್ರವೃತ್ತಿ. ಅಸರ (ಅ.)–ಪರಿಣಾಮ, ಚಿಹ್ನೆ. ಹುವೈದಾ (ಫಾ.)–ಪ್ರಕಟಪಡಿಸು, ವ್ಯಕ್ತಪಡಿಸು.

ದಬೀ ಥೀ ಸೋ ಆತಿಶ ಉಠೀ ಪಿರ ಸುಲಗ
ಪಡ್ಯಾ ದಗಾದಗೇ ಕೀ ಹರಾರತ ಮೇಂ ಜಗ । ೧೬

ಯಾವ ಬೆಂಕಿಯನ್ನು ಆರಿಸಲಾಗಿತ್ತೋ ಅದು ಮತ್ತೆ ಹೊತ್ತಿಕೊಂಡಿತು. ಹಾಗಾಗಿ ಜಗತ್ತೆಲ್ಲವೂ ಅರಾಜಕತೆಯ ಬೆಂಕಿಗೆ ಸಿಲುಕಿತು.

ಆತಿಶ(ಫಾ.<ಸಂ.ಅಥರ್ವ)–ಅಗ್ನಿ, ಪ್ರಕಾಶ. ದಗದಗಾ–ಚಿತೆ. ಹರಾರತ–ಉಷ್ಣತೆ, ಬಿಸಿ.

(೫) ಖುಸೂಸನ ಸಿವಾ ಕಾಫಿರೇ–ಬೇ–ನಿಜಾಮ
ಜೋ ಫಿರಔನ ಕಾ ಸೋ ಸಾಯಾ ತಮಾಮ । ೧೭

ಶಿವಾಜಿ (ಭೋಸಲೆ)ಯು ವಿಶೇಷವಾಗಿ (ಇಸ್ಲಾಂ) ಧರ್ಮದಲ್ಲಿ ವಿದ್ರೋಹ ಹಾಗೂ ಅರಾಜಕತೆಯನ್ನು ನಿರ್ಮಾಣ ಮಾಡುವವನಾಗಿದ್ದನು. ಅವನು (ಈಜಿಪ್ಟ್‌ನ ಒಬ್ಬ ಪ್ರಾಚೀನ ಆತಂಕಕಾರಿಯೂ, ದುಷ್ಟನೂ ಆಗಿದ್ದ) ಫಿರ್‌ಔನ ಎಂಬ ಹೆಸರುಳ್ಳ ರಾಜನ ಸಂಪೂರ್ಣ ಪ್ರತಿಚ್ಛಾಯೆಯೇ ಆಗಿದ್ದಾನೆ.

ಖುಸೂಸನ < ಖುಸೂಸ (ವಿಶೇಷ)ನ ಕ್ರಿಯಾ ವಿಶೇಷಣ – ವಿಶೇಷತ:. ಕಾಫಿರ(ಫಾ.) – ಇಸ್ಲಾಂ ಧರ್ಮ ಹಾಗೂ ಅದರ ದೇವದೂತನನ್ನು ದ್ವೇಷಿಸುವವನು, ಧರ್ಮದ್ರೋಹಿ. ನಿಜಾಮ (ಅ.) – ವ್ಯವಸ್ಥೆ: ಬೇ – ನಿಜಾಮ –ಅವ್ಯವಸ್ಥೆಯನ್ನು ಉಂಟುಮಾಡುವವನು. ಸಾಯಾ < ಸಾಯಹ(ಫಾ.) < ಸಂ.ಛಾಯ.ಜೋ – (ಸಂ.ಯತ(ತೀರಾ) ಉಭಯಾನ್ವಯಿ ಅವ್ಯಯ) ಅದೋ ಅಥವಾ ಇದೋ; ಯಾವುದು.

ಜಲಗ ಜಗ ಮೇ ಮುಹಲತ್ ಹೈ ಇಬ್ಲೀಸ ಕೂಂ
ತಲಗ ಚಾಲ ಹೈ ಲೆಸ ಕೀ ತಬ್ಲೀಸ ಕೂಂ । ೧೮

ಎಲ್ಲಿಯವರೆಗೆ ಈ ಜಗತ್ತಿನಲ್ಲಿ ಸೈತಾನ (ದೆವ್ವ)ನಿಗೆ ವಿಶೇಷವಾಗಿ ಅವಕಾಶ ಒದಗಿ ಬರುತ್ತಾ ಇರುವುದೋ ಅಲ್ಲಿಯವರೆಗೆ ಅವನ (ಶಿವಾಜಿ) ಭಯ, ಭೀತಿ ಹಾಗೂ ಕಪಟತನಕ್ಕೂ ಅವಕಾಶ ಇರುವುದು.

ಜಲಗ < ಸಂ.ಯಾವತ+ಲಗ್ನ – ಎಲ್ಲಿಯವರೆಗೆ. ತಲಗ < ಸಂ.ತಾವಕ+ಲಗ್ನ – ಅಲ್ಲಿಯವರೆಗೆ. ಮುಹಲತ (ಅ.) – ಅವಕಾಶ, ಸಂಧಿ. ತಬ್ಲೀಸ (ಅ) – ಮುಚ್ಚಿ ಹಾಕುವುದು ಅರ್ಥಾತ್ ಕಪಟತನ.

ನಥೇ ಪೈಸ ಜಾಲಗ ಪವನ ಕೂಂ ಮಜಾಲ
ಅಥೇ ವಾಂ ತಲಗ ತಿಸ ಕೇ ಘೋಡ್ಯಾ ಕೀ ಚಾಲ। ೧೯

ಯಾವ ಜಾಗದಲ್ಲಿ ಗಾಳಿಯೂ ನುಸುಳಿ ಹೋಗಲು ಅವಕಾಶವಿಲ್ಲವೋ ಅಲ್ಲಿಗೂ ಶಿವಾಜಿಯ ಕುದುರೆಗಳು ನುಗ್ಗಿ ಹೋಗಿ ಬಿಡುತ್ತವೆ.

ನಥೇ – ನ ಅಥೇ (ಮರಾಠಿ–"ನಸೇ") –ಇಲ್ಲ. ಪೈಸ (ನಾಮ) < ಸಂ.ಪ+ವಿಶ್ – ಪ್ರವೇಶ ಮಾಡುವುದು, ನುಗ್ಗುವುದು.

ಜೋ ಜಾ ಲಗ ಹೈ ಚಲತೇ ಕೂಂ ಚಮ್ಟೀ ಕೀ ಝೇಲ
ಜನಮ ತಿಸ ಪೋ ಉಸಕೇ ಹಶಮ ಕಾ ಹೈ ಖೇಲ । ೨೦

ಎಲ್ಲಿಯವರೆಗೆ (ಯಾವ ಜಾಗದವರೆಗೆ) ಇರುವೆಗಳು ಹೋಗಬಲ್ಲವೋ ಅಲ್ಲಿಗೂ ಹೋಗಿ ಮುಟ್ಟುವುದು ಅವನ (ಶಿವಾಜಿ) ಖಾಸಾ ಸೇನೆಯ ನಿತ್ಯ ಪರಿಪಾಠವಾಗಿ ಹೋಗಿದೆ.

ಝೇಲ < ಸಂ.ಸ್ವೇಲ – ನುಗ್ಗುವುದು, ತಲುಪುವುದು. ಜನಮ < ಸಂ.ಜನ್ಮ ಜೀವನ, (ಇಲ್ಲಿನ ಅರ್ಥ) ನಿತ್ಯ. ಹಶಮ – ಖಾಸಗಿ ಸೈನ್ಯ. ಚಿಮ್ಟೀ – ಇರುವೆ. ಜೋ (ಸಂ.ಯತ್,ಅವ್ಯಯ) – ಇದೋ ಅಥವಾ ಅದೋ ಯಾವುದೋ.

(೬) ಬಚೇ ಆಸಮಾ ಕೇ ಜೋ ಗಡ ಥೇ ಬುಲಂದ
ಲಿಯಾ ಚಡ ಸಟಯಾ ವಾ ಸೌ ಘನ ಕಾ ಕಮಂದ । ೨೧.

ಆಕಾಶದಲ್ಲಿರುವ ಮಕ್ಕಳಂತೆ ಭಾಸವಾಗುವ ಎತ್ತರೆತ್ತರದ ಕೋಟೆಗಳ ಮೇಲೆ ಧಾಳಿ ಮಾಡಿ ಅವುಗಳನ್ನು ವಶಪಡಿಸಿಕೊಂಡನು. ಅಂಥ ಸಮಯದಲ್ಲಿ ಅವನು ನೂರಾರು ಯುಕ್ತಿಗಳ ಜಾಲವನ್ನೇ ಹೆಣೆಯುತ್ತಿದ್ದನು.

ಬಚಾ – ಮಗು(ಬಚ್ಚಾ) ಸಂ.ವತ್ಸ. ಬಚಹ (ಫಾ.). ಆಸಮಾ (ಫಾ.) ಆಸಮಾನ – ಆಕಾಶ. ಗಡ – ಕೋಟೆ, ದುರ್ಗ, ಬಲಂದ್(ಫಾ.) – ಎತ್ತರ. ಸೌ < ಶಕ.ಕ್ಷನ (ಅ.) – ಯುಕ್ತಿ. ಕಮಂದ – ಜಾಲ, ಬಲೆ.

(೭) ಕರ್‍ಯಾ ಚಡ ಜಹಜಾ ಜೋ ದರ್ಯಾ ಪೋ ದೌಡ
ಕಿಯಾ ಲೂಟ ಬಂದರ ಫಿರಂಗ್ಯಾ ಕೇ ಚೌಡ । ೨೨

ಸಮುದ್ರದಲ್ಲಿನ ಹಡಗುಗಳ ಮೇಲೆ ಆತ ಧಾವಿಸಿ ಧಾಳಿ ಮಾಡಿದನು. ಫಿರಂಗಿ ವ್ಯಾಪಾರಿಗಳ ವಿಶಾಲ(ಸಂಪನ್ನ) ಬಂದರುಗಳನ್ನೆಲ್ಲ ಅವನು (ಶಿವಾಜಿ)ಲೂಟಿಗೈದನು.

ಫಿರಂಗಿ (ಫಾ. – ಫಿರಂಗ – ಯೂರೋಪ್) – ಯೂರೋಪಿನಲ್ಲಿ ವಾಸಿಸುವವನು. ಚೌಡ < ಸಂ.ಚತುರ+ಊಢ – ಚೌಡಾ – ವಿಶಾಲ.

ಸದಾ ತಿಸ ತೇ ದರ್ಯಾ ಮೇ ತುಫಾ ದಿಸೇ
ಜಮಿ ನಹಸ ತಿಸ ಪಗ ತೇ ವೀರಾ ದಿಸೇ । ೨೩

ಅವನ ಕಾರಣದಿಂದಾಗಿ ಸಮುದ್ರದಲ್ಲಿ ನಿತ್ಯವೂ ಬಿರುಗಾಳಿಯೇ ಏಳುತ್ತಿದೆ. ಅವನ ಅಪವಿತ್ರ ಪಾದಾಘಾತದೆದುರು ಸಕಲ ಭೂಮಿಯೂ ನಿರ್ಮಾನುಷವಾಗಿ ಹೋಯಿತು.

ತೆ<"ತಸೂ"ವಿನಿಂದ ರೂಪಗೊಂಡ ಪಂಚಮಿ ಪ್ರತ್ಯಯ. ತೂಫಾ (ಫಾ.) < ತೂಫಾನ – ತುಫಾನು, ಬಿರುಗಾಳಿ. ವೀರಾ – (ಫಾ.) < ವೀರಾನ – ನಿರ್ಜನ, ನಿರ್ಮಾನುಷ. ನಹಸ (ಅ.) – ಅಪವಿತ್ರ, ಅಶುಭ. ಪಗ < ಸಂ.ಪದ+ಕ – ಚರಣ, ಪಾದಗಳು.

ಸಟೇ ಬಾಟಸಾರು ಜೋ ಉಸ ಭುಇ ಪೋ ಪಾಂವ್ರೂ
ಮಿಲೇ ನಾ ಯಕ ಹಫ್ತಾ ಬಸ್ತೀ ಕಾ ನಾಂವ್ರೂ । ೨೪

ದಾರಿ ಹೋಕ ಯಾರಾದರೂ ಆ ಭಾಗದಿಂದ ಹಾದು ಹೋದಲ್ಲಿ ಅವರುಗಳಿಗೆ ವಾರ ವಾರಗಳವರೆಗೂ ವಸತಿ ಪ್ರದೇಶಗಳು ಕಾಣಲು ಸಿಕ್ಕುವುದಿಲ್ಲ.

ಬಾಟ < ವಾಟಟೂ (ದೇಶೀಶಬ್ದ) < ವಟ್ಟೋ – ಮಾರ್ಗ, ದಾರಿ. ಸಾರು < ಸಂ.ಸೃ – ಸಾಗುವುದು, ನಡೆಯುವುದು. ಬಾಟ ಸಾರೂ – ದಾರಿಹೋಕ. ಭುಈ < ಸಂ.ಭೂಮಿ – ನೆಲ. ಹಫ್ತಾ < ಹಫ್ತಃ(ಫಾ.) < ಸಂ.ಸಪ್ತ)+ಅಹ್ – ಸಪ್ತಾಹ – ಏಳುದಿನ, ಒಂದುವಾರ. ಬಸ್ತಿ < ಸಂ.ವಸತಿ – ವಾಸಸ್ಥಾನ.

(೮) ಜು ಉಸ ಸೇ ಜಿತೇ ಫೌಜದಾರಾ ಲಡೇ
ಲುಟೇ ಗಯ ವುತೇ ಯಾ ಸಂಪಡ ಬಂದ ಪಡೇ । ೨೫

ಯಾವ ಯಾವ ಸೇನಾಪತಿಗಳು ಅವನೊಂದಿಗೆ (ಶಿವಾಜಿ) ಹೋರಾಟ ಮಾಡಿದರೋ ಅವರೆಲ್ಲ ಒಂದೋ ಅವನಿಂದ ಲೂಟಿಗೆ ಒಳಗಾಗುತ್ತಿದ್ದರು. ಇಲ್ಲವೆ ಅವನ ಕೈಸೆರೆಯಾಗಿ ಕೈದಿಗಳಾಗಿ ಹೋಗುತ್ತಿದ್ದರು.

ಜು < ಜೋ < ಸಂ. ಯತ – ಯಾರು (ಸರ್ವನಾಮ). ಜಿತಾ < ಸಂ.ಇಯತ < ಇಷ್ಟು. ಫೌಜದಾರ(ಫಾ.) – ಸೈನ್ಯಾಧಿಕಾರಿ. ಸಂಪಡನಾ < ಸಂಪಡಿಅ(ದೇಶಿಶಬ್ದ, ಹೇಮಚಂದ್ರನ ದೇಶೀ ನಾಮಮೂಲ) – ಲಬ್ಧಮ – ಸಿಗುವುದು. ಬಂದ (ಫಾ.) < ಸಂ.ಬಂಧ – ಕೈದಿ. ಬಂದ ಪಡನಾ – ಕಾರಾವಾಸಕ್ಕೆ ಬದ್ಧನಾಗು.

ಪನ ಉಸ ದಿಲ ಮೇ ಥಾ ಖಾನ ಕಾ ಸಖ್ತ ಥಾಕ
ಕಿಏ ಥೇ ಜೋ ಯಕ ಬಾರ ಉಸೇ ಬೀ ಹಲಾಕ । ೨೬

ಆದರೆ ಅವನ (ಶಿವಾಜಿ) ಮನಸ್ಸಿನಲ್ಲಿ ಖಾನನ (ಖವಾಸಖಾನ್) ಬಗ್ಗೆ ಬಹಳ ಭೀತಿ ತುಂಬಿತ್ತು. ಕಾರಣ ಖಾನನು ಒಮ್ಮೆ ಅವನಿಗೆ ಬಹಳ ಸಂಕಟ ಅನುಭವಿಸುವಂತೆ ಮಾಡಿದ್ದನು.

ಪನ < ಮರಾಠಿ ಪಣ್ – ಆದರೆ. ಸಖ್ತ – ತೀವ್ರ. ಹಲಾಶ್ (ಅ) – ಸಂಕಟಕ್ಕೆ ಗುರಿಪಡಿಸು. ಬೀ < ಮರಾಠಿ ಬೀ < ಸಂ. ಅಪಿ > ಪಿ > ವೀ, ಬೀ – ವಿಪರೀತ.

ನ ಆಸೀ ಕಕರ ಆಜ ಘರ್ ಕಿಸ ಪೋ ಛೋಡ
ನ ಲಡನೇ ಅಪಂಗ ಮುಜ ಸಿತೇ ಫೌಜ ಜೋಡ । ೨೭

(ಈ ಗಂಭೀರ ಸ್ಥಿತಿಯಲ್ಲಿ) ಬೇರೆ ಯಾರ ಮೇಲೂ ತನ್ನ ಮನೆಯ ಜವಾಬ್ದಾರಿಯನ್ನು ವಹಿಸಿ ಆತ (ನನ್ನೊಡನೆ) ಹೋರಾಡಲು ಬರಲಾರನು. ಇನ್ನು ಸೈನ್ಯವನ್ನು ಕೂಡಿಸಿ ಸ್ವತಃ ನನ್ನೊಡನೆ ಹೋರಾಟ ಮಾಡುವುದಿಲ್ಲ.

ಆಸೀ < ಸಂ. ಭವಿಷ್ಯತಿ – ಬಂದಾನು. ಕಕರ – ಎಂದುಕೊಂಡು(ಕಹ್‌ಕರ).

ಘರ್ < ಸಂ.ಗೃಹ. ಲಡಸೀ –ಹೋರಾಟ ಮಾಡಿಯಾನು (ಭವಿಷ್ಯತ್ ಕಾಲ). ಅಪಂಗ < ಅಪ+ಅಂಗ – ಸ್ವತಃ. ಸಿತೇ – ಸಿ+ತೇ – ಸೇ+ಥೇ –"ಸೇ" ಮತ್ತು "ತೇ" – ಈ ತೃತೀಯ ಮತ್ತು ಪಂಚಮಿಯ ಪ್ರತ್ಯಯಗಳು ಒಂದೆಡೆ ಬಂದಿರುವುವು.

ಭರೋಸೇ ಪೋ ಕರ ಯೋ ಮುಕರರ ಖಿಯಾಲ
ವತನ ತೇ ನಿಕಲ ಲೇ ಕೇ ಫೌಜಾ ದುಂಬಾಲ । ೨೮

(ಈ) ವಿಶ್ವಾಸದಿಂದ ಖಚಿತ ನಿರ್ಧಾರಕ್ಕೆ ಬಂದು (ಮತ್ತು) ತನ್ನ ಜೊತೆಯಲ್ಲಿ ದೊಡ್ಡ ಸೇನೆಯನ್ನು ತೆಗೆದುಕೊಂಡು (ಶಿವಾಜಿ) ತನ್ನ ಪ್ರದೇಶದಿಂದ ಹೊರಟನು.

ಮುಕರ್ರರ(ಅ.) – ನಿಶ್ಚಿತ. ಖಿಯಾಲ – ವಿಚಾರ. ವತನ – ದೇಶ. ದುಂಬಾಲ(ಫಾ.) < ದುಮ – ಹಿಂದೆ. ಭರೋಸಾ (ಸಂ.ವಿ+ಶ್ರಂಭ) – ವಿಶ್ವಾಸ.

ಜೋ ಯರ ಉಮ್ರ ಲಗ ಥಾ ಸೋ ಕಾಬೂ–ತಲಬ
ಪಡ್ಯಾ ದೇಕ ಕಾಬೂ ಮುನಾಫಿಕ ಸಬಬ । ೨೯

ಒಂದು ಕಾಲದಲ್ಲಿ ಯಾರು (ಶಿವಾಜಿ) ಯಾರ ಅಧೀನದಲ್ಲಿ (ಆದಿಲಶಾಹಿ) ಇದ್ದನೋ ಅವನು ಅದರ ಶಕ್ತಿ ಸಾಮರ್ಥ್ಯವನ್ನು ಊಹಿಸಿ, ಅನುಕೂಲ ಸಂದರ್ಭವನ್ನು ನೋಡಿಕೊಂಡು ಯುದ್ಧ ಮಾಡುವುದಕ್ಕಾಗಿ ಬಂದಿರುವನು.

ಉಮ್ರ (ಅ.) – ಜೀವನ. ಕಾಬೂ(ತುರ್ಕಿ) – ಸಂಧಿ. ಶಕ್ತಿ. ಮುವಾಫಿಕ(ಅ.) – ಅನುಕೂಲ. ಸಬಬ – ಕಾರಣ.

(೯) ಕದಮ ದರ–ಕದಮ ಮುಲ್ಕ ಮೇ ಘನ ಸೂಂ ಪೈಠ
ಪಕಡ ಯಕ ಕುಬಲ ಠಾರ ಆ ಮದ ಮೇ ಬೈಠ । ೩೦

ಉಪಾಯದಿಂದ ಒಂದೊಂದೆ ಹೆಜ್ಜೆಯನ್ನು ಮುಂದಿಡುತ್ತಾ ಬಂದ ಅವನು (ಶಿವಾಜಿ) ಒಂದು ದುರ್ಗಮ ಸ್ಥಾನವನ್ನು ವಶಪಡಿಸಿಕೊಂಡನು. ಹಾಗೆ ಮಾಡುತ್ತಾ ಮಾಡುತ್ತಾ ಕೊನೆಗೆ ಅವನು (ರಾಜ್ಯದ) ಮಧ್ಯ ಭಾಗಕ್ಕೆ ಬಂದು ಕುಳಿತುಬಿಟ್ಟನು.

ಪೈಠನಾ < ಸಂ. ಪ್ರತಿಷ್ಠಿತ(ಪ್ರತಿ+ಸ್ಥಾ) – ಪ್ರವೇಶಿಸು, ನುಗ್ಗು. ಕುಬಲ (ಮ. ಕುಬಲ < ಸಂ.ಕು+ವಾತ+ಲ) –ಕಠಿಣ, ದುರ್ಗಮ, ಠಾರ < ಸಂ.ಸ್ಥಾನ – ಸ್ಥಳ. ಮದ < ಸಂ. ಮಧ್ಯ – ಮಧ್ಯೆ, ಮಧ್ಯದಲ್ಲಿ. ಬೈಠನಾ < ಸಂ.ಉಪ+ವಿಷ್ಟ – ಕುಳಿತುಕೋ.

ವಈ ಮುಲ್ಕ ಸಬ ಮಾರ ಕರ ಲೇ ತಲಫ
ಪಠಾಯಾ ಹಜಾರಾ ಸೂ ದಲ ಹರ ತರಫ । ೩೧

ಆಗ ಎಲ್ಲಾ ಪ್ರದೇಶಗಳನ್ನು ಅವನು (ಶಿವಾಜಿ) ಲೂಟಿ ಮಾಡಿ ನಾಶಗೈದನು. ಪ್ರತಿಯೊಂದು ದಿಕ್ಕಿಗೂ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ತನ್ನ ಸೇನೆಯನ್ನು ಕಳುಹಿಸಿದನು.

ವಈ < ವಹಾಂ+ಈ < ಹೀ – ಅಲ್ಲಿಯೇ. ಪಠನಾ < ಪ್ರತಿ+ಸ್ಥಾಪಯತಿ – ಪ್ರತಿಷ್ಠಾಪಯತಿ – ಕಳುಹಿಸು, ರವಾನಿಸು. ದಲ < ಸಂ. ದಲ – ಸೈನ್ಯ. ಪರಫ – ಆ ಕಡೆಗೆ, ಆ ದಿಕ್ಕಿನೆಡೆ. ತಲಫ (ಅ.) – ನಷ್ಟ, ನಾಶ.

ಸಬಲ ದೇಕ ಖಾ ಮುಮ್ಲಿಕತ ಕೇ ಮದಾರ
ಗಜಬ ಮೇ ಹುಏ ಪನ ಕಹೇ ಯೂ ಬಿಡಾರ । ೩೨

ರಾಜ್ಯಕ್ಕೆ ಆಧಾರಸ್ತಂಭ ಎನಿಸಿದ್ದ ಖಾನ (ಖವಾಸಖಾನ್)ನಿಗೆ ಅದರಿಂದಾಗಿ ಬಹಳ ಕೋಪ ಬಂದಿತು. ಹಾಗಾಗಿ ಅವನು ಹೀಗೆ ವಿಚಾರ ಮಾಡಿದನು.................

ಮುಮ್ಲಿಕತ (ಅ.) – ರಾಜ್ಯ. ಮದಾರ(ಅ.) – ಆಧಾರ. ಗಜಬ (ಅ.) – ಕೋಪ, ಕ್ರೋಧ. ಪನ (ಮರಾಠಿಯ ಪಗ) – ಆದರೆ.

ನೈ ಆಜ ಮುಮ್ಕಿನ ಜು ಮೈ ಉಕ ಶೇ ದೌಡ
ಜೋ ಬೀ ಕರ ಗಟೂ ಮಾರ ಫೌಜ ಉಸಕೀ ಚೌಡ । ೩೩

ಅವನು (ಖವಾಸಖಾನ್) ಹೀಗೆ ನಿರ್ಣಯಿಸಿದನು. ಈಗ ಮುನ್ನುಗ್ಗಿ ಹೋಗಿ ಅವನ ಬೃಹತ್ ಸೈನ್ಯವನ್ನು ಎದುರಿಸುವುದು ನನಗೆ ಸಾಧ್ಯವಾಗದು.

ಮುಮ್ಕಿನ (ಅ.) – ಸಾಧ್ಯವೇ. ಬೀ < ಸಂ. ಅಪಿಪಿ > ವಿ > ಬೀ. ಪಟನಾ < ಸಂ. ಶಟತಿ – ಒಗೆಯುವುದು. ಜು. (ಸಂ.ಯತ ಅವ್ಯಯ) – ಕಿ.ಜೆ. ಚೌಡ (ಸಂ. ಚತು:+ಊಷ) – ವಿಶಾಲ, ಬೃಹತ್.

■

*

ಅಧ್ಯಾಯ – ೨

ದಿಲ–ಅಫರೋಜ ಯಕ ರೋಜ ಫಿರೋಜ ಥಾ
ಪರಜ–ಬಖ್ಶ ಜೂ ಈದೇ–ಸೌ–ರೋಜ ಥಾ । ೧

ಆ ಒಂದು ದಿನ ಬಹಳ ಚಿತ್ತಾಕರ್ಷಕವೂ, ಪವಿತ್ರವೂ ಆದುದಾಗಿತ್ತು. ಆ ದಿನವು ನೂತನ ದಿನದ ಸಂಭ್ರಮವು ಮತ್ತು ಸುಖದಾಯಕವೂ ಆದುದಾಗಿತ್ತು.

ದಿಲ (ಫಾ.) (ಸಂ.ಹೃದಯ) – ಮನಸ್ಸು. ಅಫರೋಜ (ಫಾ.) – ಆಕರ್ಷಕ. ರೋಜ (ಫಾ.<ಸಂ.ರೋಚಸ) – ದಿವಸ. ಫಿರೋಜ (ಫಾ.) – ಶುಭ, ಪವಿತ್ರ. ಪರಹ – ಬಖ್ಶ – ಸುಖದಾಯಕ. ಈದ (ಅ.) – ಹಬ್ಬ. ನೌ(ಫಾ.ಸಂ.ನವ) – ನೂತನ, ಹೊಸತು. ಜೂ < – ಜ್ಯೂಂ(ಸಂ.ಏನಮ್) – ಈ ರೀತಿಯಲ್ಲಿ.

ಅದಿಕ ತಾಜಗೀ ಪಾ ಜಮಿನೋ – ಜಮನ
ಹುಆ ಥಾ ರಂಗಾರಂಗ ಗುಲಶನ – ನಮನ । ೨

ಪೃಥ್ವಿಯು ಕಾಲದ ನವಚೈತನ್ಯವೊಂದು ಲಭಿಸಿದುದರಿಂದ ಉದ್ಯಾನದಂತೆ ರಂಗುರಂಗಾಗಿತ್ತು.

ತಾಜಗೀ (ಫಾ.) – ನವ ಕೋಮಲತೆ, ಚೈತನ್ಯ. ಜಮೀನ (ಫಾ. < ಸಂ. ಕ್ಷ್ಮಾ, ಜ್ಮಾ, ಗ್ಮಾ) – ಭೂಮಿ. ಆಮನ < ಜಮಾನ್ಹ(ಅ.) – ಕಾಲ. ಗುಲಶನ (ಫಾ.) – ಉದ್ಯಾನ, ಪುಷ್ಪವಾಟಿಕೆ. ನಮನ < ನಮೂನ < ನಮೂನಹ (ಫಾ.) – ತೋರಿಸುವ ವಸ್ತು (ಮಾದರಿ). (ದಖನಿ ಹಿಂದಿಯಲ್ಲಿನ ನಮನ, ನಮೂನ ಇವುಗಳ ಅರ್ಥಕ್ಕೆ ಸಮಾನವಾಗಿದೆ.)

ಜಫರ–ಬಖ್ಷ ಉಸ ದಿನ ಕೀ ಪಾ ಖೂಬ ಕದರ
ಶಹನಶಾಹಾ ಫರ್ಮಾ ಶಹಾನೀ ಸದರ । ೩

ಯಶೋದಾಯಕವೂ ಮತ್ತು ವಿಜಯ ಸೂಚಕವೂ ಆದ ಈ ದಿನದ ಲಾಭವನ್ನು ಪಡೆದು ಸಾಮ್ರಾಟನಾದ ರಾಜನು ಶೋಭೆಗಾಗಿ ಈ ಬಗೆಯಲ್ಲಿ ದರಬಾರನ್ನು ತುಂಬುವ ಆಜ್ಞೆ ಮಾಡಿದನು.

ಶಹನಶಾಹ < ಶಾಹನ – ಶಾಹ (ಫಾ. < ಸಂ.ಕ್ಷತ್ರಿಣಾ, ಕ್ಷತ್ರಿಯ) – ರಾಜಾಧಿರಾಜ, ಸಮ್ರಾಟ. ಷರ್ಮಾನ (ಕ್ರಿಯಾಪದ) < ಫರ್ಮೂದನ (ಫಾ. < ಸಂ.ಪ್ರ+ಮಾ) ಆಜ್ಞೆ ಮಾಡು. ಶಹಾನೀ < ಶಾಹನೀ (ಫಾ. < ಸಂ.ಕ್ಷತ್ರ) –ರಾಜನ, ರಾಜಯೋಗ್ಯ, ಜಫರ (ಅ.) – ಯಶಸ್ಸು. ಬಖ್ಷ < ಬಕ್ಷೀದನ (ಫಾ.) – ನೀಡುವುದು. ಕದ್ರ (ಅ.) – ಮೌಲ್ಯ. ಕದರ, ಸದರ (ಅ.) – ದಿವಾನಖಾನೆ, ದರಬಾರು, ಆಸ್ಥಾನ.

ಸಿವಾ ನೇ ಜೋ ಪಕಡ್ಯಾ ಹುನರ ನಾ – ಪಸಂದ
ಸಿಖಾನೇ ಉಸೇ ಅತ ಅದಿಕ ಖೂಖ ಪಂದ । ೪

(೧೦) ಕಿನ ಐಸಾ ಹೈ ಕರ ಮರ್ದ ಅಪಸ ಮನ ಮೇ ಲ್ಯಾಏ
ತೋ ಕರ ಯಾದ ಸವ್ವಾಬೂ ಕೂಂ ವಈ ಬುಲಾಏ । ೫

ಶಿವಾಜಿಯು ಬಹಳ ಅಯೋಗ್ಯ ಮಾರ್ಗವನ್ನು ಅವಲಂಬಿಸಿದ್ದನು. ಹಾಗಾಗಿ ಅವನನ್ನು ಸಮರ್ಥವಾಗಿ ಎದುರಿಸಬಲ್ಲ ವೀರ ಯಾರಿರಬಹುದು ಎಂಬ ಆಲೋಚನೆ ಉಂಟಾಯಿತು. ಆ ವಿಚಾರ ಅವನ ಮನಸ್ಸಿನಲ್ಲಿ ಮೂಡುತ್ತಲೇ ಅವನಿಗೆ ನವಾಬನ (ಅಬ್ದುಲ್ ಕರೀಮ್ ಬಹಲೋಲಖಾನ) ನೆನಪಾಯಿತು. ಅವನು ತನ್ನಲ್ಲಿಗೆ ಬರುವಂತೆ ಆತನನ್ನು ಹೇಳಿ ಕಳುಹಿಸಿದನು.

ಹುನರ (ಫಾ.) – ಯುಕ್ತಿ, ನಡತೆ, ಮಾರ್ಗ, ನಾಪಸಂದ(ಫಾ.) – ಅಯೋಗ್ಯ. ಪಂದ(ಫಾ.) – ಉಪದೇಶ. ನವ್ವಾಬ (ಅ.) – ಒಳ್ಳೆಯ ಪ್ರತಿನಿಧಿತ್ವ ವಹಿಸುವವ. ಆತ < ಸಂ. – ಅತಿ. ಕಿನ < ಸಂ. ಕಿಯತ – ಯಾರು. ಅಪಗ < ಸಂ. ಆತ್ಮ+ಸ್ಥ > ಅಪ್+ಸ್ಸ > ಅಪಸ – ತನ್ನ. ಸಿಖಾನಾ – ಸಂ < ಶಿಕ್ಷಯತೆ – ಕಲಿಸುವುದು.

ವಈ ಖಾನ ಅಪಸ ಮಿಜ್ಲಿಸೇ –ಖಾಸ ಸೂಂ
ಬಹುತ ದೇ ಕೇ ತಾಜೀಮ ಇಖ್ಲಾಸ ಸೂಂ । ೬

ಆಗ ಖಾನನು ತನ್ನ ವಿಶೇಷ ದರಬಾರಿನಲ್ಲಿಯೇ ಅವನನ್ನು (ಖವಾಸಖಾನ) ತುಂಬು ಮನಸ್ಸಿನಿಂದ ಆದರಿಸಿ ಸತ್ಕಾರ ಮಾಡಿದನು.

ಮಜ್ಲಿಸ(ಅ.) – ಸಭೆ. ತಾಜೀಮ(ಅ.) – ಆದರಣೆ ಮಾಡು, ಸತ್ಕರಿಸುವುದು.

ಮಾನ ಸನ್ಮಾನ ಮಾಡುವುದು. ಇಖ್ಲಾಸ (ಅ.) – ಮುಕ್ತ ಮನಸ್ಸಿನ ಮೈತ್ರಿ. ಸೂ < ಸಂ. ಸಮಾನಿಂದ ರೂಪಗೊಂಡಿರುವ ತೃತೀಯೆಯ ಇಲ್ಲವೆ ಪಂಚಮಿಯ ವಿಭಕ್ತಿ.

ಜೌ ಬೈಠೇ ಸೋ ಹೋ ಮಿಲ ಕೇ ಖಾತಿರ ಫರಾಗ
ಹುಏ ದೇಕ ಯಕಸ ಕೂಂ ಖುಶ ಬಾಗ–ಬಾಗ ।೭

ಮುಕ್ತ ಮನಸ್ಸಿನಿಂದ ಈರ್ವರೂ ಅಕ್ಕಪಕ್ಕದಲ್ಲಿಯೇ ಕುಳಿತರು. ಅನಂತರ ಪರಸ್ಪರ ಒಬ್ಬರನ್ನೊಬ್ಬರು ನೋಡಲು ಅವರಿಗೆ ಅತ್ಯಂತ ಸಂತೋಷವಾಯಿತು.

ಖಾತಿರ (ಅ.) – ಮನಸ್ಸು, ಚಿತ್ತ. ಫರಾಗ (ಅ.) – ಸ್ವಸ್ಥ ಚಿತ್ತ. ಬಾಗಬಾಗ ಹೋನಾ – ಸಂತೋಷ ಉಂಟಾಗುವುದು, ಖುಷಿಯಾಗುವುದು.

(೧೧)ಬಯಾಕರಕೇ ಯಕ ದಿಲಬರೀ ಕೇ ನಿಕಾತ
ನಿಕಾಲೇ ವಈ ರಾಜಕಾರನ ಕೀ ಬಾತ । ೮

ಪ್ರೇಮದಿಂದ ಕೆಲವು ಗುಪ್ತ ಮಾತುಗಳನ್ನು ಆಡಿದ ನಂತರ ಅವನು ರಾಜಕಾರಣದ ವಿಚಾರವನ್ನು ತೆಗೆದನು.

ಬಯಾ < ಬಯಾನ(ಫಾ.<ಸಂ.ವ್ಯಾಖ್ಯಾನ) – ವರ್ಣನೆ, ಮಾತು. ನಿಕಾತ (ಫಾ.) – "ನುಕತಹ"ದ ಬಹುವಚನ ರೂಪ – ಸೂಕ್ಷ್ಮಮಾತು. ದಿಲಬರೀ – ಪ್ರೇಮ.

ಕಹೇ ಖಾನ ಕಾಫಿರ ಬರೇ–ಬೇ–ಲಗಾಮ
ನಿಖ್ಯಾ ಹೈ ಜನಮ ಚರ ರೋ ಖಾನೇ ತಮಾಮ । ೯

(ಖವಾಸ)ಖಾನನು ಹೇಳಿದನು. "ಅನಿಯಂತ್ರಿತ, ನಿರಂಕುಶ, ಧರ್ಮದ್ವೇಷಿಯಾದ ಆ ಗಾರ್ದಭ (ಶಿವಾಜಿ)ನು ತನ್ನ ಜೀವನ ಪೂರ್ತಿ ಅಡ್ಡಾಡುತ್ತಾ ಏನೆಲ್ಲವನ್ನೂ ಮೇಯುವುದನ್ನು ಕಲಿತಿದ್ದಾನೆ."

ಖರ(ಫಾ.) – ಗಾರ್ದಭ. ಕತ್ತೆ (ಸಂಸ್ಕೃತದಲ್ಲಿಯ "ಖರ" ಎಂಬುದಕ್ಕೆ ಗಾರ್ದಭ). ಚರನಾ < ಸಂ. ಚರ –ಮೇಯುವುದು, ಅಡ್ಡಾಡುವುದು.

ಜೇ ಕೋಈ ಲಾನಹಾರೇ ಹೈ ಶೇರಾ ಕೂಂ ಡರ
ತೋ ಕಾ ಉನ ಕೀ ನಜರಾ ಮೇ ಅಛತಾ ಹೈ ಖರ । ೧೦

ಯಾರು ಸಿಂಹಕ್ಕೂ ಆತಂಕವನ್ನು ಉಂಟು ಮಾಡಬಲ್ಲರೋ ಅಂಥವರ ದೃಷ್ಟಿಯಲ್ಲಿ ಕತ್ತೆಯ ಪಾಡಾದರೂ ಎಂಥದು.

ಶೇರ(ಫಾ.) – ಸಿಂಹ. ನಜರ (ಅ) – ದೃಷ್ಟಿ. ಖರ – ಗಾರ್ದಭ, ಕತ್ತೆ.

ವಲೇ ವೋ ಜೋ ಹೈ ಸೋ (ಅತಬೇ) ತಮೀಜ
ಕಿ ಜಿಸ ವಕ್ತ ಪಾತಾ ಹೈ ಘುರಸತ ಅಜೀಜ । ೧೧
ನ ರಖ ಕುಚ ಧನೀ ಕೇ ಜಿಯಾ–ಪರ ನಜರ
ಕರೇ ಖಾರ ಸಬ ಬಾಗೇ–ಶಾಹೀ ಕೋ ಚರ । ೧೨

ಆದರೆ ಅದು (ಕತ್ತೆ) ಅತ್ಯಂತ ಅವಿಚಾರಿ. ಅದಕ್ಕೆ ಇಷ್ಟವಾದ ಸ್ವಸ್ಥತೆಯು ದೊರೆತೊಡನೆ, ಅದು ಯಜಮಾನನಿಗೆ ಆಗುವ ನಷ್ಟವನ್ನು ಕುರಿತು ಯೋಚಿಸುವುದಿಲ್ಲ. ರಾಜೋದ್ಯಾನವನ್ನೆಲ್ಲ ತಿಂದು ಹಾಕಿ ನಿಕೃಷ್ಟಗೊಳಿಸಿ ಬಿಡುವುದು ಅದರ ಸ್ವಭಾವ.

ವಲೇ(ಫಾ.) – ಆದರೆ, ಜೇ – ತಮಿಜ್ (ಅ.) – ಅವಿಚಾರಿ. ಘುರ್ಸತ (ಫಾ) – ಸ್ವಸ್ಥತೆ. ಅಜೀಜ (ಅ.) –ಪ್ರಿಯ. ಜಿಯಾ < ಜಿಯಾನ (ಫಾ.ಸಂ.ಜಿನಾತಿ) – ನಷ್ಟ. ಖಾರ(ಫಾ.) – ನಿಕೃಷ್ಟ.

ಗರಜ ಯೋ ಕಿ ಅಹಲೇ – ಗರಜ್ ನಾ – ಬ – ಕಾರ
ಲಗೇ ಖರ ತೇ ಕಮ ದೇಕನೇ ಮೇ ಬಿಚಾರ । ೧೩
ಕಿ ಜಿಸ ಘರ ತೇ ಜೇ ಕೋಈ ಬಡ್ಯಾ ಹೋ ಅಂಗೇ
ಪಿಛೇ ತೋಡನೇ ಫಿರ ವಹೀ ಘರ ಮಂಗೇ । ೧೪

ಸಾರಾಂಶ, ಸ್ವಾರ್ಥ ಹಾಗೂ ನಿರುಪಯೋಗಿ ಜನರು ಕತ್ತೆಗಿಂತಲೂ ಹೀನ ತಿಳಿವಳಿಕೆಯನ್ನು ಉಳ್ಳವರಾಗಿರುತ್ತಾರೆ. ಆ ಮಾತನ್ನು ಹೀಗೆ ವಿಚಾರ ಮಾಡಿದಾಗ ಅರಿವಾಗುವುದು. ಯಾವ ಮನೆಯ ಆಧಾರದಿಂದ ಅವರು ದೊಡ್ಡವರಾಗಿ ಬೆಳೆಯುವರೋ ಅದೇ ಮನೆಯನ್ನು ಕೊನೆಗೆ ಉರುಳಿಸುವುದಕ್ಕೆ ಅವರೇ ನೋಡುವರು.

ಗರಜ (ಅ.) – ಸಾರಾಂಶ. ಅಹಲೇ – ಗರಜ – ಸ್ವಾರ್ಥಿ ಬ – ಕಾರ(ಫಾ.) – ಕೆಲಸ ಮಾಡುವವನು ನಾ –ಬ – ಕಾರ (ಫಾ.) – ನಿರುಪಯೋಗಿ, ನಿರುದ್ಯೋಗಿ, ಖರ – ಕತ್ತೆ. ಅಂಗೇ < ಸಂ. ಅಗ್ರೇ – ಮುಂದೆ, ಮುಂದಕ್ಕೆ. ಮಂಗನಾ < ಸಂ. ಮಾಗ – ಬೇಡು, ಹಕ್ಕೊತ್ತಾಯ.

(೧೨) ಜಿಯಾ – ಕಾರ ಕೂಂ ಕುಚ ನ ಇಸ ಸೂದ ಹೈ
ಪಡ್ಯಾ ಘರ ತೋ ಆಪೀ ಬೀ ನಾ – ಬೂದ ಹೈ । ೧೫

ಹಾನಿಯನ್ನು ಉಂಟು ಮಾಡುವವನಿಗೆ ಇದರಿಂದಾಗುವ ಲಾಭ ಯಾವುದೂ ಇಲ್ಲ. ಅವನ (ಆದರೆ ಅವನು ಇದನ್ನು ಮರೆತುಬಿಟ್ಟಿರುವನು) ಮನೆಯು ಏನಾದರೂ ಕೊಂಚ ಬಿದ್ದು ಹೋದಲ್ಲಿ ಅವನೇ ಸ್ವತಃ ಹಾನಿಯನ್ನು ಅನುಭವಿಸುವನು.

ಸೂದ (ಫಾ.) – ಬಡ್ಡಿ, ಲಾಭ. ಬೂದನ (ಫಾ.ಸಂ. "ಭೂತ"ದಿಂದ

ರೂಪಗೊಂಡಿರುವ ಕ್ರಿಯಾಪದವಿದು) –ಆಗುವುದು, ಇರುವುದು, ನಾ – ಬೂದ(ಫಾ.) – ನಷ್ಟ.

(೫), (೧೩) ಬದ–ಅಂದೇಶ ಬದ–ಕೇಶ ಯಾನೇ ಸಿವಾ
ಹುಆ ಶಾದ ಅಮಲ ದೇಕ ಶಹೀ ಕಾ ನವಾ । ೧೬

ಕುವಿಚಾರಿಯೂ ಕುಮಾರ್ಗಿಯೂ ಆದ ಶಿವಾಜಿಯು (ಆದಿಲಶಾಹಿ) ರಾಜ್ಯದ ಈ ಹೊಸ ಅವಸ್ಥೆಯನ್ನು ಕಂಡು ಬಹಳವಾಗಿ ಆನಂದಪಟ್ಟನು.

ಅಂದೇಶೀದನ (ಫಾ.ಕ್ರಿಯಾಪದ) – ವಿಚಾರ ಮಾಡುವುದು. ಕೇಶ (ಫಾ.) – ಮಾರ್ಗ. ಶಾದ (ಫಾ.) – ಸಂತುಷ್ಟ, ಆನಂದಿತ. ಅಮಲ (ಅ.) – ಕೃತಿ, ಕಾರ್ಯ, ಪರಿಸ್ಥಿತಿ. ಶಹೀ < ಶಾಹೀ (ಫಾ.) – ರಾಜ್ಯ.

ಇತೀ ಮುಲ್ಕ ಮೇ ಆಗ ಸುಲಗೀ ಹೈ ಸಾಂಚ
ಕಿ ಸಬ ಶಹರ್ ಬೇ–ಕಲ ಹೈ ಲಗತೇ ಹೀ ಆಂಚ । ೧೭

ವಾಸ್ತವವಾಗಿ ರಾಜ್ಯವನ್ನು ಎಷ್ಟೊಂದು ಬೆಂಕಿ ಆವರಿಸಿಕೊಂಡಿರುವುದೆಂದರೆ, ಅದರ ಕೊಂಚ ಕಿಡಿಯು ಸೋಂಕಿದ್ದಕ್ಕೆ (ಈ) ಎಲ್ಲ ಪಟ್ಟಣವು ನಿರ್ಜೀವವಾಗಿ ಹೋಗಿದೆ.

ಇತಿ < ಸಂ. ಇಯತ – ಇಷ್ಟು. ಆರಿಚ < ಸಂ. ಅಂಚಿ – ಬೆಂಕಿ. ಖಾಂಚ < ಸಂ.ಸತ್ಯ – ನಿಜವಾಗಿ, ವಾಸ್ತವ.

ಹುಆ ಫರ್ಚ ಅತಾ ಯೂಂ ಕಿಯೋ ಆಗ ಆಜ
ಸುಲಗನೇ ನ ದೇನೇ ಕೀ ಕರನಾ ಇಲಾಜ । ೧೮

ಈ ಬೆಂಕಿಯು ಇನ್ನೂ ಹೆಚ್ಚಾಗಿ ಹರಡದಂತೆ ಉಪಾಯ ಮಾಡುವುದೇ ಈಗಿನ ಮುಖ್ಯ ಕಾರ್ಯವಾಗಿದೆ.

ಫರ್ಜ (ಅ.) – ಕರ್ತವ್ಯ. ಇಲಾಜ (ಅ.) – ಉಪಾಯ.

ಶಿ ಹೈ ದಲ ತುಮರಾ ಜೋ ತೀರಾ ಶಾ ಮೇಗ
ಬುಜಾತಾ ಝುಡಪ ಉಸ ಬರಫ ಬರ್ಕ ತೇಗ । ೧೯

(ಏ ಬಹಲೋಲ!) ಬಾಣಂಗಳ ಮೇಘದಂತೆ ಇದೆಯಲ್ಲವೆ ನಿನ್ನ ಸೈನ್ಯ. ಅದು ಆ ಅಗ್ನಿಯ ಮೇಲೆ ಎರಗಿ ಖಡ್ಗ ರೂಪಿ ಮಿಂಚಿನಿಂದ ಮತ್ತು ಮಂಜಿನಿಂದ ಅದನ್ನು ಪೂರ್ಣವಾಗಿ ಆರಿಸಬಲ್ಲುದು.

ಮೇಗ(ಫಾ.) < ಸಂ.ಮೇಘ – ಮೋಡ. ಬುಜನಾ (ಬುಝಾನಾ) < ಸಂ.ಬುಧ – ಶಮನ ಮಾಡು, ಆರಿಸು. ಝುಡಪ (ಮರಾಠಿ) ಪಾ. ಝುಟಪ್ಪ –

ಮೇಲೆ ಎರಗು. ಬರಫ ಬರ್ಫ (ಫಾ.) < ಸಂ. ವಪ್ರ – ಹಿಮ, ಮಂಜು. ಬರ್ಕ (ಅ.) – ಮಿಂಚು. ತೇಗ – ಕತ್ತಿ, ಖಡ್ಗ.

೧೪. ಕಹೇ ಜಚ ಸುಖನ ಮುಮ್ಲಿಕತ ಕೇ ಮದಾರ
ಸುನ್ಯಾ ಸೋ ಚ ಬೋಲ್ಯಾ ವೋ ಯೂಂ ಕಾಮಗಾರ । ೨೦

ರಾಜ್ಯಕ್ಕೆ ಆಧಾರಭೂತವಾಗಿದ್ದವನೇ (ಖವಾಸಖಾನ) ಈಗ ಈ ಮಾತನ್ನು ಹೇಳಿದ್ದನು. ಆ ಕರ್ತೃತ್ವ ವ್ಯಕ್ತಿ (ಬಹಲೋಲಖಾನ)ಯು ಅದನ್ನು ಕೇಳಿದ ಮೇಲೆ ಹೀಗೆ ಮರು ನುಡಿದನು..........

ಸುಖನ, ಸಖುನ (ಫಾ.) – ವಾಣಿ, ನುಡಿ, ಮುಮ್ಲಿಕತ (ಅ.) ಮುಲ್ಕ (ರಾಜು – ರಾಜ್ಯ. ಮದಾರ (ಅ.) – ಆಧಾರ. ಕಾಮಗಾರ (ಫಾ.) < ಸಂ. ಕಾಮಕಾರ – ಕರ್ತೃತ್ವದ ವ್ಯಕ್ತಿ.

ಸಿವಾ ಗರಚಿ ಉಸ ಬೂಮ ಶಾ ಬೂಮ ಹೈ
ಕಿತೀ ತಿಸ ಬುಜುರ್ಗಿ ಸೋ ಮಾಲೂಮ ಹೈ । ೨೧

ಶಿವಾಜಿಯು ಎಷ್ಟು ಕೆಟ್ಟ (ಅಶುಭದಲ್ಲಿಯೇ ಅಶುಭ)ವನಾಗಿರುವನು ಎಂಬುದು ತಿಳಿದರೆ (ಬಹಳ ಭಯಾನಕ) ಅವನ ದೊಡ್ಡಸ್ತಿಕೆಯಾದರೂ ಎಂಥದು, ಯಾವಮಟ್ಟದ್ದು ಎಂಬುದು ಸಹಜವಾಗಿಯೇ ಅರಿವಾಗುತ್ತದೆ.

ಬೂಮ(ಫಾ.) – ಕುರೂಪಿ, ಅಶುಭ. ಮಾಲೂಮ (ಅ.ಇಲ್ಮ್) – ಅರಿವು. ಬುಜುರ್ಗಿ – ದೊಡ್ಡಸ್ತಿಕೆ, ಶ್ರೇಷ್ಠತೆ.

(೧೫) ತುಮಾರಾ ಜೋ ಶಾಯದ ಹೈ ಖಾತಿರ–ಶರೀಫ
ತೋ ಕ್ಯಾ ಹೈ ವೀ ಜೋ ಮಿಲ್ಯಾ ಕೋಈ ಹರೀಫ । ೨೨

ಬಹುಶಃ ಅವನನ್ನು (ಶಿವಾಜಿ) ನೀವಿನ್ನು ಪೂಜ್ಯನಾಗಿಯೇ ಭಾವಿಸಿರಬಹುದು ಮನಸ್ಸಿನಲ್ಲಿ. ಆದರೆ ಅವನೇ ಶತ್ರುವಿನ ರೂಪದಲ್ಲಿ ಅವತರಿಸಿದರೆ?

ಖಾತಿರ (ಅ.) – ಮನಸ್ಸು, ಹೃದಯ. ಶರೀಫ (ಅ.) – ಶ್ರೇಷ್ಠ, ಪೂಜ್ಯ. ಹರೀಫ (ಅ.) – ಶತ್ರು, ಪ್ರತಿದ್ವಂದ್ವಿ

(೧೬) ಕಿ ಹೈ ಅನಗಿನತ ಫೌಜ ಉಸ ಪಾಸ ಅಗರ
ವಲೇ ಚೋರ ಕಾ ಆಏ ಸಾವಾ ಕೀ ಸರ । ೨೩

ಅವನ ಹತ್ತಿರ ಬಹುಶಃ ಅಗಣಿತ ಸೈನ್ಯವೇ ಇರಬಹುದು. ಆದರೂ ಚೋರನಿಗೆ ಸಜ್ಜನನ ಸಮಾನ ಸ್ಥಾನ (ವರಸೆ) ಬರುವುದಾದರೂ ಹೇಗೆ ?

ಪಾಸ < ಸಂ. ಪಾರ್ಶ್ವ – ಬಳಿ, ಹತ್ತಿರ. ವಲೇ < ವಲೇಕ < ವಲೇಕಿನ (ಫಾ.) – ಆದರೆ. ಪ್ರಾಕೃತದಲ್ಲಿಯೂ 'ವಲೇ' ಶಬ್ದವು ಬಳಕೆಯಲ್ಲಿದ್ದು (ಹೇಮಚಂದ್ರ ದೇಶಿನಾಮ ಮಾಲಾ) ನಿಶ್ಚಿತ ಎಂಬರ್ಥವಿದೆ ಅಲ್ಲಿ. ಸಾವ < ಸಂ. ಸಾಧು – ಸಜ್ಜನ. ಸರ (ಮರಾಠಿ) – ಸಮಾನ ಸ್ಥಾನ, ವರಸೆ.

ಹಮೀ ಜಾ ಖಡೇ ರಹೇ ತೋ ಕರ ಇಖ್ತಿಯಾರ
ರಖೇ ನಾ ನಜರ ಮೇ ದಂದೀ ಕಾ ಶುಮಾರ । ೨೪

(ಮತ್ತೆ ಈ ಮಾತು) ಯಾವಾಗ ನಾವು ಈ ವಿಚಾರವನ್ನು ಒಪ್ಪಿಕೊಳ್ಳುವೆವೋ ಆಗ ಶತ್ರುವು ನಮ್ಮ ದೃಷ್ಟಿಯಲ್ಲಿ ಅತ್ಯಂತ ತುಚ್ಛನಾಗುತ್ತಾನೆ.

ಇಖ್ತಿಯಾರ – ಸ್ವೀಕೃತ, ಗೃಹೀತ.

ಮೋರಾ ಹರ ಸಿಪಾಹೀ ಸೋ ಸರದಾರ ಹೈ
ಭರೀ ತರ್ಕಶ ಉಸಕೀ ಸೋ ಯಕ ಭಾರ ಹೈ । ೨೫

ನನ್ನ ಪ್ರತಿಯೊಬ್ಬ ಸೈನಿಕನು ಒಬ್ಬೊಬ್ಬ ಸೇನಾಪತಿಯೇ ಹೌದು. ಅವನ (ಬಾಣಗಳಿಂದ) ತುಂಬಿದ ಬತ್ತಳಿಕೆಯೂ ಒಂದು ದೊಡ್ಡ ಸೇನಾ ಸಮೂಹವೇ ಆಗಿದೆ.

ತರ್ಕಶ(ಫಾ.) – ಬತ್ತಳಿಕೆ. ಭಾರ – ಸೈನ್ಯ.

ಲಗ್ಯಾ ಹೇ ಮಿರೀ ತೇಗ ಕಾ ಜಿಸ ಕೂಂ ಧಾಕ
ದೇಖತ ಮೌಜ ಪಾನೀ ಕೀ ಹೋವೇ ಹಲಾಕ । ೨೬

ಯಾರಿಗೆ ನನ್ನ ಕತ್ತಿಯ ಬಗ್ಗೆ ಭಯವಿಹುದೋ ಅಂಥವರು ಆ (ಖಡ್ಗದ ನೀರಿನ) ಅಲೆಗಳನ್ನು ಕಂಡೊಡನೆಯೇ ಭಯಭೀತರಾಗುವರು.

ಮಿರೀ < ಮೋರೀ – ನನ್ನ. ಮೌಜ (ಫಾ.) – ತೆರೆ, ಅಲೆ. ಹಲಾಕ ಹೋನಾ – ಭಯಬೀತಿ ಉಂಟಾಗು, ಸಂಕಟಕ್ಕೆ ಈಡಾಗು.

ಬಿಜಾಪೂರ ಕೀ ನೈ ಸಿಫತ ಯೋ ನವೀ
ಕಿ ಹೈ ಶೇರೋ–ಶರ್ಜ್ಯಾ ಕೀ ಕುಹನೀ ಗವೀ । ೨೭

ಈ (ಶೌರ್ಯ) ಗುಣವು ವಿಜಾಪುರಕ್ಕೆ ಹೊಸದಾದುದೇನೂ ಅಲ್ಲ. ವಿಜಾಪುರ ಎಂಬುದು ವ್ಯಾಘ್ರ – ಸಿಂಹಗಳ ಒಂದು ಪ್ರಾಚೀನ ಗುಹೆಯೂ ಹೌದು.

ಸಿಫತ(ಅ.) – ಗುಣ. ಶೇರ(ಫಾ.) – ಸಿಂಹ. ಶರ್ಜ್ಯಾ < ಶರ್ಜಹ (ಫಾ.) – ಹುಲಿ, ಬಹಳ ನಿಷ್ಠುರ ಪ್ರಾಣಿ. ಕುಹನಿ < ಕುಹನ(ಫಾ.) –ಪ್ರಾಚೀನ. ಗವಿ (ಕನ್ನಡ) – ಗುಹೆ.

ಸಿವಾ ಆಜ ಮೋಢೇ ಜೋ ಫೌಜಾ ಕೂಂ ನೀಟ
ಚಲಾಯಾ ಹೈ ಆಂಗೇ ಅಪೀ ರಕ ಜೋ ಪೀಟ ।೨೮

ಸಿರ ಉಸ ಕಾ ಕುಚಲ ಯೂ ಕರೂ ಉಸ ಕೂಂ ಗುಮ
ಕಿ ಜ್ಯೂಂ ಸಾಂಪ ಕಾ ಸೀರ ಕುಚಲೇ ಪೋ ದುಮ । ೨೯

ಶಿವಾಜಿಯು ಇಂದು ತನ್ನ ಸೇನೆಯನ್ನೆಲ್ಲ ವ್ಯವಸ್ಥಿತವಾಗಿ ರೂಪಿಸಿ, ತಾನು ಬೆನ್ನ ಹಿಂದೆ ನಿಂತು ಆ ಸೇನೆಯನ್ನು ಮುಂದಕ್ಕೆ ಕಳುಹಿಸುತ್ತಲಿದ್ದಾನೆ. ಯಾವ ರೀತಿಯಲ್ಲಿ ಹಾವಿನ ತಲೆಯನ್ನು ಜಜ್ಜಿ ಹಾಕಿದರೆ ಅದರ ಬಾಲವಷ್ಟೆ ಉಳಿಯುವುದೋ, ಹಾಗೆ ಆ ಸೈನ್ಯದ ತಲೆಯನ್ನು ಗಟ್ಟಿಯಾಗಿ ಜಜ್ಜಿ ಅದರ ನಾಮಾವಶೇಷ ಮಾಡಬೇಕು.

ಮೋಢಣೇ (ಮರಾಠಿ 'ಮೋಡಣಿ') – ರೂಪಿಸು, ಪುನಾರಚಿಸು, ನೀಚ (ಮರಾಠಿಯ "ನೀಟ್", ಕನ್ನಡದ "ನಿಟು") – ವ್ಯವಸ್ಥಿತ. ಅಪೀ – ಸ್ವತಃ. ಪೀಟ < ಸಂ. ಪೃಷ್ಠ – ಬೆನ, ಬೆನ್ನ ಹಿಂದೆ. ಗುಮ (ಫಾ.) – ಗುಪ್ತ, ಮುಚ್ಚಿಟ್ಟ. ಕುಚಲನಾ(ಸಂ.ಕುಬ್ಜ+ಲ) – ಜಜ್ಜು, ಅವ್ಯವಸ್ಥೆಗೊಳಿಸು.

ನ ಚಲಸೀ ಹಮಾರೇ ಪೋ ಕಾಫಿರ ಕಾ ಹದ
ಕಿ ಹೈ ದೀನದಾರಾ ಕೂಂ ಹಕ ಕಾ ಮದದ ॥೩೦

ನಮ್ಮ ಮೇಲೆ ಆ ಧರ್ಮ ದ್ವೇಷಿಯು ಎಂಥ ಕೋಪವನ್ನು ತೋರಿಸಿದಲ್ಲಿ ಅದರಿಂದ ಯಾವ ಪರಿಣಾಮವೂ ಆಗುವುದಿಲ್ಲ. ಕಾರಣ ಪರಮೇಶ್ವರನು ನಮ್ಮಂಥ ಧರ್ಮನಿಷ್ಠರ ಸಹಾಯಕ್ಕಿದ್ದಾನೆ.

ಚಲಸಿ (ಭವಿಷ್ಯತ್ತು ಕಾಲ) – ನಡೆದೀತೆ. ಕಾಫಿರ – ಧರ್ಮದ್ವೇಷಿ. ಹದ (ಅ.) – ಕೋಪ, ಕ್ರೋಧ. ದೀನರಾದ (ಫಾ.) – ಧರ್ಮನಿಷ್ಠ.

ಜೌ ನವ್ವಾಬ ಚೌಢಲ ಕಾಗಜ ಚಡ ಚಲ್ಯಾ
ಕಹೇ ತೂಂ ಕಿ ಭುಇ ಕೇ ಉಪರ ಗಡ ಚಲ್ಯಾ ।೩೧

ಯಾವಾಗ ನವಾಬ (ಅಬ್ದುಲ ಕರೀಂ ಬಹಲೋಲಖಾನ) ಅಂಬಾರಿಯಲ್ಲಿ ಕುಳಿತುಕೊಳ್ಳುವುದಕ್ಕೆಂದು ಆನೆಯನ್ನು ಏರಲು ಹೊರಟನೋ ಆಗ್ಗೆ ಒಂದು ದುರ್ಗವೇ ನಡೆದು ಬರತೊಡಗಿತೆಂದು (ಹೇ ಕವಿ) ಹೇಳು ನೀನು (ಬಣ್ಣನೆ ಮಾಡು).

ಜೌ < ಜವ < ಸಂ. ಯದಾ – ಯಾವಾಗ. ಚೌಢಲ < ಸಂ. ಚತುಃ+ಸ್ಥಲ – ಅಂಬಾರಿ. ಭುಇ < ಸಂ. ಭೂಮಿ – ಪೃಥ್ವಿ, ನೆಲ.

ಕಹೇ ಸಬ ನೇ ದೇಕ ಉಸ್ ತಜ್ಜಲೀ ಸೂಂ ಧೂರ
ಕಿ ನಿಕಲ್ಯಾ ಗಗನ ಪರ ಜೋ ಪತಲಾ ತೇ ಸೂರ ।೩೨

ಆ ಶೂರನೂ, ತೇಜಸ್ವಿಯೂ ಆದ ಸರದಾರನನ್ನು ನೋಡಿ ಜನರು ಹೀಗೆಂದುಕೊಂಡರು. ಈಗ ಆಕಾಶದಲ್ಲಿ ಕ್ಷಿತಿಜದ ಮೇಲಿನ ಸೂರ್ಯನೇ ಉದಯಿಸಿರುವನೋ ಹೇಗೆ !

ತಜ್ಜಲೀ (ಅ.) – ಪ್ರಕಾಶಿತ, ತೇಜಸ್ವಿ. ಮತಾಲ (ಅ.) – ಕ್ಷಿತಿಜ ಧೂರ (ಸಂ. ದ 'ಧರ್ಯ'ದಿಂದ) – ನೇತಾರ. ಶೂರ (ಸಂ. "ಸೂರ್"ನಿಂದ) – ಸೂರ್ಯ. ನಿಕಲನಾ(ನಿಸೂ+ಕಸಲೆ) – ಹೊರಹೊಮ್ಮು. ಉದಯಿಸು.

ಲಗೇ ಹರ ಹತೀ ಯೂಂ ವೋಂ ಪಾಖರ ಕೀ ನಾಲ
ಕಿ ಉತರ್ಯಾ ಹೈ ಡೋಂಗರ ಪೋ ಆ ಜ್ಯೂಂ ಅಭಾಲ । ೩೩

(ಆ ಸೈನ್ಯದಲ್ಲಿನ) ಕಬ್ಬಿಣದ ಶಿರಸ್ತ್ರಾಣವುಳ್ಳ ಜೂಲ (ಗೌಸು, ಆಸನ) ಹಾಕಿದ ಪ್ರತಿಯೊಂದು ಆನೆಯನ್ನು ನೋಡಿದಾಗ ಹೀಗೆನಿಸುತ್ತಿತ್ತು. ಪರ್ವತದ ಮೇಲೆ ಸಕಲ ಮೇಘ ಮಂಡಲವೇ ಇಳಿದು ಬಂದಿರುವುದೋ ಹೇಗೆ!

ಪಾಖರ < ಪ್ರಾಕೃತ ಪಕ್ಖರೋ (ಹೇಮಚಂದ್ರನ ದೇಶಿ ಶಬ್ದ ಮಾಲಾ ೬,೧೦) – ಕುದುರೆಯ ಅಥವಾ ಆನೆಯ ಶಿರಸ್ತ್ರಾಣ. ನಾಲ (ಅ.) – ಮೊಳೆ. ಡೋಂಗರ < ಪ್ರಾ. "ಡುಂಗರೊ"ನಿಂದ ಮರಾಠಿಯ ಡೋಂಗರ – ಪರ್ವತ. ಅಭಾಲ (ಮರಾಠಿ ಅ – ಆಭಾಳ) < ಸಂ. ಅಭ್ರ+ಲ – ಮೋಡ.

ದಿಸೇ ಹರ ಝುಲಕಲೇ ಸನೀ ಉಸ ಮೇಂ ಬರ್ಕ
ನ ಥಾ ಗಾಜನೇ ಔರ ಗರಜನೇ ಮೇಂ ಫರ್ಕ । ೩೪

(ಶಿರಸ್ತ್ರಾಣದ ಮೇಲಿನ) ಮಿನುಗುವ ಪ್ರತಿಯೊಂದು ಮೊಳೆಯೂ ಮಿಂಚಿನಂತೆ ಕಾಣುತ್ತಲಿತ್ತು. ಆ ಸೈನ್ಯದಲ್ಲಿ ಗರ್ಜಿಸುವುದು ಮತ್ತು (ಶತ್ರುವಿನ) ಆಕ್ರಮಣ ಮಾಡುವುದು ಇವೆರಡರಲ್ಲಿ ಯಾವುದೇ ವ್ಯತ್ಯಾಸವೂ ಇರಲಿಲ್ಲ.

ಸನೀ (ಅ.) – ಹದವಾದ ಮೊನೆ, ತೀಕ್ಷ್ಣವಾದ ಮೊನೆಯುಳ್ಳ ಕಬ್ಬಿಣದ ಮೊಳೆ. ಬರ್ಕ (ಅ.) – ಮಿಂಚು. ಗಾಜನಾ – ಆಕ್ರಮಣ ಮಾಡು. ಗರಜನಾ < ಸಂ.ಗರ್ಜನ – ಗರ್ಜನೆ ಮಾಡುವುದು. ಫರ್ಕ(ಅ.) – ಭೇದ, ವ್ಯತ್ಯಾಸ.

ಹತ್ಯಾ ಪರ ರಂಗಾರಂಗ ಥಾಲಾ (ಲಾಂ) ದಿಸೇ
ಕುಹಿಸ್ತಾ ಪೋ ಜ್ಯೂ ನೌ – ನಿಹಾಲಾಂ ದಿಸೇ । ೩೫

ಆನೆಯ (ಮೇಲೆ ಕುಳಿತಿದ್ದ ಸೈನಿಕನ ಕೈಯಲ್ಲಿನ) ರಂಗುರಂಗಿನ ಗುರಾಣಿಗಳು (ರಕ್ಷಣಾ ಅಸ್ತ್ರ)ಪರ್ವತರಾಜಿಯ ಮೇಲೆ ಹುಟ್ಟಿದ್ದ ನವನವೀನ ಸಸಿ(ತರು)ಗಳಂತೆ ಕಾಣುತ್ತಿದ್ದವು.

ಹತೀ < ಸಂ. ಹಸ್ತಿನ – ಆನೆ, ಢಾಲ < ಸಂ. ಢಾಲಮ – ಗುರಾಣಿ. ಕುಹಿಸ್ತಾ < ಕುಹಿಸ್ತಾನ < ಕೋಹಿಸ್ತಾನ (ಫಾ.) – ಪರ್ವತ ರಾಜಿ. ನೌ(ಫಾ.) < ಸಂ.ನವ – ಹೊಸತು, ನವೀನ. ನಿಹಾಲ (ಫಾ.) – ಸಸಿ (ತರು).

ಚಲೇ ತೋ ಹತೀ ಡಲಮಲೇ ಸಬ ಧರನ
ಅರಾಜೀ (ಕೀ) ಗಾಡ್ಯಾ ತೇ ಹದರ್‍ಯಾ ಗಗನ । ೩೬

ಆನೆಗಳು ನಡೆಯುವುದಕ್ಕೆ ಆರಂಭಿಸಿದೊಡನೆ ಭೂಮಿಯು ಕಂಪಿಸತೊಡಗಿತು. ಮದ್ದು ಗುಂಡುಗಳನ್ನು ಹೊತ್ತು ನಡೆವ ಗಾಡಿಗಳಿಂದಾಗಿ ಆಕಾಶವೂ ನಡುಗಲಾರಂಭಿಸಿತು.

ಡಲಮಲನಾ – ಅದುರು, ಕಂಪಿಸು. ಧರನ < ಧರಣೀ – ಭೂಮಿ. ಅರಾಬಾ < ಅರಾವ(ತುರ್ಕಿ) – ಮದ್ದು ಗುಂಡುಗಳನ್ನು ಸಾಗಿಸುವ ಗಾಡಿಗಳು. ಹದರನಾ – ಅಂಜು, ನಡುಗು, ಕಂಪಿತವಾಗು.

■

*

ಅಧ್ಯಾಯ – ೩

(೧೭) ... ...
ಖಡೇ ಚೋರ ಹಾರ ಸಾವ ಲಡನೇ ಕೂಂ ಸಾಂದ । ೧

(ಅ) ಚೋರ ಮತ್ತು ಸಜ್ಜನರಿಬ್ಬರೂ ತಂತಮ್ಮದೇ ಆದ ಯೋಜನೆಯನ್ನು ರೂಪಿಸಿಕೊಂಡು ಹೋರಾಟ ಮಾಡುವುದಕ್ಕೆ ಸಿದ್ಧರಾದರು.

ಚೋರ < ಸಂ.ಚೋರ – ದಿಂದ – ಕಳ್ಳ. ಸಾವ < ಸಂ.ಸಾಧು – ಸಜ್ಜನ. ಸಾಂದನ < ಸಂ. ಸಂ+ಧಾ –ಯೋಜಿಸು, ಕೂಡಿಸು (ಈ ಶಬ್ದ ಮರಾಠಿಯಿಂದ ಸ್ವೀಕರಿಸಿದ್ದಾಗಿರಬೇಕು.)

ನ ಕೈ ಬನ ಕೇ ಡಾಲ್ಯಾ ಪೋ ಇತನೇ ಹೈ ಪಾತ
ನಿಶಾನಾಂ ತೋ ಉಸ್ ತೇ ಅದಿಕ ಧಾತ ಧಾತ । ೨
ನ್ಹವೇ ಕಿಸ ಕುಹಿಸ್ತಾನ ಮೇಂ ಸಂಗ ಇತೇ
ಖಡೇ ಥೇ ಇತೇ ಹಸ್ತ ಝುಲತೇ ಮತೇ । ೩
ನ ಕಿಸ ಭುಂ ಪೋ ಚಿಮಟ್ಯಾ ಉಬಲತ್ಯಾಂ ಹೈ ಜಮ
ಚಲೇ ಬಾಂದ ರಸ್ತಾ ಇತಾ ಕುಚ ಹಶಮ । ೪

(ಆ ಸೈನ್ಯದಲ್ಲಿ) ಬೇರೆ ಬೇರೆ ಬಗೆಯ ಎಷ್ಟೊಂದು ಬಾವುಟ (ನಿಶಾನೆ)ಗಳು ಇದ್ದುವೆಂದರೆ ಯಾವುದಾದರೊಂದು ಕಾಡಿನ ಮರಗಳಲ್ಲಿಯೂ ಇಷ್ಟೊಂದು ಎಲೆಗಳು ಇರಲಾರವು. ಒಂದು ಪರ್ವತ ರಾಜಿಯಲ್ಲಿ ಇರುವ ಕಲ್ಲುಗಳಿಗಿಂತಲೂ ಅಧಿಕ ಸಂಖ್ಯೆಯಲ್ಲಿ ಮದಮತ್ತ ಆನೆಗಳು ತೊನೆದಾಡುತ್ತ ನಿಂತಿದ್ದವು ಅಲ್ಲಿ. (ಆ ಸೈನ್ಯದಲ್ಲಿ) ಇನ್ನು ಸೈನಿಕರೋ ನೆಲದ ಮೇಲೆ ಇರುವ ಇರುವೆಗಳಿಂಗಿತಲೂ ಹೆಚ್ಚಾಗಿದ್ದು ಅವರುಗಳೆಲ್ಲ ದಾರಿ ಹಿಡಿದು ನಡೆಯುತ್ತಲಿದ್ದರು.

ಪಾತ < ಸಂ.ಪತ್ರ – ಎಲೆ, ನಿಶಾನ(ಫಾ.) – ಬಾವುಟ. ಹಸ್ತ < ಹಸ್ತಿ – ಆನೆ. ಝುಲನಾ < ಸಂ.ದೋಲಾ (ದೋಲಾಯತಿ) – ತೊನೆದಾಡು, ಜಂಭದಿಂದ ಓಡಾಡು. ಮತಾ < ಸಂ.ಉತ+ವಲತೇ – ಬಿರುಕು (ತೂತು) ಹೊರಬರುವುದು. ಜಮ < ಸಂ.ಜನ್ಮ – ನಿತ್ಯ,ಸದಾ. ಹಶಮ (ಅ.) –ಖಾಸಗಿ ಸೇನೆ.

ಅಥ್ಯಾಂ ಮಾದವಾ(ವೋ) ಚ ನಾಗನ – ಭರ್ಯಾ
ಪರ್ಯಾ ತ್ಯೂಂ ನ ಥ್ಯಾ ಪನ ದಿಸೇ ಜ್ಯೂಂ ಪರ್ಯಾ । ೫
ಛನೇ ಗರ್ಮ ಹೋವೇ ತೋ ಆತಿಶ ತೇ ತಾವ
ಸುಬಕ – ಪನ ಮೇಂ ಕರತ್ಯಾ ಪವನ ಪರ ಪಡಾವ । ೬

(ಆ ಸೈನ್ಯದಲ್ಲಿನ) ಹೆಣ್ಣು ಕುದುರೆಗಳೆಲ್ಲ ನಾಗಿನಿಗಳಂತೆ ಚಪಲತೆಯುಳ್ಳವಾಗಿದ್ದವು. ಸುಂದರವಾಗಿಲ್ಲದಿದ್ದರೂ ಸುಂದರವಾಗಿಯೇ ಕಾಣುತ್ತಲಿದ್ದ ಅವು ಒಮ್ಮೆ ಬಿಸಿಯಾದರೆ ಆಯಿತು ಕ್ಷಣದಲ್ಲಿಯೇ ಅಗ್ನಿಗಿಂತಲೂ ಬಿಸಿಯಾಗಿ ಬಿಡುತ್ತಿದ್ದವು. ಇನ್ನು ಅವು ಎಷ್ಟೊಂದು ವೇಗದಲ್ಲಿ ಧಾವಿಸುತ್ತಿದ್ದುವೆಂದರೆ, ಅವು ಗಾಳಿಯ ಮೇಲೆಯೇ ಸವಾರಿ ಮಾಡುತ್ತಿರುವ ಹಾಗೆ ಭಾಸವಾಗುತ್ತಿತ್ತು.

ಮಾಂದಿ(ಫಾ.) – ಹೆಣ್ಣು ಕುದುರೆಗಳು. ನಾಗನ – ನಾಗಿನಿ. ಪರೀ(ಫಾ.) < ಅಪ್ಸರೆಯ ಹಾಗೆ. ಪನ (ಮರಾಠಿಯ "ಪಣ್")ಆದರೆ ಛನೇ < ಸಂ.ಕ್ಷಣೇ – ಕ್ಷಣದಲ್ಲಿ. (ಮರಾಠಿಯ "ಈ" ಪ್ರತ್ಯಯದಿಂದ ರೂಪುಗೊಂಡಿರುವ ತೃತೀಯೆಯ ರೂಪ.) ಆತಿಕ (ಫಾ.) – ಅಗ್ನಿ. ನಾವ < ಸಂ.ತಪ್ತ – ಬಿಸಿ. ಸುಬಕ (ಫಾ.) – ಚಪಲ. ಪಡಾವ < ಸಂ.ಪತಲೆ –(ಬೀಳು ಶಬ್ದದಿಂದ ರೂಪಿತವಾಗಿರುವ ನಾಮ) – ಚಿಕ್ಕ ಜಹಜು, ಚಿಕ್ಕದೋಣಿ.

(೧೮) ಕಹ್ಯಾ ಯೂ ಕಿ ಚೌ–ಧಿರ ತೇ ಫೌಜಾ ಚಲಾವೂ
ಜಜೀರಾ ಕರ ಅವ್ವಲ ಪಿಛೇ ಸಬ ಡುಬಾವೂ । ೭

ಆತ (ಬಹಲೋಲಖಾನನು) ನುಡಿದನು. ನಾಲ್ಕೂ ಕಡೆಯಲ್ಲಿ ಸೈನ್ಯವನ್ನು ನಿಲ್ಲಿಸಿ ಮೊದಲು ಒಂದು ನಡುಗಡ್ಡೆ (ದ್ವೀಪ)ಯನ್ನು ರೂಪಿಸುವೆನು. ಅನಂತರ ಎಲ್ಲರನ್ನೂ ಅದರಲ್ಲಿ ಮುಳುಗಿಸಿ ಬಿಡುತ್ತೇನೆ.

ಚೌ – ಧಿರ < ಸಂ. ಚತುಃ+ಧಿರ – ನಾಲ್ಕು ಬದಿಯಿಂದ. ಜಜೀರಾ < ಜಜೀರಹ (ಅ.) – ದ್ವೀಪ, ನಡುಗಡ್ಡೆ. ಪಿಛೇ < ಸಂ.ಪಶ್ಚಾತ – ನಂತರ.

ಜೋ ಹೈ ಸಬ ಅರಾಬಾ ಯೋ ಆತಿಶ ಕಾ ಮೋಟ
ಬಂದೋ ಫೌಜ ಕೇ ಗಿರ್ದ ಸಬ ಉಸರೇ ಕೋಟ । ೮

ನಮ್ಮ ಈ ಮದ್ದುಗುಂಡುಗಳ ಭಂಡಾರವೆಂಬುದು ಅಗ್ನಿಯ ಆಗರವೇ ಆಗಿದೆ. ಹಾಗಾಗಿ ಸೈನ್ಯದ ಆಚೆ ಈಚೆಗಳಲ್ಲಿ ದುರ್ಗಗಳನ್ನು ನಿರ್ಮಿಸುವುದು ಅವಶ್ಯ.

ಅರಾಬಾ < ಅರಾಬಹ (ತುರ್ಕಿ) – ಮದ್ದುಗುಂಡುಗಳ ಭಾಂಡಾರ. ಮೋಟ – ಭಂಡಾರ. ದೊಡ್ಡ ಗಂಟು. (ಮರಾಠಿಯ "ಮೋಟ" ಎಂಬ ಶಬ್ದವನ್ನು ಗಠ್ಠಾ – ದೊಡ್ಡಗಂಬ ಎಂಬರ್ಥದಲ್ಲಿಯೇ ಬಳಸಲಾಗುತ್ತದೆ.) ಕೋಟ –ದುರ್ಗ.

(೧೯) ಉಠೇ ಜಬ ತುರಂಗ ಮಾರ ಚೌ – ಧೀರ ಬಲ
ಉಡೇ ಗರ್ದ ತಿಸಯೂ ಮುದವ್ವಿದ ನಿಕಲ । ೯

ಯಾವಾಗ ಕುದುರೆಗಳು ನಾಲ್ಕು ಕಡೆಗಳಿಂದ ಪ್ರಾಣವನ್ನೇ ಪಣವಾಗಿಟ್ಟು ಧಾವಿಸಲು ಆರಂಭಿಸುವವೋ ಆಗ ಜಂತು ಮಿಶ್ರಿತ ಧೂಳು ಹಾರಾಡುವುದಕ್ಕೆ ಆರಂಭಿಸುತ್ತದೆ.

ತುರಂಗ (ಸಂ) – ಕುದುರೆ. ಗರ್ದ(ಫಾ.) – ಧೂಳು. ಮುದವ್ವಿದ (ಅ) – ಜಂತು ಮಿಶ್ರಿತ.

ಉಚಾಯಾ ಹೈ ಶೈತಾನ ಜ್ಯೂಂ ಗರ್ದ – ಬಾದ
ಕಿ ಜಾತಾ ಫಲಕ ಉಪ ಕೋ ಖೇಮೇ ಕೇ ನಾದ । ೧೦

(ಅಂದಹಾಗೆ) ಸೈತಾನ (ದೆವ್ವ)ಗಳು ಧೂಳಿನ ಬಿರುಗಾಳಿಯನ್ನೆ ನಿರ್ಮಿಸಿದವು. ಆಗ ಆಕಾಶವು ಡೇರೆ (ಬಿಡಾರ)ಯ ಹಾಗೆ ಹಾರಿಹೋಗುತ್ತಿರುವಂತೆ ಭಾಸವಾಗುತ್ತಿತ್ತು.

ಬಾದ(ಫಾ.) < ಸಂ.ವಾತ – ವಾಯು, ಗಾಳಿ, ಫಲಕ (ಫಾ.) – ಆಕಾಶ. ನಾದ < ಸಂ. ನದಕಿ (ಧ್ವನಿ ಮಾಡುವುದು) – (ದಖನಿಯಲ್ಲಿ) ಸಮಾನವಾದುದು, ಸಮ.

ಹರಕ್ಕತ ಜಮಾನೇ ಕೀ ರಹೀ ಕೋಇ ಖಡೀ
ಕಿ ಯೂ ಜಗ ಮೇ ಗರ್ದೋ ಕೀ ಮಾಟೀ ಉಡೀ । ೧೧
ನಿಕಲ ಜಾ ಕೇ ಸೂರಜ ಕೇ ದೀದೇ ತೇ ಜೋತ
ಹಿಲಾಲ ಯೂಂ ದಿಸ್ಯಾ ಜ್ಯೂಂ ಬುಜಾಏ ದೋ ಪೋತ । ೧೨

ಕಾಲದ ಪ್ರಕ್ಷೋಭೆಯಿಂದಾಗಿ ಭೂಮಿಯಲ್ಲೆಲ್ಲ ಧೂಳಿನ ಪ್ರವಾಹವೇ ಪಸರಿಸಿತು. ಅದರಿಂದಾಗಿ ಸೂರ್ಯನ ನೇತ್ರವೇ ನಿಸ್ತೇಜಗೊಂಡು ಬಿಟ್ಟಿತು. (ಅದರಲ್ಲಿನ ಪ್ರಕಾಶ ಮಾನವೇ ಇಲ್ಲವಾಯಿತು.) ಇನ್ನೂ ಚಂದ್ರನು ಆರಿಸಿದ ದೀವಟಿಗೆಯ ಹಾಗೆ ಕಾಣುತ್ತಿದ್ದನು.

ಹರಕ್ಕತ < ಹರಕತ (ಅ.) – ಗತಿ, ಪ್ರಕ್ಷೋಭೆ. ಮಾಟೀ < ಸಂ. ಮೃತ್ತಿಕಾ – ಮಣ್ಣು. ಸೂರಜ < ಸಂ. ಸೂರ್ಯ – ಸೂರ್ಯ. ದೀವಾ < ದೀದಹ (ಫಾ.) < ಸಂ. ದೃಷ್ಟಿ – ನೇತ್ರ, ಕಣ್ಣು. ಜೋತ < ಸಂ. ಜ್ಯೋತಿ –ಪ್ರಕಾಶ, ಹಿಲಾಲ.) ಚಂದ್ರ, ಬುಜಾನಾ ಸಂ. < ಬುಧೂ – ಆರಿಸು. ಪೋತ – ದೀವಟಿಗೆ, ಪಂಜು (ಸಂಸ್ಕೃತದ "ಪೋಕ"ದಿಂದ ರೂಪುಗೊಂಡದ್ದು.)

ಘಡೀ ಯಕ ಮೇ ಸಬ ಆಸಮಾ ಹೌರ ಜಮೀ
ಧುಂವೇ ಹೌರ ಅಗಿನ ಮೇ ಭರೀ ತಬ ಯಕೀ । ೧೩
ಭರೀ ಭುಇ ಹೋ ಗುಲಶನ ಕೇ ಜಾಗ್ಯಾ ಪೋ ನಾಶ
ಸಮಂದರ ಲಿಏ ಥೀನ ಭಂವರ್ಯಾ ಕೇ ಠಾರ । ೧೪
ಹವಾ ಪರ ಜಮೇ ಯೂ ಧುಂವೇ ಕೇ ಥವೇ
ಜೋ ಪೈಠೇ ಬಗೋಲೇ ಹೋ ನಿಕಲೇ ಕವೇ । ೧೫

ಆಕಾಶ ಮತ್ತು ಭೂಮಿಗಳೆರಡರಲ್ಲೂ ಒಂದು ಕ್ಷಣದಲ್ಲಿಯೇ ಬೆಂಕಿ ಮತ್ತು ಹೊಗೆಯಿಂದ ಸಂಪೂರ್ಣವಾಗಿ ಆವರಿಸಿತು. ಉದ್ಯಾನಗಳಲ್ಲೆಲ್ಲ ಬೆಂಕಿಯು ಆವರಿಸಿ ಅಲ್ಲಿನ ನೆಲವೆಲ್ಲ ಅಗ್ನಿಭಕ್ಷ್ಯಕ್ಕೆ ಈಡಾಯಿತು. (ಶಾಂತ) ಸಮುದ್ರವನ್ನೆಲ್ಲ ಹಠಾತ್ತಾಗಿ ಬಂದ ಅಲೆಗಳು ತುಂಬಿಕೊಂಡವು. ವಾತಾವರಣದಲ್ಲಿ ಎಷ್ಟೊಂದು ಹೊಗೆಯು ಆವರಿಸಿತ್ತೆಂದರೆ, (ಅಲ್ಲಿ) ಹೊಕ್ಕು ಹೊರಬಂದ ಕೊಕ್ಕರೆ (ಬಕ)ಗಳೆಲ್ಲ ಕಾಗೆಗಳಂತೆ ಕಪ್ಪಾಗಿದ್ದವು.

ಧುಂವಾ < ಸಂ.ಧೂಮ್ರ – ಹೊಗೆ, ಆವಿ. ಸಮಂದರ < ಸಂ.ಸಮುದ್ರ, ಭಂವರ < ಸಂ. ಭ್ರಮರ – ಸುಳಿ, ನೀರಿನ ತೆರೆ. ಠಾರ < ಸಂ. ಸ್ಥಾನ – ನೆಲೆ. ಥವಾ < ಸಂ. ಸ್ತೋಕ – ಗುಂಪು. ಕವಾ < ಸಂ. ಕಾಕ – ಕಾಗೆ. ಬಗೋಲಾ ಸಂ > ಬಕ+ಲ ಪ್ರತ್ಯಯ – ಬಗಳಾ – ಬಕಪಕ್ಷಿ. ಯಕೀ(ಅ.) – ವಿಶ್ವಾಸ, ಖಾತ್ರಿ, ನಾರ(ಅ.) – ಅಗ್ನಿ. ಜೋ – ಅದರಿಂದ (ಉಭಯಾನ್ವಯ ಅವ್ಯಯ) < ಸಂ. ಯತದಿಂದ ವ್ಯುತ್ಪನ್ನವಾಗಿರುವುದು. ಪೈಠಣೆ < ಸಂ. ಪ್ರವಿಷ್ಠ –ಪ್ರವೇಶಿಸು, ಒಳಹೋಗು.

ಉಥ್ಯಾ ಲೇ ಜೋ ಬಾನಾ ರವಿಶ ನಾಗ ಕೇ
ಬಂಧ್ಯಾ ಪುಲ ಹವಾ ಕೇ ಉಪರ ಆಗ ಕೇ । ೧೬
ಗಲೋಲೇ ಚಲೇ ಥೇ ಜಿದರ ದೇ ಕೋ ಸೀಸ
ಸಟೇ ಪಾಡ ಫೌಜಾಂ ಪೋ ಫೌಜಾಂ ಕೂಂ ಪೀಸ । ೧೭

ಸರ್ಪಗತಿಯಲ್ಲಿ ಗಾಳಿಯೊಳಗಡೆಯಲ್ಲಿ ಹೊರಟ ಬಾಣಗಳು ಅಗ್ನಿಯ ಸೇತುವೆಯನ್ನು ನಿರ್ಮಿಸಿದವು. (ತೋಪಿನ) ಗುಂಡುಗಳು ಯಾವ ದಿಕ್ಕಿನಲ್ಲಿ

ಹೊರಟ್ಟಿದ್ದವೋ ಆ ಎಡೆಯಲ್ಲಿಯೇ ಹೋಗಿ ಆ (ಗುಂಡುಗಳ) ಸೈನ್ಯವನ್ನು ತುಂಡು ತುಂಡು ಮಾಡಿ ಅಲ್ಲಿನ ಸೈನಿಕರ ಮೇಲೆ ಬೀಳಿಸುತ್ತಿದ್ದವು.

ಜೋ < ಸಂ. ಯತ – ಯಾವುದರಿಂದ (ಅವ್ಯಯ). (ಫಾ.) ಸೀಸ < ಸಂ. ಶೀರ್ಷ – ಮಸ್ತಕ. ಪೀಸನಾ < ಸಂ. ಪಿಷ, ಪಿನಷ್ಕಿ – ತುಂಡು ತುಂಡು ಗೈಯ್ಯುವುದು. ರವಿಶ(ಫಾ.) – ನಡೆ, ಗತಿ, ಗಲೋಲ(ಫಾ.) – ರಾಶಿ, ಸಂಗ್ರಹ. ಪಾಡನಾ (ಸಂ.ಪಾತಯತ್ರಿ) – ಬೀಳಿಸುವುದು.

ಕಿಯಾ ಶೋರ ಬಾನಾ ಜಿಧರ ಕಯ ಉಠಾನ
ಹತಿ ಡರ ಸೂಂ ಜಂಗಲ ಫಿರೇ ಲೇ ಪರಾನ । ೧೮
ಧುಂವೇ ಕಾ ಜಲಗ ಸದ್ದ ಅಥಾ ದರ್ಮಿಯಾಂ
ದೋನೋ ದಲ ತೋ ಕಾಯಮ ಅಥೇ ಜಾ ಕೇ ವಾ । ೧೯
ನಿಕಾಲ್ಯಾ ಜೌ ಮ್ಯಾನೇ ತೇ ಬಾರಾ ಹಿಜಾಬ
ಹಲೇ ಠಾರ ತೇ ಝೂಂಕ ರಾಉತ ಶಿತಾಬ । ೨೦

ಅತ್ತಕಡೆ ಇತ್ತಕಡೆ ಎನ್ನದೆ ಎಲ್ಲೆಡೆ ಬಾಣಗಳು ಹಾರಾಡಲು ತೊಡಗಿದ್ದರಿಂದ ಗೊಂದಲ ಉಂಟಾಯಿತು. ಹಾಗಾಗಿ ಆನೆಗಳು ಪ್ರಾಣಭೀತಿಯಿಂದ ಕಾಡಿನತ್ತ ಓಡತೊಡಗಿದವು. ಎಲ್ಲಿಯವರೆಗೆ ಎರಡೂ ಸೈನ್ಯಗಳ ನಡುವೆ ಧೂಮದ ಭಿತ್ತಿ ಆವರಣಯಿದ್ದಿತೋ ಅಲ್ಲಿಯವರೆಗೆ ಎರಡೂ ಸೈನ್ಯಗಳು ತಂತಮ್ಮ ಜಾಗದಲ್ಲಿ ಸ್ಥಿರವಾಗಿ ನಿಂತಿದ್ದವು. ಗಾಳಿಯಿಂದ ನಡುವಣ ಭಿತ್ತಿ ಅನಾವರಣವಾದೊಡನೆ ಶೂರ ಕುದುರೆ ಸವಾರರು ಅವಸರವಸರವಾಗಿ ತಮ್ಮ ನೆಲೆಯಿಂದ ಮುನ್ನುಗ್ಗಿದರು.

ಕಯಾಸಾ < ಸಂ.ಕೃ (ಕೃತದಿಂದಾದ ಕ್ರಿಯಾಪದ) – ಮಾಡುವುದು. ಉಠಾನಾ < ಸಂ. ಉತ್ಥಾನ – ಏಳುವುದು. ಜಂಗಲ < ಸಂ. ಜಂಗಲಮ್ – ಅರಣ್ಯ. ಪರಾನ < ಸಂ. ಪ್ರಾಣ – ಜೀವ, ಪ್ರಾಣ. ಜಾಂ, ಜಹಾ < ಸಂ. ಯತ್ರ – ಎಲ್ಲಿ. ವಾಂ, ವಹಾ < ಸಂ. ತತ್ರ – ಅಲ್ಲಿ. ರಾಉತ < ಪ್ರಾ. ರಾಯ+ಉತ: ಸಂ. ರಾಜ+ಪುತ್ರ – ಸರದಾರ, ಸೇನಾಪತಿ, ಶೋರ (ಫಾ.) – ಬೇಗನೆ (ತನ್ನ ಧ್ವನಿ). ಸದ್ದ (ಅ.) – ಗೋಡೆ, ಭಿತ್ತಿ. ದರ್ಮಿಯಾ < ದರಮಿಯಾನ –ಮಧ್ಯ, ನಡುವೆ. ಕಾಯಮ(ಅ.) – ಸ್ಥಿರ. ಹಿಜಾಬ (ಅ.) – ಪರದೆ. ಶಿತಾಬ (ಫಾ.) – ತ್ವರಿತ, ಅವಸರ.

ವಹೀ (ವಈ) ದೇಕ ಖಾಸಾ ಪಕಡ ಹತ ಕಮಾ
ಕ್ಯಾ ಹಾಂ ಅಪಿ ತರ್ಕಶ–ಬಂದಾ ಹೋ ನಿಹಾ ।೨೧
ಜೋ ಧರತೇ ಥೇ ತೀರಾ ಚಲಾನೇ ಕೀ ಲಾಘ
ಕರೋ ಆವ ಯಕ ತೀರ ಕಯಾ ಸಫ ತೇ ಸಾಫ । ೨೨

ಆತ (ಬಹಲೋಲಖಾನನು) ಇದನ್ನು ನೋಡಿ ಧನಸ್ಸನ್ನು ಕೈಯಲ್ಲಿ ಹಿಡಿದು ಹೇಳಿದನು, "ಧನುರ್ಧರರೇ, ಈಗ ಮುಂದೆ ಬನ್ನಿರಿ, ನಿಮ್ಮ ಪ್ರಾವೀಣ್ಯತೆಯನ್ನು ಈಗ ತೋರಿಸಿರಿ. ನೀವು (ಈಗ) ಒಂದೇ ಬಾಣದಿಂದ ಒಂದು ಪಂಕ್ತಿ(ಸಾಲು)ಯನ್ನು ನಿರ್ನಾಮ ಮಾಡಿಬಿಡಿ".

ಹತ < ಸಂ. ಹಸ್ತ – ಕೈ. ಕಮಾ < ಕಮಾನ (ಫಾ.) – ಧನಸ್ಸು. ತರ್ಕಶ ಬಂದ (ಫಾ) – ಧನುರ್ಧಾರಿ. ನಿಹಾ < ನಿಹಾನ (ಫಾ.) < ಸಂ. ನಿಧಾನ – ಗುಪ್ತ. ಲಾಫ (ಫಾ) – ಗರ್ವ, ಘನತೆ. ಕಯನಾ < ಸಂ.ಕೃ – ಮಾಡುವುದು. ಸಫ(ಫಾ) – ಪಂಙ್ಕ್ತಿ, ಸಾಲು (ಸೈನ್ಯದ).

ಪಕಡ ಲ ಕಶಾಕಶ ಕೇ ಗೋಶೇ ಮೇ ತಾವೂ
ಅಪೀ ಸಾದ – ಓ – ಕಾಸ ಕಾ ಲೇ ಕೋ ನಾವೂ । ೨೩
ಖದಂಗ ಜೋಡ ಚಿಲ್ಲೆ ಮೇ ಖೀಂಚ್ಯಾ ಕಮಾ
ದಿಯಾ ಬೋಸಾ ತಿಸ ಹಾತ ಉಪರ ಆಸಮಾ । ೨೪

ಕೈಯಲ್ಲಿ ಧನಸ್ಸನ್ನು ಹಿಡಿದ ಅವರು ಸಾದ ಮತ್ತು ಕಾಸರ (ಪವಿತ್ರ ಸಾಧುಗಳು)ರುಗಳ ನಾಮ ಸ್ಮರಣೆ ಮಾಡಿದರು. ನಂತರ ಬಿಲ್ಲಿಗೆ ಬಾಣವನ್ನು ಹೂಡಿ ಎಳೆಯುವಾಗ್ಗೆ ಆಕಾಶದಿಂದ ವರುಣನು ಅವರ ಕೈಯನ್ನು ಚುಂಬಿಸಿದನು.

ಕಶಾಕಶ(ಫಾ.) < ಸಂ. ಕರ್ಷ+ಆ+ಕರ್ಷ – ಧನಸ್ಸು, ಎಳೆಯುವುದು. ಗೋಶಾ – ಗೋಶಹ(ಫಾ) < ಸಂ. ಕೋಷ್ಠ – ಮೊಳಕೈ. ಖದಂಗ(ಫಾ.) < ಸಂ. ಖದಿರ+ಅಂಗ – ಬಾಣ. (ಖದಿರ ಎಂಬ ಕಟ್ಟಿಗೆಯು ಬಹಳ ಗಟ್ಟಿಯಾದುದು. ಅದರಿಂದ ಬಾಣಗಳನ್ನು ತಯಾರಿಸಲಾಗುವುದು) ಚಿಲ್ಲಾ (ಹಿಂದಿ) – ಬಿಲ್ಲಿನ ದಾರ, ಹೆದೆ.

ನ ಕೌಸೇ – ಕಜಹ ತಬ ರಖೇ ಕಿಸ ಸೂ ತಾಬ
ನ ಚಲನೇ ಕೇ ಇತನೇ ಹೈ ತೀರೇ – ಶಿಹಾಬ । ೨೫

ಆಗ ಇಂದ್ರ ಧನಸ್ಸೂ ಕೂಡ (ಬಾಣದೆದುರು) ನಿಸ್ತೇಜವಾಗಿತ್ತು. (ಬೇರೆಯವರ) ಬಾಣಗಳು ಅವುಗಳೆದುರು ಪ್ರಯೋಗಗೊಳ್ಳುವಷ್ಟು ತೇಜಸ್ವಿಯಾಗಿರಲಿಲ್ಲ.

ಕೌಸೇ – ಕಜಹ(ಅ.) – ಇಂದ್ರಧನಸ್ಸು. ತಾಬ(ಫಾ.) < ಸಂ. ತಾಪ – ತೇಜ, ಪ್ರಕಾಶ, ಶಕ್ತಿ. ಶಿಹಾಬ (ಅ.) –ತೇಜಸ್ವಿ ಜ್ವಾಲೆ.

ಕಮಾ ಅಪನೇ ಕಬ್ಜೇ ಮೇ ಪಕಡ್ಯಾ ಜೌ ಧಸ
ರಗೋ – ಪಯ ಮೇಂ ಉಸಕೇ ಭರ್ಯಾ ಆಪ ಕಸ । ೨೬

ಯಾವಾಗ ಅವನು ತಾನೇ ಧನಸ್ಸನ್ನು ತೆಗೆದುಕೊಂಡು ಅದನ್ನು ಗಟ್ಟಿಯಾಗಿ ಹಿಡಿದನೋ, ಆಗ್ಗೆ ಅವನ ಕೈಗಳು ಮತ್ತು ಕಾಲುಗಳ ನರನಾಡಿಗಳಲ್ಲೆಲ್ಲ ತಂತಾನೆ ಶಕ್ತಿಯು ಉಕ್ಕಿ ಉಕ್ಕಿ ಬಂದಿತು.

ಧಸನಾ <ಸಂ. ಧೃಷ (ಧರ್ಷತಿ) – ಅವಮಾನ ಮಾಡು, ಒಳಗಡೆ ಹುದುಗು. ರಗ(ಫಾ.) – ನಾಡಿ. ಪಯ(ಫಾ) < ಸಂ. ಪದ – ಪಾದ, ಚರಣ. ಕಸ < ಸಂ. ಕಷ – ಪರೀಕ್ಷೆ, ಶಕ್ತಿ.

ನಜರ ಕೀ ಸಫಾಈ ಕೂಂ ರಖ ಶಸ್ತ ಮೇಂ
ದಿಖಾ ತೀರ ಕೀ ರಾಸತೀ ದಸ್ತ ಮೇಂ । ೨೭

ಬಾಣದ ಪೃಷ್ಠ ಭಾಗದಲ್ಲಿ ಸ್ಪಷ್ಟವಾಗಿ ದೃಷ್ಟಿಯನ್ನಿಟ್ಟು ಅವನು ತನ್ನ ಕೈಯಲ್ಲಿ ಬಾಣವು ಸರಳವಾಗಿ ಕುಳಿತಿಹುದೇ ಎಂಬುದನ್ನು ಗಮನಿಸಿದನು.

ಶಸ್ತ – 'ನಿಶಸ್ತ' (ಫಾ.) ಎಂಬ ಶಬ್ದದ ಸಂಕ್ಷಿಪ್ತ ರೂಪ. ಶಸ್ತ ಎಂಬುದು ಧನಸ್ಸಿನ ದಾರ (ಹೆದೆ)ದ ಮೇಲೆ ಬಾಣವನ್ನು ಇಡುವ ಭಾಗ. ನಿಶಿಸ್ತನ (ಫಾ. ಕ್ರಿಯಾಪದ) < ಸಂ. ನಿ+ಸೀದ (ನಿಷೀದಲೆ) – ಕೂರುವುದು. ಈ ರೀತಿಯಲ್ಲಿ "ಶಿಸ್ತ"ಎಂಬುದು ಬಾಣಗಳ ಸ್ಥಾನ. ರಾಸತೀ < ರಾಸ್ತಿ (ಫಾ.) – ಸರಳತನ, ನೈಜತೆ. ದಸ್ತ (ಫಾ.) < ಸಂ. ಹಸ್ತ – ಕೈ.

ಚಲಾಯಾ ಇತೇ ದೂರ – ಅಂದಾಜ ತೀರ
ಕಿ ಛುಟತಾ ಸೋ ನೈ ಉಸ ಕಿಯಾ ಜಿಸ ಅಸೀರ । ೨೮
ಕಿ ಹೋತಾ ಜೋ ಲಗತಾ ತೋ ಗುಂಬದ ಪೋ ಮಾರ
ಕಬೂತರ ಕೇ ಅಂಡರೇ ತೇ ಸಕ ಉಸ ಕೇ ಪಾರ । ೨೯

(ಅವನು) ಬಾಣಗಳನ್ನು ದೂರದೂರಕ್ಕೆ ಬಿಡುತ್ತಿದ್ದ ರೀತಿಯು ಹೀಗಿತ್ತು. ಅವನು ಯಾವುದರ ಮೇಲೆ ಬಾಣದ ಗುರಿಯನ್ನಿಟ್ಟಿದ್ದನೋ ಅದು ಹಾಗೆಯೇ ಉಳಿಯುವುದು ಸಾಧ್ಯವಿರಲಿಲ್ಲ. ಅದು ಗುಮ್ಮಟವಾಗಿದ್ದರೂ (ಕಳಸ) ಸರಿ, ಪಾರಿವಾಳದ ಮೊಟ್ಟೆಯ ಹಾಗೆ ಅದನ್ನು ಭೇದಿಸಿಕೊಂಡು ಆ ಕಡೆಗೆ ಹೋಗಿ ಬಿಡುತ್ತಿತ್ತು.

ದೂರ – ಅಂದಾಜ – ದೂರ ದೂರಕ್ಕೆ ಹೋಗಿ ಬೀಳುವುದು. ಅಸೀರ (ಫಾ.) – ಕೈದಿ, ಬದ್ಧ. ಅಂಡರಾ –ಮೊಟ್ಟೆ.

ಚಲೇ ತೀರ ಖಾಸೇ ಕೇ ಜಣ್ಯ ಪೇಶ–ಇಮಾಮ
ಖದಂಗ ಮುಕ್ತದೀ ಥೇ ಸಿಪಹ ಕೇ ತಮಾಮ । ೩೦

ವಿಶಿಷ್ಟವಾದ ಅವನ (ಬಹಲೋಲಖಾನನ) ಬಾಣಗಳು ಯಾರೋ

ಧರ್ಮೋಪಕದೇಶನು ಉಪದೇಶ ನೀಡುವ ಹಾಗೆ ಉದ್ದೇಶಿಸಿ ಅವರತ್ತ ಚಿಮ್ಮುತ್ತಿದ್ದವು. ಆಗ ಅವನ ಜೊತೆಗೆ ಅವನ ಸೈನಿಕರ ಬಾಣಗಳು ಅವುಗಳನ್ನು ಅನುಕರಿಸುತ್ತಿದ್ದವು. (ಬಹಲೋಲಖಾನನು ಬಾಣಗಳ ವರ್ಷವನ್ನೇ ಕರೆಯುತ್ತಿದ್ದಾಗ, ಅವನ ಸೈನಿಕರೂ ತಮ್ಮ ಬಾಣಗಳನ್ನು ಬಿಡುತ್ತಿದ್ದರು.)

ಇಮಾಮ (ಅ.) – ಧರ್ಮದ ಉಪದೇಶಿ. ಪೇಶ (ಫಾ.) – ಪ್ರಮುಖ, ಅಗ್ರಭಾಗದಲ್ಲಿ ಇರುವವನು. ಮುಕ್ತದೀ (ಅ.) – ಶ್ರದ್ಧಾಳು, ಅನುಯಾಯಿ. ಸಿಪಹ < ಸಿಪಾಹ (ಫಾ.) – ಸೇನೆ. ಖದಂಗ(ಫಾ.) – ಬಾಣ.

(೨೦) ತರದದುದ ಪೋ ಖಾಸೇ ಕೇ ಲಾಕ ಆಫರೀ
ರಖ್ಯಾ ಥಾ ನಜರ ಮೇಂ ಜೋ ವೋ ಸಬ ಜಮೀಂ ।೩೧

ಸ್ವತಃ ಅವನು (ಬಹಲೋಲಖಾನ್) ರಣಭೂಮಿಯ ಎಲ್ಲೆಡೆಯಲ್ಲೂ ತನ್ನ ದೃಷ್ಟಿಯನ್ನು ಕೇಂದ್ರೀಕರಿಸಿದ್ದನು. ಎಂತಲೇ ಅವನು ತೆಗೆದುಕೊಂಡ ಕಾಳಜಿಯ ಬಗ್ಗೆ ಅವನಿಗೆ ಲಕ್ಷ ಲಕ್ಷ ಬಾರಿ ಸ್ತುತಿಸಬೇಕಾಗುತ್ತದೆ.

ತರದದುದ (ಅ.) – ಚಿಂತೆ, ಕಾಳಜಿ. ಆಫರೀ < ಆಫರಿನ (ಫಾ.) – ಆಶೀರ್ವಾದ, ಸ್ತುತಿ. ಲಾಕ < ಸಂ. ಲಕ್ಷ. ಸಬ < ಸಂ. ಸರ್ವ. ಜೋ – ಏನು, ಏಕೆ. ಜೋ < ಸಂ. ಯಕ – ಯಾವುದು.

ದೇಖೇ ತೋ ಅಪೀ ಸಿನ ಮೇ ಥಾ ನೌ – ಜವಾಂ
ಪನ ಉಸ್ತಾದ ಥಾ ಪೀರ ಮರ್ದಾಕೂಂ ವಾಂ । ೩೨

ಹಾಗೆ ನೋಡಿದಲ್ಲಿ ಅವನು ವಯಸ್ಸಿನಿಂದ ಇನ್ನೂ ತರುಣ. ಆದರೆ (ಅಲ್ಲಿ) ಇರುವ ವೃದ್ಧ ವೀರರಿಗೆಲ್ಲ ಅವನೇ ಗುರುವಾಗಿದ್ದನು.

ಸಿನ (ಅ.) – ವಯಸ್ಸು. ಉಸ್ತಾದ (ಫಾ.) – ಕಲಿಸುವವ, ಗುರು. ನೌ (ಫಾ.) < ಸಂ. ನವ – ಹೊಸತು, ನವೀನ. ಜವಾ < ಜವಾನ (ಫಾ.) < ಸಂ. ಯುವಾನ – ಯುವಕ, ತರುಣ.

(೨೧) ಯೋ ಹೈ ಹಕ ಮೇಂ ಧೂರಾ ಕೇ ಖೂಬ ಯಕ ಮಿಸಲ
ಕಿ ಲಡನೆ ತೇ ಆಪೀ ಲಡಾನಾ ಕುಬಲ । ೩೩

"ಸ್ವತಃ ಹೋರಾಡುವುದಕ್ಕಿಂತಲೂ ಕಠಿಣ (ಕೆಲಸ)ವೆಂದರೆ ಮತ್ತೊಬ್ಬರನ್ನು ಹೋರಾಡುವುದಕ್ಕೆ ಪ್ರವೃತ್ತಗೊಸುವಂತಹ ಕೆಲಸವಾಗಿದೆ" ಎಂಬುದು ವೀರರುಗಳ ವಿಷಯದಲ್ಲಿ ಇರುವ ಒಂದು ಅಭಿಪ್ರಾಯ. (ಒಬ್ಬ ವೀರನು) ಸ್ವತಃ ಹೋರಾಟ ನಡೆಸಿದರೆ ಅವನು ಒಬ್ಬಿಬ್ಬರನ್ನು ಮಾತ್ರ ಕೊಲ್ಲಬಹುದು. ಆದರೆ (ಚಾತುರ್ಯದಿಂದ)

ಅನ್ಯರನ್ನು ಹೋರಾಡಲು ಪ್ರವೃತ್ತಗೊಳಿಸಿದರೆ ಅವನೊಂದಿಗೆ ಸಾವಿರಾರು ಜನರು ಹೋರಾಡುವರು.

ಹಕ – ಸತ್ಯ. ಮಿಸಲ (ಅ.) – ಹೇಳುವುದು, ವಚನ. ಲಡನಾ < ಸಂ. ರಣನವ್ – ಹೋರಾಟಮಾಡು, ಯುದ್ಧ ಮಾಡು. ಕುಬಲ – ಕಠಿಣ. (ಮರಾಠಿಯಲ್ಲಿಯೂ ಈ ಶಬ್ದವು ಕಂಡುಬರುತ್ತದೆ. ಬಹುಶಃ ಇದು ದಖನಿಯು ಮರಾಠಿಯ ಮೇಲೆ ಉಂಟುಮಾಡಿದ ಪ್ರಭಾವದ ಪರಿಣಾಮವಿರಬಹುದು.) ಹಜಾರ < ಸಂ. ಸಹಸ್ರ – ಸಾವಿರ. ಲೋಚ (ಮರಾಠಿ) < ಸಂ. ಲೋಟಯತೇ, ಲೋಟು – ನೀರಿನ ಅಲೆ, ಪೂರ, ಪ್ರವಾಹ.

ಮಗರ ಥಾ ಉಸೀ ತೇ ವೋ ಚೌಥಲ ಉಪರ
ಕಿ ರಖನಾ ಅಪೀ ಹರ ತರಫ ಪರ ನಜರ । ೩೫
ಜಿಧರ ತೇ ಜೌ ಕಾಮ ಆ ಕೋ ಮುಶ್ಕಿಲ ಪಡೇ
ಕರೇ ತೋಡ, ನಾ ಉಸ ಮೇಂ ಹಗಿಜ ಅಡೇ । ೩೬

ರಣರಂಗದ ನಾಲ್ಕು ಕಡೆಗಳಲ್ಲಿಯೂ ದೃಷ್ಟಿಯನ್ನು ಇಟ್ಟಿರಬೇಕು. ಎಲ್ಲಿಯಾದರೂ ಕಠಿಣ ಪರಿಸ್ಥಿತಿ ತಲೆದೋರಿದರೆ ತಕ್ಷಣ ಅದನ್ನು ಅವಶ್ಯ ನಿವಾರಿಸಲೆಂದೇ ಅವನು ಅಂಬಾರಿಯಲ್ಲಿ ಕುಳಿತಿದ್ದನು. ಕಾರಣ ಅದರಿಂದಾಗಿ ತಡೆದು ನಿಲ್ಲುವಂತಹ ಪ್ರಸಂಗ ಬಾರದಿರಲಿ ಎಂಬುದೇ ಅವನ ಉದ್ಧೇಶವಾಗಿತ್ತು.

ಚೌಥಲ < ಸಂ. ಚತುಃ+ಸ್ಥಲ – ಅಂಬಾರಿ. ಹರ (ಫಾ.) < ಸಂ. ಸರ್ವ – ಸಕಲ. ಮುಶ್ಕಿಲ (ಅ.) – ಕಠಿಣ. ತೋಡ (ಮರಾಠಿ ನಾಮಪದ) – ಉಪಾಯ ಮಾಡು, ನಿವಾರಿಸು, ಬೇರೆಯವರ ಯುಕ್ತಿಯನ್ನು ತಡೆ.

ಆಮೀ ಆ ದೋ – ಧಿರ ತೇ ಲಡಾಈ ಅಜೀಮ
ಲೇನೇ ದಮ ಖಡಾ ಜ್ಯೂ ಹೋ ಮಾಂದಾ ಗನೀಮ । ೩೭

ಎರಡೂ ಕಡೆಯಿಂದಲೂ ಘನಘೋರ ಯುದ್ಧ ಆರಂಭವಾಗಿತ್ತು. ದಣಿದ ಶತ್ರುವು (ಕೊಂಚಹೊತ್ತು) ವಿಶ್ರಾಂತಿ ಪಡೆಯಲೆಂದು ನಿಂತಿದ್ದನೋ ಎಂಬಂತೆ ಭಾಸವಾಗುತ್ತಿತ್ತು. ಅದನ್ನು ಕಂಡಾಗ.

ಜಮನಾ < ಸಂ. ಯಮನ – ಸ್ಥಿರ. ಅಜೀಮ (ಅ.) ಘನಘೋರ. ಮಾಂದಾ < ಮಾಂದಕ (ಫಾ.) < ಸಂ. ಮಾಂದ್ಯಮ – ದಣಿವು, ಆಯಾಸ. ಗನೀಮ (ಅ.) – ಶತ್ರು.

ಅರಾಬೇ ಪೋ ಯಕ ಫೌಜ ಕಾ ಬಂದ ಹಿಸಾರ
ಧರ್ಯಾ ಆಗ ಕಾ ಆ ಕೋ ಚೌ – ಧಿರ ತೇ ಮಾರ । ೩೮
ಗಲೋಲ್ಯಾ ಕಾ ಹರ ದಮ ಛುಟೇ ಯೂ ಥವಾ
ಅಂಗಾರ್ಯಾ ತೇ ಉಸ ಹುಈ ಅಂಗೀಠೀ ಹವಾ । ೩೯

ತೋಪುಗಳನ್ನು ಇಟ್ಟಿದ್ದ ಭಾಗದ ಸುತ್ತಮುತ್ತ ಸೈನ್ಯದಳದ ಸುತ್ತು ಕೋಟೆಯನ್ನು ನಿರ್ಮಿಸಿ (ಅವರು) ನಾಲ್ಕು ಕಡೆಯಿಂದ ಕರೆಯುತ್ತಿದ್ದ ಅಗ್ನಿ ವರ್ಷಕ್ಕೆ ಅಡ್ಡಿಯುಂಟು ಮಾಡಿದರು. ಪ್ರತಿಯೊಂದು ಕ್ಷಣದಲ್ಲಿಯೂ ಮದ್ದುಗುಂಡುಗಳು ಒಟ್ಟೊಟ್ಟಾಗಿಯೇ ಸಿಡಿಯುತ್ತಿದ್ದವು. ಅವುಗಳ ತಾಪದಿಂದ (ಜ್ವಾಲೆ) ವಾತಾವರಣವೆಲ್ಲ ಅಗ್ಗಿಷ್ಟಿಕೆಯಾಗಿ ಹೋಗಿತ್ತು.

ಅರಾಬೇ (ಫಾ.) – ತೋಪು ಇಡುವ ಜಾಗ, ತೋಪುಗಳ ಬಂಡಿ. ಹಿಸಾರ (ಅ.) – ದಡ, ದುರ್ಗ. ಗಲೇಲಾ < ಗಲೋಲಹ (ಫಾ.) – ಮದ್ದುಗುಂಡು (ಬಹುತೇಕ ಸಂ.ದ. ಕಲ್ಲೋಲ). ಹರ (ಫಾ) < ಸಂ. ಗರ್ವ. ಥವಾ < ಸಂ. ಸ್ತೋಕ – ಸಮೂಹ. ಅಂಗಾರೀ < ಸಂ. ಅಂಗಾರಿಕಾ – ಜ್ವಾಲೆ, ಕಿಡಿ, ಅಗ್ಗಿಷ್ಟಿಕೆ, ಅಗೀಟಿ < ಸಂ. ಅಗ್ನಿಷ್ಠಕಾ – ಅಗ್ಗಿಷ್ಟಿಕೆ, ಭಟ್ಟಿ.

ಪಡೇ ಸಫ ಪೋ ಯೂ ತೀರ ಪಕಡೇ ಪೋ ಔಜ
ಕಿ ಜ್ಯೂ ಖೇತ ಚರನೇ ಕೃ ಟೋಲಾ ಕೀ ಫೌಜ । ೪೦
ಛಜರ ಯೂಂ ನಿಶಾನಾ ಹುಏ ಧಾತ – ಧಾತ
ಕಿ ಜ್ಯೂ ಟೋಲ ಬೈಠೇ ಪೋ ಝೂಡಾ ಕೇ ಪಾತ । ೪೧

ಬಾಣಗಳು ಬಹಳ ಎತ್ತರಕ್ಕೆ ಹೋಗಿ ಸೈನ್ಯದ ಮೇಲೆ ಬೀಳುತ್ತಿದ್ದ ರೀತಿಯು, ಹೊಲವನ್ನೆಲ್ಲ ತಿಂದು ಹಾಕಲು ಮಿಡತೆಗಳು ಬರುತ್ತಿರುವ ಹಾಗೆ ಕಾಣುತ್ತಿಲಿತ್ತು. ಮಿಡತೆಗಳು ಬಂದು ಗಿಡದ ಎಲೆಗಳನ್ನೆಲ್ಲ ತಿಂದು ಬಿಡುವಂತೆ (ಶತ್ರು ಸೈನ್ಯದಲ್ಲಿನ) ಬಾವುಟಗಳೆಲ್ಲ ಛಿದ್ರಾನ್ವಿತವಾಗಿದ್ದವು.

ಖೇತ < ಸಂ. ಕ್ಷೇತ್ರ – ಹೊಲ. ಟೋಲ < ಸಂ. ಟಿಟ್ಟಿಭ – ಮಿಡತೆ. ಛಜರ < ಸಂ. ಸಛಿದ್ರ – ಛಿದ್ರಾನ್ವಿತ. ಧಾತ < ಸಂ. ಧಾತು – ಪ್ರಕಾರ. ಝೂಡ < ಸಂ. ವೃಕ್ಷ – ಗಿಡ. ಪಾತ < ಸಂ. ಪತ್ರ – ಎಲೆ. ಔಜ (ಅ.) – ಎತ್ತರ.

ಮಗರ ದಿಲ ಮೇಂ ಕುಚ ವಹಮ ಖಾಸಾ ನ ಲ್ಯಾಏ
ನ ವೋ ಮ್ಹೇವು ಹೈ ಜಾನ ಫರ್ಗುಲ ಮಂಗಾಏ । ೪೨
ಜಬಾ ಮೇ ನ ಥೀ ಮಾರ ಬಿನ ಕುಚ ಬೀ ಬಾತ
ನ ತೀರೋ – ಕಮಾ ತೇ ನಿಕಾಲ್ಯಾ ವೋ ಹಾತ । ೪೩

ನಜರ ಮೇಂ ಅಥಾ ಹೋ ನಿಶಾನಾ ಗನೀಮಾ
ರಖೇ ದಲ ಘೋ ಭುಇ ಮಾರ ಪಡತಾ ಸೋ ಬೀಮ । ೪೪

ಆದರೆ ಅವನು (ಬಹಲೋಲಖಾನ್) ವಿಶೇಷವಾಗಿ ಮನಸ್ಸಿನಲ್ಲಿ ಯಾವುದೇ ಬಗೆಯ ಶಂಕೆಗೆ ಅವಕಾಶ ಮಾಡಿಕೊಡಲಿಲ್ಲ. (ಬಾಣಗಳ) ಮೇಘವರ್ಷವೇ ಆಗುತ್ತಿದ್ದರೂ ಅವನು (ತನ್ನ ಶರೀರ ರಕ್ಷಣೆಯ) ಕವಚವನ್ನು ಸಹ ಧರಿಸಲಿಲ್ಲ. "ಹೊಡೆಯಿರಿ" ಎಂಬ ಶಬ್ದವೊಂದನ್ನು ಬಿಟ್ಟರೆ ಅನ್ಯ ಶಬ್ದ ಬರುತ್ತಿರಲಿಲ್ಲ ಅವನ ನಾಲಗೆಯಿಂದ. ತನ್ನ ಕೈಗಳಲ್ಲಿ ಹಿಡಿದಿದ್ದ ಧನುರ್ಬಾಣಗಳನ್ನು ಕೆಳಗೆ ಚೆಲ್ಲಲಿಲ್ಲ ಅವನು. ಅವನ ದೃಷ್ಟಿಯಲ್ಲಿ ಇದ್ದಂತಹ ಮುಖ್ಯ ಗುರಿಯೆಂದರೆ ಶತ್ರುವೊಬ್ಬನೆ. ಶತ್ರು ಸೈನ್ಯವನ್ನೆಲ್ಲ ಹೊಡೆದು ಭೂಮಿಗೆ ಉರುಳಿಸುವ ಮೂಲಕ ಅವನ ಮನಸ್ಸಿನಲ್ಲಿ ನಿರಂತರ ಭಯವನ್ನು ಹುಟ್ಟಿಸಬೇಕೆಂಬುದಷ್ಟೇ ಅವನ ಇಚ್ಛೆಯಾಗಿತ್ತು.

ವಹಮ(ಅ.) – ಶಂಕೆ, ಅನುಮಾನ. ಘರ್ಗುಲ – ಶರೀರ ರಕ್ಷಣೆಯ ಉಕ್ಕಿನ ಅಂಗಿ, ಕವಚ. ಜಬಾ < ಖಬಾನ (ಫಾ.) < ಸಂ. ಜಿಹ್ವಾ – ಶತ್ರು. ಬೀಮ (ಫಾ.) – ಭೀತಿ. ಬಿನ < ಸಂ. ವಿನಾ – ಹೊರತು, ವಿನಃ. ಮ್ಘೇವು < ಸಂ. ಮೇಘ – ಮಳೆ, ಮೋಡ. (ಈ ಶಬ್ದದಲ್ಲಿನ 'ಉ' ಈ ಅಪಭ್ರಂಶ ಪ್ರತ್ಯಯವು ಸ್ಥಿರವಾದುದು.)

(೨೨) ಜೋ ಖಶ – ಖುಲ್ಕ ನವ್ವಾಬ ಜಗ – ಮಿತ ಕಾ
ಅಥಾ ಸಬ ಸೂ ಇಖ್ಲಾಸ ಕೈ ರೀತ ಕಾ । ೪೫
ನ ಖ್ವೇಶಾ ಚಥೇ ಉಸ ಪೋ ಆ ಜಿವಸೂಂ ಬೇಶ
ಕಿ ಥೇ ಪಾಸ ಲೋಗ ಉಸ ಕೇ ಬೇಗಾನೇ ಖೇಶ । ೪೬

ನವಾಬನು (ಬಹಲೋಲಖಾನ್) ಸುಸ್ವಾಭಾವಿಯೂ, ಜಗನ್ಮಿತ್ರನೂ ಆಗಿದ್ದನು. ಎಲ್ಲರೊಂದಿಗೂ ಅವನು ಪ್ರಾಮಾಣಿಕವಾಗಿ ನಡೆದುಕೊಳ್ಳುವವನು ಎನಿಸಿಕೊಂಡಿದ್ದ. ಹಾಗಾಗಿ ಕೇವಲ ಅವನ ಆಪ್ತರಷ್ಟೇ ಅವನನ್ನು ಮನಃಪೂರ್ವಕವಾಗಿ ಪ್ರೀತಿಸುತ್ತ ಆನಂದ ಪಡುತ್ತಲಿರಲಿಲ್ಲ. ಬದಲಾಗಿ ಬೇರೆಯವರೂ ಕೂಡ ಅವನೊಂದಿಗೆ ಆಪ್ತರಂತೆಯೇ ನಡೆದುಕೊಳ್ಳುತ್ತಿದ್ದರು.

ಖಶ (ಫಾ.) – ಒಳ್ಳೆಯ. ಖುಲ್ಕ (ಅ.) – ಸ್ವಭಾವ. ಇಖ್ಲಾಸ (ಅ.) – ಪ್ರಾಮಾಣಿಕತೆ, ಮುಕ್ತಮನಸ್ಸು. ಖ್ವೇಶಾ (ಫಾ.) < ಸಂ. ಸ್ವ+ಇಷ್ಟ < ಸ್ವೇಷ್ಟ – ಆಪ್ತ. ಬೇಶ (ಫಾ.) – ಸಂತೋಷ. ಆನಂದ. ಬೇಗಾನಾ (ಫಾ.) – ಅನ್ಯ. ಮೀತ < ಸಂ. ಮಿತ್ರ – ಸ್ನೇಹಿತ. ರೀತಿ – ರೀತಿ, ಮಾದರಿ. ಪಾಸ < ಸಂ. ಪಾರ್ಶ್ವ – ಹತ್ತಿರ.

*

ಅಧ್ಯಾಯ – ೪

(೨೩) ಹುಈ ಥೀ ಅದಿಕ ರೇಜ ಚೌಢಲ ಪೋ ಯೂಂ
ಬರಸತಾ ಹೈ ಬರಸಾಂತ ಡೊಂಗರ ಪೋ ಜ್ಯೂಂ । ೧

ಬೆಟ್ಟದ ಮೇಲೆ ಹೇಗೆ ಧೋ ಧೋ ಎಂದು ಮಳೆ ಸುರಿಯುವುದೋ ಹಾಗೆಯೇ ಅವನ (ಬಹಲೋಲಖಾನ) ಅಂಬಾರಿಯ ಮೇಲೆಯೂ (ಬಾಣಗಳ) ಮಳೆಯು ಬೀಳತೊಡಗಿತು.

(ನುಸ್ರತಿಯು ಕೊಂಕಣಕ್ಕೆ ಹತ್ತಿರವಾಗಿರುವ ವಿಜಾಪುರದಲ್ಲಿ ವಾಸಿಸುತ್ತಿದ್ದನು. ಕೊಂಕಣವು ಸಹ್ಯಾದ್ರಿ ಪರ್ವತದಲ್ಲಿ ಇರುವ ಊರು. ಸಮುದ್ರ ಮಟ್ಟದಿಂದ ಸುಮಾರು ೩೦೦೦ ದಿಂದ ೪೫೦೦ ಅಡಿ ಎತ್ತರದಲ್ಲಿರುವ ಸಹ್ಯಾದ್ರಿ ಪ್ರದೇಶದಲ್ಲಿ ಬೀಳುವ ಮಳೆಯ ಪ್ರಮಾಣ ೨೦೦ ರಿಂದ ೨೫೦ ಇಂಚು. ಹಾಗಾಗಿ ನುಸ್ರತಿಗೆ ಮಹಾರಾಷ್ಟ್ರ ಮತ್ತು ಕೊಂಕಣ ಪ್ರದೇಶಗಳ ಬಗೆಗಿನ ಭೌಗೋಳಿಕ ಪರಿಚಯ ಚೆನ್ನಾಗಿಯೇ ಇತ್ತು. ಅಂತೆ ಬೆಟ್ಟದ ಮೇಲೆ ಸುರಿಯುವ ಮಳೆಯ ಬಗ್ಗೆ ಅರಿತಿದ್ದನು ಆತ. 'ಅಲೀನಾಮಾ' ಎಂಬ ತನ್ನ ಕೃತಿಯಲ್ಲಿಯೂ ಆತ ಈ ಪ್ರದೇಶದ ಅಪಾರ ವನಶ್ರೀಯನ್ನು ಸುಂದರವಾಗಿ ವರ್ಣಿಸಿದ್ದಾನೆ.)

ರೇಜ (ಫಾ.) – ಮಳೆ ಸುರಿಯುವುದು. ಪೋ < ಸಂ. ಉಪರಿ – ಮೇಲೆ. ಬರಸಾತ < ಸಂ. ವರ್ಷ+ಋತು < ವರ್ಷಾರ್ತ್ಯ > ಬರಸಾತ – ವರ್ಷಕಾಲ, ಮಳೆಗಾಲ. ಡೋಂಗರ < ಪ್ರಾ. ಡುಂಗರೋ – ಚಿಕ್ಕ ಪರ್ವತ, ಬೆಟ್ಟ.

ಕಿ ಬೈತ್ಯಾ ಸೋ ಹರ ಮಾರ ಕಾ ಹೋ ನಿಶಾನ
ತು ಪಕಡ್ಯಾ ಹೈ ಘರ ಡುಬಾನೇ ಕೀ ಶಾನ್ । ೨
ಇತಾ ಮಾರ ಚೌಢಲ ಹುಏ ಜೋ ತಲಗ

ರಹೇಗಾ ತೂ ವಹಹಾಂ ಚ ಕರ ಕೋ ತಲಗ । ೩
ತು ಬಾಂಚ ಅಬ ಹಮನ ಮಾರ ಅಪನೇ ಹುಜೂರ
ಕಿ ನೈ ಕದ ಲಡಾಈ ರಹೇ ಬಾಜ ಧೂರ । ೪
ನ ಡರಸೀ ಬಲಾ ಮೇ ಜೌ ಘಾಲೇಗಾ ತೂಂ
ಮುಏ ಪರ ಕಬೀಲೇ ಕೂಂ ಪಾಲೇಗಾ ತೂಂ । ೫

ಪ್ರತಿಯೊಂದು ಮಳೆಯ ಮೂಲ ಕೇಂದ್ರವೂ ನೀನೇ ಆಗಿರುವೆ. ನೀನೇನು ಮನೆಗಳನ್ನೆಲ್ಲ ಮುಳುಗಿಸಿ ಬಿಡುವುದೆಂದು ನಿಶ್ಚಯ ಮಾಡಿರುವಿಯೋ ಹೇಗೆ? ನಾಲ್ಕೂ ಕಡೆಯಿಂದ ನಿನಗೆ ಇಷ್ಟೊಂದು ಹೊಡೆತಗಳು ಬೀಳುತ್ತಲಿರುವಾಗ ಎಷ್ಟು ಕಾಲ ತಾನೇ ನೀನಲ್ಲಿ ನಿಲ್ಲಬಲ್ಲೆ? ಈಗ ನೀನು ಪಕ್ಕಕ್ಕೆ ಸರಿದು (ಸ್ವತಃ ನಿನ್ನನ್ನು ರಕ್ಷಿಸಿಕೊಂಡು) ನಮ್ಮನ್ನು ಸಾಯುವುದಕ್ಕೆ ಅವಕಾಶ ಮಾಡಿಕೊಡು. ಕಾರಣ ನೇತಾರನಿಲ್ಲದೆ ಯುದ್ಧ ನಡೆಯುವುದು ಸಾಧ್ಯವೇ ಇಲ್ಲ. ನಮ್ಮನ್ನು ಯಾವುದೇ ಬಗೆಯ ಸಂಕಟಕ್ಕೆ ನೀನು ತಳ್ಳಿದರೂ ನಾವು ಹೆದರುವುದಿಲ್ಲ. ನಮಗೆ (ಯುದ್ಧದಲ್ಲಿ) ಸಾವು ಬಂದರೂ ಪರವಾಗಿಲ್ಲ. ಏಕೆಂದರೆ ನೀನು ನಮ್ಮ ಕುಟುಂಬವನ್ನು ಪೋಷಿಸಬಲ್ಲಂತಹ ಒಡೆಯನಾಗಿದ್ದೀಯೆ.

ಬೈಠನಾ < ಸಂ. ಉಪ+ತಿಷ್ಠತಿ – ಕುಳಿತುಕೊಳ್ಳುವುದು. ಹರ (ಫಾ.) < ಸಂ. ಸರ್ವಡೂಬನಾ < ಪ್ರಾ. ಬುಡಡಇ < ಸಂ. ಮಸ್ಜ (ಇಲ್ಲಿ ವರ್ಣ ವಿಪರ್ಯಯ ಉಂಟಾಗಿದೆ.) – ಮುಳುಗುವುದು. ಕಿ < ಸಂ. ಕಿಮ – ಏಕೆ, ಹೇಗೆ. ಚೌಢಲ < ಸಂ. ಚತುಃ+ಸ್ಥಲ – ಅಂಬಾರಿ. ಜೌ < ಜವ < ಸಂ. ಯದಾ – ಯಾವಾಗ. ತಲಗ < ಸಂ. ತಾವಕ್ತಮ –ಆವರೆಗೆ. ಬಾಂಚನಾ < ಸಂ. ವಂಚತಿ –ಜೀವಂತವಾಗಿರು, ಉಳಿದುಕೋ. ಕದ < ಸಂ. ಕದಾ ಎಂದು. ಬಾಜ < ಸಂ. ವರ್ಜ್ಯ –. ಬಿಡು, ವರ್ಜಿಸು. ಡರಸೀ(ಬಹುವಚನ) – ಭಯ. ಮುಏ < ಮೃತ – ಸತ್ತದ್ದು. ಶಾನ (ಅ.) ಮೋಠೇ – ಇಲ್ಲಿ ವೈಭವ. ಹುಜೂರ (ಅ.) – ಎದುರು. ಕಬೀಲಾ < ಕಬೀಲಹ (ಅ.) – ಕುಟುಂಬ.

ಉತರ ಹಸ್ತ ಹೌರ ಬೇಗ ತಾಜೀ ಸವಾರ
ಕಿ ಕರ ಹಮಲಾ ದುಶ್ಮನ ಕೂಂ ಲೇತೇ ಹೈ ಮಾರ । ೬

ಇಡೀ ಸೇನೆಯೇ ಅವನನ್ನು ವಿನಂತಿ ಮಾಡಿಕೊಂಡಿತು. ಬೇಗನೆ ನೀನು ಆನೆಯಿಂದ ಕೆಳಗೆ ಇಳಿದು ಕುದುರೆಯನ್ನೇರಿ ಕುಳಿತುಕೋ. ನಾವು ಶತ್ರುಗಳ ಮೇಲೆ ಧಾಳಿ ಮಾಡಿ ಅವರನ್ನೆಲ್ಲ ನಾಶ ಮಾಡಿ ಬಿಡುವೆವು.

ಹಸ್ತ < ಸಂ. ಹಸ್ತಿನ – ಆನೆ. ಬೇಗ < ಸಂ. ವೇಗ – ತ್ವರೆ, ಬೇಗ. ತಾಜೀ (ಅ.) –ಕುದುರೆ. (ದಖನಿ ಮತ್ತು ಮರಾಠಿ ಭಾಷೆಗಳಲ್ಲಿ ಈ ಶಬ್ದಕ್ಕೆ ಕೆಲವೆಡೆ

"ತೇಜಿ" ಎಂಬುದಾಗಿಯೂ ಪ್ರಯೋಗ ಮಾಡಿರುವುದು ಕಂಡುಬರುತ್ತದೆ.) ಹಮಲಾ < ಹಮುಲಹ (ಅ.) – ಹಲ್ಲೆ. ("ಹಲ್ಲಾ" ಇದು "ಹಮೂ" ಎಂಬ ಶಬ್ದದ ಅಪಭ್ರಂಶ ರೂಪ.)

(೨೪) ಸುನೇ ಸೋ ಚ ನವ್ವಾಬ್ ಯೋ ಬಾತ ಕಯ
ಕಿ ತುಮನಾ ಕೂಂ ಯಾರಾ ನ ಮಾಲೂಮ ಹೈ । ೭

(೨೫) ಕಿ ದಾರಾ ಕೂಂ ಆ ಶಾಹ ಔರಂಗ ಸೂ
ಪಡೀ ಥೀ ಲಡಾಈ ಸೋ ಸೋಂದಲ ಕೇ ಜ್ಯೂ । ೮
ಅಥಾ ಶಾಹ ದಾರಾ ಜೋ ಹಾತೀ – ಸವಾರ
ಪಡ್ಯಾ ಜ್ಯೂಂ ಗಲೋಲ್ಯಾ ಕಾ ಚೌ–ಧಿರ ತೇ ಮಾರ । ೯
ನ ಲ್ಯಾ ತಾಬ ಉತರ ಗಜ, ತುರಂಗ ಜ್ಯೂ ಚಡ್ಯಾ
ಲಘಾ ಫೌಜ ಕೂಂ ತಬ ಕಿ ಖಾಸಾ ಪಡ್ಯಾ । ೧೦
ಹುಈ ಪಲ ಮೇಂ ಇಸ ಧ್ರಾತ ಲಶ್ಕರ ಕೀ ಮೇಡ
ಕಿ ನೈ ಲಡ ಸಕೇ ಪಿರ ಕಭೀ ಫೌಜ ಜೋಡ । ೧೧

ಇದನ್ನು ಕೇಳಿದ ನವಾಬನು (ಬಹಲೋಲಖಾನ) ಹೇಳಿದನು. "ಮಿತ್ರರೇ ನಿಮಗೆ ಗೊತ್ತಿಲ್ಲ. (ಒಮ್ಮೆ) ದಾರಾ ಮತ್ತು ಔರಂಗಜೇಬರಿಬ್ಬರ ನಡುವೆ ಭಯಂಕರವಾದ ಯುದ್ಧವು ನಡೆಯುತ್ತಿತ್ತು. ದಾರಾ ಆನೆಯ ಮೇಲೆ ಕುಳಿತುಕೊಂಡಿದ್ದ ಆ ಸಮಯದಲ್ಲಿ ನಾಲ್ಕೂ ಕಡೆಗಳಿಂದ ತುಫಾಕಿ ಗುಂಡುಗಳಿಂದ ಅವನತ್ತ ಹೊಡೆಯ ತೊಡಗಿದರು ಶತ್ರುಗಳು. ಅದನ್ನು ಸಹಿಸಲು ಸಾಧ್ಯವಾಗದೆ ದಾರಾನು ಆನೆಯಿಂದ ಇಳಿದು ಕುದುರೆಯ ಮೇಲೆ ಕುಳಿತುಕೊಂಡನು. ಅದನ್ನು ಕಂಡ ಸೈನಿಕರು (ದಾರಾ) ಸ್ವತಃ ಪರಾಭವಗೊಂಡನೆಂದು ಭಾವಿಸಿದರು. (ಪರಿಣಾಮವಾಗಿ) ಒಂದೇ ಒಂದು ಕ್ಷಣದಲ್ಲಿ ಅವನ ಎಲ್ಲಾ ಸೈನ್ಯವು ಎಂಥ ವಿಪರೀತ ಅಸ್ತವ್ಯಸ್ತತೆಗೆ ಈಡಾಯಿತೆಂದರೆ, ಅದನ್ನು ಮತ್ತೊಮ್ಮೆ ಒಗ್ಗೂಡಿಸಿ ಯುದ್ಧ ಮಾಡುವುದಕ್ಕೆ ಅವನಿಂದ ಸಾಧ್ಯವಾಗಲೇ ಇಲ್ಲ.

ಬಾತ < ಸಂ. ವಾರ್ತಾ – ವಾರ್ತೆ, ಮಾತು. ಕಯನಾ < ಕಹನಾ < ಸಂ. ಕಥ – ಹೇಳುವುದು. ಲಘನಾ < ಲಗನಾ < ಸಂ. ಲಗ – ಭಾವಿಸು. ಧಾತ < ಸಂ. ಧಾತು(?) – ಪ್ರಕಾರ, ಪದ್ಧತಿ, ರೀತಿ. ಮೋಡ < ಸಂ. ಮುಟ < ಮುಂಟ < ಮುಂಡ – ಮುರಿಯುವುದು. (ಈ ಶಬ್ಧಕ್ಕೆ ಮರಾಠಿಯಲ್ಲಿ 'ಪರಾಭವ' ಎಂಬರ್ಥವಿದೆ.) ಯಾರ (ಫಾ.) –ಮಿತ್ರ, ಮಾಲೂಮ (ಅ.) – ಮಾಹಿತಿ. ಔರಂಗ (ಫಾ.) – ಗದ್ದುಗೆ, ಸಿಂಹಾಸನ (ವಿಶೇಷ ನಾಮ). ಗಲೋಲಾ (ಫಾ.) – ಗುಂಪು. ತಾಬ (ಫಾ.) <ಸಂ. ತಾಪ – ಉಷ್ಣ, ಬಿಸಿ. ಖಾಸಾ (ಅ.) – ತನ್ನ ಸ್ವಂತ ವ್ಯಕ್ತಿ ಇಲ್ಲವೆ ವಸ್ತು.

ವಹೀ ಕಾಮ ಸಂಭಾಲ ದಾನಾ ಕರೇ
ಜೋ ನಾದಾನ ಕರನೇ ತೇ ಇಜ್ಜತ (ಉಜಲತ) ಧರೇ । ೧೨

ಅಜ್ಞಾನಿಗಳಾದ ಜನ ಯಾವ ಕೆಲಸವನ್ನು ಮಾಡುವುದಿಲ್ಲವೋ (ಯಾವ ಕೆಲಸದಿಂದ ಅವರು ದೂರವಾಗಿರುವರೋ) ಆ ಕೆಲಸವನ್ನು ಜ್ಞಾನಿಗಳಾದವರು ಮಾಡುತ್ತಾರೆ.

ದಾನಾ (ಫಾ.) < ಸಂ. ಜ್ಞಾನಿ – ಬುದ್ಧಿವಂತರು. ನಾದಾನ (ಫಾ) < ಸಂ. ನಾ+ಜ್ಞಾನಿ – ಅಜ್ಞಾನಿ, ದಡ್ಡ, ಮೂಢ. ಸಂಭಾಲ < ಸಂ. ಸಂಭಾರ – ಸಂಭಾಳಿಸು, ರಕ್ಷಿಸು. ಉಜಲತ (ಅ.) – ದೂರವಾಗಿರು.

ತುಮೀ ಜಾನತೇ ಹೈ ಕಿ ನೈ ಯೋ ಮಿಸಲ
ಛುಪೇ ತೋ ಬೀ ನಾ ಹೋಯ ಅಜಲ ತೇ ಬುಜಲ । ೧೩
ಬುಜರ್ಗಾ ಕ ರಕ ಕಾಲ ಪರ ಖುಶ ಮದಾರ
ಯಹೀ ಸಬ ಬರತತಾ ಹೂಂ ಮೈ ಬಾರ – ಬಾರ । ೧೪

ಈ ವಿಚಾರವು ನಿಮಗೆ ತಿಳಿದಿರುವುದೋ ಇಲ್ಲವೋ. (ಯಾರಾದರೂ, ಎಷ್ಟಾದರೂ) ಅಡಗಿಸಿ ಇಟ್ಟರೇನು (ಅವನು) ಮೃತ್ಯುವಿನಿಂದ ಮರೆಯಾಗಿ ಇರುವುದಕ್ಕಂತೂ ಸಾಧ್ಯವೇ ಇಲ್ಲ ಅಲ್ಲವೇ? ಪೂರ್ವಜರ ಈ ಹಿತನುಡಿಗಳನ್ನು ಆಧಾರಭೂತವಾಗಿ ಇಟ್ಟುಕೊಂಡೇ ಯಾವಾಗಲೂ ನಾನು ನಡೆದುಕೊಳ್ಳುತ್ತಿರುವುದು.

ಕಿ < ಸಂ. ಕಿಮ – ಅಥವಾ, ಇಲ್ಲವೆ. ಬುಜಲು < ಓಜಲ (ಓಝುಲ) < ಸಂ. ಅವ+ರುಂಧನ ಮತ್ತು ಪ್ರಾ. ಓರುಂಝುನ – ಯಾವುದಾದರೊಂದು ವಸ್ತುವಿಗೇ ಅಡ್ಡ. ಛುಪನಾ < ಸಂ. ಛುಪತಿ – ಸಂಕಟವನ್ನು ಮುಚ್ಚಿಡು. ಬರತನಾ < ಸಂ. ವೃತ – ವರ್ತಿಸು. ಮಿಸಲ – ಹೇಳುವಿಕೆ, ವಚನ. ಅಜಲ (ಅ) – ಮೃತ್ಯು. ಬುಜುರ್ಗ (ಫಾ.) < ಸಂ. ವೃದ್ಧಕ – ವೃದ್ಧ, ಪೂರ್ವಜ. ಕೌಲ – ಮಾತನಾಡುವುದು, ವಚನ. ಖುಶ (ಫಾ.) – ಸಂತುಷ್ಟ. ಮದಾರ (ಅ.) – ಆಧಾರ, ಆಶ್ರಯ.

ಅಗರ ತೇಗೇ ಆಲಮ ಬಿ–ಜುಂಬದ ಜ ಜಾಪಿ
ನ ಬುರರದ ರಗೇ ತಾ ನ ಸ್ವಾಹಿದ ಖುದಾಪಿ । ೧೫
(ಫಾರ್ಸಿ ಭಾಷೆಯ ಸಾಲುಗಳಿವು)

ಪ್ರಪಂಚದ ಎಲ್ಲ ಜನರೂ ಕತ್ತಿಗಳನ್ನು ಹಿಡಿದುಕೊಂಡು ಬಂದು ಆಘಾತವನ್ನು ಒಡ್ಡಿದರೂ ಈಶ್ವರನ ಇಚ್ಛೆಯೊಂದು ಇಲದೆ ಇದ್ದರೆ, ಶರೀರದ ಯಾವುದೇ ಭಾಗಕ್ಕೂ ಎಂಥದೇ ಘಾತವಾಗಲಾರದು.

ತೇಗ (ಫಾ.) –ಕತ್ತಿ, ಹತಾರ. ಆಲಮ (ಅ.) – ಜಗತ್ತು. ಜುಂಬೀದನ (ಫಾ. ಕ್ರಿಯಾಪದ) – ಅಲುಗಾಡು, ಆಧಾರವೇ ಕಂಪನವಾಗು. ಜ (ಫಾ.) – ಇಂದಿನ ಸಂಕ್ಷಿಪ್ತರೂಪ < ಸಂ. ಸಜಾ – ನಡೆ. ಬುರರಿದನ (ಫಾ.) – ಕಂಪನ. ರಗ (ಫಾ.) – ನಾಡಿ. ಜಾ (ಫಾ.) – ಜಾಗ. ಸ್ವಾಹೀದನ (ಫಾ.) – ಇಚ್ಛೆ ಪಡುವುದು.

ಸಮಜತಾ ಹೂಂ ಕರ ಹಕ ತೇ ಯಾರೀ ಹೈ ಆಜ
ಮೇರೇ ಬಾಲ ಕೂಂ ಕುಚ ನ ಭಾರೀ ಹೈ ಆಜ । ೧೬
ಅಗರ ಹೋ ತೋ ಬೀ ಕುಚ ಖುದಾ ಕೀ ರಜಾ
ರಜಾವಂದ ಹೂಂ ಜ್ಯೂ ವೋ ಅಂ – ಪಡೇ ಕಜಾ । ೧೭

ಪರಮೇಶ್ವರನು ಇಂದು ನನಗೆ ಮಿತ್ರನೂ, ಸಹಾಯಕನೂ ಆಗಿರುವನು ಎಂಬುದು ನನ್ನ ಭಾವನೆ. ಎಂತಲೇ ಇಂದು ನನ್ನ ಒಂದು ಕೂದಲು ಕೊಂಕಲಾರದು. ಇಷ್ಟಾಗಿಯೂ ಏನಾದರೂ ಸಂಭವಿಸಿದಲ್ಲಿ ಅದು ಪರಮೇಶ್ವರನ ಇಚ್ಛೆಯೇ! ನನಗೆ ಸಾವು ಬರುವುದಾದರೂ ಸರಿ ನಾನದಕ್ಕೆ ಸಿದ್ಧನಾಗಿಯೇ ಕಾಯುತ್ತಾ ನಿಂತಿದ್ದೇನೆ.

ಹಕ (ಅ.) – ಸತ್ಯ, ಪರಮೇಶ್ವರ. ಯಾರಿ (ಫಾ.) – ಮೈತ್ರಿ. ರಜಾ (ಅ.) – ಮರ್ಜಿ, ಇಚ್ಛೆ. ರಜಾವಂದ < ರಜಾ+ಸಂ. ವಂತ – ಸಂತುಷ್ಟ, ಸಿದ್ಧತೆ. ಅ – ಪಡನಾ < ಆನಪಡನಾ – ಬರುವುದು, ಸಂಭಾವ್ಯ. ಬಾಲ (ಫಾ.) – ಸಂ. ಬಾಲಃ – ಕೇಳ, ಕೂದಲು. ಕಜಾ – ಮೃತ್ಯು.

ವಲೇ ಮೈ ರಖ್ಯಾ ಹೂಂ ಸೋ ಬಹತಾ ಕದಮ
ಜಿಧರ ತೇ ಬೀ ಧಸತಾ ಅಂಗೇ, ನಾ ಕಿ ಕಮ । ೧೮
ಜೋ ಹೋಯ ಬೇ–ಧಡರ ಹಾಲ ತೇ ಸರ ಬ–ಸರ
ಉಸೇ ಕ್ಯಾ ಹೈ ಗೌಗಾಏ – ಮುಹಶರ ತೇ ಡರ । ೧೯

ಆದರೆ ನಾನೀಗ ನನ್ನ ಹೆಜ್ಜೆಯನ್ನು ಮುಂದಕ್ಕೆ ಇಟ್ಟಿದ್ದೇನೆ. ಎಲ್ಲಿಗೆ ಸಾಧ್ಯವೋ ಅಲ್ಲಿಗೆ ನಾನು ನುಗ್ಗುವೆನೇ ವಿನಾ ಇಟ್ಟ ಹೆಜ್ಜೆಯನ್ನು ಹಿಂದಕ್ಕೆ ತೆಗೆಯಲಾರೆ. ಯಾವುದು ಪೂರ್ಣವಾಗಿ ನಿರ್ಭಯವಾಗಿರುವುದೋ ಅದಕ್ಕೆ ಪ್ರಳಯ–ಕಾಲದ ಕೋಲಾಹಲದ ಭೀತಿಯಾದರೂ ಎಂಥದು ?

ವಲೇ (ಅ.) – ಆದರೆ. ಕದಮ (ಅ.) – ಹೆಜ್ಜೆ. ಹೌಲ – ಭೀತಿ. ಸರ – ಬ – ಸರ (ಫಾ.) – ಸಂಪೂರ್ಣ, ಒಂದು ತುದಿಯಿಂದ ಮತ್ತೊಂದು ತುದಿಯವರೆಗೆ. ಗೋಗಾ (ಫಾ.) – ಕೋಲಾಹಲ. ಮುಹಶರ (ಅ.) – ಪ್ರಳಯಕಾಲ. ಧಸನಾ < ಸಂ. ಧರ್ಷ – ನುಗ್ಗುವುದು. ಅಂಗೇ < ಅಗ್ರೇ – ಮುಂದೆ. ವೇಧಡಕ – ನಿರ್ಭಯ. ಬೇ (ಫಾ.) < ಸಂ. ವಿ. ನಕಾರಾರ್ಥ ಉಪಸರ್ಗ.

ಹತೀ ಪರ ಜೋ ಹೂಂ ಮೈ ತೋ ಬೈರ್ಯಾ ಪೋ ದಾಬ
ಕಿ ಯರ ನೇಜಾ ಜ್ಯೂ ಸಿರ ಪೋ ಹೈ ಆಫತಾಬ । ೨೦
ಫಲಕ ಪರ ತೋ ನ (ನಾ) ಉಡ ಸಕೇ ಲಇ ಹೈ ಫರ್ಕ
ಮಂಗೇ ಭುಈ ಜೋ ಪಡ ಕೇ ಹೋವೇಂಗೇ ಗರ್ಕ । ೨೧

ನಾನು ಆನೆಯ ಮೇಲೆ ಕುಳಿತು ಕೊಂಡಿರುವುದರಿಂದಲೇ ಶತ್ರುವಿನ ಮೇಲೆ ನನ್ನ ಹಿಡಿತವಿರಿಸಿಕೊಳ್ಳಲು ಸಾಧ್ಯವಾಗಿದೆ. ಕಾರಣ ನನ್ನ ಈಟಿಯು (ಭಲ್ಲೆ) ನನ್ನ ತಲೆಯ ಮೇಲೆ ಸೂರ್ಯನ (ಛತ್ರಿ) ಹಾಗೆ ಇರುವುದು. ಅದನ್ನು ಯಾವನೂ (ನನ್ನ ಶತ್ರು) ಹಾರಿಸಲಾರನು. ನಮ್ಮ ನಡುವೆ ಅಂತರ ಬಹಳವೇ ಇದೆ. ಅವರಿಗೆ ಭೂಮಿಯು ಬೇಕಾಗಿದ್ದರೆ ಅಲ್ಲಿಯೇ ಬಿದ್ದು (ಧೂಳಿನಲ್ಲಿ) ಮುಳುಗಿ ಹೋಗುವರು ಅವರು.

ಬೈರೀ < ಸಂ. ವೈರಿನ – ಶತ್ರು. ದಾಬ (ಫಾ.) < ಸಂ. ದಾತನಮ – ಧಕ್ಕೆ, ಆತಂಕ. ಲಇ < ಲಈ (ಮರಾಠಿ) < ಬಹುಲಮ – ಬಹಳ. ಮಂಗನಾ < ಮಾಂಗನಾ < ಸಂ. ಮೃಗ – ಯಾಚಿಸು, ಬೇಡು. ಭುಈ < ಸಂ. ಭೂಮಿ – ಭೂಮಿ. ನೇಜಾ (ಫಾ.) – ಭಲ್ಲೆ. (ಈ ಶಬ್ದವು ಬಹುತೇಕ ಸಂಸ್ಕೃತದ 'ನೇತ್ರ' ಶಬ್ದದಿಂದ ರೂಪಗೊಂಡುದಾಗಿದೆ. ಅದರರ್ಥ 'ಮುಂದೆ ಹೋಗುವ' ಅಥವಾ 'ನೇತಾರ' ಎಂಬುದಾಗಿದೆ.) ಅಫತಾಬ (ಫಾ.) –ಗರ್ಕ(ಅ.) – ಮುಳುಗುವುದು.

ಜೋ ಹಲತೇ ಹೈ ಜಾಗೇ ತೇ ಬೀ ಥೋಡ ಠಾವೂ
ಕಿ ಜ್ಯೂ ಮರ ನ ಸಕ, ಝೂಡತೇ ಹಾತ ಪಾವೂ । ೨೨
ಪತಂಗಾ ಕೇ ಪಡತೇ ನ ಬುಜಸೀ ಹಿಲಾಲ
ಮರೇ ಜಲ ಜೋ ಪಕಡೇ ಬುಜಾನೇ ಕಾ ಖಿಲಾಯಾ । ೨೩

ಯಾವನು (ಸೈನಿಕ) ತನ್ನ ಜಾಗದಿಂದ ಕೊಂಚ ಸರಿಯುವನೋ ಅವನು ಸಾಯುವವನಂತೆ ಕೈಕಾಲುಗಳನ್ನು ಝೂಡಿಸುತ್ತಲಿರುವನು. (ದೀಪದ ಮೇಲಿನ) ಪತಂಗಗಳು (ಎಷ್ಟಿದ್ದರೇನು) ಎಷ್ಟೇ ಹಾರಾಟ ಮಾಡಿದರೂ ಅವುಗಳಿಂದ ಚಂದ್ರ (ಚಂದ್ರ ಪ್ರಕಾಶ)ನು ಆರಿ ಹೋಗುವುದಿಲ್ಲ. ಯಾರು ಅವನನ್ನು ಆರಿಸ (ನಂದಿಸು)ಬೇಕೆಂದು ವಿಚಾರ ಮಾಡುವರೋ ಅವರೇ ಸ್ವತಃ ಸುಟ್ಟು ಹೋಗುವರು.

ಹಲನಾ < ಸಂ. ಹಲ್ಲನ – ಜಾಗ ಬಿಟ್ಟು ಕದಲುವುದು. ಪತಂಗ < ಸಂ. ಪತಂಗ, ಪತಂಗಮ – ದೀಪದ ಹುಳು. ಬೂಜ – ಝಾನ < ಸಂ. ಬುಧ – ಆರಿ ಹೋಗುವುದು. ಹಿಲಾಲ – ಕಲಾಧಾರಿ ಚಂದ್ರ. ಖಯಾಲ, ಖಿಯಾಲ (ಅ.) – ವಿಚಾರ.

ನ ಜಾನೋ ಕಿ ಭಾಲೇ –ಕರ ಉನ ಕೇ ಹೈ ಭಾರ
ಹಿರನ ಹೈ ಕರೋ ಬೇಗಡೀ ಸಗ – ಶಿಕಾರ । ೨೪
ರಖೋ ಮಾರ ಯೋ, ಫೌಜ ಕಾಫಿರ ಪಲೀದ
ರಖೋ ಖೇತ ಯಾ ಸಬ ಹೋ ಮುಸ್ಲಿಮ ಶಹೀದ । ೨೫

ಅವರ ಸೈನ್ಯವನ್ನು ಭಲ್ಲೆಧಾರಿಗಳೆಂದು ತಿಳಿಯುವುದು ಬೇಡ. ಅವೆಲ್ಲವೂ ಅಸತ್ಯ, ಕೃತ್ರಿಮವಾದ ವಿಚಾರಗಳಾಗಿವೆ. ಅವೆಲ್ಲ ಅಲ್ಲದೆ ಅವೆಲ್ಲವೂ ನಾಯಿಗಳ ಶಿಕಾರಿಗಳೇ ಆಗಿವೆ. ಕಾಫಿರರ ಅಪವಿತ್ರ ಸೈನ್ಯವನ್ನೆಲ್ಲ ನಾಶ ಮಾಡಿ ಈ ರಣರಂಗದ ಪಾವಿತ್ರ್ಯವನ್ನು ರಕ್ಷಿಸಿರಿ. ಆಗದಿದ್ದರೆ (ನೀವು) ಎಲ್ಲಾ ಮುಸಲ್ಮಾನರು ಆತ್ಮಾಹುತಿ ಮಾಡಿಕೊಳ್ಳಿರಿ.

ಭಾಲೇ – ಕರ < ಸಂ. ಭಲ್ಲಕ+ಕೃ – ಭಲ್ಲೇಧಾರಿ, ಸೈನಿಕ. ಹಿರನ < ಸಂ. ಹರಿಣ – ಹರಣ. ಬೇಗಡೀ (ಮರಾಠಿ) <'ಬೇಗಡ'ದಿಂದ ರೂಪಗೊಂಡಿರುವ ಶಬ್ದ. (ಬೇಗಡಿ ಎಂದರೆ ಬಣ್ಣಬಣ್ಣವಾಗಿರುವ ತೆಳ್ಳನೆಯ ಕಾಗದ (ಪತ್ರ)) – ಕೃತ್ರಿಮ, ನಕಲಿ. ಖೇತ < ಸಂ. ಕ್ಷೇತ್ರ – ರಣರಂಗ, ಯುದ್ಧಭೂಮಿ. ಪಲೀದ (ಫಾ.) – ಸಂ. ಪಲಿತ – ಅಪವಿತ್ರ, ಭ್ರಷ್ಟ. ಶಹೀದ (ಅ.) – ಆತ್ಮಾಹುತಿ.

(೨೬) ಲಡೇ ಜಬ ಯೋ ದಿಲ್ಲೀ ಕೇ ಫೌಜಾ ಸೇ (ಬೇ) ಛೂಟ
ಲಿಏ ಹೈ ಗೇ(ಕೈ) ಉಮರಾವ ಯಕ ದಮ ಮೇ ಲೂಟ । ೨೬

ಒಮ್ಮೆ ನಮ್ಮ ಶೂರ ಸೈನಿಕರು ದಿಲ್ಲಿಯ ಸೈನ್ಯದೊಂದಿಗೆ ಹೋರಾಟ ಮಾಡುತ್ತಾ ಇದ್ದಂತಹ ಆ ಸಮಯದಲ್ಲಿಯೇ (ತಮ್ಮ ಸೈನಿಕರು) ಒಂದೇ ಬಾರಿಗೆ ಶತ್ರುಗಳ ಅನೇಕ ಸರದಾರರನ್ನು ಲೂಟಿ ಮಾಡಿದ್ದರು.

ಬೇ ಛೂಟ (ಮರಾಠಿ) – ಪರಿವೆಯಿಲ್ಲದೆ, ವೀರಾವೇಶದಿಂದ. (ಇಲ್ಲಿ 'ಸೇ' ಗೆ ಬದಲಾಗಿ 'ಬೇ' ಎಂಬುದೇ ಸರಿಯಾದುದೆನಿಸುತ್ತದೆ. ಹಾಗೆಯೇ ಮತ್ತೊಂದು ಸಾಲಿನಲ್ಲಿ ಬರುವ 'ಗೇ' ಶಬ್ದದಿಂದ ಯಾವುದೇ ಅರ್ಥ ನಿಷ್ಪತ್ತಿ ಬರುವುದಿಲ್ಲ. ಅಲ್ಲಿಗೆ 'ಕೇ' ಎಂಬುದೇ ಸೂಕ್ತವಾದುದು ಎನಿಸುತ್ತದೆ.) ಉಮರಾವ < ಉಮರಾ (ಅ.) ಅಮೀರ (ಶ್ರೀಮಂತ, ಸರದಾರ) ಎಂಬ ಶಬ್ದದ ಬಹುವಚನ ರೂಪ. "ಉಮರಾವ" ಎಂಬದು "ಉಮರಾ" ಶಬ್ದದ ಅಪಭ್ರಂಶ ರೂಪ.

ಅಗರ ಮರ್ದೇ – ಮೈದಾನ ಬಹಲೋಲ ಹೈ
ಹಮನ ದಸ್ವೇ ಹಿಸ್ಸೇ ಕಾ ಕಾಂ ತೋಲ ಹೈ । ೨೭
ದಖನ ಕಾ ಯೋ ಯಕ ಧೂರ ನ್ಯೆ, ಹೈ ಪಚಾನ
ನ ಲಷ್ಕರ ಸಬ ಉಸ ಕಾ ಬೀ ಹೈ ಉಸಕೇ ಪಾಸ । ೨೮

(೨೭) ಖಡಾ ಯೋ ಸೋ ವೈ ಆಗ ಕಾ ಹೋ ಅಭಾಲ
ಸಟ್ಯಾ ಬರ್ಕ ಬೂಂದಾ ಸೂಂ ಆಲಮ ಕೂಂ ಜಾಲ । ೨೯

ಬಹಲೋಲಖಾನನೇ ಈ ರಣರಂಗದೊಳಗೆಲ್ಲ ಮಹಾವೀರನಾಗಿದ್ದಾನೆ. ಅವನೊಂದಿಗೆ ಹೋಲಿಸಿಕೊಂಡರೆ ಹತ್ತನೆಯ ಒಂದು ಭಾಗದಷ್ಟು ಇಲ್ಲ ನಾವು. ದಕ್ಷಿಣದಲ್ಲಿನ ಈ ಯೋಧ ಕೇವಲ ಒಬ್ಬನಲ್ಲ. ಅವನೊಬ್ಬನೇ ಐವತ್ತು ಜನರಿಗೆ ಸಮಾನನು ಎನಿಸಿದ್ದಾನೆ. ಇನ್ನು ಅವನ (ಬಹಲೋಲಖಾನನ) ಸೈನ್ಯವೂ ಅವನಿಗೆ ಸಮನಾದುದೇನಲ್ಲ. ಆದರೂ ಅವನು ಸಿಡಿಲಿನ ಹಾಗೆ (ಅಗ್ನಿಯ ಮೇಘ) ಅಲ್ಲಿ ನಿಂತಿರುವನು. ವಿದ್ಯುತ್ತಿನ ತುಷಾರ (ಕಿಡಿ)ಗಳ ಹಾಗೆ (ಬರ್ಕ ಎಂಬ ಹೆಸರಿನ ಯೋಧನ ಹಾಗೆ) ಸರ್ವ ಜಗತ್ತನ್ನು ದಹಿಸಿ ಬಿಡುವನು.

ಹಮನ–ನಾವು. ಬೀ<ಸಂ.ಅಪಿ<ವಿ<ಬೀ–ಆದರೂ. ಬರ್ಕ (ಅ.)–ವಿದ್ಯುತ್. ಬೂಂದ < ಸಂ.ಬಿಂದು–ತುಷಾರ (ಕಿಡಿ). ಆಲಮ (ಅ.)–ಜಗತ್ತು. ಜಾಲನಾ<ಸಂ. ಜ್ವಲಯತಿ–ಉರಿಯುವುದು. ಸಟನಾ<ಸಂ.ಶಟತಿ–ಬೇರೆ ಮಾಡುವುದು, ಬಿಟ್ಟು ಬಿಡುವುದು.

ಹಮೀ ಆಜ ನ್ಹಾಟೇ ತೋ ನಾ ಸೋಸ ಯೂ
ಸುಬಾ ಮುಕ ದಿಖಾನಾ ಧನೀ ಪಾಸ ಕ್ಯೂಂ । ೩೦
ಇತಾ ಕಾಮ ಸೇವಟ ಪೋ ಹೈ ಯೋ ರವಾ
ಕಿ ಲೇನಾ ಅರಾಬಾ ಯೋ ಯಕ ಕರ ಥವಾ । ೩೧
ಲ್ಹವ್ಯಾ ಪರ ಧಸೇ ಕರ ದಿಲೀರೀ ಇತೀ
ಪಡೇ ಜ್ಯೂಂ ಕಿ ಜಲತಿ ಆಗಿನ ಮೇಂ ಸತೀ । ೩೨

ನಾನೇ ಇಂದು (ಈ ರಣರಂಗದಿಂದ) ಓಡಿ ಹೋದಲ್ಲಿ ಅದರಿಂದ ಬಹಳವೇನು ದುಃಖವಾಗುವುದಿಲ್ಲ. ಆದರೆ ನಾಳೆ ಬೆಳಿಗ್ಗೆ ಧಣಿಯ ಎದುರು ಯಾವ ಮುಖವನ್ನು ಹೊತ್ತುಕೊಂಡು ಹೋಗುವುದು? ಕೊನೆಯದಾಗಿ ಅದಕ್ಕಿಂತಲೂ ಒಂದು ಮುಖ್ಯವಾದ ಕೆಲಸ ಮಾಡೋಣ. (ಅದೇನೆಂದರೆ) ಮದ್ದು ಗುಂಡುಗಳಿಂದ ಒಂದು ಬಾರಿ ಧಾಳಿ ಮಾಡೋಣ. (ಎಂದು ಹೇಳಿ) ಅವನು ವೀರಾವೇಶದಿಂದ (ಆ ತಪ್ತ ವಾತಾವರಣದಲ್ಲಿ) ನುಗ್ಗಿದನು. ಯಾವ ರೀತಿಯಲ್ಲಿ ಒಬ್ಬ ಸತಿ ಹೋಗಲು ಸಿದ್ಧವಾದ ಸ್ತ್ರೀಯು ಹೇಗೆ ಧಗಧಗಿಸಿ ಉರಿಯುತ್ತಿರುವ ಬೆಂಕಿಗೆ ಜಿಗಿಯುವಳೋ ಹಾಗೆ.

'ನ್ಹಾಟನಾ' ಈ ಕ್ರಿಯಾಪದವು ಕೇವಲ 'ದಖನಿ'ಯಲ್ಲಷ್ಟೆ ಕಾಣಸಿಗುವುದು. ಅದರ ಅರ್ಥ ಓಡಿ ಹೋಗುವುದು. ಇಲ್ಲವೆ ದೂರ ಹೋಗುವುದು. 'ನ್ಹಾಸನಾ' (ಓಡುವುದು) ಕ್ರಿಯಾಪದವೂ ಅಂಥದೇ. ಅದರ ವ್ಯುತ್ಪತ್ತಿಯು ಬಹುತೇಕ 'ನಿ+ಅಟ'ನಿಂದ ಆದುದಾಗಿದೆ. ಸೇವಟ್ (ಮರಾಠಿ)–ಅಂತಿಮ (ಶೇಪ್–(ಪುಚ್ಛ)+ಟ)–ಅಂತ್ಯ, ದಡ.

ಢವಾ<(ಮರಾಠಿ)ಧಾವಾ-ಹಲ್ಲೆ. ಲ್ಹವಾ<ಸಂ.ಲೋಹ-ಕಬ್ಬಿಣ. (ಯೌಗಿಕ ಅರ್ಥದಲ್ಲಿ ಅಸ್ತ್ರ, ಕತ್ತಿ). ಸುಬಾ<ಸುಬಹ (ಅ.)-ಬೆಳಿಗ್ಗೆ. ದಿಲೀರೀ (ಫಾ. ದಿಲ+ಈರ)-ಶೌರ್ಯ.

ಖಡಗ ಹಲ ಶಹೇ ಜಬ ಯೇ ಭಾಲೇ ಪಡೇ
ಧಡಕ ಆಗ ಉಠೀ ಜಬ ದಂಟಾಲೇ ಪಡೇ । ೩೩
ರಕೇ ಥೋಪ ಗಜ-ದಲ ಕೂ ಭಾಲ್ಯಾ ಕೀ ಮಾರ
ಸಿಪಿ ಕಯ ಉಕಸ ಯಕ ಮೇಂ ದೋ-ದೋ ಸವಾರ । ೩೪
ಹಜಾರಾ ಸೂಂ ಭಾಲೇ ಜಿಧರ ಆ ಸಟೇ
ಉಧರ ಯಕ ಬ-ಯಶ ಫೌಜ ಉಪಠಾ ಸಟೆ । ೩೫

ಯಾವಾಗ ಭಲ್ಲೆಗಳಿಗೆ ಬದಲಾಗಿ ಖಡ್ಗ-ಕತ್ತಿಗಳು ಝಳಪಲಾರಂಭಿಸಿದವೊ ಆಗ ಎಲ್ಲೆಲ್ಲೂ ಬೆಂಕಿ ಪಸರಿಸಿತು. (ಕತ್ತಿಗಳಲ್ಲಿಯೇ ಬೆಂಕಿ ತುಂಬಿಕೊಂಡು ಹೊರಹೊಮ್ಮುತ್ತಿರುವೇ ಎಂಬರ್ಥದಲ್ಲಿ.) ಭಲ್ಲೆಗಳೆಲ್ಲವೂ ದಂಟಿನ ರೀತಿಯಲ್ಲಿ ಉರಿಯಲಾರಂಭಿಸಿದವು. ಅತ್ತ ಭಲ್ಲೆಗಳ ಹೊಡೆತದಿಂದ ಆನೆಗಳ ಸಾಲು ನಿಶ್ಚಲವಾಗಿ ನಿಂತಿತ್ತು. (ಹೇ ಕವಿಯೇ ನೀನು ಹೀಗೆ) ಒಂದರೊಡನೆ ಒಂದೆಂಬಂತೆ ಎರಡೆರಡು ಸಾಲುಗಳನ್ನು ಜೋಡಿಸಿ ಹೊಲಿದ ಹಾಗೆ ಕಾಣುತ್ತಿತ್ತೆಂದು ಹೇಳಬಹುದೋ ಏನೋ! ಅತ್ತ ಯಾವ ಕಡೆಯಿಂದ ಸಾವಿರಾರು ಭಲ್ಲೆಗಳು ಬಂದೆರಗಲಾರಂಭಿಸಿದವೋ ಇತ್ತ ಕ್ರಮಕ್ರಮವಾಗಿ ಸೇನೆಯು ನಾಶವಾಗುತ್ತಾ ಹೋಯಿತು.

ದಂಟಾಳ(ಮರಾಠಿಯ ಗ್ರಾಮ್ಯ ಶಬ್ದ)-ಜೋಳ ಅಥವಾ ಸಜ್ಜೆಯ ದಂಟು. ಅದು ೬ ರಿಂದ ೭ ಅಡಿಗಳಷ್ಟು ಎತ್ತರವಾಗಿರುವುದು. ಮರಾಠಿಯಲ್ಲಿ 'ಧಾಟ' ಎಂಬ ಶಬ್ದವೂ ಉಂಟು. ಅದರಿಂದ ಧಟಾಲ, ದಂಟಾಲ ಎಂಬ ಶಬ್ದಗಳು ರೂಪಗೊಂಡಿವೆ. 'ಅಲೀನಾಮಾ' (ಅಧ್ಯಾಯ ೨೧, ಸಾಲು ೨೩೨) ಗ್ರಂಥದಲ್ಲಿ ನುಸ್ರತಿಯು 'ತಂಟಾಲ' ಎಂಬ ಪದವನ್ನು ಈ ಮೇಲಿನ ಅರ್ಥದಲ್ಲಿಯೇ ಪ್ರಯೋಗಿಸಿದ್ದಾನೆ.

ಉದಾಹರಣೆಗೆ -

ಆದಿಕ ಯೂಂ ಹೋ ಪಾ-ಮಾಲ ಭಾಲೇ ಪಡೇ
ಕಿ ಜ್ಯೂ ಸಜಗುರಿ ಕೇ ತಂಟಾಲೇ ಪಡೇ ।

ಸಜಗುರಿ (ಮರಾಠಿ) ಎಂಬುದಕ್ಕೆ ಸಜ್ಜೆ ಎಂಬರ್ಥವಿದೆ. ಅದರ ದಂಟು ಬೀಳತೊಡಗಿತು. ಮರಾಠಿಯಲ್ಲಿ ತಾಟ ಅಥವಾ ದಾಟ ಈ ಎರಡೂ ಶಬ್ದಗಳ ಅರ್ಥಗಳೂ ಒಂದೇ ಆಗಿವೆ.

ಥೋಪನಾ<ಸಂ.ಸ್ತುಭ್ನ (ಸ್ತುಭ್ನೋತಿ)-ನಿಶ್ಚಲಗೊಳಿಸು. ರಕನಾ< ರಖನಾ>

ಸಂ.ರಕ್ಷಾ– ರಕ್ಷಣೆ. ದಲ(ಸಂ.)–ಸೈನ್ಯ. ಸೀನಾ<ಸಂ.ಸಿವೂ (ಸಿವ್ಯತಿ)–ಸೂಜಿಯಿಂದ ಹೊಲಿಯುವುದು. ಕಯನಾ<ಕಹನಾ<ಸಂ.ಕಥ–ಹೇಳುವುದು, ನುಡಿ–ಯುವುದು. ಹಜಾರ್ (ಫಾ.)<ಸಂ.ಸಹಸ್ರ–ಸಾವಿರ. ಉಲತಾ<ಉಲಯಾ<ಸಂ.ಉಪರ್ಯಸ್ತ–ಮೇಲೆ ಕೆಳಗೆ ಮಾಡು, ನಾಶಗೊಳಿಸು.

ಅಥಾ ರೀನ (ಜೀನ) ರಾವುತ ಜೋ ಘೋಡೇ ಕೀ ಪೀಟ
ಕಿಯಾ ದೋ ಕೂಂ ಯಕ ನೇಜಾ ಬೈಠಾ ಸೋ ನೀಟ । ೩೬
ಜಿರಾ ನಾ ರಖೇ ತನಕೂಂ ಭಾಲೇ ತೇ ಝೂಂಪ
ಕಿ ಅಂಕಡೇ ನ ಮಕಡೀ ಕೇ ಜಾಲೇ ತೇ ಸಾಂಪ । ೩೭
ಭಾಲಾ ಆ ಕೋ ಝುಲಕ್ಯಾ ಸೋ ಜಿಸ ತನ ಕೇ ಆಡ
ಬುಡೀ ರಕ ಇಧರ ಜಾ ರಹ್ಯಾ ತನಕೇ ಪಾರ । ೩೮

ಕುದುರೆಯ ಬೆನ್ನಿನ ಮೇಲೆ ಜೀನನ್ನು ಹಾಕಿದ್ದು, ಅದರ ಮೇಲೆ ಯೋಧನಿದ್ದನು. ಒಂದು ಭಲ್ಲೆಯು ಸರಾಗವಾಗಿ ಬಂದು ವ್ಯವಸ್ಥಿತವಾಗಿ ಅಲ್ಲಿ ಬೀಳಲು, ಪರಿಣಾಮವಾಗಿ ಅವೆರಡೂ (ಸವಾರ ಮತ್ತು ಜೀನು) ಒಂದೇ ಆಗಿಬಿಟ್ಟವು. ಕಬ್ಬಿಣದ ಕವಚವೂ ಸಹ ಭಲ್ಲೆಯಿಂದ ಶರೀರವನ್ನು ರಕ್ಷಿಸಲಾರದೆ ಹೋಯಿತು. (ಭಲ್ಲೆಯು ಕವಚವನ್ನು ಭೇದಿಸಿಕೊಂಡು ಶರೀರದೊಳಗೆ ನುಗ್ಗಿತು.) ಮಳೆಯಿದೆ ಎಂದುಕೊಂಡು ಹಾವು ಹೇಗೆ ನಿಲ್ಲುವುದಿಲ್ಲವೋ ಹಾಗೆಯೇ ಯಾವ ಶರೀರದ ಕಾರಣದಿಂದ ಭಲ್ಲೆಯು ಚಮಕಿತವಾಗಿ ಕಾಣುತ್ತಿತ್ತೋ ಅದೇ ಶರೀರದ ಮೂಲಕವೇ ಹೊರಗೆ ಹೊರಟಿತು. ಕೇವಲ ಅದರ ಬುಡವು ಮಾತ್ರ ಹೊರಗೆ ಉಳಿದಿತ್ತು.

("ರೀನ" ಶಬ್ದವು ತಪ್ಪು ಪ್ರಯೋಗವಾಗಿದ್ದು ಅಲ್ಲಿಗೆ "ಜೀನ" ಎಂಬ ಶಬ್ದವೇ ಸೂಕ್ತವೆನಿಸುವುದು.) ರಾವುತ<ಸಂ. ರಾಜ+ಪುತ್ರ<ರಾಅ+ಊತ<ರಾವೂತ–ಯೋಧ, ಸರದಾರ. ಪೀಟ<ಸಂ.ಪೃಷ್ಠ–ಬೆನ್ನು. ನೇಜಾ<ನೇಜಹ (ಫಾ.)<ಸಂ. ನೇತ್ರ:–ಭಲ್ಲೆ. ನೀಟ(ಕನ್ನಡ)–ನೆಟ್ಟಗೆ. ನಿಟು–ನೀಟು, ಸರಳ. ಜಿರಾ<ಜಿರಾಹ(ಫಾ.)–ರಕ್ಷಣಾ ಕವಚ. ಝೂಪನಾ<ಝೂಪಣೇ (ಮರಾಠಿ) ಪ್ರಾ. ಝೂಂಪ–ಮುಚ್ಚು, ಅಂಕಡನಾ(ಮರಾಠಿ)<ಸಂ. ಅಖಂಡಿತ–ನಿಲ್ಲುವುದು. ಮಕಡೀ<ಸಂ. ಕೃಮಿ+ಡಾ–ಹುಳು. ಜಾಳಾ<ಸಂ. ಜಾಲ, ಜಾಲಕವು–ಚಲೆ, ಆಡ್(ಮರಾಠಿ)<ಸಂ. ಅಂತಃ+ಧಾ–ಆಧಾರ. ಬುಡಿ<ಬೂಡ(ಮರಾಠಿ)<ಸಂ. ಬುಧ್ನ–ನೆಲದಲ್ಲಿ ಹುದುಗಿರುವ ಮರದ ಭಾಗ, ಬುಡ. ಬುಧ್ನ ಶಬ್ದದಿಂದಲೇ ಫಾರ್ಸಿಯ "ಬುನ್" ಶಬ್ದವು ರೂಪುಗೊಂಡಿದೆ.

ಮುಏ ಗೋಸ ಫಂದ ಆಗ ಕೂ ನೈಡರೇ
ಅರಾಬೇ ಕೀ ಖಂದಕ ರಗತ ಸೂಂ ಭರೇ । ೩೯

ಸತ್ತುಹೋದ ಹೆಣ್ಣು ಕುರಿ ಅಥವಾ ಆಡು ಬೆಂಕಿಗೆ ಹೆದರುವುದಿಲ್ಲ. (ಹಾಗೆಯೇ ಶತ್ರುವಿನ ವಧೆ ಮಾಡಿದುದರಿಂದ) ತೋಪಿನ ಗುಂಡಿಗಳೆಲ್ಲವೂ (ಕಂದಕ) ರಕ್ತದಿಂದ ತುಂಬಿ ಹೋದವು.

ಮುಆ < ಸಂ. ಮೃತಕ – ಮೃತ, ಸತ್ತು ಹೋದ. ಗೋಸ್ಪಂದ(ಫಾ.) – ಹೆಣ್ಣು ಕುರಿ ಅಥವಾ ಆಡು. ರಗತ < ಸಂ. ರಕ್ತ – ರಕ್ತ.

ಹತೀ ಸರ ವಈಂ ಖಿಲಾಸಾ(ಖಾಸಾ) ಬರಚೀ ಸಂಬಾಲ
ಕಹ್ಯಾ ಮಾರ ಲೋ ದೇಖತೇ ಕ್ಯಾ ಇತಾಲ । ೪೦
ಸಗಲ ಕೋಟ ಪಾಡೋ ಇಸೀ ಠೌರ ಮೇಂ
ಕಿ ಆಏ ಹೈ ಅಪನೇ ಪಗೋ ಗೋರ ಮೇಂ । ೪೧

ಅಲ್ಲಿಂಯೇ ಭರ್ಚಿಯನ್ನು ಕೈಯಲ್ಲಿ ಹಿಡಿದುಕೊಂಡಿದ್ದು, ಸ್ವತಃ ಅವನೇ(ಬಹಲೋಲಖಾನ) ಆನೆಯ ಮೇಲೆ ಕುಳಿತಿದ್ದ. ಅವನು ನಂತರ ಹೀಗೆ ನುಡಿದನು. "ನೋಡುವಿರಿ ಏನನು ಈಗ! ಹೊಡೆಯಿರಿ, ಹೊಡೆಯಿರಿ! ಈ ಜಾಗದಲ್ಲಿ ಇರುವ ಸಂಪೂರ್ಣ ಕೋಟೆಯನ್ನು ಹೊಡೆದು ಉರುಳಿಸಿ ಬಿಡಿ. ಅವರೆಲ್ಲ (ಮರಾಠರು) ಈಗ ಸ್ವತಃ ತಾವೇ ನಡೆದುಕೊಂಡು ಮಸಣಕ್ಕೆ ಬಂದಿದ್ದಾರೆ." (ಅರ್ಥದ ದೃಷ್ಟಿಯಿಂದ "ಖಾಸ" ಶಬ್ದವೇ ಸೂಕ್ತವಾದುದಾಗಿದೆ.)

ಸಂಬಾಲನಾ < ಸಂಭಾಲನಾ < ಸಂ.ಸಂಭಾಲ – ಸಂಭಾಳಿಸು. ಕೈಗೆ ತೆಗೆದುಕೋ, ಇತಾಲ, ಉತಾಲ < ಉತವೀಳ (ಮರಾಠಿ) – ಈಗ. ಸಗಲ < ಸಂ.ಸಕಲ – ಸರ್ವ. ಠೌರ – ಸಂಧಿ. ಠಿಕಾಣ – ಜಾಗ. ಪಗ < ಸಂ. ಪದ+ಕ – ಕಾಲು. ಗೋರ (ಫಾ.) – ಅರಣ್ಯ, ಮಸಣ, ಸಮಾಧಿ.

ಸುನೇ ಸೋ ಚ ಶಮಶೇರ ಬಂದಾ ಯೋ ಬಾತ
ಹುಏ ಪಾವ – ಉತಾರಾ (ಪಾ–ಉತಾರಾ) ಫಿರಂಗಾಲೇ ಹಾತ । ೪೨
ಸಟೇ ಜಿಸ ಪೋ ಶಮಶೇರ ಶಾ ವಾರ ಆ
ತುರಂತ ಹೌರ ಉಸೇ ಭುಈ ಪೋ ಬಿಸಲಾಏ ಲ್ಯಾ । ೪೩
ಸಂಭಾಲ್ಯಾ ಸೋ ಭಾಲೇ ಲೇ ಸಾಬಿತ ಕಟಾರ
ಗಯಾ ಫೋಡ ಬಕ್ತರ ಕೂಂ ಛಾತೀ ಕೇ ಪಾರ । ೪೪

ಯಾರ್‍ಯಾರ ಬಳಿಯಲ್ಲಿ ಖಡ್ಗಗಳು ಇದ್ದವೋ ಅವರೆಲ್ಲ ಈ ಮಾತನ್ನು ಕೇಳಿದೊಡನೆ ಕೈಯಲ್ಲಿನ ತಮ್ಮ ಆಯುಧವನ್ನು ಗಟ್ಟಿಯಾಗಿ ಹಿಡಿದು ಮುಂದಕ್ಕೆ ನಡೆದರು. ಯಾರ ಮೇಲೆ ಅದನ್ನು ಪ್ರಯೋಗಿಸಿದರೋ ಅವರ ಕುದುರೆಗಳು ಭೂಮಿಯಲ್ಲಿ ವಿಶ್ರಮಿಸಿಕೊಳ್ಳುವಂತೆ ಕಾಣುತ್ತಿದ್ದವು. ಯಾರ್‍ಯಾರು ಭಲ್ಲೆ ಮತ್ತು ಕಟಾರಿ (ಸಣ್ಣ

ಕತ್ತಿ)ಗಳನ್ನು ಹಿಡಿದಿದ್ದರೋ ಅವರ ಭಲ್ಲೆಯು ಎದುರಿಗಿದ್ದ ಯೋಧನ ಸಂರಕ್ಷಣ ಕವಚವನ್ನು ಭೇದಿಸಿ ಅವನ ಎದೆಯೊಳಗೇ ಇಳಿದು ಬಿಡುತ್ತಿತ್ತು.

ಶಮಶೇರ(ಫಾ.) – ಖಡ್ಗ. ಬಂದ (ಫಾ.ಕ್ರಿಯಾಪದ) < ಸಂ.ಬಂಧ(ಬಧ್ನಾತಿ) – ಕಟ್ಟುವುದು, ಧಾರಣೆ ಮಾಡುವುದು. ಪಾ < ಸಂ. ಪಾದ – ಕಾಲು. ಉತಾರಾ < ಸಂ. ಉತ+ತೃ(ಉತ್ತರತಿ) – ಇಳಿಯುವವ, ಆ ಕಡೆಗೆ ಹೋಗುವವ. ಫಿರಂಗ (ಫಾ.) – ಕತ್ತಿ, ಖಡ್ಗ. ಸಟನಾ < ಸಂ. ಶಟತಿ–ಎಸೆ, ಬೀಳು. ಸಾಬಿತ (ಅ.) – ಸ್ಥಿರ, ಕಾಯಮ. ಫೋಡನಾ < ಸಂ. ಸ್ಫುಟ (<ಸ್ಫಿಟಿತ) – ಒಡೆಯುವುದು. ಬಕ್ತರ (ಫಾ.) – ಸಂರಕ್ಷಣ ಕವಚ.

ಚಲಾವೇ ಅಗರ ಧನುಕ ಹಾತೀ ಫೋ ತೋಡ
ಪಡೇ ವೋ ಹತೀ ದೇಕ ಅಪಸ ಜೀವ ಛೋಡ । ೪೫
ದಿಖಾವೇ ತೋ ಸುಂಡಾ ಪೋ ತೋಡಾ ಕೇ ಬಾಂತ
ಉಡೇ ಹೋ ಕೋ ಚಿಂಗ್ಯಾ ಮತೇ ಗಜ ಕೇ ದಾಂತ । ೪೬
ಕಮರ ಪರ ಸಟೇ ಹೈ ತೋ ನೈ ಲಗ ಖಬರ
ನಿಕಲ ಜಾವಿ ಯಕ ದಿಲ ಕೋ ದೋ ಫಾಂಕ ಕರ । ೪೭

ಆನೆಯ ಮೇಲೆ ಬಾಣ ಪ್ರಯೋಗ ಮಾಡಿದರೆ ತಕ್ಷಣ ಅದು ತನ್ನ ಪ್ರಾಣವನ್ನು ನೀಗಿ ಕೆಳಗೆ ಬೀಳುತ್ತಿತ್ತು. ಆನೆಯ ಸೊಂಡಿಲ ಸುತ್ತ ಬಳೆಯ ಆವರಣವೇನಾದರೂ ಇದ್ದರೂ ಆ ಮದೋನ್ಮತ್ತ ಆನೆಯ ದಂತಗಳು ತುಂಡು ತುಂಡಾಗಿ ಎಗರಿ ಬೀಳುತ್ತಿದ್ದವು. ಯಾರಾದರೂ ಒಬ್ಬರ ಸೊಂಟದ ಮೇಲೆ ಹೊಡೆತ ಬಿದ್ದರೆ, ಅದು ಅವನಿಗೆ ತಿಳಿದು ಬರುವ ಮುನ್ನವೇ ಬಾಣವು ಅವನ ಹೃದಯವನ್ನು ಎರಡು ತುಂಡುಗೆಯ್ದು ಹೊರ ಹೊಮ್ಮುತ್ತಿತ್ತು.

ಧನುಕ < ಸಂ.ಧನುಷ್ಯ – ಧನಸ್ಸು. ಸುಂಡ < ಸಂ.ಶುಂಡಾ – ಸೊಂಡಿಲು. ತೋಡನಾ < ಸಂ. ತೃಟಿತ – ಕತ್ತರಿಸು. ಎಳೆ. ತೋಡಾ – ಕಂಕಣ, ವೀರಕಂಕಣ (ರಾಜ್ಯ ವ್ಯವಹಾರ ಕೋಳ). ಲಗನಾ < ಲಗ – ಪ್ರಾಪ್ತಿಯಾಗು, ದೊರಕು. ದಿಲ (ಫಾ.) – ಮನಸ್ಸು < ಸಂ. ಹೃದಯ. ಪಾಂಕ (ನಾಮ) < ಸಂ. ಫಕ್ಕಲೆ (ದೂರವಾಗುವುದು, ಬೇರೆಯಾಗುವುದು.) – ಭಾಗ, ತುಂಡು.

ಜಿರಾ ಕಾ ತೋ ಹೈ ವಾರ ಬಹನೇ ಮೇ ಹಾಲ
ಕಿ ಭರ ಲೋಟ ಅಂಗೇ ಲರ ಕೇ ಕಾ ರಹೇ ಕಂಜಾಲ । ೪೮
ಸಟೇ ಕಾಟ ಯೂ ಕಾಫಿರಾ ಕೂಂ ಕಠಿನ
ಕಿ ಕುರ್ಬಾನಿ ಬಕರ್ಯಾ ಕೂಂ ಜ್ಯೂಂ ಹಜಕೇ ದಿನ । ೪೯

ರಕ್ಷಣ ಕವಚಗಳ ಗುಂಪುಗಳಲ್ಲಿಯೇ ಈಗ ಪ್ರವಹಿಸಿ ಹೋಗುತ್ತಿವೆ. (ನೀರಿನ) ದೊಡ್ಡ ಅಲೆಗಳೇ ಬಂದಿರುವಾಗ ತುಣುಕುಗಳು ಉಳಿಯುವುದಾದರೂ ಹೇಗೆ? ಹಜ (ಪವಿತ್ರದಿನ)ನ ದಿನದಂದು ಎಷ್ಟೊಂದು ಸಂಖ್ಯೆಯಲ್ಲಿ ಕುರಿಗಳನ್ನು ಆಹುತಿ ನೀಡಲಾಗುವುದೋ ಹಾಗೆ ಶತ್ರು ಸೈನ್ಯವನ್ನು ತುಂಡರಿಸಲು ಆರಂಭಿಸಿದರು.

ಜಿರಾ – ಜಿರಹ (ಫಾ.) – ರಕ್ಷಣಾ ಅಸ್ತ್ರ. ವಾರ – ಸಂ. ವಾರಃ – ಸಮುದಾಯ. ಭರ < ಸಂ. ಭೂ – ತುಂಬಿದ, ಪರಿಪೂರ್ಣ. ತಾಟ < ಸಂ. ಪುಟ – ನೀರಿನ ಅಲೆ. ಪೂರ, ಲರ < ಲಹರ – ಕಾಲುವೆ. ಕಂಜಾಲ – ಭಿಕ್ಷಾಪಾತ್ರೆ. ಕುರ್ಬಾನಿ (ಅ.) – ಯಾವುದಾದರೂ ಒಂದು ವಸ್ತುವನ್ನು ಪರಮೇಶ್ವರನಿಗೆ ಅರ್ಪಿಸುವುದು. ಹಜ (ಅ.) –ಮೆಕ್ಕಾಗೆ ಯಾತ್ರೆ ಹೋಗುವುದು.

(ಡಾ. ಅಬ್ದುಲ ಹಕ ಅವರು ಅಭಿಪ್ರಾಯ ಪಟ್ಟಿರುವಂತೆ ಮುಂದಿನ ಮೂರು ಭಾಗಗಳಲ್ಲಿ ಮರಾಠಾ ಸೇನೆಯ ವರ್ಣನೆಯು ಇದೆ.)

(೨೮) ದಿಸೇ ಐನ ಅಜಲ ಪನ ದೇಖತ ನೈ ಡರೇ
ಕಿ ನಾಮೋಸ ಕೂ ಬೇಶ ಅಂಗೇ ಜಿವ ಕರೇ । ೫೦
ರವಿಶ ಹೈ ಅರಾಬೇ ಸೂ ಲಡತಾ ಸೋ ಧೂರ
ಖದೇಡೇ ಘೋ ದುಶ್ಮನ ಕೂಂ ನಾ ಜಾವಿ ದೂರ। ೫೧
ಕಿ ಜೋಡೇ ಪೋ ಕಾಬೂ ಸೂ ಗಾಡ್ಯಾ ಕೂಂ ದಾಟ
ಹಲೇ ತಜ ಬಿಖರತಾ ಹೈ ಯಕ ದಮ ವೋ ಘಾಟ। ೫೨

(ಮರಾಠಾ ಸೈನಿಕರಿಗೆ)ತಮ್ಮ ಎದುರು ಮೂರ್ತಿ ಮಂತನಾಗಿ ನಿಂತಿರುವ ಮೃತ್ಯುವು ಕಾಣುತ್ತಿದ್ದ. ಆದರೂ ಅವರು ಮಾತ್ರ ಹೆದರುತ್ತಿರಲಿಲ್ಲ. ಕಾರಣ ಅವರಿಗೆ (ಪ್ರಾಣಕ್ಕಿಂತ) ಹೆಸರು (ಕೀರ್ತಿ) ಪಡೆದುಕೊಳ್ಳುವುದೇ ದೊಡ್ಡದಾಗಿತ್ತು. ಅದಕ್ಕಾಗಿ ಅವರು ಪ್ರಾಣವನ್ನು ಕೊಡುವುದಕ್ಕೂ ಸಿದ್ಧವಿರುತ್ತಿದ್ದರು.(ಶೂರರು ಭಾವಿಸುವುದೇನೆಂದರೆ) ಯಾರು ತೋಪನ್ನು ಎದುರಿಸುವರೋ ಅವರೇ ನಿಜವಾಗಿಯೂ ವೀರರು. ಶತ್ರುವನ್ನು (ಮರಾಠಾ) ಬೆನ್ನಟ್ಟಿ ಹೋದರೂ ಆತ ದೂರ ಹೋಗುತ್ತಿರಲಿಲ್ಲ. (ಆದರೆ) ಮದ್ದುಗುಂಡುಗಳ ಗಾಡಿಯ ಸಮೇತ ಅವರನ್ನು ವಶಕ್ಕೆ ತೆಗೆದುಕೊಂಡರೂ ಬಹಳ ಬೇಗನೆ ಅವರು ಅಲ್ಲಿಂದ ಬೇರೆಡೆ ಓಡಿ ಹೋಗುತ್ತಿದ್ದರು.

ಐನ (ಅ.) – ಕೇವಲ. ಅಜಲ (ಅ.) – ಮೃತ್ಯು. ನಾಮೋಸ (ಅ.) – ಹೆಸರು, ಸತ್ಕೀರ್ತಿ. ರವಿಶ (ಫಾ.) – ಪದ್ಧತಿ, ನಡತೆ. ಅರಬಾ (ಫಾ.) – ಮದ್ದುಗುಂಡುಗಳ ಗುಂಪು. ಕಾಬೂ (ತುರ್ಕಿ) – ಶಕ್ತಿ. ಬದೇಡನಾ (ಫಾ.) (ಖದೇಸಣೇ < ಸಂ. (ಕ್ಷ್ವಿಡ) (ಕ್ಷ್ವೇಡತಿ) – ಗರ್ಜನೆ, ಕೂಗೂತ್ತಾ ಎದುರಾಳಿಯನ್ನು ಅಟ್ಟಿಸಿಕೊಂಡು ಹೋಗುವುದು.

ಟಿಪ್ಪಣಿ : –

೫೩ ರಿಂದ ೭೫ರ ಕ್ರಮಾಂಕದ ಭಾಗವು (ಉಷ್ಣತೆ) ತಾಪವು ಎಲ್ಲೆಡೆ ವ್ಯಾಪಿಸಿದ ವರ್ಣನೆಯಾಗಿದ್ದು, ಮುಂದೆ ಆದಿಲಶಾಹಿ ಸೈನ್ಯಕ್ಕೆ ಕುಡಿಯಲು ನೀರು ದೊರಕದಂತಹ ಸಂದರ್ಭವು ಒದಗಿಬಂದ ಘಟನೆಯನ್ನು ವರ್ಣಿಸಲಾಗಿದೆ.

(೨೯) ಕಿ ಜಾನೇ ಥೇ ಚಲತಾ ನೈ ಕುಚ ಇಲಾಜ
ವಲೇ ಹೋಇಂಗೇ ಆಜಿಜ ತೋ ಪಾನೀ ಕೇ ಬಾಜ । ೫೩
ದೇಕೇ ಧೂಂಡ ತೋ ಬರ–ಜಾಯ ಥಾ ವೋ ಕಯಾಸ
ಜಿನೇಗಾ ಭುಕಾ, ನಾ ಜಿವೇ ಮಾರ – ಪ್ಯಾರ । ೫೪

ಇನ್ನು ಇಲ್ಲಿ ತಮ್ಮ ಯಾವುದೇ ಹಂಚಿಕೆಯು ನಡೆಯುವುದಿಲ್ಲ ಎಂಬುದು ಶತ್ರುಗಳಿಗೆ (ಮರಾಠರು) ಅರ್ಥವಾಯಿತು. ಆ ಕಾರಣ ಅವರು ಭಿನ್ನವಾಗಿ ಹೀಗೆ ಯೋಚಿಸಿದರು. ಶತ್ರುಗಳಿಗೆ (ಆದಿಲಶಾಹಿ ಸೈನ್ಯಕ್ಕೆ) ನೀರು ದೊರೆಯದಂತೆ ಮಾಡಿದರೆ ಅವರು ನಿರುಪಾಯರಾಗುವರು. ಸೂಕ್ಷ್ಮವಾಗಿ ಗಮನಿಸಿದಾಗ ಅವರು ಮಾಡಿದ ಈ ಯೋಜನೆಯು ನಿಜವಾಗಿತ್ತು. ಹಸಿದ ಮನುಷ್ಯ ಜೀವವನ್ನು ಹಿಡಿದುಕೊಂಡು ಇರಬಲ್ಲನು. ಆದರೆ ಬಾಯಾರಿದವರು ಬದುಕುವುದು ಸಾಧ್ಯವೇ ಇಲ್ಲ.

ಇಲಾಜ (ಅ.) – ಉಪಾಯ. ಆಜಿಜ (ಅ.) – ತ್ರಸ್ತ, ನಿರುಪಾಯ. ಬರ (ಫಾ.) – < ಸಂ. ಉಪಿರ < ಪರ< ಬರ – ಮೇಲೆ, ಅಲ್ಲಿ. ಜಾ (ಫಾ.) – ಸ್ಥಳ, ಜಾಗ. ಬರ – ಜಾ–ಯೋಗ್ಯ, ನಿಜ. ಕಯಾಸ (ಅ.) – ಅಂದಾಜು, ಊಹೆ. ಬಾಜ < ಸಂ. ವರ್ಜ್ಯ – ಬಿಡು, ಉಳಿದ. ಧುಂಡನಾ – ಅರಸು, ಶೋಧಿಸು. ಬಹುಕ್ಷಾ (ಪ್ರಾ.) ಭುಕಾ – ಹಸಿವು. ಜಿವನಾ < ಸಂ. ಜೀವತಿ – ಜೀವಂತವಾಗಿ ಇರುವುದು.

ಕಿ ಆ ಸುಬಹ ತೇ ವಾ ಭರೀ ಯಕ ಜೋ ಧೂಪ
ಖಡೇ ಥೇ ಹಮೇ – ಹಮ್ಮು ಸೂ ಲಡನೇ ಜೋ ಜೋಪ । ೫೫
ಪಿಛೋರೀ ಥೀ ಧೂಪ ಇಕ ತೋ ಆ ಸಿರ ಪೋ ಅಗ
ಸುಲಗತೀ ಥೀ ದುಸರೇ ದರುನೇ ಮೇಂ ಧಗ । ೫೬

(ರಣರಂಗದಲ್ಲಿ ಸೈನಿಕ) ಬಹಳ ಉತ್ಸಾಹ, ಸಾಮರ್ಥ್ಯ ಮತ್ತು ಆವೇಶದಿಂದ ಯುದ್ಧ ಮಾಡಲು ಸಿದ್ಧನಾಗಿ ನಿಂತಿದ್ದನು. ಅಲ್ಲಿ ಬೆಳಗಿನಿಂದಲೇ ತೀಕ್ಷ್ಣವಾದ ಬಿಸಿಲು ಬೀಳಲು ಆರಂಭಿಸುತ್ತು. ಮೊದಲು ಬೆನ್ನಿಗಿದ್ದ ಬಿಸಿಲು, ನಂತರ ತಲೆಯ (ನೆತ್ತಿ) ಮೇಲೆ ಬಂದು ಅಗ್ನಿ ವರ್ಷವನ್ನು ಕರೆಯ ತೊಡಗಿತು. ಇದರ ತೀವ್ರತೆಯು ಅರಿತೊಡನೆ ಅಂತಃಕರಣದಲ್ಲಿ ಮತ್ತೊಂದು ಬೆಂಕಿ ಹೊತ್ತಿಕೊಳ್ಳತೊಡಗಿತು.

ಹಮ್ಮ (ಅ.) – ಆವೇಶ, ರೋಷ. ಹಮೇ– ಹಮ್ಮ – ಇಮ್ಮಡಿ ಆವೇಶ.

(ಆವೇಶಾವೇಶದಿಂದ) (ದಖನಿಯಲ್ಲಿ ಇಂಥ ದ್ವಿರುಕ್ತಿ ವಾಚಕ ಶಬ್ದಗಳು ಹೇರಳವಾಗಿವೆ. ಉದಾ : ಘರೇ – ಘರ (ಮನೆ ಮನೆಗಳ), ಜಂಗಲೇ – ಜಂಗಲ ಇತ್ಯಾದಿ ಆಡುನುಡಿಯ ಇ –ಈ, ಏ, ಐ ಪ್ರತ್ಯಯ ಸೇರಿಕೊಂಡು ಈ ರೂಪಗಳು ಹುಟ್ಟಿಕೊಂಡಿವೆ. ಪ್ರಾಚೀನ ಮರಾಠಿಯಲ್ಲಿಯೂ ಇಂಥ ಉದಾಹರಣೆಗಳು ಲಭಿಸುತ್ತವೆ. ಅವಧಿ ಇಲ್ಲವೆ ಬ್ರಜ ಭಾಷೆಗಳಲ್ಲಿ ಇಂಥ ದ್ವಿರುಕ್ತಿಗಳಲ್ಲ.) ದರುನಾ, ದರುನ (ಫಾ.) < ಸಂ. ಅಂತಃಕರಣ – ಹೃದಯ. ಧೂಪ < ಸಂ. ಧೂಫ (ಕ್ರಿಯಾಪದ) – ಅಗ್ನಿ, ಬಿಸಿಲು. ಚೋಪ (ಹಿಂದಿ) – ಧೈರ್ಯ, ಆವೇಶ, ಪಿಛೋರಾ (ರೀ) < ಸಂ. ಪಾಶ್ಚಾರ್ಧ – ಬೆನ್ನಹಿಂದೆ. ಆಗ < ಸಂ. ಅಗ್ನಿ – ಬೆಂಕಿ. ಸುಲಗನಾ < ಸಂ. ಸು+ಲಗ – ಹೊತ್ತಿಕೊಳ್ಳುವುದು.

ಟಿಪ್ಪಣಿ : –

ಮೇಲಿನ ೫೩ ರಿಂದ ೫೬ರ ಕ್ರಮಾಂಕದ ಭಾಗಗಳನ್ನು ಸಂದರ್ಭಾನುಸಾರವಾಗಿ ನೋಡಿದಾಗ ೬೦ನೆಯ ಕ್ರಮಾಂಕದ ನಂತರ ಬರಬೇಕಾಗಿತ್ತು. ಹಾಗಾಗಿದ್ದಲ್ಲಿ ವಿಷಯದಲ್ಲಿ ಸುಸಾಂಗತ್ಯ ಬರುತ್ತಿತ್ತು. ಆದರೆ ಡಾ.ಹಕ್ ಅವರಂತೆ ಇಲ್ಲಿಯೂ ಮೇಲಿನ ಕ್ರಮವನ್ನೇ ಉಳಿಸಿಕೊಳ್ಳಲಾಗಿದೆ.

೫೭ ರಿಂದ ೬೦ರ ಕ್ರಮಾಂಕದ ಭಾಗದಲ್ಲಿಯೂ ಮರಾಠಾ ಸೈನಿಕರ ವರ್ಣನೆ ಇದೆ.

(೨೮) ಸಿವಾ ಕಾ ವೋ ಲಶ್ಕರ ತೋ ಸೂರತ – ಹರಾಮ
ಮಗರ ನಸ್ಲ ಶೈತಾನ ಕಾ ಥಾ ತಮಾಮ । ೫೭
ಕಿ ಪೇಕ (ಪೈಸ) ಆತೇ ಕೂ ಕರನೇ ಕೂ ಪಸ
ದಿಸೇ ಫಿರ ಉಸೀ ಯಕ ಕೇ ಜಾಗೇ ಪೋ ದಸ । ೫೮

ಶಿವಾಜಿಯ ಸೈನ್ಯವು ಅತ್ಯಂತ ಅಪವಿತ್ರವೂ, ಭ್ರಷ್ಟವೂ ಆಗಿತ್ತು. ಅದನ್ನು ಸೈತಾನನ ವಂಶಕ್ಕೆ ಸೇರಿದ್ದೆಂದೇ ಹೇಳಬೇಕು. (ಕಾರಣ) ಮುನ್ನುಗ್ಗಿ ಬಂದಂತಹ ಒಬ್ಬ ಸೈನಿಕನನ್ನು ಹೊಡೆದು ಹಾಕಿದರೆ, ತಕ್ಷಣ ಅವನ ಜಾಗದಲ್ಲಿ ಇನ್ನು ಹತ್ತುಮಂದಿ ಸೈನಿಕರು (ನಿಂತಿರುವುದು) ಕಂಡುಬರುತ್ತಿದ್ದರು.

ಪೈಸನಾ < ಸಂ. ಪ್ರವಿಶಲೆ – ನುಗ್ಗಿ ಬರುವುದು, ಪ್ರವೇಶಿಸು. (ಪೇಶ ಎಂಬ ಶಬ್ದವು ದೋಷಯುಕ್ತ, ವಿಸಂಗತ ಮತ್ತು ಅಜ್ಞಾನ ಜನ್ಯ ಎಂಬ ಅರ್ಥವುಳ್ಳದ್ದಾಗಿದೆ.) ಪಸ (ಫಾ.) < ಸಂ. ಪಶ್ಚಾತ – ಹಿಂದೆ. ನಸ್ಯ (ಅ.) – ವಂಶ, ಕುಲ. ಸೂರತ – ಹರಾವರ – ಅಪವಿತ್ರ, ಭ್ರಷ್ಟ. ಸೂರತ – ಆಕೃತಿ, ಮುಖ. ಶೈತಾನ (ಅ.) – ಸೈತಾನ, ಪಿಶಾಚಿ.

ದಲ ಇಸ್ಲಾಂ ಕಾ ಥಾ ಸೋ ಮಅದೂದ ಥಾ
ಕುಮರ ಗೈರ ಹಕ ಉನ ಪೋ ನಾಬೂದ ಥಾ । ೫೯
ಲಡಾಈ ತೋ ಪಲ-ಪಲ ಮೇ ಐಸೀ ಕಠಿನ
ಪಡೀ ಯೂ ಕಿ ದೇಖ್ಯಾನ ಹೋಯ ಉಮ್ರ ಕಿನ । ೬೦

ಇಸ್ಲಾಮಿ (ಆದಿಲಶಾಹಿ) ಸೈನ್ಯವು ಬಹಳ ಕಡಿಮೆ ಇತ್ತು. ಅಲ್ಲದೆ ಅವರಿಗೆ ಬೇರೆಯವರ ಸಹಾಯ ಲಭಿಸುವುದೂ ಸಾಧ್ಯವಿರಲಿಲ್ಲ. ಕ್ಷಣ ಕ್ಷಣಕ್ಕೂ ಯುದ್ಧವು ಎಷ್ಟೊಂದು ಭೀಕರವಾಗಲು ತೊಡಗಿತೆಂದರೆ, ಇಂಥ ಭೀಕರ ಯುದ್ಧವನ್ನು ತಮ್ಮ ಆಯುಷ್ಯದಲ್ಲಿ ಯಾರೂ ನೋಡಿರಲಾರರು.

ದಲ (ಸಂ) – ಸೈನ್ಯ. ನಾ – ಬೂದ (ಫಾ.) – ನಾ+ಬೂದ – ನಿರಸ್ತ, ಅಸ್ತಿತ್ವದಲ್ಲಿ ಇಲ್ಲದಿರುವುದು. ಬುದೂನ (ಫಾ.) –ಸಂ. ಭೂತ – ಇರುವುದು. ಆಗುವುದು. ಕಿನ < ಸಂ. ಕಿಯಾನ – ಯಾರೂ. ಮಅದೂದ (ಅರಬಿಯ "ಅದದ"ದಿಂದ) – ಎಣಿಸಲು ಬರುವಷ್ಟು, ಕಡಿಮೆ. ಉಮ್ರ (ಅ.) – ಆಯಸ್ಸು. ಹಕ (ಅ.) – ಸತ್ಯ. ವಾಸ್ತವ.

(೩೦) ವಜೂದಾ ಮೇಂ ರುಹಾ ಧರೇ ಚಟಪಟೀ
ತಂದೂರ ಆಸಮಾ ಥಾ ಜಮೀ ಥೀ ಭಟೀ । ೬೧
ಲಗೇ ಜೋಶ ಖಾ ಸಿರ ಮೇಂ ಪಕನೇ ದಿಮಾಗ
ಜಿರಾ ಜಲ ಕೋ ದೇನೇ ಲಗೀ ತನ ಪೋ ದಾಗ । ೬೨
ಗಯಾ ಸೂಕ ಅಬ ಅಮ್ರಿತ ಕಾ ಚಶ್ಮಾ ದಹನ
ಪಡೀ ಜೀಬ ಬೇ-ಆಬ ಮಾಹೀ ನಮನ । ೬೩

(ಅನೇಕ) ದೇಹಗಳಲ್ಲಿನ ಆತ್ಮಗಳು ದಗ್ಧವಾಗತೊಡಗಿದವು. ಆಕಾಶ ಒಲೆಯಂತೆಯೂ ಹಾಗೂ ಭೂಮಿ ಭಟ್ಟಿಯಂತೆಯೂ ತೀವ್ರ ಬಿಸಿ (ತಾಪಗೊಳ್ಳು) ಆಗಿದ್ದವು. ಇತ್ತ ಆವೇಶದಿಂದ ತಲೆಯೊಳಗಿನ ಮೆದುಳೂ ಸಹ ಬೇಯಲಾರಂಭಿಸಿತು. ಅಮೃತದ ಕ್ಷೀರ ತುಂಬಿದ್ದ ಮುಖಗಳು ಒಣಗಲಾರಂಭಿಸಿದರೆ, ನೀರಿನಿಂದ ಹೊರಬಿದ್ದ ಮೀನಿನ ಹಾಗೆ ಚಡಪಡಿಸಲಾರಂಭಿಸಿತು ನಾಲಿಗೆ.

ಮಜೂದ (ಅ.) – ಅಸ್ತಿತ್ವ, ಶರೀರ. ರುಹ (ಅ.) – ಆತ್ಮ. ಮನಜೋಶ (ಫಾ.) < ಜೋಶೀದನ (ಕ್ರಿಯಾಪದ). ಸ < ತ್ವಿಫ – ಆವೇಶ ಉಂಟಾಗು, ಕೋಪಗೊಳ್ಳು. ದಿಮಾಗ (ಅ.) – ಮಿದುಳು. ಜಿರಾ < ಜಿರಹ (ಫಾ.) – ಜಾಲದಂತಿರುವ ಸಂರಕ್ಷಣ ಕವಚ. ದಾಗ (ಫಾ.) < ಸಂ. ದಗ್ಧ – ದಹಿಸಿದ ಭಾಗ, ಕಲೆ, ಚಶ್ಮಾ (ಫಾ.) –ನೀರಿನ ಉಗಮ. ದಹನ (ಫಾ.) < ಸಂ. ದಶನ (ದಾಂತ) –

ಮುಖ. ಬೇ (ಫಾ.) < ಸಂ. ವಿ (ಉಪಸರ್ಗ) _ ವಿನಾ, ಹೊರತಾಗಿ. ಆಬ (ಫಾ.) < ಸಂ. ಆಪ _ನೀರು. ಮಾಹೀ (ಫಾ.) < ಸಂ. ಮತ್ಸ್ಯ – ಮೀನು. ನಮನ (ಫಾ.) < ನಮೂನಹ (ಫಾ.) – ಸಮಾನ, ಪ್ರಮಾಣ. ಸೂಕನಾ < ಸಂ. ಶುಷ್ಯತಿ – ಒಣಗು, ಬತ್ತಿಹೋಗು.

ಹುವಾ ಖುಶ್ಕ ಲ್ಹೂ ಲ್ಯಾ ನ ಮಿಹನತ ಕಿ ತಾಬ
ಖಡಗ ಬಿನ ನ ಥಾ ಕಿಸ ಬೀ ಜಾಗೇ ಪೋ ಆಬ । ೬೪
ಖಡೇ ಥೇ ತೋ ಧರ ಯಕ ಶ್ರೇ ಯಶ ದಿಲ ಮೇಂ ಜೋಗ
ವಲೇ ಆಬ ಬಿನ ತಲಮಲ್ಯಾ ಸಬ ಬೀ ಲೋಗ । ೬೫

ಆಯಾಸದೊಂದಿಗೆ ಬಿಸಿಲಿನ ತಾಪವನ್ನು ಸಹಿಸುವುದು ಅವರಿಗೆ ಸಾಧ್ಯವಾಗದ್ದರಿಂದ ಅವರ ರಕ್ತವೆಲ್ಲ ಒಣಗಿ ಹೋಯಿತು. ಕೆರೆಯನ್ನು ಬಿಟ್ಟರೆ ಮತ್ತೆಲ್ಲೂ ನೀರಿರಲಿಲ್ಲ. (ಕೇವಲ ಕೆರೆಯಲ್ಲಿ ಮಾತ್ರ ನೀರಿತ್ತು.) ಪ್ರತಿಯೊಬ್ಬರ ಮನಸ್ಸಿನಲ್ಲಿಯೂ ಇನ್ನೊಬ್ಬರ ಬಗ್ಗೆ ಐಕ್ಯ ಭಾವವಿದ್ದುದರಿಂದ ಎಲ್ಲರೂ (ಸೈನಿಕರು) ಸುಮ್ಮನೆ ನಿಂತಿದ್ದರು. ಆದರೆ ನೀರಿಲ್ಲದೆ ಎಲ್ಲರಿಗೂ ತಳಮಳವಾಗುತ್ತಿತ್ತು.

ಖುಶ್ಕ (ಫಾ.) < ಸಂ. ಶುಷ್ಕ (ವರ್ಣ ವಿಪರ್ಯಾಯ) – ಒಣಗು, ಬತ್ತಿಹೋಗು. ಮಿಹನತ (ಅ.) – ಶ್ರಮ. ತಾಬ (ಫಾ.) < ಸಂ. ತಪ್ತ – ಉಷ್ಣ, ಶಕ್ತಿ, ಧೈರ್ಯ. ಜೋಗ < ಸಂ. ಯೋಗ – ಐಕ್ಯಭಾವ. ತಲಮಲನಾ – ತಳಮಳಿಸು, ವಿಹ್ವಲವಾಗು. ಬೀ < ಸಂ. ಅಪಿ – ಪುಷ್ಠರ್ಥಕ ಪ್ರತ್ಯಯ. – ಕೂಡ, ಒಡನೆ.

ಸಮಜ ಹೋಯ ತೋ ನವ್ವಾಬ ಕೇ ದಿಲ ಮೇ ರಾಜ
ಖುದಾ ತೋ ದಿಯಾ ಫತಹ ಕರ ಸರ – ಫರಾಜ । ೬೬
ಪದ ಉದ ದೀನ – ದಾರಾ ಪೋ ಜಾಪೀಮ ಬಲಾ
ಬಸಾಏ ಹೈ ಲ್ಯಾ ಮಿಹನತೇ – ಕರಬಲಾ । ೬೭

ನವಾಬನು (ಬಹಲೋಲಖಾನ) ಇದರ ಗುಟ್ಟನ್ನು ಮನಸ್ಸಿನಲ್ಲಿಯೇ ಅರಿತನು. ಪರಮೇಶ್ವರನು ನಮ್ಮನ್ನು ಜಯಶಾಲಿಗಳನ್ನಾಗಿಸಿದ, ಆದರೆ ನಮ್ಮಂತಹ ಧರ್ಮಶ್ರದ್ಧಾಳುಗಳಾದ ಜನರನ್ನು (ಸೈನಿಕರು) ಕಠಿಣ ಸಂಕಟಕ್ಕೆ ನೂಕಿ (ಪ್ರಾಣಾರ್ಪಣೆಯ) ರಣರಂಗಕ್ಕೆ ಎಳೆದು ತಂದಿರುವನು.

ರಾಜ (ಫಾ.) < ಸಂ. ರಹಸ್ಯ – ಗುಟ್ಟು. ಫತಹ (ಫಾ.) _ ವಿಜಯ, ಯಶಸ್ಸು. ಸರ (ಫಾ.) < ಸಂ. ಶಿರ – ತಲೆ. ಫರಾಜ (ಫಾ. ಅಫರಾಖ್ತನ) – ನಿಲ್ಲಿಸು, ಎಬ್ಬಿಸು, ದೀನ (ಫಾ.) – ಸಂ. ಧೈ – ಧ್ಯಾನ. ಅವ – ದವನಾ, ಪ. ದೀನ, ಅ.ದೀನ, ಧರ್ಮ. ದಾರ < ಫಾ. ದಾಶ್ತನ – ಗ್ರಹಿಸು, ತೆಗೆದುಕೋ, ಧರಿಸು.

ಜಾಲೀಮ (ಅ.) ಅತ್ಯಾಚಾರಿ. ಬಲಾ (ಅ.) – ಸಂಕಟ. ಬಸನಾ < 'ಬಸನಾ'ದ ಪ್ರಯೋಜಕ < ಸಂ. ವಸಿತ – ಇರುವುದು.

ಕಿ ಪಕಡೇ ಹೈ ಲಗ ಲರ ವೋ ಕಾಫಿರ ಪಲೀದ
ಹುಏ ಆಹ ! ಸಬ ಯಾಂ ಚ ಮಾರೇ ಶಹೀದ । ೬೮
ಹುವಾ ಮುಜ ಆತಾ ಹಮಲಾ ಕರನಾ ಜರೂರ
ಕಿ ತಬ ಲಗ ಬಲಾ ಯೋ ನ ಹೋಯ ಸಿರ ತೇ ದೂರ । ೬೯
ವಹೀ ಧೂರ ಬೋಲ್ಯಾ ಕಿ ಅಯ। ಯಕ್ಕಾ – ತಾಜ
ಸಿಪಾಹೀ ತಿರ – ಅಂದಾಜ ಶಮಶೇರ – ಬಾಜ । ೭೦

(೨೯) ಲಡಾಈ ತೋ ಮಾರೇ ಹಮಿ ಪದ ಹೈ ಧಾಕ
ಮ – ಬಾದಾ ಕಿ ಬೇ – ಆಬ ಹಮ ಹುಏ ಹಲಾಕ । ೭೧

ಅಪವಿತ್ರ ಮನಸ್ಸಿನವನಾದ ಶತ್ರುವು ಆ ಜಲಾಶಯವನ್ನು ತನ್ನ ಹಿಡಿತದಲ್ಲಿಟ್ಟುಕೊಂಡಿದ್ದಾನೆ. ಹಾಗಾಗಿ ನಾವೆಲ್ಲ ಇಲ್ಲಿಯೇ ಸತ್ತು ಹೋಗುವೆವೋ (ಎಂಬ ಭಯವಾಗುತ್ತಿದೆ ನನಗೆ.) ಏನೋ. ಈಗ್ಗೆ ಧಾಳಿ ಮಾಡುವುದು ಅವಶ್ಯಕವೆಂಬುದು ನನ್ನ ಭಾವನೆ. ಅದನ್ನು ಬಿಟ್ಟರೆ ಮತ್ತಾವ ರೀತಿಯಲ್ಲೂ ಈ ಸಂಕಟವು ದೂರಾಗುವುದಿಲ್ಲ. ಮತ್ತೆ ಆ ಶೂರ ನೇತಾರನು ಹೇಳಿದನು. "ಧನುರ್ಧಾರಿ ಮತ್ತು ಖಡ್ಗಧಾರಿ ವೀರಶ್ರೇಷ್ಠರೇ, ಯುದ್ಧವನ್ನು ನಾವಾಗಲೇ ಗೆದ್ದಿರುವೆವು. ಆದರೆ ನೀರಿಲ್ಲದೆ ನಾವೆಲ್ಲರೂ ನಾಶವಾಗಿ ಹೋಗುವಂತೆ ಆಗದಿರಲಿ."

ಪರೀದ (ಫಾ.) < ಸಂ. ಪಲಿತ (ಬಿಳಿ ಕೂದಲನ್ನುಳ್ಳವ, ವೃದ್ಧ) – ಅಶುಭ, ಅಪವಿತ್ರ. ಶಹೀದ (ಅ.) – ಸತ್ಕಾರ್ಯಕ್ಕಾಗಿ ಪ್ರಾಣಾರ್ಪಣೆ ಮಾಡಿದವನು, ಆತ್ಮಾಹುತಿ. ಯಕ್ಕಾ – ತಾಜ (ಫಾ.) – ಅಪೂರ್ವ ಯೋಧ. ತಾಜ < ಫಾ. ಕ್ರಿಯಾಪದ ತಾಖ್ತನ – ಓಡುವುದು. ಓಡಿಸುವುದು. ಹಲ್ಲೆ ಮಾಡುವುದು. ತೀರ – ಅಂದಾಜ (ಫಾ.) – ಧನುರ್ಧಾರಿ. ಶಮಶೇರ (ಫಾ.) – ಕತ್ತಿ, ಖಡ್ಗ. ಲಗ < ಸಂ. ಲಗ್ನ – ಅಲ್ಲಿಯವರೆಗೆ. ಧಾಕ < ಸಂ. ಧ್ರಾಧ್ಯ, ದಾಧ್ಯ – ಭೀತಿ. ಮ – (ಫಾ. ಕ್ರಿಯಾಪದದ ಆದಿ) < ಸಂ. ಮಾ – ನರಕಾರ್ಥ ರೂಪ. ಮ – ಬಾದಾ (ಫಾ.) – ಹೀಗೆ ಆಗಬಾರದು, ಇಂಥ ಸರದಿ ಬರಬಾರದು. ಹಲಾಕ (ಅ.) – ನಷ್ಟವಾಗು, ಸಾಯುವುದು. ಲರ (ಅ.) ಅಹರ – "ನಹರ" (ಕಾಲುವೆ) ಈ ಶಬ್ದದ ಅಪಭ್ರಂಶ ರೂಪ.

ಅಗರ ಉನ ಕೇ ಜಾ ಹತ ಲಗೇ ಲರ ಕಾ ಆಬ
ದಿಸೇ ನಾ – ಉಮಿದೀ ಸೂ ತುಮನಾ ಸರಾಬ । ೭೨
ನ ಪಾನೀ ಕಿ ಜಿಸ ಹೋಯ ತೋ ಅಮ್ರಿತ ಶೀ ಚಾಹ
ಚಲೋ ಮೈ ಯೋ ಲಾತಾ ಹೂಂ ಬನ ಬಿಜ್ರೇ – ರಾಹ । ೭೩

"ಒಂದೊಮ್ಮೆ ನೀರಿನ ಕಾಲುವೆ ಅವರ ಕೈವಶವಾಗಿ ಹೋಯಿತೆಂದರೆ ನಿಮಗೆ ನಿರಾಶೆಯಿಂದ ಬರೀ ಮೃಗಜಲವೇ ಕಾಣುವುದು. ಕೇವಲ ನೀರೊಂದೇ ಅಲ್ಲ. ಅಮೃತದ ಬಾವಿಯು ಇದ್ದರೆ ಎಲ್ಲಿಯಾದರೂ ಅಲ್ಲಿಗೆ ಖಿಜ್ರಾನ (ಪೈಗಂಬರ) ರೀತಿಯಲ್ಲಿ ಹೋಗಿ ಅದನ್ನು ತರುತ್ತೇನೆ."

ಲರ (ಅ.) – ಕಾಲುವೆ, ಜಲಾಶಯ. ಚಾಹ (ಫಾ.) ಸಂ. ಖಾನ, ಖನ, ಖಾತ – ಬಾವಿ. ಸರಾಬ (ಅ.) – ಮೃಗಜಲ. ಖಿಜ್ರಾ – ಅಮೃತವನ್ನು ಒದಗಿಸಿಕೊಡುವ ದೇವದೂತ. ಕಾಹ (ಫಾ.) < ಸಂ. ರಥ್ಯಾ – ಮಾರ್ಗ, ಪಂಥ.

(೩೦) ಕರೂ ಮೈ ಜೌ ಹಮಲಾ ತೋ ಬಾಗೀ ಯೋ ಸಾಂದ
ದೇಖೂ ಕ್ಯೋಂ ರ್ಥತೇ ಲರ ಕೇ ಪಾನೀ ಕೂ ಬಾದ । ೭೪
ಕಹ್ಯಾ ಸೋ ಚ ಸನ್ಮುಕ ತೇ ಗಾಡೇ ನಿಕಾಲ
ಶತುರ – ನಾಲ ಹತ – ನಾಲ ಲೇ ಮುಖ ಪೋ ಫಾಲ । ೭೫

"ನಾನು ಧಾಳಿ ಮಾಡಿದ ಮೇಲೆಯೂ ಶತ್ರುವು (ವಿದ್ರೋಹಿ) ಜಲಾಶಯವನ್ನು ಹೇಗೆ ರಕ್ಷಿಸಿಕೊಳ್ಳುವನೋ ಅದನ್ನು ನೋಡೋಣ", ಹೀಗೆಂದು ಆತ ಹೇಳುತ್ತಲೇ ಮುಂದೆ ನಿಂತಿದ್ದ ಬಂಡಿಗಳು ಹೊರಟವು. ಶತ್ರುವನ್ನು ಮುಂಭಾಗದಿಂದ ಎದುರಿಸಲು ಒಂಟೆ ಮತ್ತು ಆನೆಗಳ ಮೇಲೆ ಇಡಲಾಗಿದ್ದ ತೋಪುಗಳಿಂದಾಗಿ ಅವಕಾಶವಾಯಿತು.

ಬಾಗೀ (ಅ.) – ವಿದ್ರೋಹಿ, ಬಂಡುಕೋರ. ಶುತರ – < ಸಂ. ಉಷ್ಟ – ಒಂಟೆ. ಹತ < ಸಂ. ಹಸ್ತಿನ – ಆನೆ. ನಾಲ – ಸಂ. ನಾಲಿಕಾ – ನಳಿಕೆ, ತೋಪು. ಸಮ್ಮುಖ < ಸಂ. ಸಮ್ಮುಖ – ಎದುರು. ಸಂಧಾನ < ಸಂ. ಸಂಧಿ < ಜೋಡಣೆ ಮಾಡು, ಸೇರಿಸು.

■

*

ಅಧ್ಯಾಯ – ೫

ಫತಹ – ಯಾಫ್ತನ ನವ್ವಾಬ ಬಹಲೋಲಖಾನ ।
ಬರ ಲಶ್ಕರೇ ನಿವಾಜೀ ವ ಊರಾ ಹಜೀಮತ ದಾದನ ।

ನವಾಬ ಬಹಲೋಲಖಾನನು ಶಿವಾಜಿಯ ಸೈನ್ಯದ ಮೇಲೆ ವಿಜಯ ಸಾಧಿಸುವುದು ಮತ್ತು ಅವರನ್ನೆಲ್ಲ ಸಂಪೂರ್ಣವಾಗಿ ಪರಾಭವಗೊಳಿಸುವುದು ಅವಶ್ಯವಾಗಿತ್ತು.

ಫತಹ (ಫಾ.) – ವಿಜಯ. ಯಾಫ್ತನ ಸಂ. ಪ್ರಾಪ್ನೋತಿ – ದೊರಕಿಸು, ಪ್ರಾಪ್ತವಾಗುವಂತೆ ಮಾಡು. ಬರ (ಫಾ.) < ಸಂ. ಉಪರಿ – ಮೇಲೆ. ಅಲ್ಲಿ. ಊ (ಫಾ.) < ಸಂ. ಸೋ – ಅವನು. ರಾ (ಫಾ.) – ಲಾ,ಸ (ವಿಭಕ್ತಿ ಪ್ರತ್ಯಯಗಳು). ಹಜೀಮತ – ಪರಾಭವ. ದಾದನ > ಸಂ. ದತ್ತದಿಂದ ರೂಪಗೊಂಡಿರುವ ಕ್ರಿಯಾಪದ – ನೀಡುವುದು.

(೩೧) ವಈ ಖಾಸಾ ನವ್ವಾಬ ಜಬ ಚಲದಿಯಾ
ದೋನೋಂ – ಧೀರ ಕೀ ಫೌಜ ಕೂಂ ಹೋ ಗಯಾ (ಕ್ಯಾ) । ೧
ಛುಟೇ ಶೇರ ಯಕ ದಮ ಜೋ ಜಂಜೀರ ತೇ
ಹುಏ ಆ ಜೋ ಗರ್‍ರಶ ಮೇಂ ಚೌ – ಫೇರ ತೇ । ೨

ನವಾಬನು (ಬಹಲೋಲಖಾನ) ಅಲ್ಲಿಂದ ಹೊರಟು, ಎರಡೂ ಕಡೆಯಲ್ಲಿನ ಸೇನೆಗೆ ಸಂಜ್ಞೆ (ಧ್ವನಿ) ಮಾಡಿದನು. ಆಗ ಸಿಂಹವು ಪಂಜರದಿಂದ (ಬಿಗಿದ ಸರಪಳಿಯಿಂದ) ಮುಕ್ತವಾಗಿ ಕೋಪದಿಂದ ನಾಲ್ಕೂ ದಿಕ್ಕಿಗೆ ಕೇಳಿಸುವ ಹಾಗೆ ಗರ್ಜಿಸತೊಡಗಿತು.

ಜಂಜೀರ (ಅ.) – ಸರಪಣಿ, ಶೃಂಖಲೆ. ಗರ್‍ರಶ (ಫಾ.) – ಕೋಪದಿಂದ ಗರ್ಜಿಸು. ಚೌಫೇರ < ಸಂ. ಚತುಃ + ಸ್ಥಿರ – ನಾಲ್ಕೂ ಬದಿಗೆ, ಚತುರ ದಿಕ್ಕುಗಳಿಗೆ.

ತುರಂಗಾ ಕೇ ತಲ ತೇ ಇತೀ ಗರ್ದ ಉಡೀ
ಕಹೇ ತೂ ಜಮಿಂ ಜಾ ಫಲಕ ಸೂ ಜುಡೀ । ३
ಸಿತಾರ್‍ಯಾಂಕಿ ರುಈ ಜೋ ಹೋ ಬೇ – ಖಿಲಾಫ
ಫಲಕ ಹೌರ ಜಮಿ ಮಿಲ ಹುವಾ ಯಕ ಲಿಹಾಫ । ४

ಕುದುರೆಯ ಖುರಪುಟಗಳಿಂದಾಗಿ ಎಷ್ಟೊಂದು ಧೂಳು ಎದ್ದಿತೆಂದರೆ (ಹೇ ಕವಿಯೇ, ನೀನು ಹೀಗೆ) ನೋಡುತ್ತಿದ್ದರೆ ಭೂಮಿ ಮತ್ತು ಆಕಾಶವು ಒಂದಾದ ಹಾಗೆ. (ಆಕಾಶದಲ್ಲಿನ) ಎಲ್ಲಾ ತಾರೆಗಳು ಹತ್ತಿ (ಅರಳೆ)ಯ ಹಾಗೆ ಕಾಣತೊಡಗಿದವು. ಆಕಾಶ ಮತ್ತು ಭೂಮಿಯು ಒಂದಾಗಿ ಅವುಗಳಿಗೆ ಮೇಲು ಹೊದಿಕೆಯಂತೆ (ರಜಾಯಿ) ಆದವು.

ಬೇ – ಖಿಲಾಫ (ಫಾ.) – ಸಂಪೂರ್ಣ. ಲಿಹಾಫಾ (ಫಾ.) – ಹೊದ್ದುಕೊಳ್ಳುವ ವಸ್ತ್ರ, ರಜಾಯಿ.

ಖಡಾ ಹೋ ಜೋ ಜಾ ಸಾಂದತಾ ಥಾ ಗನೀಮ
ಲಡಾಈ ಫಿರ ಆ ನಾಂದತಾ ಥಾ ಗನೀಮ । ५
ದಿಸೇ ಫೌಜ ಉನಕೇ ಗರದ ಜೋ ರವಾ
ಹುವಿ ತೀರಹ ತಬ ತಿಸ ಕೇ ಲೇಖೇ ಜಹಾ । ६

ಶತ್ರುವು ಎಲ್ಲಿದ್ದನೋ ಅಲ್ಲಿಂದಲೇ ಇದನ್ನು ಕಂಡ ತಾನು ಸಹ ಸೈನ್ಯವನ್ನು ಸೇರಿಸ ತೊಡಗಿ, ಯುದ್ಧವನ್ನು ಆರಂಭಿಸಿದನು. ಆ ಕಾರಣ ಧೂಳು ಎಲ್ಲೆಡೆ ಎದ್ದು ಜಗತ್ತೆಲ್ಲ ಕಪ್ಪಾಯಿತು ಇಲ್ಲವೆ ಅಂಧಕಾರಮಯವಾಯಿತು. (ಮುಳುಗಿದಂತೆ)

ನಾಂದನಾ – ಆರುವುದು, ಆರಿಹೋಗು. ಗರದ < ಗರ್ದ (ಫಾ.) ಸಂ. ಕರ್ದ, ಕರ್ದಟ – ಧೂಳು, ಮಣ್ಣು. ರವಾ < ರವಾನ (ಫಾ.) – ನಡೆಯುವ, ಗಮಿಸುವ. ತೀರಹ (ಫಾ) – ಕಪ್ಪು, ಅಂಧಕಾರ. ಲೇಖಾ (ಸಂ.) – ಅನುಮಾನ, ವಿಚಾರ.

ಘುಟೇ ಕರ್‍ರಾನಾಯಾ ತೇ ದುಶ್ಮನ ಕೇ ಗೋಶ
ಗಯಾ ಮಗ್ಜ ಭೇಜಾ ಹೋ ಜಾಗೇ ತೇ ಹೋಶ । ೭
ನಕಾರ್‍ಯಾ ತೇ ಮೈದಾ ಹದರನೇ ಲಗ್ಯಾ
ಖಡಾ ಥಾ ಸೋ ಜಲ ರಕ್ಸ ಕರನೇ ಲಗ್ಯಾ । ೮

ಬಹಾದೂರ ಕೇ ದುಶ್ಮನ ಪೋ ತಾಲೇ ಪಡೇ
ಧಡಾ ಮೇಂ ದಿಲಾ ಧಾಕಾ ಸೂ ಧಡಧಡೇ । ೯

ರಣಭೇರಿಯ ಶಬ್ದಕ್ಕೆ ಶತ್ರುವಿನ ಕಿವಿಗಳು ಒಡೆದು ಹೋದವು. ಮಿದುಳು ತನ್ನ ಜಾಗದಿಂದ ಕದಲಲು ಆರಂಭಿಸಿದುದರಿಂದ ಶತ್ರುವು ಬುದ್ಧಿ ಭ್ರಷ್ಟನಾದ. ನಗಾರಿಗಳ ಶಬ್ದಕ್ಕೆ ರಣರಂಗವೇ ಅದುರಲು ಆರಂಭಿಸಿತು. ಶಾಂತಸ್ತಬ್ಧವಾಗಿದ್ದ ನೀರು ಅಲ್ಲೋಲಕಲ್ಲೋಲವಾಗಿ ಕುಣಿಯಲಾರಂಭಿಸಿತು. ಶೂರ (ಸೈನ್ಯ)ರಿಂದಾಗಿ ಶತ್ರುವಿಗೆ ನಿರ್ಬಂಧ ಒದಗಿ, ಅಂತಃಕರಣದೊಳಗಣ ಭೀತಿಯು ಹೆಚ್ಚಾಗಿ ಶರೀರವೆಲ್ಲ ಕಂಪಿಸತೊಡಗಿತು.

ಕರ್ರಾನಾಯ < ಕರಹ – ನಾಈ (ಫಾ.) < ಸಂ. ಕರ್ಣನಾದ – ರಣ ಶೃಂಗ. ದುಶ್ಮನ (ಫಾ.) – ಸಂ. ದುಸ + ಮನಸ – ಶತ್ರು. ಗೋಶ.(ಫಾ.) – ಕಿವಿ. ಮಗ್ಜ (ಫಾ.) – ಮಿದುಳು. ಹೋಶ (ಫಾ.) – ಬುದ್ಧಿ. ನಕಾರಾ (ಫಾ.) – ನಗಾರಿ, ಡೊಳ್ಳು, ಡೋಲು. ಹಾದರನಾ (ಮ.) – ಕಂಪಿತವಾಗು. ರಕ್ಸ (ಅ.) – ನೃತ್ಯ, ಕುಣಿಯುವುದು. ತಾಲಾ < ತಾಲಅ (ಅ.) – ಉದಯವಾಗುವುದು, ದೈವ, ಭಾಗ್ಯ. ಧಡ (ಮ.) ಪ್ರಾ.ಧಡ < ಸಂ. ಧರ – ಶರೀರ, ದೇಹ. ಧಾಕ < ಸಂ. ದಾಘ್ನ – ಭೀತಿ. ಧಡಧಡನಾ – ಧಡಧಡನೆ (ಎದೆ) ಹೊಡೆದುಕೋ, ನಡುಗು.

ಹುಈ ದಿಲ ಮೇಂ ಹುಶಮಾರ ನಖ್ವತ ಕೀ ಗತ
ಘಟ ಅವಸಾನ ಕೀ ಹುಈ ದಿಲಾ ಮೇ ಶಿಕಸ್ತ । ೧೦
ಬಡೀ (ಪಡೀ) ಧೂರ ಕೀ ಜಬ ಸಲಾಬತ್ ಕೀ ಛಾಂವೂ
ಲಗೇ ಉಡಸೀ ಬಾರೇ ಪೋ ದುಶ್ಮನ ಕೇ ಪಾಂವೂ । ೧೧

(ಶತ್ರುವಿನ) ಮನಸ್ಸಿನಲ್ಲಿ ಶ್ರೇಷ್ಠತೆಯ ಭಾವವು ಜಾಗೃತವಾಯಿತು. (ಆದರೆ) ಅವನಲ್ಲಿ ಧೈರ್ಯವು ಕಡಿಮೆಯಾಗ ತೊಡಗಿದಂತೆಲ್ಲ ಹೃದಯದಲ್ಲಿ ಪರಾಭವದ ಭೀತಿ ನಿರ್ಮಾಣಗೊಂಡಿತು. ಈ ನೇತಾರನ (ಬಹಲೋಲಖಾನ) ಪರಾಕ್ರಮದ ಛಾಯೆ ಬಿದ್ದುದರಿಂದ ಶತ್ರುವಿನ ಕಾಲುಗಳು (ಭೀತಿಯಿಂದಾಗಿ) ನೆಲದ ಮೇಲೆ ಗಟ್ಟಿಯಾಗಿ ನಿಲ್ಲುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ. (ಗಾಳಿಯಲ್ಲಿ ಹಾರಾಡ ತೊಡಗಿತು.)

ಹುಶ್ಯಾರ (ಫಾ.) – ಜಾಗೃತ. ನಖ್ವತ (ಅ.) – ಗುರುತ್ವ, ಶ್ರೇಷ್ಠತೆ. ಗತ (ಸಂ.) – ಅವಸ್ಥೆ, ಸ್ಥಿತಿ. ಅವಸಾನ (ಸಂ.) – ಧೈರ್ಯ, ಶಕ್ತಿ, ಬಲ. ಶಿಕಸ್ತ < ಫಾ. ಶಿಕಸ್ತನ ಕ್ರಿಯಾಪದ ಕೀಳುವುದು, ಪರಾಭವಗೊಳಿಸುವುದು. ಸಲಾಬತ (ಅ.) – ಕಠೋರ ಪರಾಕ್ರಮ. ಛಾವು < ಸಂ. ಛಾಯಾ – ನೆರಳು. ದುಶ್ಮನ (ಫಾ.) < ಸಂ. ದುಸ + ಮನಸ – ಶತ್ರು.

ಜೌ ನವ್ವಾಬ ಕರ ರುಖ ಮುಖಾಲಿಫ ಕೇ ಧೀರ
ಬರಸನೇ ಲಗ್ಯಾ ಸಫ ಸೂಂ ಯಕ ಮುಠ ಹೋ ತೀರ । ೧೨

ದಿಏ ಛೋಡ ಸೌ ಮುರ್ಗ ತೀರಾ ಶಿತಾಬ
ಪಿಏ ಬೈಠ (ಪೈಠ) ಉನನ ಸಿರ ಕೇ ಕಾಂಸ್ಯಾ ಮೇ ಆಬ । ೧೩

ನವಾಬನು ಯಾವಾಗ ಶತ್ರುಗಳ ಮೇಲೆ ಬಾಣಗಳಿಂದ ಸತತವಾಗಿ ಮಳೆಯನ್ನು ಸುರಿಸ ತೊಡಗಿದನೋ ಆಗ್ಗೆ (ಹೀಗೆ ಭಾಸವಾಗುತ್ತುತ್ತು) ಅವನು (ಶತ್ರುವಿನ) ಅಂದುಕೊಂಡ ತಲೆಯೊಳಗಿದ್ದ ನೀರನ್ನು ನುಗ್ಗಿ ಕುಡಿಯುವಂತೆ ನೂರಾರು ಬಾಣರೂಪದ ತಮ್ಮ ಪಕ್ಷಿಗಳನ್ನು ಕಳುಹಿಸಿದಂತೆ ಆಗಿದೆ.

ರುಖ(ಫಾ.) – ಮುಖ, ವದನ. ಮುಖಾಲಿಫ (ಅ.) – ವಿರೋಧಿ, ಶತ್ರು ಸಫ (ಫಾ.) – ಸೈನ್ಯದ ಸಾಲು. ಮುಠ (ಫಾ.) < ಮುಷ್ಟಿ – ಮುಷ್ಟಿ. ಮುರ್ಗ (ಫಾ.) < ಸಂ. ಮೃಗಃ (ಇಲ್ಲಿನ ಅರ್ಥ) – ಪಕ್ಷಿ. ಪೈಠನಾ < ಸಂ. ಪ್ರತಿಷ್ಠಾಪಯತಿ – ನುಗ್ಗು, ಪ್ರವೇಶ ಮಾಡು. ಕಾಂಸಾ – ಭಿಕ್ಷೆ ಬೇಡುವ ಪಾತ್ರೆ.

ಜಮೀ ಫೌಜ ಯಕ ಪಲ ಮೇಂ ಹುಈ ಫೂಟಪಾಟ
ಯಕೇಕ ನ್ಹಾಸನೇ ಕೂಂ ದಿಸೇ ಲಾಕ ಬಾಟ । ೧೪
ಕಹೇ ತೂ ಕಿ ಗಡರೇ (ಗದಡೇ) ಪೋ ಹಾತೀ ಛುಟಾ (ಛುಟ್ಯಾ)
ಭರ್ಯಾ ಥಾ ಹಂಗಾಮಾ ಸೋ ಯಕ ದಮ ಫುಟಾ (ಫುಟ್ಯಾ) । ೧೫

ಎಲ್ಲೆಡೆ(ಯುದ್ಧಕ್ಕಾಗಿ) ಜಮಾಯಿಸಿದ್ದ ಸೈನ್ಯದಲ್ಲಿ ಒಂದೇ ಕ್ಷಣದಲ್ಲಿ ಒಡಕು ಉಂಟಾಯಿತು. ಪ್ರತಿಯೊಬ್ಬ ಸೈನಿಕನಿಗೂ ಅಲ್ಲಿಂದ ಓಡಿ ಹೋಗಲು ಲಕ್ಷಾಂತರ ಮಾರ್ಗಗಳು ಕಾಣತೊಡಗಿದವು.

(ಹೇ ಕವಿಯೇ! ನೀನು ಹೀಗೆ) ನೋಡು ಎಂತೆಂದರೆ ಕತ್ತೆಯ ಮೇಲೆ ಆನೆಯು ಏರಿ ಹೋಗಲೊಡನೆ ಅಲ್ಲಿ (ಯುದ್ಧಕ್ಕಾಗಿ) ರಚಿಸಿದ್ದ ವ್ಯೂಹವೆಲ್ಲ ಒಂದು ಕ್ಷಣದಲ್ಲಿ ಇಲ್ಲವಾಯಿತು.

ಟಿಪ್ಪಣಿ : –

"ಗಡರಾ" ಎಂಬ ಪಾಠವು ತಪ್ಪು. ಗದಧಾ, ಗಧಾ (ಕತ್ತೆ) ಎಂಬುದು ಕ್ಷುದ್ರತ್ವ ವಾಚಕ ನಾಮಪದ. ಹಾಗಾಗಿ ಈ ಶಬ್ದವೇ ಸರಿಯಾದುದು. "ಛೂಟಾ" (ಕೋಪ), "ಫುಟಾ" (ವಿಚ್ಛಿನ್ನತೆ) – ಇವು ಆಧುನಿಕ ಕ್ರಿಯಾಪದ ರೂಪಗಳಾಗಿದ್ದು, ಆಗ್ರಹ ಸ್ವರೂಪವನ್ನುಳ್ಳವಾಗಿವೆ.

ಆಮನಾ < ಸಂ. ಯಮ – ಏಕತ್ರ ಸೇರು, ವ್ಯವಸ್ಥಿತಗೊಳ್ಳು. ನ್ಹಾಸನಾ < ಸಂ. ನಿ + ಆಸ (ಬೇರೆಯಾಗುವುದು) – ಓಡಿ ಹೋಗು. ವಾಟ < ಪ್ರಾ. ವಟ್ಟೋ – ಮಾರ್ಗ, ದಾರಿ. ಹಂಗಾಮಾ < ಹಂಗಾಮಹ (ಫಾ.) – ಯುದ್ಧ ಮಾಡುವುದಕ್ಕಾಗಿ ಒಂದೆಡೆಯಲ್ಲಿ ಜಮಾವಣೆಗೊಂಡಿರುವುದು.

ಘುಟೇ ಜಮಅ ಥೇ ಸೋ ಹುಏ ನಾ – ಉಮೇದ
ದಿಸೇ ಪಲ ಮೇಂ ಕಾಲೀ ಜಮಿಂ ಸಬ ಸಫೇದ । ೧೬
ಪಡೇ ಸೋ ಖದೇಡೇ ಪೋ ಖುಂದಾಲಟ ಮೇಂ
ದಿಸೇ ವೋ ಬರಾಬರ ಹೋ ಜಾ ಬಾಟ ಮೇಂ । ೧೭

ಯಾರ್ಯ್ಯಾರೆಲ್ಲ (ಶತ್ರುಗಳು) ಒಂದೆಡೆ ಜಮಾಯಿಸಿದ್ದರೋ ಅವರೆಲ್ಲ ಚದುರಿದರು. ಬಹಳ ನಿರಾಶೆಯಾಗಿತ್ತು. ಅವರಿಗೆ ಈ ಮೊದಲು ಕಪ್ಪಾಗಿ ಕಾಣುತ್ತಿದ್ದ ನೆಲವೀಗ ಶುಭ್ರವಾಗಿ ಕಾಣತೊಡಗಿತು. ಅವರಿಗೆ. (ಅವರು ನಿರಾಶರಾದರು.) ಪಲಾಯನ ಮಾಡುವಾಗ ಕೆಲವರು ಕೆಳಗಡೆ ಬಿದ್ದು ತುಳಿಯಲ್ಪಟ್ಟರು. ಭೂಮಿಗೆ ಸರಿಯಾಗಿ ಸಪಾಟಾಗಿ ಜಜ್ಜಿ ಹೋದಂತೆ (ಸಫಾಟ) ಕಾಣಿಸುತ್ತಿತ್ತು ಅದು.

ಜಮಅ (ಅ.) – ಏಕತ್ರ. ಖದೇಡ – ರನಾ < ಸಂ. ಕ್ಷ್ವಿಡ – ಗರ್ಜಿಸು, ಕಿರುಚಿಕೊಂಡು ಓಡು. ಖುಂದಲನಾ < ಸಂ. ಕ್ಷುದ (ಕ್ಷುಣತ್ತಿ) – ಕಾಲಿನಿಂದ ತುಳಿ.

ಜತನ ಕರ ವೋ ಫಿರ ಭೋಡ ಯೂ ಲರ ಚಲೇ
ನಥಾ ನೀರ ವಾ ಲಹೂ ಅಪಸಭರ ಚಲೇ । ೧೮
ಹುಈ ಲಾಲ ಭುಇ ಯೂಂ ವೋ ಕಾಲೀ ಸಗಟ
ಬಿಜಾಪುರ ಕನ ಜ್ಯೂಂ ಕಿ ಜೋಗೀ ಕಾ ಮಟ । ೧೯

(೩೨) ನಜರ ರನ ಕೇ ಮುರ್ದಾ ಕೂಂ ದೇಖತಾ ಥಕೀ
ಕಹೇ ತೂ ಕಿ ಪರ್ದಾ ಹೈ ಯಕ ನಾಟಕೀ । ೨೦

ಹಲವಾರು ಬಾರಿ ಮಾಡಿದ ಪ್ರಯತ್ನಗಳ ತರುವಾಯ ಅವರು (ಶತ್ರುಗಳಾದ ಮರಾಠರು) ಜಲಾಶಯವನ್ನು ಬಿಟ್ಟು ತೆರಳಿದರು. ಆದರೆ ಆಗ ಅಲ್ಲಿ ನೀರೇನು ಇರಲಿಲ್ಲ. ಬದಲಾಗಿ ಅವರ ರಕ್ತವೇ ತುಂಬಿಹೋಗಿತ್ತು. ಕಪ್ಪು ಮಣ್ಣಿನ ಭೂಮಿಯು ಕೆಂಪಾಗಿ ಹೋಗಿತ್ತು. ವಿಜಾಪುರದ ಬಳಿ ಯಾವುದೋ ಜೋಗಿಯ (ಯೋಗಿ) ಮಠವಿದೆಯೇ ಎಂಬ ಹಾಗೆ ಕಾಣುತ್ತಿತ್ತು ಆ ದೃಶ್ಯ. ಅದರಿಂದಾಗಿ (ಹೇ ಕವಿಯೇ!) ಯಾವುದೋ ನಾಟಕದ ಪರದೆ ಇದಹುದೋ (ಎಂದು ನೀನು) ಇದು ಹೇಗೆ ಹೇಳು.

ಜತನ < ಸಂ. ಯತ್ನ – ಪ್ರಯತ್ನ. ಲಹೂ < ಲೋಹೂ < ಸಂ. ಲೋಹಿತ – ರಕ್ತ. ಬಿಜಾಪುರ < ಸಂ. ವಿದ್ಯಾಪುರ. ಕನ < ಕನೆ < ಸಂ. ಕರ್ಣ – ಹತ್ತಿರ. (ಈ ಶಬ್ದವು 'ಕರ್ಣ' ಎಂಬುದರಿಂದ ವ್ಯುತ್ಪತ್ತಿಗೊಂಡುದೆಂದು ಹೇಳುವರು. "ನೀಡೇ" ಎಂಬುದು "ನಿಕಟ"ದಿಂದ ರೂಪಗೊಂಡುದಾಗಿದೆ.) ಜೋಗಿ < ಸಂ. ಯೋಗಿ – ರಕ್ತ ವರ್ಣದ ವೇಶವನ್ನು (ಕಾವಿ) ಧರಿಸುವ ಸಾಧು. ಮಟ < ಸಂ. ಮಠ – ಸಾಧು ಅಥವಾ ಯೋಗಿಯ ವಾಸಸ್ಥಾನ. ಮುರ್ದಾ < ಮುರ್ದಾಹ (ಫಾ.) < ಸಂ. ಮೃತ – ಶರೀರ. ಪರ್ದಾ < ಪರ್ದಾಹ (ಫಾ.) < ಸಂ. ಪೃತ (ಸುರಕ್ಷಿತ) – ಪರದೆ, ಜವನಿಕೆ.

ಹುವಾ ಕೀಚ ಯೂಂ ಲ್ಹೂ ಕಿ (ಹರ) ಠಾಂ ವು ಠಾಂವೂ
ಫಿಸಲನೇ ಲಗೇ ಭುಇ ಪೋ ತೀರಾ ಕೇ ಪಾಂವೂ । ೨೧
ದೇಕತ ತಬ ಕಿ ನವ್ವಾಬ ದುಶ್ಮನ ಸಗಲ
ಚಲ್ಯಾ ಲೇ ಕೋ ಜಿವ ಸಾಮನೇ ತೇ ನಿಕಲ । ೨೨
ಕಿಏ ಹುಕ್ಮ ಸಬ ಪರ ಕಿ ಅಬ ಬಸ ಕರೋ
ಚುಕಾತ್ಯಾ ಪೋ ಜಾಹಿರ ನಕೋ ಕಸ ಕರೋ । ೨೩

ಎಲ್ಲೆಡೆಯೂ ಎಷ್ಟೊಂದು ದಟ್ಟವಾಗಿ ರಕ್ತದ ಕೆಸರು ತುಂಬಿಕೊಂಡಿತ್ತೆಂದರೆ, ಬಾಣಗಳ ಕಾಲುಗಳೂ ಜಾರಿ ಬೀಳುವಂತಿದ್ದವು. ಎದುರುಗಡೆಯಲ್ಲಿ ಶತ್ರುಗಳು ತಮ್ಮ ಜೀವವನ್ನು ಉಳಿಸಿಕೊಳ್ಳಲೆಂದು ಓಡುತ್ತಿದ್ದುದನ್ನು ಕಂಡ ನವಾಬನು (ತನ್ನ ಸೈನಿಕರಿಗೆ) ಸಾಕು ನಿಲ್ಲಿಸಿ ಎಂಬುದಾಗಿ ಆದೇಶ ಕೊಟ್ಟನು. ಮುಖ ತಿರುಗಿಸಿ (ಬೆನ್ನುಮಾಡಿ) ಹೋಗುವವನ ಮೇಲೆ ಏರಿ ಹೋಗಿ ನಿಮ್ಮ ಶಕ್ತಿಯನ್ನು ತೋರಿಸಬೇಕಾಗಿಲ್ಲ.

ಕೀಚ, ಕೀಚಡ < ಸಂ. ಕಿಲ್ದ ಧಾತು < ಚಿಕಿಲ್ದ (ವರ್ಣ ವಿಪರ್ಯಯ) – ಕೆಸರು. ಲ್ಹೂ < ಲಹೂ < ಲೋಹಿತ – ರಕ್ತ. ಜಾಹೀರ (ಅ.) – ಪ್ರಕಟಿಸು. ಕಸ < ಸಂ. ಕಷ – ಶಕ್ತಿ, ಬಲ.

ಭಲೇ ಮರ್ದ ಕಾ ಮರ್ದ ಪರ ವಾರ ಹೈ
ನಿಗೋಡ್ಯಾ ಕೂಂ ಚುಪ ದೇಖನಾ ಆರ ಹೈ । ೨೪
ಕಿ ನ್ಹಾಟೇ ಯೋ (ಲಾಜೋ) ಲಾಜೋಂ ಕೂತೇ ಕೇ ಪಾಂವೂ
ನ ಫಿರಸೀ, ಬಿಚಕತೇ ಹೈ ದೇಕ ಅಪನೀ ಛಾಂವೂ । ೨೫
ಕಧೀ ಫಿರ ಕೋ ಮರ್ದೀ ಪಕಡ ಆಈಂಗೇ
ಕರೇಂಗೇ ಸೋ ಅಪನಾ ಸಜಾ ಪಾಏಂಗೇ । ೨೬

ಶೂರನೂ, ಗಂಡೆದೆಯುಳ್ಳವನೂ ಆದ ವ್ಯಕ್ತಿಯೊಂದಿಗೆ ಶೂರನಾದವನು ಯುದ್ಧ ಮಾಡುತ್ತಾನೆ. ಬದಲಾಗಿ ನಿಃಸತ್ವ, ಅಸಹಾಯಕ ಮನುಷ್ಯನೆಡೆ ನೋಡುವುದು ನಾಚಿಕೆಯ ಸಂಗತಿಯಲ್ಲವೆ. ಹೇಗೆ ಅವರು ಲಜ್ಜೆಗೆಟ್ಟ ನಾಯಿಯಂತೆ ಕಾಲ್ಗಳನ್ನು ಬೀಸಿ ಹಾಕುತ್ತಾ ಓಡಿ ಹೋಗಿರುವರೋ, ಅವರು ಇನ್ನು ಪುನಃ ಹಿಂತಿರುಗಿ ಬರುವ ಧೈರ್ಯವನ್ನು ಮಾಡಲಾರರು. (ಕಾರಣ) ಅವರ ಈಗ ತಮ್ಮ ನೆರಳಿಗೇ ತಾವು ಅಂಜುವವರಾಗಿರುತ್ತಾರೆ. ಮತ್ತೆ ಎಂದಾದರೂ ಅವರು (ತಮ್ಮ) ಶೌರ್ಯವನ್ನು ಪ್ರದರ್ಶಿಸುವುದಕ್ಕೆ ಬಂದರೆ ಅವರಿಗೆ ಅವರ ಈ ಕುಕರ್ಮದ ಶಿಕ್ಷೆಯಾಗದೆ ಹೋಗುವುದಿಲ್ಲ.

ನಿಗೋಡಾ < ನಿ+ಗುರಾ – ಕಾಲು ಇಲ್ಲದವನು, ಅಸಹಾಯಕ, ನಿಃಸತ್ವಗೊಂಡ ವ್ಯಕ್ತಿ. ನ್ಹಾಟನಾ < ಸಂ. ನಿ+ಅಟ – ಓಡು, ಧಾವಿಸು. ಲಾಜೋ < ಲಾಜೋಂ < ಲಾಜ+ಹುಂ – ನಾಚಿಕೆಯಿಂದ. ಕೂತಾ < ಪ್ರಾ. ಕುತ್ತು – ನಾಯಿಗಳು. ಬಿಚಕನಾ < ಸಂ. ವಿ+ಚಕ – ಬೆದರಿಕೆ, ಭಯದಿಂದ ಎತ್ತ ದಾರಿ ಕಾಣುವುದೋ ಅತ್ತ ಓಡಿ ಹೋಗುವುದು. ಮರ್ದ (ಫಾ.) < ಸಂ. – ಮೃಡಃ (ಮಹಾದೇವನ ಒಂದು ಹೆಸರು) – ಮನುಷ್ಯ. ವಿಶೇಷವಾಗಿ ಶೂರನಾದವನು. ಸಜಾ (ಫಾ.) – ಶಿಕ್ಷೆ.

ಯಹೀ ಬಾತ ಕರ ಶುಕ್ರೇ – ಹಕ ಲ್ಯಾ ಬಜಾ
ಖಡಾ ರನ ಪೋ ರಹ ಶಾದಿಯಾನೇ ಬಜಾ । ೨೭
ದಿಲಾಯಾ ಉಸೀ ಠಾರ ಡೇರೇ ತಮಾಮ
ಕಿಯಾ ವಾಂ ಸರೇ – ಬದಲ ಸೂಂ ಅಪನಾ ಮುಕಾಮ । ೨೮
ಖಬರ ಲೇ ಕೋ ಇಸ ಫತಹ ಕಾ ಚಾರ– ಧೀರ
ಚಲೇ ತೀರ ಪರ ಶಾತಿರಾ ಜ್ಯೂಂ ಕಿ ತೀರ । ೨೯

ಹೀಗೆ ಹೇಳುತ್ತಿದ್ದ ಅವನು ತಮ್ಮ ಮೇಲಿನ ಪರಮೇಶ್ವರನ ಕರುಣೆಯನ್ನು ಒಪ್ಪಿಕೊಂಡನು. ರಣರಂಗದಲ್ಲಿ ವಿಜಯದ ಆನಂದದ ಪ್ರೀತ್ಯರ್ಥವಾಗಿ ವಾದ್ಯಗಳನ್ನು ಮೊಳಗಿಸಲಾಯಿತು. ಅಲ್ಲಿಯೇ ಡೇರೆಯನ್ನು ಹಾಕಿದರು. ಕಾರಣ (ವಿಜಯ ಪ್ರಾಪ್ತಿಯ) ಋಣವನ್ನು ತೀರಿಸುವ ಉದ್ದೇಶದಿಂದ. ಅತ್ತ ಈ ಸಮಾಚಾರವನ್ನು ತೆಗೆದುಕೊಂಡು ದೂತರು ನಾಲ್ಕೂ ದಿಕ್ಕುಗಳಿಗೆ ಧಾವಿಸಿ ಹೊರಟರು.

ಶುಕ್ರೇ – ಹಕ (ಅ.) – ಪರಮೇಶ್ವರನ ಕರುಣೆ. ಶಾದಿಯಾನಾ (ಫಾ.) – ಹರ್ಷ ಸೂಚಕವಾದ ವಾದ್ಯಗಳು. (ಶಾದೀ ಪಾ. – ಖುಷಿ. ಈ ಶಬ್ದವು ಬಹುತೇಕ ಸಂಸ್ಕೃತದ ಶಾಂತಿ ಶಬ್ದದಿಂದ ರೂಪುಗೊಂಡಿರಬಹುದು.) ಬಜಾನಾ < ಸಂ. ಬದನಮ – ಬಾರಿಸು, ನುಡಿಸು. ಬಾಜಾ < ಸಂ. ವಾದ್ಯ < ವಾದ್ಯ. ಸರ (ಫಾ.)

– ಇಚ್ಛೆ, ಬದಲ (ಅ.) – ಬೆಲೆ, ಮೌಲ್ಯ. ಮುಕ್ಕಾಮ (ಅ.) – ಮುಕ್ಕಾಮು, ಬೀಡು. ಶಾತಿರ (ಫಾ.) – ನಿರೋಪ, ಸಮಾಚಾರ.

ಖುಸೂಸನ ಸುನೇ ಜಬ ಹುಕಮತ ಪನಾಹ
ಖುಶೀ ಬಾಂಟನೇ ಜಗ ಪೋ ಕರ ಹುಕ್ಮ ಶಾಹ । ೩೦
ಬಿಜಾಪುರ ಮೇಂ ಈದ ಕರ ಆಶಕಾರ
ಪಡಾ ಖುತ್ಬಾ ಇಸ ಫತಹ ಕಾ ಠಾರ ಠಾರ । ೩೧
ಜೋ ಥೇ ಕೋಟ ಪರ ಬಾನ ಭಾಂಡೇ ತಮಾಮ
ದಗಾನೇ ಕೂಂ ಫರ್ಮಾಏ ಕರ ಹುಕ್ಮೇ – ಆಮ । ೩೨
ಶಹಾನಶಾಹ ಕೀ ಹೈ ಫತಹ ಪಹುಲೀ ಕಕರ
ಬಟಾಏ ಬಹುತ ಘರ ಪೋ ಗಾಡ್ಯಾ ಶಕರ । ೩೩

ವಿಶೇಷವಾಗಿ ರಾಜ್ಯದ ಆಧಾರ ಸ್ತಂಭವೆನಿಸಿದ್ದ ಖವಾಸಖಾನನು ಈ ಸುದ್ಧಿಯನ್ನು ಕೇಳಿದೊಡನೆ ರಾಜ್ಯದ ಎಲ್ಲೆಡೆ ಆನಂದೋತ್ಸವವನ್ನು ಆಚರಿಸುವಂತೆ ಆಜ್ಞೆ ಹೊರಡಿಸಿದನು. ವಿಜಾಪುರದಲ್ಲಿ ಹಬ್ಬವನ್ನು ಆಚರಿಸುವ ಘೋಷಣೆಯೂ ಹೊರಟಿತು. ಎಲ್ಲಾ ಸ್ಥಳಗಳಲ್ಲಿಯೂ ಈ ವಿಜಯದ ಗುಣಗಾನವೇ ಕೇಳಿಬರುತ್ತಲಿತ್ತು. ವಿಜಯೋತ್ಸವದ ಸಂಕೇತವಾಗಿ ಕೋಟೆಯ ಮೇಲಿನ ತೋಪುಗಳೆಲ್ಲ ಆಜ್ಞೆಯನುಸಾರ ಹಾರಿದವು. ಇದು ಹೊಸ ರಾಜನ (ಸಿಕಂದರ ಆದಿಲಶಾಹ) ಮೊದಲನೆಯ ವಿಜಯವಾದುದರಿಂದ ಬಂಡಿ ಬಂಡಿಗಳ ತುಂಬೆಲ್ಲ ಸಕ್ಕರೆಯನ್ನು ತುಂಬಿಕೊಂಡು ಮನೆಮನೆಗಳಿಗೆಲ್ಲ ಹಂಚಿದರು.

ಖುಸೂಸನ (ಅ.) – ವಿಶೇಷವಾಗಿ, ಆಶಕಾರ (ಫಾ.) < ಸಂ. ಆವಿಷ್ಕಾರ – ಪ್ರಕಟಮಾಡು. ಹುಕೂಮ (ಅ.) – (ಆಜ್ಞೆ) ರಾಜ್ಯ ಪನಾಹ (ಫಾ.) – ರಕ್ಷಣೆ, ಸಂರಕ್ಷಿತ ಸ್ಥಳ. ಈದ (ಅ.) – ಹಬ್ಬ. ಖುತ್ಬಾ ಘೋಷಣೆ. ಭಾಂಡಾ (ಮರಾಠಿ – ಭಾಂಡೆ) – ಚಿಕ್ಕತೋಪು. ದಗಾನಾ (ಮರಾಠಿ ಡಾಗಣೆ) – ತೋಪು ಹಾರಿಸು. ಫರ್ಮಾನಾ(ಫಾ.) – ಫರ್ಮೂದನ – ಆಜ್ಞೆ ಮಾಡು. ಆಮ(ಅ.) – ಸಾಧಾರಣ, ಸಾಮಾನ್ಯ. ಶಹಾನಶಾಹ < ಶಾಹಾನ – ಶಾಹ (ಫಾ.) – ರಾಜಾಧಿರಾಜ, ಸಾಮ್ರಾಟ. ಪಯಲೀ < ಸಂ. ಪ್ರಥಮ+ಲ – ಪಹಿಲೀ – ಮೊದಲನೆಯ. ಕಕರ (ಕಹಕರ) – ಹೇಳುವುದು. ಬಾಂಟನಾ < ಸಂ. ವಾಂಟತಿ – ಹಂಚುವುದು. ಶಕರ (ಫಾ.) < ಸಂ. ಶರ್ಕರಾ – ಸಕ್ಕರೆ.

ಪಠಾ ಖಿಲಅತಾಂ ಬಾದಶಾಹೀ ನವಾಜ
ಕಿಏ ಸರ ತೇ ನವ್ವಾಬ ಕೂಂ ಸರ – ಫರಾಜ । ೩೪

ದಿಏ ಶುಹರತೇ – ಫತಹ ಯೂಂ ಶಹರ ಮೇಂ
ಕಿ ಹೋಯ ಕಿಸ್ಸಾ ಯೋ ಮುಲ್ಕ ಪರ ದಹರ ಮೇಂ । ೩೫

(ರಾಜನು ಎಲ್ಲಾ ವಿಜೇತರಿಗೂ) ಸನ್ಮಾನದ ಪ್ರತೀಕವಾಗಿ ರಾಜ (ಶಾಹಿ) ಪೋಷಾಕುಗಳನ್ನು ಕಳುಹಿಸಿದನು. ನವಾಬನ (ಅವರ) ಇಚ್ಛೆಯನುಸಾರ ಸತ್ಕಾರ ಮಾಡಿದನು. ನಗರದಲ್ಲಿ ಈ ವಿಜಯದ ಕೀರ್ತಿಯನ್ನು (ಇದಕ್ಕಾಗಿ) ಹೇಗೆ ಬಿತ್ತರಿಸಲಾಯಿತೆಂದರೆ, ಈ ಘಟನೆಯು ಎಲ್ಲಾ ಕಾಲದಲ್ಲೂ, ಎಲ್ಲಾ ದೇಶಗಳಲ್ಲೂ (ಅಮರವಾಗಿ) ಉಳಿದಿರಬೇಕು ಎಂಬ ಹಾಗೆ.

ಖಿಲಅತ (ಅ.) – ಪೋಷಾಕು. ನವಾಜನಾ (ಫಾ.) < ನವಾಸ್ತನ – ಸನ್ಮಾನಿಸು. ಸರಫರಾಜ (ಫಾ.) – ಸನ್ಮಾನಿಸು. ಫರಾಚ (ಫಾ. ಫರಾಖ್ತಿನ) – ಎತ್ತರೆತ್ತರ ಬೆಳೆ. ದಹರ (ಫಾ.) < ಸಂ. ದರ್ಶಃ (ದಿನ) – ಕಾಲ. ಪಠಾನಾ (ಸಂಪ್ರತಿಷ್ಠಾಪಯತಿ) – ರವಾನಿಸು, ಕಳುಹಿಸು.

ಮಂಗೇ ಜ್ಯೂ ರ್ಹನಾ ನಾಮ ಹರ ಕಾಮಗಾರ
ಜಮಾನೇ ಪೋ ಯಕ ನಕ್ಶ ಹೋ ಯಾದಗಾರ । ೩೬

(೩೩) ವಹಿ ನುಸ್ರತಿ ಧರ ಕೋಸಿರ ತೇ ಉಮಸ
ಲಿಖ್ಯಾ ಫತಹೇ – ನವ್ವಾಬ – ನಾಮೇ ಕಾ ಜಸ । ೩೭

ಪ್ರತಿಯೊಬ್ಬ ಕರ್ತೃತ್ವಶಾಲಿಯಾದ ಪುರುಷನ ಅಂತಿಮ ಇಚ್ಛೆ ಯಾವುದೆಂದರೆ, ಅವನ ಹೆಸರು ಕಾಲಗ್ರಂಥಗಳಲ್ಲಿ ಬರೆಯುವುದರ ಜೊತೆಗೆ ಅದು ಚಿರಸ್ಮರಣೀಯವಾಗಿ ಉಳಿದಿರಬೇಕು ಎಂಬುದು. ಹಾಗಾಗಿಯೇ ನುಸ್ರತಿಯೂ ಮನಃ ಪೂರ್ವಕವಾಗಿ ತುಂಬು ಉತ್ಸಾಹದಿಂದ ಈ ಗ್ರಂಥವನ್ನು ತನ್ನ ನವಾಬನ ಯಶೋಗೀತೆಯನ್ನಾಗಿ ಮಾಡಿದ್ದಾನೆ.

ಮಂಗನಾ – ಮಾಂಗನಾ < ಸಂ. ಮೃಗ – ಬೇಡು, ಇಚ್ಛಿಸು. ರ್ಹನಾ – ಇರುವುದು. ಕಾಮಗಾರ – ಸಂ. ಕರ್ಮ+ಕಾರ – ಕರ್ತೃತ್ವಶಾಲಿ. ನಕ್ಶಾ (ಅ.) – ಚಿತ್ರಿತ. ಉಮಸ < ಸಂ. ಉಷ್ಮ – ಮನದೊಳಗಿನ ಉತ್ಸಾಹ. ಫತಹ (ಅ.) – ಯಶಸ್ಸು, ವಿಜಯ. ನಾಮಾ – ನಾಮಹ (ಫಾ.) – ಪತ್ರ, ಗ್ರಂಥ. ಜಸ < ಸಂ. ಯಶ – ವಿಜಯ.

ಇಲಾಹೀ ಜಮಾನೇ ಮೇಂ ಜಮ ಠಾಂವು ಠಾಂವೂ
ಅಥೋ ಮುಜ ಬಚನ ತೇ ಯೋ ಮರ್ದಾಂ ಕಾ ನಾವೂ ॥ ೩೮ ॥

ಹೇ ಪರಮೇಶ್ವರ ನನ್ನೀ ಕೃತಿಯ ವಚನಗಳು ಈ ವೀರಾಧಿವೀರನ ಹೆಸರನ್ನು ಎಲ್ಲಾ ಕಡೆಗಳಲ್ಲಿ ಕಾಲಾತೀತವಾಗಿ ಚಿರಸ್ಮರಣೀಯವಾಗಿ ಉಳಿಯಬೇಕು.

ಇಲಾಹೀ (ಅ.) – ಪರಮೇಶ್ವರ. ಜಮ – ನಿತ್ಯ, ಚಿರಕಾಲ ಪರ್ಯಂತ (ಸಂ. ದ ಜನ್ಮದಿಂದ). ಬಚನ – ಸಂ. ವಚನ – ಮಾತು, ವಾಣಿ. ಮರ್ದ (ಫಾ.) – ಸಂ. ಮೃಢಃ – ಶೂರವ್ಯಕ್ತಿ.

ಟಿಪ್ಪಣಿ : – ಕೊನೆಯ ಈ ಭಾಗವು ಆಶೀರ್ವಚನವಾಗಿದೆ.

■

*

ಟಿಪ್ಪಣಿಗಳು

೧) ಅಧ್ಯಾಯ ಕ್ರ. ೧. ೨,೩ ಈ ಎರಡು ಮತ್ತು ಮೂರನೆಯ ದ್ವಿಪದಿಗಳಲ್ಲಿ ಮುಲ್ಲಾ ನುಸ್ರತಿಯು ಎರಡನೆಯ ಅಲೀ ಆದಿಲಶಾಹಿಯ ಮರಣಾನಂತರ ಹುಟ್ಟಿಕೊಂಡ ವಿಜಾಪುರದ ರಾಜಕೀಯ ದುರಾವಸ್ಥೆಯನ್ನು ಬಣ್ಣಿಸಿದ್ದಾನೆ. "ಅಲೀ ಆದಿಲಶಾಹಿಯೂ ಸೂರ್ಯನಂತಿದ್ದನು" ಎಂಬುದಾಗಿ ಹೇಳಿದ್ದಾನೆ. ಎರಡನೆಯ ದ್ವಿಪದಿಯಲ್ಲಿ ನುಸ್ರತಿ ಆದರೆ ಈಗ ಅವನು ಇಲ್ಲದಿರುವುದರಿಂದಾಗಿ ಎಲ್ಲಾ ಜವಾಬ್ದಾರಿಯು ಚಂದ್ರನ ಹಾಗೆ ಇರುವ ಸಿಕಂದರನ ಮೇಲೆ ಬಿದ್ದಿರುವುದು. ೧೩ ಶಾಬಾನ ೧೦೮೩ ಹಿಜರಿ – ೨೪ ನೆಯ ನವೆಂಬರ್ ೧೬೭೨ – ಮಾರ್ಗಶಿರ ಶುದ್ಧ ೧೫ ಶಕ ೧೫೯೪ ರಂದು ಅಲೀ ಆದಿಲಶಾಹಿಯು ಮರಣ ಹೊಂದಿದನು. ಸಿಕಂದರ ಆದಿಲಶಾಹಿಯು ಈ ಸಿಂಹಾಸನವನ್ನು ಏರಿದ್ದು ಅನಂತರ ಕೆಲವಾರು ವರ್ಷಗಳ ನಂತರ ತಂದೆ ಸತ್ತಾಗ ಅವನಿಗೆ ಕೇವಲ ನಾಲ್ಕು ವರ್ಷವಷ್ಟೇ ಆಗಿತ್ತು.

ಕ್ರಮಾಂಕ ೩ನೆಯ ದ್ವಿಪದಿಯಲ್ಲಿ ಕವಿಯು ಹೇಳಿರುವಂತೆ ಎರಡನೆಯ ಇಬ್ರಾಹಿಮ್ ಆದಿಲಶಾಹಿ, ಎರಡನೆಯ ಅಲೀ – ಇವರುಗಳಂಥ ಪರಾಕ್ರಮಿ ರಾಜರು ಆದಿಲಶಾಹಿ ರಾಜ್ಯವನ್ನು ಪೋಷಿಸಿ ಬೆಳೆಸಿದ್ದರು. ಅದರಿಂದಾಗಿಯೇ ಸಿಕಂದರನಂಥ ಬಾಲಕನೂ ಸಿಂಹಾಸನವನ್ನು ಏರುವುದಕ್ಕೆ ಸಾಧ್ಯವಾಯಿತು. ಈ ರಾಜನು ಚಿಕ್ಕವನಾಗಿದ್ದುದರಿಂದ ರಾಜ್ಯಭಾರವನ್ನು ನಡೆಸುವಷ್ಟು ಸಮರ್ಥವಾಗಿರಲಿಲ್ಲ ಎಂಬುದು ಕವಿಯು ಇಲ್ಲಿ ನೀಡಿರುವ ಸೂಚನೆ.

೨) ಅಧ್ಯಾಯ ಕ್ರಮಾಂಕ ೧.೭ – "ಈ ಗ್ರಂಥದ ಭಾಷೆಯು ಅತ್ಯಂತ ಸರಳ (ಸಾಧು)ವಾಗಿದೆಯೆಂದು ಸ್ವತಃ ನುಸ್ರತಿಯೇ ಹೇಳಿರುವನು. ಅವನ "ಗುಲಶನೇ–

ಇಶ್ಕ" ಅಲೀನಾಮ, ಕಸೀದೆ ಇತ್ಯಾದಿ ಗ್ರಂಥಗಳ ಸಾಹಿತ್ಯ ಶೈಲಿಯೊಂದಿಗೆ ಹೋಲಿಸಿದರೆ ಈ ಪುಟ್ಟ ಕಾವ್ಯವು ಸಾಧಾರಣ ಮಟ್ಟದ್ದು ಎನಿಸುತ್ತದೆ ಎಂಬ ಮಾತು ಸರಿಯಾಗಿಯೇ ಇದೆ. "ಈ ಕಾವ್ಯದಲ್ಲಿ ನನ್ನ ಬೇರೆ ಕಾವ್ಯಗಳಲ್ಲಿ ಇರುವಂಥ ಸಾಹಿತ್ಯ ಗುಣವಿಲ್ಲ" ಎಂಬುದಾಗಿ ಸ್ವತಃ ಕವಿಯೇ ಕೆಲವೆಡೆ ಒಪ್ಪಿಕೊಂಡಿದ್ದಾನೆ. ಡಾ.ಅಬ್ದುಲ್ ಹಕ್ ಅವರು ಈ ಸಂಬಂಧವಾಗಿ ಅಭಿಪ್ರಾಯಪಟ್ಟಿರುವುದು ಹೀಗೆ –

"ನುಸ್ರತಿಯ ಈ ಕಥನ ಕಾವ್ಯವನ್ನು ಅವನ ಗುಲಶನೇ – ಇಶ್ಕ ಮತ್ತು ಅಲೀನಾಮಾಗಳೊಂದಿಗೆ ತುಲನೆ ಮಾಡಿದರೆ ಬಹಳ ಚಿಕ್ಕದಾಗಿದೆ. ಇದರಲ್ಲಿ ಕೇವಲ ೫೫೪ ದ್ವಿಪದಿ (ಬೈತ)ಗಳಿವೆ. ಅವನ ಇತರ ಕಾವ್ಯಗಳಲ್ಲಿ ಕಾಣುವ ಸಾಮರ್ಥ್ಯ(ಶಕ್ತಿ) ಮತ್ತು ಆನಂದ (ಪ್ರಸನ್ನತೆ)ಗಳು ಇಲ್ಲಿ ಕಾಣಸಿಗುವುದಿಲ್ಲ. ಇದು ಅವನ ಕೊನೆಯ ಕಾವ್ಯ. ಅದರ ರಚನೆಯ ಹೊತ್ತಿಗೆ ವಿಜಾಪುರದ ಅವಸಾನ ಕಾಲವಾಗಿದ್ದರೆ ಅವನ ಅವಸಾನವೂ ಸಮೀಪಿಸುತ್ತಿತ್ತು. ಪೂರ್ವದ ಬಾದಶಹರು ಮೆರೆಯುತ್ತಿದ್ದ ವೈಭವವು ಇರಲಿಲ್ಲ. ಜೊತೆಗೆ ಸತ್ಕಾರ್ಯ ಪ್ರವೃತ್ತರಾದಂತಹ ವ್ಯಕ್ತಿಗಳೆಲ್ಲ ಇಲ್ಲವಾಗಿದ್ದರು. ಬಹಲೋಲಖಾನನು ವಿಜಯ ದೊರಕಿಸಿ ಕೊಟ್ಟುದುದಕ್ಕಾಗಿ ನುಸ್ರತಿಯು ಅವನ ಗುಣವನ್ನು ಶ್ಲಾಘಿಸಿದ್ದಾನೆ. ಆದರೆ ಈ ವಿಜಯವು ನಾಮಮಾತ್ರವಾದುದಷ್ಟೇ ಆಗಿತ್ತು. ಅನಂತರದಲ್ಲಿ ಹುಟ್ಟಿಕೊಂಡು ವ್ಯಾಪಿಸಿದ ಅಂತಃಕಲಹ ಮತ್ತು ಮತ್ಸರಗಳು ವಿಜಾಪುರ ರಾಜ್ಯವನ್ನು ವಿಲಯ ಕಾಲದೆಡೆಗೆ ಕೊಂಡೊಯ್ದುವು."

("ಮುಲ್ಲಾ ನುಸ್ರತಿ", ಪುಟ – ೨೨೩)

ಕವಿಯು ಬಹಳ ಕೌಶಲ್ಯದಿಂದಲೇ ಆ ಕಾಲದ ಅನೇಕ ವೃತ್ತಾಂತಗಳನ್ನು ಸಹಜವಾಗಿ ಉಲ್ಲೇಖಿಸಿದ್ದಾನೆ. ಇದು ಅವನ ಪರಿಪಕ್ವ ಬುದ್ಧಿ ಮತ್ತು ಆ ಕಾಲದ ಅವನ ರಾಜಕೀಯ ವಿವೇಕ ಮತ್ತು ಪರಿಜ್ಞಾನದ ಪ್ರಭಾವವನ್ನು ಎತ್ತಿತೋರಿಸುತ್ತದೆ.

೩) ಅ.ಕ್ರ. ೧.೮ – ಈ ಒಂದು ಸಾಲನ್ನಷ್ಟೆ ಡಾ. ಅಬ್ದುಲ್ ಹಕ ಅವರು ಉಧೃತಗೊಳಿಸಿದ್ದಾರೆ. ಈ ಸಾಲಿನಲ್ಲಿ ಸನ್ ೧೦೮೩ ಎಂಬುದಾಗಿ ಹೇಳಲಾಗಿದೆ. ಇದು ಬಹುಶಃ ಹಿಜರಿ ಸನ್ ಆಗಿರಬೇಕು. ದಖನಿ ಹಿಂದಿಯಲ್ಲಿನ ಎಲ್ಲಾ ಕವಿಗಳು ಹಿಜರಿ ವರ್ಷವನ್ನೇ ಸಾಮಾನ್ಯವಾಗಿ ಬಳಸುತ್ತಿದ್ದರು. ಈ ವರ್ಷವು ಇಸವಿ ಸನ್ (ಕ್ರಿ.ಶ) ೧೬೭೩ ಮತ್ತು ಶಕ ೧೫೯೫ ಕ್ಕೆ ಸಮಕಾಲೀನವಾದುದಾಗಿದೆ.

೪) ಅ.ಕ್ರ. ೧.೧೦ – ಅಲೀ ಆದಿಲಶಾಹಿಯ ಮರಣಾನಂತರ "ತಾನೇ ಸ್ವತಃ ಈ ರಾಜ್ಯದ ಒಡೆಯನಾಗಬೇಕು" ಎಂಬ ಇಚ್ಛೆಯು ಪ್ರತಿಯೊಬ್ಬ ಹಿರಿಯ ಸರದಾರರುಗಳ ಮನಸ್ಸಿನಲ್ಲಿ ಹುಟ್ಟಿಕೊಂಡಿತ್ತು. ಈ ವಿಚಾರವನ್ನು ನುಸ್ರತಿಯು ಸ್ಪಷ್ಟವಾಗಿಯೇ ತನ್ನ ಕಾವ್ಯದಲ್ಲಿ ಹೇಳಿದ್ದಾನೆ.

"ತಾರೀಖೇ – ಅಲೀ" ಮತ್ತು "ಬಸಾತೀನುಸ್ಸಲಾತೀನ್" ಕೃತಿಗಳ ಆಧಾರದಿಂದ ಡಾ. ಅಬ್ದುಲ್ ಹಕ್ ಅವರು ಹೀಗೆ ಹೇಳಿದ್ದಾರೆ. ರಾಜ್ಯದ ಕಾರುಭಾರಗಳೆಲ್ಲವೂ ಅನನುಭವಿಗಳೂ, ಸ್ವಾರ್ಥಿಗಳೂ ಆದ ಮಂತ್ರಿಗಳ ಕೈಯೊಳಗಿತ್ತು. ಕೊನೆಗೆ ತಮ್ಮ ತಮ್ಮೊಳಗೆ ಬೆಳೆದ ವೈರ ಮತ್ತು ಸ್ವಾರ್ಥತೆಯು ತೀವ್ರವಾಗಿ ಬಹಳ ಬೇಗನೆ ಈ ರಾಜ್ಯವು ಅಸ್ತಂಗತವಾಯಿತು. ("ಮುಲ್ಲಾ ನುಸ್ರತಿ", ಪುಟ – ೨೧೮).

೫) ಅ.ಕ್ರ. ೧.೧೦ ಮತ್ತು ೨.೧೬ – ವಿಜಾಪುರದ ರಾಜನಿಗಿದ್ದ ಅತ್ಯಂತ ದೊಡ್ಡ ಶತ್ರುವೆಂದರೆ ಶಿವಾಜಿಯೇ ಎಂಬುದು ನುಸ್ರತಿಯ ಅಭಿಪ್ರಾಯ. ಅಲೀ ಆದಿಲಶಾಹಿಯು ಮರಣ ಹೊಂದಿದ ಮೇಲೆ ಗದ್ದುಗೆಯಲ್ಲಿ ಕುಳಿತ ಬಾಲದೊರೆ ಮತ್ತು ಮಂತ್ರಿಗಳಲ್ಲಿ ಉಂಟಾದ ಅಂತಃಕಲಹವನ್ನು ನೋಡಿದ ಶಿವಾಜಿಯು ಈ ಸುಸಂಧಿಯ ಲಾಭವನ್ನು ಪಡೆಯಲು ಯೋಜಿಸಿದನೆಂಬ ವಿಚಾರವು ಸತ್ಯವಾದುದು. ಅತ್ಯಂತ ತ್ವರಿತವಾಗಿ ಪನ್ಹಾಳ ಕೋಟೆಯನ್ನು ವಶಪಡಿಸಿಕೊಂಡ ಶಿವಾಜಿಯು, ಮುಂದೆ ಕೆಲವೇ ದಿನಗಳಲ್ಲಿ ವಿಜಾಪುರ ರಾಜ್ಯವನ್ನು ನಾಶ ಮಾಡುವ ಪ್ರಯತ್ನ ಮಾಡಿದನು. "ಬಸಾತೀನುಸ್ಸಲಾಈನ್" ಕೃತಿಯ ಆಧಾರದಿಂದ ಡಾ.ಹಕ್ ಅವರು ಈ ಕೆಳಗಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. –

"ಸಾರಾಂಶ, ರಾಜನ ಎಳೆಯ(ಚಿಕ್ಕ) ವಯಸ್ಸು ಮತ್ತು ದೂರದರ್ಶಿ (ದೃಷ್ಟಿ ಹೊಂದಿಲ್ಲದ) ಸರದಾರರ ಸ್ವಾರ್ಥದಿಂದಾಗಿ ರಾಜ್ಯದ ಆಗು ಹೋಗುಗಳನ್ನು ನೋಡಿಕೊಳ್ಳುತ್ತಿದ್ದ ಮಂತ್ರಿಗಳ ಮನಸ್ಸಿನಲ್ಲಿ ಸಂಶಯ ಮೂಡಿತು. ಹಾಗಾಗಿ ರಾಜ್ಯದ ಸಂಪೂರ್ಣ ವ್ಯವಸ್ಥೆಗೆ ಆಪತ್ತು ಒದಗಿತು. ಇದನ್ನೇ ಎದುರು ನೋಡುತ್ತಲಿದ್ದ ಸುತ್ತಮುತ್ತಣ ಜನರು ಜಾಗೃತರಾದರು. ಎಲ್ಲೆಡೆ ಅರಾಜಕತೆ ತಲೆದೋರಿತು. ಎಲ್ಲರಿಗಿಂತ ಮೊದಲು ನೆರೆಯಲ್ಲಿದ್ದ ಶಿವಾಜಿಯು ಈ ರಾಜನ ವಿರುದ್ಧ ಎದ್ದು ನಿಂತನು. ಅವನು ಈಗಾಗಲೇ ಎರಡನೆಯ ಅಲೀ ಆದಿಲಶಾಹಿಯ ಕೊನೆಯ ಕಾಲದಲ್ಲಿ ಆದಿಲಶಾಹಿ ರಾಜ್ಯದ ಕೆಲವು ಕೋಟೆಗಳು ಹಾಗೂ ಪ್ರದೇಶಗಳನ್ನು ಆಕ್ರಮಿಸಿದ್ದನು. ಹಾಗೆಯೇ ಮೊಗಲರ ಕೆಲವು ಪ್ರದೇಶಗಳನ್ನು ಅವನು ಗೆದ್ದುಕೊಂಡಿದ್ದನು. "(ಮುಲ್ಲಾ ನುಸ್ರತಿ", ಪುಟ – ೨೨೧)

೬) ಅ.ಕ್ರ. ೧.೨೧ – ವಿಜಾಪುರದ ಆಡಳಿತವು ದುರ್ಬಲವಾಗಿದ್ದುದನ್ನು ಕಂಡ ಶಿವಾಜಿಯು ತನ್ನ ಕೈಕಾಲುಗಳನ್ನು ಮುಂದಕ್ಕೆ ವಿಶಾಲವಾಗಿ ಚಾಚಲು ಆರಂಭಿಸಿದನು. ಆದಿಲಶಾಹಿಯ ಭದ್ರವಾದ ಕೋಟೆಗಳನ್ನು ತನ್ನ ವಶ ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಿದನು. ಮೊದಲಿಗೆ ೬ನೆಯ ಮಾರ್ಚ ೧೬೭೩ರಂದು ಪನ್ಹಾಳ, ೧ನೆಯ ಎಪ್ರಿಲ್‌ನಂದು ಸಾತಾರಾದ ಕೋಟೆಗಳನ್ನು ಗೆದ್ದನು ಶಿವಾಜಿ. ಹಾಗೆಯೇ ೮ನೆಯ ಮಾರ್ಚ, ೧೬೭೦ರಲ್ಲಿ ಪುರಂದರ ಕೋಟೆ ಹಾಗೂ ೪ನೆಯ ಫೆಬ್ರುವರಿ ೧೬೭೦ರಲ್ಲಿ ಕೋಂಡಣಾ(ಸಿಂಹಗಡ) ಕೋಟೆಗಳನ್ನು ಈಗಾಗಲೇ ಗೆದ್ದುಕೊಂಡಿದ್ದನು.

೭) ಅ.ಕ್ರ. ೧.೨೨ – ಶಿವಾಜಿಯು ವಿದೇಶಿಯರ ಬಂದರುಗಳನ್ನು ಲೂಟಿ ಮಾಡಿದುದನ್ನು ಕವಿಯು ಉಲ್ಲೇಖಿಸಿರುವನು. ವಾಸ್ತವವಾಗಿ ನೋಡಿದರೆ ವಿದೇಶಿಯರ ಬಂದರುಗಳು ಇಲ್ಲವೆ ಕಾರ್ಯಸ್ಥಾನಗಳನ್ನು ಲೂಟಿ ಮಾಡುವ ಧೋರಣೆ ಶಿವಾಜಿಯದಾಗಿರಲಿಲ್ಲ. ಇಂಗ್ಲಿಷ್, ಪೋರ್ಚುಗೀಸ್ ಹಾಗೂ ಡಚ್ಚರು ಎಲ್ಲೆಲ್ಲಿ ಸ್ಥಳೀಯ ರಾಜಕಾರಣದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದರೋ ಅಂಥಲ್ಲಿ ಮಾತ್ರ ಶಿವಾಜಿಯು ಆಕ್ರಮಣ ಮಾಡುವ ಕಾರ್ಯವನ್ನು ಕೈಗೊಂಡಿದ್ದನು. ಆದರೆ ಆದಿಲಶಾಹಿ ರಾಜ್ಯ ಮಾತ್ರ ಶಿವಾಜಿಯಿಂದ ಬಹಳಷ್ಟು ಆಘಾತವನ್ನು ಸಹಿಸಬೇಕಾಗಿ ಬಂದಿತು. ಮೊಗಲ್ ಸಾಮ್ರಾಜ್ಯವೂ ಕೂಡ ಶಿವಾಜಿಯ ಈ ಪೆಟ್ಟಿನಿಂದ ಪಾರಾಗಲು ಸಾಧ್ಯವಾಗಲಿಲ್ಲ. ಶಿವಾಜಿಯು ಮೊಗಲರ ಸೂರತ್, ನಗರ(ದೋನದಾ), ಕಲ್ಯಾಣ, ಭಿವಂಡೀ, ಕಾರಂಜ ಇತ್ಯಾದಿ ಬಂದರುಗಳು ಮತ್ತು ನಗರಗಳನ್ನು ಲೂಟಿಗೆಯ್ದಿದ್ದನು. ಇದು ಆ ಕಾಲದ ರಾಜಕಾರಣದ ಒಂದು ಸ್ವರೂಪವೂ ಹೌದು. ಮೊಗಲರು ಮತ್ತು ಆದಿಲಶಾಹಿ ದೊರೆಗಳು ಮಾಡಿದ್ದುದು ಸಹ ಇದನ್ನೇ. ಶಿವಾಜಿಯು ಲೂಟಿ ಮಾಡಿದ್ದ ಬಂದರು ಮತ್ತು ನಗರಗಳು ಇಂತಿವೆ :

ಮಾರ್ಚ ೧೬೫೯ರಲ್ಲಿ ಶಿವಾಪಟ್ಟಣ (ವಿಜಾಪುರ)

೫ನೆಯ ಜನವರಿ ೧೬೬೦ರಲ್ಲಿ ದಂಭೋಳಾ (ವಿಜಾಪುರ)

೧೧ನೆಯ ಜನವರಿ ೧೬೬೦ರಂದು ರಾಜಾಪುರ (ಇಂಗ್ಲೀಷ)

೧೪ನೆಯ ಜನವರಿ ೧೬೬೦ರಂದು ಗದಗ (ವಿಜಾಪುರ)

ಫೆಬ್ರುವರಿ ೧೬೬೧ರಲ್ಲಿ ನಿಜಾಮಪುರ (ವಿಜಾಪುರ)

೩ನೆಯ ಮಾರ್ಚ ೧೬೬೧ರಂದು ರಾಜಾಪುರ (ಇಂಗ್ಲಿಷ್)

೬ನೆಯ ಅಕ್ಟೋಬರ ೧೬೬೪ ರಂದು ಸೂರತ್ (ಮೊಗಲ್)

೫ನೆಯ ಡಿಸೆಂಬರ್ ೧೬೬೪ರಂದು ವೆಂಗುರ್ಲೆ (ವಿಜಾಪುರ)

೧೦ನೆಯ ಡಿಸೆಂಬರ್ ೧೬೬೪ರಂದು ಹುಬ್ಬಳ್ಳಿ (ವಿಜಾಪುರ)

೮ನೆಯ ನವೆಂಬರ್ ೧೬೬೫ರಂದು ಬಸರೂರು (ವಿಜಾಪುರ)

೧ನೆಯ ನವೆಂಬರ್ ೧೬೬೯ರಂದು ಪೋರ್ಚುಗೀಸರ ಹಡಗು

೩ನೆಯ ಡಿಸೆಂಬರ್ ೧೬೭೦ರಂದು ಸೂರತ್ (ಮೊಗಲ್)

ಡಿಸೆಂಬರ್ ೧೬೭೦ರಲ್ಲಿ ಕಾರಂಜಿ (ಮೊಗಲ್)

೮) ಅ.ಕ್ರ.೧.೨೫–ಈ ಕವಿತೆಯಲ್ಲಿ ಶಿವಾಜಿಯ ಶೌರ್ಯವನ್ನು ವರ್ಣಿಸಲಾಗಿದೆ. ಶತ್ರುಗಳ ಸೇನಾಪಡೆಗಳನ್ನು ಗಂಭೀರವಾಗಿ ಪರಾಭವಗೊಳಿಸುತ್ತಿದ್ದ ಶಿವಾಜಿಯು ಅವರನ್ನು ಲೂಟಿಗೈದು ಕಳಿಸುತ್ತಿದ್ದನು. ಇಲ್ಲವೆ ಕೈದಿಯಾಗಿ ಬಂಧಿಸುತ್ತಿದ್ದನೆಂದು ಕವಿಯು ಹೇಳಿದ್ದಾನೆ. ಇದು ಅಂದಿನ ವಸ್ತುಸ್ಥಿತಿಯೇ ಆಗಿತ್ತು. ಆದಿಲಶಾಹಿ ಮತ್ತು ಮೊಗಲರಿಗೆ ಶಿವಾಜಿಯು ಎಂಥ ಆಘಾತವನ್ನು ತಂದು ಒಡ್ಡುತ್ತಿದ್ದನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅವನು ಈ ಮುಂದೆ ಹೇಳಿರುವ ಮಹಾನ್ ಮಹಾನ್ ಸೇನಾಧಿಪತಿಗಳೆನ್ನೆಲ್ಲ ಪರಾಭವಗೊಳಿಸಿದ್ದನು. ೧೦ನೆಯ ನವೆಂಬರ್ ೧೬೫೯ರಂದು ಅಫಜಲಖಾನನನ್ನು ಕೊಂದುಹಾಕಿದ್ದ. ೨೮ನೆಯ ಡಿಸೆಂಬರ್ ೧೬೫೯ರಂದು ಅವನಿಂದ ಸೋಲು ಅನುಭವಿಸಿದವರು ರುಸ್ತುಂಖಾನ್ ಮತ್ತು ಫಜಲ್‌ಖಾನ್ ಎಂಬ ಆದಿಲಶಾಹಿ ಸೇನಾಧಿಪತಿಗಳು ಮೊಗಲ್ ಸೇನಾಪತಿ ಕಾರತಲಬ್‌ಖಾನನು ೩ನೆಯ ಜನವರಿ ೧೬೬೧ರಂದು ಇವನಿಂದ ಮಾರ್ಚ ೧೬೬೨ರಲ್ಲಿ ಸೋಲಿಸಲ್ಪಟ್ಟಿದ್ದನು. ೫ನೆಯ ಎಪ್ರಿಲ್ ೧೬೬೩ರ ದಿನದಂದು ಅವನು ಶಾಯಿಸ್ತಾಖಾನನ ಮೇಲೆರಗಿ ಅವನ ಬೆರಳುಗಳನ್ನು ಕತ್ತರಿಸಿ ಹಾಕಿದ್ದನು. ವಿಜಾಪುರದ ಸರದಾರ ಬಾಜಿ ಘೋರ್ಪಡೆಯನ್ನು ಕೊಂದುದಲ್ಲದೆ, ಖವಾಸಖಾನನನ್ನು ೨೦ನೆಯ ಅಕ್ಟೋಬರ್ ೧೬೬೪ರಂದು ಪರಾಭವಗೊಳಿಸಿದ್ದನು. ೧೬೭೦ರಲ್ಲಿ ಮೊಗಲ್ ಸರದಾರ ಇಖ್ಲಾಸ್‌ಖಾನ್ ಮತ್ತು ಬಹಲೋಲಖಾನರೊಡನೆ ನಾಶಿಕದ ಸಾಲೇರಿ ದುರ್ಗದಲ್ಲಿ ಘನಘೋರ ಯುದ್ಧ ನಡೆದಿತ್ತು. ಅದರಲ್ಲಿ ಶಿವಾಜಿಯ ಪ್ರಧಾನ ಮೋರೋಪಂತ ಮತ್ತು ಮುಖ್ಯ ಸೇನಾಪತಿ ಪ್ರತಾಪರಾವ್ ಗುಜರ ಎಂಬುವವರು ಮೊಗಲರಿಗೆ ಮಣ್ಣು ಮುಕ್ಕಿಸಿದ್ದರು. ಸಭಾಸದನು(ಶಂ. ನಾ. ಜೋಶಿ. ಶಕ ೧೬೬೨, ಪುಟ–೭೧) ಹೇಳಿರುವಂತೆ "ಆರು ಸಾವಿರ ಕುದುರೆಗಳು, ನೂರಾ ಇಪ್ಪತ್ತೈದು ಆನೆಗಳು, ಆರು ಸಾವಿರ ಒಂಟೆಗಳು ಶಿವಾಜಿಯ

ವಶವಾದವು. ಇಪ್ಪತ್ತೆರಡು ಮಂದಿ ಪ್ರಖ್ಯಾತ ಮಂತ್ರಿಗಳೊಡನೆ ಇಖ್ಲಾಸ್‌ಖಾನ್ ಮತ್ತು ಬಹಲೋಲಖಾನರೂ ಬಂಧಿಸಲ್ಪಟ್ಟರು. ಅನಂತರ ಶಿವಾಜಿಯು ಅವರಿಗೆ ವಸ್ತ್ರ, ಪೋಷಾಕುಗಳು ಮೊದಲಾದುವನ್ನು ನೀಡಿ ಬಹಲೋಲಖಾನ್ ಮತ್ತು ಇತರೆ ಸರದಾರರನ್ನೆಲ್ಲ ಮುಕ್ತಿಗೊಳಿಸಿದನು."

೯) ಅ.ಕ್ರ.೧.೩೦ ಮತ್ತು ೨.೨೮ – ಮೊದಲನೆಯ ದ್ವಿಪದಿಯಲ್ಲಿ ಕವಿಯು ಹೇಳಿರುವುದೆನೆಂದರೆ, ಶಿವಾಜಿಯು ಮಧ್ಯಭಾಗಕ್ಕೆ ಬಂದು ಕುಳಿತನು. ಆತನ ಈ ಮಾತಿನ ಅರ್ಥ ಪ್ರತಾಪರಾವ್ ಗುಜರ ಮತ್ತು ಆನಂದರಾವ್ ಈ ಇಬ್ಬರು ಮಹಾನ್ ಸರದಾರರನ್ನು ಬಹಲೋಲಖಾನನ ಮೇಲೆ ಪ್ರತಿಕಾರ ಕೈಗೊಳ್ಳುವಂತೆ ಕಳುಹಿಸಿದ ಶಿವಾಜಿಯು ಮಧ್ಯದಲ್ಲಿ ಅಂದರೆ ಪನ್ಹಾಳ ಕೋಟೆಯಲ್ಲಿ ಬೀಡು ಬಿಟ್ಟಿದ್ದನು. ಸಮಕಾಲೀನ ಸಂದರ್ಭ ಸಾಧನವಾದ ಶಶಾವಲಿಯಲ್ಲಿಯೂ ಈ ರೀತಿಯಲ್ಲಿಯೇ ಉಲ್ಲೇಖಿಸಲಾಗಿದೆ. ಶಿವಾಜಿಯು ಸ್ವತಃ ತಾನೇ ರಣಾಂಗಣಕ್ಕೆ ಬಂದಿರಲಿಲ್ಲವೆಂಬಂತಹ ವಸ್ತುಸ್ಥಿತಿಯನ್ನು ನುಸ್ರತಿಯು ಹೇಳಿದ್ದಾನೆ. ಕ್ರಮಾಂಕ ೨.೮ರ ಪದ್ಯದಲ್ಲಿ ಶಿವಾಜಿಯು ತಾನು ಹಿಂದಿದ್ದುಕೊಂಡು ಈ ಸೇನಾನಿಗಳಿಗೆಲ್ಲ ಸಹಾಯ ನೀಡುತ್ತಿದ್ದನೆಂದು ಹೇಳಲಾಗಿದೆ. ೧೩ನೆಯ ಶಾಬಾನ್ ೧೦೮೩ ಹಿಜರಿ (ಮಾರ್ಗಶಿರ ಶಕ ೧೫೯೪)ಯಂದು ಅಲೀ ಆದಿಲಶಾಹಿಯ ನಿಧನವಾಯಿತು. ಅನಂತರ ಶಿವಾಜಿಯ ಸರದಾರ ಅಣ್ಣಾಜಿ ಪಂತನು ಫಾಲ್ಗುಣ ಮಾಸ ೧೩, ಶಕ ೧೫೯೪ರಂದು ಪನ್ಹಾಳ ಕೋಟೆಯನ್ನು ಗೆದ್ದು ತನ್ನ ವಶಕ್ಕೆ ತೆಗೆದುಕೊಂಡನು. ಪ್ರತಾಪರಾವ್ ಮತ್ತು ಬಹಲೋಲಖಾನರ ನಡುವೆ ಚೈತ್ರ ಶಕ ೧೫೯೫ರಂದು ಉಮ್ರಾಣಿಯಲ್ಲಿ ಯುದ್ಧವು ಜರುಗಿತು. ಶಿವಾಜಿಯು ಆ ವೇಳೆಯಲ್ಲಿ ಪನ್ಹಾಳದಲ್ಲಿಯೇ ಇದ್ದನು. ಫಾಲ್ಗುಣ ೧೩ ರಂದು ಪನ್ಹಾಳ ಕೋಟೆಯು ಹಸ್ತಗತವಾಯಿತು ಮತ್ತು ಶಿವಾಜಿಯು ಚೈತ್ರ ಶುದ್ಧ ೫, ಶಕ ೧೫೯೫ರಂದು ರಾಯಗಡದ ಮೂಲಕ ಪನ್ಹಾಳಕ್ಕೆ ಬಂದು ಒಂದು ತಿಂಗಳ ಕಾಲ ತಂಗಿದ್ದನು. ಈ ಎಲ್ಲಾ ವಿವರಗಳು ತಾರಖಾ ಜೇಧೇ ಶಕಾವಲೀ ಮತ್ತು ಜಯರಾಮಕೃತ ಪರ್ಣಾಲಾಖ್ಯಾನ ಈ ಎರಡೂ ಕೃತಿಗಳಲ್ಲಿ ಒಂದೇ ತೆರನಾಗಿ ಬಂದಿವೆ.

೧೦) ಅ.ಕ್ರ.೨.೫ – ಖವಾಸಖಾನನನ್ನು ಶಿವಾಜಿಯ ಪಾರುಪತ್ಯೆ (ಮೇಲ್ವಿಚಾರಣೆ)ಗಾಗಿ ಕಳುಹಿಸಬೇಕೆಂಬ ಬಗ್ಗೆಯೇ ವಿಚಾರ ವಿನಿಮಯ ನಡೆಯುತ್ತಿತ್ತೆಂದು ಕವಿಯು ಉಲ್ಲೇಖಿಸಿದ್ದಾನೆ. ಆಗ ನವಾಬನು ಬಹಲೋಲಖಾನನಿಗೆ ಬರಬೇಕೆಂದು ಕರೆ ಕಳುಹಿಸಿದನು.

೧೧) ಅ.ಕ್ರ. ೨.೮ – ಕುಶಲಕ್ಷೇಮ ಸಮಾಚಾರವೇ ಮೊದಲಾದ ಸಾಮಾನ್ಯ

ವಿಷಯಗಳ ಮಾತುಕತೆಯಾದ ಮೇಲೆ ಖವಾಸಖಾನನು ರಾಜಕಾರಣಕ್ಕೆ ಬಂದನು. ೯ನೆಯ ಸಾಲಿನಿಂದ ೧೯ನೆಯ ಸಾಲಿನವರೆಗೆ ಖವಾಸಖಾನನ ಭಾಷಣವಿದೆ.

೧೨) ಅ.ಕ್ರ. ೨.೧೫ – ಇಲ್ಲಿ ಶಿವಾಜಿಯ ರಾಜಕಾರಣಕ್ಕೆ ಸಂಬಂಧಿಸಿದಂತೆ ವಿಶೇಶವಾಗಿ ನುಸ್ರತಿಯ ಮತ್ತು ಪರ್ಯಾಯವಾಗಿ ಆದಿಲಶಾಹಿ ರಾಜ್ಯದ ಅಭಿಪ್ರಾಯವೇನಿತ್ತು ಎಂಬುದರ ವಿವರಗಳಿವೆ. ಶಿವಾಜಿಯು ಆದಿಲಶಾಹಿ ರಾಜ್ಯವನ್ನು ನಾಶಗೈಯುವ ಪ್ರಯತ್ನದಲ್ಲಿ ತೊಡಗಿದ್ದನು. ನಿಜವಾಗಿ ಇದು ವಿಜಾಪುರವು ಒಪ್ಪುವಂತಹ ಸಂಗತಿಯಲ್ಲ. ಆದರೆ ನುಸ್ರತಿಗೆ ಇದು ಏಕೆ ಮಾನ್ಯವಾಗಿರಲಿಲ್ಲ ಎಂಬುದರ ಪರಿಶೀಲನೆ ಅಗತ್ಯ. ಅವನ ದೃಷ್ಟಿಕೋನ ಎಂಥದ್ದು ಎಂಬುದನ್ನು ತಿಳಿಯಬೇಕಾಗುತ್ತದೆ. ಶಿವಾಜಿಯು ಮೊಗಲರೊಂದಿಗೆ ಸೇರಿಕೊಂಡರೆ ಅದರಿಂದ ಅವನ ಸ್ವಂತ ಮನೆಯೇ ಹಾಳಾಗಿ ಹೋಗುವುದು ಮಾತ್ರವಲ್ಲ. ಅವನೂ ಅಲ್ಲಿಂದ ಹೊರಗಡೆ ಬೀಳಬೇಕಾಗುತ್ತದೆ ಎಂಬುದು ನುಸ್ರತಿಯ ಮುಖ್ಯ ವಿಚಾರವಾಗಿತ್ತು. ಅವನ ಈ ವಿಚಾರ ಕೇವಲ ವಿಜಾಪುರದ ಸಂರಕ್ಷಣೆಯ ದೃಷ್ಟಿಯಿಂದ ಮಾತ್ರ ರೂಪಗೊಂಡುದಲ್ಲ. ಅದಕ್ಕಿಂತಲೂ ಸೂಕ್ಷ್ಮವೂ ವಿಶಾಲವೂ ಆದುದಾಗಿರುವುದು ತಿಳಿದುಬರುತ್ತದೆ. ಅದು ದಿಲ್ಲಿಯಿಂದ ದಕ್ಷಿಣದ ಮೇಲೆ ಆಗುತ್ತಿದ್ದ ಆಕ್ರಮಣಗಳನ್ನು ಹೇಗೆ ತಡೆಯುವುದು ಎಂಬ ಪ್ರಶ್ನೆಯನ್ನು ಒಳಗೊಂಡುದಾಗಿದೆ. ಈ ಪ್ರಶ್ನೆ ಕೇವಲ ವಿಜಾಪುರಕ್ಕಷ್ಟೇ ಅಲ್ಲ; ಸ್ವತಃ ನುಸ್ರತಿಗೂ ಮುಖ್ಯವಾಗಿತ್ತು. ವಿಜಾಪುರವು ಸಂಕಷ್ಟಕ್ಕೆ ಸಿಲುಕಿದರೆ ಅದು ಶಿವಾಜಿಯ ರಾಜ್ಯಕ್ಕೂ ಕುತ್ತು ತರದೆ ಇರಲಾರದು ಎಂಬುದೇ ನುಸ್ರತಿಯ ಮುಖ್ಯ ಆಶಯ.

ಅವನು ತನ್ನ "ಅಲೀನಾಮಾ" ಎಂಬ ಕೃತಿಯಲ್ಲಿಯೂ ಇದೇ ದೃಷ್ಟಿಕೋನದ ವಿಚಾರವನ್ನು ವ್ಯಕ್ತಪಡಿಸಿದ್ದಾನೆ. ಮೊಗಲರಿಗೆ ಸಹಾಯ ಮಾಡುತ್ತಿದ್ದ ಶಿವಾಜಿಯ ಬಗ್ಗೆ ಆತ ಹೇಳಿರುವುದೇನೆಂದರೆ, ಅವನ ಈ ಕೃತ್ಯದಿಂದಾಗಿ ಅವನ ಮನೆಗೆ ಕುತ್ತುಂಟಾಗದೆ ಇರದು. ಅವನು ಹೇಳುವಂತೆ –

ಕಿ ಥಾ ಚೋರ ಸೇವಟ ನಿಭಾ ನೈಸಕ್ಯಾ

ಹುಕ್ಯಾ ಹೌರ ಪನ ಆಖಿರ ನಈ ಘರ ರಖ್ಯಾ ! (ಅ. ೨೨.೪೩)

(ಶಿವಾಜಿಯು ತೀವ್ರ ಆಕ್ರಮಣಶೀಲ ಪ್ರವೃತ್ತಿಯವನಾಗಿದ್ದನು. ಆದರೆ ಆ ಕಾರ್ಯವನ್ನು ಕೊನೆಯವರೆಗೂ ನಿಭಾಯಿಸುವುದು ಸಾಧ್ಯವಾಗಲಿಲ್ಲ. ಅವನು ಮಾಡಿದ ತಪ್ಪಿನಿಂದಾಗಿ ಕೊನೆಗೆ ಆತ ತನ್ನ ಮನೆಯನ್ನು ಸಹಾ ಕಾಯ್ದುಕೊಳ್ಳುವುದಾಗಲಿಲ್ಲ.)

ಮತ್ತೊಂದು ಕಡೆಯಲ್ಲಿ (ಅಲೀನಾಮಾ : ಅ. ೩೭.೫೦) ಅವನು ಹೀಗೆ ಹೇಳಿದ್ದಾನೆ. ಶಿವಾಜಿಯು ನಮ್ಮನ್ನು ಎದುರಿಸುವಷ್ಟು ಸಮರ್ಥನಾಗಿಲ್ಲ. ನರಿಬುದ್ಧಿಯುಳ್ಳವನಾದ ಅವನು ಓಡಿಹೋಗಿ ಮೊಗಲರಿಗೆ ಸಹಾಯ ಮಾಡಿದ. ಆದರೆ ಅವನೂ ದೇಶಹೀನನಾಗದೆ ಹೋಗನು. ಅದರಿಂದ ಹೀಗೆ ಅವನು ತನ್ನ ಸ್ವಂತ ದೇಶಕ್ಕೂ ಸಾಮ್ರಾಜ್ಯ ಘಾತವನ್ನು ಉಂಟುಮಾಡುವಂತಹ ಕಾರ್ಯದಲ್ಲಿ ಪ್ರವೃತ್ತನಾಗಿದ್ದಾನೆ.

ಕಿ ಶೇರಾ ಅಂಗೇ ಭಾಗ ಕೋಲೇ ನಮನ

ಮಿಲ್ಯಾ ಜಾ ಮುಗಲ ಮೇಂ ಸಿವಾ – ಜೀ – ವತನ (ಅ.೩೭.೫೦)

ಮೇಲಿನ ದೃಷ್ಟಿಕೋನದಿಂದ ನೋಡಿದಾಗ ಮಾತ್ರ ನುಸ್ರತಿಯ "ಆಪೀ ಭೀ ನಾ – ಬೂದ ಹೈ" ಎಂಬ ಮಾತಿನ ಅರ್ಥವು ಸ್ಪಷ್ಟವಾಗಿ ತಿಳಿಯುತ್ತದೆ. ಬಂಗಾಳದ ಇತಿಹಾಸ ಸಭೆಯ ತ್ರೈಮಾಸಿಕ "ಬಂಗಾಳ : ಭೂತ ಮತ್ತು ವರ್ತಮಾನ" (ಇಂಗ್ಲಿಷ್)ದಲ್ಲಿ ಡಾ. ಸರಕಾರರು ಜಯಸಿಂಹನು ಔರಂಗಜೇಬನಿಗೆ ಬರೆದ ಮೂಲ ಫಾರ್ಸಿ ಪತ್ರಗಳ ಇಂಗ್ಲಿಷ್ ಭಾಷಾಂತರವನ್ನು ಸನ್ ೧೯೬೩ರ ಸಂಚಿಕೆಯಲ್ಲಿ ಪ್ರಕಟಿಸಿದ್ದಾರೆ. ಅಲ್ಲಿನ ಒಂದು ಪತ್ರದಲ್ಲಿ ಜಯಸಿಂಹನು ಬರೆದಿರುವುದೇನೆಂದರೆ, ಯಾವ ರೀತಿಯಲ್ಲಿ ಶಿವಾಜಿಯು ತನ್ನ ಹಿರಿಯ ಮಗ ಸಂಭಾಜಿಯನ್ನು ಔರಂಗಜೇಬನ ಸೇವೆಯಲ್ಲಿ ಇರಿಸಿರುವನೋ, ಹಾಗೆಯೇ ಅವನು ತನ್ನ ಸೋದರನ ಮಗ (ಪ್ರತಣ್ಯಾ : ಹಿರಿಯ ಸಹೋದರ ಸಂಭಾಜಿಯ ಮಗ ಉಮಾಜಿ)ನನ್ನು ಆದಿಲಶಾಹಿಯ ಸೇವೆಯಲ್ಲಿ ಇರಿಸಬೇಕೆಂದೂ ಮತ್ತು ತಮ್ಮ ಜಹಗೀರಿಯನ್ನು ಸ್ವೀಕರಿಸಬೇಕೆಂದು ಶಿವಾಜಿಯನ್ನು ಆಗ್ರಹಿಸುತ್ತಿದ್ದಾರೆ ವಿಜಾಪುರದವರು. ಈ ಸಂಗತಿಯಿಂದ ಶಿವಾಜಿ ಮತ್ತು ದಿಲ್ಲಿಯ ಸಂಬಂಧವಾಗಿ ವಿಜಾಪುರದವರಲ್ಲಿ ಯಾವ ಧೋರಣೆ ಇದ್ದಿತು ಎಂಬುದು ಸ್ಪಷ್ಟವಾಗಿ ತಿಳಿಯುವುದು. (ಪುಟ. ೧೨೦)

೧೩) ಅ.ಕ್ರ. ೨.೧೬ – ಆದಿಲಶಾಹಿಯು ದುರ್ಬಲನಾಗಿದ್ದುದರಿಂದ ಶಿವಾಜಿಗೆ ಬಹಳ ಆನಂದವಾಯಿತು ಎಂದು ಹೇಳಿದ್ದಾನೆ ನುಸ್ರತಿ. "ಬಸಾತೀನುಸ್ಸಲಾತೀನ್" ಕೃತಿಯ ಲೇಖಕ ಇಬ್ರಾಹಿಂ ಜುಬೇರಿಯು ಈ ವಸ್ತುಸ್ಥಿತಿಯನ್ನು ಈ ಕೆಳಗಿನಂತೆ ದಾಖಲಿಸಿದ್ದಾನೆ.

"ಬಾದಶಾಹನು ವಯಸ್ಸಿನಿಂದ ಬಹಳ ಚಿಕ್ಕವನಾಗಿದ್ದನು. ಇನ್ನು ಅವನ ಮಂತ್ರಿಗಳೆಲ್ಲ ಮಂದ ಬುದ್ಧಿಯುಳ್ಳವರಾಗಿದ್ದರು. ಹಾಗಾಗಿ ರಾಜ್ಯದಲ್ಲಿನ ಅರಾಜಕತೆಯು ತೀವ್ರವಾಗಿ ಅನೇಕ ಸ್ವಾರ್ಥಿ ಮನುಷ್ಯರಿಗೆ ತಮ್ಮ ಸ್ವಾರ್ಥ ಸಾಧನೆ ಮಾಡಿಕೊಳ್ಳುವುದಕ್ಕೆ ಒಂದು ಅಪೂರ್ವವಾದ ಅವಕಾಶವೇ ಒದಗಿ

ಬಂತು. ಇವರುಗಳಲ್ಲೆಲ್ಲ ಪ್ರಮುಖನಾಗಿದ್ದವನೆಂದರೆ ಶಿವಾಜಿ ಭೋಸಲೆ" (ಶಿವಚರಿತ್ರ ವೃತ್ತ – ಸಂಗ್ರಹ. ಭಾಗ ೨, ಪುಟ – ೯೩).

೧೪) ಅ.ಕ್ರ. ೨.೨೦ ರಿಂದ ೩೦ರವರೆಗಿನ ಸಾಲುಗಳಲ್ಲಿ ಬಹಲೋಲಖಾನನ ಭಾಷಣವಿದೆ. ಅವನು ಶಿವಾಜಿಯ ಮೇಲೆ ಪ್ರತೀಕಾರಗೈಯ್ವ ಧೈರ್ಯವನ್ನು ತೋರಿಸುತ್ತಾನೆ.

೧೫) ಅ.ಕ್ರ. ೨.೨೨ – ಶಿವಾಜಿಯು ಪನ್ಹಾಳದ ಕೋಟೆಯನ್ನು ಆಕ್ರಮಿಸಿದ ನಂತರ ವಿಜಾಪುರದ ದರಬಾರಿನಲ್ಲಿ ಬಹಳ ವ್ಯಾಕುಲತೆಯೂ ಉಂಟಾಯಿತು. ಖವಾಸಖಾನನು ತುಂಬಿದ ದರಬಾರಿನಲ್ಲಿ ಈ ಪ್ರಶ್ನೆಯನ್ನು ಹಾಕಿದಾಗ, ಇದಕ್ಕೆ ಬಹಲೋಲಖಾನನು ಬಹಳ ಕೋಪದಿಂದಲೇ ಪ್ರತಿಕ್ರಿಯಿಸಿದನು. ಅಲ್ಲದೆ ಬೇರೆಯ ಸೇನಾಪತಿಗಳಿಗೂ ಖವಾಸಖಾನನ ಈ ಧೋರಣೆಯು ಇಷ್ಟವಾಗಿರಲಿಲ್ಲ ಎಂಬುದು ನುಸ್ರತಿಯ ಅಭಿಪ್ರಾಯ.

ಜಯರಾಮ ಪಂಡಿತನ "ಪರ್ಣಾಲಪರ್ವತಗ್ರಹಣಾಖ್ಯಾನ" ಕಾವ್ಯದಲ್ಲಿಯೂ ಬಹಲೋಲಖಾನ ಮತ್ತು ಇತರೆ ಮಂತ್ರಿಗಳಿಗೆಲ್ಲ ಖವಾಸಖಾನನ ಮೇಲೆ ಬಹಳ ಕೋಪವಿತ್ತು ಎಂಬ ಬಗ್ಗೆ ಅನೇಕ ಪುರಾವೆಗಳಿವೆ. ಈ ಕೃತಿಯ ಕೊನೆಯಲ್ಲಿ ನೀಡಿರುವ ಪರಿಶಿಷ್ಟದಲ್ಲಿನ ಈ ಕೆಲವು ಶ್ಲೋಕಗಳನ್ನು ಗಮನಿಸಬಹುದು – ೧, ೫ ಮತ್ತು ೨೦ ಜೊತೆಗೆ ಅಧ್ಯಾಯ ೩ ರಲ್ಲಿ ಈ ಕೆಳಗಿನ ಶ್ಲೋಕಗಳು ಕ್ರ. ೪/೨,೫,೬ ಮತ್ತು ೭–

ದೃಷ್ಟ ಕಿಲ ಬಲಾಸ್ಯಾನ್ಯ ಖವಾಸಾಖಾನ್ಯ ದುರ್ಮತೇ । ೪

ಚರಿತ ವರ್ವರೀತ್ಯೇತತ್ ಸ್ವಸ್ಯ ರಾಜ್ಯಸ್ಯ ಭಜ್ಜಕಮ ।
ಯದಾ ಯೇದಿಲ ಶಾಹೇನ ಸ್ವಪದೇ ಸ್ಥಾಪಿತಃ ನುತಃ ।೫

ಔರಸೋ ತಿಲಘುಸ್ತಸ್ಯ ಸಾಚಿವ್ಯೇ ಸೌ ವ್ಯವಸ್ಥಿತಃ ।
ತಥೋ ವರಂಜಶಾಹಸ್ಯ ತಥೈವ ಕುತುಬಸ್ಯ ಚಃ । ೬

ಉಪಾಯನಾ ದಿದಾನೇನ ತೋಕ್ಷಯಿತ್ವಾ ಪುರಾತನಾನ ।
ಸೈನಿಕಾನವಿಚಾಯ್ಯೈವ ಪಾತಶಪದೇ ಸ್ಥಿತಮ್ । ೭

೧೬) ಅ.ಕ್ರ – ೩.೨೩. ಶಿವಾಜಿಯ ಬಳಿಯಲ್ಲಿ ಅಗಣಿತ ಸಂಖ್ಯೆಯ ಸೈನ್ಯವಿತ್ತೆಂದು ಕವಿಯೇ ಹೇಳಿದ್ದಾನೆ ಇಲ್ಲಿಾ ಕಾರಣವಾಗಿಯೇ ಬಹಲೋಲಖಾನನು ಹನ್ನೆರಡು ಸಾವಿರ ಸೈನಿಕರೊಂದಿಗೆ ಶಿವಾಜಿಯನ್ನು ಎದುರಿಸಲು ಹೋಗಿದ್ದನೆಂಬುದಾಗಿ ಸಭಾಸದ ಕೃಷ್ಣಾಜಿ ಅನಂತರು ತಮ್ಮ ಶಿವಚರಿತ್ರ ಕೃತಿಯಲ್ಲಿ (ಪು.೩೫) ಹೇಳಿದ್ದಾರೆ.

"ಬಸಾತೀನುಸ್ಸಲಾತೀನ" ಕೃತಿಯಲ್ಲಿ ಇಬ್ರಾಹಿಂ ಜುಬೇರಿಯು ಹೇಳಿರುವಂತೆ ಬಹಲೋಲಖಾನನು ಉಮ್ರಾಣಿಯ ಬಳಿಗೆ ಬಂದನು. ಆಗ ಶಿವಾಜಿಯ ಹದಿನೈದು ಸಾವಿರ ಸೇನೆಯು ಅತ್ತ ಬರುತ್ತಿತ್ತು. ಈ ಅಂಶದ ಹಿನ್ನಲೆಯಲ್ಲಿ ನೋಡಿದಾಗ ಶಿವಾಜಿಯ ಸೈನ್ಯವೇ ಸಂಖ್ಯೆಯಲ್ಲಿ ಹೆಚ್ಚಾಗಿತ್ತು ಎಂಬ ನಿಷ್ಕರ್ಷಕ್ಕೆ ಬರಬಹುದಾಗಿದೆ. (ಶಿವಚರಿತ್ರ ವೃತ್ತ – ಸಂಗ್ರಹ, ಭಾಗ – ೨. ಪುಟ – ೯೩.)

ಇಂಥದೆ ಪುರಾವೆಯನ್ನು ಕವಿಯು ಮತ್ತೊಂದೆಡೆಯಲ್ಲಿ (ಅಧ್ಯಾಯ ೪-೫೯ರಲ್ಲಿ) ಉಲ್ಲೇಖಿಸಿದ್ದಾನೆ. "ಇಸ್ಲಾಮ ಕಾ ದಲ ಮಅದೂದ ಥಾ" ಅಂದರೆ ಬಹಲೋಲಖಾನನ ಸೈನ್ಯವು ಸಂಖ್ಯೆಯಲ್ಲಿ ಚಿಕ್ಕದಿತ್ತು ಎಂಬುದು ಅವನ ಅಂಬೋಣ.

೧೭) ಅ. ಕ್ರ ೩.೧ – ನುಸ್ರತಿಯು ಈ ಯುದ್ಧವನ್ನು "ಪ್ರಾಮಾಣಿಕ ಮತ್ತು ಚೋರನ ನಡುವಣ ಯುದ್ಧ" ಎಂದಿದ್ದಾನೆ. ಅವನ ದೃಷ್ಟಿಯಲ್ಲಿ ಶಿವಾಜಿಯೊಬ್ಬ ಮಹಾಚೋರ.

ಡಾ.ಅಬ್ದುಲ್ ಹಕ್ ಅವರ ಅಭಿಪ್ರಾಯದಂತೆ ಮೂಲ ಕಾವ್ಯದ ಆಧಾರದಿಂದ ನೋಡಿದರೆ (ಪುಟ – ೨೩೭) ಈ ವರ್ಣನೆಯು ಶತ್ರುಗಳ ಅಂದರೆ ಶಿವಾಜಿಯ ಸೈನ್ಯದ ವರ್ಣನೆಯಾಗಿದೆ. ಅ. ೩.೬ರವರೆಗೆ ಸಂಪೂರ್ಣವಾಗಿ ಇರುವುದು ಶಿವಾಜಿಯ ಸೇನೆಯ ವರ್ಣನೆಗಳೇ ಎಂಬುದು ಗಮನಾರ್ಹ.

೧೮) ಅ.ಕ್ರ.೩.೭. – ಶಿವಾಜಿಯ ಸೇನಾಪತಿಯಾದ ಪ್ರತಾಪರಾವನ ಯೋಜನೆಯನ್ನು ಇಲ್ಲಿ ಹೇಳಲಾಗಿದೆ. ಶಿವಾಜಿಯ ಆದೇಶದಂತೆ ಅವನು ಬಹಳ ಅವಸರವಸರದಲ್ಲಿ ಶತ್ರುವಿನ ಮೇಲೆ ದಾಳಿ ಮಾಡಿದನು. ಬಹಲೋಲಖಾನನ ಸೇನೆಯನ್ನು ನಾಲ್ಕು ಬದಿಯಿಂದ ಘೇರಾವ್ ಅಂದರೆ ಸುತ್ತುವರೆದು ಆಕ್ರಮಣ ಮಾಡುವುದು ಅವನ ಮನಸ್ಸಿನಲ್ಲಿದ್ದ ಉದ್ದೇಶ. ("ಮುಲ್ಲಾ ನುಸ್ರತಿ", ಪುಟ – ೨೩೮).

"ಪರ್ಣಾಲಾಪರ್ವತಗ್ರಹಣಾಖ್ಯಾನ" ಕಾವ್ಯದಲ್ಲಿ ಜಯರಾಮ ಕವಿಯೂ ಈ ಸಂದರ್ಭವನ್ನು ವಿಸ್ತೃತವಾಗಿ ವರ್ಣಿಸಿರುವನು. ಪರಿಶಿಷ್ಟದಲ್ಲಿನ ೫ನೆಯ ಅಧ್ಯಾಯದಲ್ಲಿ ಕೊಡಲಾಗಿರುವ ಕ್ರಮಾಂಕ ೫೯ರಿಂದ ೬೨ರ ವರೆಗಿನ ಶ್ಲೋಕಗಳನ್ನು ನೋಡಬಹುದು. ಪ್ರತಾಪರಾವನು ಶತ್ರುಸೇನೆ ಮತ್ತು ಕೆರೆಗಳು ಎರಡನ್ನು ಸಂಪೂರ್ಣವಾಗಿ ಘೇರಾಯಿಸಿದ್ದನು.

೧೯) ಅ.ಕ್ರ. ೩.೯ – ೩೦ನೆಯ ಸಾಲಿನವರೆಗೆ ಯುದ್ಧವನ್ನು ವಿಶಿಷ್ಟವಾಗಿ ವರ್ಣಿಸಿದ್ದಾನೆ ನುಸ್ರತಿ.

೨೦) ಅ.ಕ್ರ ೩.೩೧ರಿಂದ ೩೭ರವರೆಗಿನ ಸಾಲುಗಳಲ್ಲಿ ಬಹಲೋಲಖಾನನ ಶೌರ್ಯ ಹಾಗೂ ಯುದ್ಧದ ವೈಶಿಷ್ಟ್ಯದ ನೈಪುಣ್ಯವನ್ನು ಸೂಕ್ಷ್ಮವಾಗಿ ಬಣ್ಣಿಸಿರುವನು. ಅನಂತರದ ೩೭ ರಿಂದ ೪೪ನೆಯ ಸಾಲುಗಳಲ್ಲಿ ಯುದ್ಧದ ವರ್ಣನೆಯಿದೆ.

೨೧) ಅ.ಕ್ರ. ೩.೩೩ – ಸ್ವತಃ ಯುದ್ಧ ಮಾಡುವುದಕ್ಕಿಂತ ತನ್ನ ಸೈನ್ಯವನ್ನು ಉತ್ತೇಜಿಸುವುದು, ಅವರಲ್ಲಿ ಅಧೈರ್ಯ ಉಂಟಾಗದಂತೆ ನೋಡಿಕೊಳ್ಳುವುದೇ ಸೇನಾಪತಿಯ ನಿಜವಾದ ಕೌಶಲ್ಯವೆಂದು ಹೇಳಲಾಗಿದೆ ಇಲ್ಲಿ. ಯುದ್ಧದ ಸ್ವರೂಪವು ಗಂಭೀರವಾಗಿ ಬದಲಾಗುತ್ತಿದ್ದರೂ ಬಹಲೋಲಖಾನನು ಮಾತ್ರ ತನ್ನ ಸೈನ್ಯದ ನಡುವೆಯೇ ಇದ್ದುಕೊಂಡು ಆನೆಯ ಮೇಲೆ ಕುಳಿತುಕೊಂಡು ಯುದ್ಧ ಮಾಡುತ್ತಿದ್ದನು. ಹಾಗಾಗಿ ಅವನ ಸೈನಿಕರೂ ಇಮ್ಮಡಿ ಉತ್ಸಾಹದಿಂದ ಯುದ್ಧ ಮಾಡುತ್ತ ಶತ್ರುವಿನ ನಾಮಾವಶೇಷ ಮಾಡುವುದಕ್ಕೆ ಉದ್ಯುಕ್ತರಾದರು. ಹೀಗಿರುವಾಗಲೇ ದಾರಾ ಶಿಕೋವ ಎಂಬಾತನವಿಂತಹ ಸಂದರ್ಭದಲ್ಲಿ ಆನೆಯಿಂದ ಕೆಳಗಿಳಿದು ಕುದುರೆಯ ಮೇಲೆ ಕುಳಿತುಕೊಂಡುದರಿಂದಾಗಿ ಉಂಟಾದ ದುಷ್ಪರಿಣಾಮವು ಏನಾಯಿತು ಎಂಬುದನ್ನು ಕವಿಯು ಹೇಳಿದ್ದಾನೆ. (ಅ. ೪.೮,೯).

ಇದನ್ನು ಮತ್ತೊಂದು ರೀತಿಯಲ್ಲೂ ಅರ್ಥೈಸಬಹುದು. ನುಸ್ರತಿಯು ಸೂಚಿಸಿರುವಂತೆ ಎದುರು ಬದುರು ನಿಂತು ಯುದ್ಧ ಮಾಡುವುದಕ್ಕಿಂತ ಬಹಲೋಲಖಾನನು ಪ್ರತಾಪರಾವನೊಂದಿಗೆ ಒಪ್ಪಂದ ಮಾಡಿಕೊಂಡು ಈ ಯುದ್ಧದಿಂದ ಬಿಡುಗಡೆ ಹೊಂದಲು ಇಚ್ಛಿಸುತ್ತಿದ್ದನು. ಬಹಲೋಲಖಾನನು ಪ್ರತಾಪರಾವನೊಂದಿಗೆ ಒಪ್ಪಂದ ಮಾಡಿಕೊಂಡ ಬಗ್ಗೆ ಆ ಕಾಲದ ಮತ್ತೊಂದು ಐತಿಹಾಸಿಕ ಕೃತಿಯಲ್ಲಿಯು ಪುರಾವೆಯಿದೆ. ಹಾಗಾಗಿ ಈ ಮತ್ತೊಂದು ಅರ್ಥವು ಮನವರಿಕೆಯಾಗುವುದು.

ನುಸ್ರತಿಯ ಸಮಕಾಲೀನ ಇತಿಹಾಸ ಲೇಖಕನಾದ ಸಭಾಸದನು ಈ ವಿಷಯವಾಗಿಯೇ ಶಿವಚರಿತ್ರೆಯಲ್ಲಿ (ಲೇಖಕನ ಕಾಲ ಶಕ ೧೬೧೭) ಹೇಳಿರುವಂತೆ, "ಆನಂತರದಲ್ಲಿ (ಬಹಲೋಲಖಾನನು) ಪ್ರತಾಪರಾವನಲ್ಲಿ ರಹಸ್ಯವಾಗಿ ತಿಳಿಸಿದುದೇನೆಂದರೆ, 'ನಾನು ನಿಮ್ಮ ಮೇಲೆರಿ ಬರುವುದಿಲ್ಲ. ಬಾದಶಹನ ಆಜ್ಞೆಯ ಕಾರಣ ನಾನು ಬರಬೇಕಾಯಿತು. ಆದಾಗ್ಯೂ ನಾನು ನಿಮ್ಮವನೇ. ಪ್ರತಿಯೊಂದು ಸಂದರ್ಭದಲ್ಲೂ ನನಗೆ ರಾಜನ ಶತ್ರುತ್ವವನ್ನು ಮೇಲೆಳೆದುಕೊಳ್ಳಲು ಬರುವುದಿಲ್ಲ.' ಈ ರೀತಿಯಾಗಿ ಅವನು ಪ್ರೇಮದಿಂದಲೇ

ಒಪ್ಪಂದ ಮಾಡಿಕೊಂಡನು. ಅನಂತರ ರಾಜನ ಸೇನೆಯು ಅಲ್ಲಿಂದ ಹೊರಟು ಹೋಯಿತು. (ಪು. ೭೫)

ಮುಹಮದ್ ಬರ್ಕಿಯು ಕೊಲ್ಲಲ್ಪಟ್ಟದನ್ನು ಕೇಳಿದ ಬಹಲೋಲಖಾನನು, ಪ್ರತಾಪರಾವನು ಸೂಚಿಸಿದ ಮಾರ್ಗದಿಂದಲೇ ಹೊರಟು ಹೋದನು ಎಂಬುದಾಗಿ ಜಯರಾಮ ಕವಿಯೂ ಸ್ಪಷ್ಟವಾಗಿ ಹೇಳಿದ್ದಾನೆ. (ಪರಿಶಿಷ್ಟ ಅ. ೫.೧೦೫)

ಡಾ.ಯದುನಾಥ ಸರಕಾರ ಅವರು (ಪುಟ. ೧೯೪) ಜಯರಾಮ ಕವಿಯ ಆಧಾರದಿಂದ ಈ ಘಟನೆಯನ್ನು ವಿವರಿಸಿದ್ದಾರೆ. ಅವರ ಪ್ರಕಾರ "ಅವನಿಗೆ ಎಂಥದೋ ಅಮಿಷವನ್ನು ತೋರಿಸಿದುದರಿಂದ ಅವನು ಈ ಒಪ್ಪಂದ ಮಾಡಿಕೊಂಡನು." ಅವರು ಯಾವ ಆಧಾರದಿಂದ ಪ್ರತಾಪರಾವನ ಮೇಲೆ ಈ ಆರೋಪ ಮಾಡಿದ್ದಾರೆ ಎಂಬುದು ತಿಳಿಯುವುದಿಲ್ಲ. "ಬಸಾತೀನುಸ್ಸಲಾತೀನ" ಕೃತಿಯಲ್ಲಿ ಈ ಸಂಬಂಧವಾಗಿ ಯಾವ ವಿಚಾರವೂ ಕಂಡುಬರುವುದಿಲ್ಲ.

೨೨) ಅ.ಕ್ರ ೩.೨೫ – ಕೊನೆಯ ಎರಡು ಸಾಲುಗಳಲ್ಲಿ ಕವಿಯು ಬಹಲೋಲಖಾನನ ಜನಪ್ರಿಯತೆಯನ್ನು ಬಣ್ಣಿಸಿದ್ದಾನೆ. ಅವನು ಸುಸ್ವಭಾವಿಯೂ ಜಗನ್ಮಿತ್ರನೂ ಆಗಿದ್ದನು. ಅವನು ಎಲ್ಲರೊಂದಿಗೂ ಪ್ರಿಯವಾಗಿಯೇ ನಡೆದುಕೊಳ್ಳುತ್ತಿದ್ದುದರಿಂದ ಆತನನ್ನು ಶತ್ರುಗಳೂ ಪ್ರೀತಿಸುತ್ತಿದ್ದರು.

ಜಯರಾಮ ಕವಿಯೂ ಅವನ ಶೌರ್ಯವನ್ನು ಸ್ತುತಿಸಿದ್ದಾನೆ. (ಪರಿಶಿಷ್ಟ ಅ. ೫.೨೫ ರಿಂದ ೩೨ನ್ನು ನೋಡಿ)

ಡಾ.ಹಕ್ ಅವರು ಮೂಲ ಕಾವ್ಯದ ಆಧಾರದಿಂದ ಹೀಗೆ ಹೇಳಿದ್ದಾರೆ. (ಪುಟ. ೨೪೭) ಇಲ್ಲಿಗೆ ನುಸ್ರತಿಯು ಮೊದಲನೆಯ ದಿನದ ಯುದ್ಧ ಮುಗಿಯಿತು ಎಂದು ಹೇಳಿರುವನು. "ಬಸಾತೀನುಸ್ಸಲಾತೀನ" ಕೃತಿಯ ಕರ್ತೃ ಜುಬೇರಿಯೇ ಅಲ್ಲದೆ. ಇತರೆ ವಿಜಾಪುರದ ಇತಿಹಾಸಕಾರರು ಹೇಳಿರುವಂತೆ, "ಶಿವಾಜಿಯ ಸೈನ್ಯಕ್ಕೆ ಪರಾಭವವಾಯಿತು" ಎಂಬುದಾಗಿ ಎಲ್ಲಿಯೂ ನುಸ್ರತಿ ಮಾತ್ರ ಹೇಳಿರುವುದಿಲ್ಲ.

೨೩) ಅ.ಕ್ರ ೪.೧ – ಎರಡನೆಯ ದಿನದ ಯುದ್ಧ ವರ್ಣನೆಯಿದು. ಶಿವಾಜಿಯ ಸೈನ್ಯವು ಬಾಣಗಳ ವರ್ಷವನ್ನೇ ಕರೆಯಲಾರಂಭಿಸಿತು. ಈ ವರ್ಣನೆಯಿಂದ ತೀವ್ರ ಘನಘೋರವಾಗಿ ಯುದ್ಧವು ಆರಂಭವಾದುದಾಗಿ ತಿಳಿದುಬರುತ್ತದೆ. ಅವರು ಕರೆಯುತ್ತಿದ್ದ ಈ ಬಾಣಗಳ ವರ್ಷದ ಮುಖ್ಯ ಕೇಂದ್ರ

ಬಹಲೋಲಖಾನ ಮತ್ತು ಅವನ ಆನೆಯೇ ಆಗಿತ್ತು. (ನುಸ್ರತಿ, ಪುಟ – ೨೪೮)

೨೪) ಅ.ಕ್ರ. ೪.೭ – ಜೊತೆಗಾರರೆಲ್ಲ ಆಗ್ರಹ ಪೂರ್ವಕವಾಗಿ ವಿನಂತಿಸಿಕೊಂಡಾಗ ಬಹಲೋಲಖಾನನು ಅವರಿಗೆ ಕೊಟ್ಟ ಉತ್ತರ ೨೫ನೆಯ ಸಾಲಿನವರೆಗೆ ಇದೆ.

೨೫) ಅ.ಕ್ರ. ೪.೮೯. – ನುಸ್ರತಿಯು ಐತಿಹಾಸಿಕ ಘಟನೆಯನ್ನು ಇಲ್ಲಿ ದಾಖಲಿಸಿದ್ದಾನೆ. ದಾರಾ ಶಿಕೋವನು ಆನೆಯ ಮೇಲಿಂದ ಇಳಿದು ಕುದುರೆಯನ್ನೇರಿ ಯುದ್ಧವನ್ನು ಮಾಡಲಾರಂಭಿಸಿದನು. ಆದರೆ ಅದರಿಂದ ಆದುದೇ ಬೇರೆ. ಅವನ ಸೈನಿಕರೆಲ್ಲ ಅವನು ಕೊಲ್ಲಲ್ಪಟ್ಟನೆಂದು ಭಾವಿಸಿದರು. ಪರಿಣಾಮವಾಗಿ ಅವರಲ್ಲಿದ್ದ ಧೈರ್ಯವೆಲ್ಲ ಉಡಿಗಿ ಹೋಗಿ ದಾರಾ ಪರಾಭವಗೊಂಡನು. ತಾಳಿಕೋಟಿಯ ಯುದ್ಧದಲ್ಲಿಯೂ (ಶಕ ೧೪೭೮) ಇಂಥದ್ದೇ ಘಟನೆಯೊಂದು ಜರುಗಿತ್ತು. ಅಹಮದ್ ನಗರದ ನಿಜಾಮಶಾಹನು ವಿಜಯನಗರದ ಕೊನೆಯ ಅರಸ ರಾಮರಾಜ (ಅಳಿಯ ರಾಮರಾಯ)ನ ತಲೆಯನ್ನು ಕತ್ತರಿಸಿ ಭರ್ಚಿಗೆ ಚುಚ್ಚಿ ಅದನ್ನು ಮೇಲಕ್ಕೆ ಎತ್ತಿ ಹಿಡಿದನು. ಆಗ ಅಲ್ಲಿ ಸೇರಿದ್ದ ಅವನ ಬೃಹತ್ ಸೇನೆಯ ಧೈರ್ಯವೆಲ್ಲ ಸೋರಿಹೋಗಿ ಸೋಲುಂಟಾಯಿತು. ದಾರಾ ಶಿಕೋವನ ಘಟನೆಯು ನುಸ್ರತಿಗೆ ಬಹಳ ಹತ್ತಿರದಲ್ಲಿ ಘಟಿಸಿದುದಾಗಿತ್ತು.

೨೬) ಅ.ಕ್ರ. ೪.೨೫ ರಿಂದ ೨೯. – ಆದಿಲಶಾಹಿ ಸೇನೆಯ ಪರಾಕ್ರಮವನ್ನು ಕುರಿತು ಮರಾಠರ ಪ್ರತಿಕ್ರಿಯೆ ಏನಿತ್ತು ಎಂಬುದು ಈ ಸಾಲುಗಳಲ್ಲಿ ವ್ಯಕ್ತವಾಗಿರುವುದನ್ನು ವಿಶೇಷವಾಗಿ ಡಾ.ಹಕ್ ಅವರು ಹೇಳಿದ್ದಾರೆ.

೨೭) ಅ.ಕ್ರ. ೪.೨೯ ರಿಂದ ೩೨ – ಈ ನಾಲ್ಕು ಸಾಲುಗಳಲ್ಲಿ ನುಸ್ರತಿಯು ಬಹಲೋಲಖಾನನ ಒಬ್ಬ ಸರದಾರನಾದ ಬರ್ಕಿಯನ್ನು ವರ್ಣಿಸಿದ್ದಾನೆ. ಅಂಗೈನಲ್ಲಿ ಶಿರವನ್ನು ಹಿಡಿದು ಯುದ್ಧ ಮಾಡುತ್ತಿದ್ದ ಅವನು, ಅಗ್ನಿ ಮೇಘವಾಗಿ ಶತ್ರುಗಳ ಮೇಲೆ ಅಗ್ನಿ ವರ್ಷವನ್ನೇ ಕರೆಯುತ್ತಿದ್ದನು. ತಮ್ಮ ಸೇನೆಯು ಪರಾಭವಗೊಂಡಲ್ಲಿ ತಾನು ಯಾವ ಮುಖವನ್ನು ಹೊತ್ತುಕೊಂಡು ರಾಜನೆದುರು ಹೋಗುವುದು ಎಂಬ ವಿಚಾರ ಅವನ ಮನಸ್ಸನ್ನು ತುಂಬಿತ್ತು. ಮರಾಠರ ಮದ್ದುಗುಂಡುಗಳನ್ನೆಲ್ಲ ವಶಪಡಿಸಿಕೊಳ್ಳಬೇಕೆಂಬ ಉದ್ದೇಶದಿಂದಲೇ ಅವನು ಈ ಧಾಳಿಗೆ ಕೈಹಾಕಿದ್ದನು. ಒಬ್ಬಳು ಸತಿ ಹೋಗುವ ಉದ್ದೇಶದಿಂದ ಹೇಗೆ ಅಗ್ನಿಪ್ರವೇಶ ಮಾಡುವಳೋ ಹಾಗೆಯೇ ಬರ್ಕಿಯೂ ಕಾದು ಕೆಂಪಾಗಿದ್ದ ಕಬ್ಬಿಣದ ಮೇಲೆಯೇ ಹೆಜ್ಜೆಗಳನ್ನಿಟ್ಟು ಮುನ್ನಡೆಯುತ್ತಿದ್ದ.

ಕವಿಯು ಅವನು ಕೊಲ್ಲಲ್ಪಟ್ಟ ಎಂಬ ಸಂಕೇತವನ್ನು ಇಲ್ಲಿ ಅಪ್ರತ್ಯಕ್ಷವಾಗಿ ಸೂಚಿಸಿರುವನು. 'ಸತಿ'ಯ ಉದಾಹರಣೆ ಇದನ್ನು ಇನ್ನೂ ಸ್ಪಷ್ಟಗೊಳಿಸುತ್ತದೆ. ಬರ್ಕಿಯು ಸ್ವಪಕ್ಷೀಯನೇ ಆಗಿದ್ದುದರಿಂದ ಅವನ ವಧೆಯ ವಾರ್ತೆಯನ್ನು ಹೇಳುವುದು ಕವಿಯ ಜೀವಕ್ಕೇ ಬಂದಂತಾಗಿದೆ. "ವಿಜಾಪುರದ ಮುಲ್ಲಾ ಮನ್ಸೂರನ ಮುಲ್ಲಾ ಉಸ್ಮಾನ ಎಂಬ ಹೆಸರಿನ ಮಗನ ಶಿಷ್ಯ ಶಾಹ ಮುಹಮ್ಮದನು ಈ ಯುದ್ಧದಲ್ಲಿ ಕೊಲ್ಲಲ್ಪಟ್ಟನು." ಎಂಬುದಾಗಿ ಬಸಾತೀನುಸ್ಸಲಾತೀನ ಕೃತಿಯಲ್ಲಿ ಹೇಳಲಾಗಿದೆ. (ಶಿವಚರಿತ್ರ – ವೃತ್ತ ಸಂಗ್ರಹ, ಭಾಗ – ೨, ಪುಟ – ೬೬.)

ಜಯರಾಮ ಕವಿಯು ಮುಹಮ್ಮದ ಬರ್ಕಿಯ ಪರಾಕ್ರಮ ಮತ್ತು ವಧೆಯ ಪ್ರಸಂಗವನ್ನು ವಿಸ್ತೃತವಾಗಿ ವರ್ಣಿಸಿದ್ದಾನೆ. (ಪರಿಶಿಷ್ಟ ಶ್ಲೋಕ – ೫ – ೯೩ರಿಂದ ೧೧೫ನ್ನು ನೋಡಿ.) ಈ ಮೂರು ಆಧಾರ ಗ್ರಂಥಗಳನ್ನು ವಿಸ್ತೃತವಾಗಿ ಅಭ್ಯಸಿಸಿದಾಗ ಇದು ಮುಹಮ್ಮದ ಬರ್ಕಿ ಎಂಬ ಸೇನಾಪತಿಯದೇ ವರ್ಣನೆಯೆಂದು ನಿಃಸಂದಿಗ್ಧವಾಗಿ ಭಾಸವಾಗುತ್ತದೆ. ಅವನು ಅಬಿಸೀನಿಯಾದವನೋ (ಹಬಶಿ), ಪಠಾಣನೋ ಎಂಬುದನ್ನು ಹೇಳುವುದು ಕಠಿಣ. "ಬಸಾತೀನುಸ್ಸಲಾತೀನ" ಕೃತಿಯಲ್ಲಿಯೂ ಈ ಸಂಬಂಧವಾಗಿ ಯಾವುದೇ ಮಾಹಿತಿಯಿಲ್ಲ. ಜಯರಾಮ ಕವಿಯು ಒಂದೆಡೆಯಲ್ಲಿ ಅವನನ್ನು ಹಬಶೀ (ಅ.೫–೯೩) ಎಂದಿದ್ದರೆ, ಮತ್ತೊಂದೆಡೆ ಪಠಾಣ (ಅ. ೫–೧೧೪) ಎಂದು ಉಲ್ಲೇಖಿಸಿದ್ದಾನೆ.

ಮೇಲಿನ ಚರ್ಚೆಯನ್ನು ಗಮನಿಸಿದಾಗ "ನುಸ್ರತಿಯು ಶಾಹ ಮುಹಮ್ಮದನ ಉಲ್ಲೇಖ ಮಾಡಿಲ್ಲ" ಎಂಬ ಶ್ರೀ ಗ.ಹ. ಖರೆಯವರ ಅಭಿಪ್ರಾಯ ನಿಜವೆನಿಸುವುದಿಲ್ಲ.

೨೮) ಅ.ಕ್ರ. – ೪.೫೦,೫೭,೭ ೫೮ ಮತ್ತು ೨ – ೨೫ ರಿಂದ ೪೨ : ಮುಲ್ಲಾ ನುಸ್ರತಿಯು ಇಲ್ಲಿ ಶಿವಾಜಿಯ ಸೈನ್ಯದ ಶೌರ್ಯವನ್ನು ಹೇಳಿದ್ದಾನೆ. ಯಥಾಯೋಗ್ಯ ಶಬ್ದಗಳಲ್ಲಿ "ಮರಾಠರೂ ಕೂಡ ಯಾವುದರಲ್ಲಿಯೂ ಕಡಿಮೆ ಇರಲಿಲ್ಲ. ಅವರು ಪುನಃ ಗಟ್ಟಿಯಾಗಿ ಕಾಲನ್ನೂರಿ ನೆಲದಲ್ಲಿ ಯುದ್ಧಕ್ಕೆ ತೊಡಗಿದರು." (ನುಸ್ರತಿ ಪುಟ –೨೫೮ ಮತ್ತು ಪ್ರಸ್ತಾವನೆಯನ್ನು ನೋಡಿ.)

೨೯) ಅ. ಕ್ರ ೪–೫೩, ೭೧ ಮತ್ತು ೭೪ – ಕ್ರ. ೫೩ ರಿಂದ ೭೬ರ ವರೆಗಿನ ಸಾಲುಗಳಲ್ಲಿ ಜಲಾಶಯದ ಅಥವಾ ಕೆರೆಯ ಮೇಲೆ ಮರಾಠರ ನಿಯಂತ್ರಣ ಮತ್ತು ಮೇಲುಗಡೆಯಿಂದ ಸುರಿಯುತ್ತಿದ್ದ ತಪ್ತ (ಉರಿವ) ಸೂರ್ಯನ

ಬೆಂಕಿ ಮಳೆಗಳೆರಡನ್ನು ವರ್ಣಿಸಿದ್ದಾನೆ. ಜಲಾಶಯ ಅಥವಾ ಕೆರೆಯು ಮರಾಠರ ವಶದಲ್ಲಿ ಇದ್ದುದರಿಂದಾಗಿ ವಿಜಾಪುರದ ಸೈನ್ಯಕ್ಕೆ ನೀರು ದೊರೆಯುವುದೇ ಬಹಳ ದುಸ್ತರವಾಯಿತು ಎಂಬುದಂತೂ ವಾಸ್ತವ ಸತ್ಯ. ೫೩ ರಿಂದ ೭೫ರವರೆಗಿನ ಸಾಲುಗಳಲ್ಲಿ ನುಸ್ರತಿಯು ಈ ಸಂಕಟಮಯ ಸ್ಥಿತಿಯನ್ನು ವರ್ಣಿಸಿ "ಕರಬಲಾ" (ಅರಬರ ಮುಖ್ಯ ವಧಾಸ್ಥಾನ)ದ ದಿವ್ಯ ಉದಾಹರಣೆಯನ್ನು ಕೊಟ್ಟಿದ್ದಾನೆ.

ಜಯರಾಮ ಕವಿಯೂ ಕೂಡ ಮರಾಠರು ಜಲಾಶಯ ಅಥವಾ ಕೆರೆಗಳನ್ನು ಹಿಡಿದಿಟ್ಟುಕೊಂಡಿದ್ದರೆಂದು ವರ್ಣಿಸಿದ್ದಾನೆ. (ಪರಿಶಿಷ್ಟ – ನೋಡಿ.)

ಕೃಷ್ಣಾಜಿ ಅನಂತ ಸಭಾಸದನೂ ಕೂಡ ಈ ಘಟನೆಯನ್ನು ಹೀಗೆ ಹೇಳಿದ್ದಾನೆ. "ರಾಜನ (ಶಿವಾಜಿ) ಸೈನ್ಯವು ನಾಲ್ಕು ಬದಿಯಿಂದ (ಬಹಲೋಲಖಾನನ ಸೈನ್ಯವನ್ನು) ಅವರನ್ನು ಮುತ್ತಿತ್ತು. ಮಾತ್ರವಲ್ಲ ಅವರಿಗೆ ನೀರಿಲ್ಲದ ಸ್ಥಿತಿಯನ್ನುಂಟು ಮಾಡಿ ಬಹಳವಾಗಿ ತ್ರಸ್ತಗೊಳಿಸಿದರು." (ಸಭಾಸದ ಪುಟ – ೭೫).

ಈಗ ಮುಖ್ಯವಾಗುವ ಪ್ರಶ್ನೆಯೆಂದರೆ ಈ ಜಲಾಶಯ ಅಥವಾ ಕೆರೆಯಾದರೂ ಯಾವುದು? ಎಂಬುದು. ಶಿವಚರಿತ ಸಂಶೋಧನ ವೃತ್ತ ಕೃತಿಯಲ್ಲಿ (ಶಕ ೧೮೭೮) ಪುಟ. ೨೫ರಲ್ಲಿ ಪ್ರಾ.ಗ.ಹ. ಖರೆಯುವರು ಹೇಳುವಂತೆ ಈ ಜಲಾಶಯವು ದೋರಾ ಎಂಬ ಹೆಸರಿನ ಚಿಕ್ಕ ನದಿ. ಬಿಜಾಪುರಕ್ಕೆ ಹನ್ನೆರಡು ಮೈಲು ದೂರದಲ್ಲಿರುವ ಊರು ತಿಕೋಟಾ. ಆ ತಿಕೋಟಾಕ್ಕೆ ಹದಿನೆಂಟು ಮೈಲು ದೂರದಲ್ಲಿರುವುದೇ ಉಮ್ರಾಣಿ. ತಿಕೋಟಾದ ಪಶ್ಚಿಮ ಭಾಗಕ್ಕೆ ಸುಮಾರು ಎಂಟು ಕಿ.ಮೀ. ದೂರದಲ್ಲಿ ಈ ದೋಣಿ ಎಂಬ ನದಿಯು ಹರಿಯುತ್ತದೆ. ಈ ಕೃತಿ ಹಾಗೂ ಪರ್ಣಾಲಾಖ್ಯಾನ ಕಾವ್ಯದಲ್ಲಿ ಬಂದಿರುವ ಜಲಾಶಯದ ಉಲ್ಲೇಖವೂ ಇದಕ್ಕೆ ಸಂಬಂಧಿಸಿದುದೇ ಆಗಿರಬೇಕು. ಶ್ರೀ ಖರೆಯವರು ಹೇಳುವಂತೆ ಬೇಸಿಗೆಯ ದಿನಗಳಲ್ಲಿ ಇದರೊಳಗೆ ಬಹಳ ಕಡಿಮೆ ನೀರಿರುತ್ತದೆ. ಅದೂ ಗಲೀಜು. ಈ ನದಿಯ ನೀರು ಮರಾಠರ ವಶದಲ್ಲಿತ್ತು. ಅದರಿಂದಾಗಿ ಬಹಲೋಲಖಾನನ ಸೇನೆಗೆ ಬಹಳ ದುರ್ದೆಶೆಯೊದಗಿ ಬಂದಿತು.

೩೦) ಅ.ಕ್ರ. ೫–೧ – ಡಾ. ಹಕ್ ಅವರ ಅಭಿಪ್ರಾಯದಂತೆ ಈ ಕಾವ್ಯದ ಐದನೆಯ ಹಾಗೂ ಕೊನೆಯ ಅಧ್ಯಾಯ ಇಲ್ಲಿಂದ ಆರಂಭವಾಗುವುದು. (ನುಸ್ರತಿ, ಪುಟ – ೨೬೪)

೩೧) ಅ.ಕ್ರ. ೫–೨೦ – ಭೀಕರ ಯುದ್ಧದಿಂದ ವಿಪರೀತವಾಗಿ ಬಿದ್ದ ಹೆಣಗಳ ರಾಶಿಯನ್ನು ನೋಡಿದ್ದ ನುಸ್ರತಿಯು "ಅಲೀನಾಮಾ" ಕಾವ್ಯದಲ್ಲಿ ಈ ದೃಶ್ಯವನ್ನು ಅತ್ಯಂತ ಕಾವ್ಯಮಯವಾಗಿ ಕಂಡರಿಸಿದ್ದಾನೆ. ಆದರೆ ಇಲ್ಲಿ ಮಾತ್ರ ಅದರ ವರ್ಣನೆ ಬಂದಿರುವುದು ಸಂಕ್ಷಿಪ್ತವಾಗಿ. ಅದನ್ನು ಬಿಟ್ಟರೆ "ಇದು ನಾಟಕದ ಪರದೆ" ಎಂದಷ್ಟೆ ಹೇಳಿರುವನು. ಇದನ್ನು ನೋಡಿದಾಗ ನುಸ್ರತಿಯು ಜೀವನವನ್ನು ತತ್ವಜ್ಞಾನದ ಹಿನ್ನೆಲೆಯಿಂದ ನೋಡಿರುವನೋ ಹೇಗೆ? ಎಂಬ ಅನುಮಾನವು ನಮ್ಮ ಮನಸ್ಸಿನಲ್ಲಿ ಸಹಜವಾಗಿಯೇ ಮೂಡುತ್ತದೆ. ಈ ಹೊತ್ತಿಗೆ ಅವನಿಗೆ ವಯಸ್ಸು ಹೆಚ್ಚಾಗಿಯೇ ಆಗಿರಬಹುದು! ಅವನು ತನ್ನ "ಗುಲಶನೇ ಇಶ್ಕ" ಎಂಬ ಮೊದಲ ಗ್ರಂಥವನ್ನು ಹಿಜರಿ ೧೦೬೮ (ಶಕ ೧೫೮೯)ರಲ್ಲಿಯೂ, "ಅಲೀನಾಮಾ" ಎಂಬ ಎರಡನೆಯ ಕೃತಿಯನ್ನು ಹಿಜರಿ ೧೦೭೬ (ಶಕ ೧೫೮೭)ರಲ್ಲಿಯೂ ಹಾಗೂ ಈ ಕಾವ್ಯವನ್ನು ಹಿಜರಿ ೧೦೮೩ (ಶಕ ೧೫೯೫)ರಲ್ಲಿಯೂ ರಚಿಸಿದ್ದಾನೆ. ನುಸ್ರತಿಯು ಹಿಜರಿ ೧೦೮೫ (ಶಕ ೧೫೯೭)ರಲ್ಲಿ ಖಡ್ಗದ ಏಟಿನಿಂದ ಮರಣ ಹೊಂದಿದನು. ಬಹುಶಃ ಆ ಹೊತ್ತಿಗೆ ಅವನು ವೃದ್ಧಾವಸ್ಥೆಗೆ ಕಾಲಿಟ್ಟಿರಬೇಕು.

೩೨) ಅ.ಕ್ರ. ೫–೩೭ – ಮೊದಲಿಗೇ ನುಸ್ರತಿಯು ಈ ಗ್ರಂಥದ ಹೆಸರು "ತಾರೀಖೇ–ಅಸಿಕಂದರೀ" (ಅ.೧–೭) ಎಂದಿದ್ದಾನೆ. ಆದರೆ ಇಲ್ಲಿ ಮಾತ್ರ ಅವನು ಈ ಕೃತಿಗೆ "ನವ್ವಾಬ –ನಾಮಾ" ಎಂಬುದಾಗಿ ಕರೆದಿರುವನು. ಅವನು ಬಹುಶಃ ಖವಾಸಖಾನನನ್ನು ಸಂತೃಪ್ತಗೊಳಿಸುವುದಕ್ಕಾಗಿ ಹೀಗೆ ಹೇಳಿರಬಹುದು. ಆದರೆ ಈ ಕಾವ್ಯದ ತುಂಬ ಅವನು ಸ್ತುತಿಸಿರುವುದು ಮಾತ್ರ ಬಹಲೋಲಖಾನನನ್ನು. ಸಮಕಾಲೀನ ರಾಜಕೀಯ ಸ್ಥಿತಿಯನ್ನು ನೋಡಿದಾಗ ಖವಾಸಖಾನನನ್ನು ಮರೆಯುವುದು ಸಾಧ್ಯವಾಗಲಿಲ್ಲ ಅವನಿಗೆ. ಇನ್ನು ವಿಶೇಷವಾಗಿ ಹೇಳುವುದಾದರೆ ಬಹಲೋಲಖಾನ ಮತ್ತು ಖವಾಸಖಾನರ ಶತ್ರುತ್ವವನ್ನು ನೋಡಿದಾಗಲಂತೂ ಅದು ಅಸಾಧ್ಯವೇ ಆಗಿತ್ತು.

■

*

ಪರಿಶಿಷ್ಟ

ಜಯರಾಮ ಕೃತ "ಪರ್ಣಾಲಪರ್ವತಗ್ರಹಣಾಖ್ಯಾನ" (ಕಾಲ ಶಕ.೧೫೫೫) ದ ಸಂಬಂಧಿಸಿದ ಭಾಗ.

ವಿಜಯಪುರಪತಿಸ್ತದ್ವಜ್ರಾಪಾತಾಭಿಘಾತ –
ಪ್ರಚುರತರಕಠೋರಾರಾವಮಾಕರ್ಣ್ಯ ತೂರ್ಣಮ್
ಸಚಿವಪದಮದೇನಾಪ್ಯುಯುದ್ಧತಃ ಕೃದ್ಧಪೂರ್ವಾನ್
ವಿಕಲಮತಿ ಖವಾಸಃ ಖ್ಯಾಪಯಾಮಾಸ ಮುಖ್ಯಾನ್ । ೪.೮೦

(ಶಿವಾಜಿಯು ಪನ್ಹಾಳಾ ಕೋಟೆಯನ್ನು ಆಕ್ರಮಿಸಿದ) ವಜ್ರಾಘಾತದಂತಹ ಈ ಪ್ರಖರವೂ, ಕಠೋರವು ಆದ ಸುದ್ಧಿಯನ್ನು ಅವನು ಕೇಳಿದನು. ಮೊದಲೇ ಸಚಿವಪದದ ಗರ್ವದಿಂದ ಉನ್ಮತ್ತನಾಗಿದ್ದ ಆತ ಅನಂತರ ವಿಜಾಪುರ ರಾಜ್ಯದ ಒಡೆಯನಾದ ಖವಾಸಖಾನನು ಭೀತಿಗೊಂಡು ದಿಗ್ಮೂಢನಾದನು. ತಕ್ಷಣ ತನ್ನ ಮೇಲೆ ಹಿಂದಿನಿಂದಲೂ ಕೋಪ, ದ್ವೇಷಗಳನ್ನು ಹೊಂದಿದ್ದ ವ್ಯಕ್ತಿಗಳನ್ನು ಒಳಗೊಂಡಂತೆ ಎಲ್ಲಾ ಪ್ರಮುಖರನ್ನು ತನ್ನಲ್ಲಿಗೆ ಬರುವಂತೆ ಆಮಂತ್ರಣ ಕಳುಹಿಸಿದನು.

ಅಧ್ಯಾಯ : ಐದು

ತತಸ್ತೇ ಬಹಲೋಲಾಖ್ಯಪ್ರಮುಖಾ ಮುಖ್ಯಮಂತ್ರಿಣ
ಖವಾಸಾಖ್ಯಂ ಹ ವಿಖ್ಯಾತಾಃ ಪ್ರೋಚುರಾಕ್ಷೇಪಪೂರ್ವಕಮ್ । ೧

ಬಹಲೋಲಖಾನನೇ ಮೊದಲಾದ ಪ್ರಮುಖ ಮಂತ್ರಿಗಳೆಲ್ಲರೂ ಆಗ ಖವಾಸಖಾನನನ್ನೇ ವಿಪರೀತವಾಗಿ ಆಕ್ಷೇಪಿಸಿದರು.

ತವೈವಾವಿನಯೇನೈತದತ್ಯಾಹಿತಮುಪಸ್ಥಿತಮ್
ಯತಃ ಸಖ್ಯಸ್ಯ ಭಡೂಗೋಸೌ ವಿಶ್ವರಾಜೋ ವ್ಯವಸ್ಥಿತಃ । ೨

ಈ ದುಃಸ್ಥಿತಿ ನಿರ್ಮಾಣವಾಗುವುದಕ್ಕೆ ನಿನ್ನ ಅವಿನಯ ನಡವಳಿಕೆಯೇ ಕಾರಣ. ಶಿವಾಜಿ ಮಹಾರಾಜನು ನಿನ್ನಿಂದಾಗಿಯೇ ನಮ್ಮೊಡನೆ ಮೈತ್ರಿಯನ್ನು (ತಹ) ಕಡಿದುಕೊಳ್ಳುವಂತಹ ನಿಶ್ಚಯಕ್ಕೆ ಬಂದದ್ದು.

ತ್ವಯ್ಯೆತತ್ ಸರ್ವಮಾಕ್ರಾಂತಮ್ ಮಹತಾ ಬುದ್ಧಿಶಾಲೀನಾ
ತತ್ಸಮಾತ್ಸರ್ವಮಿದಂ ರಾಷ್ಟ್ರ ದೃಶ್ಯತೇ ಮಜ್ಜನೋನ್ಮುಖಮ್ । ೩

"ನೀನು ಬಹಳ ಬುದ್ಧಿವಂತನಾಗಿದ್ದು ಕೂಡ ಮಾಡಿರುವೆಯಲ್ಲವೆ ಇಂಥ ಕೆಲಸವನ್ನು ಅದರಿಂದಾಗಿಯೇ ಈ ರಾಜ್ಯಕ್ಕೆ ವಿನಾಶಕಾಲಕ್ಕೆ ಹೋಗುವಂತಹ ಗಂಭೀರ ಪರಿಸ್ಥಿತಿಯು ಬಂದಿದೆ.

ದ್ರಷ್ಟವ್ಯಂ ತಾವದೇತಸ್ಯ ಪಿತ್ರಾ ಶಾಹಮಹೀಭುಜಾ
ಕೇನ ಕೇನಾಪ್ಯುಪಾಯೇನ ಸ್ಥಲಮೇತತ್ಸುರಕ್ಷಿರಮ್ । ೪

ಅವನ (ಶಿವಾಜಿ) ತಂದೆ ಶಹಾಜಿ ರಾಜನು ಎಂತೆಂತಹ ಉಪಾಯ ಮತ್ತು ಪರಿಕ್ರಮಗಳಿಂದ ಈ ರಾಜ್ಯವನ್ನು ರಕ್ಷಿಸಿದ್ದ ಎಂಬುದನ್ನು ಮನಸ್ಸಿಗೆ ತಂದುಕೊಳ್ಳುವುದು ಅವಶ್ಯ.

ಅನೇನೈವ ಹಿ ತಾಮ್ರಾಣಾಮುತ್ಪಾತಃ ಶಾಮಿತಃ ಸ್ಥಿತ
ವೇಲಯಾ ಸಾಗರಸ್ಯೇವ ಪ್ರೋದ್ಯುನ್ನಕ್ರೋರ್ಮಿಮಾಲಿನಃ । ೫

ನೊರೆ, ತೆರೆಗಳನ್ನು ಯುಕ್ತಗೊಳಿಸಿಕೊಂಡು ಸೊಕ್ಕೇರಿ ಮೆರೆಯುತ್ತಿದ್ದ ಸಮುದ್ರವನ್ನು ಅದರ ದಡವು ಹೇಗೆ ಉಕ್ಕಿ ಉಕ್ಕಿ ಶಮನಗೊಳಿಸುವುದೋ ಹಾಗೆಯೇ ಶಹಾಜಿಯೂ ಮೊಗಲರ ಧಾಳಿಯನ್ನು ಶಮನಗೊಳಿಸಿದ್ದನು.

ಶ್ರೂಯತೇ ಕಿಲ ಹಿಂದೂನಾ ಶಾಸ್ತ್ರೇ ಕೈಶಿಚದುದಾಹೃತಮ್
ಕಲ್ಕೀ ವಿಷ್ಣವವತಾರಣಾ ದಶಮಃ ಸಂಭವಿಷ್ಯತಿ । ೬
ಛೇತ್ಸ್ಯತೇ ತೇನ ಸರ್ವತ್ರ ವ್ಯಾಪ್ತ ಯಾವನಮಂಡಲಮ್
ತಸ್ಯೈ ಕಲ್ಕಿಕನಸ್ತಾವದ ಸಾವಗ್ರೇ ಸಮಾಗತಃ । ೭
ದೂತೋ ವೈ ಪ್ರತಿಭಾತ್ಯಸ್ಮಾನ್ಯತೋಽಸ್ಮನ್ನಿಧಿನೋದ್ಯತಃ

ಹಿಂದೂಶಾಸ್ತ್ರದಲ್ಲಿ ಬರೆದಿರುವುದನ್ನು ಯಾರಾದರೂ ಕೇಳಿರಬಹುದು. ಅದೇನೆಂದರೆ, "ಕಲ್ಕಿ" ಎಂಬ ಹೆಸರಿನಲ್ಲಿ ವಿಷ್ಣುದೇವನು ತನ್ನ ಹತ್ತನೆಯ ಅವತಾರವನ್ನು ಎತ್ತುವವನಿದ್ದಾನೆ. ಅವನು ಹೀಗೆ ಅವತಾರವನೆತ್ತಿ ಸರ್ವತ್ರ ಪಸರಿಸಿರುವ ಯವನ

(ಮ್ಲೇಚ್ಛರು, ಮುಸ್ಲಿಮರು)ರನ್ನೆಲ್ಲ ಸಮೂಲ ನಾಶ ಮಾಡುವವನಿದ್ದಾನೆ. ಬಹುಶಃ ಇವನು (ಶಿವಾಜಿ) ಆ ಕಲ್ಕಿಯ ದೂತನಿದ್ದಿರಲೂಬಹುದು. ಕಾರಣ ಅವನು ನಮ್ಮ ವಿನಾಶ ಕಾರ್ಯವನ್ನು ಈಗಾಗಲೇ ಆರಂಭಿಸಿಬಿಟ್ಟಿರುವನು.

ಅಫಜಲಾದ್ಯಾಸ್ತಥಾಸ್ಮಾಕ ಕಿಯಂತೋ ಯುದ್ಧದುರ್ಮದಾ: । ೮
ಪಾತಿತಾಃ ಪುನರಪ್ಯಂತೇ ಪಾತ್ಯಂತೇ ತೇನ ನಿತ್ಯಶಃ
ತಾಮ್ರಾಣಾಮ್ಯಪ್ಯಹೋ ತಾವಚ್ಛಾಸ್ತಿಖಾನೋ ಮಹತ್ತರಃ । ೯
ಸಾಪುತ್ರಃ ಸೋಽಪಿ ನಿರ್ಜಿತ್ಯ ಕಾಂ ದಿಶಾಂ ಪ್ರಾಪಿತಃ ಕಿಲ
ಅನ್ಯೋಽಪಿ ಬಹವೋ ಯಾತಾಸ್ಥೈವಾನ್ಯೇ ಪ್ರಯಾಂತ್ಯಮೀ । ೧೦

ಅಫಜಲಖಾನನೆ ಅಲ್ಲದೆ ನಮ್ಮ ಅನೇಕ ಶೂರ ಸೇನಾಪತಿಗಳನ್ನೆಲ್ಲ ಕೊಂದು ಹಾಕಿದ್ದಾನೆ ಆತ. ಜೊತೆಗೆ ನಿತ್ಯವೂ ಬಹಳಷ್ಟು ಬೇರೆ ಬೇರೆ ಜನರು ಕೊಲ್ಲಲ್ಪಡುತ್ತಲೇ ಇದ್ದಾರೆ. ಮೊಗಲರ ಅತ್ಯಂತ ಶ್ರೇಷ್ಠ ಸೇನಾಪತಿಯಾದ ಶಾಯಿಸ್ತಖಾನನನ್ನು ಅವನ ಪುತ್ರನೊಡನೆ ಪರಾಭವಗೊಳಿಸಿ ಎಂತಹ ದುಃಸ್ಥಿತಿ ತಂದು ಹಾಕಿದ್ದನು! ನಮ್ಮ ಅನೇಕ ಯೋಧರು ಈಗಾಗಲೇ ನಾಶವಾಗಿದ್ದಾರೆ ಮತ್ತು ನಿತ್ಯವೂ ಆಗುತ್ತಲೇ ಇದ್ದಾರೆ.

ರಣೇ ತಸ್ಮಾಜ್ಜಯ ಪ್ರಾಪ್ಯ ನಿರ್ಗತಃ ಕೋಽಪಿ ದೃಶ್ಯತೇ
ಕೇವಲ ಜಯಸಿಂಹಸ್ಯ ಸಜಾತೀಯತಯಾ ಮನಾಕ್ । ೧೧
ಪರ್ವತವ್ಯತ್ಯಯಾತ್ತೇನ ಜಯಾಭಾಸಃ ಪ್ರದರ್ಶಿತಃ
ಆಮಿಶ ಬಡಿಶೇ ಬದ್ಧವಾ ಮತ್ಸ್ಯೋ ಯುದ್ಧನ್ನಿಗೃಹ್ಯತೇ । ೧೨
ತದ್ಧದೇತೇನ ತೇಷಾಮಪ್ಯಾಹೃತಾಃ ಪರ್ವತಾ ಅಮೀ

ರಣರಂಗದಲ್ಲಿ ಅವನ ಮೇಲೆ ವಿಜಯ ಸಾಧಿಸಿ ಹೊರ ಬಂದಿರುವವರು ಯಾರಾದರೂ ಇರುವರೆ? ಕೋಟೆಗಳಿಗೆ ದುಃಸ್ಥಿತಿಯೊದಗುವ ಪರಿಸ್ಥಿತಿ ಬಂದಾಗ ಮಾತ್ರವೇ ಆತ ತನ್ನ ಸಜಾತಿಯವನಾಗಿದ್ದ ಜಯಸಿಂಹನೊಬ್ಬನಿಗೆ ಮಾತ್ರ ಕೊಂಚ ಯಶ ದೊರೆಯುವಂತೆ ಮಾಡಿದ್ದನು ಅಷ್ಟೇ. ಆದರೆ ಗಾಳಕ್ಕೆ ಹುಳುವನ್ನು ಸಿಕ್ಕಿಸಿ, ಮೀನಿಗೆ ಆಮಿಷವನ್ನೊಡ್ಡಿ ಹಿಡಿಯುವಂತೆ ಅವನು ತನ್ನ ದುರ್ಗವನ್ನು ಗಬಕ್ಕನೆ ಪುನಃ ವಶಪಡಿಸಿಕೊಂಡನು.

ತತ್ರೈಕಸ್ಮಿನ್ಹಿ ಸಹ್ಯಾದ್ರೌ ಕದನ ಯದಭೂಚ್ಛರುತಮ್ । ೧೩

ಯತ್ರಾಯಂ ಮಾಮಕೋ ಬಂಧುರ್ನಿಬದ್ಧೋ ಬಂಧುಭಿಃ ಸಹ
ಅನ್ಯೇಪ್ಯಹೋ ಮಹತ್ಕರ್ಮಸಿಂಹಾದ್ಯಾಸ್ತದ್ರಣಾಡಂಗಣೇ । ೧೪

ಏಕೇ ಶೃಡಖಲಯಾ ಬದ್ಧಾಶ್ಚರಣೇ ವಾರಣ ಇವ
ಯಸ್ಮಿನ್ನಮರಸಿಂಹೋಪಿ ಮಾರಿತಃ ಸಹ ಸೈನಿಕಃ । ೧೫

ಒಮ್ಮೆ ಸಹ್ಯಾದ್ರಿ ವಲಯದಲ್ಲಿನ ಕೋಟೆಯೊಂದರಲ್ಲಿ ಯುದ್ಧವು ಜರುಗಿತ್ತು. ಆಗ ನನ್ನ ಸಹೋದರ ಮತ್ತೋರ್ವ ಯೋಧನೊಡನೆ ಅವನ ಕೈಗೆ ಸಿಕ್ಕಿಬೀಳಲು, ಅವನನ್ನು ಬಂಧಿಯಾಗಿ ಸೆರೆಯಲ್ಲಿ ಇಟ್ಟಿದ್ದನು ಆತ. ಹಾಗೆಯೇ ಆನೆಗಳಿಗೆ ಸರಪಳಿ ಬಿಗಿಯುವಂತೆ ಮೋಹಕಮ ಸಿಂಹ ಮತ್ತಿತರೆ ಶೂರರು ವೀರರುಗಳ ಕಾಲುಗಳನ್ನು ಆ ರಣರಂಗದಲ್ಲಿ ಒಂದೇ ಸರಪಳಿಯಿಂದ ಬಿಗಿದು ಸೆರೆಗೆ ಹಾಕಿದ್ದನು. ಅಮರಸಿಂಹನು ಇತರೆ ಸೈನಿಕರೊಂದಿಗೆ ಕೊಲ್ಲಲ್ಪಟ್ಟದ್ದು ಕೂಡ ಅದೇ ಕಾಲದಲ್ಲಿ.

ನಬಾಬುರಹಮಿತ್ಯೇವಮುಚ್ಚೈಃ ಕ್ರೋಶನ್ ವ್ಯವಸ್ಥಿತ:
ತಥೋಪ್ಯಧಿಕಮೇತಸ್ಮಿನ್ನಿಪೇತುಸ್ತಸ್ಯ ಸೈನಿಕಾಃ । ೧೬
ಪ್ರವದಂತೋ ನಬಾಬಶ್ಚೇದ್ದಂತವ್ಯಃ ಶಾಸ್ತಿಖಾನವತ್
ಹಾಸ್ಯಮಾಯತ್ಯಹೋ ಸ್ಮಾಕಮೌದಾರಮೀಯಪೌತ್ರಕಃ । ೧೭
ಶಿಖಾಸೂತ್ರಂ ದರ್ಶಯಿತ್ವಾ ಸ್ವಾತ್ಮಾನಂ ಪ್ರವಿಮುಕ್ತವಾನ್
ಸರ್ಜಾಖಾನಾದಯೋಪ್ಯನ್ಯೇ ತಜಿತಾಸ್ತಸ್ಯ ಸೈನಿಕೈಃ । ೧೮

"ನಾನಹೆನು ನಬಾಬ" (ನಾನು ನವಾಬನಾಗಿರುವೆನು) ಎಂದು ಆತನು ಕೂಗಿ ಹೇಳಿದನು. ಆಗ "ನೀನು ನವಾಬನಾಗಿದ್ದರೆ, ನಿನ್ನನ್ನು ಶಾಯಿಸ್ತಾಖಾನನ ಹಾಗೆ ಹೊಡೆದು ಹಾಕುವುದು ಅವಶ್ಯ" ಎಂದು ಹೇಳಿ ಅವನ ಸೈನಿಕರೆಲ್ಲ ಒಮ್ಮೆಗೆ ಧಾವಿಸಿ ಧಾಳಿ ಮಾಡಲಾರಂಭಿಸಿದರು ಅವನ ಮೇಲೆ. ಆಗ ನಮ್ಮ ಉದಾರಾಮನ ಮೊಮ್ಮಗನು ತನ್ನ ಜುಟ್ಟು (ಶಿಖೆ) ಮತ್ತು ಜನಿವಾರವನ್ನು ಅವರಿಗೆ ತೋರಿಸಿ ತನ್ನನ್ನು ಉಳಿಸಿಕೊಂಡದ್ದು ಎಂಥ ಲಜ್ಜೆಗೇಡಿನ ಸಂಗತಿಯಲ್ಲವೇ? ಇತ್ತ ಅವನ ಸೈನಿಕರು ಸರ್ಜಾಖಾನ್ ಮತ್ತು ಇತರರನ್ನು ಪಾರುಪತ್ಯೆ ಮಾಡುತ್ತಿದ್ದರು.

ತೇಪಿ ಸಂತ್ಯಕ್ತಶಸ್ತ್ರಾಸ್ತ್ರಾಃ ಕಿಮನ್ಯತ್ರೋಚ್ಯತಾಮಿಹ
ಮುಲಾಹಯಾಖ್ಯಸ್ಯ ಜಿತಃ ಕುಂಜರೋ ಜುನ್ನರಾಹವೇ । ೧೯

ಅಂಥ ಸಮಯದಲ್ಲಿ ಅವರೂ ಕೂಡ ತಮ್ಮ ಶಸ್ತ್ರಗಳನ್ನು ಕೆಳಗಿಟ್ಟರು. ಇನ್ನು ಇದಕ್ಕಿಂತಲೂ ಹೆಚ್ಚೇನು ಹೇಳಬೇಕು? ಜುನ್ನರನಲ್ಲಿಯ ಯುದ್ಧದಲ್ಲಿ ಆತ ಮುಲ್ಲಾ ಹಯಾಖಾನನ ಆನೆಯನ್ನು ವಶಪಡಿಸಿಕೊಂಡಿದ್ದನು.

ಕಥಮೇತಾದೃಶಸ್ತಾವತ್ಸಖ್ಯಾತ್ ಪ್ರಖ್ಯಾವಿತಸ್ತವಯಾ
ಇದಾನೀ ಗಚ್ಛ ಯಧ್ಯಸ್ವ ಕಿಮಸ್ಮಾನ್ ಪರಿಪೃಚ್ಛಸೇ । ೨೦

ಪರಿಸ್ಥಿತಿ ಹೀಗಿರುವಾಗ ಶಿವಾಜಿಯಂಥವನು ನಮ್ಮೊಡನೆ ಹೊಂದಿದ್ದ ಸ್ನೇಹ(ತಹ)ವನ್ನು ಕಡಿದುಕೊಳ್ಳುವ ಪರಿಸ್ಥಿತಿಯನ್ನು ನಿರ್ಮಿಸಿಕೊಂಡುದೇಕೆ? ಈಗ ಸ್ವತಃ ನೀನೇ ಹೋಗಿ ಅವನೊಂದಿಗೆ ಯುದ್ಧ ಮಾಡು? ಅದನ್ನು ಬಿಟ್ಟು ನಮ್ಮನ್ನು ಕೇಳುತ್ತಿರುವುದಾದರೂ ಏಕೆ!"

ತತಃ ಪ್ರತ್ಯುತ್ತರಂ ತೇಭ್ಯಃ ಖವಾಸಾಖ್ಯೋತಿದುರ್ಮನಾಃ
ದೀರ್ಘಮುಷ್ಣಾಂಚ ನಿಶ್ವಸ್ಯ ದದೌ ಪ್ರೀತಿಕರಂ ಯಥಾ । ೨೧

ಖವಾಸಖಾನನು ಇದನ್ನು ಕೇಳಿದೊಡನೆ ನಿಟ್ಟುಸಿರು ಬಿಡುತ್ತಾ ಅವರಿಗೆ ಸಮಾಧಾನಗೊಳಿಸಲು ಎಂದು ಹೀಗೆ ಉತ್ತರ ಕೊಟ್ಟನು.

ತಥ್ಯಮೇವ ಭವದಿಭರ್ಯರ್ಣಂತ್ ಪ್ರೋಚ್ಯತೇಸ್ಮತ್ಪ್ರಮಾದಜಮ್
ಕರ್ಮ ತಾವತ್ ಪ್ರದಕ್ಷ್ಯಾಮಿ ಭವತಾಂ ಶಾಸನೇ ಸ್ಥಿತಃ । ೨೨
ಭವದಿಭಃ ಪಾಲಿತಂ ಪೂರ್ವಮಿದಾನೀಮಪಿ ಪಾಲ್ಯತಾಮ್
ಪಾತಶಾಹೋಪಿ ಬಾಲೋಸಾರ್ವಾಪತಃ ಶ್ರೀಮತಾಂ ಕರೇ। ೨೩

"ನಾನು ಮಾಡಿದ ಪ್ರಮಾದದಿಂದಾಗಿಯೇ ಈ ಎಲ್ಲಾ ಅನರ್ಥಗಳು ಉಂಟಾದುವೆಂದು ನೀವು ಹೇಳುತ್ತಿರುವುದು ನಿಜವಾಗಿದೆ. ನಿಮ್ಮ ಅನುಮತಿಯನ್ನು ಬೇಡಿ ಈ ಮಾತನ್ನು ಹೇಳಲು ಇಚ್ಛಿಸುತ್ತೇನೆ. ಅದೇನೆಂದರೆ, ಈಗ ನಾನು ನಿಮಗೆ ಅಧೀನನಾಗಿರುವೆ. ಈ ಮುನ್ನ ಹೇಗೆ ನೀವು ಇದನ್ನು ಕಾಪಾಡಿಕೊಂಡು ಬಂದಿರೋ ಹಾಗೆಯೇ ಈಗಲೂ ಮುಂದುವರೆಸಿಕೊಂಡು ಹೋಗಿರಿ. ಈ ಚಿಕ್ಕ ವಯಸ್ಸಿನ ಬಾದಶಾಹನನ್ನು ನಿಮ್ಮೆಲ್ಲರ ಕೈಗೆ ಒಪ್ಪಿಸಲಾಗಿರುವುದು ನಿಜವಲ್ಲವೆ?

ಯಥಾ ರಾಜ್ಯಮಿದಂ ಸರ್ವ ಪ್ರಭವೇತ್ತದ್ವಿಧೀಯತಾಮ್
ತತಸ್ತೇತ್ಯಂತಸಂದುಷ್ಟಾಃ ಪುಷ್ಟಾಂಸ್ತದ್ವಾಕ್ಯಗೌರವಾತ್ । ೨೪

ಈ ರಾಜ್ಯದ ಉತ್ಕರ್ಷಕ್ಕಾಗಿ ಈಗ ನಾವೆಲ್ಲರೂ ಏನಾದರೂ ಮಾಡುವುದು ಅಗತ್ಯವಾಗಿದೆ. ಅವನ ಈ ಗೌರವಪೂರ್ಣ ಉದ್ಗಾರದಿಂದ ಅತ್ಯಂತ ದುಷ್ಟ ಸರದಾರರೂ ಸಂತುಷ್ಟರಾದರು.

ಪ್ರೋಚುಃ ಪ್ರಸ್ತುತಕರ್ತವ್ಯೇ ಪ್ರಸ್ಫುರದಬುದ್ಧಯಸ್ತದಾ
ಬಾಹುಲೋಲೋ ಹ್ಯಾಸೌ ತಾವದಸ್ಮಾಸು ಬಲವತ್ತರಃ । ೨೫

ನಂತರ ಅತ್ಯಂತ ಉತ್ಸಾಹದಿಂದ, ಈಗ ಮುಂದೆ ಮಾಡಬೇಕಾದುದೇನು ಎಂಬುದನ್ನು ಯೋಚಿಸಿದರು. ಕೊನೆಗೆ ಅವರು ಹೀಗೆ ತಮ್ಮ ನಿರ್ಣಯವನ್ನು ಹೇಳಿದರು: "ನಮ್ಮೆಲ್ಲರಿಗಿಂತಲೂ ಬಲಿಷ್ಠನಾದ ವ್ಯಕ್ತಿ ಎಂದರೆ ಬಹಲೋಲಖಾನ."

ಯಂ ಸಮಾಶ್ರಿತ್ಯ ರಾಜ್ಯಶ್ರೀಃ ಸ್ಥೈರ್ಯಂ ಪ್ರಾಪ್ಯ ವಿರಾಜತೇ
ಅನೇನೈವ ಜಿತ ಸರ್ವಂ ಕ್ರೂರಂ ಕರ್ಣಾಟಮಂಡಲಮ್ । ೨೬

ಅವನ ಸಾಮರ್ಥ್ಯದಿಂದಾಗಿಯೇ ರಾಜ್ಯಶ್ರೀಗೆ ಸ್ಥೈರ್ಯವು ಲಭಿಸಿ ಅವಳು ಶೋಭಾಯಮಾನಳಾಗಿದ್ದಾಳೆ. ಅವನೇ ಕರ್ನಾಟಕ ದೇಶದ ಕ್ರೂರಿಗಳನ್ನೆಲ್ಲರನ್ನೂ ಗೆದ್ದಿರುವವನು.

ಅಸ್ಮೈ ರತ್ನಾದಿಕಂ ಯದ್ಯಾದ್ ಗಜವಾಜಿಮೃಗಾದಿಷು
ಉತ್ತಮಂ ನರನಾರೀಷು ತತ್ತದ ಭೂಪೈಃ ಪ್ರದೀಯತೇ । ೨೭

ಅವನಿಗೆ ರಾಜನ ವತಿಯಿಂದ ರತ್ನಗಳು, ಆನೆಗಳು, ಕುದುರೆಗಳು, ಮೃಗಗಳೇ ಮುಂತಾದುವನ್ನೆಲ್ಲ ನೀಡುವುದು. ಹಾಗೆಯೇ ಸ್ತ್ರೀ-ಪುರುಷರಲ್ಲಿ ಯಾವ್ಯಾವುದೆಲ್ಲ ಉತ್ಕೃಷ್ಟವಾಗಿರುವುದೋ ಅದೆಲ್ಲವನ್ನು ಅವನಿಗೆ ಕೊಡಬೇಕು.

ಅಸ್ಮಾದ್ಭಯಮನುಪ್ರಾಪ್ಯ ಶತ್ರವಃ ಶಸ್ತ್ರಮುಜ್ಜಹುಃ
ತಸ್ಮಾತ್ಸರ್ವಮಿದಂ ಕಾರ್ಯ ಏತಸ್ಮಿನ್ನೇವ ತಿಷ್ಠತಿ । ೨೮

ಅವನ ಭಯದಿಂದಾಗಿಯೇ ಶತ್ರುಗಳು ತಮ್ಮ ಶಸ್ತ್ರಗಳನ್ನೆಲ್ಲ ಕೆಳಗೆ ಹಾಕಿ ಬಿಟ್ಟಿರುವರು. ಹಾಗಾಗಿ ಈಗ್ಗೆ ಸಂಪೂರ್ಣ ಕಾರ್ಯಭಾರವೆಲ್ಲ ಅವನ ಮೇಲೆಯೇ ಇರುವುದು.

ಅಸ್ಯ ಸರ್ವ ಹಿ ಕರ್ತೃತ್ವಮಸ್ಮದ್ರಾಷ್ಟ್ರವಿವರ್ಧಕಮ್
ಅತಃ ಸಂಪ್ರಾರ್ಥ್ಯಸೇಸ್ಮಾಭಿಃ ಶಿವರಾಜಭಯಾದಿತೈಃ । ೨೯

ಅವನ ಕರ್ತೃತ್ವದಿಂದ ನಮ್ಮ ರಾಜ್ಯ ಉತ್ಕರ್ಷಗೊಳ್ಳುವುದು ಖಚಿತ. ಹಾಗಾಗಿ ಶಿವಾಜಿ ರಾಜನಿಂದ ಭಯಭೀತರಾಗಿರುವ ನಾವೆಲ್ಲರೂ ನಿನ್ನಲ್ಲಿ (ಬಹಲೋಲಖಾನ್) ವಿನಂತಿ ಮಾಡಿಕೊಳ್ಳುವುದೇನೆಂದರೆ.

ವಿಜಾಪುರಮಿದಂ ತಸ್ಮಾದ್ರಕ್ಷಣೀಯಂ ಭವೇದ್ಯದಿ
ವಿಲಂಬಸ್ತಾಹ ಗಂತವ್ಯೇ ನ ವಿಧೇಯಸ್ತ್ವಯಾಧುನಾ । ೩೦

ವಿಜಾಪುರವನ್ನು ಆತನಿಂದ (ಶಿವಾಜಿ) ರಕ್ಷಿಸುವುದಕ್ಕಾಗಿ ನೀನು ಸೈನ್ಯದೊಂದಿಗೆ ಹೋಗಿ ಅವರೊಡನೆ ಹೊರಾಡುವ ಕಾರ್ಯದಲ್ಲಿ ಇನ್ನು ಬಹಳ ವಿಳಂಬ ಮಾಡುವುದು ಬೇಡ.

ಹಸ್ತಿದ್ವಯಂ ಮದೋನ್ಮತ್ತಂ ತಥಾ ವಾಜಿಚತುಷ್ಟಯಮ್
ವಸ್ತ್ರಾಣಿ ಚ ಮಹಾರ್ಹಾಣಿ ಶಸ್ತ್ರಾಣಿ ವಿವಿಧಾನ್ಯಪಿ । ೩೧

दत्वा प्रादापयंस्तस्मै तद्बालनृपतेः करात्
पर्णान्युत्तमवर्णास्ते मंत्रिणस्तन्महीपतेः । ३१

ಎರಡು ಮದೋನ್ಮತ್ತ ಆನೆಗಳು, ನಾಲ್ಕು ಕುದುರೆಗಳು, ಬೆಲೆಬಾಳುವ ವಸ್ತ್ರಗಳು ಹಾಗೂ ಅನೇಕ ಬಗೆಯ ಶಸ್ತ್ರಗಳನ್ನು ಅವನಿಗೆ ಒದಗಿಸಲಾಯಿತು. ಅಲ್ಲದೆ, ಬಾದಶಾಹನ ಜೇಷ್ಠ ಮಂತ್ರಿಗಳೆಲ್ಲರೂ ಸೇರಿ ಚಿಕ್ಕ ವಯಸ್ಸಿನ ರಾಜನ ಕೈಯಿಂದ ಅವನಿಗೆ ವೀಳ್ಯವನ್ನು ಕೊಡಿಸಿದರು.

प्रणम्य शिरसा तस्मान्निःसृतः सोऽतिविश्रुतः
कारयन् दुंदुभेर्ध्वानं प्रस्थानसमयोचितम् । ३३

ಬಹಳ ಪ್ರಖ್ಯಾತನಾಗಿದ್ದ ಬಹಲೋಲಖಾನನು ಆಗ ಅವರಿಗೆ (ರಾಜನಿಗೆ) ವಂದಿಸಿ ಅಲ್ಲಿಂದ ಹೊರಟನು. ಹೋಗುವಾಗಲೇ ಅವನು ರಣದುಂದುಭಿಯನ್ನು ಜೋರಾಗಿ ಮೊಳಗಿಸಿದನು.

ततः क्रोशत्रयादूर्ध्वं त्रिकोटनगरोत्तमम्
प्रस्थितः सेनया सार्धं धुन्वन्नत्युन्नतं धनुः । ३४

ತನ್ನ ಕೈಯಲ್ಲಿ ಹಿಡಿದಿದ್ದ ಧನಸ್ಸನ್ನು ಝೇಂಕರಿಸುತ್ತ ತನ್ನ ಸೈನ್ಯದೊಡನೆ ಅವನು ವಿಜಾಪುರಕ್ಕೆ ಮೂರು ಹರಿದಾರಿ (ಕೋಸಃ ಒಂದು ಹರಿದಾರಿಗೆ ಮೂರು ಮೈಲು) ದೂರದಲ್ಲಿದ್ದ ತಿಕೋಟಾ ಎಂಬ ನಗರದ ಕಡೆಗೆ ಹೊರಟನು.

कर्णालनिनदस्तावद् दुंदुभिध्वानमिश्रितः ।
गजाश्वरथनिर्घोषैर्वर्धितः शत्रुतर्जनः । ३५
प्रववौ तत्प्रयाणेऽसौ नभो विदलयन्निव ।
सुरक्षोदितमश्वानां भूतलादनिलोत्थितम् । ३६
रेणुमंडलमाकाशादवकाश निराकरोत् ।
यत्राभूत्सूर्यवाहनां धावनाय क्षमाक्षमा । ३७

ರಣಭೇರಿಗಳು ಮತ್ತು ನಗಾರಿಗಳ ಶಬ್ಧಗಳು ಮಿಶ್ರಣಗೊಂಡುದಲ್ಲದೆ, ಅಲ್ಲಿದ್ದ ಆನೆ, ಕುದುರೆ, ರಥಗಳ ಶಬ್ದದಿಂದ ಇನ್ನೂ ಹೆಚ್ಚಾಗಿ ಶತ್ರುವನ್ನು ಭಯಕಂಪಿತಗೊಳಿಸುವಂಥ ಒಂದು ಪ್ರಚಂಡ ಧ್ವನಿಯೇ ನಿರ್ಮಾಣಗೊಡಿತು. ಹಾಗೆ ಪ್ರಯಾಣ ಹೊರಟಿದ್ದುದು ಆಕಾಶವನ್ನೇ ಭೇದಿಸಲೂ ಹೋಗುತ್ತಿರುವುದೋ ಏನೋ ಎಂಬಂತೆ ಭಾಸವಾಗುತ್ತಿತ್ತು ಆ ಪ್ರಚಂಡ ಧ್ವನಿ. ಕುದುರೆಗಳ ಖುರಪುಟದಿಂದ ಎದ್ದ ಧೂಳು ಗಾಳಿ ಬೀಸುತ್ತಿದ್ದಂತೆ ಮೇಲೇರಿ ಸಂಪೂರ್ಣ ಆಕಾಶವನ್ನೆಲ್ಲ ಧೂಳಿನ ತೆರೆಯಾಗಿ ಆವರಿಸಿತು. ಅದರಿಂದಾಗಿ ಸೂರ್ಯನ ಕುದುರೆಗಳು ಮುನ್ನಡೆಯುವುದಕ್ಕೆ

ಕೊಂಚ ಭೂಮಿ ಸಹ ಉಳಿದಿರಲಿಲ್ಲ.

ತಸ್ಯಾಂ ಪ್ರಧಾ ವತ್ಯೈರ್ನಿತಸ್ತದ್ಧಯೈಃ ಕುತ್ರಚಿದ್ರವಿಃ
ಕವಯಸ್ತರ್ಕಯಾಂ ಚಕ್ರುರಿತ್ಥಮ್ ತೇ ಚಕ್ರವರ್ತಿನ । ೩೮

ಅತೀವ ರಭಸದಲ್ಲಿ ಧಾವಿಸುತ್ತಿದ್ದ ಅವನ ಕುದುರೆಗಳು ಆ ಸಮಯದಲ್ಲಿ ಸೂರ್ಯನನ್ನು ತೆಗೆದುಕೊಂಡು ಹೋಗಿ ಬೇರೆಲ್ಲಿಗೋ ಬಿಟ್ಟು ಬಂದು ಬಿಟ್ಟಿರುವುವೋ ಹೇಗೆ ಎಂಬುದು ಕವಿ ಕಲ್ಪನೆ. ನಿಜವಾಗಿಯೂ ಹಾಗೆಯೇ ಇದ್ದಿರಬಹುದೇ ಎಂದು ಕವಿ ಚಕ್ರವರ್ತಿಗಳು ಭಾವಿಸಿರುವರು.

ಏವಂ ದಿನದ್ವಯೇನ್ಯೆವ ಉಮ್ರಾಣಿಗ್ರಾಮಸನ್ನಿಧೌ
ಯಾವದಾಗಮ್ಯತೇ ತಾವತ್ಪತ್ರಮಪ್ಯೇವಮಾಗತಮ್ । ೩೯

ಹೀಗೆ ರಭಸವಾಗಿ ಕ್ರಮಿಸುತ್ತಾ ಅವರೆಲ್ಲ ಎರಡು ದಿನಗಳ ನಂತರ ಉಮ್ರಾಣಿ ಎಂಬ ಗ್ರಾಮಕ್ಕೆ ಬಂದು ತಲುಪಿದರು. ಅಲ್ಲಿಗೆ ತಲುಪುತ್ತಲೇ ಅವನಿಗೆ ಒಂದು ಪತ್ರವು ದೊರಕಿತು.

ಮುಜಾಫರಮಲೀಕೋಸೌ ಸರ್ಜಾಖಾನಸಮನ್ವಿತಃ
ರಾಂಗಣೀಯನಗಪ್ರಾಂತೇ ಸೇನಯಾ ಸಹ ತಿಷ್ಠತಿ । ೪೦
ಅಸಾವತಿಬಲೋಪೇತಃ ಸಹಾಯ್ಯಾರ್ಥ ನಿಗೃಹ್ಯಾತಾಮ್

(ಪತ್ರದ ಒಕ್ಕಣೆ ಹೀಗಿತ್ತು) ಸರ್ಜಾಖಾನನೊಂದಿಗೆ ಮುಜಫರ ಮಲಿಕ ಎಂಬ ಸೇನಾಪತಿಯು ನಿಮ್ಮನ್ನು ಸೇರಿಕೊಳ್ಳಲೆಂದು ತನ್ನ ಸೈನ್ಯದೊಡನೆ ರಾಂಗಣಾ ಕೋಟೆಯ ಬಳಿ ಬೀಡುಬಿಟ್ಟಿದ್ದಾನೆ. ಬಹಳ ಬಲಿಷ್ಠನಾದ ಅವನನ್ನು ನಿನ್ನ ಸಹಾಯಕ್ಕೆ ಸೇರಿಸಿಕೊಳ್ಳುವುದು.

ತಥಾ ಸಿದ್ಧೀ ಮಸೂದೋಸೌ ಹ್ಯಾದವಸ್ಯಾಂ ನಿವೇಶಿತಃ । ೪೧
ಕರನೋಲಕರ ಸ್ತಾವದ ಬದೂಲಾಜಿಜ್ಞೋಪ್ಯಸೌ
ತಥಾ ಖಿದಿರಖಾನೋಸೌ ಪಣಿರಿತ್ಯಭಿಧೀಯತೇ । ೪೨

ನಲದುರ್ಗತಲಾದವಾಘಗವಂ ಸೇನಾಪತಿತ್ರಯೀ
ಕ್ರಯೀಕರ್ತುಮಿವಾನ್ಯದ್ಧಿ ಸೈನ್ಯಂ ದೈಗ್ಯವಿರ್ವಾಜತಮ್ । ೪೩

ಏತೈಸ್ತ್ರಿಭಿರ್ದಿಲೇಲಾಖ್ಯಖಾನೇನ ಸಹ ಶೀಘ್ರತಃ
ಸಂಗಮ್ಯೋತ್ಯೋಚದಾನಾದಿ ದತ್ತ್ವಾ ಸೈನ್ಯಂ ಪ್ರಯಾಚ್ಯತಾಮ್ । ೪೪

ಹಾಗೆಯೇ ಅದವನಿಯಲ್ಲಿ (ಆದೋನಿ) ಸಿದ್ಧಿ ಮಸೂದ್, ಕರ್ನೂಲ್‌ನಲ್ಲಿ ಅಬ್ದುಲ್ ಅಜೀಜ್ ಮತ್ತು ನಳದುರ್ಗ ಕೋಟೆಯ ಪಕ್ಕದಲ್ಲಿ ಖಿದಿರಖಾನ–ಅವನನ್ನು

"ಪಣೀ" (ಜಿದ್ದಿನವ) ಎಂದು ಕರೆಯಲಾಗುವುದು– ಈ ಮೂವರು ಸೇನಾಪತಿಗಳಿದ್ದಾರೆ. ಇನ್ನೂ ಹೆಚ್ಚಿನ ಸೇನೆಯು ಬೇಕಾದಲ್ಲಿ ಈ ಮೂವರೂ ಹೋಗಿ ದಿಲೇಲಖಾನನನ್ನು ಭೇಟಿಯಾಗಿ ಅವನಿಗೆ ಹಣವನ್ನು ಕೊಟ್ಟರೆ ಅವನು ಸೈನ್ಯವನ್ನು ಕಳಿಸುತ್ತಾನೆ.

ತತ್ಸೈನ್ಯಸಹಿತಾಃ ಸರ್ವೇ ಭವಂತೋಽಪಿ ಸ್ವಸೇನಯಾ
ಬಹಲೋಲ ಸಹಾಯಾರ್ಥ ಮಾಯಾಂ ತ್ವಿತ್ಯಪರಾರ್ಥಕಃ । ೪೫

ಚಾರೋಽಸೌ ಪ್ರೇಕ್ಷಿತಸ್ತಸ್ಮಾತ್ ಸರ್ವೇ ಸಂಭೂಯ ಯುಕ್ತಿತಃ
ಜೇತವ್ಯಃ ಶತ್ರುರಸ್ಮಾಕಂ ಶಾಹರಾಜಸುತಃ ಶಿವಃ । ೪೬

ನಮ್ಮ ಸೇನೆಯೊಂದಿಗೆ ಆ ಸೈನ್ಯವನ್ನೂ ಸೇರಿಸಿಕೊಂಡು ನೀವುಗಳೆಲ್ಲರೂ ಬಹಲೋಲಖಾನನ ಸಹಾಯಕ್ಕೆ ಹೋಗುವುದು. ಅದಕ್ಕಾಗಿಯೇ ಈ ದೂತನನ್ನು ವಿಶೇಷವಾಗಿ ಕಳುಹಿಸಿರುತ್ತೇನೆ ನಿಮ್ಮಲ್ಲಿಗೆ. ನೀವೆಲ್ಲ ಒಟ್ಟುಗೂಡಿ ನಮ್ಮ ಶತ್ರುವಾದ ಶಹಜಿರಾಜನ ಮಗ ಶಿವಾಜಿಯನ್ನು ಯುಕ್ತಿಯಿಂದ ಗೆಲ್ಲುವುದು.

ತತಃ ಶಿವ ಮಹೀಪಾಲಸ್ತಾಲಾಡಕಾನುಜಬುದ್ಧಿಮಾನ್
ಕಾಲಸತ್ಪುರುಷ ಭೂಪಾನಾಂ ಪನಾಲಾಧಃ ಸ್ಥಿತಾನ್ ಸ್ವ ಕಾನ್ । ೪೭

ಪ್ರತಾಪಾನಂದ ರಾಯಾದಿನಾಹೂಯ ರಹಸಿ ಸ್ಥಿತಃ
ಬಹಲೋಲೋ ಹ್ಯಾಯಂ ಯಾತಿ ಭವದಭಿಸ್ತಚ್ಚ ಸಂಶ್ರುತಮ್ । ೪೮

ಇತ್ತಕಡೆ ಬಲರಾಮನ ತಮ್ಮನಾದ ಶ್ರೀಕೃಷ್ಣನಂತೆಯೇ ಬುದ್ಧಿಶಾಲಿಯೂ, ಪಠಾಣ ರಾಜರಿಗೆಲ್ಲ ಯಮಸ್ವರೂಪಿಯೂ ಆಗಿದ್ದ ಶಿವಾಜಿಯು ಪನ್ಹಾಳ ಕೋಟೆಯ ಕೆಳಭಾಗದಲ್ಲಿ ಇಳಿದುಕೊಂಡನು. ಮುಂದೆ ಅವನು ಪ್ರತಾಪರಾವ್ ಮತ್ತು ಆನಂದರಾವರೇ ಮೊದಲಾದ ಸೇನಾಪತಿಗಳಿಗೆ ತನ್ನಲ್ಲಿಗೆ ಬರುವಂತೆ ಹೇಳಿಕಳುಹಿಸಿದನು. ಅವರು ಬಂದೊಡನೆ ಸಕಲವಿಚಾರ ವಿನಿಮಯವಾದ ಮೇಲೆ ಹೀಗೆ ಹೇಳಿದನು. "ಬಹಲೋಲಖಾನನು ನಮ್ಮ ಮೇಲೇರಿ ಬರಲೆಂದು ಹೊರಟಿರುವ ಸಂಗತಿಯನ್ನು ನೀವು ಕೇಳಿಯೇ ಇದ್ದೀರಿ.

ಕಥಮೇ ತೇನ ಯೋದ್ಧಮ್ಯಮಸ್ಮದೀಯೈಸ್ತ್ವರಾನ್ವಿತೈಃ
ತತಸ್ತೇತ್ಯಂತ ವಿನಯಾದಿದಮೂಚುನ್ನೃಪೋತ್ತಮಮ್ । ೪೯

ನಿದೇಶಕಾರಿಣೋ ಹ್ಯಸ್ಮಾತ್ ಸ್ವಾಮಿಭಿಃ ಕಿಂ ವಿಚಾರ್ಯತೇ ।

"ನೀವು ನಿಮ್ಮ ಸೇನೆಯೊಡನೆ ಅದಕ್ಕೆ ಹೇಗೆ ಪ್ರತಿಕಾರವೆಸುಗುವಿರಿ?" ಎಂಬ ಅವನ ಮಾತಿಗೆ ಅವರೆಲ್ಲರೂ ಅತ್ಯಂತ ನಮ್ರತೆಯಿಂದ ಹೇಳಿದರು. "ನಾವು ಸರ್ವರು ಮಹಾರಾಜನ ಆಜ್ಞೆಯನ್ನು ಆಚರಣೆಯಲ್ಲಿ ತರುವವರಾಗಿದ್ದೇವೆ. ಹಾಗಿರುವಾಗ

ಸ್ವಾಮಿಯವರು ನಮ್ಮನ್ನು ಕೇಳುವುದಾದರೂ ಏಕೆ?"

ರಾಜನ ಉವಾಚ-
ಶ್ರೂಯತಾಂ ಪ್ರೋಚ್ಯತೇ ಯಾವದಲ್ಪಯಾ ಸ್ವೀಯಸೇನಯಾ । ೫೦

ತಿಷ್ಠನ್ನಾಸ್ತೇ ಹ್ಯಾದೂರೇಸೌ ತಾವಚ್ಛೀಘ್ರಂ ನಿಗೃಹ್ಯಾತಾಮ್
ಯಥಾ ತೃಣಲವೋಪ್ಯಸ್ಯ ನ ಗಚ್ಛೇದ್ಯತ್ರಕುತ್ರಚಿತ್ । ೫೧

ಆಗ ಮಹಾರಾಜನು ನುಡಿದನು. "ಆದಾಗ್ಯೂ ನಾನು ಹೇಳುವುದನ್ನು ಮನಸ್ಸಿಟ್ಟು ಕೇಳಿರಿ. ಎಲ್ಲಿಯವರೆಗೆ ಅವನು (ಬಹಲೋಲಖಾನ) ತನ್ನ ಸ್ವಲ್ಪವೇ ಸೈನ್ಯದೊಂದಿಗೆ ಇರುವನೋ ಅಲ್ಲಿಯವರೆಗೆ ಅವನನ್ನು ನಿರ್ಬಂಧಿಸಿರಿ. ಅವನ ಮೇಲೆ ಹೇಗೆ ಸಿಂಹದಂತೆ ಜೋರಾಗಿ ಎರಗಬೇಕೆಂದರೆ, (ಅವನಿಗೆ) ಹುಲ್ಲು ಕಡ್ಡಿಯನ್ನು ಸಹ ಇತ್ತ ಕಡೆಯಿಂದ ಅತ್ತ ಕಡೆ ಎತ್ತಿ ಹಾಕುವುದಕ್ಕೂ ಅವನಿಂದ ಸಾಧ್ಯವಾಗಬಾರದು."

ತಯಾ ದೃಢನಿಪಾತೋಸ್ಮಿನ್ ಸಿಂಹವತ್ ಪ್ರವಧೀಯತಾಮ್
ತತೋ ನೃಪನಿದೇಶಾತ್ತೇ ಪರ್ಣಾನ್ಯಾದಾಯ ಸೈನಿಕಾಃ । ೫೨

ಪ್ರತಾಪಪ್ರಮುಖಾ ಜಗ್ಮುರ್ಯಾವತಸ್ತತ್ರ ವೈ ಸ್ಥಿತಾಃ
ದಿನದ್ದ ಯೋಗ ನಿಭೃತಮ್ ರಾತ್ರೌ ರಾತ್ರೌ ಸ್ವರಾನ್ವಿತಾಃ । ೫೩

ಜಲಾಶಯೋಭವಚ್ಛತ್ರೋಸ್ತತ್ರ ಸೈನ್ಯಂ ಕಿಯದ್ಧಯೈಃ
ವಿಶ್ರಾಂತ ಕೈಶ್ಚಿದಪರೈಃ ಪಶ್ಚಾತ್ಕೈಶಚಿತ್ ಸಮಾಗತಮ್ । ೫೪

ಮಹಾರಾಜನ ಅಪ್ಪಣೆಯನ್ನು ಪಡೆದು ಪ್ರತಾಪರಾವ್ ಪ್ರಭೃತಿಗಳು ಹಾಗೂ ಯಾರ್ಯಾರೆಲ್ಲ ಸೇನಾಪತಿಗಳು ಅಲ್ಲಿ ಹಾಜರಾಗಿದ್ದರೋ ಅವರೆಲ್ಲರೂ ವೀಳ್ಯವನ್ನು ತೆಗೆದುಕೊಂಡು ಅಲ್ಲಿಂದ ಹೊರಟರು. ರಾತ್ರೋರಾತ್ರಿ ಗುಪ್ತವಾಗಿ ಹೊರಟ ಅವರು, ಮುಂದೆ ಎರಡೇ ದಿನಗಳಲ್ಲಿ ಶತ್ರುಗಳಿದ್ದ ಒಂದು ಜಲಾಶಯ(ನದಿ)ದ ಹತ್ತಿರ ಬಂದು ತಲುಪಿದರು. ಈ ಹೊತ್ತಿಗೆಲ್ಲ ಮುಂದೆ ಬಂದಿದ್ದಂತಹ ಕುದುರೆ ಸವಾರರು ವಿಶ್ರಾಂತಿ ಪಡೆಯುತ್ತಿರುವ ಹೊತ್ತಿಗೆ ಹಿಂದಿನಿಂದ ಬಂದ ಬೇರೆಲ್ಲಾ ಸೈನಿಕರೂ ಅವರನ್ನು ಸೇರಿಕೊಂಡರು.

ತತಃ ಸರ್ವೈರನೇಕತ್ರ ಸ್ಥಿತ್ವಾ ಶತ್ರೋಃ ಸಮಂತತಃ
ದೂರಾದೇವ ಮಹತ್ಸೈನ್ಯೆ ಚತುರ್ದಿಕ್ಷು ವಿಲೋಕಿತಮ್ । ೫೫

ಅನಂತರ ಅವರೆಲ್ಲರೂ ಬೇರೆ ಬೇರೆ ನೆಲೆಗಳಿಂದ ಶತ್ರುಗಳನ್ನು ಎಲ್ಲಾ ಕಡೆಯಿಂದಲೂ ಸುತ್ತುವರೆದು ನಿಂತರು. ಅವರಿಗೆ ದೂರದಿಂದಲೇ ಶತ್ರು ಸೈನ್ಯವು ಸ್ಪಷ್ಟವಾಗಿ ಕಾಣುತ್ತಿತ್ತು.

ತತಃ ಸರ್ವೈರ್ವಿಚಾರ್ಯಾದೌ ಕೈಶ್ಚಿದ್ರುದ್ಧೌ ಜಲಾಶಯಃ
ಸಿದ್ಧಿ ಹಿಲಾಲಖಾನೇನ ತತ್ಸೈನ್ಯಸ್ಯಾಗ್ರತಃ ಸ್ಥಿತಮ್ । ೫೬

ಆಗ ಅವರೆಲ್ಲರೂ ಆರಂಭದಲ್ಲಿಯೇ ಸಂಪೂರ್ಣವಾಗಿ ವಿಚಾರ ಮಾಡಿ ಕೆಲವು ಜನರು ಆ ಜಲಾಶಯಕ್ಕೆ ಮುತ್ತಿಗೆ ಹಾಕಿದರು. ಆಗ ಸಿದ್ಧಿ ಹಿಲಾಲಖಾನನು ಶತ್ರು ಸೈನ್ಯಕ್ಕೆ ಎದುರಾಗಿ ಅಗ್ರಭಾಗದಲ್ಲಿ ನಿಂತನು.

ಪಶ್ಚಾದ್ವಿಠೋಜಿಶಿಂದ್ಯಾಸೌ ಕ್ರೋಶಮಾತ್ರಾದವಾಸ್ಥಿತಃ
ಕೃಷ್ಣಾಜಿ ಭಾಸ್ಕರಸ್ತಾವತ್ತಥಾ ವಿಠ್ಠಲಪೀಲಧ್ಯಾ । ೫೭

ಪಾರ್ಶ್ವಯೋರ್ವೈರಿ ಸೇನಾಯಃ ಸಮ್ಯಕ್ ಸಜ್ಜತಯಾ ಸ್ಥಿತೌ
ಪರಿತಃ ಪರ್ಯಾನ್ನಾಸೀದ್ ವಿಸೋಬಲ್ಲಾಳನಾಮಕಃ । ೫೮

ಅವನ ಹಿಂದೆ ಕೇವಲ ಒಂದು ಹರಿದಾರಿ ದೂರದಲ್ಲಿ ವಿಠೋಜಿ ಶಿಂಧೆ ಇದ್ದನು. ಕೃಷ್ಣಾಜಿ ಭಾಸ್ಕರ ಮತ್ತು ವಿಠ್ಠಲ ಪೀಲದ್ಯಾ (ಪಿಲದೇವ) ಇವರಿಬ್ಬರೂ ಶತ್ರು ಸೈನ್ಯದ ಎರಡೂ ಕಡೆಗಳಲ್ಲಿ ಸಜ್ಜಾಗಿ ನಿಂತಿದ್ದರು. ವಿಸೋಜಿ ಬಲ್ಲಾಳ ಎಂಬ ಹೆಸರಿನ ಸೇನಾಪತಿಯು ಬೇರೆ ಬೇರೆ ದಿಕ್ಕುಗಳಲ್ಲಿ ಸುತ್ತಲೂ ಪರಿಶೀಲಿಸುತ್ತಾ ಸುತ್ತು ಹಾಕುತ್ತಿದ್ದನು.

ತಾವದಜ್ಞಾತಮೇವಾಸೀದರಿಭಃ ಕರಿಮಧ್ಯಗೈ
ನೀರಪಾನಾಯ ನಿರ್ಯಾತೋ ವೀರಗುಪ್ತೋ ಗಜವಜ್ರಃ । ೫೯

ತತಸ್ತೈಃ ಪೃಷ್ಠತೋ ದೃಷ್ಟಂ ವೇಷ್ಟಿತಂ ಕಟಕಂ ಪರೈಃ
ತಾವತ್ಪ್ರತಾಪರಾಜೋಽಸೌ ಪ್ರತಾಪ ಇವ ಮೂರ್ತಿಮಾನ್ । ೬೦

ಧಾವದಶ್ವಸಹಸ್ರೇಣ ಪ್ರಲಯಾಗ್ನಿರಿವಾಗತಃ
ಪ್ರೋಚ್ಚಲದ್ಧೂಳಿಧೂಮ್ರಸ್ಯ ಪಶ್ಚಾತ್ಕೃತ್ವಾ ಕದಂಬಕಮ್ । ೬೧

ಆ ಸಮಯದವರೆಗೂ ಆನೆಗಳ ಗುಂಪಿನ ಮಧ್ಯೆ ಇದ್ದ ಶತ್ರು ಸೈನ್ಯಕ್ಕೆ ಅಲ್ಲಿ ಏನಾಗುತ್ತಿದೆ ಎಂಬುದೇ ತಿಳಿದಿರಲಿಲ್ಲ. ವೀರರು ನಿಯಂತ್ರಿಸುತ್ತಿದ್ದ ಆನೆಗಳ ಹಿಂಡು ನೀರು ಕುಡಿಯಲೆಂದು ಹೊರಟಾಗಲೇ ತಿಳಿದದ್ದು ತಮ್ಮ ಸೈನ್ಯವನ್ನೆಲ್ಲ ಶತ್ರುಗಳು ಹಿಂಬದಿಯಿಂದ ಸುತ್ತಲೂ ಮುತ್ತಿದ್ದಾರೆ ಎಂಬುದು. ಅಷ್ಟರಲ್ಲಿ ಪ್ರತಾಪ ಮೂರ್ತಿಯೇ ಆಗಿದ್ದ ಪ್ರತಾಪರಾವನು ಒಂದು ಸಾವಿರ ಸೈನಿಕರೊಡನೆ ಮೇಲೆ ಹಾರುತ್ತಿದ್ದ ಧೂಳಿನ ತೆರೆಗಳನ್ನು ಹಿಂದಕ್ಕೆ ಹಾಕುತ್ತಾ ಪ್ರಳಯಾಗ್ನಿಯಂತೆ ಮುಂದಕ್ಕೆ ಬಂದು ನಿಂತನು.

ತತಸ್ತದ್ ಬಹಲೋಲಾಖ್ಯಪಠಾಣಕಟಕಂ ಮಹತ್
ದಧಾರಾನ್ವರ್ಥನಾಮಾರ್ಥ ತದ್ವಕ್ತುಂ ಕೇನ ಪಾರ್ಯತೇ । ೬೨

ಆಗ ಬಹಲೋಲಖಾನನೆಂಬ ಹೆಸರಿನ ಪಠಾಣನ ಸೈನ್ಯಕ್ಕೂ ಅವನ ಹೆಸರಿನ ಅನ್ವಯಾರ್ಥಕ ಸ್ಥಿತಿಯೇ ನಿರ್ಮಾಣವಾಯಿತು. ಅದನ್ನು ಪೂರ್ಣತಃ ವರ್ಣಿಸುವುದು ಯಾರಿಂದ ಸಾಧ್ಯ? (ಇಲ್ಲಿ ಬಹಲೋಲ-ಬಹಲೋಲ, ಡೋಲಾಯಮಾನ ಕಂಪಿತ ಎಂಬ ಈ ಶಬ್ದವನ್ನು ಶ್ಲೇಷಾವಾಗಿ ಪ್ರಯೋಗಿಸಲಾಗಿದೆ. ಆ ಮೂಲಕ ಸೈನ್ಯದ ದುರವಸ್ಥೆ ಎಂಥದಾಗಿತ್ತು ಎಂಬುದನ್ನು ತೋರಿಸುವುದೇ ಇಲ್ಲಿನ ಮುಖ್ಯ ಉದ್ದೇಶ.)

ಹ್ಯೋ ಹ್ಯೋ ಜಿನೋ ಜಿನಃ ಖಡಗ ಖಡಗೋ ಧನುರ್ಧನುಃ ।
ಇತಿ ವ್ಯಗ್ರಗಿರಂ ತಾವತ್ತತ್ಸೈನ್ಯಮಭವತ್‌ಕ್ಷಣಾತ್ । ೬೩

"(ಅರೆ ನನ್ನ) ಕುದುರೆ, ಕುದುರೆ, ಕುದುರೆ (ಎಲ್ಲಿದೆ)? (ನನ್ನ) ಜೀನು (ಎಲ್ಲಿದೆ)? ಖಡ್ಗಗಳು (ಎಲ್ಲಿದೆ)? ಧನಸ್ಸು (ಎಲ್ಲಿದೆ)?" ಹೀಗೆ ಒಂದು ಕ್ಷಣದಲ್ಲಿ ಸೈನ್ಯದಲ್ಲೆಲ್ಲ ಬೊಬ್ಬೆ ಎದ್ದಿತು.

ತಸ್ತೇತ್ಯಂತವಿಶ್ರಾಂತಾ ಮಹಾಶೂರಾ ಮಹಾಬಲಾಃ ।
ಯತ್ರ ಯತ್ರ ಸ್ಥಿತಾಸ್ತತ್ರ ಶಸ್ತ್ರೈಸ್ಸಜ್ಜಾಸ್ತದ್ವಾಭವನ್ । ೬೪

ಆನಂತರ ಅತ್ಯಂತ ಪರಾಕ್ರಮಶಾಲಿಗಳು, ಮಹಾಶೂರರು ಮತ್ತು ಮಹಾನ್ ಬಲಶಾಲಿಗಳು (ಪಠಾಣ) ಎಲ್ಲೆಲ್ಲಿದ್ದರೋ (ಅಲ್ಲಿಯೇ) ಶಸ್ತ್ರ ಸಜ್ಜಿತರಾಗಿ ನಿಂತುಕೊಂಡರು.

ತಾವದೇಶಾಂ ಮಹಾವೀರಾಃ ಪ್ರಪೇತುಸ್ತೇಕ್ಷು ತತ್‌ಕ್ಷಣಾತ್ ।
ತತಃಖಣಖಣಾಟೋಚ್ಚೈಃ ಸಂಬಭೂವ ದ್ವಯೋರ್ಮಹಾನ್ । ೬೫

ಹಯಸ್ಥೈರ್ಭೂತಲಸ್ಥೈಶ್ಚ ಘಟಿಕಾನಾಂ ಚತುಷ್ಟಯಮ್ ।
ಕೇಚಿತ್ ತಿತಾಸ್ತೇಪಾಷಾಮೇಷಾಂ ತ್ಯೆ ಕೇಚಿದಾಹತಾಃ । ೬೬

ಅಷ್ಟರಲ್ಲಿ ಇತ್ತಕಡೆಯ ಮಹಾವೀರನೊಬ್ಬನು ಅವರ ಮೇಲೆ ಆ ಹೊತ್ತಿಗೆ ಧಾಳಿ ಮಾಡುತ್ತಾ ಅವರ ಮೇಲೇರಿ ಹೋದನು. ಆಗ ಅಶ್ವದಳ ಮತ್ತು ಕಾಲುದಳಗಳಲ್ಲಿ ಭಯಂಕರ ಖಣಖಣ ಶಬ್ದದೊಂದಿಗೆ ಯುದ್ಧವು ಆರಂಭವಾಯಿತು. ಅವರಲ್ಲಿ ಕೆಲವರು ನಾಶವಾದರೆ, ಇತ್ತ ಕಡೆಯ ಕೆಲವು ಮಂದಿಯನ್ನು ಅವರು ಕೊಂದು ಹಾಕಿದರು.

ಪರಾವೃತ್ಯ ಹಯಾಜ್‌ಕೇಚಿತ್ತೇಭ್ಯೋ ಹ್ಯೋತೇ ಬಹಿರ್ಯಯುಃ ।
ತತಸ್ತೇ ದೃಢಮಾಸಜ್ಯ ಜಯವಿಸ್ಫೂರ್ಜಿತಂ ಧನುಃ । ೬೭

ಧುನ್ವಾನಾ ಜಗೃಹುರ್ಬಾಣಾನ್ ವಾರಬಾಣವಿದಾರಣಾನ್ ।
ಆಗಂತ್ವಿದಾನೀಮಿತ್ಯುಚ್ಚೈಃ ಪ್ರೋಚುರಾಕೃಷ್ಟಕಾರ್ಮುಕಾಃ । ೬೮

ಜಘ್ನುರ್ಹಯಾನ್ ಹಯಾರೂಢಾನ್ ಏಕೀಭೂಯ ಸಮಂತತಃ ।

ಇತ್ತ ಕಡೆಯ ಕೆಲವು ಕುದುರೆ ಸವಾರರು ಪುನಃ ತಮ್ಮ ಕುದುರೆಗಳನ್ನು ಅವರ ನಡುವೆ ನುಗ್ಗಿಸಿ (ಅವರು ಪುನಃ) ಹೊರ ಬಂದರು. ಅನಂತರ ವಿಜಯವನ್ನು ತಂದುಕೊಡುವ, ಟಣತ್ಕಾರಗೈವ ಧನಸ್ಸನ್ನು ಕೈಯಲ್ಲಿ ಹಿಡಿದು, ಝೇಂಕರಿಸುತ್ತಾ ರಕ್ಷಣಾ ಕವಚವನ್ನು ಭೇದಿಸಿ ಒಳನುಗ್ಗುವ ಬಾಣಗಳನ್ನು ತೆಗೆದುಕೊಂಡರು. ಧನಸ್ಸಿಗೆ ಹೆದೆಯನ್ನು ಎಳೆದು ಕಟ್ಟಿ "ಈಗ ಬನ್ನಿ" ಎಂದು ಘೋಷಣೆ ಹಾಕುತ್ತಾ, ಸರ್ವರೂ ಒಂದೆಡೆಗೆ ಬಂದು ಕುದುರೆಗಳ ಮೇಲೆ ಹಾಗೂ ಕುದುರೆ ಸವಾರರುಗಳ ಮೇಲೆ ಬಾಣಗಳ ಮಳೆಯನ್ನೇ ಸುರಿಸಲು ಆರಂಭಿಸಿದರು.

ತಾವದಾನಂದಕಾಯೋಸೌ ಸಂಪರಾಯಶ್ರೀಯನ್ವಿತಃ । ೬೯
ಪಪಾತ ಪೃಷ್ಠತೋ ಭೂತ್ವಾ ವೀರೈಃ ಕತಿಪಯೈಸ್ತದಾ

ಸ್ತೋತಿವಿದ್ಧೋಪಿ ಕುದ್ಧೈಸ್ತ್ರೈರ್ಮಸ್ತಕೇ ದತ್ತಖೇಟಕಃ । ೭೦

ಪ್ರವಿಷ್ಟಃ ಖಡಗಮುದ್ಯಮ್ಯ ಪಠಾಣವಿಕಟಾಟವೀಮ್
ತೇನೈವಾತ್ಯುಲ್ಬಣಂ ತೇಷಾಂ ಕಟಕಂ ಘಟಿಕಾತ್ರಯಮ್ । ೭೧

ಯುದ್ಧಶ್ರೀಯೊಂದಿಗೆ ತೇಜಸ್ಸುಳ್ಳವನಾಗಿದ್ದ ಆನಂದರಾವನು ಶೀಘ್ರವಾಗಿ ಕೆಲವು ವೀರರನ್ನು ಕರೆದುಕೊಂಡು ಹಿಂಬದಿಯಿಂದ ಅವರ ಮೇಲೆ ಧಾಳಿ ಮಾಡಿದನು. ಕ್ರುದ್ಧ ಶತ್ರುವು ಅವನನ್ನು ತೀವ್ರವಾಗಿ ಗಾಯಗೊಳಿಸಿದಾಗ ಅವನು ಶಿರಸ್ತ್ರಾಣವನ್ನು ಧರಿಸಿ ಕತ್ತಿಯನ್ನು (ಗುರಾಣಿಯೊಂದಿಗೆ) ಮುಂದಕ್ಕೆ ಹಿಡಿದು ಪಠಾಣ ಸೈನಿಕರ ಕಾಡಿನೊಳಗೆ ನುಗ್ಗಿದನು. ಮೂರೇ ಮೂರು ಗಳಿಗೆಯಲ್ಲಿ ಶತ್ರು ಸೈನ್ಯವೆಲ್ಲವೂ ಅವನಿಂದ ಸಂಹಾರಗೊಂಡಿತು.

ವಿಹಿತಂ ತಾವದುನ್ಮತ್ತಃ ಕುಂಜರಃ ಪರ್ವತೋಪಮಃ
ವಿಮಕ್ತಸ್ತೇನ ವೈ ಚಕ್ರೇ ಕೌತುಕಂ ಸಮರಾಂಗಣೇ । ೭೨

ಅದೇ ಹೊತ್ತಿಗೆ ಪರ್ವತಾಕಾರದಲ್ಲಿ ಪ್ರಚಂಡವಾಗಿದ್ದ ಉನ್ಮತ್ತ ಆನೆಯೊಂದು ನುಗ್ಗಿಬರಲು ಅದರಿಂದ ರಣಾಂಗಣದಾದ್ಯಂತ ನಿಜವಾಗಿಯು ಬಹು ದೊಡ್ಡ ಪ್ರಮಾಣದಲ್ಲಿ ವಿಪರೀತ ಗೊಂದಲ ಉಂಟಾಯಿತು.

ಸ್ವಯಂ ತೇನಾತಿಬಲಿನಾ ತ್ರೋಟಿತಾ ದೃಢವೇಷ್ಟಿತಾ
ಶೃಂಖಲೈವ ಕರೇ ಕೃತ್ವಾ ಧಾವಿತ್ವಾ ವೈ ಸಮಾಗತಮ್ । ೭೩

ಭೃಶಂ ತೇನೈವ ವಿಹಿತಂ ಸೈನ್ಯಮಂತ್ಯಂತಮುಲ್ಬಣಮ್
ಸ್ವೀಯಾನೇವ ಸಮೀಪಸ್ಥಾನ್ ವ್ಯೂಹಸ್ಥಾನವಧೀತ್ತದಾ । ೭೪

ಅತ್ಯಂತ ಬಲಾಢ್ಯವಾಗಿದ್ದ ಆ ಆನೆಯು ಬಿಗಿಯಾಗಿ ಕಟ್ಟಿದ್ದ ಸರಪಳಿಯನ್ನು ಕಿತ್ತೊಗೆದುದಲ್ಲದೆ, ಅದನ್ನೆ ಸೊಂಡಿಲಲ್ಲಿ ಎತ್ತಿಕೊಂಡು ಓಡಲಾರಂಭಿಸಿತು. ಪರಿಣಾಮವಾಗಿ (ಯಾರ ಆನೆಯಾಗಿತ್ತೋ) ವ್ಯೂಹ ರಚನೆಗೆಂದು ನಿಲ್ಲಿಸಿದ್ದ ಅವರ ಸೈನಿಕರೇ ಅದರ ಕಾಲ್ತುಳಿತಕ್ಕೆ ಸಿಕ್ಕು ನಜ್ಜುಗುಜ್ಜಾಗಿ ಸತ್ತು ಹೋದರು.

ಮನ್ಯೇ ಶಿವಸಹಾಯಾರ್ಥಂ ಹೇರಂಭೋಸೌ ಸಮಾಗತಃ ।
ತತೋ ಹ್ಯೋತ್ಯಶ್ಚ ತೇನಾಪಿ ವಾರಣೇನಾದ್‌ಭುತೋ ರಣಃ । ೭೫

ಅದನ್ನು ನೋಡಿದಾಗ ಶಿವಾಜಿಯ (ಶಂಕರ) ಸಹಾಯಕ್ಕೆಂದು ಸ್ವತಃ ಗಣೇಶನೇ ಬಂದಿರುವನೋ ಎಂಬಂತೆ ಭಾಸವಾಗುತ್ತಿದೆ ನನಗೆ. ಅನಂತರ ಅತ್ಯಂತ ಭೀಕರವಾಗಿ ಹಾಗೂ ಹಾಸ್ಯಮಯವಾದ ರೀತಿಗಳೆರಡರಲ್ಲೂ ಆ ಆನೆಯಿಂದ ಯುದ್ಧ ಮಾಡಿಸಿದರು.

ತತೋ ಹಸ್ತಿಪಕೈಸ್ತಸ್ಯ ಪಶ್ಚಾದೇವ ಪ್ರಧಾವಿತೈ । ೭೬

ಯುಕ್ತ್ಯಾ ಪೃಷ್ಠಗತೈರ್ಧೃತ್ವಾ ಪಶ್ಚಾದ್ಯಾವದ್ವಿಧೀಯತೇ
ತಾವಸ್ಸಿದ್ಧಿ ಹಿಲಾಲ್ಯೋಸೌ ಸ್ವಪುತ್ರೈಃ ಪಂಚಭಿಃ ಸಹ । ೭೭

ಗತಬೀರ್ನಿಷ್ಟಪಾತೋಚ್ಚೈಃ ಶ್ಯಾಮಶ್ಯಾಮೈಃ ಸ್ವಸೈನಿಕೈಃ

ಕೊನೆಗೆ ಹಿಂದಿನಿಂದ ಓಡಿಬಂದ ಮಾವುತರು ಯುಕ್ತಿಯಿಂದ ಬಹಳ ಕಷ್ಟಪಟ್ಟು ಅದನ್ನು ಬಂಧಿಸಿದರು. ಆಗ ಸಿದ್ಧಿ ಹಿಲಾಲನು ತನ್ನ ಐವರು ಪುತ್ರರು ಮತ್ತು ಹಬಶೀ ಸೈನಿಕರನ್ನು ತನ್ನೊಂದಿಗೆ ಕರೆದುಕೊಂಡು ಧೈರ್ಯವಾಗಿ ಧಾಳಿ ಮಾಡುತ್ತಾ ಮುನ್ನಡೆದನು.

ರುಪಾಜೀಭೋಸಲಾ ತಾವತ್ಸಾಮಾಜೀಮೋಹಿತಸ್ಥಾ । ೭೮

ನಿಂಬಾಳಕರಸಿದ್ದೋಜಿ ಪ್ರಸಿದ್ಧೋ ಯುದ್ಧಕರ್ಮಣಿ
ತೆಲಂಗದಾಯ (ರಾಯ) ಸಹಿತಾಃ ನಿಷ್ಪೇತು ರಹಿತೇ ತದಾ । ೭೯

ರೂಪಾಜಿ ಭೋಸಲೆ, ಸಾಮಜಿ (ಸೋಮಾಜಿ) ಮೋಹಿತೆ ಹಾಗೂ ಯುದ್ಧ ಕಲಾ ನಿಪುಣನೆನಿಸಿದ್ದ ಸಿದ್ದೋಜಿ ನಿಂಬಾಳಕರ ಇವರೆಲ್ಲರೂ ತೆಲಂಗರಾಯನೊಂದಿಗೆ ಸೇರಿಕೊಂಡು ಶತ್ರುಗಳ ಮೇಲೆ ಆಕ್ರಮಣ ಮಾಡಿದರು.

ತಾವದ್ವಿಠೋಜೀಸಿಂದಾಸೌ ತಥಾ ವಿಠ್ಠಲಪೀಲದ್ಯಾ
ಉಭಾವಪ್ಯೇಕತೋ ಯತೌ ಮಹತ್ಯ ಸೇನಯಾ ಸಹ । ೮೦

ಅಷ್ಟರೊಳಗೆ ವಿಠೋಜಿ ಶಿಂಧೆ ಮತ್ತು ವಿಠ್ಠಲ ಪೀಲದ್ಯಾ (ಪಿಲದೇವ) ಇವರಿಬ್ಬರು ದೊಡ್ಡ ಸೈನ್ಯದೊಡನೆ ಬಂದು ಅವರನ್ನು ಸೇರಿಕೊಂಡರು.

ಮಹಾದಠಾಕೂರ ಕ್ರೂರ(ರಃ) ಜಾಧೋರಾಯಸ್ಯ ಸೈನಿಕಃ
ಸೋಮಾಜೀಕೇಸ ಸಹಿತಃ ಸೋಪ್ಯಗ್ರೇ ಪ್ರಭಾವತ್ತದಾ । ೮೧

ಜಾಧವರಾವ್‌ನ ಕ್ರೂರ ಸೇನಾನಿಯಾದ ಮಹಾದಾಜಿ ಠಾಕೂರನೂ ಸಹ ಸೋಮಾಜಿಯೊಡನೆ ಎಲ್ಲರೊಂದಿಗೆ ತಾನು ಮುಂದೆ ಮುಂದೆ ನಡೆದನು.

ತತಸ್ತೇಷಾಂ ಪಠಾಣಾನಂ ಭಾಯೀಖಾನತರೀನಿತಿ
ಕರೀವ ಸಂಗರೇ ತಾವ ನಿರ್ವ್ಯಗ್ರಮನಸಾಭವತ್ । ೮೨

ಆಗ ಪಠಾಣರ ಭಾಯೀಖಾನ ತರೀನ ಎಂಬ ಸೇನಾಪತಿಯೊಬ್ಬನು ಶಾಂತ ಚಿತ್ತಭಾವದ ಆನೆಯಂತೆ ಮುಂದೆ ಹೊರಟಿದ್ದನು ಯುದ್ಧದಲ್ಲಿ.

ನಾಯೀಕಜೀ ಪಾಂಡಾರ್ರಾಸೌ ಖರಾಡಾನಾಯಕಸ್ತಥಾ
ತಥೈವಾನ್ಯೋಪಿ ಶತಶೋ ನಿಸ್ಸೃತಾಸ್ತನ್ಮುಖೋಪರಿ । ೮೩

ಆ ಹೊತ್ತಿಗಾಗಲೇ ಪಾಂಡರೆ ನಾಯಿಕ, ಖರಾಡೇ ನಾಯಿಕ ಮತ್ತಿತರೆ ನೂರಾರು ವೀರರು ಅವನ ಮೇಲೇರಿ ಬರಲು ಸಜ್ಜಾಗಿದ್ದರು.

ತತಸ್ಸಮಭವತ್ತೇಷಾಮೇತೇಷ್ಟಾಂ ಚ ಮಹದ್ರಣಃ ।
ಬಾಣೈರ್ಬಾಣಧರಾಚ್ಛೂರಾನ್ ಖಡನ್ಯೈಃ ಖಡಗಧರಾಂಸ್ತಥಾ । ೮೪

ಶಕತ್ಯಾ ಶಕ್ತಿಧರಾನ್ ಯುದ್ಧೇ ವಿವ್ಯಾಧುಸ್ತೇ ನಿಜಾಯುಧೈಃ
ಕೇಷಾಚ್ಛಿದ ಬಾಹವಶ್ಛಿಭನ್ನಾಃ ಕೇಶಾಚ್ಚಿಚರಣಾಸ್ತಥಾ । ೮೫

ಆಗ ಅವರು ಹಾಗೂ ಇವರ ನಡುವೆ ಭಯಂಕರ ಯುದ್ಧವು ಜರುಗಿತು. ಧನುರ್ಧಾರಿಗಳಿಗೆ, ಖಡ್ಗದಿಂದ ಯುದ್ಧ ಮಾಡುವವರಿಗೆ ಹಾಗೂ ಶಕ್ತಿಶಾಲಿ ಸೈನಿಕರನ್ನು ಈ ಯುದ್ಧದಲ್ಲಿ ಅವರು ತಮ್ಮ ಬಾಣಗಳು ಹಾಗೂ ಖಡ್ಗಗಳಿಂದ ತೀವ್ರಗತಿಯಿಂದ ಬಿಟ್ಟು ಹೊಡೆಯುವ ಮೂಲಕ ಗತಪ್ರಾಣಗೊಳಿಸಿದರು. ಕೆಲವರ ಕೈಗಳು ಕಡಿದು ಹೋದರೆ, ಮತ್ತೆ ಕೆಲವರ ಕಾಲುಗಳು ತುಂಡಾಗಿದ್ದವು.

ಕೇಶಾಚ್ಛಿನ್ನಮಸ್ತಕಾಃ ಖಥೈರ್ನಿಕೃತ್ತಾರ್ಧಾ ಪತಂತ್ಯಧಃ ।
ಕಶಿಚದ್ರುಧಿರಸಿಕ್ತಾಂಗಃ ಪ್ರಫುಲ ಇವ ಕಿಂಶುಕಃ । ೮೬

ಕಶಿಚದ್ವಾಣೈಸ್ತ್ರಿಕೆ ಲಗ್ನೈಃ ಸನಿಷಂಗ ಇವ ಸ್ಥಿತಃ ।
ಸ್ಫಿಕೇನೈಕೇನ ಸಂತಿಷ್ಠನ್ ಶಾಶ್ಚದ್ವಿತ್ರುಟಿತತ್ರಿಕಃ । ೮೭

ಕಶ್ಚಿದ್ವಿತ್ರುಟಿತಾರ್ಧನ ಖಡಗೇನ ಹೃದಿ ವಿಕ್ಷತಃ ।

ಖಡ್ಗದಿಂದ ಅರ್ಧಂಬರ್ಧವಾಗಿ ಕತ್ತರಿಸಿದ ಅನೇಕರ ತಲೆಗಳು ಕೆಳಗೆ ಬಿದ್ದವು.

ಅವು ರಕ್ತದಲ್ಲಿ ಮಿಂದ ಅನೇಕ (ಯೋಧರ) ಮುತ್ತುಗದ ಮರದಂತೆ ಕಾಣುತ್ತಿದ್ದರು. ಅಲ್ಲಿ ಮೂರು ಬಾಣಗಳು ಬೆನ್ನಿಗೆ ನಾಟಿದ್ದ ಯೋಧನೊಬ್ಬನು ಕಾಣುತ್ತಿದ್ದುದು ಹೇಗೆಂದರೆ, ಕಮ್ಮಾರನ ತಿದಿಯನ್ನು ಕಟ್ಟಿಕೊಂಡಿರುವನೋ ಎಂಬಂತೆ. ಪಾರ್ಶ್ವದ ಒಂದು ಭಾಗವು ಕತ್ತರಿಸಿ ಹೋಗಿದ್ದ ಕೆಲವರು ಒಂದೇ ನಿತಂಬ (ಪೃಷ್ಠ)ದ ಮೇಲೆ ಕುಳಿತಿದ್ದರು. ಅರ್ಧತುಂಡಾದ ಕತ್ತಿಯು ಎದೆಯೊಳಗೆ ಉಳಿದಿದ್ದಂತೆ ಮತ್ತೆ ಕೆಲವರು ಗಾಯಗೊಂಡಿದ್ದರು.

ಏವಂ ಯಾಮತ್ರಯಾ ದೂರ್ಧ್ವ ಕ್ರುದ್ಧಯೋಃ ಸೈನ್ಯಯೋರ್ದ್ವಯೋಃ । ೮೮

ರಣಃ ಸಮಭವತ್ತಾವದ್ಯಾವಸ್ತೋಭವದ್ರವೇಃ
ಉಚ್ಛಲದ್ರಕ್ತತುಮುಲಃ ಪ್ರವಾಹಸ್ತತ್ರ ನಿಸ್ಸೃತಃ । ೮೯

ಈ ರೀತಿಯಲ್ಲಿ ಮೂರು ಗಳಿಗೆಗಳಿಗಿಂತಲೂ ಹೆಚ್ಚುಕಾಲ ಸೂರ್ಯಸ್ತದವರೆಗೆ ಆ ಎರಡೂ ಕೋಪೋದ್ರಿಕ್ತ ಸೈನ್ಯಗಳ ನಡುವೆ ಯುದ್ಧವು ಜರುಗಿತು. ಚಿಮ್ಮುತ್ತಿದ್ದ ರಕ್ತವೆಲ್ಲ ಕಾಲುವೆಯಾಗಿ ಹರಿಯತೊಡಗಿತು.

ಆರಕ್ತರಾಗಃ ಸಂಧ್ಯಾಯಾಸ್ತೇನೈವ ವಿಹತೋಭವತ್ ।
ಸಿದ್ಧೋಜೀನಾಮಕಸ್ತಾವನ್ನಿಂಬಳಕರಸಂಜ್ಞಿಕಃ । ೯೦

ಸ ಏವ ವಾರಣಸ್ತೇನ ರಣಾನ್ನಿಃಸಾರಿತಸ್ತದಾ
ಸ್ವಯಂ ಮುಕ್ತಃ ಸ್ಥಿತಃ ಪೂರ್ವ ಶೃಂಖಲಾನಿಗಡದ್ ದೃಶ್ಯಾತ್ । ೯೧

ಯೋಗೀವ ಸಿದ್ಧಿ ಮಾರ್ಗೇಣ ನಿತಃ ಶ್ರೀಮಚ್ಛಿವಾಂತಿಕೇ

ಹೇಳಲಿ ಇನ್ನೆಂತು! ಸಂಧ್ಯಾಕಾಲದ ಸುಯೋಗ್ಯ ಕೆಂಬಣ್ಣವು ಅದರಿಂದಾಗಿ ಮತ್ತಷ್ಟು ಹೆಚ್ಚಾಗಿ ಶೋಭಿಸುತ್ತಿರುವುದೇನೋ ಎಂಬಂತೆ ಕಾಣತೊಡಗಿತ್ತು. ಅತ್ತ ಸಿದ್ಧೋಜಿ ನಿಂಬಾಳಕರ ಎಂಬಾತನೊಬ್ಬ ರಣರಂಗದಿಂದ ಆನೆಯೊಂದನ್ನು ಹಿಡಿದುತಂದ. ಅದು ಮೊದಲೇ ಬಲಿಷ್ಠ ಸಂಕೋಲೆಯಿಂದ ಮುಕ್ತವಾಗಿದ್ದರೂ ಸಿದ್ಧರು ತೋರಿಸಿದ ಮಾರ್ಗದಲ್ಲಿ ನಡೆವಂತೆ ಆ ಸಿದ್ಧ(ಸಿದ್ಧೋಜಿ) ಪುರುಷನು ತೋರಿಸಿದ ಮಾರ್ಗದಿಂದ ಶ್ರೀಮಾನ್ ಶಿವಾಜಿಯ ಬಳಿಗೆ ನಡೆದು ಬಂದಿತು.

ಬಹಲೋಲಸ್ಯ ವಿಷಯೀ ನಾಮ್ನಾ ಭಾಗ್ಯೇನ ವಿಶ್ರುತಃ । ೯೨
ಶ್ಯಾಮೋ ಮಹಮದ್‌ಬರ್ಕಿತಿ ಜಯದ್ರಥ ಇವಾಬಭೌ

ದೌರ್ಯೋಧನೈಃ ಕತಿಪಯೈಃ ಸೈನಿಕೈಃ ಪರಿವಾರಿತಃ । ೯೩

ಬಹಲೋಲಖಾನನ ಒಬ್ಬ ಸೇನಾಪತಿಯಾದ ಐಶ್ವರ್ಯ ಸಂಪನ್ನ ಸೀದಿ ಮಹಮ್ಮದ್ ಬರ್ಕಿ ಎಂಬಾತನು ದುರ್ಯೋಧನನ ಕೆಲವೇ ಮಂದಿ ಸೈನಿಕರ

ನಡುವೆ ಇದ್ದ ಜಯದ್ರಥನ ಹಾಗೆ ಕಾಣಿಸುತ್ತಿದ್ದನು.

ಸ ವೈ ಸೂರ್ಯಾಸ್ತಮಾಲಕ್ಷ್ಯ ಪಾಂಸುವ್ಯಾಪ್ತೇ ಖಮಂಡಲೇ
ಮಹಾವಾಜಿನಮಾರುಹ್ಯ ಗಜವ್ಯೂಹಾದ್ವಿನಿಃಸೃತಃ । ೯೪

ಆಕಾಶವೆಲ್ಲ ಧೂಳಿನಿಂದ ತುಂಬಿಕೊಂಡಿತ್ತು. ಅದನ್ನು ಕಂಡು ಈಗ ಸೂರ್ಯಾಸ್ತದ ಸಮಯವೆಂದುಕೊಂಡು ಒಬ್ಬನು ಬಲಿಷ್ಠ ಕುದುರೆಯನ್ನೇರಿ ಗಜವ್ಯೂಹದಿಂದ ಹೊರಬಿದ್ದನು.

ದೀಪಾಜೀನಾಮಕೋ ಹ್ಯೇಷಾಂ ರಾಉತರಾವ ಇತಿ ಸ್ಮೃತಃ

ಸೋಽರ್ಜುನತ್ವಮನುಪ್ರಾಪ್ತಸ್ತತಃ ಕೃಷ್ಣಸಹಾಯವಾನ್ । ೯೫
ಪ್ರೋದ್ಧಿದೀಪೇ ಸ ದೀಪಾಜೀ ಸಕೃಷ್ಣೋ ಭಾಸ್ಕರತ್ವಿಷಾ

ಆಪೂರಯನ್ನಿವ ಸ್ವೀಯಾಂ ಪ್ರತಿಜ್ಞಾಂ ತದ್ರಣಾಂಗಣೇ । ೯೬
ವಿಕೋಶಂ ಖಡಗಮದ್ಯಮ್ಯ ವಾಜಿವೇಗೋದ್ಧತಸ್ತತಃ

ವಾರಬಾಣಾವೃತಂ ಶತ್ರುಂ ಸ್ಕಂಧೇದೇಶೇ ವ್ಯತಾಂಡಯತ್ । ೯೭

ಅವರ (ಮರಾಠ) ಪಕ್ಷದಲ್ಲಿ ದೀಪಾಜಿ ರಾವುತರಾವ್ ಎಂಬ ಅತ್ಯಂತ ಶೂರನೊಬ್ಬನು ಕೃಷ್ಣಾಜಿಯ ಸಹಾಯದೊಂದಿಗೆ ಮುಂದೆ ನುಗ್ಗಿದನು. ಆಗ ಆತ ಶ್ರೀಕೃಷ್ಣನ ಮಿತ್ರ ಅರ್ಜುನನಂತೆ ಕಾಣುತ್ತಿದ್ದನು. ಕೃಷ್ಣನೇ ಸಹಾಯಕ್ಕಿದ್ದಾಗ ಅರ್ಜುನನು ರಣರಂಗದಲ್ಲಿ ಇದ್ದ ಸೂರ್ಯಪ್ರಕಾಶದಿಂದ ತನ್ನ ಪ್ರತಿಜ್ಞೆಯನ್ನು ಪೂರ್ಣಗೊಳಿಸಿಕೊಂಡಂತೆ ಭಾಸ್ಕರನ ತೇಜಸ್ಸಿನಿಂದ ಯುಕ್ತವಾಗಿದ್ದ ಕೃಷ್ಣಾಜಿರಾವನ ಜೊತೆಯಲ್ಲಿ ಆ ದೀಪಾಜಿಯು ಶೋಭಿಸುತ್ತಿದ್ದನು. ವೇಗವಾಗಿ ಧಾವಿಸುವ ಕುದುರೆಯನ್ನೇರಿ ಸವಾರಿ ಮಾಡುತ್ತಾ ಒರೆಯಿಂದ ಕತ್ತಿಯನ್ನು ಸೆಳೆದುಕೊಂಡ ಆತನು ರಕ್ಷಣಾ ಕವಚ ಧರಿಸಿದ್ದ ಶತ್ರುವಿನ ಮೇಲೆ ಎರಗಿದನು.

ತೇನ ಖಡಗ ಪ್ರಹಾರೇಕಾ ಶತ್ರೋಃ ಕವಚಪಟ್ಟಿಕಾ
ಸಮುತ್ಪಫಾಲ ಗಗನೇ ಮೇಘಾಚಿರಭಾ ಯಥಾ । ೯೮

ಆಕಾಶದಲ್ಲಿ ಮೋಡಗಳಿಂದ ಹೊರ ಚಿಮ್ಮುವ ಮಿಂಚಿನಂತೆ ಅವನು ಖಡ್ಗದಿಂದ ಒಂದು ಪೆಟ್ಟನ್ನು ಹಾಕಿದೊಡನೆ ಶತ್ರುವು ಧರಿಸಿದ್ದ ಕವಚದ ಒಂದು ಭಾಗವು ಆಕಾಶಕ್ಕೆ ಚಿಮ್ಮಿತು.

ತತಸ್ತದ್ವರ್ಶಿನಾ ತಾವತ್ ಸಮುದ್ಯಮ್ಯ ಮಹದ್ಧನುಃ
ಆಕರ್ಣಕೃಷ್ಟಬಾಣೇನ ವಿದ್ಧೋ ರಾಉತ್‌ರಾವಹಯ : । ೯೯

ತಕ್ಷಣವೇ ಬರ್ಕಿಯು ಬಹಳ ವೇಗದಿಂದ ದೊಡ್ಡ ಧನಸ್ಸನ್ನು ಕೈಯಲ್ಲಿ ಹಿಡಿದು ಕಿವಿಯವರೆಗೂ ಎಳೆದು ಬಾಣವನ್ನು ಬಿಟ್ಟು ರಾವುತರಾವನ ಕುದುರೆಯನ್ನು ಗಾಯಗೊಳಿಸಿದನು.

ಸ ಹಯಸ್ತೇನ ಬಾಣೇನ ಪ್ರಾಣಾನೇವ ವಿಮೋಚಿತಮ್
ತಥಾ ಪ್ರಕಂಪಮಾಪನ್ನಸ್ಸೋನ್ಯಸಿಮನ್ ಹಯೋತ್ತಮೇ । ೧೦೦
ಸಮಾರೂಢೋ ಭವತ್ತಾವತ್ ಸೋಪಿ ಖಡಗೇನ ವಿಕ್ಷತಃ
ಕುಕ್ಷೌ ತ್ರಿಕೇ ಮುಖೇ ಚೈವ ಪ್ರಹಾರತ್ರಯ ಸಂಯುತಃ । ೧೦೧

ಆ ಬಾಣದ ಪ್ರಹಾರಕ್ಕೆ ಕುದುರೆಯು ಪ್ರಾಣವೇ ಹೋಗುವಂತೆ ಥರಥರನೆ ನಡುಗಲಾರಂಭಿಸಿತು. ಆಗ ಅವನು ಮತ್ತೊಂದು ಉತ್ತಮ ಕುದುರೆಯನ್ನೇರಿದನು. ಆದರೆ ಅಷ್ಟರಲ್ಲಿಯೇ ಆ ಕುದುರೆಯೂ ಪಕ್ಕೆ, ಬೆನ್ನು ಹಾಗೂ ಮುಖದ ಮೇಲೆ ಬಿದ್ದ ಖಡ್ಗದ ಪೆಟ್ಟಿನಿಂದ ಗಾಯಗೊಂಡಿತು.

ತಥಾಪಿ ನ ಚಚಾಲಾಜೌ ಯತೋ ಜಾತ್ಯೋಸ್ತಿ ಸೈಂಧವಃ
ತತಸ್ತೇನ ಪ್ರದೀಪ್ತೇನ ರಾಊತರಾಯೇಣ ಸಂಯುಗೇ । ೧೦೨
ಯಮದಂಷ್ಟ್ರಾ ಪ್ರಹಾರೇಣ ಸ ಬರ್ಕೀ ಮಸ್ತಕಾದಧಃ
ಜತ್ರುದೇಶೇ ವಿಕವಚೇ ಹತ್ವಾ ಭೂಮೌ ನಿಪಾತಿತಃ । ೧೦೩

ಇಷ್ಟೆಲ್ಲ ಆದರೂ ಅದು (ಕುದುರೆ) ರಣರಂಗದಿಂದ ಪಲಾಯನ ಮಾಡಲಿಲ್ಲ. ಕಾರಣ ಅದು ಒಳ್ಳೆಯ ಜಾತಿಯ ತೇಜಸ್ವಿ ಕುದುರೆಯಾಗಿದ್ದುದು. ಆಗ ಕೋಪೋದ್ರಿಕ್ತನಾದ ರಾವುತರಾವನು ಯುದ್ಧ ಮಾಡುತ್ತಾ ಬರ್ಕಿಯ ತಲೆಯ ಕೆಳಭಾಗಕ್ಕೆ (ರಕ್ಷಣಾ ಕವಚವು ಆವರಿಸಿರದಿದ್ದ) ಅಂದರೆ ಹೆಗಲಮೇಲೆ ಜೋರಾಗಿ ಹೊಡೆದೊಡನೆ ಅವನು ಭೂಮಿಗೆ ಉರುಳಿದನು.

ತತಸ್ತಸ್ಯ ಪಠಾಣಸ್ಯ ಘೋಟಪೃಷೇ ಸುಭೂಷಿತೇ
ಸಮಾರುಹ್ಯ ಸಮಾಯಾತೋ ವಿಜಯತ್ವಂ ಪ್ರವರ್ಧಯನ್ । ೧೦೪

ಅನಂತರ ಅವನು ಆ ಪಠಾಣನ ಸುಶೋಭಿತವಾದ ಕುದುರೆಯ ಮೇಲೆ ಕುಳಿತು ವಿಜಯದ ಆನಂದದಿಂದ ಅಲ್ಲಿಂದ ಹೊರಟನು.

ಅಥ ತದರ್ಬಾಕನಸ್ತಾವನ್ಮೃತ್ಯುಮಾಕರ್ಣ್ಯ ವಿಹ್ವಲಃ
ಪ್ರತಾಪದರ್ಶಿತೇ ಮಾರ್ಗೇ ಬಾಹುಲೋಲೋ ವಿನಿರ್ಗತಃ । ೧೦೫

ಬರ್ಕಿಯ ಮರಣದ ಸುದ್ಧಿಯನ್ನು ಕೇಳಿದೊಡನೆ ತೀವ್ರ ದುಃಖಿತನಾದ ಬಹಲೋಲಖಾನನು ಪ್ರತಾಪರಾವನು ಸೂಚಿಸಿ ತೋರಿಸಿದ ಮಾರ್ಗದಿಂದ ಹೊರಟು ಹೋದನು.

ಪಶ್ಚಾತ್ತಸ್ಯಸಂವಿಗ್ನಂ ಹಸ್ತ್ಯಶ್ವರಥ ಸಂಕುಲಮ್
ಕಟಕಂ ಲುಂಟಯಾಮಾಸ ಸ ಕೃಷ್ಣೇ ಭಾಸ್ಕರಾತ್ಮಜಃ । ೧೦೬

ತದನಂತರ ಆನೆ, ಕುದುರೆ, ರಥಗಳನ್ನಲ್ಲದೆ ಅತ್ಯಂತ ಚಿಂತಾಗ್ರಸ್ತರಾಗಿ ಕುಳಿತ್ತಿದ್ದ ಸೈನ್ಯವನ್ನು ಭಾಸ್ಕರ ಪುತ್ರನಾದ ಕೃಷ್ಣಾಜಿಯು ಲೂಟಿ ಹೊಡೆದನು.

ವಿಜಯಪುರಸಮುದ್ರಾದುಚ್ಛಲನ್ನಕ್ರಚಕ್ರಾತ್
ಸಮುದಿತಬಹಲೋಲಃ ಪಾರ್ವಗೋಽಸೌ ಶಶಾಂಕಃ ।
ಇತಿ ಖಲು ನಿಜಲಕ್ಷ್ಮೀ ಪ್ರಾಕ್ಷಿಪತ್‌ಕೃಷ್ಣಪಕ್ಷೇ
ಪ್ರತಿದಿವಸಮಶೇಷಾಂ ಭಾಸ್ಕರಾದುತ್ಥಿತೇಽಸ್ಮಿನ್ । ೧೦೭

ವಿಜಾಪುರದ ಸೈನ್ಯ ಎಂಬುದು ಮೊಸಳೆಗಳಿಂದ ತುಂಬಿ ರೊಚ್ಚಿಗೇಳುವ ಸಮುದ್ರವೇ ಹೌದು. ಇನ್ನು ಬಹಲೋಲಖಾನನು ಪವಿತ್ರ ಹಾಗೂ ಶುಭಸಮಯ (ಪೌರ್ಣಮಿ)ದಲ್ಲಿ ಬರುವ ಡೋಲಾಯಮಾನನಾದ ಚಂದ್ರನಿದ್ದಂತೆ. ಪ್ರತಿನಿತ್ಯವೂ ಸೂರ್ಯ (ಭಾಸ್ಕರ)ನಿಂದ ಹೇಗೆ ಉತ್ಪನ್ನವಾಗುವ ಕೃಷ್ಣಪಕ್ಷದಲ್ಲಿ (ಇದರಲ್ಲಿ ಚಂದ್ರನು ಒಂದೊಂದು ಕಲೆಯಿಂದಾಗಿ ಕ್ಷೀಣಿಸುತ್ತಾ ಹೋಗುವನು). ಚಂದ್ರನು ತನ್ನ ಲಕ್ಷ್ಮಿ (ತೇಜಸ್ಸು) ಕಳೆದುಕೊಳ್ಳುವನು ಹಾಗೆಯೇ ಬಹಲೋಲಖಾನನು ಪ್ರತಿನಿತ್ಯ ತನ್ನ ಭಾಸ್ಕರನಿಂದ (ಒಬ್ಬ ಸೇನಾಪತಿಯ ಹೆಸರು) ನಿರ್ಮಿತವಾದ ಕೃಷ್ಣಾಜಿಯ ಬದಿಗೆ (ಪಕ್ಷ) ತನ್ನ ಲಕ್ಷ್ಮಿ (ರಾಜ್ಯ, ತೇಜಸ್ಸು)ಯನ್ನು ಬಿಟ್ಟುಕೊಟ್ಟನು. (ಇಲ್ಲಿ ಬಹಲೋಲ, ಕೃಷ್ಣ, ಭಾಸ್ಕರ, ಪಕ್ಷ ಮತ್ತು ಲಕ್ಷ್ಮಿ – ಈ ಶಬ್ದಗಳೆಲ್ಲ ಶ್ಲೇಷಾರ್ಥದಲ್ಲಿ ಕೂಡಿದುವಾಗಿವೆ.)

ಇತಿ ಶ್ರೀಮಜ್ಜಯರಾಮವಿರಚಿತೇ ಪರ್ಣಾಲಪರ್ವತಗ್ರಹಣಾಖ್ಯಾನೇ
ಶ್ರೀ ಶಿವರಾಜಚರಿತ್ರೆ ಪಂಚಮೋಧ್ಯಾಯಃ। ಶ್ರೀ ವಿಶ್ವೇಶ್ವರಾರ್ಪಣಮಸ್ತು ।

ಶ್ರೀಜಯರಾಮ ಕವಿಯು ರಚಿಸಿದ ಶ್ರೀಶಿವಾಜಿಯ ಚರಿತ್ರೆಯಲ್ಲಿನ ಪರ್ಣಾಲ ಎಂಬ ಹೆಸರಿನ ಕೋಟೆಯನ್ನು ಗೆಲ್ಲುವ ಆಖ್ಯಾನದಲ್ಲಿನ ಐದನೆಯ ಅಧ್ಯಾಯವು ಮುಕ್ತಾಯವಾಯಿತು. ಶ್ರೀವಿಶ್ವೇಶ್ವರನಿಗೆ ಅದು ಸಮರ್ಪಣೆಗೊಂಡಿರುವುದು.

■

ಆದಿಲಶಾಹಿ ಅರಸು ಮನೆತನ ವಿಜಾಪುರದವರಾದ ನಮಗೆಲ್ಲ ಒಂದು ಹೆಮ್ಮೆ. ರಾಜಕೀಯ ಇತ್ಯಾದಿಗಳನ್ನು ಬಿಟ್ಟರೂ ಶಿಲ್ಪ-ಸಾಹಿತ್ಯಕ್ಷೇತ್ರಗಳಿಗೆ ಅದು ನೀಡಿದ ಕೊಡುಗೆ ಲೋಕಮಾನ್ಯವಾದುದು. ಈ ಕೊಡುಗೆಗಳಲ್ಲಿ ಶಿಲ್ಪದ ಬಗ್ಗೆ ಆಗಾಗ ಆಸಕ್ತಿ ವಹಿಸಿದ ನಾವು, ಸಾಹಿತ್ಯವನ್ನು ಅಲಕ್ಷಿಸುತ್ತ ಬಂದಿದ್ದೇವೆ. ಇದಕ್ಕೆ ಕಾರಣ, ಈ ಸಾಹಿತ್ಯ ದಖಣಿ ಉರ್ದು, ಪರ್ಶಿಯನ್‌ಗಳೆಂಬ ಅಪರಿಚಿತ ಭಾಷೆಗಳಲ್ಲಿರುವುದು ಮತ್ತು ಬಹಳಷ್ಟು ಕೃತಿಗಳು ಅಪ್ರಕಟಿತವಾಗಿರುವುದು. ಹೀಗಿದ್ದೂ ನಮ್ಮ ಸಾಂಸ್ಕೃತಿಕ ಆಸ್ತಿಯಾಗಿರುವ ಈ ಸಾಹಿತ್ಯದ ರಕ್ಷಣೆ, ಅನುವಾದ, ಪ್ರಸಾರ ನಮ್ಮ ಕರ್ತವ್ಯವಾಗಿದೆ.

ಇಂತಹ ಕಾರ್ಯಗಳನ್ನು ಪೂರೈಸುತ್ತ ಬಂದ ನಮ್ಮ 'ವಚನಪಿತಾಮಹ ಡಾ॥ ಫ.ಗು. ಹಳಕಟ್ಟಿ ಸಂಶೋಧನ ಸಂಸ್ಥೆ'ಯ ಮೂಲಕ ಈ ಕರ್ತವ್ಯವನ್ನು ಈಡೇರಿಸಲು ಯೋಚಿಸಿದ ಫಲ 'ಆದಿಲಶಾಹಿ ಸಾಹಿತ್ಯ ಪ್ರಕಟನ ಯೋಜನೆ'. ಈ ಕಾರ್ಯ ಭಾವಿಸಿದಷ್ಟು ಸುಲಭವಲ್ಲ. ಅಲ್ಲಲ್ಲಿ ಚದರಿ ಹೋಗಿರುವ ಪ್ರಕಟಿತ-ಅಪ್ರಕಟಿತ ಕೃತಿಗಳನ್ನು ಶೋಧಿಸುವ, ಸಂಗ್ರಹಿಸುವ, ಅನುವಾದಿಸುವ, ಪರಿಷ್ಕರಿಸಿ ಪ್ರಕಟಿಸುವ ಹಂತಗಳಲ್ಲಿ ವಿದ್ವಾಂಸರು ಶ್ರಮಿಸಬೇಕಾಗುತ್ತದೆ. ನಮ್ಮ ಸುದೈವಕ್ಕೆ ಸಮರ್ಥ ಯೋಜಕರಾದ ಡಾ.ಎಂ.ಎಂ.ಕಲಬುರ್ಗಿಯವರು, ಆದಿಲಶಾಹಿ ಅಭ್ಯಾಸಿಗಳಾದ ಡಾ. ಕೃಷ್ಣ ಕೊಲ್ಹಾರಕುಲಕರ್ಣಿಯವರು ಈ ಯೋಜನೆಯ ಹೊಣೆಹೊತ್ತಿದ್ದಾರೆ. ಸಲಹಾಸಮಿತಿಯ ಸದಸ್ಯರು-ಅನುವಾದಕರು ಈ ಕಾರ್ಯದಲ್ಲಿ ಆಸ್ಥೆವಹಿಸಿದ್ದಾರೆ. ಇವರೆಲ್ಲರ ಸಹಯೋಗದಲ್ಲಿ ಕನ್ನಡಕ್ಕೆ ಹೊಸದೊಂದು ಆಕರ ಸಂಪತ್ತು ಹೊರಬರುತ್ತಲಿರುವುದು ಸಂತೋಷದ ಸಂಗತಿಯಾಗಿದೆ.

ಎಂ. ಬಿ. ಪಾಟೀಲ

ಅಧ್ಯಕ್ಷರು, ಬಿ.ಎಲ್.ಡಿ.ಇ ಸಂಸ್ಥೆ, ಬಿಜಾಪುರ

ಜಲಸಂಪನ್ಮೂಲ ಸಚಿವರು, ಕರ್ನಾಟಕ ಸರಕಾರ

ಮುದ್ರಣ : ಪ್ರಿಂಟ್ ಪಾಯಿಂಟ್, ಮೊ : 97390 67359